ವಚನಶ್ರೀ ರಚನೆ
1936

ಅನುಕ್ರಮಣಿಕೆ

ಪ್ರಕರಣ	ವಿಷಯ	ಪುಟ
	ಪ್ರಸ್ತಾವನೆ	೫— ೬
	ಸಂಕೇತಗಳು ಮತ್ತು ಅವುಗಳ ಅರ್ಥಗಳು	೭— ೮
	ಒಪ್ಪೋಲೆ	೯— ೧೦
	ಉಪಯೋಗಿಸಿದ ಗ್ರಂಥಮಾಲಿಕೆ	೧೧— ೧೨
	ಭಾಗ ೧. ವಚನಾಮೃತ	
೧.	ಪರಮಾತ್ಮನು ಅಥವಾ ಪರಾತ್ಪರಸತ್ಯವು	೧— ೫
೨.	ಸೃಷ್ಟಿ	೬— ೧೧
೩.	ಸೃಷ್ಟಿರಚನೆಯ ಕ್ರಮ	೧೧— ೧೫
೪.	ಪರಮಾತ್ಮನು ಎಲ್ಲಿರುವನು?	೧೫— ೧೮
೫.	ಮುಕ್ತಿಯೆ ಮಾನವಧ್ಯೇಯವು	೧೯— ೩೫
೬.	ಸಾಕ್ಷಾತ್ಕಾರ	೩೫— ೪೧
೭.	ಸಾಕ್ಷಾತ್ಕಾರಿಯ ನಿಲವು	೪೧— ೫೧
೮.	ಅಜ್ಞಾನ	೫೧— ೫೮
೯.	ಮುಕ್ತಿಯ ಬಯಕೆ	೫೯— ೬೪
೧೦.	ಸಾಧನಮಾರ್ಗ—ಸರ್ವಾರ್ಪಣ	೬೪— ೭೪
೧೧.	ಸಾಧನಮಾರ್ಗ—ಜ್ಞಾನಯೋಗ	೭೪— ೮೨
೧೨.	ಸಾಧನಮಾರ್ಗ—ಭಕ್ತಿಯೋಗ	೮೩— ೯೬
೧೩.	ಸಾಧನಮಾರ್ಗ—ಕರ್ಮಯೋಗ	೯೬—೧೦೫
೧೪.	ಸಾಧನಮಾರ್ಗ—ಧ್ಯಾನಯೋಗ	೧೦೬—೧೧೨
೧೫.	ಸಾಧನಮಾರ್ಗ—ಜ್ಞಾನ-ಭಕ್ತಿ-ಕ್ರಿ-ಧ್ಯಾನಗಳ ಸಂಬಂಧ	೧೧೩—೧೨೨
೧೬.	ಸಾಧಕನಿಗೆ ಅವಶ್ಯವಿದ್ದ ಗುಣ-ಶೀಲ-ಕರ್ಮಗಳು	೧೨೩—೧೩೬
೧೭.	ವಿಧಿನಿಷೇಧಗಳು	೧೩೬—೧೫೦
೧೮.	ಷಟ್‌ಸ್ಥಲಶಾಸ್ತ್ರ ಮತ್ತು ವೀರಶೈವ ಸಾಂಪ್ರದಾಯ	೧೫೧—೧೬೫

೧೯. ಸಂಕೀರ್ಣ ೧೬೫–೧೭೦
೨೦. ಮುಕ್ತಾಯ ೧೭೧–೧೯೨
ಶಬ್ದಕೋಶ ೧೯೩–೨೧೫
ವಚನಗಳ ಅಕ್ಷರಾನುಕ್ರಮವು . . . .
ವಚನಕಾರರ ಅಕ್ಷರಾನುಕ್ರಮವು ಹಾಗೂ ವಚನಗಳ
ಅನುಕ್ರಮ ಸಂಖ್ಯೆಯು ೨೧೫–೨೨೧

ಭಾಗ. ೨. ವಚನಶಾಸ್ತ್ರ ರಹಸ್ಯವು

೧. ಪೀಠಿಕೆ . . . . . ೧— ೯
೨. ವಚನಶಾಸ್ತ್ರವೂ ಅದರ ಮಹತ್ವವೂ . . ೯– ೪೬
೩. ವಚನಶಾಸ್ತ್ರದ ಸಾರಸರ್ವಸ್ವವು . . ೪೬– ೬೪
೪. ಪೂರ್ಣ ಮತ್ತು ನಿಜಧರ್ಮದ ಸ್ವರೂಪವು . . ೬೪–೧೦೬
೫. ವಚನಕಾರರ ಸಾಕ್ಷಾತ್ಕಾರವಾದವು . . ೧೦೬–೧೪೯
೬. ವಚನಕಾರರ ಸಾಧನಮಾರ್ಗವು . . . ೧೪೯–೧೭೬
೭. ವಚನಕಾರರ ನೈತಿಕ ಮತ್ತು ಸಾಮಾಜಿಕ ವಿಚಾರಗಳು ೧೭೬–೨೦೫
೮. ವಚನಕಾರರೂ ಅವರಲ್ಲಿ ಹಲವರ ವಿಶೇಷಗಳೂ . ೨೦೫–೨೩೪
೯. ವಚನವಾಙ್ಮಯವು ೨೩೪–೨೭೬
೧೦. ಷಟ್‌ಸ್ಥಲಶಾಸ್ತ್ರ ಮತ್ತು ವೀರಶೈವ ಸಾಂಪ್ರದಾಯ . ೨೭೬–೩೩೩
೧೧. ತುಲನಾತ್ಮಕ ಪ್ರಕರಣವು . . . ೩೩೩–೩೪೬
೧೨. ಉಪಸಂಹಾರ ೩೪೬–೩೬೦

352
ಬಿ ಗ
ಬಿ೧೪೪

ಪ್ರಸ್ತಾವನೆ

ಶ್ರೀಮಾನ್ ಹಳಕಟ್ಟಿಯವರು ಅತ್ಯಂತ ಪರಿಶ್ರಮಪೂರ್ವಕವಾಗಿ ಅಲ್ಲಿ ಇಲ್ಲಿ, ಅತ್ತ ಇತ್ತ ವಿಸ್ಖಲಿತವಾಗಿ ಬಿದ್ದ ವಚನಗಳೆಂಬ ಈ ಸುಪ್ಪಾಣಿಯ ಮಾತುಗಳನ್ನು ಸರಗೊಳಿಸಿ ಕನ್ನಡ ಸರಸ್ವತಿಯ ಕೊರಳಲ್ಲಿ ಮೊದಲು ಕಟ್ಟಿದರು. ಅವುಗಳನ್ನು ಪ್ರಥಮ ನಾನು ೧೯೩೪ ರಲ್ಲಿ ನೋಡಿದೆನು. ಅಂದಿನಿಂದ ಅಭ್ಯಾಸಮಾಡುತ್ತಿರಲು ೧೯೩೨ ರಲ್ಲಿ ಅವುಗಳ ಬಗ್ಗೆ ಇದ್ದ ನನ್ನ ಕರ್ತವ್ಯವನ್ನು ಮಾಡಿ ತೀರಬೇಕೆಂಬ ಭಾವನೆಯಿಂದ ಈ ಗ್ರಂಥ ರಚನೆಯನ್ನು ಪ್ರಾರಂಭಿಸಿದೆನು.

ನಾನು ಅಂಥ ಪಂಡಿತನೂ ಅಲ್ಲ, ಸಾಹಿತಿಯೂ ಅಲ್ಲ. ನಾನೊಬ್ಬ ನಮ್ರ ಸಾಧಕನು. ಸಾಧಕನ ದೃಷ್ಟಿಯಿಂದಲೇ ನಾನು ಈ ಬಂದು ಪ್ರಯತ್ನವನ್ನು ಮಾಡಿದ್ದೇನೆ. ಈ ದಿವ್ಯ ವಚನಗಳ ಅಭ್ಯಾಸವಶಾತ್ ಹೊಳೆದ ವಿಚಾರಗಳನ್ನೆಲ್ಲ ನಾನು ಈ ಅಲ್ಪ ಕೃತಿಯಲ್ಲಿ ಬರೆದು ಕನ್ನಡ ಬಂಧುಭಗಿನಿಯರಿಗೆ ಅರ್ಪಿಸಿದ್ದೇನೆ.

ವಚನವಾಙ್ಮಯ ಹಾಗು ದಾಸರ ವಾಙ್ಮಯ ಇವೆರಡೂ ಕನ್ನಡದಲ್ಲಿ ಬರೆಯಲ್ಪಟ್ಟ ಅನುಭಾವಶಾಸ್ತ್ರದ ಅತ್ಯಂತ ಮಹತ್ವದ ಸಾಹಿತ್ಯವೆಂದು ನನ್ನ ಭಾವನೆ. ಯಾವುದಕ್ಕೆ ಪಾಶ್ಚಾತ್ಯ ತತ್ತಜ್ಞರು ಮಿಸ್ಟಿಸಿಜಮ್ (Mysticism) ಎಂದೆನ್ನುವರೋ ಅದು ಈ ವಾಙ್ಮಯದಲ್ಲಿ ಹೇರಳವಾಗಿದೆ. ಆಧುನಿಕ ಪದ್ಧತಿಯಿಂದ ಈ ವಾಙ್ಮಯದ ಆವಿಷ್ಕರಣವು ಆಗುವದು ಹಾಗೂ ಮುಂದೆ ಅವುಗಳ ಪ್ರತಿಪಾದನವು ಇಂಗ್ಲೀಷದಲ್ಲಿ ಸಹ ಆಗುವದು ಅತ್ಯವಶ್ಯವು.

ಈ ವಾಙ್ಮಯವನ್ನು ಓದುವಾಗ ನನಗೆ ಆದ ಸಮಾಧಾನ ಹಾಗೂ ಆನಂದ ಇವು ಅನುಪಮವಿರುವವು. ಅವುಗಳ ಛಾಯೆಯನ್ನಾದರೂ ನನ್ನ ಕನ್ನಡ ಬಾಂಧವರಿಗೆ ತೋರಿಸಬೇಕೆಂಬ ಸದಿಚ್ಛೆಯಿಂದ ನಾನು ಈ ಪ್ರಯತ್ನವನ್ನು ಮಾಡಿರುವೆನು. ಇದನ್ನು ಎಲ್ಲರೂ ಮನ್ನಿಸಬೇಕೆಂದು ವಿನ್ನಹ.

ಇಲ್ಲಿ ಉಪಕಾರಸ್ಮರಣೆಯ ಮಹತ್ವದ ಸಂಗತಿಯನ್ನು ಸೇರಿಸದಿದ್ದರೆ ಈ ಪ್ರಸ್ತಾವನೆಯು ಪೂರ್ಣವಾಗದು. ಹಿಂಡಲಗಿಯಲ್ಲಿರುವಾಗ ವಚನ ಶಾಸ್ತ್ರದ ಅಭ್ಯಾಸ ಮಾಡಲು ಹಾಗೂ ಆ ಬಗ್ಗೆ ಬರೆಯಲು ನನಗೆ ಉತ್ತೇಜನ ಕೊಟ್ಟ ನನ್ನ ಮಿತ್ರರಾದ ಎಮ್. ಬೀ. ಪಾಟೀಲ, ಗೋಖಲೆ ಕೇಶವರಾವ, ಕೆ. ಎಸ್. ಪಾಟೀಲ ಹಾ ಜಶಾರ, ದೊಡ್ಡಮೇಟಿ ಅಂದಾನೆಪ್ಪನವರು ಇತ್ಯಾದಿ ಗೆಳೆಯರ ಉಪಕಾರಗಳನ್ನು ನಾನು ಮರೆಯಲಾರೆನು. ಬಳಿಕ ಈ ಪುಸ್ತಕದ ಹಸ್ತಲಿಖಿತ ಪ್ರತಿಯನ್ನು ಓದಿ ಇದನ್ನು ಅಚ್ಚು

ಹಾಕಿಸಿಯೇ ತೀರಬೇಕೆಂದು ಪ್ರೋತ್ಸಾಹಿಸಿದವರಲ್ಲಿ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಮೂರುಸಾವಿರಮಠ (ಹುಬ್ಬಳ್ಳಿ) ಇವರು ಅಗ್ರಗಣ್ಯರು. ಅವರಂತೆ ರಾ. ಸಾ. ಪಳಕಟ್ಟಿಯವರು, ಹರ್ಡೇಕರ ಮಂಜಪ್ಪನವರು, ಚಂದ್ರಶೇಖರ ಶಾಸ್ತ್ರಿಗಳವರು, ಆಲೂರ ವೆಂಕಟರಾಯರು, ಇವರು ಹಸ್ತ ಲಿಖಿತ ಪ್ರತಿಯನ್ನು ಮನ್ನಿಸಿ ಅಚ್ಚಿಗೆ ಪ್ರೋತ್ಸಾಹವಿತ್ತರು.

ಇಷ್ಟೆಲ್ಲ ಆದರೂ ಧನಾಭಾವದ ಮೂಲಕ ಈ ಕೆಲಸವು ಹಾಗೆಯೇ ಉಳಿಯಬಹುದಾಗಿತ್ತು. ಅಧ್ಯಾತ್ಮಿಕ ಕಾರ್ಯಾಲಯದ ಮುಖಾಂತರವೇ ಇದರ ಪ್ರಕಾಶನ ಕಾರ್ಯವು ಮೊದಲು ಮಾಡಿತು. ಜಕ್ಕಲಿಯ ಮೇಟಿ ಅಂದಾನಪ್ಪನವರು ೨೦೦-೦-೦ ರೂಪಾಯಿ ಕೊಟ್ಟು ಅಚ್ಚಿನ ಕಾರ್ಯವನ್ನು ಆರಂಭಿಸಲಿಕ್ಕೆ ಹೇಳಿದರು. ಆದರೆ ಅಷ್ಟರಿಂದೇನಾಗಬೇಕು? ಇನ್ನೂ ಹಲವು ಮಿತ್ರರು ಸಹಾಯಮಾಡುವೆವೆಂದು ಹೇಳಿರುವರು. ಹಣದ ಅಡಚಣಿಗಳನ್ನೆಲ್ಲ ಕರ್ನಾಟಕ ಪ್ರಿಂಟಿಂಗ ವರ್ಕ್ಸ ಧಾರವಾಡ ಇನರ ಒಡೆಯರಾದ ಪಿತಾಪುತ್ರ ಜಶಾರ ಬಳವಂತರಾಯರಿಗೂ ಜಶಾರ ವಿಠ್ಠಲ ರಾಯರಿಗೂ ನಿವೇದಿಸಿದೆನು. ಉದಾರಾಂತಃಕರಣಿಗಳೂ ವಿದ್ಯಾಪಕ್ಷ ಪಾತಿಗಳೂ ಆದ ಅವರು ಆ ಅಡಚಣಿಗಳನ್ನು ಲಕ್ಷಿಸಿ, ಈ ಕಾರ್ಯವನ್ನು ಕೈಕೊಂಡರು. ಅವರ ಈ ಉಪಕಾರದ ಮೂಲಕವೇ ನಾನು ಮುಂದಡಿ ಇಟ್ಟಿನು. ಹೀಗಾಗಿ ಈ ಅಚ್ಚು ಮುಗಿಯಿತು.

ಇನ್ನು ಈ ಕೃತಿಯಲ್ಲಿ ಅನೇಕ ದೋಷಗಳಿರಲಿಕ್ಕೆ ಸಾಕು. ದೋಷ ವಿಲ್ಲದ ವಸ್ತು ಅದಾವುದು? ಅದನ್ನು ತಿಳಿದವರು ಮನ್ನಿಸಿ ತೋರಿಸಿ ಕೊಟ್ಟರೆ ಮತ್ತೆ ಮುಂದೆ ತಿದ್ದಲವಕಾಶವಾಗುವದು.

ಶರಣ ಶರಣೆಯರು ತಮ್ಮ ದಿವ್ಯ ವಚನಗಳ ಮುಖಾಂತರ ನನ್ನ ಮೇಲೆ ಹೊರಸಿದ ಋಣದಿಂದ ಮುಕ್ತನಾಗಬೇಕೆಂದು ನಾನು ಅವುಗಳನ್ನು ಅಭ್ಯಸಿಸಿ ಈ ಗ್ರಂಥವನ್ನು ಬರೆದೆನು. ಆದರೆ ಅದನ್ನು ಅಚ್ಚು ಹಾಕಿಸ ಬೇಕಾದರೆ ಮೇಲೆ ಹೇಳಿದ ಮಹನೀಯರೆಲ್ಲರಿಗೆ ನಾನು ಋಣಿಯಾಗಿ ಕುಳಿತೆನು! ಇನ್ನು ಈ ಋಣದಿಂದ ನನ್ನನ್ನು ಮುಕ್ತಮಾಡುವ ಭಾರವು ಈ ವಿಷಯದ ಮಹತ್ಪ್ರವನ್ನರಿತ ನನ್ನ ಕನ್ನಡ ಗೆಳೆಯರ ಹಾಗೂ ಕನ್ನಡ ವಾಚಕರ ಮೇಲಿಯೇ ಇದೆ ಎಂದು ನಾನು ತಿಳಿದಿರುವೆನು.

ಧಾರವಾಡ,
೧-೪-೩೬

ರಂಗನಾಥ ರಾಮಚಂದ್ರ ದಿವಾಕರ

ವಚನಶಾಸ್ತ್ರರಹಸ್ಯದಲ್ಲಿ ಉಪಯೋಗಿಸಿದ

ಸಂಕೇತಗಳು ಮತ್ತು ಅವುಗಳ ಅರ್ಥಗಳು

(೧) ಬರಿಯ ಸಂಖ್ಯೆಯು ಇದ್ದರೆ ಇಲ್ಲವೆ ಸಂಖ್ಯೆಯು ( ) ಇಂಥ ಕೌಂಸಿನಲ್ಲಿದ್ದರೆ ಕೌಂಸಿನಲ್ಲಿಯ ಸಂಖ್ಯೆಯು ವಚನಾ ಮೃತದಲ್ಲಿಯ ವಚನಸಂಖ್ಯೆಯಿರುವದು.

(೨) ಸಂಖ್ಯೆಯ ಹಿಂದೆ (ಪ. ೫೩) ಹೀಗೆ ಯಾವದೊಂದು ಗ್ರಂಥದ ಸಂಕೇತವಿದ್ದರೆ ಆ ಸಂಖ್ಯೆಯು ಆ ಗ್ರಂಥದ ಪುಟವನ್ನು ತೋರಿಸುವದು.

(೩) ಇದಕ್ಕೆ (ಸಿ. ೪೫೯) ಹೀಗೆ ಇದ್ದ ಸಿದ್ಧರಾಮೇಶ್ವರ ವಚನಗಳು ಮಾತ್ರ ಅಪವಾದಾತ್ಮಕವಿರುವವು. ಇಲ್ಲಿ '೪೫೯' ಇದು ಸಿದ್ಧರಾಮೇಶ್ವರನ ವಚನಸಂಖ್ಯೆಯನ್ನು ತೋರುವದು.

(೪) (ಪು. ೫. ವ. ೩೦) ಹೀಗೆ ಇದ್ದಲ್ಲಿ ಆ ಪುಟದಲ್ಲಿಯ ಆ ವಚನ ವೆಂದು ತಿಳಿಯಬೇಕು.

ಅ. ಸೂ. ಅಂದರೆ 'ಅನುಭವಸೂತ್ರ,' ಕಲ್ಯಾಣದ ಮಾಯಿದೇವಕೃತ.

ಆ. ,, ,, ಆದಯ್ಯನ ವಚನಗಳು.
ಈ. ,, ,, ಈಶಾವಾಸ್ಯೋಪನಿಷತ್ತು.
ಉದಾ: ,, ,, ಉದಾಹರಣಾರ್ಥವಾಗಿ.
ಕಠ. ,, ,, ಕಠೋಪನಿಷತ್.
ಕ್ರಿ. ಶ. ,, ,, ಕ್ರಿಸ್ತೀಶಕವರ್ಷ.
ಕೀ. ,, ,, ದಾಸರ ಕೀರ್ತನೆಗಳು.
ಗೀ. ,, ,, ಶ್ರೀಮದ್ಭಗವದ್ಗೀತಾ.
ಘ. ,, ,, ಘನಲಿಂಗಿಯ ವಚನಗಳು.
ಚ. ,, ,, ಚನ್ನಬಸವೇಶ್ವರನ ವಚನಗಳು.
ಚ. ತೈ. ,, ,, ಚನ್ನಬಸವನ ತೈಜಸ.
ಛಾಂ. ,, ,, ಛಾಂದೋಗ್ಯೋಪನಿಷತ್.

ತೈ.	ಅಂದರೆ	ತೈತ್ತಿರೀಯೋಪನಿಷತ್.
ದೇ.	,, ,,	ದೇವರ ದಾಸಿಮಯ್ಯನ ವಚನಗಳು.
ಪ.	,, ,,	ಪಟಲ.
ಪಾರ.	,, ,,	ಪಾರಮೇಶ್ವರಾಗಮ.
ಪು.	,, ,,	ಪುಟ.
ಪ್ರ.	,, ,,	ಪ್ರಭುದೇವರ ವಚನಗಳು.
ಪ್ರಕ.	,, ,,	ಪ್ರಕರಣ.
ಬ.	,, ,,	ಬಸವೇಶ್ವರನ ವಚನಗಳು.
ಬೃ.	,, ,,	ಬೃಹದಾರಣ್ಯಕೋಪನಿಷತ್
ಮ.	,, ,,	ಮಹಾದೇವಿಯಕ್ಕನ ವಚನಗಳು.
ಮೃ.	,, ,,	ಮೃಗೇಂದ್ರಾಗಮ.
ಮಂ.	,, ,,	ಮಂತ್ರ.
ಮುಂ.	,, ,,	ಮುಂಡಕೋಪನಿಷತ್.
ವ.	,, ,,	ವಚನಶಾಸ್ತ್ರಸಾರವು ಭಾಗ ೧. ಆವೃತ್ತಿ ೧.
ವ. ಶಾ.	,, ,,	ವಚನಶಾಸ್ತ್ರಸಾರವು ಪೂರ್ವಾರ್ಧ. ಹೊಸ ಆವೃತ್ತಿ
ವಾತುಲ.	,, ,,	ವಾತುಲಾಗಮ.
ಶಾ. ಶ.	,, ,,	ಶಾಲಿವಾಹನ ಶಕವರ್ಷ.
ಶೂ.	,, ,,	ಶೂನ್ಯಸಂಪಾದನೆ.
ಶ್ಲೋ.	,, ,,	ಶ್ಲೋಕ.
ಸಂ.	,, ,,	ಸಂಗನಬಸವೇಶ್ವರನ ವಚನಗಳು.
ಸಿದ್ಧ.	,, ,,	ಸಿದ್ಧರಾಮೇಶ್ವರ ವಚನಗಳು.
ಸೂಕ್ಷ್ಮ.	,, ,,	ಸೂಕ್ಷ್ಮಾಗಮ.
ಹ.	,, ,,	ಹಡಪದಪ್ಪಣ್ಣನ ವಚನಗಳು.

ಒಪ್ಪೋಲೆ

ವಿಜಾಪುರ -586103

೧ನೇ ಭಾಗ ವಚನಾಮೃತ

ಪುಟ	ಸಾಲು	ತಪ್ಪು	ಒಪ್ಪು
೭	೩	ಸಾಕ್ಷೇಪ	ಸಾಪೇಕ್ಷ
೨೦	೨೯	ನಿಶ್ಚಯ	ನಿಶ್ಚಲ
೩೩	೧೪	ಎರಡು ವನತಿಗಳಿದು	ಎರಡುವನತಿಗಳಿದು
೩೫	೧	ಈ್ರಯೆಗೆ	ಈ ಸತ್ಕ್ರಿಯೆಗೆ
೪೪	೧೪	I ತನು	I ಮನ
೪೭	೫	ಅ ಕಾಯ	ಆ ಕಾಯ
೫೪	೨೩	ಕಾರುವದು	ಕಾಡುವದು
೬೩	೧೧	ದೇಹಿತ	ದೇಹಿಕ
೭೧	೨೧	ನೆಲೆಗಟ್ಟಿತ್ತಯ್ಯಾ	ನೆಲೆಗೆಟ್ಟಿತ್ತಯ್ಯಾ
೭೪	೧೦	ತನ್ನ....ಕ್ತಿ	ತನ್ನ ಭಾವಶಕ್ತಿ....ಕ್ತಿ
೭೮	೧೦	ಕಠವಲ್ಯುಪನಿಷತ್	ಕರ (ಕೈ) ವಲ್ಯುಪನಿಷತ್
೮೩	೨೩	ಸತ	ಸತ್ಯ
೮೭	೨೨	ಪ್ರತೀತ	ಪ್ರತೀಕ
೯೯	೪	ಬಿಸಿ ಬಿಸಿನೀರೊಳಗುಂಟೇ	ಬಿಸಿ ನೀರೊಳಗುಂಟೇ
೯೩	೨೧	ಭಕ್ತನಲ್ಲಯ್ಯ	ಭಕ್ತನಯ್ಯ
೧೬೭	೨೦	ನಿಜದಾಕಾರವಾಗಿಪ್ಪರಯ್ಯ	ನಿಜದಾಕಾರವಾಗಿಪ್ಪಿರಯ್ಯ
೨೧೭	೯	ಕಾಳವೈ	ಕಾಳವ್ವೆ
೨೧೯	೧೩-೧೪	ದಸಯ್ಯ–ಗೊಗ್ಗವ್ವೆ	ದಸರಯ್ಯ–ಗೊಗ್ಗವ್ವೆ
೨೨೧	೧೨	೫೧, ೨೦೦....೫೧೨	೫೧, ೪೦೩, ೫೦೭

೨ನೇ ಭಾಗ ವಚನಶಾಸ್ತ್ರಸಾರ

೧೯	೨	ಪಿತೃಯಾಗ–ದೇವಯಾಗ	ಪಿತೃಯಾನ–ದೇವಯಾನ
೬೬	೩	ಕರ್ತುಗಳನ್ನು	ಕರ್ಮಗಳನ್ನು
೭೭	೨೯	ಪ್ರತಿಯಾದ	ಪ್ರತಿಯಾದ

೪೯	೨೦	ವಿರುದ್ಧ	ಅವಿರುದ್ಧ
೯೬	೨೯	ವಾತಾವರವು	ವಾತಾವರಣವು
೧೧೧	೪	ಬುದಕಿ	ಬದುಕಿ
೧೩೧	೧೫	ನೀತಾ	ನಿಶಿತಾ
,,	೨೪	ಇಂದ್ರಾಯಾತೀತ	ಇಂದ್ರಿಯಾತೀತ
೧೭೧	೩೦	ಧಾನ್ಯ	ಧ್ಯಾನ
೧೮೨	೧೬	ಸತ್ಯವ್ರಾಯರು	ಸತ್ಯಪ್ರಿಯರು
೧೯೦	೩೬	ಎನಿಸಿದೆ	ಎನಿಸದೆ
೧೯೯	೧೪	ಶುದ್ಧವಾಗವ	ಶುದ್ಧವಾದ
೨೧೧	೩೦	ಬೇಸಾ	ಲೇಸಾ
೨೩೯	೬	ಧರಿಸ	ಧರಿಸಿ
೨೬೪	೮	ವಿಗಂಡಿಸಬೇಕು	ವಿಂಗಡಿಸಬೇಕು
೨೭೬	೩೬	ಯಾವ	×
೨೭೮	೧೪	ಅನೇಕ	ಅನೇಕ.
೨೮೦	೨೨	ಅಂಗ	ಲಿಂಗ
೨೮೧	೧	ಅಂಗ	ಲಿಂಗ
೨೦೪	೧೯	ಕರುಣಾಳವು	ಕರುಣಾಳುವು
೩೦೪	೨೬	ಭಾಸ್ಕಾರೋದಯ	ಭಾಸ್ಕರೋದಯ
೩೧೧	೩೦	ಸಮ	ಮನ
೩೩೭	೧೬	ಪರಸು, ದೈವತ	ಪರಮದೈವತ

ವಚನಶಾಸ್ತ್ರರಹಸ್ಯ

ಉಪಯೋಗಿಸಿದ ಗ್ರಂಥಮಾಲಿಕೆ

೧. ಕನ್ನಡ

೧. ವಚನಶಾಸ್ತ್ರಸಾರವು. ಭಾಗ ೧. ಆವೃತ್ತಿ ೧. ೨. ವಚನ ಶಾಸ್ತ್ರಸಾರವು. ಭಾಗ ೧. ಪೂರ್ವಾರ್ಧ ಆವೃತ್ತಿ ೨. ೩. ಬಸವೇಶ್ವರನ ವಚನಗಳು. ೪. ಪ್ರಭುದೇವರ ವಚನಗಳು. ೫. ಸಿದ್ಧರಾಮೇಶ್ವರನ ವಚನಗಳು. ೬. ಜನ್ನಬಸವೇಶ್ವರನ ವಚನಗಳು. ೭. ಆದಯ್ಯನ ವಚನಗಳು. ೮. ಮಹಾದೇವಿಯಕ್ಕನ ವಚನಗಳು. ೯. ಗಣದಾಸೀ ವೀರಣ್ಣನ ವಚನಗಳು. ೧೦. ದೇವರ ದಾಸಿಮಯ್ಯನ ವಚನಗಳು. ೧೧. ಹಡಪ ದಪ್ಪಣ್ಣನ ವಚನಗಳು. ೧೨. ಸಕಲೇಶ ಮಾದರಸನ ವಚನಗಳು. ೧೩. ಸಂಗನಬಸವೇಶ್ವರನ ವಚನಗಳು. ೧೪. ಘನಲಿಂಗನ ವಚನಗಳು. ೧೫. ಲಿಂಗಮ್ಮನ ವಚನಗಳು. ೧೬. ವೀರಶೈವ ರಗಳೆ. ೧೭. ಶೂನ್ಯ ಸಂಪಾದನೆ. ೧೮. ಸಿದ್ಧಲಿಂಗೇಶ್ವರನ ಏಕೋತ್ತರ ಶತಸ್ಥಲ. ೧೯. ಶಿವಾನು ಭವಸೂತ್ರ. ೨೦. ೬೩ ಪುರಾತನರ ಚರಿತ್ರೆ—ಶ್ರೀ. ಮು. ಮು. ವಿರ್ಜಿಕೃತ. ೨೧. ಬಸವಭಾನು— ಶ್ರೀ. ಸಿ. ಪಾವಟೇಕೃತ. ೨೨. ಜನ್ನಬಸವ ತೈಜಸ— ಶ್ರೀ. ಸಿ. ಪಾವಟೇಕೃತ. ೨೩. ವೀರಶೈವರಲ್ಲಿ ಜಾತಿಭೇದ ಗಳಿಲ್ಲ— ಶ್ರೀ. ಬಿಳೇಅಂಗಡಿಕೃತ. ೨೪. ಬಸವೇಶ್ವರನೂ ಅಸ್ಪೃಶ್ಯತಾ ನಿವಾರಣೆಯೂ— ಶ್ರೀ. ಚನ್ನಪ್ಪ ಉತ್ತಂಗಿ. ೨೫. ಕರ್ನಾಟಕ ಕವಿಚರಿತೆ ಭಾಗ. ೧. ೨೬. ಕರ್ನಾಟಕ ಕವಿಚರಿತೆ. ಭಾಗ. ೨. ೨೭. ಈ ವರೆಗೆ ಪ್ರಸಿದ್ಧವಾದ ಪುರಂದರಾದಿ ದಾಸರ ಪದಗಳು. (ಉಡುಪಿ ಮುದ್ರಣ I)

೨. ಸಂಸ್ಕೃತ

೧. ಸೂಕ್ಷ್ಮಾಗಮ—ಶ್ರೀ. ವಾರದ ಮಲ್ಲಪ್ಪನವರ ಆಶ್ರಯದಿಂದ ಪ್ರಕಟವಾದದ್ದು. ೨. ಪಾರಮೇಶ್ವರಾಗಮ. ,, ೩. ಸಿದ್ಧಾಂತಶಿಖಾಮಣಿ. ೪. ತಂತ್ರಸಂಗ್ರಹ— ಶ್ರೀ. ಶಂಕರಪ್ಪ ಟೊಪಿಗೀಯವರು ಪ್ರಕಟಿಸಿದ್ದು. ೫. ಈಶಾದ್ಯಷ್ಟೋತ್ತರಶತೋಪನಿಷತ್— ನಿರ್ಣಯಸಾಗರ, ಮುಂಬಯಿ.

೬. ಶ್ರೀಮದ್ಭಗವದ್ಗೀತಾ. ೭. ಮೃಗೇಂದ್ರಾಗಮ— ಶಿವಾಗಮ ಸಿದ್ಧಾಂತಪರಿಪಾಲನ ಸಂಘದವರು ಪ್ರಕಟಿಸಿದ್ದು.

೩. ಇಂಗ್ಲೀಷ

1. Veerashaiva Philosophy, by Shri. S. Pavate. 2. Veerashaivism, a leaf-let by Shri. T. H. M. Sadashivayya. 3. Anubhava Mantapa, by Shri. C. D. Uttangi. 4. Indian Philosophy, by Prof. Radhakrishnan, Vol. I. 5. Indian Philosophy, by Prof. Radhakrishnan, Vol. II. 6. Reign of Religion in contemporary Philosophy, by Prof. Radhakrishnan 7. Indian Mysticism--Mysticism in Maharastra, by Prof. R. D. Ranade. 8. Shakti and Shakta, by Sir John Woodroffe. 9. The Holy Bible. 10. The confessions of St. Augustine. 11. Al. Quran, by Mahomed Ali. 12. Mysticism, by Evelyn Underhill. 13. Varieties of Religions Experience, by Prof. James. 14. Saivite saints, Heritage of India Series.

೪. ಪರ್ಶಿಯನ್

೧. ದಿವಾನ್-ಏ-ಹಾಫಿಜ್, ಇದು ಹಾಫಿಜ್ ಕವಿಯ ಗ್ರಂಥ. ೨. ಮಜ್ ಮುವಾರುಬಾಯಿಯಾತ್ (ರುಬಾಯಿಯಾತುಗಳ ಸಂಗ್ರಹ) ಮಹಮ್ಮದ ಅಬ್ದುಲ್‌ಅಹದ್ ಇವರು ದಿಲ್ಲಿಯಲ್ಲಿ ೧೯೦೦ರಲ್ಲಿ ಪ್ರಕಟಿಸಿದ್ದು. ೩. ರುಬಾಯಿಯಾತ್— ಉಮರಖಯ್ಯಾಮ ಇವನ ಪದ್ಯಗಳ ಸಂಗ್ರಹ. ೪. ಗುಲಿಸ್ತಾನ— ಸಾದಿಕವಿವಿರಚಿತ. ೫. ರೂಮಿ— ಜಲಾಲುದ್ದೀನ ಇವರ ಕಾವ್ಯಸಂಗ್ರಹ.

೫. ಮರಾಠಿ

೧. ಜ್ಞಾನೇಶ್ವರ, ಏಕನಾಥ, ತುಕಾರಾಮ, ನಾಮದೇವ, ರಾಮದಾಸ, ಇವರೆಲ್ಲರ ಗ್ರಂಥಗಳು.

೬. ಬಂಗಾಲಿ

೧. ಶ್ರೀರಾಮಾನುಜ ಚರಿತ— ರಾಮಕೃಷ್ಣಾನಂದ ಪ್ರಣೀತ. ೨. ಗೀತಾಂಜಲಿ— ರವೀಂದ್ರನಾಥ ಟಾಗೋರ.

ಶ್ರೀವಚನಶಾಸ್ತ್ರ ರಹಸ್ಯವು

ಭಾಗ ೧

ವಚನಾಮೃತವು

೧. ಪರಮಾತ್ಮನು ಅಥವಾ ಪರಾತ್ಪರ ಸತ್ಯವು

ವಿವರಣೆ

ತ್ರಿಕಾಲದಲ್ಲಿಯೂ ಬದಲಾಗದೆ ಏಕರೂಪವೂ ಅಬಾಧಿತವೂ ಇರುವ ವಸ್ತುವೆ ಪರಾತ್ಪರ ಸತ್ಯವು. ಅದು ಚೈತನ್ಯರೂಪವು ಅಥವಾ ಚಿನ್ಮಯವು ಇರುವದರಿಂದ ಚಿತ್ ಎಂದು ಅಥವಾ ಪರಮಾತ್ಮವೆಂದು ಹೇಳಲ್ಪಡುತ್ತಿದೆ.

ನಮ್ಮ ಕಣ್ಣು, ಕಿವಿ, ಮೂಗು, ನಾಲಿಗೆ, ಮತ್ತು ತ್ವಕ್ಕು, ಈ ಐದು ಜ್ಞಾನೇಂದ್ರಿಯಗಳಿಂದ ನಮಗೆ ಗೋಚರವಾಗುವ ಎಲ್ಲ ವಸ್ತುಗಳು ಕ್ಷಣಶಃ ಬದಲಾಗುವ ಸ್ವಭಾವವುಳ್ಳವುಗಳು. ಈ ವಸ್ತುಗಳಾಚೆಗೆ, ಇವುಗಳಿಗಾಧಾರವಾದ, ಎಂದೂ ಬದಲಾಗದ ಒಂದು ನಿತ್ಯ, ಸತ್ಯ ತತ್ವವಿರುವದು. ಅದು ತ್ರಿಕಾಲದಲ್ಲಿಯೂ ಅಬಾಧಿತವಿರುವದು. ಮಾನವ ಬುದ್ಧಿಗೆ ಅದು ನಿಜವಾಗಿ ತಿಳಿಯದು; ಯಾಕಂದರೆ ಅದು ನಮ್ಮ ಬುದ್ಧಿಯ ಸಾಮರ್ಥ್ಯವನ್ನು ಮೀರಿರುವದು. ಆದರೆ ಅದು ಇರುವದೆಂಬ ಸ್ಫೂರ್ತ ಜ್ಞಾನವು ಮಾತ್ರ ಶುದ್ಧ ಮತ್ತು ನಿರಪೇಕ್ಷ ಬುದ್ಧಿಗೆ ಹೊಳೆಯುವದು. ಅದು 'ಏಕಾತ್ಮ ಪ್ರತ್ಯಯಸಾರ' ವೆನಿಸಿರುವದು. ಸಮಾಧಿಸ್ಥಿತಿಯಲ್ಲಿ ಚಿತ್ತವು ಸತ್ಯವಸ್ತುವಿನಲ್ಲಿ ಲಯಹೊಂದಿದಾಗ ಅದು ಏಕರೂಪವೂ ಏಕರಸವೂ ಇರುವದೆಂಬ ಅನುಭವವು ಬರುವದು. ಆ ಸ್ಥಿತಿಯಲ್ಲಿ ಮಿಂಚಿದ ಮಾತನ್ನು, ಹೊಳೆದ ಕಲ್ಪನೆಯನ್ನು, ಆದ ಅನುಭವವನ್ನು ತದನಂತರ ಅನುಭಾವಿಗಳು ವಿವಿಧರೀತಿಯಿಂದ ಬಣ್ಣಿಸಿರುವರು. ಅದೇ ಸತ್ಯಸ್ವರೂಪದ ವರ್ಣನೆಯು,

ಪರಮಾತ್ಮನ ವಿವರಣೆಯು. ಹೀಗೆ ವರ್ಣಿಸಲ್ಪಟ್ಟಿರುವುದೆ ಪರಾತ್ಪರಸತ್ಯವು ಅಥವಾ ಪರಮಾತ್ಮವಸ್ತುವು, ಎಂದು ವಚನಕಾರರ ಸಿದ್ಧಾಂತವಿರುವದು.

ಆ ತತ್ವದ ಪೂರ್ಣ ಅಥವಾ ಸ್ಪಷ್ಟವರ್ಣನೆ ಮಾಡುವದು ಸಾಧ್ಯವಿಲ್ಲ. ಆದುದರಿಂದ ಅದು ಅವರ್ಣನೀಯವು, ಅನಿರ್ವಚನೀಯವು, ವಾಙ್ಮನಕ್ಕ ಗೋಚರವು, ಎಂದು ಹೇಳಲ್ಪಟ್ಟಿದೆ. ಸೃಷ್ಟಿಯು ಪರಿವರ್ತನಶೀಲವಿರು ವುದರಿಂದ ಶೀತ ಉಷ್ಣ, ಒಳಗೆ ಹೊರಗೆ, ಸಾಕಾರ ನಿರಾಕಾರ, ಸುಖ ದುಃಖ ಎಂಬ ಮುಂತಾದ ದ್ವಂದ್ವಗುಣಗಳಿಗೆ ಅಥವಾ ಸಾಪೇಕ್ಷಗುಣ ಗಳಿಗೆ ಅದು ಒಳಗಾಗಿರುವದು. ಪರಾತ್ಪರ ಸತ್ಯವು ಅಂತಹ ದ್ವಂದ್ವ ಗಳಾಚೆಗಿರುವದು. ಅದು ನಾಮರೂಪಗುಣಾತೀತವಿರುವದು.

ಸಮ್ಮ ತಿಳಿವಳಿಕೆಗಾಗಿ ಇದನ್ನು ಹೋಲಿಸುವುದೆ ಆದರೆ ಆಕಾಶ ದೊಡನೆ ಹೋಲಿಸಬಹುದು. ಆಕಾಶದ ಅಂತ-ಆಕಾರಗಳನ್ನು ಅರಿತವ ರಾರಾದರೂ ಇರುವರೋ? ಆಕಾಶದಂತೆಯೆ ಸತ್ಯವೆಂಬುದು ಒಂದೇ ಒಂದಾಗಿ ಎಲ್ಲೆಲ್ಲಿಯೂ ತುಂಬಿಕೊಂಡಿರುವದು. ಅದಕ್ಕೆಯೆ ಪರಾತ್ಪರ ಸತ್ಯ ಪರಮಾತ್ಮವಸ್ತು, ಆತ್ಮ, ಬಯಲು, ನಿರವಯ, ನಿರ್ವಯಲು, ಚಿದ್ಘನ, ಶೂನ್ಯ ಎಂಬ ಮುಂತಾದ ಹೆಸರುಗಳು ವಚನಶಾಸ್ತ್ರದಲ್ಲಿ ಕೊಡ ಲ್ಪಟ್ಟಿವೆ. ಈ ಹೆಸರುಗಳು ಪೂರ್ಣ ಅನ್ವರ್ಥಕವಾದವುಗಳು ಅಥವಾ ಪೂರ್ಣ ಯಥಾರ್ಥವಾದವುಗಳು, ಎಂದು ಹೇಳಲಿಕ್ಕಾಗುವದಿಲ್ಲ; ಯಾಕಂ ದರೆ ಆ ವಸ್ತುವು ಅವರ್ಣನೀಯವೆ ಇರುವದು. ಆದರೆ ಇವು ನಿರ್ದೇಶ ಮಾತ್ರವಿರುವವು.

ವಚನಗಳು

೧. ಅಯ್ಯಾ, ನಿರವಯ ಶೂನ್ಯಲಿಂಗ ಮೂರ್ತಿಯ ನಿಲುಕಡೆ ಎಂತೆಂ ದೊಡೆ, ಸಾಕಾರನಲ್ಲ ನಿರಾಕಾರನಲ್ಲ ನೋಡಾ. ನಿರವಯ ಶೂನ್ಯಲಿಂಗ ಮೂರ್ತಿ ಆದಿಯಲ್ಲ ಅನಾದಿಯಲ್ಲ, ಇಹದವನಲ್ಲ ಪರದವನಲ್ಲ, ಸುಖದವನಲ್ಲ, ದುಃಖದವನಲ್ಲ. ನಿರವಯ ಶೂನ್ಯಲಿಂಗ ಮೂರ್ತಿ ಪುಣ್ಯಪಾಪದವನಲ್ಲ, ಕರ್ತೃ ಭೃತ್ಯನಲ್ಲ, ಕಾರಣಕಾರ್ಯನಲ್ಲ, ಧರ್ಮಿಕರ್ಮಿಯಲ್ಲ, ಪೂಜ್ಯಪೂಜಕನಲ್ಲ. ಇಂತು ಉಭಯವಳಿದು ಬೆಳಗುವ ನೋಡಾ ನಮ್ಮ ಗುಹೇಶ್ವರಲಿಂಗವು.

ಟಿಪ್ಪಣಿ:— ಶೂನ್ಯಲಿಂಗ ಮೂರ್ತಿ – ಯಾವ ಗೋಚರವಸ್ತುವೂ ಇಲ್ಲದುದನ್ನು, ಕೇವಲ ಚಿದ್ಘನವಸ್ತು ಇದ್ದುದನ್ನು ನಿರ್ದೇಶಿಸುವ ಚಿನ್ಹೆಯೆ ಲಿಂಗವು; ಅದೇ ಶೂನ್ಯವನ್ನು ತೋರುತ್ತಿರುವದರಿಂದ ಶೂನ್ಯಲಿಂಗವೆನಿ ಸುವುದು. ಉಭಯವಳಿದು ಅಂದರೆ ನಿರ್ದ್ವಂದ್ವನಾಗಿ, ದ್ವಂದ್ವಾತೀತನಾಗಿ.

೨. ಅಂತರವಿಲ್ಲದಂದು ಬಾಹ್ಯವಿಲ್ಲದಂದು, ಅಡಿ ಮುಡಿ ಒಡಲು ಮತ್ತೊಂದೆಡೆ ಏನೂ ಇಲ್ಲದಂದು, ದಶದಿಕ್ಕುಗಳು ವಿಶ್ವಪ್ರಪಂಚಗಳು ಏನೂ ಇಲ್ಲದಂದು, ಸ್ಥಾವರಾತ್ಮಕಂಗಳಿಗೆ ಆಧಾರಕರ್ತ ಎಂಬ ನಾಮಂಗಳೇನೂ ಇಲ್ಲದಂದು, ಸರ್ವಶೂನ್ಯ ನಿರಾಲಂಬನಾಗಿರ್ದೆಯಲ್ಲಾ ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.

ಟಿಪ್ಪಣಿ: — ಸರ್ವಶೂನ್ಯ – ಗೋಚರವಾದುದೇನೂ ಇಲ್ಲದಿರುವುದೆ ಶೂನ್ಯವು; 'ನೇತಿ' 'ನೇತಿ' ಇದು ಅಲ್ಲ ಇದು ಅಲ್ಲ, ಎಂದು ಶ್ರುತಿಯಲ್ಲಿ ಯಾವುದು ವರ್ಣಿಸಲ್ಪಟ್ಟಿರುವುದೊ ಅದೇ ಶೂನ್ಯವು.

೩. ಧರೆಯಾಕಾಶವಿಲ್ಲದಂದು, ತ್ರಿಮಂಡಲ ನೆಲೆಗೊಳ್ಳದಂದು, ಹೋಮ ನೇಮ ಜಪತಪವಿಲ್ಲದಂದು, ನಿಮ್ಮನಾರು ಬಲ್ಲರು? ಹರಿಬ್ರಹ್ಮರಿಗೆ ಅಗೋಚರ. ನಿರ್ಲೇಪ ನಿರಂಜನನಾಗಿ ವೇದಂಗಳರಿಯವು. ಶಾಸ್ತ್ರಶ್ರುತಿ ಸ್ಮೃತಿಗಳು ನಿಮ್ಮನರಿಯವು. ಗಗನಕಮಳಕುಸುಮಪರಿಮಳದಿಂದತ್ತಲು ಗುಹೇಶ್ವರಾ, ನಿಮ್ಮ ನಿಲವನಾರು ಬಲ್ಲರು?

ಟಿಪ್ಪಣಿ:— ಗಗನಕುಸುಮಪರಿಮಳದಿಂದತ್ತಲು – ಗಗನಕುಸು ಮವು ಕೇವಲ ಕಾಲ್ಪನಿಕವು, ಅದರ ಪರಿಮಳವು ಮತ್ತಷ್ಟು ಕಾಲ್ಪನಿಕವು. ಅದರಿಂದತ್ತಲು ಅಂದರೆ ಕಲ್ಪನಾತೀತವು ಎಂದು ಅರ್ಥ.

೪. ಆದಿ ಅನಾದಿ ಇಲ್ಲದಂದು, ಅಜಾಂಡಬ್ರಹ್ಮಾಂಡವಿಲ್ಲದಂದು, ತಾನೆ. ನಾದಬಿಂದುಕಳಾತೀತನು, ಜನಪರಮರಿಲ್ಲದಂದು ತಾನೆ. ನಾಮ ರೂಪ ಕ್ರಿಯಾತೀತನು, ಸಚರಾಚರಂಗಳೆಲ್ಲ ರಚನೆಗೆ ಬಾರದಂದು ತಾನೆ. ಅಖಂಡ ಪರಿಪೂರ್ಣನು, ಅಪ್ರಮಾಣ, ಅಗಮ್ಯ, ಅಗೋಚರದತ್ತಲಾದ ಮಹಾಘನ ಚೈತನ್ಯಲಿಂಗ ನೋಡಾ, ಅಪ್ರಮಾಣ ಕೂಡಲಸಂಗಮದೇವಾ.

ಟಿಪ್ಪಣಿ:— ನಾದಬಿಂದುಕಳಾ – ಅವ್ಯಕ್ತಶಕ್ತಿಯು ಮೊದಲು ನಾದರೂಪದಿಂದ ಬಳಿಕ ಬಿಂದುರೂಪದಿಂದ ಕೊನೆಗೆ ಕಲಾರೂಪದಿಂದ (ಭಾಗವಾಗಿ) ವ್ಯಕ್ತವಾಗಿ ನಾನಾವಿಧ ಸೃಷ್ಟಿಯ ಸ್ವರೂಪವನ್ನು ತಾಳು ವದು. ಜನಪರಮರು – ಶ್ರೇಷ್ಠಜನರು. ಚೈತನ್ಯಲಿಂಗ – ಚಿದ್ರೂಪಲಿಂಗ.

೪ ಅ. ವಚನದ ರಚನೆ ಎಂಬ ಮಾತಿನ ಬಣಬೆಯ ಪರಿಯಲ್ಲ ನೋಡಾ! ಹೊಗಳಿ ಕಂಡವರೆಲ್ಲರು ಮೂರ್ತಿಗೊಳಗಾದರು. ವೇದಶಾಸ್ತ್ರ ಶ್ರುತಿಸ್ಮೃತಿಗಳು ಹೊಗಳಿ ಕಾಣವೆಂಬುದ, ಗುಹೇಶ್ವರ ಸಾಕ್ಷಿಯಾಗಿ ಮೂರು ಲೋಕ ಬಲ್ಲುದು ಕಾಣಾ ಸಿದ್ಧರಾಮಯ್ಯ.

ವಚನಗಳು

೨೦. ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ, ಸಕಲ ವಿಸ್ತಾರದ ರೂಹು ನೀನೇ ದೇವಾ, ವಿಶ್ವತೋಚಕ್ಷು ನೀನೇ ದೇವಾ, ವಿಶ್ವತೋಮುಖ ನೀನೇ ದೇವಾ, ವಿಶ್ವತೋಬಾಹು ನೀನೇ ದೇವಾ, ವಿಶ್ವತೋಪಾದ ನೀನೇ ದೇವಾ, ಕೂಡಲಸಂಗಮದೇವಾ.

೨೧. ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ವಾಯು ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ ?

೨೨ ಅ. ಇಂತೆಂದ ಭೂಮಿಯ, ಇಂತೆಂದ ಗಗನವ, ಇಂತೆಂದ ಸಪ್ತ ಸಾಗರ,ವ ಇಂತೀ ಲೋಕದೊಳಗೆ ತಿಂಥಿಣಿಯಾಗಿಪ್ಪ ಅಚಿಂತ್ಯನನಾರು ಬಲ್ಲರೈ ರಾಮನಾಥಾ ?

೨೩. ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತಾಗಿ, ಎಣೆಸಬಾರದ ಬಹುಳ ಬ್ರಹ್ಮಕ್ಕೆ ಎಣೆಯಾವುದು ಹೇಳಾ? ಅಗಣಿತನಕ್ಷಯ, ಸರ್ವಜೀವ ಮನಃಪ್ರೇರಕ, ಸರ್ವಜ್ಞ, ಏಕೋದೇವ, ಸಂವಿತ್ಪ್ರಕಾಶ ಪರಮೇಶ್ವರನ, ಮನವೆಂಬ ದರ್ಪಣದೊಳಗೆ ಬಿಂದ್ವಾಕಾಶರೂಪನಾಗಿ ಬೆಳಗಿ ತೋರುವ ಶಿವನ ಅಂದವ ತಿಳಿದು, ನೋಡಿ, ಕೂಡಬಲ್ಲಾತನೇ ಪರಶಿವಯೋಗಿ. ಆತ ಜನನಮರಣ ವಿರಹಿತ, ಆತನೇ ಸರ್ವಜ್ಞನು, ಆತನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತಾನೇ.

ಟಿಪ್ಪಣಿ:— ಸಂವಿತ್ಪ್ರಕಾಶ – ಚೈತನ್ಯವೆ ಪ್ರಕಾಶವಾಗಿರುವ, ಜ್ಞಾನದ ಪ್ರಕಾಶ. ಬಿಂದ್ವಾಕಾಶ – ಬಿಂದುರೂಪ ಸೂಕ್ಷ್ಮಾಕಾಶ, ನಿರ್ಮಲ ಚಿದಾಕಾಶ.

೨೪. ಮರೀಚಿಯೊಳಗಿನ ಬಿಸಿಲಿನಂತೆ ಇದ್ದಿತ್ತು. ಕ್ಷೀರದೊಳಗಣ ತುಪ್ಪದಂತೆ ಇದ್ದಿತ್ತು. ಚಿತ್ರಿಕನೊಳಡಗಿದ ಚಿತ್ರದಂತೆ ಇದ್ದಿತ್ತು. ನುಡಿಯೊಳಡಗಿದ ಅರ್ಥದಂತೆ ಇದ್ದಿತ್ತು. ಅಲಿಯೊಳಡಗಿದ ತೇಜದಂತೆ ಇದ್ದಿತ್ತು. ಕೂಡಲ ಚನ್ನಸಂಗಯ್ಯ ನಿಮ್ಮ ನಿಲವು.

೨೫. ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿದ್ದ ಮಿಂಚಿನಂತೆ, ಬಯಲ ಮರೆಯಲಡಗಿದ್ದ ಮರೀಚಿಯಂತೆ, ಕಂಗಳ ಮರೆಯಲಡಗಿದ್ದ ಬೆಳಗಿನಂತೆ, ಗುಹೇಶ್ವರಾ ನಿಮ್ಮ ನಿಲವು.

೨೬. ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ, ಅಮೃತದೊಳಗಣ ರುಚಿಯ ನಾಲಿಗೆಯ ತುದಿಯಲ್ಲಿ ಅರಿವನ ಚೇತನದಂತೆ, ನಿಲವಿಲ್ಲದ ರೂಪ ಕಳೆಯಲ್ಲಿ ವೇಧಿಸುವ ಪರಿ, ರಾಮನಾಥಾ.

ಟಿಪ್ಪಣಿ:— ನಿರೂಪವಿರುವ ಪರಶಿವನನ್ನು ತೇಜೋರೂಪದಿಂದ ಅನುಭವಿಸಿಯೆ ತಿಳಿದುಕೊಳ್ಳತಕ್ಕದ್ದು ಎಂದು ಅರ್ಥ.

೨೭. ಮಣಿಗಳ ಸೂತ್ರದಂತೆ, ತ್ರಿನಯನ, ನೀನಿಪ್ಪೆಯಯ್ಯ. ಎಣೆಸುವಡೆ ತನುಭಿನ್ನ ಆತ್ಮನೊಬ್ಬನೇ. ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು ಮಣಿವುತಿರ್ಪೆನಯ್ಯಾ ರಾಮನಾಥಾ.

೨೮. ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತ ವಿಶ್ವವನು. ರಚಿಸಿದವನು ವಿಶ್ವಕ್ಕೆ ಹೊರಗಾಗಿರ್ದನೇ ? ಇಲ್ಲ. ವಿಶ್ವಮಯ ತಾನಾದನು. ವಿಶ್ವವೆಲ್ಲವೂ ತಾನಾದೊಡೆ, ವಿಶ್ವದುತ್ಪತ್ತಿಸ್ಥಿತಿಲಯಕ್ಕೊಳಗಾದನೇ ? ಇಲ್ಲ. ಅದೇನು ಕಾರಣವೆಂದಡೆ, ಅಜಾತನಾಗಿ ಉತ್ಪತ್ತಿ ಇಲ್ಲ, ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ, ಮರಣರಹಿತನಾಗಿ ಲಯಕ್ಕೊಳಗಲ್ಲ. ಇಂತೀ ಗುಣತ್ರಯಂಗಳ ಹೊದ್ದಲರಿಯ. ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ. ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ ಇದಿರಿಲ್ಲ. ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ. ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ, ಮರಳಿ ಅರಸಾಗಬಲ್ಲ. ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನು ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲನಯ್ಯ.

---

೩. ಸೃಷ್ಟಿರಚನೆಯ ಕ್ರಮ

ವಿವರಣೆ

ಸತ್ ಎಂಬ ನಿರವಯ ದ್ವಂದ್ವಾತೀತ ಏಕವಸ್ತುವಿನಿಂದ ಅದರ ಅವೇದ್ಯವಾದ ಸ್ವಭಾವಕ್ಕನುಸರಿಸಿ ಸೃಷ್ಟಿಯಾಯಿತು. ಅಥವಾ ಏಕಮೂ ಕೇವಲ ಚಿನ್ಮಯನೂ ಆದ ಪರಮಾತ್ಮನು ತನ್ನ ಸಂಕಲ್ಪದಿಂದ ಸೃಷ್ಟಿಯನ್ನು ಮಾಡಿದನು. ಎರಡೂ ವಿಧಾನಗಳ ಅರ್ಥವು ಒಂದೇ. ಹೊರಗಿನಿಂದ ನೋಡುವವರಿಗೆ ತೆರೆಗಳೆದ್ದಾಗ ಸಮುದ್ರವು ವಿಕೃತವಾದಂತೆ ಕಂಡರೂ ಸಮುದ್ರದ ದೃಷ್ಟಿಯಿಂದ ಅದು ವಿಕಾರವಲ್ಲ. ಯಾಕಂದರೆ, ಸಮುದ್ರದ ಪೃಷ್ಠಭಾಗದ ಮೇಲೆ ಬೇಕಾದಂಥ ಅಲ್ಲೋಲಕಲ್ಲೋಲವಾದರೂ ಗುಡ್ಡ

ದಂಥ ತೆರೆಗಳೆದ್ದರೂ ಸಮುದ್ರವು ತತ್ವತಃ ಸಮುದ್ರವೆ ಇರುವಮು. ಕಾಣಲಿಕ್ಕೆ ಅದರ ಮೇಲ್ಪೋರಿಕೆ ಮಾತ್ರ ಬೇರೆ ಕಾಣಬಹುದು. ಅದೇ ರೀತಿ ಅನಾದಿ ಸತ್ಯವು ಅಥವಾ ಅನಾದಿ ಪರಮಾತ್ಮನು ಸೃಷ್ಟಿಯು ಆವಿರ್ಭಾವದ ಮೂಲಕ ನಮ್ಮ ಅಲ್ಪ, ಸಂಕುಚಿತ ದೃಷ್ಟಿಗೆ ವಿಕೃತನಾದಂತೆ ಕಂಡರೂ ಆ ಮೂಲವಸ್ತುವು ಅಥವಾ ಪರಮಾತ್ಮನು ಅಚ್ಚುಅಳಿಯದೆ ಇದ್ದಕ್ಕಿದ್ದ ಹಾಗೆಯೆ ಇರುವನು. ಆದುದರಿಂದ ಪರಮಾತ್ಮನಿಂದ ಸೃಷ್ಟಿಯು ಆಗಿದ್ದರೂ ಅವನು ಹೊದ್ದಿಯೂ ಹೊದ್ದದಂತಿರುವನು, ಎಂದು ವರ್ಣಿಸಲ್ಪಟ್ಟಿರುವನು.

ಇನ್ನು ಸೃಷ್ಟಿಯೆಂಬುದು ಶಿವನ ವಿನೋದದಿಂದ ಆಯಿತೆಂಬುದು ನಿಜವಿದ್ದರೂ ಅದು ಯಾವ ಕ್ರಮದಿಂದ ಆಯಿತು ಇದನ್ನು ಹೇಳತಕ್ಕದ್ದಿದೆ.

ವಚನಗಳು

೨೯. ಪ್ರಥಮದಲ್ಲಿ ಅಖಂಡಾದ್ವಯ, ಅನುಪಮ, ನಿರವಯ, ನಿರಂಜನ, ಸರ್ವಶೂನ್ಯವನೊಳಗೊಂಡ, ಸಚ್ಚಿದಾನಂದ ನಿತ್ಯಪರಿಪೂರ್ಣವಪ್ಪ, ನಿಃಕಲ ಲಿಂಗವು ಧ್ಯಾನಪೂಜೆಗಳಿಲ್ಲದೆ ನಿರವಯದಲ್ಲಿ ಬಯಲಿಗನಾಗಿ ಇರಬಾರದೆಂದು, ತನ್ನ ಸ್ವೇಚ್ಛಾವಿಲಾಸದ ನೆನಹಿಂದ, ತನ್ನ ಚಿತ್ಪ್ರಭಾಸಾಮರ್ಥ್ಯ ಶಕ್ತಿಯ ಮುಂದುಗೊಂಡು, ಅನಂತಕೋಟಿ ಬ್ರಹ್ಮಾಂಡಗಳನು, ಅನಂತಕೋಟಿ ಆತ್ಮರುಗಳನು, ತನ್ನಲ್ಲಿಯೆ ಪುಟ್ಟಿಸಿ, ಆತ್ಮರುಗಳಿಗೆ ಪಂಚವಿಂಶತಿ ತತ್ವಗಳನು ಸಂಬಂಧಿಸಿದಲ್ಲಿ ಆ ಆತ್ಮರುಗಳು ದೇಹೋಹವೆಂದು ಜಾತಿವರ್ಣಾಶ್ರಮ, ಕುಲಗೋತ್ರ ನಾಮಸೀಮೆ, ಸುಖದುಃಖ, ಬಂಧಮೋಕ್ಷ, ಇವುಗಳಿಗೊಳಗಾಗಿ ತಮ್ಮ ನಿಜಸ್ವರೂಪವ ಮರೆದ ಆತ್ಮರುಗಳ ಕಾಲಕಾಮರಿಗೆ ವಶಮಾಡಿ ಅವರ ಸುಖದುಃಖ ಬಂಧಮೋಕ್ಷಂಗಳ ಹೊದ್ದದೆ ಯಂತ್ರವಾಹಕನಾಗಿ ಆದಿಸುತಿರ್ಪನಾ ಶಿವಲಿಂಗವು.

ಟಿಪ್ಪಣಿ:— ಆತ್ಮರುಗಳನು – ಜೀವಾತ್ಮಗಳನ್ನು, ಜೀವಗಳನ್ನು. ಪಂಚವಿಂಶತಿ ತತ್ವ – ಸಾಂಖ್ಯರ ೨೫ ತತ್ವಗಳು; ಅವುಗಳ ವಿವರವೇನಂದರೆ– ಪುರುಷ, ಪ್ರಕೃತಿ, ಮಹತ್, ಅಹಂಕಾರ, ಮನಸು, ೫ ಜ್ಞಾನೇಂದ್ರಿಯಗಳು, ೫ ಕರ್ಮೇಂದ್ರಿಯಗಳು, ೫ ತನ್ಮಾತ್ರೆಗಳು ಮತ್ತು ೫ ಮಹಾಭೂತಗಳು. ದೇಹೋಹವೆಂದು – ನಾನೇ ದೇಹವು ಅಥವಾ ದೇಹವೇ ನಾನು ಎಂಬ ದೇಹಾತ್ಮಬುದ್ಧಿಯಿಂದ.

೩೦. ಗಗನದ ಮೇಲೊಂದು ಅಭಿನವ ಗಿಳಿ ಹುಟ್ಟ ಸ್ವಯ ಸಂಭ್ರಮದಲ್ಲಿ ಮನೆಯ ಮಾಡಿತ್ತು. ಒಂದು ಗಿಳಿ ಇಪ್ಪತ್ತೈದು ಗಿಳಿಯಾಯಿತ್ತು.

ಬ್ರಹ್ಮನಾಗಿಳಿಗೆ ಹಂಜರವಾದ. ವಿಷ್ಣುವಾಗಿಳಿಗೆ ಕೊರೆಗೊಳಾದ. ರುದ್ರನಾಗಿಳಿಗೆ ತಾ ಕೋಲನಾದ. ಇಂತೀ ಮೂವರ ಮುಂದಣ ಕಂದನ ನುಂಗಿದ ದೃಷ್ಟನಾಮು ನಷ್ಟವಾಯಿತ್ತು ಕಾಣಾ ಗುಹೇಶ್ವರಾ.

ಟಿಪ್ಪಣಿ:— ಅಲ್ಲಮನ ಅನೇಕ ಮುಂದಿಗೆಗಳಲ್ಲಿ ಇದೊಂದು. ಇದು ಒಗಟಿನಂತೆ ಇರುವದು. ಗಿಳಿ – ಇಲ್ಲಿ ಚಿತ್‌ಶಕ್ತಿ ಎಂದು ಅರ್ಥ. ಒಂದು ಗಿಳಿ ಇಪ್ಪತ್ತೈದು ಗಿಳಿಯಾಯಿತ್ತು – ಒಂದೇ ಚಿತ್‌ಶಕ್ತಿಯು ಪುರುಷ ಪ್ರಕೃತ್ಯಾದಿ ೨೫ ತತ್ವಗಳಾಗಿ ಪರಿಣಮಿಸಿತು. ಬ್ರಹ್ಮನು ವಿಶ್ವವನ್ನು ಹುಟ್ಟಿಸುವನಾದುದರಿಂದ ಈ ಗಿಳಿಗೆ ಅವನು ಪಂಜರನಾದನು, ವಿಷ್ಣುವು ಸಲುಹುವನಾದುದರಿಂದ ಅದಕ್ಕೆ ಅವನು ಆಹಾರನಾದನು, ಮತ್ತು ರುದ್ರನು ಸಂಹರಿಸುವನಾದುದರಿಂದ ಅವನು ಕೋಲನಾದನು, ಪ್ರಪಂಚವು ಈ ಮೂವರ ಮುಂದಿನ ಕಂದವಿದ್ದಂತೆ. ಆದರೆ ಜ್ಞಾನಿಯು ಇದರ ರಹಸ್ಯವನ್ನು ತಿಳಿದು, ಇದೆಲ್ಲ ಚಿತ್ತದ ಆಟವೆಂಬುದನ್ನು ಅರಿವುದರಿಂದ ಅವನ ಮಟ್ಟಿಗೆ ನಾಮರೂಪಾದಿಗಳೆಲ್ಲ ನಷ್ಟವಾಗಿ ಒಂದೇ ಒಂದು ಚೈತನ್ಯವು ಅವನಿಗೆ ಪ್ರತೀತವಾಗುವುದೆಂದರ್ಥ.

೩೧. ಲೋಕಾದಿಲೋಕಂಗಳೇನೂ ಇಲ್ಲದಂದು ನೆನಹು ನಿಷ್ಪತ್ತಿಯಾಗಿತ್ತು ನೋಡಾ. ನೆನಹಿಲ್ಲದ ಘನವನ್ನು ನೆನೆದ ನೆನಹೇ ಸಮಯವಾಗಿ ಚಿತ್ತೆನಿಸಿಕೊಂಡಿತ್ತು. ಆ ಚಿತ್ತೇ ಸತ್ತು, ಚಿತ್ಸಾನಂದ ನಿತ್ಯಪರಿಪೂರ್ಣವೆಂದು ಐದಂಗವನಂಗೀಕರಿಸಿ ನಿಃಕಲ ಶಿವತತ್ವವೆನಿಸಿತ್ತು ನೋಡಾ. ಆ ನಿಃಕಲ ಶಿವತತ್ವ ತಾನೊಂದೆ ತನ್ನ ಶಕ್ತಿಯ ಚಲನೆ ಮಾತ್ರದಿಂದ ಒಂದೆರಡಾಯಿತ್ತು ನೋಡಾ····ಆ ಪರಶಿವನ ಚಿತ್ಶಕ್ತಿ ತಾನೆ ಎರಡು ತೆರನಾಗಿತ್ತು···· ಶಕ್ತಿಯೆ ಪ್ರವೃತ್ತಿಯೆನಿಸಿತ್ತು, ಭಕ್ತಿಯೆ ನಿವೃತ್ತಿ ಎನಿಸಿತ್ತು····ಶಕ್ತಿ ಆರು ತೆರನಾಯಿತ್ತು ···· ಚಿತ್‌ಶಕ್ತಿ ···· ಆದಿಶಕ್ತಿ ···· ಪರಾಶಕ್ತಿ ···· ಜ್ಞಾನಶಕ್ತಿ ···· ಇಚ್ಛಾಶಕ್ತಿ ···· ಕ್ರಿಯಾಶಕ್ತಿ ····ಇನ್ನು ಕ್ರಿಯಾಶಕ್ತಿಯಿಂದ ನಿವೃತ್ತಿಕಲೆಯ ಸಂಕಲ್ಪಮಾತ್ರದಿಂದ ಮಾಯಾಶಕ್ತಿ ಹುಟ್ಟಿತ್ತು. ಆ ಮಾಯಾಶಕ್ತಿಯಿಂದ ಸಮಸ್ತ ಜಗತ್ತಿನ ಉತ್ಪತ್ತಿ····ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

ಟಿಪ್ಪಣಿ:— ಈ ವಚನವು ಬಹಳ ದೊಡ್ಡದಿರುವದು. ಆದುದರಿಂದ ಸಂದರ್ಭಕ್ಕೆ ಅವಶ್ಯವಿದ್ದ ಭಾಗವನ್ನಷ್ಟೆ ಇಲ್ಲಿ ಅವತರಿಸಿದ್ದೇವೆ. ಸವಯವಾಗಿ – ಏಕವಿದ್ದುದು ತನ್ನಲ್ಲಿಯೆ ಚಿತ್ ಎಂಬುದನ್ನು ಕಲ್ಪಿಸಿಕೊಂಡದ್ದರಿಂದ ಸವಯ ಅಂದರೆ ಭಾಗವುಳ್ಳದ್ದೆನಿಸಿತು. ಮಾಯಾಶಕ್ತಿ – ಆವರಣಶಕ್ತಿ, ಜ್ಞಾನವನ್ನು ಅಂಶತಃ ಮುಚ್ಚುವ ಶಕ್ತಿ. ಇದೇ ಸೃಷ್ಟಿಗೆ ಕಾರಣವು.

೩೧ ಅ. ಏನೆಂದೆನಲಿಲ್ಲದ ಮಹಾಘನವು ತನ್ನ ಲೀಲೆಯಿಂ ತಾನೇ ಸ್ವಯಂಭು ಲಿಂಗಸ್ಥಲವಾಯಿತ್ತು. ಆ ಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕ, ಆ ಶಿವಶಕ್ತ್ಯಾತ್ಮಕದಿಂದಾದುದು ಆತ್ಮ. ಆತ್ಮನಿಂದಾದುದು ಆಕಾಶ. ಆ ಆಕಾಶದಿಂದಾಯಿತ್ತು ವಾಯು. ವಾಯುವಿನಿಂದಾಯಿತ್ತು ಅಗ್ನಿ. ಅಗ್ನಿಯಿಂದಾಯಿತ್ತು ಅಪ್ಪು. ಅಪ್ಪುವಿನಿಂದಾಯಿತ್ತು ಪೃಥ್ವಿ. ಪೃಥ್ವಿಯಿಂದಾಯಿತ್ತು ಜಗ ಜೀವವೆಲ್ಲವೂ. ನಿಮ್ಮ ನೆನಹು ಮಾತ್ರದಿಂದಾದವು ನಿಮ್ಮಲಿಗೆಯ ಚನ್ನರಾಮಾ.

ಟಿಪ್ಪಣಿ:— ಆತ್ಮ – ಇಲ್ಲಿ ಸಾದಾಖ್ಯತತ್ವ. ಇಲ್ಲಿ ಹೇಳಿದ ಕ್ರಮವು ಸ್ವಲ್ಪ ಬೇರೆ ಕಂಡರೂ ತತ್ವತಃ ಏನೂ ಭೇದವಿಲ್ಲ. ಪಂಚಭೂತಗಳ ಉತ್ಪತ್ತಿಯ ವಿವರವು ಇಲ್ಲಿ ಕೊಡಲ್ಪಟ್ಟಿದೆ.

೩೧ ಬ. ಜಲದಲ್ಲಿ ನೊರೆ, ತೆರೆ, ಬುದ್ಬುದವಿದ್ದಂತೆ, ಕನಕದಲ್ಲಿ ಆಲಂಕಾರವಿದ್ದಂತೆ, ಬೀಜದಲ್ಲಿ ಎಲೆಶಾಖೆ ಬೀಜವಿದ್ದಂತೆ, ಒಂದೇ ವಸ್ತುವಿನಲ್ಲಿ ಗುಣತ್ರಯವಾದವು. ಗುಣತ್ರಯದಿಂದ ಮಲತ್ರಯಗಳಾದವು. ಮಲತ್ರಯಗಳಿಂದೆ ಲೋಕರಚನೆ ಹೆಚ್ಚಿತ್ತು. ಲೋಕರಚನೆ ಹೆಚ್ಚಿದಲ್ಲಿ ಪಾಪಪುಣ್ಯಗಳಾದವು. ಪಾಪಪುಣ್ಯಗಳಿಂದೆ ಸ್ವರ್ಗನರಕವೆಂದಾಯಿತ್ತು. ಸ್ವರ್ಗನರಕದಿಂದ ಭೇದವಾಗಿ ಕೆಟ್ಟಕೇಡು ನೋದಿ ತನ್ನ ಮಾಯೆ ಸೆಳೆದನು. ಸೆಳೆವಲ್ಲಿ ಸರ್ವವು ಲಯವಾಗಿ ನೀನೊಬ್ಬನೆ ಉಳಿದೆ. ಉಳಿದೆ ಎಂಬುದು ಶಾಸ್ತ್ರಪ್ರಸಿದ್ಧ. ಸಮುದ್ರದ ನೀರು ಮೇಘವಾಗಿ ಮೇಘದ ನೀರು ಹಳ್ಳಕೊಳ್ಳವಾಗಿ ಮತ್ತೆ ಸಮುದ್ರವಾದಂತೆ, ನೀನಾದರೂ ಅದರಂತೆ ಒಂದೇ ಸ್ಥಲದಲ್ಲಿ ನಿಂತು ನೋಡಲೊಲ್ಲದೆ ಅನೇಕ ಸ್ಥಾನಗಳ ಧರಿಸಿ ಹೋಗುವದು ಉಚಿತವಲ್ಲ, ಎಲೆ ಜೀವನೆ, ಎಂದು ಬೋಧಿಸಿದ ಸದ್ಗುರು ಚನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯ, ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಟಿಪ್ಪಣಿ:— ಗುಣತ್ರಯ – ಸತ್ವ, ರಜ, ತಮ ಎಂಬ ಮೂರು ಗುಣಗಳು. ಮಲತ್ರಯ – ಆಣವ, ಮಾಯಾ, ಮತ್ತು ಕಾರ್ಮಿಕ ಎಂಬ ಮೂರು ದೋಷಗಳು. ಇಲ್ಲಿಯೂ ಒಂದು ದೇಕೆಯ ಕ್ರಮವು ಹೇಳಲ್ಪಟ್ಟಿದೆ. ಆದರೆ ಇದೀ ವಚನಶಾಸ್ತ್ರಕ್ಕೆ ಆಧಾರವಾದ ಕ್ರಮವೆಂದರೆ ೩೬ ತತ್ವಗಳದು. ಅದು ಸಮ್ಯಗ್ಜ್ಞಾನರಹಸ್ಯದ ಹತ್ತನೆಯ ಪ್ರಕರಣದಲ್ಲಿ ಮತ್ತು ವಚನಾಮೃತದ ೧೮ನೆಯ ಪ್ರಕರಣದಲ್ಲಿ ಹೇಳಲ್ಪಟ್ಟಿದೆ. ಅವುಗಳನ್ನು ನೋಡಬೇಕು.

ವಿವರಣೆ

ವಚನಕಾರರು ಬಹುಶಃ ಯಾವಾಗಲೂ ಆದಿ ಸತ್ಯತತ್ವದ ಕಡೆಗೆ ಭಕ್ತಿಭಾವದಿಂದಲೆ ನೋಡುತ್ತಿರುವುದರಿಂದ ಅವರು ಅದನ್ನು ಪುರುಷ

ವಾಚಕವಾಗಿ ಸಂಬೋಧಿಸಿರುವರು. ಅದಕ್ಕಾಗಿಯೆ ಲಿಂಗದಿಚ್ಛೆಯಿಂದ ಅಥವಾ ಪರಶಿವನ ಲೀಲಾವಿನೋದದಿಂದ ಈ ಸೃಷ್ಟಿಯು ನಿರ್ಮಿಸಲ್ಪಟ್ಟಿತು, ಎಂದು ಅವರು ವರ್ಣಿಸಿರುವರು. ನಿತ್ಯನಿರವಯವ ಪರಶಿವ ಅಥವಾ ಪರಮಾತ್ಮ, ಬಳಿಕ ಅವನ ನೆನಹು ಅಥವಾ ಸಂಕಲ್ಪ, ಬಳಿಕ ಚಿತ್‌ಶಕ್ತಿ, ಬಳಿಕ ಸದಾಶಿವ, ಬಳಿಕ ಪುರುಷಪ್ರಕೃತ್ಯಾದಿ ೫೫ ಸಾಂಖ್ಯತತ್ವಗಳು, ಹೀಗೆ ವಿಶ್ವನಿರ್ಮಾಣದ ಐದು ಮೆಟ್ಟುಗಳು ಮೊದಲು ಹೇಳಲ್ಪಟ್ಟಿವೆ. ಮುಂದಿನ ಸೃಷ್ಟಿಕ್ರಮವೆಲ್ಲ ವೇದಾಂತದಲ್ಲಿ ಹೇಳಿದಂತೆಯೆ ಇರುವದು. ಎಂಬತ್ತು ನಾಲ್ಕು ಲಕ್ಷ ಯೋನಿಗಳು, ಪುನರ್ಜನ್ಮಾದಿಗಳು ಇವು ಇರುವವೆಂಬ ಸಂಗತಿಯು ವಚನಕಾರರಿಗೆ ಸಮ್ಮತವಿರುವದು.

---

೪. ಪರಮಾತ್ಮನು ಎಲ್ಲಿರುವನು?

ವಿವರಣೆ

ಶುದ್ಧ ಚಿದ್ರೂಪ ಸತ್ಯವು ಸ್ವಲೀಲೆಯಿಂದ ಸೃಷ್ಟಿಯನ್ನು ಸೃಜಿಸಿ ಅದರಲ್ಲಿ 'ನೆಲದ ಮರೆಯ ನಿಧಾನದಂತೆ' ಅವ್ಯಕ್ತರೀತಿಯಿಂದ ಇರುವದು. ಸೃಷ್ಟಿ ಅಥವಾ ಸೃಷ್ಟಿಯಲ್ಲಿಯ ಯಾವುದೇ ವಸ್ತುವು ಆ ಸತ್ಯದಿಂದ ನಿರ್ಮಿತವಿದ್ದರೂ ಅದರಲ್ಲಿ ಆ ಸತ್ಯವು ಸೂಕ್ಷ್ಮವಾಗಿ ತುಂಬಿಕೊಂಡಿದ್ದರೂ ಆ ಸೃಷ್ಟಿಯೇ ಅಥವಾ ಆ ವಸ್ತುವೇ ಪೂರ್ಣಸತ್ಯವೆನಿಸದು. ಅಂದಬಳಿಕ ಆ ಸತ್ಯವನ್ನು ಎಲ್ಲಿ ಹುಡುಕಬೇಕು? ಇದಕ್ಕೆ ವಚನಕಾರರ ಉತ್ತರವೇನಂದರೆ, ಅದು ಎಲ್ಲೆಲ್ಲಿಯೂ ವ್ಯಾಪ್ತವಿದ್ದರೂ ಸೂರ್ಯನು ತಿಳಿಗನ್ನಡಿಯಲ್ಲಿ ಪೂರ್ಣವಾಗಿ ಪ್ರತಿಬಿಂಬಿತನಾಗುವಂತೆ ಆ ಸತ್ಯದ ಹೊಳಪು ನಿರ್ಮಲಾತ್ಮರಲ್ಲಿ ನಿಚ್ಚಳವಾಗಿ ಮಿಂಜುವದು. ನಾವು ನಮ್ಮ ಅಂತಃಕರಣಗಳನ್ನು ನಿರ್ಮಲಗೊಳಿಸಿದರೆ ಅಲ್ಲಿಯೂ ಸತ್ಯಬಿಂಬವು ಪ್ರತೀತವಾಗುವದು.

ದೇವರು ಅಲ್ಲಿರುವನು, ಇಲ್ಲಿರುವನು ಎಂದು ಸಾಮಾನ್ಯ ಜನರು ನಾನಾ ದೇವತೆಗಳನ್ನೂ ಮೂರ್ತಿಗಳನ್ನೂ ತರುಮರಗಳನ್ನೂ ಪೂಜಿಸುವರು. ದೇವರು ಆ ಎಲ್ಲ ದೇವತೆಗಳಾಜೆಗೆ, ಆ ಎಲ್ಲ ಪ್ರತೀಕಗಳಾಜೆಗೆ ಇರುವನು. ಆ ಅನಂತಗುಣ, ಅನಂತಶಕ್ತಿ ಪರಮಾತ್ಮನ ಯಾವುದೊಂದು ಗುಣಾಂಶವನ್ನು ಅವಲಂಬಿಸಿ ಶ್ರದ್ಧಾಶೀಲ ಮಾನವರು ಅನೇಕ ದೇವಾಧಿದೇವತೆಗಳನ್ನು ನಿರ್ಮಿಸಿರುವರು. ಆದರೆ ದೇವರು, ಶುದ್ಧ ಚಿನ್ಮಯನಾಗಿ

ವಿಷ್ಣು ಮಹೇಶ ಎಂಬ ತ್ರಿರೂಪಗಳನ್ನು ಧರಿಸಿದವು ಎಂದು ಅರ್ಥವು. ಸತ್ಯವನ್ನು ತಿಳಿದುಕೊಳ್ಳಬೇಕಾದರೆ ಬ್ರಹ್ಮ ವಿಷ್ಣು ಮಹೇಶರಾಚೆಗೆ ಹೋಗಬೇಕೆಂದರ್ಥ.

೬೯. ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯ, ಆತ್ಮ ಎಂಬ ಅಷ್ಟತನುಗಳು ಶಿವನ ಅಧಿಷ್ಠಾನನಾದನೆಂದಡೆ ಅಷ್ಟತನುಗಳು ಶಿವನಾಗಲರಿಯವು, ಮತ್ತೆ ಶಿವನ ಬಿಟ್ಟು ಬೇರೆ ತೋರಲರಿಯವು. ಅಷ್ಟತನುಗಳಿಲ್ಲ ಸೋಪಾಧಿಕವಲ್ಲದೆ ನಿಜತನುವಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಂಗೆ ಅಷ್ಟತನು ಮೂರ್ತಿ ಎಂಬವು ಉಪಚಾರವು.

ಟಿಪ್ಪಣಿ:— ಸೋಪಾಧಿಕ – ಉಪಾಧಿಯುಕ್ತ, ಉಪಾಧಿ ಎಂದರೆ ಮೂಲದಲ್ಲಿಲ್ಲದೆ ನಡುವೆ ಸಂಬಂಧಿಸಿದ. ಆತ್ಮನಿಗೆ ನಾಮರೂಪಗಳು ಉಪಾಧಿಗಳೆನಿಸುವವು. ಉಪಚಾರ – ಮೇಲಿನ ಆಭರಣಗಳಿದ್ದಂತೆ ಎಂದರ್ಥ.

೬೯. ಆರನು ತಿಂದು ಕರಗುವ ದೈವ, ಉರಿಯ ಕಂಡರೆ ಮುರುಟುವ ದೈವ, ಎಂತು ಸರಿ ಎಂಬೆನಯ್ಯಾ? ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ? ಅಂಜಿಕೆ ಬಂದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ? ಸಹಜಭಾವ, ನಿಜೈಕ್ಯ, ಸ್ಥಿರರೂಪ, ನಿರ್ವಿಕಾರ, ನಿರಂಜನ, ಕೂಡಲಸಂಗಮದೇವನೊರ್ವನೇ ದೇವ ಕಾಣಿರೋ.

೭೦. ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ ಬಾವಿ ಹೂಗಿಡ ಮರಂಗಳಲ್ಲಿ, ಗ್ರಾಮದ ಮಧ್ಯದಲ್ಲಿ, ಜೌಪಥಪಟ್ಟಣ ಪ್ರದೇಶದಲ್ಲಿ, ಹಿರಿಯಾಲದ ಮರದಲ್ಲಿ ಮನೆಮಾಡಿ ಕರೆವೆಮ್ಮೆ, ಹಸುಕೂಸು, ಬಸುರಿ, ಬಾಣತಿ, ಕುಮಾರಿತಿ, ಕೊಡಗೂಸೆಂಬ, ಹಿಡಿದುಂಬ, ತಿರಿದುಂಬ, ಬೀರಯ್ಯ, ಖೇಚರ, ಗಾವಿಲ, ಅಂತರಬೆಂತರ, ಕಾಳಯ್ಯ, ಮಾಳಯ್ಯ, ಕೇತಯ್ಯಗಳೆಂಬ ನೂರು ಮಡಿಕೆನೆ ನಮ್ಮ ಕೂಡಲಸಂಗಮ ದೇವರಿಗೆ ಶರಣೆಂಬುದೊಂದೆ ದೊಣ್ಣೆ ಸಾಲದೇ?

೭೧. ಅರಳಿಯ ಮರ, ವಿಷ್ಣುಕಾಂತಿ, ಬನ್ನಿ, ಮುತ್ತಕ, ತುಳಸಿ, 'ಹರಿ' 'ಹರಿ' ಎಂದು ಹೊಡಹೊಮ್ಮುವಿರಿ. ಎಲ್ಲಿ ಛೋ, ನಿಮ್ಮ ಹೊಡೆವಡುವ ದೈವಂಗಳೆಲ್ಲ ಗಿಡುಮರಗಳಾಗಿ ಹೋದವಲ್ಲಾ! ನಿಮ್ಮ ನಡೆಯೆಲ್ಲ ಅನಾಚಾರ, ನಿಮ್ಮ ನುಡಿಯೆಲ್ಲ ಶಿವದ್ರೋಹ. ಇವಂದಿರ ಗಡಣ ಬೇಡ ಎಂದ ನಮ್ಮ ಅಂಬಿಗರಚೌಡಯ್ಯ.

ಟಿಪ್ಪಣಿ:— ಬೇರೆ ಬೇರೆ ಗಿಡಮರಗಳು ದೇವರೆಂದು ಜನರು ಮಾಡುವ ಪೂಜೆಯನ್ನು ವಚನಕಾರರು ಇಲ್ಲಿ ಜರಿದಿರುವರು.

---

೫. ಮುಕ್ತಿಯೆ ಮಾನವಧ್ಯೇಯವು

ವಿವರಣೆ

ಸತ್ಯವು ಸ್ವಭಾವದಿಂದ ಸೃಷ್ಟಿಯಾಯಿತು, ಅಥವಾ ಪರಮಾತ್ಮನು ಸ್ವಸಂಕಲ್ಪದಿಂದ ಸೃಷ್ಟಿಯನ್ನು ರಚಿಸಿದನು. ಈ ಸೃಷ್ಟಿಯಲ್ಲಿ ಸೇಂದ್ರಿಯ ಮತ್ತು ನಿರಿಂದ್ರಿಯ ಎಂದು ಎರಡು ಭಾಗಗಳಿರುವವು. ಅಗ್ನಿ, ಆಕಾಶ, ವಾಯು, ಅಪ್ಪು, ಕಲ್ಲು, ಮಣ್ಣು, ಲೋಹ ಮುಂತಾದ ವಸ್ತುಗಳು ನಿರಿಂದ್ರಿಯವೆನಿಸುವವು. ಯಾಕಂದರೆ ಅವುಗಳಲ್ಲಿ ಇಂದ್ರಿಯಗಳಿಲ್ಲ, ಮತ್ತು ತದ್ವಾರಾ ಆಗುವ ಸಂವೇದನೆ ಇಲ್ಲ. ಗಿಡಗಂಟಿ, ಕೃಮಿಕೀಟ, ಪಶುಪಕ್ಷಿ, ಮಂಗಮನುಷ್ಯ ಇವೆಲ್ಲ ಸೇಂದ್ರಿಯವೆನಿಸುವವು. ಯಾಕಂದರೆ ಇವುಗಳಿಗೆ ಒಂದು ಅಥವಾ ಹೆಚ್ಚು ಇಂದ್ರಿಯಗಳಿದ್ದು, ತನ್ಮುಖಾಂತರ ಅವುಗಳಿಗೆ ಸಂವೇದವು ಗೋಚರವಾಗುವದು. ನಿರಿಂದ್ರಿಯ ಪದಾರ್ಥಗಳಲ್ಲಿ ಜಲನವಲನವಿದ್ದರೂ ಜೈತನ್ಯ ಅಥವಾ ಜೈತನ್ಯಯುಕ್ತ ಸಂವೇದ, ಇವು ಇಲ್ಲ. ಸಂವೇದವಿಲ್ಲದ್ದರಿಂದ ಅಹಂಕಾರವಿಲ್ಲ; ಅಹಂಕಾರವಿಲ್ಲದ್ದರಿಂದ ಸ್ಪಷ್ಟವ್ಯಕ್ತಿತ್ವವಿಲ್ಲ.

ಸೇಂದ್ರಿಯ ಸೃಷ್ಟಿಯಲ್ಲಿ ಮನುಷ್ಯಪ್ರಾಣಿಯೆ ಎಲ್ಲಕ್ಕೂ ಹೆಚ್ಚಿನವನು. ಇವನಲ್ಲಿ ಜೈತನ್ಯವೆಂಬುದು ಪರಮಾವಧಿಗೆ ಮುಟ್ಟಿದೆ. ಆದುದರಿಂದ ಇವನಲ್ಲಿ ಅಪರಿಮಿತ ಸಂವೇದಶಕ್ತಿಯಿದೆ. ಇವನ ಜ್ಞಾನಸಾಧನಗಳು ಎಲ್ಲ ಜೀವಗಳಿಗಿಂತಲೂ ಹೆಚ್ಚು ತೀಕ್ಷ್ಣವಿರುವವು. ಆ ಮೂಲಕ ಇವನಲ್ಲಿ ನಾನು ತಾನು, ಒಳಿತು ಕೆಡಕು, ಸುಖದುಃಖ, ಇವುಗಳ ಭಾವವು ಬೆಳೆದು ಅವುಗಳಲ್ಲಿಯ ವಿವೇಕವೂ ಹೆಚ್ಚು ಪ್ರಗಲ್ಭವಾಗಿದೆ. ಇವನು ಮಿಕ್ಕ ಪ್ರಾಣಿಗಳಂತೆ ಹಿಂದಿನ ಮುಂದಿನ ವಿಚಾರಮಾಡದೆ ಆಗಿಂದಾಗ್ಗೆ, ಅಷ್ಟಕ್ಕಷ್ಟೆ ಕಾರ್ಯಮಾಡುವವನಲ್ಲ. ಇವನು ಭೂತವರ್ತಮಾನಭವಿಷ್ಯತ್ಕಾಲಗಳ ಲೆಕ್ಕಹಾಕಿ ತನ್ನ ಪರಮ ಕಲ್ಯಾಣಮಾಡಿಕೊಳ್ಳುವ ಲವಲವಿಕೆಯಿಂದ ವರ್ತಿಸುವನು.

ಈ ಬಗೆಯ ಮನುಷ್ಯಜಾತಿಯಲ್ಲಿ ಹೆಚ್ಚು ಶ್ರೇಷ್ಠರೂ ಜ್ಞಾನಿಗಳೂ ಧೀರರೂ ಇದ್ದವರು ಕ್ಷಣಭಂಗುರ ಇಂದ್ರಿಯ ಸುಖಗಳನ್ನರಸದೆ, ನಿತ್ಯ

ನಿರಾಲಂಬ ಆನಂದವನ್ನರಸುವರು. ಈ ದೇಹವಿರುವ ವರೆಗೆ ಚಂಚಲ ಸುಖ ದುಃಖಗಳು ಬಿಡವು. ಆದುದರಿಂದ ಈ ದೇಹವೆ ಮತ್ತೆ ಬರದಂತೆ, ಈ ದೇಹಕ್ಕೆ ಕಾರಣವಾದ ಕರ್ಮಜಕ್ರವು ನಷ್ಟವಾಗುವಂತೆ ಯತ್ನ ಮಾಡಬೇಕೆಂದು ಶ್ರೇಷ್ಠರ ಮತವು. ಇನ್ನು ಕಾಮದಿಂದ ಕರ್ಮ, ಕರ್ಮದಿಂದ ಜನ್ಮ, ಜನ್ಮದಿಂದ ಜರಾಮರಣಾದಿ ದುಃಖಪರಂಪರೆ ಎಂಬ ಭಾವನೆಯು ದೃಢ ಮೂಲವಿರುವದರಿಂದ ಆ ಕರ್ಮದ ಬೇರಾದ ಕಾಮವನ್ನು ಕಡಿದುಜೆಲ್ಲಿ ಮುಕ್ತರಾಗಬೇಕೆಂದು ಜ್ಞಾನಿಗಳ ಹವಣು.

ಮುಕ್ತಿ ಅಂದರೆ ನಿತ್ಯಾನಂದ ಸ್ಥಿತಿಯು, ನಿತ್ಯಾನಂದದ ಅನುಭವವು, ನಿತ್ಯ ಆನಂದಿತ, ಶಾಂತ, ವೃತ್ತಿಯು. ಅರ್ಥಾತ್ ಮುಕ್ತಿಯೆಂದರೊಂದು ಸ್ಥಾನವಲ್ಲ, ಅದೊಂದು ವಿಶಿಷ್ಟವಾದ ಮತ್ತು ಜ್ಞಾನಿಗಳಿಗೆ ಇಷ್ಟವಾದ ಮನೋವೃತ್ತಿಯು ಅಥವಾ ಚಿತ್‌ಸ್ಥಿತಿಯು. ಅದು ಬಾಹ್ಯ ಯಾವದೇ ಅವಸ್ಥೆ, ಸಾಧನ, ಅಥವಾ ಪರಿಸ್ಥಿತಿ ಇವುಗಳನ್ನು ಅವಲಂಬಿಸಿರುವ ಸ್ಥಿತಿಯಲ್ಲ. ನಿರಾಲಂಬವಾಗಿ ಸತತ ತನ್ನಲ್ಲಿಯೆ ನಿರ್ದೋಷವಾದ ಅಮೃತ ಸ್ರೋತದಂತೆ ಹರಿಯುವ ಆನಂದಪ್ರವಾಹವೆ ಮುಕ್ತಿಸುಖವು. ವಿಷಯ ಸುಖಗಳೊಡನೆ ಆ ಸುಖವನ್ನು ಹೋಲಿಸಿ ನೋಡಲು ಅದು ನಿತ್ಯ, ನಿರ್ದೋಷ, ನಿರಾಲಂಬ, ಸತ್ಯ, ಸ್ವತಂತ್ರ, ಮತ್ತು ಅನುಪಮವಿರುವದು. ಈ ಮುಕ್ತಿಯಲ್ಲಿ ಎರಡು ಬಗೆಗಳು – ಸದೇಹಮುಕ್ತಿ ಅಥವಾ ಜೀವನ್ಮುಕ್ತಿ, ಮತ್ತು ವಿದೇಹಮುಕ್ತಿ ಅಥವಾ ಜನನಮರಣಮುಕ್ತಿ. ಈ ದೇಹವಿರುವಾಗಲೇ ಮೇಲೆ ಹೇಳಿದಂತಹ ಆನಂದವನ್ನನುಭವಿಸುವುದಕ್ಕೆ ಸದೇಹ ಮುಕ್ತಿ ಅಥವಾ ಜೀವನ್ಮುಕ್ತಿ ಎನ್ನಬಹುದು. ದೇಹಪಾತದ ನಂತರ ಪುನಃ ಜನ್ಮತಾಳದೆ ಈ ಬಗೆಯ ಆನಂದದಲ್ಲಿ ನಿಮಗ್ನವಾಗಿರುವುದೆ ವಿದೇಹಮುಕ್ತಿ ಅಥವಾ ಜನನಮರಣಮುಕ್ತಿ ಎನ್ನಬಹುದು.

ಜೀವನ್ಮುಕ್ತಿಯೆ ಮುಖ್ಯವು. ಯಾಕಂದರೆ ಇದನ್ನು ಪಡೆಯದಿದ್ದವನು ವಿದೇಹಮುಕ್ತಿಯನ್ನು ಪಡೆಯುವದು ಅಸಾಧ್ಯವು. ಜೀವನ್ಮುಕ್ತನಾದವನು ಮರಣಪಶ್ಚಾತ್ ಸಹಜವೆ ವಿದೇಹಮುಕ್ತಿಯನ್ನು ಪಡೆಯುವನು. ಆದುದರಿಂದ ಜೀವನ್ಮುಕ್ತಿಗಾಗಿಯೆ ಪ್ರಯತ್ನವನ್ನು ಮಾಡುವದು ಅವಶ್ಯವು.

ಸದೇಹವಿರುವಾಗ ಆಗುವ ಆನಂದವು ಎರಡು ಬಗೆಯದಿರಬಹುದು. ಅದು ಹೇಗಂದರೆ, ಕರ್ಮೇಂದ್ರಿಯ ಜ್ಞಾನೇಂದ್ರಿಯಗಳನ್ನು ನಿಶ್ಚಯ

ಗೊಳಿಸಿ, ಚಿತ್ತವನ್ನು ಏಕಾಗ್ರಮಾಡಿ, ಧ್ಯಾನ ಅಥವಾ ಭಾವಸಾಮರ್ಥ್ಯದಿಂದ ಸಮಾಧಿಪಡೆದು, ಮನುಷ್ಯನು ನಿರತಿಶಯ ಆನಂದವನ್ನು ಅನುಭವಿಸಬಹುದು. ಆ ಮಟ್ಟಿಗೆ ಅದು ಮುಕ್ತಸ್ಥಿತಿಯು. ಇದು ಒಂದು ಬಗೆಯು. ಇನ್ನೊಂದು ಬಗೆಯೆಂದರೆ, ಎಲ್ಲವೂ ಸತ್ಯಮಯವು, ಪರಮಾತ್ಮಮಯವು, ತಾನು ಕರ್ತನಲ್ಲ ಆದರೆ ಕೇವಲ ನಿಮಿತ್ತಮಾತ್ರನು, ಎಂಬ ಭಾವದಿಂದ ಕೇವಲ ನಿಷ್ಕಾಮನಾಗಿ ಕರ್ಮಸಮಾಧಿಯಲ್ಲಿ ನಿತ್ಯ ಆನಂದವನ್ನು ಅನುಭವಿಸುತ್ತಿರುವದು. ಈ ಸ್ಥಿತಿಯಲ್ಲಿ ಕರಣಗಳು ಕರ್ಮಗತವಿದ್ದರೂ ಚಿತ್ತವು ಆತ್ಮಾನಂದರತವಿರುವದು. ಇದೇ ಸಮರಸ ಆನಂದವು. ವಿದೇಹ ಆನಂದ ಸ್ಥಿತಿಯೂ ಎರಡು ತರಹದ್ದಿರಬಹುದು. ಮರಣಪಶ್ಚಾತ್ ಪುನಃ ಜನ್ಮ ತಾಳದೆ ಇದ್ದರೂ ಚಿದಂಶದ ವ್ಯಕ್ತಿತ್ವವನ್ನು ಕಳಕೊಳ್ಳದೆ ಸದೈವ ಆನಂದದಲ್ಲಿರುವದು ಒಂದು ತರಹ. ಇದು ದ್ವೈತಭಾವದ ವಿದೇಹಮುಕ್ತಿಯು. ಅಥವಾ ಮರಣದ ನಂತರ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಅಳಿಸಿಬಿಟ್ಟು ಪರಮಾತ್ಮನಲ್ಲಿ ಒಂದಾಗಿ ಪರಮಾತ್ಮನ ಆನಂದದಲ್ಲಿಯೆ ಲೀನವಾಗಿ ಹೋಗಬಹುದು. ಇದು ಅದ್ವೈತಭಾವದ ವಿದೇಹಮುಕ್ತಿಯು.

ಮೇಲೆ ಹೇಳಿದ ಆನಂದಸ್ಥಿತಿಯು ಅಳವಡಬೇಕಾದರೆ ಮನುಷ್ಯನ ಸಂಕುಚಿತವೃತ್ತಿಯ ನಾಶವಾಗಿ ವಿಶ್ವಾತ್ಮನ ಅನುಭವಜ್ಞಾನವಾಗುವದು ಅವಶ್ಯವು. ಆದುದರಿಂದ ಆ ಸ್ಥಿತಿಯ ವರ್ಣನೆಯು ಐಕ್ಯದ ಭಾಷೆಯಲ್ಲಿಯೆ ವಾಡಿಕೆಯಾಗಿ ಮಾಡಲ್ಪಟ್ಟಿರುವದು. ಮುಕ್ತಿಗಳಲ್ಲಿ ಸಾಯುಜ್ಯಮುಕ್ತಿಯೆ, ಪರಮಾತ್ಮನೊಡನೆ ಒಂದಾಗಿ ಹೋಗುವುದೇ, ಎಲ್ಲಕ್ಕೂ ಶ್ರೇಷ್ಠವು, ಎಂದು ಹೇಳಲ್ಪಟ್ಟಿದೆ. ಅನಂತ ಚಿತ್ಸಾಗರದಿಂದೊಗೆದ ಚಿದಂಶವು ಮತ್ತೆ ಆ ಸಾಗರದಲ್ಲಿ ಕೂಡುವುದೆ ಅದರ ಮುಕ್ತಾಯವು, ಎಂದು ವಜನಕಾರರ ಅಭಿಪ್ರಾಯವು.

ವಚನಗಳು

೪೨, ಆಕಾಶದಲ್ಲಿ ತೋರುವ ಇಂದ್ರಚಾಪವಡಗುವುದಕ್ಕೆ ಆಕಾಶವೆ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯವುಂಟೆ ಅಯ್ಯಾ? ಗಾಳಿಯಿಂದ ತೋರಿದ ಸುಳಿಗಾಳಿಯಡಗುವುದಕ್ಕೆ ಗಾಳಿಯೇ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯವುಂಟೇ ಅಯ್ಯಾ? ಅಗ್ನಿಯಲ್ಲಿ ತೋರಿದ ಕಿಡಿಗಳಡಗುವುದಕ್ಕೆ ಅಗ್ನಿಯೆ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯವುಂಟೇ ಅಯ್ಯಾ? ಆದಿ–ಅನಾದಿಯಿಂದತ್ತತ್ತವಾದ ಪರವಸ್ತುವಿನಲ್ಲಿ ರೂಪಿಸಿ ತೋರಿದ ನಿಜೈಕ್ಯವಡಗುವುದಕ್ಕೆ ಆ ಪರವಸ್ತುವೆ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯವುಂಟೇ ಅಖಂಡೇಶ್ವರಾ?

ಟಪ್ಪಣಿ:— ರೂಪಿಸಿತೋರಿದ ನಿಜೈಕ್ಯ–ಜೀವಾತ್ಮನು. ವಸ್ತುತಃ ಅವನು ನಿಜೈಕ್ಯನು, ಚಿದ್ರೂಪನು; ಆದರೆ ಜೀವರೂಪದಿಂದ ವಿಶ್ವದಲ್ಲಿ ರೂಪವನ್ನು ತಾಳಿರುವನು. ಅವನು ಪುನಃ ಅಡಗುವುದಕ್ಕೆ ಪರಮಾತ್ಮನೆ ಆಶ್ರಯಸ್ಥಾನವು, ಎಂದರ್ಥ.

೪೩. ಚಿನ್ನದಿಂದಲಾದ ಹಲವು ಭಂಗಾರವಳಿದು ಕರಗಿದರೆ ಚಿನ್ನವೇ ಆದಂತೆ, ಉದಕದಿಂದಾದ ವಾರಿಕಲ್ಲು ಕರಗಿ ಮುನ್ನಿನ ಉದಕವೆ ಆದಂತೆ, ಚಿನ್ಮಯವಸ್ತುವಿನಿಂದ ಉದಯವಾದ ಚಿತ್‌ಸ್ವರೂಪನಾದ ಶರಣನು ಆ ಚಿನ್ಮಯ ಪರವಸ್ತುವನೇ ಬೆರಸಿ, ಪರಮಶಿವಯೋಗಿಯಾದನಯ್ಯ, ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

೪೪. ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ, ಬಯಲಾಯಿತಯ್ಯ! ಬಯಲ ಜೀವನೆ, ಬಯಲ ಭಾವನೆ, ಬಯಲುಬಯಲಾದೆ ಗುಹೇಶ್ವರಾ.

ಟಪ್ಪಣಿ:— ಎಲ್ಲವೂ ಬಯಲೇ ಇರುವದು ಎಂಬ ಅನುಭವವಾಯಿತೆಂದರೆ ಜೀವನು ತದಾಕಾರನಾಗುವನು, ಎಂದು ಅರ್ಥವು.

೪೫. ಭಾವಕ್ಕಿಂಬಿಲ್ಲ, ಶಬ್ದ ಮೀಸಲು ನೋಡಾ! ನುಡಿಗೆ ಎಡೆಯಿಲ್ಲ, ಎಡೆಗೆ ಕಡೆಯಿಲ್ಲ, ಗುಹೇಶ್ವರನೆಂಬ ಶಬ್ದವೇಧಿಸಲೊಡನೆ.

ಟಪ್ಪಣಿ:— ಎಡೆಗೆ ಕಡೆಯಿಲ್ಲ–ಅನಂತ ಅಮರ್ಯಾದಿತ, ತನ್ಮಯನಾದವನು ಭಾವಭಾಷೆಗಳಾಡೆಗೆ ಹೋಗುವನು ಎಂಬುದೆ ಭಾವಾರ್ಥವು.

೪೬. ಕರ್ಪುರದ ಗಿರಿಯ ಉರಿಯ ಹಿಡಿದಡೆ ಇದ್ದಲಿಯುಂಟೆ? ಮಂಜಿನ ಶಿವಾಲಯಕ್ಕೆ ಬಿಸಿಲಿನ ಕಳಸವುಂಟೆ? ಗುಹೇಶ್ವರನೆಂಬ ಲಿಂಗವ ನರಿದು, ಮರಳಿ ನೆನೆಯಲುಂಟೆ?

ಟಪ್ಪಣಿ:— ಆ ಸ್ಥಿತಿಯಲ್ಲಿ ನೆನೆಯುವದು ಸಹ ಶಕ್ಯವಿಲ್ಲ. ಒಂದೇ ಒಂದಾದ ಬಳಿಕ ಯಾರು ಯಾರನ್ನು ನೆನೆಯಬೇಕು?

೪೭. ದೆಸೆದಿಕ್ಕು ಧರೆಗಗನವೆಂಬುದ ನಾನರಿಯೆನಯ್ಯಾ. 'ಲಿಂಗಮಧ್ಯೇ ಜಗತ್ಸರ್ವಂ' ಎಂಬುದ ನಾನರಿಯೆನಯ್ಯ. ಲಿಂಗಸೊಂಕಿದ ಸುಖದೊಳಗೆ ಶಿವ ಶಿವ ಎನುತಿರ್ದೆನಯ್ಯಾ. ಅಂಬುಧಿಯೊಳಗೆ ಜಿದ್ದ ವಾರಿಕಲ್ಲಿನಂತೆ ಭಿನ್ನಭಾವ ವಿಲ್ಲದೆ ಶಿವಶಿವ ಎನುತಿರ್ದೆನು ಕಾಣಾ ಕೂಡಲಸಂಗಮದೇವಾ.

ಟಪ್ಪಣಿ:— ಲಿಂಗಮಧ್ಯೇ ಜಗತ್ಸರ್ವಂ–ಜಗತ್ತೆಲ್ಲ ಲಿಂಗದಲ್ಲಿಯೆ ಇರುವದು. ಲಿಂಗವೆಂದರೆ ಪರಮಾತ್ಮ. ಇದಕ್ಕೆ ಐಕ್ಯಭಕ್ತಿ ಎನ್ನಬಹುದು.

೪೮. ಆನೆಂಬುದಿಲ್ಲ ನೀನೆಂಬುದಿಲ್ಲ, ಸ್ವಯವೆಂಬುದಿಲ್ಲ ಪರವೆಂಬುದಿಲ್ಲ, ಅರಿವೆಂಬುದಿಲ್ಲ ಮರವೆಂಬುದಿಲ್ಲ ಒಳಗೆಂಬುದಿಲ್ಲ, ಹೊರಗೆಂಬುದಿಲ್ಲ, ಕೂಡಲ ಚನ್ನಸಂಗಯ್ಯನೆಂಬ ಶಬ್ದ ಮುನ್ನಿಲ್ಲ.

ಟಪ್ಪಣಿ:— ನಾನು ನೀನು, ಜ್ಞಾನ ಅಜ್ಞಾನ, ಎಂಬ ಎಲ್ಲ ವ್ಯಕ್ತಿಗಳ ಮನಸಿನಲ್ಲಿ ಉಂಟಾಗುವ ಎಚ್ಚರ ಮತ್ತು ಭೇದಭಾವ ಇವಾವೂ ಆ ಸ್ಥಿತಿಯಲ್ಲಿ ಇರುವುದಿಲ್ಲ, ಅದು ಕೇವಲ ನಿರ್ದ್ವಂದ್ವ ಸ್ಥಿತಿಯು, ಎಂದು ಅರ್ಥ.

೪೯. ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ. ಇಂತೀ ಪಂಚದೊಳಗೆ ನಾ ನಷ್ಟವಾದೆನು. ಆ ನಷ್ಟದೊಳಗೆ ನೀ ನಷ್ಟವಾದೆ. ಕಲಿದೇವರ ದೇವನೆಂಬ ನುಡಿ 'ನಿಃಶಬ್ದ ಬ್ರಹ್ಮಮುಚ್ಯತೇ.'

ಟಪ್ಪಣಿ —ಎಲ್ಲವೂ ಪ್ರತಿಯೊಂದು ಬಗೆಯ ಸಂವೇದನೆಯೂ ವಿಚಾರವೂ ಭಾವವೂ ನಷ್ಟವಾದ ಚಿತ್ತದ ಸ್ಥಿತಿಯಲ್ಲಿ 'ದೇವರು' ಎಂಬ ಕಲ್ಪನೆಯು ಕೂಡ ಇರಲರಿಯದು. ಆಗ ಮೌನವೆ ಬ್ರಹ್ಮರೂಪವು, ನಿಶ್ಯಬ್ದವೆ ಪರಾತ್ಪರವು.

೫೦. ತನುವಳಿಯಿತ್ತು, ಮನವಳಿಯಿತ್ತು, ಭಾವವಳಿಯಿತ್ತು, ಬಯಕೆಯಳಿಯಿತ್ತು, ನಿಜವೆಂಬುದಳಿಯಿತ್ತು. ನಾನು ನೀನೆಯ ಬಯಲಲ್ಲಿ, ಕಲಿದೇವರ ದೇವನಲ್ಲಿ ಬೆರಸಿ ಬೇರಿಲ್ಲದಿದ್ದೆನು.

೫೧. ಹಲವು ಪರಿಯಿಂದ ಗಂಡನನೊಲಿಸಿ ಕೂಡಿದ ಕೂಟದ ಸ್ನೇಹವನು ಹೇಳಲಿಲ್ಲ ಕೇಳಲಿಲ್ಲ, ಶಬ್ದಕ್ಕಿಂಬಿಲ್ಲವಾಗಿ.

ಟಪ್ಪಣಿ:— ಸಮಾಧಿಯಲ್ಲಿ ಆಗುವ ಐಕ್ಯಾನುಭವನನ್ನು ನಲ್ಲನಲ್ಲೆಯರ ಕೂಟಕ್ಕೆ ಹೋಲಿಸಿ ಇಲ್ಲಿ ಹೇಳಿರುವರು, ಅದು ಅವರ್ಣನೀಯವೆಂಬುದೆ ಅರ್ಥ.

೫೨. ಶಬ್ದದ ನಿಃಶಬ್ದವಾಯಿತ್ತು. ತಂದೆ ಕೂಡಲ ಸಂಗಮನಲ್ಲಿ ಬೆರಸಿ ಅಲ್ಲಮಪ್ರಭುವಿನ ಪಾದದಲ್ಲಿ ಸಯವಾಗಿತ್ತು.

ವಿವರಣೆ

ಮೇಲಿನ ವಚನಗಳಲ್ಲಿ ಸಂಕುಚಿತ ವ್ಯಕ್ತಿಭಾವದ ಸಂಪೂರ್ಣ ಲಯವು ಮತ್ತು ವಿಶ್ವಭಾವದ ಎಚ್ಚರವು ಅಥವಾ ಪರಮಾತ್ಮನಲ್ಲಿ ಒಂದಾದ ಅನು

ಟಪ್ಪಣಿ:— ಕೇವಲ ಐಕ್ಯಸ್ಥಿತಿಯ ವರ್ಣನೆಯು ಇಲ್ಲಿ ಮಾಡಲ್ಪಟ್ಟಿರುವದು.

೫೮. ಎಲವೋ ಎಲವೋ ನಲ್ಲ, ನಿಮ್ಮ ಕೂಡದ ಮುನ್ನ ಕಾಣೆ, ಕೂಡಿದ ಬಳಿಕ ಮತ್ತೆ ಕಾಣೆನಯ್ಯ. ಕೂಟದ ಸುಖದಿಂದ ನಾನೀನೆಂದರಿಯೆ, ಕಪಿಲ ಸಿದ್ಧ ಮಲ್ಲಿನಾಥಯ್ಯ.

೫೯. ನಲ್ಲನ ಕೂಡುವ ಭರದಲ್ಲಿ ಎನ್ನ ಇದಿರು ಏನೆಂದರಿಯೆ. ನಲ್ಲನ ಕೂಡುವಾಗಲು ಎನ್ನ ನಲ್ಲನ ಏನೆಂದರಿಯೆ. ಉರಿಲಿಂಗ ದೇವನ ಕೂಡಿದ ಬಳಿಕ ನಾನೋ ತಾನೋ ಏನೆಂದರಿಯೆ.

೬೦. ಆತನ ಬೆರಸಿದ ಕೂಟವನೇನೆಂದು ಹೇಳುವೆನವ್ವಾ? ಕೇಳಲು ಬಾರದು, ಹೇಳಲು ಬಾರದು. ಏನು ಹೇಳುವೆನವ್ವಾ? ಶಿವಿ ಕರ್ಪುರ ಬೆರಸಿದಂತೆ. ಮಹಾಲಿಂಗ ಗಜೇಶ್ವರನ ಕೂಡಿದ ಕೂಟವ ಹೇಳಬಾರದು.

ಟಪ್ಪಣಿ:— ಇವು ಸತಿಪತಿಗಳ ಸಂಗೈಕ್ಯವನ್ನು ಆತ್ಮೈಕ್ಯದೊಡನೆ ಹೋಲಿಸಿದ ವಚನಗಳಿರುವವು. ಕೂಟದ ಸಮಯಕ್ಕೆ ನಾನೀನೆಂಬ ಯಾವ ದ್ವೈತಭಾವವೂ ಉಳಿಯುವದಿಲ್ಲ, ಆ ಸ್ಥಿತಿಯು ಅವರ್ಣನೀಯವು, ಎಂದರ್ಥ.

೬೧. ಘನವ ಮನವ ಕಂಡು ಅದನೊಂದು ಮಾತಿಂಗೆ ತಂದು ನುಡಿದರೆ, ಅದಕದೆ ಕಿರಿದು ನೋಡಾ! ಅದೇನೂ ಇಲ್ಲದ ನಿಃಸಂಗದ ಸುಖವು ಗುಹೇಶ್ವರಾ.

ಟಪ್ಪಣಿ:— ಆ ಅನುಭವವನ್ನು ಶಬ್ದದಿಂದ ವ್ಯಕ್ತಮಾಡುವುದು ಅಸಾಧ್ಯವು. ಹಾಗೆ ಪ್ರಯತ್ನಮಾಡಿದರೆ ಆ ಅನುಭವವೆ ಊನವಾಗುವದು ಎಂದರ್ಥ. ವರ್ಣನೆಯಿಂದ ಅದಕ್ಕೆ ಗೌಣತ್ವವು ಬರುವದು.

೬೨. ಅಂತರಂಗ ಬಹಿರಂಗ ಆತ್ಮಸಂಗ ಒಂದೇ ಅಯ್ಯಾ. ಆರೂಢದ ಸುಖವನು ಕೂಡಲ ಸಂಗಮದೇವ ತಾನೇ ಬಲ್ಲನು.

೬೩. ನೇಹದ ಸುಖವ ನೋಟ ನುಂಗಿತ್ತು. ನೋಟದ ಸುಖವ ಕೂಟ ನುಂಗಿತ್ತು. ಕೂಟದ ಸುಖವ ಆಲಿಂಗನ ನುಂಗಿತ್ತು. ಆಲಿಂಗನದ ಸುಖವ ಸಂಗ ನುಂಗಿತ್ತು. ಸಂಗಸುಖವ ಸಮರಸ ನುಂಗಿತ್ತು. ಸಮರಸದ ಸುಖವ ಪರವಶ ನುಂಗಿತ್ತು. ಪರವಶದ ಸುಖವ ಕೂಡಲ ಚನ್ನಸಂಗಯ್ಯ ತಾನೇ ಬಲ್ಲ.

ಟಪ್ಪಣಿ:— ಉತ್ತರೋತ್ತರ ಘನವಾಗುವ ಸುಖಸೋಪಾನವು ಇಲ್ಲಿ ವರ್ಣಿಸಲ್ಪಟ್ಟಿದೆ.

೬೪. ನಿರ್ಮೂಲವಾಯಿತ್ತು. ಅಹಾ, ನಿರಾಲಂಬವಾಯಿತ್ತು. ಅಹಾ, ನಿರಾಕುಳವಾಯಿತ್ತು. ಪುಣ್ಯದ ಫಲತೋರಿ ಅಹಾ, ಬಯಲನೆ ಕೂಡಿತ್ತು. ಬಯಲು ನಿರ್ವಯಲಾಯಿತ್ತು. ಆ ನಿರ್ವಯಲನುಡಿಗಿ ನಿಜಸುಖಿಯಾದೆನಯ್ಯಾ ನಾನು, ಸಂಗಯನಲ್ಲಿ ನಿಃಶೂನ್ಯವಾಯಿತ್ತಯ್ಯಾ.

೬೫. ಷಡುಚಕ್ರವಳಯದೊಳಗೆ ನಾನಾಡುವೆ. ಬಹುರೂಪ ಭ್ರೂಮಧ್ಯ ಮಂಡಲ ಹೃದಯಕಮಲ ಮಧ್ಯದ ಅಬ್ಜಸ್ವರದ ಮಣಿಪೂರಕದ ಮೇಲೆ ನಾನಾಡುವೆ. ಬಹುರೂಪನುರಿಯುಂಡ ಕರ್ಪುರದಂತೆ ನಾನಾಡುವೆ. ಬಹುರೂಪ ಬಯಲ ಬೆರಸಿದ ಮರೀಚಿಯಂತೆ ನಾನಾಡುವೆ. ಬಹುರೂಪರೇಕಣ್ಣ ಪ್ರಿಯನಾಗಿ ನಾಥ ಬಸವಣ್ಣನಿಂದೆ ಬದುಕಿದೆನು.

ಟಪ್ಪಣಿ:— ಷಡುಚಕ್ರ – ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞೆ ಎಂಬ ಆರು ನಾಡಿಚಕ್ರಗಳು, ಅಥವಾ ಜ್ವಾಲಸತಂತುಗಳ ಕೇಂದ್ರಗಳು. ಅಬ್ಜಸ್ವರದ – ಅನಾಹತಧ್ವನಿ, ತನ್ನಿಂದ ತಾನೆ ಆಗುತ್ತಿರುವ ಧ್ವನಿ. ಅಲಿಪ್ತನಿದ್ದು ಈ ಶರೀರದಲ್ಲಿ ಜರಿಸುವೆನು ಎಂದು ಅರ್ಥವು. ಇದು ಆತ್ಮನ ವರ್ಣನೆಯು.

೬೬. ತಾ ಸುಖಿಯಾದೊಡೆ ನಡೆಯಲು ಬೇಡ. ತಾ ಸುಖಿಯಾದೊಡೆ ನುಡಿಯಲು ಬೇಡ. ತಾ ಸುಖಿಯಾದೊಡೆ ಪೂಜಿಸಲು ಬೇಡ. ತಾ ಸುಖಿಯಾದೊಡೆ ಉಣಲು ಬೇಡ, ಗುಹೇಶ್ವರಾ.

ಟಪ್ಪಣಿ:— ಆತ್ಮತೃಪ್ತಿಯಾಯಿತೆಂದರೆ, ಮನುಷ್ಯನು ಅಪ್ತಕಾಮನಾದನೆಂದರೆ, ಸುಖಕ್ಕಾಗಿ ಎಂದು ಏನೂ ಮಾಡುವ ಅವಶ್ಯವಿಲ್ಲ, ಎಂದು ಅರ್ಥವು. ಎಲ್ಲ 'ಅವಶ್ಯಕತೆ' ಎಂಬುದನ್ನು ಮೀರಿ ಮುಂದೆ ಅವನು ಲೀಲಾವಿಹಾರಿಯಾಗುವನು.

ವಿವರಣೆ

ಮುಕ್ತಿಯ ಬಗೆಗಳ ವಿವರವನ್ನು ಈ ಮೊದಲೆ ಪ್ರಕರಣದ ಆರಂಭದಲ್ಲಿ ಕೊಟ್ಟಿದೆ. ಇನ್ನು ವಿದೇಹಮುಕ್ತಿಯ ವಚನಗಳು ಇರುವವು. ಜನನಮರಣ ರಹಿತ ಮುಕ್ತಿಯೆ ಉಪನಿಷತ್ಕಾಲದಿಂದ ಮನುಷ್ಯನ ಆತ್ಯಂತಿಕ ಧ್ಯೇಯವೆಂದು ನಮ್ಮ ಭಾರತವರ್ಷದ ಶ್ರೇಷ್ಠರು ಮನ್ನಿಸುತ್ತ ಬಂದಿರುವರು.

ಸಮುದ್ರದ ತೆರೆ ಸಮುದ್ರದಲ್ಲಿ ಲಯಹೊಂದಿದಂತೆ ಈ ಮುಕ್ತಿಯು ಇರುವದು.

ವಚನಗಳು

೬೭. ಹುಟ್ಟುವಾತ ನಾನಲ್ಲಯ್ಯ ! ಹೊಂದುವಾತ ನಾನಲ್ಲಯ್ಯ ! ಏನೆಂಬೆನಯ್ಯಾ ! ಆದೆಂತೆಂಬೆನಯ್ಯಾ ! ನಿಜವನರಿದ ಬಳಿಕ ಮರಳಿ ಹುಟ್ಟಲುಂಟೇ ಗುಹೇಶ್ವರಾ ?

೬೮. ನಿಜವನರಿದ ನಿಶ್ಚಿಂತನೆ; ಮರಣವ ಗೆಲಿದ ಮಹಂತನೆ, ಘನ ಕಂಡ ಮಹಿಮನೆ, ಪರವನೊಳಕೊಂಡ ಪರಿಣಾಮಿಯೆ, ಬಯಲ ಬದಗಿದ ಭರಿತನೆ, ಗುಹೇಶ್ವರ ಲಿಂಗ ನಿರಾಳವನೊಳಕೊಂಡ ಸಹಜನೆ.

೬೯. ಮನವ ಕೊನೆಯ ಮೊನೆಯ ಮೇಲೆ ನೆನೆದ ನೆನಹು ಜನನ ಮರಣವ ನಿಲಿಸಿ, ಜ್ಞಾನಜ್ಯೋತಿಯ ಉದಯಭಾನುಕೋಟಯ ವಿೂರಿ, ಸ್ವಾನುಭವದ ಉದಯ ಜ್ಞಾನಶೂನ್ಯದಲಡಗಿದ ಘನವನೇನೆಂಬೆ ಗುಹೇಶ್ವರಾ.

೭೦. ಹಿಂದಣ ಭವಮಾಲೆ ಹಿಂಗಿತ್ತು. ಎನಗೆ ನಿಮ್ಮ ಕಾರುಣ್ಯ ಪ್ರಸಾದದಿಂದ ಮರಳಿ ಭವವಿಲ್ಲ. ನೀವೆ ಬಲ್ಲಿರಿ ನಿಮ್ಮ ಕಂದನನು, ತಂದೆ ಕೂಡಲ ಸಂಗಯ್ಯ.

ಟಿಪ್ಪಣಿ:— ಹಿಂದಣ ಭವಮಾಲೆ ಅಂದರೆ ಸಂಚಿತ ಕರ್ಮ, ಹಿಂದೆ ಆಗಿಹೋದ ಜನ್ಮಜನ್ಮಾಂತರಗಳು. ಮರಳಿ ಭವವಿಲ್ಲ ಅಂದರೆ ಪುನಃ ಜನ್ಮವಿಲ್ಲ ಎಂದರ್ಥ.

೭೧. ಉರಿಯೊಳಗಣ ಕರ್ಪುರಕ್ಕೆ ಕರಿಯುಂಟೇ ಅಯ್ಯಾ ? ಬಯಲ ಮರೀಚಿಯ ಜಲಕ್ಕೆ ಕೆಸರುಂಟೇ ಅಯ್ಯಾ ? ವಾಯುವಿನಪ್ಪಿದ ಪರಿಮಳಕ್ಕೆ ನಿರ್ಮಾಲ್ಯವುಂಟೇ ಅಯ್ಯಾ ? ನೀವು ನೆರೆ ಒಲಿದ ಬಳಿಕ ಎನಗೆ ಭವ ಉಂಟೇ ? ಕೂಡಲ ಸಂಗಮದೇವ, ನಿಮ್ಮ ಚರಣಕಮಲದೊಳಗೆ ಎನ್ನ ನಿಂಬಿಟ್ಟುಕೊಳ್ಳಯ್ಯಾ.

೭೨. ಕದಳಿ ಎಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು ವಿಷಯಂಗಳು, ಕದಳಿ ಎಂಬುದು ಭವ ಘೋರಾರಣ್ಯ. ಕದಳಿ ಎಂಬುದ ಗೆದ್ದು, ಬದುಕಿ ಬಂದು, ಕದಳಿಯ ಬನದಲ್ಲಿ ಭವಹರನ ಕಂಡೆನು. ಭವಗೆಟ್ಟು ಬಂದ ಮಗಳೆಂದು ಬಿಗಿಯಪ್ಪಿದಡೆ ಚನ್ನಮಲ್ಲಿಕಾರ್ಜುನನಲ್ಲಿ, ಹೃದಯಕಮಲದಲ್ಲಿ ಅಡಗಿದೆನು.

ವಿವರಣೆ

ಪೂರ್ಣ ಜ್ಞಾನವಾಗುವುದರಿಂದ ಕರ್ಮಬೀಜವು ನಾಶವಾಗಿ ಪುನರ್ಜನ್ಮವು ಇಲ್ಲದಂತಾಗುವದು. ಆದು ವಿದೇಹಮುಕ್ತಿಯಾಯಿತು. ಆದರೆ ಈ ದೇಹವಿರುವಾಗ ಕೂಡ ಅಂಥ ಜ್ಞಾನವಾಗಬಲ್ಲದು. ಹಾಗೆ ಜ್ಞಾನವಾಯಿತೆಂದರೆ ಈ ದೇಹಪಾತದ ವರೆಗೆ ಅವನು ಜೀವನ್ಮುಕ್ತನೆನಿಸುವನು. ಇದೇ ಎಲ್ಲಕ್ಕೂ ಮಹತ್ವದ ಸ್ಥಿತಿಯು. ಜಗತ್ತಿನಲ್ಲಿ ವರ್ತಿಸುತ್ತಿದ್ದರೂ ಜೀವನ್ಮುಕ್ತನು ಯಾವದೇ ಫಲಪದದಾಶೆಯಿಂದ ವರ್ತಿಸುವದಿಲ್ಲ. ಯಾಕಂದರೆ, ಅವನು ಎಲ್ಲವನ್ನು ಪಡೆದು ಆಪ್ತಕಾಮನಾಗಿರುವನು. ಅವನ ತನುಮನಪ್ರಾಣಗಳೆಲ್ಲ ಆತ್ಮಮಯವಾಗಿರುವುದರಿಂದ ಅವನು ಪೂರ್ಣ ಸಂತೃಪ್ತನಿರುವನು. ಅವನು ಕರ್ಮಬೀಜವನ್ನು ಸುಟ್ಟವನಾದುದರಿಂದ ಯಾವ ಕರ್ಮಗಳನ್ನು ಮಾಡಿದರೂ ಘೃತಸೋಂಕದ ನಾಲಿಗೆಯಂತೆ, ನೀರುತಾಕದ ತಾವರೆಯಂತೆ ಇರುವನು. ಅವನ ಕರಣಗಳೆಲ್ಲ ವ್ಯವಹಾರಮಾಡುತ್ತಿದ್ದರೂ ಅವನ ಚಿತ್ತವು ಪರಮಾತ್ಮನಲ್ಲಿ ಸ್ಥಿರವಿರುವದು. ಸತ್ತಬಳಿಕೇ ಮುಕ್ತಿಯನ್ನು ಪಡೆಯುತ್ತಕ್ಕದ್ದಿದೆ ಎಂಬ ಕಲ್ಪನೆಯು ಭ್ರಾಮಕವಿರುವದು. ಜೀವನ್ಮುಕ್ತರಾಗುವುದೇ ಮುಖ್ಯವು, ಅದೇ ಸಹಜಸಮಾಧಿಯು. ಆದು ಸಾಧಿಸಿದರೆ ಮಿಕ್ಕದ್ದೆಲ್ಲ ತನ್ನಿಂದತಾನೆ ಕೈವಶವಾಗುವದು. ಈ ಸಮರಸಪದವೆ ಪರಮಸಾಧ್ಯವು.

ವಚನಗಳು

೭೩. ಖಂಡಿತವಳಿದು ಅಖಂಡಿತ ಪರಬ್ರಹ್ಮದಲ್ಲಿ ಅವಿರಳ ಸಮರಸದಿಂದ ಕ್ರಿ ಎಂಬುದೇನು, ಧ್ಯಾನವೆಂಬುದೇನು, ನೇಮನಿತ್ಯವೆಂಬುದೇನು, ಕುರುಹು ಪೂಜೆ ಎಂಬುದೇನು, ಅರುಹು ಆಚಾರವೆಂಬುದೇನು, ಇಂತೀ ಮರವೆಯುಳ್ಳನ್ನಕ್ಕ ಭಿನ್ನಫಲದ ಪ್ರಾಪ್ತಿಯಲ್ಲದೆ ಅವಿರಳ ಸಮರಸ ಸೌಖ್ಯ ನಿರ್ವಯಲ ಪದವು ಎಲ್ಲಿಯದೊ ? ಇದನರಿದು, ಇಂತಿವೆಲ್ಲ ಹ್ಞಾಳು ಸಂಕಲ್ಪ, ವಿಪರೀತ ಭ್ರಾಂತಿ, ಜ್ಞಾನವೆ ತನ್ನ ನಿಜನಿಲವೆಂದು ತಿಳಿದು, ದೇಹವಿರ್ದು ವಿದೇಹಿಯಾಗಿರ್ಪನಯ್ಯಾ ಅಖಂಡೇಶ್ವರಾ.

ಟಿಪ್ಪಣಿ:— ಮರವೆ ಅಂದರೆ ಅಜ್ಞಾನ. ಸಮರಸಪದದಲ್ಲಿ ಕ್ರಿಯೆ, ಧ್ಯಾನ ಮುಂತಾದವುಗಳೆಂದರೇನು, ಇವುಗಳ ಜ್ಞಾನವಾಗುವವರೆಗೆ ನಿಜ ಮುಕ್ತಿಯ ಆಶೆ ಇಲ್ಲ ಎಂದೂ ಇವೆಲ್ಲ ವ್ಯರ್ಥ, ಜ್ಞಾನವೆ – ಶುದ್ಧ ಜ್ಞಾನವೆ – ತನ್ನ ನಿಜಪದವು ಎಂಬುದನ್ನು ತಿಳಿಯುವುದೇ ಮುಖ್ಯ ಮಾತು ಎಂದೂ ಅರ್ಥವು.

೭೪. ಮಾಡಿದ ಮಾಟವನರಿಯದ ಭಕ್ತ, ಕೂಡಿದ ಕೂಟವನರಿಯದ ಭಕ್ತ, ಮಾಟಕೂಟವೆಂಬ ಕೋಟಲೆಯಳಿದು, ನಿಸ್ಸಂಗತ್ವ, ನಿರಾಭಾರಿ, ನಿಸ್ಪೃಹ, ನಿರ್ದೇಹಿ, ನಿಜದಲ್ಲಿ ಅಡಗಿವ ನಿತ್ಯಮುಕ್ತನಯ್ಯ ಭಕ್ತನು ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

ಟಪ್ಪಣಿ:— ನಿತ್ಯ 'ಯುಕ್ತ' ನಿರುವುದರಿಂದ ಮಾಟಕೂಟಗಳೆರಡೂ ನಿಜಭಕ್ತನಿಗೆ ಒಂದೇ ಇರುವವು. ನಿಸ್ಸಂಗತ್ವ ಅಂದರೆ ಇಲ್ಲಿ ನಿಸ್ಸಂಗಿಯೆಂದು ತಿಳಿಯಬೇಕು.

೭೫. ತನು ನಿಮ್ಮನಪ್ಪಿ ಮಹಾಲಿಂಗವಾದ ಬಳಿಕ ತನುವೆಂಬುದು ಮತ್ತೆಲ್ಲಿಯದೋ? ಮನ ನಿಮ್ಮನಪ್ಪಿ ಘನಮನವಾದ ಬಳಿಕ ಮನವೆಂಬುದು ಮತ್ತೆಲ್ಲಿಯದೋ? ಪ್ರಾಣ ನಿಮ್ಮನಪ್ಪಿ ಪ್ರಾಣಪದವಲ್ಲಿ ಸಿಲುಕಿದ ಬಳಿಕ, ಪ್ರಾಣವೆಂಬುದು ಮತ್ತೆಲ್ಲಿಯದೋ? ಇಂತೀ ತ್ರಿವಿಧವು ಲಿಂಗದಲ್ಲಿ ನಿರ್ದೇಹವಾಗಿ, ಮನದೋರದ ಇರವ ಕೂಡಲ ಚನ್ನಸಂಗಯ್ಯನೇ ಬಲ್ಲ.

೭೬. ಅನಂತ ಸಾಧನಂಗಳ ಕಲಿತು ಏಗಾರನು ಅಭ್ಯಾಸವ ಕಲಿಸುವನಲ್ಲದೆ, ಆತ ಮರಳಿ ಅಭ್ಯಾಸವ ಮಾಡುವನೇ ಅಯ್ಯ? ಅಖಂಡಪರಿಪೂರ್ಣ ಪರಬ್ರಹ್ಮವನೊಡಗೂಡಿ ಮಹಾಘನ ಪರಶಿವ ಶರಣನು ಸತ್ಕ್ರಿಯೆಯನಾಚರಿಸಿದಡೆಯೂ ಉಪಚಾರವಾಗಿ ಆಚರಿಸುವನಲ್ಲದೆ ಮರಳಿ ತಾನು ಫಲವಹ ಮುಕ್ತಿಯ ಪಡೆವೆನೆಂದು ಆಚರಿಸುವನೇನಯ್ಯ? ಇದು ಕಾರಣ ನಿಮ್ಮ ಶರಣನು ಎಪ್ಪು ಸತ್ಕ್ರಿಯೆಯನಾಚರಿಸಿದಡೆಯೂ ಘೃತ ಸೋಂಕದ ರಸನೆಯಂತೆ ನಿರ್ದೇಪನಾಗಿಪ್ಪನಯ್ಯಾ ಅಖಂಡೇಶ್ವರಾ.

ಟಪ್ಪಣಿ:— ಜೀವನ್ಮುಕ್ತನು ಕರ್ಮಮಾಡುವುದು ಲೋಕಸಂಗ್ರಹಾರ್ಥವಾಗಿ, ಅನ್ಯರಿಗೆ ಹಾದಿತೋರಿಸಬೇಕೆಂಬ ಉದ್ದೇಶದಿಂದ ಹೊರತು ಅದರಿಂದ ತನಗೆ ಯಾವುದೇ ಫಲವು ದೊರೆಯಬೇಕೆಂಬ ಆಶೆಯಿಂದಲ್ಲ. ಅದು ನಿಷ್ಕಾಮಕರ್ಮವಿರುವುದರಿಂದ ಅದರಿಂದ ಅವನು ಅಲಿಪ್ತನೆ ಇರುವನು.

೭೭. ಇರ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ, ಅವ ಸಂಗವೂ ಇಲ್ಲದ ನಿಜೈಕ್ಯನು. ಬೇಕು ಬೇಡೆನ್ನದೆ, ಅಳಿದು ಉಳಿದು ಕರ್ಪುರದ ಗಿರಿಯನು ಉರಿ ತಾಗಿದಂತೆ ಕೂಡಲ ಚನ್ನಸಂಗಯ್ಯನಲ್ಲಿ ಲಿಂಗೈಕ್ಯವು.

ಟಪ್ಪಣಿ:— ಅವನು 'ಅಹಂ,' 'ನಾನು,' 'ತಾನು' ಎಂಬ ಭಾವದಿಂದ ಅಳಿದಿರುವನು, ಅಂದರೆ ನಾಶಹೊಂದಿರುವನು, ಆದರೆ ಪರಮಾತ್ಮನ ನಿಮಿತ್ತಮಾತ್ರನಾಗಿ ಉಳಿದಿರುವನು.

೭೮. ಸುಳಿದು ಸುತ್ತುವ ಮನದ ವ್ಯವಹರಣೆಯುಳ್ಳನ್ನಕ್ಕರ, ಅರಿಯೆನರಿಯೆ, ನೆರೆ ಶಿವಪಥವ ನಾನರಿಯೆನರಿಯೆ. ಗುಹೇಶ್ವರನರಿದ ಬಳಿಕ ಲೋಕ ಗತಿಯನರಿಯೆನರಿಯೆ.

ಟಪ್ಪಣಿ:— ಚಿತ್ತವು ವಿಷಯಗಳಿಂದ ವ್ಯಾವೃತವಾದಾಗ ಪರಮಾತ್ಮನನ್ನು ಮರೆಯುವದು, ಸಮಾಧಿಸ್ಥಿತಿಯಲ್ಲಿ ಪರಮಾತ್ಮೈಕ್ಯವನ್ನು ಹೊಂದಿದಾಗ ಈ ಲೋಕವನ್ನು ಮರೆತುಬಿಡುವದು, ಈ ಲೋಕವೂ ಪರಮಾತ್ಮನದೇ ಇರುವದು ಎಂಬ ಭಾವದಿಂದ ವ್ಯವಹರಿಸಲಾರಂಭಿಸಿದರೆ ಸಮರಸೈಕ್ಯವು ಸಾಧಿಸುವದು.

೭೯. ಸತ್ತು ಹುಟ್ಟಿ ಕೆಟ್ಟವರೆಲ್ಲರೂ ದೇವಲೋಕಕ್ಕೆ ಹೋದರೆಂಬ ಬಾಲಭಾಷೆಯ ಕೇಳಲಾಗದು. ಸಾಯದ ಮುನ್ನ ಸ್ವಯವನರಿದಡೆ ದೇವನೊಲಿವ ನಮ್ಮ ಗುಹೇಶ್ವರನು.

೮೦. ಸತ್ತಬಳಿಕ ಮುಕ್ತಿಯ ಹಡೆದಿಹೆನೆಂದು ಪೂಜಿಸಹೋದರೆ ಆ ದೇವರೇನ ಕೊಡುವನೋ? ಸಾಯದೆ ನೋಯದೆ ಸ್ವತಂತ್ರನಾಗಿ ಸಂದು ಭೇದವಿಲ್ಲದಿರ್ಪ ಗುಹೇಶ್ವರಾ ನಿಮ್ಮ ಶರಣ.

ಟಪ್ಪಣಿ:— ಸತ್ತಮೇಲೆ ದೇವಲೋಕಾದಿಗಳು ದೊರೆಯುವವು ಎಂದು ಇಲ್ಲಿ ಪುಣ್ಯಮಾಡುವ ಜನರು ಬಹಳ. ಆದರೆ ಆ ಹುಚ್ಚುತನಕ್ಕೆ ಹೋಗದೆ ಜೀವಂತವಿರುವಾಗಲೆ ಪೂರ್ಣಜ್ಞಾನವನ್ನು ಪಡೆದು, ಐಕ್ಯದ ಅನುಭವವನ್ನು ದೊರಕಿಸಿ ಜೀವನ್ಮುಕ್ತರಾಗಬೇಕು, ಎಂದು ಅಲ್ಲಮನ ಖಂಡಿತ ಮತವು. ಅದೇ ಮೇಲಿನ ಎರಡು ಪದ್ಯಗಳಲ್ಲಿ ಸ್ಪಷ್ಟವಾಗಿ ಇರುವದು.

೮೧. ನಾರುಬೇರಿನ ಕುಟಿಲ ಕುಹಕದ ಕಪಟಯೋಗವಲ್ಲಿದು ನಿಲ್ಲಿರೋ. ಕಾಯಸಮಾಧಿ ಕರಣಸಮಾಧಿ ಜೀವಸಮಾಧಿ ಯೋಗವಲ್ಲಿದು ನಿಲ್ಲಿರೋ. ನಿಜ ಸಹಜಸಮಾಧಿ ಗುಹೇಶ್ವರಾ.

ಟಪ್ಪಣಿ— ಮಿಕ್ಕ ಸಮಾಧಿಗಳಿಗಿಂತ ಸಹಜಸಮಾಧಿಯು ಶ್ರೇಷ್ಠವು, ಎಂದು ಇಲ್ಲಿ ಪ್ರತಿಪಾದನವಿರುವದು. ಸಹಜಸಮಾಧಿ ಅಂದರೆ ಎಲ್ಲ ವ್ಯವಹಾರಗಳನ್ನು ಮಾಡುತ್ತಿದ್ದರೂ ಚಿತ್ತವನ್ನು ಪರಮಾತ್ಮನಲ್ಲಿಟ್ಟಿರುವದು.

೮೨. ಎಮ್ಮವರಿಗೆ ಸಾವಿಲ್ಲ. ಎಮ್ಮವರು ಸಾವನರಿಯರು. ಸಾವೆಂಬುದು ಸಾವಲ್ಲ. ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ ಆ ಲಿಂಗದಲ್ಲಿ

ಅಲ್ಲದೆ ವೇರೆ ಮತ್ತೊಂದೆಡೆ ಇಲ್ಲ. ಕೂಡಲ ಸಂಗಮದೇವರ ಶರಣ ಸೊಡ್ಡಳ ಬಾಚರಸನು ನಿಜಲಿಂಗದ ಒಡಲೊಳಗೆ ಬಗೆದು ಹೊಕ್ಕೊಡೆ ಉಪಮಿಸಬಲ್ಲವರ ಕಾಣೆನು.

೮೩. ಆಚಾರವಂಗಲೇಪವಾಗಿ ಕಾಯಮುಕ್ತನು ನೀನು ನೋಡಯ್ಯ. ಅರಿವು ಅಂತರಂಗದಲ್ಲಿ ಭರಿತವಾಗಿಪ್ಪುದಾಗಿ ಮನೋಮುಕ್ತನು ನೀನು ನೋಡಯ್ಯ. ಅರ್ಪಿತ ಪರಿಣಾಮದಲ್ಲಿ ಅವಿರಳವಾಗಿಪ್ಪುದಾಗಿ ಸರ್ವಾಂಗ ಲಿಂಗೈಕ್ಯ ನೋಡಾ. ಮುಕ್ತನಲ್ಲೆಂಬ ಬಳಕೆಯ ಮಾತಂತಿರಲಿ. ಬಯಲ ಭ್ರಮೆಯನೆ ಕಳೆದು ಭವದ ಬಟ್ಟೆಯ ಹರಿದಿಪ್ಪುದ ನಮ್ಮ ಗುಹೇಶ್ವರ ಲಿಂಗ ಬಲ್ಲನು. ನೀನು ಮರೆಯಾಗಿ ನುಡಿವರೆ ಸಂಗನಬಸವಣ್ಣಾ ?

ಟಿಪ್ಪಣಿ: – 'ನಾನೆಲ್ಲಿಯ ಮುಕ್ತನು' ಎಂದು ಬಸವಣ್ಣನು ವಿನಯದಿಂದ ನುಡಿಯಲು ಅಲ್ಲಮನು ಅವನನ್ನುದ್ದೇಶಿಸಿ ಮೇಲಿನಂತೆ ಮಾತನಾಡಿರುವನು. ಅವನ ಜೀವನ್ಮುಕ್ತಸ್ಥಿತಿಯ ವರ್ಣನೆಯಿದು.

ವಿವರಣೆ

ಮುಕ್ತಿಯೆಂದರೊಂದು ವಿಶಿಷ್ಟ ಚಿತ್‌ಸ್ಥಿತಿ ಇರುವದು ಹೊರತು, ಯಾವದೊಂದು ಸ್ಥಾನವಲ್ಲ. ಸ್ವತಂತ್ರ ನಿರಾಲಂಬ ಆನಂದವೃತ್ತಿ, ಅಮಲ ವಾದ ನೈಜಸುಖಾನುಭೂತಿ ಇದೇ ಮುಕ್ತಿಯು. ನಿಜವಾಗಿ ಅಂಥ ಸ್ಥಿತಿಯು ನಿರಂತರವಿದ್ದರೆ ಮತ್ತೆ ಬೇರೆ ಮುಕ್ತಿಯನರಸಲೇಕೆ? ಅಂಥ ಆನಂದದ ಅಶ್ವಾಸುಭವವು ಕೂಡ ಮುಕ್ತಿಯ ಆನಂದವೆ ಎನಿಸುವದು. ಧ್ಯಾನ ಸಮಾಧಿ, ಭಾವಸಮಾಧಿ, ಕರ್ಮಸಮಾಧಿ ಮುಂತಾದವುಗಳು ಸಾಧಕರಿಗೆ ಅಲ್ಪಕಾಲ ಅನುಭವಕ್ಕೆ ಬಂದರೂ ಅವೆಲ್ಲ ಮುಕ್ತಿಯ ಆನಂದಸ್ಥಿತಿಯನ್ನೇ ನಿರ್ದೇಶಿಸುವಂತಹವಿರುವವು. ಈ ಪ್ರಕರಣದಲ್ಲಿಯ ವಚನಗಳು ಆ ಮುಕ್ತಿಯ ಬಗೆಗಳನ್ನೆ ಬಣ್ಣಿಸುವವು. ಆ ಸ್ಥಿತಿಯ ಆನಂದವು ಒಮ್ಮೆ ಅನುಭವಕ್ಕೆ ಬಂದಿತೆಂದರೆ ಪುನಃ ಪುನಃ ಅದೇ ಸ್ಥಿತಿಯನ್ನು ಪಡೆಯ ಬೇಕೆಂದು ಹಂಬಲ ಹುಟ್ಟುವದು.

ವಚನಗಳು

೮೪. ಎಲ್ಲಿ ನೋಡಿದಡಲ್ಲಿ ನೀನೇ ದೇವಾ. ಎಲ್ಲಿ ಮುಟ್ಟಿದಲ್ಲಿ ನೀನೇ ದೇವಾ. ಎಲ್ಲಿ ಭಾವಿಸಿದಲ್ಲಿ ನೀನೇ ದೇವಾ. ಎಲ್ಲೆಡೆಯಲ್ಲಿ ನಿಮ್ಮ ಮಹಾ ಪ್ರಭೆಯೇ ಮುಸುಕಿತಾಗಿ ಅಖಂಡೇಶ ನಾನು ನೀನೆಂಬುದಕ್ಕೆ ತೆರಹಿಲ್ಲ ದೇವಾ.

೮೫. ಮಾಡಿ ನೀಡಿ ಹೋಹೆನೆಂಬಾಗ ಕೈಲಾಸವೇನು ಕೈಕೂಲಿಯೆ ? ಮುಂದೊಂದು ಕಲ್ಪಿಸದೆ, ಹಿಂದೊಂದು ಭಾವಿಸದೆ ಸಲೆ ಸಂದಿದ್ದಾಗಳೇ ಮಾರಯ್ಯ ಪ್ರಿಯ ಅಮಳೇಶ್ವರ ಲಿಂಗವಿದ್ದ ಕೈಲಾಸ.

ಟಿಪ್ಪಣಿ:— ಯಾವದೇ ಕರ್ಮದ ಫಲವೆಂದು ಮುಕ್ತಿಯು ದೊರೆಯುವದು. ಅದು ಹಾಗೆ ಸಿಕ್ಕಲಿಕ್ಕೆ ಸಂತೆಯಲ್ಲಿ ಬೆಲೆಗೆ ದೊರೆಯುವ ಸರಕಲ್ಲ !

೮೬. ಕ್ಷುತ್ಪಿಪಾಸೆ, ಶೋಕ, ಮೋಹ, ಮದ, ಮತ್ಸರವೆಂಬ ಷಡ್ವರ್ಗಂಗಳು ಇಲ್ಲದೆ ಇರುತಿರ್ಪನು. ನಾಹಂ, ಕೋಹಂ, ಸೋಹಂ ಎಂಬ ಭಾವ ವಿರಹಿತನಾಗಿಪ್ಪನು. ಅಷ್ಟವಿಧಾರ್ಚನೆ ಷೋಡಶೋಪಚಾರ ವಿರಹಿತನಾಗಿಪ್ಪನು. ಕರ್ಪುರ ಅಗ್ನಿಸಂಯೋಗವಾಗಿ, ಕರ್ಪುರದ ಗುಣವಳಿದು ಅಗ್ನಿಯಾದಂತೆ, ಲಿಂಗವ ನೆನೆನೆನೆದು ಲಿಂಗವೇ ತಾನಾಗಿಪ್ಪುದೀಗ ನಿಜೈಕ್ಯಸ್ಥಲವೆಂದೆಂಬೆನಯ್ಯ ಮಹಾಲಿಂಗ ಗುರುಸಿದ್ಧೇಶ್ವರ ಪ್ರಭುವೇ.

೮೭. ಅಂತರಂಗದಲ್ಲಿ ಭಾವಿಸುವನಲ್ಲ. ಬಹಿರಂಗದಲ್ಲಿ ಬಯಸುವನಲ್ಲ. ಎರಡು ವನತಿಗಳೆದು ತನ್ನಲ್ಲಿ ತಾನೇ ಸಹಜ ನೋಡಾ. ಅಂತರಂಗ ಬಹಿರಂಗ ವಿಲ್ಲ, ಕೂಡಲ ಚನ್ನಸಂಗಾ ನಿಮ್ಮ ಶರಣಂಗೆ.

೮೮. ನಾನು ನಾನೆಂಬ ಅಹಂಕಾರಭಾವವಳಿದು ಜ್ಞಾನಾನಂದಮಯ ತಾನಾದಬಳಿಕ, ತನ್ನಿಂದನ್ಯವಾದುದೊಂದಿಲ್ಲವಾಗಿ, ಕಾಣಲೊಂದಿಲ್ಲ, ಕೇಳಲೊಂದಿಲ್ಲ, ಅರಿಯಲೊಂದಿಲ್ಲ. ಅನಾದಿ ಅವಿದ್ಯಾಮೂಲ ಮಾಯಾಜಾಲ ಚರಾಚರನಾಸ್ತಿಯಾಯಿತ್ತು. ಇನ್ನೇನ ಹೇಳಲುಂಟೇ ನಿಜೈಕ್ಯಂಗೆ? ವಿಷಯ ವಿಷಯಿಗಳೆಂಬ ಉಭಯ ಭಾವವಡಗಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೇ ತಾನಾಗಿಹನು.

ಟಿಪ್ಪಣಿ:— ಕೈವಲ್ಯದ, ಕೇವಲ ಅದ್ವೈತ ಸ್ಥಿತಿಯ ವರ್ಣನೆಯಿದು. ಅಲ್ಲಿ ಎರಡನೆಯದೆಂಬುದೇನೂ ಇಲ್ಲದ್ದರಿಂದ ಯಾವುದಕ್ಕೆ ನಾವು ವಿಷಯ ಜ್ಞಾನವೆಂದು ಹೇಳುವೆವೊ ಅದಕ್ಕೆ ಇಂಬಿಲ್ಲ.

೮೯. ಸಾತ್ವಿಕಶರಣರ ನುಡಿ ಹುಸಿಯೆ ? ಅದು ದಿಟ. ಅದು ದಿಟ. ಒಳಗೆಂಬುದೇ ದೇವಲೋಕ. ಹೊರಗೆಂಬುದೇ ಮೃತ್ಯುಲೋಕ. ಈ ಎರಡು ಲೋಕಕ್ಕೆ ಹೊರತಾಗಿ ನಾವಿರಲು ಈ ಎರಡು ಲೋಕದೊಳಗೆ ತಾವೆ ಇರಲಿ ಗುಹೇಶ್ವರಾ.

ಟಪ್ಪಣಿ:— ಈ ಸ್ಥಿತಿಯು ಒಳಹೊರಗೆಂಬುದರಾಚೆಗೆ, ದ್ವಂದ್ವಗಳಾಚೆಗೆ ಇರುವದು. ಜಂಗಮರು ಆರೋಗಣೆಗೆ ಕುಳಿತಾಗ ಬಸವ ಅಲ್ಲಮರಿಗೆ ತಡವಾಯಿತು. ಆಗ ಸಿಟ್ಟಿಗೆದ್ದು ಜಂಗಮರು 'ಇಹಪರಗಳೆರಡೂ ಇವರಿಗೆ ಸಿಗದಿರಲಿ' ಎಂದು ಇವರಿಬ್ಬರನ್ನೂ ಶಪಿಸಿದರು. ಆಗ ಅಲ್ಲಮನು ಈ ವಚನದಿಂದ ಬಸವನಿಗೆ ಸಮಾಧಾನವನ್ನು ಹೇಳಿರುವನು. ಇದೇ ಆತ್ಮಸ್ಥಿತಿಯು.

ವಿವರಣೆ

ಇನ್ನು ಸ್ವರ್ಗಸುಖ ಮತ್ತು ಮುಕ್ತಿಸುಖ ಇವುಗಳಲ್ಲಿಯ ಭೇದವನ್ನು ಸ್ಪಷ್ಟಗೊಳಿಸುವ ವಚನಗಳಿರುವವು. ಸ್ವಪ್ನಾನಂದಕ್ಕೂ ನಿದ್ರಾನಂದಕ್ಕೂ ಎಷ್ಟು ಭೇದವೊ ಅಷ್ಟೆ ಸ್ವರ್ಗಸುಖಕ್ಕೂ ಮುಕ್ತಿಸುಖಕ್ಕೂ ಭೇದವೆಂದು ಹೇಳಬಹುದು. ಸ್ವರ್ಗಸುಖವು ಒಂದು ಬಗೆಯ ಸೂಕ್ಷ್ಮವಿಷಯ ಸುಖವೇ ಹೊರತು ಹೆಚ್ಚಿನದಲ್ಲ. ಅದು ಕರ್ಮದಿಂದ, ಸತ್ಕರ್ಮದಿಂದ ಲಭ್ಯವು. ಮುಕ್ತಿಸುಖವು ಜ್ಞಾನನಿಷ್ಠೆಯಿಂದಲೇ ಸಾಧ್ಯವು. ಸ್ವರ್ಗಸುಖವು ಪುಣ್ಯಕ್ಷಯವಾಗುವವರೆಗೆ ಮಾತ್ರ ದೊರಕಬಲ್ಲದು, ಆದುದರಿಂದ ಅದು ಅಕ್ಷಯ ಪದವಲ್ಲ. ಮಾನವರ ಅತ್ಯಂತಿಕ ಧ್ಯೇಯವಾಗಲಾರದು.

ವಚನಗಳು

೯೦. ಅನ್ನವನಿಕ್ಕಿ, ನನ್ನಿಯ ನುಡಿದು, ಅರವಟ್ಟಿಗೆಯನಿಕ್ಕಿ, ಕೆರೆಯ ಕಟ್ಟಿಸಿದರೆ ಮರಣದಿಂದ ಮೇಲೆ ಸ್ವರ್ಗವುಂಟಲ್ಲದೆ ಶಿವನ ನಿಜವು ಸಾಧ್ಯವಾಗದು. ಗುಹೇಶ್ವರನ ಅರಿದ ಶರಣಂಗೆ ಅವ ಫಲವೂ ಇಲ್ಲ.

೯೧. ಕೆರೆ ದೇಗುಲಂಗಳೆಲ್ಲವೂ ಹಿಂದಣ ಅಡಿವಜ್ಜೆಗೊಳಗು. ಕರ್ಮ ಕಾಂಡಯೋಗಂಗಳೆಲ್ಲವೂ ಭವದ ತೆಕ್ಕೆಗೆ ಒಳಗು. ಹಿಂದಣ ಮುಂದಣ ಸಂದನಳಿದು ಗುಹೇಶ್ವರ ಲಿಂಗದಲ್ಲಿ ಸಂದಿರಬೇಕು ಸಿದ್ಧರಾಮಯ್ಯಾ.

ಟಪ್ಪಣಿ:— ಅನೇಕ ಕೆರೆ ಕಾಲುವೆ ಮುಂತಾದವುಗಳನ್ನು ಕಟ್ಟಿಸಿ ಪುಣ್ಯಪಡೆಯಬೇಕೆನ್ನುವ 'ಒಡ್ಡರಾಮಯ್ಯ'ನಿಗೆ ಅಲ್ಲಮನು ಬುದ್ಧಿ ಹೇಳಿದ ವಚನವಿದು.

೯೨. ಕಾಯಸಮಾಧಿಯನೊಲ್ಲೆ. ಜೀವನೆನಹುಸಮಾಧಿಯನೊಲ್ಲೆ. ಕೈಲಾಸವೆಂಬ ಭವಸಾಗರವನೊಲ್ಲೆ, ನೀ ಎನ್ನ ಅಲ್ಲಿಗೆ ಇಲ್ಲಿಗೆ ಎಳೆಯದೆ, ನಿನ್ನಲ್ಲಿ ಕೂಟಸ್ಥನ ಮಾಡಾ ನಿಃಕಳಂಕ ಮಲ್ಲಿಕಾರ್ಜುನಾ.

೯೩. ಈ ಲೋಕಕ್ಕೆ ಈ ಫಲ, ಈ ಪುಷ್ಪಕ್ಕೀ ಫಲ ಎಂಬ ಕೈಕೂಲಿಕಾರರು ಅವರೆಲ್ಲ ಕರ್ಮಿಗಳಯ್ಯಾ. ಪುಣ್ಯಪಾಪವನುಂಬ ಕರ್ಮಿಗಳಯ್ಯಾ. ಸ್ವರ್ಗನರಕವನುಂಬ ಕರ್ಮಿಗಳಯ್ಯಾ. ಒಡಲೊಡವೆ, ಪಡೆದರ್ಥ, ಮೃಡದೇವ ಸೊಡ್ಡಳನಿಗೆ ಎಂಬಾತ ಬೆಡಗಿನ ಶಿವಪುತ್ರ, ಉಳಿದವರೆಲ್ಲ ಜಗದ ಮಿತ್ರರು.

ಟಪ್ಪಣಿ:— ಸರ್ವಸ್ವವನ್ನು, ಒಡಲು, ಒಡವೆ, ಮತ್ತು ಪಡೆದ ಅರ್ಥ ಇವೆಲ್ಲವುಗಳನ್ನು ಪರಮಾತ್ಮನಿಗೆ ಸಂಪೂರ್ಣವಾಗಿ ಅರ್ಪಿಸಿ ಬಿಡುವವನೆ ನಿಜಭಕ್ತನು.

---

೬. ಸಾಕ್ಷಾತ್ಕಾರ.

ವಿವರಣೆ

ಇನ್ನು ಈ ಬಗೆಯಾಗಿ ಮೇಲೆ ವರ್ಣಿಸಲ್ಪಟ್ಟ ಮುಕ್ತಿ ಅಥವಾ ಮುಕ್ತಿಯ ಆನಂದವು ಯಾವ ಸಾಧನದಿಂದ ಪ್ರಾಪ್ತವಾಗುವದು, ಇದನ್ನು ಸ್ವಲ್ಪ ವಿಚಾರಿಸುವಾ.

ಸಾಮಾನ್ಯ ಮನುಷ್ಯನ ಜೀವನವು ವಿಷಯೇಂದ್ರಿಯಗಳನ್ನವಲಂಬಿಸಿರುವ ಸುಖದುಃಖಗಳಿಂದ ವ್ಯಾಪ್ತವಿರುವದು. ಅವನ ಸುಖತೃಷ್ಣೆಯು ಅಸೀಮವಿರುವುದರಿಂದ ಸುಖಕ್ಕಿಂತ ದುಃಖವೆ ಹೆಚ್ಚು – ಮಿತಿಮೀರಿ ಹೆಚ್ಚು – ಇರುವದೆಂದು ಅವನಿಗೆ ಪ್ರತೀತವಾಗುವದು. ತೃಷ್ಣೆಯೆಂಬುದೂ ಒಂದು ದುಃಖವೇ ಇರುವದು. ಯಾಕಂದರೆ, ಅದು ಉಂಟಾದೊಡನೆ ದುಃಖಕ್ಕೆ ಪ್ರಾರಂಭವಾಗುವದು. ಆದುದರಿಂದ ಈ ಪರಿಯ ಸುಖದುಃಖಗಳನ್ನು ದಾಟಿ ಚಿರಂತನ, ನಿರಾಲಂಬ, ನಿರ್ದೋಷ, ಸುಖವನ್ನೆ ಅರಸಬೇಕು, ಎಂಬ ಬುದ್ಧಿಯು ಮನುಷ್ಯನಲ್ಲಿ ಹುಟ್ಟುವದು. ಆ ಸುಖವೆ ಆತ್ಮಸುಖವು. ಅದು ನಿತ್ಯವಾಯಿತೆಂದರೆ ಅದೇ ಮುಕ್ತಿಯು, ಮೋಕ್ಷವು, ಶಿವೈಕ್ಯವು, ನಿಜೈಕ್ಯವು, ಲಿಂಗೈಕ್ಯವು.

ಇಂಥ ಮುಕ್ತಿಯ ನಿರಂತರ ಆನಂದವು ಅಥವಾ ಅದರ ಕಿಂಚಿದಂಶವಾದರೂ ಇಷ್ಟವು, ಧ್ಯೇಯವು, ಪ್ರಾಪ್ತವ್ಯವು, ಎಂದು ಮನುಷ್ಯನು ನಿರ್ಣಯಿಸಿದ ಬಳಿಕ ಅದನ್ನು ಹೇಗೆ ದೊರಕಿಸಬೇಕು ಎಂಬ ಪ್ರಶ್ನೆಯು ಸಹಜವೆ ಉಂಟಾಗುವದು.

ನಾನು ದುಃಖಿಯು, ಪಾಪಿಯು, ಅಲ್ಪನು, ನಿರ್ಬಲನು ಎಂಬ ಮುಂತಾದ ಭಾವಗಳು ನಮ್ಮ ದುಃಖಕ್ಕೆ ಕಾರಣವಾಗಿರುವವು. ಈ ಭಾವಗಳು ಹೋಗಬೇಕಾದರೆ, ನಾನು ಈ ದೇಹವಿರುವೆನು ಅಥವಾ ಈ ಮನಸ್ಸು ಇರುವೆನು ಅಥವಾ ಈ ಬುದ್ಧಿಯು ಇರುವೆನು, ಈ ಭಾವವು ಅಳಿದು, ನಾನು ಆತ್ಮನಿರುವೆನು, ಚೈತನ್ಯಸ್ವರೂಪನಿರುವೆನು ಎಂಬ ಭಾವವು ಬೆಳೆಯಲಿಕ್ಕೆ ಬೇಕು. ಹಾಗೆ ಆಗುವುದಕ್ಕೆ ಸ್ವರೂಪಜ್ಞಾನವೆನ್ನುವರು. ಅದೇ ಪ್ರತ್ಯಕ್ಷವಾಯಿತೆಂದರೆ ಸಾಕ್ಷಾತ್ಕಾರವೆನಿಸುವದು. ಆದುದರಿಂದ ಮುಕ್ತಿಯ ಆನಂದವು ಹೇಗೆ ದೊರೆಯುವದು ಎಂಬ ಮೇಲಿನ ಪ್ರಶ್ನೆಗೆ, ಸಾಕ್ಷಾತ್ಕಾರದಿಂದ, ಅನುಭಾವದಿಂದ, ಅನುಭವಯುಕ್ತ ಜ್ಞಾನದಿಂದ, ಪ್ರತ್ಯಕ್ಷ ಪ್ರತೀತಿಯಿಂದ ಎಂದು ವಚನಕಾರರು ಉತ್ತರವನ್ನು ಕೊಟ್ಟಿರುವರು. ಇನ್ನು ಈ ಸಾಕ್ಷಾತ್ಕಾರವೆಂದರೇನು ?

ಸಾಕ್ಷಾತ್ಕಾರವೆಂದರೆ ಆತ್ಯಂತಿಕ ಸತ್ಯದ ಪ್ರತ್ಯಕ್ಷಜ್ಞಾನವು. ಭೌತಿಕ ಪದಾರ್ಥಗಳ ಸತ್ಯಜ್ಞಾನಕ್ಕೆ ನಾವು ಪ್ರತ್ಯಕ್ಷಜ್ಞಾನವೆನ್ನುವಂತೆ ಅಧ್ಯಾತ್ಮಿಕ ಸತ್ಯದ ಪ್ರತ್ಯಕ್ಷ ಜ್ಞಾನಕ್ಕೆ ಸಾಕ್ಷಾತ್ಕಾರ – ಅನುಭಾವ ಎಂಬ ಹೆಸರು. ನಾವು ಕಣ್ಣು ಕಿವಿಗಳಿಂದ ರೂಪಶಬ್ದಗಳ ಪ್ರತ್ಯಕ್ಷ ಅನುಭವವನ್ನು ಪಡೆಯುವಂತೆ ಶುದ್ಧ, ನಿರ್ಮಲ, ನಿರಪೇಕ್ಷ ಅಂತಃಕರಣದಿಂದ ಪರಾತ್ಪರ ಸತ್ಯದ ಅನುಭವ ಪಡೆಯುವುದೆ ಸಾಕ್ಷಾತ್ಕಾರವು. ಸೂರ್ಯನು ನಮ್ಮ ಕಣ್ಣಿಗೆ ಪ್ರತ್ಯಕ್ಷ ಕಾಣುವಂತೆ, ಗುಡುಗು ನಮ್ಮ ಕಿವಿಗೆ ಪ್ರತ್ಯಕ್ಷ ಕೇಳುವಂತೆ, ಈ ವಿಶ್ವದ ಪರಮಸತ್ಯವು ಸಾಕ್ಷಾತ್ಕಾರಿಯ ಅಂತಃಕರಣಕ್ಕೆ ಪ್ರತ್ಯಕ್ಷ ಪ್ರತೀತವಾಗುವದು. ಈ ಪ್ರತೀತಿಯು ಸ್ಫುರಣಾತ್ಮಕವಿರುವದು; ಆದುದರಿಂದ ಅದು ಬರಿಯ ತರ್ಕಪ್ರಧಾನ ಬುದ್ಧಿಗೆ ಅಗಮ್ಯವೂ ಶಬ್ದಾತೀತವೂ ಇರುವದು. ಈ ಪ್ರತೀತಿಯೆ ಸತ್ಯದ ಸಾಕ್ಷಿಯು. ಈ ಪ್ರತೀತಿಯು ಅಂತಃಕರಣದಲ್ಲಿ ನೆಲೆಗೊಂಡು ಯಾವನಲ್ಲಿ ನಿತ್ಯವಾಗುವುದೊ ಅವನು ಪೂರ್ಣ ಸಾಕ್ಷಾತ್ಕಾರಿಯೆನಿಸುವನು; ಮತ್ತು ಅವನೆ ಪೂರ್ಣಾನಂದ ಸಾಮ್ರಾಜ್ಯದ ಸಮ್ರಾಟನಾಗುವನು.

ಸಾಕ್ಷಾತ್ಕಾರದಿಂದ ವ್ಯಕ್ತಿಗೆ ತನ್ನ ಮತ್ತು ಪರಮಾತ್ಮನ ನಿಜ ಸಂಬಂಧವು ತಿಳಿದು, ಅಹಂಕಾರಾದಿ ಸಂಕುಚಿತ ಭಾವಗಳಳಿಯುವವು. ಅಹಂಕಾರದ ಮೂಲಕ ಹುಟ್ಟುವ ಎಲ್ಲ ಸುಖದುಃಖಗಳು ಅಡಗಿ ಅವನು ಎಲ್ಲೆಲ್ಲಿಯೂ ವ್ಯಾಪ್ತವಿರುವ ಪರಮಾನಂದದ ಸ್ವಾಮಿಯಾಗುವನು.

ಸಾಕ್ಷಾತ್ಕಾರವು ಎರಡು ಬಗೆಯದ್ದಿರಬಲ್ಲದು; ಒಂದು ನಿತ್ಯ, ಇನ್ನೊಂದು ಅನಿತ್ಯ. ಕ್ಷಣಿಕವಾಗಿ ಯಾವಾಗಾದರೊಮ್ಮೆ, ಇದೇ ಸತ್ಯ, ಎಂದು ಮಿಂಚಿನಂತೆ ಅಂತಃಕರಣಕ್ಕೆ ಹೊಳೆಯುವದು ಅನಿತ್ಯಸಾಕ್ಷಾತ್ಕಾರವೆನಿಸಿದರೆ, ಅದೇ ಮಿಂಚು ಸೂರ್ಯನಂತೆ ನಿತ್ಯ ಮತ್ತು ನಿಚ್ಚಳವಾಯಿತೆಂದರೆ ನಿತ್ಯಸಾಕ್ಷಾತ್ಕಾರವೆನಿಸುವದು. ಅನಿತ್ಯ ಸಾಕ್ಷಾತ್ಕಾರದಿಂದ ಮನಸ್ಸಿನಲ್ಲಿ ಅಡಗಿದ ಸಂಶಯಗಳು ಅಳಿದು, ಇದೇ ಸತ್ಯ, ಎಂಬ ದೃಢವಾದ ಮನಪರಿಕೆಯಾಗಿ, ಆ ಸಾಧಕನು ಆ ಸಾಕ್ಷಾತ್ಕಾರವನ್ನು ನಿತ್ಯಗೊಳಿಸಲು ನಿರಂತರ ಯತ್ನಿಸುವನು. ನಿತ್ಯಸಾಕ್ಷಾತ್ಕಾರದಿಂದ ಸಾಧಕನು ಕೃತಕೃತ್ಯನಾಗಿ ಅತೀತಸ್ಥಿತಿಯನ್ನು ಪಡೆಯುವನು.

ಇನ್ನು ಈ ಸಾಕ್ಷಾತ್ಕಾರದ ಬಗ್ಗೆ ಇರುವ ಹಲವು ವಚನಗಳನ್ನು ನೋಡುವ.

ವಚನಗಳು

೯೪. ಅನಂತಕಾಲ ಹೋಗಿ ತರುಮರಾದಿಗಳಲ್ಲಿ ತಪವಿರುವದನು ಒಂದು ದಿನ ಗುರುಚರಣಸೇವೆ ಸಾಲದೆ ಅಯ್ಯ ? ಅನಂತಕಾಲ ಗುರುಚರಣ ಸೇವೆ ಮಾಡುವುದು ಒಂದು ದಿನ ಲಿಂಗಪೂಜೆ ಸಾಲದೆ ಅಯ್ಯ ? ಅನಂತಕಾಲ ಲಿಂಗಪೂಜೆ ಮಾಡುವದನು ಒಂದು ದಿನ ಜಂಗಮ ತೃಪ್ತಿ ಸಾಲದೆ ಅಯ್ಯ ? ಅನಂತಕಾಲ ಜಂಗಮ ತೃಪ್ತಿ ಮಾಡುವದನು ಒಂದು ನಿಮಿಷ ನಿಮ್ಮ ಶರಣರ ಅನುಭಾವ ಸಾಲದೆ ಕೂಡಲ ಚನ್ನಸಂಗಮದೇವಾ ?

ಟಪ್ಪಣಿ:— ತಪ, ಗುರುಪೂಜೆ, ಲಿಂಗಪೂಜೆ, ಜಂಗಮ ಪೂಜೆ, ಅನುಭಾವ ಇವು ಉತ್ತರೋತ್ತರ ಶ್ರೇಷ್ಠ ಎಂದು ಅಭಿಪ್ರಾಯವು.

೯೫. ಅನುಭಾವವಿಲ್ಲದ ಭಕ್ತಿ ಅರಿವಿಂಗೆ ಬಾರದು. ಅನುಭಾವವಿಲ್ಲದ ಸಂಗ ಸಮರಸಸುಖಕ್ಕೆ ನಿಲುಕದು. ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು. ಅನುಭಾವವಿಲ್ಲದೆ ಏನೇನೂ ಅರಿಯಬಾರದು. ತನ್ನಲ್ಲಿ ಸನ್ನಿಹಿತ ಉಳ್ಳೊಡೆ ಶಿವಶರಣರ ಸಂಗವೇತಕ್ಕೆನಲುಂಟೆ ? ಕೂಡಲ ಸಂಗಮದೇವಯ್ಯ, ನಿಮ್ಮ ಅನುಭಾವ ಮಾತಿನ ಮಥನವೆಂದು ನುಡಿಯಬಹುದೇ ಪ್ರಭುವೇ ?

ಟಪ್ಪಣಿ:— ಅನುಭಾವದ ಮಹತ್ವವು ಎಷ್ಟಿರುವದು ಎಂಬುದು ಇಲ್ಲಿ ಸ್ಪಷ್ಟ ಹೇಳಿದೆ. ಅದೇ ಪೂರ್ಣಜ್ಞಾನದ ದ್ವಾರವು.

೯೬. ಎನಗೆ ಹರಿಯಿತ್ತು ತಮವೆಂಬ ಸಂಸಾರಬಂಧ. ಉಡಿಗಿ ಉಡಿಗಿ ಕಂಡಿಹೆನೆಂಬ ಭ್ರಮೆ ಭಾವಕ್ಕೆ ಬಯಲಾಗಿತ್ತು. ನಿತ್ಯನಿರಂಜನ ಪರಂಜ್ಯೋತಿ

ಪ್ರಕಾಶವಾಯಿತ್ತು. ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಮಲ್ಲಿ ಕಾರ್ಜುನ ದೇವಯ್ಯ, ಪ್ರಭುದೇವರ ಕಾರುಣ್ಯದಿಂದೆ ಬದುಕಿದೆನು.

ಟಪ್ಪಣಿ:— ಶುದ್ಧ ಸಿದ್ಧ ಪ್ರಸಿದ್ಧ ಇವುಗಳ ಅರ್ಥವನ್ನು ೫೩ಕ್ಕೆ ಬರೆದ ಟಿಪ್ಪಣಿಯಲ್ಲಿ ನೋಡಬೇಕು.

೯೭. ಹಾಲುಂಡ ಸವಿಯ, ಮೇಲುಂಡ ಪಂಕ್ತಿಯ ಹೇಳಬಹುದಲ್ಲದೆ ಸುಖಸೋಂಕಿನ ಸ್ವಾನುಭಾವವ ಹೇಳಬಾರದು ಕೇಳಬಾರದು. ಇಂಬಿನ ಸೋಂಕುಸಂಬಂಧವಳಿದ ಬಳಿಕ ಉಪಚಾರವುಂಟೀ, ಕೂಡಲ ಚನ್ನಸಂಗಯ್ಯನ ಅರುಹಿಂದಲೆ ಅರಿದೆನಲ್ಲದೆ ಎನಗೆ ಬೇರೆ ಸ್ವತಂತ್ರವಿಲ್ಲ ಕೇಳಯ್ಯ.

ಟಪ್ಪಣಿ:— ಇಂಬಿನ ಸೋಂಕು ಸಂಬಂಧವಳಿಯುವುದೆಂದರೆ ತೆರ ಹಿಲ್ಲದ ಚಿದ್ಸುಖದ ಅನುಭವವಾಗುವದು. ಆ ಅನುಭಾವವು ಅವರ್ಣನೀಯವು ಎಂದು ಅರ್ಥವು.

೯೮. ಅರುಹಿನ ತೃಪ್ತಿಗೆ ಅನುಭಾವದಾಶ್ರಯ. ಲಿಂಗದ ಅನುಭಾವ ದಿಂದೆ ನಿಮ್ಮ ಕಂಡೆನು. ನಿಮ್ಮ ಕಂಡೆನ್ನ ಮರೆದೆ ಕಾಣಾ ಪ್ರಭುವೆ, ಕೂಡಲ ಚನ್ನಸಂಗಮದೇವಾ.

೯೯. ನಾ ಸತ್ತೆನೆಂದು ಹೆಣ ಕೂಗಿದುದುಂಟೇ? ಬಯಚಿಟ್ಟ ಬಯಕೆ ಕರೆದುದುಂಟೇ? ಹೆಪ್ಪಿಟ್ಟ ಹಾಲು ಸಿಹಿಯಪ್ಪುದುಂಟೇ? ಈ ಮಾತು ಒಪ್ಪ ವಪ್ಪುದೇ ಗುಹೇಶ್ವರಲಿಂಗಕ್ಕೆ?

ಟಪ್ಪಣಿ:— ಇದು ಅಲ್ಲಮನು ಅಕ್ಕ ಮಹಾದೇವಿಗೆ ಕೇಳಿದ ಪ್ರಶ್ನೆಯು. ಮುಕ್ತನಾದವನು ಸಂಸಾರದಲ್ಲಿ ಸೇರಬಲ್ಲನೆ ಎಂಬುದೆ ಆ ಪ್ರಶ್ನೆ. ಅವನು ಸೇರಿದರೂ ಅಲಿಪ್ತನಿರಬಲ್ಲನೆಂದು ಆಕೆ ಉತ್ತರಕೊಟ್ಟಳು.

೧೦೦. ....ಕಾಂತಿಯಿಂ ಈರೇಳು ಭುವನಮಂ ಬೆಳಗುವ ದಿವ್ಯಸ್ವರೂ ಪನ ಕಂಡೆ ನಾನು! ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು! ಗಂಡಗಂಡರೆಲ್ಲರ ಹೆಂಡರಾಗಿ ಅಳುವ ಗರುವನ ಕಂಡೆ! ನಾನು ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ ಪರಮಗುರು ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.

೧೦೧. ಜಗದಗಲದ ಮಂಟಪಕ್ಕೆ ಮುಗಿಲಗಲದ ಮೇಲುಕಟ್ಟನಲ್ಲಿ ವಿಚಿತ್ರವ ನೋಡುತ್ತೆ, ನೋಡುತ್ತೆ, ಧ್ಯಾನವಿಶ್ರಾಂತಿಯಲ್ಲಿ ದಿಟದಿಟವೆಂಬು

ದೊಂದು ದರುಶನವ ನೋಡುತ್ತ ಗಗನಗಂಭೀರದಲ್ಲಿ ಉದಯವಾಯಿತ್ತ ಕಂಡೆ, ಗುಹೇಶ್ವರಲಿಂಗವು ತಾನಾಗಿ.

೧೦೨. ನಿಮ್ಮ ನೋಟವನಂತಸುಖ, ನಿಮ್ಮ ಕೂಟ ಪರಮ ಸುಖವು. ಅಪ್ಪಕೋಟ ರೋಮಂಗಳೆಲ್ಲ ಕಂಗಳಾಗಿ ನೋಡುತ್ತಿದ್ದೆನು, ಕೂಡಲಸಂಗಮ ದೇವಯ್ಯಾ! ನಿಮ್ಮ ನೋಡಿ ನೋಡಿ ಎನ್ನ ಮನದಲ್ಲಿ ರತಿಹುಟ್ಟ ನಿಖಿರ್ದವೆನ್ನ ಕಂಗಳು.

೧೦೩. ಕಾಣಬಾರದ ವಸ್ತು ಕೈಸೇರಿತಯ್ಯ. ಆನಂದದಿಂದ ಆಡುವೆ, ಎನ್ನ ಕಣ್ಣತುಂಬ ನೋಡುವೆ, ಎನ್ನ ಮನ ಬಲಿದು ಭಕ್ತಿಯ ಮಾಡುವೆ, ಕೂಡಲಸಂಗಯ್ಯ ನಿನಗೆ.

೧೦೪. ನೆನಹಿನ ನಿಧಿಯ ನೋಡಾ. ಎನ್ನ ಅರಿವಿನ ಘನವ ನೋಡಾ. ಅಹಾ ಎನ್ನ ಪುಣ್ಯವೆ, ಅಹಾ ಎನ್ನ ಕಂಗಳ ಮನೆಯ ಮಾಡಿಕೊಂಡಿಪ್ಪ ನಿತ್ಯದ ಬೆಳಗೆ, ಎನ್ನ ಧ್ಯಾನದೊಳಗಣ ಸುಗ್ಗಿಯೆ, ನಿಃಕಳಂಕ ಮಲ್ಲಿಕಾರ್ಜುನ, ನಿಮ್ಮ ಶರಣ ಪ್ರಭುವಿನ ಪಾದಕ್ಕೆ ನಮೋ ನಮೋ ಎನುತಿರ್ದೆನು.

ಟಪ್ಪಣಿ:— ೧೦೦–೧೦೪ ಈ ವಚನಗಳು ಪ್ರತ್ಯಕ್ಷ ದರ್ಶನವನ್ನೂ ಅದರಿಂದ ಆಗುವ ಆನಂದ ಮತ್ತು ಉಂಟಾಗುವ ಧನ್ಯಭಾವ ಇವುಗಳನ್ನೂ ಬಣ್ಣಿಸುವವು.

೧೦೫. ಕಲ್ಲೊಳಗಿನ ಕಿಚ್ಚು ಉರಿಯಬಲ್ಲುದೆ? ಬೀಜದೊಳಗಿನ ವೃಕ್ಷ ಉಲಿಯ ಬಲ್ಲುದೆ? ತೋರಲಿಲ್ಲಾಗಿ ಬೀರಲಿಲ್ಲಾರಿಗೆಯು, ಗುಹೇಶ್ವರಾ, ನಿಮ್ಮ ನಿಲವ ಅನುಭವ ಸುಖ ಬಲ್ಲ.

೧೦೬. ಅನುಭಾವದಿಂದ ಹುಟ್ಟಿತ್ತು ಲಿಂಗ, ಅನುಭಾವದಿಂದ ಹುಟ್ಟಿತ್ತು ಜಂಗಮ, ಅನುಭಾವದಿಂದ ಹುಟ್ಟಿತ್ತು ಪ್ರಸಾದ. ಅನುಭಾವದನುವಿನಲ್ಲಿ ಗುಹೇಶ್ವರಾ ನಿಮ್ಮ ಶರಣ ಅನುಪಮಸುಖಿ.

೧೦೭. ಎನ್ನ ಮನದ ಕೊನೆಯ ಮೊನೆಯ ಮೇಲೆ ಅಂಗವಿಲ್ಲದ ರೂಪವ ಕಂಡು ಮರುಳಾದೆನವ್ವಾ! ಆತನ ಕಂಡು ಬೆರಗಾದೆನವ್ವಾ! ಎನ್ನಂತ ರಂಗದ ಆತ್ಮನೊಳಗೆ ಅನುವಿಷ ನಿಜೈಕ್ಯ ಗುಹೇಶ್ವರನ ಕಂಡು.

೧೦೮. ನಾನೊಂದು ನುಡಿದರೆ ತಾವೊಂದು ನುಡಿವರು. ತಾವೊಂದು ನುಡಿದರೆ ನಾನೊಂದು ನುಡಿವೆನು. ಇದು ಕಾರಣ ಅವರಿಗೆ ನಮಗೆ ಮೇಳವಿಲ್ಲ.

ಮೇಳವಿಲ್ಲದ ಬಳಿಕ ಅನುಭವಗೋಷ್ಠಿಯಿಲ್ಲ. ಅನುಭವಗೋಷ್ಠಿ ಇಲ್ಲದ ಗುಹೇಶ್ವರನು ಇಲ್ಲಿಲ್ಲ ಕೇಳಾ ಚನ್ನಬಸವ.

೧೦೯. ವೃತ್ತವಾಸಿಯಾಗಿರ್ದು ಭಿಕ್ಷಾಪರಿಣಾಮಿಯಾಗಿರ್ದರೇನು ? ಉಟ್ಟುದವಳಿದು ಬತ್ತಲೆಯಾದರೇನು ? ಕಾಲರಹಿತರಾದರೇನು ? ಕರ್ಮರಹಿತರಾದರೇನು ? ಕೂಡಲ ಚನ್ನನ ಅನುಭಾವವನರಿಯದವರು ಏಸುಕಾಲ ಇರ್ದರೇನು ? ವ್ಯರ್ಥಕಾಣೆಯೊ.

೧೧೦. ಅನುಭಾವ ಅನುಭಾವವೆಂದೆಂಬಿರಿ. ಅನುಭಾವವೆಂಬುದು ನೆಲದ ಮತೆಯ ನಿಧಾನ ಕಾಣೆಕೋ. ಅನುಭಾವವೆಂಬುದು ಅಂತರಂಗದ ರತ್ನ ಕಾಣೆ ಭೋ. ಅನುಭಾವವೆಂಬುದು ಶಿಸುಕಂಡ ಕನಸು ಕಾಣೆ ಭೋ. ಅನುಭಾವವೆಂಬುದು ರಚ್ಚೆಯ ಮಾತೇ ? ಅನುಭಾವವೆಂಬುದು ಸಂತೆಯ ಸುದ್ದಿಯೆ ? ಅನುಭಾವವೆಂಬುದು ಬೀದಿಯ ಪಸಾರವೇ ? ಏನೆಂಬೆ ಹೇಳಾ ಮಹಾಘನವನು. ಅನೆ ಮಾನದೊಳಡಸುವುದೇ ದರ್ಪಣದೊಳಡಗುವದಲ್ಲದೆ ? ಕಂಡಕಂಡಲ್ಲಿ ಗೋಷ್ಠಿಯಾಗಿ, ನಿಂದಲ್ಲಿಯೆ ಅನುಭಾವ ಬಂದಬಂದಲ್ಲಿ ಪ್ರಸಂಗವಮಾಡುವ ಹಂದಿಕುನ್ನಿಗಳನೇನೆಂಬೆನಯ್ಯ ಕೂಡಲಸಂಗಮದೇವಾ ?

೧೧೧. ಅನುಭಾವವ ನುಡಿವ ಅಣ್ಣಗಳಿರಾ, ಅನುಭಾವವೆತ್ತ ನೀವೆತ್ತ ಹೋಗಿರಣ್ಣಾ. ಅನುಭಾವವೆಂಬುದು ಆತ್ಮವಿದ್ಯೆ. ಅನುಭಾವವೆಂಬುದು ತಾನಾರೆಂಬುದ ತೋರುವದು. ಅನುಭಾವವೆಂಬುದು ನಿಜನಿವಾಸದಲ್ಲಿರಿಸುವದು. ಇಂತಪ್ಪ ಅನುಭಾವದನುವನರಿಯದೆ, ಶಾಸ್ತ್ರಜಾಲದ ಪಸಾರವನಿಕ್ಕಿ, ಕೊಳ್ಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ, ನೀವೆತ್ತ ಸ್ವತಂತ್ರ ಸಿದ್ಧಲಿಂಗೇಶ್ವರನ ಅನುಭಾವವೆತ್ತ, ಹೋಗಿರಣ್ಣಾ.

ಟಿಪ್ಪಣಿ:— ಇಲ್ಲಿ ಅನುಭಾವದ ಸ್ಪಷ್ಟ ವ್ಯಾಖ್ಯೆಯೆ ಕೊಡಲ್ಪಟ್ಟಿದೆ.

ವಿವರಣೆ

ಮೇಲಿನ ವಚನಗಳಲ್ಲಿ ಸಾಕ್ಷಾತ್ಕಾರದ ವಿವಿಧಾಂಗಗಳು ಉತ್ತಮ ರೀತಿಯಿಂದ ವರ್ಣಿಸಲ್ಪಟ್ಟಿರುವವು. 'ಅನುಭಾವವೆಂದರೆ ಆತ್ಮವಿದ್ಯೆ,' 'ತಾನೆಂಬುದ ತೋರುವ' ಪ್ರತ್ಯಕ್ಷಜ್ಞಾನವು. ಅದು ಜಪತಪಾದಿಗಳಿಗಿಂತ, ಪೂಜೆಪುರಸ್ಕಾರಗಳಿಗಿಂತ ಶ್ರೇಷ್ಠವು. ಅದು ಭಕ್ತಿಯ ಆಧಾರವು, ಅರಿವಿನ ಆಶ್ರಯವು, ಅದು ಎಲ್ಲವುಗಳ ಮೂಲವು. ಯಾಕಂದರೆ, ಸಾಕ್ಷಾತ್ಕಾರದ ಹೊರತು ಅವೆಲ್ಲ ನೀರಸ ಮತ್ತು ಜೊಳ್ಳು ಇರುವವು. ಅನುಭವವಿದ್ದವರು ಅದರ ಬಗ್ಗೆ ತಮ್ಮತಮ್ಮೊಳಗೆ ಮಾತಾಡಿ ನಲಿದಾಡ

ಬಹುದು. ಅದರ ಸೊಬಗನ್ನರಿಯದವರೊಡನೆ ಮಾತ್ರ ಆ ಮಾತು ಸಲ್ಲದು. ಸವಿಗಾರರಿಲ್ಲದೆ ಸಾಹಿತ್ಯಸಂಗೀತಾದಿ ಕಲೆಗಳ ರುಚಿ ತೋರುವುದೆ? ಸಾಕ್ಷಾತ್ಕಾರವು ಪ್ರಕಾಶರೂಪವಿರುವದು. ಅದು ಅಂತರಂಗದ ಬೆಳಕು, ಅಂತರ್ಜ್ಯೋತಿಯದು. ಅದು ನಿಜವಾಗಿ ಶಬ್ದದಿಂದ ವರ್ಣಿಸಲಸಾಧ್ಯವು. 'ಸತ್ತ ಹೆಣ ನಾ ಸತ್ತೆನೆಂದು' ಕೂಗಿದುದುಂಟೆ ಎಂದು ವಚನಕಾರರು ಸಾಕ್ಷಾತ್ಕಾರದ ಅವರ್ಣನೀಯತ್ವವನ್ನು ವ್ಯಕ್ತಗೊಳಿಸಿರುವರು. ಇದಲ್ಲದೆ ಸಾಕ್ಷಾತ್ಕಾರವು ಆನಂದಮಯವು, ಆನಂದಪರಿಪೂರ್ಣವು, ಸರ್ವಸಂಶಯ ಪರಿಹಾರಕವು.

---

೭. ಸಾಕ್ಷಾತ್ಕಾರಿಯ ನಿಲವು.

ವಿವರಣೆ

ಸಜ್ಜನರ ಮನೋಭೂಮಿಯಲ್ಲಿ, ನಿರ್ಮಲ ಸತ್ಯಾಗ್ರಹ ಅಂತಃಕರಣದಲ್ಲಿ ಸತ್ಯದ ಅವತಾರವು, ಸತ್ಯದ ಪ್ರತ್ಯಕ್ಷಜ್ಞಾನವು ಆಯಿತೆಂದರೆ ಅದು ಸಾಕ್ಷಾತ್ಕಾರವೆನಿಸುವದು. ಅದು ಪ್ರಕಾಶರೂಪವಿರುವದು, ಅವರ್ಣನೀಯವಿರುವದು, ಆನಂದದಾಯಕವಿರುವದು. ಅದೇ ಸ್ಥಿರಚಿರವಾಯಿತೆಂದರೆ ಸಾಕ್ಷಾತ್ಕಾರಿಯ ಅಹಂಕಾರವು ಅಳಿಯುವದು, ತಾನು ಒಂದು ವ್ಯಕ್ತಿ ಎಂಬ ಸಂಕುಚಿತಭಾವವು ನಷ್ಟವಾಗಿ ತಾನೊಂದು ವಿಶ್ವಾತ್ಮನ ಅಂಶಮಾತ್ರನು, ಎಂಬ ಅರಿವು ನೆಲೆಗೊಳ್ಳುವದು. ಸರ್ವಸಂಶಯಗಳ ಪರಿಹಾರವಾಗಿ ಅವನು ದೈವೀಸ್ಫೂರ್ತಿಯಿಂದ ಪರಮಾತ್ಮನ ಸಂಕಲ್ಪವನ್ನರಿದು, ಅದಕ್ಕನುಸರಿಸಿ ಕೇವಲ ಅವನ ನಿಮಿತ್ತಮಾತ್ರನಾಗಿ ವರ್ತಿಸುವನು. ಮನುಷ್ಯನು ಪಡೆಯತಕ್ಕ ಅತ್ಯಂತ ಶ್ರೇಷ್ಠಸ್ಥಿತಿಯು ಇದೇ. ಸ್ಥಿರ ಚಿರ ಸಾಕ್ಷಾತ್ಕಾರವೇ ಮುಕ್ತಸ್ಥಿತಿಯ ಲಕ್ಷಣವು. ಆ ಸ್ಥಿತಿಯಲ್ಲಿ ಮನುಷ್ಯನಿಗೆ ಪರಮಾನಂದವಾಗುವದು. ಪರಮಾತ್ಮನ ವಿಭುತ್ವವೂ ಅನಂತ ಗುಣತ್ವವೂ ಅನಂತಶಕ್ತಿತ್ವವೂ ಸಾಕ್ಷಾತ್ಕಾರಿಗೆ ಆಗ ಕ್ಷಣಶಃ ಪ್ರತೀತವಾಗುವದು, ಅಥವಾ ಸಾಕ್ಷಾತ್ಕಾರಿಯು ಆ ಅನುಭವದಲ್ಲಿಯೆ ಸತತ ಲೀನನಿರುವನೆಂದು ಹೇಳಿದರೂ ಸಲ್ಲುವದು. ಆಗ ಅವನು 'ಸಚ್ಚಿದಾನಂದ ನಿತ್ಯ ಪರಿಪೂರ್ಣ'ನ ಪ್ರೇರಣೆಯಿಂದ ವರ್ತಿಸುವನು. ಆ ವ್ಯಕ್ತಿಯ ಅಹಂಗುಣವು

(ನಾನು ಕರ್ತೃ, ಭೋಕ್ತೃ ಎಂಬ ಭಾವವು) ನಷ್ಟವಾಗಿ ಅವನು ದ್ವಂದ್ವಾತೀತ, ತ್ರಿಗುಣಾತೀತ ಅವಸ್ಥೆಯ ಅನುಭವವನ್ನು ಪಡೆಯುವನು.

ಕೋಮಲವಾದ ಹಸುಂಕೂಸು, ಇಲ್ಲವೆ ನಿಸರ್ಗಶಕ್ತಿಗಳಾದ ನದಿ ನಿರ್ಝರಗಳು, ಗುಡುಗುಮಿಂಚುಗಳು, ಗಾಳಿಮೋಡಗಳು, ಯಾವ ಸಹಜತೆಯಿಂದ ವರ್ತಿಸುವವೊ ಅಥವಾ ಸ್ಫುರಣಹೊಂದಿದ ಕವಿಯು ಯಾವ ಅನಹಂಕಾರದಿಂದಲೂ ಅನಾಸಕ್ತಿಯಿಂದಲೂ ಲೀಲಾಭಾವದಿಂದಲೂ ಕಾವ್ಯವನ್ನು ಸುರುವನೋ, ಅದೇ ರೀತಿ, ಸಾಕ್ಷಾತ್ಕಾರಿಯು ತಾನು ಯಂತ್ರ ಪರಮಾತ್ಮನು ಯಂತ್ರವಾಹಕ, ಎಂಬ ಭಾವದಿಂದ ಆಚರಿಸುವನು. ಅವನೇ ಸಿದ್ಧನು, ಅನುಭಾವಿಯು, ಮುಕ್ತನು, ಸತ್ಯದೊಡನೆ ಸಮರಸವನ್ನೈದಿದವನು.

ಬಾಹ್ಯೇಂದ್ರಿಯಗಳಿಂದ ಅವನು ಯಾವದೇ ಕಾರ್ಯವನ್ನು ಮಾಡುತ್ತಿದ್ದರೂ ಅವನ ಅಂತರಂಗವು ಪರಮಾತ್ಮನಲ್ಲಿ ಲೀನವಿದ್ದು ಪರಮಾತ್ಮ ಪ್ರೇರಣೆಯಿಂದಲೆ ಆ ಸಾಕ್ಷಾತ್ಕಾರಿಯು ನುಡಿಯುವನು, ನಡೆಯುವನು, ಜೀವಿಸುವನು. ಹೊರಗಣ ಸುಖದುಃಖಗಳಿಂದ ಅವನು ಅಲಿಪ್ತನೂ ಪುಣ್ಯ-ಪಾಪಗಳಿಂದ ದೂರನೂ ದ್ವಂದ್ವಾತೀತನೂ ಇರುವನು.

ಮುಕ್ತನಿಗೂ ಸಾಕ್ಷಾತ್ಕಾರಿಗೂ ಏನು ಸಂಬಂಧ ಎಂದು ಕೇಳಿದರೆ, ಸಾಕ್ಷಾತ್ಕಾರ ಇದು ಮೊದಲನೆಯ ಮೆಟ್ಟಲು, ಆ ಬಳಿಕ ಮುಕ್ತಿ ದೊರಕುವದು ಎಂದು ಹೇಳಬಹುದು. ಸಾಕ್ಷಾತ್ಕಾರದ ಸಹಜ ಪರಿಣಾಮವೆ ಮುಕ್ತಿಯು.

ಇನ್ನು ಸಾಕ್ಷಾತ್ಕಾರಿಯ ನಿಲವಿನ ಬಗ್ಗೆ ವಚನಕಾರರು ಏನು ಅನ್ನುವರು ನೋಡುವ.

ಈ ಕೆಳಗೆ ಮೊದಲು ಸಾಕ್ಷಾತ್ಕಾರಿಯ ಐಕ್ಯಾನುಭವವು ವರ್ಣಿಸಲ್ಪಟ್ಟಿದೆ. ಪರಮಾತ್ಮನಲ್ಲಿ ಪೂರ್ಣ ಲೀನನಾದುದರಿಂದ ಅವನು ತೆರಪಿಲ್ಲದಂತೆ ಇರುವನು ಮತ್ತು ಐಕ್ಯಸುಖವನ್ನನುಭವಿಸುವನು.

ವಚನಗಳು

೧೦೨. ನೀನಾನೆಂಬುಭಯ ಸಂಗವಳಿದು, ತಾನುತಾನಾದ ತ್ರಿಕೂಟವೆಂಬ ಮಹಾಗಿರಿಯ ತುಟ್ಟತುದಿಯ ಮೆಟ್ಟನೋಡಲು, ಬಟ್ಟಬಯಲು ಕಾಣಬಹುದು ನೋಡಾ! ಆ ಬಯಲ ಬೆರಸುವರೆ ತ್ರಿಕೂಟಗಿರಿಯೊಳಗೊಂದು

ಕಾಣಬಾರದ ಕದಳಿಯುಂಟು ನೋಡಾ! ಆ ಕದಳಿಯ ಕಳದಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ನೋಡಾ! ನಡೆಯಲ್ಲಿಗೆ ತಾಯೆ. ಗುಹೇಶ್ವರಲಿಂಗದಲ್ಲಿ ಪರಮಪದವಿ ನಿನಗೆ ಸ್ವಯವಹುದು ನೋಡಾ!

ಟಪ್ಪಣಿ:—ಅಲ್ಲಮನು ಮಹಾದೇವಿಯಕ್ಕನಿಗೆ ನುಡಿದ ವಚನವಿದು.

೧೦೩. ಒಡಲಿಲ್ಲದ, ನುಡಿಯಿಲ್ಲದ, ಕಡೆಯಿಲ್ಲದ ನಲ್ಲನ ಒಡಗೂಡಿ ಸುಖಿಯಾದೆ ಕೇಳಿರಯ್ಯಾ. ಭಾಷೆ ಪೈಸರವಿಲ್ಲ. ಓಸರಿಸೆನನ್ಯಕ್ಕೆ. ಆಶೆಮಾಡೆನು ಮತ್ತೆ ಭಿನ್ನಸುಖಕ್ಕೆ. ಆರಳಿದು ಮೂರಾಗಿ, ಮೂರಳಿದು ಎರಡಾಗಿ, ಎರಡಳಿದು ಒಂದಾಗಿ ನಿಂದೆಸಯ್ಯಾ. ಬಸವಣ್ಣ ಮೊದಲಾದ ಶರಣರಿಗೆ ಶರಣಾರ್ಥಿ. ಪ್ರಭುವಿಂದ ಕೃತಕೃತ್ಯಳಾದೆ. ನಾನು ಮರೆಯಲಾಗದೆಂದು, ನಾನು ನಿಮ್ಮ ಶಿಸುವೆಂದು, ಎನ್ನನು ಚನ್ನಮಲ್ಲಿಕಾರ್ಜುನ ಬೆರಸೆಂದು ಹರಸುತ್ತಿಹುದು.

ಟಪ್ಪಣಿ:— ಮೊದಲು ಇದ್ದ ಆರು ಅಂಗಸ್ಥಳಗಳು ತ್ಯಾಗಾಂಗ, ಭೋಗಾಂಗ, ಯೋಗಾಂಗ ಎಂದು ಮೂರೇ ಆಗಿ, ಅವು ಮತ್ತೆ ಲಿಂಗ ಮತ್ತು ಅಂಗ ಎಂದು ಎರಡೇ ಉಳಿದು, ಅವುಗಳಲ್ಲಿ ಅಂಗವು ಲಿಂಗದಲ್ಲಿ ಕೂಡಿ ಒಂದೇ ಆಯಿತೆಂದರೆ ಒಂದೇ ವಸ್ತುವು ಉಳಿಯುವದು ಎಂದರ್ಥ.

೧೦೪. ಸ್ಫಟಿಕದ ಘಟದೊಳಗೆ ಎತ್ತಿದ ಜ್ಯೋತಿ ಒಳಹೊರಗೊಂದೇ ಸ್ವಯವಾಗಿ ಪ್ರಜ್ವಲಿಸುವಂತೆ, ಎನ್ನೊಳಗಿಪ್ಪ ತನು ಹೊರಗಿಪ್ಪ ತನು ಒಂದೇ ವಸ್ತುವೆಂದು, ಆದ್ಯಂತವ ಕಾಣಬಂದಿತ್ತು ನೋಡಾ. ಆ ಪರಶಿವತತ್ವವೆ ಶರಣನು ತಾನೇ ನೋಡಾ. ಬೇರೊಂದು ಸ್ವರೂಪಲ್ಲ ಕಾಣಾ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

೧೦೫. ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ, ತೆರಹಿಲ್ಲದ ಸಂಭಾಷಣೆಯ ಸುಖವು, ತೆರಹಿಲ್ಲದ ನಂಬುಗೆಯು, ತೆರಹಿಲ್ಲದ ಸ್ವಾನುಭಾವ ಸುಖವು, ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ, ಕೂಡಲಸಂಗಮದೇವಾ ನಿಮ್ಮ ಶರಣರಿಗೆ.

ಟಪ್ಪಣಿ:— ಶರಣರಿಗೆ ಹಾಗೂ ಪರಮಾತ್ಮನಿಗೆ ಭೇದವಿಲ್ಲದ ಸ್ಥಿತಿಯು ಇಲ್ಲಿ ವರ್ಣಿಸಲ್ಪಟ್ಟಿದೆ. ಭಕ್ತನು ಅಷ್ಟೊಂದು ತಾದಾತ್ಮ್ಯ ಹೊಂದಿ ವರ್ತಿಸುವನು ಎಂದರ್ಥ.

೧೦೬. ಲಿಂಗವ ಪೂಜಿಸಿ ಫಲವೇನಯ್ಯ ಸಮರತಿ ಸಮಕಳೆ ಇಲ್ಲದನ್ನಕ್ಕರ? ಲಿಂಗವ ಪೂಜಿಸಿ ಫಲವೇನಯ್ಯ ಕೂಡಲಸಂಗಮದೇವರಲ್ಲಿ ನದಿಯೊಳಗೆ ನದಿ ಬೆರೆಯದನ್ನಕ್ಕರ?

ಟಪ್ಪಣಿ:— ಸಾಕ್ಷಾತ್ಕಾರಿಯ ಪೂರ್ಣ ಸಮರಸೈಕ್ಯವು ಇಲ್ಲಿ ನದಿಯೊಳಗೆ ನದಿಕೂಡಿದಂತೆ ಎಂದು ಉಪಮಿಸಲ್ಪಟ್ಟಿದೆ.

೧೦೭. ಸಮರಸದೊಳಗಣ ಸ್ನೇಹ ಮತ್ಸ್ಯ ಕೂರ್ಮ ವಿಹಂಗದಂತೆ ಸ್ನೇಹದ ನೋಟದಲ್ಲಿಯೆ ತೃಪ್ತಿ, ಸ್ನೇಹದ ನೆನಹಿನಲ್ಲಿಯೆ ತೃಪ್ತಿ, ಸ್ನೇಹದ ಸ್ಪರ್ಶದಲ್ಲಿಯೆ ತೃಪ್ತಿ. ಈ ಪರಿಯಲ್ಲಿ ವಾರಿಕಲ್ಲ ಪುತ್ಥಳಿ ಅಪ್ಪುವನೊಡಗೂಡಿದಂತಾಯಿತ್ತು ಎಮ್ಮ ಗಜೇಶ್ವರನಲ್ಲಿ ಲಿಂಗೈಕ್ಯವು.

ಟಪ್ಪಣಿ:— ಸಮರಸೈಕ್ಯದ ಸ್ವಲ್ಪ ವಿವರವು ಇಲ್ಲಿ ಕೊಡಲ್ಪಟ್ಟಿದೆ. ಸ್ನೇಹದ ನೋಟ, ನೆನಹು, ಸ್ಪರ್ಶ ಇವೆಲ್ಲವೂ ಅತ್ಯಂತ ತೃಪ್ತಿಯನ್ನುಂಟು ಮಾಡುವವು.

೧೦೮. ಧ್ಯಾನಸೂತಕ, ಮೌನಸೂತಕ, ಜಪಸೂತಕ, ಅನುಷ್ಠಾನ ಸೂತಕ, ಗುಹೇಶ್ವರನೆಂಬ ಲಿಂಗವನರಿದಬಳಿಕ ಸೂತಕ ಹಿಂಗಿತ್ತು ಯಥಾಸ್ಥ ಇಪ್ಪೆ.

೧೦೯. ನೆನೆ ನೆನೆ ಎಂದೊಡೆ ನಿನ ನೆನೆವೆನಯ್ಯಾ, ಎನ್ನ ಕಾಯವೆ ಕೈಲಾಸವಾಯಿತ್ತು, ತನುವೆ ಲಿಂಗವಾಯಿತ್ತು, ತನುವೆ ಸೆಜ್ಜೆಯಾಯಿತ್ತು. ನೆನೆವಡೆ ದೇವನುಂಟಿ? ನೋಡುವಡೆ ಭಕ್ತನುಂಟಿ? ಗುಹೇಶ್ವರಲಿಂಗಲೀಯ್ಯವಾಯಿತ್ತು.

೧೧೦. ಕರ್ಪುರದ ಗಿರಿಯನು ಉರಿಹಿಡಿದ ಬಳಿಕ ಇದ್ದಲುಂಟೆ? ಮಂಜಿನ ಶಿವಾಲಯಕ್ಕೆ ಬಿಸಿಲಿನ ಕಳಸವುಂಟೆ? ಕೆಂಡದ ಗಿರಿಯ ಅರಗಿನ ಬಾಣದಲ್ಲಿ ಎಚ್ಚಡೆ ಬಳಿಕ ಮರಳಿ ಬಾಣವನರಸಲುಂಟೆ? ಗುಹೇಶ್ವರಲಿಂಗವ ನರಿದ ಬಳಿಕ ದೇವರೆಂದು ಅರಸಲುಂಟೆ ಸಿದ್ಧರಾಮಯ್ಯ?

ಟಪ್ಪಣಿ:— ಸಾಕ್ಷಾತ್ಕಾರಿಯು ಸಹಜಸಮಾಧಿಯಲ್ಲಿ ಇರ ಆರಂಭಿಸಿದನೆಂದರೆ ಮುಂದೆ ಅವನಿಗೆ ಯಾವ ವಿಶಿಷ್ಟ ಸಾಧನಗಳೂ ಉಳಿಯುವುದಿಲ್ಲ. ಯಾಕಂದರೆ, ಅವನು ಪರಮಾತ್ಮನೊಡನೆ ಸತತ ಪೂರ್ಣ ಸಮರಸ ಸ್ಥಿತಿಯಲ್ಲಿರುವನು. ಆ ಸ್ಥಿತಿಯಲ್ಲಿ ಧ್ಯಾನಾದಿಗಳು ಕೂಡ ಸೂತಕಗಳೆನಿಸುವವು!

ವಿವರಣೆ

ಸಾಕ್ಷಾತ್ಕಾರಿಯು ಪರಮಾತ್ಮನಂತೆಯೆ ಅತೀತನೂ ಅಲಿಪ್ತನೂ ಸ್ವಂದ್ವಾತೀತನೂ ಇರುವನು. ಯಾಕಂದರೆ, ಅವನು ಪರಮಾತ್ಮನಲ್ಲಿಯೆ

ಸ್ಥಿತನು, ಅವನನ್ನೆ ಎಲ್ಲೆಲ್ಲಿಯೂ ನೋಡುವನು, ಕೇಳುವನು, ಅನುಭವಿಸುವನು. ಅವನು ಒಳಿತು ಕೆಡುಕು, ಪುಣ್ಯಪಾಪ, ಇವುಗಳನ್ನು ಮಾಡಲರಿಯನು. ಅವನು ಮಾಡುವುದೆಲ್ಲ ಈಶಸಂಕಲ್ಪದಂತೆ ಸಮವೂ ಸ್ವಾಭಾವಿಕವೂ ಇರುವದು.

ವಚನಗಳು

೧೧೦. ಮನದೊಳಗೆ ಘನವು ವೇದ್ಯವಾದ ಬಳಿಕ ಪುಣ್ಯವಿಲ್ಲ ಪಾಪವಿಲ್ಲ, ಸುಖವಿಲ್ಲ ದುಃಖವಿಲ್ಲ, ಕಾಲವಿಲ್ಲ ಕರ್ಮವಿಲ್ಲ, ಜನನವಿಲ್ಲ ಮರಣವಿಲ್ಲ. ಗುಹೇಶ್ವರಾ, ನಿಮ್ಮ ಶರಣ ಘನಮಹಿಮ ನೋಡಯ್ಯಾ!

೧೧೧. ಕರ್ಮಾಧೀನವೆಂಬ ಕರ್ಮ, ಲಿಂಗಾಧೀನವೆಂಬ ಭಕ್ತ, ದೇಹ ಪ್ರಾರಬ್ಧವೆಂಬನದ್ಯೈತಿ, ಈ ತ್ರಿವಿಧವೆನ್ನದವರನೇನೆಂಬೆ ಗುಹೇಶ್ವರಾ.

ಟಪ್ಪಣಿ:— ದೇಹವು ಪ್ರಾರಬ್ಧವಶದಿಂದ ಬಂದಿರುವದು, ಮತ್ತು ಜ್ಞಾನವಾದರೂ ಪ್ರಾರಬ್ಧಕರ್ಮವು ಭೋಗದಿಂದಲೆ ತೀರುವದು ಎಂದು ಅದ್ವೈತಿಯ ಮತವು.

೧೧೨. ಅರಿಯದೆ ಮರಹಿಂದ ಭವದಲ್ಲಿ ಬಂದೆ. ಇನ್ನು ಅರಿದ ಬಳಿಕ ಬಳಲಲುಂಟೆ? ಹೃದಯಕಮಲಮಧ್ಯದಲ್ಲಿ ನಿಜವು ನೆಲೆಗೊಂಡಬಳಿಕ ಪುಣ್ಯ ಪಾಪವೆಂಬವಕ್ಕೆ ಹೊರಗಾದೆನು. ಭುವನ ಹದಿನಾಲ್ಕರೊಳಗೆ ಪರಿಪೂರ್ಣ ನಿರಂಜನ ಜ್ಯೋತಿಯಾಗಿ ಬೆಳಗುವ ಪ್ರಭುವ ಕಂಡು ಬದುಕಿದೆನು ಕಾಣಾ, ಬಸವಣ್ಣ ಪ್ರಿಯ ಕೂಡಲ ಚನ್ನಸಂಗಯ್ಯ.

೧೧೪. ಸುರಿವ ಜಲಕ್ಕೆ ನೆಲಹೊಲ ಎಂದು ಪ್ರಮಾಣಿಸಬಹುದೆ? ಉರಿವ ಅನಲಂಗೆ ಶತಡೊಂಕು ಸಸಿನ ಎಂಬುದುಂಟೇ? ಗುಹೇಶ್ವರ ಲಿಂಗಕ್ಕೆ ಲೇಸು ಕಷ್ಟವೆಂಬುದಿಲ್ಲ, ಸಂಗನಬಸವಣ್ಣಾ.

ಟಪ್ಪಣಿ:— ೧೧೨ ಮತ್ತು ೧೧೪ ಈ ಎರಡು ವಚನಗಳು ಪರಮಾತ್ಮನಿಗೆ ಸಂಬಂಧಿಸಿದವು, ಎಂದು ತೋರಿದರೂ ಅವು ಸಿದ್ಧಪುರುಷನನ್ನೆ ವರ್ಣಿಸಿವೆ, ಎಂದು ಸಂದರ್ಭದಿಂದ ತಿಳಿಯುವದು.

೧೧೫. ಲಿಂಗವೆನ್ನೆ ಲಿಂಗೈಕ್ಯವೆನ್ನೆ, ಸಂಗವೆನ್ನೆ ನಿಃಸಂಗವೆನ್ನೆ, ಆಯಿತೆನ್ನೆ ಆಗದೆನ್ನೆ, ನೀನೆನ್ನೆ ನಾನೆನ್ನೆ. ಚನ್ನಮಲ್ಲಿಕಾರ್ಜುನ ಲಿಂಗದಲ್ಲಿ ಘನಲಿಂಗೈಕ್ಯವಾದ ಬಳಿಕ ಮತ್ತೇನು ಎನಲೊಲ್ಲದೆ ಇದ್ದೆನು.

೧೨೬. ಸ್ವಯಲಿಂಗದನುಭಾವ ತನಗೆ ದೊರೆಕೊಂದ ಬಳಿಕ, ದೇವ ಲೋಕವೆಂಬುದೇನೋ ಮೃತ್ಯುಲೋಕವೆಂಬುದೇನೋ? ಆವುದರಲ್ಲಿ ಭೇದವೇನಯ್ಯಾ? ಕೂಡಲಸಂಗಮದೇವಾ, ಸರ್ವವೂ ನೀವಾದ ಬಳಿಕ ಅಲಸ್ಯವುಂಟೇ?

೧೨೭. ಆಚಾರ ಅನಾಚಾರ ಎಂಬುದು ಇಲ್ಲ. ಸೀಮೆ ನಿಸ್ಸೀಮೆ ಎಂಬುದು ಇಲ್ಲ. ಗಮನ ನಿರ್ಗಮನವೆಂಬುದಿಲ್ಲವಯ್ಯಾ. ಕರ್ಮ ಧರ್ಮ, ಸುಖದುಃಖ, ಪುಣ್ಯಪಾಪ, ಭವಮೋಹ, ಇಹಪರ, ಎಂಬ ಉಭಯಸಂದೇಹವಿಲ್ಲವಯ್ಯಾ. ಏನೂ ಇಲ್ಲದ ಪರಮ ನಿರ್ವಾಣ ನಿರ್ವಯವೇ ಶರಣಲಿಂಗ ಸಮರಸವಯ್ಯಾ, ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

೧೨೮. ಸಗುಣನಿರ್ಗುಣನಲ್ಲ ನೋಡಾ ಲಿಂಗೈಕ್ಯನು. ಸಾಕಾರ ನಿರಾಕಾರನಲ್ಲ ನೋಡಾ ಲಿಂಗೈಕ್ಯನು. ಶೂನ್ಯನಲ್ಲ ನಿಃಶೂನ್ಯನಲ್ಲ ನೋಡಾ ಲಿಂಗೈಕ್ಯನು. ಕಾಮಿಯಲ್ಲ ನಿಃಕಾಮಿಯಲ್ಲ ನೋಡಾ ಲಿಂಗೈಕ್ಯನು. ದ್ವೈತನಲ್ಲ ಅದ್ವೈತನಲ್ಲ ನೋಡಾ ಲಿಂಗೈಕ್ಯನು. ಇಂತೀ ತೆರನಲ್ಲಿ ತೋರುವ ತೋರಿಕೆ ಎಲ್ಲವೂ ತಾನೆಯಾಗಿ, ಇಹಪರಗತಿಗೆಡಿಸಿ, ಪರಿಪೂರ್ಣಬ್ರಹ್ಮವಾಗಿ ತನ್ನ ಕುರುಹಡಗಿಸಿ, ನಿರ್ವಯಲಾಗಿರ್ಪ ನಿಜಲಿಂಗೈಕ್ಯದ ಏನೆಂದುಪಮಿಸಬಹುದಯ್ಯಾ, ಅಖಂಡೇಶ್ವರಾ?

೧೨೯. ಅಹಂಕಾರವನೆ ಮರೆದು, ದೇಹಗುಣಂಗಳನೆ ಜರೆದು, ಇಹಪರವೇ ತಾನೆಂದರಿದ ಕಾರಣ ಸೋಹಂಭಾವ ಸ್ಥಿರವಾಯಿತ್ತು. ಸಹಜ ಉದಯದ ನಿಲವಿಂಗೆ ಮಹಾಘನಲಿಂಗದ ಬೆಳಗು ಸ್ಥಾಯಿಕವಾದ ಕಾರಣ, ಗುಹೇಶ್ವರಾ ನಿಮ್ಮ ಶರಣನುಪಮಾತೀತನು.

೧೩೦. ಸತ್ತು ಹುಟ್ಟುವನಲ್ಲ, ಸಂದೇಹಸೂತಕಿಯಲ್ಲ, ಸಾಕಾರ ನಿರಾಕಾರನಲ್ಲ ನೋಡಯ್ಯ. ಕಾಯವಂಚಕನಲ್ಲ, ಜೀವ ವಂಚಕನಲ್ಲ. ನಿರಂತರ ಸಹಜ ನೋಡಯ್ಯ. ಶಂಕೆಯಿಲ್ಲದ ಮಹಿಮನು ಕೂಡಲಸಂಗಮದೇವನ ಶರಣನುಪಮಾತೀತನು ನೋಡಯ್ಯಾ.

೧೩೧. ಮುಗಿಲ ಮರೆಯ ಸೂರ್ಯನಂತೆ, ನೆಲದ ಮರೆಯ ನಿಧಾನದಂತೆ ಒರೆಯ ಮರೆಯ ಅಲಗಿನಂತೆ, ಹಣ್ಣಿನೊಳಗಿನ ರಸದಂತೆ, ಶರಣಶರೀರವ ಮರೆಗೊಂಡು ಪರಮಪಾವನಮೂರ್ತಿ ಪರಾಪರ ತಾನುತಾನಾಗಿರ್ದುದನೇನೆಂಬೆನಯ್ಯ, ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

ಟಿಪ್ಪಣಿ— ೧೩೮–೧೩೧ ಈ ವಚನಗಳು ಸಾಕ್ಷಾತ್ಕಾರಿಯ ಅನುಪಮವಾದ ದ್ವಂದ್ವಾತೀತ ಸ್ಥಿತಿಯನ್ನು ಬಹಳ ಚೆನ್ನಾಗಿ ವರ್ಣಿಸಿರುವವು.

೧೩೨. ಹಣ್ಣ ಮೆದ್ದಬಳಿಕ ಆ ಮರನ ಆರು ತರಿದಡೇನು? ಹೆಣ್ಣ ಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು? ಮಣ್ಣ ಬಿಟ್ಟ ಬಳಿಕ ಆಕೆಯನಾರು ಉತ್ತರೇನು? ಚನ್ನಮಲ್ಲಿಕಾರ್ಜುನನ ಅರಿದಬಳಿಕ, ಆ ಕಾಯ ನಾಯು ತಿಂದರೇನು, ನೀರು ಕೂಡಿದರೇನು?

೧೩೩. ಕಾಯ ಕರ್ಪನೆ ಕಂದಿದರೇನಯ್ಯಾ? ಕಾಯ ಮಿರ್ಪನೆ ಮಿಂಚಿದರೇನಯ್ಯಾ? ಅಂತರಂಗ ಶುದ್ಧವಾದ ಬಳಿಕ, ಚನ್ನಮಲ್ಲಿಕಾರ್ಜುನ ಲಿಂಗವು ಒಲಿದ ಕಾಯವು ಹೇಗಿದ್ದಡೇನು?

ಟಿಪ್ಪಣಿ— ಕಾಯವು ಪರಮಾರ್ಥದ ಸಾಧನಮಾತ್ರವು. ಸಿದ್ಧಿಯು ಪ್ರಾಪ್ತವಾದ ಬಳಿಕ ಕಾಯದ ಹಂಗಿಲ್ಲ ಎಂದು ಮೇಲಿನ ಎರಡು ವಚನಗಳು ಹೇಳುವವು.

೧೩೪. ಕಿಚ್ಚಿನೊಳಗೆ ಹಾಕಿದ ಹುಳ್ಳಿಯಾದಂತಾದೆನಯ್ಯಾ! ಬೆಂದ ನುಲಿಯ ಸಂದಿಕ್ಕಿ ಮತ್ತೊಂದ ಮಾಡಬಾರದಯ್ಯಾ! ಗುಹೇಶ್ವರಾ, ನಿಮ್ಮ ನಿಲವಿನ ಪರಿ ಇಂತುಟಯ್ಯಾ!

ಟಿಪ್ಪಣಿ— ಒಮ್ಮೆ ಲಿಂಗೈಕ್ಯವಾದ ಬಳಿಕ ಪುನಃ ಜನ್ಮವಿಲ್ಲ ಎಂಬುದನ್ನು ೧೨೩ನೆಯ ವಚನವೂ ಈ ವಚನವೂ ಹೇಳುವವು.

೧೩೫. ಪರತತ್ವದಲ್ಲಿ ತದ್ಗತವಾದ ಬಳಿಕ ಬೇರೆ ಮತ್ತೆ ಅರಿದಿಹೆನೆಂಬ ಭ್ರಾಂತೇಕೆ? ಅರಿವು ಸಯವಾಗಿ ಮರಹು ನಷ್ಟವಾದ ಬಳಿಕ ತಾನಾರೆಂಬ ವಿಚಾರವೇಕೆ? ಗುಹೇಶ್ವರನ ಬೆರಸಿ ಭೇದಗೆಟ್ಟಬಳಿಕ ಮತ್ತೆ ಸಂಗವ ಹೊಡಿಹೆನೆಂಬ ತವಕನೇಕಯ್ಯಾ?

ಟಿಪ್ಪಣಿ— ಪೂರ್ಣೈಕ್ಯದ ಅನುಭಾವವಾದ ಬಳಿಕ ಪುನಃ ನಾನು ದೇವರನ್ನು ಕೂಡತಕ್ಕದ್ದಿದೆ ಎಂಬ ಆತುರವು ಸಹ ಉಳಿಯಲಾಗದು, ಎಂದರ್ಥ.

೧೩೬. ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆ ಎನಲೇತಕ್ಕೆ? ಪರುಷರಸ ಕೈಯಲ್ಲಿದ್ದು ಕೂಲಿಯ ಮಾಡಲೇತಕ್ಕೆ? ಕ್ಷುತ್ತು ನಿವೃತ್ತಿಯಾದವಂಗೆ ಕಟ್ಟೋಗರದ ಹೊರೆಯ ಹೊರಲೇತಕ್ಕೆ? ನಿತ್ಯ ಅನಿತ್ಯವನೇ ತಿಳಿದು ಮರ್ತ್ಯ ಕೈಲಾಸ

೧೪೩. ಕುಂಡಲಿಗನ ಕೀಟದಂತೆ ಮೈ ಮುಣ್ಣಾಗದಂತೆ ಇರ್ದೆಯಲ್ಲ ಬಸವಣ್ಣ ! ಜಲದೊಳಗಣ ತಾವರೆಯಂತೆ ಹೊದ್ದಿ ಹೊದ್ದದಂತೆ ಇರ್ದೆಯಲ್ಲ ಬಸವಣ್ಣ ! ಜಲದಿಂದಾವ ಮೌಕ್ತಿಕದಂತೆ ಜಲವು ತಾನಾಗದಂತೆ ಇರ್ದೆಯಲ್ಲ ಬಸವಣ್ಣ ! ಗುಹೇಶ್ವರಲಿಂಗದಾಣತಿವಿಡಿದು, ತನುಗುಣ ಮುತ್ತರಾಗಿರ್ಪ ಐಶ್ವರ್ಯಾಂಧಕರ ಮತವನೇನ ಮಾಡಬಂದೆಯಯ್ಯಾ ಸಂಗನಬಸವಣ್ಣ ?

೧೪೪. ಕಣ್ಗೆ ಕಾಂಬಡೆ ರೂಪಲ್ಲ. ಕೈಗೆ ಸಿಲುಕುವಡೆ ದೇಹಿಯಲ್ಲ. ನಡೆದಡೆ ಗಮನಿಯಲ್ಲ. ನುಡಿದಡೆ ವಾಚಾಳನಲ್ಲ. ನಿಂದಿಸಿದವಗೆ ಹಗೆಯಲ್ಲ. ಹೊಗಳಿದವರಿಗೆ ಕೆಳೆಯಲ್ಲ. ಗುಹೇಶ್ವರನ ನಿಲವು ಮಾತಿನ ಮಾಲೆಗೆ ಸಿಲುಕುವುದೇ ? ಸಿದ್ಧರಾಮಯ್ಯ ನೀನು ಮರುಳಾದೆಯಲ್ಲ !

೧೪೫. ಶರಣ ಇಹಪರನಲ್ಲ, ಪರಾಪರನಲ್ಲ ಕಾಮಿಸಿ ಕಾಮಿಯಲ್ಲ, ಛಾವಿಸಿ ಛಾವಿಯಲ್ಲ. ಅನಾಮಯ ನಿರಂಜನನು. ಸಿದ್ಧಸೋಮನಾಥಲಿಂಗ ನಿಮ್ಮ ಶರಣ ಬಳಸಿಯೂ ಬಳಸುವನಲ್ಲ.

೧೪೬. ಬಟ್ಟಬಯಲೆಲ್ಲ ಗಟ್ಟಗೊಂಡರೆ, ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಯದೊ ? ಮೇಘದ ಜಲವೆಲ್ಲ ನಿರ್ಮಳ ಮುತ್ತಾದರೆ ಸಪ್ತಸಾಗರಕ್ಕೆ ಉದಕವಿನ್ನೆಲ್ಲಿಯದಯ್ಯಾ ? ಕಷ್ಟಜೀವಿ ಮಾನವರೆಲ್ಲ ಸಿಟ್ಟನೆ ಶಿವಜ್ಞಾನಿಗಳಾದರೆ ಭವದ ದೆಳೆ ಇನ್ನೆಲ್ಲಿಯದಯ್ಯಾ ? ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ.

ಟಿಪ್ಪಣಿ:— ಸಿದ್ಧಿಯು ಬೇಕುಬೇಕಾದವರಿಗೆ ಸಿಗದು, ಕ್ವಚಿತ್ ಹಲವರಿಗೆ ಮಾತ್ರ ದೊರೆಯುವದು, ಎಂದು ಇಲ್ಲಿ ಸ್ಪಷ್ಟವಾಗಿ ಹೇಳಿದೆ. ಶಿವಜ್ಞಾನಿ ಅಂದರೆ ಪೂರ್ಣಜ್ಞಾನಿ.

೧೪೭. ಸ್ವಸ್ಥಾನ ಸುಸ್ಥಾನ ಸುಮನ ಮಂಟಪದೊಳಗೆ ನಿತ್ಯನಿರಂಜನ ಪ್ರಭೆಯ ಬೆಳಗು. ಶಿವಯೋಗಾನುಭಾವವು ಏಕಾರ್ಥವಾಗಿ, ಗುಹೇಶ್ವರಾ ನಿಮ್ಮ ಶರಣ ಅನುಪಮ ಸುಖಿಯಾಗಿರ್ದನು.

ಟಿಪ್ಪಣಿ:— ಸ್ವಸ್ಥಾನ.. ಮಂಟಪ ಅಂದರೆ ಬ್ರಹ್ಮರಂಧ್ರ ಅಥವಾ ಸಹಸ್ರಾರ ಅಥವಾ ಸಹಸ್ರದಲ ಕಮಲ. ಶಿವಯೋಗವೆಂದರೆ ಪರಮಾತ್ಮಯೋಗ.

೧೪೮. 'ತುಂಬಿದುದು ತುಳುಕದು ನೋಡಾ. ನಂಬಿದುದು ಸಂದೇಹಿಸದು ನೋಡಾ. ಒಲಿದುದು ಓಸರಿಸದು ನೋಡಾ. ನೆರೆಯರಿದುದು ಮುಕೆ

ಯದು ನೋಡಾ. ಚನ್ನಮಲ್ಲಿಕಾರ್ಜುನಯ್ಯ, ನೀನೊಲಿದ ಶರಣಂಗೆ ನಿಸ್ಸೀಮ ಸುಖವಯ್ಯ.

ಟಿಪ್ಪಣಿ:— ಮೇಲಿನ ಎರಡು ವಚನಗಳು ಸಾಕ್ಷಾತ್ಕಾರಿಯ ಆನಂದವನ್ನು, ಅನುಪಮ ಸುಖವನ್ನು ವರ್ಣಿಸುವವು.

---

೮. ಅಜ್ಞಾನ

ವಿವರಣೆ

ಮುಕ್ತಿಯೆಂಬುದೊಂದು ಚಿತ್ತದ ಸ್ಥಿತಿಯು, ಸಾಕ್ಷಾತ್ಕಾರವೆಂಬುದೊಂದು ಅಂತಃಕರಣದ ದಿವ್ಯ ಅನುಭವವು, ಎಂದು ಮೇಲೆ ಹೇಳಿದ್ದೇವೆ. ಹೀಗಿದ್ದ ಪಕ್ಷದಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ ಈ ಬಗೆಯ ಸ್ಥಿತಿಯು ಮತ್ತು ಈ ಬಗೆಯ ಶ್ರೇಷ್ಠ ಅನುಭವವು ಏಕೆ ಪ್ರಾಪ್ತವಾಗುವುದಿಲ್ಲ ? ಹಾಗೆ ಪ್ರಾಪ್ತವಾಗಲೇಬೇಕಾದರೆ ಮನುಷ್ಯನಿಗೆ ಏನು ಅಡ್ಡಬರುವದು ? ಆ ಅಡ್ಡಿಯ ಲಕ್ಷಣವೇನು ? ಆ ಅಡ್ಡಿಯಿಂದುಂಟಾಗುವ ಎಡರುತೊಡರುಗಳ ಸ್ವರೂಪವೇನು ?

ಮುಕ್ತಿ ಎಂಬುದು ನಿತ್ಯ, ನಿರಾಲಂಬ, ಆನಂದಮಯ ಚಿತ್ತದ ಸ್ಥಿತಿಯ ರೂಪದಿಂದ ನಮಗೆ ಪ್ರತೀತವಾಗುವದು. ಇದು ಎಲ್ಲರಿಗೂ ಯಾಕೆ ದೊರೆಯುವದಿಲ್ಲವೆಂದರೆ, ನಿತ್ಯ ಆನಂದದ ವಿರೋಧಿಯಾದ ಅನಿತ್ಯ ಪದಾವಲಂಬಿ ಆನಂದದ ಹವಣಿಕೆಯು ಮನುಷ್ಯನ ಚಿತ್ತದಲ್ಲಿ ಮನೆಮಾಡಿ ಕೊಂಡಿರುವದು. ತನ್ಮೂಲಕ ದುಃಖವು ಉತ್ಪನ್ನವಾಗುವದು; ಮತ್ತು ನಮಗೆ ದೊರೆತ ಅಲ್ಪ ಸ್ವಲ್ಪ ಅನಿತ್ಯ ಆನಂದದಿಂದ ಯಾವ ಬಗೆಯ ತೃಪ್ತಿಯೂ ಆಗದೆ ಹೆಚ್ಚು ಅಸಂತೋಷವು ಉತ್ಪನ್ನವಾಗುವದು. ಈ ಬಗೆಯ ಕತ್ತಲೆಯು ಹರಿಯುವತನಕ ನಮ್ಮ ಮನಸ್ಸಿನಲ್ಲಿ ಮುಕ್ತಿರೂಪ ಬೆಳಗು ತೋರದು. ಈ ರೀತಿ ಪರಮಾನಂದದ ಶತ್ರುವು, ಮುಕ್ತಸ್ಥಿತಿಯ ಹಗೆಯು ಮನುಷ್ಯನ ಮನಸ್ಸಿನಲ್ಲಿಯೆ ಇರುವನು. ನಿತ್ಯ ಆತ್ಮಸುಖವೆಂಬುದು ಇರುವದು, ಅದು ಮನುಷ್ಯನಿಗೆ ಸಾಧ್ಯವು ಎಂಬುದನ್ನು ಲಕ್ಷಿಸದೆ ಮನುಷ್ಯನು ಸಾಮಾನ್ಯವಾಗಿ ಅದನ್ನು ಬಿಟ್ಟು ಅನಿತ್ಯ ವಿಷಯಸುಖಗಳನ್ನೆ ಅರಸುವನು. ಆದುದರಿಂದ ಅವನು, ಶೇಷಿಯೆಯ ಹುಳವು ತನ್ನ

ಬಲೆಯಲ್ಲಿ ತಾನೇ ಸಿಕ್ಕು ಸಾಯುವಂತೆ, ಅವುಗಳಿಂದ ಬದ್ಧನಾಗಿ ಗಾಸಿಯಾಗುವನು. ಅವುಗಳನ್ನು ಬಿಟ್ಟು, ನಿತ್ಯವಾದ ಆತ್ಮಸುಖವನ್ನರಸಿ, ಅದನ್ನು ಪಡೆದರೆ ಅವನು ಮುಕ್ತನಾಗುವನು. ನಿತ್ಯಸುಖದ ರುಚಿಯನ್ನು ತಿಳಿಯದೆ, ಅನಿತ್ಯಸುಖದ ಬೆನ್ನುಬಿದ್ದು ಅವನು ದುಃಖಪಡುವದು ಅಜ್ಞಾನದ ಮೂಲಕ. ಅದೇ ಅವಿದ್ಯೆ, ಮಾಯೆ, ಮಿಥ್ಯಾಜ್ಞಾನ, ಅಜ್ಞಾನ, ಪೂರ್ಣಜ್ಞಾನವ ಅಭಾವ ಎಂದೆನಿಸುವದು.

ಇನ್ನು ಸಾಕ್ಷಾತ್ಕಾರವೆಂದರೆ ಆಧ್ಯಾತ್ಮಿಕಸತ್ಯದ ಅನುಭವವು. ಆ ಅನುಭವವು ಎಲ್ಲರಿಗೂ ಬರದೇ ಇರುವ ಕಾರಣವೇನಂದರೆ, ಎಲ್ಲರೂ ಆ ಸತ್ಯವನ್ನು ಅನುಭವಿಸುವ ಹವಣಿನವರಿಲ್ಲ. ವಾಡಿಕೆಯಾಗಿ ಎಲ್ಲರೂ ಪಾಂಚಭೌತಿಕ ವಿಶ್ವವನ್ನೆ ಅಂದರೆ ವಿಷಯಗಳನ್ನೆ ಅನುಭವಿಸಲು ಬಳಸುವರು. ಅವುಗಳಾಚೆಗೇನಿರುವದು, ಅವುಗಳ ಮೂಲದಲ್ಲಿ ಏನಿರುವದು, ಎಂಬುದನ್ನು ತಿಳಿದುಕೊಳ್ಳುವ ಹಾರೈಕೆಯು ಬಹಳ ಕಡಿಮೆ. ಆಧ್ಯಾತ್ಮಿಕ ಸತ್ಯದ ಅನುಭವಕ್ಕೆ ಭೌತಿಕ ಸತ್ಯದ ಅನುಭವವೆ ಅಂದರೆ ಇಂದ್ರಿಯಗೋಚರ ಅನುಭವವೆ ವಿರೋಧಿಯು. ಇಂದ್ರಿಯಾನುಭವಗಳೆ ಪರಮಸತ್ಯ ಎಂದು ತಿಳಿದು ನಾವು ವ್ಯವಹರಿಸುವವರೆಗೆ ನಮಗೆ ಆಧ್ಯಾತ್ಮಿಕ ಸತ್ಯವು ಕಾಣದು. ಹೀಗೆ ನಾವೆಲ್ಲರೂ ಭೌತಿಕ ವಿಷಯಗಳ ಬೆನ್ನುಬೀಳುವುದು, ಆ ಅನುಭವಕ್ಕೆಯೆ ಮನಸೋಲುವದು ಅಜ್ಞಾನದಿಂದಲೆ. ಅದೇ ಮಾಯೆ, ಅವಿದ್ಯೆ, ಮೋಹ, ಜ್ಞಾನಶೂನ್ಯತೆ, ಅಥವಾ ಅನ್ಯಥಾಜ್ಞಾನವು.

ಈ ಅಜ್ಞಾನವು ಅಹಂಕಾರ, ಕಾಮ, ಕ್ರೋಧ, ದೇಹಾತ್ಮ ಬುದ್ಧಿ, ಇಂದ್ರಿಯ ಸುಖಲೋಲುಪತೆ, ಆಸಕ್ತಿ ಎಂಬ ಮುಂತಾದ ಅನೇಕ ರೂಪಗಳನ್ನು ಧರಿಸಿ ಮನುಷ್ಯನ ಸಾಕ್ಷಾತ್ಕಾರಕ್ಕೆ ಮತ್ತು ಮುಕ್ತಿಗೆ ಅಡ್ಡ ಬರುವದು. ಬರೀ ಹೇಯವೆಂದು ಬಿಟ್ಟು ಓಡಿಹೋಗದೆ ಇವುಗಳೆಲ್ಲವನ್ನು ಗೆಲಿಯುವದರಿಂದಲೆ ಮನುಷ್ಯನು ಮುಕ್ತನಾಗಬಲ್ಲನು.

ಈ ಅಜ್ಞಾನವೆಂಬುದು ಜೀವನನ್ನು ಹೇಗೆ ಮತ್ತು ಏಕೆ ಆವರಿಸಿತ್ತು, ಇದು ದೊಡ್ಡ ಮಹತ್ವದ ಪ್ರಶ್ನೆಯಿರುವದು. ಇಲ್ಲಿ ಇದಕ್ಕೆ ಪೂರ್ಣ ಉತ್ತರವನ್ನು ಕೊಡುವ ಪ್ರಯತ್ನವಾಡದೆ ಆ ಉತ್ತರದ ದಿಗ್ದರ್ಶನವನ್ನು ಮಾತ್ರ ಮಾಡುವೆವು.

ಅನಂತವಿದ್ದುದು ಸಾಂತ, ಸಂಕುಚಿತ, ವಿಶಿಷ್ಟ ಆಗದ ಹೊರತು ಸೃಷ್ಟಿರಚನೆಯಾಗಲಾರದು. ಅಥವಾ ಅನಂತವಿದ್ದುದು ಮರ್ಯಾದಿತವಾಗಿ

ನಾಮರೂಪಗಳನ್ನು ಧರಿಸುವದೆ ಸೃಷ್ಟಿಯ ರಚನೆ ಎನಿಸುವದು. ಇದಕ್ಕೆ ದೃಷ್ಟ:— ನೀರೆಂಬುದು ನದಿ, ಕೆರೆ, ಹಳ್ಳ, ಹನಿ ಆಗಬೇಕಾದರೆ ಸಂಕುಚಿತವಾಗಿ ನಾಮರೂಪಗಳನ್ನು ಧರಿಸಿ ಮರ್ಯಾದೆಗಳಿಗೆ ಒಳಗಾಗಬೇಕಾಗುವದು. ಮನುಷ್ಯನು ವಿಶ್ವಮೂಲದಲ್ಲಿರುವ ಅನಂತಗುಣ ಅನಂತಶಕ್ತಿವಸ್ತುವಿನ ಒಂದಂಶರೂಪನಾಗದೆ ಜೀವನಾಗಲಾರನು. ಆದುದರಿಂದ ಅವನು ಸಂಕುಚಿತ ಶಕ್ತಿಯುಳ್ಳವನೂ ಮರ್ಯಾದಿತ ಜ್ಞಾನವುಳ್ಳವನೂ ಆಗಿರುವನು. ಅರ್ಥಾತ್ ಅವನು ತನ್ನ ದೇಹ, ತನಗೆ ಸಂಬಂಧಿಸಿದ ವಿಶ್ವ ಭಾಗ, ಇವುಗಳನ್ನಷ್ಟೆ ಸ್ವಲ್ಪ ಮಟ್ಟಿಗೆ – ತನ್ನ ಜೀವನಕ್ರಮದ ಮಟ್ಟಿಗೆ ಅರಿತಿರುವನು. ಈ ಸಂಕುಚಿತ ಜ್ಞಾನವೆ ಅಜ್ಞಾನವೆನಿಸುವದು. ಯಾಕಂದರೆ, ಅದು ಇಡೀ ವಿಶ್ವದ ತತ್ವಜ್ಞಾನವನ್ನು ಅರಿತಿರುವುದಿಲ್ಲ. ಆದರೆ ಮನುಷ್ಯನಿಗೂ ವಿಶ್ವದ ಮೂಲಶಕ್ತಿಗೂ ತಾತ್ವಿಕಸಂಬಂಧವಿರುವದರಿಂದ ಪ್ರಯತ್ನತಃ ಅದನ್ನು ತಿಳಿದುಕೊಂಡು, ಅದರೊಡನೆ ತಾದಾತ್ಮ್ಯ ಹೊಂದುವ ಸಾಮರ್ಥ್ಯವು ಅವನಲ್ಲಿರುವದು. ಹಾಗೆ ಅವನು ಮಾಡಿದರೆ ಜ್ಞಾನಿಯೆನಿಸುವನು. ಅಲ್ಲಿಯವರೆಗೆ ಅವನು ಅಜ್ಞಾನಿಯು. ಜ್ಞಾನಿಯಾದ ನೆಂದರೆ, ಆ ಮೂಲಶಕ್ತಿಯಂತೆ, ಆ ತಾತ್ವಿಕ ಸತ್ಯವಸ್ತುವಿನಂತೆ, ಅವನು ಮುಕ್ತನು. ಅಲ್ಲಿಯ ವರೆಗೆ ಅದರ ಅಂಶಾವಿರ್ಭಾವಗಳಂತೆ ಬದ್ಧನು, ಮರ್ಯಾದಿತನು, ದುಃಖಿಯು.

ಈ ಅಜ್ಞಾನ, ಅವಿದ್ಯೆ, ಮಾಯೆ ಇವರ ಬಗ್ಗೆ ಪ್ರಜ್ಞನಕಾರರು ಏನನ್ನುವರು ನೋಡುವ.

ಈ ಅಜ್ಞಾನವು ಮಾಯಾಮೋಹರೂಪವಿರುವದು ಎಂದು ಮೊದಲು ಹೇಳುವರು.

ವಚನಗಳು

೧೪೯. ವಾರಿ ಬಲಿದು ವಾರಿಕಲ್ಲಾದಂತೆ ಶೂನ್ಯವೆ ಸ್ವಯಂಭು ವಾಯಿತ್ತು. ಆ ಸ್ವಯಂಭುಲಿಂಗದಿಂದ ಆಯಿತ್ತು ಮೂರ್ತಿ. ಆ ಮೂರ್ತಿಯಿಂದಾಯಿತ್ತು ವಿಶ್ವೋತ್ಪತ್ತಿ. ಆ ವಿಶ್ವೋತ್ಪತ್ತಿಯಿಂದಾಯಿತ್ತು ಸಂಸಾರ. ಆ ಸಂಸಾರದಿಂದಾಯಿತ್ತು ಮರವೆ. ಆ ಮರವೆಯೆಂಬ ಮಹಾಮಾಯೆ ವಿಶ್ವದ ಮುಸುಕಿನಲ್ಲಿ ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲ ತಾಮಸಕ್ಕೊಳಗಾಗಿ, ಮೀನಕೇತನನ ಬಲೆಗೆ ಸಿಕ್ಕಿ, ಮಾಯೆಯ ಬಾಯ ತುತ್ತಾದರಲ್ಲಾ, ಗುಹೇಶ್ವರಾ.

ಟಿಪ್ಪಣಿ:— ಶೂನ್ಯ ಅಂದರೆ ಯಾವ ಇಂದ್ರಿಯಕ್ಕೂ ಗೋಚರವಾಗದ ನಿರ್ಗುಣ ವಸ್ತು, ಉಪನಿಷತ್ತುಗಳಲ್ಲಿ ಅಥವಾ ನಾಸದೀಯ ಸೂಕ್ತದಲ್ಲಿ (ಋಗ್ವೇದ) ಹೇಳಿನ 'ಅಸತ್.'

೧೫೦. ತರಗೆಲೆಯ ಮೆದ್ದು ತಪವಿದ್ದರೂ ಬಿಡದು ಮಾಯೆ. ಗಾಳಿಯ ಆಹಾರವ ಕೊಂಡು ಗುಹೆಯ ಹೊಕ್ಕಡೆಯೂ ಬಿಡದು ಮಾಯೆ. ತನುವಿನ ವ್ಯಾಪಾರ ಮನದಲ್ಲಿ ವ್ಯಾಕುಳವಾಗಿ ಕಾಡಿತ್ತು ಮಾಯೆ. ಆವಾವ ಪರಿಯಲ್ಲಿಯೂ ಘಾತಿಸಿ ಕೊಲ್ಲುತಿದೆ ಮಾಯೆ. ಈ ಪರಿಯ ಬಾಧೆಯಲ್ಲಿ ಬಳಲುತ್ತಿದೆ ಜಗವೆಲ್ಲ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿನ್ನವರ ನೀ ಮಾಯಾಸಂಸಾರದ ಬಾಧೆಯಲ್ಲಿ ಬಳಲದಂತೆ ಮಾಡಯ್ಯ, ನಿಮ್ಮ ಧರ್ಮ.

೧೫೧. ನಾನೊಂದ ನೆನೆದರೆ ತಾನೊಂದ ನೆನೆವುದು. ನಾನಿತ್ತಲೆಳೆದರೆ ತಾನತ್ತಲೆಳೆವುದು. ತಾ ಬೇರೆ ಎನ್ನನಳಲಿಸಿ ಕಾಡಿತ್ತು. ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು. ಕೂಡಲ ಸಂಗಮದೇವನ ಕೂಡಿಹೆನೆಂದರೆ ತಾನೆನ್ನ ಮುಂದುಗೆಡಿಸಿತ್ತು ಮಾಯೆ.

೧೫೨. ವೇದವೇದಾಂತಗಳಿಂದ ಸಿದ್ಧಸಿದ್ಧಾಂತಗಳಿಂದ ಎಲ್ಲಿ ನೋಡಿದಡೂ ವಿಚಾರ ಒಂದೇ ಭೇದ. ಅರಿದಲ್ಲಿ ಮಲಕ್ಕೆ ಹೊರಸು, ಮರೆದಲ್ಲಿ ಮಲಕ್ಕೊಳಗು. ಅರಿವು ಮರವು ನಿಂದಲ್ಲಿ ಸದಾಶಿವಮೂರ್ತಿಲಿಂಗದ ಬೆಳಗು.

ವಿವರಣೆ

ವಿಶ್ವೋತ್ಪತ್ತಿಯೊಡನೆಯೆ ಮಾಯೆ ಹುಟ್ಟಿತು, ಅದು ಎಲ್ಲರನ್ನೂ ಪೀಡಿಸುವದು, ಬರೀ ಜಪತಪಗಳನ್ನು ಮಾಡಿದರೆ ಅದು ಬಿಡದು, ಅವನ ಇಚ್ಛೆಯ ವಿರುದ್ಧ ಮನುಷ್ಯನನ್ನು ಪಾಪಕ್ಕೆಳಸಿ ಅದು ಕೆಡಿಸುವದು, ಅವನ ಮುಕ್ತಿಪಥದಲ್ಲಿ ಅಡ್ಡಬೀಳುವದು. ಅದು ಮರವಿನ ರೂಪಧರಿಸಿ ಕಾರುವದು, ಎಂಬ ವಿಚಾರಗಳನ್ನು ಪ್ರಕಟಮಾಡಿದ ಬಳಿಕ ವಚನಕಾರರು ಅಹಂಕಾರಾದಿಗಳೂ ಅದರ ರೂಪಗಳೇ ಎಂಬುದನ್ನು ಹೇಳುವರು.

ವಚನಗಳು

೧೫೩. ನಾ ನೀನೆಂಬ ಅಹಂಕಾರ ತಲೆದೋರಿದಲ್ಲಿ ಅಟಮಟ ಕುಟಿಲ ಕುಹಕವೆಂಬ ಬಿರುಗಾಳಿ ಬಿಟ್ಟತ್ತು. ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟತ್ತು. ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲರೂ ತಾಮಸಕ್ಕೊಳಗಾಗಿ, ಸೀಮೆತಪ್ಪಿ ಕೆಟ್ಟರು ಕಾಣಾ ಗುಹೇಶ್ವರಾ.

೧೫೪. ನಾನೆಂಬಹಂಕಾರದಲ್ಲಿ ನಾನುಂಡೆನಾದರೆ, ಎನಗದೇ ಭಂಗ. ಸ್ತುತಿ ನಿಂದೆಗೆ ನೊಂದೆನಾದಡೆ ಅಂಗೈಯಲ್ಲಿದ್ದ ಗುಹೇಶ್ವರಲಿಂಗಕ್ಕೆ ದೂರ.

ಟಿಪ್ಪಣಿ:— ಅಹಂಕಾರದಿಂದಲೆ ಎಲ್ಲ ತಾಮಸಕ್ಕೆ ಪ್ರಾರಂಭವಾಗುವದು. ಅಲ್ಲಿಂದಲೆ ದುಃಖಪರಂಪರೆಯು ಮೊದಲುಮಾಡುವದು.

೧೫೫. ಕಂಗಳ ಮುಂದಣ ಕಾಮನ ಕೊಂದು, ಮನದ ಮುಂದಣ ಆಸೆಯ ತಿಂದು, ಆತನನರಿ, ಆತುರವೈರಿ ಮಾರೇಶ್ವರಾ.

೧೫೬. ಹೊನ್ನು ಮಾಯೆ ಎಂಬರು, ಹೆಣ್ಣು ಮಾಯೆ ಎಂಬರು, ಮಣ್ಣು ಮಾಯೆ ಎಂಬರು. ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ. ಮನದ ಮುಂದಣಾಸೆಯೆ ಮಾಯೆ ಕಾಣಾ ಗುಹೇಶ್ವರಾ.

೧೫೭. ಆಸೆಯೆಂಬ ಶೂಲದ ಮೇಲೆ ವೇಷವೆಂಬ ಹೆಣನ ಕುಳ್ಳಿರಿಸಿದರೆ ಮೇಲುಳ್ಳ ಹಿರಿಯರು ಹೀಗೆ ಸವೆದರು ನೋಡಾ. ಆಸೆಯ ಮುಂದಿಟ್ಟು ಕೊಂಡು ಸುಳಿವ ಹಿರಿಯರ ಕಂಡು ಗುಹೇಶ್ವರಲಿಂಗಕ್ಕೆ ಹೇಸಿಕೆಯಾಯಿತ್ತು, ಕಾಣಾ ಸಂಗನ ಬಸವಣ್ಣ.

೧೫೮. ನಿಲ್ಲಿಸಬಹುದಯ್ಯ ಒಂದೇ ಮಂತ್ರದಿಂದ ಕಾಳೋರಗನ. ನಿಲ್ಲಿಸಬಹುದಯ್ಯ ಒಂದೇ ಮಂತ್ರದಿಂದ ಹಾರುವ ಪಕ್ಷಿಯನು. ನಿಲ್ಲಿಸಬಹುದಯ್ಯ ಒಂದೇ ಮಂತ್ರದಿಂದ ಹೆಬ್ಬುಲಿಯ. ನಿಲ್ಲಿಸಬಹುದಯ್ಯ ಒಂದೇ ಮಂತ್ರದಿಂದ ಮೃತ್ಯುವೆಂಬ ಹೆಮ್ಮಾರಿಯ. ಲೋಭವೆಂಬ ಗ್ರಹ ಹಿಡಿದವರನು ಯಾತರಿಂದಲೂ ಬಿಡಿಸಲಾಗದು. ಈ ಲೋಭಕ್ಕೆ ದರಿದ್ರವೇ ಔಷಧವು. ಹೇಳಿದರೆ ಕೇಳರು, ತಾವು ತಿಳಿಯರು, ಶಾಸ್ತ್ರವ ನೋಡರು, ಭಕ್ತಿಯ ಹಿಡಿಯರು. ಇಂಥ ಗೊಡ್ಡುಮೂಳ ಹೊಲೆಯರಿಗೆ ಕರ್ಮವೆಂಬ ಶರಧಿಯಲ್ಲಿ ಬಿದ್ದು ಉರುಳಾಡುವುದೇ ಸತ್ಯವೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಟಿಪ್ಪಣಿ:— ಎಲ್ಲ ಮಾಯೆಗೆ ಆಸೆಯೆ ಮೂಲ. ಆಸೆ, ಲೋಭ, ಕಾಮನೆ, ವಾಸನೆ, ತೃಷ್ಣೆ, ಇಚ್ಛೆ, ಇವೆಲ್ಲ ಪರ್ಯಾಯಶಬ್ದಗಳೆ. ಆಸೆಯಿಂದ ಮನುಷ್ಯನ ಮಾಯಾಜಾಲವು ಬೆಳೆಬೆಳೆದು ಅವನನ್ನು ತೊಡಕಿಸುವದು.

೧೫೯. ಪರರಾಸೆ ಎಂಬ ಜ್ವರ ಹತ್ತಿ ನಾನು ಕಳವಳಿಸಿ ನುಡಿವೆನಯ್ಯಾ! ಹೊನ್ನು ಹೆಣ್ಣು ಮಣ್ಣು ಬಯಸಿ ವಿಕಳತೆಗೊಂಡಂತೆ ಪ್ರಲಪಿಸುತ್ತ ನುಡಿವೆನಯ್ಯಾ! ಈ ಕಳವಳ ನಿಲಿಸಿ, ನಿಮ್ಮ ಕರುಣಾಮೃತವೆಂಬ ಕಷಾಯವನೆರೆದು, ಪರರಾಸೆ ಎಂಬ ಜ್ವರವ ಮಾಣಿಸು, ಬಸವಪ್ರಿಯ ಕೂಡಲ ಸಂಗಮದೇವಾ.

೧೬೦. ಕಾಂಚನವೆಂಬ ನಾಯ ನೆಚ್ಚಿ ನಿಮ್ಮನು ನಾನು ಮರೆದೆನಯ್ಯಾ. ಕಾಂಚನಕ್ಕೆ ವೇಳೆಯಲ್ಲದೆ ನಿಮ್ಮ ಪೂಜೆಗೆ ವೇಳೆಯಿಲ್ಲ. ಹಡಕಿಗೆ ಮೆಚ್ಚಿದ ಸೊಗಗನು ಅಮೃತದ ರುಚಿಯ ಬಲ್ಲುದೆ ಕೂಡಲ ಸಂಗಮದೇವಾ ?

೧೬೧. ಬ್ರಹ್ಮದ ಮಾತನಾಡಿ ಕನ್ಯೆಯರ ಕಾಲದೆಸೆಯಲ್ಲಿ ಕುಳಿತಲ್ಲಿ ಪರಬೊಮ್ಮದ ಮಾತು ಅಲ್ಲಿ ನಿಂತಿತೆಂದನಂಬಿಗರ ಚೌಡಯ್ಯ.

೧೬೨. ಅಣ್ಣನೆಂಬಣ್ಣಗಳ ಅಣ್ಣೆಸೋದು ಹೊನ್ನು, ಅಣ್ಣನೆಂಬಣ್ಣಗಳ ಅಣ್ಣೆಸೋದು ಹೆಣ್ಣು, ಅಣ್ಣನೆಂಬಣ್ಣಗಳ ಅಣ್ಣೆಸೋದು ಮಣ್ಣು. ಹೊನ್ನ ಕಂಡ ಬಳಿಕ ಅಣ್ಣದಣ್ಣಗಳಾರು? ಹೆಣ್ಣ ಕಂಡಬಳಿಕ ಅಣ್ಣದಣ್ಣಗಳಾರು? ಮಣ್ಣ ಕಂಡ ಬಳಿಕ ಅಣ್ಣದಣ್ಣಗಳಾರು? ಹೆಣ್ಣು, ಹಿರಣ್ಯ, ಭೂಮಿ, ಎಂಬ ಹುಡಿಯ ಜಗದ ಕಣ್ಣ ಮೇಲೆ ಹೊಯ್ದು ನಿಮ್ಮ ನೆನೆಹುದಕ್ಕೆ ತೆರಹುಗುಡದಿದೆಯಲ್ಲಾ ಸೊಡ್ಡಳಾ, ಗರಳಗಳಧರಾ.

ಟಿಪ್ಪಣಿ:—ಆಸೆಯು ಮುಖ್ಯವಾಗಿ ಮೂರು ರೂಪಗಳಿಂದ ಮನುಷ್ಯನನ್ನು ಆವರಿಸುವದು. ಹೊನ್ನು, ಹೆಣ್ಣು, ಮಣ್ಣು ಇವೇ ಆ ಮೂರು ರೂಪಗಳು. ಅವುಗಳ ವರ್ಣನೆಯನ್ನೆ ಮೇಲಿನ ಮೂರು ವಚನಗಳು ಮಾಡಿರುವವು.

೧೬೩. ಸಂಸಾರವೆಂಬುದು ಗಾಳಿಯ ಸೊಡರು. ಸಿರಿ ಎಂಬುದೊಂದು ಸಂತೆಯ ಮಂದಿ ಕಂಡಯ್ಯ. ಇದನು ನೆಚ್ಚಿ ಕೆಡಬೇಡ. ಸಿರಿ ಎಂಬುದ ಮರೆದು ಪೂಜಿಸು ನಮ್ಮ ಕೂಡಲ ಸಂಗಮದೇವನ.

೧೬೪. ಸಂಸಾರವೆಂಬ ಘೋರಾರಣ್ಯದಲ್ಲಿ ಹೊಲಬು ತಪ್ಪಿ ಬಳಲುತ್ತಿಹೆ, ನೋಡಯ್ಯ. ಇರುಳು ಹಗಲೆನ್ನದೆ ಸಂಸಾರದಲ್ಲಿ ಸಾವುತ್ತಿಹೆ ನೋಡಯ್ಯ. ಇಂತಪ್ಪ ಸಂಸಾರಾರಣ್ಯದಲ್ಲಿ ಹೊಲಬುಗೆಟ್ಟು ನೆಲೆಯಗಾಣದೆ ಹೋದರು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮನರಿಯದೆ.

೧೬೫. ಸಂಸಾರಸಾಗರದಿಂದಲುದಿಸಿದ ಸುಖವೆ ದುಃಖವೆಂದರಿಯದೆ, ಆ ಸುಖವನೆ ಮೆಚ್ಚಿ ಭವದುಃಖವೆಂಬ ಕ್ರೂರ ಜನ್ಮಚಕ್ರಕ್ಕೀಡಾಗಿ, ಅಲ್ಲಿ ತನ್ನ ಮರೆದು, ತನಗಿಲ್ಲದ ಭ್ರಮೆಯ ತನ್ನದೆಂದು, ಅಂತಪ್ಪ ಘೋರದೊಳಗೊಳಾಡುತಿಪ್ಪ ಅಜ್ಞಾನ ಜೀವಿಗಳು ನಿಮ್ಮನೆತ್ತ ಬಲ್ಲರಯ್ಯ, ಎನ್ನ ಪ್ರಿಯ ಈರ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ ?

೧೬೬. ಪಂಚೇಂದ್ರಿಯವೆಂಬ ಹೆಡೆಯನುಳ್ಳ ಸಂಸಾರಸರ್ಪ ದಷ್ಟವಾಗಲು ಪಂಚವಿಷಯವೆಂಬ ವಿಷಹತ್ತಿ ಮೂರ್ಛಿತರಾದರೆಲ್ಲ ಲೋಕವೆಲ್ಲ.

ಸರ್ವರ ಕಚ್ಚಿ ಕೂಡಿಯಾಡುವ ಸರ್ಪನ ಬಾಯ ಕಟ್ಟಲರಿಯದೆ ಮರಣವಾದರಲ್ಲಿ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನನರಿಯದವರೆಲ್ಲ.

ಟಿಪ್ಪಣಿ:— ಸಂಸಾರದಲ್ಲಿ ಪಂಚ ಇಂದ್ರಿಯಗಳ ಮುಖಾಂತರ ಸುಖವು ಆಗುವುದೇ ಇಲ್ಲ ಎಂದು ಯಾರೂ ಪ್ರತಿಪಾದಿಸುವುದಿಲ್ಲ, ವಚನಕಾರರೂ ಹಾಗೆ ಹೇಳುವುದಿಲ್ಲ. ಆ ಸುಖವು ಭಂಗುರವು, ದುಃಖದ ಬೀಜವು ಇರುವದೆಂದು ಅವರ ಮತವು. ಆದುದರಿಂದ ಆ ಸುಖಕ್ಕೆ ಮೋಹಿತರಾಗ ಬೇಡಿರಿ, ಎಂದು ಅವರ ಹೇಳಿಕೆಯು. ಆ ಪರತಾತ್ರ ಸುಖಕ್ಕಿಂತ ಸ್ವತಂತ್ರವಾದ ಆತ್ಮಸುಖವನ್ನು ಪಡೆಯಲು ಯತ್ನಿಸಿರಿ, ಎಂಬು ಅವರ ಉಪದೇಶವು.

೧೬೭. ಸಂಸಾರ ಸೌಖ್ಯವಲ್ಲ, ಸಂಸಾರ ಸೌಖ್ಯವಲ್ಲ. ಇಹಲೋಕ ಪರಲೋಕ ಸೌಖ್ಯವಲ್ಲ, ಸ್ಥಿರವಲ್ಲ. ಗ್ರಹಪಾಶ, ಕ್ಷೇತ್ರಭ್ರಮೆ, ಬಳಸಿ ಬಳಸಿ ಬರುತ್ತಿದೆ. ಬಿಡು ಬಿಡು ವಾಂಛೆಯ. ಆಗ ಹುಟ್ಟ ಬೇಗ ಸಾವವರ ಕಂಡು, ಮತ್ತೇಕೆ ಸಂಸಾರದಾಸೆ? ನಿನ್ನ ದೇಹ ಸ್ಥಿರವಲ್ಲ. ನೀ ಬಂದುದನರಿದು, ಹೋಹ ಗತಿಪಥವ ತೆರಹುಮಾಡು, ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಒಂದಿಹರೆ.

ಟಿಪ್ಪಣಿ:— ಒಂದಿಹರೆ ಅಂದರೆ ಒಂದು ಆಗಬೇಕಾಗಿದ್ದರೆ, ಐಕ್ಯವಾಗಬೇಕಾಗಿದ್ದರೆ, ಆತ್ಮಜ್ಞಾನವನ್ನು ಪಡೆದು ನಿನ್ನ ಹಾದಿಯನ್ನು ನೀ ಮಾಡಿಕೊ, ಎಂದರ್ಥ.

೧೬೮. ಸಂಸಾರಸುಖವೆತ್ತ ನಿಮ್ಮ ನಿಜಸುಖವೆತ್ತ? ಕತ್ತಲೆ ಎತ್ತ ಬೆಳಗೆತ್ತ ? ಎನ್ನಂತರಂಗದೊಳಗಿರ್ದು ತೋರುವೆ ಅಡಗುವೆ. ಇದೇನು ಗಾರುಡಿಗತನ ? ಎನಗೆ ಸವಿಹಾಲು ಸಕ್ಕರೆಯನುಣಗಲಿಸಿ ಬೇವನ್ನುಣಿಸಿಹೆನೆಂದಡೆ ಅದು ಹಿತವಹುದೆ? ನಿನ್ನ ನಿಜಸುಖದ ಸವಿಕಲಿಸಿ ಸಂಸಾರಸುಖವನುಣಿಸಿಹೆನೆಂದರೆ ಅದು ಮನಕೊಂಬುದೆ ? ಎನ್ನೊಡನೆ ವಿನೋದವೇಕೆ? ನನಗೆ ಬೇಡ ಬೇಡ. ಎನ್ನ ನೀನರಿದು ಸಲಹು. ನಿನಗೆ ಎನ್ನಾಣೆಯಯ್ಯಾ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟಿಪ್ಪಣಿ:— ವಿಷಯಸುಖ ಮತ್ತು ಆತ್ಮಸುಖ, ಸಂಸಾರಸುಖ ಮತ್ತು ಮೋಕ್ಷಸುಖ, ಸ್ವಾರ್ಥಸುಖ ಮತ್ತು ಪರಮಾರ್ಥಸುಖ ಇವುಗಳಲ್ಲಿ ಅಜಗಜಾಂತರವಿರುವದು.

೧೬೯. ರೋಗಿಗೆ ಹಾಲು ಸಿಹಿಯಪ್ಪುದೇ? ಗೂಗೆಗೆ ರವಿ ಲೇಸಪ್ಪುದೆ? ಚೋರಂಗೆ ಬೆಳಗು ಗುಣವಪ್ಪುದೆ? ಭವಸಾಗರದ ಸಮಯದಲ್ಲಿದ್ದವರು

ನಿರ್ಭಾವನ ಭಾವವನೆತ್ತಬಲ್ಲರು? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ, ಇಲ್ಲ ಇಲ್ಲ ಎಂಬೆ.

ಟಿಪ್ಪಣಿ:— ಸಂಸಾರದಲ್ಲಿ ಮುಳುಗಿದವರಿಗೆ ನಿಜಸುಖದ ರುಚಿಯು ಎಂದೂ ತಿಳಿಯದು. ಕಣ್ಣಮೇಲಿನ ಪಟಲವು ದೂರಾದಾಗಲೆ ನಿಜಬೆಳಗು ತೋರುವದು.

೧೭೦. ಜಗದಗಲದ ಮಾಯಾಜಾಲವ ಹಿಡಿದು ಕಾಲನೆಂಬ ಜಾಲಗಾರ ಮಾಯಾಜಾಲವ ಬೀಸಿದ ನೋಡಯ್ಯ. ಆ ಜಾಲಕ್ಕೆ ಹೊರಗಾದವರನೊಬ್ಬರನೂ ಕಾಣೆ. ಬಲ್ಲಬಲ್ಲಿದರೆಂಬುವರೆಲ್ಲರ ಬಲೆಯ ಕಲ್ಲಿಯೊಳಗೆ ತುಂಬಿದ. ಕಾಲಕಾಲನ ಬಲೆಯೊಳಗೆ ಸಿಕ್ಕಿ ಬೇಳುವೆಗೊಳ್ಳುತ್ತಿದೆ ಜಗವೆಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತನ್ನವರಿಗೆ ಮೇಲಾರ್ಕೈಕೆಯಾಗಿಹನು.

೧೭೧. ಸಂಸಾರವೆಂಬ ಮಹಾವ್ಯಾಧಿ ಬಾಧಿಸಿ ನಡೆವೆಣನ ಮಾಡಿ ಕಾಡುತ್ತಿದೆ ನೋಡಯ್ಯ. ಮುಂದೆ ಸತ್ಪಥದಲ್ಲಿ ಅಡಿ ಇಡಲು ಶಕ್ತಿ ಇಲ್ಲದೆ, ಅಧಮನ ಮಾಡಿ ಕಾಡುತ್ತಿದೆ ನೋಡಯ್ಯ. ಶಿವನೇ, ನಾನು ನಿನ್ನ ಬೇಡಿಕೊಂಬೆನು, ನೀನೇ ಶ್ರೀಗುರುವೆಂಬ ವೈದ್ಯನಾಗಿ ಬಂದು, ಕೃಪಾಪ್ರಸಾದವೆಂಬ ಮದ್ದು ಕೊಟ್ಟು, ಪಂಚಾಕ್ಷರಿ ಎಂಬ ಪಥ್ಯವನೆರೆದು, ಸಂಸಾರವ್ಯಾಧಿಯ ಮಾಣಿಸಯ್ಯ, ನಿಮ್ಮ ಧರ್ಮ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟಿಪ್ಪಣಿ:— ಮಾಯೆಯೆಂಬುದು ಜಗದಗಲ ಎಂದರೆ ಜಗತ್ತಿನಷ್ಟು ವಿಸ್ತೃತವಿರುವದು. ಇದರಲ್ಲಿ ಎಲ್ಲ ದೊಡ್ಡದೊಡ್ಡವರು, ಬಲವುಳ್ಳವರು ಸಿಕ್ಕು ಒದ್ದಾಡುವರು; ಅವರು ನಡೆವೆಣ ಅಂದರೆ ನಡೆಯುವ ಹೆಣಗಳಂತೆ ನಿಃಸತ್ವರಾಗಿರುವರು. ಅವರನ್ನು ದೇವರ ಪ್ರಸಾದವೆ ಒಂದು ಇನ್ನು ಕಾಯಬೇಕು.

---

೯. ಮುಕ್ತಿಯ ಬಯಕೆ

ವಿವರಣೆ

ಮುಕ್ತಿಯ ಬಯಕೆಯು ಅಂದರೆ ಪರಮಾನಂದದ ಇಚ್ಛೆಯು ಮಾನವ ಮಾತ್ರರಲ್ಲಿ ಸ್ವಾಭಾವಿಕವಿರುವದು. ಇದು ಮನುಷ್ಯನ ಮನೋಧರ್ಮವೆಂದರೂ ಸಲ್ಲುವದು. ಮುಕ್ತಿಯನ್ನು ಪಡೆಯುವುದಕ್ಕೆ ಮನುಷ್ಯನಿಗೆ ಮುಖ್ಯವಾಗಿ ಅಜ್ಞಾನ, ಮಾಯೆ, ಅವಿದ್ಯೆ ಎಂಬವು ಅಡ್ಡಬರುವವು. ಅಜ್ಞಾನವು ಮನುಷ್ಯನಲ್ಲಿರುವ ಮುಕ್ತಿಯ ಇಚ್ಛೆಯನ್ನು ಮುಸುಕಿ ಮೂಲೆಗೊತ್ತಿ ವಿಷಯಾಸಕ್ತಿಯನ್ನು ಪ್ರಬಲಗೊಳಿಸುವದು. ಆ ಅಜ್ಞಾನದ ವರ್ಣನೆ ಮತ್ತು ಅದರ ವಿವಿಧ ರೂಪಗಳ ವಿವರಣೆ ಇವು ಮೇಲೆ ಬಂದಿವೆ. ಅಜ್ಞಾನದ ವಿವಿಧರೂಪಗಳಾದ ಅಹಂಕಾರ, ಆಸೆ, ಕಾಮನೆ, ವಿಷಯೇಚ್ಛೆ ಇವುಗಳಿಂದ ನಿಜವಾದ ಸುಖವು ಎಂದಿಗೂ ಪ್ರಾಪ್ತವಾಗದು. ಈ ಅಸ್ಥಿರ, ದುಃಖಮಿಶ್ರಿತ, ಪರಾವಲಂಬಿಯಾದ ವಿಷಯಸುಖಕ್ಕಿಂತ ನಿರಾಲಂಬವಾದ ನಿಜಸುಖವು ಬೇರೆ ಇರುವದು, ಎಂಬ ಅನುಭವವು ಮನುಷ್ಯನಿಗೆ ಬರುವದು. ಅದನ್ನು ಶೋಧಿಸಿ, ದೊರಕಿಸಿ ಅದರಲ್ಲಿ ಮಗ್ನನಾಗಬೇಕು, ಎಂದು ಮನುಷ್ಯನಿಗೆ ಎನಿಸಲಾರಂಭಿಸಿತೆಂದರೆ ಮುಕ್ತಿಯ ಬಯಕೆಯು ಜಲಗೊಂಡಿತೆಂದು ತಿಳಿಯಬೇಕು. ಮನುಷ್ಯನಲ್ಲಿಯ ಸ್ವಾಭಾವಿಕ ಮುಮುಕ್ಷುತ್ವಕ್ಕೆ ಆಗ ಆಸ್ಪದ ದೊರೆಯಿತೆಂದು ಹೇಳಬಹುದು.

ವಿಷಯಸುಖಗಳ ಬಗ್ಗೆ ತಿರಸ್ಕಾರ, ಹೇಯಭಾವನೆ ಮತ್ತು ಪರಮ ಸುಖದ ಬಗ್ಗೆ ಆದರ ಹಾಗೂ ಆತುರತೆ ಇವೇ ಮುಕ್ತಿಯ ಬಯಕೆಯ ಲಕ್ಷಣಗಳು.

ಮುಕ್ತಿಯ ಬಯಕೆಯೆಂದರೆ ಸತ್ತ ಬಳಿಕ ಅಥವಾ ದೇಹಪಾತದ ನಂತರ ಯಾವದೊಂದು ಸುಖವನ್ನು ದೊರಕಿಸುವ ಇಚ್ಛೆಯಲ್ಲ. ಇಲ್ಲಿಯೆ, ಈ ದೇಹವಿರುವಾಗಲೆ, ಈ ಜನ್ಮದಲ್ಲಿಯೆ, ಪರಮಾನಂದಸಿಂಹಾಸನವನ್ನೇರುವ ಬಯಕೆಯೆ ಮುಕ್ತಿಯ ಬಯಕೆಯು. ವಿದೇಹಮುಕ್ತಿಯು ಇಂಥ ಮುಕ್ತಿಯ ಸ್ವಾಭಾವಿಕ ಪರಿಣಾಮವು. ಆ ಆನಂದಸಿಂಹಾಸನಕ್ಕೆ

ಹೋಗಲಿಕ್ಕೆ ಒಂದು ಆನಂದ ಸೋಪಾನವಿರುವುದೆಂದು ಕಲ್ಪಿಸಿದರೆ ವಿಷಯಾನಂದವು ಅದರ ಅಡಿಯ ಮೆಟ್ಟು, ಮತ್ತು ಪರಮಾನಂದವು ಅದರ ತುಟ್ಟತುದಿಯ ಮೆಟ್ಟು ಎಂದು ಅನ್ನಬಹುದು. ವಿಷಯಾನಂದವು ಪರಮಾನಂದವ ಕೇವಲ ಛಾಯೆ ಅಥವಾ ಪ್ರತಿಬಿಂಬವಿರುವದು. ಮನುಷ್ಯನು ವಿಷಯಸುಖಗಳಿಂದ ಮೊದಲು ಆಕರ್ಷಿಸಲ್ಪಡುವನು. ವಿಷಯಸುಖವು ಕೇವಲ ಪ್ರತಿಬಿಂಬವು ಎಂಬ ಪ್ರತೀತಿಯಾದ ಬಳಿಕ ಅದಕ್ಕಿಂತ ಹೆಚ್ಚಿನ ಆನಂದವನ್ನು ಹುಡುಕಲಾರಂಭಿಸುವನು. ಕಲೆ, ಸುಂದರ ಕಲ್ಪನೆ ಇವುಗಳಿಂದಾಗುವ ಆನಂದವು ವಿಷಯಾನಂದಗಳಿಗಿಂತ ಸೂಕ್ಷ್ಮವೂ ಅವುಗಳಾಚೆಗಿನದೂ ಇರುವದು. ಅದರಾಚೆಗೆ ಸದಾಚಾರ, ಸದ್ವರ್ತನಗಳ ಆನಂದವಿರುವದು, ಅದರಾಚೆಗೆ ತ್ಯಾಗಾನಂದವು. ಅದಕ್ಕೂ ಆಚೆಗೆ ವಿಶ್ವವ್ಯಾಪಿ ಶಕ್ತಿಯಾದ ಪರಮಾತ್ಮನೊಡನೆ ಮನಸ್ಸನ್ನು ಸಂಯೋಗಿಸುವುದರಿಂದ ಆಗುವ ಯೋಗಾನಂದವು. ಮತ್ತೆ ಅದರಾಚೆ ಪರಮಾತ್ಮನೊಡನೆ ಒಂದಾಗುವುದರಿಂದ ಆಗುವ ಐಕ್ಯಾನಂದವು. ಇವುಗಳಲ್ಲಿ ಕೊನೆಯದೆ ಎಲ್ಲಕ್ಕೂ ಹೆಚ್ಚಿನದು, ಎಂದು ಬೇರೆ ಹೇಳಬೇಕಾಗಿಲ್ಲ.

ಮೇಲ್ಕಾಣಿಸಿದ ಈ ಆನಂದಸೋಪಾನದಲ್ಲಿಯ ಮೊದಲಿನ ಮೆಟ್ಟಿಲಾದ ಪರವಶ ವಿಷಯಾನಂದವು ಬೇಡ ಎಂದೆನಿಸಿ ಆತ್ಮವಶವಿರುವ ನಿಜಾನಂದವೆ ಬೇಕು, ಎಂಬ ಇಚ್ಛೆಯು ಪ್ರಬಲವಾಯಿತೆಂದರೆ ಅದೇ ಮುಕ್ತಿಯ ಬಯಕೆಯು.

ವಚನಗಳು

೧೭೨. ಬಡತನಕ್ಕೆ ಉಂಬುವ ಚಿಂತೆ. ಉಂಡರೆ ಉಡುವ ಚಿಂತೆ. ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡರ ಚಿಂತೆ, ಹೆಂಡರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ, ಬದುಕಾದರೆ ಕೇಡಿನ ಚಿಂತೆ, ಕೆಡದಿರೆ ಮರಣದ ಚಿಂತೆ, ಇಂತೀ ಹಲವು ಚಿಂತೆಯಲ್ಲಿ ಇಪ್ಪವರನ್ನು ಕಂಡೆನು. ಶಿವಚಿಂತೆ ಇದ್ದವರನೊಬ್ಬರನೂ ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

೧೭೩. ದೇಶ ಗುರಿಯಾಗಿ ಲಯವಾಗಿ ಹೋದವರ ಕಂಡೆ, ತಮಂಧ ಗುರಿಯಾಗಿ ಲಯವಾಗಿ ಹೋದವರ ಕಂಡೆ, ಕಾಮ ಗುರಿಯಾಗಿ ಬೆಂದು ಹೋದವರ ಕಂಡೆ, ನೀ ಗುರಿಯಾಗಿ ಹೋದವರ ಕಾಣೆ ಗುಹೇಶ್ವರಾ.

೧೭೪. ಎದರಡಸಿದಲ್ಲಿ ಮೃಡ ನಿಮ್ಮ ನೆನೆವರು. ಎಡರಡಸಿದ ವಿಪತ್ತು ಕಡೆಯಾಗಲೊಡನೆ, ಮೃಡ, ನಿಮ್ಮನೆಡಹಿಯೂ ಕಾಣರು ರಾಮನಾಥಾ.

ಟಿಪ್ಪಣಿ:— ಮೇಲಿನ ಮೂರು ವಚನಗಳು ಸಾಮಾನ್ಯ ಮನುಷ್ಯ ಸ್ವಭಾವವನ್ನು ವರ್ಣಿಸುವವು. ಆಪತ್ತು ಬಂದಾಗ ಮಾತ್ರ ದೇವರನ್ನು ನೆನೆವರು. ಮಿಕ್ಕ ವೇಳೆಯಲ್ಲಿ ವಿಷಯಗಳನ್ನು ಹೇಗೆ ದೊರಕಿಸಬೇಕು, ಎಂಬ ಒಂದೇ ಒಂದು ಚಿಂತೆ! ಸಂಕಟದಲ್ಲಿ ಮಾತ್ರ ವೆಂಕಟರಮಣ!

೧೭೫. ಸಂಸಾರವಿಷಯರಸವೆಂಬ ಕಾಳಕೂಟ ಹಾಳಾಹಳ ವಿಷವ ಕೊಂಡವರಾರಾದರೂ ಜೀವಿಸುವದುಂಟೆ? ಇಲ್ಲವಾಗಿ ಎಲ್ಲರೂ ಸಂಸಾರವಿಷಯರಸದಲ್ಲಿ ಸಾವುತ್ತಿದ್ದಾರೆ. ಆ ವಿಷಯಗಾಳಿ ಸೋಂಕಿ ಬಳಲುತ್ತಿದ್ದೆನಯ್ಯ. ನಿಮ್ಮ ಕೃಪಾಪ್ರಸಾದವೆಂಬ ನಿರ್ವಿಷವ ಕೊಟ್ಟು ರಕ್ಷಿಸಯ್ಯಾ ಎನ್ನ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೧೭೬. ಎರವಿನ ಬದುಕು ಸ್ಥಿರವಲ್ಲ; ಅಭ್ರಚ್ಛಾಯೆಯಂತೆ ನಿಮಿಷದಲ್ಲಿ ತೋರಿ ಅಡಗಲುಳ್ಳ ಈ ಸಂಸಾರದಲ್ಲಿ ಏನು ಲೇಸ ಕಂಡು ನಚ್ಚುವೆ? ನಚ್ಚದಿರು. ನೆಚ್ಚಿದವರು ಕೆಟ್ಟ ಕೇಡಿಂಗೆ ಕಡೆಯಿಲ್ಲ. ಬರಿಯ ಬಯಲ ಭ್ರಮೆ, ಶತೆಯ ಸಂಸಾರ. ಇದರಲ್ಲೇನೂ ಲೇಸವಿಲ್ಲೆಂದರಿದು ದೃಢವಿಡಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಶ್ರೀ ಚರಣವನು.

೧೭೭. ವಿಷಯವೆಂಬ ಹಸರನೆನ್ನಮುಂದೆ ತಂದು ಪಸರಿಸದಿರಯ್ಯಾ. ಪಶುವೇನಬಲ್ಲುದು ಹಸುರೆಂದೆಳಸುವುದಲ್ಲದೆ? ವಿಷಯರಹಿತನ ಮಾಡಿ, ಭಕ್ತಿರಸವ ದಣಿಯ ಮೇಯಿಸಿ, ಸುಬುದ್ಧಿ ಎಂಬ ಉದಕವನೆರೆದು, ನೋಡಿ ಸಲಹಯ್ಯಾ ಕೂಡಲ ಸಂಗಮದೇವಾ.

೧೭೮. ಕಪ್ಪೆ ಸರ್ಪನ ನೆರಳಲ್ಲಿ ಇರ್ಪಂತೆ ಎನಗಾಯಿತ್ತಯ್ಯಾ. ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ! ಕರ್ತೃ ಕೂಡಲ ಸಂಗಮದೇವಾ, ಇವನ್ನು ತಪ್ಪಿಸಿ ನನ್ನನ್ನು ರಕ್ಷಿಸಯ್ಯಾ ಪ್ರಭುವೇ.

೧೭೯. ಎಲ್ಲಿ ಸುಳಿದಡೆ ಅಲ್ಲಲ್ಲಿ ಉಪಾಧಿ ಬಿಡದಯ್ಯಾ! ಈ ಉಪಾಧಿಗೆ ಅಪಾಯವನಿತ್ತು ನಿರುಪಾಧಿಯಲ್ಲಿ ನಿಲಿಸಯ್ಯಾ! ಎಲ್ಲ ಬಯಕೆಯರತ ಬಟ್ಟೆಯ ತೋರಯ್ಯ. ಸಹಜ ಸಮ್ಯಕ್ತ್ವವನಿತ್ತು ಸಲಹಯ್ಯ ಸೌರಾಷ್ಟ್ರಸೋಮೇಶ್ವರಾ.

ಟಿಪ್ಪಣಿ:— ಮೇಲಿನ ನಾಲ್ಕು ವಚನಗಳಲ್ಲಿ ವಿಷಯಸುಖಗಳ ಬಂಧನವನ್ನು ಬಿಡಿಸು, ಯಾಕಂದರೆ ಅದು ವಿಷದಂತೆ ಮಾರಕವಿರುವದು, ಎಂದು ಭಕ್ತನು ದೇವರನ್ನು ಬೇಡಿಕೊಂಡಿರುವನು. ಈ ಭಾವವು ಹೆಚ್ಚು ದೃಢವಾಗಿ ಪರಮಸುಖದ ಬಗ್ಗೆ ಆತುರತೆಯು ತೀವ್ರತರವಾಗುತ್ತ ಹೋಗುವದು.

೧೬೦. ಎಂದೋ ಸಂಸಾರ ದಂದುಗ ಹಿಂಗುವದು! ಎಂದೋ ಮನದಲ್ಲಿ ಪರಿಣಾಮವಹುದೆನಗೆ! ಎಂದೋ ಎಂದೋ! ಕೂಡಲ ಸಂಗಮ ದೇವಾ, ಇನ್ನೆಂದೋ! ಪರಮಸಂತೋಷದಲ್ಲಿಹುದಿನ್ನೆಂದೋ!

೧೬೧. ಜೀವವುಳ್ಳನ್ನಕ್ಕರ ಕ್ರೋಧದ ಮೂಲ. ಕಾಯವುಳ್ಳನ್ನಕ್ಕರ ಕಾಮದ ಮೂಲ. ಸಂಸಾರವ್ಯಾಪ್ತಿಯ ಮೋಹವುಳ್ಳನ್ನಕ್ಕರ ಆಸೆಯ ಮೂಲ. ಇಂತಪ್ಪ ಆಸೆಯ ಕೆಡಿಸಿ ಮೋಕ್ಷದ ಲೇಸ ತೋರಿ ಬದುಕಿಸಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೬೨. ಸುಖವ ಪಡೆದೆನೆಂದು ಹಡೆದಡೆ, ನಿಬ್ಬೆಗದಿಂದ ಮತ್ತೊಂದು ದುಃಖವು ಕೈಕೊಂಬುದು. ದುಃಖಕ್ಕೆ ಎನೆ ಇಲ್ಲ. ಸಂಸಾರದೊಳಗಣ ಸುಖ ವಿಂತುಟು. ಮತ್ತೆ, ಕಡು ದುಃಖವನೆಂದಿಂಗೆ ನೀಗಿ, ಎಂದು ನಿಮ್ಮೊಡಗೂಡಿ ದೇರಾಗದೆಂದಿಪ್ಪೆನೋ ಕಪಿಲಸಿದ್ಧ ಮಲ್ಲಿಕಾರ್ಜುನಾ?

ಟಿಪ್ಪಣಿ:— ಮೇಲಿನ ಮೂರು ವಚನಗಳಲ್ಲಿ ವ್ಯಕ್ತವಾದ ಹಂಬಲವು ಹೆಚ್ಚುತ್ತ ಹೋದಂತೆ ಸಾಧಕನಿಗೆ ವಿಕಳಾವಸ್ಥೆಯು ಪ್ರಾಪ್ತವಾಗುವದು.

೧೬೩. ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ. ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ ನೆನೆವೆನಯ್ಯ. ಕಂದ, ನೀನಿತ್ತ ಬಾರೆಂದು ನೀವು ನಿಮ್ಮಂದವ ತೋರಯ್ಯ ಚನ್ನ ಮಲ್ಲಿಕಾರ್ಜುನಾ.

೧೬೪. ನಚ್ಚುಗೆ ಮನ ನಿಮ್ಮಲ್ಲಿ, ಮೆಚ್ಚುಗೆ ಮನ ನಿಮ್ಮಲ್ಲಿ, ಸಲುಹುಗೆ ಮನ ನಿಮ್ಮಲ್ಲಿ, ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ, ಕರಗುಗೆ ಮನ ನಿಮ್ಮಲ್ಲಿ, ಕೊರಗುಗೆ ಮನ ನಿಮ್ಮಲ್ಲಿ. ಎನ್ನ ಪಂಚೇಂದ್ರಿಯಂಗಳು ಕಪ್ಪುರ ಉಂಡ ಉರಿಯಂತೆ ನಿಮ್ಮಲ್ಲಿ ಬೆರಸುಗೆ ಚನ್ನಮಲ್ಲಿಕಾರ್ಜುನಯ್ಯಾ.

೧೬೫. ಚಿಲಿಮಿಲಿ ಎಂದೋಡುವ ಗಿಳಿಗಳಿರಾ, ನೀವು ಕಾಣಿರೆ? ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ? ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ? ಸರವರದೊಳಗಾಡುವ ಹಂಸಗಳಿರಾ, ನೀವು ಕಾಣಿರೆ? ಗಿರಿಗಂಹ್ವರದೊಳಗಾಡುವ ಪುಳಿಂದರೆ, ನೀವು ಕಾಣಿರೆ? ಚನ್ನ ಮಲ್ಲಿಕಾರ್ಜುನನೆಲ್ಲಿದ್ದಾನೆಂದು ಹೇಳಿರೆ.

೧೬೬. ವನವೆಲ್ಲ ನೀವೆ. ವನದೊಳಗಣ ದೇವತರುವೆಲ್ಲ ನೀವೆ. ತರುವಿನೊಳಗಾಡುವ ಖಗಮೃಗಗಳೆಲ್ಲ ನೀವೆ. ಚನ್ನಮಲ್ಲಿಕಾರ್ಜುನಾ, ಸರ್ವಭರಿತನಾಗಿ ಎನಗೆ ಮುಖದೋರೆ!

೧೬೭. ಮನವ ಮಂಚವ ಮಾಡಿ ಚಿತ್ತದಿ ಪಚ್ಚಡಿಸುವೆ, ಬಾರಯ್ಯ. ಎನ್ನ ಶಿವಲಿಂಗವೆ ಬಾರಯ್ಯ. ಎನ್ನ ಭಕ್ತವತ್ಸಲನೆ ಬಾರಯ್ಯ. ಎನ್ನ ಭಕ್ತ ದೇಹಿತದೇವನೇ, ಬಾರಯ್ಯ. ಎನ್ನಂತರಂಗದೊಳಿರು ಬಾರಯ್ಯ. ಎನ್ನ ಬಹಿರಂಗದೊಳಿರು ಬಾರಯ್ಯ. ನಿನ್ನನು ಕರೆವೆನು ಉಳಿಯುಮೇಶ್ವರಾ ಬಾರಯ್ಯ.

ಟಿಪ್ಪಣಿ:— ಭಕ್ತನ ತವಕವು ಮೇಲಿನ ಐದು ವಚನಗಳಲ್ಲಿ ಉತ್ತಮ ರೀತಿಯಲ್ಲಿ ವ್ಯಕ್ತವಾಗಿರುವದು. ವಿರಹಿಣಿಯ ವಿವ್ವಲ ಹೃದಯದಂತೆ ಮುಮುಕ್ಷು ವ್ಯಕ್ತಿಯ ಹೃದಯವು ನಿಜಸುಖಕ್ಕಾಗಿ ತಲ್ಲಣಗೊಳ್ಳುತ್ತಿರುವದು. ಆ ಸ್ಥಿತಿಯಲ್ಲಿದ್ದ ಸಾಧಕನು, ನನ್ನನ್ನು ಶುದ್ಧಮಾಡು, ಕಾಪಾಡು, ದೇವಾ, ನನಗೆ ಪರಮಶಾಂತಿಯನ್ನು ಕೊಡು, ಎಂದು ದೇವರಿಗೆ ಮೊರೆಯಿಡುವನು.

೧೬೮. ಅಡವಿಯಲ್ಲಿರ್ದ ಗೋವು ಮನೆಯಲಿರ್ದ ಕರುವಿಗೆ ಚಿಂತಿಸಿ, ಬಂದ ಹಾಲನೀಡಿ, ಮೋಹವ ಮಾಡುವದಲ್ಲದೆ ಆ ಕರವೆತ್ತ ಬಲ್ಲಪಯ್ಯಾ? ನಾನು ಕರ್ಮದೇಹವಿಡಿದು ಪರಿಭವದಲ್ಲಿ ತೊಳಲುತ್ತಿರಲು, ನೀನು ದಯೆ ಹುಟ್ಟಿ, ಎನ್ನ ಮರವೆಯ ಸಂಸಾರಮಂ ತೊಲಗಿಸಿ, ಕರುಣದಿಂದ ಸಲಹ ಬೇಕೆಂಬ ಚಿಂತೆ ನಿನಗಲ್ಲದೆ ನಾನೇನ ಬಲ್ಲೆನಯ್ಯಾ, ಅಖಂಡೇಶ್ವರಾ?

೧೬೯. ತನುವಿಕಾರ ಕತ್ತಲೆಯಲ್ಲಿ ಸಿಕ್ಕಿ, ಕಂಗೆಟ್ಟು ಕಳವಳಿಸಿ ತೊಳಲಿ ಬಳಲಿದೆನಯ್ಯ. ಮನವಿಕಾರ ಮರವೆಯಲ್ಲಿ ಸಿಕ್ಕು, ಮಣ್ಣು ಮಸಿಯಾಗಿ ಬಣ್ಣಗೆಟ್ಟಿನಯ್ಯ. ಈ ತನುಮನದ ವಿಕಾರವ ಮಾಣಿಸಿ, ನಿಮ್ಮ ಭಕ್ತಿ ವಿಚಾರದಲ್ಲಿರಿಸಿ, ಸಲಹಯ್ಯ ಎನ್ನ ಅಖಂಡೇಶ್ವರಾ.

೧೯೦. ನಾನೆಲ್ಲಿಂದ ಬಂದೆ, ನನಗೀ ದೇಹ ಬಂದ ಪರಿ ಅವುದು, ಇನ್ನು ಮುಂದೆ ಎಯ್ದುವ ಗತಿ ಯಾವುದು, ಎಂಬ ನಿತ್ಯನಿತ್ಯ ವಿಚಾರ ಹುಟ್ಟದವರಿಗೆ ಎಂದೆಂದಿಗೂ ಬಳಲಿಕೆ ಬಿಡದು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನೀವು ಬರಿಸಿದ ಭವಾಂತರದಲ್ಲಿ ಬರುತಿಹರಾಗಿ ನಾನು ಕಂಡು ಮರುಗುತ್ತಿರ್ದೆನು.

ಟಿಪ್ಪಣಿ:— ಪರಮಾತ್ಮನ ಕೃಪೆ, ಭಕ್ತಿ, ಆತ್ಮವಿಚಾರ ಇವು ಮುಕ್ತಿಗೆ ಸಾಧಕವೆಂದು ಈ ಮೇಲಿನ ಮೂರು ವಚನಗಳು ನಿರ್ದೇಶಿಸುವವು. ಈ ಮುಂದೆ ಸಾಧನಮಾರ್ಗದ ವಿವರವು ಇರುವದು.

---

೧೦. ಸಾಧನಮಾರ್ಗ-ಸರ್ವಾರ್ಪಣ.

ವಿವರಣೆ

ಹೋದ ಪ್ರಕರಣದ ಕೊನೆಯಲ್ಲಿ ಮುಕ್ತಿಯ ಬಯಕೆಯು ಹುಟ್ಟಿದ ಬಳಿಕ ವಿಷಯಗಳ ಬಗ್ಗೆ ವೈರಾಗ್ಯವುಂಟಾಗಿ ಮನುಷ್ಯನ ಮನಸು ಪರಮಾತ್ಮನನ್ನು ಕುರಿತು ಅತ್ಯಂತ ವಿವ್ಹಲವಾಗುವದು. ಮತ್ತು ಅವನನ್ನು ಕೂಡಲು ಮನುಷ್ಯನು ಸಾಧನಗಳನ್ನು ಹುಡುಕಲಾರಂಭಿಸುವನು, ಎಂದು ಹೇಳಿದ್ದೇವೆ. ಇನ್ನು ಆ ಸಾಧನಗಳಾವವು ಎಂಬುದನ್ನು ವಿಚಾರಿಸಬೇಕಾಗಿದೆ.

ನಿತ್ಯ, ನಿರಾಲಂಬ, ನಿರ್ದೋಷ ಆನಂದವೆ ಪ್ರಾಣಿಮಾತ್ರರ ಇಷ್ಟ ಧ್ಯೇಯವು. ಅದನ್ನು ಸಾಧಿಸಬೇಕೆಂಬ ಹಂಬಲವು ಎಲ್ಲರಿಗೂ ಇರುವದು ಸ್ವಾಭಾವಿಕವು. ಆದರೆ ಅಜ್ಞಾನ, ಅವಿದ್ಯೆ ಅಥವಾ ಮಾಯೆಯ ಮೂಲಕ ಈ ಹಂಬಲವು ಹುದುಗಿಕೊಳ್ಳುವದು ಮತ್ತು ಎಲ್ಲರೂ ಆ ಮೂಲ ಆನಂದದ ಛಾಯೆಯಂತಿರುವ ವಿಷಯಸುಖಗಳಲ್ಲಿ ಮಗ್ನರಾಗಿ ತೊಳಲಾಡುವರು. ಅನುಭವದಿಂದ, ವಿಷಯಸುಖಗಳು ಕೇವಲ ಹುರುಳಿಲ್ಲದ ನೆಳಲು, ಆತ್ಮ ಸುಖವೇ ನಿಜಸುಖವು, ಎಂದು ಗೊತ್ತಾಗುವದು. ಆಗ ಮುಕ್ತಿಯ ಆನಂದದ ಬಯಕೆಯು ಬಲಗೊಳ್ಳುವದು. ಆದರೆ ಮುಂದೆ ಆ ಆನಂದವು ಪ್ರಾಪ್ತವಾಗುವ ಬಗೆ ಹೇಗೆ? ಅದು ಸಾಧ್ಯವಾಗಬೇಕಾದರೆ ಸಾಧನವೇನು?

ಸತ್ಯಸಾಕ್ಷಾತ್ಕಾರವು ಅಥವಾ ಅನುಭಾವವು ಮುಕ್ತಿಯ ತೀರ ಸಮೀಪದ ಮೆಟ್ಟಲು, ಎಂಬುದನ್ನು ವಚನಕಾರರು ಬಿತ್ತಿ ಬಿತ್ತಿ ಹೇಳಿದ್ದಾರೆ. ಸತ್ಯಸಾಕ್ಷಾತ್ಕಾರದಲ್ಲಿ ಸ್ಥಿರವಾಗಿ ನೆಲೆಗೊಳ್ಳುವದೆ ಮುಕ್ತಿಯು. ಸಾಕ್ಷಾತ್ಕಾರವೆಂದರೆ ಆಧ್ಯಾತ್ಮಿಕ ಸತ್ಯದ ಪ್ರತ್ಯಕ್ಷ ಅನುಭವವು. ಅದನ್ನು ಹೇಗೆ ಪಡೆಯಬೇಕು, ಎಂಬುದು ಗೊತ್ತಾದರೆ ಮುಕ್ತಿಪದವು ಕೈವಶವಾದಂತೆಯೆ ಸೈ. ಅನುಭವಯುಕ್ತ ಆಧ್ಯಾತ್ಮಜ್ಞಾನವೆ ಸಾಕ್ಷಾತ್ಕಾರವು. ತ್ರಿಕರಣದಲ್ಲಿ, ಕಾಯ-ವಾಕ್-ಮನದಲ್ಲಿ, ತನು-ಪ್ರಾಣ-ಭಾವದಲ್ಲಿ, ಸತ್ಯಾತ್ಮನು ಅಳವಡುವುದೆ ಸಾಕ್ಷಾತ್ಕಾರವು. ಈ ಸಾಕ್ಷಾತ್ಕಾರವು ಹೇಗೆ ಆಗಬೇಕು?

ನೀರಿನ ಒಂದು ಹನಿಯು ಮತ್ತು ಮುನ್ನೀರು ಇವು ತತ್ವತಃ ಒಂದೇ ಇದ್ದಂತೆ ಜೀವಾತ್ಮ ಪರಮಾತ್ಮರು ಒಂದೇ ಇರುವರು. ಆದರೆ ಜೀವಾತ್ಮನು ಪರಮಾತ್ಮನ ಅಂಶಮಾತ್ರನು. ಪರಮಾತ್ಮನು ಅನಂತಗುಣ, ಅನಂತಶಕ್ತಿ, ಸಚ್ಚಿದಾನಂದ, ನಿತ್ಯಪರಿಪೂರ್ಣನಿದ್ದರೆ ಜೀವಾತ್ಮನು ಅಲ್ಪಗುಣ, ಅಲ್ಪಶಕ್ತಿ ಇದ್ದು ಅಹಂಕಾರದ ಮೂಲಕ ದುಃಖವನ್ನು ಭೋಗಿಸುವನು. ಜೀವಾತ್ಮನಲ್ಲಿ ಉಂಟಾಗುವ ಅಥವಾ ದೃಗ್ಗೋಚರವಾಗುವ ಈ ದೋಷಗಳೆಲ್ಲ ಉಪಾಧಿಮೂಲಕವಿರುವವು. ಅಹಂಕಾರವು ಪೂರ್ಣ ಹೋಗಿ ತಾನು ದೇಹವಲ್ಲ, ಮನವಲ್ಲ, ಬುದ್ಧಿಯಲ್ಲ, ಭಾವವಲ್ಲ, ತಾನು ನಿತ್ಯ, ಸತ್ಯ, ಆತ್ಮ ಸ್ವರೂಪನು, ಎಂಬ ಅರಿವು ಅಳವಟ್ಟಿತೆಂದರೆ ಮತ್ತು ಆ ಜ್ಞಾನದಲ್ಲಿ ಆತ್ಮನು ಸ್ಥಿರನಾದನೆಂದರೆ ಅದು ಸತ್ಯಸಾಕ್ಷಾತ್ಕಾರವೆನಿಸುವದು.

ಈ ಬಗೆಯ ಸತ್ಯಸಾಕ್ಷಾತ್ಕಾರವಾಗಬೇಕಾದರೆ ವಚನಕಾರರು ಒಂದು ದಿವ್ಯ ಮಾರ್ಗವನ್ನು ಹೇಳಿಕೊಟ್ಟಿರುವರು. ಅದಕ್ಕೆ ಪೂರ್ಣಾರ್ಪಣ ಮಾರ್ಗ, ಸಮನ್ವಯಮಾರ್ಗ, ಅಥವಾ ಶರಣಮಾರ್ಗ ಎಂದೆನ್ನಬಹುದು.

ಸಾಧಕನು ತನ್ನ ಸರ್ವಸ್ವವನ್ನು, ಶಕ್ತಿ-ಯುಕ್ತಿ-ಭಕ್ತಿಗಳನ್ನು, ತನು-ಮನ-ಭಾವಗಳನ್ನು, ಪ್ರಾಣ-ಕರಣ-ಕರ್ಮಗಳನ್ನು ಪರಮಾತ್ಮನ ಚರಣದಲ್ಲಿ ಅನನ್ಯನಾಗಿ ಅರ್ಪಿಸುವುದೆ ಅರ್ಪಣಮಾರ್ಗವು. ಉಸಿರಾಡಿಸುವ ಕರ್ಮವನ್ನು ಮೊದಲುಮಾಡಿಕೊಂಡು ಸರ್ವ ಕರ್ಮಗಳನ್ನು ಪರಮಾತ್ಮಾರ್ಪಣ ಬುದ್ಧಿಯಿಂದ ಮಾಡುತ್ತಿರುವುದೆ ಈ ಮಾರ್ಗದ ಮೂಲ ತತ್ವವು. ಸಾಧಕನು ಪರಮಾತ್ಮನಿಗೆ ಸರ್ವಸ್ವವನ್ನು ಅರ್ಪಣಮಾಡುವು

ದರಿಂದ ಇದು ಸರ್ವಾರ್ಪಣಮಾರ್ಗವೆನಿಸುವದು. ಭಕ್ತಿ, ಜ್ಞಾನ, ಕರ್ಮ, ಧ್ಯಾನ ಇವುಗಳಲ್ಲಿ ಯಾವುದೆ ಒಂದು ಮಾರ್ಗವನ್ನ ವಲಂಬಿಸದೆ ಸಾಧಕನು ಇವೆಲ್ಲವುಗಳನ್ನೊಳಗೊಂಡ ಮಾರ್ಗವನ್ನ ವಲಂಬಿಸುವುದರಿಂದ ಇದು ಸಮನ್ವಯಮಾರ್ಗವೆನಿಸುವದು. ಸಾಧಕನು ಪರಮಾತ್ಮನಿಗೆ ಪೂರ್ಣ ಶರಣಾಗತನಾಗುವುದರಿಂದ ಇದು ಶರಣಮಾರ್ಗವೆನಿಸುವದು.

ಈ ಪರಿ ಸರ್ವಾರ್ಪಣಮಾಡಿ ಪ್ರಾರಂಭಮಾಡುವುದರಿಂದ ಸಾಧಕನ ಸರ್ವಶಕ್ತಿಗುಣಕರ್ಮಗಳು ಕ್ಷಣಃ ಅವನನ್ನು ಪರಮಾತ್ಮನೆಡೆಗೆ ಒಯ್ಯುವವು. ಮೆಲ್ಲಮೆಲ್ಲನೆ ಅವನ ಅಹಂಕಾರವೆಲ್ಲ ಅಳಿದು, ಅವನ ದೋಷಗಳೆಲ್ಲ ಸುಟ್ಟುಹೋಗಿ, ಅವನಿಗೆ ಪರಮಾತ್ಮ ಸಾಕ್ಷಾತ್ಕಾರವಾಗುವದು.

ಈ ಮಾರ್ಗದಲ್ಲಿ, ಆಯಾ ಸಾಧಕನಲ್ಲಿ ಯಾವ ಯಾವ ಶಕ್ತಿಗಳ ವಿಕಾಸವಾಗಿರುವುದೊ ಆ ಪ್ರಕಾರ ಆಯಾ ಸಾಧಕನು ಪ್ರಾಧಾನ್ಯತಃ ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ, ಧ್ಯಾನಯೋಗ ಇವುಗಳನ್ನು ಆಚರಿಸುತ್ತಿರುವಂತೆ ತೋರಬಹುದು. ಆದರೆ ಇದು ನಿಜವಾಗಿ ಸಮನ್ವಯ ಯೋಗವು, ಶರಣಮಾರ್ಗವು, ಪರಮಾತ್ಮಯೋಗವು.

ವಚನಕಾರರ ಸಾಧನದ ತಳಹದಿಯಾದ ಈ ಶರಣಮಾರ್ಗದ ಸಾಮಾನ್ಯ ಸ್ವರೂಪವನ್ನು ವಿವರಿಸಿದ್ದಾಯಿತು. ಇನ್ನು ಈ ಬಗ್ಗೆ ಇದ್ದ ವಚನಗಳನ್ನು ಮೊದಲು ಉದಹರಿಸಿ ಬಳಿಕ ವಚನಶಾಸ್ತ್ರದಲ್ಲಿ ಇರುವ ಭಕ್ತಿ, ಜ್ಞಾನ, ಕರ್ಮ, ಧ್ಯಾನ ಇವುಗಳ ಪರವಾದ ವಚನಗಳನ್ನು ವಿಚಾರಿಸುವ. ಆ ಮೇಲೆ ಆಯಾ ಮಾರ್ಗಗಳಲ್ಲಿರುವ ಅನ್ಯೋನ್ಯ ಸಂಬಂಧವನ್ನು ವಚನಕಾರರು ಯಾವ ರೀತಿ ಹಚ್ಚಿರುವರು, ಇದನ್ನು ನೋಡಲಿಕ್ಕೆ ನೆಟ್ಟಗಾಗುವದು.

ವಚನಗಳು

೧೯೦. ಆತ್ಮ-ಪರಮಾತ್ಮ ಯೋಗವನರಿದೆನೆಂಬುವ ಮಾತಿನ ಮೊದಲು ಜ್ಯೋತಿಯೊಳಗೆ ಆತ್ಮಜ್ಯೋತಿಯನರಿದು, ಮಾತಿನೊಳಗಣ ಪರಮಾತ್ಮನ ನರಿದಂಗಲ್ಲದೆ, ಆತ್ಮಪರಮಾತ್ಮಯೋಗವನರಿಯಬಾರದು. ಆತ್ಮಪರಮಾತ್ಮ ಯೋಗವನರಿದಂಗಲ್ಲದೆ ಅರಿವು-ಮರವೆಗಳು ನಷ್ಟವಾಗವು. ಅರಿವು-ಮರವೆ ಗಳು ನಷ್ಟವಾದಲ್ಲದೆ ಮಾಯೆ ಹಿಂಗದು. ಮಾಯೆ ಹಿಂಗಿದಲ್ಲದೆ ಹಮ್ಮು ನಷ್ಟವಾಗದು. ಹಮ್ಮು ನಷ್ಟವಾದಲ್ಲದೆ ನಿಜಗುರು ಸ್ವತಂತ್ರ ಸಿದ್ಧಲಿಂಗೇ ಶ್ವರನಲ್ಲಿ ಅದೇ ಜೀವ ಪರಮೈಕ್ಯವು.

ಟಪ್ಪಣಿ:— ಐಕ್ಯವೆಂದರೇನು ಇದನ್ನು ತಿಳಿದುಕೊಂಡು ಅಹಂ ಎಂಬುದನ್ನು ಕೊಂದುಬಿಟ್ಟಾಗಲೆ ಜೀವ-ಶಿವೈಕ್ಯವು ಸಾಧಿಸಬಲ್ಲದು. ಅಹಂ ಎಂಬುದನ್ನು ಪರಂ ಎಂಬುದರಲ್ಲಿ ಅರ್ಪಿಸಿಬಿಡುವುದೆ ಅದನ್ನು ನಷ್ಟಗೊಳಿಸುವ ಉತ್ತಮಮಾರ್ಗವು.

೧೯೨. ತನುಗುಣವಿವರಿಸಿಹೆನೆಂದರೆ ಮನಶುದ್ಧವಾಗಬೇಕು. ಮನ ಗುಣ ವಿವರಿಸಿಹೆನೆಂದರೆ ಇಂದ್ರಿಯ ಶುದ್ಧವಾಗಬೇಕು. ತನುಮನಇಂದ್ರಿಯ ಗಳು ಶುದ್ಧಸುಯಿಧಾನವಾಗಿ ಲಿಂಗಮುಖಕ್ಕೆ ವೇದ್ಯವಾದಲ್ಲದೆ ಗುಹೇಶ್ವರ ಲಿಂಗವ ಬೆಸಗೊಳಬಾರದು, ಕೇಳಾ ತಾಯೆ.

ಟಪ್ಪಣಿ:— ಇಲ್ಲಿ ವಿವರಿಸು ಎಂದರೆ ಅರ್ಪಿಸು. ಅರ್ಪಿಸಬೇಕಾದರೆ ಎಲ್ಲವೂ ಶುದ್ಧವಿರಬೇಕೆಂದರ್ಥ.

೧೯೩. ತನುವಿಂಗೆ ತನು ರೂಪಾಗಿ ತನುವಿಂಗಾಧಾರವಾದೆ. ಮನಕ್ಕೆ ಮನರೂಪಾಗಿ, ಮನಕ್ಕೆ ನೆನಹಿನ ಶಕ್ತಿಯನಿತ್ತು ಮನಕ್ಕಾಧಾರವಾದೆ. ಪ್ರಾಣಕ್ಕೆ ಪ್ರಾಣರೂಪಾಗಿ ಪ್ರಾಣಕ್ಕಾಧಾರವಾದೆ. ಎನ್ನಂಗ-ಮನ-ಪ್ರಾಣದಲ್ಲಿ ನೀನೇ ನಿಂದು, ಸರ್ವಕರಣಂಗಳ ನಿಮ್ಮವು ಮಾಡಿಕೊಂಡ ಕಾರಣ, ಎನ್ನ ಪ್ರಾಣ ನಿಮ್ಮಲ್ಲಿ ಅಡಗಿತ್ತು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟಪ್ಪಣಿ -- ತನುಮನಪ್ರಾಣಾದಿಗಳನ್ನೆಲ್ಲ ಪರಮಾತ್ಮನೆ ಕೊಟ್ಟಿರುವನು. ಅವುಗಳನ್ನು ಅವನಿಗೆಯೆ ಅರ್ಪಿಸಿ ನಾವು ಮುಕ್ತರಾಗಬೇಕು.

೧೯೪. ತನು ನಿಮ್ಮನಪ್ಪಿ ಮಹಾತನುವಾದಬಳಿಕ ತನುವೆಂಬುದು ಮುತ್ತೆಲ್ಲಿಯದು? ಮನ ನಿಮ್ಮನಪ್ಪಿ ಘನಮನವಾದ ಬಳಿಕ ಮನವೆಂಬುದು ಮುತ್ತೆಲ್ಲಿಯದು? ಭಾವ ನಿಮ್ಮನಪ್ಪಿ ನಿರ್ಭಾವವಾದ ಬಳಿಕ ಭಾವವೆಂಬುದು ಮುತ್ತೆಲ್ಲಿಯದು? ಇಂತೀ ತ್ರಿವಿಧವು ಲಿಂಗದಲ್ಲಿ ನಿರ್ಲೇಪವಾಗಿ ಮೈದೋರದಿರವ ಕೂಡಲ ಚೆನ್ನಸಂಗಯ್ಯ ತಾನೇ ಬಲ್ಲ.

೧೯೫. ಹರಣವಿದ್ದು ಹರಣವಿಲ್ಲ, ಹರಣ ಲಿಂಗದಲ್ಲಿ ನಿರಿಯಾಣವಾಯಿತ್ತಾಗಿ. ಮನವಿದ್ದು ಮನವಿಲ್ಲ, ಮನವು ಮಹದಲ್ಲಿ ಲೀಯವನೆಯ್ದಿತ್ತಾಗಿ. ಜೀವವಿದ್ದು ಜೀವವಿಲ್ಲ, ಜೀವವು ಸಜೀವವಾಯಿತ್ತಾಗಿ. ಕರಣಂಗಳಿದ್ದು ಕರಣಂಗಳಿಲ್ಲ, ಲಿಂಗಕರಣಂಗಳಾಗಿ. ಇಂತೀ ಸರ್ವವೂ ಇದ್ದು ಸರ್ವವೂ ಇಲ್ಲ. ಇದು ಕಾರಣ ಸೌರಾಷ್ಟ್ರ ಸೋಮೇಶ್ವರಾ, ನಿಜಶರಣರು ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು.

೧೯೬. ನೆನೆಯಲರಿಯೆ, ನಿರ್ಧರಿಸಲರಿಯೆ, ಮನವಿಲ್ಲಾಗಿ. ಭಾವಿಸಲರಿಯೆ, ಬೆರಿಸಲರಿಯೆ, ಭಾವನಿರ್ಭಾವವಾಯಿತ್ತಾಗಿ. ಜ್ಞಾತೃ, ಜ್ಞಾನ, ಜ್ಞೇಯವೆಲ್ಲವನು ಮೀರಿ, ಅಭಿನವ ಮಲ್ಲಿಕಾರ್ಜುನಯ್ಯನಲ್ಲಿ ಪರಮ ಸುಖಿಯಾದೆನು.

೧೯೭. ನಲ್ಲನ ರೂಪೆನ್ನ ನೇತ್ರವ ತುಂಬಿತ್ತು. ನಲ್ಲನ ನುಡಿ ಎನ್ನ ಶ್ರೋತ್ರವ ತುಂಬಿತ್ತು. ನಲ್ಲನ ಸುಗಂಧವೆನ್ನ ಘ್ರಾಣವ ತುಂಬಿತ್ತು. ನಲ್ಲನ ಚುಂಬನವೆನ್ನ ಜಿಹ್ವೆಯ ತುಂಬಿತ್ತು. ನಲ್ಲನಾಲಿಂಗನವೆನ್ನ ಸರ್ವಾಂಗವ ತುಂಬಿತ್ತು. ನಲ್ಲನು ಅಂತರಂಗ ಬಹಿರಂಗದಲ್ಲಿ ಕೂಡಿ ಸುಖಿಯಾದೆ ಉರಿಲಿಂಗ ದೇವಾ.

ಟಿಪ್ಪಣಿ:— ಸರ್ವಾರ್ಪಣಮಾಡಿದ ಭಕ್ತನು ನಲ್ಲೆಯಂತೆ ತನ್ನ ಪ್ರಿಯ ದೇವನಿಗೆ ಸರ್ವಸ್ವವನ್ನರ್ಪಿಸಿಬಿಟ್ಟದ್ದರಿಂದ ಅವನ ಅಂಗಾಂಗಗಳಲ್ಲೆಲ್ಲ ಪರಮಾತ್ಮನ ಅಧಿಷ್ಠಾನವು ನೆಲೆಗೊಂಡಿರುವದು.

೧೯೮. ಘನವೆಂಬ ಮನದ ತಲೆವಾಗಿಲಲ್ಲಿ ಸದಾ ಸನ್ನಿಹಿತನಾಗಿ ನೀನಿಪ್ಪೆಯಲ್ಲಾ, ಎಲೆ ಅಯ್ಯಾ! ಬಂದ ಪದಾರ್ಥದ ಪೂರ್ವಾಶ್ರಯವ ಕಳೆದು ನೀನೆಯವಧರಿಸುತಿಪ್ಪೆಯಲ್ಲಾ, ಎಲೆ ಅಯ್ಯಾ! ನಿಮ್ಮ ಮುಟ್ಟ ಬಹುದಲ್ಲದೆ, ನಿಮ್ಮನ್ನು ಮುಟ್ಟದೆ ಬಾರದೆಂಬುದಕ್ಕೆ ನಿಮ್ಮ ಮನಕ್ಕೆ ನೀವೇ ಸಾಕ್ಷಿಯಲ್ಲಾ ಕೂಡಲ ಚನ್ನಸಂಗಮದೇವಾ!

ಟಿಪ್ಪಣಿ:— ಸರ್ವಾರ್ಪಣಮಾಡಿದವನು ಪರಮಾತ್ಮಸಾಕ್ಷಿಯಾಗಿ ಎಲ್ಲ ಮಾಡುವನು, ಮತ್ತು ಅವನ ಪ್ರಸಾದವೆಂದು ಎಲ್ಲವನ್ನು ಗ್ರಹಿಸುವನು. ಪೂರ್ವಾಶ್ರಯ ಅಂದರೆ ಮೊದಲಿನ ದೋಷ, ಬಂಧಕತ್ವ.

೧೯೯. ಮಾಡುವರಯ್ಯ ಮರುಳುಗೊಂಡಂತೆ. ಮರ್ಮವನರಿಯದೆ ಮಾಡುವ ಮಾಟ ಕರ್ಮದ ಬೆಳಸು, ಸುಯಿಧಾನದ ಕೇಡು. ಕೂಡಲ ಚನ್ನಸಂಗಯ್ಯ, ನಿಮ್ಮ ಶರಣರ ಅನುವರಿದು ಮಾಡುವ ಮಾಟ ಲಿಂಗಜಂಗಮದ ಕೂಟ, ಭವಭಂಗದೋಟ.

೨೦೦. ಕಾಯ ಲಿಂಗಾರ್ಪಿತವಾದರೆ ಕರ್ಮವಿಲ್ಲ. ಜೀವ ಲಿಂಗಾರ್ಪಿತವಾದರೆ ಜನಿತವಿಲ್ಲ. ಭಾವ ಲಿಂಗಾರ್ಪಿತವಾದರೆ ಭ್ರಮೆಯಿಲ್ಲ. ಅರಿವು ಲಿಂಗಾರ್ಪಿತವಾದ ಬಳಿಕ ಆ ಪ್ರಸಾದವ ಗ್ರಹಿಸಿದನಾಗಿ ಕುರುಹು ಮುನ್ನಿಲ್ಲ.

ಮಾಯಾಪ್ರಪಂಚವನತಿಗಳೆದು ನಿಮಗರ್ಪಿಸಬಲ್ಲನಾಗಿ ಆತನೇ ಶರಣ. ಬೆಚ್ಚಂತೆ ಬೆರಸಿ ಅಚ್ಚೊತ್ತಿದಂತೆ, ಅಪ್ಪು ಒಳಕೊಂಡ ಅಲಿ ಕಲ್ಲಿನಂತೆ, ಜ್ಯೋತಿಯುಂಡ ತೈಲದಂತೆ, ಜಲ ಉಂಡ ಮುತ್ತಿನಂತೆ, ಬಯಲುಂಡ ಬೆಳಗಿನಂತೆ ಇದ್ದರಾಗಿ ಮಹಾಘನ ಸದ್ಗುರು ಸೋಮನಾಥ, ನಿಮ್ಮ ಶರಣರು ಹೆಸರಡಗಿದ ಲಿಂಗೈಕ್ಯರೆಂಬೆ.

ಟಿಪ್ಪಣಿ:— ಶರಣರು ಮಾಡುವಂತೆ ಮಾಡಿದ ಕರ್ಮವೆ ಮುಕ್ತಿದಾಯಕವು, ಅವರು ಪೂರ್ಣಾರ್ಪಣಮಾಡಿ ಕರ್ಮಕ್ಕೆ ಕೈಹಾಕುವರು, ಎಂದು ಮೇಲಿನ ಎರಡು ವಚನಗಳ ತಾತ್ಪರ್ಯವು.

೨೦೦. ಕರ್ಣಂಗಳು ಕೇಳಿದ ಶಬ್ದದಿಂದಾದ ಸುಖವನು, ನೇತ್ರಂಗಳು ನೋಡಿದ ರೂಪದಿಂದಾದ ಸುಖವನು, ರಸನೆ ಸವಿದ ರಸದಿಂದಾದ ಸುಖವನು, ವಾಸಿಸುವ ಘ್ರಾಣದಿಂದಾದ ಸುಖವನು, ಮುಟ್ಟುವ ತ್ವಕ್ಕಿನಿಂದಾದ ಸ್ಪರ್ಶಸುಖವನು, ಅರ್ಪಿತವ ಮಾಡಿ ಅನುಭವಿಸುವನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಪ್ರಸಾದಿಯು.

೨೦೨. ಮರಗಿಡುಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು ಪ್ರಾಣವ ಕೊಂದುಂಡು ಶರೀರವ ಹೊರೆವ ದೋಷಕ್ಕೆ ಇನ್ನಾವುದು ವಿಧಿಯಯ್ಯ? ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ ಜೀವಜಾಲವಲ್ಲವೆ ಜರಾಜರವೆಲ್ಲ? ಅದುಕಾರಣ ಕೂಡಲ ಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು ನಿರ್ದೋಷಿಗಳಾಗಿ ಬದುಕಿದರು.

ವಿವರಣೆ

ಸಾಧಕನಾಗಲಿ ಸಿದ್ಧನಾಗಲಿ ಸದೇಹನಿರುವವರೆಗೆ ಅವನು ಜೀವಿಸುವದು ಅಪರಿಹಾರ್ಯವು, ಮತ್ತು ಜೀವನಕ್ಕಾಗಿ ಉಸಿರಾಡಿಸುವ, ತಿನ್ನುವ, ಉಣ್ಣುವ, ಮೂಸುವ, ಮಲಗುವ ಮುಂತಾದ ಅನೇಕ ಕ್ರಿಯೆಗಳು ಅವಶ್ಯ, ಇದಲ್ಲದೆ ವನಸ್ಪತ್ಯಾದಿಗಳನ್ನು ತಿನ್ನುವದು ಅರ್ಥಾತ್ ಅವುಗಳನ್ನು ಹಿಂಸಿಸುವದು ಅವಶ್ಯ. ಜ್ಞಾತ-ಅಜ್ಞಾತ ರೀತಿಯಿಂದ ಜೀವಂತ ಮನುಷ್ಯನು ಅನೇಕ ಜೀವಂತ ಪ್ರಾಣಿಗಳನ್ನು ಹಿಂಸಿಸುತ್ತಿರಲಿಕ್ಕೆ ಸಾಕು. ಈ ಹಿಂಸಾದಿ ದೋಷಗಳಿಂದ, ಭೋಜನಾದಿ ಅವಶ್ಯಭೋಗಗಳಿಂದ ಸಾಧಕನು ಹೇಗೆ ಮುಕ್ತನಾಗಬೇಕು? ಇದಕ್ಕೆ ವಚನಕಾರರು ಮೇಲಿನ ಎರಡು ವಚನಗಳಲ್ಲಿ ಉತ್ತರವನ್ನಿತ್ತಿದ್ದಾರೆ. ಬಂಧಕತ್ವವು, ದೋಷವು, ಪಾಪವು

ಕರ್ಮದಲ್ಲಿಲ್ಲ, ಕರ್ಮವನ್ನು ಯಾವ ಬುದ್ಧಿಯಿಂದ ಮಾಡುವೆವೊ ಆ ಬುದ್ಧಿಯಲ್ಲಿದೆ. ಆದುದರಿಂದ, ಇಂದ್ರಿಯ ವಿಷಯಗಳನ್ನು ಭೋಗಿಸುವಾಗ, ಅದೇ ರೀತಿ, ಜೀವನಾರ್ಥವಾಗಿ ತಿನ್ನುಣ್ಣುವ ಕ್ರಿಯೆಗಳನ್ನು ಮಾಡುವಾಗ ಸಾಧಕನು ಸರ್ವಾರ್ಪಣ ಮಾಡಿದರೆ ಅವನು ಬಂಧನಗಳಿಂದ ಮುಕ್ತನಾಗುವನು, ಮತ್ತು ದೋಷಗಳಿಂದ ಅಲಿಪ್ತನಿರುವನು.

ವಚನಗಳು

೨೦೩. ವಿಕಳನಾದೆನು ಪಂಚೇಂದ್ರಿಯ ಧಾತುವಿನಿಂದ. ಮತಿಗೆಟ್ಟೆನು ಮನದ ವಿಕಾರದಿಂದ. ಧೃತಿಗೆಟ್ಟೆನು ಧನದ ವಿಕಾರದಿಂದ. ಗತಿಗೆಟ್ಟೆನು ಕಾಯವಿಕಾರದಿಂದ. ಶರಣುಹೊಕ್ಕೆನು ಕೂಡಲಸಂಗಮದೇವಯ್ಯ.

ಟಪ್ಪಣಿ:— ಧಾತು ಅಂದರೆ ಗುಣ.

೨೦೪. ಎನ್ನ ಯೋಗಕ್ಷೇಮ ನಿಮ್ಮದಯ್ಯ. ಎನ್ನ ಹಾನಿ-ವೃದ್ಧಿ ನಿಮ್ಮದಯ್ಯ. ಎನ್ನ ಮಾನಾಪಮಾನ ನಿಮ್ಮದಯ್ಯ. ಬಳ್ಳಿಗೆ ಕಾಯಿ ದಿವ್ಯಿತ್ತೇ, ಕೂಡಲಸಂಗಮದೇವಾ.

೨೦೫. ಪ್ರಕಾಶದ್ವಾರ, ಗಂಧದ್ವಾರ, ಶಬ್ದದ್ವಾರವೆಂಬ ಆರುದ್ವಾರ ಕೂಡಿದ ಠಾವಿನಲ್ಲಿ ನಾದಬಿಂದುಕಳೆ ಎಂಬ ಸಿಂಹಾಸನದ ಮೇಲೆ ಮೂರ್ತಿಗೊಂಡು ಶಬ್ದರೂಪಗಂಧಗಳ ಗ್ರಹಿಸುವಾತ ನೀನಲ್ಲದೆ ಮತ್ತಾರು ಹೇಳಾ? ಗಳದಲ್ಲಿ ನಿಂದು ಷಡ್ರಸಾನ್ನದ ರುಚಿಯ ಸ್ವಾದಿಸುವಾತ ನೀನಲ್ಲದೆ ಮತ್ತಾರು ಹೇಳಾ? ಮನವೆಂಬ ಮುಖದಲ್ಲಿ ನಿಂದು ಪರಿಣಾಮವನನುಭವಿಸುವಾತ ನೀನಲ್ಲದೆ ಮತ್ತಾರು ಹೇಳಾ? ಸರ್ವಾವಯವಂಗಳ ಸರ್ವಮುಖವಾಗಿ ಭೋಗಿಸಿ ಪ್ರಸಾದವ ಕರುಣಿಸುವ ಕೃಪಾಮೂರ್ತಿ ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರಾ, ನೀನಲ್ಲದೆ ಮತ್ತಾರು ಹೇಳಾ?

೨೦೬. ತನು ನಿಮ್ಮದೆಂದಬಳಿಕ ಎನಗೆ ಬೇರೆ ತನುವಿಲ್ಲ. ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ. ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ ಎನಗೆ ಬೇರೆ ವಿಚಾರವುಂಟೇ ಕೂಡಲಸಂಗಮದೇವಾ?

೨೦೭. ತನು ಕೊಟ್ಟು ತನು ಬಯಲಾಯಿತ್ತು. ಮನಕೊಟ್ಟು ಮನ ಬಯಲಾಯಿತ್ತು. ಧನ ಕೊಟ್ಟು ಧನ ಬಯಲಾಯಿತ್ತು. ಇಂತೀ ತ್ರಿವಿಧವನ್ನು

ಕೊಟ್ಟ ಕಾರಣ ಕೂಡಲಸಂಗಯ್ಯನಲ್ಲಿ ಬಸವಣ್ಣಂಗೆ ಬಯಲ ಸಮಾಧಿಯಾಯಿತ್ತು.

ಟಪ್ಪಣಿ:— ಬಯಲಸಮಾಧಿ-ನಿರ್ವಿಕಲ್ಪಸಮಾಧಿ.

ವಿವರಣೆ

ತನುಮನಧನಗಳ ವಿಕಾರದಿಂದ ಸಂತಪ್ತನಾದ ಸಾಧಕನು ಉಪರತನಾಗಿ ಪರಮಾತ್ಮನಿಗೆ ಮೊರೆಹೊಗುವನು, ಮತ್ತು ದೇವರೆ, ನೀನೇ ನನ್ನ ಹಿತಾಹಿತಗಳನ್ನು ನೋಡಬೇಕೆಂದು ಬೇಡಿಕೊಳ್ಳುವನು, ತನ್ನ ಅಂತಃಕರಣದಲ್ಲಿ ಪರಮಾತ್ಮನನ್ನು ಸ್ಥಾಪಿಸಿ ಅವನಿಗೆ ಸರ್ವಸ್ವವನ್ನು ಅರ್ಪಿಸುವನು. ಅಹಂನಾದವನ್ನು ಅತಿಗಳೆದು ಸಾಧಕನು ಸೋಹಂನಾದವನ್ನು ತನ್ನ ಅಂತರಂಗದಲ್ಲಿ ತುಂಬುವನು. ಹೀಗೆ ಮಾಡಿದವನು ಪರಮಾತ್ಮನೊಡನೆ ಐಕ್ಯಹೊಂದುವನು.

ವಚನಗಳು

೨೦೮. ಅಯ್ಯಾ, ನಿಮಗೆ ಪತ್ರಪುಷ್ಪದಲ್ಲಿ ಪೂಜೆಯ ಮಾಡುತ್ತಿದ್ದೆನು, ಸರ್ವೇಂದ್ರಿಯಂಗಳು ಸೋಂಕಿದವೆಲ್ಲ ನಿಮ್ಮ ಪೂಜೆಯಾಗಿ ಮಾಡದನ್ನಕ್ಕರ? ಅಯ್ಯಾ, ನಿಮ್ಮ ನೆನೆವುತ್ತಿದ್ದರೇನು, ನೆನೆವ ಮನದಲ್ಲಿ ನಿಮ್ಮ ನೆಲೆಗೊಳಿಸಿ ಮನ ನಿಮ್ಮಲ್ಲಿ ಲೀಯವಾಗದನ್ನಕ್ಕರ? ಅಯ್ಯಾ, ನಿಮಗೆ ಸಕಲ ಸುಯಿಧಾನವನರ್ಪಿಸುತ್ತಿದ್ದರೇನು, ಅರ್ಪಣದೊಳಗೆ ತನ್ನ ನಿಮ್ಮಲ್ಲಿ ಅರ್ಪಿಸಿ ನಿಮ್ಮೊಳಗಾಗದನ್ನಕ್ಕರ? ಅದುಕಾರಣ ತನು ಗುಣವಿಡಿದು ಲಿಂಗವ ಮುಟ್ಟಿ ಪೂಜೆಯ ಮಾಡಿದವರೆಲ್ಲ ನಿಮಗೆ ಮುನ್ನವೇ ದೂರಾದರು. ನಾನಿದನರಿದು ಅವಿರಳ ಲಿಂಗಾರ್ಚನೆಯ ಮಾಡಿ ನಿಮ್ಮೊಳಗಾದೆನಯ್ಯ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೨೦೯. ಅನ್ಯವಿಚಾರವ ಮರೆದು, ನಿಮ್ಮ ವಿಚಾರವೆಡೆಗೊಂಡಿತ್ತಾಗಿ ಪ್ರಾಣದ ನೆಲೆಗಟ್ಟಿತ್ತಯ್ಯಾ, ದಶವಾಯುಗಳ ಸಂಚು ತಪ್ಪಿತ್ತಯ್ಯಾ. ಕರಣಂಗಳ ಲಿಂಗದ ಕಿರಣಂಗಳು ನುಂಗಿದವಯ್ಯಾ. ಬಳಿಕ ಕರತಳಾಮಳೋಕ್ಯಗೊಂಡೆನಯ್ಯಾ. ಹೊರಗನೆಂದರಿಯದೆ, ನೀನೇ ಗತಿಯೆಂದಿರ್ದೆ ಕೂಡಲಸಂಗಮದೇವಾ.

ಟಪ್ಪಣಿ:— ಕರತಳಾಮಳೋಕ್ಯಗೊಳ್ಳು-ಪ್ರತ್ಯಕ್ಷ ಜ್ಞಾನವಾಗು.

೨೧೦. ಮನವೆಂಬ ಸಂಕಲ್ಪವನರಿಯೆನು, ಸಂಕಲ್ಪ ಸಿದ್ಧಿಯಾಯಿತ್ತಾಗಿ. ಸಂಕಲ್ಪವೆಂಬ ಸಂಬಂಧವನರಿಯೆನು, ನಿಮ್ಮ ವಿಚಾರ ಎಡೆಗೊಂಡಿತ್ತಾಗಿ. ನಿಮ್ಮ ವಿಚಾರವೇ ಅಂತರಂಗದೊಳಗೆ ತುಂಬಿತ್ತಾಗಿ, ಎನ್ನ ಮನದ ಮುಂದೆಯೆಲ್ಲ ನೀನೆಯಾಗಿರ್ದೆಯಾಗಿ ಕಪಿಲಸಿದ್ಧಮಲ್ಲಿನಾಥಯ್ಯ.

೨೧೧. ಕರಣಾದಿ ಗುಣಂಗಳಳಿದು ನವಚಕ್ರಂಗಳು ಭಿನ್ನವಾದ ಬಳಿಕ ಇನ್ನೇನೋ ಇನ್ನೇನೊ ಸ್ವರ್ಗವಿಲ್ಲ, ನರಕವಿಲ್ಲ, ಇನ್ನೇನೋ ಇನ್ನೇನೋ ? ಗುಹೇಶ್ವರ ಲಿಂಗ ವೇಧಿಸಿ ಸುಖಿಯಾದ ಬಳಿಕ ಇನ್ನೇನೋ ಇನ್ನೇನೋ ?

ಟಪ್ಪಣಿ:—ಸರ್ವಾರ್ಪಣ ಮಾರ್ಗದ ಸಾಧಕನು ಪತ್ರಪುಷ್ಪಾದಿಗಳಿಂದ ಮಾಡತಕ್ಕ ಪೂಜೆಯಿಂದ ಸಂತುಷ್ಟನಾಗನು. ಆದುದರಿಂದ ಅವನು ಸಂಪೂರ್ಣಲೀನವಾಗಿಯೆ ದೇವರನ್ನು ಪೂಜಿಸುವನು. ಈ ಪ್ರಕಾರ ಸರ್ವಾರ್ಪಣ ಮಾಡಿದವನು ಧನ್ಯಭಾವವನ್ನು ಪಡೆಯುವನು. ಅದು ಮೇಲಿನ ವಚನದಲ್ಲಿ ವ್ಯಕ್ತವಾಗಿರುವದು. ನವಚಕ್ರಗಳೆಂದರೆ ಮೂಲಾಧಾರಾದಿ ನಾಡಿಚಕ್ರಗಳು. ಅವು ಅರೇ ಇರುವವೆಂದು ಹಲವರು, ಒಂಬತ್ತು ಇರುವವೆಂದು ಅನ್ಯರು. ಅವು ಭಿನ್ನವಾಗುವುದೆಂದರೆ ಕುಂಡಲಿನಿ ಶಕ್ತಿಯು ಪೂರ್ಣ ಜಾಗ್ರತವಾಗಿ ಜ್ಞಾನವಾಗುವುದು.

೨೧೨. ದೇಹವೆಂಬ ದೇಗುಲದೊಳಗೆ ಭಾವಸಿಂಹಾಸನವನ್ನು ಮಾಡಿ ಜೀವದೊಡೆಯನ ಪೂಜಿಸಬಲ್ಲ ದೇವರಿಗೆ ದೇವನೆಂಬೆನಯ್ಯಾ ಅಖಂಡೇಶ್ವರಾ.

೨೧೩. ಉಳ್ಳವರು ದೇವಾಲಯವ ಮಾಡುವರು. ನಾನೇನು ಮಾಡುವೆನಯ್ಯ ? ಬಡವಯ್ಯ ! ಎನ್ನ ಕಾಲೇ ಕಂಭ, ದೇಹವೆ ದೇಗುಲ, ಶಿರ ಹೊನ್ನ ಕಳಸವಯ್ಯ . ನೋಡಯ್ಯ, ಕೂಡಲಸಂಗಮದೇವಯ್ಯ, ಕೇಳಯ್ಯ, ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.

೨೧೪. ಎನ್ನ ಪಾದವೇ ಪಾದಶಿಲೆಯಾಗಿ, ಎನ್ನ ಕಾಲೇ ಕಡಹದ ಕಂಭಗಳಾಗಿ, ಎನ್ನ ತೋಳೇ ನಾಗವೇದಿಯಾಗಿ, ಎನ್ನ ಅಸ್ಥಿಯೇ ಸುತ್ತಳ ಜಂತೆಯಾಗಿ, ಎನ್ನ ಅಧರವೇ ಒಳ್ಳಿಹ ಬಾಗಿಲಾಗಿ, ಎನ್ನ ಗುರುಕರುಣವೇ ಲಿಂಗವಾಗಿ, ಎನ್ನಂಗವೇ ರಂಗಮಧ್ಯವಾಗಿ, ಎನ್ನ ಹೃದಯಕಮಲವೇ ಪೂಜೆಯವಾಗಿ, ಎನ್ನ ಕಿವಿಗಳೇ ಕೀರ್ತಿಮುಖವಾಗಿ, ಎನ್ನ ನೆನೆವ ನಾಲಿಗೆಯೇ ಗಂಟೆಯಾಗಿ, ಎನ್ನ ಶಿರವೇ ಸುವರ್ಣಕಳಸವಾಗಿ, ಎನ್ನ ನಯನವೇ ಕುಂದದ

ಜ್ಯೋತಿಯಾಗಿ, ಎನ್ನ ಚರ್ಮವೇ ನಿರ್ಮಲ ಹೊದಿಕೆಯಾಗಿ, ಎನ್ನ ನೆನಹೇ ನಿನಗೆ ಉಪಹಾರವಾಗಿ ಗುರುಪುರದ ಮಲ್ಲಯ್ಯ ನಿಂದನಾಗಿ.

ಟಪ್ಪಣಿ —ಸರ್ವಾರ್ಪಣಮಾಡಿದ ಸಾಧಕನ ಹೃದಯನಃಂಟಪದಲ್ಲಿ ಪರಮಾತ್ಮನೇ ಅಧಿಷ್ಠಿತನಾಗಿರುವುದರಿಂದ ಅವನ ಪಾಂಚಭೌತಿಕದೇಹವೆಂಬುದು ಒಂದು ಗುಡಿಯಾಗುವದು, ಎಂದು ತಾತ್ಪರ್ಯ. ಇಂಥ ಗುಡಿಕಟ್ಟಲಿಕ್ಕೆ ಧನಸಂಪತ್ತಿಯ ಅವಶ್ಯಕತೆಯಿಲ್ಲ. ಇದಕ್ಕೆ ಭಾವಸಂಪದವು ಬೇಕು. ನಶ್ವರ ಸ್ಥಾವರ ಗುಡಿಗಿಂತ ಈ ಅಮರ ಜಂಗಮ ಗುಡಿಯೆ ಲೇಸು !

೨೧೫. ಎನ್ನ ಮನ ನಿಮ್ಮಲ್ಲಿ ನಟ್ಟು, ತನ್ನ ಯ ಬಾರದ ಪರಮನೋದಯ್ಯ. ಇಹವೆಂಬುದನರಿಯೆ, ಪರವೆಂಬುದನರಿಯೆ. ಪರಮಾನಂದದೊಳಗಿರ್ದೆ ನೋಡಯ್ಯ. ಪರಮನ ನೆನಹೇ ನೆನಹಾಗಿ, ಪರಮಸುಖದಲ್ಲಿ ಸುಖಿಸುತಿರ್ದೆ ನೋಡಯ್ಯ. ಅಪ್ರತಿಮ ಕೂಡಲ ಚನ್ನಸಂಗಯ್ಯ, ಎನ್ನ ಬೆರಗಿನ ಭೇದವ ನೀನೇ ಬಲ್ಲೆಯಯ್ಯಾ.

೨೧೬. ಅಂಗ-ಲಿಂಗದಲ್ಲಿ ತರಹರವಾಗಿ, ಮನ-ಜ್ಞಾನದಲ್ಲಿ ತರಹರವಾಗಿ, ಭಾವ-ನಿರ್ಭಾವದಲ್ಲಿ ತರಹರವಾಗಿ, ಸಮತೆ-ಶಾಂತಿಯಲ್ಲಿ ತರಹರವಾಗಿ, ಇರಬಲ್ಲಾತನೇ ಅಚ್ಚ ಶರಣ ಗುಹೇಶ್ವರಾ.

೨೧೭. ಅಯ್ಯಾ, ನಿಮ್ಮ ಶರಣರು ಪರಮಸುಖಿಗಳಯ್ಯಾ. ಅಯ್ಯಾ, ನಿಮ್ಮ ಶರಣರು ಕಾಯವೆಂಬ ಕರ್ಮಕ್ಕೆ ಹೊದ್ದದ ನಿಃಕಾಮಿಗಳಯ್ಯ. ಅಯ್ಯಾ, ನಿಮ್ಮ ಶರಣರು ಮನದಲ್ಲಿ ನಿರ್ಲೇಪಜ್ಞಾನಿಗಳಯ್ಯ. ಕೂಡಲ ಸಂಗಮದೇವಯ್ಯ, ನಿಮ್ಮ ಶರಣರ ಘನವನೆನಗೆ ಹೇಳಲು ನಾನು ಕೇಳಲಮ್ಮದೆ ನಮೋ ನಮೋ ಎನುತಿರ್ದೆನು ಕಾಣಾ ಪ್ರಭುವೇ.

೨೧೮. ಅಯ್ಯಾ, ನಿಮ್ಮ ಶರಣರ ನಿಲವ ಸ್ವರ್ಗಮರ್ತ್ಯಪಾತಾಳದೊಳಗೆ ಬಲ್ಲವರಿಲ್ಲವಯ್ಯಾ ! ಅಘಟಿತಘಟನರು ಅಖಂಡಿತ ಮಹಿಮರು. ನಿಜದಲ್ಲಿ ನಿರ್ಲೇಪಭಾವಕರು. ಕೂಡಲಸಂಗಮದೇವಾ, ನಿಮ್ಮ ಶರಣರ ನಿಲವನರಿವಡೆ ನಾನೇತರವನಯ್ಯಾ ?

೨೧೯. ಅಯ್ಯಾ, ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯ ! ಅಯ್ಯ, ನಿಮ್ಮ ಶರಣರು ಇದ್ದ ಪುರವೆ ಕೈಲಾಸವಯ್ಯ ! ಅಯ್ಯ, ನಿಮ್ಮ ಶರಣರು ನಿಂದುದೆ ನಿಜನಿವಾಸವಯ್ಯ ! ಚನ್ನಮಲ್ಲಿಕಾರ್ಜುನಯ್ಯ, ನಿಮ್ಮ

ಶರಣ ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತಿ ಕ್ಷೇತ್ರವಾಗಿ ಆನು ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

ಟಿಪ್ಪಣಿ:— ಸರ್ವಾರ್ಪಿತ ಭಕ್ತನ ಪರಮಾನಂದವೂ ಅವನ ಮಹಿಮೆಯೂ ನಿಲವೂ ಈ ವಚನಗಳಲ್ಲಿ ಉಕ್ತವಾಗಿವೆ. ಅವಿಮುಕ್ತಿ ಎಂಬುದು ಕ್ಷೇತ್ರದ ಹೆಸರು.

---

೧೧. ಸಾಧನಮಾರ್ಗ-ಜ್ಞಾನಯೋಗ.

ವಿವರಣೆ

ಸಾಧಕನು ಸರ್ವಾರ್ಪಣಭಾವದಿಂದ ಪರಮಾತ್ಮನಿಗೆ ತನ್ನ ಸರ್ವಸ್ವವನ್ನು ಅರ್ಪಿಸಿ ಸಾಧನವನ್ನು ಆರಂಭಿಸುವನು. ಆಗ ಅವನು ತನ್ನ ಕ್ರಿಯಾಶಕ್ತಿ, ಧ್ಯಾನಶಕ್ತಿ, ಮತ್ತು ಬುದ್ಧಿಶಕ್ತಿ ಇವೆಲ್ಲವುಗಳನ್ನು ಸಂಪೂರ್ಣವಾಗಿ ದೇವರಿಗೆ ನಿವೇದಿಸುವನು. ಆದರೆ ಬೇರೆಬೇರೆ ಸಾಧಕರಲ್ಲಿ ಅವರವರ ಸ್ವಭಾವ, ಮತ್ತು ಪರಿಸ್ಥಿತಿಗನುಸರಿಸಿ ಈ ಶಕ್ತಿಗಳ ಪ್ರಮಾಣವು ಮತ್ತು ಬೆಳವಣಿಗೆಯು ಹೆಚ್ಚು ಕಡಿಮೆ ಇರುತ್ತದೆ. ಸಿದ್ಧಿಗೆ ಈ ನಾಲ್ಕೂ ಶಕ್ತಿಗಳ ಸಮನ್ವಯವು ಬೇಕು, ಎಂದು ವಚನಕಾರರ ಮತವು. ಆದರೆ ಈ ಶಕ್ತಿಗಳ ಲಕ್ಷಣ ಹಾಗೂ ಕಾರ್ಯ ಇವು ನಮಗೆ ಸ್ಪಷ್ಟವಾಗುವದಕ್ಕೋಸ್ಕರ ಅವುಗಳನ್ನು ನಾವು ವಿವರವಾಗಿ ವಿಚಾರಿಸುವದು ಅವಶ್ಯವು. ಆ ಬಳಿಕ ಅವುಗಳ ಅನ್ಯೋನ್ಯ ಸಂಬಂಧವನ್ನು ನೋಡುವ. ಈ ರೀತಿ ವಿವರವಾಗಿ ವಿಚಾರಿಸುವಾಗ ಸರ್ವಾರ್ಪಣವೆ ತಳಹದಿ ಇರುವದೆಂಬುದನ್ನು ನಾವು ನೆನಪಿನಲ್ಲಿಡಬೇಕು.

ಸಾಕ್ಷಾತ್ಕಾರವಾಗಬೇಕಾದರೆ, ಮುಖ್ಯವಾಗಿ ಜ್ಞಾನ ಬೇಕು, ಭಕ್ತಿ ಬೇಕು, ಕರ್ಮ ಬೇಕು, ಸ್ಥಿರಧ್ಯಾನಬೇಕು; ನಿಃಸಂಶಯ ಆತ್ಮಜ್ಞಾನಬೇಕು, ಉತ್ಕಟ ಅನನ್ಯ ಭಕ್ತಿ ಬೇಕು, ನಿಷ್ಕಾಮ ಪರಾರ್ಥಕರ್ಮ ಬೇಕು, ಏಕಾಗ್ರಚಿತ್ತ ಬೇಕು, ಎಂದು ವಚನಕಾರರ ಅಭಿಪ್ರಾಯವಿರುವದು. ಶ್ರದ್ಧಾಪೂರ್ವಕ ಸತ್ಯಜ್ಞಾನ, ಪರಮಾತ್ಮನ ಪರಮಭಕ್ತಿ, ಈಶ್ವರಾಗ್ರ

ಚಿತ್ತ, ಮತ್ತು ಅರ್ಪಣಪೂರ್ವಕ ಫಲಾಶಾರಹಿತ ಸತ್ಕರ್ಮ, ಇವುಗಳಿಂದಲೆ ಧ್ಯೇಯವು ಪ್ರಾಪ್ತವಾಗಬಲ್ಲದು. ಇಲ್ಲಿ ಜ್ಞಾನವೆಂದರೆ, ಆಧ್ಯಾತ್ಮಿಕ ಜ್ಞಾನವು. ನಾನು ಯಾರು, ಎಲ್ಲಿಂದ ಬಂದಿರುವೆನು, ಎಲ್ಲಿ ಹೋಗುವೆನು, ಈ ವಿಶ್ವವೆಲ್ಲಿಂದ ಬಂದಿತು, ಮೂಲ ಸತ್ಯವೇನು, ಸನಗೂ ವಿಶ್ವಕ್ಕೂ ಮೂಲ ಸತ್ಯಕ್ಕೂ ಸಂಬಂಧವೇನು, ಈ ಪ್ರಶ್ನೆಗಳ ಯಥಾರ್ಥ ಉತ್ತರವೇ ಜ್ಞಾನವೆನಿಸುವದು. ಇದೇ ಆತ್ಮನ ಜ್ಞಾನವು. ಅದು ಶುದ್ಧಬುದ್ಧಿಯಿಂದ ಅಂದರೆ ಜಿಜ್ಞಾಸೆಯುಳ್ಳ ನಿಸ್ವಾರ್ಥಬುದ್ಧಿಯಿಂದ ಪ್ರಾಪ್ತವಾಗಬಲ್ಲದು. ಆ ಜ್ಞಾನದಲ್ಲಿ ನಿಸ್ಸಂದೇಹವಾದ ಚಿತ್ತವು ಸ್ಥಿರವಾಯಿತೆಂದರೆ ಸಮತೆಯು ನೆಲೆಗೊಂಡು ಸಮಾಧಾನ, ಶಾಂತಿ, ಪರಮಸುಖ ಇವು ಕ್ರಮವಾಗಿ ಅಳವಡುವವು. ಇದೇ ನಿಜ ಸುಖವು. ಇದೇ ಅಖಿಲ ಜೀವಕೋಟಿಯ ಧ್ಯೇಯವು.

ಬರೀ ಜ್ಞಾನ. ಇಲ್ಲವೆ ಕ್ರಿಯೆ, ಇಲ್ಲವೆ ಭಕ್ತಿ, ಇಲ್ಲವೆ ಧ್ಯಾನ ಇವುಗಳಿಂದ ಮುಕ್ತಿ ದೊರೆಯುವದು, ಎಂದು ನಂಬದೆ ವಚನಕಾರರು ಈ ನಾಲ್ಕು ಬೇಕು ಎಂದು ಸಮನ್ವಯಮಾರ್ಗವನ್ನು ಉಪದೇಶಿಸುವರು. ಆದುದರಿಂದಲೆ, ಅವರು ಹಠ-ರಾಜ-ಭಕ್ತಿ-ಜ್ಞಾನ-ಕರ್ಮಯೋಗಗಳೆಂಬ ಸುಂತಾದ ಪರಿಭಾಷೆಯನ್ನು ಪಯೋಗಿಸದೆ 'ಶಿವಯೋಗ' ಅಂದರೆ ಪರಮಾತ್ಮಯೋಗ ಮತ್ತು ಶಿವೈಕ್ಯ ಅಂದರೆ ಪರಮಾತ್ಮೈಕ್ಯ ಎಂಬ ಶಬ್ದಗಳನ್ನು ಪ್ರಯೋಗಿಸಿರುವರು. ಜ್ಞಾನವಿಲ್ಲದ ಕ್ರಿ ಅಥವಾ ಕ್ರಿ ಇಲ್ಲದ ಜ್ಞಾನ, ಕ್ರಿ ಇಲ್ಲದ ಭಕ್ತಿ ಅಥವಾ ಭಕ್ತಿಯಿಲ್ಲದ ಕ್ರಿ, ಜ್ಞಾನವಿಲ್ಲದ ಭಕ್ತಿ ಅಥವಾ ಭಕ್ತಿಯಿಲ್ಲದ ಜ್ಞಾನ, ಧ್ಯಾನವಿಲ್ಲದ ಕ್ರಿ ಅಥವಾ ಕ್ರಿ ಇಲ್ಲದ ಧ್ಯಾನ ಇವುಗಳಿಗೆ ವಚನಶಾಸ್ತ್ರದಲ್ಲಿ ಸ್ವತಂತ್ರ ಸ್ಥಾನವಿಲ್ಲ. ಈ ನಾಲ್ಕರ ಸಮನ್ವಯದಿಂದಲೆ ಮುಕ್ತಿಯು ದೊರೆಕೊಳ್ಳುವುದು.

ಮೊದಲು ಜ್ಞಾನವನ್ನು ಕುರಿತು ವಚನಕಾರರು ಏನನ್ನುವರು ಇದನ್ನು ನೋಡುವ.

ವಚನಗಳು

೨೨೦. ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನದಲ್ಲ. ಅದು ಜಗಕ್ಕಿಕ್ಕಿದ ವಿಧಿ. ನಿನ್ನೊಡವೆ ಎಂಬುದು ಜ್ಞಾನರತ್ನ. ಅಂತಪ್ಪ ದಿವ್ಯರತ್ನವ ಕೆಡೆಗುಡದೆ ಆ ರತ್ನವ ನೀನಲಂಕರಿಸಿದೆಯಾದಡೆ, ನಮ್ಮ ಗುಹೇಶ್ವರಲಿಂಗದಲ್ಲಿ ನಿನ್ನಿಂದ ಬಿಟ್ಟು ಸಿರಿವಂತರಿಲ್ಲ ಕಾಣಾ, ಎಲೆ ಮನವೆ.

೨೨೦. ಕಿರಿಯದಾದದೇನು, ಹಿರಿಯದಾದದೇನು? ಅರಿವಿಂಗೆ ಹಿರಿದು ಕಿರಿದುಂಟೆ? ಆದಿ ಅನಾದಿ ಇಲ್ಲದಂದು, ಅಜಾಂಡ ಬ್ರಹ್ಮಾಂಡಕೋಟಿ ಗಳುದಯವಾಗದಂದು ಗುಹೇಶ್ವರಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ ಎಂಬುದ ಕಾಣಬಂದಿತ್ತು ಕಾಣಾ ಚನ್ನಬಸವಣ್ಣ.

ಟಿಪ್ಪಣಿ:— ಚನ್ನಬಸವನು ಚಿಕ್ಕವನಾದರೂ ಜ್ಞಾನದಿಂದ ಅವನು ಎಲ್ಲಕ್ಕೂ ಹಿರಿಯನೆಂದು ತೀರ್ಮಾನಿಸುತ್ತಿದ್ದರು.

೨೨೧. ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ, ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷ, ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ, ಜ್ಞಾನದಲ್ಲಿ ಪರಮಾನಂದ ನೆಲೆಗೊಂಡಬಳಿಕ ಸೌರಾಷ್ಟ್ರ ಸೋಮೇಶ್ವರಲಿಂಗವು ಬೇರಿಲ್ಲ ಕಾಣಿರೋ.

ಟಿಪ್ಪಣಿ:— ಇಲ್ಲಿ ಜ್ಞಾನಿಯ ನಿಲವು ಹೇಗಾಗಿ ವರ್ಣಿಸಲ್ಪಟ್ಟಿದೆ.

೨೨೨. ಸೂರ್ಯೋದಯವಾಗಿ ತಿಮಿರವುಂಟೇ ಹೇಳಾ? ಪರುಷವೇಧಿಯ ಸಾಧಿಸಿದವಂಗೆ ದಾರಿದ್ರ್ಯವುಂಟೇ ಹೇಳಾ? ಶಿವಜ್ಞಾನಸಂಪನ್ನನಾದ ಜ್ಯೋತಿರ್ಮಯ ಲಿಂಗಿಗೆ ಅಂಗವುಂಟೆ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೇ ತಾನಾದವಂಗೆ?

ಟಿಪ್ಪಣಿ:— ಈ ಮೇಲಿನ ವಚನಗಳಲ್ಲಿ ಜ್ಞಾನದ ಮಹತ್ವವು ಹೇಳಲ್ಪಟ್ಟಿದೆ. ಅದೇ ಹೆಚ್ಚಿನ ಸಂಪತ್ತು. ಅದರಿಂದ ಹೀನಗುಣಗಳೆಲ್ಲ ನುಟ್ಟು ಭಸ್ಮವಾಗುವವು. ಪರುಷವನ್ನು ಹೀನ ಧಾತುಗಳಿಗೆ ಹಚ್ಚುವ ರೀತಿ ಗೊತ್ತಿದ್ದವನು ಬಡವನಾಗಬಲ್ಲನೆ? ಈ ಜ್ಞಾನವು ಆತ್ಮನಲ್ಲಿ ಆತ್ಮನಿಗೆಯೆ ಆಗಬಲ್ಲದು.

೨೨೩. ಮದಹಸ್ತಿ ಮದಹಸ್ತಿಯ ಹಿಡಿವುದಲ್ಲದೆ ಮತ್ತೊಂದ ಹಿಡಿಯದು. ಅರೂಪು ಅರೂಪ ಹಿಡಿವುದಲ್ಲದೆ ಮತ್ತೊಂದ ಹಿಡಿಯದು. ರೂಪಿಲ್ಲದಾತನ ರೂಪಿಗೆ ಹಿಡಿವೆನು ಕಪಿಲಸಿದ್ಧಮಲ್ಲಿಕಾರ್ಜುನಾ.

೨೨೫. ನಿಮ್ಮಲ್ಲಿ ನೀವು ತಿಳಿದು ನೋಡಿದರೆ ಅನ್ಯವಿಲ್ಲ ಕಾಣಿರಣ್ಣಾ. ಅರಿವು ನಿಮ್ಮಲ್ಲಿಯೆ ತದ್ಗತವಾಗಿದೆ. ಅನ್ಯಭಾವವ ನೆನೆಯದೆ, ತನ್ನೊಳಗೆ ತಾನೇ ಇರಬಲ್ಲರೆ ತನ್ನಲ್ಲಿಯೆ ತನ್ಮಯ ಗುಹೇಶ್ವರಲಿಂಗವು.

೨೨೬. ತನ್ನೊಳಗಣ ಅರಿವು ತನ್ನಲ್ಲಿ ತೋರದೆ ಅನ್ಯರಲ್ಲಿ ತೋರ ಬಲ್ಲುದೆ? ತನ್ನಲ್ಲಿ ತಾನೇ ಇದ್ದಂತೆ ಇದ್ದಿತ್ತು. ತನ್ನ ತಾನೇ ಪಕ್ಕಕ್ಕೆ ಬಂದು ತನ್ನಲ್ಲಿ ಹುಟ್ಟಿದ ನೆನಹಿನ ಬಿನ್ನಾಣವನು ಏನೆಂಬೆನಯ್ಯಾ, ರಾಮನಾಥಾ!

೨೨೭. ತನ್ನಲ್ಲಿ ತಾನು ಪ್ರತ್ಯಕ್ಷಾನುಭವದಿಂದ ತಿಳಿದು ನೋಡಿ, ಆ ತಿಳಿದ ತಿಳಿವಿನೊಳಗೆ ಲಿಂಗದ ನಿಜವ ಕಂಡು, ಕಾಂಬ ಜ್ಞಾನ ತಾನೆಂದರಿದು, ಕಾಂಬುದು ಕಾಣಿಸಿಕೊಂಬುದು ಎರಡೊಂದಾದ ನಿಲವು ತಾನೆ ನಿಮ್ಮ ನಿಲವು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೨೨೮. ಎಲ್ಲ ಎಲ್ಲವನರಿದು ಫಲವೇನಯ್ಯ? ತನ್ನ ತಾನರಿಯಬೇಕಲ್ಲದೆ? ತನ್ನಲ್ಲಿ ಅರಿವು ಸ್ವಯವಾಗಿರಲು, ಅನ್ಯರ ಕೇಳಲುಂಟೇ? ಜನ್ನ ಮುಲ್ಲಿಕಾರ್ಜುನ, ನೀ ಅರಿವಾಗಿ ಮುಂದುದೋರಿದ ಕಾರಣ ನಿಮ್ಮಿಂದ ಲರಿದೆನಯ್ಯಾ ಪ್ರಭುವೆ.

೨೨೯. ಬೋಧವೆಂದರೆ ಕರ್ಣವನೂದಿ ಮಂತ್ರವ ಹೇಳಿದ್ದು ಬೋಧವೆ? ಅಲ್ಲಲ್ಲ; ಬೋಧವೆಂದರೆ ತನುತ್ರಯ ಸಾಕ್ಷಿ ನೀನೇ ಪರವಸ್ತು ಎಂಬುವದೆ ನಿಜಬೋಧ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಟಿಪ್ಪಣಿ:— ಆತ್ಮಜ್ಞಾನವು, ತಾನಾರೆಂಬುದನರಿವುದು, ಎಲ್ಲಕ್ಕೂ ಹೆಚ್ಚಿನದು. ಅದನ್ನರಿಯದೆ ಮಿಕ್ಕುದನ್ನೆಷ್ಟು ಅರಿದರೂ ಅದು ಹೊಟ್ಟೆಯ ಮೇಲೆ ಕಟ್ಟೋಗರ ಹೊತ್ತಂತೆಯೆ ಸೈ. ಇಂಥ ಆತ್ಮಜ್ಞಾನವೆ ನಿಜವಾದ ಬೋಧವೆನಿಸುವದು.

೨೩೦. ತನ್ನ ತಾನರಿದವಂಗೆ ಅರಿವೇ ಗುರು. ಅರಿವರಿತು ಮರಹು ನಷ್ಟವಾಗಿದ್ದಲ್ಲಿ ದೃಷ್ಟನಷ್ಟವೆ ಗುರು. ತಾನಾದಲ್ಲಿ, ಮುಟ್ಟಿ ತೋರಿದವರಿಲ್ಲದಡೇನು? ಸಹಜವ ನೆಲೆಗೊಳಿಸಿದವಗೆ ನಿರ್ಣಯ ನಿಷ್ಪತ್ತಿಯೆ ಗುರು ನೋಡಾ! ಈ ಪರಿ ಗುರು ತಾನಾದರೂ ಗುರುನಿಡಿದಿರಬೇಕು ಎನ್ನ ಅಜಗಣ್ಣನಂತೆ.

ಟಿಪ್ಪಣಿ:— ತನ್ನ ತಾನರಿದವನು ಜ್ಞಾನಿಯೆಂಬುದು ನಿಜವು. ಆದರೆ ತಾನು ಯಾರು, ಇದರ ಉತ್ತರವೇನು?

೨೩೧. ದೇಹ ನಾನಲ್ಲ, ಜೀವ ನಾನಲ್ಲ ಎಂಬುವದದು ಶಿವನೆನಿಸಿತ್ತು. ಶಿವಜೀವಂಗೆ ಭೇದವೆಂಬುವದದು ಇಲ್ಲ ಕಾಣಾ. ಉದಕವಿದ್ದೆಡೆಯಲ್ಲಿ, ಗಗನ

ಪರಿಪೂರ್ಣದಲ್ಲಿ ರವಿತಾರೆಮೇಘವಾದಂತೆ ಪರಿಪೂರ್ಣವಸ್ತುವೆ ಚಿದಾಕಾಶದಲ್ಲಿ ಶಿವ, ಜೀವ, ಮಾಯಾ, ಪ್ರಕೃತಿ, ಎನಿಸಿತ್ತಯ್ಯ, ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೩೨. ಒಂದೇ ವಸ್ತು ಅವಸ್ಥಾತ್ರಯ, ಕಿಂಚಿಜ್ಞತ್ವ ಹೊಂದಿ ಜೀವ ನೆನಿಸಿತ್ತಯ್ಯ. ಆ ಜೀವಕ್ಕೆ ಕರ್ತೃಭೋಕ್ತೃತ್ವಕ್ಕೆ ಒಳಗಾಗಿ ದೇಹ ನಾನೆಂದಿತ್ತಯ್ಯ. ದೇಹ ನಾನೆಂಬುವ ವಾಸನೆಯೊಳಗಾಗಿ ಕಾಲತ್ರಯಕ್ಕೊಳ ಗಾಗಿ ಅಸ್ವತಂತ್ರನಾಗಿ ನೆಲೆಸಿತ್ತು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಟಿಪ್ಪಣಿ:— ಅವಸ್ಥಾತ್ರಯ- ಜಾಗ್ರತ್, ಸ್ವಪ್ನ, ಸುಷುಪ್ತಿ.

೨೩೩. ಅರಿವೆನೆಂದರೆ ಸತ್ಯಜ್ಞಾನಮನಂತಂ ಬ್ರಹ್ಮ ಎಂಬ ಶ್ರುತಿ ಸಾರುತ್ತಿದೆ. ಮರೆದೆನೆಂದರೆ ಸಾಕ್ಷಾತ್ ಸಚ್ಚಿದಾನಂದ ಭಾವವು ಎಂಬ ಕಠವಲ್ಯುಪನಿಷತ್ ಉದ್ಘೋಷಿಸುತ್ತಿದೆ. ಅರಿವು ವಸ್ತುಸ್ವರೂಪು, ಮರವು ಮಾಯಾಸ್ವರೂಪು, ಎಂದರೆ ನಾನು ನಿರ್ಮಯಲಸ್ವರೂಪನಾದೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೩೪. ನಿನ್ನ ದೇಹ ನೋಡುವಡೆ ಪಾಂಚಭೌತಿಕ. ನೀ ನೋಡುವಡೆ ಜೀವಾಂಶಿಕ. ನಿನ್ನ ಧನ ನೋಡುವಡೆ ಕುಬೇರನದು. ನಿನ್ನ ಮನ ನೋಡುವಡೆ ವಾಯುವ ಕೂಡಿದ್ದು, ವಿಚಾರಿಸಿ ನೋಡಿದರೆ ಬ್ರಹ್ಮನದು. ನಾ ಮಾಡುವೆ ನೆಂದಡೆ ಅದು ಆದಿಶಕ್ತಿಚೈತನ್ಯ. ನಾ ತಿಳಿದಿಹೆನೆಂದಡೆ ಅದು ಜ್ಞಾನದ ಬಲ. ಆ ಜ್ಞಾನವು ನಾ ಎಂದಡೆ ಇದಿರಿಟ್ಟು ತೋರುತ್ತಿದೆ. ತೋರುವ ಆನಂದ ಮೂರ್ತಿ ನಾ ಎಂದಡೆ ಅದು ಸಾಕ್ಷಿಯಾಗಿ ನಿಂತಿತ್ತು. ಸಾಕ್ಷಿಯೆಂಬುದದು ತಿಳಿದು ತಿಳಿಯದೆಂಬದಕ್ಕೆ ಬಯಲಾದ ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನತಂದೆ.

೨೩೫. ಕಾಯ ನಾನೆಂದರೆ ಕರ್ಮಕಾಂಡಿ. ಸಕಲಕರ್ಮ ಈಶಾರ್ಪಣ ವೆಂದರೆ ಭಕ್ತಿಕಾಂಡಿ. ಸಕಲಕರ್ಮಸಾಕ್ಷಿ ಎಂದರೆ ಜ್ಞಾನಕಾಂಡಿ. ಕಾಂಡತ್ರಯ ವಿಲ್ಲದ ಅಖಂಡನ ತೋರಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಟಿಪ್ಪಣಿ:— ದೇಹ, ಜೀವ, ಬುದ್ಧಿ, ಧನ ಮುಂತಾದ ಎಲ್ಲವು ಗಳಾಚೆಗೆ ಅಖಂಡವಾದ ಆತ್ಮವಸ್ತುವೆಂಬುದು ಇರುವದು, ಎಂಬುದನ್ನು ಪ್ರತ್ಯಕ್ಷ ಸಾಕ್ಷಾತ್ಕಾರದಿಂದ ತಿಳಿದುಕೊಳ್ಳುವುದೇ ಪೂರ್ಣಜ್ಞಾನವು. ಜೀವಶಿವ ಇವರ ಸಂಬಂಧವೇನಿರುವದು ಇದು ೨೩೧, ೨೩೨ ಈ ವಚನ ಗಳಲ್ಲಿ ಜನ್ನಾಗಿ ವ್ಯಕ್ತವಾಗಿದೆ. ಕೊನೆಯ ಜ್ಞಾನವು 'ನಾನು ಸರ್ವಸಾಕ್ಷಿ' ಎಂಬುದರಾಜೆಗೆ ಇರುವದು. ಅದು 'ತಿಳಿದು ತಿಳಿಯದು' ಅಂದರೆ

ಅವರ್ಣನೀಯವು. ಆದುದರಿಂದಲೇ ಆದು ಕಾಂಡತ್ರಯದಾಚೆಗಿರುವದೆಂದು ವಚನಕಾರರು ಹೇಳಿರುವರು.

೨೩೬. ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ, ಎಂಬ ಷಡುಚಕ್ರದೊಳಗಿನ ದಳವರ್ಣ ಅಕ್ಷರ ಅಧಿದೇವತೆ ಶಕ್ತಿ ಭಕ್ತಿ ಸಾದಾಖ್ಯಂಗಳ ದೇವರೆಂಬರು. ಅಲ್ಲಲ್ಲ ನೋಡಾ. ವಾಚಾತೀತ, ಮನೋತೀತ, ವರ್ಣಾತೀತ, ಅಕ್ಷರಾತೀತವಾಗಿ ಪರಶಿವತತ್ವ ತಾನೆಂದರಿದಡೆ ತಾನೇ ದೇವ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಟಿಪ್ಪಣಿ:— ಸಗುಣದಾಜೆಗೆ ನಿಜವಾದ ದೇವನಿರುವನು.

೨೩೭. ಅಕ್ಷರದ ಅಭ್ಯಾಸವ ಮಾಡಿ ಬರವ ತೊಡೆವ ಪರಿಯೆಂತೋ? ಸ್ವರೂಪದಾವುದು ನಿರೂಪದಾವುದು ಎಂದರಿಯರಾಗಿ, ಆದಿನಿರಾಳ, ಮಧ್ಯ ನಿರಾಳ, ತುದಿನಿರಾಳ ಗುಹೇಶ್ವರ.

ಟಿಪ್ಪಣಿ:— ಬರವತೊಡೆಯೋಣ ಅಂದರೆ ಭವಕ್ಕೆ ಬರುವದನ್ನು ತಪ್ಪಿಸೋಣ. ಆದಿ ನಿರಾಳ ಇತ್ಯಾದಿ ಅಂದರೆ ಉತ್ಪತ್ತಿಸ್ಥಿತಿಲಯಕ್ಕೆ ಹೊರಗು.

೨೩೮. ಕಲ್ಲದೇವರು ದೇವರಲ್ಲ, ಮಣ್ಣದೇವರು ದೇವರಲ್ಲ, ಮರ ದೇವರಲ್ಲ, ಪಂಚಲೋಹದಲ್ಲಿ ಮಾಡುವ ದೇವರು ದೇವರಲ್ಲ. ಸೇತುಬಂಧ, ರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ, ಮುಂತಾದ ಅಷ್ಟಾಷಷ್ಟಿ ಪುಣ್ಯ ತೀರ್ಥಂಗಳಲ್ಲಿಹ ದೇವರು ದೇವರಲ್ಲ. ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವ ನೋಡಾ, ಅಪ್ರಮಾಣ ಕೂಡಲಸಂಗಮದೇವಾ.

೨೩೯. ಅಯ್ಯಾ, ತನ್ನ ತಾನರಿದು ತನ್ನ ಅಜ್ಞಾನ, ಆಶಾಪಾಶ, ಅನಾಚಾರ, ಅಸತ್ಯ ನಡೆನುಡಿಗಳ ತಾನರಿದು, ತನ್ನ ದುರ್ಗುಣಗಳ ನೀಗಿ, ನಿಜದಲ್ಲಿ ನಿಂದಡೆ, ತಾನೇ ಮಾಯಾತೀತ, ತಾನೇ ಗುಣಾತೀತ, ತಾನೇ ಸಗುಣ ನಿರ್ಗುಣಕ್ಕಾಧಾರಮೂರ್ತಿ, ತಾನೇ ಸಾಕಾರ ನಿರಾಕಾರಕ್ಕೆ ಚೈತನ್ಯಮೂರ್ತಿ, ನಿಜವಸ್ತು ನೋಡಾ, ಅಪ್ರಮಾಣ ಕೂಡಲಸಂಗಮದೇವಾ.

ಟಿಪ್ಪಣಿ:— ದೇವರು ಶುದ್ಧ ಚೈತನ್ಯಸ್ವರೂಪನು, ನಮ್ಮ ಉಪಾಧಿ ಗಳನೆಲ್ಲ ಸವರಿದರೆ ನಮ್ಮಲ್ಲಿಯೆ ಅವನು ಪ್ರತೀತನಾಗುವನು ಎಂಬುದೇ ಈ ಎರಡು ವಚನಗಳ ತಾತ್ಪರ್ಯವು.

೨೪೦. ಕಾಯವೆರಸಿ ಕೈಲಾಸಕ್ಕೆ ಹೋಹೆನೆಂಬರು. ಇದು ಕ್ರಮವಲ್ಲ. ಘನಲಿಂಗ ಕರಸ್ಥಲದೊಳಗಿಪ್ಪ ಅನುವನರಿಯದೆ, ಇಲ್ಲಿ ಕರ್ಮ ಅಲ್ಲಿ ನಃಕರ್ಮವೇ? ಹೇಮದ ಮಾಟದ ಒಳಹೊರಗಿನಂತೆ ಮರ್ತ್ಯ ಕೈಲಾಸವೆಂಬ ಕಟ್ಟಳೆ ಇಲ್ಲ. ಆತ್ಮನಿಶ್ಚಯವಾದಲ್ಲಿಯೇ ಕೈವಲ್ಯ. ತತ್ವವನರಿದಲ್ಲಿಯೇ ಒಳಗು. ಈ ಗುಣ ಸದಮಲಭಕ್ತನ ಮುಕ್ತಿ. ಎನ್ನಯ ಪ್ರಿಯ ಇಮ್ಮಡಿ ನಃಕಳಂಕ ಮಲ್ಲಿಕಾರ್ಜುನನಿಕ್ಕಿದ ಗೊತ್ತು.

ಟಿಪ್ಪಣಿ:— ಆತ್ಮಜ್ಞಾನವೆ ಮುಕ್ತಿ ಎಂದು ಮತ್ತೆ ಇಲ್ಲಿ ಹೇಳಲ್ಪಟ್ಟಿದೆ. ಮುಕ್ತಿ ಎಂಬುದು ಬಂದು ಸ್ಥಾನವಲ್ಲ, ಅದೊಂದು ಚಿತ್ತದ ವಿಶಿಷ್ಟಸ್ಥಿತಿ, ಎಂಬುದು ಇಲ್ಲಿ ಬಹಳ ಒಡೆದು ಹೇಳಲಾಗಿದೆ.

೨೪೧. ತನ್ನವ ಹುಸಿಮಾಡಿ, ಇನ್ನೊಂದುವ ದಿಟಮಾಡುವ ಅಣ್ಣಂಗೆ ನಂಬುಗೆ ಇನ್ನಾವುದಯ್ಯ? ತನ್ನೊಳಗಿರ್ದ ಘನವ ತಾ ತಿಳಿಯಲರಿಯದೆ ಪರಬ್ರಹ್ಮಕ್ಕೆ ತಲೆ ಇಕ್ಕಿ ತೆಗೆದೆನೆಂಬ ಅಣ್ಣ ಗಾವಿಲನೆಂದನಂಬಿಗ ಚೌಡಯ್ಯ.

ಟಿಪ್ಪಣಿ:— ಆತ್ಮಾನುಭವವನ್ನು ಲೆಕ್ಕಿಸದೆ ಯಾರಾದರೂ ಪರತತ್ವದ ಜ್ಞಾನಮಾಡಿಕೊಳ್ಳಲು ಏಳಿಸಿದರೆ ಅದು ವ್ಯರ್ಥವು. ಆತ್ಮನಿಂದಲೆ, ಆತ್ಮನಲ್ಲಿಯೆ ಪರಮನನ್ನು ಕಾಣತಕ್ಕದ್ದು, ಅನುಭವಿಸತಕ್ಕದ್ದು. ಇಂಥ ಜ್ಞಾನದಿಂದಲೆ ಮೋಕ್ಷವಾಗಬಲ್ಲದು.

೨೪೨. ಅನಲಂಗೆ ಉರಿ ಉಷ್ಣವಿಲ್ಲದಿದ್ದರೆ, ತೃಣಕಾಷ್ಠಗಳ ಸುಡುವ ಪರಿ ಇನ್ನೆಂತೋ? ಆತ್ಮಂಗರುಹಿಲ್ಲದಿರೆ ಕರ್ಮಂಗಳ ಬಂಧಮೋಕ್ಷ ಹಿಂಗುವ ಪರಿ ಇನ್ನೆಂತೋ? ಇಂತೀ ದ್ವಂದ್ವಗಳನರಿದು ಮರೆಯಲ್ಲಿ ಮನಸಂದಿತ್ತು ಮಾರೇಶ್ವರಾ.

ಟಿಪ್ಪಣಿ:— ಮನಸಂದಿತ್ತು ಅಂದರೆ ಮನಸು ದೇವರಲ್ಲಿ ಒಂದಾಗಬಲ್ಲದು ಎಂದು ಅರ್ಥ.

೨೪೩. ಏನನೋದಿ ಏನ ಕೇಳಿ ಏನ ಹೇಳಿದಡೇನು ಫಲ, ತನ್ನಲ್ಲಿದ್ದ ವಸ್ತುವ ತಾನರಿಯದನ್ನಕ್ಕರ? ಜಿನ್ನದ ತೊಡಹದ ತಾಮ್ರದಂತೆ ಒಳಗೆ ಕಾಳಿಕೆ ಬಿಡದು. ನುಣ್ಣಗೆ ಬಣ್ಣಗೆ ನುಡಿವ ಅಣ್ಣಗಳೆಲ್ಲರು ಕಣ್ಣು ಕಾಣದೆ ಕಾಡ ಬಿದ್ದರು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿಮ್ಮನರಿಯದ ಅಂಧಕರಿಲ್ಲರು.

೨೪೪. ಅಯ್ಯಾ, ಕೊರಡು ಕೊನರಾಗಬಲ್ಲುದೇ? ಬರಡು ಹಯನಾಗಬಲ್ಲುದೇ? ಕುರುಡಂಗೆ ಕನ್ನಡಿಯ ತೋರಿದರೆ ನೋಡಬಲ್ಲನೆ? ಮೂಗಂಗೆ ರಾಗವ ಹೇಳಿದರೆ ಹಾಡಬಲ್ಲನೆ? ಲೋಗರಿಗೆ ಉಪದೇಶವ ಹೇಳಿದರೆ ಶಿವಸತ್ಪಥದ ಹಾದಿಯ ಬಲ್ಲರೆ? ಇದುಕಾರಣ ಶಿವಸತ್ಪಥದ ಅಗೆಂಬುದು ಶಿವಜ್ಞಾನ ಸಂಪನ್ನಂಗಲ್ಲದೆ ಸಾಧ್ಯವಲ್ಲ ಕಾಣಾ. ಅಸಾಧ್ಯ ನಿರವಯ ಶೂನ್ಯವಸ್ತುವಿ ನೊಳಗಣ ಸತ್ಪಥ ನಿಜೈಕ್ಯವು ಅವಿವೇಕಿಗಳಿಗೆ ಅಳವಡುವುದೆ: ನಿಮ್ಮನರಿಗಲ್ಲದೆ, ಸಂಗನ ಬಸವಣ್ಣ?

೨೪೫. ಬಿಸಜತಂತುವಿನ ಸಂಚದಿಂದ ಮಹಗಜ ಬಂಧವಡೆಯಬಲ್ಲುದೆ? ತರಗೆಲೆ ಮುಸುಕಿದೊಡೆ ದಾವಾನಲ ಕೆಡಬಲ್ಲುದೆ? ಮಂಜಿನ ಘಾಜು ಸೂರ್ಯನ ಮುತ್ತಬಲ್ಲುದೆ? ನಿಮ್ಮನರಿದಾತಂಗೆ ಪುಣ್ಯ ಪಾಪ ಕರ್ಮ ಲೇಪಿಸಬಲ್ಲದೆ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

ವಿವರಣೆ

ಆತ್ಮಜ್ಞಾನಿಗೆ ಕರ್ಮಗಳ ಬಂಧಮೋಕ್ಷ, ಪುಣ್ಯಪಾಪಗಳ ಲೇಪ, ಅರಿವು-ಮರವುಗಳ ದೋಷ ಇವು ತಗಲಲಾರವು. ಅಂಥ ಆತ್ಮಜ್ಞಾನವು ಬರೀ ಗ್ರಂಥಪರಿಶೀಲನದಿಂದ ಬರಲಾರದು. ಅದು ದೀರ್ಘ ಹಾಗೂ ತೀವ್ರ ಸಾಧನದಿಂದಲೆ ಪ್ರಾಪ್ತವಾಗುವದು. ಒಮ್ಮೆ ಈ ಜ್ಞಾನವು ಪ್ರಾಪ್ತವಾಯಿತೆಂದರೆ ಅವನು ಅಭಯನಾಗುವನು, ದ್ವಂದ್ವಾತೀತನಾಗುವನು, ನಿರ್ಲೇಪನಾಗುವನು. ಅವನು ಅತ್ಯಂತಿಕ ಸುಖದ ಅಧಿಕಾರಿಯಾಗುವನು. ಇಷ್ಟು ಈ ಜ್ಞಾನದ ಮಹಿಮೆ ಇರುವದು.

ವಚನಗಳು

೨೪೬. ಹಿಂದಣ ಭವಸಾಗರವನು ದಾಂಟದೆ. ಮುಂದಿನ ಮುಕ್ತಿಪಥಕ್ಕೆ ಜ್ಞಾನವಂಕುರಿಸಿತ್ತು. ಇನ್ನಂಜೆನಂಜೆನಯ್ಯ. ಎನ್ನ ಮನೋಮೂರುತಿಯಪ್ಪ ಚಂಡೇಶ್ವರನ ಕಾರುಣ್ಯವಾಯಿತ್ತು. ಗೆದ್ದೆ ಗೆದ್ದೆ ಮಹಾಮಾಯೆಯಾ!

೨೪೭. ನರನ ಮುಟ್ಟಿ ಒಲ್ಮೆಸಿದಲ್ಲಿ ಪರಿಪರಿಯ ಪದಂಗಳುಂಟು. ಪರಶಿವ ಮೂರ್ತಿಯನರಿದಲ್ಲಿ ಇಹಪರದಲ್ಲಿ ಪರಮ ಸುಖವುಂಟು. ಇದೇ ಪರತತ್ವದಿರವು. ಅಮರೇಶ್ವರಲಿಂಗವ ಬೆರಿಸಬಲ್ಲಡೆ ಇದೇ ಸುಖ.

ಟಿಪ್ಪಣಿ:— ಇಂಥ ಅಭಯವೂ ಪರಮಸುಖವೂ ಯಾವ ಜ್ಞಾನದಿಂದ ಸಿಕ್ಕುವುದೋ ಅದರ ಲಕ್ಷಣಗಳೇನು? ಇದನ್ನು ಇನ್ನು ತಿಳಿದುಕೊಳ್ಳುವುದು ಅವಶ್ಯ.

೨೪೬. ದೇಹಭಾವವಳಿದಲ್ಲದೆ ಜೀವಭಾವವಳಿಯದು. ಜೀವಭಾವ ವಳಿದಲ್ಲದೆ ಭಕ್ತಿಭಾವವಳವಡದು. ಭಕ್ತಿಭಾವವಳವಟ್ಟಲ್ಲದೆ ಅರಿವು ತಲೆದೋರದು. ಅರಿವು ತಲೆದೋರದಲ್ಲದೆ ಕುರುಹು ನಷ್ಟವಾಗದು. ಕುರುಹು ನಷ್ಟವಾದಲ್ಲದೆ ಮಾಯೆ ಹಿಂಗದು. ಇದುಕಾರಣ ಕಾಯದ ಜೀವದ ಹೊಲಿಗೆ ಯಳಿದ ಭೇದವ ತಿಳಿಯಬಲ್ಲರೆ ಗುಹೇಶ್ವರಲಿಂಗದ ಅರಿವು ಸಾಧ್ಯವಪ್ಪುದು ಕಾಣಾ ಸಿದ್ಧರಾಮಯ್ಯಾ.

೨೪೭. ಅವಲ್ಲಿ ಸರ್ವಪ್ರಪಂಚ ನಿವೃತ್ತಿಯಾಗಿಹುದು ಅದೀಗ ಬ್ರಹ್ಮ ಜ್ಞಾನ. ಅವಲ್ಲಿ ಕೇವಲ ನಿಶ್ಚಿಂತವಾಗಿಹುದು ಅದೀಗ ಬ್ರಹ್ಮಜ್ಞಾನ. ಅವಲ್ಲಿ ತಾನೆಂಬ ತೋರಿಕೆ ಹುಟ್ಟದಿಹುದು ಅದೀಗ ಬ್ರಹ್ಮಜ್ಞಾನ. ಅವಲ್ಲಿ ಕೂಡಲ ಚನ್ನಸಂಗಯ್ಯನಲ್ಲದೆ ಪರತೊಂದನರಿಯದಿಹುದು ಅದೇ ಬ್ರಹ್ಮಜ್ಞಾನವಯ್ಯ.

೨೪೮. ಎಲೆ ಮನವೇ, ನೀ ನಿನ್ನ ನಿಜವ ತಿಳಿವಡೆ, ಆ ನಿನ್ನ ನಿಜವ ಹೇಳುವೆ. ಅದು ಕೇವಲ ಜ್ಯೋತಿ. ಅದು ವರ್ಣಾತೀತ. ನೀನದನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು, ಅದೀಗ ನಿನ್ನ ಪರಿಪೂರ್ಣತ್ವದ ನೆಲೆ. ಆ ನಿನ್ನ ನಿಜವ ನಿಶ್ಚೈಸಿ ನಿರ್ಗಮನಿಯಾದಲ್ಲಿ ಅದೇ ಸಮ್ಯಕ್‌ಜ್ಞಾನದ ತೋರಿಕೆ. ಆ ತೋರಿಕೆಯ ಅಖಂಡ ಬೆಳಗಿನೊಳಗೆ ನೀ ನಮ್ಮ ಗುಹೇಶ್ವರಲಿಂಗದ ಚರಣವ ನರಸಿಕೊಂಡು ನಿಶ್ಚಿಂತನಾಗೆಲೆ ಮನವೇ.

೨೪೯. ಎಲೆ ಮನವೇ, ಎಲ್ಲಿ ಹವಣಿಸಬಾರದ ಅಖಂಡ ಬೆಳಗು ತೋರುತ್ತಿಹುದು, ಅದೀಗ ನಿನ್ನ ನಿಜ. ಎಲೆ ಮನವೇ, ಅವಲ್ಲಿ ನೀನೆಂಬ ಸೆಕೆ ಹಿಂಗಿ ತಾನೇ ತೋರುತ್ತಿಹುದು, ಅದೀಗ ನಿನ್ನ ನಿಜ. ಎಲೆ ಮನವೇ, ನಿನ್ನ ನಿಜವನರಿಯ ಬಲ್ಲಡೆ, ಅದೇ ಬ್ರಹ್ಮಜ್ಞಾನ. ಅದೇ ಕೇವಲ ಮುಕ್ತಿ, ಅದೇ ನಮ್ಮ ಗುಹೇಶ್ವರಲಿಂಗವನರಿವ ಸಹಜಭಕ್ತಿಯ ಕುಳ ಕಾಣಾ. ಎಲೆ ಮನವೇ, ನೀನಿದ ನಿಶ್ಚಯಿಸಿಕೋ ಮರೆಯದೆ.

ಟಿಪ್ಪಣಿ– ದೇಹ, ಜೀವ, ಪ್ರಪಂಜ, ಮಾಯೆ, ಮೋಹ ಇತ್ಯಾದಿ ಗಳ ಅಂದರೆ ಇಡೀ ಬಾಹ್ಯ ವಿಶ್ವದ ಎಲ್ಲ ತೋರಿಕೆಯು ತಿಳಿದು ಕೇವಲ ಚಿದ್ರೂಪ ಜ್ಯೋತಿಯು ಬೆಳಗುವುದೆ ಜ್ಞಾನದ ಲಕ್ಷಣವು. ಎಲ್ಲೆಲ್ಲಿಯೂ ಆ ಜ್ಞಾನದ ಬೆಳಕೇ ತುಂಬಿತೆಂದರೆ ಮತ್ತು ತಾನೂ ಜ್ಞಾನಸ್ವರೂಪನೇ ಎಂಬ ಅನುಭವವು ಆಯಿತೆಂದರೆ ಅದೇ ನಿಜವಾದ ಆತ್ಮಜ್ಞಾನದ ಲಕ್ಷಣವು.

---

೧೨. ಸಾಧನಮಾರ್ಗ-ಭಕ್ತಿಯೋಗ

ವಿವರಣೆ

ಮುಕ್ತಿಯೆ ಎಲ್ಲರ ಧ್ಯೇಯವು. ಅದು ಸತ್ಯಸಾಕ್ಷಾತ್ಕಾರದಿಂದ ಪ್ರಾಪ್ತವಾಗುವದು. ಸತ್ಯಸಾಕ್ಷಾತ್ಕಾರವೆಂದರೂ ಒಂದೇ, ಆತ್ಮಜ್ಞಾನ ವೆಂದರೂ ಒಂದೇ. ಮನುಷ್ಯನು ಯಾವ ಮಾರ್ಗದಿಂದ ಮುಕ್ತಿಯನ್ನು ಪಡೆಯಲಿಚ್ಛಿಸಿದರೂ ಆತ್ಮಜ್ಞಾನವಾಗದೆ ಅಥವಾ ಸತ್ಯಸಾಕ್ಷಾತ್ಕಾರ ವಾಗದೆ ಅವನಿಗೆ ಮುಕ್ತಿದೊರೆಯುವದು ಅಶಕ್ಯವು ಈ ಆತ್ಮಜ್ಞಾನವನ್ನು ಮನುಷ್ಯನು ಶುದ್ಧಬುದ್ಧಿಯಿಂದ ಪಡೆಯಬಲ್ಲನು. ಆದರೆ ಅನನ್ಯಭಕ್ತಿಯು ಎಲ್ಲಕ್ಕೂ ಸುಲಭವಾದ ಸಾಧನವಿರುವದೆಂದು ವಚನಕಾರರ ಮತವಿರು ವದು. ಆಗಮಕಾರರಂತೆ ಭಕ್ತಿಗೆ ಇವರೂ ಸಾಧನಗಳಲ್ಲಿ ಎಲ್ಲಕ್ಕೂ ಪ್ರಥಮ ಸ್ಥಾನವನ್ನು ಕೊಟ್ಟಿರುವರು.

ಜ್ಞಾನವು ಬುದ್ಧಿಯಕಾರ್ಯವಿದ್ದಂತೆ ಭಕ್ತಿಯು ಭಾವದ ಕಾರ್ಯ ವಿರುವದು. ಮನುಷ್ಯನು ತನ್ನ ಭಾವವನ್ನು ಶುದ್ಧೀಕರಿಸಿ ಅದನ್ನು ಪರಮಾತ್ಮನ ಚರಣದಲ್ಲಿ ಅನನ್ಯಭಾವದಿಂದ ಅರ್ಪಿಸುವುದರಿಂದ ಕ್ರಮಶಃ ಆತ್ಮಜ್ಞಾನವು ನಿಶ್ಚಳವೂ ದೃಢವೂ ಆಗುತ್ತ ಹೋಗುವದು. ಮತ್ತು ಕೊನೆಗೆ ಪೂರ್ಣ ಆತ್ಮಜ್ಞಾನದ ಪ್ರಕಾಶವು ಅಂತಃಕರಣದಲ್ಲಿ ಬೆಳಗುವದು. ವಿವಿಧವಸ್ತುಗಳಲ್ಲಿ ಹರಿದು ಹಂಚಿಹೋದ ವಿಷಯಗಳ ಬೆನ್ನುಹತ್ತಿ ಹರಿಯುವ ನಮ್ಮ ಪ್ರೇಮವನ್ನು ಪರಮಾತ್ಮನೆಲ್ಲಿ ಕೇಂದ್ರೀಕರಿಸಿ, ನಿರ್ಹೇತುಕಭಾವದಿಂದ ತಲ್ಲೀನವಾಗುವುದೇ ಭಕ್ತಿಯೆನಿಸುವದು. ಸದ್ಯಕ್ಕೆ ನಮ್ಮ ಹೃದಯಪೀಠದ ಅಧೀಶ್ವರನಾದ 'ನಾನು' ಎಂಬವನನ್ನು ತಳ್ಳಿ ಪರಮಾತ್ಮನನ್ನು ಅಲ್ಲಿ ಪ್ರತಿಷ್ಠಿಸುವುದೆ ಭಕ್ತಿಯ ಮುಖ್ಯ ಕಾರ್ಯವು. ಅದು ಆತ್ಮನಿವೇದನದಿಂದ ಅಂದರೆ ಭಕ್ತಿಯ ಪರಮಾವಧಿಯಿಂದ ಆಗಬಲ್ಲದು.

ಜ್ಞಾನಮಾರ್ಗದಲ್ಲಿ, ಪರಾತ್ಪರ ಸತ್ ವಸ್ತುವಿನಲ್ಲಿ ವ್ಯಕ್ತಿತ್ವವನ್ನು ಆರೋಪಿಸುವ ಕಾರಣವಿಲ್ಲ. ಆದರೆ ಭಕ್ತಿಮಾರ್ಗದಲ್ಲಿ ಮಾತ್ರ ಭಕ್ತನು ಪರಮಾತ್ಮನನ್ನು ಪುರುಷವಿಧವಾಗಿ ಆರಾಧಿಸುವನು. ಆದುದರಿಂದ

ವಚನಗಳು

೨೬೦. ಸೃಷ್ಟಿಗೆ ಹುಟ್ಟಿದ ಶಿಲೆ, ಕಲ್ಲುಕುಟಕಂಗೆ ಹುಟ್ಟಿದ ಮೂರುತ್ತಿ, ಮಂತ್ರಕ್ಕೆ ಅಂಗವಾಯಿತಲ್ಲಾ ! ಈ ಮೂವರಿಗೆ ಹುಟ್ಟಿದ ಮಗನ ಲಿಂಗವೆಂದು ಕೈವಿಡಿವ ಅಪ್ಪ ವ್ರತಗೇಡಿಗಳನೇನೆಂಬೆ ಗುಹೇಶ್ವರಾ ?

ಟಪ್ಪಣಿ:— ನಿಜಲಿಂಗವು ಶುದ್ಧ ಚೈತನ್ಯಸ್ವರೂಪವು. ಶಿಲಾ ಲಿಂಗವು ಪ್ರತೀಕ ಮಾತ್ರವು, ಇದೇ ಪರಮಾತ್ಮವೆಂದು ತಿಳಿದವರನ್ನು ಪ್ರಭುದೇವರು ಮೇಲಿನಂತೆ ಹೀಯಾಳಿಸಿರುವನು.

೨೬೧. ಕಲ್ಲು ದೇವರೆಂದು ಪೂಜಿಸುವರು. ಆಗದು ಕಾಣಿರೋ. ಆಗದಿಗರಾದಿರಲ್ಲಾ ! ಮುಂದೆ ಹುಟ್ಟುವ ಕೂಸಿಂಗೆ ಇಂದು ಪೊಲೆಯ ಕೊಡುವಂತೆ ಗುಹೇಶ್ವರಾ !

ಟಪ್ಪಣಿ:— ಕಲ್ಲು ದೇವರಲ್ಲ. ಎಲ್ಲೆಲ್ಲಿಯೂ ಚೈತನ್ಯದ ಪ್ರತೀತಿಯಾಗಿ ಭಕ್ತನಿಗೆ ಮುಂದೆ ಸಾಕ್ಷಾತ್ಕಾರವಾಗುವದು. ಆಗ 'ಕೂಸು' ಹುಟ್ಟಿದಂತಾಗುವದು. ಅಲ್ಲಿಯವರೆಗೆ ಕಲ್ಲು ಕೇವಲ ಪ್ರತೀಕವು ಹೊರತು ದೇವರಲ್ಲ.

೨೬೨. ಕಿಚ್ಚು ದೇವರೆಂದು ಹವಿಯನಿಕ್ಕುವ ಹಾರುವರ ಮನೆಯಲ್ಲಿ ಕಿಚ್ಚೆದ್ದು ಸುಡುವಾಗ ಬಚ್ಚಲ ನೀರು ಬೀದಿಯ ಧೂಳವ ಹೊಯ್ದು ಬೊಬ್ಬಿಟ್ಟು ಎಲ್ಲರ ಕರೆವರಯ್ಯ ! ಕೂಡಲ ಸಂಗಮದೇವ, ವಂದನೆಯ ಮರೆದು ನಿಂದಿಸುತಲಿಪ್ಪರಯ್ಯ !

೨೬೩. ಮಾರಿಯ ಪೂಜಿಸಿ, ಮಸಣಕ್ಕೆ ಹೋಗಿ, ಗೋರಿಗೊಳಿಸಿ, ಕುರಿಯ ಕೊರಳನೇ ಕೊಯ್ದುಂಬ ಕ್ರೂರಕರ್ಮಿಗಳನವರ ಶಿವಭಕ್ತರೆನ್ನಬಹುದೆ ? ಅರಯ್ಯದೆ, ಅವರ ಮನೆಯಲುಂಡ ಭಕ್ತ ಅಘೋರ ನರಕಕ್ಕಿಳಿವ ಕಾಣಾ ರಾಮನಾಥಾ.

೨೬೪. ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೇ ? ಚಂದನವಿದ್ದಂತೆ ದುರ್ಗಂಧವ ಮೈಯಲ್ಲಿ ಪೂಸುವರೇ ? ಸುರಭಿ ಮನೆಯಲ್ಲಿ ಕರೆವುತ್ತಿರೆ ಹರಿವರೇ ಸೊಣಗನ ಹಾಲಿಂಗೆ ? ಬಯಸಿದಮೃತವಿದ್ದಂತೆ ಅಂಬಲವ ನೆಕೆದುಂಬ ಭ್ರಮಿತ ಮಾನವಾ ನೀ ಕೇಳಾ, ಪರಮ ಪದವಿಯನೀವ ಚನ್ನಸೊಡ್ಡಳನಿದ್ದಂತೆ ಸಾವ ದೈವವ ನೋಂತರೆ ಕಾವುದೇ ನಿನ್ನಾ ?

೨೬೫. ಎನಗೊಂದು ಲಿಂಗ, ನಿನಗೊಂದು ಲಿಂಗ, ಮನೆಗೊಂದು ಲಿಂಗವಾಯಿತ್ತು. ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ ಉಳಿ ಮುಟ್ಟಿದ ಲಿಂಗವ ಮನಮುಟ್ಟಬಲ್ಲುದೆ ಗುಹೇಶ್ವರಾ ?

೨೬೬. ಒಂದು ಜನ್ಮದಲ್ಲಿ ನಿನ್ನ ಕಲ್ಲದೇವರ ಮಾಡಿ ಪೂಜಿಸಿದೆ, ಜೋಗಿ ಜಂಗಮ ಗೊರವನಾಗಿ ಹುಟ್ಟಿದೆ. ಒಂದು ಜನ್ಮದಲ್ಲಿ ನಿನ್ನ ಕಟ್ಟಿಗೆ ದೇವರ ಮಾಡಿ ಪೂಜಿಸಿ ಬಡಿಗ ಕಂಬರನಾಗಿ ಹುಟ್ಟಿದೆ . . . ಇಂತಿವೆಲ್ಲವನು ನೀನೆಂದು ಭಾವಿಸಿ ಪೂಜಿಸಿದಲ್ಲಿ ಇಂತೀ ಭವದಲ್ಲಿ ನಾನು ಹುಟ್ಟಿದೆ. ಇಂತೀ ಜಡಸ್ವರೂಪ ನೀನಲ್ಲ. ನೀನು ನಿರಾಳ, ನಿಃಶೂನ್ಯ, ನಿರಾಕಾರನೆಂದು ಎನ್ನ ಕರಸ್ಥಲದಲ್ಲಿ ಅರಿದು ಪೂಜಿಸಿ ಸಕಲ ಕುಲದವರಿಗೆ ಹೊರಗಾಗಿ ಕುಲಗೆಟ್ಟು ನಾನಾವ ಜನ್ಮಕ್ಕೆ ಹೋದೆನೆಂದರಿಯೆನಯ್ಯ, ಕಾಡಿನೊಳಗಾದ ಶಂಕರ ಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

ಟಪ್ಪಣಿ:— ಯಾವ ಬಗೆಯ ದೇವರನ್ನು ನಾವು ಪೂಜಿಸುವೆವೊ ಅದೇ ಬಗೆಯ ಫಲವು ನಮಗೆ ದೊರೆಯುವದು. ಆದುದರಿಂದ ಆತ್ಯಂತಿಕ ಸತ್ಯದೇವರನ್ನು ಗುರುತಿಸಿ ಪೂಜಿಸುವದು ಅವಶ್ಯವು.

೨೬೭. ದೇಹವೆ ದೇಗುಲವಾಗಿರಲು ಬೇರೆ ಮತ್ತೆ ದೇಗುಲವೇಕಯ್ಯ ? ಪ್ರಾಣವೆ ಲಿಂಗವಾಗಿರಲು ಬೇರೆ ಮತ್ತೆ ಲಿಂಗವೇಕಯ್ಯಾ ? ಹೇಳಲಿಲ್ಲ, ಕೇಳಲಿಲ್ಲ ಗುಹೇಶ್ವರಾ ನೀನು ಕಲ್ಲಾದರೆ ನಾನೇನಪ್ಪೆನಯ್ಯಾ ?

೨೬೮. ಒಡಲೊಳಗಿನ ಕಿಚ್ಚು ಒಡಲ ಸುಡದ ಭೇದವ, ಆ ಕಿಚ್ಚು ಉದಕದಲ್ಲಿ ನಂದದ ಭೇದವ, ಮೃಡ ನೀ ಪ್ರಾಣಪ್ರಕೃತಿಯೊಳಗಡಗಿಪ್ಪ ಭೇದವ ಜಡರೆತ್ತ ಬಲ್ಲರೈ ರಾಮನಾಥಾ.

ವಿವರಣೆ

ಪ್ರತೀತವು ಕೇವಲ ಕುರುಹು, ಅದಕ್ಕೆ ಹೆಚ್ಚಿನ ಮಹತ್ವವಿಲ್ಲ. ಆ ಕುರುಹೇ ದೇವರೆಂದು ತಿಳಿಯುವವರು ಮಹಾಮೂರ್ಖರು. ಕಲ್ಲು, ಮಣ್ಣು, ಮರ, ಕಿಚ್ಚು ಮುಂತಾದವುಗಳು ದೇವರಲ್ಲ. ದೇವರು ಚೈತನ್ಯ ಸ್ವರೂಪನೂ ಅದೃಶ್ಯನೂ ನಿರಾಕಾರನೂ ಇರುವನು. ಆ ಗುಡಿ, ಈ ಗುಡಿ, ನನ್ನ ದೇವರು, ನಿನ್ನ ದೇವರು ಎಂದು ವಿವಿಧತೆ ಬೆಳೆಸುತ್ತ ಹೋದಂತೆ ವೃಥಾ ಜಗಳಗಳು ಮಾತ್ರ ಬೆಳೆಯುವವು ವಿನಾ, ನಿಜವಾದ ಭಕ್ತಿ ಅಥವಾ ಅಧ್ಯಾತ್ಮ ಇವು ಬೆಳೆಯುವದಿಲ್ಲ. ದೇಹವೇ ದೇಗುಲವು, ಅದರಲ್ಲಿಯ

ಅತ್ಯನೇ ದೇವನು. ಅವನು ಎಲ್ಲೆಲ್ಲಿಯೂ ವ್ಯಾಪ್ತನು. ಅವನ ಭಕ್ತಿಯನ್ನು ಅನನ್ಯ ರೀತಿಯಿಂದ ಮಾಡಬೇಕು.

೨೬೯. ಭಕ್ತಿಯುಕ್ತಿಯನಾರು ಬಲ್ಲರು? ಬಲ್ಲವರನಾರನು ಕಾಣೆ. ತನ್ನ ಮರೆದು ಇದಿರ ಹರಿದು ಇರಬಲ್ಲರೆ, ಅತ ಭಕ್ತ. ಆ ಶಿವಭಕ್ತಂಗೆ ಶಿವ ನೊಲಿವನು. ನುಡಿಯಲ್ಲಿ ಭಕ್ತಿಯನಾಡಿ ನಡೆಯಲಿಲ್ಲದಿರ್ದಡೆ ಕಡೆ ಮುಟ್ಟ. ಶಿವನೊಲಿವುದು ಹುಸಿ. ಮರೆದು ಕೋಪದುರಿಯನುಗುಳಿ ಅರಿದು ಬಂದೆರಗಿದೆನೆಂಬ ನುಡಿಗೆ ಒಲಿವನೇ ನಮ್ಮ ಗುಹೇಶ್ವರ ಲಿಂಗವು?

೨೭೦. ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು. ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ. ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿ ಇಲ್ಲದ ಶೃಂಗಾರ. ದೃಢವಿಲ್ಲದ ಭಕ್ತಿ ಆದಿ ಒಡೆದ ಕುಂಭದಲ್ಲಿ ಸುಖಜಲವ ತುಂಬಿದಂತೆ, ಮಾರಯ್ಯ ಪ್ರಿಯ ಅಮಳೇಶ್ವರ ಲಿಂಗ ಮುಟ್ಟದ ಭಕ್ತಿ.

೨೭೧. ನೈಷ್ಠಿಕಭಾವ ನಂಬುಗೆ ಇಲ್ಲದ ಬಳಿಕ ಎಷ್ಟು ಓದಿದರೇನು, ಎಷ್ಟು ಕೇಳಿದರೇನು, ಎಷ್ಟು ಜಪವ ಮಾಡಿದರೇನು? ಅದು ನಿಷ್ಫಲವಲ್ಲದೆ ದೃಷ್ಟಕ್ಕೆ ಸಂಧಾನವಲ್ಲ ನೋಡಾ. ಇದುಕಾರಣ ನಿಷ್ಠೆ ಬಲಿದು, ಭಾವ ತುಂಬಿ ನಂಬುಗೆ ಇಂಬುಗೊಂಡು ಮಾಡುವ ದೇವರ ಪೂಜೆ, ಅದೇ ನಮ್ಮ ಅಖಂಡೇಶ್ವರ ಲಿಂಗದ ಒಲುಮೆ.

೨೭೨. ಒಲಿದು ಒಲಿಸಿಕೊಳ್ಳಬೇಕು. ಒಲಿದಲ್ಲದೆ ಇಲ್ಲ. ಹಲವು ಕೊಂಬೆಗೆ ಹಾರದಿರು ಮರುಳೇ. ಅಟ್ಟ ನೋಡುವ, ಮುಟ್ಟ ನೋಡುವ, ತಟ್ಟ ನೋಡುವ, ಒತ್ತಿ ನೋಡುವ. ಅಟ್ಟದಡೆ, ಮುಟ್ಟದಡೆ, ತಟ್ಟದಡೆ, ಒತ್ತಿದಡೆ ನಿಷ್ಠೆಯ ಬಿಡದಿರ್ದಡೆ ತನ್ನನೀವ ಮಹಾಲಿಂಗ ಕಲ್ಲೇಶ್ವರನು.

೨೭೩. ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ಮತ್ತೊಂದ ನೆನೆದಡೆ ತಲೆದಂಡ ತಲೆದಂಡ. ಹುಸಿದೆನಾದೊಡೆ ದೇವಾ, ತಲೆದಂಡ ತಲೆದಂಡ. ಕೂಡಲ ಸಂಗಮದೇವಾ, ನೀನಲ್ಲದೆ ಅನ್ಯವ ನೆನೆದಡೆ ತಲೆದಂಡ ತಲೆದಂಡ.

ಟಿಪ್ಪಣಿ:— ಅನನ್ಯಭಕ್ತಿಯ ಲಕ್ಷಣವಿದು.

೨೭೪. ದೇವನೊಬ್ಬ ನಾಮ ಹಲವು. ಪರಮ ಪತಿವ್ರತೆಗೆ ಗಂಡ ನೊಬ್ಬ. ಮತ್ತೊಂದಕ್ಕೆರಗಿದಡೆ ಕಿವಿಮೂಗ ಕೊಯ್ವನು. ಹಲವು ದೇವರ ಎಂಜಲ ತಿಂಬವರನೇನೆಂದೆನಯ್ಯ, ಕೂಡಲ ಸಂಗಮದೇವಾ?

೨೭೫. ಮಣೆಯನೆಣೆಸಿ ದಿನವ ಕಳೆಯಲು ಬೇಡ. ಕಣೆಯ ಪೂಜಿಸಿ ದಿನವ ಕಳೆಯಲು ಬೇಡ. ಕ್ಷಣವಾದರೂ ನಿಜದ ನೆನಹೇ ಸಾಕು. ಕ್ಷಣ ದೊಳಗಣ ಅರ್ಧವಾದರೂ ನಿಜದ ನೆನಹೇ ಸಾಕು. ಬೆಂಕಿಯೊಳಗುಳ್ಳ ಬಿಸಿ ಬಿಸಿನೀರೊಳಗುಂಟೇ ಗುಹೇಶ್ವರಾ?

ಟಿಪ್ಪಣಿ:— ಭಕ್ತಿಯೆಂದೊಡನೆ ಬರೀ ಮಣಿಮಾಲೆ, ಜಪ, ಹೂಪತ್ರಿ ಗಳಿಂದ ಪೂಜನ ಎಂದು ತಪ್ಪು ತಿಳಿವಳಿಕೆ ಆಗುವ ಸಂಭವವಿದೆ. ಆ ವಿಚಾರಗಳನ್ನು ಖಂಡಿಸಿ, ನಿಜದ ನೆನಹೇ ನಿಜಭಕ್ತಿಯೆಂದು ಇಲ್ಲಿ ಪ್ರತಿ ಪಾದನವಿರುವದು.

೨೭೬. ವನದ ಕೋಗಿಲೆ ಮನೆಗೆ ಬಂದರೆ ತನ್ನ ವನವ ನೆನೆವುದ ಮಾಣ್ಬುದೇ? ಮಲೆಯ ಗಜವು ಮನೆಗೆ ಬಂದರೆ ತನ್ನ ಮಲೆಯ ನೆನೆವುದ ಮಾಣ್ಬುದೇ? ಕೂಡಲಸಂಗನ ಶರಣರು ಮರೆದು ಮರ್ತ್ಯಕ್ಕೆ ಬಂದರೆ ತಮ್ಮ ಆದಿಮಧ್ಯಾಂತರಂಗವ ನೆನೆವುದ ಮಾಣ್ಬರೆ?

ಟಿಪ್ಪಣಿ:— ನಿಜ ಭಕ್ತನ ಭಕ್ತಿಯು ಅಷ್ಟೊಂದು ಸಹಜ ಮತ್ತು ಉತ್ಕಟವಿರುವದು ಎಂದರ್ಥ.

೨೭೭. ಫಲಪದಾದಿಗಳ ಭಕ್ತರಿಗೆ ಕೊಟ್ಟಹೆನೆಂಬೆ. ಅವರದನೊಲ್ಲರು! ಅವರು ನಿನಗೆ, ನಿನ್ನ ರೂಪಿಂಗೆ ತನುಮನಧನಗಳ ಕೊಡುವರು. ಎಲೆ ವಂಚಕ ನಾದ ಶಿವನೇ, ನಿರ್ವಂಚಕರಿಮ್ಮವರು. ನಿನ್ನನೇನ ಬೇಡುವರು? ನಿನೇನವರಿಗೆ ಕೊಡುವೆ? ನಿನ್ನ ಕುಡನೆಮ್ಮವರು ಒಲ್ಲರು. ಕುಡಕೊಡದೆ ಹೋಗು ಕಪಿಲ ಸಿದ್ಧ ಮಲ್ಲಿಕಾರ್ಜುನಾ.

ಟಿಪ್ಪಣಿ:— ನಿಜಭಕ್ತಿಯು ನಿಷ್ಕಾಮವಿರುವದು.

೨೭೮. ಗಗನವೆ ಗುಂಡಿಗೆ, ಆಕಾಶವೆ ಅಗ್ಗವಣಿ, ಚಂದ್ರ ಸೂರ್ಯರಿಬ್ಬರು ಪುಷ್ಪ. ಬ್ರಹ್ಮ ಧೂಪ, ವಿಷ್ಣು ದೀಪ, ರುದ್ರನೋಗರ ಸುಯಿಧಾನ ನೋಡಾ! ಗುಹೇಶ್ವರ ಲಿಂಗಕ್ಕೆ ಪೂಜೆ ನೋಡಾ!

ಟಿಪ್ಪಣಿ— ಇದು ದಿವ್ಯ ಭವ್ಯ ವಿರಾಟಪುರುಷನ ದಿವ್ಯ ಭವ್ಯ ಪೂಜೆಯು!

ವಿವರಣೆ

ಪರಮಾತ್ಮ ಪ್ರೇಮದಿಂದ ಮೈಮರೆಯುವುದರಲ್ಲಿಯೆ ಭಕ್ತಿಯ ರಹಸ್ಯವಿರುವದು. ಅಂಥ ಭಕ್ತಿಯು ಸ್ಥಿರಚಿರವಾಗಿರಬೇಕು, ದೃಢವಿರ

ಬೇಕು. ಅದೇ ನಿಷ್ಠೆ ಎನಿಸುವದು. ಪ್ರೇಮವೆಂಬುದು ಕೊಟ್ಟುಕೊಳ್ಳುವ ವಸ್ತು. 'ನಾವು ದೇವರನ್ನು ಪ್ರೀತಿಸಿದರೆ ದೇವರು ನಮ್ಮನ್ನು ಪ್ರೀತಿಸುವನು. ಆದರೆ ಪ್ರೀತಿಸುವ ಮೊದಲು ಅವನು ಭಕ್ತನನ್ನು ಪರೀಕ್ಷಿಸುವನು. ನಮ್ಮ ಭಕ್ತಿಯ ಅನನ್ಯತೆ, ದೃಢತೆ ಇವುಗಳನ್ನು ನೋಡುವನು. ಏಕಪತ್ನೀವ್ರತ ಪುರುಷನಂತೆ, ಪತಿವ್ರತಾ ಸ್ತ್ರೀಯಂತೆ ಕಣ್ಣುಮನಗಳು ಅತ್ತಿತ್ತ ಅಳುಪದಿರಬೇಕು. ಈ ರೀತಿ ಅರ್ಧಕ್ಷಣವಾದರೂ ಪರಮಾತ್ಮನನ್ನು ನೆನೆದರೆ ಅದು ಫಲಗೊಡುವದು. ಆದರೆ ಭಕ್ತನು ಆ ಈ ಫಲಗಳನ್ನು ಬೇಡುವವನಲ್ಲ, ಅವನು ಕೇವಲ ಪ್ರೇಮಭಿಕ್ಷುವು. ಭಕ್ತಿಯು ಅವನ ಸಹಜಸ್ವಭಾವವು. ವಿಶ್ವವ್ಯಾಪಿ ಪರಮಾತ್ಮನನ್ನು ಅವನು ವಿಶ್ವಸಾಧನಗಳಿಂದಲೇ ಪೂಜಿಸುವನು. ಈ ಪ್ರೀತಿಯಿಂದ ಶ್ರೇಷ್ಠಭಕ್ತಿಯಿಂದ ಪೂರ್ಣನಾದ ಸಾಧಕನೇ ಪರಮಾತ್ಮನನ್ನು ಅರಿಯುವನು, ಸಾಕ್ಷಾತ್ಕರಿಸಿ ಧನ್ಯನಾಗುವನು.

ವಚನಗಳು

೨೭೯. ಆಗಮ ಪುರುಷರಿರಾ, ನಿಮ್ಮ ಆಗಮ ಮಾಯವಾಗಿ ಹೋಗಿತ್ತಲ್ಲಾ! ವಿದ್ಯಾಪುರುಷರಿರಾ, ನಿಮ್ಮ ವಿದ್ಯೆ ಅವಿದ್ಯೆಯಾಗಿ ಹೋಯಿತ್ತಲ್ಲಾ! ವೇದಪುರುಷರಿರಾ, ನಿಮ್ಮ ವೇದ ಹೊಲಬು ತಪ್ಪಿ ಹೋದಲ್ಲಿ ನಿಮ್ಮ ವೇದವೆ ದೈವವೆಂದು ಕೆಟ್ಟರಲ್ಲಾ! ಪುರಾಣಪುರುಷರಿರಾ, ನಿಮ್ಮ ಪುರಾಣ ವಿಚಾರ ಭ್ರಷ್ಟವಾಗಿ ಹೋದಲ್ಲಿ ನೀವು ಒಡನೆ ಭ್ರಷ್ಟರಾಗಿ ಹೋದಿರಲ್ಲಾ! ಶಾಸ್ತ್ರಪುರುಷರಿರಾ, ನಿಮ್ಮ ಶಾಸ್ತ್ರ ಮಹಾಪದದ ಹೊನಲಲ್ಲಿ ಹೋದಲ್ಲಿ ಭಕ್ತದೇಹಿಕದೇವನೆಂದರಿಯದೆ ಕೆಟ್ಟರಲ್ಲಾ! ಯತ್ರ ಶಿವಸ್ತತ್ರ ಮಹೇಶ್ವರನೆಂದು ಹೇಳಿತ್ತು ಮುನ್ನ. ಅಂತು ಭಕ್ತ ನಿತ್ಯ ಸತ್ಯ ಸನ್ನಿಹಿತ ಗುಹೇಶ್ವರಾ ನಿಮ್ಮ ಶರಣ.

ಟಿಪ್ಪಣಿ:— ಪರಮಾತ್ಮನ ಇರವನ್ನು ಬರಿಯ ಗ್ರಂಥಗಳಲ್ಲಿ ಹುಡುಕಾಡದೆ ಪ್ರತ್ಯಕ್ಷ ಪರಮ ಭಕ್ತರಲ್ಲಿ ಅವನನ್ನು ಕಾಣಬೇಕು.

೨೮೦. ಭಕ್ತನ ಕಾಯವೇ ಶಿವನ ಕಾಯ. ಶಿವನ ಕಾಯವೆ ಭಕ್ತನ ಕಾಯ. ಶಿವಶಿವಾ, ಭಕ್ತ ಬೇರೆ ಶಿವ ಬೇರೆಯೆ? ಒಂದೇ ಕಾಣೆ ರಣ್ಣಾ. ಅದೆಂತೆಂದೊಡೆ, ಭಕ್ತದೇಹಿಕ ದೇವ, ದೇಹಿ ಭಕ್ತನೆಂಬ ಶ್ರುತಿ ಹೊಗಳುವ ಕಾರಣ, ಭಕ್ತಂಗೂ ದೇವಂಗೂ ಕಾಯ ಒಂದೇ. ಪ್ರಾಣ ಒಂದೇ. ಎರಡೆಂಬ ಪರಿಭಾವಿಯ ನುಡಿಯಲಾಗದು ನಿಜಭಕ್ತರಾದವರು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟಿಪ್ಪಣಿ:— ಈ ಪರಿ 'ಭಕ್ತದೇಹಿಕ ದೇವ' ನಾಗಬೇಕಾದರೆ ಸರ್ವಾರ್ಪಣ ಮಾಡಿ ಪೂರ್ಣ ಸಾಧನವನ್ನು ತೀವ್ರತೆಯಿಂದ ಮಾಡಲಿಕ್ಕೆ ಬೇಕು.

೨೮೧. ಅಯ್ಯಾ, ಎಳಿಗರು ತಾಯನರಸಿ ಬಳಲುವಂತೆ ನಾ ನಿಮ್ಮನರಸಿ ಬಳಲುತ್ತಿದ್ದೇನೆ. ಅಯ್ಯಾ, ನೀವೆನ್ನ ಮನಕ್ಕೆ ಪ್ರಸನ್ನವ ಮಾಡಿ ಕಾರುಣ್ಯವ ಮಾಡಿರಯ್ಯಾ. ನೀನೆನ್ನ ಮನಕ್ಕೆ ನೆಲೆವನೆಯಾಗಿ ಕಾರುಣ್ಯವ ಮಾಡು. ನೀನಿನಿತು ಲೇಸನೀಯಯ್ಯ. ಎಂಬೇಂ ಕೂಡಲ ಸಂಗಮದೇವಾ.

೨೮೨. ನೀನೊಲಿದರೆ ಕೊರಡು ಕೊನರುವದಯ್ಯ. ನೀನೊಲಿದರೆ ಬರಡು ಹಯನಹುದಯ್ಯ. ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯ. ನೀನೊಲಿದರೆ ಸಕಲ ಪದಾರ್ಥ ಇದಿರಲ್ಲಿಪ್ಪುವು ಕೂಡಲ ಸಂಗಮ ದೇವಾ.

ಟಿಪ್ಪಣಿ:—ಇದಿರಲ್ಲಿರು–ಸಹಜ ಸಾಧ್ಯವಾಗು.

೨೮೩. ಹುಲಿಯ ಬಾಯಲ್ಲಿ ಸಿಕ್ಕಿದ ಹುಲ್ಲೆಯಂತೆ, ಸರ್ಪನ ಬಾಯಲ್ಲಿ ಸಿಕ್ಕಿದ ಕಪ್ಪೆಯಂತೆ, ಸಕಲ ಲೋಕಾದಿಲೋಕಂಗಳು ಮಾಯಾಬಲೆಯಲ್ಲಿ ಸಿಕ್ಕಿ ಸೆರೆಯ ಹೋಗುವುದ ಕಂಡು, ನಾನು ಅಂಜಿ, ನಿಮ್ಮ ಮರೆಹೊಕ್ಕೆನು ಕಾಯಯ್ಯ ಕಾರುಣ್ಯನಿಧಿಯೇ, ಅಖಂಡೇಶ್ವರಾ.

೨೮೪. ಎನ್ನ ಶಿರ ನಿಮ್ಮ ಚರಣವನೊರಸೊರಸಿ ಭೇದವಿಲ್ಲಯ್ಯ. ಎನ್ನ ಕಾಯದ ಕಪಟ, ಎನ್ನ ಮನದ ವಿಚಾರ, ನಿಮ್ಮ ಲಿಂಗುಷ್ಮದ ಕೊನೆಯ ಸೋಂಕಲೊಡನೆ ಹರಿದುಹೋಹುದು ನೋಡಯ್ಯ. ಕೂಡಲಸಂಗಮದೇವಯ್ಯ, ನಿಮ್ಮ ಶ್ರೀಪಾದದ ಬೆಳಗ ಕಂಡು ಎನ್ನಂಗದ ಕತ್ತಲೆ ತೊಡೆಯಿತ್ತು.

೨೮೫. ಮನಮುಟ್ಟ ನೆನೆವಲ್ಲಿ ತನು ನಿಮ್ಮದಾಯಿತ್ತು. ತನು ಮುಟ್ಟ ಅಪ್ಪಿ, ಮನಮುಟ್ಟ ನೆರೆದು, ವನಿತೆಯರ ಕೂಟಕ್ಕೆ ತೆರಪಿಲ್ಲದಾಯಿತ್ತು. ಜನನ ಮರಣದ ಬಾಧೆ ಹರಿಯಿತ್ತು, ಈಶ್ವರಾ ನಿಮ್ಮ ಪಾದಸೇವೆಯಿಂದ ಕಾಣಾ, ರಾಮನಾಥಾ.

೨೮೬. ಎನಗೆ ನಿಮ್ಮ ನೆನಹಾದಾಗಳೇ ಉದಯ. ಎನಗೆ ನಿಮ್ಮ ಪಾದ ಮರಹಾದಾಗಳೇ ಅಸ್ತಮಾನ. ಎನಗೆ ನಿಮ್ಮ ನೆನಹವೇ ಜೀವಾಳ, ಎನಗೆ ನಿಮ್ಮ ನೆನಹವೇ ಪ್ರಾಣ, ಕಾಣಾ ಸ್ವಾಮೀ. ಎನ್ನ ಹೃದಯದಲ್ಲಿ ನಿಮ್ಮ ಚರಣದ ಉಂದಿಗೆಯನ್ನೊತ್ತಯ್ಯ. ಎನ್ನ ವದನದಲ್ಲಿ ಷಡಕ್ಷರಿಯ ಬರೆಯಯ್ಯ, ಕೂಡಲಸಂಗಮದೇವಾ.

ಟಪ್ಪಣಿ:— ಪರಮಾತ್ಮನಿಗೆ ಸರ್ವಾರ್ಪಣಮಾಡಿ ತದೇಕಧ್ಯಾನರತನಾದ ಭಕ್ತನು ಏನು ಮಾಡಿದರೂ ಅದು ಅವನ ಅಂದರೆ ದೇವರ ಸೇವೆ ಎನಿಸುವದು. ಪರಮಾತ್ಮವಿರಹವು ಒಂದು ಕ್ಷಣಮಾತ್ರ ಸಹ ಅವನಿಗೆ ಸಹನವಾಗದು. ಕಾಲವೇಳೆಮುಹೂರ್ತಾದಿಗಳನ್ನು ನೋಡುತ್ತ ಕೂಡದೆ ಭಕ್ತನು ಸದೈವ ಪರಮಾತ್ಮ ಸೇವೆಯಲ್ಲಿ ತೊಡಗುವನು.

೨೬೭. ಹೊತ್ತಾರೆ ಪೂಜಿಸಲು ಬೇಡ, ಕಂಡ್ಯಾ! ಬೈಗೆ ಪೂಜಿಸಲು ಬೇಡ, ಕಂಡ್ಯಾ! ಇರುಳುವನು ಹಗಲುವನು ಕಳೆದು ಪೂಜೆಯನು ಪೂಜಿಸಲು ಬೇಕು, ಕಂಡ್ಯಾ! ಇಂತಪ್ಪ ಪೂಜೆಯ ಪೂಜಿಸುವವರ ತೋರಯ್ಯ ಎನಗೆ, ಗುಹೇಶ್ವರಾ.

ಟಪ್ಪಣಿ:— ನಿಜಭಕ್ತನು ಆತ್ಮಭೂಮಿಕೆಯಲ್ಲಿ ಕಾಲಾತೀತನಾಗಿ ದೇವರನ್ನು ಪೂಜಿಸುವನು. ಅಲ್ಲಿ ಹಗಲಿರುಳು ಎಂಬ ಕಾಲಭೇದಗಳೇ ಇರಲರಿಯವು.

೨೬೮. ಬಾಕೆಂದರಿಯೆ, ದಿನವೆಂದರಿಯೆ, ಏನೆಂದರಿಯೆನಯ್ಯ. ಇರುಳೆಂದರಿಯೆ, ಹಗಲೆಂದರಿಯೆ, ಏನೆಂದರಿಯೆನಯ್ಯ. ನಿಮ್ಮವ ಪೂಜಿಸಿ ಎಮ್ಮವ ಮರೆದೆ, ಕೂಡಲಸಂಗಮದೇವಾ.

೨೬೯. ಶಿವಕಥೆಗಳ ಕೇಳಿಕೇಳಿ ಸಂತೋಷಿಸಿ, ಶಿವಕೀರ್ತನೆಗಳ ಮಾಡಿ ಮಾಡಿ, ದಣುವಿಲ್ಲದೆ ಶಿವನ ನೆನೆದು ನೆನೆದು, ಶಿವಸೇವೆಯ ಮಾಡುತ್ತ, ಶಿವಪೂಜೆಯನೋಜೆಯಲ್ಲಿ ವಿಸ್ತರಿಸಿ, ಶಿವಶರಣೆಂದು ಶಿವನೊಡವೆಯ ಶಿವನವರಿಗರ್ಪಿಸಿ, ಶಿವನೇ ತಾನಾದ ಭವರಹಿತ ಭಕ್ತನ ನೋಡಾ, ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರಾ.

ಟಪ್ಪಣಿ:— ಸತತ ಪರಮಾತ್ಮಧ್ಯಾನವೆಂದರೆ ಮೇಲೆ ಹೇಳಿದಂತೆ ಇರಬೇಕು. ಅದು ಸ್ಮರಣ, ಪೂಜೆ, ಕೀರ್ತನೆ ಮುಂತಾದ ವಿವಿಧ ರೂಪಗಳನ್ನು ತಾಳಬಹುದು. ಸಾಧಕನು ತ್ಯಾಗಪೂರ್ವಕ ಭಕ್ತಿಮಾಡುವನು. ಅವನು ಈ ಸ್ಥಿತಿಯಲ್ಲಿ ಅನುಪಮ ಆನಂದವನ್ನು ಅನುಭವಿಸುವನು.

೨೭೦. ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿಯು ತುಂಬಿ, ಕೂಡಲಸಂಗಮದೇವಾ, ನಿಮ್ಮ ಚರಣಕಮಲದೊಳು ಸೊಗದ ಬಂಡನುಂಬ ತುಂಬಿಯಾಗಿರ್ಪೆನು.

೨೭೦. ಮನ ಮನ ಬೆರಸಿದಲ್ಲಿ ತನು ಕರಗದಿದ್ದಡೆ, ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿರ್ದಡೆ, ಕಂಗಳಶ್ರುಜಲಂಗಳು ಸುರಿಯದಿರ್ದಡೆ, ನುಡಿವಲ್ಲಿ ಗದ್ಗದಂಗಳು ಹೊರಹೊಣ್ಮದಿರ್ದಡೆ, ಕೂಡಲಸಂಗಮದೇವರ ಭಕ್ತಿಗೆ ಇದೇ ಚಿನ್ಹ, ಎನ್ನಲ್ಲಿ ಇಲ್ಲವಾಗಿ ಆನು ಡಾಂಭಿಕ ಕಾಣೆರೇ.

ಟಪ್ಪಣಿ:— ಪರಮಾತ್ಮ ಪ್ರೇಮಪರವಶನಾದ ಭಕ್ತನಲ್ಲಿ ಹೊರಗೆ ಕಾಣತಕ್ಕ ಲಕ್ಷಣಗಳು ಇಲ್ಲಿ ವಿವರಿಸಲ್ಪಟ್ಟಿವೆ.

೨೭೨. ಆಡಿ ಕಾಲು ದಣಯವು, ನೋಡಿ ಕಣ್ಣು ದಣಿಯವು, ಮಾಡಿ ಕೈ ದಣಿಯವು, ಹಾಡಿ ನಾಲಿಗೆ ದಣಿಯದು. ಇನ್ನೇವೆ ಇನ್ನೇವೆ? ನಾ ನಿಮ್ಮ ಕೈಯಾರೆ ಪೂಜಿಸಿ, ಮನದಣಿಯಲೊಲ್ಲದು. ಇನ್ನೇವೆ ಇನ್ನೇವೆ, ಕೂಡಲಸಂಗಮದೇವಯ್ಯ ಕೇಳಯ್ಯ, ನಿಮ್ಮುದರವ ಬಗಿದಾನು ಹೊಗುವ ಭರವೆನಗೆ.

೨೭೩. ಎದೆಬಿರಿವನಕ, ಮನದಣಿವನಕ, ನಾಲಿಗೆ ನಲಿನಲಿದೋಲಾಡುವನಕ ನಮ್ಮ ನಾಮಾಮೃತವ ತಂದಿರಿಸು ಕಂಡಯ್ಯ ಎನಗೆ, ಎನ್ನ ತಂಪೆ ಬಿರಿಮುಗುಳಂತೆ ಎನ್ನ ಹೃದಯ ನಿಮ್ಮ ಶ್ರೀಚರಣದ ಮೇಲೆ ಬಿದ್ದು ಅರಳುಗೆ, ಕೂಡಲಸಂಗಮದೇವಾ.

ಟಪ್ಪಣಿ:— ನಿಸ್ಸೀಮ ಭಕ್ತನ ಮನದ ಹಾರೈಕೆಗಳು ಇವು. ಸಂಪೂರ್ಣ ಐಕ್ಯಾನುಭವವಾಗುವವರೆಗೆ ಅವನ ಸಮಾಧಾನವಾಗಲರಿಯದು. ಅಲ್ಲಿಯವರೆಗೆ ಅವನು ದೀನನಾಗಿ ದೀನಬಂಧು ಪರಮಾತ್ಮನನ್ನು ಪ್ರಾರ್ಥಿಸುವನು.

೨೭೪. ಮಾವಿನಕಾಯೊಳಗೊಂದು ಎಕ್ಕೆಯಕಾಯಿ ನಾನಯ್ಯ. ಆನು ಭಕ್ತನೆಂತೆಂಬೆನೆ, ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ? ಕೂಡಲಸಂಗನ ಶರಣರ ಮುಂದೆ ನಾನೆಂತು ಭಕ್ತನಲ್ಲಯ್ಯ?

೨೭೫. ಆನು ಭಕ್ತನಲ್ಲಯ್ಯ. ಆನು ವೇಷಧಾರಿಯಯ್ಯ. ಕಟುಕ, ಕೆತ್ತುಗ, ಕೊಲ್ಲುಗನೆಂಬುದು ನನ್ನ ಹೆಸರಯ್ಯ. ಕೂಡಲಸಂಗಮದೇವಾ, ನಿಮ್ಮ ಶರಣರ ಮನೆಯ ಮಗ ನಾನಯ್ಯ.

೨೭೬. ಸಿಂಹದ ಮುಂದೆ ಜಿಗಿದಾಟವೇ? ಪ್ರಳಯಾಗ್ನಿಯ ಮುಂದೆ ಪತಂಗದಾಟವೆ? ಸೂರ್ಯನ ಮುಂದೆ ಕೇಟದಾಟವೆ? ನಿಮ್ಮ ಮುಂದೆ ಎನ್ನಾಟವೇ ಕಲಿದೇವರ ದೇವಾ?

ಟಪ್ಪಣಿ:— ಈಪರಿ ಗರ್ವರಹಿತ ಸಮ್ಯಭಾವದಿಂದ ಭಕ್ತನು ದೇವರ ಪಾದಕ್ಕೆರಗಿ ಪ್ರೇಮಭಿಕ್ಷೆಯನ್ನು ಬೇಡುವನು.

೨೯೭. ತಂದೆ ನೀವು, ತಾಯಿ ನೀವು, ಬಂಧು ನೀವು, ಬಳಗ ನೀವು. ನೀವಲ್ಲದೆ ಮತ್ತಾರು ಇಲ್ಲ. ಕೂಡಲಸಂಗಮದೇವಾ, ಹಾಲಲದ್ದು ನೀರಲದ್ದು.

೨೯೮. ಎನ್ನ ತನುವಿಂಗೆ ನೀನೊಡೆಯ. ಎನ್ನ ಮನಕ್ಕೆಯು ನೀನೊಡೆಯ. ಎನ್ನ ಧನಕ್ಕೆಯು ನೀನೊಡೆಯನಾದಬಳಿಕ ಎನ್ನರಿವು ನಿನ್ನದು, ಎನ್ನ ಮರಹು ನಿನ್ನದು. ಕೂಡಲಸಂಗಮದೇವಾ, "ಭೃತ್ಯಾಪರಾಧೇ ಸ್ವಾಮಿನೋ ದಂಡಃ," ಎಂಬುದ ವಿಚಾರಿಸಿನೋಡಾ, ಪ್ರಭುವೆ.

೨೯೯. ಎನ್ನ ಗುಣಾವಗುಣವ ಸಂಪಾದಿಸದಿರಯ್ಯ. ನಿಮಗಾನು ಸರಿಯೆ? ಅಪ್ರತಿಮಮಹಿಮ ನಿಮಗಾನು ಸರಿಯೆ? ಅಪ್ರತಿಮ ಕೂಡಲ ಸಂಗಮದೇವಾ, ನೀವು ಮಾಡಲಾನಾದೆನು. ಎನ್ನೊಡನೆ ಮುನಿವರೆ, ಎಲೆ ತಂದೆ ಹೇಳಾ?

೩೦೦. ಧನ ಸವೆದರೆ ತನುವನರ್ಪಿಸುವೆನು. ತನು ಸವೆದರೆ ಮನವ ನರ್ಪಿಸುವೆನು. ಮನ ಸವೆದರೆ ಭಾವವನರ್ಪಿಸುವೆನು. ಭಾವ ಸವೆದರೆ ನಿರ್ಭಾವವನರ್ಪಿಸುವೆನು. ಕೂಡಲಸಂಗಮದೇವಯ್ಯ, ಚನ್ನಬಸವಣ್ಣನ ತೆತ್ತಿಗನಾದಬಳಿಕ ನಾನು ನಿಮ್ಮಲ್ಲಿ ಕೂಡಿ ಅರ್ಪಿಸಿ ಶುದ್ಧನಪ್ಪೆನಯ್ಯ.

೩೦೧. ಭಕ್ತಿಯೇ ಓಗರವಾಗಿ ಸತ್ಯವೇ ಮೇಲೋಗರವಾಗಿ ನಿಜ ತತ್ವವೇ ಸ್ವಯವಾಗಿ ಗುಹೇಶ್ವರಲಿಂಗಕ್ಕೆ ಇಕ್ಕಬಲ್ಲವ ಸಂಗನಬಸವಣ್ಣ ನಲ್ಲದಿಲ್ಲಾ.

೩೦೨. ಆನು ಭಕ್ತನಲ್ಲ, ಆನು ಯುಕ್ತನಲ್ಲ. ನೀವು ಮಾಡಿದ ಸೂತ್ರದ ಬೊಂಬೆ ನಾನಯ್ಯ. ಎನಗೆ ಬೇರೆ ಸ್ವತಂತ್ರ ಉಂಟೆ? ನೀವೆನ್ನ ಮಾನಾಭಿಮಾನಕ್ಕೆ ಒಡೆಯರಾದ ಬಳಿಕ ಎನ್ನ ತಪ್ಪು ಲೆಕ್ಕಿಸದೆ ಬಿಜಯಂಗೈವುದಯ್ಯಾ ಕೂಡಲಸಂಗಮದೇವಾ.

೩೦೩. ಎನ್ನಂತರಂಗ ನೀವಯ್ಯ, ಎನ್ನ ಬಹಿರಂಗ ನೀವಯ್ಯ. ಎನ್ನರಿವು ನೀವಯ್ಯ, ಎನ್ನ ಮರಹು ನೀವಯ್ಯ. ಎನ್ನ ಭಕ್ತಿ ನೀವಯ್ಯ, ಎನ್ನ ಯುಕ್ತಿ ನೀವಯ್ಯ. ಎನ್ನ ಆಲಸ್ಯ ನೀವಯ್ಯ, ಎನ್ನ ಪರವಶ ನೀವಯ್ಯ. ಸಮುದ್ರವ ಹೊಕ್ಕು ಕಾಲು ಒಳದಲ್ಲಿ ಕೊರತೆಯನರಸುವುದೆ ಆ ಸಮುದ್ರವು?

ಎನ್ನ ಲೇಸು ಹೊಲ್ಲೆಂಬುದ ನೀವೆ ಬಲ್ಲಿರಿ. ಇದಕ್ಕೆ ನಿಮ್ಮ ಪಾದವೆ ಸಾಕ್ಷಿ, ಎನ್ನ ಮನವೇ ಸಾಕ್ಷಿ, ಕೂಡಲಸಂಗಮದೇವಾ.

೩೦೪. ಎನ್ನ ಕಾಯವ ದಂಡಿಗೆಯ ಮಾಡಯ್ಯ. ಎನ್ನ ಶಿರವ ಸೋರೆಯ ಮಾಡಯ್ಯ. ಎನ್ನ ನರವ ತಂತಿಯ ಮಾಡಯ್ಯ. ಎನ್ನ ಬೆರಳ ಕಡ್ಡಿಯ ಮಾಡಯ್ಯ. ಮೂವತ್ತೆರಡು ರಾಗವ ಹಾಡಯ್ಯ. ಎನ್ನ ಉರದ ಲೊತ್ತಿ ನಿನ್ನ ಜಯಗಾನವಂ ಬಾರಿಸು ಕೂಡಲಸಂಗಮದೇವಾ.

ವಿವರಣೆ

ಭಕ್ತಿಯಲ್ಲಿ ನವವಿಧಗಳಿರುವವೆಂದು ಹೇಳುವರು. ಅವುಗಳಲ್ಲಿ ಆತ್ಮಾರ್ಪಣ ಅಥವಾ ಆತ್ಮನಿವೇದನ ಇದೇ ಎಲ್ಲಕ್ಕೂ ಹೆಚ್ಚಿನದೆನಿಸುವದು. ಆತ್ಮನಿವೇದನದಲ್ಲಿ ಭಕ್ತನು ತನ್ನನ್ನು ಪರಮಾತ್ಮನಿಗೆ ಸಂಪೂರ್ಣವಾಗಿ, ಸರ್ವತೋಪರಿ ಅರ್ಪಿಸಿಬಿಡುವನು. ಹೀಗಾಯಿತೆಂದರೆ ಭಕ್ತನ ಅಂತಃಕರಣದಲ್ಲಿ ಪರಮಾತ್ಮನೇ ಅಧಿಷ್ಠಿತನಾಗುವನು. ಆಗ ಭಕ್ತನು ದೇವರ ಸೂತ್ರ ಬೊಂಬೆಯಾಗುವನು. ಅದು ಭಕ್ತನ ಅತ್ಯುಚ್ಚಸ್ಥಿತಿಯೆಂದು ಹೇಳಬಹುದು. ಭಕ್ತನು ಪರಮಾತ್ಮನೊಡನೆ ಏಕರೂಪನಾದಾಗ ಅವನ ಭಕ್ತಿಯು ಅದ್ವೈತಭಕ್ತಿ ಅಥವಾ ಸಮರಸಭಕ್ತಿ ಎನಿಸುವದು.

ವಚನಗಳು

೩೦೫. ಆರಾದರೂ ನಿಮ್ಮ ನೆನೆವರಯ್ಯಾ, ನಾ ನಿಮ್ಮ ನೆನೆವನಲ್ಲ. ಅದೇನು ಕಾರಣವೆಂದಡೆ, ಎನ್ನ ನೆನೆವ ಮನವೇ ನೀವೆ ಆದಿರಾಗಿ. ಆರಾದರೂ ನಿಮ್ಮ ಪೂಜಿಸುವರಯ್ಯಾ, ನಾ ನಿಮ್ಮ ಪೂಜಿಸುವನಲ್ಲ. ಅದೇನು ಕಾರಣವೆಂದಡೆ, ಎನ್ನ ತನುವಿಗೆ ನೀವೇ ಪೂಜೆಯಾದಿರಾಗಿ. ಆರಾದರೂ ನಿಮಗರ್ಪಿಸುವರಯ್ಯಾ, ನಾ ನಿಮಗರ್ಪಿಸುವನಲ್ಲ. ಅದೇನು ಕಾರಣವೆಂದಡೆ, ಎನ್ನ ಸರ್ವಾಂಗವೆಲ್ಲವೂ ನಿಮಗರ್ಪಿತವಾಯಿತ್ತಾಗಿ. ಇಂತುಕಾರಣ, ಭಕ್ತದೇಹಿಕ ದೇವ, ದೇವದೇಹಿಕ ಭಕ್ತ, ಎಂಬ ಶ್ರುತಿಯನರಿದು, ನಿಮ್ಮ ಮುಟ್ಟಿ, ನಾನು ಅಭಿನ್ನನಾದೆ ಕಾಣಾ, ಕೂಡಲ ಸಂಗಮ ದೇವಾ.

೩೦೬. ತನು ನಿಮ್ಮ ರೂಪಾದ ಬಳಿಕ ಅರಿಗೆ ಮಾಡುವೆ? ಮನ ನಿಮ್ಮ ರೂಪಾದ ಬಳಿಕ ಅರ ನೆನೆವೆ? ಪ್ರಾಣ ನಿಮ್ಮ ರೂಪಾದ ಬಳಿಕ ಅರನಾರಾಧಿಸುವೆ? ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ಅರನರಿವೆ? ಚನ್ನಮಲ್ಲಿಕಾರ್ಜುನಯ್ಯ, ನಿಮ್ಮಿಂದ ನೀವೆಯಾದಿರಾಗಿ, ನಿಮ್ಮನೇ ಅರಿವುರ್ತಿದೆನು.

ಟಪ್ಪಣಿ:— ಇದು ಪೂರ್ಣ ಜೀವನ್ಮುಕ್ತ ಭಕ್ತನ ಲಕ್ಷಣವು. ಇದೇ ಐಕ್ಯಭಕ್ತಿಯು.

---

೧೩. ಸಾಧನಮಾರ್ಗ-ಕರ್ಮಯೋಗ

ವಿವರಣೆ

ಇದುವರೆಗೆ ಜ್ಞಾನ ಮತ್ತು ಭಕ್ತಿ ಎಂಬ ಎರಡು ಮುಕ್ತಿಸಾಧನಗಳನ್ನು ಹೇಳಿದ್ದಾಯಿತು. ಇನ್ನು ಕರ್ಮವೆಂಬ ಸಾಧನದ ಬಗ್ಗೆ ವಚನಕಾರರ ಮತವೇನಿರುವದು ಇದನ್ನು ನೋಡುವ. ಕರ್ಮ ಶಬ್ದದ ಮೂಲ ಅರ್ಥವು ಬಹಳೇ ವ್ಯಾಪಕವಿರುವದು. ಪ್ರತಿಯೊಂದು ಬಗೆಯ ಬಾಹ್ಯ ಮತ್ತು ಆಂತರಿಕ ಚಲನವಲನಕ್ಕೆ ಅಥವಾ ಬಾಹ್ಯ ಮತ್ತು ಆಂತರಿಕ ಶಕ್ತಿಯ ಉಪಯೋಗಕ್ಕೆ ಕರ್ಮವೆನ್ನಬಹುದು. ಈ ದೃಷ್ಟಿಯಿಂದ ನೋಡಿದರೆ, ಧ್ಯಾನ, ಜ್ಞಾನ ಸಂಪಾದನೆ, ಏಕಾಗ್ರತೆ, ಭಕ್ತಿ ಇವೆಲ್ಲವೂ 'ಕರ್ಮ'ದಲ್ಲಿಯೇ ಒಳಗೊಳ್ಳುವವು. ಇಷ್ಟೇ ಏಕೆ, ಕರ್ಮಕ್ಕೆ ತೀರ ವಿರುದ್ಧ ಇರುವಂತೆ ತೋರುವ ನಿದ್ರೆ, ವಿಶ್ರಾಂತಿ, ಸುಮ್ಮನೆ ಆಲಸ್ಯದಿಂದ ಕೂಡುವದು, ಮರಣ ಇವು ಸಹ ಬಗೆಬಗೆಯ ಕರ್ಮಗಳೇ ಎನಿಸುವವು. ಆದರೆ ಇಲ್ಲಿ ಕರ್ಮಶಬ್ದವು ಒಂದು ವಿಶಿಷ್ಟ ಸಂಕುಚಿತ ಅರ್ಥದಿಂದ ಉಪಯೋಗಿಸಲ್ಪಟ್ಟಿದೆ. ಇಲ್ಲಿ ಕರ್ಮವೆಂದರೆ, ತನ್ನ ಮತ್ತು ಸಮಾಜದ ಧಾರಣೆ ಹಾಗೂ ವಿಕಾಸಕ್ಕಾಗಿ ಸ್ವಶಕ್ತಿ ಹಾಗೂ ಪರಿಸ್ಥಿತಿ ಇವುಗಳಿಗನುಗುಣವಾಗಿ ಪ್ರತಿಯೊಬ್ಬನು ಮಾಡತಕ್ಕ ಕರ್ತವ್ಯವು.

ಜ್ಞಾನವು ಬುದ್ಧಿಯನ್ನು, ಭಕ್ತಿಯು ಭಾವನೆಯನ್ನು ಮುಖ್ಯವಾಗಿ ಅವಲಂಬಿಸಿರುವಂತೆ ಕರ್ಮವು ಮನುಷ್ಯನ ಸಂಕಲ್ಪಶಕ್ತಿಯನ್ನು ಅಥವಾ ಕ್ರಿಯಾಶಕ್ತಿಯನ್ನು ಅವಲಂಬಿಸಿರುವದು. ಇಂತಹದನ್ನು ಮಾಡಬೇಕು, ಎಂದು ನಿರ್ಣಯಿಸುವ ಶಕ್ತಿ ಹಾಗೂ ಕರ್ಮೇಂದ್ರಿಯಗಳ ಶಕ್ತಿ ಇವು ಕೂಡಿ ಕ್ರಿಯಾಶಕ್ತಿ ಎನಿಸುವದು. ಶುದ್ಧ ಜ್ಞಾನವಾಗಬೇಕಾದರೆ ನಿರ್ದೋಷ ನಿರೀಕ್ಷಣೆ, ಶುದ್ಧ ತರ್ಕ, ಏಕಾಗ್ರತೆ ಇವು ಅವಶ್ಯವಿದ್ದಂತೆ, ನಿಜವಾದ ಭಕ್ತಿಗೆ ದೃಢ, ಅನನ್ಯ, ಹಾಗೂ ಅಹೇತುಕ ಪ್ರೇಮವು ಅವಶ್ಯವಿದ್ದಂತೆ,

'ಮುಕ್ತ' ಕರ್ಮಕ್ಕೆ ನಿರ್ಮಲ ನಿರ್ಣಯಶಕ್ತಿ, ನಿಷ್ಕಾಮತೆ ಅಥವಾ ಅರ್ಪಣಭಾವ, ನಿರಹಂಕಾರ, ಉತ್ಸಾಹಯುಕ್ತ ಕರ್ಮಶಕ್ತಿ ಇವು ಅವಶ್ಯ.

ಈ ಬಗೆಯಿಂದ ಮಾಡಲ್ಪಟ್ಟ ಕರ್ಮವು ಬಂಧಕವಾಗದೆ ಸಾಧಕನನ್ನು ಮುಕ್ತಮಾಡುವದು, ಎಂದು ವಚನಕಾರರು ಹೇಳುವರು. ಇಂಥ ಕರ್ಮಕ್ಕೆಯೆ 'ಯೋಗಯುಕ್ತಕರ್ಮ' ಎಂದೆನ್ನಬಹುದು. ಈ ಸಾಧನಕ್ಕೂ ವಚನಕಾರರು ತಮ್ಮ ಉಪದೇಶದಲ್ಲಿ ಸ್ವತಂತ್ರಸ್ಥಾನವನ್ನು ಕೊಟ್ಟಿಲ್ಲ ಎಂಬುದನ್ನು ಇಲ್ಲಿ ಪುನಃ ಹೇಳುವದು ಅವಶ್ಯ. ಜ್ಞಾನ, ಭಕ್ತಿ, ಕ್ರಿಯಾ, ಧ್ಯಾನ ಈ ನಾಲ್ಕು ಸಾಧನಗಳನ್ನು ಎಡೆಬಿಡದೆ ಉಪಯೋಗಿಸುವ ಸಮಸ್ತಯಮಾರ್ಗವನ್ನೆ ಅವರು ಹೇಳಿರುವರು, ಇದನ್ನು ನಾವು ಲಕ್ಷ್ಯದಲ್ಲಿಡಬೇಕು.

ಕ್ರಿಯೆಯು ಅವಶ್ಯವು ಎಂದು ಅವರು ಮೊದಲು ಪ್ರಾರಂಭ ಮಾಡುವರು.

ವಚನಗಳು

೩೦೭. ಕ್ರಿಯಾಮಥನವಿಲ್ಲದೆ ಕಾಣಬಂದುದೇ ಇಕ್ಷುವಿನೊಳಗಣ ಮಧುರ? ಕ್ರಿಯಾಮಥನವಿಲ್ಲದೆ ಕಾಣಬಂದುದೇ ಕ್ಷೀರದೊಳಗಣ ತುಪ್ಪ? ಕ್ರಿಯಾಮಥನವಿಲ್ಲದೆ ಕಾಣಬಂದುದೇ ಕಾಷ್ಠದೊಳಗಣ ಅಗ್ನಿ? ಇದುಕಾರಣ ಗುಹೇಶ್ವರಲಿಂಗವ ತನ್ನೊಳರಿದೆನೆಂಬ ಮಹಾಂತಂಗೆ ಸತ್ಕ್ರಿಯಾಚರಣೆಯೇ ಸಾಧನೆ ಕಾಣೆ ಭೋ.

೩೦೮. ಗತಿಮತಿ ಚೈತನ್ಯಶಬ್ದವುಳ್ಳನ್ನಕ್ಕ ಕ್ರಿಯಂತಂತೆ ನಡೆವುದು. ಉರವಣೆ ಬೇಡ ಕಂಡೆಯಾ, ಮನವೇ. ಎಲೆ ಮನವೇ, ಕ್ರಿಯಂತಂತೆ ನಡೆವುದು. ಹೂಮಿಡಿಯ ಹರಿದಡೆ ಹಣ್ಣಾಗಬಲ್ಲುದೇ? ಲಿಂಗದಲ್ಲಿ ಮನ ಲೀನವಾಗದನ್ನಕ್ಕರ ದೇವ ಸಕಳೇಶ್ವರನೆಂತೊಲಿವ?

ಟಪ್ಪಣಿ:— ಕ್ರಿಯಂತಂತೆ – ಕ್ರಿಯೆಯ ಪ್ರಕಾರ, ಯೋಗ್ಯ ರೀತಿಯಿಂದ.

೩೦೯. ಕೃಪೆಯ ಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೋ? ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೋ? ಮಾಡದೆ ಅಶನವನುಂಬ ಠಾವಾವುದು ಕಪಿಲಸಿದ್ಧ ಮಲ್ಲಿಕಾರ್ಜುನಾ?

ಟಪ್ಪಣಿ:— ದೇಹಪೋಷಣೆಯಂಥ ಸಾಮಾನ್ಯವಾದರೂ ಅವಶ್ಯವಿದ್ದ ಕರ್ಮವು, ಅದಿಗೆ ಊಟ ಮಾಡದ ಹೊರತು ಆಗದು; ಆದುದರಿಂದ ಜೀವನಕ್ಕೆ ಕರ್ಮವು ಅವಶ್ಯವೆಂದರ್ಥ.

೩೧೦. ಕಾಯಕವಳಿದ ಠಾವಿನಲ್ಲಿ ಜೀವದ ಎದೆಯಾಟ ಉಂಟೇ? ಭಾವಶುದ್ಧವಿಲ್ಲದ ಭಕ್ತಿ ಹೋಯಿತ್ತು, ಮಾರಯ್ಯಪ್ರಿಯ ಅಮರೇಶ್ವರಲಿಂಗ ಮುಟ್ಟದೆ.

ಟಪ್ಪಣಿ:— ಕಾಯಕವಿಲ್ಲದೆ ಜೀವನು ಬದುಕಲಾರನು, ಅದೇ ರೀತಿ ಭಾವಶುದ್ಧಿ ಇಲ್ಲದಿದ್ದರೆ ಭಕ್ತಿ ಇರಲಾರದು.

೩೧೧. ವಿಶ್ವದಲ್ಲಿ ಜ್ಞಾನಪ್ರತಿಷ್ಠೆಯ ಮಾಡುತಿಪ್ಪರು. ಗೋವಿನ ದೇಹದಲ್ಲಿ ಘೃತವಿಪ್ಪುದಯ್ಯ. ಅದು ಆ ಗೋವಿಗೆ ಪುಷ್ಟಿಯಾಗಲಾರದು. ಆ ಗೋವ ಪೋಷಿಸಿ, ಹಾಲಕರೆದು, ಕಾಸಿ, ಹೆಪ್ಪನಿಕ್ಕಿ, ಆ ದಧಿಯ ಮಥನವ ಮಾಡಿ, ಬೆಣ್ಣೆಯ ತೆಗೆದು, ಆ ನವನೀತ ತುಪ್ಪವ ಕಾಸಿ, ಆ ಗೋವಿಗೆ ಕುಡಿಸಲಾಗಿ ದಿನದಿನಕ್ಕೆ ಪುಷ್ಟಿಯಪ್ಪುದು ತಪ್ಪದಯ್ಯ. ಈ ಪ್ರಕಾರ ಸತ್ಕ್ರಿಯೋಪಚಾರವ ಮಾಡಲಾಗಿ ಜ್ಞಾನವಹುದು. ಜ್ಞಾನವಾಗಿ ಸಮ್ಯಕ್ ಜ್ಞಾನವಹುದು. ಸಮ್ಯಕ್ ಜ್ಞಾನವಾಗಿ ಪ್ರಾಣವೇ ಲಿಂಗವಪ್ಪುದು ತಪ್ಪದು. ಸಂದೇಹವಿಲ್ಲವಯ್ಯ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

ವಿವರಣೆ

ಕ್ರಿಯೆ ಮಾಡದೆ ಸಿದ್ಧಿಯು ಪ್ರಾಪ್ತವಾಗದು. ಗತಿ, ಮತಿ, ಕರಣಾದಿಗಳು ಇರುವವರೆಗೆ ಅಂದರೆ ದೇಹಾದಿಗಳಿರುವವರೆಗೆ ಯೋಗ್ಯವಾದ ಕರ್ಮಗಳನ್ನು ಮಾಡುತ್ತಲೇ ಇರಬೇಕು. ದೇಹಪೋಷಣೆಗಾಗಿಯಾದರೂ ಉದ್ಯೋಗವನ್ನು ಮಾಡಲೇ ಬೇಕಾಗುವದು. ಬರೀ ಜ್ಞಾನವು ಹೆಚ್ಚಿನದು ಎಂದು ಬಾಯಿಂದ ಉಸ್ನುತ್ತ ಕುಳಿತರೆ ಅದು ತನ್ನಿಂದ ತಾನೆ ತಲೆಯಲ್ಲಿ ಬಂದು ಸೇರದು! ಸತ್ಕ್ರಿಯಾ ಮಾರ್ಗದಿಂದ ಸಾಗಿ ಜ್ಞಾನವನ್ನು ಅಳವಡಿಸಲಿಕ್ಕೆ ಬೇಕು, ಅಂದರೆ ಸಿದ್ಧಿಯು ಕೈಸೇರುವದು.

ಕ್ರಿಯೆಯು ಅಥವಾ ಕರ್ತವ್ಯಕರ್ಮವು ಅವಶ್ಯವೆಂದ ಬಳಿಕ ಎಂಥ ಕಠಿಣ ಪ್ರಸಂಗ ಬಂದರೂ ಅದನ್ನು ಬಿಡಕೂಡದು, ಅದಕ್ಕೆ ಅಂಜಿ ಕೆಲಸಾರ ಕೂಡದು, ಅದನ್ನು ಯಾವ ರೀತಿಯಿಂದಲೂ ತಪ್ಪಿಸಕೂಡದು.

ವಚನಗಳು

೩೧೨. ಕರ್ಮವೆಂಬ ಅಂಕದೊಡನೆ ತೊಡರಿದೆ. ಬಿನ್ನಪವ ಅವಧಾರು, ನಿಮ್ಮಾಳಿನ ಭಾಷೆಯ. ಕಡೆಗಳಕ್ಕೆ ನೂಂಕುವೆ. ಕೆಡಹುವೆನಂಕವ. ಕರೆದಡೋಸರಿಸಿದರೆ, ನಿಮ್ಮಾಳಲ್ಲ. ಶಿವಶರಣೆಂಬ ದಂಡನೊಡ್ಡಿ, ಗಣಮೇಳಾಪವೆಂಬಲಗಿನಲ್ಲಿರಿವೆ, ಕೂಡಲಸಂಗಮದೇವಾ.

ಟಪ್ಪಣಿ— ವೀರಭಕ್ತನ ಭಾಷೆಯಿದು. 'ಶಿವಶರಣು' ಎಂಬುದೆ ಅವನ ದಂಡು. ಮರಣ ಬಂದರೂ ಕರ್ತವ್ಯಕರ್ಮವನ್ನು ಬಿಡೆನು ಎಂದರ್ಥ.

೩೧೩. ಓಡುವಾತ ಲೆಂಕನಲ್ಲ, ಬೇಡುವಾತ ಭಕ್ತನಲ್ಲ. ಓಡಲಾಗದು ಲೆಂಕನು, ಬೇಡಲಾಗದು ಭಕ್ತನು. ಓಡೆನಯ್ಯ, ಬೇಡೆನಯ್ಯ, ಕೂಡಲಸಂಗಮದೇವಾ.

೩೧೪. ಅಂಜಿದರೆ ಮಾಣದು, ಅಳುಕಿದರೆ ಮಾಣದು. ವಜ್ರಪಂಜರದೊಳಗಿದ್ದಡೂ ಮಾಣದು. ತಪ್ಪದಯ್ಯ ಲಲಾಟ ಲಿಖಿತ. ಕಕ್ಕುಲತೆಬಟ್ಟರೆ ಆಗದು ನೋಡಯ್ಯ. ಧೃತಿಗೆಟ್ಟು, ಮನ ಧಾತುಗೆಟ್ಟರೆ ಬಪ್ಪುದು ತಪ್ಪದು, ಕೂಡಲಸಂಗಮದೇವಾ.

ಟಪ್ಪಣಿ:— ಆಗುವದು ಆಗೇ ತೀರುವದು, ಅಂದಬಳಿಕ ವ್ಯರ್ಥ ಅಂಜಿ ಸುಮ್ಮನೆ ಧೈರ್ಯಗೇಡಿಗಳಾಗಿ ಕೂಡುವದಕ್ಕಿಂತ ತಮ್ಮ ಕರ್ತವ್ಯವನ್ನು ಮಾಡಬೇಕು.

೩೧೫. ಹರ ತನ್ನ ಭಕ್ತರ ತಿರಿವಂತೆ ಮಾಡುವ. ಒರೆದು ನೋಡುವ ಸುವರ್ಣದ ಚಿನ್ನದಂತೆ. ಅರೆದು ನೋಡುವ ಚಂದನದಂತೆ. ಅರಿದು ನೋಡುವ ಕಬ್ಬಿನ ಕೋಲಿನಂತೆ. ಬೆದರದೆ ಬೆಚ್ಚದೆ ಇದ್ದಡೆ ಕರವಿಡಿದು ಎತ್ತಿಕೊಂಬ ನಮ್ಮ ರಾಮನಾಥನು.

ಟಪ್ಪಣಿ:— ಕರ್ತವ್ಯಪಥದಲ್ಲಿ ಬರುವ ಅನೇಕ ಅಡಚಣಿಗಳಿಂದರೆ ದೇವರು ಒದ್ದಿದ ಪರೀಕ್ಷಾಪ್ರಸಂಗಗಳೇ. ಆಗ ಭಕ್ತನು ತನ್ನ ಹಾದಿಯಿಂದ ಚ್ಯುತನಾಗದೆ ಮುಂದೆ ಸಾಗಲಿಕ್ಕೆ ಬೇಕು, ಅಂದರೆ ದೇವರು ನಿಶ್ಚಯವಾಗಿ ಒಲಿಯುವನು. ಮುಂದೆ ಕಾಯಕದ–ಉದ್ಯೋಗದ–ಮಹತ್ವವನ್ನು ಹೇಳಿದೆ.

೩೧೬. ಕಾಯಕದಲ್ಲಿ ನಿರುತನಾದಡೆ, ಗುರುದರುಶನವಾದಡೂ ಮರೆಯ

ಬೇಕು, ಲಿಂಗಪೂಜೆಯಾದಡೂ ಮರೆಯಬೇಕು, ಜಂಗಮು ಮುಂದಿದ್ದಡೆಯೂ ಹಂಗು ಹರಿಯಬೇಕು, ಕಾಯಕವೇ ಕೈಲಾಸವಾದ ಕಾರಣ. ಅಮಳೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು.

ಟಿಪ್ಪಣಿ:— ಕಾಯಕದಿಂದಲೆ ಯಾವ ಭಕ್ತನು ದೇವರನ್ನರ್ಚಿಸುತ್ತಿರುವನೊ ಅವನಿಗೆ ಔಪಚಾರಿಕ ಗುರುಲಿಂಗ ಜಂಗಮರ ಪೂಜೆ ಏತಕ್ಕೆ ಎಂದರ್ಥ.

೩೧೭. ಕಾಯಕ ತಪ್ಪಿದಡೆ ಸೈರಿಸಬಾರದು. ವ್ರತ ತಪ್ಪಿದರೆಂತು ಸೈರಿಸಬಹುದು, ಕರ್ಮಹರ ಕಾಳೇಶ್ವರಾ ?

೩೧೮. ಗುರುವಾದಡೂ ಕಾಯಕದಿಂದವೇ ಜೀವನ್ಮುಕ್ತಿ. ಲಿಂಗವಾದಡೂ ಕಾಯಕದಿಂದವೇ ಶಿಲೆಯ ಕುಲ ಹರಿವುದು. ಜಂಗಮುವಾದಡೂ ಕಾಯಕದಿಂದಲೇ ವೇಷದ ಪಾಶವ ಹರಿವುದು. ಇದು ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದ ಅರಿವು.

೩೧೯. ನೇಮವ ಮಾಡಿಕೊಂಡು ಭಕ್ತರ ಭವನಂಗಳ ಹೊಕ್ಕು ಕಾಯಕವ ಬಿಟ್ಟು, ಹೊನ್ನು ಬೇಡಿಹೆನೆಂಬುದು ಕಷ್ಟವಲ್ಲವೇ? ಆ ಗುಣ ಅಮಳೇಶ್ವರ ಲಿಂಗಕ್ಕೆ ದೂರ.

ಟಿಪ್ಪಣಿ:— ತಮ್ಮ ಕಾಯಕ-ಹೊಟ್ಟೆಯ ಉದ್ಯೋಗ, ಸಮಾಜಕ್ಕೆ ಉಪಯುಕ್ತವಾದ ಕಾರ್ಯ, ಯಾವ ಕಾರ್ಯವನ್ನು ಮಾಡುವುದರಿಂದ ಸಮಾಜವು ವ್ಯಕ್ತಿಗೆ ಹೊಟ್ಟೆ ಬಟ್ಟೆಗೆ ಕೊಡುವುದೋ ಆ ಉದ್ಯೋಗ-ಬಿಟ್ಟು ಭಿಕ್ಷೆ ಬೇಡುವದು ಹೊಲ್ಲ.

೩೨೦. ಸತ್ಯ ಶುದ್ಧ ಕಾಯಕದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು. ನೇಮದ ಕೂಲಿ ಅಂದಿನ ನಿತ್ಯ ಕಾಯಕದಲ್ಲಿ ಸಂದಿರಬೇಕು. ನೇಮದ ಕೂಲಿಯ ಬಿಟ್ಟು, ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯ. ಈ ನಿನ್ನ ಸೇವೆ ನನಗೆ, ನನ್ನ ಪ್ರಸಾದಕ್ಕೆ, ಚಂದೇಶ್ವರ ಲಿಂಗಕ್ಕೆ ಪ್ರಾಣವಯ್ಯ.

ಟಿಪ್ಪಣಿ:— ಹೇಮದಾಸೆಗೆ ಮಾಡದೆ ಇದ್ದ ಅಂದರೆ ಅನಾಸಕ್ತಿಯಿಂದ ಮಾಡಿದ ಕರ್ತವ್ಯಕರ್ಮವೆ, ಲಿಂಗಕ್ಕೆ ಅಂದರೆ ಪರಮಾತ್ಮನಿಗೆ ಪ್ರಾಣರೂಪವು ಎಂದರ್ಥ.

೩೨೧. ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ, ಚಿತ್ತ ಶುದ್ಧನಾಗಿ ಕಾಯಕವ ಮಾಡುವಲ್ಲಿ, ಸದ್ಭಕ್ತಂಗೆ ಎತ್ತ ನೋಡಿದತ್ರ ಲಕ್ಷ್ಮಿ ತಾನಾಗಿಪ್ಪಳು, ಮಾರಯ್ಯ ಪ್ರಿಯ ಅಮಳೇಶ್ವರ ಲಿಂಗದ ಸೇವೆಯುಳ್ಳನ್ನಕ್ಕರ.

೩೨೨. ಕಂದಿಸಿ, ಕುಂದಿಸಿ, ಬಂಧಿಸಿ, ನೋಯಿಸಿ, ಕಂಡಕಂಡವರ ಬೇಡಿ ತಂದು ಜಂಗಮಲಿಂಗಕ್ಕೆ ಮಾಡಿಹೆನೆಂಬ ದಂಡುಗದ ಮಾಟಕ್ಕೆ ಲಿಂಗ ನೈವೇದ್ಯ ಸಲ್ಲದು. ತನು ಕರಗಿ, ಮನ ಬಳಲಿ, ಬಂದ ತೆರದನುವನರಿದು, ಸಂದಿಲ್ಲದೆ, ಸಂಶಯವಿಲ್ಲದೆ, ಜಂಗಮು ಲಿಂಗಕ್ಕೆ ದಾಸೋಹವೇ ಮಾಟ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ ದುರಾಸೆಯಿಂದ ಬಂದುದು ಅನರ್ಪಿತ. ಇದುಕಾರಣ ಸತ್ಯಶುದ್ಧ ಕಾಯಕದ ನಿತ್ಯದ್ರವ್ಯವಾದರೆ ಚಂದೇಶ್ವರ ಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯ.

ಟಿಪ್ಪಣಿ:— ಸಾತ್ವಿಕ ದಾನವಾವುದು, ದೇವರ ನೈವೇದ್ಯಕ್ಕೆ ಯಾವದು ಸಲ್ಲುವದು ಇದು ಇಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ.

ವಿವರಣೆ

ಕಾಯಕವು ಎಲ್ಲಕ್ಕೂ ಮಹತ್ವದ್ದು. ಅದನ್ನು ಎಂದೂ ತಪ್ಪಿಸ ಕೂಡದು. ಗುರುಗಳು ಕೂಡ ಕಾಯಕದಿಂದಲ್ಲದೆ ಮುಕ್ತರಾಗರು, ಭಿಕ್ಷೆ ಬೇಡಿ ಮಾಡಿದರೆ ಅದು ದಾನವೂ ಅಲ್ಲ, ಪೂಜೆಯೂ ಅಲ್ಲ, ಅರ್ಪಣವೂ ಅಲ್ಲ; ಎಂದು ವಚನಕಾರರ ಸ್ಪಷ್ಟಾಭಿಪ್ರಾಯವು. ನಿಷ್ಠೆಯಿಂದ ಕಾಯಕ ಮಾಡುವವನಿಗೆ ಏನೂ ಕಡಿಮೆ ಬೀಳಲಿಯದು, ಎಂದು ಸ್ವಾನುಭವದಿಂದ ವಚನಕಾರರು ಎಲ್ಲರಿಗೂ ಆಶ್ವಾಸನೆಯನ್ನಿತ್ತಿರುವರು.

ಆದರೆ ಕಾಯಕ ಮಾಡುವಾಗ ಅಹಂಕಾರದ ಸುಳಿಸಹ ಇರ ಕೂಡದು. ಮತ್ತು ಕಾಯಕವು ಪರಮಾತ್ಮಾರ್ಪಿತವಿರಬೇಕು, ಎಂಬುದನ್ನು ಲಕ್ಷ್ಯದಲ್ಲಿಡತಕ್ಕದ್ದು.

ವಚನಗಳು

೩೨೩. ನಾನು ಆರಂಭಮಾಡುವೆನಯ್ಯ ಗುರುಪೂಜೆಗೆಂದು. ನಾನು ವ್ಯವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು. ನಾನು ಪರಸೇವೆಯ ಮಾಡುವೆನಯ್ಯ ಜಂಗಮು ದಾಸೋಹಕ್ಕೆಂದು. ನಾನಾವ ಕರ್ಮ ಮಾಡಿ ಮಾಡುವೆನಯ್ಯ

ದಡೆಯೂ ನೀ ಕೊಡುವೆ ಎಂಬುದನರಿತಿರ್ಪೆನಾಗಿ ನೀ ಕೊಟ್ಟ ದ್ರವ್ಯವ ನಿನಗಲ್ಲದೆ ಮತ್ತೊಂದಕ್ಕೆ ವ್ಯಯಮಾಡೆನು. ನಿಮ್ಮ ಸೊಮ್ಮು ನಿಮಗೆ ಸಲ್ಲಿಸುವೆನು. ನಿಮ್ಮಾಣೆ ಕೂಡಲಸಂಗಮದೇವಾ.

ಟಪ್ಪಣಿ:— ಭಕ್ತನು ಗಳಿಸಿದರೂ ಪುನಃ ಅದನ್ನು ಪರಮಾತ್ಮನ ಚರಣಕ್ಕೆ ಒಂದಿಲ್ಲ ಒಂದು ಪರಿ ನಿವೇದಿಸುವುದಕ್ಕಾಗಿಯೆ.

೩೨೪. ಪಂಡಿತನಾಗಲಿ, ಮೂರ್ಖನಾಗಲಿ, ಸಂಚಿತಕರ್ಮ ಉಂಡಲ್ಲದೆ ಬಿಡದು. ಪ್ರಾರಬ್ಧಕರ್ಮ ಭೋಗಿಸದಲ್ಲದೆ ಬಿಡದು. ನಾನಾವ ಲೋಕದೊಳಗಿದ್ದಡೆಯೂ ಬಿಡದು. ಕರ್ಮಫಲಗೂಡಿ ಕೂಡಲಸಂಗಮದೇವಂಗೆ ಅತ್ಮನೈವೇದ್ಯವ ಮಾಡಿದಾತನೇ ಧನ್ಯನಯ್ಯ.

೩೨೫. ಕಂಗಳ ಮುಂದಣ ಗೊತ್ತು ಹರಿಯದು. ಕಾಮ್ಯದ ಮುಂದಣ ಚಿತ್ತ ಹರಿಯದು. ಮಾಡಿಹೆನೆಂಬ ಮಾಟಕೂಟದ ಚಿತ್ತ ನಿಂದಲ್ಲದೆ ಸ್ವಸ್ಥವಿಲ್ಲ. ಹಾಗಲ್ಲದೆ ಲಿಂಗವ ಕಾಣಬಾರದು, ಆಯದಕ್ಕಿ ಮಾರಯ್ಯ.

ಟಪ್ಪಣಿ — ಮಾಡುವಲ್ಲಿ 'ನಾನು ಮಾಡಿದೆನು' ಎಂಬ ಭಾವವು ಅತ್ಯಂತ ಘಾತಕವು, ಎಂದರ್ಥವು. ಕರ್ಮವು ಅಹಂಕಾರವಿರಹಿತವೂ ನಿಷ್ಕಾಮವೂ ಇರತಕ್ಕದ್ದು.

೩೨೬. ಕಣವ ನಿಶ್ಚೈಸಿದ ಸುಭಟಂಗೆ ಮನೆಯ ಮೇಲಣ ಹಂಗುಂಟೆ? ಅರ್ಥ, ಪ್ರಾಣ, ಅಭಿಮಾನ ಈ ಮೂರನು ಕರ್ತಂಗೆ ಇತ್ತು ಮತ್ತೆ ಹೊತ್ತು ಹೊರೆವಂಗೆ ಸದ್ಭಕ್ತಿಯುಂಟೆ? ಅದು ಚಂದೇಶ್ವರಲಿಂಗಕ್ಕೆ ಮುಟ್ಟದ ಮಾಟ.

೩೨೭. ಕೈದುವಿಡಿದಾಡುವವರೆಲ್ಲ ಇರಿವರೇ? ಸಾಧನೆಯ ಮಾಡಬಲ್ಲವರೆಲ್ಲರು ಕಾದಬಲ್ಲರೆ? ಅರ್ಥಿಗೆ ಮಾಡತಕ್ಕ ಕರ್ತವ್ಯವಂತರೆಲ್ಲರು ಭಕ್ತರಪ್ಪರೇ? ಅದು ಚಂದೇಶ್ವರಲಿಂಗಕೆ ಮುಟ್ಟದ ಮಾಟ.

೩೨೮. ಅನ್ನವನಿಕ್ಕಿದಡೇನು? ಪುಣ್ಯವಹುದು. ವಸ್ತ್ರವ ಕೊಟ್ಟಡೇನು? ಪುಣ್ಯವಹುದು. ಹಣವಕೊಟ್ಟಡೇನು? ಪುಣ್ಯವಹುದು. ಆಯಾಯ ಫಲಪದದ ಸಂಪತ್ತಹುದಯ್ಯ, ಕೂಡಲ ಚನ್ನಸಂಗಮದೇವಾ.

ಟಪ್ಪಣಿ:— ' ಇವುಗಳಿಂದ ಪರಮಶಾಂತಿ, ಮುಕ್ತಿ, ದೊರೆಯಲಾರದು ಎಂದರ್ಥ.

೩೨೯. ಅನಲ ಕೊಂಡ ವಸ್ತುವಿಗೆ ಪರಿಪ್ರಕಾರ ಉಂಟೇ? ಶರಧಿ ಕೊಂಡ ಸಾಗರಕೆ ಕುರುಹಿನ ತಲೆಯೆ? ಲಿಂಗವ ಮುಟ್ಟಿದ ಅಂಗಕ್ಕೆ ಮುತ್ತೆ ಪುಣ್ಯವೆಂಬುದ ಹುಸಿ ನಾಸ್ತಿನಾಥಾ.

ಟಪ್ಪಣಿ:— ಪುಣ್ಯಪದವೆಂಬುದು ನಶ್ವರವು, ಮುಕ್ತಿ ಪದವೇ ಶಾಶ್ವತ. ನಿಷ್ಕಾಮನು ಆ ಪದವಿಯನ್ನು ಪಡೆಯುವನು.

೩೩೦. ಫಲಪದದಾಶೆ ಮಾಡಲಾಗದು ಕ್ರಿಯೆಯಲ್ಲಿ. ಅದೇನುಕಾರಣವೆಂದರೆ, ಬಯಕೆಯ ಭಕ್ತಿಯ ಪೂರ್ವಪುರಾತನರು ಮೆಚ್ಚರು. ನಮ್ಮ ಅಖಂಡೇಶ್ವರದೇವರು ಹಂಗಿನ ಭಕ್ತರನೊಲ್ಲ ನೋಡಾ.

ಟಪ್ಪಣಿ:— ಫಲಾಶಾರಹಿತ ಕರ್ಮವೆ ಶ್ರೇಷ್ಠವು. ಮತ್ತು ಪುರಾತನರಿಂದ ವಿಧಿಸಲ್ಪಟ್ಟದ್ದು ವಿಕ್ಕ ಕರ್ಮವೆಲ್ಲ ಬಂಧಕವು.

೩೩೧. ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ ನಿಮ್ಮ ಶರಣರಿಗೆ. ಎನಗೆ ಬೇಕೆಂಬ ಭಾವ ಮನದಲ್ಲಿ ಹೊಳೆದರೆ, ಘನಮಹಿಮ ನಿಮ್ಮ ಶರಣರ ಪಾದದಾಣೆ. ಮನವಚನಕಾಯದಲ್ಲಿ ನೀನಲ್ಲದೆ ಮತ್ತೊಂದನರಿದಡೆ, ಕೂಡಲಸಂಗಮದೇವಾ, ಮತ್ತೆ ಮರಳಿ ಭವವೆಂಬ ಘೋರದಲ್ಲಿಕ್ಕಯ್ಯ.

ಟಪ್ಪಣಿ:— ಶುದ್ಧ, ಅರ್ಪಿತ, ನಿಷ್ಕಾಮ, ಫಲಾಶಾರಹಿತ ಕರ್ಮ ಮಾಡಿ ಭಕ್ತನು ಸದಾಮುಕ್ತನಿರುವನು.

೩೩೨. ಅಮೃತಕ್ಕೆ ಹಸಿವುಂಟೇ? ಜಲಕ್ಕೆ ತೃಷೆಯುಂಟೇ? ಘನ ಪುರುಷಂಗೆ ವಿಷಯವುಂಟೇ? ಸದ್ಗುರುಕಾರುಣ್ಯವಿಡಿದು ಲಿಂಗಾರ್ಚನೆಯ ಮಾಡುವ ಮಹಾಶರಣಂಗೆ ಮುಕ್ತಿಯ ಬಯಕೆಯುಂಟೇ? ಅವರುಗಳಿಗೆ ಅದು ಸ್ವಯಂಭು, ಸಹಜಸ್ವಭಾವ. ಇನ್ನು ತೃಪ್ತಿ ಆಪ್ಯಾಯನ ಅರಸಲುಂಟೇ, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ?

ಟಪ್ಪಣಿ:— ನಿಜಭಕ್ತನು ತನ್ನ ಕರ್ಮ ಮಾಡುವಾಗ ಮುಕ್ತಿಯ ಆಶೆಯನ್ನು ಸಹ ಮಾಡುವದಿಲ್ಲ! ನಿಷ್ಕಾಮತೆಯ ಪರಮಾವಧಿಯಿದು.

೩೩೩. ಪರಮ ಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ. ಪರಮ ಪದವಿಯ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ. ಎನಗೆ ನಿಮ್ಮ ತೊತ್ತು ಸೇವೆಯೇ

ಸಾಕು. ಮಹಾಲಿಂಗ ಕಲ್ಲೇಶ್ವರದೇವಾ, ಪರಮಪದವಿಯ ನಿಮ್ಮ ತಲೆಯಲ್ಲಿ ಸುತ್ತಿಕೊಳ್ಳಿ.

ಟಿಪ್ಪಣಿ:— ನಿಷ್ಕಾಮಸೇವೆಯೆ ಭಕ್ತನಿಗೆ ಪರಮಾನಂದವನ್ನುಂಟು ಮಾಡುವದು. ಆದುದರಿಂದ ಅವನು ಬೇರೆ ಯಾವ ಪದದ ಆಶೆಯನ್ನೂ ಮಾಡುವದಿಲ್ಲ. ಅವನು ಅವು ತುಚ್ಛವೆಂದು ಭಾವಿಸುವನು.

ವಿವರಣೆ

ಕಾಮ್ಯ ಬುದ್ಧಿಯಿಂದ, ಈ ಕರ್ಮದಿಂದ ಈ ಫಲವು 'ನನಗೆ' ದೊರೆಯಬೇಕು, ಎಂಬ ಬುದ್ಧಿಯಿಂದ ಮಾಡಿದ ಯಾವುದೇ ಕರ್ಮವು ದೇವರ ವರೆಗೆ ಹೋಗಿ ಮುಟ್ಟುವದೇ ಇಲ್ಲ, ಎಂದು ವಚನಕಾರರು ಹೇಳಿರುವರು. ಕಾಮ್ಯ ಬುದ್ಧಿಯಿಂದ ಅನ್ನದಾನಾದಿ ಪುಣ್ಯಕರ್ಮಗಳನ್ನು ಮಾಡಿದರೆ ಅವುಗಳಿಂದ ಆಯಾ ಕರ್ಮಗಳ ಪುಣ್ಯಫಲಗಳು ದೊರೆಯುವವು ಹೊರತು ಕರ್ಮಬಂಧವು ಬಿಡದು. ಆದುದರಿಂದಲೆ, ಬಯಕೆಯ ಭಕ್ತಿಯು, ಕಾಮ್ಯಕಾಯಕವು, ಫಲಾಶೆಯುಳ್ಳ ಕರ್ಮವು ತ್ಯಾಜ್ಯವು. ನಿಜವಾದ ಕರ್ಮಯೋಗಿಯು ಸರ್ವಸ್ವವನ್ನು ನಿಷ್ಕಾಮ ಬುದ್ಧಿಯಿಂದ ದೇವರಿಗೆ ಕೊಟ್ಟು ತನ್ನ ಕರ್ತವ್ಯವನ್ನು ಸತತ ಮಾಡುವನು. ಅವನಿಗೆ ಮುಕ್ತಿಯ ಬಯಕೆ ಸಹ ಇರಲರಿಯದು! ಅಂದಬಳಿಕ ಮಿಕ್ಕ ಬಯಕೆಗಳ ಪಾಡೇನು? ಅಂಥ ನಿಷ್ಕಾಮ ಕರ್ಮಯೋಗಿಯು ಪರಮಾತ್ಮನಿಗೆ, 'ಪರಮ ಪದವಿಯನ್ನು ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ' ಎಂದು ಹೇಳಬಲ್ಲನು! ಅವನಿಗೆ ಯಾತರ ಹಂಗೂ ಇಲ್ಲದ ಬಳಿಕ ಅವನು ಯಾರಿಗೆ ಮತ್ತು ಯಾಕೆ ಅಂಜಬೇಕು?

ಇನ್ನು ಇಂಥ ಕರ್ಮಯೋಗಿಯ ಅತ್ಯಂತಿಕ ಸ್ಥಿತಿಯು ಹೇಗೆ ಇರುವದು ನೋಡುವ.

ವಚನಗಳು

೩೩೪. ಮಾಡುವಲ್ಲಿ ಎನ್ನ ನಾನರಿದು ಮಾಡಿದೆನಾದಡೆ, ನೀಡುವಲ್ಲಿ ಎನ್ನ ನಾನರಿದು ನೀಡಿದೆನಾದಡೆ, ನೀಡುವಲ್ಲಿ ರುಚಿಗೆ ಮನವೆಳಸಿ ಹಾರೈಸಿದೆನಾದಡೆ, ನಿಮಗಂದೆ ದ್ರೋಹವಯ್ಯ. ಮಾಡುವಲ್ಲಿ, ನೀಡುವಲ್ಲಿ ಶುದ್ಧನಲ್ಲದಿರ್ದಡೆ ನೀನಂದೆ ಮೂಗ ಕೊಯ್ಯಿ, ಕೂಡಲಸಂಗಮದೇವಾ.

೩೩೫. ಮಾಡುವ ಭಕ್ತನು ನೀನೇ, ಮಾಡಿಸಿಕೊಂಬ ದೇವನು ನೀನೇ ಎಂದರಿದೆ. ಇದುಕಾರಣ, ಅಖಂಡೇಶ್ವರಾ, ನಿಮ್ಮ ಫಲಪದವ ನೋಡಲಿಲ್ಲ, ನೀವು ಒಲಿದು ಎನಗೆ ಕೊಡಲಿಲ್ಲ.

೩೩೬. ಲೋಕವಿಡಿದು ಲೋಕವ ಹಿಂಗದಂತಿಪ್ಪೆನು. ಆಕಾರವಿಡಿದು ಸಾಕಾರ ಸಹಿತ ನಡೆವೆನು. ಹೊರಗೆ ಬಳಸಿ ಒಳಗೆ ಮರೆದಂತಿಪ್ಪೆನು. ಬೆಂದ ನುಲಿಯಂತೆ ಹುರಿಗುಂದದಂತಿಪ್ಪೆನು. ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ, ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತಿಪ್ಪೆನು.

ಟಿಪ್ಪಣಿ:— ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ, ಮಾಡಿ ನಿರ್ಲೇಪಿ ಇದ್ದ ಪರಿಯೆ ಇಲ್ಲಿ ವರ್ಣಿತವಾಗಿರುವದು. ಇಂಥ ಕರ್ಮವೆ ನಿವೃತ್ತಕರ್ಮ ಅಥವಾ ಮುಕ್ತಕರ್ಮವೆನಿಸುವದು.

೩೩೭. ಇಹಪರವೆಂಬ ಈದೆಸೆ ಆದೆಸೆಯಾದವರ ಪರಿ ಹೊಸತು. ನೆಯಿ ಹತ್ತದ ನಾಲಿಗೆಯಂತೆ, ಹುದಿಹತ್ತದ ಗಾಳಿಯಂತೆ, ಕಾದಿಗೆಹತ್ತದ ಆಲಿಯಂತಿರ್ದೆನಯ್ಯ. ನಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಆಚರಿಸುತ್ತ ಆಚರಿಸದಂತಿರ್ದೆನಯ್ಯಾ.

೩೩೮. ಮಾಡುವಂತಿರಬೇಕು, ಮಾಡದಂತಿರಬೇಕು. ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು. ಕೂಡಲಸಂಗಮದೇವರ ನೆನೆವುತ್ತ ನೆನೆವುತ್ತ ನೆನೆಯದಂತಿರಬೇಕು.

ಟಿಪ್ಪಣಿ:— ನಿಷ್ಕಾಮಕರ್ಮಿಯು ತನ್ನ ಶಕ್ತಿಸರ್ವಸ್ವದಿಂದ ಸಮಾಜಧಾರಣೆಯ ಅಥವಾ ಲೋಕಸಂಗ್ರಹದ ಕರ್ಮಗಳನ್ನು ಎಡೆಬಿಡದೆ ಅತಂದ್ರಿತನಾಗಿ ಮಾಡುತ್ತಿದ್ದರೂ ಅವನು ಅವುಗಳಿಂದ ಬದ್ಧನಾಗದೆ ಅಂತರ್ಮುಕ್ತನಿರುವನು.

---

೧೪. ಸಾಧನಮಾರ್ಗ-ಧ್ಯಾನಯೋಗ

ವಿವಿಧ ಸಾಧನಮಾರ್ಗಗಳನ್ನು ಹೇಳುವಾಗ ಧ್ಯಾನಯೋಗವನ್ನೂ ಹೇಳುವದು ಅವಶ್ಯವು. ಅದಕ್ಕೆ ರಾಜಯೋಗ, ಲಯಯೋಗ, ಅಷ್ಟಾಂಗ ಯೋಗ, ಪಾತಂಜಲಯೋಗ ಎಂಬ ಮುಂತಾದ ಹೆಸರುಗಳು ಇರುವವು. ಪಡನಕಾರರಲ್ಲಿ ಹಲವರು ಈ ಯೋಗವನ್ನು ಪ್ರಾಮುಖ್ಯದಿಂದ ಆಚರಿಸುತ್ತಿದ್ದರೆಂಬುದು ಅವರ ವಚನಗಳಿಂದ ಗೊತ್ತಾಗುತ್ತದೆ. ಪರಶಿವನನ್ನು ಕೂಡುವುದೆ ಅವರ ಪರಮ ಧ್ಯೇಯವಾದುದರಿಂದ ಅವರು ಅದಕ್ಕೆ ಶಿವ ಯೋಗವೆಂದಿರುವರು, ಇಷ್ಟೇ ಹೊರತು, ಅವರು ತತ್ತ್ವತಃ ಪಾತಂಜಲ ಯೋಗವನ್ನೇ ಅನುಸರಿಸಿರುವರು. ಯಾವದೇ ಮಾರ್ಗದಿಂದ ಸಾಧಕರೂ ನಮ್ಮ ಚಿತ್ತವೆ ಪರಮಾರ್ಥದ ಮುಖ್ಯ ಸಾಧನವಾಗಿರುವುದರಿಂದ, ಮನಃ ಸಂಯಮವು ಎಲ್ಲ ಮಾರ್ಗಗಳ ಮುಖ್ಯಾಂಗವಾಗಿರುವುದರಿಂದ, ಮತ್ತು ಚಿತ್ತನಿಯಮನ-ನಿರೋಧಗಳನ್ನು ಈ ಯೋಗವು ತನ್ನ ಧ್ಯೇಯವನ್ನಾಗಿಟ್ಟುಕೊಂಡಿರುವುದರಿಂದ ಇದು ಎಲ್ಲ ಮಾರ್ಗಗಳಿಗೂ ಸರಿಯಾಗಿ ಸಹಾಯಕವೆಂದು ಹೇಳಬಹುದು.

ಸಮುದ್ರದಲ್ಲಿ ಅನೇಕಾನೇಕ ತೆರೆಗಳು ಏಳುವಂತೆ ಚಿತ್ತವೆಂಬ ಸಾಗರದಲ್ಲಿ ಸಂಕಲ್ಪ-ವಿಕಲ್ಪಗಳು ಏಳುವವು. ಅವೇ ವೃತ್ತಿಗಳೆನಿಸುವವು. ಆ ವೃತ್ತಿಗಳ ಏಳುವಿಕೆ, ಅಲೆದಾಟ, ಮತ್ತು ಜಲ್ಲಾಟ, ಇವೇ ಚಿತ್ತಚಾಂಚಲ್ಯಕ್ಕೆ ಇಲ್ಲವೆ ಚಿತ್ತವಿಭ್ರಮಕ್ಕೆ ಕಾರಣವಾಗುತ್ತವೆ. ಅವು ಏಳದಿದ್ದರೆ ನಿರಭ್ರ ನೀಲಾಕಾಶವನ್ನು ಪ್ರತಿಬಿಂಬಿಸುವ ನಿರ್ಮಲ, ನಿಶ್ಚಲ, ಸರೋವರದಂತೆ ಮನಸು ನಿರ್ಮಲ, ಶಾಂತ, ಮತ್ತು ಸ್ಥಿರವಿದ್ದು ಪರವಸ್ತುವನ್ನು ಪ್ರತಿಬಿಂಬಿಸಬಲ್ಲದು. ಆ ಚಿತ್ತವೃತ್ತಿಗಳನ್ನು ನಿರೋಧಿಸಿ, ಚಿತ್ತದ ಸಮತೆ, ಏಕಾಗ್ರತೆ, ಸ್ಥಿರತೆ, ಇವುಗಳನ್ನು ಸಾಧಿಸುವುದೆ ಈ ಯೋಗದ ಧ್ಯೇಯವು.

ಈ ಯೋಗವು ಅಷ್ಟಾಂಗಗಳುಳ್ಳದ್ದಿದ್ದರೂ ಏಕಚಿತ್ತದಿಂದ ಧ್ಯೇಯವಸ್ತುವಿನ ಧ್ಯಾನವನ್ನು ಸಾಧಿಸುವುದೆ ಇದರ ಮುಖ್ಯ ಅಂಗವು. ಉಳಿಕ್ಕ ಅಂಗಗಳು ಅದಕ್ಕೆ ಪೋಷಕ ಮತ್ತು ಆಧಾರಭೂತವಾಗಿರುವವು. ಧ್ಯಾನ

ವನ್ನು ಕೆಲಹೊತ್ತು ಸ್ಥಿರವಾಗಿಡುವ ಸಾಮರ್ಥ್ಯವು ಉಂಟಾಯಿತೆಂದರೆ ಅದು ಧಾರಣೆಯೆನಿಸುವದು. ಧ್ಯೇಯದಲ್ಲಿ ಚಿತ್ತ ಲಯವಾಯಿತೆಂದರೆ ಅದು ಸಮಾಧಿಯು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ ಇವು ಧ್ಯಾನಸಿದ್ಧಿಯ ಐದು ಪೂರ್ವಸಾಧನಗಳು. ಇವು ಪೂರ್ವಯೋಗವೆನಿಸುವವು. ಮಾವಿನ ಹಣ್ಣಿನ ರಸವನ್ನು ಹಿಂಡಿಕೊಂಡು ಅದರ ಗೊರಟು-ಹಿಪ್ಪೆಗಳನ್ನು ಜಲ್ಲಿಬಿಡುವಂತೆ ವಚನಕಾರರು ಪಾತಂಜಲ ಯೋಗದಲ್ಲಿಯ ಮುಖ್ಯ ಮಾತುಗಳನ್ನು ಸ್ವೀಕರಿಸಿ ಅವುಗಳನ್ನು ತಮ್ಮ ಸಾಧನದಲ್ಲಿ ಉಪಯೋಗಿಸಿರುವರು. ಮತ್ತು ಏಕ್ಕ ಅಪ್ರಧಾನ ಪ್ರಕ್ರಿಯೆಗಳನ್ನು ಹೀಯಾಳಿಸಿ ಬಿಟ್ಟುಬಿಟ್ಟಿರುವರು. ವಚನಕಾರರಿಗೂ ಕೇವಲ ಧ್ಯಾನಯೋಗಿಗಳಿಗೂ ಇನ್ನೊಂದು ಮುಖ್ಯ ಭೇದವೇನೆಂದರೆ, ಇವರು ಪರಶಿವನನ್ನೇ ಧ್ಯೇಯವಸ್ತುವನ್ನಾಗಿ ಇಟ್ಟುಕೊಂಡಿರುವರು. ಧ್ಯಾನಯೋಗಿಗಳು ಹಾಗೆ ಯಾವ ನಿಯಮದಿಂದಲೂ ಬದ್ಧರಿಲ್ಲ. ಅವರು ನಾದ, ಬಿಂದು, ಜ್ಯೋತಿ, ಅಮೃತ, ಓಂಕಾರ ಹೀಗೆ ಯಾವದಾದರೊಂದು ಪ್ರತೀಕವನ್ನು ಇಟ್ಟುಕೊಂಡು ಧ್ಯಾನಸಿದ್ಧರಾಗಲೆತ್ನಿಸುವರು.

ಯಮನಿಯಮಗಳು ತನುಮನ ಶುದ್ಧಿಗಾಗಿ ಕೈಕೊಳ್ಳತಕ್ಕವುಗಳು:

ಬ್ರಹ್ಮಚರ್ಯಂ ದಯಾ ಕ್ಷಾಂತಿರ್ದಾನಂ ಸತ್ಯಮಕಲ್ಪತಾ ।
ಅಹಿಂಸಾಽಸ್ತೇಯಮಾಧುರ್ಯಂ ದಮಶ್ಚೇತಿ ಯಮಾಃ ಸ್ಮೃತಾಃ ॥

ಈ ಪ್ರಕಾರ ಬ್ರಹ್ಮಚರ್ಯ, ದಯೆ, ಕ್ಷಮೆ, ದಾನ, ಸತ್ಯ, ಅಕಲ್ಪತೆ, ಅಹಿಂಸೆ, ಅಸ್ತೇಯ ಮಾಧುರ್ಯ, ಮತ್ತು ದಮ ಇವು ಹತ್ತು ಯಮಗಳು. ಇನ್ನು, ನಿಯಮಗಳು:

ಶೌಚಮಿಜ್ಯಾ ತಪೋ ದಾನಂ ಸ್ವಾಧ್ಯಾಯೋಪಸ್ಥನಿಗ್ರಹಃ ।
ವ್ರತಮೌನೋಪವಾಸಂ ಚ ಸ್ನಾನಂ ಚ ನಿಯಮಾ ದಶ ॥

ಈ ಪ್ರಕಾರ ಶೌಚ, ಯಜ್ಞ, ತಪ, ದಾನ, ಸ್ವಾಧ್ಯಾಯ, ಉಪಸ್ಥನಿಗ್ರಹ ವ್ರತ, ಮೌನ, ಉಪವಾಸ ಮತ್ತು ಸ್ನಾನ ಇವು ಹತ್ತು ನಿಯಮಗಳು. ಯಾವದೊಂದು ಸ್ಥಿರವಾದ ದೇಹವಿನ್ಯಾಸವೆ ಆಸನವೆನಿಸುವದು. ದೇಹಚಾಂಚಲ್ಯವನ್ನು ಹೋಗಲಾಡಿಸುವುದಕ್ಕಾಗಿ ಇದರ ಉಪಯೋಗವು ಮಾಡಲ್ಪಡುವದು. ಪ್ರಾಣವನ್ನು ಸ್ಥಿರಗೊಳಿಸುವುದಕ್ಕಾಗಿ ಮಾಡತಕ್ಕ

ಪ್ರಾಣಾಪಾನ ವಾಯುಗಳ ನಿಯಮನವೆ ಪ್ರಾಣಾಯಾಮವೆನಿಸುವದು. ಇಂದ್ರಿಯಗಳನ್ನು ವಿಷಯಗಳಿಂದ ನಿವೃತ್ತ ಮಾಡಿ ಇಂದ್ರಿಯ ಜಯವನ್ನು ಸಾಧಿಸುವುದೆ ಪ್ರತ್ಯಾಹಾರವೆನಿಸುವದು.

ಈ ಮೇಲಿನ ತತ್ವಗಳನ್ನು ವಚನಕಾರರು ತಮ್ಮ ಸಾಧನಪಥದಲ್ಲಿ ಹೇಗೆ ಉಪಯೋಗಿಸಿದರು ಇದನ್ನೆ ಇಲ್ಲಿ ಮುಖ್ಯವಾಗಿ ನೋಡತಕ್ಕದ್ದಿದೆ.

ವಚನಗಳು

೩೩೯. ಯಮ-ನಿಯಮಾಸನ-ಪ್ರಾಣಾಯಾಮ-ಪ್ರತ್ಯಾಹಾರ- ಧ್ಯಾನ-ಧಾರಣಾಸಮಾಧಿ ಈ ಎಂಟು ಅಷ್ಟಾಂಗ ಯೋಗಗಳು. ಈ ಯೋಗಂಗಳೊಳಗೆ ಉತ್ತರಭಾಗ, ಪೂರ್ವಭಾಗ ಎಂದು ಎರಡು ಪ್ರಕಾರವಾಗಿಹವು. ಯಮ ಪಂಚಕವೈದು ಪೂರ್ವಯೋಗ. ಧ್ಯಾನ-ಧಾರಣ-ಸಮಾಧಿ ಎಂದು ಮೂರು ಉತ್ತರಯೋಗ. ಇವಕ್ಕೆ ವಿವರ :— ಅನೃತ, ಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ, ಇವೈದನು ಬಿಟ್ಟು ಲಿಂಗಪೂಜೆಯನು ಮಾಡುವುದೆ ಯಮಯೋಗ. ಬ್ರಹ್ಮಚಾರಿಯಾಗಿ ನಿರಾಪೇಕ್ಷಿತನಾಗಿ ನಡೆವನು, ಶಿವನಿಂದೆಯ ಕೇಳದಿಹನು, ಮಾನಸ, ವಾಚಿಕ, ಉಪಾಂಶಿಕವೆಂಬ ತ್ರಿಕರಣದಲ್ಲಿ ಪ್ರಣವಪಂಚಾಕ್ಷರಿಯ ಜಪಿಸುತ್ತ ಶುಚಿಯಾಗಿಹನು.... ಪಾಪಕೆ ಭೀತನಾಗಿಹನು, ಇದು ನಿಯಮ ಯೋಗ. ಸಿದ್ಧಾಸನ, ಸ್ವಸ್ತಿಕಾಸನ, ಪದ್ಮಾಸನ, ಅರ್ಧಚಂದ್ರಾಸನ, ಪರ್ಯಂಕಾಸನ ಈ ಐದು ಆಸನಯೋಗಗಳಲ್ಲಿ ಸುಸ್ಥಿರಚಿತ್ತನಾಗಿ ಮೂರ್ತಿಗೊಂಡು ಶಿವಾರ್ಚನೆಯ ಮಾಡುವದೀಗ ಆಸನಯೋಗ.... ಈಡಾ-ಪಿಂಗಳದಲ್ಲಿ ಚರಿಸುವ ರೇಚಕ-ಪೂರಕಂಗಳ ಭೇದವನರಿದು, ಮನಪವನಂಗಳ ಮೇಲೆ ಲಿಂಗ ಸಂಬಂಧಿಸಿ, ಮನ-ಪವನ-ಪ್ರಾಣಂಗಳು ಲಿಂಗದೊಡನೆ ಕೂಡಿ, ಲಿಂಗ ಸ್ವರೂಪವ ಮಾಡಿ, ವಾಯುಪ್ರಾಣತ್ವವ ಕಳೆದು ಲಿಂಗಪ್ರಾಣಿಯ ಮಾಡಿ, ಹೃದಯಕಮಲಮಧ್ಯದಲ್ಲಿ ಪ್ರಣವವನುಚ್ಚರಿಸುತ್ತ ಪರಶಿವಧ್ಯಾನದಲ್ಲಿ ತರ ಹರವಾಗಿಪ್ಪುದೀಗ ಪ್ರಾಣಾಯಾಮ. .... ಸರ್ವೇಂದ್ರಿಯಂಗಳನು ಲಿಂಗ ಮುಖದಿಂದ ಸಾವಧಾನವ ಮಾಡಿಕೊಂಡಿಪ್ಪುದೀಗ ಪ್ರತ್ಯಾಹಾರಯೋಗ. ಈ ಐದು ಪೂರ್ವಯೋಗಂಗಳು.... ಶಿವಲಿಂಗವೇ ಪರಮಾತ್ಮಚಿಹ್ನವೆಂದರಿದು ಅದನ್ನೆ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ, ಬ್ರಹ್ಮರಂಧ್ರ ಮುಖ್ಯವಾದ ಸ್ಥಾನಂಗಳಲ್ಲಿ ಧ್ಯಾನಿಸುವದೀಗ ಧ್ಯಾನಯೋಗ. ಆ ಲಿಂಗವನು ಭಾವ-ಕರಣ-ಮನ ಮುಖ್ಯವಾದ ಸರ್ವಾಂಗದಲ್ಲಿ ಧರಿಸುವದೀಗ

ಧಾರಣಾಯೋಗ. ಆ ಸತ್ಕ್ರಿಯಾಜ್ಞಾನಯೋಗದಿಂದ.... ಭಿನ್ನವಿಲ್ಲದೆ ಏಕಾರ್ಥವಾಗಿಹುದು ಸಮಾಧಿಯೋಗವು....ಈ ಎಂಟು ಇತರ ಮತದವರು ಮಾಡುವ ಯೋಗಂಗಳು. ಇತರರು ಮಾಡುವ ಈ ಕರ್ಮಕೌಶಲ್ಯದಲ್ಲಿ ಲಿಂಗವಿಲ್ಲ ನೋಡಾ.....ತಾನುತಾನಾಗಿ ವಿರಾಜಿಸುತಿರ್ಪುದೀಗ ಶಿವಯೋಗ ನೋಡಾ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

ಟಿಪ್ಪಣಿ— ಅಷ್ಟಾಂಗಯೋಗವನ್ನು ವಚನಕಾರರು ಯಾವ ರೀತಿ ಪರಿವರ್ತಿಸಿ ಆಚರಿಸುವರು ಮತ್ತು ಸಾಮಾನ್ಯ ಪಾತಂಜಲಯೋಗಕ್ಕೂ ವಚನಕಾರರ ಶಿವಯೋಗಕ್ಕೂ ಭೇದವೇನು ಇದು ಮೇಲಿನ ವಚನದಲ್ಲಿ ಸ್ಪಷ್ಟವಿದೆ.

೩೪೦. ಈಡಾ-ಪಿಂಗಳ-ಸುಷುಮ್ನ ನಾಡಿಗಳಲ್ಲಿ ಆತ್ಮನು ಸಂಚರಿಸಬಾರದೆಂಬ ಯೋಗಾಂಗದ ಅಣ್ಣಗಳು ನೀವು ಕೇಳಿರಯ್ಯ....ಸಾಕಾರದ ತಲೆಯಲ್ಲಿ ನಿರಾಕಾರದ ಅಮೃತವನುಂಡಿಹೆನೆಂಬುದು ಹುಸಿಯಲ್ಲವೆ? ಬಂಜೆ ಯಾವಿನಲ್ಲಿ ಕ್ಷೀರದ ಕೆಚ್ಚಲುಂಟೇ? .... ಆತ್ಮನ ಇರವು ಘಟದೊಳಗೆ ಗ್ರಹಿಸಿಪ್ಪ ಬಯಲಿನ ಇರವಿನಂತೆ, ರವಿಯೊಳಗೆ ಸೂಸುವ ಕಿರಣದಂತೆ.... ಕಾಯದ ಮಧ್ಯದಲ್ಲಿ ನಿಂದು ಓಂಕಾರಸ್ವರೂಪವನರಿಯದೆ ಕೆಟ್ಟರಲ್ಲ ಕರ್ಮಕಾಂಡಿಗಳು. ಸ್ಪಟಿಕದ ಶಿಲೆಯಲ್ಲಿ ನಿಂದ ವಾರಣದಂತೆ ನಿನ್ನ ನೀನೇ ತಿಳಿಯಾ. ನಿಃಕಳಂಕ ಮಲ್ಲಿಕಾರ್ಜುನ ಲಿಂಗದಲ್ಲಿ ಸರ್ವಾಂಗಲಿಂಗಭರಿತವಾದವಂಗಲ್ಲದೆ ಇಲ್ಲ ಲಿಂಗಾಂಗಯೋಗ.

ಟಿಪ್ಪಣಿ:— ಇದೇ ರೀತಿ, ಲಯಕ್ರಿಯಾಯೋಗ, ಹಠಯೋಗ, ಲಯಯೋಗ ಮುಂತಾದವುಗಳನ್ನು ವಚನಕಾರರು ಹೀಯಾಳಿಸಿರುವರು. ಧ್ಯೇಯವಸ್ತುವು ಪರಶಿವನಿರುವ ಶಿವಯೋಗವೆ ಶ್ರೇಷ್ಠವು ಎಂದು ಅವರು ಪ್ರತಿಪಾದಿಸಿರುವರು. ಆ ಶಿವಯೋಗದ ತತ್ವಗಳನ್ನು ಅವರು ಹೇಳಿರುವರು.

೩೪೧. ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ, ಎಂಬ ಷಡಾಧಾರ ಚಕ್ರಂಗಳಲ್ಲಿ ವರ್ಣದಳ ಅಕ್ಷರ ಅಧಿದೇವತೆಯಲ್ಲಿ ಕೂಡಿ ತೋರುವ ವಸ್ತು ಒಂದಲ್ಲದೆ ಹಲವುಂಟೆ? ಚಕ್ರಚಕ್ರದಲ್ಲಿ ಲೆಕ್ಕಕ್ಕೆ ಒಳಗಾಗಿ ನಾಮರೂಪಿಂಗೆ ಬಂದು ಸಿಕ್ಕಿದೆಯಲ್ಲಾ! ಯೋಗಿಗಳ ಮನದಲ್ಲಿ ಲಕ್ಷವಿಲ್ಲದ ನಿರ್ಲಕ್ಷಕ್ಕೆ ಬಂದ ಪರಿ ಏನು ಹೇಳಾ! ಕಾಣಬಾರದ ವಸ್ತುವ ಕಾಣಿಸಿ ಹಿಡಿದರು ಶರಣರು, ಭೇದಿಸಬಾರದ ವಸ್ತುವ ಭೇದಿಸಿ ಕಂಡರು,

ಸಾಧಿಸಬಾರದ ವಸ್ತುವ ಸಾಧಿಸಿ ಕಂಡರು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿಮ್ಮ ಶರಣರು.

೪೪೨. ಆಶೆ-ರೋಷ-ಹರುಷಾದಿಗಳೆಂಬ ಕರಣೇಂದ್ರಿಯಂಗಳ ಮುಟ್ಟಲೀಯದೆ ಆಚಾರ ಶಿವಾಚಾರವ ಮಾಡುವೆ. ಭಯಭಕ್ತಿಯಿಂದ ತೋರುವೆ. ಮನದಲ್ಲಿ ವಂಚನೆಯಿಲ್ಲದೆ ಭಾವಶುದ್ಧ ಪೂಜೆಯ ಮಾಡುವೆ. ಎನ್ನ ಪ್ರಾಣ ಶಕ್ತಿಯಿಂದ ಕೂಡುನೆ ಕೂಡಲ ಸಂಗಮ ದೇವರ.

೪೪೩. ಹರಿವ ಮನವಾಯುವನೊಂದು ಹುರಿಮಾಡಿ, ಮನವ ಸ್ಥಿರಗೊಳಿಸಿ, ಸಗುಣಧ್ಯಾನದಲ್ಲಿ ಮನವ ಸವಿದು, ನಿರ್ಗುಣದಲ್ಲಿ ನಿಂದು, ಆ ನಿರ್ಗುಣಧ್ಯಾನ ಬಲಿದು, ಸಗುಣನಿರ್ಗುಣದಲ್ಲಿ ಅಡಗಿ ಆ ನಿರ್ಗುಣವಾದ ನಿಜದಲ್ಲಿ ಮನೋಲಯವಾದುದೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಪರಮರಾಜಯೋಗ.

ಟಿಪ್ಪಣಿ:— ಸಂಯಮ ಮತ್ತು ಧ್ಯಾನ, ವಿಶೇಷವಾಗಿ ನಿರ್ಗುಣ ಧ್ಯಾನ ಇವು ಮೇಲಿನ ಎರಡು ವಚನಗಳಲ್ಲಿ ವರ್ಣಿಸಲ್ಪಟ್ಟಿವೆ.

೪೪೪. ಆಂತರಂಗದಲ್ಲಿ ಬೆಳಗುವ ಜ್ಯೋತಿ ಸರ್ವ ಜ್ಯೋತಿಗಳಿಗೆ ಪರಾಶ್ರಯವು ತಾನಾಗಿ ಒಳಹೊರಗೆ ತೆರಹಿಲ್ಲದೆ ವ್ಯಾಪಿಸಿ ಮನದ ನೆನಹಿನ ವಿಶ್ರಾಮಕ್ಕೆ ಸ್ಥಾನವಾದ ಜ್ಯೋತಿರ್ಲಿಂಗವ ನೆನೆದು ಸುಖಿಯಾದೆ, ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೪೪೫. ಪೂರ್ವದ್ವಾರವ ಬಂಧಿಸಿ, ಅಧೋದ್ವಾರವ ಬಲಿದು, ಊರ್ಧ್ವದ್ವಾರವ ತೆರೆದು, ಎವೆ ಹಳಚದೆ ಒಳಗೆ ನಿಮ್ಮ ನೋಡುತಿದ್ದೆನಯ್ಯಾ. ಬಂದುದ ಹೋದುದನರಿಯದೆ ನಿಮ್ಮ ನೋಡುತಿದ್ದೆನಯ್ಯಾ. ಮನ ನಿಂದುದು ನಿಮ್ಮಲ್ಲಿ. ಹೆರೆ ಹಿಂಗದ ಪರಮ ಸುಖ ದೊರೆಕೊಂಡಿತ್ತು. ಇನ್ನಂಜೆನಂಜೆ. ಜನನ ಮರಣವೆರಡೂ ಹೊರಗಾದವು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ನಿಜಸುಖ ಸಮನಿಸಿತ್ತಾಗಿ.

ಟಿಪ್ಪಣಿ:— ಉಡ್ಡಿಯಾನ ಬಂಧ ಎಂಬ ಬಂಧದ ಕಾಲಕ್ಕೆ ಮಾಡತಕ್ಕ ಪ್ರಕ್ರಿಯೆಯು ಇಲ್ಲಿ ಮೊದಲು ವರ್ಣಿಸಲ್ಪಟ್ಟಿದೆ. ಕುಂಭಕ ಮಾಡಿ ಅಪಾನವನ್ನು ಗುದದ ಆಕುಂಚನದಿಂದ ಮೇಲಕ್ಕೆಳೆದು, ಕುಂಡಲಿ ಶಕ್ತಿಯು

ಮೇಲಕ್ಕೇರುವ ದ್ವಾರವನ್ನು ತೆರೆಯುವುದೆ ಆ ಪ್ರಕ್ರಿಯೆಯು. ಆ ಸ್ಥಿತಿಯಲ್ಲಿ ಧ್ಯಾನಮಗ್ನನಾದ ಸಾಧಕನ ವರ್ಣನೆಯಿದು.

೪೪೬. ದೇಹವಾಸನೆ ಹರಿದು ಆತ್ಮಭವಬಂಧನದ ಕೀಲ ಮುರಿದು, ಪರಾತ್ಪರವಾದ ಪ್ರಾಣಲಿಂಗವ ಕೂಡುವುದಕ್ಕೆ ಆವುದು ಸಾಧನವೆಂದರೆ, ಎಲ್ಲ ಗಣಂಗಳು ತಿಳಿವಂತೆ ಹೇಳುವೆ ಕೇಳಿರಯ್ಯ. ಎಂಬತ್ತೆಂಟು ಆಸನಂಗಳೊಳಗೆ ಮುಖ್ಯವಾಗಿರ್ಪುದು ಶುದ್ಧಾಸನವು. ಆ ಶುದ್ಧಾಸನದ ವಿವರವೆಂತೆಂದೊಡೆ, ಗುದಗುಹ್ಯಮಧ್ಯಸ್ಥಾನವಾದ ಯೋನಿಮಂಡಲವೆಂಬ ದ್ವಾರ, ಆ ದ್ವಾರಕ್ಕೆ ಎಡದ ಹಿಮ್ಮಡವನ್ನಿಕ್ಕಿ, ಬಲಹಿಮ್ಮಡವ ಮೇಢ್ರಸ್ಥಾನದಲ್ಲಿರಿಸಿ, ಬೆನ್ನ ಎಲುವ ಸೋಂಕಿಸದೆ ನೆಟ್ಟನೇ ಕುಳ್ಳಿರ್ದು, ಉಭಯಲೋಚನವನೊಂದುಮಾಡಿ, ಉನ್ಮನಿಯ ಸ್ಥಾನದಲ್ಲಿರಿಸಿ, ತ್ವಕ್ಕು ನೇತ್ರ ಜಿಹ್ವೆ ಶ್ರೋತ್ರ ಪ್ರಾಣ ಹೃದಯವೆಂಬ ಆರುದ್ವಾರಗಳನ್ನು ಆರಂಗುಲದಿಂದೊತ್ತಲು ಮೂಲಾಧಾರದಲ್ಲಿರ್ದ ಮೂಲಾಗ್ನಿ ಪಟುತರವಾಗಿ ಪವನನೊಡಗೂಡಿ, ಮನ ಸ್ಥಿರಗೊಂಡು, ಊರ್ಧ್ವಕ್ಕೆ ಹೋಗಿ, ಉಭಯ ಲಿಂಗದೊಳಗಿರ್ದ ಮಹಾಲಿಂಗದೊಡಗೂಡಿ, ಅನಂತಕೋಟಿ ಸೂರ್ಯಾಗ್ನಿಚಂದ್ರಪ್ರಕಾಶವನೊಳಕೊಂಡು, ಅಲ್ಲಿ ಸೂಕ್ಷ್ಮವಾಗಿ, ಅಂಗುಲ ಪ್ರಮಾಣವಾಗಿ ಶುದ್ಧತಾರೆಯಂತೆ ಕಂಗಳ ನೋಟಕ್ಕೆ ಕರತಲಾಮಲಕವಾಗಿ ಕಾಣಸುತ್ತಿಪ್ಪ ಪ್ರಾಣಲಿಂಗದಲ್ಲಿ ಪ್ರಾಣಸಂಭೋಗ ಮಾಡಬಲ್ಲಾತನೇ ಪ್ರಾಣಲಿಂಗಸಂಬಂಧಿ, ಆತನೇ ಪ್ರಳಯಾದಿರಹಿತನಯ್ಯ, ಅಖಂಡೇಶ್ವರಾ.

ಟಿಪ್ಪಣಿ:— ಸಿದ್ಧಾಸನದಲ್ಲಿ ಕುಳಿತು ಷಣ್ಮುಖೀ ಮುದ್ರೆ ಮಾಡುವಾಗ ಸಾಧಿಸಿದ ಧ್ಯಾನದ ವಿವರವಿದು.

೪೪೭. ಅರದೆರೆದೆವೆ ದೃಷ್ಟಿಯ ನಾಸಿಕಾಗ್ರದಲ್ಲಿರಿಸಿ ನೋಡುತ್ತ ಹೃದಯಕಮಲದಲ್ಲಿದ್ದ ಅಚಲಲಿಂಗದೊಳಗೆ ಜ್ಞಾನಲೋಚನದಿಂ ನೋಡುತ್ತ, ತನುಮನೇಂದ್ರಿಯ ತರಹರವಾಗಿ ಮನ ನಿವಾತಜ್ಯೋತಿಯಂತೆ ನಿಂತು, ನಿಜವ ಕೂಡಬಲ್ಲಾತನೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಸಹಜಯೋಗಿ.

ವಿವರಣೆ

ಮೇಲಿನ ವಚನಗಳಲ್ಲಿ ಧ್ಯಾನಯೋಗದ ಮುಖ್ಯ ತತ್ವಗಳೆಲ್ಲ ಒಂದಿಲ್ಲೊಂದು ಬಗೆಯಿಂದ ಬಂದಿರುವವು. ವಚನಕಾರರು ತಮ್ಮ ಸಮುನ್ವಯ ದೃಷ್ಟಿಗನುಸರಿಸಿ, ಕ್ರಿಯಾದಿ ರಹಿತ ಧ್ಯಾನಕ್ಕೆ ಮಹತ್ವವನ್ನು ಕೊಡುವು

ದಿಲ್ಲ. ಜ್ಞಾನ ಭಕ್ತಿ ಕ್ರಿಯೆಗಳು ಪರಸ್ಪರ ಪೋಷಕವಾಗಬೇಕೆಂದು ಅವರ ಮತವಿದ್ದಂತೆ, ಧ್ಯಾನಯೋಗದಲ್ಲಿಯೂ ಭಕ್ತಿ, ಕ್ರಿಯೆ ಮುಂತಾದವುಗಳು ವಿಶ್ರವಾಗಬೇಕು, ಎಂದು ಅವರ ಮತವು. ಲಿಂಗರಹಿತ ಧ್ಯಾನವನ್ನು ಇದಕ್ಕಾಗಿಯೇ ಅವರು ಹೀಯಾಳಿಸುವರು. ಇದೇ ಪ್ರಕಾರ ಕರ್ಮವೂ ಅವಶ್ಯವೆಂದು ಅವರು ಹೇಳುವರು. ಜ್ಞಾನವಂತೂ ಅವಶ್ಯವೇ ಇರುವದೆಂಬದನ್ನು ಬೇರೆ ಹೇಳಬೇಕಾಗಿಲ್ಲ.

ವಚನಗಳು

೩೮೬. ಕುರೂಪಿ ಸುರೂಪಿಯ ನೆನೆದಡೆ ಸುರೂಪಿಯಪ್ಪನೆ? ಆ ಸುರೂಪಿ ಕುರೂಪಿಯ ನೆನೆದಡೆ ಕುರೂಪಿಯಪ್ಪನೆ? ಧನವುಳ್ಳವರ ನೆನೆದರೆ ದಾರಿದ್ರ್ಯ ಹೋಗುವುದೇ? ಪುರಾತನರ ನೆನೆದು ಕೃತಾರ್ಥರಾದೆವೆಂಬರು. ತಮ್ಮಲ್ಲಿ ಭಕ್ತಿನಿಷ್ಠೆ ಇಲ್ಲದವರ ಕಂಡಡೆ ಮೆಚ್ಚನು ಗುಹೇಶ್ವರ.

೩೮೭. ಕಾಯದ ಸುಳುಹನ್ನಕ್ಕರ ಕರ್ಮಪೂಜೆ ಬೇಕೆಂಬರು. ಜೀವನ ಸಂಚಾರವುಳ್ಳನಕ್ಕರ ಜ್ಞಾನವನರಿಯಬೇಕೆಂಬರು. ಜ್ಞಾನ ಧ್ಯಾನಿಸಿ ಕಾಂಬಲ್ಲಿ ಕಾಯದ ಜ್ಞಾನದಿಂದ ಮುಕ್ತಿಯೋ? ಜೀವಜ್ಞಾನದಿಂದ ಮುಕ್ತಿಯೋ? ಧ್ಯಾನಜ್ಞಾನದಿಂದ ಮುಕ್ತಿಯೋ? ಧ್ಯಾನಿಸಿ ಕಾಂಬ ಕುರುಹ ಎನಗೊಂದುಬಾರೆ ತೋರಾ, ಕೈಯುಳಿಗತ್ತಿ ಅಡಿಗೊಂಟ ಕಡೆಯಾಗಬೇಡ, ಅರಿ ನಿಜಾತ್ಮರಾಮನ.

ಟಿಪ್ಪಣಿ:— ಬರಿಯ ಧ್ಯಾನದಿಂದ, ಕ್ರಿಯಾರಹಿತ ಧ್ಯಾನದಿಂದ ನಿಜದ ಜ್ಞಾನವಾಗದು ಎಂಬುದೇ ತಾತ್ಪರ್ಯವು.

---

೧೫. ಸಾಧನಮಾರ್ಗ-ಜ್ಞಾನ ಭಕ್ತಿ-ಕ್ರಿ-ಧ್ಯಾನಗಳ ಸಂಬಂಧ

ವಿವರಣೆ

ಪರಮಾತ್ಮನಿಗೆ ಸರ್ವಸ್ವವನ್ನರ್ಪಿಸಿ ಪರಮಪದವಿಯನ್ನು ಪ್ರಾಪ್ತ ಮಾಡಿಕೊಳ್ಳಲೆತ್ನಿಸುವುದೆ ವಚನಕಾರರು ಉಪದೇಶಿಸಿದ ಧ್ಯಾನಮಾರ್ಗದ ಸಾರವು. ಅವರ ಧ್ಯಾನಕ್ಕೆ ಸರ್ವಾರ್ಪಣ ಭಾವದಿಂದ ಪ್ರಾರಂಭವು. ಇದರ ಅರ್ಥವೇನಂದರೆ, ಸಾಧಕನು ತನ್ನ ತನುಪ್ರಾಣಭಾವಗಳಿಂದ, ತನ್ನ ಕ್ರಿಯಾಶಕ್ತಿ, ಭಾವಶಕ್ತಿ, ಧ್ಯಾನಶಕ್ತಿ, ಮತ್ತು ಬುದ್ಧಿಶಕ್ತಿಯಿಂದ ಪರಮಾತ್ಮ ಪ್ರಾಪ್ತಿಗಾಗಿ ಒಮ್ಮೆಲೆ ಹೆಣಗಾಲಾರಂಭಿಸುವನು; ಈ ಮೂಲಕ ಸಾಧಕನು ತನ್ನ ಪ್ರತಿಯೊಂದು ವ್ಯಾಪಾರದಿಂದ ಪ್ರತಿಕ್ಷಣಕ್ಕೆ ತನ್ನ ಇಷ್ಟ ಸಾಧ್ಯದ ಕಡೆಗೆ ಸಾಗುವನು. ಇನ್ನು ಈ ಮಾರ್ಗದ ವಿವರವು ಜನ್ಯಾಗಿ ತಿಳಿಯಬೇಕೆಂದು ಸಾಧಕನ ಶಕ್ತಿಗಳಲ್ಲಿ ಮುಖ್ಯವಾಗಿ ಬುದ್ಧಿ, ಭಾವ, ಕ್ರಿ, ಮತ್ತು ಧ್ಯಾನ ಎಂಬ ನಾಲ್ಕು ವರ್ಗಮಾಡಿ ಆಯಾಶಕ್ತಿಗಳ ಮುಖಾಂತರ ಸಾಧಕನು ಹೇಗೆ ಸಾಗುವನು, ಇದನ್ನು ಹೋದ ನಾಲ್ಕು ಪ್ರಕರಣಗಳಲ್ಲಿ ಹೇಳಿದ್ದಾಯಿತು. ಹಾಗೆ ಮಾಡುವಾಗ ಅವು ಪ್ರತ್ಯೇಕ ಅಥವಾ ಸ್ವತಂತ್ರ ಮಾರ್ಗಗಳಲ್ಲವೆಂದು ಅಲ್ಲಲ್ಲಿ ನಾವು ಎಚ್ಚರಕೊಟ್ಟಿರುವೆವು. ವ್ಯಕ್ತಿಭೇದದಿಂದ ಬೇರೆಬೇರೆ ಶಕ್ತಿಗಳ ವಿಕಾಸವು ಬೇರೆಬೇರೆ ಪ್ರಮಾಣದಲ್ಲಿ ಆಗುವದು ಸ್ವಾಭಾವಿಕವು. ಆಯಾ ವ್ಯಕ್ತಿಗಳು ತಮ್ಮ ವಿಕಸಿತ ಶಕ್ತಿಗಳನ್ನೆ ಉಪಯೋಗಿಸಿ ಸಾಧನಮಾರ್ಗದಲ್ಲಿ ಮುಂದುಡಿ ಇಡುವದು ಸಹಜವು. ಆ ದೃಷ್ಟಿಯಿಂದ ಹೋದ ನಾಲ್ಕು ಪ್ರಕರಣಗಳಲ್ಲಿ ಕ್ರಮವಾಗಿ ಬುದ್ಧಿ, ಭಾವ, ಕ್ರಿ, ಮತ್ತು ಧ್ಯಾನಶಕ್ತಿಗಳ ವಿವರವನ್ನು ವಚನಕಾರರ ಭಾಷೆಯಲ್ಲಿಯೆ ಮಾಡಿದ್ದೇವೆ. ಇನ್ನು ಈ ಶಕ್ತಿಗಳ ಪರಸ್ಪರ ಸಂಬಂಧವು ಹೇಗೆ ಇರಬೇಕು ಎಂಬ ಬಗ್ಗೆ ವಚನಕಾರರ ಮತವೇನಿರುವದು, ಇದನ್ನು ನೋಡುವದು ಅವಶ್ಯವು. ಅಂದರೆ ಸಮಸ್ತಯಮಾರ್ಗದ, ಅಥವಾ ಸರ್ವಾರ್ಪಣ ಮಾರ್ಗದ, ಅಥವಾ ಶರಣಮಾರ್ಗದ ಯಥಾರ್ಥ ಕಲ್ಪನೆಯು ಬರುವದು.

ಸಾಮಾನ್ಯ ಮನುಷ್ಯನು ಕೂಡ ತನ್ನ ಜೀವನವನ್ನು ಸಾಗಿಸಬೇಕಾದರೆ ಅವನಿಗೆ ಈ ನಾಲ್ಕೂ ಶಕ್ತಿಗಳು ಬೇಕು. ಕೇವಲ ಕ್ರಿಯೆ, ಕೇವಲ ಭಾವ, ಕೇವಲ ಬುದ್ಧಿ, ಕೇವಲ ಧ್ಯಾನ ಇವು ಸ್ವತಂತ್ರವಾಗಿ ಇಲ್ಲವೆ ಪ್ರತ್ಯೇಕವಾಗಿ ಜೀವನವ್ಯಾಪಾರಗಳನ್ನು ನಡೆಯಿಸಲಿಕ್ಕೆ ಸಾಕಾಗಲಾರವು. ಪ್ರತಿಯೊಂದು ವ್ಯಕ್ತಿಯಲ್ಲಿ ಇವುಗಳ ಪ್ರಮಾಣವು ಹೆಚ್ಚು ಕಡಿಮೆ ಇರಬಹುದು. ಆದರೆ ಈ ನಾಲ್ಕು ಶಕ್ತಿಗಳ ಅಸ್ತಿತ್ವವು ಅವಶ್ಯವು. ಕೇವಲ ಕ್ರಿ ಶಕ್ತಿಯು ಮನುಷ್ಯನನ್ನು ಒಂದು ಯಂತ್ರವನ್ನಾಗಿ ಮಾಡಿಬಿಡಬಹುದು; ಬರಿಯ ಭಾವನೆಯು ಮನುಷ್ಯನನ್ನು ಅನಿಯಂತ್ರಿತ ಉದ್ರೇಕಗಳ ರಂಗಸ್ಥಳವನ್ನಾಗಿ ಮಾಡಬಹುದು; ಕೇವಲ ಬುದ್ಧಿಯು ಮನುಷ್ಯನನ್ನು ನೀರಸ, ಕ್ರಿಯಾಶೂನ್ಯ ವಿಚಾರಗಳ ಗೊಂಚಲವನ್ನಾಗಿ ಮಾಡಿಬಿಡಬಹುದು; ಬರಿಯ ಧ್ಯಾನವು ಮನುಷ್ಯನನ್ನು ದಂಗುಬಡಿದಂತೆ ಮಾಡಿಬಿಡಬಹುದು. ಆದರೆ ಇವು ನಾಲ್ಕೂ ಯೋಗ್ಯ ಪ್ರಮಾಣದಲ್ಲಿದ್ದರೆ ಪರಸ್ಪರ ಸಹಾಯಕವಾಗಿ ಅವುಗಳ ಸುಂದರ ಸಂಯೋಗದಿಂದ ಮನುಷ್ಯನು ವಿಕಾಸಗೊಂಡು ಉತ್ಸಾಹಪೂರ್ಣನಾಗಿ ಪ್ರಗತಿಪಥದಿಂದ ಸಾಗುವನು.

ಈ ನಾಲ್ಕೂ ಶಕ್ತಿಗಳ ಸಂಬಂಧವನ್ನು ಇಲ್ಲಿ ಹೇಳುವುದಾದರೆ ಈ ಕೆಳಗಿನಂತೆ ಹೇಳಬಹುದು. ನಿಜಜ್ಞಾನದ ಹೊರತು ನಿಜಭಕ್ತಿ ಅಥವಾ ನಿಷ್ಕಾಮ ಕ್ರಿಯೆಯು ಸಾಧ್ಯವಿಲ್ಲ. ನಿಜಭಕ್ತಿ ಇಲ್ಲದೆ ಜ್ಞಾನವು ರಸಪೂರ್ಣವೂ ರಮ್ಯವೂ ಆಗಲರಿಯದು, ಮತ್ತು ಕ್ರಿಯೆಯು ಪರಮಾತ್ಮಾರ್ಪಣವಾಗಲಾರದು. ಕ್ರಿ ಇಲ್ಲದೆ ಜ್ಞಾನಭಕ್ತಿಗಳ ಪರೀಕ್ಷೆಯಾಗದು, ಹಾಗೂ ಅವು ಸರ್ವಜೀವನವ್ಯಾಪಿಯಾಗಲಾರವು. ಧ್ಯಾನಶಕ್ತಿ ಇಲ್ಲದೆ ಇವಾವುದಕ್ಕೂ ಸ್ಥಿರತೆಯು ದೊರೆಯದು, ಇವುಗಳಲ್ಲದೆ ಧ್ಯಾನವು ಅರ್ಥಹೀನವಾಗುವದು ಇದನ್ನೆ ಇನ್ನೊಂದು ರೀತಿಯಿಂದ ಹೇಳಬಹುದು ಜ್ಞಾನಶೂನ್ಯ ಭಾವವು ಅಂಧವು, ಭಾವಶೂನ್ಯ ಜ್ಞಾನವು ನೀರಸವು. ಕ್ರಿಯಾಶೂನ್ಯ ಜ್ಞಾನಭಾವಗಳು ವ್ಯಕ್ತವಾಗಲರಿಯವು, ಮತ್ತು ಪರೀಕ್ಷೆಗೆ ಬಾರವು. ಜ್ಞಾನವು ಭಾವ-ಕ್ರಿಗಳಿಗೆ ಮಾರ್ಗದರ್ಶಕವು, ಭಾವವು ಜ್ಞಾನ ಕ್ರಿಗಳಿಗೆ ಜೀವನದಾಯಿಯು, ರಸದಾಯಿಯು. ಕ್ರಿಯು ಜ್ಞಾನಭಾವಗಳಿಗೆ ವ್ಯಕ್ತ ರೂಪಗೊಟ್ಟು ಅವುಗಳನ್ನು ವ್ಯವಹಾರಣೆಯಲ್ಲಿ ತರುವದು. ಧ್ಯಾನವು ಎಲ್ಲವುಗಳಿಗೆ ನೆಲೆಯಾಗಿರಲಿಕ್ಕೆ ಸಾಮರ್ಥ್ಯವನ್ನುಂಟುಮಾಡುವದು. ಸಾಧನಶರೀರಕ್ಕೆ ಜ್ಞಾನವೆ ಜ್ಯೋತಿರೂಪವಾದ ಕಣ್ಣು, ಭಾವವೆ ಪ್ರಾಣದಾಯಕವಾದ ಹೃದಯ, ಕ್ರಿಯೆಯೆ ಕರ್ತೃತ್ವಶೀಲವಾದ ಕೈ,

ಮತ್ತು ಧ್ಯಾನವೆ ಸರ್ವಾಧಾರವಾದ ಪಾದ. ಬುದ್ಧಿ, ಭಾವ, ಕ್ರಿ, ಧ್ಯಾನಗಳಲ್ಲಿಯ ಈ ಬಗೆಯ ಸಂಬಂಧವನ್ನು ವಚನಕಾರರು ಬಗೆಬಗೆಯಿಂದ ಅನೇಕ ಕಡೆಗೆ ಹೇಳಿರುವರು. ಈ ಎಲ್ಲ ಶಕ್ತಿಗಳ ಯೋಗ್ಯ ಸಮನ್ವಯವೆ ಸಮನ್ವಯಮಾರ್ಗದ ತಿರುಳು.

ವಚನಗಳು

೩೫೦. ಅಗ್ಗವಣಿ, ಪತ್ರ, ಪುಷ್ಪ, ಧೂಪ, ದೀಪ, ನಿವಾಳಿಯಲ್ಲಿ ಪೂಜಿಸಿ ಪೂಜಿಸಿ ಬಳಲುತ್ತಿದ್ದಾರೆ, ಏನೆಂದರಿಯರು ಎಂತೆಂದರಿಯರು! ಜನ ಮರುಳೊ ಜಾತ್ರೆ ಮರುಳೊ, ಎಂಬಂತೆ ಎಲ್ಲರೂ ಪೂಜಿಸಿ ಏನನೂ ಕಾಣದೆ ಲಯಕ್ಕೊಳಗಾಗಿ ಹೋದರು ಗುಹೇಶ್ವರಾ.

ಟಿಪ್ಪಣಿ:— ಬರಿಯ ಬಾಹ್ಯ ಕ್ರಿಯು ವ್ಯರ್ಥ ಎಂದರ್ಥ.

೩೫೧. ಹೊಟ್ಟೆಯ ಮೇಲೆ ಕಟ್ಟೋಗರದ ಪೊಟ್ಟೆಯ ಕಟ್ಟದರೇನು? ಹಸಿವು ಹೋಹುದೆ? ಅಂಗದ ಮೇಲೆ ಲಿಂಗ ಸ್ಥಾಯತವಾದರೇನು? ಇಷ್ಟಕಲ್ಲು ಮೆಳೆಯ ಮೇಲೆ ಸಿಕ್ಕಿದಡೆ ಆ ಕಲ್ಲು ಲಿಂಗವೆ? ಆ ಮೆಳೆ ಭಕ್ತನೆ? ಇಷ್ಟಾತ ಗುರುವೆ? ಇಂತಪ್ಪರ ಕಂಡಡೆ, ನಾನು ನಾಚುವೆನಯ್ಯ ಗುಹೇಶ್ವರಾ.

೩೫೨. ಹೊರಗನೆ ಕೊಯ್ದು ಹೊರಗನೆ ಪೂಜಿಸಿ ಹೊರಗಾಗಿ ಹೋಯಿತ್ತು ಜಗವೆಲ್ಲ. ಅದನರಿಯದಂತೆ ಲಿಂಗವ ಪೂಜಿಸಿ ಹೋದರೆ ಕೈ ಲಿಂಗದಲ್ಲಿ ಸಿಲ್ಕಿತಲ್ಲಾ! ಮನ ದೃಢದಿಂದ ನಿಮ್ಮ ನೆನೆದಿಹೆನೆಂದರೆ ತನು ಸಂದಣಿಸಿತ್ತು ಗುಹೇಶ್ವರಾ.

ಟಿಪ್ಪಣಿ:— ಜಗವನ್ನು ಮರೆತು ಲಿಂಗಪೂಜೆಯನ್ನು ಮಾಡಿದರೆ ಭಕ್ತನು ಅದರಲ್ಲಿ ತನ್ಮಯನಾಗಬಲ್ಲನು.

೩೫೩. ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ. ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ. ಮಾಡುವ ನೀಡುವ ನಿಜಗುಣವುಳ್ಳವರ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.

ವಿವರಣೆ

ಶುದ್ಧಭಾವ, ಉತ್ಕಟಭಕ್ತಿ, ನಿಜಜ್ಞಾನ, ಏಕಾಗ್ರಚಿತ್ತ ಇವಾವೂ ಇಲ್ಲದೆ ಕೇವಲ ಕಾಯಿಕ ಕ್ರಿಯೆಗಳು ವ್ಯರ್ಥ ಎಂದು ವಚನಕಾರರ

ವ.ತವು. ಅರ್ಥಾತ್ ಜ್ಞಾನಭಕ್ತಿಶೂನ್ಯ ಕ್ರಿಯೆಯು ಬರಿಯ ಯಾಂತ್ರಿಕ ಕ್ರಿಯೆಯೆನಿಸುವದು. ಅದಕ್ಕೆ ಜಡಕ್ರಿಯೆ ಎನ್ನಬಹುದು. ಪೂಜಾದಿ ಕರ್ಮಗಳನ್ನು ಮಾಡಬಾರದು, ಎಂದು ಇದರ ಅರ್ಥವಲ್ಲ. ನಿರಾಕಾರ ಪರಮಾತ್ಮನ, ಕೇವಲ ಚಿದ್ರೂಪ ಪರಮಾತ್ಮನ ಪೂರ್ಣ ಜ್ಞಾನಕ್ಕಾಗಿ ಬಾಹ್ಯಪೂಜಾದಿಗಳು ಮೊದಲು ಅವಶ್ಯವೆಂಬೀ ವಚನಕಾರರ ಮತವು.

ವಚನಗಳು

೩೫೪. ಉದ್ದವನೇರುವುದಕ್ಕೆ ಗದ್ದುಗೆ ಇಲ್ಲದೆ ಎಯ್ದಬಾರದು. ಚಿದ್ರೂಪವನರಿವುದಕ್ಕೆ ಅರ್ಚನೆ ಪೂಜನೆ ನಿತ್ಯನೇಮವಿಲ್ಲದೆ ಕಾಣಬಾರದು. ಅದನ್ನು ಸತ್ಯದಿಂದ ಮಾಡಿ ಅಸತ್ಯವ ಮರೆದಡೆ ಇದೇ ಸತ್ಯ, ನಾಸ್ತಿನಾಥಾ.

೩೫೫. ಉಂಬರೆ ಬಂದು ಬಾಯ ಮರೆದೆನೆಂದು ಮೊರೆ ಇಡುತಿಪ್ಪ ಅರಿಕೆಹೀನನ ತೆರನಂತಾಯಿತ್ತು. ಅರಿಕೆಯನು ಅರಿ ಎಂದು ಕುರುಹ ಕೊಟ್ಟಿರೆ ಆ ಕುರುಹು ಮರೆದು ಅರಿದೆನೆಂಬ ಕುರುಬನ ನೋಡಾ ಜಾಂಬೇಶ್ವರಾ.

ಟಪ್ಪಣಿ:— ವಾಙ್ಮಯಕ್ಕಗೋಚರವಾದ ಪರಮಾತ್ಮನನ್ನು ಕಾಣುವುದಕ್ಕಾಗಿ ಮೂರ್ತಿ ಮುಂತಾದ ಪ್ರತೀಕಗಳಿರುವವು. ಅವುಗಳ ತಾಂತ್ರಿಕ ಅಥವಾ ಯಾಂತ್ರಿಕ ಉಪಯೋಗಮಾಡಿ ಸಾಧಕನು ತಾನು ಕೃತಾರ್ಥನೆಂದು ತಿಳಿದರೆ ಅವನಂಥ ಮೂರ್ಖನು ಅವನೇ! ಜ್ಞಾನ, ಭಕ್ತಿ, ಏಕಾಗ್ರಚಿತ್ತ ಇವುಗಳಿಂದೊಡಗೂಡಿ ಅವನು ಪ್ರತೀಕಗಳನ್ನುಪಯೋಗಿಸಿದರೆ ಅವನಿಗೆ ಸಿದ್ಧಿಯಾಗಬಲ್ಲದು.

೩೫೬. ಶಿವನ ನೆನೆದಡೆ ಭವ ಹರಿವುದೆಂಬ ವಿನರನೇಡಿಗಳ ಮಾತು ಕೇಳಲಾಗದು. ಅದೇನು ಕಾರಣವೆಂದಡೆ, ಜ್ಯೋತಿಯ ನೆನೆದಡೆ ಕತ್ತಲೆ ಹರಿವುದೆ? ಮಿಷ್ಟಾನ್ನವ ನೆನೆದರೆ ಹೊಟ್ಟೆ ತುಂಬುವದೆ? ರಂಭೆಯ ನೆನೆದರೆ ಕಾಮದ ಕಳವಳ ಹಿಂಗುವದೆ? ನೆನೆದಡಾಗದು. ನಿರ್ಧರಿಸಿ, ದ್ವಯಕುಳ ವಳಿದು ಬೆರೆಯಬಲ್ಲಡೆ ಸದ್ಗುರು ಸಿದ್ಧಲಿಂಗೇಶ್ವರವು ತಾನೆ.

ಟಪ್ಪಣಿ:—ದ್ವಯಕುಳ-ದ್ವಂದ್ವಭಾವ

೩೫೭. ಕಣ್ಣಮುಚ್ಚಿ ಕನ್ನಡಿಯ ತೋರುವಂತೆ ಇರುಳು ಹಗಲಿನ ನಿದ್ರೆ ಸಾಲದೆ? ಬೆರಳನೆಣಿಸಿ ಪರಮಾತ್ಮನ ಹಡೆವುದು ಚೋದ್ಯವಲ್ಲವೆ ಹೇಳಾ? ಮೂಗ ಮುಚ್ಚಿ ಮುಕ್ತಿಯನರಸುವರ ನಾನೇನೆಂಬೆ ಕೂಡಲಸಂಗಮದೇವಾ?

೩೫೮. ದೇವರ ನೆನೆದು ಮುಕ್ತರಾದೆವೆಂಬ ಯುಕ್ತಿಶೂನ್ಯರ ಮಾತು ಕೇಳಲಾಗದು. ಅದೇನು ಕಾರಣವೆಂದರೆ, ದೇವರ ನೆನೆದರೆ ದೇವರುಂಟೇ ದೂರ? ದೂರದಲ್ಲಿದ್ದವರ ನೆನೆವರಲ್ಲದೆ ಸಮೀಪದಲ್ಲಿದ್ದವರನಾರೂ ನೆನೆವರಿಲ್ಲ. ಇದನರಿದು, ನಿನ್ನೊಳಡಗಿ, ನಾ ನಿನ್ನ ನೆನೆಯಲಿಲ್ಲ, ಮಹಾಲಿಂಗ ಗಜೇಶ್ವರಾ.

ಟಪ್ಪಣಿ:— ನೆನಪು, ಸ್ಮರಣೆ, ಜಪ, ಧ್ಯಾನ, ಇವುಗಳೊಡನೆ ಜ್ಞಾನ, ಭಕ್ತಿ, ಸತ್ಕ್ರಿಯೆ ಇವಿಲ್ಲದಿದ್ದರೆ ಆ ಸಾಧನೆಯು ಹಾಸ್ಯಾಸ್ಪದವಾಗುವದು, ಎಂದು ವಚನಕಾರರ ಮತವು. ಧ್ಯಾನದೊಡನೆ ಇವೆಲ್ಲ ಇದ್ದರೆ ನಿಜವಾದ ಸಮರಸ ಐಕ್ಯದ ಅನುಭವವು ಒದಬಲ್ಲದು. ಭಕ್ತಿಕ್ರಿಯೆಗಳ ಸಂಬಂಧವಾದರೂ ಇದೇ ಪ್ರಕಾರದ್ದಿರುವದು.

೩೫೯. ಬಣ್ಣವಿಲ್ಲದ ಚಿನ್ನ ನಾಮಕ್ಕರ್ಹವಾದ ಪರಿ ಇನ್ನೆಂತಯ್ಯ? ಹೂವೊಡೆದು ವಾಸನೆ ಮೂಡಿದ ಠಾವಿನಲ್ಲಿ ವಾಸನೆ ನಿಂದುದಿಲ್ಲವೆ? ಆಯ್ಯ, ಕಿಯಾಶುದ್ಧವಾದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವು ಭಾವಶುದ್ಧವಾಗಿಪ್ಪನು.

ಟಪ್ಪಣಿ:— ಕ್ರಿಯಾಶುದ್ಧಿಯಿಂದ ಭಾವಶುದ್ಧಿ ಎಂದರ್ಥ.

೩೬೦. ಭಕ್ತಿಯ ಕೃಷಿ ಶುದ್ಧವಾಗಿಯಲ್ಲದೆ ಸಸಿ ಶುದ್ಧವಲ್ಲ. ಅರ್ಚನೆ ಅರ್ಪಿತ ಮೂರ್ತಿಧ್ಯಾನದಿಂದಲ್ಲದೆ ಶುದ್ಧವಿಲ್ಲ. ಇದು ನಿಶ್ಚಯ, ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವನರಿವುದಕ್ಕೆ.

೩೬೧. ಕ್ರಿಶುದ್ಧವಾದವಂಗೆ ಭಾವಶುದ್ಧ, ಭಾವಶುದ್ಧವಾದವಂಗೆ ಆತ್ಮಶುದ್ಧ, ಆತ್ಮಶುದ್ಧವಾದವಂಗೆ ಅರಿವು ಕರಿಗೊಂಡು ನಿಂದ ನಿಜವೇ ಪ್ರಾಣಲಿಂಗ ಸಂಬಂಧ, ನಿಃಕಳಂಕ ಮಲ್ಲಿಕಾರ್ಜುನಾ.

೩೬೨. ಮಾತಿನ ಮಾಲೆಯಲ್ಲಪ್ಪುದೇ ಭಕ್ತಿ? ಮಾಡಿ ಸವೆಯದನ್ನಕ್ಕರ, ಮನ ಸವೆಯದನ್ನಕ್ಕರ, ಧನ ಸವೆಯದನ್ನಕ್ಕರ, ಅಪ್ಪುದೇ ಭಕ್ತಿ? ಕೂಡಲ ಸಂಗಮದೇವನೊಲಿದರೆ, ಸರಸವಾಡುವನು. ಸೈರಿಸದನ್ನಕ್ಕ ಅಪ್ಪುದೇ ಭಕ್ತಿ?

೩೬೩. ಕ್ರಿಯೆ ಇಲ್ಲದ ಭಕ್ತ ಮನುಜ, ಕ್ರಿಯೆ ಇಲ್ಲದ ಜಂಗಮ ರಾಕ್ಷಸ, ಕ್ರಿಯೆ ಇಲ್ಲದ ಪ್ರಸಾದಿ ಯವನ, ಕ್ರಿಯೆ ಇಲ್ಲದ ಪ್ರಾಣಲಿಂಗಿ ಭವಿ. ಕ್ರಿಯೆ ಇಲ್ಲದ ಶರಣ ಅಜ್ಞಾನಿ, ಕ್ರಿಯೆ ಇಲ್ಲದ ಲಿಂಗೈಕ್ಯ ಜನನಕ್ಕೊಳಗು ನೋಡಾ, ಕೂಡಲ ಚನ್ನಸಂಗಮದೇವಾ.

ವಿವರಣೆ

ಒಂಗಾರಕ್ಕೆ ಸುಂದರ ವರ್ಣವಿಲ್ಲದಿದ್ದರೆ ಅದು ಆ ಹೆಸರನ್ನೆ ಹೊಂದ ಲರಿಯದು. ಹಾಗೆ ಶುದ್ಧ ಕ್ರಿಯೆ ಇಲ್ಲದಿದ್ದರೆ ಭಾವಶುದ್ಧವಾಗಿ ಸಾಧ ಕನು ಭಕ್ತನೆನಿಸನು. ಕ್ರಿ ಶುದ್ಧವಾಗದಿದ್ದರೆ ಭಾವಶುದ್ಧಿಯಾಗಲರಿಯದು. ಭಾವಶುದ್ಧಿಯಿಂದ ಮುಂದೆ ಆತ್ಮಶುದ್ಧಿಯಾಗಿ ಮುಂದೆ ನಿಜ ಜ್ಞಾನವು ಹೊಳೆಯುವದು. ಪರಮಾತ್ಮನ ಕಾರ್ಯ ಮಾಡುವುದರಲ್ಲಿ ನಮ್ಮ ತನು ಮನಧನಗಳನ್ನು ಸವೆಯಿಸಲಿಕ್ಕೆ ಬೇಕು. ಅಂದರೆ ನಿಜ ಭಕ್ತಿಯು ಸ್ಥಿರ ಗೊಳ್ಳುವದು. ಕ್ರಿಯೆ ಇಲ್ಲದ ಭಕ್ತ ಮುಂತಾದವರು ಎಂದೂ ಪೂರ್ಣ ಮುಕ್ತ ಸ್ಥಿತಿಯನ್ನು ಪಡೆಯರು. ಕ್ರಿಗೂ ಭಕ್ತಿ, ಜ್ಞಾನ, ಧ್ಯಾನ ಇವು ಗಳಿಗೂ ಇಷ್ಟು ನಿಕಟ ಸಂಬಂಧವಿರುವದು.

ಇದೇ ಮಾತು ಭಕ್ತಿ ಜ್ಞಾನಗಳ ಸಂಬಂಧದಿಂದ ನಿಜವಿರುವದು. ಅವು ಒಂದೇ ಗಿಡದ ಬೇರು ಹಣ್ಣು ಇದ್ದಂತೆ.

ವಚನಗಳು

೩೬೪. ಭಕ್ತಿ ಎಂಬುದು ಬೇರು, ವಿರಕ್ತಿ ಎಂಬುದು ಮರ, ಫಲವೆಂ ಬುದು ಜ್ಞಾನ, ಪಕ್ವಕ್ಕೆ ಬಂದಿತ್ತೆಂಬುದು ಅವಧಿ ಜ್ಞಾನ, ತೊಟ್ಟುಬಿದ್ದಲ್ಲಿ ಪರಮಜ್ಞಾನ, ಸವಿದಲ್ಲಿ ಅಂತರ್ಯಜ್ಞಾನ, ಸುಖತನ್ಮಯವಾದಲ್ಲಿ ದಿವ್ಯ ಜ್ಞಾನ, ದಿವ್ಯ ತೇಜಸ್ಸು ಹಿಂಗಿದಲ್ಲಿ ಪರಿಪೂರ್ಣ. ಅದು ಮಹದೊಡಲೆಂಬು ದಕ್ಕೆ ಎಡೆ ಇಲ್ಲ, ಜನ್ನಬಸವಣ್ಣಪ್ರಿಯ ಭೋಗ ಮಲ್ಲಿಕಾರ್ಜುನಲಿಂಗವು ಅಪ್ರಮಾಣವಾದ ಕಾರಣ.

ಟಿಪ್ಪಣಿ:— ಭಕ್ತಿ ಜ್ಞಾನಗಳ ಸಂಬಂಧವು ಅತ್ಯಂತ ನಿಕಟವಿದ್ದಂತೆ ಜ್ಞಾನಕ್ರಿಯೆಗಳ ಸಂಬಂಧವೂ ಇರುವದು, ಎಂಬ ಬಗ್ಗೆ ಮುಂದೆ ವಚನ ಗಳಿರುವವು.

೩೬೫. ಅನುವನರಿವನ್ನಕ್ಕ ಅರ್ಚನೆ, ಪುಣ್ಯವನರಿವನ್ನಕ್ಕ ಪೂಜೆ. ಶರೀರವುಳ್ಳನ್ನಕ್ಕ ಸುಖದುಃಖ ಸಂತೋಷಿಸಬೇಕು. ತೆಪ್ಪದಲ್ಲಿ ನಿಂದು ಹೊಳೆಯ ದಾಂಟುವನಂತೆ ಕ್ರಿ ಶುದ್ಧವಾದಲ್ಲಿ ಜ್ಞಾನದ ಗೊತ್ತು, ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

ಟಿಪ್ಪಣಿ:— ಕ್ರಿಯೆಯು ಜ್ಞಾನಸಾಧನವು ಎಂದರ್ಥ.

೩೬೬. ಅಂಗವನ್ನರಿವನ್ನಕ್ಕ ಶಿವಲಿಂಗಪೂಜೆಯ ಮಾಡಲೇ ಬೇಕು. ಆತ್ಮನ ಕ್ಷುಧೆಯುಳ್ಳನ್ನಕ್ಕ ಬಂದ ಪದಾರ್ಥವ ಲಿಂಗಾರ್ಪಿತವ ಮಾಡಲೇ ಬೇಕು. ಇದು ಅರಿವಿನ ಬಿತ್ತು, ಜ್ಞಾನದ ಗೊತ್ತು, ಸರ್ವಮಯದ ಯುಕ್ತಿ, ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವನರಿವ ಶಕ್ತಿ.

೩೬೭. ಮಾಡುವ ಮಾಟದಿಂದಲೇ ಬೇರೊಂದನರಿಯಬೇಕು. ಅರು ವಿಂಗೆ ನೆಮ್ಮುಗೆ ಒಡಗೂಡಬೇಕು. ಅರುವಿಂಗೆ ನೆಮ್ಮುಗೆ ಒಡಗೂಡಿದ ಬಳಿಕ ಬಯಲಭ್ರಮೆಯ ಕಳೆದು, ನಮ್ಮ ಗುಹೇಶ್ವರಲಿಂಗದಲ್ಲಿ ನಿಜಪದವನ್ನೈದು ವುದು ಮಾರಯ್ಯ.

ಟಿಪ್ಪಣಿ:— ಶರೀರಾದಿಗಳು ಇರುವವರೆಗೆ, ಅವುಗಳ ಎಚ್ಚರವು ನಮಗೆ ಇರುವವರೆಗೆ ಕರ್ಮವು ಅವಶ್ಯವು, ಅಪರಿಹಾರ್ಯವು. ಆ ಕರ್ಮದ ಮುಖಾಂತರವೆ ನಾವು ಜ್ಞಾನವನ್ನು ಪಡೆಯಬೇಕು, ಎಂದು ಮೇಲಿನ ವಚನಗಳು ಹೇಳುವವು. ಜ್ಞಾನವಾದ ಬಳಿಕ ಕೂಡ ಕ್ರಿಯೆ ಯನ್ನು ಬಿಡಕೂಡದು. ಆಜನ್ಮ ಅದು ನಡೆದೇ ಇರಬೇಕು.

೩೬೮. ಜ್ಞಾನದಲ್ಲಿ ಆರಿದರೇನಯ್ಯ, ಸತ್ಕ್ರಿಯಾಚಾರಿಯಾಗದನ್ನಕ್ಕರ? ನೆನೆದ ಮಾತ್ರದಲ್ಲಿ ಕಾಂಬುದೆ ಕಾರ್ಯದಲ್ಲಿಲ್ಲದೆ? ಕುರುಡ ಕಾಣ ಪಥವ. ಹೆಳವ ನಡೆಯಲರಿಯ. ಒಂದಿಲ್ಲದಿದ್ದರೆ ಒಂದಾಗದು. ಜ್ಞಾನವಿಲ್ಲದ ಕ್ರಿ ಜಡ, ಕ್ರಿ ಇಲ್ಲದ ಜ್ಞಾನ ಭ್ರಾಂತಿ. ಇದುಕಾರಣ, ಸಿದ್ಧಸೋಮನಾಥನಲ್ಲಿ ಎರಡೂ ಬೇಕು.

೩೬೯. ಅಗ್ನಿ ಸುಡಲಲ್ಲದೆ ಸುಳಿಯಲರಿಯದು. ವಾಯು ಸುಳಿವು ದಲ್ಲದೆ ಸುಡಲರಿಯದು. ಆ ಅಗ್ನಿ ವಾಯುವ ಕೂಡಿಯಲ್ಲದೆ ಅಡಿ ಇಡಲರಿ ಯದು. ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನಭೇದ ರಾಮನಾಥಾ.

೩೭೦. ಕ್ರಿಯೆಯೇ ಅಧಿಕವೆಂಬ ದೊಡ್ಡ ಸಿದ್ಧಾಂತಿಗಳ ಮಾತು ಸೊಗಸದಯ್ಯ ಎನಗೆ. ಅದೇನು ಕಾರಣವೆಂದರೆ, ಆವುದಾನೊಂದು ಪಕ್ಷಿ ಉಭಯ ರೆಕ್ಕೆಗಳಿಂದ ಗಗನಕ್ಕೆ ಹಾರುವಂತೆ ಅಂತರಂಗದಲ್ಲಿ ಸಮ್ಯಕ್‌ಜ್ಞಾನ, ಬಹಿರಂಗದಲ್ಲಿ ಶಿವಸತ್ಕ್ರಿಯಾ ಸಮ್ಯಕ್‌ಜ್ಞಾನಸಂಪನ್ನರಾದ ಶರಣರ ತೋರಿ ಬದುಕಿಸಯ್ಯ ಎನ್ನ, ಅಖಂಡೇಶ್ವರಾ.

೩೭೧. ಕ್ರಿಯೆ ಇಲ್ಲದ ಜ್ಞಾನ ಪ್ರಯೋಜನವಿಲ್ಲವಯ್ಯಾ. ಅದು

ಹೇಗೆಂದಡೆ, ದೇಹವಿಲ್ಲದ ಪ್ರಾಣಕ್ಕೆ ಆಶ್ರಯವುಂಟೇ ಅಯ್ಯಾ? ಆ ಪ್ರಾಣವಿಲ್ಲದೆ ಕಾಯಕ್ಕೆ ಚೈತನ್ಯವುಂಟೇ ಅಯ್ಯಾ? ಅದು ಕ್ರಿಯೆ ಇಲ್ಲದೆ ಜ್ಞಾನಕ್ಕೆ ಆಶ್ರಯವಿಲ್ಲ. ಜ್ಞಾನವಿಲ್ಲದೆ ಕ್ರಿಯೆಗೆ ಆಶ್ರಯವಿಲ್ಲ. ಕ್ರಿಯಾಜ್ಞಾನ ಪ್ರಕಾಶವಿಲ್ಲದೆ ಲಿಂಗಕ್ಕೆ ಆಶ್ರಯವಿಲ್ಲ. ಇದುಕಾರಣ ಜ್ಞಾನಕ್ರಿಯೋಪಚಾರಂಗಳಿರಬೇಕೆಂದೆನಯ್ಯ, ಮಹಾಲಿಂಗ ಗುರುಸಿದ್ಧೇಶ್ವರಪ್ರಭುವೇ.

೩೭೨. ಕ್ರಿಯೆ ಮರೆದಲ್ಲಿ ಅರಿವು ಹೀನವಾಗಿಪ್ಪುದು. ಅರಿವು ಮರೆದಲ್ಲಿ ಜ್ಞಾನವು ಹೀನವಾಗಿಪ್ಪುದು. ಜ್ಞಾನವ ಮರೆದಲ್ಲಿ ಬೆಳಗಿನ ಕಳೆ ಹೋಯಿತ್ತು. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಅವರಿಗೆ ಮರೆಯಾಗಿ ತೊಲಗಿತ್ತು.

೩೭೩. ಸೀತವುಳ್ಳನ್ನಕ್ಕ ಉಷ್ಣವ ಪ್ರತಿಪಾದಿಸಬೇಕು, ಉಷ್ಣವುಳ್ಳನ್ನಕ್ಕ ಸೀತವ ಪ್ರತಿಪಾದಿಸಬೇಕು. ದಿವದಲ್ಲಿ ಎದ್ದು ರಾತ್ರಿಯಲ್ಲಿ ಒರಗುವನ್ನಕ್ಕ ಅದ್ವೈತ ಅತಕ್ಕ ನೋಡಾ. ಇದುಕಾರಣ ಕ್ರಿಯೆಯ ಮರೆಯಲಿಲ್ಲ. ಅರಿವು ತೊನ್ನವೆಂದು ಬಿಡಲಿಲ್ಲ. ಅದು ಶಿಲೆಯ ಮರೆಯ ಪಾವಕ, ತಿಲದೊಳಗಣ ತೈಲ. ಅವರ ಒಲವರಿದಲ್ಲಿ ಕುಲವ ಕಾಣಬೇಕು, ಬಸವಣ್ಣಪ್ರಿಯ ನಾಗರೇಶ್ವರ ಲಿಂಗವನರಿವುದಕ್ಕೆ.

ಟಿಪ್ಪಣಿ:— ಜ್ಞಾನ ಕ್ರಿಗಳ ಸಮನ್ವಯವನ್ನು ಇಲ್ಲಿ ಹೇಳಿದೆ.

೩೭೪. ಅರಿವನರಿದೆನೆಂದು ಕ್ರಿಯೆಯ ಬಿಡಬಾರದು. ಮಧುರಕ್ಕೆ ಮಧುರ ಒದಗಲಾಗಿ ಸವಿಗೆ ಕೊರತೆಯುಂಟೇ? ದ್ರವ್ಯಕ್ಕೆ ದ್ರವ್ಯ ಕೂಡಲಾಗಿ ಬಡತನ ಉಂಟೇ? ನೀ ಮಾಡುವ ಮಾಟ ಶಿವಪೂಜೆಯ ನೋಟ ಭಾವವಿರಬೇಕು. ಅದು ಕಲಿದೇವರ ದೇವಯ್ಯನ ಕೂಟ ಚಂದಯ್ಯ.

೩೭೫. ವೇದಾಂತವ ನೋಡಿ ಜ್ಞಾನ ಸೂರೆಮಾಡುವ ಜಂಗಮ ಕ್ರಿಯಾಹೀನನಾದರೆ ಆಗದು ಸಮರಸ ಆತನಲ್ಲಿ. ಅದೇನು ಕಾರಣವೆಂದಡೆ ನುಡಿದಂತೆ ನಡೆಯನು. ಅಲ್ಲಿ ಕೂಡಲ ಚನ್ನಸಂಗಮದೇವ ನಿಲ್ಲಲಾರನು, ಸಿದ್ಧರಾಮಯ್ಯ.

೩೭೬. ಅಂತರಂಗದಲ್ಲಿ ಅರಿವಾದಡೇನಯ್ಯ ಬಹಿರಂಗದಲ್ಲಿ ಕ್ರಿ ಇಲ್ಲದನ್ನಕ್ಕರ? ದೇಹವಿಲ್ಲದಿರ್ದಡೆ ಪ್ರಾಣಕ್ಕಾಶ್ರಯವುಂಟೆ? ಕನ್ನಡಿ ಇಲ್ಲದಿರ್ದಡೆ ತನ್ನ ಮುಖವ ಕಾಣಬಹುದೆ? ಸಾಕಾರ ನಿರಾಕಾರ ಏಕೋದೇವ ನಮ್ಮ ಕೂಡಲ ಸಂಗಮದೇವ.

ವಿವರಣೆ

ಬರಿಯ ಬೌದ್ಧಿಕ ಜ್ಞಾನವು ಜೊಳ್ಳು. ಅದರೊಡನೆ ಆ ಜ್ಞಾನದಂತೆ ಕ್ರಿಯೆ ಬೇಕು, ಸತ್ಕ್ರಿಯೆ ಬೇಕು. ಜ್ಞಾನ ಮತ್ತು ಕ್ರಿ ಇವು ಸಾಧಕನಿಗೆ ಎರಡು ರೆಕ್ಕೆಗಳಿದ್ದಂತೆ. ಆತ್ಮಾನಂದವೆಂಬ ಗಗನದಲ್ಲಿ ಹಾರಲಿಕ್ಕೆ ಅವೆರಡೂ ಅವಶ್ಯ. ಜ್ಞಾನಕ್ಕೆ ಕ್ರಿಯೆಯು ಆಶ್ರಯವು. ಕ್ರಿಯೆ ಇಲ್ಲದೆ ಜ್ಞಾನವು ವ್ಯಕ್ತವಾಗಲರಿಯದು. ಜ್ಞಾನಿಯು ಕ್ರಿಯೆ ಬಿಡುವದು ತಪ್ಪು. ಯಾಕಂದರೆ, ಅದರಿಂದ ಜ್ಞಾನವು ಹೀನವಾಗುವದು, ಸಮರಸಭಾವವು ಅಳವಡದು. ಅಂತರಂಗ–ಬಹಿರಂಗಗಳಲ್ಲಿ ಏಕರೂಪವಾದ ಪರಮಾತ್ಮನನ್ನು ಜ್ಞಾನ ಕ್ರಿಗಳಿಂದ ಸಾಕ್ಷಾತ್ಕರಿಸುವುದೇ ಎಲ್ಲಕ್ಕೂ ಶ್ರೇಷ್ಠಮಾರ್ಗವು. ತತ್ವತಃ ಜ್ಞಾನಕ್ರಿಗಳೆರಡೂ ಒಂದೇ ಇರುವವು. ಒಂದು ಬಿಟ್ಟು ಒಂದು ಹಿಡಿಯುವೆನು ಅನ್ನುವದು ಆ ಮನುಷ್ಯನ ಅಜ್ಞಾನವನ್ನೆ ತೋರುವದು.

ವಚನಗಳು

೩೭೭. ಅಂತರಂಗದ ಅರಿವು ಬಹಿರಂಗದ ಕ್ರಿಯೆ, ಈ ಉಭಯ ಸಂಪುಟ ಒಂದಾದ ಶರಣಂಗೆ ಹಿಂಗಿತ್ತು ತನುಸೂತಕ, ಹಿಂಗಿತ್ತು ಮನಸೂತಕ. ಕೂಡಲ ಚನ್ನಸಂಗಯ್ಯನಲ್ಲಿ ಸಂಗವಾದದ್ದು ಸರ್ವೇಂದ್ರಿಯ.

೩೭೮. ಕ್ರಿಯೆಯೇ ಜ್ಞಾನ, ಜ್ಞಾನವೇ ಕ್ರಿಯೆ, ಜ್ಞಾನವೆಂದರೆ ತಿಳಿಯುವುದು, ಕ್ರಿಯೆಯೆಂದರೆ ತಿಳಿದಂತೆ ಮಾಡುವದು. ಪರಸ್ತ್ರೀ ಭೋಗಿಸಬಾರದೆಂಬುದೇ ಜ್ಞಾನ, ಅದರಂತೆ ಆಚರಿಸುವುದೇ ಕ್ರಿಯೆ. ಅಂತು ಆಚರಿಸದಿದ್ದರೆ ಅದೇ ಅಜ್ಞಾನ ನೋಡಾ, ಕೂಡಲ ಚೆನ್ನಸಂಗಮದೇವಾ.

ಟಿಪ್ಪಣಿ— ಕ್ರಿಜ್ಞಾನಗಳ ತಾತ್ವಿಕ ಏಕರೂಪತೆಯನ್ನು ಹೇಳಿ ಜ್ಞಾನಯುಕ್ತ ನಿಷ್ಕಾಮಕರ್ಮವು ಬಂಧಕವಿರುವದಿಲ್ಲವೆಂಬ ಮಾತನ್ನು ವಚನಕಾರರು ಹೇಳುವರು.

೩೭೯. ಅಹುದಹುದು, ಭಕ್ತಿಭಾವದ ಭಜನೆ ಎಂತೆಂತಿಹುದೊ? ಅಂತರಂಗದ ಅರಿವಿಂಗೆ ಆಚಾರವೇ ಕಾಯ. ಆಚಾರಕಾಯವಿಲ್ಲದಡೆ ಅರಿವಿಂಗೆ ಆಶ್ರಯವಿಲ್ಲ. ಅರಿವು ಆಚಾರದಲ್ಲಿ ಸಮವೇದಿಸಿದ ಲಿಂಗೈಕ್ಯನ ಕ್ರಿಯಾಬದ್ಧನೆಂದು ನುಡಿದರೆ ಪಂಚಮಹಾಪಾತಕ. ನಿನ್ನ ಅರಿವಿಂಗೆ ಅಚ್ಚಾಗಿ, ಆಚಾರಕ್ಕೆ ಆಳಾಗಿ, ನಿಮ್ಮ ಗುಹೇಶ್ವರನು ನಿನ್ನ ಕೈವಶಕ್ಕೆ ಒಳಗಾದನು. ನಿನ್ನ ಸುಖಸಮಾಧಿಯ ತೋರಬಾರಾ ಸಿದ್ಧರಾಮಯ್ಯ.

ಟಪ್ಪಣಿ:— ಹೀಗೆ ಮುಕ್ತಕರ್ಮ ಮಾಡುವವನಲ್ಲಿ ಜ್ಞಾನ, ಭಕ್ತಿ, ಕ್ರಿ, ಧ್ಯಾನ ಇವೆಲ್ಲವುಗಳ ಸರಿಸಮಾನವಾದ ಸಮನ್ವಯವು ಕಂಡುಬರುವದು. ಸರ್ವಾರ್ಪಣ ಮಾಡಿ ಸಾಧನವನ್ನು ಪ್ರಾರಂಭಿಸಿದ ಸಾಧಕನಲ್ಲಿ ಇವೆಲ್ಲ ಯೋಗ್ಯ ಪ್ರಮಾಣದಲ್ಲಿ ಮತ್ತು ಅವನ ಶಕ್ತಿಯ ಮೇರೆಗೆ ಕಂಡುಬರುವವು.

೩೮೦. ಕಾಯ ಸೊನೆಯನರಿತಲ್ಲದೆ ಹಣ್ಣ ಸೊನೆರಸ ಚಿನ್ಹದೋರದು. ಕಾಯದ ಕರ್ಮವ ಮಾಡಿ, ಜೀವಜ್ಞಾನವನರಿದು, ತ್ರಿವಿಧ ಭಾವಶುದ್ಧಿಯಾದಲ್ಲದೆ ಮೇಲೆ ಕಾಣಲಿಲ್ಲ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವಾ.

೩೮೧. ಬೀಜದೊಳಗಿಹ ವೃಕ್ಷಫಲವ ಸವಿಯಬಹುದೇ ? ಮಳೆವನಿಯೊಳಿಪ್ಪ ಹುರಮಂಜಿ ಮುತ್ತುಗಳಂ ಸರಗೊಳಿಸಿ ಕೊರಳೊಳು ಧರಿಸಬಹುದೇ? ಹಾಲೊಳಗಿಪ್ಪ ತುಪ್ಪವು ಅರಸಿದರೆ ಸಿಕ್ಕುವುದೆ? ಕಬ್ಬಿನೊಳಗಿಪ್ಪ ಬೆಲ್ಲವು ಕಣ್ಣಿಗೆ ಕಾಣಿಸುವುದೆ? ತನ್ನೊಳಗಿಪ್ಪ ಶಿವತತ್ವವು ನೆನೆದಾಕ್ಷಣವೆ ಅನುಭವಕ್ಕೆ ಬರುವುದೆ? ಭಾವಿಸಿ, ತಿಳಿದು, ಮಥಿಸಿ, ಪ್ರಯೋಗಾಂತರದಿಂ ಪ್ರಸನ್ನತ್ವಮಂ ಮಾಡಿಕೊಂಡು, ತದನುಭವಸುಖದೊಳೋಲಾಡುವದು ಅತಿ ಚತುರನಾದ ಶಿವಶರಣಂಗಲ್ಲದೆ, ಉಳಿದರ್ಗುಂಟೇ, ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ?

೩೮೨. ಕಾಯದಿಂದ ಕರ್ಮವ ಕಂಡು, ಭಾವದಿಂದ ಲಿಂಗವ ಕಂಡು, ಲಿಂಗದಿಂದ ಸ್ವಾನುಭವವಾಗಿ ಅಂಗದ ಸಂಗಕ್ಕೆ ಹೊರಗಾಯಿತ್ತು ಕದಂಬ ಲಿಂಗವನರಿಯಲಾಗಿ.

ಟಪ್ಪಣಿ:— ಒಟ್ಟಿಗೆ ಪೂರ್ಣಯೋಗವು ಸಿದ್ಧವಾಗಬೇಕಾದರೆ ಸಮನ್ವಯದಿಂದ ಸರ್ವಶಕ್ತಿಗಳ ವಿಕಾಸವೂ ಅವುಗಳ ನಿಷ್ಕಾಮ ಅರ್ಪಣವೂ ಅವಶ್ಯವೆಂದು ವಚನಕಾರರ ಪ್ರತಿಪಾದನವಿರುವದು.

---

೧೬. ಸಾಧಕನಿಗೆ ಅವಶ್ಯವಿದ್ದ ಗುಣಶೀಲ-ಕರ್ಮಗಳು

ವಿವರಣೆ

ಸಾಧಕನು ತನ್ನ ಸರ್ವಸ್ವವನ್ನು ಪರಮಾತ್ಮನಿಗೆ ಅರ್ಪಿಸಿ ಸಾಧನವನ್ನು ಪ್ರಾರಂಭಿಸಬೇಕು. ತನ್ನಲ್ಲಿರುವ ಕ್ರಿಯಾಶಕ್ತಿ, ಭಾವಶಕ್ತಿ, ಬುದ್ಧಿಶಕ್ತಿ, ಮತ್ತು ಧ್ಯಾನಶಕ್ತಿ ಇವುಗಳ ವಿಕಾಸವು ಎಷ್ಟೆಷ್ಟು ಮತ್ತು ಯಾವ ಪ್ರಮಾಣದಲ್ಲಿ ಆಗಿರುವದೊ ಆಯಾ ಪ್ರಮಾಣದಲ್ಲಿ ಅವನು ತನ್ನ ಯಾವ ಶಕ್ತಿಯನ್ನೂ ದುರ್ಲಕ್ಷಿಸದೆ ಎಲ್ಲ ಶಕ್ತಿಗಳನ್ನು ಪರಮಾತ್ಮ ಚರಣದಲ್ಲಿ ನಿವೇದಿಸಬೇಕು, ಎಂಬುದೇ ವಚನಕಾರರ ಮತವು.

ಇನ್ನು ಈ ರೀತಿ ಸಾಧಕನು ಸಾಗುವಾಗ ಅವನಿಗೆ ಅನೇಕ ಸದ್ಗುಣಗಳ, ಶೀಲಗಳ, ಸತ್ಕರ್ಮಗಳ ಅವಶ್ಯಕತೆ ಇರುವದು. ಅವುಗಳಲ್ಲಿ ವಚನಕಾರರು ಯಾವ ಗುಣಶೀಲ ಕರ್ಮಗಳಿಗೆ ವಿಶೇಷ ಮಹತ್ವವನ್ನು ಕೊಟ್ಟಿರುವರೊ ಅವುಗಳ ಬಗ್ಗೆ ಇದ್ದ ವಚನಗಳನ್ನು ಈ ಕೆಳಗೆ ಕೊಟ್ಟಿದ್ದೇವೆ.

ಈ ಗುಣಗಳಲ್ಲಿ ಮುಖ್ಯವಾಗಿ ಶ್ರದ್ಧೆ, ನಿಷ್ಠೆ, ಚಿತ್ತಶುದ್ಧಿ, ಗುರುಕಾರುಣ್ಯ, ನಿರಹಂಕಾರಿತ್ವ, ಸದಾಚಾರ, ಸತ್ಯ, ಅಹಿಂಸೆ, ಮುಂತಾದವುಗಳು ಇರುವವು. ಸಾಧಕನು ತನ್ನ ಸಮಾಜದೊಡನೆ ಯಾವ ರೀತಿ ನಡೆದುಕೊಳ್ಳತಕ್ಕದ್ದು, ಇದು ಅತ್ಯಂತ ಮಹತ್ವದ ವಿಷಯವು. ಯಾಕಂದರೆ, ಈ ಆಚರಣೆಯು ಸಾಧಕನನ್ನು ತನ್ನ ಇಷ್ಟ ಧ್ಯೇಯದ ಕಡೆಗೆ ಒಯ್ಯುವಂತಹದೇ ಇರಬೇಕು.

ಸಾಧಕನ ಅಂತರಂಗದ ಗುಣ ಮತ್ತು ಬಹಿರಾಚಾರ ಇವುಗಳಲ್ಲಿ ಚನ್ನಾಗಿ ಮೇಳವಿರಬೇಕು. ಅವೆರಡೂ ಅವನನ್ನು ಅತ್ಯಂತ ಉಚ್ಚಸ್ಥಿತಿಗೆ ಒಯ್ಯಲಿಕ್ಕೆ ಸಾಧನೀಭೂತವಾಗುವಂತಹವಿರಬೇಕು. ನಿಜವಾಗಿ ನೋಡಿದರೆ, ಅಂತರಂಗ ಬಹಿರಂಗವೆಂಬವು ಒಂದೇ ವ್ಯಕ್ತಿಯ ವ್ಯಕ್ತಾವ್ಯಕ್ತ

ಸ್ವರೂಪಗಳು. ಗುಣವೆಂದರೆ ಅವ್ಯಕ್ತ ಕರ್ಮಶಕ್ತಿ, ಕರ್ಮವೆಂದರೆ ವ್ಯಕ್ತ ಗುಣ. ಇವೆರಡನ್ನೂ ಪರಮಾತ್ಮಚರಣಕ್ಕೆ ನಿವೇದಿಸಿ ಸಾಧಕನು ತನ್ನ ಧ್ಯೇಯವನ್ನು ಪಡೆಯಬೇಕು. ಇಲ್ಲದಿದ್ದರೆ ವಿಫ್ಯಾಚಾರವೆನಿಸುವದು.

ಅಂತಃಶುದ್ಧಿಯು ಎಲ್ಲ ಸಾಧನಕ್ಕೂ ಆಧಾರವು. ಬೀಜವು ಉತ್ತಮ ವಿದ್ದರೂ ಭೂಮಿ ಸ್ವಚ್ಛವಿಲ್ಲದಿದ್ದರೆ ಬೆಳೆ ಚನ್ನಾಗಿ ಬರದು. ಅದರಂತೆ, ಮನಸು ಶುದ್ಧವಿಲ್ಲದಿದ್ದರೆ ಯಾವ ಸಾಧನವೂ ಸಫಲವಾಗಲಾರದು.

ವಚನಗಳು

೩೮೩. ತನು ಬತ್ತಲೆ ಇದ್ದರೇನಯ್ಯ, ಮನ ಶುಚಿಯಾಗದನ್ನಕ್ಕರ? ಮುಂಡೆ ಮೋಳಾವದೇನು, ಛಾವ ಬಯಲಾಗದನ್ನಕ್ಕರ? ಭಸ್ಮವ ಹೂಸಿದ ದೇನು, ಕರಣಾದಿ ಗುಣಂಗಳನ್ನೆತ್ತಿ ಮೆಟ್ಟಿ ಸುಡದನ್ನಕ್ಕರ? ಇಂತು ಆಶೆಯ ವೇಷದ ಛಾಷೆಗೆ ಗುಹೇಶ್ವರಸಾಕ್ಷಿಯಾಗಿ ಛೀ ಎಂಬೆನು ಕಾಣಾ ಸಂಗನಬಸವಣ್ಣಾ.

೩೮೪. ಅಂತರಂಗಶುದ್ಧವಿಲ್ಲದವರೊಳಗು ಅತ್ತಿಯ ಹಣ್ಣಿನಂತೆ ಕ್ಷುದ್ರ ಬಿಡದು ನೋಡಯ್ಯ. ಅಂತರಂಗ ಶುದ್ಧವುಳ್ಳವರೊಳಗೆ ಬಾಳೆಯ ಹಣ್ಣಿನಂತೆ ಸುಗುಣ ತೋರುವದು ನೋಡಯ್ಯ. ಇದುಕಾರಣ, ಅಂತರಂಗ ಶುದ್ಧವಿಲ್ಲ ದವರ ಸಂಗವಲ್ಲಿ ಇರಬಾರದು ಶರಣರು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೩೮೫. ಕೆಲಕ್ಕೆ ಶುದ್ಧನಾದೆನಲ್ಲದೆ, ಮನಕ್ಕೆ ಶುದ್ಧನಾಗೆನಯ್ಯ. ಕೈ ಮುಟ್ಟಿ ಪೂಜಿಸುವಡೆ, ಎನ್ನ ಕೈ ಶುದ್ಧವಿಲ್ಲವಯ್ಯ. ಮನಮುಟ್ಟಿ ಪೂಜಿಸು ವಡೆ, ಎನ್ನ ಮನಶುದ್ಧವಿಲ್ಲವಯ್ಯ. ಛಾವ ಶುದ್ಧವಾದಡೆ ಕೂಡಲ ಸಂಗಮ ದೇವನು ಇತ್ತ ಬಾ ಎಂದು ಎತ್ತಿಕೊಳ್ಳನೇಕಯ್ಯ?

೩೮೬. ಒಳಗೆ ತೊಳೆಯಲರಿಯದೆ ಹೊರಗೆ ತೊಳೆದು ಕುಡಿವುತ್ತಿದ್ದ ರಯ್ಯಾ! ಪಾದೋದಕ ಪ್ರಸಾದವನರಿಯದೆ ಬಂದ ಬಟ್ಟೆಯಲ್ಲಿ ಮುಳುಗು ತ್ತಿದ್ದಾರೆ, ಗುಹೇಶ್ವರಾ.

ವಿವರಣೆ

ಬಾಹ್ಯಶುದ್ಧಿ, ಹೊರಗಣ ಮಡಿಮೈಲಿಗೆ, ಕಣ್ಣಿಗೆ ಕಾಣುವ ಶುಚಿ ಮುಂತಾದವುಗಳಿಗಿಂತ ಅಂತಃಶುದ್ಧಿಯು, ಮನಸಿನ ನಿರ್ಮಲತೆಯು ಶ್ರೇಷ್ಠ ವಾದುದು ಮತ್ತು ಪರಮಾರ್ಥದಲ್ಲಿ ಅದೇ ಅವಶ್ಯವು.

ಶ್ರದ್ಧೆ ಎಂದರೆ ನಂಬಿಗೆ–ವಿಶ್ವಾಸ, ಇದೇ ಸತ್ಯ ಎಂಬ ನಿಶ್ಚಿತ, ಸ್ಥಿರ ಛಾವ. ನಿರ್ಮಲ ಮನಸ್ಸಿನಲ್ಲಿ ಅಹಂಕಾರ, ವಿಷಯವಾಸನೆ, ಮೋಹ ಮುಂತಾದವುಗಳಿಂದ ರಹಿತವಾದ ಮನಸಿನಲ್ಲಿ, ಪರಮಾತ್ಮನ ಬಗ್ಗೆ ಶ್ರದ್ಧೆಯು ಒಡಮೂಡಿತೆಂದರೆ, ಸಾಧಕನು ಅರ್ಧ ದಾರಿಯನ್ನು ನಡೆದು ಹೋದಂತೆಯೇ ಸೈ.

ವಚನಗಳು

೩೮೭. ನಂಬಿ ಕರೆದಡೆ 'ಓ' ಎಂಬ ಶಿವನು. ನಂಬದೇ ಕರೆದಡೆ 'ಓ' ಎಂಬನೇ ಶಿವನು? ನಂಬಲರಿಯರು, ನಚ್ಚಲರಿಯರು, ಡಂಭಿನ ಭಕ್ತರು. ನಂಬದೆ, ನಚ್ಚದೆ ಬರಿದೆ ಕರೆದಡೆ ಶಿವ ಮೌನದಲ್ಲಿಪ್ಪ, ಕೂಡಲ ಸಂಗಮದೇವಾ.

೩೮೮. ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋದೆನೆಂದರೆ, ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು, ಇವೆಲ್ಲಕ್ಕಂಜದಿದ್ದರೆ ಭಕ್ತಿಕಂಪಿತ ನಮ್ಮ ಕೂಡಲ ಸಂಗಮದೇವ.

ಟಿಪ್ಪಣಿ:— ಪರಮಾತ್ಮನೇ ಸರ್ವಸ್ವ ಎಂಬ ನಂಬಿಗೆ ಬೇಕು. ಬೇಕಾದಂಥ ಪ್ರಸಂಗ ಬಂದರೂ ಆ ನಂಬಿಗೆ ಅಲ್ಲಾಡಬಾರದು, ಅಂದರೆ ಇಷ್ಟವು ಸಾಧ್ಯವಾಗುವದು- ಶ್ರದ್ಧೆಯಷ್ಟೇ ನಿಷ್ಠೆಯು ಅಂದರೆ ಕ್ರಿಯೆ ಯಲ್ಲಿ ಸ್ಥಿರತೆಯು ಅವಶ್ಯವು. ಕೈಕೊಂಡ ಮಾರ್ಗದಿಂದ ನಿಶ್ಚಯದಿಂದ, ದೃಢವಾಗಿ ಬಿಟ್ಟುಬಿಡದೆ ಸಾಗಬೇಕು.

೩೮೯. ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿರ್ದಡೇನು? ಅದು ಪಟ್ಟಣ ವೆಂದೆನಿಸುವದು. ನಿಷ್ಠೆ ಇಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಅದು ನಟ್ಟಡವಿ ಕಾಣಾ, ರಾಮನಾಥಾ.

೩೯೦. ಛಲವಿರಬೇಕು ಭಕ್ತಿಯ ಮಾಡುವಲ್ಲಿ. ಹಿಡಿದು ಬಿಡೆನೆಂಬ ಛಲವಿರಬೇಕು ನಿತ್ಯನೇಮದಲ್ಲಿ. ಹಿಡಿದು ಬಿಡೆನೆಂಬ ಛಲವಿರಬೇಕು, ನಮ್ಮ ಅಖಂಡೇಶ್ವರ ಲಿಂಗವ ಕೂಡಿ ಅಗಲಬಾರದೆಂಬ ನೈಷ್ಠೆಯಲ್ಲಿ.

ಟಿಪ್ಪಣಿ — ತನ್ನ ಶ್ರದ್ಧೆಗನುಸರಿಸಿ ಹಿಡಿದ ವ್ರತನೇಮಗಳು ಮಹತ್ವ ವುಳ್ಳವುಗಳು ಯಾಕಂದರೆ, ಅವು ನಮ್ಮ ಶ್ರದ್ಧೆಯನ್ನು ಪರೀಕ್ಷಿಸಿ ಅವು

ಗಳನ್ನು ದೃಢಪಡಿಸುವವು. ಯಾವದೊಂದು ಆಚಾರವನ್ನು ತಪ್ಪದೆ ಮಾಡುವುದೆ ನೇಮ ಅಥವಾ ವ್ರತವೆನಿಸುವದು.

೪೯೧. ವ್ರತವೆಂಬುದು ನಾಯಕರತ್ನ, ವ್ರತವೆಂಬುದು ಸುಪ್ರಾಣಿಯ ಮುತ್ತು. ವ್ರತವೆಂಬುದು ಜೀವದ ಕಳೆ. ವ್ರತವೆಂಬುದು ಸುಯಿಧಾನ, ಸುಯಿಧಾನ, ಸುಯಿಧಾನ. ವ್ರತ ತಪ್ಪಲು ಉರಿಲಿಂಗ ಪೆದ್ದಿಗಳರಸ ಒಲ್ಲನವ್ವ.

೪೯೨. ಎಂದಿಗೂ ಸಾವು ತಪ್ಪದೆಂದರಿದು ಮತ್ತೆ ವ್ರತಭಂಗಿತನಾಗಿ ಆಂದಿನೆ ಸಾಯಲೇತಕ್ಕೆ? ನಿಂದೆಗೆಡೆಯಾಗದ ಮುನ್ನವೇ ಆಂಗವ ಹಾಕಿ, ಚಿತ್ತ ನಿಜಲಿಂಗವನೆಯ್ದಿ, ಮನಕ್ಕೆ ಮನೋಹರ ಶಂಖೇಶ್ವರ ಲಿಂಗವ ಕೂಡಿ.

ಟಪ್ಪಣಿ:— ಸಾವು ಬೇರೆಯಲ್ಲ ವ್ರತಭಂಗ ಬೇರೆಯಲ್ಲ, ಎಂದು ವಚನಕಾರರ ಮತವು.

ವಿವರಣೆ

ಇನ್ನು ಸಾಧಕನಿಗೆ ಮಾರ್ಗದರ್ಶಿಗಳು ಯಾರು, ಎಂಬುದಕ್ಕೆ ವಚನಕಾರರು, ಸ್ವಾನುಭವ ಮತ್ತು ಸದ್ಭಕ್ತರ ಸಂಗ, ಎಂದು ಉತ್ತರ ಕೊಟ್ಟಿರುವರು. ದೀಕ್ಷೆ ಕೊಟ್ಟ ಗುರುಗಳು ಯಾರೇ ಇದ್ದರೂ ಅಂತರಂಗದಲ್ಲಿಯ ಅನುಭವವೆ ಎಲ್ಲರಿಗೂ ನಿಜವಾದ ಗುರುವು. ತನ್ನ ತಾನರಿದಡೆ ತನ್ನರಿವೇ ಗುರು, ಎಂದು ಅವರು ಸ್ಪಷ್ಟ ಹೇಳಿರುವರು

೪೯೩. ನಡೆನುಡಿ ಇಲ್ಲದ ಗುರುವ ಕಂಡು ಉಪದೇಶವ ಪಡೆಯಲೆಂದು ಹೋದರೆ, ಒಡನೆ ನುಡಿಯು, ನುಡಿಸಿದರೆ ಕೇಳಾ! ಕಡೆಮೊದಲ ಕಾರ್ಯವೆಂತಪ್ಪುದೊ ಅಯ್ಯ? ಮೂಗ ಮೂಗರ ಪ್ರಸಂಗದಂತೆ ಇದೆ. ಎನ್ನೊಳಗೆ ಅರಿವಿನ ಪರಿಮಳ. ಹೊರಗೆ ನೋಡಿದರೆ ಮುಗ್ಧ. ಇದೆಂಕು ಉಪಮಿಸುವೆ? ಅನೆಯ ಮದದೆಡಗ ತನ್ನಿಂದ ತಾನೆ ಇಪ್ಪುದಲ್ಲದೆ ಭಿನ್ನದಲುಂಟೇ ಗುಹೇಶ್ವರಾ?

ಟಪ್ಪಣಿ:— ಜ್ಞಾನಜ್ಯೋತಿಯು ಆತ್ಮಗತವೇ ಇದೆ ಎಂದರ್ಥ.

೪೯೪. ಶಿವವಚನ, ಗುರುವಚನ, ಪುರಾತನರ ವಚನವ ಕೇಳಿ ಬದುಕಿರಯ್ಯ. ಕೇಳಿದರೆ ಕೃತಾರ್ಥರಪ್ಪಿರಿ. ತನು ಕರಗಿ, ಮನ ಕರಗಿ, ಭಾವ ಬೆಚ್ಚಿ ಶರಣರಲ್ಲಿ ಅನುಭಾವ ಕೇಳಿದರೆ ಅದೇ ಮುಕ್ತಿ ನೋಡಿರೇ. ಇಂತಲ್ಲದೆ ಮನ

ವ್ಯಾಕುಲವಾದ ಗೀತಂಗಳಂ ಮನಮುಟ್ಟಿ ಕೇಳಿದಡೆ, ಉಪದೇಶವೆಂತು ಸಲ್ಲುವದಯ್ಯ? ಮಹಾಲಿಂಗ ಕಲ್ಲೇಶ್ವರಾ, ಗುರುವಚನಪರಾಙ್ಮುಖರಿಗೆ ಭವ ಹಿಂಗದು ನೋಡಾ.

ಟಪ್ಪಣಿ:— ಶಿವವಚನವೆಂದರೆ, ಇಲ್ಲಿ ವೇದಾಗಮಗಳು.

೪೯೫. ಸಂಗದಿಂದಲ್ಲದೆ ಅಗ್ನಿ ಹುಟ್ಟದು. ಸಂಗದಿಂದಲ್ಲದೆ ಬೀಜ ಮೊಳೆದೋರದು. ಸಂಗದಿಂದಲ್ಲದೆ ದೇಹವಾಗದು. ಸಂಗದಿಂದಲ್ಲದೆ ಸರ್ವ ಸುಖದೋರದು. ಚನ್ನಮಲ್ಲಿಕಾರ್ಜುನದೇವಯ್ಯ, ನಿಮ್ಮ ಶರಣರ ಅನುಭಾವ ಸಂಗದಿಂದೆ ಅನು ಪರಮಸುಖಿಯಾಗಿ ಬದುಕಿದೆನಯ್ಯಾ ಪ್ರಭುವೇ.

ಟಪ್ಪಣಿ:— ಸಜ್ಜನಸಂಗದ ಮಾಹಾತ್ಮ್ಯವು ಇದರಲ್ಲಿ ಹೇಳಲ್ಪಟ್ಟಿದೆ.

೪೯೬. ಅಯ್ಯಾ, ನಿಮ್ಮಲ್ಲಿ ಅಯುವ ಬೇಡುವೆನೆ? ಸಂಸಾರಕ್ಕಂಜುವೆನಯ್ಯ! ನಿಮ್ಮಲ್ಲಿ ಶ್ರೀಯ ಬೇಡುವೆನೆ? ಪರಾಂಗನೆಯ ಪಾಪ! ಅಯ್ಯಾ, ನಿಮ್ಮಲ್ಲಿ ಮುಕ್ತಿಯ ಬೇಡುವೆನೆ? ಅದು ನಿಮ್ಮ ಪದವಿ. ಸಕಳೇಶ್ವರ ದೇವಾ, ನಾನೇನುವನೊಲ್ಲೆ, ನಿಮ್ಮ ಶರಣರ ಸಂಗವುಳ್ಳರೆ ಸಾಕು.

ವಿವರಣೆ

ಅನುಭವವೆಂಬುದು ನಡೆನುಡಿ ಇಲ್ಲದ ಗುರುವು. ಅದು ನಮಗೆ ಮುಗ್ಧವಾಗಿ ಕಲಿಸುವದು, ನಮ್ಮನ್ನು ಸರಿಯಾದ ಮಾರ್ಗಕ್ಕೆ ಒಯ್ಯುವುದು. ಸಜ್ಜನಸಂಗವೂ ಅದೇ ಕಾರ್ಯವನ್ನು ಮಾಡುವುದು.

ಇನ್ನು ಅಹಂಕಾರವು ನಮ್ಮ ಎಲ್ಲಕ್ಕೂ ಬಲವುಳ್ಳ ಶತ್ರುವು. ಆ ಶತ್ರುವನ್ನು ಹೊರಗೆ ಹಾಕುವತನಕ ನಮಗೆ ಮುಕ್ತಿಯ್ದು ಆಶೆಯಿಲ್ಲ. ನಮ್ಮ ದೇಹವು ಅನ್ಯರಿಂದ ಪ್ರತ್ಯೇಕವಿದ್ದಂತೆ ಕಂಡರೂ ಅದು ವಿಶ್ವದಲ್ಲಿಯ ಮಿಕ್ಕ ವ್ಯಕ್ತಿಗಳೊಡನೆ ಮತ್ತು ಇತರ ವಸ್ತುಗಳೊಡನೆ ನಿಕಟವಾಗಿ ಸಂಬಂಧಿಸಿರುವದು. ನಾವು ಬೇರೆ ಇರುವೆವು, ಎಲ್ಲವೂ ನಮ್ಮ ಸುಖಕ್ಕಾಗಿಯೇ ಇದೆ, ನಾವು ನಮ್ಮದು, ಈ ಮುಂತಾದ ಭಾವಗಳೆ ಅಹಂಕಾರವೆನಿಸುವದು. ನಿಜವಾಗಿ ಎಲ್ಲವೂ ಪರಮಾತ್ಮನದು, ಪರಮಾತ್ಮಮಯವು.

ವಚನಗಳು

೪೯೭. ನಾ ನೀನೆಂಬಹಂಕಾರ ತಲೆದೋರಿದಲ್ಲಿ, ಅಟಮಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟಿತ್ತು. ಬಿರುಗಾಳಿ ಹುಟ್ಟಲೊಡನೆ, ಜ್ಞಾನ

ಜ್ಯೋತಿ ಕೆಟ್ಟಿತ್ತು. ಜ್ಞಾನಜ್ಯೋತಿ ಕೆಡಲೊಡನೆ, ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲರೂ ತಾಮಸಕ್ಕೊಳಗಾಗಿ, ಸೀಮೆ ತಪ್ಪಿ ಕೆಟ್ಟರು, ಗುಹೇಶ್ವರಾ.

೪೯೬. ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ. ಉಪ್ಪು ಅಪ್ಪುವಿನಲ್ಲಿ ಅದ್ದಿ ಮೆಲದಂತಾಯಿತ್ತೆನ್ನ ಭಕ್ತಿ. ಕೂಡಲಸಂಗಮದೇವಾ, ನಾನು ಮಾಡಿದೆನೆಂಬ ಕಿಚ್ಚು ಎನ್ನನೆ ಸುಟ್ಟಿತ್ತು. ಇನ್ನು ಸಾಲದೆ ಹೇಳಾ, ಪ್ರಭುವೇ.

ಟಿಪ್ಪಣಿ:— ಅಹಂಕಾರವು ಸಾಧಕನಿಗೆ ಅತ್ಯಂತ ಘಾತಕವು ಎಂಬುದೆ ಈ ವಚನದ ಅರ್ಥ.

೪೯೯. ಮದ್ಯಮಾಂಸಾದಿಗಳ ಮುಟ್ಟಿವೆಂದೆಂಬಿರಿ, ನೀವು ಕೇಳಿರೆ. ಮದ್ಯವಲ್ಲವೇನು ಅಷ್ಟಮದಂಗಳು? ಮಾಂಸವಲ್ಲವೇನು ಸಂಸಾರಸಂಗವು? ಈ ಉಭಯವನತಿಗಳೆದಾತನೆ ಗುಹೇಶ್ವರಲಿಂಗದಲ್ಲಿ ಲಿಂಗೈಕ್ಯನು.

ಟಿಪ್ಪಣಿ:— ಅನ್ನ, ಅರ್ಥ, ಯೌವನ, ಸ್ತ್ರೀ, ವಿದ್ಯೆ, ಕುಲ, ರೂಪ, ಮತ್ತು ಉದ್ಯೋಗ ಈ ಎಂಟು ಪದಾರ್ಥಗಳಿಂದ ಉಂಟಾದ ಗರ್ವಕ್ಕೆ ಅಷ್ಟಮದ ಎನ್ನುವರು. ಮದವು ತ್ಯಾಜ್ಯವಿದ್ದಂತೆ ಆಶೆ, ಕಾಮನೆ ಮುಂತಾದವುಗಳು ಅತ್ಯಂತ ತ್ಯಾಜ್ಯ. ಆಶೆಯೆ ಎಲ್ಲ ದೋಷಗಳಿಗೆ ಕಾರಣೀಭೂತವೆಂದರೂ ಸಲ್ಲುವದು.

೫೦೦. ಎಲೆಎಲೆ ಮಾನವ, ಅಳಿಯಾಸೆ ಬೇಡೆಲೊ. ಕಾದ ಬೆಳದಿಂಗಳ ಸಿರಿಯು ಸ್ಥಿರವಲ್ಲ. ಕೇಡಿಲ್ಲದ ಪದವಿಯ ಕೊಡಲು, ಕೂಡಲಸಂಗಮದೇವನ ಮರೆಯದೆ ಪೂಜಿಸು.

೫೦೧. ತೆರಣಿಯ ಹುಳು ತನ್ನ ಸ್ನೇಹದಿಂದ ಮನೆವಾಡಿ, ತನ್ನನೂಲು ತನ್ನನೇ ಸುತ್ತಿ ಸಾವ ತೆರನಂತೆ, ಮನ ಬಂದುದ ಬಯಸಿ ಬೇವುತ್ತಿರುವೆನಯ್ಯ. ಎನ್ನ ಮನದ ದುರಾಶೆಯ ಬಿಡಿಸಿ ನಿಮ್ಮತ್ತ ತೋರಾ ಚನ್ನಮಲ್ಲಿಕಾರ್ಜುನಾ.

೫೦೨. ಆಶೆಯುಳ್ಳಾತನೊಬ್ಬ ರಾಧೀನದಲ್ಲಿಪ್ಪನು. ಆಶೆಯ ಮನದ ಕೊನೆಯನರಿದಾತ ಕೈಲಾಸದಾಚೆಯಲ್ಲಿಪ್ಪನೆಂದಾತ ನಮ್ಮ ಅಂಬಿಗರ ಚೌಡಯ್ಯ.

ಟಿಪ್ಪಣಿ: - ಆಶಾಪಾಶವನ್ನು ಹರಿದೊಗೆದವನು, ನಿಷ್ಕಾಮನಾದವನು, ಅಕಾಮಹತನು, ಪರಮಪದವಿಯನ್ನು ಪ್ರಾಪ್ತಮಾಡಿಕೊಂಡು ತೃಪ್ತನಾಗಿರುವನೆಂದು ಹೇಳಬಹುದು.

೫೦೩. ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ? ಸಮುದ್ರದ ತಡಿಯಲ್ಲಿ ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯ? ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೇನಯ್ಯ? ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

೫೦೪. ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ? ಅವರಿಗಾದ ಡೇನು ತನಗಾದಡೇನು? ತನುವಿನ ಕೋಪ ತನ್ನ ಹಿರಿಯತನದ ಕೇಡು. ಮನದ ಕೋಪ ತನ್ನ ಅರುವಿನ ಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆ ಬೇವುದೇ ಕೂಡಲ ಸಂಗಮ ದೇವಾ.

ಟಿಪ್ಪಣಿ:— ತನ್ನ ಇಚ್ಛೆಯ ವಿರುದ್ಧ ಯಾರಾದರೂ ಏನಾದರೂ ಮಾಡಿದರೆ, ಏನಾದರೂ ತನ್ನಿಂದ ತಾನೆ ಆದರೆ, ವಿರುದ್ಧ ಮಾಡಿದವರನ್ನು ಹಿಂಸಿಸಬೇಕು ಎಂಬ ಭಾವನೆಯು ಉಂಟಾಗುವದು, ಆದೇ ಸಿಟ್ಟು. ಸಿಟ್ಟಿಗೆ ನಾವು ವಶರಾಗಕೂಡದು, ಅದರಿಂದ ಸದ್ವಿಚಾರಕ್ಕೆ ಹಾನಿಯುಂಟಾಗುವದು. ಆದೇ ರೀತಿ, ಭಯವನ್ನಾದರೂ ಬಿಟ್ಟುಬಿಡಬೇಕು, ಎಂದು ವಚನಕಾರರ ಮತವು.

೫೦೫. ಅಹುದಹುದು ಮತ್ತೇನು? ಮರಹಿಂಗೆ ಹಿರಿಕಿರಿದುಂಟಲ್ಲದೆ ಅರುಹಿಂಗೆ ಹಿರಿದುಕಿರಿದುಂಟೇ ಹೇಳಯ್ಯಾ? ಸಾವಿಂಗೆ ಭಯವುಂಟಲ್ಲದೆ ಅಜಾತಂಗೆ ಭಯ ಉಂಟೇ ಹೇಳಯ್ಯಾ? ಕಪಿಲಸಿದ್ಧಮಲ್ಲಿನಾಥಯ್ಯನಲ್ಲಿ ಮಹಾದೇವಿಯಕ್ಕನ ನಿಲವಿಂಗೆ ಶರಣೆಂದು ಶುದ್ಧನಾಗೆನು ಕಾಣಾ, ಚೆನ್ನ ಬಸವಣ್ಣ.

ಟಿಪ್ಪಣಿ:— ಎರಡನೇ ಪದಾರ್ಥದಿಂದ ತನಗೆ ಹಿಂಸೆ, ನೋವು, ಸಾವುಗಳುಂಟಾಗಬಹುದು, ಎಂಬ ಭಾವವೆ ಭಯದ ಬೀಜವು, ಆತ್ಮನು ಅಜಾತನೂ ಅಮರನೂ ಚೈತನ್ಯ ಸ್ವರೂಪನೂ ಇರುವುದರಿಂದ ಅವನಿಗೆ ಭಯವಿಲ್ಲ.

೫೦೬. ಚಂದನವ ಕಡಿದು, ಕೊರೆದು, ತೇದಡೆ ನೊಂದೆನೆಂದು ಕಂಪ ಬಿಟ್ಟಿತ್ತೇ? ತಂದು ಸುವರ್ಣವ ಕಡಿದೊರೆದಡೆ ಬೆಂದು ಕಳಂಕ ಹಿಡಿದಿತ್ತೇ? ಸಂದು ಸಂದು ಕಡಿದು ಕಬ್ಬನು ತಂದು ಗಾಣದಲಿಕ್ಕಿ ಬೆಂದ ಪಾಕಗಳು ಸಕ್ಕರೆ

ಯಾಗಿ ನೊಂದೆನೆಂದು ಸವಿಯ ಬಿಟ್ಟುತ್ತೇ? ನಾ ಹಿಂದೆ ಮಾಡಿದ ಹೀನಂಗ ಳೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿಯೆ? ಎನ್ನ ತಂದೆ ಚನ್ನಮಲ್ಲಿ ಕಾರ್ಜುನದೇವಯ್ಯ, ಕೊಂದಡೆ ಶರಣೆಂಬುದ ಮಾಣೆ.

೪೦೭. ಅವನಾಗಿ ಒಬ್ಬನು ಅವಿಚಾರದಿಂದ ಶಿರಸ್ಸಿನ ಮೇಲೆ ಕೈದುವ ನಿಕ್ಕುಗೆಯ. ಮೇಣು ಗಂಧಾಕ್ಷತೆ ಪುಷ್ಪದಲ್ಲಿ ಪೂಜೆ ಮಾಡುಗೆಯ. ಪೂಜೆ ಮಾಡಿದಡೆ, ಕೈದುವನಿಕ್ಕಿದಡೆ, ಮನ ವಿಸ್ಮಂದವಾಗದೊಂದೀಯಂದದಲ್ಲಿಪ್ಪಂ ತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊರ್ದಿಪ್ಪುದು ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಟಪ್ಪಣಿ:— ಮೇಲಿನ ಎರಡು ವಚನಗಳಲ್ಲಿ ಸಹನಶೀಲತೆಯ ಮಹತ್ವವು ಹೇಳಲ್ಪಟ್ಟಿದೆ.

೪೦೮. ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷಗಂಗೆಯ ಮಿಂದಡಿಲ್ಲ, ತುಟ್ಟಿ ತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ. ನಿತ್ಯನೇಮದಿಂದ ತನುವ ಮುಟ್ಟಿ ಕೊಂಡಡಿಲ್ಲ. ನಿಚ್ಚಕ್ಕೆ ನಿಚ್ಚ ನೆನೆವ ಮನವ, ಅಂದಂದಿಂಗೆ ಅತ್ತಲಿತ್ತ ಹರಿವ ಮನವ ಚಿತ್ತದಲ್ಲಿ ನಿಲಿಸಬಲ್ಲಡೆ ಬಚ್ಚಬರಿಯ ಬೆಳಗು ಗುಹೇಶ್ವರಲಿಂಗವು.

ಟಪ್ಪಣಿ:— ಈ ವಚನದಲ್ಲಿ ನಿಶ್ಚಲ ಮನಸಿನ ಮಹತ್ವವು ಹೇಳ ಲ್ಪಟ್ಟಿದೆ.

೪೦೯. ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ? ಬೆಟ್ಟ ಬಲ್ಲಿತ್ತೆಂದರೆ, ಉಳಿಯ ಮೊನೆಯಲ್ಲಿ ಬಡತನವುಳ್ಳರೆ ಒಡೆಯಂದೆ? ಘನ ಶಿವ ಭಕ್ತರಿಗೆ ಬಡತನವಿಲ್ಲ. ಸತ್ಯರಿಗೆ ದುಃಕರ್ಮವಿಲ್ಲ. ಎನಗೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವುಳ್ಳನ್ನಕ್ಕರ ನನಗಾರ ಹಂಗಿಲ್ಲ, ಮಾರಯ್ಯ.

೪೧೦. ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು. ಧನ ನೋಡಾ ಬಡವರು, ಘನಮನ ಸಂಪನ್ನರು. ಕೂಡಲ ಸಂಗನ ಶರಣರು ಕರು ಳಿಲ್ಲದ ಕಲಿಗಳು. ಅರಿಗುಪಮಿಸಬಾರದು.

ಟಪ್ಪಣಿ:— ಮೇಲಿನ ವಚನಗಳು ಸಾಧಕರ ಉದಾರ ಮನಸಿನ ವರ್ಣನೆಯನ್ನು ಮಾಡಿರುವವು. ಸಾಧಕನು ಎಲ್ಲರನ್ನು ಸಮಾನದೃಷ್ಟಿ ಯಿಂದ ನೋಡತಕ್ಕದ್ದು ಎಂದು ಮುಂದೆ ಹೇಳಿದೆ.

೪೧೧. ನಾನು ಘನ, ತಾನು ಘನವೆಂಬ ಹಿರಿಯರುಂಟೀ ಜಗದೊಳಗೆ? ಹಿರಿಯರ ಹಿರಿಯತನದಿಂದೇನಾಯಿತ್ತು? ಹಿರಿದುಕಿರಿದೆಂಬ ಶಬ್ದವಡಗಿದರೆ ಆತನೇ ಶರಣ ಗುಹೇಶ್ವರಾ.

೪೧೨. ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ? ಒಡೆಯನ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಪ್ರಾಣದಲ್ಲಿ ಹಿಡಿಗೋಲ? ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥಾ?

ಟಪ್ಪಣಿ:— ಪ್ರಾಣವು, ಆತ್ಮವು ಎಲ್ಲಿ ಹೋದರೂ ಒಂದೇ. ಗಂಡು, ಹೆಣ್ಣು, ಹಿರಿದು, ಕಿರಿದು ಮುಂತಾದ ಯಾವ ಭೇದಾಭೇದಗಳೂ ಅಲ್ಲಿಲ್ಲ. ಬಾಹ್ಯತಃ ವ್ಯಕ್ತಿಗಳಲ್ಲಿ ಭೇದ ಕಂಡರೂ ಎಲ್ಲರೂ ಪರಮಾತ್ಮನ ಅಂಶಗಳೇ. ಇನ್ನು ಸಾಧಕನ ಆಚಾರವು ಶುದ್ಧವಿರಬೇಕು ಎಂಬ ಬಗ್ಗೆ ವಚನಗಳು.

೪೧೩. ಆಚಾರವಿಲ್ಲದ ಗುರು ಭೂತಪ್ರಾಣಿ, ಆಚಾರವಿಲ್ಲದ ಲಿಂಗ ಶಿಲೆ. ಆಚಾರವಿಲ್ಲದ ಜಂಗಮ ಮಾನವ. ಆಚಾರವಿಲ್ಲದ ಪಾದೋದಕ ನೀರು. ಆಚಾರವಿಲ್ಲದ ಪ್ರಸಾದ ಎಂಜಲು. ಆಚಾರವಿಲ್ಲದ ಭಕ್ತ ದುಷ್ಕರ್ಮಿ, ಇದುಕಾರಣ ಅಟ್ಟವನೇರುವುದಕ್ಕೆ ನಿಚ್ಚಣಿಕೆಯೇ ಸೋಪಾನವಯ್ಯ. ಹರ ಪದವನೇರುವುದಕ್ಕೆ ಶ್ರೀಗುರು ಹೇಳಿದ ಸದಾಚಾರವೇ ಸೋಪಾನವಯ್ಯ. ಗುರು ಉಪದೇಶವ ಮೀರಿ ಮನಕ್ಕೆ ಬಂದಂತೆ ವರ್ತಿಸುವ ಪಾಪಿಗಳ ಎನ ಗೊಮ್ಮೆ ತೋರದಿರಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೆ.

೪೧೪. ಅಯ್ಯಾ, ಇಹಪರಂಗಳ ಗೆಲಿದ ಭಕ್ತ ಜಂಗಮಕ್ಕೆ ಸದಾ ಚರಣೆ ವಸ್ತು ನೋಡಾ. ಸದಾಚಾರವನರಿಯದ ಪಾಪಿ ಸೂಕರಕ್ಕಿಂತ ಕರಕಷ್ಟ ನೋಡಾ....ಕಲಿದೇವರ ದೇವಾ.

೪೧೫. ಸದಾಚಾರ, ಸದ್ಭಕ್ತಿ ಇಲ್ಲದವರ ನಾನೊಲ್ಲೆನಯ್ಯ. ಅವರಾ ರಾಧನೆ ದಂಡ. ನಿಚ್ಚನಿಚ್ಚ ಪ್ರಾಯಶ್ಚಿತ್ತರನೊಲ್ಲನಯ್ಯ, ಕೂಡಲ ಸಂಗಮ ದೇವಾ, ಭೂಮಿಭಾರಕರ.

ಟಪ್ಪಣಿ:— ಸದಾಚಾರಕ್ಕೆ ಬಹಳ ಮಹತ್ವವಿರುವದು. ಇನ್ನು ಸಾಧಕನು ನುಡಿದಂತೆ ನಡೆಯಬೇಕು ಎಂದು ಹೇಳುವರು.

೪೧೬. ನುಡಿಯಬಹುದು - ಅದ್ವೈತವನ್ನು ಒಂದು ಕೋಟ ವೇಳೆ. ನಡೆಯ ಬಹುದೆ ಒಮ್ಮೆ ನಿರ್ಧರವಾಗಿ ಸದ್ಭಕ್ತಿ ಆಚಾರವಾಗಿ? ನುಡಿಯಂತೆ ನಡೆವ, ನಡೆದಂತೆ ನುಡಿವ ಸದ್ಭಕ್ತಿ ಸದಾಚಾರಯುಕ್ತ ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯ ಪ್ರಭುವೇ, ಕಪಿಲಸಿದ್ಧ ಮಲ್ಲಿಕಾರ್ಜುನಾ.

ಟಿಪ್ಪಣಿ:— ನಡೆ ನುಡಿ ಒಂದು ಇರಬೇಕು ಎಂದು ಹೇಳಿದ ಬಳಿಕ ಸತ್ಯದ ಮಹಿಮೆಯು ಇಲ್ಲಿ ಹೇಳಲ್ಪಟ್ಟಿರುವುದು. ವಸ್ತು ಅಥವಾ ಸಂಗತಿ ಇವುಗಳೊಡನೆ ಶಬ್ದವು ಏಕರೂಪವಾಗಿರುವುದೇ ಸತ್ಯವೆನಿಸುವದು. ಹಾಗೆ ನುಡಿವುದು ಮತ್ತು ನುಡಿದಂತೆ ನಡೆವುದು ಇದೇ ಸತ್ಯಧರ್ಮವು. ಶರಣ ಮಾರ್ಗದಲ್ಲಿ ಸತ್ಯ, ಅಹಿಂಸೆ, ಮುಂತಾದವು ಬಹಳ ಮಹತ್ವದ ಶೀಲಗಳು.

೪೧೭. ದೇವಲೋಕ ಮರ್ತ್ಯಲೋಕವೆಂಬುವು ಬೇರಿಲ್ಲ ಕಾಣಿರೋ. ಸತ್ಯವ ನುಡಿವುದೇ ದೇವಲೋಕ. ಅಸತ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ. ಇದಕ್ಕೆ ನೀವೇ ಪ್ರಮಾಣ ಕೂಡಲ ಸಂಗಮದೇವಾ.

೪೧೮. ಸತ್ಯದಲ್ಲಿ ನಡೆವುದು ಶೀಲ, ಸತ್ಯದಲ್ಲಿ ನುಡಿವುದು ಶೀಲ. ಸಜ್ಜನ ಸದಾಚಾರದಲ್ಲಿ ವರ್ತಿಸಿ ಸತ್ಯವನರಿವುದೇ ಶೀಲ ಕಾಣಿರೋ. ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೆ.

೪೧೯. ದಿಟವ ನುಡಿವುದು, ನುಡಿದಂತೆ ನಡೆವುದು. ಹುಸಿಯ ನಡೆದು ತಪ್ಪುವ ಪ್ರಪಂಚಿಯನೊಲ್ಲ, ಕೂಡಲಸಂಗಮದೇವಾ.

೪೨೦. ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಲಾಗದು, ಲಕ್ಷಕ್ಕೊಮ್ಮೆ ನುಡಿಯಲಾಗದು, ಕೋಟಿಗೊಮ್ಮೆ ನುಡಿಯಲಾಗದು. ಸುಡಲಿ ಅವಂದಿರೊಡತನ. ಮಾರಿ ಹೊರಲಿ. ಗುಹೇಶ್ವರಾ ನಿಮ್ಮ ಶರಣರಲ್ಲದವರೊಡನೆ ಬಾಯ್ದೆರೆಯಲಾಗದು.

ಟಿಪ್ಪಣಿ:— ಸತ್ಯದಷ್ಟೆ ಅಹಿಂಸಾಧರ್ಮವೂ ಶ್ರೇಷ್ಠವು. ಯಾವ ಸಜೀವ ಪ್ರಾಣಿಗಳನ್ನೂ ಕಾಯ-ವಾಕ್-ಮನಗಳಿಂದಲೂ ನೋಯಿಸದಿರುವುದೆ ಅಹಿಂಸೆಯೆನಿಸುವದು.

೪೨೧. ದಯವಿಲ್ಲದ ಧರ್ಮವಾವುದಯ್ಯ? ದಯವೇ ಬೇಕು ಸಕಲ

ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವಯ್ಯ. ಕೂಡಲಸಂಗಮದೇವ ರಂತಲ್ಲದೊಲ್ಲನಯ್ಯ.

೪೨೨. ನಾನೊಂದು ಸುರಗಿಯನೇನೆಂದು ಹಿಡಿವೆನು? ಏನ ಕತ್ತೇನ ನಿರಿವೆನು? ಜಗವೆಲ್ಲ ನೀನಾಗಿಸ್ಸೆ, ಕಾಣಾ ರಾಮನಾಥಾ.

೪೨೩. ಎಲ್ಲವನರಿವಲ್ಲಿ ಕಡೆಯಲ್ಲಿ ಕೊಲ್ಲಬೇಕೆಂಬುದೊಂದು ಛೇದ ಉಂಟೆ? ಶಾಸ್ತ್ರವನೆಲ್ಲ ಕಲಿತಲ್ಲಿ ಗೆಲ್ಲಸೋಲಕ್ಕೆ ಹೋರಬೇಕೆಂಬುದು ಕಡೆಯಲ್ಲಿ ಒಂದು ಸೊಲ್ಲುಂಟೇ? ಪುರಾಣವನೆಲ್ಲವನೋದಿದಲ್ಲಿ ಸರ್ವ ಜೀವಸಕೊಲ್ಲು, ಕೊರೆ, ಎಂಬುದೊಂದು ದಳ್ಳುರಿಯುಂಟೆ? ಶ್ರುತಿಯ ಕೇಳುವಲ್ಲಿ, ಸ್ಮೃತಿಯನಂಗೀಕರಿಸುವಲ್ಲಿ ಸರ್ವಹತವ ಮಾಡಬೇಕೆಂಬುದೊಂದು ಗತಿಯುಂಟೇ? ಇಂತೀ ಆತ್ಮನಲ್ಲಿ ಸರ್ವಭೂತಹಿತವುಳ್ಳವಂಗೆ, ಅತ ಅತೀತ, ಸ್ವಯವಸ್ತು ದಸರೇಶ್ವರಲಿಂಗವು.

ವಿವರಣೆ

ಎಲ್ಲ ಧರ್ಮಗಳಲ್ಲಿಯೂ ಅಹಿಂಸೆಯ ತತ್ವವು ಒಂದಿಲ್ಲೊಂದು ರೀತಿಯಿಂದ ಉಪದಿಷ್ಟವಾಗಿದೆ. ದೇವರು ಎಲ್ಲೆಲ್ಲಿಯೂ ತುಂಬಿರುವುದರಿಂದ ಯಾರನ್ನು ಘಾತಿಸಿದರೂ ಆ ಪೆಟ್ಟು ದೇವರಿಗೆಯೆ ತಗಲುವುದು, ಆದುದರಿಂದ ಯಾರನ್ನೂ ಹಿಂಸಿಸಕೂಡದು ಎಂದು ವಚನಕಾರರು ಹೇಳುವರು. ಯಾವ ಶಾಸ್ತ್ರವನ್ನು ಓದಿದರೂ ಅದರಲ್ಲಿ ಪರಹಿಂಸೆ ಎಂಬುದು ಎಲ್ಲಿಯೂ ಉಕ್ತವಾಗಿಲ್ಲ. ಇದೇ ರೀತಿ, ಅಸ್ತೇಯದ ತತ್ವವಿರುವದು. ತನ್ನದಲ್ಲದ ವಸ್ತುವನ್ನು ಗ್ರಹಿಸುವದು ಅಥವಾ ತನ್ನದಿದ್ದರೂ ತನಗೆ ಎಷ್ಟು ಅತ್ಯವಶ್ಯವೊ ಅದಕ್ಕೂ ಹೆಚ್ಚಿನ ಸಂಗ್ರಹ ಮಾಡುವದು ಸ್ತೇಯ ಅಥವಾ ಕಳವು ಎನಿಸುವದು. ಕೇವಲ ಸ್ವಾರ್ಥ ಬುದ್ಧಿಯಿಂದ ಅಲ್ಪಪದಾರ್ಥವನ್ನು ಗ್ರಹಿಸಿದರೂ ಅದು ಕಳವೇ ಆಗುವದು. ಹಾಗೆ ಮಾಡದಿರುವುದೆ ಅಸ್ತೇಯ ವ್ರತವು.

ವಚನಗಳು

೪೨೪. ತೊರೆಯ ಮೀವಣ್ಣಗಳಿರಾ, ತೊರೆಯಿರೊ ಪರಧನವ! ಪರದ್ರವ್ಯವ ಬಿಡದೆ ಹೋಗಿ ತೊರೆಯಲ್ಲಿ ಮಿಂದರೆ, ಆ ತೊರೆಯೆಲ್ಲಾ ಬರುದೊರೆ ಕಂಡಯ್ಯ! ಕಳವ ತೊರೆದು ಮಿಂದರೆ ಒಲಿದು ಕೂಡಿಕೊಂಬ ನಮ್ಮ ಕೂಡಲ ಸಂಗಮದೇವಾ.

೪೨೫. ಬಟ್ಟೆಯಲ್ಲಿ ಹೊನ್ನುವಸ್ತ ಬಿದ್ದಿದ್ದರೆ, ನಾನು ಕೈಮುಟ್ಟಿ ಎತ್ತಿದೆನಾದಡೆ ನಿಮ್ಮಾಣೆ. ನಿಮ್ಮ ಪ್ರಮಥರಾಣೆ. ಅದೇನು ಕಾರಣವೆಂದಡೆ, ನೀವಿಕ್ಕಿದ ಭಾಷೆಯಲ್ಲಿಪ್ಪೆನಾಗಿ. ಇಂತಲ್ಲದೆ ನಾನು ಅಳಿಮನವ ಮಾಡಿ ಪರದ್ರವ್ಯಕ್ಕೆ ಆಶೆಮಾಡಿದೆನಾದಡೆ ನೀನಾಗಲೇ ಎನ್ನ ನರಕದಲ್ಲದ್ದಿ, ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ.

ಟಿಪ್ಪಣಿ:— ಸತ್ಯ, ಅಹಿಂಸೆ, ಅಸ್ತೇಯ ಇವುಗಳಂತೆ ಬ್ರಹ್ಮಚರ್ಯವೂ ಮಹತ್ವದ ವ್ರತವು. ಸ್ತ್ರೀಸಂಗವನ್ನು ಸಂಪೂರ್ಣ ಬಿಟ್ಟುಬಿಡುವದು ಇಲ್ಲವೆ ಧರ್ಮಪತ್ನಿಯೊಡನೆ ಮಾತ್ರ ಧರ್ಮಕ್ಕೆ ಅವಿರುದ್ಧವಾಗಿರುವಂತೆ ಸಂಗಮಾಡುವದು ಬ್ರಹ್ಮಚರ್ಯವೆನಿಸುವದು. ನಾರಿಯೆಂದರೊಂದು ವಿಷಯಭಾಂಡವೆಂದು ತಿಳಿಯದೆ ಆಕೆ ಪ್ರತ್ಯಕ್ಷ ದೇವತಾ ಸ್ವರೂಪವು, ಎಂದು ತಿಳಿದು ವರ್ತಿಸಬೇಕು, ಎಂದು ವಚನಕಾರರ ಉಪದೇಶವಿರುವದು.

೪೨೬. ಎಲ್ಲಿ ನೋಡಿದಡಲ್ಲಿ ಮನವೆಳಸಿದಲ್ಲಿ ಅಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಪರವಧುವನು ಮಹಾದೇವಿಯೆಂದು ಕಾಂಬೆನು ಕೂಡಲ ಸಂಗಮದೇವಾ.

೪೨೭. ಸ್ತ್ರೀಯರ ಕಂಡು ಅಳುಪದಿರಾ ಮನವೆ. ಉದ್ದಂಡತನದಲಿ ನಡೆವ ಭಂಡರನು ಹುಳುಗೊಂಡದಲ್ಲಿಕ್ಕದೆ ಬಿಡುವನೆ, ನಮ್ಮ ದೇವರಾಯ ಸೊಡ್ಡಳ?

ಟಿಪ್ಪಣಿ:— ದಾನತತ್ವಕ್ಕೂ ವಚನಕಾರರು ಒಳ್ಳೇ ಮಹತ್ವ ಕೊಟ್ಟಿರುವರು. ತನ್ನ ಹತ್ತಿರವಿದ್ದ ದ್ರವ್ಯಾದಿಗಳೊಳಗಿಂದ ಅನ್ಯ ಯೋಗ್ಯ ಪುರುಷರಿಗೆ ನಿಷ್ಕಾಮವೃತ್ತಿಯಿಂದ ಕೊಡುವುದೆ ಸಾತ್ವಿಕದಾನವೆನಿಸುವದು.

೪೨೮. ಕಾಗೆ ಒಂದಗಳು ಕಂಡರೆ ಕರೆಯದೇ ತನ್ನ ಬಳಗವನೆಲ್ಲವನು? ಕೋಳಿ ಒಂದು ಗುಟುಕ ಕಂಡರೆ ಕರೆಯದೇ ತನ್ನ ಕುಲವನೆಲ್ಲವನು? ಶಿವಭಕ್ತನಾಗಿ ಭಕ್ತಿ ಪಕ್ವವಿಲ್ಲದಿದ್ದರೆ ಕಾಗೆಕೋಳಿಗಿಂತ ಕರಕಷ್ಟ, ಕೂಡಲ ಸಂಗಮದೇವಾ.

೪೨೯. ಸ್ವಲ್ಪ ಅಮೃತಾನ್ನವನೊಯ್ದು, ಹುತ್ತವೆಂದು ಬಿಲದ್ವಾರದಲ್ಲಿ ಹೊಯ್ದ ತೊತ್ತಿಗೆಲ್ಲಿಯದೋ ಶಿವಾಚಾರ? ಅದೆಂತೆಂದೊಡೆ, ಕಲ್ಲನಾಗರ

ಕಂಡರೆ, ಹಾಲು ಹೊಯ್ಯೆಂಬಳು, ಬದುಕಿದ ನಾಗರ ಕಂಡರೆ, ಕೊಲ್ಲು, ಕೊಲ್ಲು ಎಂಬಳು! ಉಂಬದೇವರು ಬಂದರೆ ಇಲ್ಲವೆಂದು ಆಟ್ಟುವಳು. ಉಣ್ಣದ ಕಲ್ಲು ಪ್ರತಿಮೆಯ ಮುಂದಿಟ್ಟು ಉಣ್ಣು ಉಣ್ಣು ಎಂಬಳು! ಇಂತೀ ವೇಷದ ಡಂಭ ತೊತ್ತಿಗೆ ವಿಚಾರಿಸದೆ ಲಿಂಗವ ಕೊಡಲಾಗದೆಂದಾತ ನಮ್ಮ ಅಂಬಿಗರ ಚೌಡಯ್ಯ.

ಟಿಪ್ಪಣಿ:— ಪರಮಾತ್ಮನು ಎಲ್ಲರಲ್ಲಿಯೂ ವ್ಯಾಪ್ತನಿರುವುದರಿಂದ ಎಲ್ಲರ ಅಂತರಾತ್ಮನನ್ನು ಸಂತೋಷಗೊಳಿಸುವ ಪ್ರಯತ್ನವು ಅವಶ್ಯವು. ನಿರ್ಜೀವ ಪ್ರತೀಕಗಳಿಗೆ ನೈವೇದ್ಯ ತೋರಿಸಿ ಪರಮಾತ್ಮನ ಜೀವಂತ ಪ್ರತೀಕಗಳನ್ನು ಉಪವಾಸ ಕೊಲ್ಲುವದು ಅಥವಾ ಹಿಂಸಿಸುವದು ಎಲ್ಲಿಯ ಧರ್ಮ, ಎಂದು ವಚನಕಾರರ ಪ್ರಶ್ನೆಯು! ಇನ್ನು ಕೊಡುವವನು ಸಹ ತನ್ನ ಕಾಯಕದಿಂದ ದೊರಕಿಸಿಯೆ ಕೊಡಬೇಕು, ಎಂಬ ಬಗ್ಗೆಯೂ ವಚನಕಾರರು ಹೇಳಿರುವರು.

೪೩೦. ಸತ್ಯ ಶುದ್ಧ ಕಾಯಕದಲ್ಲಿ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು. ನೇಮದ ಕೂಲಿ ಅಂದಿನ ನಿತ್ಯನೇಮದಲ್ಲಿ ಸಂದಿರಬೇಕು. ನೇಮದ ಕೂಲಿಯ ಬಿಟ್ಟು, ಹೇಮದಾಸೆಗೆ ಕಾಮಿಸಿ, ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯ! ನಿನ್ನಾಸೆ ವೇಷದ ಪಾಶಕ್ಕೆ ನೀನೇ ಹೋಗು. ನನಗೆ ನಿನ್ನ ಜಂಗಮದ ಪ್ರಸಾದದಾಗೆ ಚರಿದೇಶ್ವರ ಲಿಂಗಕ್ಕೆ ಪ್ರಾಣವಯ್ಯ.

ಟಿಪ್ಪಣಿ:— ಸಾಧಕನು ತನ್ನ ವರ್ತನದಲ್ಲಿ ತಪ್ಪುವ ಸಂಭವವಿದೆ. ಇಂಥ ಪ್ರಸಂಗಗಳಲ್ಲಿ ಪೂರ್ಣ ಆರ್ಪಣ ಪೂರ್ವಕವಾಗಿ ವರ್ತಿಸುತ್ತಿದ್ದರೆ ಅವನ ದೋಷಗಳು ನಾಶಪಡುವವು ಮತ್ತು ತೀವ್ರವೆ ಅವನ ಹೆಜ್ಜೆಯು ಸರಿಯಾಗುವದು.

೪೩೧. ಕುಲಸ್ವಾಮೀ, ನಿನ್ನಿಂದ ಹೆಜ್ಜೆಯಲ್ಲದೆ ನಾನೊಂದು ಹೆಜ್ಜೆಯ ನಡೆನಯ್ಯ. ಎನಗೊಂದು ಹೆಜ್ಜೆಯಿಲ್ಲ. ನಿನ್ನ ಹೆಜ್ಜೆ ಎನ್ನ ಹೆಜ್ಜೆ ಬಂದಾದ ಭೇದವ ಜಗದ ನ್ಯಾಯಿಗಳಿತ್ತ ಬಲ್ಲರೆ, ರಾಮನಾಥಾ?

೪೩೨. ನಿಮ್ಮಿಂದಲಾನಾದೆನು. ಎನಗೆ ದೇಹೇಂದ್ರಿಯಮನಃಪ್ರಾಣಾದಿಗಳಾದವು. ಆ ದೇಹೇಂದ್ರಿಯ ಮನಃಪ್ರಾಣಾದಿಗಳಿಗೆ ಕರ್ತನು ನೀನೇ. ಅವರ ಆಗುಹಾಗು ಸುಖದುಃಖ ಎಲ್ಲವೂ ನೀನೇ. ಒಳಗು ನೀನೇ, ಹೊರಗು

ನೀನೇ. ನಾನೆಂಬುದು ನಡುವಣ ಧ್ವಾಂತು. ನಿನ್ನ ವಿನೋದ ನೀನೇ ಬಲ್ಲೆ, ದೇವರಾಯ ಸೊಡ್ಡಳಾ.

ಟಪ್ಪಣ:— ಈ ಭಾವನೆಯಿಂದ ಸರ್ವಾರ್ಪಣ ಮಾಡಿದ ಭಕ್ತನು ಪರಮಾತ್ಮಪ್ರೇರಣೆಯಿಂದಲೆ ಈ ಲೀಲಾವಿಶ್ವದಲ್ಲಿ ವಿಹರಿಸುವನು, ಮತ್ತು ಪರಮಾತ್ಮನ ಆನಂದದಲ್ಲಿ ಭಾಗಿಯಾಗುವನು.

---

೧೭. ವಿಧಿನಿಷೇಧಗಳು

ವಿವರಣೆ

ಇದುವರೆಗೆ ಸತ್ಯ, ಮುಕ್ತಿ, ಸಾಕ್ಷಾತ್ಕಾರ, ಅದರ ಸಾಧನ, ಮತ್ತು ಸಾಧಕನಿಗೆ ಅವಶ್ಯವಿದ್ದ ಗುಣಕರ್ಮ ಇವುಗಳನ್ನು ಕುರಿತು ಇದ್ದ ಮಹತ್ವದ ವಚನಗಳನ್ನು ಅವತರಿಸಿದ್ದಾಯಿತು. ಇನ್ನು ಸಾಧಕನು ಮಾಡತಕ್ಕ ಮತ್ತು ಬಿಡತಕ್ಕ ಕೆಲವು ವಿಷಯಗಳ ಬಗ್ಗೆ ವಚನಕಾರರ ಸ್ಪಷ್ಟ ಮತವೇನಿರುವುದೆಂಬುದನ್ನು ನೋಡುವ. ಮಾಡು ಎಂಬುದು ವಿಧಿಯು, ಮಾಡಬೇಡ ಎಂಬುದು ನಿಷೇಧವು. ಯಾವುದೇ ಸಾಧನ ಮಾರ್ಗವನ್ನು ಪರೀಕ್ಷಿಸಿ ನೋಡಿದರೂ ಅದು ವಿಧಿನಿಷೇಧಾತ್ಮಕವೇ ಇರುವದು. ಈಗಿನ ವರೆಗೆ ವಿಚಾರಿಸಿದ ಸಾಧನಮಾರ್ಗವಾದರೂ ಅದೇ ಬಗೆಯದಿರುವದು. ಅದುದರಿಂದ ಅದರಲ್ಲಿ ಅನೇಕ ವಿಧಿನಿಷೇಧಗಳು ಬಂದುಹೋಗಿರುವವು. ಈ ಪ್ರಕರಣದಲ್ಲಿ ಸ್ವಲ್ಪ ಪುನರುಕ್ತಿ ಆದರೂ ಆಗಬಹುದು. ವಿಧಿನಿಷೇಧಗಳನ್ನು ಹೇಳುವ ವಚನಗಳ ಒಂದು ಪ್ರತ್ಯೇಕ ಪ್ರಕರಣವು ಅವಶ್ಯವೆಂದು ಇಲ್ಲಿ ಈ ಪ್ರಕರಣವನ್ನು ಹಾಕಿರುವೆವು.

ವಚನಗಳು

೪೩೩. ಪರಧನವೊಲ್ಲದಿಪ್ಪುದೇ ವ್ರತ, ಪರಸ್ತ್ರೀಯ ಕೂಡದಿಪ್ಪುದೇ ಶೀಲ. ಸರ್ವ ಜೀವವ ಕೊಲ್ಲದಿಪ್ಪುದೇ ನೇಮ. ತಥ್ಯವ ಮಿಥ್ಯವ ತಿಳಿದಿಪ್ಪುದೇ ನಿತ್ಯನೇಮ. ಇದು ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ಸಂದೇಹವಿಲ್ಲದ ವ್ರತ.

೪೩೪. ಬಂದುದ ಕೈಕೊಳ್ಳಬಲ್ಲಡೆ ನೇಮ. ವಂಚನೆಯ ಮಾಡದುದೇ ನೇಮ. ನಡೆದು ತಪ್ಪದಿದ್ದರೆ ನೇಮ. ನುಡಿದು ಹುಸಿಯದಿದ್ದರೆ ನೇಮ. ಕೂಡಲಸಂಗಮನ ಶರಣರು ಬಂದರೆ ಒಡೆಯರಿಗೆ ಒಡವೆಯನೊಪ್ಪಿಸುವದೇ ನೇಮ.

೪೩೫. ಶೀಲಶೀಲವೆಂದು ಗರ್ವಿಸಿ ನುಡಿವುತಿರ್ಪರಿ, ಶೀಲವಾವುದೆಂದರಿಯರೇ? ಕೇಳಿರಣ್ಣಾ. ಇದ್ದುದ ವಂಚನೆಯ ಮಾಡದಿಪ್ಪುದೇ ಶೀಲ. ಇಲ್ಲದುದಕ್ಕೆ ಕಡನ ಮಾಡದಿಪ್ಪುದೇ ಶೀಲ. ಪರಧನ ಪರಸ್ತ್ರೀಯರ ಮುಟ್ಟದಿಪ್ಪುದೇ ಶೀಲ. ಪರದೈವ ಪರಸಮಯಕ್ಕೆ ಅಳುಪದಿರ್ಪುದೇ ಶೀಲ. ನಮ್ಮ ಕೂಡಲ ಚನ್ನಸಂಗನ ಶರಣರ ಬರವಿಂಗೆ ಮಯ್ಯಾಂತುದೇ ಅಚ್ಚ ಶೀಲ.

೪೩೬. ಶೀಲಶೀಲವೆಂದು ನುಡಿವುತಿರ್ಪರೆಲ್ಲರು, ಶೀಲದ ಹೊಲಬ ನಾರೂ ಅರಿಯರಲ್ಲಾ. ಕೆರೆಭಾವಿ, ಹಳ್ಳಕೊಳ್ಳ, ಹೊಳೆಗಳ ನೀರ ಬಳಸದಿರ್ದೊಡೆ ಶೀಲವೆ? ಕೊಡಕ್ಕೆ ಪಾವುಡಹಾಕಿ ಜಿಲುಮೆ ಸಿತಾಳ ತಂದರೆ ಅದು ಶೀಲವೇ? ಬೆಳೆದ ಬೆಳಸು ಕಾಯಿಹಣ್ಣುಗಳ ಬಿಟ್ಟರೆ ಶೀಲವೇ? ಉಪ್ಪು, ಎಣ್ಣೆ, ಹಾಲು, ತುಪ್ಪ, ಇಂಗು, ಮೆಣಸು, ಅಡಿಕೆ, ಬೆಲ್ಲಗಳ ಬಿಟ್ಟರೆ ಶೀಲವೆ? ಪರಪಾಕವ ಬಿಟ್ಟು ಸ್ವಯಂಪಾಕದಲ್ಲಿದ್ದರೆ ಶೀಲವೆ? ಭವಿಯ ಕಾಣದಂತಿರ್ದಡೆ ಶೀಲವೆ? ಅಲ್ಲಲ್ಲ. ಅದೇನುಕಾರಣವೆಂದಡೆ, ಇಂತಿವೆಲ್ಲವು ಹೊರಗಣ ವ್ಯವಹಾರವು. ಇನ್ನು ಅಂತರಂಗದ ಅರಿಷಡ್ವರ್ಗಂಗಳೆಂಬ ಭವಿಗಳ ಕಳೆಯಲಿಲ್ಲ. ಮಾಯಾಮೋಹ ಬೆಳೆ ಉಳಗುನ್ನಿಯ ಬಿಡಲಿಲ್ಲ. ಸಂಸಾರ ವಿಷಯರಸವೆಂಬ ಹಳ್ಳಕೊಳ್ಳ ಕೆರೆಬಾವಿಗಳಗಲಲಿಲ್ಲ. ಅಷ್ಟಮದಗಳೆಂಬ ಉಪ್ಪು ಎಣ್ಣೆ, ತುಪ್ಪ ಹಾಲು, ಇಂಗು ಮೆಣಸು, ಅಡಿಕೆ ಬೆಲ್ಲಗಳ ಬಿಡಲಿಲ್ಲ. ಸಕಲ ಕರಣಂಗಳೆಂಬ ಎಳೆ ಸುಫಲಂಗಳ ಬಿಡಲಿಲ್ಲ. ಮನವೆಂಬ ಕೊಡಕ್ಕೆ ಮಂತ್ರವೆಂಬ ಪಾವುಡವ ಮುಚ್ಚಲಿಲ್ಲ. ಚಿತ್ತೊಡವೆಂಬ ಜಿಲುಮೆಯಲ್ಲಿ ಚಿದಮೃತವೆಂಬ ಸಿತಾಳವ ತಂದು ಚಿನ್ಮಯ ಲಿಂಗಕ್ಕೆ ಅಭಿಷೇಕವ ಮಾಡಲಿಲ್ಲ. ಇಂತೀ ಅಂತರಂಗದ ವಿಚಾರವನರಿಯದೆ ಹಾಳ ಸಂಕಲ್ಪದಿಂದೆ ಬಹಿರಂಗದ ಪದಾರ್ಥಗಳ ಬಿಟ್ಟು, ಮುಕ್ತಿಯ ಪಡೆವೆವೆಂಬ ಯುಕ್ತಿಗೇಡಿಗಳಿಗೆ ಭವಬಂಧನಗಳು ಹಿಂಗಲಿಲ್ಲ. ಜನನಮರಣಂಗಳು ಜಾರಲಿಲ್ಲ. ಸಂಸಾರಮಾಯಾಮೋಹವು ನೀಗಲಿಲ್ಲ. ಇಂತಪ್ಪ ಅಜ್ಞಾನಿಗಳ ವಿಧಿ ಎಂತಾಯಿತ್ತೆಂದರೆ, ಹುತ್ತದೊಳಗಣ ಹಾವು ಕೊಲ್ಲುವೆನೆಂದು ಮೇಲೆ ಹುತ್ತವ ಬಡಿಯುವ ಮರುಳನಂತಾಯಿತ್ತು ನೋಡಾ, ಅಖಂಡೇಶ್ವರಾ.

ಟಿಪ್ಪಣಿ— ಬಾಹ್ಯಶುದ್ಧಿ, ಆಚಾರ, ಮಡಿ, ಮೈಲಿಗೆ ಮುಂತಾದವುಗಳಿಗೆ ವಚನಕಾರರು ಅಷ್ಟಕ್ಕಷ್ಟೇ ಮಹತ್ವ ಕೊಟ್ಟಿರುವರು. ಅವರು ಮುಖ್ಯವಾಗಿ ಒತ್ತಿ ಹೇಳಿದ್ದು ಸತ್ಯ, ಅಹಿಂಸಾದಿ ನೀತಿನಿಯಮಗಳನ್ನು.

ಅಂಥಿಂಥ ಸಿಕ್ಕಸಿಕ್ಕ ದೇವತೆಗಳಿಗೆ ನಡಕೊಳ್ಳಕೂಡದು, ಎಂದು ಅವರು ಹೇಳುವರು.

೪೩೭. ನಂಬಿದ ಹೆಂಡತಿಗೆ ಗಂಡನೊಬ್ಬನೇ ಕಾಣಿರೋ. ನಂಬಬಲ್ಲ ಭಕ್ತಂಗೆ ದೇವನೊಬ್ಬನೇ ಕಾಣಿರೋ. ಬೇಡ ಬೇಡ. ಅನ್ಯ ದೈವದ ಸಂಗ ಹೊಲ್ಲ. ಅನ್ಯ ದೈವವೆಂಬುದು ಹಾದರ ಕಾಣಿರೋ. ಕೂಡಲ ಸಂಗಮ ದೇವರು ಕಂಡರೆ ಮೂಗ ಕೊಯ್ಯುವ ಕಾಣಿರೋ.

೪೩೮. ಕಲ್ಲು ಲಿಂಗವಲ್ಲ, ಉಳಿಯ ಮೊನೆಯಲ್ಲಿ ಒಡೆಯಿತ್ತು. ಮರ ದೇವರಲ್ಲ, ಉರಿಯಲ್ಲಿ ಬೆಂದಿತ್ತು. ಮಣ್ಣು ದೇವರಲ್ಲ, ನೀರಿನ ಕೊನೆಯಲ್ಲಿ ಕದಡಿತ್ತು. ಇಂತಿವನೆಲ್ಲವನು ಅರಿವ ಚಿತ್ತ ದೇವರಲ್ಲ, ಕರಣಂಗಳ ಮೊತ್ತ ದೊಳಗಾಗಿ ಸತ್ವಗೆಟ್ಟಿತ್ತು. ಇಂತಿವ ಕಳೆದುಳಿದು ವಸ್ತುವಿಪ್ಪ ಎಡೆಯಾವುದೆಂದಡೆ, ಕಂಡವರೊಳಗೆ ಕೈಕೊಂಡಾಡದೆ, ಕೊಂಡ ವ್ರತದಲ್ಲಿ ಮತ್ತೊಂದ ನೊಡಗೂಡಿ ಬೆರೆಯದೆ, ವಿಶ್ವಾಸ ಗ್ರಹಿಸಿ ನಿಂದಲ್ಲಿ ಆ ನಿಜಲಿಂಗವಲ್ಲದೆ ಮತ್ತೊಂದ ಪೆರತನರಿಯದೆ ನಿಂದಾತನೇ ಸರ್ವಾಂಗಲಿಂಗಿ, ವೀರಬೀರೇಶ್ವರ ಲಿಂಗದೊಳಗಾವ ಶರಣ.

ಟಿಪ್ಪಣಿ:— ಪರಮಾತ್ಮನು ಶುದ್ಧ ಚೈತನ್ಯ ಸ್ವರೂಪನಿರುವುದರಿಂದ ಎಲ್ಲ ಬಗೆಯ ತಾಮಸ ಪೂಜೆಗಳನ್ನು ವಚನಕಾರರು ಜರಿದಿರುವರು.

೪೩೯. ಮೊಟ್ಟೆ ಮೊಟ್ಟೆ ಪುಷ್ಪವ ಪತ್ರಿಯ ತಂದು ಒಟ್ಟಿ ಒಟ್ಟಿ ಲಿಂಗವ ಪೂಜಿಸಿದಡೇನು? ತನು, ಮನ, ಧನ ಕೊಟ್ಟು ತನು ಹಿಂಗದನ್ನಕ್ಕರ? ಹುಸಿ ಕಳವು ಪರದಾರ ವ್ಯಾಪಾರದಲ್ಲಿ ಹರಿದಾಡುವ ಮರುಳ ಬುದ್ಧಿಯ ದುರಾಚಾರಿಗಳಿಗೆ ದೂರವಾಗಿಪ್ಪನು ನೋಡಾ, ನಮ್ಮ ಅಖಂಡೇಶ್ವರನು.

೪೪೦. ಎಲ್ಲವ ಕಳೆದುಳಿದ ಹೂವ ತಂದು, ಗೆಲ್ಲಸೋಲಕ್ಕೊಳಗಾಗದ ನೀರ ತುಂಬಿ, ಕರಣಂಗಳೆಲ್ಲವು ಕಂಗಳ ತುಂಬಿ ನಿಂದು ನೋಡಿ, ಎಂದೂ ತನ್ನಂಗದಿಚ್ಛೆಯನರಿದು ಮರೆದು ಲಿಂಗವ ಪೂಜಿಸಬೇಕೆಂದ ನಮ್ಮಂಬಿಗರ ಚೌದಯ್ಯ.

ಟಿಪ್ಪಣಿ:— ತಾಮಸಪೂಜೆಯನ್ನು ಬಿಟ್ಟಾಕ್ಷಣಕ್ಕೆ ಸಾಧಕನ ಕರ್ತವ್ಯವು ಮುಗಿದಂತಾಗಲಿಲ್ಲ. ಅವನು ಶುದ್ಧ ಮನಸ್ಕನಾಗಿ, ದ್ವಂದ್ವಾತೀತನಾದ ಪರಮಾತ್ಮನನ್ನು ಧ್ಯಾನಿಸಲಿಕ್ಕೆ ಬೇಕು. ತೀರ್ಥಯಾತ್ರೆ ಮುಂತಾದವುಗಳೆಲ್ಲ ಕೇವಲ ತೋರಿಕೆಯ ಬಾಹ್ಯ ಆಡಂಬರಗಳು. ನಿಜ ಧರ್ಮವು ಅವುಗಳಲ್ಲಿಲ್ಲ, ಎಂದು ವಚನಕಾರರು ಹೇಳುವರು.

೪೪೧. ನೀರ ಕಂಡಲ್ಲಿ ಮುಳುಗುವರಯ್ಯ! ಮರನ ಕಂಡಲ್ಲಿ ಸುತ್ತುವರಯ್ಯ! ಬತ್ತುವ ಜಲವ ಒಣಗುವ ಮರವ ನೆಚ್ಚಿದವರು ನಿಮ್ಮನೆತ್ತಬಲ್ಲರು ಕೂಡಲಸಂಗಮದೇವಾ!

೪೪೨. ಗಂಗೆಯೇ ಘನ, ಮುಟ್ಟಿದ ಪ್ರಾಣಿಗಳೆಲ್ಲ ದೇವತೆಗಳೆಂದರೆ ಸ್ವರ್ಗದಲ್ಲಿ ಗಂಗೆಯ ಸಂಚಾರ ಸಾವಿರಾರು ಗಾವುದ. ಅವುಗಳಲ್ಲಿಯ ಪ್ರಾಣಿಗಳು ಅನಂತಾನಂತ. ಇಷ್ಟು ಜೀವಗಳೆಲ್ಲ ದೇವರಾದರೆ ಸ್ವರ್ಗದಲ್ಲಿ ನಿಯಮಿತ ದೇವತೆಗಳೆಂಬುದು ಅಪ್ರಸಿದ್ಧ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ!

೪೪೩. ಅಷ್ಟಾಷಷ್ಟಿಕೋಟಿ ತೀರ್ಥವ ಮಿಂದರಿಲ್ಲ ಕಾಣಿರಣ್ಣಾ. ಲಕ್ಷಾ ಲಕ್ಷಕೋಟಿ ಜಪವನೆಣಿಸಿ, ಧ್ಯಾನ, ಹೋಮ, ನೇಮ, ಮೌನ, ಅನುಷ್ಠಾನ ಮಾಡಿದರಿಲ್ಲ ಕಾಣಿರಣ್ಣಾ. ನೂರಿಪ್ಪತ್ತು ವೇಳೆ ಭೂಪ್ರದಕ್ಷಿಣೆ ಮಾಡಿದರಿಲ್ಲ ಕಾಣಿರಣ್ಣಾ. ಕಾಶಿ, ಕೇದಾರ, ಶ್ರೀಶೈಲ, ಶಿವಗಂಗೆ ಹೋದರಿಲ್ಲ ಕಾಣಿರಣ್ಣಾ. ಇವು ಎಲ್ಲ ಬರಿಯ ಭ್ರಾಂತಿ ಕೇಳಿರಣ್ಣಾ. ಇಪ್ಪ ತಾವು ಹೇಳಿಹೆ ಕೇಳಿರಣ್ಣಾ. ಶ್ರೀಗುರು ಕರುಣದಿಂದೆ ಬಿಜಯಂಗೈಸಿ ಕೊಟ್ಟ ಪರಮಲಿಂಗ ತನ್ನ ಕರದಲ್ಲಿ ತುಂಬಿಪ್ಪುದಯ್ಯ. ಹಲವು ಕಡೆಗೆ ಹೋದ ಮನವ ಧ್ಯಾನವೆಂಬ ಹಸ್ತದಲ್ಲಿ ಹಿಡಿದು, ಆ ಲಿಂಗದ ಗೊತ್ತಿನಲ್ಲಿ ಕಟ್ಟಿ, ನೆರೆಯಬಲ್ಲರೆ ಅಲ್ಲಿಪ್ಪನು ಪರಮೇಶ್ವರನು. ಇದೇ ನಿಶ್ಚಯ. ಉಳಿದುದೆಲ್ಲ ಹುಸಿ ಕಂಡೆಯಾ, ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ!

೪೪೪. ನಿಶ್ಚಲ ಶರಣನ ಆಂಗಣದಲ್ಲಿ ಅಷ್ಟಾಷಷ್ಠಿ ತೀರ್ಥಂಗಳು ನೆಲಸಿರ್ಪವಯ್ಯ! ನೀನು ಇನಿಸುವೆರಸಿ ಒಲಿದಲ್ಲಿ ನೆಲಸಿರ್ಪೆಯಯ್ಯ, ಕಪಿಲಸಿದ್ಧ ಮಲ್ಲಿನಾಥಯ್ಯ.

ಟಿಪ್ಪಣಿ:— ಪರಮಾತ್ಮನು ತೀರ್ಥಾದಿಗಳಲ್ಲಿರದೆ ಅಂತರಂಗದಲ್ಲಿ ಚಿದ್ರೂಪನಾಗಿರುವನು, ಭಕ್ತರಲ್ಲಿರುವನು. ಅವನು, ಧ್ಯಾನದಿಂದ ಅತ್ತಿತ್ತ ಹರಿಯುವ ಮನವನ್ನು ನಿಶ್ಚಲಗೊಳಿಸುವುದರಿಂದ ಪ್ರಾಪ್ತನಾಗುವನು.

ನೂರಾರು ತೀರ್ಥಗಳು, ನೂರಾರು ದೇವತೆಗಳು ಹೇಗೆ ತ್ಯಾಜ್ಯವೊ ಹಾಗೆಯೆ ಮಾರಿಮಸಣಿಶಕುನಾದಿಗಳೂ ತ್ಯಾಜ್ಯವೆಂದು ವಚನಕಾರರ ಮತವು.

೪೪೫. ಮಾರಿ ಮಸಣಿ ಎಂಬಿವು ಬೇರಿಲ್ಲ ಕಾಣೆಕೊ. ಮಾರಿ ಎಂಬುದೇನು? ಕಂಗಳು ತಪ್ಪಿ ನೋಡಿದರೆ ಮಾರಿ, ನಾಲಿಗೆ ತಪ್ಪಿ ನುಡಿದರೆ ಮಾರಿ. ನಮ್ಮ ಕೂಡಲಸಂಗಮದೇವರ ನೆನಹು ಮರೆದರೆ ಮಾರಿ.

ಟಪ್ಪಣಿ:— ನಿಜವಾದ ಮಾರಿ ನಮ್ಮಲ್ಲಿಯೆ ಇದೆ. ಅದನ್ನು ತಪ್ಪಿಸಬೇಕೇ ಹೊರತು ಹೊರಗಿನ ಮಾರಿಯ ಪೂಜೆಯು ಗೋಜಿಗೆ ಹೋಗಬಾರದು.

೪೪೬. ಮನಸಿನ ಸಂಶಯ ಕನಸಿನ ಭೂತವಾಗಿ ಕಾಡುವದು ನೋಡಾ. ಮನಸಿನ ಸಂಶಯವಳಿದರೆ, ಕನಸಿನ ಕಾಟ ಬಟ್ಟೋಡಿತ್ತು, ನೋಡಾ, ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

೪೪೭. ಒಡೆಯರು, ಭಕ್ತರು ತಾವೆಂದು ಅಡಿಮೆಟ್ಟ ಹೋಹಲ್ಲಿ ತಡೆಯಿತ್ತು ಶಕುನವೆಂದುಳಿದರೆ, ಕಾಗೆ, ವಿಹಂಗ, ಮಾರ್ಜಾಲ, ಮರವಕ್ಕಿ, ಗಾರ್ದಭ, ಶೇಷ, ಶಂಕೆಗಳು ಮೊದಲಾದ ಸಂಕಲ್ಪಕ್ಕೊಳಗಾದಲ್ಲಿ ವ್ರತಕ್ಕೆ ಭಂಗ, ಆಚಾರಕ್ಕೆ ದೂರ. ಅದೆಂತೆಂದೊಡೆ ಅಂಗಕ್ಕಾಚಾರವ ಸಂಬಂಧಿಸಿ, ಮನಕ್ಕೆ ಅರಿವು, ಅರಿವಿಂಗೆ ವ್ರತವ ಮಾಡಿದಲ್ಲಿ ಬೇರೊಂದು ಪರಿಹರಿಸುವ ನಿಮಿತ್ತವುಂಟೆ? ಇಂತೀ ಸತ್ಕ್ರಿಯಾವಂತಂಗೆ ಕಷ್ಟಜೀವದ ಲಕ್ಷಣದಲ್ಲಿ ಚಿತ್ತು ದೇಹನ್ನಕ್ಕ ಆತನು ಆಚಾರಭ್ರಷ್ಟ, ಏಲೇಶ್ವರಲಿಂಗಕ್ಕೆ ದೂರ.

ಟಪ್ಪಣಿ:— ಒಮ್ಮೆ ಭಕ್ತನಾಗಿ ಇಂಥಲ್ಲಿ ಹೋಗಬೇಕು ಎಂದು ನಿಶ್ಚಯ ಮಾಡಿದಲ್ಲಿ ಶಕುನಾದಿಗಳಿಗೆ ಮನಸೋಲಕೂಡದು. ಅದು ಸಾಮಾನ್ಯ ಜೀವರ ಲಕ್ಷಣವು. ಭಕ್ತನು ತನ್ನ ಚಿತ್ತವನ್ನು ಅಂಥ ಲಕ್ಷಣಗಳಿಂದ ಭ್ರಷ್ಟಗೊಳಿಸಕೂಡದು. ಅದು ದೌರ್ಬಲ್ಯದ ಕುರುಹು.

೪೪೮. ಹೊಲೆಯೊಳಗೆ ಹುಟ್ಟಿ ಕುಲವನರಸುವೆ. ಎಲವೋ ಮಾತಂಗಿಯ ಮಗ ನೀನು. ಸತ್ತುದನು ಎಳೆವನು ಎತ್ತಣ ಹೊಲೆಯ? ಹೋತು ತಂದು ನೀವು ಕೊಲ್ಲುವಿರಿ. ಶಾಸ್ತ್ರವೆಂಬುದು ಹೋತಿಂಗೆ ಮಾರಿ. ವೇದವೆಂಬುದು ನಿಮಗೆ ತಿಳಿಯದು. ನಮ್ಮ ಕೂಡಲಸಂಗನ ಶರಣರು ಕರ್ಮ

ರಹಿತರು, ಶರಣಸನ್ನಿಹಿತರು, ಅನುಪಮಚರಿತ್ರರು, ಅವರಿಗೆ ತೋರಲು ಪ್ರತಿ ಇಲ್ಲವು.

ಟಪ್ಪಣಿ:— ಹೊಲೆತನವು ಕುಲದಲ್ಲಿಲ್ಲ, ಕರ್ಮದಲ್ಲಿದೆ. ಇದಲ್ಲದೆ ಪ್ರತಿಯೊಬ್ಬನು ಹೊಲೆಯಲ್ಲಿ–ರಜೋದರ್ಶನವಾದ ಬಳಿಕ ರಜದಲ್ಲಿಯೆ–ಹುಟ್ಟಿರುವನು, ಎಂದರ್ಥ.

೪೪೯. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ರಾಗ, ದ್ವೇಷ ಎನಿಪ ಒಡಲಿರೆ, ರಾಗದ್ವೇಷ ಗಮನಾಗಮನಂಗಳಿರುತಿರೆ, ಬ್ರಹ್ಮ ನಾನೆಂಬ ಬರಿಯ ವಾಗದ್ವೈತದಲ್ಲಿ ಫಲವಿಲ್ಲ. ನಂಬು, ಸುಖಸಾಗರವನರಿ, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

೪೫೦. ವ್ಯಾಧನಂತೆ, ಜಾಲಗಾರನಂತೆ, ಹೇಮುಚೋರನಂತೆ, ಇಂತೀ ಗಾಹುಗಳ್ಳರಂತೆ ಮಾತಿನಲ್ಲಿ ಬ್ರಹ್ಮವ ನುಡಿದು, ಸರ್ವಸಂಸಾರದಲ್ಲಿ ಏಳುತ್ತ, ಮುಳುಗುತ್ತ, ಬೇವುತ್ತ, ನೋವುತ್ತ, ಮುತ್ತೆ ಬ್ರಹ್ಮವ ಸುಮ್ಮಾನದ ಸುಖಿಗಳೆಂತಪ್ಪರೊ? ಇಂತು ನುಡಿಯಬಾರದು, ಸಮಯವ ಬಿಡಬಾರದು, ಕ್ರಿಯೆಯರಿದು ಮರೆಯಬಾರದು ಜ್ಞಾನ. ಇಂತೀ ಭೇದವನರಿದು ಹರಿವಂಗಲ್ಲದೆ ಕಾಲಕರ್ಮ ವಿರಹಿತ ತ್ರಿಪುರಾಂತಕ ಲಿಂಗವು ಸಾಧ್ಯವಿಲ್ಲ.

ಟಪ್ಪಣಿ:— ಅದ್ವೈತವು ಮಾತಿನ ವಿಷಯವಲ್ಲ. ಒರಿಯ ಬುದ್ಧಿಯ ವಿಷಯವಲ್ಲ. ಅದು ಅನುಭವದ ವಿಷಯವು. ಆದುದರಿಂದ ಯೋಗ್ಯವಾದ ಸತ್ಕರ್ಮಗಳನ್ನು ಮಾಡುತ್ತ ಹೋಗಬೇಕು. ಮೇಲೆ ಶಕುನಾದಿಗಳನ್ನು ನಂಬಬಾರದು ಎಂದು ಹೇಳಿದ್ದಾಯಿತು. ಅದೇಪ್ರಕಾರ ಫಲಜ್ಯೋತಿಷಾದಿಗಳನ್ನು ನಂಬಕೂಡದೆಂದು ವಚನಕಾರರ ಮತವು.

೪೫೧. ಎಮ್ಮವರು ಪೆಸಗೊಂಡರೆ ಶುಭಲಗ್ನವೆಂದೆನ್ನಿರಯ್ಯ. ರಾಶಿ, ಕೂಟ, ಗಣ, ಸಂಬಂಧ ಉಂಟೆಂದು ಹೇಳಿರಯ್ಯ, ಚಂದ್ರಬಲ, ತಾರಾಬಲ ಉಂಟೆಂದು ಹೇಳಿರಯ್ಯ, ನಾಳಿನ ದಿನಕ್ಕೆ ಇಂದಿನದಿನವೇ ಲೇಸೆಂದು ಹೇಳಿರಯ್ಯ. ಕೂಡಲ ಸಂಗಮದೇವರ ಪೂಜಿಸಿದ ಫಲ ನಿಮ್ಮದಯ್ಯ.

೪೫೨. ಅಂದು ಇಂದು ಮತ್ತೊಂದು ಎನಬೇಡಿ. ದಿನವೊಂದೇ ಶಿವ ಶರಣೆಂಬುವಂಗೆ. ದಿನ ಒಂದೇ ಹರ ಶರಣೆಂಬುವಂಗೆ. ದಿನ ಒಂದೇ ನಮ್ಮ ಕೂಡಲಸಂಗನ ಮಾಣದೆ ನೆನೆಯುವಂಗೆ.

ಟಪ್ಪಣಿ— ಇನ್ನು ಪ್ರಾಯಶ್ಚಿತ್ತವೆಂಬ ದಂಭಕ್ಕಿಂತ ಪಶ್ಚಾತ್ತಾಪವೆ ಪಾಪಕ್ಷಾಲನದ ಉತ್ತಮ ಮಾರ್ಗವೆಂದು ವಚನಕಾರರ ಉಪದೇಶವಿರುವದು.

೪೫೩. ಭಕ್ತಗೊಂದೇ ವಾಕ್ಯ, ಬಾಳಿಗೊಂದೇ ಫಲ. ವಿರಕ್ತ ಬಿಟ್ಟ ಹಿಡಿವಲ್ಲಿ, ಮತ್ತೆ ಮುಟ್ಟದಡೆ ಸತ್ತನಾಯ ಹಡುಹು. ಮತ್ತೆ ಸತ್ಕ್ರಿಯಲ್ಲಿ ನಡೆವವ, ತನ್ನ ನಿತ್ಯನೇಮವ ತಪ್ಪಿ, ಕೆಟ್ಟು ನಡೆದು, ಮತ್ತೆ ದ್ರವ್ಯವ ಕೊಟ್ಟು ಭಕ್ತರೊಡೆಯರಲ್ಲಿ ತಪ್ಪು ಪರಿಹರಿಸಿಕೊಂಡಿಹೆನೆಂಬ ಬಹು ಮಿಟ್ಟಿಯ ಭಂಡರ ಕಂಡಡೆ ಮರುಳಶಂಕರ ಪ್ರಿಯ ಸಿದ್ಧರಾಮೇಶ್ವರ ಲಿಂಗವಾಯಿತ್ತಾದಡೂ ಒಡ ಗೂಡಲೊಲ್ಲೆ.

೪೫೪. ಎಲವೋ, ಎಲವೋ, ಪಾಪಕರ್ಮವ ಮಾಡಿದವನೇ, ಎಲವೋ ಎಲವೋ, ಬ್ರಹ್ಮಹತ್ಯವ ಮಾಡಿದವನೇ, ಒಮ್ಮೆ ಶರಣೆನ್ನೆಲವೋ. ಒಮ್ಮೆ ಶರಣೆಂದರೆ, ಪಾಪಕರ್ಮ ಕೆಟ್ಟೋಡುವವು. ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೇ ಇದ್ದವು! ಓರ್ವಂಗೆ ಶರಣೆನ್ನಿ, ನಮ್ಮ ಕೂಡಲ ಸಂಗಮ ದೇವಂಗೆ.

ಟಪ್ಪಣಿ:— ಹಣಕೊಟ್ಟು ಪ್ರಾಯಶ್ಚಿತ್ತದ ಮುದ್ರೆಯನೊತ್ತಿಸಿ ಕೊಳ್ಳುವದು ಪಾಪದಿಂದ ಮುಕ್ತನಾಗುವ ಉಪಾಯವಲ್ಲ; ಪರಮಾತ್ಮನಿಗೆ ಶರಣುಹೋಗಿ ಪಶ್ಚಾತ್ತಾಪ ಪಡುವುದೇ ಉತ್ತಮ ಮಾರ್ಗವು.

೪೫೫. ಪರಮಾರ್ಥವ ನುಡಿದು ಪರರ ಕಯ್ಯಾಂತು ಬೇಡುವದು ಕಷ ನೋಡಯ್ಯ. ಪುರಾತನರಂತೆ ನುಡಿಯಲೇಕೆ? ಕಿರಾತರಂತೆ ನಡೆಯ ಲೇಕೆ? ಆಶೆ ಇಚ್ಛೆಗೆ ಏನು ನುಡಿವಿರಿ? ಇಚ್ಛೆಯ ನುಡಿವುದು ಉಚ್ಚೆಯ ಕುಡಿವುದು ಸರಿ ಕಾಣೆಕೋ. ಇಚ್ಛೆಯ ನುಡಿವನೇ ಶಿವಶರಣ? ಮಾತಿನ ದೊಮ್ಮವ ನುಡಿದು ಮನದಲ್ಲಿ ಆಶೆಯ ಸೊನೆಯು ಕರೆಯುತಿಪ್ಪುದು. ಈ ವೇಷವ ಕಂಡು ಎನೆಗೆ ಹೇಸಿಕೆಯಾಯಿತ್ತು, ಕಾಣಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

ಟಪ್ಪಣಿ:— ಭಕ್ತನು ಆಶೆಯ ಭಾಷೆಯ ನುಡಿಯಕೂಡದೆಂದು ಹೇಳಿದ್ದಾಯಿತು. ಇನ್ನು ಸಾಧನಮಾರ್ಗದಲ್ಲಿ ಮುಂದುವರೆದಂತೆ ಹಲ ವರಿಗೆ ಸಿದ್ಧಿಗಳು ಪ್ರಾಪ್ತವಾಗಬಹುದು. ಆದರೆ ಸಾಧಕನು ಅವುಗಳನ್ನು ಇಚ್ಛಿಸಕೂಡದು ಮತ್ತು ಉಪಯೋಗಿಸಕೂಡದು. ಯಾಕಂದರೆ, ಅದ

ರಿಂದ ಸಾಧನಕ್ಕೆ ಹಾನಿಯಿರುವದು. ಸಿದ್ಧಿಗಳು ಕೂಡ ಒಮ್ಮೊಮ್ಮೆ ಕೇವಲ ಭ್ರಾಮಕವಿರುವವು.

೪೫೬. ಅಗ್ನಿಸ್ತಂಭದ ರಕ್ಷೆ ಇದ್ದು ಮನೆ ಬೆಂದಿತ್ತಯ್ಯ! ಬಲಮುರಿಯ ಶಂಖವಿದ್ದು ಪದ ಹೋಯಿತ್ತಯ್ಯಾ! ಏಕಮುಖದ ರುದ್ರಾಕ್ಷಿಯಿದ್ದು ವಿಷ್ಣು ವಾಯಿತ್ತಯ್ಯಾ! ಇವೆಲ್ಲವ ಸಾಧಿಸಿದರೆ ಇಲ್ಲದಂತಾಯಿತ್ತು ಗುಹೇಶ್ವರಾ.

೪೫೭. ರಸವಾದಂಗಳ ಕಲಿತಲ್ಲಿ ಲೋಹಸಿದ್ಧಿಯಲ್ಲದೆ, ರಸಸಿದ್ಧಿ ಯಾದುದಿಲ್ಲ. ನಾನಾ ಕಲ್ಪಯೋಗ ಅದೃಶ್ಯ ಕರಣಂಗಳ ಕಲಿತಲ್ಲಿ ಕಾಯ ಸಿದ್ಧಿಯಲ್ಲದೆ ಆತ್ಮಸಿದ್ಧಿಯಾದುದುಂಟೇ? ನಾನಾ ವಾಗ್ವಾದಂಗಳಿಂದ ಹೋರಿ ಮಾತಿನ ಮಾಲೆಯಾಯಿತ್ತಲ್ಲದೆ ಆತ್ಮಹಿತವಾದುದಿಲ್ಲ. ನೀ, ನಾ, ಎಂದಲ್ಲಿ ನೀನು ನಾನಾದೆಯಲ್ಲದೆ, ನಾನು ನೀನಾದುದಿಲ್ಲ. ಗೋರಕ್ಷಪಾಲಕ ಮಹಾ ಪ್ರಭು ಸಿದ್ಧಸೋಮನಾಥಲಿಂಗ ನೀ ನಾನಾದೆಯಲ್ಲದೆ, ಲೀಯ್ಯವಾಗಿ ನಾ ಆ ಲಿಂಗವೇ ಆದುದಿಲ್ಲ.

ಟಪ್ಪಣಿ:— ಸಿದ್ಧಿಗಳು ಮತ್ತು ನಿಜವಾದ ಆತ್ಮಹಿತ ಇವೆರಡೂ ಪೂರ್ವ ಪಶ್ಚಿಮದಂತೆ ಒಂದಕ್ಕೊಂದು ವಿರುದ್ಧವಿರುವವು.

೪೫೮. ಕವಿಸಾಧಕರೆಲ್ಲರೂ ಕಳವಳಿಸಿ ಕೆಟ್ಟರು. ವಿದ್ಯಾಸಾಧಕ ರೆಲ್ಲರೂ ಬುದ್ಧಿಹೀನರಾದರು. ಪವನಸಾಧಕರೆಲ್ಲರೂ ಹದ್ದುಕಾಗಿಗಳಾದರು. ಜಲಸಾಧಕರೆಲ್ಲರೂ ಕಪ್ಪೆಮೀನುಗಳಾದರು. ಅನ್ನಸಾಧಕರೆಲ್ಲರೂ ಭೂತ ಪ್ರಾಣಿಗಳಾದರು. ಬಸವಣ್ಣ ಸದ್ಗುರುಸಾಧಕನಾಗಿ ಸ್ವಯಲಿಂಗವಾದ ಕಾಣಾ ಗುಹೇಶ್ವರಾ.

ಟಪ್ಪಣಿ:— ಸಿದ್ಧಿಗಳ ನಿಷ್ಫಲತೆಯನ್ನು ಹೇಳಿದ್ದಾಯಿತು. ಇನ್ನು ಸಂಯಮ ಮತ್ತು ನಿಗ್ರಹ ಈ ಎರಡರಲ್ಲಿಯ ಭೇದವನ್ನು ವಚನಕಾರರು ಹೇಳುವರು. ನಿಗ್ರಹವೆಂದರೆ ನಮ್ಮ ಇಂದ್ರಿಯಗಳನ್ನು ಪೂರ್ಣ ಹತ್ತಿಕ್ಕಿ ಬಿಡುವದು, ಸಂಯಮವೆಂದರೆ ಅವುಗಳಿಗೆ ಸ್ವಾಭಾವಿಕ ಮತ್ತು ಯೋಗ್ಯ ಆಸ್ಪದವನ್ನು ಕೊಡುವದು. ನಿಗ್ರಹಕ್ಕಿಂತ ಸಂಯಮವೇ ಯುಕ್ತವೆಂದು ವಚನಕಾರರ ಮತವು.

೪೫೯. ಅರುಹಿನ ಕುರುಹನರಿಯದೆ ತನುವ ಕರಗಿಸಿ ಮನವ ಬಳಲಿ ಸಿದಡೇನು ಪ್ರಯೋಜನವು? ಇಂದ್ರಿಯನಿಗ್ರಹವ ಮಾಡಿ ವಿಷಯಂಗಳ

ಬಂಧಿಸಿ ಆತ್ಮಗೆ ಬಂಧನವ ಮಾಡಿದರೆ ಆತ್ಮದ್ರೋಹ ಕಾಣೆಯೋ; ಹೀಗೆ ಉದ್ದೇಶದಿಂದ ತನುವನೊಣಗಿಸಿದರೆ ಹಸಿಯ ಮರನ ತಂದು ಬಿಸಿಲಿಗೆ ಹಾಕಿದಂತೆ, ತನುವನೊಣಗಿಸಿದರೇನಯ್ಯ ? ಮನದ ಮಲಿನವು ಹಿಂಗದನ್ನಕ್ಕರ ಭವ ಹಿಂಗಿತು ಎಂಬ ಭಂಡರನೇನೆಂಬೆನಯ್ಯ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

೪೬೦. ಎಲೆ ಸುದ್ದ, ನೀ ನುಡಿದ ನುಡಿಯಿಂದ ನಿನ್ನ ಮನದ ಜಡ್ಡು ಕಳೆಯಿತೆಂದೆನಲಾರೆ. ನಿಜವರಿತ ಬಳಿಕ ಸಂಸಾರ ಬಿಡಲೇಕೊ ? ನಿಜವರಿತ ಬಳಿಕ ಅಂಗೀಕರಿಸಿದ ಹೆಣ್ಣುಬಿಟ್ಟರೆ ಅಘೋರ ನರಕದಲ್ಲಿಕ್ಕುವ ಕೇದಾರ ಗುರುದೇವ ಕೇಳಾ ಅಂದಂದಿಂಗೆ.

ಟಪ್ಪಣಿ:— ಯೋಗ್ಯವಾದ ಭೋಗವು ಪ್ರಸಾದಭಾವದಿಂದ ಭೋಗ್ಯವು, ಎಂಬುದೆ ವಚನಕಾರರ ತಾತ್ಪರ್ಯ.

೪೬೧. ಹರಿವ ಹಾವಿಗಂಜೆ. ಉರಿಯ ನಾಲಿಗೆಗಂಜೆ. ಸುರಿಗೆಯ ಮೊನೆಗಂಜೆ. ಒಂದಕ್ಕಂಜುವೆ, ಒಂದಕ್ಕಳುಕುವೆ. ಪರಸ್ತ್ರೀ ಎಂಬ ಜೂಜಿಂಗಂಜುವೆ. ಮುನ್ನಂಜದ ರಾವಣನೇ ವಿಧಿಗೊಳಗಾದ ? ಅಂಜುವೆನಯ್ಯ ಕೂಡಲ ಸಂಗಮ ದೇವಾ.

೪೬೨. ಶಿವಪೂಜೆಯೆತ್ತ ವಿಷಯದ ಸವಿ ? ಆ ವಿಷಯದ ಸವಿ ತಲೆಗೇರಿ, ಶಿವಪೂಜೆಯ ಬಿಟ್ಟು, ವೇಶಿಯರ ಎಂಜಲ ಹೇಸದೆ ತಿಂಬ ದೋಷಿಗಳನೇನೆಂದೆನ್ನೆ ರಾಮನಾಥಾ !

೪೬೩. ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು. ತಾ ಮಾಡಿದ ಹೆಣ್ಣು ತೊಡೆಯನೇರಿತ್ತು. ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು. ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು. ಅದು ಕಾರಣ ಹೆಣ್ಣು ಹೆಣ್ಣಲ್ಲ, ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ.

ಟಪ್ಪಣಿ:— ಪರಸ್ತ್ರೀ ಎಂಬುದು ಎಂಥ ಮೋಹಕವಸ್ತು ಇರುವದು, ಮತ್ತು ಪರಮಾರ್ಥಕ್ಕೆ ಎಷ್ಟು ಘಾತಕವಿರುವದು ಎಂಬುದನ್ನು ಇಲ್ಲಿ ವಚನಕಾರರು ಹೇಳಿರುವರು. ಸ್ತ್ರೀಯನ್ನು ಒಂದು ಭೋಗವಿಷಯವೆಂದು ನೋಡದೆ ಅಕೆ ಪ್ರತ್ಯಕ್ಷ ದೇವಸ್ವರೂಪಳು ಎಂದು ಕಾಣುತ್ತ

ಹೋಗಬೇಕು. ಅಂದರೆ ನಮ್ಮಲ್ಲಿ ಉಂಟಾಗುವ ವಿಷಯವಾಸನೆಗಳು ದುರ್ಬಲವಾಗುವವು. ಇನ್ನು ಬ್ರಹ್ಮಚರ್ಯದ ಮಹತ್ವವನ್ನು ಹೇಳುವರು.

೪೬೪. ಶ್ರೋತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ತ್ವಕ್ಕಿನಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ನಾಸಿಕದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ನೇತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ಜಿಹ್ವೆಯಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ಇಂತೀ ಪಂಚೇಂದ್ರಿಯಂಗಳಲ್ಲಿ ಬ್ರಹ್ಮಚಾರಿಯಾಗಿ ಕೂಡಲ ಸಂಗಮದೇವರಲ್ಲಿ ಎನ್ನನಾಗುಮಾಡಲಿಕ್ಕೆ ಬ್ರಹ್ಮಚಾರಿಯಾದರು ಪ್ರಭುದೇವರು.

ಟಪ್ಪಣಿ —ಕೇವಲ ಪರಸ್ತ್ರೀಭೋಗವನ್ನು ಅಥವಾ ಸ್ವಸ್ತ್ರೀಭೋಗವನ್ನು ಬಿಟ್ಟಾಕ್ಷಣಕ್ಕೆ ಅದು ನಿಜವಾದ ಬ್ರಹ್ಮಚರ್ಯವಲ್ಲ. ಕಾಯಾ ವಾಚಾ ಮನಸಾ ಸ್ತ್ರೀಭೋಗದ ಕಲ್ಪನೆಯನ್ನು ಸಹ ಬರಗೊಡದಿರುವದು ಮತ್ತು ಯಾವಾಗಲೂ ಬ್ರಹ್ಮಚಿಂತನದಲ್ಲಿರುವದು ನಿಜ ಬ್ರಹ್ಮಚರ್ಯವು.

ಇನ್ನು ಸಾಧನಪಥದಲ್ಲಿ ಶರಣ ವಚನಗಳು ಬಹಳ ಸಹಾಯಕವೆಂಬ ಬಗ್ಗೆ ವಚನಕಾರರ ವಚನಗಳಿರುವವು.

೪೬೫. ಕರಿಯನಿತ್ತಡೊಲ್ಲೆ. ಸಿರಿಯನಿತ್ತಡೊಲ್ಲೆ. ಹಿರಿದಪ್ಪ ರಾಜ್ಯವನ್ನಿತ್ತಡೊಲ್ಲೆ. ನಿಮ್ಮ ಶರಣರ ಸೂಳು ನುಡಿಯ ಒಂದರಗಳಿಗೆ ಇತ್ತಡೆ, ನಿನ್ನನಿತ್ತೆ ಕಾಣಾ, ರಾಮನಾಥಾ.

೪೬೬. ಹಾಲ ತೊರೆಗೆ ಬೆಲ್ಲದಂತಹ ಕೆಸರು, ಸಕ್ಕರೆಯಂತಹ ಮಳಲು, ತವರಾಜದಂತಹ ನೊರೆತೆರೆಗಳು. ಇಂತಪ್ಪ ಅದ್ಯರ ವಚನವಿರಲು, ಬೇರೆ ಬಾವಿಯ ತೋಡಿ ಉಪ್ಪನೀರ ಸವಿದಂತಾಯಿತ್ತಯ್ಯ ಎನ್ನ ಯುಕ್ತಿ. ನಿಮ್ಮ ವಚನಂಗಳ ಕೇಳದೆ ಅನ್ಯಪುರಾಣಗಳ ಕೇಳಿ ಕೆಟ್ಟೆನಯ್ಯ ಕೂಡಲ ಸಂಗಮದೇವಾ.

೪೬೭. ಆಚಾರವಿಚಾರ ತಪ್ಪಿದಲ್ಲಿ ಶರಣರ ವಾದವಲ್ಲದೆ ಮತ್ತೊಂದರಲ್ಲಿ ವಾದವಿಲ್ಲ. ಶರಣರ ವಾದ ಮೋಕ್ಷದ ಬೀಡು, ಶರಣರ ವಾದ ಲಿಂಗದ ನಾಡು, ಶರಣರ ವಾದ ಕಾಳಿಲಿಂಗಿ ದೇವನು ಮಾಡಿದ ಮಾಯೆಯ ಕೇಡು.

ಟಪ್ಪಣಿ:— ಭಕ್ತರ ನುಡಿ ಅಂದರೆ ಪ್ರತ್ಯಕ್ಷ ದೈವೀ ಸ್ಫೂರ್ತಿಯ ವಾಣಿಯು. ಅದನ್ನು ಶಿರಸಾವಹಿಸಿ ಅದರಂತೆ ವರ್ತಿಸಬೇಕು, ಅಂದರೆ

ಪರಮಾರ್ಥವು ನಮ್ಮ ಕೈವಶವಾಗುವದು. ವೇದ, ಶಾಸ್ತ್ರ, ಪುರಾಣ ಮುಂತಾದವುಗಳಿಗಿಂತ ಶರಣವಚನವು ಹೆಚ್ಚಿನದು.

೧೬೮. ಶಾಸ್ತ್ರ ಘನವೆಂಬೆನೇ? ಕರ್ಮವ ಭಜಿಸುತ್ತಿಹುದು. ವೇದ ಘನವೆಂಬೆನೇ? ಪ್ರಾಣವಧೆಯ ಹೇಳುತ್ತಿದೆ. ಶ್ರುತಿ ಘನವೆಂಬೆನೇ? ಮುಂದಿಟ್ಟು ಅರಸುತ್ತಲಿದೆ. ಆಲ್ಲೆಲ್ಲಿಯೂ ನೀನಿಲ್ಲದ ಕಾರಣ ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು, ಕೂಡಲ ಸಂಗಮದೇವಾ.

೧೬೯. ಆದಿಪುರಾಣ ಅಸುರರಿಗೆ ಮಾರಿ. ವೇದಪುರಾಣ ಹೋತಿಂಗೆ ಮಾರಿ. ರಾಮಪುರಾಣ ರಕ್ಕಸರಿಗೆ ಮಾರಿ. ಭಾರತಪುರಾಣ ಗೋತ್ರಕ್ಕೆ ಮಾರಿ. ಇವೆಲ್ಲ ಪುರಾಣವು ಕರ್ಮಕ್ಕೆ ಮೊದಲು. ನಿಮ್ಮ ಪುರಾಣಕ್ಕೆ ಪ್ರತಿ ಇಲ್ಲ, ಕೂಡಲ ಸಂಗಮದೇವಾ.

೧೭೦. ವೇದಶಾಸ್ತ್ರಾಗಮಪುರಾಣಂಗಳೆಂಬುವ ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಂಬೋ, ಅವನು ಕುಟ್ಟಲೇಕೆ? ಅತ್ತಿತ್ತ ಹರಿವ ಮನದ ಶಿಕವನರಿಯ ಬಲ್ಲಡೆ ಬಟ್ಟಬಯಲು ಚನ್ನ ಮಲ್ಲಿಕಾರ್ಜುನಾ.

ಟಿಪ್ಪಣಿ:— ವೇದ, ಶಾಸ್ತ್ರ, ಪುರಾಣಾದಿಗಳು ಕೇವಲ ಕರ್ಮವನ್ನು ಹೇಳುವವು, ಶ್ರುತಿಗಳು ಇನ್ನೂ ಪರಮಾತ್ಮನನ್ನು ಶೋಧಿಸುತ್ತಲಿರುವವು. ಶುದ್ಧ ಚಿದ್ಭವನವನ್ನರಿಯದೆ ಆತ್ಮಜ್ಞಾನವಾಗಿ ಮೋಕ್ಷವು ಕೈಸೇರದು. ಎಂದು ಅವರ ಅಭಿಪ್ರಾಯವು. ಇನ್ನು ನಿಜವಿದ್ಯೆ ಯಾವುದು ಇದನ್ನು ನೋಡುವ.

೧೭೧. ವೇದ ಕಲಿತಲ್ಲಿ ಪಾಠಕನಲ್ಲದೆ ಜ್ಞಾನಿಯಲ್ಲ, ನಿಲ್ಲು. ಶಾಸ್ತ್ರ ಪುರಾಣವನೋದಿದಲ್ಲಿ ಪಂಡಿತನಲ್ಲದೆ ಜ್ಞಾನಿಯಲ್ಲ, ನಿಲ್ಲು. ವ್ರತನೇಮ ಕೃತ್ಯಪೂಜಕನಾದಡೇನು, ದಿವ್ಯಜ್ಞಾನದ ಠಾವನರಿಯಬೇಕು. ಈ ಭೇದವ ತಿಳಿದರಿದಲ್ಲಿ ಮನಸಂದಿತ್ತು ಮಾರೇಶ್ವರಾ.

೧೭೨. ವೇದಪಾಠಕ, ಶಾಸ್ತ್ರವಿತ್ತು, ಪುರಾಣ ಬಹುಶ್ರುತಿವಂತ, ವಾದಿ, ಭೇದಕ, ಸಂಸ್ಕೃತ, ಪ್ರಾಕೃತ, ಅಪಭ್ರಂಶ, ದೇಶ್ಯ ಮೊದಲಾದ ವಾಚಕ ಚಾರ್ವಾಕ ಮುಖಂಗಳಿಂದ ಹೋರುವ ಮಾಯಾವಾದದ ತೆರನಲ್ಲ. ಮೂಲಿಕಾಸಿದ್ಧಿ, ರಸಸಿದ್ಧಿ, ಅದೃಶ್ಯಕರಣ, ಕಾಯಸಿದ್ಧಿ ಇಂತೀ ಕುಟಿಲಂಗಳ ತೆರಕ್ಕೆ ಅಗೋಚರ. ಅಂಗಲಿಂಗ ಸಂಬಂಧವಾದ ಶರಣನ ಇರವು ಎಂತೆಂ

ದಡೆ, ಶಬ್ದ ಹತ್ತದ ಅಲೆಯಂತೆ, ಅನಿಲ ಮುಟ್ಟದ ಪುಷ್ಪದಂತೆ, ಕೈ ಮುಟ್ಟದ ಗತಿಯಂತೆ, ನೆಯಿ ಮುಟ್ಟದ ನಾಲಿಗೆಯಂತೆ, ಪವನ ಮುಟ್ಟದ ಪರ್ಣದಂತೆ, ಭಾವಭ್ರಮೆಯೊಳಗಿರ್ದು ಇಲ್ಲದ ಶರಣನ ಇರವು ಸದಾಶಿವ ಮೂರ್ತಿ ಲಿಂಗದಂಗವು ತಾನೇ.

ಟಿಪ್ಪಣಿ: ನಿಜಶರಣನು ಹೇಗೆ ಅಲಿಪ್ತನಿರುವನು ಎಂಬುದನ್ನು ಹೇಳುವಾಗ, ಅವನು ಬರಿಯ ಪಾಠಕನಲ್ಲ, ಮೂಲಿಕಾದಿ ಸಿದ್ಧಿಗಳ ಬೆನ್ನ ಬಿದ್ದವನಲ್ಲ, ಎಂದು ಮುಂತಾಗಿ ಇಲ್ಲಿ ವಚನಕಾರರು ಹೇಳಿರುವರು. ಇನ್ನು ಹಠಯೋಗಾದಿಗಳ ಬೆನ್ನ ಬಿದ್ದು ವ್ಯರ್ಥ ಸಂಕಟಪಡದೆ ಶರಣ ಮಾರ್ಗವನ್ನು ಹಿಡಿಯಿರಿ ಎಂದು ಉಪದೇಶಿಸುವರು.

೧೭೩. ಹಠಯೋಗ, ಲಂಬಿಕೆ ಎಂದು ಅಕುಂಚನವ ಮಾಡಿ, ವಜ್ರ ಅಮರಿಯ ಕಲ್ಪವೆಂದು ಮಲಮೂತ್ರಂಗಳ ಸೇವಿಸುತ, ಇದು ಪೂರ್ವ ನವನಾಥಸಿದ್ಧರ ಮತೋಕ್ತವೆಂದು, ಕಾಪಾಲಿಕಾಚರಣೆಯನು ಆಚರಿಸುವರಲ್ಲ ಶರಣರು. ಮೇಣು, ತಲೆಯೊಳಗಣ ವಾತಪಿತ್ತಶ್ಲೇಷ್ಮವ ತೆಗೆದು ಅಮೃತ ವೆಂದು ಬಿನುಗು ದೃಷ್ಟವ ತೋರುವರಲ್ಲ ಶರಣರು. ದ್ರವಿಸುವದೆಲ್ಲ ಅಪ್ಪುವಿನ ಫಲ, ರಸ, ಕ್ಷೀರ, ಘೃತ ಮೊದಲಾದವ ಸೇವಿಸುತ್ತ ಅನ್ನವ ಬಿಟ್ಟಿವೆಂಬ ಭೂತ ಬೇಷ್ಟಿಕರಲ್ಲ ಶರಣರು. ಇವೆಲ್ಲವು ಕಾಕು, ಸಟೆ, ಭ್ರಾಂತೆಂದು ತಿಳಿದು ನಿರ್ಧರ ನಿಜದಿ ನಿಂದರು. ಗುಹೇಶ್ವರಾ, ನಿಮ್ಮ ಶರಣರು ಅಗ್ರಗಣ್ಯರು.

ಟಿಪ್ಪಣಿ:— ಶರಣ ಮಾರ್ಗವು ಸರಲವಿರುವದು. ಅವುಗಳಲ್ಲಿ ಚಮತ್ಕಾರಾದಿಗಳಿಗೆ ಅಸ್ಪದವಿಲ್ಲ, ಕುಟಿಲ ಕುಹಕ ಕಪಟಗಳಿಗೆ ಎಡೆ ಇಲ್ಲ, ಎಂದು ವಚನಕಾರರು ತಾವಾಗಿ ಹೇಳುವರು. ಇನ್ನು ವಚನ ಕಾರರು ವೈರಾಗ್ಯವನ್ನು ಕುರಿತು ಮತ್ತು ಬಾಹ್ಯ ವೇಷಲ್ಲಾರಭನಾದಿ ಗಳನ್ನು ಕುರಿತು ಹೇಳುವರು.

೧೭೪. ಅರ್ಥಸನ್ಯಾಸಿಯಾದಡೇನಯ್ಯ? ಅವಂಗದಿಂ ಬಂದಡೆಯೂ ಕೊಳ್ಳದಿರಬೇಕು. ರುಚಿಸನ್ಯಾಸಿಯಾದಡೇನಯ್ಯ? ಜಿಹ್ವೆಯ ಕೊನೆಯಲ್ಲಿ ಮಧುರವನು ಅರಿಯದಂತಿರಬೇಕು. ಸ್ತ್ರೀಸನ್ಯಾಸಿಯಾದಡೇನಯ್ಯ? ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ತಟ್ಟಲ್ಲದಿರಬೇಕು. ದಿಗಂಬರಿಯಾದಡೇನಯ್ಯ? ಮನ ಬತ್ತಲೆ ಇರಬೇಕು. ಇಂತೀ ಚತುರ್ವಿಧದ ಹೊಲಬನರಿಯದೆ ವೃಥಾ ಕೆಟ್ಟರು ಕಾಣಾ ಚನ್ನಮಲ್ಲಿಕಾರ್ಜುನಾ.

೪೭೫. ವೇಷ ಎಲ್ಲಿರದು? ಸೂಳೆಯಲ್ಲಿ, ಡೊಂಬನಲ್ಲಿ ಬಹುರೂಪಿಯಲ್ಲಿ ಇರವೇ? ವೇಷವ ತೋರಿ ಒಡಲ ಹೊರೆವ ದಾಸಿ ವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದೋ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ?

೪೭೬. ಜಡೆಮುಡಿ ಬೋಳು ಹೇಗಿದ್ದರೇನೊ? ನಡೆನುಡಿ ಸಿದ್ಧಾಂತವಾದರೆ ಸಾಕು, ಅತ ಸ್ವಯಂಜ್ಯೋತಿ ಗುರುವಹ. ಈ ಇರವ ನಿನ್ನ ನೀನರಿ. ಪಾಪಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗಾ.

ಟಪ್ಪಣಿ:— ಬಾಹ್ಯ ಲಾಂಛನಾದಿಗಳಿಗೆ ಮಹತ್ವಕೊಡದೆ ನಡೆ ನುಡಿಗಳಿಗೆ ಮಹತ್ವ ಕೊಡತಕ್ಕುಮ್ದು ಎಂದು ವಚನಕಾರರ ಮತವು. ಇನ್ನು ಸಾಧಕನು ಶ್ರೇಷ್ಠ ಪದವಿಯನ್ನೇರಿದ್ದರೂ ವಿನಯದಿಂದಲೂ ಸಭ್ಯತನದಿಂದಲೂ ವರ್ತಿಸಬೇಕು ಎಂಬ ಬಗ್ಗೆ.

೪೭೭. ಪುಣ್ಯಪಾಪಂಗಳೆಂಬವು ತಮ್ಮ ಇಷ್ಟವು ಕಂಡಿರಯ್ಯ! 'ಅಯ್ಯಾ' ಎಂದಡೆ ಸ್ವರ್ಗ, 'ಎಲವೋ' ಎಂದಡೆ ನರಕ. 'ದೇವಭಕ್ತ ಜಯ ಜಯ' ಎಂಬ ನುಡಿಯೊಳಗೆ ಕೈಲಾಸವೈದುದು ಕೂಡಲಸಂಗಮದೇವಾ.

೪೭೮. ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ, ನಾ ಮತ್ತಾವ ಪದವಿಯನೊಲ್ಲೆನಯ್ಯ. ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯನೇ ಕರುಣಿಸಯ್ಯ.

ಟಪ್ಪಣಿ:— ಯಾವ ಮಹತ್ವಾಕಾಂಕ್ಷೆಯನ್ನೂ ತಾಳದೆ ನಮ್ರ ಸ್ಥಾನವನ್ನೇ ಶರಣು ಬೇಡುವನು. ಇನ್ನು ಕೃತಕವಾದ ಕುಲಜಾತಿ ಮುಂತಾದವುಗಳಿಗೆ ಮಹತ್ವಕೊಡಬಾರದು, ಎಂಬ ಬಗ್ಗೆ.

೪೭೯. ದೇವದೇವ ಬಿನ್ನಪವ ಅವಧಾರು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನು ಒಂದೇ ಎಂಬೆ. ಹಾರುವ ಮೊದಲು ಶ್ವಪಚರ ಕಡೆಯಾಗಿ ಭವಿಯಾದವರನೆಲ್ಲರನು ಒಂದೇ ಎಂಬೆ. ಹೀಗೆಂದು ನಂಬುವುದೆನ್ನ ಮನವು. ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳರೆ, ನೀನಂದೇ ಮೂಗಕೊಯ್ಯಿ, ಕೂಡಲಸಂಗಮದೇವಾ.

೪೮೦ ನಡೆ ನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಯಲ್ಲ. ನುಡಿ ಲೇಸು ನಡೆ ಅಧಮವಾದಲ್ಲಿ ಅದೇ ಬಿಡುಗಡೆ. ಇಲ್ಲದ ಹೊಲೆ ಕಳವು ಪರದಾರಂಗಳಲ್ಲಿ

ಹೊಲಬನರಿಯದೆ ಕೆಟ್ಟು ನಡೆವುತ್ತ ಮತ್ತೆ ಕುಲಜರೆಂಬ ಒಡಲುಂಟೇ? ಆಚಾರವೇ ಕುಲ, ಅನಾಚಾರವೇ ಹೊಲೆ. ಇಂತೀ ಉಭಯವ ತಿಳಿದು ಅರಿಯಬೇಕು, ಕಯ್ಯುಳಿಗತ್ತಿ ಅಡಿಗೂಂಟ ಕೆಡೆಯಾಗಬೇಡ, ಅರಿ ನಿಜಾತ್ಮ ರಾಮನಾ.

೪೮೧. ಕೊಲ್ಲುವನೇ ಮಾದಿಗನು. ಹೊಲಸು ತಿಂಬವನೇ ಹೊಲೆಯ. ಕುಲವೇನೊ? ಅವಂದಿರ ಕುಲವೇನೋ? ಸಕಲ ಜೀವಾತ್ಮಕರಿಗೆ ಲೇಸನೇ ಬಯಸುವರು ನಮ್ಮ ಕೂಡಲಸಂಗನ ಶರಣರೆಲ್ಲ ಕುಲಜರು.

ಟಪ್ಪಣಿ:— ಶ್ರೇಷ್ಠ ಕನಿಷ್ಠ ಎಂಬುದನ್ನು ಕರ್ಮಗಳಿಂದ ಮತ್ತು ಗುಣಗಳಿಂದ ಅರಿಯಬೇಕು, ಹೊರತು ಕುಲದಿಂದಲ್ಲ, ಎಂಬ ಸಿದ್ಧಾಂತವನ್ನು ವಚನಕಾರರು ಎತ್ತಿ ಹಿಡಿಯುವರು. ಇನ್ನು ಭಕ್ತನು ಲೋಕಾಪವಾದಕ್ಕೆ ಅಂಜದೆ ಆತ್ಮಸಾಕ್ಷಿಯಾಗಿ ನಡೆಯಬೇಕೆಂದು ಅವರ ಮತವು.

೪೮೨. ಆಯುಷ್ಯ ತೀರಿದಲ್ಲದೆ ಮರಣವಿಲ್ಲ. ಭಾಗ್ಯ ತೀರಿದಲ್ಲದೆ ದಾರಿದ್ರ್ಯವಿಲ್ಲ, ಅಂಜಲೇತಕೋ ಲೋಕ ವಿಗರ್ಭಣೆಗೆ? ಅಳಲೇತಕೋ ಕೂಡಲಸಂಗಮದೇವಾ ನಿಮಗಾಳಾಗಿ.

೪೮೩. ಸರ್ವಸಂಗಪರಿತ್ಯಾಗವ ಮಾಡಿದ ಶಿವಶರಣನ, ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯ? ಊರೊಳಗಿದ್ದರೆ ಉಪಾಧಿಕನೆಂಬರು, ಅಡವಿಯೊಳಗಿದ್ದರೆ ಮೃಗನೆಂಬರು. ಹೊನ್ನ ಬಿಟ್ಟರೆ ದರಿದ್ರನೆಂಬರು. ಹೆಣ್ಣ ಬಿಟ್ಟರೆ ನಪುಂಸಕನೆಂಬರು. ಪುಣ್ಯವ ಬಿಟ್ಟರೆ ಪೂರ್ವಕರ್ಮಿ ಎಂಬರು. ಮಾತಾಡದಿದ್ದರೆ ಮೂಗನೆಂಬರು. ಮಾತನಾಡಿದರೆ ಜ್ಞಾನಿಗೆ ಕಯ್ಯ ಮಾತೇಕೆಂಬರು. ನಿಜವನಾಡಿದರೆ ನಿಷ್ಠುರನೆಂಬರು. ಸಮತೆಯ ನುಡಿದರೆ ಅಂಜುವನೆಂಬರು. ಇದುಕಾರಣ ಕೂಡಲ ಚನ್ನಸಂಗಯ್ಯ, ನಿಮ್ಮ ಶರಣ ಲೋಕದಿಚ್ಛೆಯ ನುಡಿಯ, ಲೋಕದಿಚ್ಛೆಯ ನಡೆಯ.

ಟಪ್ಪಣಿ:— ಶರಣನು ಆತ್ಮಪ್ರಕಾಶದಿಂದ ದಾರೀ ನಡೆಯಬೇಕು, ನಿಂದಾಸ್ತುತಿಗಳಿಗೆ ಮಹತ್ವಕೊಡಬಾರದು, ಎಂದು ಹೇಳಿ ಜ್ಞಾನಿಗಳ ಲಕ್ಷಣಗಳಾವು ಎಂಬುದನ್ನು ಹೇಳುವರು.

೪೮೪. ಜ್ಞಾನಿಗಳು ತಾವಾದ ಬಳಿಕ ಮುಕುರದ ಬಿಂಬದಂತಿರಬೇಕು. ಜ್ಞಾನಿಗಳು ತಾವಾದ ಬಳಿಕ ಜ್ಞಾನದಲ್ಲಿ ಕನಕದಂತಿರಬೇಕು. ಜ್ಞಾನಿಗಳು

ತಾವಾದಬಳಿಕ ಸಂಶಯರಹಿತರಾಗಿರಬೇಕು. ಜ್ಞಾನಿಗಳು ತಾವಾದ ಬಳಿಕ ಪರಿಪೂರ್ಣ ಜಗತ್ತೆಂದು ಅರಿಯಬೇಕು. ಜ್ಞಾನಿಗಳು ತಾವಾದ ಬಳಿಕ ಪಾಪ ವಾಸನೆ ತೋರದಿರಬೇಕು. ಜ್ಞಾನಿಗಳು ತಾವಾದಬಳಿಕ ಅನ್ಯರ ನುಡಿಗೊಳಗಾಗಬಾರದು. ಜ್ಞಾನಿಗಳು ತಾವಾದ ಬಳಿಕ ಅನ್ಯರ ನಿಂದೆಗೆ ಒಳಗಾಗಬಾರದು. ಜ್ಞಾನಿಗಳು ತಾವಾದ ಬಳಿಕ ಗುರುಹಿರಿಯರಿಗಂಜಿ ನಡೆಯಬೇಕು. ಜ್ಞಾನಿಗಳು ತಾವಾದ ಬಳಿಕ ಅನ್ಯ ಸ್ತ್ರೀ ಮಾತೆಯಂತಿರಬೇಕು. ಜ್ಞಾನಿಗಳು ತಾವಾದ ಬಳಿಕ ವಿಶ್ವಾಸಘಾತವ ಮಾಡಬಾರದು. ಜ್ಞಾನಿಗಳು ತಾವಾದಬಳಿಕ ಪರದೂಷಣೆಯ ಮಾಡಬಾರದು. ಜ್ಞಾನಿಗಳು ತಾವಾದಬಳಿಕ ಪರದ್ರವ್ಯವ ಅಪಹರಿಸಬಾರದು. ಜ್ಞಾನಿಗಳು ತಾವಾದಬಳಿಕ ಗುರುಸೇವೆ, ಲಿಂಗಪೂಜೆ, ಜಂಗಮದಾಸೋಹವ ಬಿಡಬಾರದು. ಜ್ಞಾನಿಗಳು ತಾವಾದಬಳಿಕ ನುಡಿಕೊಟ್ಟು ತಪ್ಪಬಾರದು. ಜ್ಞಾನಿಗಳು ತಾವಾದ ಬಳಿಕ ಅನ್ಯರ ಹಂಗಿನೊಳಗಾಗಬಾರದು. ಜ್ಞಾನಿಗಳು ತಾವಾದ ಬಳಿಕ ವಚನವ ಕೊಡಬಾರದು. ಜ್ಞಾನಿಗಳು ತಾವಾದ ಬಳಿಕ ಅಸತ್ಯವ ನುಡಿಯಬಾರದು. ಜ್ಞಾನಿಗಳು ತಾವಾದ ಬಳಿಕ ರಾಜರ ಮುಂದೆ ಅಸತ್ಯ ಸಾಕ್ಷಿಯ ನುಡಿಯನು ನುಡಿಯಬಾರದು. ಜ್ಞಾನಿಗಳು ತಾವಾದ ಬಳಿಕ ಜನರಪವಾದಕ್ಕೆ ಅನುಕೂಲವಾಗಬಾರದು. ಜ್ಞಾನಿಗಳು ತಾವಾದಬಳಿಕ ಮತಾಭಿಮಾನವ ತೋರಬಾರದು. ಜ್ಞಾನಿಗಳು ತಾವಾದ ಬಳಿಕ ಕಪಿಲಸಿದ್ಧ ಮಲ್ಲಿಕಾರ್ಜುನನೆಗೆ ಅವಮಾರ್ಗದಿಂ ಚ್ಯುತನಾಗಬಾರದು. ಇದರಂತೆ ವರ್ತಿಸಬೇಕು ಕೇಳಾ.

ಟಿಪ್ಪಣಿ:— ಇಲ್ಲಿ ವಿಧಿನಿಷೇಧಗಳ ದೊಡ್ಡ ಮಾಲಿಕೆಯೆ ಕೊಡಲ್ಪಟ್ಟಿರುವದು. ಈ ರೀತಿ ವಿಧಾಯಕ ಮತ್ತು ನಿಷೇಧಕ ನಿಯಮಗಳನ್ನು ಪಾಲಿಸುವ ಸಾಧಕನು ಸಿದ್ಧಾವಸ್ಥೆಯನ್ನು ಪಡೆಯುವನು.

---

೧೮. ಷಟ್‌ಸ್ಥಲಶಾಸ್ತ್ರ ಮತ್ತು ವೀರಶೈವ ಸಾಂಪ್ರದಾಯ

ವಿವರಣೆ

ವಚನಶಾಸ್ತ್ರಕ್ಕೆ ಆಧಾರಭೂತವಾದ ತತ್ವಜ್ಞಾನ, ಆ ಶಾಸ್ತ್ರದ ಧ್ಯೇಯ, ಆ ಧ್ಯೇಯವನ್ನು ಪ್ರಾಪ್ತಮಾಡಿಕೊಳ್ಳುವ ಸಾಧನ ಈ ಮುಂತಾದ ವಿಷಯಗಳನ್ನು ಇದುವರೆಗೆ ಹೇಳಿದ್ದಾಯಿತು. ಹೀಗೆ ಮಾಡುವಾಗ ಎಲ್ಲ ವೇದಾಂತ ದರ್ಶನಗಳಿಗೆ ಸಾಮಾನ್ಯವಾದ ಪರಿಭಾಷೆಯನ್ನು ಆದಷ್ಟು ಮಟ್ಟಿಗೆ ಉಪಯೋಗಿಸಿದ ವಚನಗಳನ್ನೆ ಉದಾಹರಿಸಿದ್ದರಿಂದ ಅವುಗಳಲ್ಲಿ ಸಾಂಪ್ರದಾಯಿಕ ಭಾಗವಾಗಲಿ, ಭಾಷೆಯಾಗಲಿ ತೀರ ಕಡಿಮೆ ಬಂದಿರುವದು. ಇನ್ನು ಈ ಪ್ರಕರಣದಲ್ಲಿ ಮುಖ್ಯವಾಗಿ ಷಟ್‌ಸ್ಥಲಸಾಂಪ್ರದಾಯವನ್ನು ಕುರಿತು ಇರುವ ವಚನಗಳನ್ನು ಸಂಕ್ಷೇಪದಿಂದ ಕೊಡುವ ವಿಚಾರವಿದೆ. ಈ ವರೆಗೆ ವಚನಾಮೃತದಲ್ಲಿ ಬಂದ ತತ್ವಜ್ಞಾನ, ಸತ್ಯ ಅಹಿಂಸಾದಿ ನೈತಿಕ ಆಚಾರ, ಸರ್ವಾರ್ಪಣ ಜ್ಞಾನಸಫಕ್ತ್ಯಾದಿ ಸಾಧನಮಾರ್ಗ ಇವೆಲ್ಲವುಗಳನ್ನು ಪುನಃ ಈ ಪ್ರಕರಣದಲ್ಲಿ ಹೇಳುವ ಕಾರಣವಿಲ್ಲ. ಯಾವ ಸಂಗತಿಗಳ ಮೂಲಕ ಈ ಸಾಂಪ್ರದಾಯಕ್ಕೆ ವಿಶಿಷ್ಟತ್ವವು ಉಂಟಾಗಿದೆಯೊ ಆ ಸಂಗತಿಗಳನ್ನಷ್ಟೆ ಇಲ್ಲಿ ಕೊಟ್ಟರೆ ಸಾಕು.

ಶಿವನೇ ಸರ್ವೋತ್ತಮನು, ಅವನೇ ಪರಮ ದೈವತವು, ಅವನೇ ಪರಾತ್ಪರನು ಇರುವುದರಿಂದ ಶಿವೈಕ್ಯವೆ ಈ ಸಾಂಪ್ರದಾಯದ ಅತ್ಯುಚ್ಚ ಧ್ಯೇಯವು. ಲಿಂಗವು ಶಿವನ ಪ್ರತೀಕವೆಂದು ತಿಳಿಯಲ್ಪಟ್ಟಿದ್ದರಿಂದ ಆ ಸ್ಥಿತಿಗೆ ಲಿಂಗೈಕ್ಯವೆಂದೂ ಅನ್ನುವದುಂಟು. ಜೀವನಿಗೆ ಈ ಸಾಂಪ್ರದಾಯದಲ್ಲಿ 'ಅಂಗ' ಎಂಬ ಹೆಸರು ಇರುವುದರಿಂದ ಜೀವ ಶಿವ ಸಾಯುಜ್ಯಕ್ಕೆ ಲಿಂಗಾಂಗಯೋಗ ಅಥವಾ ಲಿಂಗಾಂಗಸಂಯೋಗ ಎನ್ನುವರು. ಈ ಐಕ್ಯವು ಶಿವಸೊಡನೆ ಶಿವನ ಸರ್ವ ವ್ಯಾಪಾರಗಳಲ್ಲಿಯೂ ಸಮವಾಗಿ ಇರುವುದರಿಂದ ಇದು ಸಮರಸೈಕ್ಯವೆನಿಸುವದು. ಇದು ಸಮರಸವಿರುವುದರಿಂದ ಜೀವನು ಆ ಸ್ಥಿತಿಯನ್ನು ಮುಟ್ಟಿದಾಗ ಪರಮಾನಂದವನ್ನನುಭವಿಸಲು ಸಮರ್ಥನಾಗುವನು. ಇದಕ್ಕೆ ಲಿಂಗಾಂಗಸಾಮರಸ್ಯವೆಂಬ ಹೆಸರೂ ಇರುವದು.

ಈ ಧ್ಯೇಯವನ್ನು ಈ ಸಾಂಪ್ರದಾಯದ ಪದ್ಧತಿಯಂತೆ ಸಡ
ಕೊಳ್ಳುವ ಸಾಧನವನ್ನು ಹೇಳುವ ಪೂರ್ವದಲ್ಲಿ ಈ ಸಾಂಪ್ರದಾಯದ
ವಿಶಿಷ್ಟವಾದ ಷಟ್ಸ್ಥಲ ವಿವೇಕವನ್ನು ತಿಳಿದುಕೊಳ್ಳುವದು ಅವಶ್ಯವು.
ಸಾಧಕನ ಸಾಧನಾವಸ್ಥೆಗಳಲ್ಲಿ ಆರು ತರಗತಿಗಳನ್ನು ಮಾಡಿ ಅವುಗಳಿಗೆ
ಷಟ್ಸ್ಥಲಗಳು ಎಂದು ಆರು ಬೇರೆ ಬೇರೆ ಹೆಸರುಗಳು ಕೊಡಲ್ಪಟ್ಟಿವೆ.
ಭಕ್ತಸ್ಥಲ, ಮಹೇಶಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ,
ಮತ್ತು ಐಕ್ಯಸ್ಥಲ ಎಂಬುವೆ ಆ ಆರು ಸ್ಥಲಗಳ ಹೆಸರುಗಳು. ಇವೆಲ್ಲವು
ಗಳಲ್ಲಿ ಐಕ್ಯಸ್ಥಲವೆ ಎಲ್ಲಕ್ಕೂ ಶ್ರೇಷ್ಠ ಸ್ಥಲವು. ಅದೇ 'ವಚನಸಿದ್ಧ'ನ
ನಿಲವು, ಎಂದು ಹೇಳಬಹುದು. ಜೀವ ಶಿವರ ಐಕ್ಯವನ್ನು ಅಲ್ಲಿ ಸಾಧಿ
ಸುತ್ತಿರುವುದರಿಂದ ಅದಕ್ಕೆ ಐಕ್ಯಸ್ಥಲವೆಂಬ ಹೆಸರು ಬಂದಿದೆ. ಅದೇ ಶಿವೈ
ಕ್ಯವು, ಲಿಂಗೈಕ್ಯವು, ನಿಜೈಕ್ಯವು. ಅಲ್ಲಿ ಜೀವಸ್ವರೂಪವು ಸಂಪೂರ್ಣ
ನಷ್ಟವಾಗುವುದರಿಂದ, ಶೂನ್ಯರೂಪವಾಗುವುದರಿಂದ ಅದಕ್ಕೆ ಶೂನ್ಯಸಂಪಾ
ದನೆ ಎಂಬ ಹೆಸರೂ ಇರುವದು.

ಈ ಸ್ಥಳಗಳು ಹೇಗೆ ಸಿದ್ಧವಾದವು, ಅವುಗಳ ಲಕ್ಷಣಗಳೇನು,
ಇದನ್ನು ಇನ್ನು ನೋಡಬೇಕು. ಸಾಧಕನು ಪರಮಾತ್ಮನೊಡನೆ ಮತ್ತು
ಪರಮಾತ್ಮನಿರ್ಮಿತ ಸೃಷ್ಟಿಯೊಡನೆ ಯಾವ ಬಗೆಯ ಸಂಬಂಧವನ್ನಿಡು
ವನೊ ಮತ್ತು ಯಾವ ಬಗೆಯಿಂದ ಆಚರಿಸುವನೊ ಆ ಬಗೆಗಳಲ್ಲಿಯೆ ಈ
ಆರು ಸ್ಥಲಭೇದಗಳು ಕಲ್ಪಿಸಲ್ಪಟ್ಟಿರುವವು. ಸಾಧಕ ಮತ್ತು ಪರಮಾತ್ಮ
ಇವರೇ ಜೀವಶಿವರು. ಇವರಿಗೆಯೆ ಈ ಸಂಪ್ರದಾಯದಲ್ಲಿ 'ಅಂಗ'
ಮತ್ತು 'ಲಿಂಗ' ಎಂಬ ಹೆಸರುಗಳು ಇರುವವು. ನಿಃಕಲ ಶಿವತತ್ವವು
ತನ್ನ ಶಕ್ತಿಯ ಜಲಸಮಾತ್ರದಿಂದ ಲಿಂಗ ಮತ್ತು ಅಂಗ ಎಂದು ಎರಡು
ತೆರನಾಯಿತು. ಲಿಂಗವು ಪುನಃ ಗುರುಲಿಂಗ, ಜಂಗಮಲಿಂಗ, ಆಚಾರ
ಲಿಂಗ ಎಂದು ಮೂರು ತೆರನಾಯಿತು. ಆ ಮೂರು ಮತ್ತೆ ಮಹಾಲಿಂಗ,
ಪ್ರಸಾದಲಿಂಗ, ಜಂಗಮಲಿಂಗ ಅಥವಾ ಜರಲಿಂಗ ಶಿವಲಿಂಗ, ಗುರುಲಿಂಗ,
ಆಚಾರಲಿಂಗ ಎಂದು ಕ್ರಮವಾಗಿ ಒಂದೊಂದು ಎರಡು ತೆರ ಆದವು.
ಇದೇ ರೀತಿ ಅಂಗವು ಯೋಗಾಂಗ, ಭೋಗಾಂಗ, ತ್ಯಾಗಾಂಗ ಎಂದು
ಮೂರು ತೆರ ಆಗಿ, ಆ ಮೂರು ಮತ್ತೆ ಐಕ್ಯ ಶರಣ, ಪ್ರಾಣಲಿಂಗಿ ಪ್ರಸಾದಿ,
ಮಹೇಶ ಭಕ್ತ, ಎಂದು ಒಂದೊಂದು ಎರಡು ತೆರ ಆದವು. ಹೀಗೆ ಒಟ್ಟು
ಆರು ಲಿಂಗಸ್ಥಲಗಳು ಮತ್ತು ಆರು ಅಂಗಸ್ಥಲಗಳು ಆದವು.

ಅಂಗಲಿಂಗಗಳ ವಿಶಿಷ್ಟ ಬಗೆಯ ಸಂಬಂಧವೆ ಆಯಾ ಸ್ಥಳಗಳ ಹೆಸರು
ಗಳಿಗೆ ಕಾರಣವಾಗಿರುವುದರಿಂದ ಮೇಲೆ ಹೇಳಿದ ಮುಖ್ಯ ಆರು ಸ್ಥಲಗಳ
ಲಕ್ಷಣಗಳು ಯಾವವು ಇದನ್ನು ಮೊದಲು ನೋಡುವದು ಅವಶ್ಯವು. ಲಿಂಗ
ದಲ್ಲಿ ಪೂರ್ಣ ವಿಶ್ವಾಸವು ಭಕ್ತಸ್ಥಲದ ಮುಖ್ಯ ಲಕ್ಷಣವು. ಆ ವಿಶ್ವಾಸವು
ದೃಢವಾಗಿ ಪೂರ್ಣ ನಿಷ್ಠೆಯಿಂದ ಲಿಂಗಜಂಗಮರ ಸೇವೆ ಮಾಡುವದು
ಮಹೇಶನ ಮುಖ್ಯ ಲಕ್ಷಣವು. ಸಾಧನದಿಂದ ಎಲ್ಲವನ್ನು ಲಿಂಗಕ್ಕೆ ಅರ್ಪಿಸಿ
ಬಳಿಕ ತಾನು ಕೊಳ್ಳುವದು ಪ್ರಸಾದಿಯ ಲಕ್ಷಣವು. ತನ್ನ ಪ್ರಾಣವನ್ನು
ಲಿಂಗದಲ್ಲಿ ಲಯಗೊಳಿಸಿ ಎರಡನ್ನೂ ಅಭೇದ ದೃಷ್ಟಿಯಿಂದ ನೋಡುವವನೆ
ಪ್ರಾಣಲಿಂಗಿಯು. ಲಿಂಗಾಂಗಯೋಗದ ಅನುಭವಯುಕ್ತ ಜ್ಞಾನವೆ
ಶರಣನ ಲಕ್ಷಣವು. ಆ ಜ್ಞಾನವು ನೆಲೆಯಾಗಿ ಸಮರಸವನ್ನೈದಿತೆಂದರೆ
ಅದು ಐಕ್ಯಸ್ಥಲವೆನಿಸುವದು. ಈ ಲಕ್ಷಣಗಳನ್ನು ಇಲ್ಲಿ ಅತ್ಯಂತ ಸಂಕ್ಷೇಪ
ದಿಂದ ಕೊಟ್ಟಿದ್ದಾಗಿದೆ. ಅವುಗಳ ವಿವರವನ್ನು ಆಯಾ ವಚನಗಳಲ್ಲಿ
ನೋಡಬಹುದು. ಈ ಆರೇ ಮುಖ್ಯ ಸ್ಥಲಗಳಿದ್ದರೂ ಅವುಗಳಲ್ಲಿಯೆ
ಪರ್ಯಾಯಗಳನ್ನು ಮಾಡಿ ಮೂವತ್ತಾರು, ನೂರಾ ಒಂದು, ಇನ್ನೂರಾ
ಹದಿನಾರು ಹೀಗೆ ಸ್ಥಲಗಳನ್ನು ಕಲ್ಪಿಸುವರು. ಉದಾ:- ಈ ಆರು
ಸ್ಥಲಗಳೆ ಮತ್ತೆ ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ ಇತ್ಯಾದಿ,
ಹೀಗೆ ಪ್ರತಿಯೊಂದೊಂದು ಸ್ಥಲದಲ್ಲಿ ಕ್ರಮವಾಗಿ ಮಿಕ್ಕ ಐದು ಸ್ಥಲಗಳನ್ನು
ಸಂಯೋಗಿಸುವುದರಿಂದ ಮೂವತ್ತಾರು ಸ್ಥಲಗಳಾಗುವವು. ಅದೇ ರೀತಿ
ಭಕ್ತನ ಆಚಾರಲಿಂಗ, ಭಕ್ತನ ಗುರುಲಿಂಗ, ಇತ್ಯಾದಿ, ಹೀಗೆ ಪ್ರತಿಯೊಂದು
ಅಂಗಸ್ಥಲವನ್ನು ಪ್ರತಿಯೊಂದು ಲಿಂಗಸ್ಥಲದೊಡನೆ ಸಂಯೋಗಿಸುವು
ದರಿಂದ ೩೬ ಸ್ಥಲಗಳು ಸಿದ್ಧವಾಗುವವು. ಇದಲ್ಲದೆ ಭಕ್ತಸ್ಥಲದಿಂದ ಐಕ್ಯ
ಸ್ಥಲದ ವರೆಗೆ ಕ್ರಮವಾಗಿ ೧೫, ೯, ೭, ೫, ೪, ೪, ಹೀಗೆ ಆರು ಅಂಗಸ್ಥಲ
ಗಳಲ್ಲಿ ಕೂಡಿ ೪೪ ಸ್ಥಲಗಳು ಕಲ್ಪಿಸಲ್ಪಟ್ಟಿರುವವು; ಅದೇ ರೀತಿ ಆಚಾರ
ಲಿಂಗದಿಂದ ಮಹಾಲಿಂಗದವರೆಗೆ ಕ್ರಮವಾಗಿ ೯, ೯, ೯, ೯, ೯, ೧೫
ಹೀಗೆ ಎಲ್ಲ ಲಿಂಗ ಸ್ಥಲಗಳಲ್ಲಿ ಕೂಡಿ ೫೭ ಸ್ಥಲಗಳು ಕಲ್ಪಿಸಲ್ಪಟ್ಟಿರುವವು,
ಇವು ಒಟ್ಟು ೧೦೧ ಸ್ಥಲಗಳಾಗುವವು. ಇವು ಸಿದ್ಧಲಿಂಗೇಶ್ವರನ
'ಏಕೋತ್ತರ ಶತಸ್ಥಲ' ಎಂಬ ಗ್ರಂಥದಲ್ಲಿ ವಿವರವಾಗಿ ಹೇಳಲ್ಪಟ್ಟಿರುವವು.
ಇನ್ನೊಂದು ರೀತಿಯೆಂದರೆ, ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ
ಪ್ರಸಾದಿ ಇತ್ಯಾದಿ, ಹೀಗೆ ಸಿದ್ಧವಾದ ೩೬ ಸ್ಥಲಗಳಲ್ಲಿ ಪ್ರತಿಯೊಂದ
ರೊಡನೆ ಮತ್ತೆ ಭಕ್ತನ ಭಕ್ತನ ಆಚಾರಲಿಂಗ, ಭಕ್ತನ ಭಕ್ತನ ಗುರುಲಿಂಗ,

ಭಕ್ತನ ಭಕ್ತನ ಜಂಗಮಲಿಂಗ, ಭಕ್ತನ ಭಕ್ತನ ಶಿವಲಿಂಗ, ಭಕ್ತನ ಭಕ್ತನ ಪ್ರಸಾದಲಿಂಗ, ಭಕ್ತನ ಭಕ್ತನ ಮಹಾಲಿಂಗ ಎಂದು ಆರು ಲಿಂಗಸ್ಥಲಗಳನ್ನು ಕ್ರಮವಾಗಿ ಸಂಯೋಗಿಸುತ್ತ ಹೋಗುವುದರಿಂದ ಒಟ್ಟು ಇನ್ನೂರಾ ಹದಿನಾರು ಸ್ಥಲಗಳಾಗುವವು. ಹೀಗೆಲ್ಲ ಇವುಗಳ ವಿಸ್ತಾರವನ್ನು ಮಾಡಲಿಕ್ಕೆ ಬಂದರೂ ಮತ್ತು ಅತಿಶಯ ಸೂಕ್ಷ್ಮ ಭೇದಾಭೇದಗಳನ್ನು ಕಲ್ಪಿಸಲಿಕ್ಕೆ ಬಂದರೂ ವ್ಯಾವಹಾರಿಕ ದೃಷ್ಟಿಯಿಂದ ಮುಖ್ಯ ಷಟ್‌ಸ್ಥಲಗಳೇ ಉಪಯುಕ್ತವಿರುವವು; ಮತ್ತು ಸಾವಮಾನ್ಯ ಪ್ರಚಾರದಲ್ಲಿದ್ದು ಎಲ್ಲರಿಗೂ ತಿಳಿಯಬಲ್ಲವು.

ಇನ್ನು, ಈ ಷಟ್‌ಸ್ಥಲ ಸಾಂಪ್ರದಾಯದ ಧ್ಯೇಯವಾದ ಲಿಂಗೈಕ್ಯ ಸ್ಥಿತಿಯನ್ನು ಯಾವ ಸಾಧನಗಳಿಂದ ಪ್ರಾಪ್ತಮಾಡಿಕೊಳ್ಳಬೇಕು. ಇದನ್ನು ನೋಡುವ. ಈ ಸಾಧನದ ಮೂಲ ತತ್ವಗಳಾದ ಸರ್ವಾರ್ಪಣ, ಭಕ್ತಿ, ಜ್ಞಾನ ಮುಂತಾದವುಗಳ ಮತ್ತು ನೀತಿಯ ವಿವರಣೆಯು ಈ ಮೊದಲೇ ಬಂದುದರಿಂದ, ಇಲ್ಲಿ ಪುನಃ ಹೇಳುವ ಕಾರಣವಿಲ್ಲ. ಆ ತತ್ವಗಳ ಆಧಾರದಿಂದ ಪ್ರಚಲಿತ ಸಾಂಪ್ರದಾಯಿಕ ಆಚಾರಗಳನ್ನಷ್ಟೆ ಇಲ್ಲಿ ವಿಚಾರಿಸಿದರೆ ಸಾಕು.

ಜೀವನು ಮೂಲ ಶಿವರೂಪನಿದ್ದು, ಅಜ್ಞಾನದ ಆವರಣದ ಮೂಲಕ ಬದ್ಧಸ್ಥಿತಿಯಲ್ಲಿರುವನು. ಇವನು ಪುನಃ ಶಿವೈಕ್ಯವನ್ನು ಹೇಗೆ ಹೊಂದಬೇಕು, ಅಥವಾ ಅವನ ಅಂಗಗುಣವಳಿದು, ಅವನಲ್ಲಿ ಲಿಂಗಗುಣವು ಹೇಗೆ ಅಳವಡಬೇಕು ಇದೇ ಇಲ್ಲಿ ಮುಖ್ಯ ಪ್ರಶ್ನೆಯು. ಈ ಪ್ರಶ್ನೆಯನ್ನು ಬಿಡಿಸುವುದಕ್ಕಾಗಿ ಅಷ್ಟಾವರಣ ಮಾರ್ಗವು ಹೇಳಲ್ಪಟ್ಟಿದೆ. ಗುರುಲಿಂಗ ಜಂಗಮ ಪೂಜೆ, ಪಾದೋದಕ ಪ್ರಸಾದಗ್ರಹಣ, ವಿಭೂತಿ ರುದ್ರಾಕ್ಷಿ ಧಾರಣ ಮತ್ತು ಷಡಕ್ಷರಿ ಮಂತ್ರದ ಜಪ ಇವೆಲ್ಲ ಕೂಡಿ ಅಷ್ಟಾವರಣ ಮಾರ್ಗವೆನಿಸುವದು. ಇವು ಸಾಧಕನಿಗೆ 'ಆವರಣ' (ಕವಚ, ರಕ್ಷಕ) ರೂಪವಿರುವುದರಿಂದ ಇವುಗಳಿಗೆ ಆ ಹೆಸರು ಬಂದಿದೆ. ಮಂತ್ರಬೋಧ ಪೂರ್ವಕವಾಗಿ ಯಾವನು ಪರಮಾತ್ಮ ಪ್ರತೀಕವಾದ ಲಿಂಗವನ್ನು ಕರಸ್ಥಲದಲ್ಲಿ ಕೊಡುವನೊ ಅವನೇ 'ಗುರು' ಎಂದೆನಿಸುವನು. ಅತ್ಯಾದರ ಪೂರ್ವಕವಾಗಿ ಅವನ ಸೇವೆ ಮಾಡುವುದು ಗುರುಪೂಜೆಯು. ಪರಮಾತ್ಮ ಪ್ರತೀಕವಾದ ಕುರುಹೇ ಲಿಂಗವು. ಅದನ್ನು ಅಂಗದಮೇಲೆ ಧರಿಸಿ, ನಿತ್ಯ ಪೂಜಿಸಿ, ಅದಕ್ಕೆ ಎಲ್ಲವನ್ನು ಅರ್ಪಿಸಿ, ಆ ಬಳಿಕ ಸಾಧಕನು ಅರ್ಪಿತವನ್ನು

ಪ್ರಸಾದವೆಂದು ಗ್ರಹಿಸತಕ್ಕದ್ದು. ಲಿಂಗವನ್ನು ತನ್ನ ತನು ಪ್ರಾಣಭಾವಗಳಲ್ಲಿ ಸ್ಥಾಪಿಸಿ, ಅಂಗಗುಣಗಳನ್ನು ಕಳೆದು ಲಿಂಗ ಗುಣಿಯಾಗಲು ಪ್ರಯತ್ನಿಸತಕ್ಕದ್ದು. ಆ ಪ್ರತೀಕದ ಸಹಾಯದಿಂದ ಪರಮಾತ್ಮನ ಧ್ಯಾನಮಾಡತಕ್ಕದ್ದು. ಇದೆಲ್ಲ ಲಿಂಗಪೂಜೆಯೆನಿಸುವದು. ಷಟ್‌ಸ್ಥಲಗಳಲ್ಲಿ ಶ್ರೇಷ್ಠವಾದ ಐಕ್ಯಸ್ಥಲವನ್ನು ಪಡೆದು ಸುಳಿಯುವ ಸಿದ್ಧ ಪುರುಷನೆ ಜಂಗಮನೆನಿಸುವನು. ದಾಸೋಹಭಾವದಿಂದ ಅವನ ಸೇವೆಮಾಡಿ, ಅವನ ಪಾದೋದಕ ಪ್ರಸಾದಗಳನ್ನು ಗ್ರಹಿಸುವದು ಜಂಗಮಪೂಜೆ, ಮತ್ತು ಪಾದೋದಕ ಪ್ರಸಾದ ಗ್ರಹಣವೆನಿಸುವದು. ದೇಹ ಮನಸಗಳ ಶುದ್ಧಿಗಾಗಿ ವಿಭೂತಿ ರುದ್ರಾಕ್ಷಿಗಳನ್ನು ಧರಿಸಬೇಕು. 'ಓಂ ನಮಃ ಶಿವಾಯ' ಎಂಬ ಮಂತ್ರವನ್ನು ಸತತ ಜಪಿಸಬೇಕು. ಈ ಪ್ರಕಾರ ಅಷ್ಟಾವರಣ ಮಾರ್ಗದಿಂದ ಸಾಗುವವನು ಮೆಲ್ಲಮೆಲ್ಲನೆ ಐಕ್ಯಸ್ಥಲವನ್ನು ಮುಟ್ಟಿ ಧನ್ಯನಾಗುವನು.

ಈ ಅಷ್ಟಾವರಣಗಳಂತೆ ಈ ಸಂಪ್ರದಾಯದಲ್ಲಿ ಪಂಚ ಆಚಾರಗಳು ಹೇಳಲ್ಪಟ್ಟಿರುವವು. ಸದಾಚಾರ, ಗಣಾಚಾರ, ನಿತ್ಯಾಚಾರ, ಶಿವಾಚಾರ ಮತ್ತು ಲಿಂಗಾಚಾರ, ಇವೇ ಆ ಐದು ಆಚಾರಗಳು. ಶುದ್ಧ ನೈತಿಕ ಆಚಾರವೆ ಸದಾಚಾರವೆನಿಸುವದು. ಸತ್ಯದ ಮತ್ತು ಧರ್ಮದ ಯಥಾಯೋಗ್ಯ ರಕ್ಷಣೆಯೆ ಗಣಾಚಾರವು. ಪೂಜಾದಿ ನಿತ್ಯ ಕರ್ಮಗಳನ್ನು ಹಾಗೂ ವ್ರತಾದಿಗಳನ್ನು ತಪ್ಪದೆ ಮಾಡುವದು ನಿತ್ಯಾಚಾರವು. ಲಿಂಗಧಾರಿಗಳನ್ನು ಪ್ರತ್ಯಕ್ಷ ಶಿವನೆಂದು ಆದರಿಸುವುದೆ ಶಿವಾಚಾರವು. ನಿಷ್ಠೆಯಿಂದ ಲಿಂಗಧಾರಣೆ ಮಾಡಿ ಅದರ ನಿತ್ಯ ಪೂಜೆ ಮಾಡುವುದಕ್ಕೆ ಲಿಂಗಾಚಾರವೆಂಬ ಹೆಸರು.

ಈ ರೀತಿ ಅಷ್ಟಾವರಣ ಮತ್ತು ಪಂಚಾಚಾರ ಇವೇ ಈ ಸಂಪ್ರದಾಯದಲ್ಲಿಯ ವಿಶೇಷಗಳು.

ಷಟ್‌ಸ್ಥಲಗಳು ಹೇಗೆ ಆದವು ಇದನ್ನು ಇನ್ನು ಮೊದಲು ನೋಡುವ.

ವಚನಗಳು

೪೮೫. ....ಪರಶಿವನ ಚಿತ್‌ಶಕ್ತಿ ತಾನೆ ಎರಡು ತೆರನಾಯಿತ್ತು. ಲಿಂಗಸ್ಥಲವನಾಶ್ರಯಿಸಿ ಶಕ್ತಿ ಎನಿಸಿತ್ತು, ಅಂಗಸ್ಥಲವನಾಶ್ರಯಿಸಿ ಭಕ್ತಿ ಎನಿಸಿತ್ತು. ಶಕ್ತಿಯೇ ಪ್ರವೃತ್ತಿ ಎನಿಸಿತ್ತು, ಭಕ್ತಿಯೇ ನಿವೃತ್ತಿ ಎನಿಸಿತ್ತು, ಶಕ್ತಿ-

ಭಕ್ತಿ ಎಂದು ಎರಡು ಪ್ರಕಾರವಾಯಿತ್ತು. ಶಿವನ ಲಿಂಗ ಆರು ತೆರನಾಯಿತ್ತು. ಅಂಗವಾರು ತೆರನಾಯಿತ್ತು. ಶಕ್ತಿ ಆರು ತೆರನಾಯಿತ್ತು, ಭಕ್ತಿ ಆರು ತೆರನಾಯಿತ್ತು, ಅದು ಹೇಗಂದಡೆ, ನೊದಲಲ್ಲಿ ಲಿಂಗ ನೂರು ತೆರನಾಯಿತ್ತು, ಅದು ಹೇಗಂದಡೆ, ಭಾವಲಿಂಗವೆಂದು, ಪ್ರಾಣಲಿಂಗವೆಂದು, ಇಷ್ಟಲಿಂಗವೆಂದು ಮೂರು ತೆರನಾಯಿತ್ತು. ಆ ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗವೆಂಬ ಲಿಂಗತ್ರಯವು ಒಂದೊಂದು ಲಿಂಗ ಎರಡೆರಡಾಗಿ ಆರುತೆರನಾಯಿತ್ತು. ಆದು ಹೇಗೆಂದಡೆ, ಭಾವಲಿಂಗವು ಮಹಾಲಿಂಗವೆಂದು, ಪ್ರಸಾದಲಿಂಗವೆಂದು ಎರಡು ತೆರನಾಯಿತ್ತು. ಪ್ರಾಣಲಿಂಗವು, ಜಂಗಮಲಿಂಗವೆಂದು ಶಿವಲಿಂಗವೆಂದು ಎರಡು ತೆರನಾಯಿತ್ತು. ಇಷ್ಟಲಿಂಗವು, ಗುರುಲಿಂಗವೆಂದು, ಆಚಾರಲಿಂಗವೆಂದು ಎರಡು ತೆರನಾಯಿತ್ತು. ಹೀಗೆ ಒಬ್ಬ ಶಿವನು ಆರು ತೆರನಾದನು ..... ಇನ್ನು ಒಂದಂಗ ಮೂರು ತೆರನಾಯಿತ್ತು. ಅದು ಹೇಗಂದಡೆ, ಯೋಗಾಂಗ, ಭೋಗಾಂಗ, ತ್ಯಾಗಾಂಗವೆಂದು ಮೂರು ಪ್ರಕಾರವಾಗಿತ್ತು. ಈ ತ್ರಿಯಂಗವೇ ಒಂದೊಂದು ಎರಡಾಗಿ ಆರು ತೆರನಾಯಿತ್ತು. ಅದು ಹೇಗಂದಡೆ, ಯೋಗಾಂಗವೇ ಐಕ್ಯನೆಂದು ಶರಣನೆಂದು ಎರಡು ತೆರನಾಯಿತ್ತು. ಭೋಗಾಂಗವೇ ಪ್ರಾಣಲಿಂಗಿ ಎಂದು ಪ್ರಸಾದಿ ಎಂದು ಎರಡುತೆರನಾಯಿತ್ತು. ತ್ಯಾಗಾಂಗವೇ, ಮಹೇಶ್ವರನೆಂದು ಭಕ್ತನೆಂದು ಎರಡು ತೆರನಾಯಿತ್ತು. ಹೀಗೆ ಒಬ್ಬ ಶಿವಶರಣನು ಆರು ತೆರನಾದನು.....ಅಂಗವೆಂದಡೆ ಶರಣ, ಲಿಂಗವೆಂದಡೆ ಶಿವಶರಣಂಗೆ ಆ ಲಿಂಗವು ಯಾವಾಗಲೂ ಪ್ರಾಣವು, ಆ ಲಿಂಗಕ್ಕೆ ಆ ಶರಣನು ಯಾವಾಗಲೂ ಅಂಗವು, ಈ ಶರಣಲಿಂಗವೆರಡಕ್ಕೂ ಬೀಜವೃಕ್ಷದ ನ್ಯಾಯದ ಹಾಗಲ್ಲದೆ ಭಿನ್ನವಿಲ್ಲ. ಇದುಕಾರಣ ಆನಾದಿಯಿಂದಲೂ ಶರಣನೆಂದರೆ ಲಿಂಗ, ಲಿಂಗವೆಂದರೆ ಶರಣ. ಈ ಎರಡಕ್ಕೂ ಭೇದವಿಲ್ಲೆಂಬುದನ್ನು ಸ್ವಾನುಭಾವ ವಿವೇಕದಿಂದ ಅರಿದುದು ಅರುಹಲ್ಲದೆ, ಆಗಮಯುಕ್ತಿಯಿಂದ ಅರಿದುದು ಅರುಹಲ್ಲ. ಅದೇನು ಕಾರಣವೆಂದಡೆ, ಶಾಸ್ತ್ರಜ್ಞಾನದಿಂದ ಸಂಕಲ್ಪ ಹಿಂಗದಾಗಿ. ಈ ಷಟ್‌ಸ್ಥಲವಾರ್ಗವು ದ್ವೈತಾದ್ವೈತದ ಪರಿವರ್ತನೆಯಲ್ಲ. ಅದೇನು ಕಾರಣವೆಂದಡೆ, ಇದು ಶಿವಾದ್ವೈತ ಮಾರ್ಗವಾದ ಕಾರಣ. ಈ ಲಿಂಗಾಂಗ ಸಂಬಂಧ ಸಮರಸೈಕ್ಯವ ತಿಳಿದ ಬಳಿಕ, ಜೊಮ್ಮ ಪರಜೊಮ್ಮವೆಂದು ಬೇರುಂಟೇ, ತಾನಲ್ಲದೆ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ?

ಟಿಪ್ಪಣಿ:— 'ಸ್ಥಲವೃಕ್ಷ'ವನ್ನು ನೋಡಿದರೆ, ಮತ್ತು ರಹಸ್ಯದ ಬಿಲ್ಲಿಯ ಗಂನೆಯ ಪ್ರಕರಣವನ್ನು ಓದಿದರೆ ಈ ವಿಷಯವು ಇನ್ನೂ ಚನ್ನಾಗಿ

ತಿಳಿಯುವದು. ಇನ್ನು, ಭಕ್ತಮಹೇಶಾದಿ ಸ್ಥಲಗಳ ಲಕ್ಷಣಗಳೇನು ನೋಡುವ.

೪೫೬. ಭಕ್ತಂಗೆ ಕ್ರಿ, ಮಹೇಶ್ವರಂಗೆ ನಿಶ್ಚಯ, ಪ್ರಸಾದಿಗೆ ಅರ್ಪಣ. ಪ್ರಾಣಲಿಂಗಿಗೆ ಯೋಗ, ಶರಣಂಗೆ ನಿಜೈಕ್ಯ, ಐಕ್ಯಂಗೆ ನಿರ್ಲೇಪ, ಇಂತೀ ಷಟ್‌ಸ್ಥಲವನನುಗ್ರಹಿಸಿ ನಿಂದ ವಿರಕ್ತನ ಸ್ಥಲದಾತ ನಿಜ ತತ್ವದ ಕೂಟ, ಶಂಭುವಿಂದಿತ್ತ ಸ್ವಯಂಭುಗಿಂದತ್ತ ಅತಿಬಳ ನೋಡಾ, ಮಾತುಳಂಗ ಮಧುಕೇಶ್ವರನು.

೪೫೭. ವಿಶ್ವಾಸದಿಂದ ಭಕ್ತನಾಗಿ, ವಿಶ್ವಾಸದೊಳಗಣ ನೈಷ್ಠೆಯಿಂದ ಮಹೇಶ್ವರನಾಗಿ, ಆ ನೈಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗಿ, ಆ ಸಾವಧಾನದೊಳಗಣ ಸ್ವಾನುಭವದಿಂ ಪ್ರಾಣಲಿಂಗಿಯಾಗಿ ಆ ಸ್ವಾನುಭವದೊಳಗಣ ಅರುವಿನಿಂ ಶರಣನಾಗಿ, ಆ ಅರಿವು ನಿಜದಲ್ಲಿ ಸಮರಸಭಾವವನೈದಿದ ನಿರ್ಭಾವ ಪದದೊಳು ನಿಂದ ಭೇದವೇ ಐಕ್ಯಸ್ಥಲ ಕಾಣಾ ಗುಹೇಶ್ವರಾ.

೪೫೮. ಕಿಂಕುರ್ವಾಣತೆಯಿಂದ ಉಳ್ಳುದನರಿತು ಮಾಡುವಲ್ಲಿ ಭಕ್ತ, ನಿಷ್ಠೆ ನಿಬ್ಬೆರಸಿ ಗಟ್ಟಗೊಂಡು ಅಭಿಲಾಷೆ ಸಮನಿಸದೆ ಪರಿಚ್ಛೇದ ಬುದ್ಧಿಯುಳ್ಳಲ್ಲಿ ಮಾಹೇಶ್ವರ, ಅನರ್ಪಿತವ ಸಮನಿಸದೆ ಬಂದುದ ಕಾಯದ ಕರಣದ ಕೈಗಳಲ್ಲಿ ಕೊಟ್ಟು ಲಿಂಗ ಸಹಿತ ಭೋಗಿಸುವಲ್ಲಿ ಪ್ರಸಾದಿ, ಪ್ರಾಣಕ್ಕೆ ಪ್ರಾಣವಾಗಿ ಕಾಲ ಸ್ಥಿತಿಯನರಿದು ಎಚ್ಚರಿಕೆ ಕುಂದದಿಪ್ಪಲ್ಲಿ ಪ್ರಾಣಲಿಂಗಿ, ತನಗೆ ಲಿಂಗವಾಗಿ ಲಿಂಗಕ್ಕೆ ತಾನಾಗಿ ಬೆಚ್ಚು ಬೇರಿಲ್ಲದಿರ್ದಡೆ ಶರಣ, ಸದಾಚಾರ ಸಂಪತ್ತಿನಲ್ಲಿ ಬಂದ ಅನುಭಾವವನು ಮೀರಿ ಹೆಸರಡಗಿದ ಸುಖವದು ಲಿಂಗೈಕ್ಯ. ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಬಸವಣ್ಣಂಗಲ್ಲದೆ ಷಟ್‌ಸ್ಥಲವಪೂರ್ವ.

ಟಿಪ್ಪಣಿ:— ಷಟ್‌ಸ್ಥಲಗಳ ಲಕ್ಷಣಗಳನ್ನು ಹೇಳುವ ವಚನಗಳಲ್ಲಿ ಅಲ್ಪ ಸ್ವಲ್ಪ ಹೆಚ್ಚು ಕಡಿಮೆಗಳು ತೋರುವವು. ಆದರೆ ಅವೇನು ಅಂಥ ಮಹತ್ವದ ಭೇದಗಳಲ್ಲ. ಸಾಧಕನ ಸ್ಥಲವನ್ನು ಅವನ ಆಂತರಿಕ ಸ್ಥಿತಿಯ ಮೇಲಿಂದಲೆ ತಿಳಿದುಕೊಳ್ಳತಕ್ಕದ್ದು.

೪೫೯. ಸ್ಥಳಕುಳವನರಿಯಬೇಕೆಂಬರು. ಭಕ್ತನಾಗಿ ಮಹೇಶ್ವರನಾಗಬೇಕೆಂಬರು, ಮಹೇಶ್ವರನಾಗಿ ಪ್ರಸಾದಿಯಾಗಬೇಕೆಂಬರು, ಪ್ರಸಾದಿಯಾಗಿ ಪ್ರಾಣಲಿಂಗಿಯಾಗಬೇಕೆಂಬರು, ಪ್ರಾಣಲಿಂಗಿಯಾಗಿ ಶರಣನಾಗಬೇಕೆಂಬರು, ಶರಣನಾಗಿ ಐಕ್ಯನಾಗಬೇಕೆಂಬರು. ಯಾತರಿಂದ ಕೂಟವ ನಾನರಿಯೆ. ಒಳ

ಗಣ ಮಾತು ಹೊರಹೊಮ್ಮಿಯಲ್ಲದೆ ಎನಗರಿಯಬಾರದು. ಎನಗೈಕ್ಯನಾಗಿ ಶರಣನಾಗಬೇಕು, ಶರಣನಾಗಿ ಪ್ರಾಣಲಿಂಗಿಯಾಗಬೇಕು, ಪ್ರಾಣಲಿಂಗಿಯಾಗಿ ಪ್ರಸಾದಿಯಾಗಬೇಕು, ಪ್ರಸಾದಿಯಾಗಿ ಮಹೇಶ್ವರನಾಗಬೇಕು, ಮಹೇಶ್ವರನಾಗಿ ಭಕ್ತನಾಗಬೇಕು, ಭಕ್ತನಾಗಿ ಸಕಲಯುಕ್ತನಾಗಬೇಕು ಯುಕ್ತಿ ನಿಷ್ಪಯವಾದಲ್ಲಿಯೆ ಐಕ್ಯಸ್ಥಲ, ಒಳಹೊರಗಾಯಿತ್ತು. ಎನಗೆ ಕಾಣಬಂದಿತ್ತು. ಅಲೇಕನಾವ ಶೂನ್ಯ ಶಿಲೆಯ ಹೊರಹೊಮ್ಮಿ ಕಂಡೆ, ನಿನ್ನನು.

ಟಿಪ್ಪಣಿ:— ಸಾಧಕನು ಒಂದು ಸ್ಥಲವನ್ನು ದಾಟಿ, ಆ ಬಳಿಕೇ ಎರಡನೆಯ ಸ್ಥಳಕ್ಕೆ ಹೋಗಬೇಕೆಂಬ ನಿರ್ಬಂಧವಿಲ್ಲ. ಸ್ಥಲಗಳೆಂದರೆ ಶಾಲೆಯೊಳಗಣ ಈಯತ್ತೆಗಳಲ್ಲ! ಆಯಾ ಸಾಧಕನ ಅಂತಃಸ್ಥಿತಿಯನ್ನು ಪರೀಕ್ಷಿಸಿ, ಅವನು ಯಾವ ಸ್ಥಲದವನು ಎಂಬುದನ್ನು ನಿಶ್ಚಯಿಸತಕ್ಕದ್ದು.

ವಿವರಣೆ

ಸ್ಥಲಗಳ ವಿವೇಚನೆಯಾದ ಬಳಿಕ ಗುರುಕಾರುಣ್ಯ, ಅಷ್ಟಾವರಣ ಮುಂತಾದವುಗಳ ವಿಚಾರವು ಕರ್ತವ್ಯವು. ಎಲ್ಲವನ್ನು ಮರೆತು ಅಜ್ಞಾನದಲ್ಲಿ ತೊಳಲಾಡುತ್ತಿರುವ ಜೀವನಿಗೆ ಗುರು ಕರುಣವಿಲ್ಲದೆ ಮುಕ್ತಿಯಾಗದು, ಎಂಬ ಕಲ್ಪನೆಯು ಈ ಸಂಪ್ರದಾಯದಲ್ಲಿ ದೃಢಮೂಲವಿರುವದು. 'ಶೂನ್ಯ ಸಂಪಾದನೆ'ಯ ಗುರುಕಾರುಣ್ಯ ಸ್ಥಲದಲ್ಲಿ ಇದೇ ಮಾತು ಹೇಳಲ್ಪಟ್ಟಿದೆ. ಅದಕ್ಕೆ ಪ್ರತಿಯಾಗಿ 'ತನ್ನರಿವೇ ಗುರು' ಎಂದು ಪ್ರತಿಪಾದಿಸುವ ವಾಕ್ಯಗಳೂ ಎಷ್ಟೋ ಕಡೆಗೆ ಇರುವವು. 'ಶ್ರೀಗುರುವಾದಾತನು ಸಕಲಾಗಮಂಗಳ ಹೃದಯವನರಿದು, ತನ್ನ ಆದಿ ಮಧ್ಯಾವಸಾನಮಂ ತಿಳಿದು, ಸರ್ವಾಚಾರವು ತನ್ನಲ್ಲಿ ನೆಲೆಗೊಂಡವನು' (ಪ. ೭೩) ಇರಬೇಕು, ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅದೇ ರೀತಿ ಶಿಷ್ಯನಾದರೂ ಸದಾಚಾರಿಯಿದ್ದರೆ ಮಾತ್ರ ದೀಕ್ಷೆಗೆ ಯೋಗ್ಯನು. ಅವನ ಜಾತಿ, ಲಿಂಗ, ವಯಗಳಿಗಿಂತ ಅವನ ಗುಣಕರ್ಮಗಳೇ ಮುಖ್ಯ. ಅವುಗಳನ್ನು ನೋಡಿ ಅವನಿಗೆ ದೀಕ್ಷೆ ಕೊಡಬೇಕು ಎಂದು ವಚನಕಾರರ ಅಭಿಪ್ರಾಯವಿರುವದು. ಶೈವ ದೀಕ್ಷೆಗಿಂತ ವೀರಶೈವ ದೀಕ್ಷೆಯು ಶ್ರೇಷ್ಠವು ಎಂದು ವಚನಕಾರರ ಸ್ಪಷ್ಟಾಭಿಪ್ರಾಯವಿರುವದು. (ಪ. ೭೬) ಆದುದರಿಂದ ಶೈವಗುರುವಿನಿಂದ ಪಡೆದ ಲಿಂಗವನ್ನು ವೀರಶೈವ ಗುರುವಿನ ಕೈಯಲ್ಲಿ ಕೊಟ್ಟು ಮರಳಿ ಪಡೆಯಬೇಕು, ಎಂದು ಅವರು ಸೂಚಿಸಿರುವರು.

ವಚನಗಳು

೪೯೦. ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ, ಅವ ಜಾತಿಯಲ್ಲಿ ಹುಟ್ಟಿದಾತನಾದರೂ ಆಗಲಿ, ಗುರುಕಾರುಣ್ಯವ ಪಡೆದು, ಅಂಗದಮೇಲೆ ಲಿಂಗವ ಧರಿಸಿದವನು, ಆಚಾರಸಂಪನ್ನ ಸತ್ಕ್ರಿಯನಾದ ಮಹಾತ್ಮನೇ ಮೂರುಲೋಕಕ್ಕೆ ಅಧಿಕಾರಿಯು ನೋಡಾ ಅಖಂಡೇಶ್ವರಾ!

೪೯೧. ತನ್ನದಾದರೇನು ಕನ್ನಡಿ, ಅನ್ಯರದಾದರೇನು ಕನ್ನಡಿ? ತನ್ನರೂಪ ಕಂಡಡೆ ಸಾಲದೇ? ಸದ್ಗುರು ಆವನಾದಡೇನು, ತನ್ನನರುಹಿದಡೆ ಸಾಲದೇ ಹೇಳಾ ಸಮುಲಿಗೆಯ ಚನ್ನರಾಮಾ!

ಟಿಪ್ಪಣಿ:— ಶಿಷ್ಯನಿಗೆ ಆತ್ಮಜ್ಞಾನವನ್ನು ಒದಗಿಸಿಕೊಡುವ ಮುಖ್ಯ ಗುಣವೊಂದು ಗುರುವಿನಲ್ಲಿ ಅವಶ್ಯವು. ಉಳಿಕ್ಕವು ಗೌಣ.

೪೯೨. ಭವಿತನಕ್ಕೆ ಹೇಸಿ ಭಕ್ತನಾಗಬೇಕೆಂಬಾತನು ಸದ್ಗುರುವನರಸಿಕೊಂಡು ಬಂದು ಅವರ ಕಾರುಣ್ಯದಿಂದ ಮುಕ್ತಿಯಂ ಪಡೆದೆವೆಂದು, ಆ ಶ್ರೀಗುರುವಿಗೆ ದಂಡಪ್ರಣಾಮಮಂ ಮಾಡಿ, ಭಯಭಕ್ತಿಯಿಂದ ಕರಂಗಳಂ ಮುಗಿದು ನಿಂದಿರ್ದು, ಎಲೆ ದೇವಾ, ಎನ್ನ ಭವಿತನಮಂ ಹಿಂಗಿಸಿ ನಿಮ್ಮ ಕಾರುಣ್ಯದಿಂ ಎನ್ನ ಭಕ್ತನಂ ಮಾಡುವದೆಂದು ಶ್ರೀಗುರುವಿಂಗೆ ಬಿನ್ನಹಂ ಮಾಡಲು, ಆ ಗುರುವು ಅಂತಪ್ಪ ಭಯಭಕ್ತಿಕಿಂಕರತೆಯೊಳಿಪ್ಪ ಶಿಶುವಂ ಕಂಡು, ತಮ್ಮ ಕೃಪಾವಲೋಕನದಿಂ ನೋಡಿ, ಆ ಭವಿಯ ಪೂರ್ವಾಶ್ರಯವಂ ಕಳೆದು, ಪುನರ್ಜಾತನಂ ಮಾಡಿ, ಅತನ ಅಂಗದ ಮೇಲೆ ಲಿಂಗಪ್ರತಿಷ್ಠೆಯಂ ಮಾಡುವ ಕ್ರಮವೆಂತೆಂದಡೆ.... ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ಟಿಪ್ಪಣಿ:— ಸಾಧಕನು ಯಾವ ಭಾವದಿಂದ ಗುರುವಿನ ಕಡೆಗೆ ಹೋಗಬೇಕು, ಮತ್ತು ಗುರುವು ಎಂಥ ಸಾಧಕನಿಗೆ ದೀಕ್ಷೆಕೊಡಬೇಕು, ಇದು ಮೇಲಿನ ವಚನಗಳಲ್ಲಿ ಮುಖ್ಯವಾಗಿ ಹೇಳಲ್ಪಟ್ಟಿದೆ. ಇನ್ನು, ದೀಕ್ಷೆಯು ಯಾವ ಪ್ರಕಾರದ್ದಿರುವದು ಮತ್ತು ಗುರುವಿನ ಯಥಾರ್ಥ ಸ್ವರೂಪವೇನು ಇದನ್ನು ನೋಡುವ.

೪೯೩. ..... ಗುರುಸ್ಥಲವೆಂಬುದು ತಾನು ಸ್ವಯಂ ಜ್ಯೋತಿ ಪ್ರಕಾಶವು. ಅಂತಪ್ಪ ಸ್ವಯಂಜ್ಯೋತಿ ಪ್ರಕಾಶ 'ಭಾತಿ' ಎಂದು ಅದು ಜ್ಯೋತಿಯ ಹೊತ್ತಿಸಿದರೆ, ಆ ಜ್ಯೋತಿ ತನ್ನಂತೆ ಮಾಡಿತ್ತು..... ಕೂಡಲ ಚನ್ನಸಂಗಮದೇವಾ.

೪೯೨. ಬಯಲ ಮೂರ್ತಿಯ ಪಾಡಿ, ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯ ಶ್ರೀಗುರು. ಬಯಲ ಮೂರ್ತಿಯ ಅಮೂರ್ತಿಯ ಮಾಡಿ ಎನ್ನ ಪ್ರಾಣದೊಳಗೆ ಇರಿಸಿದನಯ್ಯ ಶ್ರೀಗುರು. ಬಯಲು ಬಯಲನೇ ಬಯಸಿ, ಬಯಲೆಂದೆನಿಸಿ, ಎನ್ನ ಭಾವದಲ್ಲಿರಿಸಿದನಯ್ಯ ಶ್ರೀಗುರು. ಇದುಕಾರಣ, ಎನ್ನ ಕರಸ್ಥಲ, ಮನಸ್ಥಲ, ಭಾವಸ್ಥಲದಲ್ಲಿ ಧರಿಸಿ ನಾನು ಅಂಗಲಿಂಗಸಂಬಂಧಿಯಾದೆನಯ್ಯ, ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.

೪೯೩. ವೇಧಾದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆ ಎಂಬ ದೀಕ್ಷಾತ್ರಯಂಗಳಿಂದ ತನುತ್ರಯಂಗಳ ಪೂರ್ವಾಶ್ರಯಂಗಳ (ಆಣವಮಲ, ಮಾಯಾಮಲ, ಮತ್ತು ಕಾರ್ಮಿಕಮಲ) ಕಳೆದು ಲಿಂಗತ್ರಯಂಗಳ ಸಂಬಂಧಿಸಿದನದೆಂತೆಂದೊಡೆ, ವೇಧಾದೀಕ್ಷೆಯೆಂದು ಶ್ರೀಗುರು ತನ್ನ ಹಸ್ತ ಶಿಷ್ಯಮಸ್ತಕದಲ್ಲಿ ಸಂಯೋಗಮಾಡಿದನು. ಮಂತ್ರದೀಕ್ಷೆಯೆಂದು ಶ್ರೀಗುರು ಪ್ರಣವ ಪಂಚಾಕ್ಷರಿ ಮಂತ್ರವ ಕರ್ಣದಲ್ಲಿ ಉಪದೇಶಿಸಿದನು. ಕ್ರಿಯಾದೀಕ್ಷೆಯೆಂದು ಆ ಮಂತ್ರಸ್ವರೂಪವನೆ ಇಷ್ಟಲಿಂಗಸ್ವರೂಪಮಾಡಿ ಕರಸ್ಥಲದಲ್ಲಿ ಸಂಬಂಧಿಸಿದನು. ಇದುಕಾರಣ, ವೇಧಾದೀಕ್ಷೆಯಿಂದ ಕಾರಣತನುವಿನ ಪೂರ್ವಾಶ್ರಯವ ಕಳೆದು ಭಾವಲಿಂಗಸಂಬಂಧವಾಯಿತು. ಮಂತ್ರದೀಕ್ಷೆಯಿಂದ ಸೂಕ್ಷ್ಮತನುವಿನ ಪೂರ್ವಾಶ್ರಯವಳಿದು ಪ್ರಾಣಲಿಂಗ ಸಂಬಂಧವಾಯಿತು. ಕ್ರಿಯಾದೀಕ್ಷೆಯಿಂದ ಸ್ಥೂಲತನುವಿನ ಪೂರ್ವಾಶ್ರಯವಳಿದು ಇಷ್ಟಲಿಂಗ ಸಂಬಂಧವಾಯಿತು. ಅಂಗತ್ರಯದಲ್ಲಿ ಲಿಂಗತ್ರಯ ಧರಿಸಿದೆನಯ್ಯ, ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೆ.

೪೯೪. ಎನ್ನ ಕರಸ್ಥಲದ ಮಧ್ಯದಲ್ಲಿ ಪರಮನಿರಂಜನ ಕುರುಹ ತೋರಿದ. ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆ ತೋರಿದ. ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ. ಆ ಬೆಳಗಿನ ನಿಲವಿನೊಳಗೆ ಎನ್ನ ತೋರಿದ. ಎನ್ನೊಳಗೆ ತನ್ನ ತೋರಿದ. ತನ್ನೊಳಗೆ ಎನ್ನನಿಂಬಿಟ್ಟುಕೊಂಡ ಮಹಾಗುರುವಿಗೆ ನವೋನವೋ ಎನುತಿರ್ಪೆನಯ್ಯ ಅಖಂಡೇಶ್ವರಾ.

ಟಿಪ್ಪಣಿ:— ದೀಕ್ಷೆ, ಸಂಕ್ಷಿಪ್ತವಾದ ದೀಕ್ಷಾಪದ್ಧತಿ ಇವು ಇಲ್ಲಿ ಹೇಳಲ್ಪಟ್ಟಿವೆ. ಆತ್ಮಜ್ಞಾನವನ್ನು ಮಾಡಿಕೊಡುವವನೆ ನಿಜವಾದ ಗುರುವು ಎಂಬುದು ಮೇಲಿನ ವಚನದಿಂದ ವ್ಯಕ್ತವಾಗುವದು. ಲಿಂಗವು ಪರಮಾತ್ಮ ಪ್ರತೀಕವು. ತತ್ಸಹಾಯದಿಂದ, ಅದರ ಪೂಜೆ ಧ್ಯಾನಾದಿಗಳಿಂದ ಮುಂದೆ ನಿರ್ಗುಣಕ್ಕೆ ಹೋಗತಕ್ಕದ್ದೆಂದು ಈ ಸಂಪ್ರದಾಯದ ಪದ್ಧತಿಯಿರುವದು

ಆದುದರಿಂದ ಸ್ವಾಭಾವಿಕವಾಗಿ ಲಿಂಗಕ್ಕೆ ಈ ಸಂಪ್ರದಾಯದಲ್ಲಿ ಬಹಳ ಮಹತ್ವವಿರುವದು.

೪೯೭. ಲಿಂಗವೆಂಬುದು ಪರಶಕ್ತಿಯುತ ಪರಶಿವನ ನಿಜದೇಹ. ಲಿಂಗವೆಂಬುದು ಪರಶಿವನ ಘನತೇಜ. ಲಿಂಗವೆಂಬುದು ಪರಶಿವನ ನಿರತಿಶಯಾನಂದ ಸುಖವು. ಲಿಂಗವೆಂಬುದು ಪರಶಿವನ ಪರಮಜ್ಞಾನ. ಲಿಂಗವೆಂಬುದು ಷಡಧ್ವಮಯ ಜಗಜ್ಜನ್ಮ ಭೂಮಿ. ಲಿಂಗವೆಂಬುದು ಅಖಂಡವೇದ.... ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

೪೯೮. ಲಿಂಗವ ಸ್ಥೂಲವೆಂಬರು ಕೆಲರು. ಲಿಂಗ ಸ್ಥೂಲವಲ್ಲ. ಲಿಂಗವ ಸೂಕ್ಷ್ಮವೆಂಬರು ಕೆಲರು. ಲಿಂಗ ಸೂಕ್ಷ್ಮವಲ್ಲ. ಸ್ಥೂಲಸೂಕ್ಷ್ಮದ ಮೇಲಣ ಜ್ಞಾನರೂಪು ಪರನಾದ ಪರಬ್ರಹ್ಮವೆ ಲಿಂಗವೆಂದರಿದ ಅರಿವು ಅಖಂಡರೂಪು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಲವು ತಾನೇ ಬೇರಿಲ್ಲ.

ಟಿಪ್ಪಣಿ:— ಇಂಥ ಇಷ್ಟಲಿಂಗವನ್ನು ಮೈಮೇಲೆ ಧರಿಸಲಿಕ್ಕೆಬೇಕು, ಎಂದು ಈ ಸಂಪ್ರದಾಯದ ತತ್ವವಿರುವದು. ಅಷ್ಟಾವರಣಗಳಲ್ಲಿ ಲಿಂಗ ಧಾರಣವೂ ಒಂದು ಆವರಣವೆನಿಸುವದು.

೪೯೯. ಆಕಾಶದಲ್ಲಾಡುವ ಪಟಕ್ಕಾದರೂ ಮೂಲ ಸೂತ್ರವಿರಬೇಕು. ಕಲಿಯಾದಡೂ ಸುರಿಗೆಯಿಲ್ಲದಾಗದು. ಭೂಮಿಯಿಲ್ಲದೆ ಭಂಡಿ ನಡೆವುದೆ? ಅಂಗಕ್ಕೆ ಲಿಂಗವಿಲ್ಲದೆ ನಿಃಸಂಗವಾಗಬಾರದು. ಕೂಡಲ ಚನ್ನಸಂಗಮದೇವರಲ್ಲಿ ಸಂಗವಿಲ್ಲದೆ ನಿಸ್ಸಂಗಿ ಎಂದು ನುಡಿಯಬಹುದೇ?

೫೦೦. ಎಳ್ಳಿಂಗೆ ಪರಿಮಳ ಕಟ್ಟದಲ್ಲದೆ ಎಣ್ಣೆಗೆ ಪರಿಮಳ ವೇಧಿಸದು. ದೇಹದಲ್ಲಿ ಇಷ್ಟಲಿಂಗ ಸ್ಥಾಪಿಸಿದಲ್ಲದೆ ಪ್ರಾಣಲಿಂಗಸಂಬಂಧವಾಗದು. ಇದು ಕಾರಣ, ಗುಹೇಶ್ವರಲಿಂಗದಲ್ಲಿ ಇಷ್ಟಲಿಂಗ ಸಂಬಂಧಿಯಲ್ಲದೆ ಪ್ರಾಣಲಿಂಗ ಸಂಬಂಧಿಯಾಗಬಾರದು, ಕಾಣಾ ಸಿದ್ಧರಾಮಯ್ಯ.

ಟಿಪ್ಪಣಿ:— ಗುರು, ಲಿಂಗ ಇವುಗಳ ಲಕ್ಷಣ, ಮಹತ್ವ ಮತ್ತು ಅವಶ್ಯಕತೆ ಇವುಗಳನ್ನು ಹೇಳಿದ ಬಳಿಕ ಜಂಗಮನ ಲಕ್ಷಣವೇನು ಇದನ್ನು ತಿಳಿದುಕೊಳ್ಳುವದು ಅವಶ್ಯವು. ಬರಿಯ ಬಾಹ್ಯವೇಷಕ್ಕೆ ಮಹತ್ವ ಕೊಡಕೂಡದೆಂದು ವಚನಕಾರರು ಎಚ್ಚರಗೊಟ್ಟಿರುವರು.

೫೦೧. ಕೇಶಕಾಷಾಯಾಂಬರವನಿಕ್ಕಿದಡೇನೊ? ವಿಭೂತಿ ರುದ್ರಾಕ್ಷಿಯ ಧರಿಸಿದಡೇನೋ? ಸಾಕಾರದಲ್ಲಿ ಸನ್ಮತನಲ್ಲ. ನಿರಹಂಕಾರದಲ್ಲಿ ನಿರುತನಲ್ಲ. ಪರಮಾರ್ಥದಲ್ಲಿ ಪರಿಣಾಮಿಯಲ್ಲ. ಇದುಕಾರಣವಾಗಿ ಕೂಡಲ ಚನ್ನಸಂಗಮ ದೇವಾ, ತುರುಬಾಗಲಿ, ಜಡೆಯಾಗಲಿ, ಬೋಳಾಗಲಿ, ಅರಿವು ಆಚಾರವುಳ್ಳಡೆ ಜಂಗಮ.

೫೦೨. ಅರಿವೇ ಗುರು, ಆಚಾರವೇ ಶಿಷ್ಯ, ಜ್ಞಾನವೇ ಲಿಂಗ, ಪರಿಣಾಮವೇ ತಪ, ಸಮತೆಯೆಂಬುದೇ ಯೋಗದಾಸು ನೋಡಾ. ಈಸುವ ನರಿಯದೆ ಲೋಜು ಬೋಳಾವರೆ ಮಹಾಲಿಂಗ ಕಲ್ಲೇಶ್ವರ ದೇವರು ನಸುವರು.

೫೦೩. ಹೊನ್ನಿಂಗೆ ಬಂದಾತನಲ್ಲ, ಹೆಣ್ಣಿಂಗೆ ಬಂದಾತನಲ್ಲ, ಮಣ್ಣಿಂಗೆ ಬಂದಾತನಲ್ಲ. ಅಶನಕ್ಕೆ ಬಂದಾತನಲ್ಲ ವ್ಯಸನಕ್ಕೆ ಬಂದಾತನಲ್ಲ, ಕೂಡಲ ಚನ್ನ ಸಂಗಯ್ಯ, ಭಕ್ತಿಯ ಪಥವ ತೋರಬಂದವನಯ್ಯ ಪ್ರಭುದೇವರು.

ಟಿಪ್ಪಣಿ:— ಜಂಗಮನು ಪೂರ್ಣ ನಿಸ್ಪೃಹ ಜರಮೂರ್ತಿಯು. ಇನ್ನು ಪಾದೋದಕ ಪ್ರಸಾದ, ವಿಭೂತಿ ರುದ್ರಾಕ್ಷಿ, ಮಂತ್ರ ಇವುಗಳನ್ನು ಕುರಿತು ವಚನಕಾರರು ಏನನ್ನುವರು ನೋಡುವಾ.

೫೦೪. ಶ್ರೀಗುರು ಶಿವನ ಗಣಂಗಳ ಮಧ್ಯದಲ್ಲಿ ಎನಗೆ ಉಪದೇಶಿಸುವಲ್ಲಿ ಪರಮೇಶ್ವರನ ಪಂಚಮುಖವನೇ ಪಂಚಕಲಶವಾಗಿ ಮೂರ್ತಿಗೊಳಿಸಿ, ಗಣಂಗಳ ಸಾಕ್ಷಿಯಾಗಿ ಕರಸ್ಥಲಕ್ಕೆ ಶಿವಲಿಂಗವ ಕೊಟ್ಟು, ಆ ಲಿಂಗವೇ ಗಂಡ ನೀನೇ ಹೆಂಡತಿ ಎಂದು ಹೇಳಿ, ಲಲಾಟದಲ್ಲಿ ವಿಭೂತಿಯ ಪಟ್ಟಮಂ ಕಟ್ಟಿ, ಹಸ್ತದಲ್ಲಿ ಕಂಕಣವ ಕಟ್ಟಿ, ಪಾದೋದಕ ಪ್ರಸಾದವನಿತ್ತು, ಎಂದೆಂದಿಗೂ ಸತಿಪತಿಭಾವ ತಪ್ಪದೆ ಇರಲಿ, ಎಂದು ನಿರೂಪಿಸಿದನಯ್ಯ ಶ್ರೀಗುರು. ಆ ನಿರೂಪವ ಮಹಾಪ್ರಸಾದವೆಂದು ಕೈಕೊಂಡೆನಯ್ಯಾ. ಇದುಕಾರಣ ಪತಿಯಲ್ಲದೆ ಅನ್ಯವನರಿಯೆನಯ್ಯ, ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುನೇ.

೫೦೫. ಹಸ್ತಾಬ್ಜಮಥನದಿಂದೊತ್ತಿ, ಭಸ್ಮವ ಮಾಡಿ, ಮತ್ತೆ ಪಂಚಾಕ್ಷರಿ ಮರುಜೀವಣೆಯ ಚಿತ್ತಕ್ರೋತ್ರದೊಳು ಧಾರೆಯನೆರೆಯಲು ಆತ ನಿನ್ನಂತೆ ಕಾಣಾ ರಾಮನಾಥಾ.

೫೦೬. ಆತ್ಮಶುದ್ಧಿ, ಗುರುಹಸ್ತವ ಮಸ್ತಕದಲ್ಲಿ ನ್ಯಸ್ತಮಾಡಿದನಾಗಿ. ಸ್ಥಾನಶುದ್ಧಿ, ಶಿವಲಿಂಗವಿದ್ದುದೇ ಅವಿಮುಕ್ತಿ ಕ್ಷೇತ್ರವಾಗಿ. ದ್ರವ್ಯಶುದ್ಧಿ,

ಶಿವಲಿಂಗ ಸನ್ನಿಧಿಮಾತ್ರ ಪವಿತ್ರೀಕೃತವಾಗಿ. ಮಂತ್ರಶುದ್ಧಿ, ಪರಮಂತ್ರ ಮಯವಾಗಿ. ಲಿಂಗಶುದ್ಧಿ, ಲಿಂಗವು ನಿರ್ಮಳ, ನಿರುಪಮ, ನಿತ್ಯಸತ್ಯನಾಗಿ. ಇಂತು ಪಂಚಶುದ್ಧಿಯೆಂದರಿದು ಪ್ರಾಣಲಿಂಗ ಸಂಬಂಧಿಯಾಗಿಪ್ಪುದೇ ಆಗಮ, ಬೇರೆ ಆಗಮವಿಲ್ಲ, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

೫೦೭. ..... ಓಂ ನಮಃ ಶಿವಾಯ ಎಂಬಾತ ಇಷ್ಟ ಬ್ರಹ್ಮವೆಂಬ ಮಹಾಲಿಂಗವು. ಆ ಪಂಚಾಕ್ಷರವೇ ಪರಮೇಶ್ವರನು. ಆ ಪಂಚಾಕ್ಷರವೇ ಪರತತ್ವವು. ಆ ಪಂಚಾಕ್ಷರವೇ ಪರಮಯೋಗ. ಆ ಪಂಚಾಕ್ಷರವೇ ಪರಂಜ್ಯೋತಿಯು. ಆ ಪಂಚಾಕ್ಷರವೇ ಪರಮಾತ್ಮನು.....

ಟಿಪ್ಪಣಿ:— ಮಂತ್ರಮಹಾತ್ಮ್ಯವು ಈ ವಚನದಲ್ಲಿ ಚೆನ್ನಾಗಿ ವರ್ಣಿಸಲ್ಪಟ್ಟಿದೆ. ಮಂತ್ರವು ಪರಮಾತ್ಮನ ವರ್ಣಮಯ ಅಥವಾ ಸ್ವರಮಯ ಪ್ರತೀಕವೆನ್ನಬಹುದು. ಇನ್ನು ಗುರುಲಿಂಗ ಜಂಗಮದಿಂದ ಆತ್ಮ ವಿಕಾಸವು ಹೇಗೆ ಆಗುವದು ಮತ್ತು ಲಿಂಗಾಂಗ ಸಾಮರಸ್ಯವು ಹೇಗೆ ಇರುವದು ಇದನ್ನು ನೋಡುವ.

೫೦೮. ಅಯ್ಯಾ, ಕ್ರಿಯಾಚಾರದಲ್ಲಿ ಮೋಹವುಳ್ಳಾತನೇ ಸದ್ಗುರುವೆಂಬೆ. ಜ್ಞಾನಾಚಾರದಲ್ಲಿ ನೈಷ್ಠೆಯುಳ್ಳಾತನೇ ಸಚ್ಚಿದಾನಂದ ಲಿಂಗವೆಂಬೆ ನೋಡಾ. ಭಾವಾಚಾರದಲ್ಲಿ ಪ್ರಿಯವುಳ್ಳಾತನೇ ಪರಾತ್ಪರ ಜಂಗಮವೆಂಬೆ ನೋಡಾ. ಈ ತ್ರಿವಿಧಾಚಾರದಲ್ಲಿ ಕಾಂಕ್ಷೆಯುಳ್ಳಾತನ ನಿಜಶರಣನೆಂಬೆ ನೋಡಾ. ಇಂತು ಆಚಾರ ಸನ್ಮಾರ್ಗ ಗುರುಲಿಂಗ ಜಂಗಮ ಶರಣರೇ ಗುಹೇಶ್ವರ ಲಿಂಗಕ್ಕೆ ಮೋಕ್ಷ ಮಂದಿರವೆಂಬೆ ನೋಡಾ, ಚನ್ನಬಸವಣ್ಣ.

೫೦೯. ತನ್ನ ತಾನರಿದಡೆ ತಾನೇ ಗುರು, ತಾನೇ ಲಿಂಗ, ತನ್ನ ನಿಷ್ಪತ್ತಿಯೇ ಜಂಗಮ. ಇಂತೀ ತ್ರಿವಿಧವು ಒಂದಾದಡೆ ಕಾಮೇಶ್ವರ ಲಿಂಗವು ತಾನೇ.

೫೧೦. ಜ್ಯೋತಿ ಮುಟ್ಟಿದ ಬತ್ತಿಯೆಲ್ಲ ಜ್ಯೋತಿಯಪ್ಪವಯ್ಯ. ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯ. ಪ್ರಸಾದ ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯ. ಲಿಂಗವ ಮುಟ್ಟಿದ ಅಂಗವೆಲ್ಲ ಲಿಂಗವಪ್ಪವಯ್ಯ. ಸಕಳೇಶ್ವರ ದೇವ, ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯ.

೫೧೧. ಲಿಂಗಮುಖವನರಿದವಂಗೆ ಲಿಂಗವೆಂಬುದಿಲ್ಲ, ಜಂಗಮಮುಖವನರಿದವಂಗೆ ಸಂಸಾರವೆಂಬುದಿಲ್ಲ. ಪ್ರಸಾದಮುಖವನರಿದವಂಗೆ ಇಹಪರ

ವೆಂಬುದಿಲ್ಲ. ಈ ತ್ರಿವಿಧವು ಒಂದಾದವಂಗೆ ಮುಂದೇನು ಇಲ್ಲವಯ್ಯ. ಈ ತ್ರಿವಿಧದ ನೆಲೆಯ ಶ್ರುತಿಸ್ಮೃತಿ ಪುರಾಣಾಗಮ ಇತಿಹಾಸಂಗಳರಿಯವಯ್ಯಾ, ಎಲೆಲೆ ಕೂಡಲ ಚನ್ನಸಂಗಯ್ಯ, ನಿಮ್ಮ ಶರಣರೇ ಬಲ್ಲರಯ್ಯಾ.

೫೧೨. ಅಂಗದಿಂದೆ ಲಿಂಗ ಸುಖ, ಲಿಂಗದಿಂದೆ ಅಂಗ ಸುಖ, ಆ ಅಂಗಲಿಂಗಸಂಗಸುಖದಿಂದೆ ಪರಮಸುಖ ದೊರೆಕೊಂಬುವುದು ನೋಡಾ. ಆ ಅಂಗಲಿಂಗಸಂಗಸಮರಸೈಕ್ಯವನು ಕೂಡಲ ಚನ್ನಸಂಗ, ನಿಮ್ಮ ಶರಣನಾದ ಮಹಾಲಿಂಗೈಕ್ಯ ಬಲ್ಲನಲ್ಲದೆ ಉಳಿದವರೆತ್ತ ಬಲ್ಲರಯ್ಯಾ?

ಟಿಪ್ಪಣಿ:— ವೀರಶೈವಾಚಾರಗಳ ತಿರುಳನ್ನೆಲ್ಲ ಒತ್ತಟ್ಟಿಗೆ ಕಲೆ ಹಾಕಿದ್ದು ನೋಡಬೇಕಾದರೆ ಮಹಾದೇವಿಯಕ್ಕನು ಮಾಡಿದ ಬಸವಣ್ಣನ ವರ್ಣನೆಯನ್ನು ಓದಬೇಕು. ಬಸವಣ್ಣನಲ್ಲಿ ೫೨ ಶ್ರೇಷ್ಠ ಆಚಾರಗಳಿದ್ದವೆಂದು ಆಕೆ ಬಣ್ಣಿಸಿರುವಳು.

೫೧೩. ·····ನಮ್ಮ ಬಸವಣ್ಣನು ಜಗಹಿತಾರ್ಥವಾಗಿ ಮರ್ತ್ಯಕ್ಕವತರಿಸಿ ವೀರಶೈವ ಮಾರ್ಗವನರುಪುವುದಕ್ಕೆ ಬಾವನ್ನವಿವರವನೊಳಕೊಂಡು ಚರಿಸದನದೆಂತೆಂದೊಡೆ, ಗುರುಕಾರುಣ್ಯವೇದ್ಯನು. ವಿಭೂತಿ ರುದ್ರಾಕ್ಷಿ ಧಾರಕನು. ಪಂಚಾಕ್ಷರೀ ಘಾಷಾಸಮೇತನು. ಲಿಂಗಾಂಗಸಂಬಂಧಿ. ನಿತ್ಯ ಲಿಂಗಾರ್ಚಕನು. ಅರ್ಪಿತದಲ್ಲಿ ಅವಧಾನಿ. ಪಾದೋದಕ ಪ್ರಸಾದಗ್ರಾಹಕನು. ಗುರುಭಕ್ತಿಸಂಪನ್ನನು. ಏಕಲಿಂಗನಿಷ್ಠಾಪರನು. ಚರಲಿಂಗಲೋಲುಪ್ತನು. ಶರಣಸಂಗಮೇಶ್ವರನು. ತ್ರಿವಿಧಕ್ರಿಯಾಯತನು. ತ್ರಿಕರಣಶುದ್ಧನು. ತ್ರಿವಿಧ ಲಿಂಗಾಂಗ ಸಂಬಂಧಿ. ಅನ್ಯದೈವಸ್ಮರಣೆಯ ಹೊದ್ದ. ಭವಿಯ ಸಂಗವ ಮಾಡ. ಭವಿಪಾಕವ ಮುಟ್ಟ. ಪರಸ್ತ್ರೀಯರ ಬೆರಸ. ಪರಧನವನೊಲ್ಲ. ಪರನಿಂದೆಯನಾಡ. ಅನೃತವ ನುಡಿಯ. ತಾಮಸಭಕ್ತರ ಸಂಗವ ಮಾಡ. ಗುರುಲಿಂಗ ಜಂಗಮಕ್ಕೆ ಅರ್ಥಪ್ರಾಣಾಭಿಮಾನ ಮುಂತಾದವೆಲ್ಲವ ಸಮರ್ಪಿಸಿ ಪ್ರಸಾದ ಮುಂತಾಗಿ ಭೋಗಿಸುವ. ಜಂಗಮನಿಂದೆಯ ಸೈರಿಸ. ಪ್ರಸಾದನಿಂದೆಯ ಕೇಳ. ಅನ್ಯರನಾಸೆಗೆಯ್ಯ. ಪಾತ್ರಸತ್ಪಾತ್ರವನರಿವ. ಚತುರ್ವಿಧ ಪದವಿಯ ಹಾರ. ಅರಿಷಡ್ವರ್ಗಕ್ಕೆ ಅಳುಕ. ಕುಲಾದಿ ಮದಂಗಳ ಬಗೆಗೊಳ್ಳ. ದ್ವೈತಾದ್ವೈತವ ನುಡಿವನಲ್ಲ. ಸಂಕಲ್ಪವಿಕಲ್ಪವ ಮಾಡುವವನಲ್ಲ. ಕಾಲೋಚಿತವ ಬಲ್ಲ. ಕ್ರಮಯುಕ್ತನಾಗಿ ಷಟ್‌ಸ್ಥಲಭರಿತ. ಸರ್ವಾಂಗಲಿಂಗಿ. ದಾಸೋಹಸಂಪನ್ನ. ಇಂತೀ ಏವತ್ತೆರಡು ವಿಧದಲ್ಲಿ ನಿಪುಣನಾಗಿ ಮೆರೆವ ನಮ್ಮ ಬಸವಣ್ಣನು. ಆ ಬಸವಣ್ಣನ ಶ್ರೀಪಾದಕ್ಕೆ ಅಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿದೆನು ಕಾಣಾ, ಚನ್ನಮಲ್ಲಿಕಾರ್ಜುನಾ.

ಟಿಪ್ಪಣಿ:— ಬಸವಣ್ಣನು ಸ್ವತಃ ಷಟ್‌ಸ್ಥಲಾಧೀಶನು. ವೀರಶೈವಾಗ್ರಣಿಯು. ಆ ಸಂಪ್ರದಾಯವನ್ನು ಪುನರುಜ್ಜೀವಿಸಿದವನು. ಅವನ ವರ್ಣನೆಯಿದು. ಅಂದಬಳಿಕ ಮತ್ತೆ ಬೇರೆ ವರ್ಣನೆಗಳೇಕೆ?

---

೧೯. ಸಂಕೀರ್ಣ

ವಿವರಣೆ

ಇದುವರೆಗೆ ವಿಷಯಾನುಕ್ರಮದಲ್ಲಿ ವಚನಗಳನ್ನು ವರ್ಗಿಸಿ, ಆರಿಸಿ ಅವುಗಳನ್ನು ಕೊಟ್ಟಿದ್ದಾಯಿತು. ಇನ್ನು ಹಲವು ವಿವಿಧ ವಿಷಯಗಳನ್ನು ಸಂಬಂಧಿಸಿದ ವಚನಗಳನ್ನು ಇಲ್ಲಿ ಕೊಡುವೆವು. ಇವುಗಳಲ್ಲಿ ಎಷ್ಟೋ ಬೇರೆ ಬೇರೆ ಪ್ರಕರಣಗಳಿಗೆ ಸೇರಿಸಲಿಕ್ಕೆ ಬರುವಂತಿದ್ದರೂ 'ಸಂಕೀರ್ಣ' ಎಂಬ ಒಂದು ಪ್ರತ್ಯೇಕ ಪ್ರಕರಣವನ್ನು ಮಾಡುವುದೆ ಹೆಚ್ಚು ಯೋಗ್ಯವೆಂದು ತಿಳಿದು ಅವುಗಳನ್ನು ಇಲ್ಲಿ ಸೇರಿಸಿರುವೆವು.

ಮೊದಲು ವಚನಗಳ ಮಹತ್ವವನ್ನು ಕುರಿತು ವಚನಗಳಿರುವವು.

ವಚನಗಳು

೫೧೪. ಶಾಸ್ತ್ರವೆಂಬುದು ಮನ್ಮಥ ಶಾಸ್ತ್ರವಯ್ಯ. ವೇದಾಂತವೆಂಬುದು ಮೂಲ ಮನೋವ್ಯಾಧಿಯಯ್ಯ. ಪುರಾಣವೆಂಬುದು ಮೃತವಾದವರ ಗಿರಾಣವಯ್ಯ. ತರ್ಕವೆಂಬುದು ಮರ್ಕಟಾಟವಯ್ಯ. ಆಗಮವೆಂಬುದು ಯೋಗದ ಗೋರವಯ್ಯ. ಇತಿಹಾಸವೆಂಬುದು ರಾಜರ ಕಥಾಭಾಗವಯ್ಯ. ಸ್ಮೃತಿಯೆಂಬುದು ಪಾಪಪುಣ್ಯ ವಿಚಾರವಯ್ಯ. ಆದ್ಯರ ವಚನವೆಂಬುದು ಬಹು ವೇದ್ಯವಯ್ಯ, ನಿಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ತಿಳಿಯಲಿಕ್ಕೆ.

೫೧೫. ನಮ್ಮ ನಡಾವಳಿಗೆ ನಮ್ಮ ಪುರಾತನರ ನುಡಿಯೇ ಇಷ್ಟವಯ್ಯ. ಸ್ಮೃತಿಗಳು ಸಮುದ್ರ ಪಾಲಾಗಲಿ, ಶ್ರುತಿಗಳು ವೈಕುಂಠ ಸೇರಲಿ, ಪುರಾಣಗಳು ಅಗ್ನಿಯ ಸೇರಲಿ, ಆಗಮಗಳು ವಾಯುವ ಹೊಂದಲಿ, ಎಮ್ಮ ನುಡಿ ಕಪಿಲಸಿದ್ಧ ಮಲ್ಲಿಕಾರ್ಜುನನ ಮಹಾಲಿಂಗದ ಹೃದಯದಲ್ಲಿ ಗ್ರಂಥಿಯಾಗಿರಲಿ.

ಟಿಪ್ಪಣಿ:— ವಚನದ ಮಹತ್ವವನ್ನು ಇಲ್ಲಿ ವಚನಕಾರರು ಅತ್ಯಂತ ಆತ್ಮವಿಶ್ವಾಸದಿಂದ ಎದೆತಟ್ಟಿ ಹೇಳಿದ್ದಾರೆ. ಇನ್ನು ಜ್ಞಾನವು ವೇದಾದಿ ಗ್ರಂಥಗಳಲ್ಲಿಲ್ಲ. ಅದು ನಮ್ಮ ಅಂತರಂಗದಲ್ಲಿಯೆ ಇದೆ, ಎಂದು ವಚನಕಾರರು ಪ್ರತಿಪಾದಿಸುವರು.

೫೧೬. ವೇದವಾಕ್ಯ ವಿಚಾರಕ್ಕೆ ಬೀಜ. ಶಾಸ್ತ್ರವಾಕ್ಯ ಸಂದೇಹಕ್ಕೆ ಬೀಜ. ಪುರಾಣವಾಕ್ಯ ಪುಣ್ಯಕ್ಕೆ ಬೀಜ. ಭಕ್ತಿಯ ಫಲ ಭವಕ್ಕೆ ಬೀಜ. ಏಕೋಭಾವದ ನಿಷ್ಠೆ ಸಮ್ಯಕ್‌ಜ್ಞಾನಕ್ಕೆ ಬೀಜ. ಸಮ್ಯಕ್‌ಜ್ಞಾನ ಅದ್ವೈತಕ್ಕೆ ಬೀಜ. ಅದ್ವೈತ ಅರಿವಿಂಗೆ ಬೀಜ. ಅರಿವನಾರಡಿಗೊಂಡು ಕುರುಹಿಲ್ಲದ ಲಿಂಗದಲ್ಲಿ ತೆರಹಿಲ್ಲದಿಪ್ಪುದನರಿಯಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

೫೧೭. ಅನಂತ ವೇದಶಾಸ್ತ್ರ ಆಗಮ ಪುರಾಣ ತರ್ಕತಂತ್ರಗಳನು ಅತ್ಮ ಮಾಡುವನಲ್ಲದೆ ಅತ್ಮನ ಅವು ಮಾಡಿರುವುದಿಲ್ಲ. ಎನ್ನಂತರಂಗದರಿವಿನ ಮೂರ್ತಿಯಾಗಿ ಎನ್ನ ಉರಿಲಿಂಗ ದೇವರು ಸಂಕಲ್ಪಿಸಿ ಅಗೆಂದರಾದವು.

ಟಿಪ್ಪಣಿ— ಅಂತರ್ಜ್ಞಾನವೆ ಎಲ್ಲಕ್ಕೂ ಮಹತ್ವದ್ದು. ಆತ್ಮ ಪ್ರಕಾಶದಿಂದಲೆ ಎಲ್ಲವೂ ಆದುದು, ಎಂದು ವಚನಕಾರರ ಪ್ರತಿಪಾದನೆ ಇರುವದು. ಇನ್ನು ದೇವರು ಯಾರಿಗೆ ಹೇಗೆ ಕಾಣುವನು ಎಂಬ ಬಗ್ಗೆ.

೫೧೮. ಏಕಾಕಾರ, ಲೋಕಾಕಾರ ನೀನೆಯಾಗಿ ತೋರ್ಪೆಯಯ್ಯ ಸದ್ಭಾವಿಗಳಿಗೆ. ಏಕಾಕಾರವೆ ಹುಸಿ, ಲೋಕಾಕಾರವೆ ದಿಟವಾಗಿ ತೋರ್ಪೆಯಯ್ಯ ಭಾವಭ್ರಮಿತರಿಗೆ. ಏಕಾಕಾರ, ಲೋಕಾಕಾರ, ಸರ್ವಾಕಾರವಾಗಿ ತೋರ್ಪೆಯಯ್ಯ ನಿರ್ಭಾವಿಗಳಿಗೆ, ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ನಿಜದಾಕಾರವಾಗಿ ಪ್ಪರಯ್ಯ ಭಾವೈಕ್ಯವಾದ ಮಹಾಂತರಿಗೆ.

ಟಿಪ್ಪಣಿ:— ಇನ್ನು ಕಾಮನಾಯುಕ್ತ ಸ್ತ್ರೀಸಂಗವು ಘಾತಕ ಎಂಬುದಕ್ಕೆ.

೫೧೯. ದಾಸಿಯರ ಸಂಗ ಕಸ ನೀರು ಹೊರಸಿತ್ತು. ವೇಶಿಯರ ಸಂಗ ಎಂಜಲವ ತಿನಿಸಿತ್ತು. ಪರಸ್ತ್ರೀಯರ ಸಂಗ ಪಂಚಮಹಾಪಾತಕವ ತಂದಿತ್ತು. ಈ ತ್ರಿವಿಧವು ನಾಸ್ತಿಯಾದಲ್ಲದೆ ಭಕ್ತನಲ್ಲ. ಭಕ್ತಿಯಿಲ್ಲದೆ ಮುಕ್ತಿಗೆ ಸಲ್ಲ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ.

ಟಿಪ್ಪಣಿ:— ಇನ್ನು ಅನುಭಾವವೆ ಎಲ್ಲಕ್ಕೂ ಹೆಚ್ಚಿನದು ಎಂಬುದಕ್ಕೆ.

೫೨೦. ಭಕ್ತಿಗೆ ಅನುಭಾವವೇ ಬೀಜ ಕಾಣೆರೋ, ಭಕ್ತಿಗೆ ಅನುಭಾವವೇ ಆಚರಣೆ ಕಾಣೆರೋ. ಭಕ್ತಿಗೆ ಅನುಭಾವವೇ ಸಕಲೈಶ್ವರ್ಯದ ಶೃಂಗಾರ ಕಾಣೆರೋ ವೀರಶೈವಾಚಾರಸಂಪನ್ನರೆನಿಸುವ ಪರಮಸದ್ಭಕ್ತರಿಗೆ ಅನುಭಾವವೇ ಅರುವಿನ ಗೊತ್ತು ಕಾಣೆರೋ. ಅದುಕಾರಣವಾಗಿ ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು. ಅನುಭಾವವನರಿಯದವ ಕಾಮುಕ ಕಾಣೆರೋ. ಆ ಮಹಾನುಭಾವವ ಮಾಡುವಲ್ಲಿ ಸಕಲ ಸಂಚಲವಳಿದು ವಿನಯದಿಂದೆ ಕೇಳ ದಿರ್ದೊಡೆ ನಮ್ಮ ಕೂಡಲ ಚನ್ನಸಂಗಮದೇವರು ಅಘೋರ ನರಕದಲ್ಲಿಕ್ಕದೆ ಮಾಣ್ಬನೆ?

ಟಿಪ್ಪಣಿ:— ನಿಜವಾದ ವಚನ ಮತ್ತು ಅನುಭಾವ ಎಂದರೇನು ಈ ಬಗ್ಗೆ.

೫೨೧. ವಚನದ ರಚನೆಯ ಅನುಭಾವವ ಬಲ್ಲೆವೆಂಬುವರು ನೀವು ಕೇಳಿರೋ. ವಚನವಾವುದು, ರಚನೆಯಾವುದು, ಅನುಭಾವವಾವುದು ನೀವು ಬಲ್ಲರೆ ಹೇಳಿರೋ, ಅಲ್ಲದಿರ್ದೊಡೆ ಕೇಳಿರೋ. ಆತ್ಮತೃಪ್ತಿಯನರಿಯಬಲ್ಲಡೆ ವಚನ. ಸ್ಥಾವರ ಜಂಗಮದಲ್ಲಿ ಲಯವಾಗಿರಬಲ್ಲಡೆ ವಚನ. ಅರಿಷಡ್ವರ್ಗ ದಿಚ್ಛೆಗೆ ಹರಿಯದಿರಬಲ್ಲಡೆ ಅನುಭಾವ. ವೇದಶಾಸ್ತ್ರಪುರಾಣಾಗಮಂಗಳ ನೋಡಬಲ್ಲಾತ ಜಾಣನಲ್ಲದೆ ಅನುಭಾವಿಯಲ್ಲ. ಅದೇಕೆಂದೊಡೆ, ಅವು ಬ್ರಹ್ಮನೆಂಜಲು. ಸತ್ವರಜತಮವನೊತ್ತಿನಿಂದಲ್ಲಿ ಸಹಜ ನೆಲೆಗೊಂಬುವುದು. ಇದನರಿಯದೆ ವೇದಾಭ್ಯಾಸವ ಬಲ್ಲೆನೆಂದು ನುಡಿವ ಗಡಣದವನು ಅನು ಭಾವಿಯೇ? ಅಲ್ಲ. ಅವ ಇದಿರ ಮೆಚ್ಚಿಸಿಕೊಂಡು ತನ್ನುದರವ ಹೊರೆವ ಉದರಪೋಷಕನು. ಎನ್ನೊಡೆಯ ಕೂಡಲ ಚನ್ನಸಂಗಮದೇವಾ ನಿಮ್ಮನು ಭಾವಿಯು ನೀವೆಂಬೆನಯ್ಯ.

೫೨೨. ಅರುವತ್ತೆಂಟು ಸಹಸ್ರವಚನ ಹಾಡಿಹಾಡಿ ಸೋತಿತೆನ್ನ ಮನ ನೋಡಯ್ಯ! ಹಾಡುವುದೊಂದೇ ವಚನ, ನೋಡುವುದೊಂದೇ ವಚನ. ವಿಷಯಬಿಟ್ಟು ನಿರ್ವಿಷಯವಾಗುವುದೊಂದೆ ವಚನ, ಕಪಿಲಸಿದ್ಧಮಲ್ಲೇಶನಲ್ಲಿ.

ಟಿಪ್ಪಣಿ:— ಇನ್ನು ನಿಜವಾದ ಬ್ರಾಹ್ಮಣನು ಯಾರು ಎಂಬುದನ್ನು ವಚನಕಾರರು ಹೇಳುವರು.

೫೨೩. ವೇದವ ನೋಡಿ ವೇದಾಧ್ಯಯನವ ಮಾಡಿದರೇನು? ಬ್ರಾಹ್ಮಣ ನಾಗಬಲ್ಲನೆ? ಬ್ರಹ್ಮವೆತ್ತುಗಳ ಶುಕ್ರಶೋಣಿತದಿಂದ ಜನಿಸಿದರೇನು?

ಬ್ರಾಹ್ಮಣನಾಗಬಲ್ಲನೇ? ಯಜನಾದ್ಯಷ್ಟ ಷಟ್ಕರ್ಮಂಗಳ ಬಿಡದೆ ಮಾಡಿದ ರೇನು? ಬ್ರಾಹ್ಮಣನಾಗಬಲ್ಲನೇ? ಬ್ರಹ್ಮ ಜಾನಾತಿ ಬ್ರಾಹ್ಮಣಃ, ಎಂಬ ವೇದವಾಕ್ಯವನರಿತು ಬ್ರಹ್ಮಭೂತನಾದಾತನೆ ಬ್ರಾಹ್ಮಣ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೨೪. ಗುಣದಿಂದ ಹಾರುವನಲ್ಲದೆ ಅಗಣಿತ ಅಭ್ಯಾಸದಿಂದ ಹಾರುವನಲ್ಲ, ನೋಡಾ. ಹಾರಬೇಕು ಮುಲತ್ರಯಂಗಳ, ಹಾರಬೇಕು ಸೃಷ್ಟಿಸ್ಥಿತಿಲಯವ, ಹಾರಬೇಕು ಸರ್ಪಹಾರ ಕಪಿಲಸಿದ್ಧ ಮಲ್ಲಿಕಾರ್ಜುನನ ಆಹಾರದಲ್ಲಿ.

ಟಿಪ್ಪಣಿ:— ಜಾತಿಗಳು ಗುಣಕರ್ಮದಿಂದ ಇರತಕ್ಕದ್ದು ಹೊರತು ಜನ್ಮದಿಂದಲ್ಲ, ಎಂಬ ಬಗ್ಗೆ.

೫೨೫. ವೇದಶಾಸ್ತ್ರಕ್ಕೆ ಹಾರುವನಾಗಿ ವೀರವಿತರಣಕ್ಕೆ ಕ್ಷತ್ರಿಯನಾಗಿ ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ, ಕೃಷಿಯ ಮಾಡುವಲ್ಲಿ ಶೂದ್ರನಾಗಿ, ಇಂತೀ ಜಾತಿಗೋತ್ರದೊಳಗೆ ನೀಚಶ್ರೇಷ್ಠವೆಂಬ ಎರಡು ಕುಲವಲ್ಲದೆ ಹೊಲೆಹದಿನೆಂಟು ಜಾತಿ ಎಂಬ ಕುಲವಿಲ್ಲ. ಬ್ರಹ್ಮವನರಿದಲ್ಲಿ ಬ್ರಾಹ್ಮಣ, ಸರ್ವಜೀವಹಿತ ಕರ್ಮಕ್ಕೊಳಗಾದಲ್ಲಿ ಸಮ್ಮಕಾರ. ಈ ಉಭಯವನರಿದು ಮರೆಯಲಿಲ್ಲ, ಕಯ್ಯುಳಿಗತ್ತಿ ಅಡಿಗೊಂಟೆ ಕೆಡೆಯಾಗಬೇಡ ಅರಿ ನಿಜಾತ್ಮರಾಮರಾಮನಾ.

೫೨೬. ಶುಕ್ರಶೋಣಿತ, ಮಜ್ಜೆಮಾಂಸ, ಹಸಿವು ತೃಷೆ, ವ್ಯಸನವಿಷಯಾದಿಗಳೊಂದೇ ಭೇದ. ಮಾಡುವ ಕೃಷಿ ವ್ಯವಸಾಯ ಹಲವು ಅಲ್ಲದೆ ತೋರುವ ತೋರಿಕೆ ಅರಿವ ಆತ್ಮನೊಂದೇ ಭೇದ. ಅವ ಕುಲವಾದಡೂ ಅರಿದಲ್ಲಿಯೇ ಪರತತ್ವಭಾವಿ, ಮರೆದಲ್ಲಿಯೆ ಮಲಮಾಯಾ ಸಂಬಂಧಿ. ಇಂತೀ ಉಭಯವನರಿದು ಮರೆಯಲಿಲ್ಲ. ಕಯ್ಯುಳಿಗತ್ತಿ ಅಡಿಗೊಂಟ ಕೆಡೆಯಾಗಬೇಡ ಅರಿ ನಿಜಾತ್ಮರಾಮರಾಮನಾ.

೫೨೭. ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ, ಕಶ್ಯಪ ಕಮ್ಮಾರ, ರೋಮಜ ಕಂಚುಗಾರ, ಕೌಂಡಿಲ್ಯ ನಾವಿಂದ, ಎಂದುದನರಿಯದೆ ಮತ್ತೆ ಕುಲವುಂಟೆಂದು ಛಲಕ್ಕೆ ಹೊರಲೇತಕ್ಕೆ? ಇಂತೀ ಸಪ್ತಋಷಿಗಳೆಲ್ಲರೂ ಸತ್ಯದಿಂದೆ ಮುಕ್ತರಾದುದನರಿಯದೆ ಅಸತ್ಯದಲ್ಲಿ ನಡೆದು ವಿಪ್ರರು ನಾವು ಘನವೆಂದು ಹೋರುವ ಹೊತ್ತು ಹೋಕರ ಮಾತೇತಕ್ಕೆ? ಕಯ್ಯುಳಿಗತ್ತಿ ಅಡಿಗೊಂಟ ಕೆಡೆಯಾಗಬೇಡ, ಅರಿ ನಿಜಾತ್ಮರಾಮರಾಮನಾ.

ಟಿಪ್ಪಣಿ:— ಮೇಲಿನ ವಚನಗಳಲ್ಲಿ ಈಗಿದ್ದ ಜಾತಿಪದ್ಧತಿಯನ್ನು ವಚನಕಾರರು ನಿರಾಕರಿಸಿರುವರು, ಮತ್ತು ಗುಣಕರ್ಮಗಳನ್ನವಲಂಬಿಸಿಯೆ ಜಾತಿಗಳಿರಬೇಕು ಎಂದು ಪ್ರತಿಪಾದಿಸಿರುವರು. ಋಷಿಗಳು ಸಹ ತಮ್ಮ ಗುಣಕರ್ಮದಿಂದ ಶ್ರೇಷ್ಠತ್ವವನ್ನು ಹೊಂದಿದರು ಹೊರತು ತಮ್ಮ ಜನ್ಮ ಮೂಲಕವಲ್ಲ. ಇನ್ನು ಭಕ್ತರು ತಮ್ಮತಮ್ಮೊಳಗೆ ಯಾವ ಜಾತಿಭೇದಗಳನ್ನೂ ಮನ್ನಿಸದೆ ಊಟ ಉಡಿಗೆ, ಲಗ್ನವ್ಯವಹಾರಾದಿಗಳನ್ನು ಮಾಡತಕ್ಕದ್ದು, ಎಂದು ವಚನಕಾರರು ಹೇಳಿರುವರು.

೫೨೯. ಎಡೆಗೆ ಬಾರದಾತ ಅಡಿಗೆಗೆ ದೂರ. ಅಡಿಗೆಗೆ ದೂರಾದಾತ ಮನೆಗೆ ದೂರ. ಮನೆಗೆ ದೂರಾದಾತ ಮನಕ್ಕೆ ದೂರ. ಮನಕ್ಕೆ ದೂರಾದಾತ ಗುಹೇಶ್ವರ ಲಿಂಗಾನುಭಾವಕ್ಕೆ ದೂರ, ಚನ್ನಬಸವಾ.

೫೩೯. ಉಂಬಲ್ಲಿ ಉಡುವಲ್ಲಿ ಕ್ರಿಯೆಯಳಿಯಿತ್ತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರೆಂತಯ್ಯ? ಅವರು ಭಕ್ತರೆಂತೆಂಬೆನೆ? ಅವರು ಯುಕ್ತರೆಂತೆಂಬೆನಯ್ಯ? ಕೂಡಲ ಸಂಗಮದೇವ ಕೇಳಯ್ಯ, ಹೊಲತಿ ಶುದ್ಧ ನೀರ ಮಿಂದಂತಾಯಿತ್ತು.

ಟಿಪ್ಪಣಿ:— ಭವದಲ್ಲಿ ಕಂಡುಬರುವ ವಿಷಯಗಳ ದಾಸ್ಯವು ಸಾಕು, ಇನ್ನು ಆತ್ಮಸ್ವಾತಂತ್ರ್ಯವನ್ನು ಕೊಡು ಎಂದು ಬೇಡಿಕೊಂಡ ವಚನವು.

೫೪೦. ಪುಣ್ಯಪಾಪಂಗಳನರಿಯದ ಮೊದಲು, ಅನೇಕ ಭವಂಗಳಲ್ಲಿ ಬಂದೆನಯ್ಯ! ನಂಬಿ ಶರಣುಹೊಕ್ಕೆನಯ್ಯ! ನಿಮ್ಮನೆಂದೂ ಅಗಲದಂತೆ ಮಾಡಿ ನಡೆಸಯ್ಯಾ! ನಿಮ್ಮ ಧರ್ಮ, ನಿಮ್ಮ ಧರ್ಮ! ನಿಮ್ಮನೊಂದನೆ ಬೇಡುವೆನು, ಎನ್ನ ಬಂಧನವ ಬಿಡುವಂತೆ ಮಾಡಯ್ಯ, ಶ್ರೀಚನ್ನಮಲ್ಲಿಕಾರ್ಜುನ.

ಟಿಪ್ಪಣಿ:— ಮುಕ್ತಿ ದೊರೆಯಬೇಕಾದರೆ ಪರಮಾತ್ಮನ ಅನುಗ್ರಹವು ಬೇಕು ಎಂಬ ಬಗ್ಗೆ.

೫೪೧. ಅರಸಿ ತೊಳಲಿದರಿಲ್ಲ. ತಪಸ್ಸು ಮಾಡಿದರಿಲ್ಲ. ಅದು ತನ್ನ ಮಹಾಕಾಲಕ್ಕಲ್ಲದೆ ಸಾಧ್ಯವಾಗದು. ಶಿವನೊಲಿದಲ್ಲದೆ ಕೈಗೂಡದು. ಚನ್ನ ಮಲ್ಲಿಕಾರ್ಜುನನೆನಗೊಲಿದನಾಗಿ ನಾನು ಸಂಗನಬಸವಣ್ಣನ ಶ್ರೀಪಾದವ ಕಂಡು ಬದುಕಿದೆನು.

ಟಪ್ಪಣಿ:— ಶ್ರೇಷ್ಠವಾದ ನಿಜಯೋಗಾನಂದದ ಆಸ್ವಾದವನ್ನು ಪಡೆದ ಯೋಗಿಯ ವರ್ಣನೆಯು ಇನ್ನು ಇರುವದು.

೫೩೨. ಆಂದೋಲನದಲ್ಲಿಹ ರಾಜಶಿಸುವಿನಂತಿರಬಲ್ಲಡೆ ಅದು ಯೋಗಿಗೆ ಭೂಷಣ. ಸಂಧ್ಯಾಕಾಲದಲ್ಲಿಹ ಪ್ರಕಾಶದಂತೆ ವಿಷಯಸುಖವಿರಬಲ್ಲಡೆ ಅದು ಯೋಗಿಗೆ ಭೂಷಣ. ವಾರಾಂಗನೆಯಲ್ಲಿಹ ಪ್ರೀತಿಯಂತಿರಬಲ್ಲಡೆ ಅದು ಯೋಗಿಗೆ ಭೂಷಣ. ಪತಿವ್ರತೆಯಂತಿಹ ಭಕ್ತಿಯಂತಿರಬಲ್ಲಡೆ ಅದು ಯೋಗಿಗೆ ಭೂಷಣ, ಕಪಿಲಸಿದ್ಧಮಲ್ಲಿಕಾರ್ಜುನಂಗದು ಬಹು ತೋಷಣ, ಕೇಳಾ ಮನವೆ.

೫೩೩. ಅ. ನಾನಾ ಭವದುಃಖದಲ್ಲಿ ಹುಟ್ಟಿದ ಪ್ರಾಣಿಯನಿಲ್ಲಿಂಗೆ ತಂದೆ. ಇನ್ನು ಹುಟ್ಟಲಾರೆನು ಹೊಂದಲಾರೆನು. ಜನನಮರಣವೆಂಬೆರಡಕ್ಕೆ ಹೊರಗಾದೆನಯ್ಯಾ. ನೀವು ಹೇಳಿದ ಮಣಿಹವ ಮಾಡಿದೆ. ಇನ್ನು ನಿಮ್ಮೊಳಗೆ ಕೂಡಿಕೊಳ್ಳಾ, ಕೂಡಲಸಂಗಮದೇವಾ.

೫೩೪. ಬ. ಮಾತುಗಂಟುತನದಿಂದ ಎಷ್ಟು ಮಾತನಾಡಿದರೇನು ? ಕಾಮಿನಿಯರ ಕಾಲುದೆಸೆಯಲ್ಲಿ ಸಿಕ್ಕಿ, ಕ್ರೋಧದ ದಳ್ಳುರಿಯಲ್ಲಿ ಬೆಂದು, ಆಶೆಯೆಂಬ ಪಾಶ ಕೊರಳಲ್ಲಿ ಸುತ್ತಿ, ಅದೇಕೋ ಅದೇತರ ಮಾತೆಂದನಂಬಿಗರ ಚೌಡಯ್ಯ.

---

೨೦ ಮುಕ್ತಾಯ

ವಿವರಣೆ

ಇದು ವಚನಾಮೃತವೆಂಬ ವಚನಸಂಗ್ರಹದ ಕೊನೆಯ ಭಾಗವು. ಈ ಪ್ರಕರಣವು ಉಪಸಂಹಾರರೂಪವಿರುವದು. ವಚನಶಾಸ್ತ್ರದ ಸಾರ ಸರ್ವಸ್ವವನ್ನು ಸಂಕ್ಷೇಪದಿಂದಲೂ ಪರಿವಿಡಿಯಿಂದಲೂ ಕೊಟ್ಟು ಈ ಆಯ್ಕೆಯನ್ನು ಮುಗಿಸಬೇಕೆಂದಿದ್ದೇವೆ.

ಮೊದಲು ವಚನಗಳ ಉತ್ಪತ್ತಿಯ ಬಗ್ಗೆ ಇದ್ದ ವಚನವು ಕೊಡಲ್ಪಟ್ಟಿರುವದು.

ವಚನಗಳು

೫೩೫. ಕಾಮಧೇನುವಿನಲ್ಲಿ ಕಲ್ಪಿಸಿದ ಸವಿ ಇಪ್ಪುದಲ್ಲದೆ, ಮರ್ತ್ಯದ ಪಶುವಿನಲ್ಲಿ ಉಂಟೇ ಅಯ್ಯಾ ? ಮಹಾಶೇಷನಲ್ಲಿ ಮಾಣಿಕ್ಯಪ್ರಭಾವಿಸುತ್ತಿಪ್ಪುದಲ್ಲದೆ, ಕೆರೆಯೊಳಗಣ ಒಳ್ಳೆಯಲ್ಲಿ ಉಂಟೇ ಅಯ್ಯಾ ? ವಾರಣದ ಕುಂಭಸ್ಥಳದಲ್ಲಿ ಮೌಕ್ತಿಕ ಬೆಳಗುತ್ತಿಪ್ಪುದಲ್ಲದೆ, ಊರ ಹಂದಿಯಲ್ಲಿ ಉಂಟೇ ಅಯ್ಯಾ ? ಶರಣರ ಮನೋಮಧ್ಯದಲ್ಲಿ ಶಿವನು ಮೂರ್ತಿಗೊಂಡು, ಆ ಶರಣರ ಜಿಹ್ವೆಯ ಕೊನೆಯ ಮೊನೆಯ ಮೇಲೆ ವಚನವೆಂಬ ಪರಮಾಮೃತವ ಕರೆದು, ಕೆಲಬಲದ ಗಣಂಗಳಿಗೆ ಸವಿಯ ತೋರಿ, ಆ ಶರಣರಲ್ಲಿ ಪರಿಪೂರ್ಣನಾಗಿಪ್ಪನಲ್ಲದೆ, ದ್ವೈತಾದ್ವೈತಿಗಳೆಂಬವರಲ್ಲಿ ಉಂಟೇ, ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ ?

ಟಪ್ಪಣಿ:— ಅಸಸ್ಯಭಕ್ತನಿಗೆ ದೈವೀಸ್ಫೂರ್ತಿಯಾದಾಗ ಹೊರ ಹೊಮ್ಮಿದ ಉಕ್ತಿಯೇ ವಚನವೆನಿಸುವದು. ಎಲ್ಲ ಮಾತುಗಳು 'ವಚನ' ವೆಂಬ ಶ್ರೇಷ್ಠಪದವಿಗೆ ಅಯೋಗ್ಯವಾದವುಗಳು.

ವಿವರಣೆ

ಇನ್ನು ವಚನಸಂಗ್ರಹದಲ್ಲಿ ಅಯಾ ವಿಷಯಗಳನ್ನು ಸಂಬಂಧಿಸಿದ ವಚನಗಳು ಯಾವ ಪರಿವಿಡಿಯಿಂದ ಬಂದಿರುವವೋ ಅದೇ ವಿಷಯಾನುಕ್ರಮವನ್ನು ಇಲ್ಲಿಯಾದರೂ ಅನುಸರಿಸಿರುವೆವು. ಮತ್ತು ಸಂಕ್ಷೇಪವಾಗಿ ಇದೀ ವಚನಶಾಸ್ತ್ರದ ಉಪದೇಶವೇನಿರುವದು ಇದನ್ನು ತೋರಿಸಲೆತ್ನಿಸುವೆವು. ಈ ವಚನಸಂಗ್ರಹದಲ್ಲಿ ಉಕ್ತವಾದ ವಿಷಯಗಳನ್ನು ಇಲ್ಲಿ ಸಾರರೂಪವಾಗಿ ಒಂದೇ ಪ್ರಕರಣದಲ್ಲಿ ಕಾಣಬಹುದು. ಮೊದಲು ಸತ್ಯಸ್ವರೂಪದ ವರ್ಣನೆಯಿರುವದು.

ವಚನಗಳು

೫೩೬. ದ್ವೀಪಾದ್ವೀಪವಿಲ್ಲದಲಿಂದತ್ತತ್ತ, ಕಾಲಕರ್ಮವಿಲ್ಲದಲಿಂದತ್ತತ್ತ, ಮಾಯಾಮೋಹವಿಲ್ಲದಲಿಂದತ್ತತ್ತ, ಏನೂ ಏನೂ ಇಲ್ಲದಲಿಂದತ್ತತ್ತ, ಆದಿ ಮೂವರಿಲ್ಲದಲಿಂದತ್ತತ್ತ, ಸಿಮುಲಿಗೆಯ ಚನ್ನರಾಮನೆಂಬ ಲಿಂಗವಿಲ್ಲದಲಿಂದತ್ತತ್ತ.

ಟಪ್ಪಣಿ:— ಆದಿ ಮೂವರು ಅಂದರೆ ಬ್ರಹ್ಮ ವಿಷ್ಣು ಮಹೇಶರು.

೫೩೫. ವೇದಾತೀತ, ಷಡ್ವರ್ಣರಹಿತ, ಅಷ್ಟತ್ರಿಂಶತ್‌ಕಳಾತೀತ, ವ್ಯೋಮಾತೀತ, ಅಗಮ್ಯ, ಅಗೋಚರ ಕೂಡಲಸಂಗಮದೇವಾ.

೫೩೬. ಏನೆಂದೆನಲಿಲ್ಲ, ನುಡಿದು ಹೇಳಲಿಕ್ಕಿಲ್ಲ, ನಿಜದಲ್ಲಿರ್ದ ಬೆರಗು ಕುರುಹು ಅರಿವುದೇ? ಅದು ತನ್ನಲ್ಲಿ ತಾನಿಲ್ಲ. ಏನೆಂದೆನಲಿಲ್ಲದ ಬಯಲು ಅಲ್ಲಿ ಏನನೂ ಅರಸಲಿಲ್ಲ. ಇದಿರಿಲ್ಲ, ತಾನಿಲ್ಲ, ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ.

೫೩೭. ನಿಮ್ಮ ತೇಜವ ನೋಡಲೆಂದು ಹೆರಸಾರಿ ನೋಡುತ್ತಿರಲು ಶತಕೋಟಿ ಸೂರ್ಯರು ಮೂಡಿದಂತೆ ಇದ್ದುದಯ್ಯಾ. ಏಳಿಂಚಿನ ಬಳ್ಳಿಯ ಸಂಜವ ಕಂಡಡೆ ಎನಗಿದು ಸೋಜಿಗವಾಯಿತ್ತು. ಗುಹೇಶ್ವರಾ ನೀನು ಜ್ಯೋತಿರ್ಲಿಂಗವಾದಡೆ ಉಪಮಿಸಿ ನೋಡಬಲ್ಲವರಿಲ್ಲವಯ್ಯಾ.

೫೩೮. ವಿಶ್ವದೊಳಗೆಲ್ಲ ನೀನೇ ದೇವಾ, ವಿಶ್ವಭರಿತನು ನೀನೇ ದೇವಾ. ವಿಶ್ವಪತಿ ನೀನೇ ದೇವಾ, ವಿಶ್ವಾತೀತನು ನೀನೇ ದೇವಾ, ಅಖಂಡೇಶ್ವರಾ.

೫೩೯. ಗಿರಿಗಳ ಗುಹೆಗಳ ಕಂದರದಲ್ಲಿ, ನೆಲಹೊಲದಲ್ಲಿ ಇಪ್ಪೆ, ದೇವಾ. ಎಲ್ಲಿ ನೋಡಿದಡಲ್ಲಿ ಇಪ್ಪೆ ದೇವಾ. ಮನಕ್ಕಗಮ್ಯ ಅಗೋಚರವಾಗಿ, ಅಲ್ಲಲ್ಲಿ ಎಲ್ಲಿಯೂ ನೀನೇ ಇಪ್ಪೆಯಯ್ಯಾ, ಗುಹೇಶ್ವರಾ, ನಿಮ್ಮನಗಲಕ್ಕೆ ಹರಿವರಿದು ಕಂಡೆ ನಾನು.

೫೪೦. ಮರದೊಳಗಣ ಮುಂದಾಗ್ನಿಯ ಉರಿಯದಂತಿರಿಸಿದೆ. ನೊರೆ ವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ. ಶರೀರದೊಳಗಾತ್ಮನ ಕಾಣದಂತಿರಿಸಿದೆ. ನೀ ಬೆರಿಸುವ ಭೇದಕ್ಕೆ ಬೆರಗಾದೆನ್ಯೆ ರಾಮನಾಥಾ.

೫೪೧. ಸಾವಿಲ್ಲದ, ರೂಹಿಲ್ಲದ, ಕೇಡಿಲ್ಲದ ಚಲುವನವ್ವಾ. ಎಡೆ ಇಲ್ಲದ, ತೆರಹಿಲ್ಲದ, ಕುರುಹಿಲ್ಲದ, ಚಲುವಂಗಾನೊಲಿದೆ, ಎಲೆ ಅವ್ವಾ, ನೀ ಕೇಳಾ ತಾಯೆ. ಭವವಿಲ್ಲದ, ಭಯವಿಲ್ಲದ, ನಿರ್ಭಯ ಚಲುವಂಗೆ, ಕುಲಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ. ಇದುಕಾರಣ ಚನ್ನಮಲ್ಲಿಕಾರ್ಜುನ ಚಲುವ ಗಂಡನೆನಗೆ. ಈ ಸಾವ ಕೆಡುವ ಗಂಡರ ನೊಯ್ದು ಒಲೆಯೊಳಗಿಕ್ಕು.

ಟಿಪ್ಪಣಿ: — ಪರಮಾತ್ಮನು ಅನಾದಿಯು, ಅನಂತನು, ತ್ರಿಗುಣಾತೀತನು, ಕಲಾರಹಿತನು, ವಾಙ್ಮನಕ್ಕಗೋಚರನು, ವಿಶ್ವವ್ಯಾಪಿಯು,

ವಿಶ್ವಪತಿಯು, ತೇಜಃಸ್ವರೂಪನು ಇರುವನು. ದೇಹದಲ್ಲಿ ಆತ್ಮನಿರುವಂತೆ ಅವನು ಅವ್ಯಕ್ತ ಚೈತನ್ಯ ಸ್ವರೂಪದಿಂದ ಎಲ್ಲೆಲ್ಲಿಯೂ ತುಂಬಿರುವನು. ಈ ಮೇಲಿನ ಗುಣಗಳನ್ನೆ ತನ್ನ ಪತಿಯಲ್ಲಿ ಆರೋಪಿಸಿ ಬರ್ವ ಸತಿಯು ಬಣ್ಣಿಸುವಂತೆ ಈ ಮೇಲಿನ ವಚನವು ಬಣ್ಣಿಸಿರುವದು. ಈ ಪ್ರಕಾರದ ಆತ್ಮವಸ್ತುವು ಸೃಷ್ಟಿಯನ್ನು ಹೇಗೆ ನಿರ್ಮಿಸಿತು ಎಂಬ ಬಗ್ಗೆ ಇನ್ನು ವಚನಗಳು.

೫೪೨. ತನ್ನ ವಿನೋದಕ್ಕೆ ತಾನೇ ಸೃಷ್ಟಿಸಿದ ಸಕಲಪ್ರಪಂಚವನು. ತನ್ನ ವಿನೋದಕ್ಕೆ ತಾನೇ ತಿರುಗಿಸಿದ ಅನಂತ ದುಃಖಗಳಲ್ಲಿ. ಇಂತೆನ್ನ ಚನ್ನಮಲ್ಲಿಕಾರ್ಜುನನೆಂಬ ಪರಶಿವನು ಜಗದ್ವಿಲಾಸ ಸಾಕಾದಡೆ ಮತ್ತೆ ಪರಿವನಾ ಮಾಯಾಪಾಶವನು.

೫೪೩. ಬಯಲು ಮೊಳಗಿ ಮಳೆ ಸೃಜಿಸಿ, ಆ ಬಯಲು ಆ ಮಳೆಯ ನೊಡಗೂಡಿ, ದೃಷ್ಟವಸ್ತು ವಾರಿಗಲ್ಲಾಗಿ ತೋರಿದಂತೆ ನಿಮ್ಮ ನೆನಹೇ ಶಕ್ತಿಯಾಯಿತ್ತಲ್ಲಾ. ಆ ನಿಮ್ಮಿಬ್ಬರ ಸಮರತಿಯೇ ನಿಮಗೆ ಅಖಂಡವೆಂಬ ನಾಮ ಸೂಚನೆಯಾಯಿತ್ತಲ್ಲಾ. ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಆದಿಗೆ ಇದೇ ಪ್ರಥಮವಾಯಿತ್ತಲ್ಲಾ.

ಟಿಪ್ಪಣಿ:— ಚಿದ್ರೂಪ ಅನಾದಿ ಅನಂತ ಪರಮಾತ್ಮನಲ್ಲಿ ಸಂಕಲ್ಪದ ಮೂಲಕ ಶಕ್ತಿ ನಿರ್ಮಾಣವಾಗಿ ಆ ಶಕ್ತಿಯಿಂದ ಸೃಷ್ಟಿನಿರ್ಮಾಣವಾಯಿತು. ಏಕರಸಚಿತ್ತು ವಿವಿಧ ಸೃಷ್ಟಿರೂಪದಿಂದ ತೋರಿತು, ಎಂದು ಮೇಲಿನ ಎರಡು ವಚನಗಳು ಹೇಳುವವು. ಇದೇ ಸೃಷ್ಟಿಯ ಮೂಲಾರಂಭವು. ವ್ಯಕ್ತಿ ಅಥವಾ ಜೀವಾತ್ಮನು ಈ ಸೃಷ್ಟಿಯಲ್ಲಿಯ ಒಂದು ಭಾಗವಿರುವನು. 'ನಾನು' ಎಂಬ ಅಹಂಕಾರದ ಮೂಲಕ ತಾನು ಪ್ರತ್ಯೇಕ ಒಂದು ವ್ಯಕ್ತಿ ಎಂಬ ಭಾವನೆಯುಳ್ಳವನಾಗಿರುತ್ತಾನೆ. ಆ ಭ್ರಾವನೆಯಳಿದು ತಾನೂ ಚಿನ್ಮಯನು, ಎಂಬ ಪರಮಾತ್ಮೈಕ್ಯ ಭಾವನೆಯು ನೆಲೆಗೊಂಡಿತೆಂದರೆ ಅವನು ಮುಕ್ತನಾಗುವನು. ಅಲ್ಲಿಂದ ಮುಂದೆ ಅವನಿಗೆ ಅಹಂಕಾರಾದಿಗಳ ಬಾಧೆ ಇಲ್ಲ. ಇನ್ನು ಮೋಕ್ಷಸ್ವರೂಪದ ವರ್ಣನೆಯನ್ನು ನೋಡುವಾ.

೫೪೪. ಕನ್ನಡಿಯ ನೋಡುವಲ್ಲಿ ಪ್ರತಿಬಿಂಬ ಕಾಣುತಿರ್ಪುದು. ಆ ನೋಟ ಮರಳಿದಲ್ಲಿ ಪ್ರತಿರೂಪ ನಿಜರೂಪದಲ್ಲಿ ಅಡಗಿದಂತೆ ಅನುಪಮ ಬ್ರಹ್ಮದಲ್ಲಿ ನೆನಹುದೋರಿ ಚಿತ್ತವೆನಿಸಿತ್ತು. ಆ ಚಿತ್ತಿನಿಂದ ಚಿನ್ನಾದ, ಚಿದ್ಬಿಂದು, ಚಿತ್ಕಳೆಗಳು ಆ ಮೂಲ ಚಿತ್ಸ್ವರೂಪವಾದ ಶರಣಂಗೆ ದೇಹಪ್ರಾಣ

ಆತ್ಮಗಳಾಗಿ ಅಂಗಕ್ಕೆ ಪದಾರ್ಥಂಗಳಾಗಿರ್ಪವು. ಆ ಪದಾರ್ಥವು ಲಿಂಗ ಮುಖಕ್ಕೆ ಸಮರಸವೇದಿಸಿ, ಆ ಚಿತ್ತು ಚಿದ್ಘನವ ಬೆರೆಯಲು ಮುನ್ನಿನಂತೆ ಐಕ್ಯವಾಯಿತ್ತು ಅಖಂಡೇಶ್ವರಾ.

೫೪೫. ಅಯ್ಯ, ತನ್ನ ತಾನರಿದಡೆ, ತಾನೇ ಚಿನ್ಮಯನಾದ ಪರಬ್ರಹ್ಮ ನೋಡಾ. ತಾನೇ ಚಿನ್ನಾದ, ಚಿದ್ಬಿಂದು, ಚಿತ್ಕಳಾಮೂರ್ತಿ ನೋಡಾ. ತಾನೇ ಸಕಲ ಚೈತನ್ಯ ಸೂತ್ರಧಾರಿ, ತನ್ನಿಂದಧಿಕ ಪರದೈವವಿಲ್ಲ ನೋಡಾ. ತಾನೇ ಸಚ್ಚಿದಾನಂದಸ್ವರೂಪವಾದ ಚಿದ್ಘನಲಿಂಗ ನೋಡಾ, ಅಪ್ರಮಾಣ ಕೂಡಲ ಸಂಗಮದೇವಾ.

ಟಪ್ಪಣಿ:— ಜೀವನು ತನ್ನ ಔಪಾಧಿಕ ಸಂಕುಚಿತ ಭಾವದಾಚೆಗೆ ಹೋದನೆಂದರೆ, ತಾನು ದೇಹ ಮನಸು ಇರುವನು, ಎಂಬ ಭ್ರಮವನ್ನು ಬಿಟ್ಟು, ತಾನು ಆತ್ಮಸ್ವರೂಪನು, ಎಂದು ಸಾಕ್ಷಾತ್ಕರಿಸಿದನೆಂದರೆ ಅವನು ಮುಕ್ತನಾಗುವನು, ಸಚ್ಚಿದಾನಂದ ಸ್ಥಿತಿಯನ್ನು ಪಡೆಯುವನು, ಎಂದು ಮೇಲಿನ ವಚನಗಳ ಆಶಯವಿರುವದು. ಹೀಗಿದ್ದರೆ ಎಲ್ಲರೂ ಮುಕ್ತಿ ಸುಖವನ್ನೇಕೆ ಅನುಭವಿಸುವುದಿಲ್ಲ, ಎಂದು ಕೇಳಬಹುದು. ಇದಕ್ಕೆ ಉತ್ತರವೇನೆಂದರೆ, ಜೀವನು ಮಾಯೆಯಿಂದ, ಮೋಹದಿಂದ, ಅಜ್ಞಾನದಿಂದ ಆವರಿಸಲ್ಪಟ್ಟಿರುವನು. ಅಂದಬಳಿಕ ಆ ಅಜ್ಞಾನದ ಸ್ವರೂಪವೇನು ನೋಡುವ.

೫೪೬. ತಾಯ ಗರ್ಭದಲ್ಲಿ ಶಿಶು ತಾಯ ಕುರುಹನರಿಯದು. ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು. ಮಾಯಾಮೋಹದಲ್ಲಿಪ್ಪ ಭಕ್ತರು ದೇವರನರಿಯರು. ಆ ದೇವರು ಭಕ್ತರನೆಂದೂ ಅರಿಯನು ಕಾಣಾ ರಾಮನಾಥಾ.

೫೪೭. ಕನ್ನಡಿಯಲ್ಲಿ ಕಪ್ಪು ಹುಟ್ಟಿದಾಗ ಕಳೆದಲ್ಲದೆ ಕಾಣಬಾರದು. ತನ್ನಯ ಭಾವಶುದ್ಧಕ್ಕೆ ದರ್ಪಣದ ಒಪ್ಪವನರಸಬೇಕು. ಎನ್ನ ಮನದ ಕಪಟ ನಿಮ್ಮಯ ಚಿತ್ತಶುದ್ಧವನರಸಬೇಕು. ನಿಮ್ಮಯ ನಿರ್ಮಲ ಎನ್ನಯ ಮಲ ದೇಹವ ತೊಳೆಯಬೇಕು. ಅರುವಿನ ಮಾರನ ಬಿನ್ನಹ, ಸದಾಶಿವ ಮೂರ್ತಿ ಲಿಂಗಕ್ಕೆ ತೆರಪಿಲ್ಲದ ಭಾವ.

೫೪೮. ಗುಬ್ಬಿ ಹೆರರ ಮನೆ ತನ್ನದೆಂಬಂತೆ, ಧರೆ ಧನ ವನಿತೆಯರು

ತನ್ನವರೆಂದು ಹೋರಿ ಹೋರಿ ಸಾವುತ್ತಿದ್ದೆ, ಜೀವ ಸರ್ವ ಕರ್ತು ಕೂಡಲ ಚನ್ನಸಂಗಯ್ಯನೆಂದರಿಯದೆ.

೫೪೯. ಮೋಹ, ಮದ, ರಾಗ, ವಿಷಾದ, ತಾಪ, ಶೋಕ, ವೈಚಿತ್ರ್ಯ ವೆಂಬ ಸಪ್ತಮಲವಾವರಿಸಿ, ಮತ್ತರಾಗಿ, ತಮ್ಮ ತಾವರಿಯದೆ ಕಣ್ಣಂಗೆ ಅಜ್ಞಾನತಿಮಿರ ಕವಿದು ಮುಂದುಗಾಣದವರು ಶಿವನನು ಅವರೆತ್ತ ಬಲ್ಲರು? ಗೃಹಕ್ಷೇತ್ರ ಸತಿಸುತಾದಿ ಪಾಶಂಗಳಲ್ಲಿ ಬಿಗಿವಡೆದ ಪಶುಗಳು ಶಿವನನವರೆತ್ತ ಬಲ್ಲರು? ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತಾನವರ ಎತ್ತಲೆಂದೂ ಅರಿಯನು.

ಟಪ್ಪಣಿ:— ಕನ್ನಡಿಗೆ ತೊಡೆದ ಕಾಳಿಕೆಯಂತೆ ಅಜ್ಞಾನವು ಮನುಷ್ಯನ ಬುದ್ಧಿಯನ್ನು ಮುಸುಕಿ ಅವನನ್ನು ದುಃಖದಲ್ಲಿ ತೊಳಲಾಡಿಸುವದು. ಕಾಮಾದಿ ಅರಿಷಡ್ವರ್ಗಗಳು, ವಿಷಯಸುಖಲಾಲಸೆ, ಅಹಂಕಾರ,ಮಮತ್ವ, ರಾಗದ್ವೇಷಾದಿ ದ್ವಂದ್ವ ಇವೇ ಅಜ್ಞಾನದ ವಿವಿಧ ರೂಪಗಳು. ಇವು ತನ್ನನ್ನು ಮೋಕ್ಷದತ್ತ ಹೋಗಗೊಡಲೊಲ್ಲವು, ಎಂಬ ಜ್ಞಾನವಾಯಿತೆಂದರೆ ಮನಸಿನಲ್ಲಿ ಇವುಗಳ ಬಗ್ಗೆ ಉಪರತಿವೈರಾಗ್ಯಗಳು ಉತ್ಪನ್ನವಾಗಿ, ಮನುಷ್ಯನಲ್ಲಿ ಮೋಕ್ಷದ ಬಯಕೆಯು ಹೊಳೆತು, ಅದು ಮುಂದೆ ಬಲಿಯುತ್ತ ಹೋಗುವದು. ಅದು ಮುಮುಕ್ಷುಸ್ಥಿತಿಯು. ಮೋಕ್ಷದ ಬಯಕೆಯು ಯಾವ ಪ್ರಕಾರದ್ದಿರುವದು ಇದನ್ನು ಇನ್ನು ನೋಡಬಹುದು.

೫೫೦. ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ. ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯ. ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತಯ್ಯ. ಇನ್ನೆಂದಿಗೆ ಮೋಕ್ಷವಹುದೋ ಕೂಡಲಸಂಗಮದೇವಾ?

೫೫೧. ಅತ್ತಲಿತ್ತ ಸಾರದಂತೆ ಹೆಳವನ ಮಾಡಯ್ಯ ತಂದೆ. ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ. ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ. ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತಿರಿಸಯ್ಯ ಕೂಡಲಸಂಗಮದೇವಾ.

೫೫೨. ಅಳಿಸಂಕುಳವೆ, ಮಾಮರವೆ, ಬೆಳದಿಂಗಳೆ, ಕೋಗಿಲೆಯೆ, ನಿಮ್ಮನೆಲ್ಲರನು ಬಂದು ಬೇಡುವೆನು. ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ.

ಟಿಪ್ಪಣಿ:— ಸಂಸಾರದತ್ತ ಮನಸನ್ನು ಹರಿಯಗೊಡುವದು, ವಿಷಯಸುಖಗಳಲ್ಲಿ ನಿಮಗ್ನರಾಗಿ, ಅವುಗಳಿಗೆ ದಾಸಾನುದಾಸರಾಗಿ ನಡೆಯುವದು ಘಾತಕವು, ಎಂಬ ಅನುಭವವು ಬಂದಬಳಿಕ, ಅವುಗಳಿಂದ ಮುಕ್ತರಾಗಬೇಕು, ಎಂಬ ಬುದ್ಧಿಯು ಜೀವರಿಗೆ ಹುಟ್ಟುವದು. ಅದೇ ಮುಕ್ತಿಯ ಬಯಕೆಯು. ಅದು ತೀವ್ರವಾಗುತ್ತ ಹೋದಂತೆ ಮುಕ್ತಿ ದ್ವಾರವು ತೆರೆಯುತ್ತ ಹೋಗುವದು. ಇನ್ನು ಹೀಗೆ ಮುಮುಕ್ಷುತ್ವವು ತೀವ್ರವಾದೊಡನೆ ಸರ್ವಾರ್ಪಣ ಭಾವದಿಂದ ಸಾಧನಪಥದಲ್ಲಿ ಅಡಿ ಇಡಬೇಕೆಂದು ವಚನಕಾರರು ಹೇಳಿರುವರು.

೫೫೩. ಎನ್ನ ಮಾಯದ ಮದವ ಮುರಿಯಯ್ಯ. ಎನ್ನ ಕಾಯದ ಕಳವಳವ ಕೆಡಿಸಯ್ಯ. ಎನ್ನ ಜೀವದ ಜಂಜಡವ ಬಿಡಿಸಯ್ಯ. ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ, ಎನ್ನ ಸುತ್ತಿದ ಮಾಯಾಪ್ರಪಂಚವ ಬಿಡಿಸಯ್ಯ ನಿಮ್ಮ ಧರ್ಮ.

೫೫೪. ನಡೆವ ಕಾಲು, ಅನುವ ಕೈ, ಬೇಡುವ ಬಾಯಿ, ಸರ್ವನೊಡಗೂಡುವ ಮನ ಉಡುಗಿ ಘನಲಿಂಗದಲ್ಲಿ ಲೀಯ್ಯವಾದವನ ಅಂಗ ಮರುಳ ಕಂಡ ಕನಸಿನಂತೆ, ಮೂಗನ ಕಾವ್ಯದಂತೆ, ಜಲಲಿಪಿಯಂತೆ, ವಾರಿಯ ಧೂಮ್ರದಂತೆ, ಇದಾರಿಗೆಯೂ ಅಸಾಧ್ಯ, ಅತುರವೈರಿ ಮಾರೇಶ್ವರಾ.

೫೫೫. ಅಯ್ಯಾ, ನಿನ್ನ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯ. ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯ. ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಕರ್ಮಛೇದನವಾಯಿತ್ತಯ್ಯ. ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿ ಎಂಬ ಒಡವೆಯನು ದಿಟವ ಮಾಡಿ ತೋರಿದ ಕಾರಣ, ಅಲ್ಲಿ ಮಾಡುವರು ಮಾಡಿಸಿಕೊಂಬವರು ನೀವೇ ಕೂಡಲ ಸಂಗಮದೇವಾ.

ಟಿಪ್ಪಣಿ:— ತನು ಪ್ರಾಣ ಭಾವಗಳನ್ನು ಪರಮಾತ್ಮನಲ್ಲಿ ಅರ್ಪಿಸಿ, ಅವನಿಗೆ ಅನನ್ಯಶರಣಾಗತನಾಗಿ, 'ನೀರಲದ್ದು, ಹಾಲಲದ್ದು,' 'ಕೊಲ್ಲು, ಕಾಯು,' ಎಂದು ಸಾಧಕನು ತನ್ನ ಸಾಧನೆಯನ್ನು ಪ್ರಾರಂಭಿಸಬೇಕು. ಆಂದರೆ ಅವನಲ್ಲಿಯ ಎಲ್ಲ ಶಕ್ತಿಗಳು ಪರಮಾತ್ಮ ಪ್ರಾಪ್ತಿಗಾಗಿಯೆ ವಿನಿಯೋಗವಾಗಿಟ್ಟಂತೆ ಆಗುವವು. ಇನ್ನು ಸಾಧನದಲ್ಲಿ ಚಿತ್ತಶುದ್ಧಿ ಮುಂತಾದವುಗಳು ಬೇಕು, ಎಂಬ ಬಗ್ಗೆ ವಚನಗಳಿರುವವು.

೫೫೬. ಜನವೆಚ್ಚು ಶುದ್ಧನಲ್ಲದೆ ಮನವೆಚ್ಚು ಶುದ್ಧನಲ್ಲವಯ್ಯ. ನುಡಿಯಲ್ಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲವಯ್ಯ. ವೇಷದಲ್ಲಿ ಅಧಿಕನಲ್ಲದೆ ಭಾಷೆಯಲ್ಲಿ ಅಧಿಕನಲ್ಲವಯ್ಯ. ಧನ ದೊರಕದೆ ನಿಸ್ಪೃಹನಲ್ಲದೆ ಧನ ದೊರಕಿ ನಿಸ್ಪೃಹಿಯಲ್ಲವಯ್ಯ. ಏಕಾಂತದ್ರೋಹಿ, ಗುಪ್ತಪಾತಕಿ, ಯುಕ್ತಿಶೂನ್ಯಂಗೆ ಸಕಳೇಶ್ವರದೇವರು ಒಲಿ, ಒಲಿ, ಎಂದರೆ ಎಂತೊಲಿವನಯ್ಯ.

೫೫೭. ಶಸೆ, ದಮೆ, ವಿವೇಕ, ವೈರಾಗ್ಯ, ಪರಿಪೂರ್ಣಜ್ಞಾನ, ಶಾಂತಿ, ಕಾರುಣ್ಯ, ಶ್ರದ್ಧೆ, ಸತ್ಯ, ಸದ್ಭಕ್ತಿ, ಶಿವಜ್ಞಾನ, ಶಿವಾನಂದ ಉದಯವಾದ ಮಹಾಭಕ್ತನ ಹೃದಯದಲ್ಲಿ ಶಿವನಿಪ್ಪ. ಆತನ ದರ್ಶನ ಸ್ಪರ್ಶನ ಸಂಭಾಷಣೆಯಿಂದ ಕೇವಲ ಮುಕ್ತಿಯಪ್ಪುದು ತಪ್ಪದಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಟಿಪ್ಪಣಿ:— ಬಾಹ್ಯಶುದ್ಧಿಗಿಂತ ಆಂತರಿಕಶುದ್ಧಿಯು ಅವಶ್ಯವು. ಅದೇ ರೀತಿ, ಶಮದಮವಿವೇಕಾದಿಗಳು ಭಕ್ತನಿಗೆ ಅವಶ್ಯವಾದವುಗಳು. ಇವು ಯಾವನಲ್ಲಿ ನೆಲೆಸಿರುವವೊ ಅವನ ಅಂತಃಕರಣದಲ್ಲಿ ಪರಮಾತ್ಮ ಜ್ಯೋತಿಯು ಬೆಳಗಲಾರಂಭಿಸುವದು. ಇನ್ನು ನಿರ್ದ್ವೇಷ, ನಿರಹಂಕಾರಾದಿ ಗುಣಗಳು ಬೇಕು ಎಂಬ ಬಗ್ಗೆ.

೫೫೮. ಶಿವನೇ ದೈವ, ಕೊಲ್ಲದಿಪ್ಪುದೇ ಧರ್ಮ, ಅಧರ್ಮದಿಂದ ಬಂದುದನೊಲ್ಲದಿಪ್ಪುದೇ ನೇಮ. ಆಶೆ ಇಲ್ಲದಿಪ್ಪುದೇ ತಪ. ರೋಷವಿಲ್ಲದಿಪ್ಪುದೇ ಜಪ. ವಂಚನೆ ಇಲ್ಲದಿಪ್ಪುದೇ ಭಕ್ತಿ. ಹೆಚ್ಚು ಕುಂದಿಲ್ಲದಿಪ್ಪುದೇ ಸಮಯಾಚಾರ. ಇದು ಸತ್ಯ. ಶಿವ ಬಲ್ಲ, ಶಿವನಾಣೆ, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ಟಿಪ್ಪಣಿ:— ಹೆಚ್ಚು ಕುಂದು ಇಲ್ಲದಿಪ್ಪುದು ಅಂದರೆ ಯಾವಾಗಲೂ ಯೋಗ್ಯಪ್ರಮಾಣದಲ್ಲಿರುವದು, ಅದೇ ಸಮಯಾಚಾರವೆನಿಸುವದು. ಇನ್ನು ನಿಜಪೂಜೆ ಹೇಗಿರಬೇಕು ಎಂಬ ಬಗ್ಗೆ.

೫೫೯. ಹೊರಗನೇ ಕೊಯ್ದು ಹೊರಗನೇ ಪೂಜಿಸಿದಡೆ ಪರಿಣಾಮವಿಲ್ಲ, ಪ್ರಯೋಜನವಿಲ್ಲ. ಸುಖ ದೊರೆಕೊಳ್ಳದು ನೋಡಾ. ಅದೆಂತೆಂದೊಡೆ, ಸರ್ವಜೀವಂಗಳಲ್ಲಿ ಹಿಂಸೆಯ ಮಾಡದಿಪ್ಪುದೇ ಪ್ರಥಮಪುಷ್ಪ. ಸರ್ವೇಂ

ದ್ರಿಯಗಳ ನಿಗ್ರಹಿಸಿಕೊಂಡಿರಬಲ್ಲಡೆ, ದ್ವಿತೀಯಪುಷ್ಪ. ಸರ್ವಾಹಂಕಾರ ವರತು ಶಾಂತನಾಗಿರಬಲ್ಲರೆ, ತೃತೀಯಪುಷ್ಪ. ಸರ್ವವ್ಯಾಪಾರವಳಿದು ನಿರ್ವ್ಯಾಪಾರಿಯಾಗಿರಬಲ್ಲಡೆ, ಚತುರ್ಥಪುಷ್ಪ. ದುರ್ಭಾವ ಪ್ರಕೃತಿಯಳಿದು ಸದ್ಭಾವ ಎದೆಗೊಂಡಿರಬಲ್ಲಡೆ, ಪಂಚಮಪುಷ್ಪ. ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಯಿರಬಲ್ಲಡೆ, ಷಷ್ಠಪುಷ್ಪ. ಅನೃತವ ಮರೆದು ಸತ್ಯವ ನುಡಿಯಬಲ್ಲಡೆ, ಸಪ್ತಮಪುಷ್ಪ. ಸಕಲಪ್ರಪಂಚವಳಿದು ಶಿವಜ್ಞಾನ ಸಂಪನ್ನವಾಗಿರಬಲ್ಲಡೆ, ಅಷ್ಟಮಪುಷ್ಪ. ಇಂತೀ ಅಷ್ಟದಳಕುಸುಮದಲ್ಲಿ ಸಹಸ್ರಪೂಜೆಯ ಮಾಡಬಲ್ಲ ಶರಣರು ನಿಮ್ಮ ಪ್ರತಿಬಿಂಬದಂತಿಪ್ಪರು ಕಾಣಾ, ಕೂಡಲ ಚನ್ನಸಂಗಮದೇವಾ.

ಟಿಪ್ಪಣಿ:— ಅಷ್ಟವಿಧಾರ್ಚನೆ ಷೋಡಶೋಪಚಾರಾದಿ ರೂಢವಿದ್ದ ಪೂಜಾಪದ್ಧತಿಗಳಿಗೆ ವಚನಕಾರರು ವಿಶೇಷ ಮಹತ್ವ ಕೊಡುವುದಿಲ್ಲ. ಸದ್ಗುಣ, ಸದಾಚಾರ, ಸರ್ವಭೂತಹಿತ, ಇವೇ ಮುಖ್ಯ ಎಂದು ಅವರು ಪ್ರತಿಪಾದಿಸುವರು. ಇನ್ನು ಭಕ್ತನು ಸಚ್ಚರಿತ್ರನೂ ಸರ್ವಭೂತಹಿತರತನೂ ಇರಬೇಕು ಎಂಬ ಬಗ್ಗೆ ಹೇಳುವರು.

೫೬೦ ಅರ್ಚನೆಯ ಮಾಡುವಲ್ಲಿ ವೇಷವರತಿರಬೇಕು. ಪೂಜೆಯ ಮಾಡುವಲ್ಲಿ ಪುಣ್ಯಮೂರ್ತಿಯಾಗಿರಬೇಕು. ಕೊಳುಕೊಡೆಯಲ್ಲಿ ಭೂತ ಹಿತವಾಗಿರಬೇಕು. ಇಂತೀ ಸಡಗರಿಸಿಕೊಂಡಿಪ್ಪಾತನ ಅಡಿಗೆರಗುವೆನೆಂದಾತ ನಂಬಿಗರ ಚಾವಡಿಯ.

೫೬೧. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ. ಮುನಿಯಬೇಡ, ಅನ್ಯರಿಗೆ ಅಸಹ್ಯವ ನುಡಿಯಲು ಬೇಡ. ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ. ಇದೇ ಅಂತರಂಗದ ಶುದ್ಧಿ, ಇದೇ ಬಹಿರಂಗದ ಶುದ್ಧಿ. ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ.

ಟಿಪ್ಪಣಿ:— ಸದಾಚಾರ ಅಂದರೆ ನೀತಿಯುಕ್ತ ಆಚಾರ. ಇದೇ ಶ್ರೇಷ್ಠವಾದ ಧರ್ಮವು. ಅದನ್ನು ವಚನಕಾರರು ಆಗಾಗ್ಗೆ ಒತ್ತಿ ಹೇಳಿರುವರು. ತಾವು ಮಾಡುತ್ತಿರುವ ಪ್ರತಿಯೊಂದು ವ್ಯವಹಾರದಿಂದ ಭೂತ ಹಿತವಾಗುತ್ತಿರುವುದೋ ಇಲ್ಲವೋ ಇದನ್ನು ಸಾಧಕನು ಪರೀಕ್ಷಿಸಿ ನೋಡಬೇಕು, ಎಂದು ಅವರು ಹೇಳುವರು. ಇನ್ನು ಅತ್ಯಂತ ಶ್ರೇಷ್ಠವಾದ ಭಕ್ತನ ಅಥವಾ ಶರಣನ ನಿಲವು ಹೇಗಿರುವದು, ಅವನು ಯಾವ ರೀತಿ ವರ್ತಿಸುವನು ಇದನ್ನು ಹೇಳಿ ಈ ಪ್ರಕರಣವನ್ನು ಮುಗಿಸಬೇಕಾಗಿದೆ.

೫೬೨. ಶರಣಸ್ಥಲದ ಕುರುಹಿನ ಮಾರ್ಗವನರಿಯದೆ, ನಾನು ಶರಣ ತಾನು ಶರಣ, ಎಂದು ನುಡಿವ ಕರ್ಮಜೀವಿಗಳ ಮುಖವ ನೋಡಲಾಗದು. ಅದೇನುಕಾರಣವೆಂದಡೆ, ತಾವು ಶರಣರಾದೊಡೆ, ತಮ್ಮ ಚಿತ್ತದ ಕೊನೆಯಲ್ಲಿ ಮುಸುಕಿದ ಕತ್ತಲೆಯನೆಲ್ಲ ಕಳೆಯಬೇಕು. ತಾವು ಶರಣರಾದೊಡೆ, ತಮ್ಮ ಆತ್ಮನ ಸುತ್ತಿದ ಅಷ್ಟಪಾಶದಂಗಳ ಕತ್ತಲೆಯ ಕಡಿಯಬೇಕು. ತಾವು ಶರಣರಾದೊಡೆ, ಅತ್ತಿತ್ತ ಹರಿದಾಡುವ ತಮ್ಮ ಮನವ ಹಿಡಿತಂದು ಲಿಂಗದಲ್ಲಿ ನಿಕ್ಷೇಪ ಮಾಡಬೇಕು. ತಾವು ಶರಣರಾದೊಡೆ, ನಿತ್ಯಾನಿತ್ಯವನರಿದು, ತತ್ವಾತತ್ವಂಗಳ ವ್ಯತಿಕರಿಸಿ, ಮಹಾಜ್ಞಾನವೊತ್ತದಲ್ಲಿ ಸುಳಿಯಬೇಕು. ಇಂತೀ ಭೇದವನರಿಯದೆ, ತುತ್ತು ಸವಿದುಂಡು, ಮರ್ತ್ಯದ ವಿಷಯಪ್ರಪಂಚ ಸುಖವಲ್ಲಿ ವ್ಯವಹರಿಸಿ, ಅಜ್ಞಾನಕತ್ತಲೆಯಲ್ಲಿ ಸೆರೆಯಸಿಕ್ಕಿ, ಮುಂದುಗಾಣದೆ, ಮುಕ್ತಿಯ ಹೊಲಬು ತಪ್ಪಿ ಹೋಗುವ ವ್ಯರ್ಥ ಪ್ರಾಣಿಗಳ ಕಂಡು ನಗುತಿರ್ದನು ನೋಡಾ ನಮ್ಮ ಅಖಂಡೇಶ್ವರನು.

೫೬೩. ಜಾಲಗಾರಂಗೆ ಸುವರ್ಣದ ವಳಿಯನರಿದು ತೊಳೆಯಬೇಕು. ಬಲೆಗಾರಂಗೆ ಮತ್ಸ್ಯದ ಬೆಂಬಳಿಯನರಿದು ಕಲ್ಲಿಯ ಇಳಿಯಬಿಡಬೇಕು. ಶಬರಂಗೆ ಸಂಭ್ರಮವ ಬಿಟ್ಟು ತರು, ಲತೆ, ಪರ್ಣಗಳಂತಿರಬೇಕು. ಇಂತೀ ಹೊಲಬಿನ ತಿರನಂತೆ, ಗುಣವಿವರವನರಿದು ಆರಾರ ಇರವಿನ ತೆರವನರಿದು ಅನುಸರಿಸಲಾಗಿ, ವಿರತಿಗಳ ನಿಜವನರಿದು, ವೇಷಗಳ್ಳರ ನಿಹಿತವ ನೋಡಿ, ವಂಚಕರ ಪರಿಹಾಸಕರ ನೀತಿಯ ತಿಳಿದು ಮತ್ತಾವ ರೀತಿ-ನೀತಿಗಳಲ್ಲಿ ಮನತಾರದೆ, ತನ್ನ ಸುನೀತಿಯನೆ ಬೀರಿ, ತನ್ನ ಸದ್ಗುಣರೀತಿಯನೆ ತೋರಿ, ತನ್ನ ಸದ್ಗುಣವಾಸನೆಯ ತೀವಿ, ಸತ್ಕುಲಭಕ್ತಿಯನೆ ಸತ್ಯವನೆ ಸಾರಿ, ಇಪ್ಪಾತ ತ್ರಿವಿಧದವನಲ್ಲ, ಅರಿಷಡ್ವರ್ಗಂಗಳೊಳು ನಿಲ್ಲ, ಪ್ರಪಂಚೇಂದ್ರಿಯಂಗಳ ಸಂಚಿನ ಸುಖದವನಲ್ಲ, ಮಿಕ್ಕಾದ ಬಹು ವಿಷಯದ ಗೊಂಚಲ ತೊಂಬೆಯವನಲ್ಲ, ಬಸವಣ್ಣಪ್ರಿಯ ವಿಶ್ವಕರ್ಮಂಗೆ ಕಾಳಿಕಾವಿಮಲ ರಾಜೇಶ್ವರ ಲಿಂಗವು ತಾನು ತಾನೇ.

೫೬೪. ಮಠವೇಕೋ, ಪರ್ವತವೇಕೋ, ಜನವೇಕೋ, ನಿರ್ಜನವೇಕೋ, ಚಿತ್ತಸಮಾಧಾನವುಳ್ಳ ಶರಣಂಗೆ? ಮತ್ತೆ ಹೊರಗಣ ಚಿಂತೆ, ಧ್ಯಾನ, ಮೌನ, ಜಪತಪವೇಕೋ ತನ್ನ ತಾನರಿದ ಶರಣಂಗೆ, ಗುಹೇಶ್ವರಾ?

೫೬೫. ನಿಮ್ಮ ಪೂಜಿಸಿಹೆನೆಂದಡೆ, ತನುವಿಲ್ಲವಯ್ಯಾ ಎನೆಗೆ. ಅದೇನು ಕಾರಣವೆಂದಡೆ, ಎನ್ನ ತನುವೇ ನೀವೆಯಾದಿರಾಗಿ. ನಿಮ್ಮ ನೆನೆದಿಹೆನೆಂದರೆ,

ಅರುಹಿಲ್ಲವಯ್ಯಾ ಎನಗೆ. ಅದೇನುಕಾರಣವೆಂದಡೆ, ಆ ಅರುಹೇ ನೀವೆ ಯಾದಿರಾಗಿ. ಅಖಂಡೇಶ್ವರಾ, ನಿಮ್ಮೊಳಗೆ ನಾನು ಉರಿಗೊಂಡ ಕರ್ಪುರ ದಂತಿರ್ದೆನಯ್ಯಾ.

ಟಿಪ್ಪಣಿ:— ಪೂರ್ಣ ಸಮರಸೈಕ್ಯವಾದ ಶರಣನ ನಿಲವು ಕೊನೆಯ ವಚನದಲ್ಲಿ ವರ್ಣಿತವಾಗಿದೆ. ಪರಮಾತ್ಮನ ವಿಶ್ವಲೀಲೆಯಲ್ಲಿ ಅವನು ಸಮರಸದಿಂದ ವಿಹಾರ ಮಾಡುವನು. ಇದೇ ಪರಾಗತಿಯು, ಪರಮಾನಂದ ಸ್ಥಿತಿಯು.

ಸ್ಥರು
ಇಲ್ಲವೆ
ಕೋಟಿ

ವಚನಾಮೃತದ ಶಬ್ದಕೋಶವು

ಅ

ಅಗಡಿಗ, ತಿಳಿಗೇಡಿ, ಮೂರ್ಖ
ಅಗ್ಗವಣಿ, ಪೂಜೆಯ ನೀರು, ಮಡಿನೀರು
ಅಚ್ಚು, ಮುದ್ರೆ [ಸ್ವಯಂಭು
ಅಜಾತ, ಹುಟ್ಟು ಇಲ್ಲದ, ಅನಾದಿ,
ಅಜಾಂಡ, ಬ್ರಹ್ಮಾಂಡ, ವಿಶ್ವ
ಅಟಮಟ, ಕಪಟ, ಠಕ್ಕು
ಅಟ್ಟು, ಬೆನ್ನಟ್ಟು
ಅಡಸು, ಮೈಮೇಲೆಬ್ರರು, ಏರಿಬರು
ಅಡಿ, ಪಾದ, ತಳ
ಅಡಿವಜ್ಜೆ, ಕೆಸರು ಹೆಜ್ಜೆ
ಅಡಿವಜ್ಜೆಗೆ ಒಳಗಾಗು, ನಾಶಹೊಂದು, ವಃಣ್ಣುವಾಲಾಗು
ಅಣು, ಅತ್ಯಂತಸಣ್ಣ, ಸೂಕ್ಷ್ಮ
ಅಣ್ಣನೆಂಬಣ್ಣ, ದೊಡ್ಡದೊಡ್ಡವರು
ಅಣ್ಣಿಸು, ಹಣ್ಣುಮಾಡು, ಮೆತ್ತಗೆಮಾಡು
ಅತ್ತತ್ತ, ಆಚೆಗೆ [ಮೀರು
ಅತಿಗಳೆ, ಡಾಟು, ಆಚೆಗೆ ಹೋಗು,
ಅದ್ದು, ಎದ್ದು, ಮುಳುಗಿಸು
ಅನ್ನಕ್ಕ ಅನ್ನಕ್ಕರ, ಅನಕ, ವರೆಗೆ
ಅನಾಮಯ, ಮಲರಹಿತ, ನಿರ್ದೋಷ
ಅನಿಲ, ಗಾಳಿ, ವಾಯು
ಅನುಭಾವ, ಆತ್ಮಜ್ಞಾನ, ಸಾಕ್ಷಾತ್ಕಾರ
ಅನುಭಾವಿ, ಜ್ಞಾನಿ, ಸಾಕ್ಷಾತ್ಕಾರಿ
ಅನುಮಿಷ, ಎವೆಯಿಕ್ಕದ, ಸತತ ಎಚ್ಚರ
ಅನುವು, ಆಶ್ರಯ, ಆಸ್ಪದ, ಸ್ಥಾನ, ರೀತಿ; ಮಾರ್ಗ
ಅಪ್ಪು, ನೀರು [ಅನಂತ
ಅಪ್ರಮೇಯ, ಅಳತೆಗೆ ಬಾರದ,
ಅಭಿನವ, ಹೊಸ, ಅಚ್ಚರಿಯ ಸ್ನಂಟು ಮಾಡುವ
ಅಮ್ಮು, ಶಕ್ತನಾಗು [ವಾದ
ಅರ್, ಅರತ, ನಷ್ಟವಾಗು, ನಷ್ಟ
ಅರವಟ್ಟಿಗೆ, ಪಾದಿಕಾರರಿಗೆ ನೀರು ಕೊಡುವ ಸ್ಥಲವು
ಅರಸು, ಶೋಧಿಸು, ಹುಡುಕು
ಅರಿವು, ಜ್ಞಾನ, ಎಚ್ಚರ
ಅರಿಷಡ್ವರ್ಗ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ
ಅರುಪು, ಅರುಹು, ನಿಹೇಳು ವಿಜ್ಞಾನ
ಅರುಹಿರಿಯರು, ಅರಗಚ್ಚಿ ಹಿರಿಯರು, ದಡ್ಡರು
ಅರೆಮರುಳು, ಅರೆಹುಚ್ಚು

ಅರ್ಥಿಗೆ, ಉದ್ವೇಶಪೂರ್ವಕ,ಸಕಾಮ
ಆಲಗು, ಕತ್ತಿ
ಆಲೆ, ತೆರೆ [ಕ್ಷಿಸು
ಆವಧಾರು, ಕೇಳು, ಲಕ್ಷಿಸು, ನಿರೀ
ಆವಧಾನ, ಏಕಾಗ್ರತೆ
ಆವನಿ, ಪೃಥ್ವಿ
ಆವಸರ, ಪ್ರಸಂಗ, ವೇಳೆ
ಆವಿರಳ, ತೆರಹಿಲ್ಲದ, ಘನ, ದಟ್ಟಾದ
ಆವಿಮುಕ್ತಿ, ಒಂದು ಕ್ಷೇತ್ರದ
ಹೆಸರು
ಆಳಲು, ದುಃಖಿಬಡು
ಆಳಲಿಸು, ದುಃಖಿಪಡಿಸು
ಆಳವಡು, ಪ್ರಾಪ್ತವಾಗು, ದೊರೆ,
ನೆಲೆಯಾಗು
ಆಳಿ, ಕ್ಷುದ್ರ, ಕೀಳು, ನಾಶಹೊಂದು
ಆಳುಕು, ಅಂಜು, ಹಿಂಜರಿ
ಆಳುಪು, ಮನಸೋಲು, ಕಂಗೆಡು

ಆ

ಆಗು, ೧ ಸ್ಥಿತಿ, ೨ ಪ್ರಾಪ್ತಿ
ದೊರೆಯುವಿಕೆ
ಆಣತಿ, ಆಜ್ಞೆ, ಅಪ್ಪಣೆ [ಸರು
ಆದ್ಯರು, ಮೊದಲಿಗರು, ಪುರಾತ
ಆಪ್ಯಾಯನ, ಶಾಂತಿ, ತೃಪ್ತಿ, ಆನಂದ
ಆರಯ್, ಆರೈ ೧ ವಿಚಾರಿಸು,
೨ ಕಾಪಾಡು
ಆರೈಕೆ, ರಕ್ಷಣ, ಕಾವಲು, ಪರಿ
ಪಾರ್ಯ
ಆರಡಿ, ತೊಂದರೆ, ಗುಂಗೀಹುಳ
ಆಲಸ್ಯ, ಬೇಸರ, ಜಡ್ಡು,
ಆಲಿ, ಕಣ್ಣು, ಕಣ್ಣು ಗುಡ್ಡಿ
ಆಲಿಕಲ್ಲು, ಆಣೇಕಲ್ಲು, ವಾರಿಕಲ್ಲು
ಆಂದೋಲನ, ತೂಗುಮಂಚ,
ತೂಗುವಿಕೆ

ಇ

ಇಕ್ಕು, ಇಡು
ಇತ್ತು (ಈ), ಕೊಟ್ಟು
ಇದಿರು, ಅನ್ಯ, ಎರಡನೆಯ
ಇನಿಸು, ಸ್ವಲ್ಪ
ಇನ್ನೇವೆ, ಇನ್ನೇನು ಮಾಡಲಿ
ಇರಿ, ತಿವಿ, ಕೊಲ್ಲು [ದಿರುವಾಗ
ಇಲ್ಲದಂದು, ಇಲ್ಲದ ಅಂದು, ಇಲ್ಲ
ಇಂತುಟು, ಇಂತಹದು, ಈಪರಿ
ಇಂತೆಂದು, ಈರೀತಿ ಇರುವ, ಇಂಥ
ಇಂಬು, ಅವಕಾಶ, ಆಸ್ಪದ, ಸ್ಥಳ
ಇಂಬಿಟ್ಟುಕೊಳ್ಳು, ಆಶ್ರಯ ಕೊಡು

ಈ

ಈ, ಕೊಡು
ಈಡಾಪಿಂಗಳ, ಎಡ ಮತ್ತು ಬಲದ
ಮೂಗಿನ ಹೊಳ್ಳೆಗಳು ಹಾಗೂ ಅವು
ಗಳಿಗೆ ಸಂಬಂಧಿಸಿದ ನಾಡಿಗಳು

ಉ

ಉಡುಗು, ಕ್ಷೀಣವಾಗು, ನಾಶ
ಉತ್ತರೆ(ಊಳು), ಬಿತ್ತಿದರೆ [ವಾಗು
ಉನ್ಮನಿಸ್ಥಾನ, ಭ್ರೂಮಧ್ಯ [ತ್ಯಕ್ಕೆ
ಉಪಚಾರವಾಗಿ, ತೋರಿಕೆಗೆ, ನಿಮಿ

ಉಪಾಂಶಿಕ, ಮೆಲ್ಲನೆ ಬಾಯಲ್ಲಿಯೆ
ಉಚ್ಚಾರಮಾಡಿದ್ದು
ಉಬ್ಬಿ, ಗರ್ವದಿಂದ, ಹೆಮ್ಮೆಯಿಂದ
ಉರ, ತೊಡೆ
ಉರವಣೆ, ೧ ಆತುರ, ಗಡಿಬಿಡಿ,
೨ ನಿಷ್ಠುರತೆ
ಉಲಿ, ಉಲುಗಾಡು, ಜಲಿಸು
ಉಳ್ಳವ, ಧನವಂತ, ಧನ ಇದ್ದವ
ಉಂಡಿಗೆ, ಮುದ್ರೆ

ಎ

ಎಚ್ಚಡೆ(ಎಚೆ), ಬಾಣ ಹೊಡೆದರೆ
ಎಡರು, ತೊಂದರೆ, ಸಂಕಟ
ಎಡೆ, ೧ ಸ್ಥಾನ ೨ ಊಟದ ಎಲೆ
೩ ಹತ್ತಿರ
ಎಡೆಗೊಳ್ಳು, ವ್ಯಾಪಿಸು, ತುಂಬು
ಎಡೆಯೂಟ, ಸುಳಿದಾಟ, ಜಲಸ
ವಲಸ
ಎಣೆ, ಸರಿ, ಸಾಟಿ, ಸಮಾನ
ಎತ್ತಲು, ಎಲ್ಲಿಯವರು ಯಾರು
ಎಂಬುದು
ಎಯ್, ಹೋಗು
ಎರಗು, ಮುತ್ತು, ನಮಸ್ಕರಿಸು
ಎರವು, ಕಡತರುವದು
ಎಳತಟ, ದುರ್ಬಲಸ್ಥಿತಿ
ಎಳತಟಗೊಳಿಸು, ದುರ್ಬಲಮಾಡು
ಎಂತು, ಯಾವ ರೀತಿ

ಐ

ಐಗಾರ, ಗುರು, ಶಿಕ್ಷಕ

ಒ

ಒಡತನ, ಸಂಗತಿ
ಒಡಲು, ೧ ಶರೀರ, ೨ ಹೊಟ್ಟೆ
ಒಡವೆ, ವಸ್ತ್ರ, ಧನ [ಮಾಡು
ಒಡವೆರಸು, ಕೂಡಿಸು, ಒಂದು
ಒದಗು, ೧ ಪ್ರಾಪ್ತವಾಗು,
೨ ಆಗು
ಒರಗು, ಮಲಗು, ಅಡ್ಡಾಗು
ಒರೆ, ೧ ತಿಕ್ಕು, ೨ ಕತ್ತಿಯ ಗೂಡು
ಒಲವು, ೧ ರಹಸ್ಯ ೨ ಪ್ರೀತಿ
ಒಲುಮೆ, ಪ್ರೀತಿ
ಒಳದಲ್ಲಿ, ಒಳಗೆ ಹೋದಲ್ಲಿ
ಒಳ್ಳೆ, ನೀರಹಾವು

ಓ

ಓಜೆಯಲ್ಲಿ, ಯೋಗ್ಯರೀತಿಯಿಂದ
ಓಗರ, ಅನ್ನ, ಊಟ
ಓಸರಿಸು, ಜಾರು, ಮನಸೋಲು,
ಓಡಿಹೋಗು

ಅಂ

ಅಂಕ, ಕಾಳಗ
ಅಂತರಪಿಂತರ, ಪಿಶಾಚ
ಅಂದ, ರೀತಿ,ಸ್ವರೂಪ, ಸೌಂದರ್ಯ
ಅಂಬರ, ಆಕಾಶ
ಅಂಬಿಲ, ಗಂಜಿ
ಅಂಬುಧಿ, ಸಮುದ್ರ

ಕ

ಕಕ್ಕುಲತೆ, ಕರುಣೆ, ಕನಿಕರ

ಕಟುಕ, ಪ್ರಾಣಿಘಾತಕ
ಕಟ್ಟಣೆ, ಕಟ್ಟಳೆ, ನಿಯಮ
ಕಟ್ಟೋಗರ, ಕಟ್ಟಿದ ಅನ್ನ, ಬುತ್ತಿ
ಕಡಹ, ಒಂದು ಬಗೆಯ ಮರ
ಕಡೆಗಳ, ಕಡೆಯ ಯುದ್ಧ
ಕಡೆಮುಟ್ಟು, ಧ್ಯೇಯ ಪ್ರಾಪ್ತ ವಾಗದು
ಕಡೆಯಿಲ್ಲದ, ಅನಂತ
ಕಣ, ಯುದ್ಧರಂಗ
ಕದಡು, ಕಲಕಾಗು, ಕೆಸರಾಗು
ಕದಳಿ, ಬಾಳೆಯ ಗಿಡ
ಕದಳಿಬನ, ಶ್ರೀಶೈಲದಲ್ಲಿಯ ಬಾಳೆಯ ಬನ
ಕಬ್ಬಿಲ, ಮೀನುಗಾರ
ಕಯ್ಯಮಾತು, ಕೈಗಂಟು
ಕಯ್ಯಾನು, ಕೈಚಾಡು
ಕರಕಷ್ಟ, ಅತಿಕಷ್ಟದಾಯಕ
ಕರಣ, ಇಂದ್ರಿಯ, ಸಾಧನ
ಕರಿ, ಕರಕು
ಕರಿಗೊಳ್ಳು, ನಷ್ಟವಾಗು, ಅಳಿ
ಕಲಿ, ಶೂರ, ವೀರ, ಬಂಟ
ಕಲ್ಲಿ, ಜಾಳಿಗೆಯ ಚೀಲ, ಹೆಣೆದ ಚೀಲ
ಕಳವಳ, ದುಃಖ, ಮನಸಿನ ಪೀಡೆ
ಕಳ, ೧ ಸಪ್ಪಳ ೨ ರಣರಂಗ.
ಕಳೆ, ೧ತೇಜ ೨ ನಾಶಪಡಿಸು.
ಕಷಾಯ, ಔಷಧ
ಕಂಪು, ಸುಗಂಧ, ಪರಿಮಳ
ಕಾಪಾಲಿಕ, ಒಂದು ಶೈವಪಂಥದ ಹೆಸರು
ಕಾಯಕ, ಉದ್ಯೋಗ, ಹೊಟ್ಟೆಯ ಉದ್ಯೋಗ
ಕಾಯಸೊಳ್ಳು, ಶರೀರವನ್ನು ಧರಿಸು
ಕಾರೆಯಸೊಪ್ಪು, ಒಂದು ಬಗೆಯ ಹಸರಾಣಿ
ಕಾಳಕೂಟ, ಅತಿಶಯ ಕಪ್ಪು
ಕಾಳಿಕೆ, ಕಪ್ಪು, ದೋಷ, ಪಾಪ
ಕಾಳೋರಗ, ಕಾಳಸರ್ಪ
ಕಾಂಬಡೆ, ಕಾಣಲಿಕ್ಕೆ
ಕಿರಾತ, ಬೇಟೆಗಾರ, ಬೇಡ
ಕಿಂಕರ, ಸೇವಕ
ಕಿಂಕುರ್ವಾಣತೆ, ಏನು ಮಾಡ ಬೇಕೆಂಬ ಪ್ರಶ್ನೆ
ಕೀಲಿಗ, ಬಡಿಗ
ಕುಟಲ, ಡೊಂಕು, ಅಪ್ರಾಮಾಣಿಕ
ಕುಡ, ಕೊಟ್ಟದ್ದು.
ಕುರುಹು, ಚಿಹ್ನ, ಪ್ರತೀಕ, ಗುರುತು
ಕುಹಕ, ಕಪಟ, ಮೋಸ
ಕುಂಜರ, ಆನೆ.
ಕುಂಡಲಿಗ, ಮೈಗೆ ಮಣ್ಣು ಹತ್ತ ದಂತೆ ಇರುವ ಹುಳ
ಕೂಟ, ಸಂಗ, ಕೂಡುವಿಕೆ, ಒಂದಿಕೆ
ಕೂಟಸ್ಥ, ಆತ್ಮಸ್ಥ, ಮಧ್ಯದಲ್ಲಿರುವ
ಕೆಲಕ್ಕೆ, ಬದಿಗೆ
ಕೈಕೂಲಿ, ಕೈಕೆಲಸಕ್ಕಾಗಿ ಕೊಟ್ಟ ಕೂಲಿ
ಕೈದು, ಆಯುಧ
ಕೈಯ್ಯಾರೆ, ಕೈಮುಟ್ಟಿ
ಕೈವಲ್ಯ, ಮುಕ್ತಿ
ಕೊಟ್ಟಣ, ಭತ್ತ,

ಕೋಟಲೆ, ತೊಡಕು, ದುಃಖ
ಕೊಡಗೂಸು, ಎತ್ತಿಕೊಳ್ಳುವಂಥ ಕೂಸು
ಕೊನರು, ಚಿಗುರು, ಎಲೆ ಒಡೆ
ಕೊರಗು, ಸಣ್ಣಾಗು, ಸವೆ.
ಕೊರೆಗೂಳು, ಅಲ್ಪಾಹಾರ
ಕೊಳುಕೊಡು, ವ್ಯವಹಾರಮಾಡು
ಕೊಳ್ಳು, ತೆಗೆದುಕೊಳ್ಳು
ಕೋಹಂ, ನಾನು ಯಾರು
ಕೊಂಬೆ, ಟೊಂಗೆ, ಶಾಖೆ

ಗ

ಗಡಣ, ೧ ಸಮೂಹ, ರಾಶಿ, ೨ ಸ್ನೇಹ
ಗಣಂಗಳು, ಶಿವಭಕ್ತರು
ಗದ್ದಡ, ಕುತ್ತಿಗೆ ಬಿಗಿಯೋಣ
ಗದ್ದುಗೆ ಬೋದುಗೆ, ಕಟ್ಟೆ ಮತ್ತು ಜಂತೆಗೆ ಬೇಕಾಗುವ ಆಧಾರ
ಗರುವ, ಶ್ರೇಷ್ಠಪುರುಷ
ಗಳ, ಕಂಠ
ಗಂಜಳ, ಹೊಲಸು
ಗ್ರಂಥಿ, ಗಂಟು, ತೊಡಕು
ಗಾರುಡ, ಇಂದ್ರಜಾಲ, ಮಾಟ, ಜಾದು
ಗಾವಿಲ, ತುಂಟ
ಗಾವುದ, ೧೦–೧೨ ಮೈಲು
ಗಾಹುಗಳ್ಳ, ಕಪಟದಿಂದ ಕಳವು ಮಾಡುವವ
ಗಿರಾಣ, ಹಾಳಹರಟೆ
ಗುದ್ದ, ಹುಡುಗ, ಶಿಷ್ಯ
ಗುಂಡಿಗೆ, ಪಾತ್ರೆ
ಗೊಡ್ಡ, ತಿಳಿಗೇಡಿ, ನೀರಸ
ಗೊಸ್ತು, ಆಶ್ರಯಸ್ಥಾನ, ಕುರುಹು
ಗೊರವ, ಶೈವ ಭಿಕ್ಷುಕ
ಗೋಚರ, ಇಂದ್ರಿಯಕ್ಕೆ ತಿಳಿಯುವ, ಗಮ್ಯ
ಗೋರ, ಕಠಿಣ
ಗೋರಿಗೊಳಿಸು, ಮನಸೋಲು

ಘ

ಘನ, ದಟ್ಟವಾದ, ತೆರಹಿಲ್ಲದ, ಶ್ರೇಷ್ಠ
ಘನಮನ, ಚಿದ್ಘನ

ಚ

ಚತುರ್ವಿಧಪದವಿ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ
ಚಿಲುಮೆ, ಒರತೆ
ಚೋದ್ಯ, ಆಶ್ಚರ್ಯ

ಛ

ಛಲ, ಹಟ, ನಿರ್ಧಾರ, ನಿಶ್ಚಯ

ಜ

ಜರಿ, ಜರೆ, ತಿರಸ್ಕರಿಸು, ಹೀಯಾಳಿಸು [ನಾದ ಪರಮಭಕ್ತ
ಜಂಗಮ, ಸಿದ್ಧಪುರುಷ, ಶಿವರೂಪ
ಜಂಜಡ, ತೊಡಕು
ಜಾಲಗಾರ, ಮಣ್ಣು ಸೋಸಿ ಹೊನ್ನು ತೆಗೆಯುವವ

ತ

ತಟ್ಟು, ತಡವು, ಮುಟ್ಟು
ತಡೆ, ದಂಡೆ, ನಿಲ್ಲಿಸು

ತದ್ಗತ, ತನ್ಮಯ, ಅದರಲ್ಲಿಯೆ ಇರು
ತಮಂಧ, ಕಗ್ಗತ್ತಲೆ
ತವಕ, ಆತುರ, ಉತ್ಕಟೇಚ್ಛೆ
ತವರಾಜ, ಒಂದು ಬಗೆಯ ಸಕ್ಕರಿ
ತರಗೆಲೆ, ಒಣ ಎಲೆ
ತರಹರ, ಶಾಂತ
ತ್ವಕ್ಕು, ಮೈ ತೊಗಲು, ಸ್ಪರ್ಶೇಂದ್ರಿಯ
ತಿರಿ, ಭಿಕ್ಷೆಬೇಡು
ತಿರ್ಯಗ್ಜಾತಿ, ಮನುಷ್ಯರಿಗಿಂತ ಹೀನಪ್ರಾಣಿಗಳು
ತಿಂಥಿಣಿ, ದಟ್ಟ, ಘನ
ತ್ರಿಕೂಟ, ಮೂರು ಶಿಖರಗಳುಳ್ಳ
ತ್ರಿನಯನ, ಮುಕ್ಕಣ್ಣ, ಶಿವನ ಹೆಸರು
ತೀವು, ತುಂಬು
ತೆಕ್ಕೆ, ಹಿಡಿತ, ಕೈಚಾಚಿ ಹಿಡಿಯುವಷ್ಟು
ತೆತ್ತಿಗ, ಸೇವಕ, ಮಿತ್ರ
ತೆಪ್ಪ, ಒಂದು ಬಗೆಯ ಹರಗೋಲು
ತೆರಹು, ಇಂಬು, ಆಸ್ಪದ, ಸ್ಥಲ
ತೆರಹಿಲ್ಲದ, ಸಮರಸವಾದ
ತೆರಣಿ, ಒಂದು ಬಗೆಯ ಹುಳ
ತೆರು, ಕೊಡು
ತ್ರೈಮಂಡಲ, ಸ್ವರ್ಗ ಮೃತ್ಯು ಪಾತಾಳ
ತೊಟ್ಟಬೀಳು, ಉದುರಿಬೀಳು
ತೊಡಕು, ಸಂಬಂಧ
ತೊಡಹು, ಲೇಸು, ಗಿಲೀಟು
ತೊಡೆ, ಅಳಿಸು, ಹೋಗಲಾಡಿಸು
ತೊಸ್ತು, ಸೇವಕ, ಆಳು
ತೊರೆ, ೧ ತ್ಯಜಿಸು, ಬಿಡು, ೨ ಪ್ರವಾಹ
ತೊಲಗು, ಬಿಟ್ಟುಹೋಗು, ದೂರವಾಗು
ತೊಂಬೆ, ಸಮೂಹ

ದ

ದಳ್ಳುರಿ, ದೊಡ್ಡ ಉರಿ
ದಂಡಿಗೆ, ತಂಬೂರಿಯ ಕೋಲು
ದಂದುಗ, ತೊಂದರೆ, ಸಂಕಟ
ದಾಸೋಹ, ನಾನು ದಾಸ ಎಂಬ ಭಾವ
ದಿಗಂಬರ, ಬತ್ತಲೆ
ದಿಟ, ಸತ್ಯ, ನಿಜ, ಯಥಾರ್ಥ
ದಿಮ್ಮಿತ್ತು, ಭಾರ
ದೇಗುಲ, ಗುಡಿ, ದೇವಾಲಯ
ದೇವತರು, ಅಶ್ವತ್ಥ
ದೈವಂಗಳು, ದೇವತೆಗಳು
ದೊರೆಕೊಳ್ಳು, ಪ್ರಾಪ್ತವಾಗು

ನ

ನನ್ನಿ, ಪ್ರೀತಿ, ಪ್ರೀತಿಯ ನುಡಿ
ನಲ್ಲ, ಪ್ರಿಯನು, ಪ್ರಣಯಿ
ನವನಾಥರು, ಗೋರಖನಾಥಾದಿ ಯೋಗಿಗಳು
ನಾರುಬೇರು, ನಾರುಬಟ್ಟೆ ಮತ್ತು ಗಡ್ಡೆಗೆಣಸುಗಳು
ನಾವಿಂದ, ನಾವಲಿಗ
ನಾಹಂ, ನಾನು ಅಲ್ಲ
ನಿಚ್ಚ, ನಿತ್ಯ
ನಿಜಭಾವ, ಅಂತರಂಗ, ಸ್ವರೂಪ

ನಿಜೈಕ್ಯ, ನಿಜದಲ್ಲಿ ಬಂದಾದ
ನಿಧಾನ, ಸಂಪತ್ತು, ಘನ
ನಿಬ್ಬೆಗ, ಶಾಂತ
ನಿಬ್ಬೆರಗು, ಏಕರಸವಾಗೋಣ
ನಿಬ್ಬೆರಸು, ಏಕರಸವಾಗು
ನಿಮಿರ್, ವಿಕಾಸಗೊಳ್ಳು
ನಿರಪೇಕ್ಷ, ಕೇವಲ ಸತ್ಯವನ್ನರಸುವ, ನಿಷ್ಕಾಮ, ನಿಸ್ಪೃಹ
ನಿರವಯ, ಅಖಂಡ, ನಿಷ್ಕಲ
ನಿರಾಕುಳ, ಶಾಂತ
ನಿರಾಭಾರಿ, ತ್ಯಾಗಿ, ಸನ್ಯಾಸಿ
ನಿರಾಲಂಬ, ಸ್ವತಂತ್ರ
ನಿರಾಳ, ಸ್ಥಿರಸ್ಥಿತಿ, ಶುದ್ಧ
ನಿರಿಯಾಣ, ಹೋಗುವಿಕೆ
ನಿರುತ, ನಿಮಗ್ನ, ತಪ್ಪದೆ ಇರು
ನಿರೂಪ, ಹೇಳಿಕೆ, ಉಪದೇಶ
ನಿರಂಜನ, ಶುದ್ಧ, ನಿಷ್ಪಾಪ, ನಿರ್ದೋಷ
ನಿರ್ದೇಹಿ, ದೇಹರಹಿತ, ಚಿನ್ಮಯ
ನಿರ್ಭಾವ, ವಿಶಿಷ್ಟ ಯಾವ ಭಾವವೂ ಇಲ್ಲದ ಸ್ಥಿತಿ
ನಿರ್ಮಾಲ್ಯ, ಹಳೆಯ, ಮಾಸಿದ
ನಿರ್ಲೇಪ, ಅಲಿಪ್ತ
ನಿರ್ವಯಲು, ಬಯಲಿನಾಚೆ
ನಿಲವು, ಸ್ಥಿತಿ, ನಿಲುಕಡೆ
ನಿಲುಕಡೆ, ಸ್ಥಿತಿ, ನಿಲವು
ನಿವಾಳಿ, ಆರತಿಯಂತೆ ಎತ್ತಿ ಸುತ್ತಿ ಇಳಿಸುವದು.
ನಿಷ್ಪತ್ತಿ, ಸ್ವರೂಪಜ್ಞಾನ
ನಿಷ್ಠೆ, ಸ್ಥಿರತೆ, ದೃಢವಾಗಿರುವಿಕೆ
ನಿಃಕಲ, ಅಖಂಡ, ಭಾಗರಹಿತ
ನುಲಿ, ನೂಲು
ನೆಚ್ಚು, ೧ ನಂಬು, ೨ ಪ್ರೀತಿಸು
ನೆನಹು, ೧ ಸಂಕಲ್ಪ, ೨ ಸ್ಮರಣ, ಧ್ಯಾನ
ನೆಮ್ಮುಗೆ, ನಂಬಿಕೆ, ಶ್ರದ್ಧೆ
ನೆಯಿ, ಎಣ್ಣೆ ಅಥವಾ ಸ್ನಿಗ್ಧ ಪದಾರ್ಥ.
ನೆರೆ, ೧ ಚೆನ್ನಾಗಿ, ೨ ಹತ್ತಿರ, ೩ ಸಂಗ, ೪ ವಿಶೇಷವಾಗಿ
ನೆಲೆ, ಸ್ಥಿರವಾದ ಸ್ಥಾನ, ಸ್ಥಿರತೆ
ನೇಹ, ಸ್ನೇಹ, ಪ್ರೀತಿ
ನೊರೆವಾಲು, ತಾಜಾಹಾಲು, ಅಚ್ಚಹಾಲು
ನೋನ್, ಪೂಜಿಸು, ವ್ರತವಮಾಡು

ಪ

ಪಚ್ಚಡಿಸು, ಅಲಂಕರಿಸು
ಪರಾತ್ಪರ, ಎಲ್ಲಕ್ಕೂ ಅಜೆಗಿನ, ಸರ್ವಶ್ರೇಷ್ಠ
ಪರಿಣಾಮ, ಶಾಂತಿ, ಸಮಾಧಾನ, ತೃಪ್ತಿ
ಪರಿಣಾಮಿ, ಶಾಂತ, ಸಮಾಧಾನಿ
ಪರಿಭಾವಿ, ಅಪಮಾನದ ಮಾತು
ಪರಿಷ್ಕರಿಸು, ಶೋಧಿಸು
ಪಸಾರ, ಅತ್ತಿತ್ತ ಬಿದ್ದ ವಸ್ತುಗಳು
ಪಾವುಡ, ವಸ್ತ್ರ
ಪೀಠ, ಅಧಿಷ್ಠಾನ
ಪುಳಕ, ಮೈಗೂದಲು, ರೋಮಾಂಚ
ಪುಳಿಂದ, ಬೇಟೆಗಾರ
ಪ್ರಮಾಣಿಸು, ಪರೀಕ್ಷಿಸು

ಪ್ರಸಾದ, ಅರ್ಪಿತ ವಸ್ತು
ಪ್ರಸಂಗವಾಡು, ಪಾತಾಡು, ಜರ್ಜಿಸು
ಪ್ರಾಣಪದ, ಮಹಾಪ್ರಾಣ
ಪೈಸರ, ೧ ಜಾರುವಿಕೆ, ೨ ಸುಳ್ಳು, ವ್ಯರ್ಥ

ಫ

ಫೇನ, ಬುರುಗು, ನೊರೆ

ಬ

ಬಗಿ, ಆಗಿ, ಕೆದರು [ಅಗಿದು
ಬಗೆದು, ೧ ವಿಚಾರಿಸಿ, ೨ ಬಗಿದು,
ಬಚ್ಚಬರಿಯ, ಕೇವಲ
ಬಟ್ಟೆ, ದಾರಿ, ಹಾದಿ, ಮಾರ್ಗ
ಬಣವೆ, ರಾಶಿ, ಸಮೂಹ
ಬಯಲು, ೧ ನಿರಾಕಾರಸ್ಥಿತಿ, ೨ ಪೊಳ್ಳು, ಆಕಾಶ
ಬಯಜಿಡು, ಮುಚ್ಚಿಡು
ಬರಡು, ಹಾಲುಕೊಡದ ದನ
ಬಲ್ಲಿತ್ತು, ಬಲವ್ರಳ್ಳದ್ದು
ಬಲ್ಲಿದರು, ಬಲವ್ರಳ್ಳವರು [ಮಾತು
ಬಳಕೆಯ ಮಾತು, ಉಪಚಾರದ
ಬಳಸು, ವ್ಯವಹರಿಸು
ಬಹುಳ, ಅನಂತ, ಅಸಂಖ್ಯ
ಬಾಲಭಾಷೆ, ಹುಡುಗರಂತೆ ಅಜ್ಞಾನದ ಮಾತು
ಬಾವನ್ನ, ಏಪತ್ತೈರಡು
ಬಿಜಯಂಗೈ, ಬಾ, ಬರು
ಬಿತ್ತು, ಮೂಲ, ಬಿತ್ತುವಿಕೆ
ಬಿನುಗು, ಕ್ಷುದ್ರ, ಕೀಳು,
ಬಿನ್ನಪ, ವಿನಂತಿ
ಬೀರು, ಕೊಡು, ಹಂಚು
ಬೆಚ್ಚು, ಒಂದಾಗಿರು, ಐಕ್ಯವಾಗಿರು
ಬೆಚ್ಚಂತೆ, ಬೆರಸಿದಂತೆ, ಕೂಡಿದಂತೆ
ಬೆರಸು, ಬೆರಿಸು, ಕೂಡು, ಐಕ್ಯವಾಗು
ಬೆಸಗೊಳ್ಳು, ಕೇಳು
ಬೆರಗು, ಐಕ್ಯ
ಬೆಳಸು, ಹೆಚ್ಚಳ, ಪ್ರಸಾರ
ಬೆಂಬಳಿ, ಸಂಘ, ಸಮೂಹ
ಬೇಳುವೆ, ಭ್ರಾಂತಿ, ದಿಕ್ಕುತಪ್ಪೋಣ
ಬೈಗೆ, ಸಾಯಂಕಾಲದಲ್ಲಿ
ಬೊಮ್ಮ, ಬ್ರಹ್ಮ

ಭ

ಭರಿತ, ಪೂರ್ಣ
ಭವ, ೧ ಸಂಸಾರ, ೨ ಹುಟ್ಟುವಿಕೆ
ಭವಹರ, ದೇವರು, ಪರಮಾತ್ಮ
ಭಾತಿ, ಪ್ರಕಾಶಿಸುವಸು
ಭೇದಕ, ರಹಸ್ಯ ತಿಳಿಯುವವ
ಭವಿ, ೧ ಸಂಸಾರಿ, ೨ ಲಿಂಗದೀಕ್ಷೆ ಇಲ್ಲದವ, ಏರಶೈವನಲ್ಲದವ, ೩ ಬದ್ಧ

ಮ

ಮಡದಿ, ಹೆಂಡತಿ, ಸ್ತ್ರೀ
ಮಡಿಕೆ, ಗಡಿಗೆ
ಮದಜಿಡಗ, ಮದೋತ್ಸಾಹ
ಮದ್ದು, ಔಷಧ [ಮಗ್ನನಾಗು
ಮನಂಗೊಳ್ಳು, ಮನಸೋಲು,

ಮರವು, ಅಜ್ಞಾನ, ಅವಿದ್ಯೆ
ಮರೀಚಿ, ಸೂರ್ಯಕಿರಣ
ಮರೀಚಿ ಜಲ, ಮೃಗಜಲ
ಮರುಗು, ದುಃಖಿಸು
ಮರುಜೀವಣಿ, ಸಂಜೀವನಿ
ಮರೆಯಾಗಿ, ಮುಚ್ಚಿ, ಗುಪ್ತವಾಗಿ
ಮರ್ತ್ಯ, ಮೃತ್ಯುಲೋಕ,
ಮಲೆ, ಪರ್ವತ
ಮಲ, ದೋಷ, ಪಾಶ, ಬಂಧನ
ಮಹತ್ತು, ದೊಡ್ಡದು, ವಿಶಾಲ
ಮಹಾನುಭಾವ, ಸಾಕ್ಷಾತ್ಕಾರ, ಆತ್ಮಜ್ಞಾನ
ಮಹಾಲಿಂಗ, ಐಕ್ಯಸ್ಥಳದ ಲಿಂಗ, ಪರಮಾತ್ಮ
ಮೃಡ, ಶಿವನ ಹೆಸರು, ಪರಮಾತ್ಮ
ಮಂಡೆ, ತಲೆ
ಮಾಟ, ಮಾಡುವಿಕೆ, ಕರ್ಮ
ಮಾಣು, ತಡೆ, ಬೇಡ
ಮಾತಿನ ಮಥನ, ವ್ಯರ್ಥ ಮಾತು
ಮಾನ, ಅಳೆಯುವ ಮಾಪು, ಅಳತೆ
ಮಾಯಾ, ಆವರಣಶಕ್ತಿ, ಅವಿದ್ಯೆ, ಅಜ್ಞಾನ
ಮಾರಿಹೊರು, ಸಾವಿಗೀಡಾಗು, ಸತ್ತು ಹೋಗು
ಮಾರುಪೋಗು, ವಶನಾಗು, ಒಪ್ಪಿಸಿ ಬಿಡು.
ಮಿಟ್ಟಯ ಭಂಡ, ಅತಿನೀಚ
ಮಿದಿ, ಕಸುಗಾಯಿ
ಮೀ, ಮಿಂದು, ಸ್ನಾನಮಾಡು, ಸ್ನಾನಮಾಡಿ
ಮೀನಕೇತನ, ಮನ್ಮಥ, ಕಾಮದೇವ
ಮೀಸಲು, ಕಾದಿಟ್ಟ, ಬಳಸದೆ ಇದ್ದ
ಮುಕುರ, ಕನ್ನಡಿ
ಮುಗಿಲು, ಮೋಡ
ಮುಟ್ಟುವಡೆ, ಮುಟ್ಟಬೇಕಾದರೆ
ಮುಡಿ, ಜಟೆ, ತಲೆಗೂದಲು, ತುರುಬು
ಮುನಿ, ಮುನಿಸು, ಸಿಟ್ಟಾಗು, ಸಿಟ್ಟು
ಮುರುಟು, ಮುದಡಿಯಾಗು
ಮುಂದುಗೆಡಿಸು, ತಡೆ, ನಿಲ್ಲಿಸು
ಮೂರ್ತಿ, ವ್ಯಕ್ತಸ್ವರೂಪ
ಮೂಳ, ಮೂರ್ಖ
ಮೆಯ್ಯಾನು, ನಮಸ್ಕರಿಸು
ಮೆಳೆ, ಗಿಡಗಳ ಗುಂಪು
ಮೇಢ್ರ, ಉಪಸ್ಥ
ಮೇಣ್ ಮೇಣು, ಅಥವಾ
ಮೇಲೋಗರ, ಬಾಡಿಸಿಕೊಳ್ಳುವ ಪದಾರ್ಥ
ಮೇಳಾಪ, ಸಂಘ
ಮೊತ್ತ, ರಾಶಿ
ಮೊನೆ, (ಆಯುಧಗಳ) ಬಾಯಿ
ಮೊರಡಿ, ದಿನ್ನಿಯ ಪ್ರದೇಶ
ಮೋಹ, ಪ್ರೀತಿ, ತಪ್ಪು ತಿಳಿವಳಿಕೆ

ಯ

ಯೋಗ, ೧ ಒಂದಾಗುವಿಕೆ, ೨ ಸಾಧನ
ಯೋಗಕ್ಷೇಮ, ೧ ಹಿತ, ೨ ಇದ್ದುದನ್ನು ರಕ್ಷಿಸಿ ಇಲ್ಲದ್ದನ್ನು ದೊರಕಿಸುವದು

ರ

ರತಿ, ಆಸಕ್ತಿ, ಉತ್ಕಟ ಪ್ರೇಮ

ರಚ್ಚೆ, ೧ ಜಸಾಪವಾದ, ೨ ಹಾಳು ಹರಟೆ
ರೂಪಿಗೆ ಹಿಡಿ, ಮೂರ್ತಿಸು
ರೂಹು, ರೂಪು [ಸು, ಗುರುತಿಸು
ರೂಹಿಸು, ರೂಪಗೊಡು, ಮೂರ್ತಿ
ರೇಣು, ಅತ್ಯಂತ ಸೂಕ್ಷ್ಮ ಜಡಕಣ

ಲ

ಲಂಬಿಕೆ, ೧ ಕಿರಿನಾಲಿಗೆ ೨ ಒಂದು ಯೋಗದ ಹೆಸರು
ಲ್ಯಾವಳ, ನೇವಳ, ಕಂತಮಾಲೆ
ಲಿಂಗ, ಪರಮಾತ್ಮಪ್ರತೀಕ
ಲಿಂಗೈಕ್ಯ, ಪರಮಾತ್ಮೈಕ್ಯ, ನಿಜೈಕ್ಯ
ಲೀಯ, ಲೀಯ್ಯ, ಲೀನ, ತನ್ಮಯ
ಲೆಂಕ, ಸೇವಕ
ಲೇಸು, ಒಳಿತು
ಲೋಚು, ಜಂಡಿಕೆ, ತಲೆಗೂದಲು

ವ

ವಳಿ, ಸಾಲು
ವ್ಯತಿಕರಿಸು, ವಿಂಗಡಿಸು, ನಿಶ್ಚಯಿಸು
ವಾದ, ಜರ್ಜೆ
ವಾರಣ, ಆನೆ
ವಾರಿಕಲ್ಲು, ಆಣೇಕಲ್ಲು
ವಾರಿಧಿ, ಸಮುದ್ರ
ವಾಂಛೆ, ಇಚ್ಛೆ, ಆಸೆ
ವಿಕಳ, ವಿವ್ಹಲ, ವ್ಯಾಕುಲ
ವಿಗರ್ಧನೆ, ನಿಂದೆ
ವಿಚ್ಛಂದ, ಅನಾಸಕ್ತ
ವಿಧಿ, ೧ ಶಿಕ್ಷೆ, ೨ ಬ್ರಹ್ಮ, ೩ ನಿಯಮ, ೪ ದೈವ
ವಿನೋದ, ಲೀಲೆ, ಆಟ
ವಿರಕ್ತಿ, ವೈರಾಗ್ಯ, ಅನಾಸಕ್ತಿ
ವಿವರಿಸು, ಬೇರ್ಪಡಿಸು, ತಿಳಿಸು, ಅರ್ಪಿಸು
ವಿಶ್ವತಃ, ಎಲ್ಲೆಲ್ಲಿಯೂ, ಸರ್ವತ್ರ
ವಿಸ್ಕಂದ, ಚಲಿತ, ಚಂಚಲ
ವಿಂಧ್ಯ, ವಿಂಧ್ಯಪರ್ವತ
ವೀರವಿತರಣ, ಶೌರ್ಯ ಮತ್ತು ಔದಾರ್ಯ
ವೇದ್ಯ, ೧ ಅರ್ಪಿತ, ೨ ತಿಳಿಯಲು ಯೋಗ್ಯ
ವೇದ್ಯವಾಗು, ಸಂಪೂರ್ಣ ತಿಳಿ
ವೇಧಿಸು, ಸಂಬಂಧಿಸು, ನೆಡು
ವೈಚಿತ್ತ್ಯ, ಮನಸಿನ ವ್ಯಗ್ರತೆ
ವ್ಯೋಮ, ಆಕಾಶ

ಶ

ಶಠ, ಮೋಸ, ಮೋಸಗಾರ, ತಕ್ಕು
ಶರಣ, ಭಕ್ತ, ಅನನ್ಯಶರಣಾಗತ ಭಕ್ತ
ಶಿವ, ಪರಮಾತ್ಮ
ಶುಕ್ರಶೋಣಿತ, ರೇತಸ್ಸು ಮತ್ತು ರಕ್ತ
ಶ್ವಪಚ, ೧ ನಾಯಿದಿನಿ, ೨ ಅತಿ ಹೀನ ಕುಲದವ

ಷ

ಷಟ್‌ತ್ರಿಂಶತ್, ಮೂವತ್ತಾರು (ತತ್ವಗಳು)
ಷಡಕ್ಷರಿ, 'ಓಂ ನಮಃ ಶಿವಾಯ' ಎಂಬ ಮಂತ್ರ

ಸ

ಸಡಗರಿಸು, ಅಲಂಕರಿಸು
ಸನ್ಮತ, ಒಪ್ಪಿದ
ಸಮ, ಒಂದೇ ಸಮ, ಅವಿರೋಧಿ
ಸಮನಿಸು, ಪ್ರಾಪ್ತವಾಗು, ಕೈಸೇರು
ಸಮಯ, ಮರ್ಯಾದೆ, ನಿಯಮ, ಕಟ್ಟು, ಧರ್ಮ
ಸಮವೇದಿಸು, ಸಮವಾಗಿ ಕೂಡು
ಸಮಾಧಿ, ಚಿತ್ತೈಕ್ಯ, ತಾದಾತ್ಮ್ಯ
ಸಮ್ಯಕ್‌ಜ್ಞಾನ, ಸರಿಯಾದ ಜ್ಞಾನ
ಸಮ್ಯಕ್ಸ್ಥ, ಸಮಸ್ಥಿತಿ
ಸಯವಾನು, ಒಂದಾಗು, ತಾದಾತ್ಮ್ಯ ಹೊಂದು
ಸರಸವಾಡು, ಜೇಷ್ಟೆಯ ಮಾತಾಡು
ಸಲ್, ಪ್ರವೇಶಮಾಡು, ಪ್ರಾಪ್ತವಾಗು
ಸಲೆ, ಜೆನ್ನಾಗಿ, ಒಳಿತಾಗಿ
ಸಸಿನ, ಸರಲ, ನೆಟ್ಟಗೆ
ಸಹಜ, ನಿರಾಯಾಸವಾಗಿ, ಸ್ವಭಾವತಃ
ಸಂಗ, ಆಸಕ್ತಿ, ಲಂಪಟತನ
ಸಂಜ, ಸಂಜು, ಸಮೂಹ, ಕೂಟ
ಸಂಚಲ, ಚಾಂಚಲ್ಯ
ಸಂದಣಿಸು, ಕೂಡು
ಸಂದಿಕ್ಕು, ಜೋಡಿಸಿ
ಸಂದು, ಕೊಡು, ಐಕ್ಯಹೊಂದು
ಸಂಧಾನ, ಏಕಾಗ್ರತೆ
ಸಂಪಾದನೆ, ಪಡೆಯುವದು
ಸಂಪುಟ, ಮುಚ್ಚಳದ ಒಂದು ಭಾಗ
ಸ್ವಯವನು, ಸ್ವರೂಪವನ್ನು, ಆತ್ಮನನ್ನು
ಸ್ವಯವಹುದು, ಆತ್ಮವಶವಾಗುವದು
ಸ್ವಯಂಭು, ತನ್ನಿಂದ ತಾನೇ ಆದುದು
ಸಾದಾಖ್ಯ, ೧ ಸೃಷ್ಟಿಗೆ ಕಾರಣವಾದ ತತ್ವ ೨ ಸದಾಶಿವ
ಸಾವಧಾನ, ಎಚ್ಚರ, ಏಕಾಗ್ರತೆ
ಸ್ಥಾಯಿಕ, ಸ್ಥಿರ
ಸ್ವಾಯತ, ಸ್ವಂತ, ತನ್ನದು
ಸಿತಾಳ, ನೈವೇದ್ಯ
ಸುಪ್ಪಾಣಿ, ತೇಜ
ಸುಭಟ, ಒಳ್ಳೇ ವೀರ
ಸುಮ್ಮಾನ, ೧ ಗರ್ವ, ೨ ಸುಖ
ಸುಯಿಧಾನ, ಶಾಂತಿ, ಸಮಾಧಾನ
ಸುರಗಿ, ಕತ್ತಿ, ಖಡ್ಗ
ಸುರಾಳ ನಿರಾಳ, ಶುದ್ಧಾಶುದ್ಧ
ಸುಳಿ ಸುಳುಹು, ಜಲಸವಲನಮಾಡು, ಅಲೆದಾಟ
ಸುಷುಮ್ನಾ, ಬೆನ್ನುರಿಯ ಮಧ್ಯದಲ್ಲಿರುವ ನಾಡಿ
ಸೂಕರ, ಹಂದಿ
ಸೂತಕ, ದೋಷ, ಮಲ
ಸೂಳುನುಡಿ, ದೊಡ್ಡ ಧನಿಯಿಂದ ಮಾತಾಡಿದ ಸುದಿ
ಸೆಜ್ಜೆ, ಶಯ್ಯೆ, ಆಸನ [ರಿಸು
ಸೆಳೆ, ಎಳೆದುಕೊಳ್ಳು, ಉಪಸಂಹ
ಸ್ಥೈರಣೆ, ಸಹನಗುಣ
ಸ್ಥೈರಗಾನು, ಅಚ್ಚರಿಗೊಳ್ಳು, ಜಕಿತನಾಗು
ಸೊಡರು, ದೀಪ

ಸೊಣಗ, ನಾಯಿ, ಶುನಕ
ಸೊನೆ, ರಸ, ಪ್ರವಾಹ
ಸೊಮ್ಮು, ಸಂಪತ್ತು
ಸೊಲ್ಲು, ಮಾತು
ಸೋರೆ, ಕುಂಬಳಕಾಯಿ
ಸೋಂಕು, ಸ್ಪರ್ಶ, ಸ್ಪರ್ಶಮಾಡು
ಸೋಹಂ, ಸೋಹಂಭಾವ, ಅವನೇ ನಾನು, ಅವನೇ ನಾನು ಎಂಬ ಭಾವ
ನಾನೇ ಆತ್ಮನು ಎಂಬ ಭಾವ

ಹ

ಹಡಕಿ, ಹೊಲಸು
ಹಡುಹು, ಹೊಲಸು
ಹಡೆದಿಹೆ, ಪಡೆದಿಹೆ
ಹಮ್ಮು ಬಿಮ್ಮು, ಅಹಂಕಾರ, ಗರ್ವ
ಹರಣ, ಪ್ರಾಣ
ಹರಿವರಿದು, ಸುತ್ತಲೂ ಸುಳಿದು
ಹಸುಕೂಸು, ಎಳೆಕೂಸು
ಹಂಗು, ಇಚ್ಛೆ, ಋಣ, ಆಸೆ
ಹಂಜರ, ಪಂಜರ
ಹಾಕೈಸು, ಇಚ್ಛಿಸು
ಹಾಳಾಹಳ, ಘಾತಕವಿಷ
ಹಿಡಿವಡೆದ, ಹಿಡಿಯಲ್ಪಟ್ಟ
ಹಿಂಗು, ನಷ್ಟವಾಗು
ಹುಲ್ಲೆ, ಮೃಗ
ಹುಸಿ, ಸುಳ್ಳು, ಸುಳ್ಳುಮಾಡು–ಹೇಳು
ಹುಳುಗೊಂಡ, ನರಕ, ಹುಳದ ಕೊಂಡ
ಹುಳ್ಳಿ, ಹುರಳಿ, (ಒಂದು ಧಾನ್ಯ)
ಹೂಳು, ಹುಗಿದು ಇಡು
ಹೆಮ್ಮಾರಿ, ಹಿರಿಯ ಮಾರಿ, ರಾಕ್ಷಸಿ
ಹೆರರು, ಪರರು, ಅನ್ಯರು
ಹೆರಸಾರು, ಹೊರಗೆ ಹೋಗು
ಹೆರೆಹಿಂಗದ, ನಿರಂತರ, ಸತತ
ಹೆಳವ, ಕಾಲಿಲ್ಲದವ, ಪಂಗು
ಹೊಡವಡು, ನಮಸ್ಕರಿಸು
ಹೊಡಹೊಮ್ಮು, ನಮಸ್ಕರಿಸು
ಹೊತ್ತಾರೆ, ಬೆಳಿಗ್ಗೆ
ಹೊತ್ತುಹೋಕ, ವೇಳೆ ಹಾಳು ಮಾಡುವವ
ಹೊದ್ದು, ೧ ಸಂಬಂಧಿಸು, ಲೇಪ, ೨ ಬಂಧನ
ಹೊನಲು, ಪ್ರವಾಹ, ಹರಿ
ಹೊರೆ, ರಕ್ಷಿಸು, ಪೊರೆ
ಹೊಲಬು, ರೀತಿ, ರಹಸ್ಯ, ಹಾದಿ
ಹೊಲ್ಲ, ಕೇಡು, ಕೆಡಕು, ಕೀಳು, ಹೀನ
ಹೊಂದು, ಪಡೆ, ದೊರಕಿಸು
ಹೋಹೆನು, ಹೋಗುವೆನು
ಹೋರು, ಯುದ್ಧಮಾಡು

ಕ್ಷ

ಕ್ಷುತ್ಪಿಪಾಸೆ, ಹಸಿವೆ ನೀರಡಿಕೆ
ಕ್ಷುತ್ತು, ಹಸಿವೆ

ವಚನಾಮೃತದಲ್ಲಿಯ
ವಚನಗಳ ಅಕ್ಷರಾನುಕ್ರಮವು

ಈ ಕೆಳಗೆ, ಮೊದಲು, ವಚನಾಮೃತದಲ್ಲಿ ಆರಿಸಿ ಸಂಗ್ರಹಿಸಿದ ವಚನಗಳು ಅಕ್ಷರಾನುಕ್ರಮದಿಂದ ಕೊಡಲ್ಪಟ್ಟಿವೆ. ಬಳಿಕ ವಚನಾಮೃತದಲ್ಲಿಯ ಅವುಗಳ ಅನುಕ್ರಮಾಂಕವು ಕೊಡಲ್ಪಟ್ಟಿದೆ. ನಂತರ ವಚನಾಮೃತದಲ್ಲಿ ಆಯಾ ವಚನವಿದ್ದ ಪುಟಸಂಖ್ಯೆಯು ತೋರಿಸಲ್ಪಟ್ಟಿದೆ. ಕೊನೆಗೆ ಆಯಾ ವಚನವು ಮೂಲ ಯಾವ ಗ್ರಂಥದಿಂದ ಎತ್ತಿ ಅವತರಿಸಲ್ಪಟ್ಟಿರುವದೆಂಬುದು ಹೇಳಲ್ಪಟ್ಟಿದೆ.

— ಅ —

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.
ಅಗ್ಗಣಿ ಪತ್ರ	೩೫೦	೧೧೫	ಪ್ರ. ೭೩
ಅಗ್ನಿ ಸುಡಲಲ್ಲದೆ	೩೬೯	೧೧೯	ಪ. ೪೫
ಅಗ್ನಿಸ್ತಂಭದ ರಕ್ಪೆ	೪೪೬	೧೪೩	ಪ್ರ. ೭೪
ಅಡವಿಯಲ್ಲಿರ್ದ	೧೮೮	೬೩	ಪ. ೨೩೫
ಅಣುರೇಣು ಮಹಾತ್ಮ	೩೨	೧೬	ಪ. ೨೨
ಅಣುವಿಂಗೆ ಅಣು	೨೩	೧೦	ಪ. ೧೦
ಅಣ್ಣಸೆಂಬಣ್ಣಗಳ	೧೬೨	೫೬	ಪ. ೨೧೫
ಅತ್ತಲಿತ್ತ ಸಾರದಂತೆ	೫೫೧	೧೭೫	ಪ. ೨೨೮
ಅದ್ವೈತವ ನುಡಿದು	೨೫೩	೮೪	ಪ್ರ. ೫೩
ಅದ್ವೈತವ ಸಾಧಿಸಿ	೧೯	೯	ಪ. ೨೨
ಅನಲ ಕೊಂಡ ವಸ್ತ್ರ	೩೯೯	೧೨೩	ಪ. ೩೪೨
ಅನಲಂಗೆ ಉರಿ	೨೪೨	೮೦	ಪ. ೪೪೧
ಅನಂತಕಾಲ ಹೋಗಿ	೯೪	೩೭	ಶೂ. ೨೦೬
ಅನಂತ ವೇದಶಾಸ್ತ್ರ	೫೧೭	೧೬೬	ಪ. ೨,೩೬೧
ಅನಂತ ಸಾಧನಂಗಳ	೭೬	೩೦	ಪ. ೫೫೬

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.	
ಅನ್ನವನಿಕ್ಕಿದಡೇನು	೩೨೮	೧೦೨	ವ.	೩೪೨
ಅನ್ನವನಿಕ್ಕಿ ನನ್ನಿಯ	೯೦	೩೪	ಶೂ.	೩೬
ಅನ್ಯವಿಚಾರವ ಮರೆದು	೨೦೯	೭೧	ವ.	೩೪೧
ಅನುಭಾವ ಅನುಭಾವ ಎಂದೆಂಬಿರಿ	೧೧೦	೪೦	ವ.	೨೦೭
ಅನುಭಾವದಿಂದ ಹುಟ್ಟಿತ್ತು	೧೦೬	೩೯	ಪ್ರ.	೪೪
ಅನುಭಾವವ ನುಡಿವ	೧೧೧	೪೦	ವ.	೨೦೯
ಅನುಭಾವವಿಲ್ಲದ	೯೫	೩೭	ಶೂ.	೩೬೯
ಅನುವನರಿವನ್ನಕ್ಕ	೩೬೫	೧೫೪	ವ.	೩೩೯
ಅಮೃತಕ್ಕೆ ಹಸಿವುಂಟೆ	೩೩೨	೧೦೩	ವ.	೩೪೨
ಅಯ್ಯಾ ಇಹಪರಂಗಳ	೪೧೪	೧೩೧	ವ.	೧೭೩
ಅಯ್ಯಾ ಎಳೆಗರು	೨೪೧	೯೧	ವ.	೨೩೬
ಅಯ್ಯಾ ಕೊರಡು	೨೪೪	೪೧	ವ.	೪೪೨
ಅಯ್ಯಾ ಕ್ರಿಯಾಚಾರದಲ್ಲಿ	೫೦೪	೧೬೩	ವ.	೯೯
ಅಯ್ಯಾ ದಂದ್ವನಿಂದಾದ	೫೩	೨೪	ವ.	೩೬
ಅಯ್ಯಾ ತನ್ನ ತಾನರಿದು ತನ್ನ	೨೩೯	೭೯	ವ.	೪೩
ಅಯ್ಯಾ ತನ್ನ ತಾನರಿದಡೆ	೫೪೫	೧೭೪	ವ.	೪೨
ಅಯ್ಯಾ ನಿಮಗೆ ಪತ್ರ	೨೦೪	೭೧	ವ.	೩೪೨
ಅಯ್ಯಾ ನಿಮ್ಮ ಅನುಭಾವದಿಂದ	೫೫೫	೧೭೬	ವ.	೨೦೬
ಅಯ್ಯಾ ನಿಮ್ಮಲ್ಲಿ ಆಡುವ	೩೯೬	೧೨೭	ವ.	೧೫೧
ಅಯ್ಯಾ ನಿಮ್ಮ ಶರಣರ ನಿಲವ	೨೧೪	೭೩	ಶೂ.	೧೩೧
ಅಯ್ಯಾ ನಿಮ್ಮ ಶರಣರು ಪರಮ	೨೧೭	೭೩	ಶೂ.	೧೩೧
ಅಯ್ಯಾ ನಿಮ್ಮ ಶರಣರು ಪೆಟ್ಟಿದ	೨೧೯	೭೩	ಶೂ.	೨೭೪
ಅಯ್ಯಾ ನಿರವಯ ಶೂನ್ಯ	೧	೨	ವ.	೧
ಅರಗುತಿಂದು ಕರಗುವ	೩೯	೧೪	ವ.	೩೨
ಅರದೆಳೆದೆಪೆ	೩೪೭	೧೧೧	ವ.	೪೩೫
ಅರಸಿ ತೊಳಲಿದರಿಲ್ಲ	೫೩೧	೧೭೨	ಶೂ.	೨೭೪
ಅರಳಿಯ ಮರ	೪೧	೧೪	ವ.	೩೩
ಅರಿಯದೆ ಮರಹಿಂದ	೧೨೩	೪೫	ಶೂ.	೩೭೩
ಅರಿದೆನೆಂದಡೆ	೬	೪	ವ.	೭

ವಚನಗಳ ಆರಂಭ	ಕ್ರಮಾಂಕ.	ಪುಟ.	ಮೂಲ.	
ಅರಿವನರಿದೆನೆಂದು	೩೭೪	೧೨೦	ವ.	೪೯೭
ಅರಿವೆನೆಂದರೆ ಸತ್ಯ	೨೫೩	೭೪	ಸಿದ್ಧ.	೩೦೩
ಅರಿವೇ ಗುರು ಆಚಾರವೇ	೫೦೨	೧೬೨	ವ.	೫೩೩
ಅರುಣೋದಯಕ್ಕೆ	೧೩೪	೪೪	ವ.	೪೯೨
ಅರುವತ್ತೆಂಟು	೫೨೨	೧೬೭	ಸಿದ್ಧ.	೬೭
ಅರುಹಿನ ಕುರುಹು	೪೫೯	೧೪೩	ವ.	೩೪೯
ಅರುಹಿನ ತೃಪ್ತಿಗೆ	೯೪	೩೪	ಶೂ.	೧೬೩
ಅವನಿಯ ಪಿಂಡವ	೧೨	೫	ವ.	೫೭೪
ಅರ್ಚನೆಯ ಮಾಡುವಲ್ಲಿ	೫೬೦	೧೭೪	ವ.	೧೭೧
ಅರ್ಥಸನ್ಯಾಸಿಯಾದಡೇನಯ್ಯ	೪೭೪	೧೪೭	ವ.	೫೨೬
ಅಷ್ಟಾಷಷ್ಟಿಕೋಟಿ	೪೪೩	೧೫೯	ವ.	೨೯೩
ಅಹುದಹುದು ಭಕ್ತಿ	೩೭೯	೧೨೧	ವ.	೪೯೪
ಅಹುದಹುದು ಮತ್ತೇನು	೪೦೫	೧೨೯	ಶೂ.	೧೯೯
ಅಹಂಕಾರವನೆ ಮರೆದು	೧೨೯	೪೬	ಪ್ರ.	೧೯೫
ಅಳಿಸಂಕುಳವೆ	೫೫೨	೧೭೫	ಶೂ.	೨೯೬
ಅಕ್ಷರದ ಅಭ್ಯಾಸ	೨೩೭	೭೯	ಪ್ರ.	೩೦೭
ಅಂಗಕ್ಕೆ ಬಡತನ	೪೦೯	೧೩೦	ಶೂ.	೨೨೬
ಅಂಗದಿಂದೆ ಲಿಂಗಸುಖ	೫೧೨	೧೬೪	ಜ. ಬ.	೩೪
ಅಂಗವನರಿವನ್ನಕ್ಕ	೩೬೬	೧೧೯	ವ.	೩೩೯
ಅಂಗ ಲಿಂಗದಲ್ಲಿ	೨೧೬	೭೩	ವ.	೪೭೧
ಅಂಜಿದರೆ ಮಾಣದು	೩೧೪	೯೯	ವ.	೨೬೫
ಅಂದು ಇಂದು ಮತ್ತೊಂದು	೪೫೨	೧೪೧	ವ.	೩೦೫
ಅಂತರಂಗದರಿವು ಬಹಿರಂಗ	೩೭೭	೧೨೮	ವ.	೪೯೬
ಅಂತರಂಗದಲ್ಲಿ ಬೆಳಗುವ	೩೪೪	೧೧೦	ವ.	೪೪೦
ಅಂತರಂಗದಲ್ಲಿ ಭಾವಿಸುವನಲ್ಲ	೮೭	೩೩	ವ.	೫೬೨
ಅಂತರಂಗ ಬಹಿರಂಗ ಆತ್ಮ	೬೨	೨೬	ಶೂ.	೩೭೬
ಅಂತರವಿಲ್ಲದಂದು	೨	೩	ವ	೧
ಅಂತರಂಗ ಶುದ್ಧವಿಲ್ಲದವರ	೩೪೪	೧೨೪	ವ.	೧೫೫
ಅಂತರಂಗದಲ್ಲಿ ಅರಿವಾದಡೇನಯ್ಯ	೩೭೬	೧೨೦	ವ.	೩೫೪

— ಅ —

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ	
ಆಕಾಶದಲ್ಲಾಡುವ	೪೯೯	೧೬೧	ಮ.	೬೫
ಆಕಾಶದಲ್ಲಿ ತೋರುವ	೪೨	೫೧	ಮ.	೩೪
ಆಗಮಪುರುಷರಿರಾ	೨೭೯	೯೦	ಪ್ರ.	೬೧
ಆಚಾರ ಅನಾಚಾರ	೧೨೭	೪೬	ಮ.	೫೫೯
ಆಚಾರ ವಿಚಾರ ತಪ್ಪಿದಲ್ಲಿ	೪೬೭	೧೪೫	ಮ.	೩೧೦
ಆಚಾರವಂಗಲೇಪ	೪೩	೩೨	ಶೂ.	೧೪೦
ಆಚಾರವಿಲ್ಲದ	೪೧೩	೧೩೧	ಮ.	೧೦೦
ಆದಿ ಕಾಲು ದಣಿಯುವು	೨೯೨	೯೩	ಮ.	೧೯೯
ಆತನ ದೆರಸಿದ	೬೦	೨೯	ಮ.	೫೭೫
ಆತ್ಮ ಪರಮಾತ್ಮ	೧೯೧	೬೬	ಮ.	೪೨೯
ಆತ್ಮಶುದ್ಧಿ ಗುರು	೫೦೬	೧೬೨	ಮ.	೭೨
ಆದಿ ಅನಾದಿ ಇಲ್ಲದಂದು ಅಜಾಂಡ	೪	೩	ಮ.	೨
ಆದಿ ಅನಾದಿ ಇಲ್ಲದಂದು ಹಮ್ಮು	೧೧	೫	ಮ.	೨
ಆದಿಪುರಾಣ	೪೬೯	೧೪೬	ಮ.	೫೧೩
ಆಧಾರಸ್ವಾಧಿಷ್ಠಾನ-ಸಿದ್ಧಲಿಂಗೇಶ್ವರ	೩೪೧	೧೦೯	ಮ.	೪೭೯
ಆಧಾರ ಸ್ವಾಧಿಷ್ಠಾನ-ಕೂಡಲಸಂಗಮ	೨೩೬	೭೯	ಮ.	೪೪
ಆಸು ಭಕ್ತನಲ್ಲಯ್ಯ	೨೯೫	೯೩	ಮ.	೧೪೧
ಆಸು ಭಕ್ತನಲ್ಲ ಆಸು	೩೦೨	೯೪	ಶೂ.	೩೪೭
ಆಸೆಯಿಲ್ಲ	೪೪	೨೩	ಶೂ.	೩೭೭
ಆಯುಷ್ಯ ತೀರದಲ್ಲದೆ	೪೪೨	೧೪೯	ಮ.	೨೭೦
ಆಹಾದರೂ ನಿಮ್ಮ	೩೦೫	೯೫	ಮ.	೨೦೩
ಆವನಾಗಿ ಬಬ್ಬನು	೪೦೭	೧೩೦	ಮ.	೧೧೬
ಆಸಲ್ಲಿ ಸರ್ವಪ್ರಪಂಚ	೨೪೯	೮೨	ಮ.	೪೪೫
ಆಕೆಯುಳ್ಳಾತ	೪೦೨	೧೨೪	ಮ.	೧೧೯
ಆಶೆ ರೋಷ ಪರುಷ	೩೪೨	೧೧೦	ಪ.	೪೨೯
ಆಸೆ ಎಂಬ ಶೂಲ	೧೫೭	೫೫	ಶೂ.	೩೪೪

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ	
ಆಂದೋಲನದಲ್ಲಿಹ	೫೩೨	೧೭೦	ಸಿದ್ಧ.	೭೯೬

— ಇ —

ಇಬ್ಬರು ಮೂವರು	೯	೫	ಮ.	೨೬
ಇರ್ದು ಬದ್ದಸ್ಸಲ್ಲ	೭೭	೩೦	ಮ.	೫೫೭
ಇಹಪರವೆಂಬ ಈ ದೆಸೆ	೩೩೭	೧೦೫	ಮ.	೫೧೯
ಇಳೆ ನಿಮ್ಮ ದಾನ	೨೨	೧೦	ಮ.	೯
ಇಂತೆಂದ ಭೂಮಿಯ	೨೨೬.	೧೦	ಮ.	೯

— ಈ —

ಈಡಾಪಿಂಗಳ	೩೪೦	೧೫೯	ಮ.	೪೫೩
ಈ ಸತ್ಕ್ರಿಯೆಗೆ	೯೩	೩೫	ಮ.	೩೪೧

— ಉ —

ಉದ್ಭವನೇರುವುದಕ್ಕೆ	೫೫೪	೧೧೬	ಮ.	೧೪೨
ಉರಿಯೊಳಗಣ	೭೧	೨೮	ಮ.	೫೫
ಉಳ್ಳವರು	೨೧೩	೭೩	ಮ.	೪೨೧
ಉಂಬರೆ ಬಂದು	೫೫೫	೧೧೬	ಶೂ.	೧೪೪
ಉಂಬಲ್ಲಿ ಉಡುವಲ್ಲಿ	೫೨೯	೧೬೯	ಮ.	೫೫೦

— ಎ —

ಎಡರಡಸಿದಲ್ಲಿ	೧೭೪	೬೧	ಪ.	೨೦೦
ಎಡೆಗೆ ಬಾರದಾತ	೫೨೪	೧೬೯	ಮ.	೫೨೯
ಎತ್ತೆತ್ತ ನೋಡಿ	೨೧	೧೦	ಮ.	೪
ಎದೆ ಬಿರಿವಸಕ	೨೯೩	೯೩	ಮ.	೨೦೫
ಎನಗೆ ನಿಮ್ಮ ನೆನಹು	೨೪೬	೮೧	ಮ	೧೬೯
ಎನಗೆ ಹರಿಯಿತ್ತು	೯೬	೩೭	ಶೂ.	೧೧೯
ಎನಗೊಂದು ಲಿಂಗ	೨೬೫	೮೭	ಪ್ರ.	೧೦೨
ಎನ್ನ ಕರಸ್ಥಲ	೪೯೬	೧೬೦	ಮ.	೫೩

ವಚನಗಳ ಆರಂಭ	ಕ್ರಮಾಂಕ.	ಪುಟ.	ಮೂಲ.	
ಎನ್ನ ಕಾಯವ ದಂಡಿಗೆ	೩೦೪	೯೫	ಪ.	೨೦೦
ಎನ್ನ ಗುಣಾವಗುಣ	೨೯೯	೯೪	ಶೂ.	೧೯೦
ಎನ್ನ ತನುವಿಂಗೆ	೨೯೮	೯೪	ಶೂ.	೧೦೮
ಎನ್ನ ಪಾದವೇ ಪಾದ	೨೧೪	೭೨	ಮ.	೪೨೧
ಎನ್ನ ಮನದ ಕೊನೆ	೧೦೭	೩೯	ಪ್ರ.	೧೦೨
ಎನ್ನ ಮಾಯದ ಮದನ	೨೫೩	೧೭೬	ಮ.	೨೪೪
ಎನ್ನ ಮನ ನಿಮ್ಮಲ್ಲಿ	೨೧೫	೭೩	ಮ.	೨೦೩
ಎನ್ನ ಯೋಗಕ್ಷೇಮ	೨೦೪	೭೦	ಮ.	೨೪೦
ಎನ್ನ ಶಿರ ನಿಮ್ಮ	೨೪೪	೯೧	ಮ.	೨೩೬
ಎನ್ನಂತರಂಗ	೩೦೩	೯೪	ಶೂ.	೩೪೪
ಎನ್ನವರಿಗೆ ಸಾವಿಲ್ಲ	೪೨	೩೧	ಶೂ.	೩೯೦
ಎಮ್ಮವರು ಬೆಸಗೊಂಡರೆ	೪೫೧	೧೪೧	ಮ.	೩೦೫
ಎರವಿನ ಬದುಕು	೧೭೬	೬೧	ಮ.	೨೩೧
ಎಲವೋ ಎಲವೋ ನಲ್ಲ	೫೪	೨೬	ಮ.	೫೬೪
ಎಲವೋ ಎಲವೋ ಪಾಪ	೪೫೪	೧೪೨	ಮ.	೩೦೭
ಎಲೆ ಎಲೆ ಮಾನವ	೪೦೦	೧೨೪	ಮ.	೧೩೦
ಎಲೆ ಗುಡ್ಡ ನೀ	೪೬೦	೧೪೪	ಮ.	೩೯೧
ಎಲೆ ಮನವೇ ಎಲ್ಲಿ	೨೫೧	೪೨	ಮ.	೪೪೫
ಎಲೆ ಮನವೇ ನೀ	೨೫೦	೪೨	ಮ.	೪೪೫
ಎಲ್ಲವ ಕಳೆದುಳಿದ	೪೪೦	೧೩೪	ಮ.	೧೯೬
ಎಲ್ಲವನರಿವಲ್ಲಿ	೪೨೩	೧೩೩	ಮ.	೧೦೪
ಎಲ್ಲಿ ಎಲ್ಲವನರಿದು	೨೨೪	೭೭	ಮು.	೪೫
ಎಲ್ಲಿ ನೋಡಿದಡಲ್ಲಿ ನಿನೇ	೪೪	೩೨	ಮ.	೫೬೩
ಎಲ್ಲಿ ನೋಡಿದಡಲ್ಲಿ ಮನ	೪೨೬	೧೩೪	ಮ.	೧೪೨
ಎಲ್ಲಿ ಸುಳಿದಡೆ	೧೭೯	೬೧	ಆ.	೨೭
ಎಳ್ಳಿನ್ಹಿದ	೩೯೪	೧೨೪	ಶೂ.	೧೦೬
ಎಳ್ಳಿಂಗೆ ಪರಿಮಳ	೫೦೦	೧೬೧	ಮ.	೬೬
ಎಂದಿಗೂ ಸಾವು	೩೯೨	೧೨೬	ಮ.	೨೭೧
ಎಂದೋ ಸಂಸಾರ	೧೪೦	೬೨	ಮ.	೨೨೫

— ಏ —

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.	
ಏಕಾಕಾರ ಲೋಕಾಕಾರ	೫೧೪	೧೬೬	ಆ.	೧೪೩
ಏನ ನೋಡಿ ಏನ	೨೪೩	೮೦	ಮ.	೪೪೧
ಏನೆಂದೆನಲಿಲ್ಲದ	೩೧ ಅ	೧೪	ಮ.	೨೬
ಏನೆಂದೆನಲಿಲ್ಲ ನುಡಿದು	೫೩೬	೧೭೨	ಮ.	೬

— ಒ —

ಒಡಲಿಲ್ಲದ ನುಡಿ	೧೧೩	೪೩	ಶೂ.	೨೫೫
ಒಡಲೊಳಗಿನ ಕಿಜ್ಜ್ಹ	೨೬೪	೮೭	ಮ.	೧೭
ಒಡೆಯರು ಭಕ್ತರು	೪೪೭	೧೪೦	ಮ.	೩೦೬
ಒಲಿದು ಒಲಿಸಿ	೨೭೨	೮೪	ಮ.	೨೫೪
ಒಳಗೆ ತೊಳೆಯಲರಿಯದೆ	೩೪೬	೧೨೪	ಪ್ರ.	೪೬
ಒಂದು ಜನ್ಮದಲ್ಲಿ	೨೬೬	೮೭	ಮ.	೨೯೨
ಒಂದೇ ವಸ್ತು	೨೩೨	೭೪	ಸಿದ್ಧ.	೪೫೪

— ಓ —

ಓಡುವಾತ ಲೆಂಕ	೩೧೩	೯೯	ಮ.	೨೬೭
ಓಂ ನಮಃ ಶಿವಾಯ	೫೦೭	೧೬೩	ಜ. ಬ.	೨೭

— ಕ —

ಕಣವ ನಿಶ್ಚೈಸಿದ	೩೨೬	೧೦೨	ಶೂ.	೨೫೫
ಕಣ್ಣೆ ಕಾಂಬಡೆ	೧೪೪	೫೦	ಮ.	೫೬೦
ಕಣ್ಣಾ ಮುಚ್ಚಿ ಕನ್ನಡಿ	೩೫೭	೧೧೬	ಮೆ.	೪೮೧
ಕದಳಿ ಎಂಬುದು	೭೨	೨೮	ಮ.	೫೪೬
ಕನ್ನಡಿಯ ನೋಡುವಲ್ಲಿ	೫೪೪	೧೭೩	ಮ.	೩೪
ಕನ್ನಡಿಯಲ್ಲಿ ಕಪ್ಪು	೫೪೭	೧೭೪	ಮ.	೧೫೪
ಕಪ್ಪಿ ಸರ್ಪನ ನೆರಳಲ್ಲಿ	೧೭೪	೬೧	ಮ.	೨೨೪
ಕರಣಾದಿ ಗುಣ	೨೧೧	೭೨	ಮ.	೩೪೧
ಕರಿಘನ ಅಂಕುಶ	೨೫೪	೮೪	ಶೂ.	೧೩೩

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.	
ಕರಿಯನಿತ್ತಡೊಲ್ಲೆ	೪೬೫	೧೪೫	ವ.	೩೧೯
ಕರ್ಣಂಗಳು ಕೇಳಿವ	೨೦೧	೬೯	ವ.	೩೬೯
ಕರ್ಪುರದ ಗಿರಿಯನು ಉರಿಹಿಡಿದ	೧೨೦	೪೪	ಶೂ.	೬೬
ಕರ್ಪುರದ ಗಿರಿಯು ಉರಿಯು	೪೬	೨೨	ಪ್ರ.	೩೨೮
ಕರ್ಮವೆಂಬ ಅಂಕ	೩೧೨	೯೯	ವ.	೨೬೭
ಕರ್ಮಾಧೀನವೆಂಬ	೧೬೨	೪೫	ಪ್ರ.	೧೧೪
ಕಲ್ಲದೇವರು	೨೩೮	೭೯	ವ.	೪೨
ಕಲ್ಲು ದೇವರೆಂದು	೨೬೧	೮೬	ಪ್ರ.	೧೦೩
ಕಲ್ಲು ಲಿಂಗವಲ್ಲ	೪೩೮	೧೩೮	ವ.	೧೪೧
ಕಲ್ಲೊಳಗಿನ	೧೦೫	೩೯	ಪ್ರ.	೪
ಕವಿಸಾಧಕ	೪೫೮	೧೪೩	ವ.	೪೯೬
ಕಳದೇಡ ಕೊಲದೇಡ	೫೬೧	೧೭೮	ವ.	೧೫೬
ಕಂಗಳ ಮುಂದಣ ಗೊತ್ತು	೭೨೫	೧೦೨	ಶೂ.	೨೨೪
ಕಂಗಳ ಮುಂದಣ ಕಾಮವ	೧೫೫	೫೫	ವ.	೧೫೭
ಕಂದಿಸಿ ಕುಂದಿಸಿ	೩೨೨	೧೦೧	ಶೂ.	೪೫೩
ಕಾಗೆ ಬಂದಗಳು	೪೨೮	೧೩೪	ವ.	೧೨೬
ಕಾಣಬಾರದ ವಸ್ತು	೧೦೩	೩೯	ಶೂ.	೩೧೯
ಕಾಮಕ್ರೋಧ ಲೋಭ	೪೪೯	೧೪೧	ವ.	೪೮೩
ಕಾಮಧೇನುವಿನಲ್ಲಿ	೫೩೩	೧೭೧	ವ.	೫೧೦
ಕಾಯಕ ತಪ್ಪಿದಡೆ	೩೧೭	೧೦೦	ವ.	೨೭೨
ಕಾಯಕದಲ್ಲಿ ನಿರುತ	೨೧೬	೬೯	ಶೂ.	೨೨೩
ಕಾಯ ಕರ್ತನೆ	೧೩೩	೪೭	ಶೂ.	೨೪೧
ಕಾಯಕವಳಿದ	೩೧೦	೯೪	ಶೂ.	೨೨೬
ಕಾಯದ ಸುಳುಹನ್ನಕ್ಕ	೩೪೯	೧೧೨	ವ.	೪೫೨
ಕಾಯದಿಂದ ಕರ್ಮ	೩೪೨	೧೨೨	ವ.	೪೯೯
ಕಾಯ ನಾನೆಂದರೆ	೨೩೫	೭೪	ಸಿದ್ಧ.	೨೬೩
ಕಾಯ ಲಿಂಗಾರ್ಪಿತ	೨೦೦	೬೪	ವ.	೩೫೪
ಕಾಯವೆರಸಿ	೨೪೦	೮೦	ವ.	೪೬
ಕಾಯಸಮಾಧಿ	೯೨	೩೪	ಶೂ.	೨೪೧

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.	
ಕಾಯಸೊನೆಯ	೩೮೦	೧೨೨	ಶೂ.	೫೯
ಕಾಯಾನುಭಾವಿ	೧೩೭	೪೪	ವ	೫೧೦
ಕಾಲಕಲ್ಪಿತಂಗಳಲ್ಲದೆ	೫	೪	ಪ.	೬
ಕಾಂಚನವೆಂಬ ನಾಯ	೧೬೦	೫೬	ವ.	೧೩೦
ಕಾಂತಿಯಿಂ ಈರೇಳು	೧೦೦	೩೪	ಶೂ.	೨೯೪
ಕಿಚ್ಚಿನೊಳಗೆ ಹಾಕಿದ	೧೩೪	೪೭	ಪ್ರ.	೨೧೩
ಕಿಜ್ಜು ಬೈವ	೨೬೨	೮೬	ವ.	೨೯೧
ಕಿರಿಯದಾದಡೇನು	೨೨೧	೭೬	ಶೂ.	೧೬೦
ಕಿಂಕುರ್ವಾಣತೆ	೪೪೪	೧೫೭	ವ.	೯೪
ಕುರೂಪಿ ಸುರೂಪಿಯ	೩೪೮	೧೧೨	ವ.	೪೫೭
ಕುಲಸ್ವಾಮೀ	೪೩೧	೧೩೫	ವ.	೧೦೪
ಕುಂಡಲಿಗ ಕೀಟ	೧೪೩	೫೦	ವ.	೫೧೯
ಕುಂಭ ಸಹಸ್ರ	೮	೫	ವ.	೨೭
ಕೃಪೆಯ ಮಾಡಿ	೩೦೯	೯೭	ಶೂ.	೫೭
ಕೆರೆ ದೇಗುಲಂಗಳೆಲ್ಲ	೯೧	೩೪	ಶೂ.	೫೬
ಕೆಲಕ್ಕೆ ಶುದ್ಧ	೩೪೫	೧೨೪	ವ.	೧೯೩
ಕೇಶ ಕಾಷಾಯಾಂಬರ	೫೦೧	೧೬೨	ವ.	೫೩೩
ಕೈದುನಿಡಿದಾಡು	೩೨೭	೧೦೨	ಶೂ.	೨೫೫
ಕೈಯಲ್ಲಿ ಜ್ಯೋತಿ	೧೩೬	೪೭	ಶೂ.	೨೪೩
ಕೊಲ್ಲುವನೇ ಮಾದಿಗ	೪೪೧	೧೫೯	ವ.	೩೨೩
ಕ್ರಿಯಾವಂಧನ	೩೦೭	೯೭	ವ.	೩೩೭
ಕ್ರಿಯೆ ಇಲ್ಲದ ಭಕ್ತ	೩೬೩	೧೧೭	ವ.	೩೩೦. ಸಂಸ್ಥೆ
ಕ್ರಿಯೆ ಇಲ್ಲದ ಜ್ಞಾನ	೩೭೧	೧೧೯	ವ.	೪೪೪
ಕ್ರಿಯೆಗಳು ಮುಟ್ಟ	೬ ಅ.	೨೮	ಮು.	೫೦
ಕ್ರಿಯೆ ಮರೆದಲ್ಲಿ	೩೭೨	೧೨೦	ವ.	೪೬೬
ಕ್ರಿಯೆಯೇ ಅಧಿಕ	೩೭೦	೧೧೯	ವ.	೪೬೪
ಕ್ರಿಯೆಯೇ ಜ್ಞಾನ	೩೭೮	೧೨೧	ವ.	೪೬೫
ಕ್ರಿಯೆಯಲ್ಲಿ ಬಲ್ಲಿದರು	೩೬	೧೨	ವ.	೨೫೬ ಡಾಟ
ಕ್ರಿ ಶುದ್ಧವಾದವಂಗೆ	೩೬೧	೧೧೭	ವ.	೪೨೩

— ಖ —

ವಚನಗಳ ಆರಂಭ	ಕ್ರಮಾಂಕ.	ಪುಟ.	ಮೂಲ.
ಖಂಡಿತವಳಿದು	೭೩	೨೯	ವ. ೫೪೬

— ಗ —

ಗಗನದ ಮೇಲೊಂದು	೩೦	೧೨	ಶೂ. ೭
ಗಗನವೆ ಗುಂಡಿಗೆ	೨೭೮	೮೯	ಪ್ರ. ೨೦೨
ಗತಿಮತಿ ಚೈತನ್ಯ	೩೦೮	೯೭	ವ. ೩೩೭
ಗರ್ವದಿಂದ ಮಾಡುವ	೨೭೦	೮೮	ಶೂ. ೨೨೭
ಗಂಗಾನದಿಯಲ್ಲಿ	೨೬೪	೮೬	ವ. ೨೮೭
ಗಂಗೆಯೇ ಘನ	೪೪೨	೧೩೯	ವ. ೨೯೩
ಗಿರಿಗಳ ಗುಹೆಗಳ	೫೩೯	೧೭೨	ವ. ೯
ಗುಣದಿಂದ ಹಾರುವ	೫೨೪	೧೬೮	ಸಿದ್ಧ. ೭೯೦
ಗುಬ್ಬಿ ಹೆರರ ಮನೆ	೪೪೮	೧೭೪	ವ. ೨೬೧
ಗುರುವಾದಡೂ	೩೧೮	೧೦೦	ವ. ೫೩೪
ಗುರುಸ್ಥಲವೆಂಬುದು	೪೯೩	೧೫೯	ವ. ೭೫

— ಘ —

ಘನಗಂಭೀರ	೧೫	೮	ವ. ೪
ಘನವ ಮನವ	೬೧	೨೬	ಪ್ರ. ೩೧೩
ಘನವೆಂಬ ಮನದ	೧೯೮	೬೮	ವ. ೩೫೮

— ಚ —

ಚಂದನವ ಕಡಿದು	೪೦೬	೧೨೯	ಶೂ. ೨೮೫
ಚಂದ್ರಮನಂತೆ	೫೫೦	೧೭೫	ವ. ೨೨೫
ಚಿನ್ನದಿಂದಲಾದ	೪೩	೨೨	ವ. ೩೪
ಚಿಲಿಮಿಲಿ ಎಂದೋದುವ	೧೮೫	೬೩	ಶೂ. ೨೯೬

— ಛ —

ಛಲವಿರಬೇಕು	೩೯೦	೧೨೫	ವ. ೨೫೮

— ಜ —

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.
ಜಗವೆಗಲದ ಮಂಟಪ	೧೦೧	೩೮	ಶೂ. ೩೦೫
ಜಗದಗಲದ ಮಾಯಾಜಾಲ	೧೭೦	೫೮	ವ. ೨೨೩
ಜಡೆಮುಡಿ ಬೋಳು	೪೭೬	೧೪೮	ವ. ೫೩೩
ಜನಮೆಚ್ಚು ಶುದ್ಧ	೫೫೬	೧೭೭	ವ. ೧೫೭
ಜಲದಲ್ಲಿ ಸೊರೆ	೩೧ ಬ	೧೪	ಸಿದ್ಧ. ೭೯೯
ಜಲದೊಳಗಣ ಮತ್ಸ್ಯಕ್ಕೆ	೧೪೨	೪೯	ವ. ೫೧೯
ಜಾಗ್ರತ್ ಸ್ವಪ್ನ	೨೭೩	೮೯	ವ. ೨೮೩
ಜಾಲಗಾರಂಗೆ	೫೬೩	೧೭೯	ವ ವ. ೫೧೬
ಜೀವವುಳ್ಳನ್ನಕ್ಕರ	೧೪೧	೬೨	ವ ವ. ೨೨೬
ಜ್ಯೋತಿ ಮುಟ್ಟಿದ	೫೧೦	೧೬೩	ವ. ೪೩

— ತ —

ತನಗೆ ಮುನಿವರಿಗೆ	೪೦೪	೧೨೯	ವ. ೧೫೬
ತನು ಕೊಟ್ಟು ತನು	೨೦೭	೭೦	ವ. ೩೪೦
ತನುಗುಣವಿವರಿಸಿ	೧೯೨	೬೭	ಶೂ. ೨೪೨
ತನು ನಷ್ಟ ಮನ	೪೯	೨೩	ಶೂ. ೩೭೭
ತನು ನಿಮ್ಮದೆಂದ	೨೦೬	೭೦	ವ. ೩೪೦
ತನು ನಿಮ್ಮನಪ್ಪಿ	೧೯೪	೬೭	ವ. ೨೦೫
ತನು ನಿಮ್ಮನಪ್ಪಿ	೭೫	೩೦	ವ ವ. ೫೫೩
ತನು ನಿಮ್ಮರೂಪಾದ	೩೦೬	೯೫	ವ ವ. ೨೦೪
ತನು ಬತ್ತಲೆ	೩೪೩	೧೨೪	ವ. ೧೯೩
ತನುಬೇಡಿದದೀವೆ	೩೩೧	೧೦೩	ವ. ೨೪೫
ತನುವಳಿಯಿತ್ತು	೫೦	೨೩	ಶೂ. ೩೭೪
ತನುವಿಕಾರ	೧೪೯	೬೩	ವ. ೨೪೪
ತನುವಿನಲ್ಲಿ	೨೨೨	೭೬	ವ. ೧೦೧
ತನುವಿನೊಳಗಿದ್ದು	೧೩೯	೪೪	ಶೂ. ೨೯೯
ತನುವಿಂಗೆ ತನು ರೂಪಾಗಿ	೧೯೩	೬೭	ವ. ೪೦೬
ತನ್ನ ತಾನರಿದಡೆ ತಾನೇ ಗುರು	೫೦೯	೧೬೩	ವ. ೯೯

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.	
ತನ್ನ ತಾನರಿದವಂಗೆ	೨೩೦	೭೭	ಶೂ.	೨೯
ತನ್ನದಾದರೇನು	೪೯೧	೧೫೯	ಮ.	೭೫
ತನ್ನನರಸಿ	೨೫೮	೮೫	ಮ.	೨೪೦
ತನ್ನವ ಹುಸಿ ಮಾಡಿ	೨೪೧	೮೦	ಮ.	೪೮೮
ತನ್ನ ವಿನೋದಕ್ಕೆ	೫೪೨	೧೭೩	ಮ.	೪
ತನ್ನಲ್ಲಿ ಅನಂತ	೧೬	೮	ಮ.	೧೦
ತನ್ನಲ್ಲಿ ತಾನು	೨೨೭	೭೭	ಮ.	೪೮೯
ತನ್ನೊಳಗಣ ಅರಿವು	೨೨೬	೭೭	ಮ.	೪೮೭
ತರಗೆಲೆಯ ಮೆದ್ದು	೧೫೦	೫೪	ಮ.	೨೨೩
ತಂದೆ ನೀವು	೨೯೭	೯೪	ಶೂ.	೧೦೨
ತಾ ಮಾಡಿದ ಹೆಣ್ಣು	೪೭೩	೧೪೪	ಮ.	೧೪೧
ತಾಯ ಗರ್ಭದಲ್ಲಿ	೫೪೭	೧೭೪	ಮ.	೧೦೨
ತಾಯಿ ತಂದೆ ಇಲ್ಲದ	೭	೫	ಮ.	೧೩
ತಾ ಸುಖಿಯಾದೊಡೆ	೬೬	೨೭	ಪ್ರ.	೩೧೪
ತುಂಬಿದುದು ತುಳುಕದು	೧೪೮	೫೦	ಮ.	೪೭೮
ತೆರಣಿಯ ಹುಳು	೪೦೧	೧೨೮	ಮ.	೧೧೯
ತೆರಹಿಲ್ಲದ ನಡೆ	೧೧೫	೪೩	ಮ.	೫೧೬
ತೊಕೆಯ ವೀವಣ್ಣ	೪೨೪	೧೩೩	ಮ.	೧೦೭

— ದ —

ದಯವಿಲ್ಲದ ಧರ್ಮ	೪೨೧	೧೩೨	ಮ.	೧೧೭
ದಾಸಿಯರ ಸಂಗ	೫೧೯	೧೬೬	ಜ.	೩
ದಿಟವ ನುಡಿವುದು	೪೧೯	೧೩೨	ಮ.	೧೦೫
ದೇವ ದೇವ ವಿನ್ನಪವ	೪೭೯	೧೪೮	ಮ.	೩೧೭
ದೇವನೊಬ್ಬ	೨೭೪	೮೮	ಮ.	೨೮೩
ದೇವರ ನಿನೆದು	೩೫೮	೧೧೭	ಮ.	೪೫೨
ದೇವಲೋಕದ ಮರ್ತ್ಯ	೪೧೭	೧೩೨	ಮ.	೧೦೫
ದೇಶ ಗುರಿಯಾಗಿ	೧೭೩	೬೦	ಮ.	೧೨೪
ದೆಸೆದಿಕ್ಕು ಧರೆ	೪೭	೨೨	ಶೂ.	೩೭೫

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.	
ದೇಹ ನಾನಲ್ಲ	೨೩೧	೭೭	ಸಿದ್ಧ.	೪೫೫
ದೇಹಭಾವವಳಿದಲ್ಲದೆ	೨೪೮	೮೨	ಶೂ.	೭೧
ದೇಹವಾಸನೆ ಹರಿದು	೩೪೭	೧೧೧	ಮ.	೪೩೫
ದೇಹವೆ ದೇಗುಲ	೨೭೭	೮೭	ಶೂ.	೩೭
ದೇಹವೆಂಬ ದೇಗುಲ	೨೧೨	೭೨	ಮ.	೪೪೦
ದ್ವೀಪಾದ್ವೀಪವಿಲ್ಲ	೫೩೪	೧೭೧	ಮ.	೨

— ಧ —

ಧನ ಸವೆದರೆ	೩೦೦	೯೪	ಶೂ.	೩೩೭
ಧರೆಯ ಕೃಷಿ	೩೭೦	೧೧೭	ಮ.	೧೪೩
ಧರೆಯಾಕಾಶ	೩	೩	ಮ.	೨
ಧ್ಯಾನಸೂತಕ	೧೧೪	೪೪	ಪ್ರ.	೨೨೩

— ನ —

ನಚ್ಚುಗೆ ಮನ	೧೪೪	೬೨	ಮ.	೨೦೪
ನಡೆನುಡಿ ಇಲ್ಲದ	೩೯೩	೧೨೬	ಶೂ.	೧೨
ನಡೆನುಡಿ ಸಿದ್ಧಾಂತ	೪೪೦	೧೪೪	ಮ.	೩೨೨
ನಡೆವ ಕಾಲು	೫೫೪	೧೭೬	ಮ.	೨೦೪
ನಮ್ಮ ನಡಾವಳಿಗೆ	೫೧೫	೧೬೫	ಮ.	೨,೩೫೫
ನಮ್ಮ ಬಸವಣ್ಣನು	೫೧೩	೧೬೪	ಶೂ.	೨೪೪
ನರನ ಮುಟ್ಟಿ	೨೪೭	೮೧	ಮ.	೪೪೩
ನಲ್ಲನ ಕೂಡುವ	೫೯	೨೬	ಮ.	೫೬೯
ನಲ್ಲನ ರೂಪೆನ್ನ	೧೯೭	೬೪	ಮ.	೪೫೦
ನಂಬಿ ಕರೆದಡೆ	೩೪೭	೧೨೫	ಮ.	೧೭೬
ನಂಬಿದ ಹೆಂಡತಿ	೪೩೭	೧೩೪	ಮ.	೨೪೩
ನಾನಾ ಭವದುಃಖ	೫೩೨ ಅ.	೧೭೦	ಶೂ.	೩೯೫
ನಾ ನೀನೆಂಬ ಅಹಂಕಾರ ತಲೆ	೧೫೩	೫೪	ಮ.	೧೩೪
ನಾ ನೀನೆಂಬ ಅಹಂಕಾರ ತಲೆ	೩೯೭	೧೨೭	ಮ.	೧೩೪
ನಾನು ಆರಂಭ ಮಾಡುವೆ	೩೨೩	೧೦೧	ಮ.	೩೪೬

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.	
ನಾನು ಘನ ತಾನು	೪೧೧	೧೩೧	ಮ.	೧೧೧
ನಾನು ನಾನೆಂಬ	೮೮	೩೩	ಮ.	೫೬೫
ನಾನೆಲ್ಲಿಂದ ಬಂದೆ	೧೯೦	೬೪	ಮ.	೨೨೫
ನಾನೆಂಬಹಂಕಾರದಲ್ಲಿ	೧೫೪	೫೪	ಮ.	೧೩೫
ನಾನೊಂದ ನೆನೆದರೆ	೧೫೧	೫೪	ಮ.	೨೨೨
ನಾನೊಂದು ನುಡಿದರೆ	೧೦೮	೩೯	ಮ.	೨೦೬
ನಾನೊಂದು ನುರಗಿ	೪೯೨	೧೩೩	ಮ.	೧೦೮
ನಾರು ಬೇರಿನ	೮೧	೩೧	ಶೂ.	೩೮೬
ನಾ ಸತ್ತೆನೆಂಬ	೯೯	೩೮	ಶೂ.	೨೮೪
ನಿಜವನರಿದ	೬೮	೨೮	ಪ್ರ.	೩೮೫
ನಿಜವಸ್ತು ಒಂದೇ	೯ ಅ.	೫	ಮ.	೨,೫೮
ನಿನ್ನ ದೇಹ ನೋಡು	೨೩೪	೭೮	ಸಿದ್ಧ.	೨೬೦
ನಿಮ್ಮ ತೇಜವ	೫೩೭	೧೭೨	ಮ.	೬
ನಿಮ್ಮ ನಿಜದಂತ್ಯವ	೧೮	೮	ಮ.	೧೧
ನಿಮ್ಮ ನೋಟವನಂತ	೨೫೬	೮೪	ಮ.	೧೯೮
ನಿಮ್ಮ ನೋಟನನಂತ	೧೦೨	೪೨	ಶೂ.	೩೧೯
ನಿಮ್ಮ ಪೂಜಿಸಿಹೆ	೫೬೫	೧೭೯	ಮ.	೫೫೭
ನಿಮ್ಮಲ್ಲಿ ನೀವು ತಿಳಿದು	೨೨೫	೭೬	ಪ್ರ.	೧೮೩
ನಿಮ್ಮಿಂದಲಾನಾದೆನು	೪೩೨	೧೩೫	ಮ.	೨೫೩
ನಿರ್ಮೂಲವಾಯಿತ್ತು	೬೪	೨೭	ಶೂ.	೩೯೮
ನಿಲ್ಲಿಸಬಹುದಯ್ಯ	೧೫೮	೫೫	ಮ.	೧೩೧
ನಿಶ್ಚಲ ಶರಣನ	೪೪೪	೧೩೯	ಮ.	೨೯೫
ನಿಷ್ಠೆಯುಳ್ಳ	೩೪೯	೧೨೫	ಮ.	೨೫೮
ನೀನಾನೆಂಬುಭಯ	೧೧೨	೪೨	ಶೂ.	೨೯೩
ನೀನೊಲಿದರೆ	೨೮೨	೯೧	ಮ.	೨೩೭
ನೀರ ಕಂಡಲ್ಲಿ	೪೪೧	೧೩೯	ಮ.	೨೯೩
ನುಡಿಯಬಹುದು	೪೧೬	೧೩೨	ಶೂ.	೧೯೨
ನೆಚ್ಚಿದೆನೆಂದರೆ	೩೮೮	೧೨೫	ಮ.	೧೭೬
ನೆನಹಿನ ನಿಧಿ	೧೦೪	೩೯	ಶೂ.	೩೬೪

ವಚನಗಳ ಆರಂಭ	ಕ್ರಮಾಂಕ.	ಪುಟ.	ಮೂಲ.	
ನೆನೆ ನೆನೆ ಎಂದೊಡೆ	೧೧೯	೪೪	ಪ್ರ.	೧೫೪
ನೆನೆಯಲರಿಯೆ	೧೯೬	೬೮	ಮ.	೨೦೪
ನೆಲದ ಮರೆಯ	೨೫	೧೦	ಮ.	೧೫
ನೇಮವ ಮಾಡಿ	೩೧೯	೧೦೦	ಮ.	೫೩೪
ನೇಹದ ಸುಖವ	೬೩	೨೬	ಶೂ.	೩೭೬
ನೈಷ್ಠಿಕಭಾವ	೨೭೧	೮೮	ಮ.	೨೫೮

— ಪ —

ಪರತತ್ತ್ವದಲ್ಲಿ	೧೩೫	೪೭	ಪ್ರ.	೨೧೩
ಪರಧನ ಬೆಲ್ಲ	೪೩೩	೧೩೬	ಮ.	೨೭೨
ಪರಮ ಪದವಿಯ	೩೩೩	೧೦೩	ಮ.	೩೪೩
ಪರಮಾರ್ಥವ ನುಡಿದು	೪೫೫	೧೪೨	ಮ.	೫೩೫
ಪರರಾಸೆ ಎಂಬ	೧೫೯	೫೫	ಮ.	೧೨೦
ಪರಶಿವನ	೪೮೫	೧೫೫	ಮ.	೯೧
ಪರುಷದ ಪುತ್ಥಳಿ	೨೦	೯	ಮ.	೨೧
ಪಶ್ಚಿಮಗಿರಿಯ	೫೫	೨೫	ಮ.	೫೬೪
ಪಂಚೇಂದ್ರಿಯ	೧೬೬	೫೬	ಮ.	೨೧೭
ಪಂಡಿತನಾಗಲಿ	೩೨೪	೧೦೨	ಮ.	೩೭೩
ಪುಣ್ಯಗಳಹ ಕಾಲ	೨೫೫	೪೪	ಶೂ.	೩೧೪
ಪುಣ್ಯಪಾಪಂಗಳೆಂಬವು	೪೭೭	೧೪೪	ಮ.	೧೩೬
ಪುಣ್ಯಪಾಪಂಗಳ ಸರಿಯದ	೫೩೦	೧೬೯	ಮ.	೪
ಪೂರ್ವದ್ವಾರವ	೩೪೫	೧೧೦	ಮ.	೪೩೫
ಪೃಥ್ವಿ ಅಪ್ಪು ತೇಜ	೩೮	೧೪	ಮ.	೩೨
ಪ್ರಕಾಶದ್ವಾರ	೨೦೫	೭೦	ಮ.	೩೭೨
ಪ್ರಥಮದಲ್ಲಿ	೨೯	೧೨	ಶೂ.	೧

— ಫ —

ಫಲಪದದಾಸ	೩೩೦	೧೦೩	ಮ.	೩೪೦
ಫಲಪದಾದಿಗಳ	೨೭೭	೮೯	ಮ.	೩೪೧

— ಬ —

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.	
ಬಟ್ಟ ಬಯಲೆಲ್ಲ	೧೪೬	೫೦	ವ.	೪೯೧
ಬಟ್ಟೆಯಲ್ಲಿ ಹೊನ್ನು	೪೨೫	೧೩೪	ವ.	೧೦೭
ಬಡತನಕ್ಕೆ	೧೭೨	೬೦	ವ.	೨೦೦
ಬಯಲು ಬಯಲನೆ	೪೪	೨೨	ಪ್ರ.	೩೦೬
ಬಯಲು ಬಯಲು ಬೆರೆ	೧೦	೫	ವ.	೫೭೦
ಬಯಲ ಮೂರ್ತಿಯ ಮಾಡಿ	೪೯೪	೧೬೦	ವ.	೪೬
ಬಯಲು ಮೂರ್ತಿಯಾಗಿ	೩೭	೧೭	ವ.	೬೯
ಬಯಲ ಮೊಳಗಿ ಮಳೆ	೫೪೩	೧೭೩	ವ.	೪
ಬಂದುದ ಕೈಕೊಳ್ಳ	೪೩೪	೧೩೭	ವ.	೨೭೨
ಬಿಸಜತಂತು	೨೪೫	೪೧	ವ.	೪೪೨
ಬೀಜದೊಳಗಿಹ	೩೪೧	೧೨೨	ವ.	೪೫೧
ಬೆಟ್ಟದ ಮೇಲೊಂದು	೪೦೩	೧೨೯	ವ.	೧೧೭
ಬೆಳಗಿನೊಳಗಿನ	೫೬	೨೫	ವ.	೫೬೪
ಬೋಧವೆಂದರೆ	೨೨೯	೭೭	ಸಿದ್ಧ.	೫೫೭
ಬ್ರಹ್ಮದ ಮಾತನಾಡಿ	೧೬೧	೫೬	ವ.	೧೨೩
ಬ್ರಹ್ಮಪದವಿ	೪೭೪	೧೪೪	ವ.	೧೪೦
ಬ್ರಾಹ್ಮಣನಾಗಲಿ	೪೯೦	೧೫೯	ವ.	೭೩
ಬಣ್ಣವಿಲ್ಲದ ಚಿನ್ನ	೩೫೯	೧೧೭	ಶೂ.	೫೭

— ಭ —

ಭಕ್ತಂಗೆ ಕ್ರಿ ಮಹೇಶ್ವರ	೪೪೬	೧೫೭	ವ.	೯೪
ಭಕ್ತಗೊಂದೇ ವಾಕ್ಯ	೪೫೩	೧೪೨	ವ.	೩೦೬
ಭಕ್ತನ ಕಾಯವೇ	೨೪೦	೯೦	ವ.	೨೫
ಭಕ್ತಿ ಎಂಬುದು	೩೬೪	೧೧೪	?	?
ಭಕ್ತಿಗೆ ಅನುಭಾವವೇ	೫೨೧	೧೬೭	ಚ.	೬೩
ಭಕ್ತಿ ಮುಕ್ತಿಯನಾರು	೨೬೯	೪೪	ಶೂ.	೪೬
ಭಕ್ತಿಯೇ ಓಗರ	೩೦೧	೯೪	ಶೂ.	೩೫೯

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.	
ಭವಿತನಕ್ಕೆ ಹೇಸಿ	೪೬೨	೧೫೯	ವ.	೭೫
ಭಾವಕ್ಕಿಂಬಿಲ್ಲ	೪೫	೨೨	ಪ್ರ.	೩೨೩
ಭೂಮಿ ನಿನ್ನಡಲ್ಲ	೨೨೦	೭೫	ವ.	೪೮೩

— ಮ —

ಮತವೇಕೋ	೫೬೪	೧೭೯	ವ.	೫೧೭
ಮಡದಿಯ ಪ್ರಾಣಕ್ಕೆ	೪೧೨	೧೩೧	ವ.	೧೧೧
ಮಣಿಗಳ ಸೂತ್ರ	೨೭	೧೧	ವ.	೧೭
ಮಣಿಯನೆಣಿಸಿ	೨೭೫	೪೯	ವ.	೨೦೫
ಮಣ್ಣಿನಿತ್ತು	೩೫	೧೭	ವ.	೨೦೩
ಮದಹಸ್ತಿ	೨೨೪	೭೬	ಶೂ.	೪೩
ಮದ್ಯಮಾಂಸಾದಿಗಳ	೩೯೯	೧೨೪	ಪ್ರ.	೨೩೦
ಮನದ ಕೊನೆಯ	೬೯	೨೪	ಪ್ರ.	೩೨೩
ಮನದೊಳಗೆ ಘನ	೧೨೧	೪೫	ಪ್ರ.	೨೧೯
ಮನೆ ನೋಡಾ	೪೧೦	೧೩೦	ಶೂ.	೨೩೨
ಮನ ಮನ ಬೆರಸಿ	೨೯೧	೯೩	ವ.	೧೯೪
ಮನಮುಟ್ಟಿ ನೆನೆ	೨೪೫	೯೧	ವ.	೧೪೨
ಮನವ ಮಂಚವ	೧೪೭	೬೩	ವ.	೨೫೬
ಮನವೆಂಬ ಸಂಕಲ್ಪ	೨೧೦	೭೨	ಶೂ.	೬೨
ಮನ ಶುದ್ಧವಿಲ್ಲ	೩೨೧	೧೦೧	ವ.	೩೪೪
ಮನಸಿನ ಸಂಶಯ	೪೪೬	೧೪೦	ವ.	೩೦೬
ಮರಗಿಡು ಬಳ್ಳಿ	೨೦೨	೬೯	ವ.	೩೫೫
ಮರದೊಳಗಣ	೫೪೦	೧೭೨	ವ.	೧೧೬
ಮರೀಚಿಯೊಳಗಣ	೨೪	೧೧	ವ.	೧೪
ಮಹಾಕರ್ತನು	೧೩	೭	ವ.	೩
ಮಾಡಿದ ಮಾಟವ	೭೪	೩೦	ವ.	೫೪೭
ಮಾಡಿ ನೀಡಿ	೪೫	೩೩	ವ.	೩೪೦
ಮಾಡಿ ಮಾಡಿ ಕೆಟ್ಟರು	೩೫೩	೧೧೫	ವ.	೧೯೨
ಮಾಡುವ ಭಕ್ತನು	೩೩೫	೧೦೫	ವ.	೩೪೫

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.	
ಪಾಡುವ ಮಾಟದಿಂದಲೆ	೩೬೭	೧೧೯	ಶೂ.	೨೨೪
ಪಾಡುವರಯ್ಯ	೧೯೯	೬೮	ಪ.	೩೪೫
ಪಾಡುವಲ್ಲಿ ಎನ್ನ	೩೩೪	೧೦೪	ಪ.	೩೪೫
ಪಾಡುವಂತಿರಬೇಕು	೩೩೮	೧೦೫	ಪ.	೫೬೧
ಪಾತಿನ ಪಾಲೆ	೩೬೨	೧೧೭	ಪ.	೨೬೧
ಪಾತುಗಂಟುತನ	೫೩೨ ಬ	೧೭೦	ಪ.	೧೬೧
ಪಾರಿ ಪಸಣಿ	೪೪೫	೧೪೦	ಪ.	೩೦೫
ಪಾರಿಯು ಪೂಜಿಸಿ	೨೬೩	೮೬	ಪ.	೨೯೧
ಪಾವಿನ ಕಾಯೊಳಗೊಂದು	೨೯೪	೯೩	ಪ.	೧೪೦
ಪುಗಿಲ ಪರೆಯ	೧೩೧	೪೬	ಪ.	೫೪೫
ಪೊಟ್ಟಿ ಪೊಟ್ಟಿ ಪುಷ್ಪ	೪೩೯	೧೩೪	ಪ.	೧೯೪
ಪೋಹಪದರಾಗ	೫೪೯	೧೭೫	ಪ.	೨೧೭

— ಯ —

ಯಮನಿಯಮಾಸನ	೩೩೯	೧೦೪	ಪ.	೪೪೨
ಯೋಗ ಶಿವಯೋಗ	೧೪೦	೪೪	ಶೂ.	೫೦

— ರ —

ರಸವಾದಂಗಳ	೪೫೭	೧೪೩	ಪ.	೪೬೫
ರೋಗಿಗೆ ಹಾಲು	೧೬೯	೫೭	ಶೂ.	೨೭೦

— ಲ —

ಲಿಂಗಮುಖವನರಿ	೫೧೧	೧೬೩	ಚ. ಬ.	೩೮
ಲಿಂಗವ ಪೂಜಿಸಿ	೧೧೬	೪೩	ಶೂ.	೮೧
ಲಿಂಗವ ಸ್ಥೂಲವೆಂಬರು	೪೯೮	೧೬೧	ಪ.	೫೯
ಲಿಂಗವೆನ್ನೆ ಲಿಂಗೈಕ್ಯ	೧೨೫	೪೫	ಶೂ.	೨೯೮
ಲಿಂಗವೆಂಬುದು ಪರ	೪೯೭	೧೬೧	ಪ.	೫೩
ಲೋಕವಿದಿದು ಲೋಕವ	೩೩೬	೧೦೫	ಪ.	೫೧೯
ಲೋಕಾದಿ ಲೋಕಂಗಳೇನೂ	೩೧	೧೩	ಪ.	೯೧

— ವ —

ವಚನಗಳ ಆರಂಭ	ಕ್ರಮಾಂಕ.	ಪುಟ.	ಮೂಲ.	
ವಚನದ ರಚನೆಯ	೫೨೧	೧೬೭	ಚ.	೪೯
ವಚನದ ರಚನೆ ಎಂಬ	೪ ಅ.	೩	ಶೂ.	೪೬
ವಚನದಲ್ಲಿ ನಾಮಾಮೃತ	೨೯೦	೯೨	ಪ.	೧೯೪
ವನದ ಕೋಗಿಲೆ	೨೭೬	೪೯	ಪ.	೨೦೨
ವನವೆಲ್ಲ ನೀವೇ	೧೪೬	೬೩	ಶೂ.	೨೯೬
ವಾಙ್ಮನಕ್ಕೆ	೫೭	೨೫	ಪ.	೫೬೫
ವಾರಿ ಬಲಿದು	೧೪೯	೫೩	ಪ.	೪೦
ವಾರಂದರಿಯೆ	೨೪೪	೯೨	ಪ.	೧೯೪
ವಿಕಳನಾದೆನು	೨೦೩	೭೦	ಪ.	೨೪೦
ವಿಶ್ವದಲ್ಲಿ ಜ್ಞಾನ	೩೧೧	೯೪	ಪ.	೩೩೯
ವಿಶ್ವದೊಳಗೆಲ್ಲ	೫೩೪	೧೭೨	ಪ.	೪
ವಿಶ್ವಾಸದಿಂದ	೪೪೭	೧೫೭	ಪ.	೯೪
ವಿಷಯವೆಂಬ ಹಸರ	೧೭೭	೬೧	ಪ.	೨೨೭
ವೃಕ್ಷವಾಸಿಯಾಗಿರ್ದು	೧೦೯	೪೦	ಪ.	೨೦೭
ವೇದ ಕಲಿತಲ್ಲಿ	೪೭೧	೧೪೬	ಪ.	೫೦೫
ವೇದದಲುಳ್ಳಡೆ	೩೩	೧೬	ಪ.	೨೨
ವೇದಪಾತಕ ಶಾಸ್ತ್ರ	೪೭೨	೧೪೬	ಪ.	೫೦೫
ವೇದಪ್ರಿಯನಲ್ಲ	೨೫೯	೮೫	ಶೂ.	೪೬
ವೇದವ ನೋಡಿ	೫೨೩	೧೬೨	ಸಿದ್ಧ.	೭೪೯
ವೇದವಾಕ್ಯವಿಚಾರ	೫೧೬	೧೬೬	ಪ.	೨,೩೬೧
ವೇದವೇದಾಂತಂಗಳಿಂದ	೧೫೨	೫೪	ಪ.	೪೦
ವೇದವೆಂಬುದು	೨೫೨	೪೪	ಪ್ರ.	೨೨೫
ವೇದಶಾಸ್ತ್ರಕ್ಕೆ ಹಾರುವ	೫೨೫	೧೬೮	ಪ.	೩೧೪
ವೇದಶಾಸ್ತ್ರಾಗಮ	೪೭೦	೧೪೬	ಪ.	೩೩೩
ವೇದಾತೀತ	೫೩೫	೧೭೨	ಪ.	೭
ವೇದಾಂತವನೋದಿ	೩೭೫	೧೨೦	ಪ.	೩೫೮
ವೇಧಾದೀಕ್ಷೆ	೪೯೫	೧೬೦	ಪ.	೪೭

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.
ವೇಷ ಎಲ್ಲಿರದು	೪೭೫	೧೪೮	ಪ. ೧೩೩
ವ್ರತವೆಂಬುದು	೩೯೧	೧೨೬	ಪ. ೨೭೧
ವ್ಯಾಧನಂತೆ	೪೫೦	೧೪೧	ಪ. ೫೪೪

— ಶ —

ಶಬುದ ನಿಶ್ಯಬ್ದ	೫೨	೨೩	ಶೂ. ೩೯೩
ಶಮೆದಮೆವಿವೇಕ	೫೫೭	೧೭೭	ಪ. ೧೬೮
ಶರಣ ಇಹಪರ	೧೪೫	೫೦	ಪ. ೫೧೮
ಶರಣಸ್ಥಲದ	೫೬೨	೧೭೯	ಪ. ೫೦೩
ಶರಧಿಯ ಮೇಲೆ	೧೭	೮	ಪ. ೧೧
ಶಾಸ್ತ್ರಘನ	೪೬೮	೧೪೬	ಪ. ೩೧೩
ಶಾಸ್ತ್ರವೆಂಬುದು	೫೧೪	೧೬೫	ಪ. ೨,೩೫೫
ಶಿವಕಥೆಗಳ ಕೇಳಿ	೨೪೯	೯೨	ಪ. ೨೦೧
ಶಿವ ತನ್ನ ವಿನೋದಕ್ಕೆ	೨೪	೧೧	ಪ. ೧೪
ಶಿವನ ನೆನೆದಡೆ	೩೫೬	೧೧೬	ಪ. ೪೫೧
ಶಿವನೇ ದೈವ	೫೫೪	೧೭೭	ಪ. ೧೦೧
ಶಿವಪೂಜೆಯತ್ರ	೩೬೨	೧೪೪	ಪ. ೧೨೪
ಶಿವವಡನ ಗುರು	೩೯೪	೧೨೬	ಪ. ೨೦೪
ಶೀಲ ಶೀಲವೆಂದು ಗರ್ವಿಸಿ	೪೩೫	೧೫೭	ಪ. ೧೬೨
ಶೀಲಶೀಲವೆಂದು ಸುಡಿ	೪೩೬	೧೩೭	ಪ. ೨೭೯
ಕುಕ್ಕಶೋಣಿತ	೫೨೬	೧೬೪	ಪ. ೩೨೦
ಶ್ರೀಗುರು ಶಿವನ	೫೦೪	೧೬೨	ಪ. ೫೧
ಶ್ರೋತ್ರದಲ್ಲಿ	೪೬೪	೧೪೫	ಪ. ೩೯೩

— ಷ —

ಷಡುಡಕ್ರವಳದು	೬೫	೨೭	ಶೂ. ೩೭೪

— ಸ —

ಸಕಲ ವಿಸ್ತಾರದ	೩೪	೧೬	ಪ. ೨೨

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ
ಸಕಲೇಂದ್ರಿಯ	೫೪	೨೫	ಪ. ೫೯
ಸಗುಣ ನಿರ್ಗುಣ	೧೨೪	೪೬	ಪ ೫೫೭
ಸತ್ತಬಳಿಕ ಮುಕ್ತಿ	೪೦	೩೧	ಪ್ರ. ೬೬
ಸತ್ತು ಹುಟ್ಟಿ ಕೆಟ್ಟ	೭೯	೩೧	ಪ್ರ. ೨೯೧
ಸತ್ತು ಹುಟ್ಟುವನಲ್ಲ	೧೩೦	೪೬	ಶೂ. ೨೭೩
ಸತ್ಯದಲ್ಲಿ ನಡೆವುದು	೪೧೪	೧೩೨	ಪ. ೧೦೫
ಸತ್ಯವಿಲ್ಲದಪರೊಡನೆ	೪೨೦	೧೩೨	ಪ. ೧೦೬
ಸತ್ಯಶುದ್ಧಕಾಯಕದಲ್ಲಿ ಜಿತ್ರ	೩೭೦	೧೦೦	ಪ. ೩೪೪
ಸತ್ಯಶುದ್ಧ ಕಾಯಕದಲ್ಲಿ	೪೩೦	೧೩೫	ಶೂ. ೨೫೩
ಸದಾಚಾರ ಸದ್ಭಕ್ತಿ	೪೧೫	೧೩೧	ಪ. ೧೯೧
ಸಮರಸದೊಳಗಣ	೧೧೭	೪೪	ಪ. ೫೬೦
ಸರ್ವಸಂಗಪರಿತ್ಯಾಗ	೪೪೩	೧೪೯	ಪ. ೨೭೦
ಸಂಗದಿಂದಲದೆ	೩೯೫	೧೨೭	ಶೂ. ೨೯೨
ಸಂಸಾರವೆಂಬ ಘೋರಾರಣ್ಯ	೧೬೪	೫೬	ಪ. ೨೧೭
ಸಂಸಾರವೆಂಬ ಮಹಾವ್ಯಾಧಿ	೧೭೧	೫೪	ಪ. ೨೧೪
ಸಂಸಾರವೆಂಬುದು	೧೬೩	೫೬	ಪ. ೧೩೦
ಸಂಸಾರವಿಷಯರಸ	೧೭೫	೬೧	ಪ. ೨೩೦
ಸಂಸಾರಸಾಗರದಿಂದ	೧೬೫	೫೬	ಪ. ೨೧೬
ಸಂಸಾರದ ಸುಖವೆತ್ತ	೧೬೪	೫೭	ಪ. ೬೩೧
ಸಂಸಾರ ಸೌಖ್ಯವಲ್ಲ	೧೬೭	೫೭	ಪ. ೬೧೭
ಸಾತ್ವಿಕ ಶರಣರ	೪೯	೩೩	ಶೂ. ೩೨೦
ಸಾವಿಲ್ಲದ ರೂಹಿಲ್ಲದ	೫೪೧	೧೭೨	ಪ. ೪೦
ಸಾಂಖ್ಯ ಶ್ವಪಚ	೫೨೭	೧೬೪	ಪ. ೩೫೧
ಸಿಂಹದ ಮುಂದೆ ಜಿಗಿ	೨೯೬	೯೩	ಪ. ೧೪೦
ಸೀತವುಷ್ಣಸ್ಪಕ್ಕ	೩೭೩	೧೨೦	ಪ. ೪೯೭
ಸುಖವ ಪಡೆದೆನೆಂದು	೧೪೨	೬೨	ಪ. ೨೨೫
ಸುತ್ತಿಸುತ್ತಿ ಬಂದಡಲ್ಲಿ	೪೦೪	೧೩೦	ಪ. ೧೭೧
ಸುರಿವ ಜಲಕ್ಕೆ	೧೨೪	೪೫	ಶೂ. ೩೪೩
ಸುಳಿದು ಸುತ್ತುವ	೭೪	೨೧	ಪ. ೫೫೪

ವಚನಗಳ ಆರಂಭ.	ಕ್ರಮಾಂಕ.	ಪುಟ	ಮೂಲ.
ಸೂರ್ಯೋದಯವಾಗಿ	೨೨೩	೭೬	ವ. ೪೯೦
ಸೃಷ್ಟಿಗೆಹುಟ್ಟಿದ ತಿಲೆ	೨೬೦	೮೬	ಪ್ರ. ೧೦೩
ಸ್ವಳಕುಳವನರಿದು	೪೮೯	೧೫೭	ವ. ೯೫
ಸ್ಫಟಿಕದ ಘಟ	೧೧೪	೪೩	ವ. ೫೦೯
ಸ್ವಯಲಿಂಗದನುಭಾವ	೧೨೬	೪೬	ವ. ೨೬೨
ಸ್ವಲ್ಪ ಅಮೃತಾನ್ನವನೊಯ್ದು	೪೮೯	೧೩೪	ವ. ೧೨೭
ಸ್ವಸ್ಥಾನ ಸುಸ್ಥಿರ	೧೪೭	೫೦	ವ. ೪೭೪
ಸ್ತ್ರೀಯರ ಕಂಡು	೪೨೭	೧೩೪	ವ. ೧೪೧

— ಹ —

ಹತಯೋಗ	೪೭೩	೧೪೭	ವ. ೪೫೩
ಹಣ್ಣು ಮೆದ್ದ ಬಳಿಕ	೧೩೨	೪೭	ವ. ೪೭೩
ಹರಣವಿದ್ದು	೧೯೫	೭೭	ವ. ೨೦೫
ಹರ ತನ್ನ ಭಕ್ತರ	೩೧೫	೯೯	ವ. ೨೭೨
ಹರಿವ ಮನ	೩೪೩	೧೧೦	ವ. ೪೩೦
ಹರಿವ ಹಾವಿಂಗಂಜೆ	೪೭೧	೧೪೪	ವ. ೧೨೨
ಹಲವು ಪರಿಯಿಂದ	೫೧	೨೩	ಶೂ. ೩೯೩
ಹಸ್ತಾಬ್ಜಮಥನ	೫೦೫	೧೭೨	ವ. ೭೧
ಹಾಲ ತೊರೆಗೆ	೪೭೭	೧೪೫	ವ. ೩೦೯
ಹಾಲುಂಡ ಸವಿಯ	೯೭	೩೪	ಶೂ. ೧೭೧
ಹಾವಿನ ಹಲ್ಲ ಕಳೆದು	೧೪೧	೪೯	ಶೂ. ೨೪೨
ಹಾಳು ಮೊರಡಿ	೪೦	೧೪	ವ. ೩೩
ಹಿಂಡನಗಲಿ	೧೪೩	೭೩	ವ. ೨೦೨
ಹಿಂದಣ ಭವಮಾಲೆ	೭೦	೨೪	ಶೂ. ೩೯೨
ಹಿಂದಣ ಭವಸಾಗರ	೨೪೭	೪೧	ವ. ೪೪೨
ಹುಟ್ಟುವಾತ ನಾನಲ್ಲ	೭೭	೨೪	ಪ್ರ. ೨೯೪
ಹುಲಿಯ ಬಾಯಲ್ಲಿ	೨೪೩	೯೧	ವ. ೨೪೧
ಹೂವಿನೊಳಗಣ	೨೭	೧೧	ವ. ೧೭
ಕೊಟ್ಟಿಯ ಮೇಲೆ	೩೫೧	೧೧೫	ಪ್ರ. ೭೨

ವಚನಗಳ ಆರಂಭ.	ಕ್ರಮಾಂಕ.	ಪುಟ.	ಮೂಲ.
ಹೊತ್ತಾರೆ ಪೂಜಿಸಲು	೨೮೭	೯೨	ಪ್ರ. ೧೦೧
ಹೊದ್ದು ಹೊದ್ದೆಂಬುದು	೧೪	೮	ವ. ೪
ಹೊನ್ನಿಂಗೆ ಬಂದಾತ	೫೦೩	೧೭೨	ವ. ೫೪೦
ಹೊನ್ನ ವಾಯೆ	೧೫೬	೫೫	ಪ್ರ. ೪೭
ಹೊರಗನೇ ಕೊಯ್ದು.... ಕೂಡಲಸಂಗಮದೇವಾ	೫೫೯	೧೭೭	ವ. ೨೨೪
ಹೊರಗನೆ ಕೊಯ್ದು ಹೊರಗನೆ....ಗುಹೇಶ್ವರಾ	೩೫೨	೧೧೫	ಪ್ರ. ೩೦೩
ಹೊಲಬುಗೊಂಡು	೨೫೭	೮೫	ವ. ೨೩೯
ಹೊಲೆಯೊಳಗೆ	೪೪೪	೧೪೦	ವ. ೩೦೯

— ಕ್ಷ —

ಕ್ಷುತ್ಪಿಪಾಸೆ	೪೬	೩೩	ವ. ೫೪೫

— ಜ್ಞ —

ಜ್ಞಾನದಲ್ಲಿ ಅರಿದ	೩೬೪	೧೧೯	ಶೂ. ೧೪೪
ಜ್ಞಾನಿಗಳು ತಾವಾದ	೪೪೪	೧೪೯	ಪ. ೫೦೧

ವಚನಾಮೃತದಲ್ಲಿ ಅವತರಿಸಿದ ವಚನಕಾರರ ಅಕ್ಷರಾನುಕ್ರಮವು

ಮತ್ತು

ಅವರ ವಚನಗಳ ಅನುಕ್ರಮ ಸಂಖ್ಯೆಯು

ಈ ಕೆಳಗೆ ವಚನಕಾರರ ಅಂಕಿತ ಮತ್ತು ಅವರ ಹೆಸರು ಕೊಟ್ಟು, ಮುಂದೆ ಅವರ ವಚನಗಳ ಅನುಕ್ರಮಸಂಖ್ಯೆಯನ್ನು ಕೊಟ್ಟಿದೆ.

೧. ಅಖಂಡೇಶ್ವರಾ — ಷಣ್ಮುಖಸ್ವಾಮಿ. ೪, ೧೦, ೩೪, ೩೬, ೪೬, ೭೬, ೭೭, ೭೪, ೭೪, ೭೯,

೨೧೪, ೨೭೧, ೨೮೩, ೩೩೦, ೩೩೫, ೩೪೬, ೩೭೦, ೩೯೦, ೪೩೬, ೪೫೯, ೪೯೦, ೪೯೬, ೫೩೮, ೫೪೪, ೫೪೪, ೫೩೦.

೨. ಅಜಗಣ್ಣ — ಮುಕ್ತಾಯಕ್ಕ ೨೩೦.

೩. ಅಪ್ರಮಾಣ ಕೂಡಲಸಂಗಮದೇವ — ? ೪, ೧೬, ೨೩೬, ೨೩೮, ೨೩೯, ೨೩೯, ೫೪೫.

೪. ಅಭಿನವಚನ್ನಮಲ್ಲಿಕಾರ್ಜುನ — ಕಕ್ಕಯ್ಯ ಡೋಹರ ೧೯೬.

೫. ಅಮರೇಶ್ವರಲಿಂಗ — ಆಯದಕ್ಕಿ ಮಾರಯ್ಯ ೨೪೭, ೩೧೦, ೩೧೬, ೩೧೯.

೬. ಅಲೋಕನಾದ ಶೂನ್ಯ ಶೂನ್ಯ ಕಲ್ಲಿನೊಳಗಾದ — ಬಂಪಾರಿ ಶಾಂತಯ್ಯ ೪೪೯.

೭. ಆಂಬಿಗರ ಚೌಡಯ್ಯ — ಅಂಬಿಗರ ಚೌಡಯ್ಯ ೩೩, ೪೧, ೧೫೮, ೧೬೧, ೧೭೨, ೨೪೧, ೪೦೨, ೪೨೯, ೫೬೨ ಬ, ೫೬೦,

೮. ಆತುರವೈರಿ ಮೂರೇಶ್ವರ — ನಗಿಮಾರಿ ತಂದೆ ೧೫೫, ೫೫೪.

೯. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ — ಶಿವಲೆಂಕ ಮಂಡಣ್ಣ ೩೬೦, ೩೬೬, ೩೭೨, ೪೩೩.

೧೦. ಉರಿಲಿಂಗದೇವ — ಉರಿಲಿಂಗದೇವ ೫೯, ೧೯೭, ೫೧೭.

೧೧. ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ — ಉರಿಲಿಂಗ ಪೆದ್ದಿ ೨೮, ೩೩೨, ೩೯೧, ೪೪೧, ೪೪೯, ೪೯೭, ೫೦೬, ೫೧೬, ೫೫೭.

೧೨. ಉಳಿಯುಮೇಶ್ವರ — ಚಿಕ್ಕಯ್ಯ ೧೫೭.

೧೩. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ — ಪೋಳಿಗೆಯ ಮಾರಯ್ಯಗಳ ಪತ್ನಿ ಮಹಾದೇವಿ ೩೫, ೧೩೬, ೧೬೫, ೨೪೦.

೧೪. ಏಲೇಶ್ವರ ಲಿಂಗ — ಏಲೇಶ ಕೇತಯ್ಯ ೪೪೭.

೧೫. ಕದಂಬಲಿಂಗ — ಕಂಥರ ಮಾರಯ್ಯ ೩೪೨.

೧೬. ಕಪಿಲಸಿದ್ಧ ಮಲ್ಲಿಕಾರ್ಜುನ — ಸಿದ್ಧರಾಮಯ್ಯ. ೧೪, ೩೧ ಬ, ೫೪, ೧೪೨, ೧೪೮, ೧೪೮, ೨೧೦, ೨೨೪, ೨೨೯, ೨೩೧, ೨೩೩, ೨೩೪, ೨೫೪, ೨೫೯, ೨೭೭, ೩೧೯, ೩೫೯, ೩೪೦, ೪೦೫, ೪೦೭, ೪೧೬, ೪೪೨, ೪೪೨, ೪೪೪, ೪೪೪, ೪೭೨, ೪೭೩, ೪೭೪, ೪೭೪, ೪೭೨.

೧೭. ಕಯ್ಯುಳಿಗತ್ತಿ ಆಡಿಗೂಂಟೆ ಕೆಡೆಯಾಗಬೇಡ, ಅರಿ ನಿಜಾತ್ಮ ರಾಮನಾ — ಮಾದಾರ ಚನ್ನಯ್ಯ. ೩೯೯, ೪೮೦, ೫೫೫, ೫೭೬, ೫೭೭.

೧೮. ಕರ್ಮಹರ ಕಾಳೇಶ್ವರ — ಕಾಳವ್ವೆ, ಬಾಚಿಕಾಯಕದ ಬಸವಯ್ಯಗಳ ಪತ್ನಿ. ೫೧೭.

೧೯. ಕಲಿದೇವರ ದೇವ — ಮಡಿವಾಳ ಮಾಚಯ್ಯ. ೭೨, ೪೯, ೫೦, ೨೯೬, ೩೭೪, ೪೮೪.

೨೦. ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ವಾಯ ಪ್ರಭುವೇ — ಕಾಡಸಿದ್ಧೇಶ್ವರ. ೨೬೬.

೨೧. ಕಾಮೇಶ್ವರ — ? ೫೦೯.

೨೨. ಕಾಲಕರ್ಮರಹಿತ ತ್ರಿಪುರಾಂತಕಲಿಂಗ — ಕೀಲಾರದ ಭೀಮಣ್ಣ. ೪೫೦.

೨೩. ಕಾಳಿಲಿಂಗದೇವ — ಕಾಳಿಲಿಂಗ. ೪೬೭.

೨೪. ಕೂಡಲ ಚನ್ನಸಂಗಮದೇವ — ಚನ್ನಬಸವೇಶ್ವರ. ೫, ೨೪, ೪೪, ೬೩, ೭೫, ೮೭, ೮೭, ೯೪, ೯೭, ೯೮, ೧೦೯. ೧೨೩, ೧೨೬, ೧೩೯, ೧೪೪, ೧೯೪, ೧೯೮, ೧೯೯, ೨೪೯, ೩೨೪, ೩೬೩, ೩೭೭, ೩೭೮, ೪೪೫, ೪೪೫, ೪೪೮, ೪೯೯, ೫೦೧, ೫೦೩, ೫೦೭, ೫೦೭, ೫೦೩, ೫೦೭, ೫೦೯, ೫೨೦, ೫೨೧, ೫೪೪.

೨೫. ಕೂಡಲ ಸಂಗಮದೇವ — ಬಸವೇಶ್ವರ. ೯, ೨೧, ೩೭, ೩೯, ೪೦, ೪೨, ೪೬, ೫೨, ೬೦, ೬೧, ೬೨, ೬೫, ೬೯, ೭೫, ೭೬, ೭೯, ೮೦, ೮೩, ೮೫, ೮೮, ೮೮, ೮೮

೨೦೭, ೨೧೨, ೨೧೭, ೨೨೮, ೨೫೪, ೨೫೫, ೨೫೬, ೨೫೭, ೨೬೦, ೨೬೩, ೨೭೪, ೨೮೬, ೨೮೭, ೨೮೮, ೨೮೯, ೨೯೦, ೨೯೩, ೨೯೪, ೨೯೫, ೨೯೭, ೨೯೮, ೨೯೯, ೩೦೨, ೩೦೩, ೩೦೪, ೩೦೫, ೩೦೬, ೩೦೭, ೩೦೮, ೩೦೯, ೩೧೦, ೩೧೧, ೩೧೨, ೩೧೩, ೩೧೪, ೩೧೫, ೩೧೬, ೩೧೭, ೩೧೮, ೩೧೯, ೩೨೦, ೩೨೧, ೩೨೨, ೩೨೩, ೩೨೪, ೩೨೫, ೩೨೬, ೩೨೭, ೩೨೮, ೩೨೯, ೩೩೦, ೩೩೧, ೩೩೨, ೩೩೩, ೩೩೪, ೩೩೫, ೩೩೬, ೩೩೭, ೩೩೮, ೩೩೯, ೩೪೦, ೩೪೧,

೪೬. ಮನಕ್ಕೆ ಮನೋಹರ ಶಂಭೇಶ್ವರ— ಕರಾಳಕೇತಯ್ಯ. ೩೯೨.

೪೭. ಮರುಳು ಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ — ವೈದ್ಯ ಸಂಗಣ್ಣ. ೪೫೩.

೪೮. ಮಹಾಘನ ದೊಡ್ಡ ದೇಶಿಕಾರ್ಯ ಗುರು ಪ್ರಭುವೇ — ಮುಮ್ಮಡಿ ಕಾರ್ಯೇಂದ್ರ. ೩೪೧.

೪೯. ಮಹಾಲಿಂಗ ಕಲ್ಲೇಶ್ವರ — ಹಾವಿನಹಾಳ ಕಲ್ಲಯ್ಯ. ೨೭೨, ೩೩೩, ೩೯೪, ೫೦೨, ೫೯೩.

೫೦. ಮಹಾಲಿಂಗ ಗಜೇಶ್ವರ — ಗಣೇಶ ಮಸಣಯ್ಯ. ೬೦.

೫೧. ಮಹಾಲಿಂಗ ಗುರುತಿವ ಸಿದ್ಧೇಶ್ವರಪ್ರಭುವು — ತೋಂಟದ ಸಿದ್ಧಲಿಂಗ. ೨, ೩೧, ೪೩, ೭೩, ೮೪, ೧೧೭, ೧೨೭, ೧೩೧, ೧೩೧, ೧೩೯, ೧೭೧, ೧೭೧, ೧೭೫, ೧೭೫, ೧೭೫

ವಚನಶಾಸ್ತ್ರರಹಸ್ಯವು

ಎರಡನೆಯ ಭಾಗ

೨೯-೫೯೮೪

ವಚನಶಾಸ್ತ್ರರಹಸ್ಯವು

೧. ಪೀಠಿಕೆ

(೧) ಗ್ರಂಥವಿಷಯ. (೨) ಸಂಪ್ರದಾಯಾತೀತ ಮಾತುಗಳು. (೩) ವಚನಾಮೃತದ ವಿಷಯ. (೪) ಎರಡು ಭಾಗಗಳ ವಿಷಯ ಮತ್ತು ಸಂಬಂಧ. (೫-೬) ವಚನವೆಂದರೇನು? ವಚನಶಾಸ್ತ್ರವೆಂದರೇನು? (೭) ಗ್ರಂಥದ ಉದ್ದೇಶ. (೮) ವಚನಾಮೃತವೆಂದರೇನು? (೯) ಕನ್ನಡದಲ್ಲಿ ಬರೆಯುವ ಪ್ರಯೋಜನ. (೧೦) ವಚನವಾಙ್ಮಯದ ಯೋಗ್ಯತೆ ಮತ್ತು ಅಭ್ಯಾಸ. (೧೧-೧೨) ಗ್ರಂಥಮರ್ಯಾದೆ ಮತ್ತು ಲೇಖನದೃಷ್ಟಿ.

೧. ಇದು ವಚನಶಾಸ್ತ್ರರಹಸ್ಯವೆಂಬ ಗ್ರಂಥವು. ಇದರಲ್ಲಿ 'ವಚನಾಮೃತ' ಮತ್ತು 'ರಹಸ್ಯ,' ಎಂಬ ಎರಡು ಭಾಗಗಳಿರುವವು. ವಚನಾಮೃತದಲ್ಲಿ, ಈ ವರೆಗೆ ಅಚ್ಚಾದ ವಚನಗಳೊಳಗಿಂದ ಆರಿಸಲ್ಪಟ್ಟ ಮತ್ತು ವಿಷಯಾನುಕ್ರಮದಿಂದ ವರ್ಗೀಕರಿಸಲ್ಪಟ್ಟ ಮಹತ್ವದ ಹಲವು ವಚನಗಳ ಸಂಗ್ರಹವಿರುವದು. ರಹಸ್ಯದಲ್ಲಿ, ವಚನಶಾಸ್ತ್ರವೆಂಬ ಹೆಸರಿನಿಂದ ಪ್ರಸಿದ್ಧವಿರುವ ಶಿವಶರಣರ ವಚನಗಳ ತತ್ವವಿವೇಚನೆ, ವಚನವಾಙ್ಮಯದ ಮಹತ್ವ, ಷಟ್ಸ್ಥಲಸಂಪ್ರದಾಯ, ವಚನಧರ್ಮದ ಸ್ವರೂಪ, ವಚನಕಾರರು ಮುಂತಾದ ವಿಷಯಗಳು ಇರುವವು.

೨. ವಚನಶಾಸ್ತ್ರವೆಂದೊಡನೆ ಅದು ವೀರಶೈವಭಕ್ತರ ಅಥವಾ ಸಾಧುಗಳ ವಚನಗಳಲ್ಲಿ ಉಕ್ತವಾದ ಸಾಂಪ್ರದಾಯಿಕ ಶಾಸ್ತ್ರವು, ಧರ್ಮವು, ಅಥವಾ ಮಾರ್ಗವು ಎಂದು ಕಲ್ಪನೆಯಾಗುವದು ಸ್ವಾಭಾವಿಕವು. ಗುರುಲಿಂಗಜಂಗಮಪೂಜೆ, ಪಂಚಾಚಾರಪಾಲನೆ, ಅಷ್ಟಾವರಣ ಸಾಧನೆ, ಈ ಮುಂತಾದ ಆಚಾರಗಳಿಂದ ವಿಶಿಷ್ಟವಾದ ಷಟ್ಸ್ಥಲಗಳಿಂದ ಲಕ್ಷಿತವಾದ ವೀರಶೈವಸಾಂಪ್ರದಾಯವು ವಚನಶಾಸ್ತ್ರದಲ್ಲಿ ಹೇಳಲ್ಪಟ್ಟಿರುವದು ನಿಜವು. ಆದರೆ ವಚನಶಾಸ್ತ್ರವು ಕೇವಲ ಸಂಪ್ರದಾಯದಿಂದ ಮರ್ಯಾದಿತವಿಲ್ಲ. ಬರೀ ಸಂಪ್ರದಾಯವನ್ನಷ್ಟೆ ಉಸುರಿ ವಚನಕಾರರು ವಿರಮಿಸುವದಿಲ್ಲ. ಅವರ ಉಕ್ತಿಗಳಲ್ಲಿ ಅಖಿಲ ಸಾಂಪ್ರದಾಯಗಳಾಚೆಗಿನ

ತತ್ವಜ್ಞಾನವೂ ಆಚಾರಮರ್ಮವೂ ಅಖಿಲ ಮಾನವಜಾತಿಗೆ ಸಾಮಾನ್ಯವಾಗಲರ್ಹವಾದ ಧರ್ಮವೂ ಸಾಧನಮಾರ್ಗವೂ ಒಡೆದು ಕಾಣುವವು. ಮುಖ್ಯವಾಗಿ ಸಾಂಪ್ರದಾಯಾತೀತವಿರುವ ಆ ರಹಸ್ಯವನ್ನೆ ಹೇಳಲು ಈ ಗ್ರಂಥದ ಎರಡನೆಯ ಭಾಗವು ಯತ್ನಿಸುವದು.

೩. ಸಾಂಪ್ರದಾಯವು ಯಾವಾಗಲೂ ಆಯಾ ಪರಂಪರೆಯಲ್ಲಿ ಹುಟ್ಟಿದವರಿಗೆ ಇಲ್ಲವೆ ಆ ಸಾಂಪ್ರದಾಯದ ದೀಕ್ಷೆ ಪಡೆದವರಿಗೆ ಮಾತ್ರ ಉಪಯುಕ್ತವು. ಆದರೆ ಪ್ರತಿಯೊಂದು ಸಾಂಪ್ರದಾಯದ ತಳಹದಿಯಾಗಿರುವ ತತ್ವಜ್ಞಾನ ಮತ್ತು ನೀತಿ ಇವು, ಅನ್ಯಸಾಂಪ್ರದಾಯದವರಿಗೂ ಜನಸಾಮಾನ್ಯರಿಗೂ ರಂಜಕ, ಬೋಧಕ, ಮತ್ತು ಸಾಧನ ಮಾರ್ಗದಲ್ಲಿ ಸಹಾಯಕವಾದವುಗಳು. ವಚನಶಾಸ್ತ್ರದಲ್ಲಿ, ಅಖಿಲ ಮಾನವಕೋಟಿಗೆ ಸಮ್ಮತವಾಗುವಂಥ ಮತ್ತು ಉಪಯುಕ್ತವಾಗುವಂಥ ಈ ಬಗೆಯ ತತ್ವಜ್ಞಾನವೂ ನೀತಿವಿಚಾರವೂ ಇರುವವು. ಅಂಥ ವಿಷಯಗಳುಳ್ಳ ವಚನಗಳನ್ನು ಆರಿಸಿ, ವರ್ಗೀಕರಿಸಿ, ಈ ಗ್ರಂಥದ ಮೊದಲನೆಯ ಭಾಗದಲ್ಲಿ ಸೇರಿಸಿ, ಅದಕ್ಕೆ 'ವಚನಾಮೃತ' ಎಂಬ ಹೆಸರು ಇಡಲ್ಪಟ್ಟಿದೆ.

೪. ಈ ಗ್ರಂಥದಲ್ಲಿರುವ ಮೇಲೆ ಕಾಣಿಸಿದ ಎರಡು ಭಾಗಗಳು ಒಂದಕ್ಕೊಂದು ಪೋಷಕವೂ ಆಧಾರರೂಪವೂ ಇರುವವು. ಯಾಕಂದರೆ, ವಚನಾಮೃತದಲ್ಲಿ ಅಖಿಲ ವಚನಶಾಸ್ತ್ರದ ಸಾರವಿರುವದು, ವಚನಗಳಲ್ಲಿರುವ ತತ್ವಜ್ಞಾನದ ಮತ್ತು ನೀತಿತತ್ವಗಳ ತಿರುಳು ಅದರಲ್ಲಿ ಅಡಕವಾಗಿರುವದು. ಆ ದೃಷ್ಟಿಯಿಂದಲೆ ಅದರಲ್ಲಿದ್ದ ವಚನಗಳು ಆರಿಸಲ್ಪಟ್ಟಿರುವವು, ಮತ್ತು ಪರಿವಿಡಿಯಿಂದ ಹಚ್ಚಲ್ಪಟ್ಟಿರುವವು. ಎರಡನೆಯ ಭಾಗವು ಮುಖ್ಯತಃ ಆ ವಚನಾಮೃತದಲ್ಲಿಯ ವಿಷಯಗಳನ್ನೆ ತಾತ್ವಿಕ ದೃಷ್ಟಿಯಿಂದ ವಿವೇಚಿಸುವದು, ಮತ್ತು ಅವುಗಳ ಮಹತ್ವವನ್ನು ಗೌರವಿಸುವದು. ಸಂಕ್ಷೇಪದಿಂದ ಹೇಳುವುದಾದರೆ, ಈ ಗ್ರಂಥದ ಮೊದಲನೆಯ ಭಾಗವು ಸೂತ್ರರೂಪವಿದ್ದು ಎರಡನೆಯ ಭಾಗವು ಅದಕ್ಕೆ ಭಾಷ್ಯರೂಪವಾಗಿರುವುದೆಂದರೂ ಸಲ್ಲುವದು. ಇನ್ನು ವಚನಾಮೃತದಲ್ಲಿ ಸಾಂಸ್ಪ್ರದಾಯಿಕ ವಚನಗಳನ್ನು ಅಡಷ್ಟು ಮಟ್ಟಿಗೆ ಬೇಕೆಂದು ಸೇರಿಸಿಲ್ಲ. ಅದು ಸಂಪ್ರದಾಯಾದಿಗಳಿಂದ ಪರಿವೀತವಾಗದೆ ಕರ್ನಾಟಕದಲ್ಲಿ ಸರ್ವರಿಗೂ ಸಮವಾಗಿ ಪ್ರಬೋಧಕವೂ ಉಪಯುಕ್ತವೂ ಆಗಬೇಕೆಂಬುದೆ ಹೀಗೆ ಮಾಡುವ ಮುಖ್ಯ ಉದ್ದೇಶವು. ಯಾವದೊಂದು ಗ್ರಂಥವು ಸಂಪ್ರದಾಯಿಕವೆಂದ ಕೂಡಲೆ ಅದನ್ನು ಅನ್ಯ ಮತದವರು ಸಹಸಾ ಕೈಯಲ್ಲಿ ಸಹ ತೆಗೆದು

ಕೊಳ್ಳುವದಿಲ್ಲ! ಹಾಗಾಗಬಾರದು ಮತ್ತು ನಿಜವಾಗಿ ಸಂಪ್ರದಾಯಾತೀತವಿರುವ ವಚನಶಾಸ್ತ್ರದ ತಿರುಳು ಎಲ್ಲರಿಗೂ ಅರಿಕೆಯಾಗಬೇಕು, ಎಂದು ವಚನಗಳನ್ನು ಈ ಪದ್ಧತಿಯಿಂದ ಅರಿಸಿದೆ. ಆದರೆ ವಚನಶಾಸ್ತ್ರದ ಸಂಪೂರ್ಣ ಸ್ವರೂಪವು ಮತ್ತು ಅದರ ಐತಿಹಾಸಿಕ ಭೂಮಿಕೆಯು ವಾಚಕರಿಗೆ ತಿಳಿಯಬೇಕೆಂದು ಎರಡನೆಯ ಭಾಗದ ಒಂದು ಪ್ರಕರಣದಲ್ಲಿ ಷಟ್‌ಸ್ಥಲಶಾಸ್ತ್ರದ ಪೂರ್ಣ ವಿವೇಚನೆಯು ಮಾಡಲ್ಪಟ್ಟಿದೆ. ಹಾಗೂ ಮೊದಲನೆಯ ಭಾಗದಲ್ಲಿ ಷಟ್‌ಸ್ಥಲಸಾಂಪ್ರದಾಯದ ಬಗ್ಗೆ ಇರುವ ಮುಖ್ಯವಚನಗಳು ಉದಾಹರಿಸಲ್ಪಟ್ಟಿವೆ. ಈ ರೀತಿ, ಈ ಗ್ರಂಥದ ಎರಡೂ ಭಾಗಗಳು ಅನ್ಯೋನ್ಯಪೂರಕವಿದ್ದು ಇಡೀ ಕನ್ನಡ ಜನಾಂಗಕ್ಕೆ ವಚನಶಾಸ್ತ್ರರಹಸ್ಯವನ್ನು ತಿಳಿಸಿ, ಅವರಿಗೆ ದಿವ್ಯವಾದ ಸರ್ವಾರ್ಪಣವೆಂಬ ಸಾಧನಪಥವನ್ನು ತೋರಿಸಲು ಹವಣಿಸುತ್ತಿರುವವು.

೫. ಇನ್ನು 'ವಚನಶಾಸ್ತ್ರ'ವೆಂದರೇನು? ಇದನ್ನು ನೋಡುವಾ. ಮೂಲದಲ್ಲಿ, ವಚನ ಎಂದರೆ ನುಡಿ, ಮಾತು, ಅಥವಾ ಹೇಳಿಕೆ. ಸಾಹಿತ್ಯದಲ್ಲಿ, ಜಂಪೂಗ್ರಂಥಗಳಲ್ಲಿ ಉಪಯೋಗಿಸಿದ ಸಣ್ಣ ದೊಡ್ಡ ಗದ್ಯಭಾಗಗಳಿಗೆ ವಚನ ಎಂದೆನ್ನುವದುಂಟು. ಆ ಭಾಗಗಳು ಯಾರೊಬ್ಬರ ನುಡಿ ಅಥವಾ ಮಾತುಗಳಿರಬೇಕು, ಎಂಬ ನಿರ್ಬಂಧವಿಲ್ಲ. ಅವು ವರ್ಣನಾತ್ಮಕವೇ ಇರಲಿ, ಕಥನಾತ್ಮಕವೇ ಇರಲಿ, ಎರಡು ಪದ್ಯಗಳ ಸಂಬಂಧವನ್ನು ಜೋಡಿಸಲು ಉಪಯೋಗಿಸಿದ ಒಂದರ್ಥ ವಾಕ್ಯ ಇಲ್ಲವೆ ವಾಕ್ಯಶೇಷಗಳೆ ಇರಲಿ, ಆ ಎಲ್ಲ ಗದ್ಯಭಾಗಗಳು 'ವಚನ'ಗಳಿಂದೆ ಕರೆಯಲ್ಪಡುತ್ತಿರುವವು. ಹೀಗೆ ಗದ್ಯಕ್ಕೆ ವಚನವೆನ್ನುವ ರೂಢಿಯು ಬಹಳ ಪುರಾತನವಿರಲಿಕ್ಕೆಬೇಕು. ಯಾಕಂದರೆ ಪಂಪ.ರನ್ನಾದಿ ಮಹಾಕವಿಗಳ ಜಂಪೂಗ್ರಂಥಗಳಲ್ಲಿ ಇರುವ ಗದ್ಯಭಾಗಗಳಿಗೆ ಕೂಡ 'ವಚನ' ಎಂಬ ಹೆಸರೇ ಇರುವದು. ಈ ರೂಢಿಯ ಮೂಲಕ ಮುಂದೆ ಎಲ್ಲ ಗದ್ಯರಚನೆಗೂ 'ವಚನ' ಎಂಬ ಹೆಸರು ಬಂದಿರಬಹುದು. ಪ್ರಸ್ತುತ, ವೀರಶೈವ ಸಾಧುಸಜ್ಜನರು ಗದ್ಯದಲ್ಲಿ ನುಡಿದ ಅಥವಾ ಬರೆದ ತತ್ವಪ್ರತಿಪಾದಕ ಅಥವಾ ಧರ್ಮಪ್ರಚಾರಕ ಅಥವಾ ಪ್ರಾಸಂಗಿಕ ಪ್ರಾಸಾದಿಕ ಮಾತುಗಳಿಗೆ ವಚನವೆಂದು ಅನ್ನುವರು.

೬. ಇದುವರೆಗೆ ಅನೇಕ ವೀರಶೈವ ಮಹಾಪುರುಷರು ಮತ್ತು ಸಾಧ್ವಿಗಳು ವಚನಗಳನ್ನು ರಚಿಸಿರುವರು. ಅವರಿಗೆ ಶಿವಶರಣರು ಮತ್ತು ಶಿವಶರಣೆಯರು ಎಂಬ ಹೆಸರು ರೂಢವಿರುವದು. ಒಟ್ಟಿಗೆ ನೂರೆಂಟು ಕೋಟಿ ವಚನಗಳಿರುವವೆಂಬ ಐತಿಹ್ಯವಿರುವದು. ೧೮೫೧೨೦೦೦ ವಚನ

ಗಳಿರುವವೆಂದು ಸಿದ್ಧರಾಮೇಶ್ವರನು ಒಂದು ವಚನದಲ್ಲಿ ಹೇಳಿರುವನು! ವಿಷ್ಣುಭಕ್ತರಾದ 'ದಾಸರು' ರಚಿಸಿದ ಪದಗಳಾದರೂ ಕೋಟ್ಯನುಕೋಟಿ ಇರುವವೆಂದು ಜನರ ನಂಬಿಕೆ ಇರುವದು. ಲೆಕ್ಕವಿಲ್ಲದಷ್ಟು ಗ್ರಂಥರಚನೆಯಾಗಿರುವದು, ಎಂಬುದೆ ಈ ಬಗೆಯ ಐತಿಹ್ಯಗಳ ಇಲ್ಲವೆ ನಂಬುಗೆಗಳ ಅರ್ಥವು. ಈ ಎಲ್ಲ ವಚನಸಂಗ್ರಹವು ಕೂಡಿ 'ವಚನಶಾಸ್ತ್ರ' ಎನಿಸುವದು. ವೀರಶೈವ ಧರ್ಮತತ್ವವನ್ನು ಮತ್ತು ವೀರಶೈವ ಧರ್ಮಾಚಾರವನ್ನು ಶಿವಶರಣರು ಯಾವ ವಚನಗಳಲ್ಲಿ ಪ್ರತಿಪಾದಿಸಿರುವರೋ ಅದೆಲ್ಲ ವಚನ ಶಾಸ್ತ್ರವು. ವೇದಾಗಮಗ್ರಂಥಗಳಲ್ಲಿ ಹೇಳಲ್ಪಟ್ಟ ತತ್ವಗಳನ್ನು ತಮ್ಮ ಅಂತರಾತ್ಮನ ಪದಿಯಚ್ಚಿನಲ್ಲಿ ಒತ್ತಿ, ಅವುಗಳಿಗೆ ಒಂದು ವಿಶಿಷ್ಟರೂಪವನ್ನು ಕೊಟ್ಟು, ತಿಳಿಗನ್ನಡದ ಉಡುಪನ್ನು ತೊಡಿಸಿ, ಪಂಡಿತ ಪಾಮರರಿಗೆ ಮನೋಹರ ಮತ್ತು ಮನದಟ್ಟಾಗುವಂತೆ ಶಿವಶರಣರು ಈ ವಚನಶಾಸ್ತ್ರವನ್ನು ರಚಿಸಿದ್ದಾರೆ. ವೇದ, ಉಪನಿಷತ್ತು ಮತ್ತು ಆಗಮಾದಿಗಳಲ್ಲಿ ಉಕ್ತವಾದ ಅಬಾಧಿತ, ಸನಾತನ, ಉದಾತ್ತವಿಚಾರಗಳೆ ಈ ಶಾಸ್ತ್ರಕ್ಕೆ ಆಧಾರಭೂತವಾದವುಗಳು, ನಿರ್ಮಲಾಂತಃಕರಣಿಗಳಾದ ಅನನ್ಯಭಕ್ತರ ಆತ್ಮಾನುಭಾವವೆ ಇದರ ಬರೆಗಲ್ಲು, ಸರ್ವಜನಸುಲಭವಾಗುವಂತೆ ಶರಣರು ಇದನ್ನು ಮೂರ್ತಿಸಿದ್ದೆ ಇದರ ರೂಪವು, ಮತ್ತು ಸರಲ, ಸ್ಫೂರ್ತ, ಕನ್ನಡನುಡಿಯೆ ಇದರ ಬಾಹ್ಯವೇಷವು. ಮೋಕ್ಷವು ವೇದಾಗಮಗಳ ಗುರಿ ಇರುವಂತೆ ವಚನಶಾಸ್ತ್ರದ ಗುರಿಯಾದರೂ ಇರುವದು. ಆ ಗುರಿಯನ್ನು ಸಾಧಿಸುವದಕ್ಕಾಗಿ ವೇದಾದಿ ಗ್ರಂಥಗಳು ವಿವಿಧ ಮಾರ್ಗಗಳನ್ನು ಹೇಳಿರುವಂತೆ ವಚನಶಾಸ್ತ್ರವು 'ಶರಣಮಾರ್ಗ'ವೆಂಬ ಒಂದೇ ಒಂದು ರಾಯಬೀದಿಯನ್ನು ಕಟ್ಟಿರುವದು. ಈ ರೀತಿ ವೇದಾಂತದಂತೆ ವಚನಶಾಸ್ತ್ರವೂ ಮೋಕ್ಷಶಾಸ್ತ್ರ ಅಥವಾ ಅಧ್ಯಾತ್ಮಶಾಸ್ತ್ರ ಎನಿಸುವದು.

೭. ಈ ಬಗೆಯಿಂದ ಕಂಗೊಳಿಸುವ ವಚನಶಾಸ್ತ್ರದ ರಹಸ್ಯವನ್ನು ಒಡನುಡಿಯಲು ಈ ಗ್ರಂಥವು ಉದ್ಯುಕ್ತವಾಗಿರುವದು. ಹೀಗೆ ಮಾಡುವಾಗ, ವೀರಶೈವರಿಗೆ ಮಾತ್ರ ವಿಶೇಷ ಉಪಯುಕ್ತವಾದ ಸಾಂಪ್ರದಾಯಿಕ ಭಾಗದ ಕಡೆಗೆ ಬಹಳ ಲಕ್ಷ್ಯಗೊಡದೆ ಸರ್ವ ಧರ್ಮದವರಿಗೂ ಜನ ಸಾಮಾನ್ಯರಿಗೂ ತಮ್ಮ ತಮ್ಮ ಸಾಧನಮಾರ್ಗದಲ್ಲಿ ಸಹಾಯಕವಾಗುವಂಥ ವಿಷಯವನ್ನೆ ಹೆಚ್ಚು ಒತ್ತಿ ಹೇಳಲು ಈ ಗ್ರಂಥವು ಪ್ರಯತ್ನಪಟ್ಟಿರುವದು. ಹೀಗಿರುವುದರಿಂದ. ತಮ್ಮ ಧರ್ಮದ ಮೂಲತತ್ವಗಳನ್ನು

ಜನ್ಮಾಗಿ ತಿಳಿದುಕೊಳ್ಳಲಿಕ್ಕೆ ಈ ಗ್ರಂಥವು ವೀರಶೈವರಿಗೆ ಅನುಕೂಲ ಮಾಡಿಕೊಡುವುದಲ್ಲದೆ, ಅನ್ಯರಿಗೆ ಈ ಶಾಸ್ತ್ರದಲ್ಲಿರುವ ಗೂಢವಿಷಯವನ್ನು ಸಾಂಪ್ರದಾಯಕವಲ್ಲದ ಸಾಮಾನ್ಯ ಭಾಷೆಯಲ್ಲಿ ಸ್ಪಷ್ಟಗೊಳಿಸುವದು. 'ರಹಸ್ಯ' ಅಂದರೆ ಯಾವದೇ ವಿಷಯದ ಗೌಪ್ಯ ಅಥವಾ ಗುಟ್ಟು. ವಚನ ಶಾಸ್ತ್ರರಹಸ್ಯವೆಂದರೆ ವಚನಶಾಸ್ತ್ರದಲ್ಲಿಯ ತಿರುಳು, ಒಳಗುಟ್ಟು, ಅದರಲ್ಲಿಯ ಸಾರಸರ್ವಸ್ವ. ಕಳೆದ ಸುಮಾರು ಒಂದು ಸಾವಿರ ವರ್ಷಗಳಲ್ಲಿ ನೂರಾರು ವಚನಕಾರ–ವಚನಕಾರ್ತಿಯರು ವಿವಿಧಪ್ರಸಂಗಗಳಲ್ಲಿ ಸ್ಫೂರ್ತಿಯಿಂದ ಉಸುರಿದ ಮತ್ತು ಮಹಾಸಾಗರದಂತೆ ಇರುವ ಸಾವಿರಾರು ವಚನಗಳನ್ನು ಕಡೆದು ತೆಗೆದ ಬೆಣ್ಣೆಯೆ ವಚನಶಾಸ್ತ್ರರಹಸ್ಯ, ಎಂಬ ಹೆಸರು ಪಡೆಯಲಿಕ್ಕೆ ಯೋಗ್ಯವು. ವಚನವಾಙ್ಮಯದಲ್ಲಿ ಅಲ್ಲಲ್ಲಿ ಹುದುಗಿರುವ ತಿರುವ ತತ್ವಗಳ ಸಾರಗರ್ಭವನ್ನು ಶೋಧಿಸಿ, ಪರಿಶೀಲಿಸಿ, ಸಮನ್ವಯಿಸಿ, ಕೇಂದ್ರೀಕರಿಸಿ ಅದನ್ನು ಸುಲಭರೀತಿಯಿಂದ ವಿವರಿಸಲೆತ್ನಿಸುವುದೆ ಈ ಗ್ರಂಥದ ಮುಖ್ಯ ಉದ್ದೇಶವು. ಈ ಉದ್ದೇಶವನ್ನು ಸಫಲಗೊಳಿಸುವುದಕ್ಕಾಗಿ ವಚನಶಾಸ್ತ್ರದ ಮಹತ್ವ, ಆ ಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಟ್ಟ ಶಿವಾದ್ವೈತ ವಿಶಿಷ್ಟ ನಿಜಧರ್ಮದ ಸ್ವರೂಪ, ವಚನಧರ್ಮ, ವಚನವಾಙ್ಮಯದ ವೈಶಿಷ್ಟ್ಯ ಮುಂತಾದ ವಿಕ್ಕ ತತ್ವವಿಚಾರಗಳೊಡನೆ ತುಲನೆ, ಈ ಶಾಸ್ತ್ರದ ಉಗಮ ಮತ್ತು ವಿಕಾಸ ಪ್ರತಿಪಾದನ ಶೈಲಿ, ಷಟ್ಸ್ಥಲಶಾಸ್ತ್ರ ಈ ಎಲ್ಲ ವಿಷಯಗಳ ಸಾಂಗೋಪಾಂಗ ವಿವೇಚನೆಯನ್ನು ಮಾಡುವದು ಅವಶ್ಯಕಂಡಿತು. ಹಾಗೆ ಮಾಡಲು ಈ ಗ್ರಂಥದ ಎರಡನೆಯ ಭಾಗವು ಉತ್ಕಟಪ್ರಯತ್ನವನ್ನು ಮಾಡಿದೆ. ಆ ಯತ್ನವು ಎಷ್ಟರಮಟ್ಟಿಗೆ ಸಫಲವಾಗಿದೆ ಎಂಬುದನ್ನು ವಾಚಕರೇ ಬಲ್ಲರು.

೮. ವಚನಶಾಸ್ತ್ರವನ್ನು ಅಭ್ಯಸಿಸುವಾಗ ಇನ್ನೊಂದು ಕಾರ್ಯವನ್ನು ಮಾಡುವದು ಅತ್ಯಗತ್ಯವೆನಿಸಿತು. ಅದೇನೆಂದರೆ, ಉಪಲಬ್ಧವಿದ್ದ ವಚನಗ್ರಂಥಗಳನ್ನೆಲ್ಲ ಓದಿ ವಚನಶಾಸ್ತ್ರದಲ್ಲಿ ಪ್ರತಿಪಾದಿಸಿದ ತತ್ವವಿಚಾರ ಮತ್ತು ಆಚಾರ ಇವುಗಳನ್ನು ಒಳಗೊಂಡ ಮುಖ್ಯಮುಖ್ಯ ವಚನಗಳನ್ನು ವಿಂಗಡಿಸಿ, ವಿಷಯಾನುಕ್ರಮದಿಂದ ಅವುಗಳನ್ನು ವರ್ಗೀಕರಿಸುವದು. ಈ ಬಗೆಯ ಪ್ರಯತ್ನದ ಫಲವೆ 'ವಚನಾಮೃತ' ಎಂಬ ಹೆಸರನ್ನು ತಳೆದು ಈ ಗ್ರಂಥದ ಮೊದಲನೆಯ ಭಾಗವಾಗಿರುವದು. ವಚನಶಾಸ್ತ್ರದ ತಿರುಳನ್ನು ವಚನಕಾರರ ಭಾಷೆಯಲ್ಲಿಯೆ ನೋಡಬೇಕಾಗಿದ್ದರೆ ಈ ವಚನಾಮೃತವನ್ನು ಓದಬಹುದು. ಮಾಲೆಗಾರ್ತಿಯು ಹೂದೋಟದಲ್ಲಿಯ ಒಳ್ಳೆ ಹೂಗಳನ್ನೆಲ್ಲ ಒತ್ತಟ್ಟಿಗೆ ಅಂದಚಂದದಿಂದ ಕೂಡಿಸಿ ಗುಚ್ಛವನ್ನು ಮಾಡುವಂತೆ ವಚನ

ಕ.ಸಂಸ್ಕೃತಿ ಪುರ

ವಾಙ್ಮಯದಲ್ಲಿಯ ಒಳ್ಳೊಳ್ಳೆ ವಚನಗಳನ್ನು ಆಯ್ದು ವಚನಾಮೃತವು ಸಿದ್ಧಮಾಡಲ್ಪಟ್ಟಿದೆ. ಯಥಾರ್ಥವಾಗಿ ಇದು ವಚನಗಳಲ್ಲಿಯ ಅಮೃತವು, ಇದು ವಚನವೆಂಬ ಹೂವಿನಲ್ಲಿಯ ಸವಿ ಜೇನು. ವಚನಶಾಸ್ತ್ರವು ಮೋಕ್ಷ ಶಾಸ್ತ್ರವಿರುವದು, ಎಂಬ ಮಾತನ್ನು ಮೇಲೆಯೆ ಹೇಳಿದೆ. ಆದುದರಿಂದ ಈ ವಚನಸಾಗರವನ್ನು ಮಥಿಸಿ ತೆಗೆದ ಅಮೃತದಲ್ಲಿ, ಮೋಕ್ಷಶಾಸ್ತ್ರದ ಎಲ್ಲ ಮುಖ್ಯ ಮುಖ್ಯ ವಿಷಯಗಳ ಸಂಬಂಧದಿಂದ ಇರುವ ವಚನಗಳು ಸ್ವಾಭಾವಿಕವಾಗಿಯೆ ಅಡಕವಾಗಿರುವವು. ಜೀವ, ಜಗತ್, ಈಶ್ವರ ಈ ವಸ್ತುಗಳ ಸ್ವರೂಪ, ಮತ್ತು ಪರಸ್ಪರ ಸಂಬಂಧ, ಮೋಕ್ಷ, ಮೋಕ್ಷ ಸಾಧಕವಾದ ಸಾಕ್ಷಾತ್ಕಾರ, ಸಿದ್ಧಿಯ ಸ್ವರೂಪ, ಮೋಕ್ಷಕ್ಕೆ ಅಡ್ಡಬರುವ ಅಜ್ಞಾನ ಅಥವಾ ಕರ್ಮಬಂಧನ, ಮುಕ್ತಿಯ ತೀವ್ರ ಇಚ್ಛೆ, ಸಾಧನ ಮಾರ್ಗ, ಭಕ್ತಿಜ್ಞಾನಕ್ರಿಯಾದಿಗಳ ಸ್ವರೂಪ ಮತ್ತು ಅನ್ಯೋನ್ಯ ಸಂಬಂಧ, ಆಚಾರಧರ್ಮ, ಈ ಎಲ್ಲ ವಿಷಯಗಳನ್ನು ಕುರಿತು ಇರುವ ವಚನಗಳು ವಚನಾಮೃತದಲ್ಲಿ ವ್ಯವಸ್ಥಿತವಾಗಿ ಕ್ರಮದಿಂದ ಸಂಗ್ರಹಿಸಲ್ಪಟ್ಟಿವೆ. ನಿರ್ಮಲ ಮನಸಿನ ಮಗುವಿನ ಮೊಗದಲ್ಲಿ ಅವನ ಭಾವವೆಲ್ಲ ಕಾಣುವಂತೆ, ತಿಳಿಗನ್ನಡಿಯಲ್ಲಿ ವಿಶ್ವವೆಲ್ಲ ಪ್ರತಿಬಿಂಬಿಸುವಂತೆ, ಈ ವಚನಾಮೃತದಲ್ಲಿ ವಚನಸಾರವೆಲ್ಲ ಪ್ರತಿಬಿಂಬಿತವಾಗಿದೆ. ಇಡೀ ವಚನಶಾಸ್ತ್ರದ ತತ್ವಜ್ಞಾನಕ್ಕೆ ಹಿಡಿದ ಕೈಗನ್ನಡಿಯೇ ಇದು, ಎಂದು ಹೇಳಿದರೂ ತಪ್ಪಾಗದು.

೯. ಉಪನಿಷತ್ತು, ಗೀತೆ, ಮುಂತಾದ ಮೋಕ್ಷಶಾಸ್ತ್ರದ ಅದ್ವಿತೀಯ ಗ್ರಂಥಗಳು ಮತ್ತು ಆ ಗ್ರಂಥಗಳಿಂದ ಸ್ಫೂರ್ತವಾದ ಅನೇಕ ಸಂಸ್ಕೃತ ಕನ್ನಡ ವೇದಾಂತ ಗ್ರಂಥಗಳು ಉಪಲಬ್ಧವಿರಲು ಈ ವಚನಶಾಸ್ತ್ರ ರಹಸ್ಯವೆಂಬ ಬೇರೆ ಗ್ರಂಥವನ್ನು ಬರೆಯುವ ಪ್ರಯೋಜನವೇನು ? ಎಂದು ಹಲವರು ಕೇಳಬಹುದು. ಪ್ರಶ್ನೆಯು ಯೋಗ್ಯವೇ ಇದೆ. ಇದಕ್ಕೆ ಯೋಗ್ಯವಾದ ಉತ್ತರವನ್ನು ಕೊಡುವದು ಅವಶ್ಯವು. ಇನ್ನು ಸಂಸ್ಕೃತದಲ್ಲಿ ಎಷ್ಟೋ ಅಧ್ಯಾತ್ಮಿಕ ಗ್ರಂಥಗಳಿದ್ದರೂ ಕನ್ನಡದಲ್ಲಿ ಆ ವಿಷಯವನ್ನು ಕುರಿತು ಬರೆಯುವ ಅವಶ್ಯಕತೆಯು ಎಂದೂ ಹಿಂಗಲರಿಯದು. ಸಂಸ್ಕೃತ ತಿಳಿಯುವ ಜನರ ಪ್ರಮಾಣವು ಯಾವಾಗಲೂ ತೀರ ಕಡಿಮೆಯೆ. ಇತ್ತೀಚೆಗಂತೂ ಸಂಸ್ಕೃತ ಅಭ್ಯಾಸದ ಕಡೆಗೆ ಹೆಚ್ಚೆಚ್ಚು ದುರ್ಲಕ್ಷವಾಗುತ್ತ ನಡೆದಿದೆ. ಹೀಗಿರುವುದರಿಂದ, ಕನ್ನಡದಲ್ಲಿಯೆ ಹೆಚ್ಚು ಹಾಗೂ ವಿಶೇಷ ಒಳ್ಳೆಯ ಮತ್ತು ಗಂಭೀರಗ್ರಂಥಗಳು ಹೊರಡುವದು ದಿನದಿನಕ್ಕೆ ಅವಶ್ಯವಾಗುತ್ತಿರುವದು. ವಿಶೇಷತಃ ಕನ್ನಡದಲ್ಲಿರುವ ಮೌಲಿಕ, ಮಹತ್ವದ

ಗ್ರಂಥಗಳ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡುವದು ಆಗತ್ಯವು. ಕನ್ನಡದಲ್ಲಿ ವಚನಗಳೆಂದರೆ ಆ ಬಗೆಯ ಶ್ರೇಷ್ಠ, ಅನುಪಮ, ಅಧ್ಯಾತ್ಮಿಕ ಸಾಹಿತ್ಯವೆಂದು ಹೇಳಬಹುದು. ಅಥವಾ ಬರಿಯ ನಮ್ಮ ಸಾಹಿತ್ಯದಲ್ಲಿಯೆ ಏಕೆ, ನಮ್ಮ ನೆರೆಹೊರೆಯ ಪ್ರಾಂತಗಳಲ್ಲಿ ಕೂಡ ಈ ಬಗೆಯ ವಾಙ್ಮಯವು ಕಂಡುಬರುವುದಿಲ್ಲ. ಅದರ ವಿಸ್ತಾರವಾದರೂ ದೊಡ್ಡದಿರುವದು. ವಚನಗಳನ್ನು ಪರಿಶೋಧಿಸಿ ಅವುಗಳನ್ನು ಅಚ್ಚುಹಾಕಿಸುವ ಕಾರ್ಯವು ಇತ್ತೀಚೆಗೆ ಪ್ರಾರಂಭವಾಗಿರುವುದರಿಂದ ಈ ವಾಙ್ಮಯದ ಎಷ್ಟೋ ಭಾಗವು ಇನ್ನೂ ಸುಪ್ತ ಅಥವಾ ಗುಪ್ತ ಸ್ಥಿತಿಯಲ್ಲಿಯೆ ಇರುವದು. ಕನ್ನಡಿಗರು ಇಷ್ಟರವರೆಗೆ ಅದನ್ನು ಉಪೇಕ್ಷಿಸುತ್ತ ಬಂದಂತೆ ಮುಂದಾದರೂ ಉಪೇಕ್ಷಿಸಿದರೆ ಅದು ಇದ್ದಲ್ಲಿಯೆ ಲುಪ್ತವಾಗಿ ಹೋಗುವದು. ಈಗ ನಡೆದ ಆ ವಾಙ್ಮಯದ ಆವಿಷ್ಕಾರ-ಪರಿಷ್ಕಾರಗಳೂ ಅದಕ್ಕೆ ಸಿಕ್ಕುತ್ತಿರುವ ಮಾನ್ಯತೆಯೂ ಕರ್ನಾಟಕದ ಅಭಿನವಜಾಗ್ರತಿಯ ಸ್ಪಷ್ಟ ಶುಭಚಿಹ್ನಗಳೆ ಎಂದು ಹೇಳಬಹುದು.

೧೦. ವಚನವಾಙ್ಮಯವನ್ನು ಆಳವಾಗಿ ಅಭ್ಯಸಿಸದ ಹೊರತು ಅದರ ಯಥಾರ್ಥ ಮಹತ್ವವು ತಿಳಿಯುವದು ಕಠಿಣ. ಸಂಸ್ಕೃತದಲ್ಲಿ ಅಧ್ಯಾತ್ಮಶಾಸ್ತ್ರಕ್ಕೆ ತಳಪದಿಯಂತಿರುವ ಉಪನಿಷತ್ತುಗಳು ಆ ವಾಙ್ಮಯದಲ್ಲಿ ಯಾವ ಉಚ್ಚತಮ ಸ್ಥಾನವನ್ನು ಪಡೆದಿರುವವೊ ಅದೇ ಬಗೆಯ ಸ್ಥಾನವನ್ನು ಕನ್ನಡವಾಙ್ಮಯದಲ್ಲಿ ಪಡೆಯುವ ಯೋಗ್ಯತೆಯು ವಚನಶಾಸ್ತ್ರದಲ್ಲಿರುವದು ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಇನ್ನು ಇಂಥ ವಾಙ್ಮಯವನ್ನು ಇದ್ದಕ್ಕಿದ್ದ ಹಾಗೆ ಪ್ರಸಿದ್ಧಿಸುವದೂ ಒಂದು ಮೊಟ್ಟಮೊದಲಿನ ಮತ್ತು ದೊಡ್ಡ ಕಾರ್ಯವೆ ಸೈ. ಆದರೆ ಅಷ್ಟರಿಂದ ಕನ್ನಡಿಗರ ಕರ್ತವ್ಯವು ಮುಗಿಯಿತು ಎಂದು ತಿಳಿಯಕೂಡದು. ವಚನವಾಙ್ಮಯವು ಅತಿಶಯ ವಿಸ್ತಾರವುಳ್ಳದ್ದು. ಅದು ಇನ್ನೂ ಕೆಲಮಟ್ಟಿಗೆ ವಿಸ್ಖಲಿತ ಸ್ಥಿತಿಯಲ್ಲಿಯೆ ಇರುವದು. ಮೊದಲು ಕಂಡೊಡನೆ ಅದು ಕೇವಲ ಸಾಂಪ್ರದಾಯಿಕವೆಂದೆ ತೋರಿಬರುವದು. ಆದರೆ ಅದು ಹಾಗೆ ಇಲ್ಲ, ಎಳ್ಳಿಬುದನ್ನು ತಿಳಿದು ನೋಡಿ, ಅದರಲ್ಲಿರುವ ಅತ್ಯುದಾತ್ತವಾದ ಮೂಲಭೂತ ಆಧ್ಯಾತ್ಮಿಕ ತತ್ವಗಳನ್ನೂ ಸುಲಭ ಸಾಧನಮಾರ್ಗವನ್ನೂ ಸರ್ವಜನರಿಗೆ ತಿಳಿಸುದಿಯಿಂದ ತಿಳಿಸಿ ಕೊಟ್ಟಾಗ, ಇಂಥ ಮಹತ್ವದ ವಚನಗಳನ್ನು ನಾವು ಎಷ್ಟು ಅಭ್ಯಸಿಸಿದರೂ ಅವುಗಳ ತಿರುಳನ್ನು ತೆಗೆಯಲು ಎಷ್ಟು ಯತ್ನಿಸಿದರೂ ಅವುಗಳ ರಹಸ್ಯವನ್ನು ಶೋಧಿಸಲು ಎಷ್ಟು ಹೆಣಗಿದರೂ ಸಾಲದು. ಯಾಕಂದರೆ, ಆ

ತಿಳಿವಳಿಕೆಯಂತೆ ನಡೆಯುವ ಮಹತ್ಕಾರ್ಯವು ಮುಂದೆ ಮತ್ತೆ ಉಳಿದು ಉಳಿಯುತ್ತದೆ. ಆದರೆ ಶ್ರೇಷ್ಠವಾದ ಶರಣಮಾರ್ಗವನ್ನು ತಿಳಿದುಕೊಳ್ಳುವ ಯತ್ನಮಾಡುವದು ಇದು ಮೊದಲನೆಯ ಕಾರ್ಯವು. ಆ ಕಾರ್ಯದಲ್ಲಿ ಈ ಗ್ರಂಥರಚನೆಯೆಂಬುದೊಂದು ನಮ್ಮ ಪ್ರಯತ್ನವು.

೧೧. ವಚನಶಾಸ್ತ್ರರಹಸ್ಯದ ಸಾಮಾನ್ಯಸ್ವರೂಪವೂ ಈ ಗ್ರಂಥದ ರೂಪರೇಖೆಯೂ ಅದನ್ನು ರಚಿಸುವ ಪ್ರಯೋಜನವೂ ಇದುವರೆಗೆ ಹೇಳಲ್ಪಟ್ಟವು. ಇನ್ನು ಈ ಗ್ರಂಥದ ಮರ್ಯಾದೆಯನ್ನು ಹೇಳಿದಬಳಿಕ ಪೀಠಿಕಾ ಪ್ರಕರಣದ ಕಾರ್ಯವು ಮುಗಿದಂತಾಗುವದು. ವಚನವಾಙ್ಮಯದಂಥ ವಿಸ್ತೃತವಾದ ಮಹತ್ವದ ವಾಙ್ಮಯವಿಶೇಷವನ್ನು ಅನೇಕ ರೀತಿಯಿಂದ ಮತ್ತು ವಿವಿಧದೃಷ್ಟಿಯಿಂದ ಅಭ್ಯಸಿಸುವ ಮತ್ತು ಎಲ್ಲ ದೃಷ್ಟಿಯಿಂದ ಪರಿಶೋಧಿಸುವ ಸಾಮರ್ಥ್ಯ ಮತ್ತು ಅನುಕೂಲತೆಗಳು ಸದ್ಯಕ್ಕೆ ಪ್ರಸ್ತುತ ಗ್ರಂಥಕರ್ತನಿಗೆ ಇಲ್ಲ. ಆದುದರಿಂದ ಈ ಗ್ರಂಥವನ್ನು ರಚಿಸುವಾಗ ತನ್ನ ಪ್ರಯತ್ನಕ್ಕೆ ಅವನು ಕೆಲವು ಮರ್ಯಾದೆಗಳನ್ನು ಕಲ್ಪಿಸಿಕೊಂಡು ತದನುಗುಣವಾಗಿ ಈ ಪುಸ್ತಕವನ್ನು ಬರೆದಿರುವನು. ಅರ್ಥಾತ್ ಇನ್ನೂ ಅನೇಕ ವಿಧದಿಂದ ಈ ವಾಙ್ಮಯವನ್ನು ಪರಿಶೋಧಿಸುವ ಕಾರ್ಯವು ಹಾಗೆಯೆ ಉಳಿದಿದೆ ಎಂದೆನ್ನಬಹುದು. ಈ ಲೇಖಕನು, ಮುಖ್ಯತಃ ವಚನಕಾರರ ಉಪದೇಶದ ತಿರುಳೇನಿರುವದು, ಎಂಬುದನ್ನು ಅಧ್ಯಾತ್ಮಮಾರ್ಗದಲ್ಲಿಯ ಸಾಧಕನ ದೃಷ್ಟಿಯಿಂದ ಅಭ್ಯಸಿಸಿ ಅದನ್ನು ಈ ಗ್ರಂಥದಲ್ಲಿ ಪ್ರಕಟಿಸಲು ಯತ್ನಿಸಿರುವನು. ಹೀಗೆ ಮಾಡುವಾಗ ಮಿಕ್ಕ ವಿಷಯಗಳ ಸಂಬಂಧದಿಂದಲೂ ಹಲಕೆಲವು ಮಾತುಗಳನ್ನು ಅವನು ವಿಚಾರಿಸಿರುವನು. ಆದರೆ ಅವೆಲ್ಲ ಅವನು ಗುರಿಯಿಟ್ಟು ನೋಡಿದ ಅಥವಾ ಬೆರಳಿಟ್ಟು ಹೇಳಿದ ಮಾತುಗಳಲ್ಲ. ಅವನ ಮುಖ್ಯ ಗುರಿ ಎಂದರೆ, ವಚನಕಾರರ ತತ್ವಜ್ಞಾನ, ಅತ್ಯಂತಿಕ ಶ್ರೇಷ್ಠಸ್ಥಿತಿಯ ಅವರ ಕಲ್ಪನೆ, ಅವನ್ನು ಪಡೆಯಲು ಅವರು ಹೇಳಿದ ಸಾಧನಮಾರ್ಗ, ಅವರುಸುರಿದ ಆಚಾರನಿಯಮಗಳು, ಇವುಗಳನ್ನೆಲ್ಲ ತಿಳಿದುಕೊಂಡು ಸಂಪ್ರದಾಯರಹಿತವಾದ ಸಾಮಾನ್ಯ ಆಧ್ಯಾತ್ಮಿಕ ಪರಿಭಾಷೆಯಲ್ಲಿ ಅದನ್ನು ಕನ್ನಡಿಗರಿಗೆ ಅರುಹುವದು. ವಚನಗಳೆಂದರೆ ಕೇವಲ ವೀರಶೈವ ಸಂಪ್ರದಾಯದವರಿಗೆ ಮಾತ್ರ ಸಂಬಂಧಿಸಿದವುಗಳು, ಅವುಗಳನ್ನು ಅನ್ಯಮತದವರು ಓದಿದರೆ ಲಾಭವಿಲ್ಲ ಎಂಬ ತಪ್ಪುತಿಳಿವಳಿಕೆಯನ್ನು ಹೋಗಲಾಡಿಸಿ, ಇವು ಅನೇಕ ಕಡೆಗೆ ಕೇವಲ ಸಾಂಪ್ರದಾಯಿಕವಿದ್ದರೂ ಇವುಗಳಲ್ಲಿ ಶುದ್ಧ ಅಧ್ಯಾತ್ಮಜ್ಞಾನವು ಮೊತ್ತಮೊತ್ತವಾಗಿ

ಅಲ್ಲಲ್ಲಿ ಪ್ರಕಾಶಿಸುತ್ತಿರುವದೆಂಬುದನ್ನು ತೋರಿಸಿಕೊಡಲಿಕ್ಕೆ ಗ್ರಂಥಕಾರನು ಯತ್ನಿಸಿದ್ದಾನೆ. ಈ ಗುರಿಗಳನ್ನು ಸಾಧಿಸುವಾಗ ತಾನೊಬ್ಬ ಸಾಮಾನ್ಯಸಾಧಕನೆಂದು ಈ ವಚನಶಾಸ್ತ್ರವನ್ನು ಅವನು ಅಭ್ಯಸಿಸಿರುವನು. ಈ ಗ್ರಂಥವನ್ನು ಓದುವವರು ಮತ್ತು ವಚನಶಾಸ್ತ್ರವನ್ನು ಅಭ್ಯಸಿಸುವವರು ಇದೇ ದೃಷ್ಟಿಯಿಂದ ನೋಡಿದರೆ ಹೆಚ್ಚು ಲಾಭದಾಯಕವೆಂದು ಈ ಗ್ರಂಥಕಾರನ ನಮ್ರ ಅಭಿಪ್ರಾಯವಿರುವದು.

೧೨. ಮೇಲೆ ಹೇಳಿದ ಗುರಿಗಳನ್ನೆ ತನ್ನೆದುರಿಗೆ ಮುಖ್ಯವಾಗಿಟ್ಟುಕೊಂಡದ್ದರಿಂದ ಗ್ರಂಥಕಾರನು ವಚನಶಾಸ್ತ್ರದ ಬೇರೆ ಎಷ್ಟೊ ಮಹತ್ವದ ಅಂಗಗಳ ಕಡೆಗೆ ವಿಶೇಷ ಲಕ್ಷ್ಯಗೊಟ್ಟಿಲ್ಲವೆಂದು ಬೇರೆ ಹೇಳುವ ಅವಶ್ಯಕತೆಯಿಲ್ಲ. ಉದಾಹರಣಾರ್ಥವಾಗಿ, ವಚನಗಳಲ್ಲಿಯ ವೀರಶೈವ ಸಂಪ್ರದಾಯ, ವಚನಶಾಸ್ತ್ರದ ಇತಿಹಾಸ, ವಚನಕಾರರ ಕಾಲ ಮತ್ತು ಚರಿತ್ರೆ, ವಿಶಿಷ್ಟವಚನಕಾರರ ಹೆಚ್ಚುಕಡಿಮೆ ಯೋಗ್ಯತೆ, ಅವರ ಪರಂಪರೆ, ಅನ್ಯಮತೀಯರೊಡನೆ ವಚನಕಾರರ ಸಂಬಂಧ ಮತ್ತು ತುಲನೆ, ಈ ಮುಂತಾದ ವಿಷಯಗಳನ್ನು ಗ್ರಂಥಕಾರನು ವಿಶೇಷ ವಿಚಾರಿಸಿಲ್ಲ. ತಾನೇ ತನ್ನ ವಿಚಾರದಿಂದ ತನಗಾಗಿ ಹಾಕಿಕೊಂಡ ಈ ಮರ್ಯಾದೆಗಳಲ್ಲಿ ಗ್ರಂಥಕರ್ತನು ಯಥಾಶಕ್ತಿ ಪ್ರಯತ್ನಮಾಡಿ ಈ ಗ್ರಂಥವನ್ನು ರಚಿಸಿ ಅದನ್ನು ಕನ್ನಡಿಗರ ಅಂತರಾತ್ಮನೆದುರಿಗೆ ಇಟ್ಟಿದ್ದಾನೆ. ಕನ್ನಡ ಬಾಂಧವರು ಇದರ ಯಥೋಚಿತ ಉಪಯೋಗವನ್ನು ಮಾಡಿಕೊಂಡರೆ ಲೇಖಕನು ಕೃತಾರ್ಥನಾಗುವನು.

---

೨. ವಚನಶಾಸ್ತ್ರವೂ ಅದರ ಮಹತ್ವವೂ

(೧೩) ಶಾಸ್ತ್ರದ ಸ್ವರೂಪ ಮತ್ತು ಅಧ್ಯಾತ್ಮಶಾಸ್ತ್ರ. (೧೪) ವಚನರೂಪದಿಂದ ಬರೆದ ಅಧ್ಯಾತ್ಮಶಾಸ್ತ್ರವೆ ವಚನಶಾಸ್ತ್ರವು. (೧೫) ಮೋಕ್ಷ ಮತ್ತು ಆತ್ಮಜ್ಞಾನ. (೧೬) ಮೋಕ್ಷ ಮತ್ತು ಬಂಧ. ಮುಕ್ತಿಯ ಇಚ್ಛೆಯೆ ಮೋಕ್ಷಶಾಸ್ತ್ರದ ಹುಟ್ಟಿಗೆ ಕಾರಣವು. (೧೭) ಮೋಕ್ಷಶಾಸ್ತ್ರವು ಎಲ್ಲಕ್ಕೂ ಹೆಚ್ಚಿನದು. (೧೮) ನಿತ್ಯಾನಂದ ಮತ್ತು ಅದರ ಸಾಧನ ಇವುಗಳನ್ನು ಹೇಳುವ ಶಾಸ್ತ್ರವೆ ಮೋಕ್ಷಶಾಸ್ತ್ರವು. (೧೯) ಮೋಕ್ಷಶಾಸ್ತ್ರವು

ಭಾರತವರ್ಷದಲ್ಲಿ ಬಹಳ ಪುರಾತನಕಾಲದಲ್ಲಿ ಹುಟ್ಟಿ ಸಂಸ್ಕೃತದಲ್ಲಿ ಬರೆಯಲ್ಪಟ್ಟಿತು. (೨೦) ಅಧ್ಯಾತ್ಮಶಾಸ್ತ್ರದ ಪ್ರಗತಿ, ಸ್ವರ್ಗ ಮತ್ತು ಮೋಕ್ಷ ಇವುಗಳಲ್ಲಿಯ ಭೇದ. (೨೧) ಸಂಸ್ಕೃತ ಮತ್ತು ಇತರ ಪ್ರಾಂತಿಕ ಭಾಷೆಗಳು. (೨೨) ಪ್ರಾಂತಿಕಭಾಷೆಯಲ್ಲಿ ಗ್ರಂಥರಚನೆಯಾದ ಕಾರಣಗಳು. (೨೩) ಸ್ಫೂರ್ತಿಯು ಎಲ್ಲ ಭಾಷೆಗಳಲ್ಲಿ ಅವತರಿಸಬಲ್ಲದು. (೨೪) ವಚನ ಶಾಸ್ತ್ರದ ಪರಂಪರೆ. (೨೫) ವೇದಗ್ರಂಥಗಳ ಉಗಮ, ಮತ್ತು ವೇದೋಪನಿಷತ್ತುಗಳ ಸಂಬಂಧ. (೨೬) ವೇದಗಳು ಕರ್ಮ ಮತ್ತು ಸ್ತುತಿಪ್ರಧಾನ, ಉಪನಿಷತ್ತುಗಳು ಜ್ಞಾನಪ್ರಧಾನ. ಆಗಮಗಳ ಉಗಮ. (೨೭) ಶೈವಾಗಮಗಳು ವಚನಶಾಸ್ತ್ರದ ಆಧಾರ. (೨೮) ವಚನಶಾಸ್ತ್ರವೆಂದರೆ ಕನ್ನಡ ಶೈವಾಗಮಗಳು. (೨೯) ವೈಷ್ಣವ, ಶೈವ, ಶಾಕ್ತ ಪಂಥಗಳು. ವಚನ ಶಾಸ್ತ್ರದ ಹುಟ್ಟು. (೩೦) ವಚನಶಾಸ್ತ್ರದ ಹುಟ್ಟಿನ ಕಾರಣಗಳು ಮತ್ತು ಅದರ ಉದ್ದೇಶ. (೩೧) ವಚನಶಾಸ್ತ್ರದ ಪರಂಪರೆಯ ಬಗ್ಗೆ ಶ್ರೀ. ಹಳಕಟ್ಟಿಯವರ ಮತ. (೩೨) ಪುರಾತನರು. (೩೩) ಶಿವಶರಣರ ವಚನ ಮತ್ತು ಸಂಗ ಇವುಗಳ ಮಹಾತ್ಮ್ಯ. (೩೪) ವಚನಶಾಸ್ತ್ರ, ಅದರ ಪರಂಪರೆ ಮತ್ತು ಅನುಭಾವ. (೩೫) ವಚನಗಳಲ್ಲಿಯ ವಿಲಕ್ಷಣವಾದ ಏಕಸೂತ್ರತೆಯು. (೩೬) ಧರ್ಮಜಾಗ್ರತಿಯೆ ಶಿವಶರಣರ ವಚನಗಳ ಮೂಲ ಉದ್ದೇಶವು. (೩೭) ವಚನಕಾರರು ಸಾಕ್ಷಾತ್ಕಾರವಾದಿಗಳು. ಅವರ ವಚನಗಳಿಂದಾದ ಕಾರ್ಯವು. (೩೮) ವಚನಗಳ ಕಾಲವು, ಅವುಗಳ ಬರಹ, ಅವುಗಳಲ್ಲಿ ಆಗಿರಬಹುದಾದ ಮಾರ್ಪಾಡುಗಳು. (೩೯) ವಚನಸಂಗ್ರಹವೆ ವಚನಶಾಸ್ತ್ರವಾಯಿತು. (೪೦) ವಚನ ಶೈಲಿಯ ಪ್ರಾಥಮಿಕ. (೪೧) ವಚನಶಾಸ್ತ್ರವು ಅನುಭಾವಸಿದ್ಧವು ಮತ್ತು ಆಧಾರಸಹಿತವು. (೪೨) ಕಲಾಸ್ಫೂರ್ತಿ ಮತ್ತು ಧರ್ಮಸ್ಫೂರ್ತಿ. (೪೩) ವಚನಶಾಸ್ತ್ರವು ಕೇವಲ ಸಾಂಪ್ರದಾಯಿಕವಲ್ಲ. (೪೪) ಅದು ಅತ್ಯಂತ ಮಹತ್ವದ ವಾಙ್ಮಯವು.

೧೩. ಸಾಮಾನ್ಯತಃ ಯಾವದೇ ವಸ್ತುವಿನ ಗುಣಧರ್ಮಗಳ ಅಥವಾ ಸ್ವಭಾವನಿಯಮಗಳ ವ್ಯವಸ್ಥಿತ ಮತ್ತು ಪೂರ್ಣ ವಿವೇಚನೆಯೆ ಆಯಾ ವಸ್ತುವಿನ ಶಾಸ್ತ್ರವೆನಿಸುವದು. ಶರೀರಶಾಸ್ತ್ರವೆಂದರೆ ಶರೀರದ ಉತ್ಪತ್ತಿಸ್ಥಿತಿಲಯ, ಅದರ ರಚನೆ, ಅದರ ಘಟಕಗಳ ವಿವರ, ಅದರ ಆರೋಗ್ಯ ಅನಾರೋಗ್ಯ ಇತ್ಯಾದಿಗಳ ವ್ಯವಸ್ಥಿತ ವಿವೇಚನೆಯು. ಮಾನಸ ಶಾಸ್ತ್ರವೆಂದರೆ ಮನಸಿನ ಗುಣಧರ್ಮಗಳ, ಮನಸಿನ ಘಟಕಗಳಾದ

ಅಹಂಕಾರ, ಸ್ಮರಣಶಕ್ತಿ, ಬುದ್ಧಿಶಕ್ತಿ, ಭಾವನಾಶಕ್ತಿ, ಸಂಕಲ್ಪಶಕ್ತಿ, ಮುಂತಾದವುಗಳ, ಜಾಗೃತ್ ಸ್ವಪ್ನ ಸುಷುಪ್ತಿ ಮತ್ತು ಸಮಾಧಿ ಅವಸ್ಥೆಗಳ ವ್ಯವಸ್ಥಿತ ವಿವೇಚನೆಯು. ಅದೇರೀತಿ ಆತ್ಮನ ಮೂಲಸ್ವರೂಪ, ಸ್ವಭಾವ, ಅಜ್ಞಾನಮೂಲಕ ಅವನ ಬಂಧನ, ಜ್ಞಾನದಿಂದ ಅವನ ಮುಕ್ತಿ, ಮುಕ್ತಿಪಡೆಯುವ ಸಾಧನಮಾರ್ಗ ಈ ಸಂಬಂಧದ ಅನುಭವಪೂರ್ಣ ವ್ಯವಸ್ಥಿತ ವಿವೇಚನೆಯು ಅಧ್ಯಾತ್ಮಶಾಸ್ತ್ರವೆನಿಸುವದು. ಮೋಕ್ಷ ಪ್ರಾಪ್ತಿಯೆ ಈ ಶಾಸ್ತ್ರದ ಇಷ್ಟಧ್ಯೇಯವಿರುವುದರಿಂದ ಇದಕ್ಕೆ ಮೋಕ್ಷ ಶಾಸ್ತ್ರವೆಂದೂ ಅನ್ನುವರು. ವೇದಗಳ ಅಂತಿಮ ಭಾಗವಾದ ಉಪನಿಷತ್ತುಗಳಲ್ಲಿ ಈ ಶಾಸ್ತ್ರವು ಪ್ರತಿಪಾದಿಸಲ್ಪಟ್ಟಿರುವುದರಿಂದ ಇದಕ್ಕೆ ವೇದಾಂತ ಶಾಸ್ತ್ರವೆಂಬ ಹೆಸರೂ ಇರುವದು.

೧೪. 'ವಚನಶಾಸ್ತ್ರ' ಎಂಬ ಪದದಲ್ಲಿ ಶಾಸ್ತ್ರಶಬ್ದದ ಅರ್ಥವು ಅಧ್ಯಾತ್ಮಶಾಸ್ತ್ರವು ಅಥವಾ ಮೋಕ್ಷಶಾಸ್ತ್ರವು ಎಂದು ಇರುವದು, ಮತ್ತು ವಚನಶಾಸ್ತ್ರವೆಂದರೆ ವಚನರೂಪದಿಂದ ಬರೆಯಲ್ಪಟ್ಟ ಅಧ್ಯಾತ್ಮ ಶಾಸ್ತ್ರವು. ಹೀಗೆ ಇಲ್ಲಿ 'ವಚನ' ಎಂಬುದು ಬರಹದ ರೀತಿಯನ್ನೂ 'ಶಾಸ್ತ್ರ' ಎಂಬುದು ಬರಹದ ವಿಷಯವನ್ನೂ ನಿರ್ದೇಶಿಸುವವು. ಇನ್ನೊಂದು ದೃಷ್ಟಿಯಿಂದ, ವಚನಶಾಸ್ತ್ರಕ್ಕೆ ಷಟ್‌ಸ್ಥಲಶಾಸ್ತ್ರವೆಂದೂ ಅನ್ನುವದುಂಟು. ಸಾಧಕನು ಭಕ್ತಸ್ಥಿತಿಯಿಂದ ಮುಕ್ತಸ್ಥಿತಿಗೆ ಮುಟ್ಟುವ ವರೆಗೆ ಆರು ಸ್ಥಲಗಳಿರುವವೆಂದು ಶೈವಾಗಮಕಾರರು ಕಲ್ಪಿಸಿರುವರು. ಆ ಆರು ಸ್ಥಲ ಅಥವಾ ಅವಸ್ಥೆಗಳು ಷಟ್‌ಸ್ಥಲವೆನಿಸುವವು. ಆ ಪದದಲ್ಲಿ ಕೂಡ ಷಟ್‌ಸ್ಥಲ ಅಂದರೆ ಆ ಆರು ಅವಸ್ಥೆಗಳು ಮತ್ತು ಶಾಸ್ತ್ರವೆಂದರೆ ಅಧ್ಯಾತ್ಮಶಾಸ್ತ್ರವು. ಷಟ್‌ಸ್ಥಲಶಾಸ್ತ್ರವೆಂದರೆ ಆರು ಮೆಟ್ಟಿಲುಗಳುಳ್ಳ ಅಧ್ಯಾತ್ಮಶಾಸ್ತ್ರವು. ಈ ಶಾಸ್ತ್ರವು ವಚನಶಾಸ್ತ್ರದಲ್ಲಿ ಮುಖ್ಯವಾಗಿ ಉಕ್ತವಾಗಿರುವುದರಿಂದ ವಚನ ಶಾಸ್ತ್ರಕ್ಕೆ ಷಟ್‌ಸ್ಥಲಶಾಸ್ತ್ರವೆಂದು ಅನ್ನುವ ರೂಢಿಯು ಇರುವದು.

೧೫. ಇನ್ನು ಮೋಕ್ಷಶಾಸ್ತ್ರವೆಂದರೇನು? ಮತ್ತು ಅದರ ಮಹತ್ವವೇನು? ಇದನ್ನು ಸ್ವಲ್ಪ ವಿಚಾರಿಸುವದು ಅವಶ್ಯವು. ನಾವು ಸಮ್ಯಸುತ್ತಲಿನ ಸೃಷ್ಟಿಯಲ್ಲಿ ಜಡ ಮತ್ತು ಚೇತನ ಎಂಬ ಎರಡು ಭಾಗಗಳನ್ನು ಮಾಡಬಹುದು. ಜಡ ಸೃಷ್ಟಿಯು ಸ್ವಸಂವೇದರಹಿತವಿರುವುದರಿಂದ, ಅದಕ್ಕೆ ಯಾವ ಬಗೆಯ ಅರಿವು ಅಥವಾ ಎಚ್ಚರವಿರದಿರುವುದರಿಂದ ಅದಕ್ಕೆ ಬಂಧಮೋಕ್ಷಗಳಿರಡೂ ಅಷ್ಟೇ. ಆದರೆ ಚೇತನಸೃಷ್ಟಿಯು ವಿಚಾರ ಮಾಡುವಾಗ ಮಾತ್ರ ಬಂಧ, ಮೋಕ್ಷ, ಎಂಬ ಸಂಗತಿಗಳನ್ನು ನಾವು

ವಿಮರ್ಶಿಸಬೇಕಾಗುವುದು. 'ನಾನು ಇರುವೆನು' ಎಂಬ ಅರಿವೇ ಎಲ್ಲ ಸಂವೇದಗಳ ಮತ್ತು ಇಡೀ ಜ್ಞಾನದ ಮೂಲ ಆಧಾರವು. ಎಲ್ಲ ಜ್ಞಾನಕ್ಕೂ ಅನುಭವನರ್ವಸ್ವಕ್ಕೂ ಗದ್ದುಗೆಯಂತಿರುವ ಈ ಮೂಲಭೂತ ಅರಿವನ್ನು ಅಳಿಸಿದರೆ ಜ್ಞಾನಕ್ಕೆ ಅಥವಾ ಅನುಭವಕ್ಕೆ ಮುಂದೆ ಅವಲಂಬನವು ಅಥವಾ ಆಶ್ರಯವು ಉಳಿಯುವುದಿಲ್ಲ. 'ನಾನು ಇರುವೆನು' ಈ ವಾಕ್ಯ ದೊಳಗಿನ 'ನಾನು' ಎಂಬ ವ್ಯಕ್ತಿಯ ಯಥಾರ್ಥಸ್ವರೂಪವನ್ನು ತಿಳಿದು ಕೊಂಡು, ಆ ತಿಳಿವಳಿಕೆಯನ್ನು ಸ್ಥಿರವಿಟ್ಟು, ಆ ತಿಳಿವಳಿಕೆಯಂತೆ ಆಚರಿಸು ವುದೆ ಆತ್ಮಜ್ಞಾನ ಮತ್ತು ಆಧ್ಯಾತ್ಮಿಕ ಆಚರಣೆ ಎಂದೆನಿಸುವದು. ಗ್ರೀಕ ದಾರ್ಶನಿಕರು ಯಾವ ಆಲಯದಲ್ಲಿ ಕಲಿಸುತ್ತಿದ್ದರೊ ಆ ವಿದ್ಯಾಲಯದ ಮಹಾದ್ವಾರದ ಮೇಲೆ 'ನಿನ್ನನರಿತುಕೊ' ಎಂಬ ವಾಕ್ಯವು ಕೊರೆಯಲ್ಪಟ್ಟಿ ತ್ತಂತೆ. ಅದಕ್ಕೂ ಪೂರ್ವದಲ್ಲಿ ಎಷ್ಟೋ ಶತಕಗಳ ಮುಂದೆ ರಚಿಸಲ್ಪಟ್ಟ ಉಪನಿಷತ್ತುಗಳಲ್ಲಿ ಆತ್ಮಜ್ಞಾನಕ್ಕೆ ಅಥವಾ 'ನಾನು' ಎಂಬ ವಸ್ತುವಿನ ಮೂಲದಲ್ಲಿ ಏನಿದೆ, ಅದು ಹೇಗಿದೆ, ಇದನ್ನು ಅರಿತುಕೊಳ್ಳುವುದಕ್ಕೆ, ಎಲ್ಲಕ್ಕೂ ಹೆಚ್ಚು ಮಹತ್ವವು ಕೊಡಲ್ಪಟ್ಟಿರುವದು. 'ಹೇ ಮೈತ್ರೇಯಿ, ಆತ್ಮನು ನೋಡತಕ್ಕು ವಸ್ತುವು, ಕೇಳತಕ್ಕು ವಸ್ತುವು, ಮನನಮಾಡತಕ್ಕು ವಸ್ತುವು, ನಿದಿಧ್ಯಾಸಮಾಡತಕ್ಕು ವಸ್ತುವು,' (ಆತ್ಮಾವಾಽರೇ ದ್ರಷ್ಟವ್ಯಃ ಶ್ರೋತವ್ಯಃ ಮಂತವ್ಯಃ ನಿದಿಧ್ಯಾಸಿತವ್ಯಃ—ಬೃ.೨-೪-೫) ಎಂಬ ಯಾಜ್ಞವಲ್ಕ್ಯನ ಉಕ್ತಿಯು ಪ್ರಸಿದ್ಧವಿರುವದು. ಇದೇ ಮಾತನ್ನು ವಚನಕಾರರು, ತನ್ನ ತಾನರಿದಡೆ ತಾನೇ ಗುರು, ಆತ್ಮನಿಶ್ಚಯದಲ್ಲಿಯೆ ಕೈಲಾಸ, ಎಂಬ ಮುಂತಾದ ವಾಕ್ಯಗಳಿಂದ ಹೇಳಿದ್ದಾರೆ. ತಾತ್ಪರ್ಯವೇನೆಂದರೆ, 'ನಾನು' ಎಂಬ ಒಂದು ಚಿಕ್ಕ ಶಬ್ದದಲ್ಲಿ ಗೂಢವಾಗಿರುವ ಗಹನ ಅರ್ಥವನ್ನು ತಿಳಿದುಕೊಳ್ಳುವದು ಜ್ಞಾನದ ಪರಮಾವಧಿ ಎನಿಸುವದು. ನಮ್ಮ ಜ್ಞಾನಜೀವನವು 'ಕೋಽಹಂ'—'ನಾನು ಯಾರು?' ಎಂದು ಪ್ರಾರಂಭವಾಗಿ, 'ಸೋಽಹಂ'–'ನಾನು ಅವನು' ಅಂದರೆ ಆತ್ಮನು, ಹೊರತು ದೇಹಾದಿಗಳಲ್ಲ. – ಎಂದು ಮುಗಿಯುವದು. ಈ ಜ್ಞಾನವನ್ನು ದಯಪಾಲಿಸುವ ಶಾಸ್ತ್ರವೇ ಅಧ್ಯಾತ್ಮಶಾಸ್ತ್ರವೆನಿಸುವದು. ಇದು ಆತ್ಮನನ್ನು ಸಂಬಂಧಿಸಿದ ಶಾಸ್ತ್ರವಿರುವ ದರಿಂದ ಅಧ್ಯಾತ್ಮಶಾಸ್ತ್ರವೆನಿಸುವದು, ಮತ್ತು ಮೋಕ್ಷಪರಿಣಾಮಿ ಅಥವಾ ಮೋಕ್ಷಪರ್ಯವಸಾಯಿಯಾದುದರಿಂದ ಮೋಕ್ಷಶಾಸ್ತ್ರವೆನಿಸುವದು.

೧೬. ಸಾಮಾನ್ಯವಾಗಿ 'ನಾನು' ಎಂದೊಡನೆ ಪ್ರತಿಯೊಬ್ಬನಿಗೆ ತನ್ನ ಪಾಂಚಭೌತಿಕದೇಹದ ಬೋಧವಾಗುತ್ತದೆ. ಆದರೆ ಅಗಿದಗಿದು ಅಳ

ವಾಗಿ ವಿಚಾರಮಾಡುತ್ತ ಹೋದಂತೆ, ದೇಹವೇ 'ನಾನು' ಆಗಿದ್ದರೆ ಮಲಗಿ ದಾಗ ದೇಹವಿದ್ದರೂ 'ನಾನು' ಇರುವದಿಲ್ಲ, ಎಂಬ ಮುಂತಾದ ಸಂಶಯ ಗಳು ತಲೆದೋರಿ, ಕೊನೆಗೆ ಈ ಪಾಂಚಭೌತಿಕ ದೇಹವಾಗಲಿ, ದೇಹಧಾರಕ ಪ್ರಾಣವಾಗಲಿ, ಸಂಕಲ್ಪ-ವಿಕಲ್ಪಾತ್ಮಕ ಮನಸಾಗಲಿ, ವ್ಯವಸಾಯಾತ್ಮಿಕಾ ಅಥವಾ ವಾಸನಾತ್ಮಿಕಾ ಬುದ್ಧಿಯಾಗಲಿ, 'ನಾನು' ಅಲ್ಲ; 'ನಾನು' ಇವೆಲ್ಲವುಗಳಾಜೆಗೆ ಚಿದ್ರೂಪಸಾಕ್ಷಿಯಾಗಿರುವೆನು, ಎಂಬರಿವು ಆಗುವದು. ಆದೇ ಆತ್ಮಜ್ಞಾನವು. ದೇಹಾದಿಗಳೇ ತಾನು, ಎಂಬ ಕಲ್ಪನೆ ಇರುವವರೆಗೆ ಮನುಷ್ಯನಿಗೆ ದುಃಖಾದಿಗಳೂ ದ್ವಂದ್ವಗಳೂ ಬಿಡವು. ತಾನು ದೇಹಾದಿ ಗಳಲ್ಲ, ತಾನು ಕೇವಲ ಚಿನ್ಮಯ ಆತ್ಮನು, ಎಂಬ ಅರಿವು ದೃಢವಾಯಿ ತೆಂದರೆ ಅವನಿಗೆ ದುಃಖವು ತಾಕದು. ಅವನನ್ನು ದ್ವಂದ್ವಗಳು ಮುಟ್ಟವು. ಕ್ಷಣಶಃ ಬದಲಾಗುವ, ಬಾಲ್ಯ-ಕೌಮಾರಾದಿ ಮತ್ತು ರೋಗ-ಜರಾ-ಮರ ಣಾದಿ ಅವಸ್ಥೆಗಳಿಗೆ ಬಳಗಾಗುವ ಈ ದೇಹವೆ ತಾನು, ಎಂದು ಮನುಷ್ಯನು ವಾಡಿಕೆಯಾಗಿ ತಿಳಿಯುವನು, ಮತ್ತು ತಾನು ಅಲ್ಪನು, ಪಾಪಿಯು, ಬದ್ಧನು, ಅಜ್ಞಾನಿಯು, ಎಂದು ಭಾವಿಸುವನು. ಆದುದರಿಂದ ಅವನು ಯಾವಾಗಲೂ ದುಃಖಿಯು ಮತ್ತು ಅನೇಕ ಕಾಮನೆಗಳಿಂದ ಪೀಡಿತನು. ಅವನ ಕಾಮನೆಗಳೇ ಅವನ ಅಪೂರ್ಣತ್ವದ ನಿಃಸಂದಿಗ್ಧ ಕುರುಹುಗಳು ಎಂದು ಹೇಳಬಹುದು. ಪೂರ್ಣನಿದ್ದವನು ಅಥವಾ ಆದವನು ಕಾಮನಾ ತೀತನಿರುವನು. ತನ್ನ ದುಃಖಪೂರ್ಣಸ್ಥಿತಿಯು ಬದಲಾಗಿ ತನಗೆ ಒಂದು ಬಗೆಯ ಅನುಪಮಶಾಂತಿಯು, ದುಃಖರಹಿತ ಸುಖವು, ದೊರೆಯಬೇಕೆಂದು ಮನುಷ್ಯನು ಯಾವಾಗಲೂ ಹಾರೈಸುವನು. ಈ ಬಗೆಯ ಸುಖವು, ಈ ಬಗೆಯ ನಿರ್ದೋಷ ನಿತ್ಯಸುಖವು ಮುಕ್ತಸ್ಥಿತಿಯೆನಿಸುವದು. ಬಾಹ್ಯ ಸುಖದುಃಖಗಳಿಂದ ಅಲುಗಾಡದೆ ಮನಸು ಸಮವಿರಬೇಕು, ತನ್ನ ಕರ್ತವ್ಯವು ತನಗೆ ಯಾವಾಗಲೂ ಸ್ಪಷ್ಟ ನಿಃಸಂಶಯವಾಗಿ ತೋರಿ ಅದರಂತೆ ಮಾಡುವ ಸಾಮರ್ಥ್ಯವು ತನ್ನಲ್ಲಿರಬೇಕು, ಅನುಪಮ ಆಂತರಿಕ ಶಾಂತಿಸಮಾಧಾನಗಳು ತನ್ನಲ್ಲಿ ನೆಲೆಗೊಳ್ಳಬೇಕು, ಮೃತ್ಯು ಎಳೆದತ್ತ ತಾನು ಹೋಗುವ ಪ್ರಸಂಗವು ಬರದೆ, ತಾನು ಬಾ ಎಂದತ್ತ ಮನಸು ಬರಬೇಕು, ಬಾಹ್ಯ ಯಾವದೇ ವಸ್ತುವಿನ ಆಧಾರದ ಅಪೇಕ್ಷೆ ಇಲ್ಲದೆ ತನ್ನಲ್ಲಿಯೆ ನಿರ್ಮಲ ಸುಖನಿರ್ಝರವು ಹರಿಯಬೇಕು, ತಾನು ಆತ್ಮನು, ಸುಖಿಯು, ಅವ್ಯಯನು, ಅನಾದಿಯು, ತನಗೆ ಹುಟ್ಟುಸಾವುಗಳಿಲ್ಲ, ಎಂಬ ಭಾವವು ಅಳವಡಬೇಕು, ಈ ಮುಂತಾದ ಇಚ್ಛೆಗಳೇ ಮೋಕ್ಷದ ಇಚ್ಛೆ

ಎನಿಸುವವು. ತಾತ್ವಿಕದೃಷ್ಟಿಯಿಂದ ವಿಚಾರಿಸಿದರೆ ಈ ಬಗೆಯ ಇಚ್ಛೆ ಇಲ್ಲದವನು ಯಾರೂ ಇಲ್ಲ, ಎಂದು ಹೇಳಬಹುದು. ಜ್ಞಾತ ಅಥವಾ ಅಜ್ಞಾತ ರೀತಿಯಿಂದ ಪ್ರತಿಯೊಂದು ಜೀವನು ಮೇಲೆ ಕಾಣಿಸಿದಂಥ ನಿರ್ದೋಷ ಸುಖಸ್ಥಿತಿಯನ್ನು ಪಡೆಯಲಿಚ್ಛಿಸುತ್ತಿರುವನು. ದುಃಖ ಬೇಡ ಸುಖ ಬೇಕು, ಎನ್ನದವರು ಈ ಸೃಷ್ಟಿಯಲ್ಲಿ ಯಾರಾದರೂ ಇರುವರೊ? ಅನಿತ್ಯ ಸುಖ ಬೇಡ ನಿತ್ಯ ಸುಖ ಬೇಕು, ಎನ್ನದವರು ಈ ವಿಶ್ವದಲ್ಲಿ ಯಾರಾದರೂ ಇರುವರೊ? ಯಾರೂ ಇಲ್ಲ. ಎಲ್ಲರೂ ನಿಜಸುಖಾರ್ಥಿಗಳು, ಅರ್ಥಾತ್ ಮೋಕ್ಷಾರ್ಥಿಗಳು. ಈ ರೀತಿ ತನ್ನೊಡನೆ ಹುಟ್ಟಿದ ದುಃಖದ ಸ್ಥಿತಿಯು ಅಳಿದು ಪರಮಸುಖಸ್ಥಿತಿಯು ತನಗೆ ಪ್ರಾಪ್ತವಾಗಬೇಕು, ಎಂದು ಪ್ರತಿಯೊಬ್ಬ ಮನುಷ್ಯನ ಮನಸಿನಲ್ಲಿರುವ ಇಚ್ಛೆಯೆ ಮೋಕ್ಷಶಾಸ್ತ್ರದ ಉಗಮಕ್ಕೆ ಕಾರಣವಾಗಿರುವದು.

೧೭. ಇನ್ನು ಜಗತ್ತಿನಲ್ಲಿ ಮಾನವಹಿತವನ್ನು ಸಾಧಿಸುವಂಥ ಇಲ್ಲವೆ ಮಾನವಸಾಮರ್ಥ್ಯವನ್ನು ಬೆಳೆಸುವಂಥ ಬೇರೆ ಅನೇಕ ಶಾಸ್ತ್ರಗಳಿರಲು ಮೋಕ್ಷಶಾಸ್ತ್ರವೆ ಎಲ್ಲಕ್ಕೂ ಹೆಚ್ಚು ಮಹತ್ವದ್ದೆಂದು ಏಕೆ ತಿಳಿಯಬೇಕು? ಬೇಕಾದಷ್ಟು ವಿಷಯಸುಖಗಳನ್ನು ಒದಗಿಸಿಕೊಡುವುದಕ್ಕೆ ಸಹಾಯ ಮಾಡುವ ಧನವನ್ನು ಹೇಗೆ ಸಂಪಾದಿಸಬೇಕು, ಎಂಬುದನ್ನು ಅರ್ಥ ಶಾಸ್ತ್ರವು ಹೇಳುವದು. ಅನೇಕ ರಾಜ್ಯಾದಿಗಳನ್ನು ಗೆದ್ದು ಸಾಮ್ರಾಜ್ಯವನ್ನು ಹೇಗೆ ಸ್ಥಾಪಿಸಬೇಕು, ಎಂಬುದನ್ನು ರಾಜನೀತಿಶಾಸ್ತ್ರವು ವಿವರಿಸುವದು. ಸರ್ವಸುಖಸಾಧನವಾದ ಈ ಶರೀರವನ್ನು ಸುಸ್ಥಿತಿಯಲ್ಲಿ ಹೇಗೆ ಇಡಬೇಕು, ಎಂಬುದನ್ನು ಆಯುರ್ವೇದವು ತೋರಿಸಿಕೊಡುವದು. ಲೋಕಸಮಾಜವನ್ನು ಯಾವ ರೀತಿಯಿಂದ ಚನ್ನಾಗಿ ಸಂಘಟಿಸಬೇಕು, ಮತ್ತು ಸಮಾಜವನ್ನು ರಚಿಸಿ ಅದನ್ನು ಹೇಗೆ ಬಲಗೊಳಿಸಬೇಕು, ಎಂಬುದನ್ನು ಸಮಾಜಶಾಸ್ತ್ರವು ವರ್ಣಿಸುವದು. ಸುಖಕ್ಕೆ ಸಾಧನೀಭೂತವಾದ ಈ ಮುಂತಾದ ಅನೇಕ ಶಾಸ್ತ್ರಗಳು ಇರುತ್ತಿರಲು ಅವುಗಳಿಗಿಂತ ಮೋಕ್ಷಶಾಸ್ತ್ರವೆ ಶ್ರೇಷ್ಠವು, ಎಂದು ಏಕೆ ಅನ್ನಬೇಕು? ಅಂತಹ ಬಲವಾದ ಕಾರಣವಿರವೆ ಹೀಗೆ ಅನ್ನುವದು ಯೋಗ್ಯವಾಗದು. ಪೂರ್ಣ ವಿಚಾರ ಮಾಡಿ ನೋಡಲಾಗಿ, ಸುಖವೇ ಮೇಲೆ ಹೇಳಿದ ಎಲ್ಲ ಶಾಸ್ತ್ರಗಳ ಗುರಿ ಯಿರುವದೆಂದು ಕಂಡುಬರುವದು. ಆವುಟ್ಟಿಗೆ ಅವು ಜೀವನಕ್ಕೆ ಅವಶ್ಯವಿರುವವೆಂಬಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಇವೆಲ್ಲವುಗಳಿಂದ ಕೇವಲ ಧಂಗುರ, ದೋಷಯುಕ್ತ, ಪರಾವಲಂಬಿಯಾದ, ವಿಷಯಸುಖವು

ಪ್ರಾಪ್ತವಾಗಬಲ್ಲದು ಹೊರತು ನಿತ್ಯ, ನಿರ್ದೋಷ, ಸ್ವತಂತ್ರವಾದ ಆತ್ಮ ಸುಖವು ದೊರಕೆಕೊಳ್ಳದು, ಎಂಬುದು ಸಿದ್ಧಾಂತವು. ವಿಷಯಸುಖಗಳು ಅಥವಾ ಇಂದ್ರಿಯಗಳ ಮುಖಾಂತರ ಮನುಷ್ಯನಿಗೆ ಆಗುವ ಸುಖಗಳು ಆ ವಿಷಯಗಳಂತೆ ಅಥವಾ ಇಂದ್ರಿಯಗಳಂತೆ ನಶ್ವರ ಮತ್ತು ಚಂಚಲವೆ ಇರುವವು. ಅವುಗಳಿಂದ ಆತ್ಯಂತಿಕ ಸುಖವನ್ನು ಅಥವಾ ನಿಜ ಸಮಾಧಾನವನ್ನು ಪಡೆಯಲಿಚ್ಛಿಸುವುದೆಂದರೆ ಮೃಗಜಲದಿಂದ ನೀರಡಿಕೆಯನ್ನು ಹೋಗಲಾಡಿಸಲು ಅಥವಾ ಕನಸಿನಲ್ಲಿಯ ಔಷಧದಿಂದ ಕ್ಷಯರೋಗವನ್ನು ಪರಿಹರಿಸಲು ಯತ್ನಿಸಿದಂತೆಯೆ ಸೈ. ಮನುಷ್ಯನ ವಿಷಯಕಾಮನೆಯು ವಿಷಯದ ಪ್ರಾಪ್ತಿಯಿಂದ ಎಂದೂ ತಣಿಯದು. ಎಣ್ಣೆಯುಂಡ ಉರಿಯಂತೆ ಅದು ವಿಷಯದಿಂದ ಹೆಚ್ಚೇ ಆಗುತ್ತ ಹೋಗುವದು. ಎಂದಿಗೂ ಸವೆಯದಷ್ಟು ಧನವಿರಲಿ, ಯಾರಿಗೂ ಅಳುಕದಷ್ಟು ಸಮರ್ಥ ಸಾಮ್ರಾಜ್ಯವಿರಲಿ, ರೋಗಬರದಂಥ ವಜ್ರಕಾಯವಿರಲಿ, ಸೋದಿದರೆ ಮಾಸುವಂಥ ಸುಕುಮಾರಿತಿಯರು ಸೇವೆಗಿರಲಿ. ಇಷ್ಟೆಲ್ಲ ಇದ್ದರೂ ಮತ್ತೆ ಇವುಗಳ ಆಶೆ ಹಾಗೂ ಚಿಂತೆ ಇವು ಎಂದೂ ಮನುಷ್ಯನನ್ನು ಬಿಡವು. ಸಾಯಂಕಾಲದ ನೆಳಲಿನಂತೆ ಆಶೆಚಿಂತೆಗಳು ಹೆಚ್ಚುತ್ತಲೆ ಹೋಗುವವು. ವಿಷಯಗಳು, ವಿಷಯಕಾಮನೆಗಳು, ಇಲ್ಲವೆ ವಿಷಯಗಳನ್ನು ಭೋಗಿಸುವ ಇಂದ್ರಿಯಗಳು, ಇವಾವುದರಿಂದಲೂ ಮನುಷ್ಯನ ಆತ್ಯಂತಿಕ ಸಮಾಧಾನವು ಆಗಲರಿಯದು. ಆದುದರಿಂದಲೆ, 'ಮನುಷ್ಯನು ಸಂಪತ್ತಿನಿಂದ ತೃಪ್ತನಾಗಲಾರನು' (ನ ವಿತ್ತೇನ ತರ್ಪಣೀಯೋ ಮನುಷ್ಯಃ—೧-೧-೨೬)ಎಂದು ಕಠದಲ್ಲಿ ನಚಿಕೇತನು, ಮತ್ತು 'ಸಂಪತ್ತಿನಿಂದ ಅಮೃತತ್ವವು ದೊರಕುವ ಆಶೆ ಇಲ್ಲ' (ಅಮೃತಸ್ಯ ತು ನಾಶಾಸ್ತಿ ವಿತ್ತೇನ—೨-೪-೨) ಎಂದು ಬೃಹದಾರಣ್ಯಕದಲ್ಲಿ ಯಾಜ್ಞವಲ್ಕ್ಯನು ಅಂದಿರುವನು. ಬಾಹ್ಯಸಾಧನಗಳಿಂದ ಮನುಷ್ಯನಿಗೆ ಪೂರ್ಣತೃಪ್ತಿ ದೊರೆಯುವದು ಸಾಧ್ಯವಿಲ್ಲ, ಅವನಿಗೆ ಅದರಿಂದ ಅಮೃತತ್ವವು ಲಭಿಸದು, ಎಂಬುದೆ ಈ ಮಹತ್ವದ ಅನುಭವಸಿದ್ಧ ವಚನಗಳ ಅರ್ಥವು. ಸ್ವಾತ್ಮನನ್ನು ಕಳಕೊಂಡು ಸಾಮ್ರಾಜ್ಯವನ್ನು ಗಳಿಸಿದರೂ ಅದರಿಂದೇನು, ಎಂಬ ಇದೇ ಅರ್ಥದ ಮಾತನ್ನು ವಿಸೂಕ್ರಿಸ್ತನು ನುಡಿದಿರುವನು. ಉಂಡಲ್ಲದೆ ಹೊಟ್ಟೆಯ ಮೇಲೆ ಓಗರದ ರಾಶಿಯನ್ನು ಕಟ್ಟಿದರೆ ಹಸಿವು ಹಿಂಗದು, ನೀರು ಕುಡಿದಲ್ಲದೆ ತಲೆಯ ಮೇಲಿಂದ ಹೊಳೆ ಹಾಯಿಸಿದರೆ ನೀರಡಿಕೆ ನೀಗದು. ಈ ಸಂಗತಿ ನಿಜವಿದ್ದಂತೆ, ಹೊನ್ನು ಹೆಣ್ಣು ಮಣ್ಣುಗಳ ಬಾಹ್ಯರಜನೆಯಿಂದ ನಿಜವಾದ ಆಂತರಿಕ ಸುಖದ

ಹಸಿವು ಹರಿಯದು, ಎಂಬುದು ಅನುಭವದ ಮಾತು. ಆದುದರಿಂದಲೆ, ಕೊನೆಗೆ ಎಲ್ಲರೂ ಆತ್ಯಂತಿಕಸುಖವನ್ನು, ನಿಜವಾದ ಆನಂದವನ್ನು ಕೊಡಲು ಕಂಕಣಬದ್ಧವಾದ ಮೋಕ್ಷಶಾಸ್ತ್ರವನ್ನೆ ಆಶ್ರಯಿಸಬೇಕಾಗುವದು. ಆ ಕಾರಣದಿಂದಲೆ ಎಲ್ಲ ಶಾಸ್ತ್ರಗಳು ಆ ಶಾಸ್ತ್ರಕ್ಕೆ ಆನುಷಂಗಿಕವಾಗಿರುವವು, ಮತ್ತು ಆ ಮೂಲಕವೆ ಆ ಶಾಸ್ತ್ರವು ಎಲ್ಲ ಶಾಸ್ತ್ರಗಳ ಶಿರೋಭಾಗದಲ್ಲಿ ಮೆರೆಯುತ್ತಿರುವದು.

೧೮. ಮಾನವರ ಅಂತಃಕರಣದಲ್ಲಿ ನಿತ್ಯ ಗೂಢವಾಗಿರುವ ಆತ್ಯಂತಿಕ ಸುಖದ ಆಕಾಂಕ್ಷೆಯನ್ನು ಪೂರೈಸುವ ಸಾಮರ್ಥ್ಯವು ಇರುವುದರಿಂದ ಮೋಕ್ಷಶಾಸ್ತ್ರವು ಎಲ್ಲಕ್ಕೂ ಹೆಚ್ಚಿನದೆಂದು ಎನಿಸುವದು. ಅದೇಕಾರಣದ ಮೂಲಕ ಈ ಶಾಸ್ತ್ರವು ಜಗತ್ತಿನಲ್ಲಿಯ ಎಲ್ಲ ಮಾನವವರ್ಗಗಳಲ್ಲಿಯೂ ಎಲ್ಲ ಜನಾಂಗಗಳಲ್ಲಿಯೂ ಬೇರೆ ಬೇರೆ ಕಾಲಕ್ಕೆ ಉಗಮಹೊಂದಿ ಪ್ರಗತಿಹೊಂದುತ್ತ ಬಂದಿರುವದು. ಆಯಾ ಧರ್ಮಗಳು ಅಥವಾ ಪಂಥಗಳು ಕೈಕೊಂಡ ಭಕ್ತಿ, ಜ್ಞಾನ, ವೈರಾಗ್ಯ, ಕರ್ಮಾದಿ ಸಾಧನಗಳಲ್ಲಿ ಎಷ್ಟೇ ಅನೇಕತೆ ಅಥವಾ ವಿವಿಧತೆ ಕಂಡರೂ ಆಯಾ ಧರ್ಮಗಳು ಈ ಸಾಧನಗಳಲ್ಲಿ ವಿಶಿಷ್ಟ ಕೆಲವು ಸಾಧನಗಳನ್ನು ಬಹಳ ಒತ್ತಿ ಹೇಳಿದ್ದರೂ ಪ್ರತಿಯೊಂದು ಪಂಥವು ಅಕ್ಷಯಸುಖವನ್ನೆ ತನ್ನ ಅಂತಿಮಧ್ಯೇಯವನ್ನಾಗಿಟ್ಟುಕೊಂಡಿರುವದು. ಸರ್ವಮಾನ್ಯ ಧ್ಯೇಯವಾದ ಆ ಅಕ್ಷಯಸುಖವನ್ನು ಕುರಿತು ದ್ವೈತಾ ದ್ವೈತಾದಿ ಹಲಕೆಲವು ಪಂಥಗಳಲ್ಲಿ ಕೆಲವು ಮತಭೇದಗಳಿರುವವು. ಆ ಮತಭೇದಗಳು ಕೇವಲ ಗೌಣವೆಂದೆನ್ನಬಹುದು. ಯಾಕಂದರೆ ನಿತ್ಯ, ನಿಜ ಆನಂದದ ಅನುಭೂತಿಯೆ ಆ ಅಕ್ಷಯಸುಖದ ಮುಖ್ಯ ಲಕ್ಷಣವು, ಎಂಬುದನ್ನು ಯಾವ ಪಂಥದವರೂ ಅಲ್ಲಗಳೆಯುವದಿಲ್ಲ. ಈ ಪ್ರಕಾರ ಇಂಥ ಅಕ್ಷಯಸುಖವೆ ಅಖಿಲ ಮಾನವವರ್ಗದ ಧ್ಯೇಯವಿರುವುದರಿಂದ ಇದನ್ನು ಪಡೆಯುವದಕ್ಕಾಗಿ ಬೇರೆ ಬೇರೆ ಮಾರ್ಗಗಳು ಪರಿಶೋಧಿಸಲ್ಪಟ್ಟಿವೆ. ಈ ಧ್ಯೇಯ ಮತ್ತು ಅದನ್ನು ಪಡೆಯುವ ಸಾಧನಗಳು, ಇವೆರಡೂ ಯಾವುದರಲ್ಲಿ ಹೇಳಲ್ಪಟ್ಟಿರುವವೊ ಅದೇ ಅಧ್ಯಾತ್ಮಶಾಸ್ತ್ರವು.

೧೯. ಮನುಷ್ಯನಿಗೆ ಯಾವುದೇ ಅವಶ್ಯಕತೆಯುಂಟಾಗಲಿ, ಅಥವಾ ಅವನ ಮನಸ್ಸಿನಲ್ಲಿ ಯಾವುದೇ ಆಕಾಂಕ್ಷೆಯು ತಲೆದೋರಲಿ, ಅವನು ಅದನ್ನು ಕೂಡಲೆ ತೃಪ್ತಿಬಡಿಸಲನುವಾಗುವನು. ಆಯಾ ಅವಶ್ಯಕತೆಯು ಅಥವಾ ಆಕಾಂಕ್ಷೆಯು ಉತ್ಕಟವಿದ್ದಮಟ್ಟಿಗೆ ಅವನ ಯತ್ನಗಳೂ ತೀವ್ರ ಮತ್ತು ಉತ್ಕಟವಿರುವವು. ಮೋಕ್ಷದ ಆಕಾಂಕ್ಷೆಯು ಮೊದಲಿನಿಂದಲೂ

ಬಹಳ ಬಲವುಳ್ಳದ್ದಿರುವುದರಿಂದ ತತ್ಸಾಧನಕ್ಕಾಗಿ ಮನುಷ್ಯನು ಮಾಡಿದ ಪ್ರಯತ್ನಗಳಾದರೂ ಅತಿಶಯ ದಕ್ಷತೆಯಿಂದ ಮಾಡಲ್ಪಟ್ಟಿರುವವು. ಈ ಪ್ರಯತ್ನಗಳ ಮತ್ತು ಪ್ರಯೋಗಗಳ ಇತಿಹಾಸವು ಮೋಕ್ಷಶಾಸ್ತ್ರದ ಬೆಳವಣಿಗೆಯಲ್ಲಿ ಒಂದು ರೀತಿ ಅಡಕವಾಗಿರುವದು ಎನ್ನಬಹುದು. ಭಾರತ ವರ್ಷದಲ್ಲಿ ಈ ಮೋಕ್ಷದ ಇಚ್ಛೆಯು ಬಹಳ ಬೇಗ ಮೊಳೆತದ್ದರಿಂದ ಮತ್ತು ಬಹಳೇ ಬಲವತ್ತರವಿದ್ದುದರಿಂದ ಇಲ್ಲಿ ಮೋಕ್ಷಶಾಸ್ತ್ರವು ಅತಿಶಯ ಪುರಾತನಕಾಲದಲ್ಲಿ ಉಗಮಹೊಂದಿತು ಮತ್ತು ಉಪನಿಷತ್ಕಾಲದಷ್ಟೊತ್ತಿಗೆ ಚನ್ನಾಗಿ ಬೆಳೆದು ಗೀತಾಕಾಲಕ್ಕೆ ಅತ್ಯಂತ ಪರಿಪೂರ್ಣಾವಸ್ಥೆಯನ್ನು ಹೊಂದಿತು ಎಂದು ಹೇಳಬಹುದು. ಪೂರ್ವದಲ್ಲಿ ಈ ದೇಶದಲ್ಲಿ ಸಂಸ್ಕೃತ ವೆಂಬುದೊಂದೇ ಭಾಷೆಯು ಮೊದಲು ಗ್ರಂಥಸ್ಥವಾದುದರಿಂದ ಸ್ವಾಭಾವಿಕವಾಗಿ ಗ್ರಂಥರಚನೆಯು ಆ ಭಾಷೆಯಲ್ಲಿಯೆ ಆಯಿತು ಮತ್ತು ಭಾರತೀಯರ ಪುರಾತನ ಆಧ್ಯಾತ್ಮಿಕ ಗ್ರಂಥಗಳೆಲ್ಲ ಆ ಭಾಷೆಯಲ್ಲಿಯೆ ಇರುವವು. ತಾಯಿಬೇರಿನಿಂದ ಟಿಸಲು ಒಡೆದಂತೆ ಮೂಲ ಧರ್ಮದಿಂದ ಸ್ವಲ್ಪ ಭಿನ್ನವಾಗಿ ಹಾಗೂ ಅದಕ್ಕೆ ಸ್ವಲ್ಪ ವಿರೋಧವಾಗಿ ಜೈನ ಮತ್ತು ಬೌದ್ಧ ಮತಗಳು ಹುಟ್ಟುವವರೆಗೆ ಸಂಸ್ಕೃತವನ್ನುಳಿದು ಬೇರೆ ಯಾವ ಭಾಷೆಯಲ್ಲಿಯೂ ಮೋಕ್ಷಶಾಸ್ತ್ರದ ಗ್ರಂಥಗಳು ಬರೆಯಲ್ಪಡಲಿಲ್ಲ ಮತ್ತು ಎಲ್ಲಿಯಾದರೂ ಹಲವು ಬರೆಯಲ್ಪಟ್ಟಿದ್ದರೆ ಅವುಗಳಿಗೆ ಯಾವ ಮಹತ್ವವೂ ಉಂಟಾಗಲಿಲ್ಲ ಎಂದು ಹೇಳಬಹುದು. ಆಗ ಸಂಸ್ಕೃತವೆ ಸಂಸ್ಕಾರ ಹೊಂದಿದ ಭಾಷೆ, ಶ್ರೇಷ್ಠ ಭಾಷೆ, ತತ್ವಪ್ರತಿಪಾದನದ ಭಾಷೆ, ಪಂಡಿತರ ಭಾಷೆ, ಧರ್ಮಭಾಷೆ, ಗೀರ್ವಾಣಭಾಷೆ, ಸಂಸ್ಕೃತಿಯ ಭಾಷೆ, ದೇವ ಭಾಷೆ ಎಂದು ತಿಳಿಯಲ್ಪಟ್ಟಿತ್ತು. ಪ್ರಾಕೃತ, ಶೌರಸೇನಿ, ಪೈಶಾಚಿ, ಮಾಗಧಿ ಮುಂತಾದ ಭಾಷೆಗಳು ಬಾಯಿಂದ ಆಡುವ ಭಾಷೆಗಳಾಗಿದ್ದರೂ ಅವು ಪ್ರಾಕೃತವಾದ ಗ್ರಂಥರಚನಾಕಾರ್ಯಕ್ಕೆ ಮೊದಮೊದಲು ಅಯೋಗ್ಯವೆಂದೆ ತಿಳಿಯಲ್ಪಟ್ಟಿದ್ದವು. ಸಾಮಾನ್ಯ ಜನರಲ್ಲಿ ಸ್ವಲ್ಪಮಟ್ಟಿಗೆ ವಿದ್ಯಾಪ್ರಸಾರವಾದಬಳಿಕ ಆ ಭಾಷೆಗಳಲ್ಲಿ ಗ್ರಂಥರಚನೆಯು ಆರಂಭಿಸಿತು. ಸಂಸ್ಕೃತವು ಮಾತ್ರ ಅಸ್ಪರ್ಧಕವಾಗಿ ಅತ್ಯುತ್ತಮ ಸಂಸ್ಕಾರಗಳನ್ನು ಪಡೆದು, ಆರ್ಯರ ಮನೋದೇವತೆಯು ವಾಹನವಾಗಿ, ಆರ್ಯಧರ್ಮ, ಆರ್ಯತೇಜ, ಆರ್ಯತತ್ವಜ್ಞಾನ, ಆರ್ಯರ ಭಾವಸಂಪತ್ತಿ ಮುಂತಾದವುಗಳಿಗೆ ಅಥವಾ ಸಂಕ್ಷೇಪದಿಂದ ಹೇಳಬೇಕಾದರೆ ಇಡೀ ಆರ್ಯಸಂಸ್ಕೃತಿಗೆ ದೇಹರೂಪವಾಗಿ ಅವರೊಡನೆ ಆಸೇತುಹಿಮಾಚಲ ಪಸರಿಸಿ ಅಲ್ಲಲ್ಲಿರುವ

ದುರ್ಬಲ ಸಂಸ್ಕೃತಿಯು ಜನರ ಮೇಲೆ ತನ್ನ ಘನವಾದ ವರ್ಚಸ್ಸನ್ನು ಕೂಡಿಸಿಬಿಟ್ಟಿತು.

೩೦. ಈ ರೀತಿ ಸುಸಂಸ್ಕೃತವೂ ಪ್ರೌಢವೂ ಪ್ರಗಲ್ಭವೂ ಆದ ಸಂಸ್ಕೃತದಲ್ಲಿ ಮೊದಲು ನಮಗೆ ಅಧ್ಯಾತ್ಮಶಾಸ್ತ್ರದ ಪ್ರತಿಪಾದನೆಯು ನೋಡಲಿಕ್ಕೆ ಸಿಕ್ಕುವದು. ಕೇವಲ ಅಂಧವಿಶ್ವಾಸದ ದೃಷ್ಟಿಯಿಂದ ಅಂದರೆ ತಾಮಸಶ್ರದ್ಧೆಯಿಂದ ನೋಡದೆ ಸಾತ್ವಿಕಶ್ರದ್ಧೆಯಿಂದ ಮತ್ತು ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ಮಿಕ್ಕ ಶಾಸ್ತ್ರಗಳ ಉದಯ ಉಚ್ಚ್ರಾಯಗಳು ಯಾವ ನಿಯಮಗಳಿಗನುಸರಿಸಿ ಆಗಿರುವವೊ ಅದೇ ಪ್ರಕಾರ ಈ ಶಾಸ್ತ್ರವಾದರೂ ಬೆಳೆದಿರುವದು. ಮೋಕ್ಷದ ಉತ್ಕಟ ಇಚ್ಛೆಯು ಈ ಶಾಸ್ತ್ರದ ಬೀಜವು. ಅದು ಮೊದಲು ದಿವ್ಯದೃಷ್ಟಿಯುಳ್ಳ ಧೀರರಲ್ಲಿ ಮೊಳೆಯಿತು. ಕೇವಲ ವಿಷಯಸುಖಗಳು, ಅವು ಈ ಲೋಕದ ಸ್ಥೂಲ ಸುಖಗಳೇ ಇರಲಿ ಅಥವಾ ಸ್ವರ್ಗಲೋಕದ ಸೂಕ್ಷ್ಮ ಸುಖಗಳೇ ಇರಲಿ, ಅವೆಲ್ಲ ನಶ್ವರ ಮತ್ತು ದೋಷಯುಕ್ತವಾದವುಗಳು, ಎಂಬರಿವು ಮೊದಲು ಹುಟ್ಟಿ ಅಕ್ಷಯಸುಖದ ಶೋಧವು ಪ್ರಾರಂಭಿಸಿತು. ಸ್ವರ್ಗ ಮತ್ತು ಮೋಕ್ಷ ಇವುಗಳ ಕೀಳ್ಮೆ-ಮೇಲ್ಮೆಗಳ ಚರ್ಚೆಯು ವೇದಗಳ ಅಂತ್ಯಭಾಗವಾದ ಉಪನಿಷತ್ತುಗಳಲ್ಲಿ ಕಂಡುಬರುವದು. ಯಜ್ಞಯಾಗಾದಿ ಕರ್ಮಗಳಿಂದ, ಸ್ತುತಿಸ್ತೋತ್ರಾದಿ ಉಪಾಸನೆಗಳಿಂದ ಬೇರೆಬೇರೆ ದೇವತೆಗಳನ್ನು ಸಂತೋಷಿಸಿ ಇಹಪರ ಸುಖವನ್ನು ದೊರಕಿಸುವುದಕ್ಕೆಯೆ ವೇದಗಳಲ್ಲಿ ಹೆಚ್ಚು ಮಹತ್ವವು ಕೊಡಲ್ಪಟ್ಟಿದೆ. ಆದರೆ ಈ ಬಗೆಯ ಸುಖಗಳು ಭಂಗುರ ಎಂದು ಅವುಗಳನ್ನು ಹೀಯಾಳಿಸಿ ಉಪನಿಷತ್ಕಾರರು ಅಕ್ಷಯ ಸುಖವನ್ನೆ ತಮ್ಮ ಗುರಿಯನ್ನಾಗಿಟ್ಟುಕೊಂಡರು. ಕಠದಲ್ಲಿ ಸ್ವರ್ಗವನ್ನು ದೊರಕಿಸಿಕೊಡುವ ಅಗ್ನಿಯು (ಸ್ವರ್ಗ್ಯಮಗ್ನಿಂ —೧-೧-೧೪) ಪ್ರಾಪ್ತವಾದರೂ ನಚಿಕೇತನು ಅದರಿಂದ ಸಂತುಷ್ಟನಾಗದೆ ಅಕ್ಷಯಸುಖದಾಯಿಯಾದ ಆತ್ಮಜ್ಞಾನವನ್ನೆ ನನಗೆ ಕೊಡು, ಎಂದು ಯಮಧರ್ಮನನ್ನು ಬೇಡಿ ಆ ಜ್ಞಾನವನ್ನು ಪಡೆದು ಸಮಾಧಾನ ಹೊಂದಿದನು. ಯಜ್ಞಯಾಗಾದಿ ಮತ್ತು ಇಷ್ಟಾಪೂರ್ತ್ಯಾದಿ ಕರ್ಮಗಳು ಕೆಲಹೊತ್ತು ಆಯಾ ಪುಣ್ಯಕರ್ಮದ ಮಟ್ಟಿಗೆ ಸ್ವರ್ಗವಾಸವನ್ನು ಅಂದರೆ ಸುಖಜೀವನವನ್ನು ದೊರಕಿಸಿ ಕೊಟ್ಟರೂ ಅವು ಜರಾಮೃತ್ಯುಗಳನ್ನು ತಪ್ಪಿಸಲಾರವು, ಆದರೆ ತಪಸ್ಸು, ಶ್ರದ್ಧೆ, ಬ್ರಹ್ಮಚರ್ಯ, ಏಕಾಂತ ಇವು ಸಾಧಕನನ್ನು ತೇಜೋಮಾರ್ಗದಿಂದ ಅಂದರೆ ಜ್ಞಾನಮಾರ್ಗದಿಂದ ಅಮೃತಲೋಕಕ್ಕೆ ಒಯ್ಯುವವು, ಎಂದು ಮುಂಡಕೋಪನಿಷತ್ತು ಹೇಳಿರುವದು. ಅಪರಾ ಮತ್ತು ಪರಾವಿದ್ಯೆ, ಕರ್ಮಮಾರ್ಗ ಮತ್ತು ಜ್ಞಾನಮಾರ್ಗ, ಪಿತೃಯಾಗ ಮತ್ತು ದೇವಯಾಗ, ಹೀಗೆ ಉಪನಿಷತ್ಕಾರರು ಮಾಡಿದ ಭೇದವಾದರೂ ಸ್ವರ್ಗ ಮತ್ತು ಮೋಕ್ಷ, ಎಂಬ ಎರಡು ಮಾನವೀ ಧ್ಯೇಯಗಳನ್ನು ಅನ್ವಯಿಸಿಯೆ ಇರುವದು. ಇವುಗಳಲ್ಲಿ ಅಪರಾವಿದ್ಯೆ ಮತ್ತು ಸಕಾಮ ಕರ್ಮಮಾರ್ಗ ಇವು ಮನುಷ್ಯನನ್ನು ಪಿತೃಯಾನ ಮಾರ್ಗದಿಂದ ಹೀನವಾದ ಸ್ವರ್ಗಲೋಕಕ್ಕೆ ಒಯ್ಯುವವು; ಆದರೆ ಪರಾವಿದ್ಯೆಯು ಜ್ಞಾನದ ಸಹಾಯದಿಂದ ಸಾಧಕನನ್ನು ದೇವಯಾನ ಮಾರ್ಗದಿಂದ ಶ್ರೇಷ್ಠ ಮತ್ತು ಅಮೃತವಾದ ಬ್ರಹ್ಮಲೋಕಕ್ಕೆ ಒಯ್ಯುವದು ಎಂದು ಉಪನಿಷತ್ತಿನ ಋಷಿಗಳು ಸ್ಪಷ್ಟವಾಗಿ ಹೇಳಿರುವರು. ನಮ್ಮ ಆತ್ಯಂತಿಕ ಧ್ಯೇಯವು ಸ್ವರ್ಗವಲ್ಲ, ಮೋಕ್ಷವು, ಎಂದು ಮೊದಲು ನಿರ್ಧರಿಸಿ ಮುಂದೆ ಏಕಾಂತವಾಸ, ಶ್ರದ್ಧೆ, ತಪಸ್ಸು, ಬ್ರಹ್ಮಚರ್ಯ, ಧ್ಯಾನ, ಯೋಗ, ನಿಷ್ಕಾಮಕರ್ಮ, ಆತ್ಮಜ್ಞಾನ ಈ ಮುಂತಾದವುಗಳೇ ತತ್ಸಾಧನಗಳು, ಎಂದು ಅವರು ನಿರ್ಣಯಿಸಿದ್ದಾರೆ. ಹೀಗೆ ಅಕ್ಷಯ ಸುಖದ ಶೋಧ ಮಾಡುವ ಋಷಿಮುನಿಗಳು ಅನೇಕ ಚರ್ಚೆಗಳಿಂದ, ಧ್ಯಾನದಿಂದ, ಪ್ರಯೋಗಾಂತರಗಳಿಂದ, ಸ್ಫೂರ್ತಿಯಿಂದ, ಮತ್ತು ಸ್ವಾನುಭವದಿಂದ ಕೊನೆಯ ನಿಶ್ಚಯವನ್ನು ಮಾಡಿದ್ದಾರೆ. ಮುಂದೆ ಗೀತಾಕಾರರು ಮೋಕ್ಷವೆಂಬ ಉಪನಿಷತ್ಕಾರರ ಆತ್ಯಂತಿಕ ಧ್ಯೇಯವನ್ನು ಹಾಗೆಯೆ ಇಟ್ಟು, ಆ ಕಾಲದ ವರೆಗೆ ಪ್ರತಿಪಾದಿಸಲ್ಪಟ್ಟ ಅಥವಾ ಪ್ರಚಾರಕ್ಕೆ ಬಂದ ಎಲ್ಲ ಅಧ್ಯಾತ್ಮಮಾರ್ಗಗಳ ಸಮನ್ವಯವನ್ನು ಮಾಡಿ, ಅವುಗಳಿಗೆ ಭಕ್ತಿಭಾವದ ಒಪ್ಪನ್ನಿಟ್ಟು ಸರ್ವಾರ್ಪಣವೆಂಬ ಸುಲಭ, ಸರಲ, ಸಂಪೂರ್ಣ, ಮತ್ತು ಸರ್ವರಿಗೂ ಮುಕ್ತದ್ವಾರವಿದ್ದ ಸಾಧನಪಥವನ್ನು ನಿರ್ಮಿಸಿದರು. ಹೀಗೆ ಆರ್ಯರ ಅಧ್ಯಾತ್ಮಶಾಸ್ತ್ರವು ಮೊದಲು ನದಿಯ ಉಗಮದಂತೆ ಅಸ್ಪಷ್ಟವಾದ ಮೋಕ್ಷಾಕಾಂಕ್ಷೆಗಳ ರೂಪದಿಂದ ಅತಿ ಪ್ರಾಚೀನವಾದ ವೇದಗ್ರಂಥಗಳಲ್ಲಿ ಒಡಮೂಡಿತು. ಉಪನಿಷತ್ತುಗಳಲ್ಲಿ ಅದು ಪರಿಸ್ಫುಟ ವಿಚಾರ ಪ್ರವಾಹವಾಗಿ ಹರಿಯಿತು. ಸರ್ವಶಾಖೋಪಶಾಖೆಗಳ ಸಂಗಮದಿಂದ ಪ್ರಚಂಡವಾದ ನದೀ ಮುಖದಂತೆ ಅದೇ ಪ್ರವಾಹವು ಈಗೆ ಗೀತೆಯಲ್ಲಿ ಸರ್ವಮಾರ್ಗಸಮನ್ವಯ ರೂಪವನ್ನು ತಾಳಿ ಪ್ರೌಢವೂ ಗಂಭೀರವೂ ಆಗಿ ಕಂಗೊಳಿಸುವದು.

೩೧. ಆದರೆ ಮೊದಲು ಈ ಜ್ಞಾನಭಾಂಡಾರವೆಲ್ಲ ಸಂಸ್ಕೃತದಲ್ಲಿಯೆ ಇದ್ದುದರಿಂದ, ಮೊದಲಿನಿಂದಲೂ ಸಂಸ್ಕೃತವೆ ಪಂಡಿತರ ಭಾಷೆ ಇರು

ವುದರಿಂದ, ಅಚ್ಚಿನ ಮುಂತಾದ ಯುಕ್ತಿಗಳು ಇಲ್ಲದಾಗ ಜ್ಞಾನವು ಗುರು ಶಿಷ್ಯಸರಂಪರೆಯಿಂದಲೆ ಸಾಗುತ್ತಿರುವುದರಿಂದ, ವಿಶಿಷ್ಟಜಾತಿಯವರೆ ಈ ಜ್ಞಾನದ ಅಧಿಕಾರಿಗಳು ಎಂಬ ನಿರ್ಬಂಧವಿರುವುದರಿಂದ, ಜ್ಞಾನಪ್ರಸಾರವು ವಿಶಿಷ್ಟ ಜನರಲ್ಲಿಯೆ ವಿಶಿಷ್ಟಮರ್ಯಾದೆಯ ಮಟ್ಟಿಗೆಯೆ ಆಗುತ್ತಿತ್ತು ಮತ್ತು ಸಾಮಾನ್ಯ ಜನಸಮಾಜವು ಈ ಜ್ಞಾನಕ್ಕೆ ಎರವಾಗಿತ್ತು ಎಂದು ಊಹಿಸಬಹುದು. ಮೋಕ್ಷಧರ್ಮ ಮುಂತಾದ ಮಹತ್ವದ ವಿಷಯಗಳನ್ನು ಕುರಿತು ಸಂಸ್ಕೃತದಲ್ಲಿಯೆ ಉದ್ಗ್ರಂಥಗಳನ್ನು ಬರೆಯುವ ಈ ಪದ್ಧತಿಯನ್ನು ಸ್ವಲ್ಪ ಮಟ್ಟಿಗೆ ಜೈನರು ಮೊದಲು ತಪ್ಪಿಸಿದರೆನ್ನಬಹುದು. ಪ್ರಾಕೃತಭಾಷೆಯಲ್ಲಿ ಜೈನಮತ ಗ್ರಂಥಗಳು ಅನೇಕವಿರುವವು. ಆದರೆ ನಿಜವಾಗಿ ಧರ್ಮವನ್ನು ಮತ್ತು ಉಚ್ಚವಾದ ಅಧ್ಯಾತ್ಮಿಕ ವಿಷಯಗಳನ್ನು ಸಾಮಾನ್ಯಜನರ ಭಾಷೆಯಲ್ಲಿ ಮೊದಲು ಪ್ರಚಾರಗೊಳಿಸಲಾರಂಭಮಾಡಿದ ಮಹಾತ್ಮನು ಭಗವಾನ್ ಬುದ್ಧನೇ ಎಂದು ಹೇಳಬಹುದು. ಅವನ ವಿಚಾರಗಳು ವೈದಿಕವೆ ಇರಲಿ, ಅವೈದಿಕವೆ ಇರಲಿ, ವೈದಿಕವಿರೋಧಿಯೆ ಇರಲಿ, ಅವುಗಳನ್ನು ಅವನು ಜನಸಾಮಾನ್ಯಕ್ಕೆ ತಿಳಿಯುವಂತೆ ತನ್ನ ಕಾಲಕ್ಕೆ ಪ್ರಚಲಿತವಿದ್ದ ಪಾಲೀಭಾಷೆಯಲ್ಲಿಯೆ ವ್ಯಕ್ತಮಾಡಿರುವನು. ಅವನ ಅನುಯಾಯಿಗಳು ಅವನ ಮೇಲುಪಂಕ್ತಿಯನ್ನು ಸ್ವೀಕರಿಸಿ ಅವನ ಬೋಧವನ್ನೆಲ್ಲ ಪಾಲೀಭಾಷೆಯಲ್ಲಿಯೆ ಮುಖ್ಯವಾಗಿ ಸಂಗ್ರಹಿಸಿಟ್ಟಿರುವರು. ಹಿಂದುಸ್ಥಾನದಲ್ಲಿ ಯಾವ ಕಾರಣಗಳ ಮೂಲಕ ಜೈನರು ಮತ್ತು ಬುದ್ಧರು ಧರ್ಮಪ್ರಸಾರಕ್ಕಾಗಿ ಜನಸಾಮಾನ್ಯರ ಭಾಷೆಯನ್ನು ಪಯೋಗಿಸಿದರೊ ಅದೇ ಕಾರಣಗಳ ಮೂಲಕ ಯುರೋಪಖಂಡದಲ್ಲಿ ಹದಿನಾರನೇ ಶತಮಾನದಲ್ಲಿ ಉಂಟಾದ ಪ್ರಚಂಡ ಜನಜಾಗ್ರತಿಯ ಕಾಲಕ್ಕೆ ಪಂಡಿತರಷ್ಟೆ ಉಪಯೋಗಿಸುವ ಗ್ರೀಕ ಮತ್ತು ಲ್ಯಾಟಿನ್ ಎಂಬ ಪುರಾತನ ಭಾಷೆಗಳನ್ನು ಸ್ವಲ್ಪ ಬದಿಗಿರಿಸಿ ಮಾರ್ಟಿನ್ ಲೂಥರ (Martin Luther) ಮತ್ತು ಅವನ ಅನುಯಾಯಿಗಳು ಪ್ರಾಂತಿಕ ಭಾಷೆಗಳಾದ ಜರ್ಮನ್, ಫ್ರೆಂಚ, ಇಂಗ್ಲಿಶ್, ಇಟಾಲಿಯನ್, ಮುಂತಾದ ಭಾಷೆಗಳಲ್ಲಿ ಧರ್ಮವಿಚಾರಗಳ ಪ್ರಚಾರವನ್ನು ಮತ್ತು ಗ್ರಂಥರಚನೆಯ ಕಾರ್ಯವನ್ನು ಪ್ರಾರಂಭಿಸಿದರು. ಹಿಂದುಸ್ಥಾನದ ಪ್ರಾಂತಿಕ ಭಾಷೆಗಳಾದರೂ ಆ ಕಾರಣಗಳ ಮೂಲಕವೆ ಪ್ರಗತಿಯನ್ನು ಹೊಂದಿದವು ಮತ್ತು ಮುಂದೆ ಅವುಗಳಲ್ಲಿ ಎಲ್ಲ ಬಗೆಯ ಗ್ರಂಥಗಳಾಗಿ ಮುಖ್ಯತಃ ಅಧ್ಯಾತ್ಮಶಾಸ್ತ್ರದ ಗ್ರಂಥಗಳೂ ರಚಿಸಲ್ಪಟ್ಟವು. ಹೀಗೆ ಆದಾಕ್ಷಣಕ್ಕೆ ಸಂಸ್ಕೃತದ ಮಹತ್ವವು ಮಾತ್ರ ಕಡಿಮೆಯಾಯಿ

ತೆಂದು ಯಾರೂ ತಿಳಿಯಕೂಡದು. ಮಾಂಡಲಿಕ ಅರಸರು ಎಷ್ಟು ಪ್ರಬಲರಾದರೂ ಅವರು ಸಮ್ರಾಟನ ಮಹತ್ವವನ್ನೆ ಹೆಚ್ಚಿಸುವಂತೆ ಅಥವಾ ನಕ್ಷತ್ರತಾರಕೆಗಳು ಎಷ್ಟು ಬೆಳಗಿದರೂ ಅವು ಚಂದ್ರನನ್ನು ಎಂದೂ ಸರಿಗಟ್ಟದಿರುವಂತೆ ಸಂಸ್ಕೃತದ ಪ್ರೌಢಿಗೆ ಯಾವ ಕುಂದೂ ಉಂಟಾಗಲಿಲ್ಲ. ಈ ವಿಶಾಲವಾದ ಭಾರತದೇಶದಲ್ಲಿ ಪಸರಿಸಿದ ವಿವಿಧ ಭಾಷೆಗಳನ್ನಾಡುವ ಬೇರೆಬೇರೆ ಜನರ ಗುಂಪುಗಳನ್ನು ಅವರೆಲ್ಲರ ಸಾಮಾನ್ಯ ಸಂಸ್ಕೃತಿಗೆ ಆಶ್ರಯರೂಪವಾದ ಸಂಸ್ಕೃತವಾಙ್ಮಯವು ಏಕಸೂತ್ರದಿಂದ ಕಟ್ಟಿರುವದು. ಆಯಾ ಪ್ರಾಂತಿಕ ಭಾಷೆಗಳಲ್ಲಿ ಬೇಕಾದಂಥ ಗ್ರಂಥಭಾಂಡಾರವಿದ್ದರೂ ಆಯಾ ಜನರಿಗೆ ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ ಇತ್ಯಾದಿ ಸಂಸ್ಕೃತ ಗ್ರಂಥಗಳು ಸೂರ್ಯನಂತೆ ಸದೈವ ತೇಜವನ್ನೂ ಪ್ರಕಾಶವನ್ನೂ ಸ್ಫೂರ್ತಿಯನ್ನೂ ಕೊಟ್ಟು ಅವರನ್ನು ಭರತಖಂಡದಲ್ಲಿಯ ಅನ್ಯಬಾಂಧವರೊಡನೆ ಏಕರಸಮಾಡುವವು. ಸಂಸ್ಕೃತವು ಅಖಿಲ ಆರ್ಯಾವರ್ತದ ಭಾಷೆಗಳಿಗೆ ಜನ್ಮದಾಯಿಯಾದ ಮಾತೃಸ್ಥಾನದಲ್ಲಿದ್ದು ದಕ್ಷಿಣಾಪಥದಲ್ಲಿ ಪ್ರಚಲಿತವಿದ್ದ ನುಡಿಗಳಿಗೆ ಪುಷ್ಟಿಯನ್ನು ಕೊಡುವ ಗೋಮಾತೆಯಂತೆ ಇದೆ. ಈಗ್ಯೂ ಅದು ಹಿಂದುಸ್ಥಾನದಲ್ಲಿ ಹಳೇ ಪರಂಪರೆಯ ಪಂಡಿತರ ಸಂಭಾಷಣದ ಭಾಷೆಯಿರುವದು, ಈಗ್ಯೂ ಎಲ್ಲ ಭಾಷೆಗಳು ಅದರಿಂದಲೆ ತಮ್ಮ ಶಬ್ದಭಾಂಡಾರವನ್ನು ಬೆಳೆಸುತ್ತಿರುವವು, ಮತ್ತು ಈಗ್ಯೂ ಅದು ಅತ್ಯಂತ ಶ್ರೇಷ್ಠವಾದ ಸನಾತನ ಹಾಗೂ ಶಾಶ್ವತ ಗ್ರಂಥಗಳ ರೂಪದಿಂದ ಆರ್ಯ ಸಂಸ್ಕೃತಿಯ ಆದರ್ಶವನ್ನು ಸಮ್ಮೆಲ್ಲರಿದುರಿಗೆ ಇಟ್ಟಿರುವದು ತಾತ್ಪರ್ಯವೇನಂದರೆ, ಸಂಸ್ಕೃತದ ಶ್ರೇಷ್ಠತೆ ಮತ್ತು ಮಹತ್ವ ಇವುಗಳನ್ನಳಿಯಗೊಡದೆ, ಸಾಮಾನ್ಯ ಜನರಲ್ಲಿ ಕೂಡ ಆಧ್ಯಾತ್ಮಿಕ ಮತ್ತು ಧಾರ್ಮಿಕ ವಿಚಾರಗಳನ್ನು ಜನ್ಮಾಗಿ ಪರಿಪಸುವ ಸದುದ್ದೇಶದಿಂದ ಎಲ್ಲರು ನುಡಿದಾಡುವ ಭಾಷೆಯಲ್ಲಿಯೆ ಸಮಾಜೋದ್ಧಾರಕರು ಗ್ರಂಥರಚನೆಯನ್ನು ಮಾಡಿದರು ಮತ್ತು ಎಲ್ಲರಿಗೂ ದಿವ್ಯಪಥವನ್ನು ತೋರಲು ಯತ್ನಿಸಿದರು.

೨೨. ಸಂಸ್ಕೃತದಲ್ಲಿಯೂ, ಹಳೆಯ ಧರ್ಮಗ್ರಂಥಗಳು ಸ್ವಲ್ಪ ದುರ್ಬೋಧವಾಗುತ್ತ ಹೋದಂತೆ ಅಥವಾ ಅವುಗಳ ಅರ್ಥವನ್ನು ಸ್ಪಷ್ಟೀಕರಿಸುವ ಪ್ರಸಂಗವು ಒದಗಿದಾಗ, ಆಯಾಕಾಲದ ಮಹನೀಯರು ಅವುಗಳಲ್ಲಿಯ ಸಾರವನ್ನು ಸುಲಭತರವಾದ ಸಂಸ್ಕೃತದಲ್ಲಿ ಭಾಷ್ಯ, ಟೀಕೆ, ವೇರೆ ಗ್ರಂಥರಚನೆ ಈ ಮುಂತಾದ ರೂಪದಿಂದ ಹೇಳಲುದ್ಯುಕ್ತರಾದರು. ಇಷ್ಟೇ

ಅಲ್ಲ, ಮುಖ್ಯ ತತ್ವಗ್ರಂಥಗಳಾದ ವೇದೋಪನಿಷತ್ತುಗಳನ್ನು ಸ್ತ್ರೀ ಶೂದ್ರಾದಿಗಳು ಓದಕೂಡದು ಮತ್ತು ಕೇಳಕೂಡದು ಎಂಬ ನಿರ್ಬಂಧವು ಆಗ ಬಲವುಳ್ಳದ್ದಿದ್ದುದರಿಂದ ಹಾಗೂ ಆರ್ಷಶೈಲಿಯ ಮೂಲಕ ಅವು ಓದಲಿಕ್ಕೆ ಮತ್ತು ತಿಳಿದುಕೊಳ್ಳಲಿಕ್ಕೆ ಕಠಿಣವಿರುವುದರಿಂದ ಆ ಗ್ರಂಥಗಳ ತಿರುಳನ್ನೆ ಒಳಗೊಂಡ ಹೆಚ್ಚು ಮನೋಹರ ಹಾಗೂ ಹಗುರಾಗಿರುವ ಕಥಾರೂಪ ಮಹಾಭಾರತವನ್ನು ವ್ಯಾಸಮುನಿಗಳು ರಚಿಸಿದರು. ಸ್ತ್ರೀ ಶೂದ್ರದ್ವಿಜಬಂಧುಗಳಿಗೆ ಜನ್ಮಾಗಿ ಉಪಯುಕ್ತವಾಗಬೇಕು, ಎಂಬುದು ಆ ಗ್ರಂಥರಚನೆಯ ಮುಖ್ಯ ಉದ್ದೇಶಗಳಲ್ಲಿ ಒಂದು. ಮುಂದೆ ಪಂಚಮ ವೇದ ಎಂಬ ಹೆಸರನ್ನು ಪಡೆಯುವಷ್ಟು ಆ ಗ್ರಂಥವು ಲೋಕಪ್ರಿಯವಾಗಿ ಮಹತ್ವವನ್ನು ಹೊಂದಿತು. ರಾಮಾಯಣರಚನೆಯಲ್ಲಿಯೂ ಈ ಉದ್ದೇಶವು ಮುಖ್ಯವಾಗಿತ್ತೆಂದು ಅದರ ಆದಿಯಲ್ಲಿ ಉಲ್ಲೇಖವಿದೆ. ಇದನ್ನೆಲ್ಲ ಇಲ್ಲಿ ಹೇಳುವ ಮುಖ್ಯ ಕಾರಣವೇನಂದರೆ, ಬುದ್ಧಿವಂತರಲ್ಲಿ ಹುಟ್ಟುವ ಅತ್ಯುಚ್ಚ ವಿಚಾರಗಳನ್ನೂ, ಮುನಿಮನೋಮಂಡಲದಲ್ಲಿ ಮೂಡುವ ದಿವ್ಯ ದರ್ಶನಗಳನ್ನೂ, ಶ್ರೇಷ್ಠ ಸಾಧುಸತ್ಪುರುಷರ ಹೃದಯದಲ್ಲಿ ಸ್ಫುರಿಸುವ ಭಾವವಿಶೇಷಗಳನ್ನೂ ಎಲ್ಲ ಮಾನವ ಬಳಗಕ್ಕೂ ಸಹಜ ತಿಳಿಯುವಂತೆ ಮಾಡಬೇಕು, ಎಂಬ ಲವಲವಿಕೆಯು ಆಯಾ ಕಾಲಕ್ಕೆ ಆಗಿ ಹೋದ ಮಹಾನ್ ವ್ಯಕ್ತಿಗಳಲ್ಲಿ ತೋರಿಬರುವದು. ಈ ತವಕವು ಅವರಲ್ಲಿರುವುದರಿಂದಲೆ, ಒಂದು ಪ್ರಚಂಡ ಪ್ರವಾಹದ ನೀರನ್ನು ಚಿಕ್ಕಪುಟ್ಟ ಕಾಲುವೆಗಳ ಮುಖಾಂತರ ದೂರದೂರದ ಹೊಲಗದ್ದೆಗಳಿಗೆ ಜಾಣ ಒಕ್ಕಲಿಗನು ಒಯ್ದು ಮುಟ್ಟಿಸುವಂತೆ, ಅವರು ಕಾಲಕಾಲಕ್ಕೆ ಜನರ ಬಾಯಿಭಾಷೆಯಲ್ಲಿ ಎಲ್ಲ ಉಚ್ಚವಿಚಾರಗಳನ್ನು ಅರುಹಿ ಜನಮನದಲ್ಲಿ ಜ್ಞಾನದ ಸಸಿಗಳನ್ನು ಬೆಳೆಸಲೆತ್ನಿಸಿರುವರು. ಈ ಕಾರಣದ ಮೂಲಕವೆ, ಸಂಸ್ಕೃತದಲ್ಲಿ ಎಷ್ಟೇ ಧಾರ್ಮಿಕ ಹಾಗೂ ಅಧ್ಯಾತ್ಮಿಕ ವಿಚಾರಗಳ ಗ್ರಂಥಗಳಿದ್ದರೂ ಅವು ಎಷ್ಟೇ ಸುಂದರ ಮತ್ತು ಅಧಿಕೃತ ರೀತಿಯಿಂದ ಬರೆಯಲ್ಪಟ್ಟಿದ್ದರೂ ಕರ್ನಾಟಕದಲ್ಲಿಯ ಅನೇಕ ಮಹನೀಯರು ಆ ಬಗೆಯ ವಿಚಾರಗಳನ್ನು ಕನ್ನಡದಲ್ಲಿ ಪ್ರಕಟಿಸಲನುವಾದರು.

೨೩. ಇನ್ನು ಸಂಸ್ಕೃತದಲ್ಲಿಯ ಸ್ಫೂರ್ತಿಯು ಅಥವಾ ಅಧಿಕಾರವು ಕನ್ನಡದಲ್ಲಿ ಹೇಗೆ ಬರಬಲ್ಲದು, ಎಂದು ಹಲವರು ಆಕ್ಷೇಪಿಸಬಹುದು. ಆದರೆ ಇದು ಕೇವಲ ಪೂರ್ವಗ್ರಹದೂಷಿತವಾದ ಅಥವಾ ಅಜ್ಞಾನದ ಮಾತು. ಯಾಕಂದರೆ ತಾನು ಇಂತಹ ಭಾಷೆಯಲ್ಲಿಯೆ ಅವತರಿಸುವೆನು,

ಎಂದು ಸ್ಫೂರ್ತಿಯು ಅಥವಾ ಜ್ಞಾನವು ಎಂದೂ ಹಟಹಿಡಿದಿಲ್ಲ! ಅಧಿಕಾರವಾದರೂ ಹೇಳುವ ಮನುಷ್ಯ, ಅವನ ಅನುಭವ, ಅವನ ಯೋಗ್ಯತೆ ಇವುಗಳನ್ನವಲಂಬಿಸಿರುವುದೆ ಹೊರತು ಯಾವದೇ ವಿಶಿಷ್ಟ ಭಾಷೆಯನ್ನವಲಂಬಿಸಿಲ್ಲ. ಭಾಷೆಯು ಭಾವವ್ಯಕ್ತಿಯ ಸಾಧನವು ಮಾತ್ರ, ಎಂಬುದನ್ನು ಸಾವ್ರ ಯಾವಾಗಲೂ ಲಕ್ಷದಲ್ಲಿಡುವದು ಅವಶ್ಯವು. ಇದುವರೆಗೆ ಪರದೇಶೀ ಭಾಷೆಗಳಲ್ಲಿ, ಹಿಂದುಸ್ಥಾನದ ಪ್ರಾಂತಿಕ ಭಾಷೆಗಳಲ್ಲಿ ಹಾಗೂ ಕನ್ನಡದಲ್ಲಿ ಪ್ರಕಟವಾದ ಮಾನ್ಯಗ್ರಂಥಗಳನ್ನು ಪರೀಕ್ಷಿಸಿದರೆ ಸ್ಫೂರ್ತಿಯ ಒಳಹುವು ಎಲ್ಲ ಭಾಷೆಗಳಲ್ಲಿಯೂ ಹರಿಯಬಲ್ಲದು ಎಂಬುದು ಸಿದ್ಧವಾಗುತ್ತದೆ. ಕನ್ನಡದಲ್ಲಿಯ ವಚನಶಾಸ್ತ್ರದ ಗ್ರಂಥಗಳು ಅಧ್ಯಾತ್ಮದ ಎಲ್ಲ ಮುಖ್ಯಾಂಗಗಳನ್ನು ವಿವರಿಸುವಂತಹವೂ ಶ್ರೇಷ್ಠ ಅನುಭವಿಕ ಸತ್ಪುರುಷ ಮತ್ತು ಸತ್‌ಸ್ತ್ರೀಯರಿಂದ ರಚಿಸಲ್ಪಟ್ಟವುಗಳೂ ಸ್ಫೂರ್ತಿಯಿಂದ ಹೊರಹೊಮ್ಮಿದವುಗಳೂ ಇರುವವು ಮತ್ತು ಮೇಲಿನ ವಿಧಾನವನ್ನು ಪುಷ್ಟೀಕರಿಸುವವು.

೨೪. ಶುದ್ಧ ಕನ್ನಡದಲ್ಲಿರುವ ವಚನಶಾಸ್ತ್ರವೆಂಬ ಅಧ್ಯಾತ್ಮಶಾಸ್ತ್ರವು ಎಲ್ಲಕ್ಕೂ ಶ್ರೇಷ್ಠವಾದ ಮಾನವೀ ಧ್ಯೇಯವನ್ನೂ ತತ್ಸಾಧನವಾದ ವಿಶಿಷ್ಟ ಉಪಾಸನಾಮಾರ್ಗವನ್ನೂ ಒಳಕೊಂಡಿರುವದು. ಈ ಶಾಸ್ತ್ರಕ್ಕೆ ಶೈವಾಗಮಗಳು ಪ್ರತ್ಯಕ್ಷವಾಗಿ ಮತ್ತು ವೇದೋಪನಿಷತ್ತುಗಳು ಅಪ್ರತ್ಯಕ್ಷವಾಗಿ ಮೂಲಾಧಾರಗಳಾಗಿರುವವು. ವಚನಶಾಸ್ತ್ರದ ಯಥಾರ್ಥ ಸ್ವರೂಪವೂ ಪರಂಪರೆಯೂ ಗೊತ್ತಾಗಬೇಕಾದರೆ ಹಿಂದೂ ಅಧ್ಯಾತ್ಮಶಾಸ್ತ್ರದಲ್ಲಿ ಈ ಶೈವ ಆಗಮಗಳ ಸ್ಥಾನವು ಯಾವುದು ಇದು ತಿಳಿಯುವದು ಅವಶ್ಯವು. ಆಗಮಗ್ರಂಥಗಳು ಎಷ್ಟು ಇರುವವು, ಅವು ಯಾವ ವಿಷಯವನ್ನು ಯಾವ ರೀತಿಯಿಂದ ಪ್ರತಿಪಾದಿಸುವವು, ಈ ಮುಂತಾದ ಮಾತುಗಳನ್ನು ಮುಂದೆ 'ಷಟ್‌ಸ್ಥಲಶಾಸ್ತ್ರ' ಎಂಬ ೧೦ನೆಯ ಪ್ರಕರಣದಲ್ಲಿ ಹೆಚ್ಚು ವಿಸ್ತಾರವಾಗಿ ಬರೆಯುವ ವಿಚಾರವಿದೆ. ಆದುದರಿಂದ ಇಲ್ಲಿ ಅದಕ್ಕೆ ಬಹಳ ಸ್ಥಳವನ್ನು ಕೊಡದೆ ಈ ಕೆಳಗೆ ಅದನ್ನು ಸಂಕ್ಷೇಪದಿಂದ ಹೇಳಿದೆ.

೨೫. ಹಿಂದೂಧರ್ಮದಲ್ಲಿ ವೇದಗಳೆ ಎಲ್ಲಕ್ಕೂ ಹೆಚ್ಚು ಪುರಾಣ ಭೂತ ಗ್ರಂಥಗಳು. ಅವು ಸ್ವಯಂಪ್ರಮಾಣ ಅಥವಾ ಸ್ವಯಂಸಿದ್ಧ ಇರುವವೆನ್ನುವದುಂಟು. ಅವುಗಳಲ್ಲಿರುವ ವಿಧಾನಗಳಿಗೆ ಎರಡನೆಯ ಯಾವ ಪ್ರಮಾಣಗಳ ಅವಶ್ಯಕತೆಯೂ ಇಲ್ಲ. ವ್ಯವಹಾರದಲ್ಲಿ ಅನುಭವವೆ ಹೇಗೆ ಅತ್ಯಂತಿಕ ಪ್ರಮಾಣವೊ ಹಾಗೆ ವೇದವಚನಗಳು ಧರ್ಮದಲ್ಲಿ ಪ್ರಮಾಣ, ಎಂದು ಹಿಂದೂಜನರು ನಂಬಿರುವರು. ಬೆಂಕಿ ಸುಡುವದು, ಎಂಬುದಕ್ಕೆ

ಬೆಕಳನ್ನು ಬೆಂಕಿಯಲ್ಲಿಟ್ಟರೆ ಅದು ಸುಡುವದು, ಎಂಬುದೇ ಹೇಗೆ ಪ್ರಮಾ
ಣವೊ ಹಾಗೆ ವೇದಮಂತ್ರಕ್ಕೆ ಅದು ವೇದದಲ್ಲಿ ಹೇಳಲ್ಪಟ್ಟಿರುವುದೆಂಬುದೇ
ಪ್ರಮಾಣವು. ವೇದ ಈ ಶಬ್ದದ ಅರ್ಥವು ಜ್ಞಾನ, ಅರಿವು, ಎಂದು ಇರು
ವದು. ಸಂಸ್ಕೃತಧಾತುವಾದ ವಿದ್ ಅಂದರೆ ಅರಿತುಕೊಳ್ಳು ಎಂಬುದ
ರಿಂದ ಈ ಶಬ್ದವು ಸಿದ್ಧವಾಗಿರುವದು. ವೇದಗಳು ಶಬ್ದರೂಪದಿಂದ ಸೃಷ್ಟಿ
ಯೊಡನೆಯೆ ಉತ್ಪನ್ನವಾದವು ಎಂದೂ ಇವು ಪುರುಷಕೃತವಲ್ಲದ್ದರಿಂದ
ಅಪೌರುಷೇಯವು ಎಂದೂ ನಂಬಿಗೆ ಇದೆ. ಅವುಗಳಿಗೆ ಶ್ರುತಿ ಎಂಬ ಅಭಿ
ಧಾನವೂ ಇರುವದು. ಶ್ರುತಿ ಎಂದರೆ ಕೇಳಿದ್ದು. ವೇದವು ಋಷಿಗಳು
ಕೇಳಿದ ದೇವವಾಣಿಯಾದುದರಿಂದ ಅದಕ್ಕೆ ಶ್ರುತಿ ಎನ್ನುವರು. ಋಷಿಗಳು
ವೇದಮಂತ್ರಗಳನ್ನು ಪ್ರತ್ಯಕ್ಷ ಕಂಡವರಾದುದರಿಂದ ಅವರಿಗೆ ಮಂತ್ರ
ದೃಷ್ಟಾರರು ಎಂಬ ಹೆಸರು ಇರುವದು. ಶ್ರದ್ಧೆಯ ದೃಷ್ಟಿಯಿಂದ ನೋಡಿ
ದವರಿಗೆ ಹೀಗೆ ಅನಾದಿ ಮತ್ತು ಅಪೌರುಷೇಯವೆಂದು ತೋರುವ ವೇದ
ಗಳು, ಬುದ್ಧಿಗೆ ಮತ್ತು ಐತಿಹಾಸಿಕ ದೃಷ್ಟಿಗೆ ಬೇರೆ ಬೇರೆ ಕಾಲಕ್ಕೆ ಬೇರೆ
ಬೇರೆ ಧೀರ ಹಾಗೂ ಶುದ್ಧಸತ್ವರಾದ ಕವಿಶ್ರೇಷ್ಠರು ದೇವದೇವತೆಗಳನ್ನು
ಮತ್ತು ಆತ್ಮ-ಪರಮಾತ್ಮನನ್ನು ಕುರಿತು ದೈವೀಸ್ಫುರಣದಿಂದ ಅಥವಾ
ದೇವೋನ್ಮಾದ ಸ್ಥಿತಿಯಲ್ಲಿರುವಾಗ ಬರೆದ ಸತ್ಕಾವ್ಯಗಳು, ಎಂಬಂತೆ
ತೋರುವವು. ಹೀಗೆ ಅಂದಾಕ್ಷಣಕ್ಕೆ ಇವುಗಳ ಪ್ರಾಮಾಣ್ಯವು ಮಾತ್ರ
ಯುತ್ಕಿಂಚಿತವಾದರೂ ಕದಿಮೆಯಾಗುವದು ಎಂದು ಯಾರೂ ತಿಳಿಯ
ಕೂಡದು. ಯಾಕಂದರೆ, ಅತ್ಯಂತ ಪ್ರಾಚೀನಕಾಲದಿಂದ ಮಾನವಕುಲದ
ಎಲ್ಲ ಜನಾಂಗದವರು ಈ ಬಗೆಯ ದೈವೀಸ್ಫೂರ್ತಿಯಿಂದ ಹೊರಹೊರಟ
ಅನುಭವಿಕ ಸಿದ್ಧಪುರುಷರ ವಾಣಿಯನ್ನೆ ಪ್ರಮಾಣವೆಂದು ತಿಳಿದು ತಮ್ಮ
ಧಾರ್ಮಿಕ ಜೀವನವನ್ನು ನಡೆಸುತ್ತ ಮತ್ತು ತಮ್ಮ ಆಚಾರವಿಚಾರಗ
ಳನ್ನು ತಿದ್ದುತ್ತ ಬಂದಿರುವರು. ಜ್ಞಾನವು ಅನಂತವಿರುವುದರಿಂದ ಅದನ್ನು
ಹೇಳುವ ವೇದಗಳೂ ಅನಂತವಿರುವವು, ಎಂಬ ಭಾವನೆಯಿರುವದು.
ಆದರೆ ಸದ್ಯಕ್ಕೆ ಋಕ್, ಯಜುಸ್, ಸಾಮ, ಮತ್ತು ಅಥರ್ವ ಈ ನಾಲ್ಕು
ವೇದಗಳೇ ಉಪಲಬ್ಧವಿರುವವು. ಇವುಗಳಲ್ಲಿ ಮತ್ತೆ, ಮೊದಲಿನ
ಮೂರೇ ಮಹತ್ವವುಳ್ಳವು. ಯಾಕಂದರೆ ನಾಲ್ಕನೆಯದಾದ ಅಥರ್ವವು
ಯಂತ್ರ, ತಂತ್ರ, ಮಂತ್ರ, ಜಾರಣ, ಮಾರಣ, ಅಭಿಚಾರ ಮುಂತಾದ
ಸಂಗತಿಗಳಿಂದ ತುಂಬಿದೆ. ಮೊದಲಿನ ಮೂರು ವೇದಗಳಿಗೆ ತ್ರಯಿವಿದ್ಯೆ,
ವೇದತ್ರಯಿ, ಅಥವಾ ಬರಿಪು ತ್ರಯಿ ಎಂದೆನ್ನುವ ಪರಿಪಾಠವೂ

ಉಂಟು. ವಿವಿಧ ದೇವತೆಗಳ ಸ್ತುತಿಸ್ತೋತ್ರ, ಯಜ್ಞಯಾಗಾದಿ ಕರ್ಮ
ಗಳು ಮತ್ತು ಅವುಗಳ ವಿಧಿವಿಧಾನ, ಯಜ್ಞಮಂತ್ರಗಳು ಇವೇ ಈ
ಮೂರು ವೇದಗಳ ಮುಖ್ಯ ವಿಷಯಗಳು. ವೇದಗಳಲ್ಲಿ, ಚಿನ್ನದ ರಾಶಿ
ಯಲ್ಲಿ ಮಿಂಚುವ ವಜ್ರಗೋಲಕಗಳಂತೆ ಮಾತ್ರ, ಅಲ್ಲಲ್ಲಿ ಅಧ್ಯಾತ್ಮವಿಷ
ಯಕ ಮಂತ್ರಗಳು ಕಂಡುಬರುವವು. ನಿಜವಾದ ಅಧ್ಯಾತ್ಮಶಾಸ್ತ್ರವು
ಉಪನಿಷತ್ತ್ರುಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವದು. ಈ ವೇದಗಳ ಅಂತ್ಯ
ಭಾಗಗಳೇ ಉಪನಿಷತ್ತ್ರುಗಳು ಎಂಬ ಹೆಸರನ್ನು ತಳೆದಿರುವವು. ಇವು
ವೇದಗಳ ಅಂತ್ಯಭಾಗಗಳಿದ್ದರೂ ಇವುಗಳಲ್ಲಿ ಅಧ್ಯಾತ್ಮಶಾಸ್ತ್ರವೂ ಉಪಾ
ಸನಾಮಾರ್ಗವೂ ಪ್ರಧಾನವಾಗಿ ಹೇಳಲ್ಪಟ್ಟಿರುವದರಿಂದ ಇವುಗಳಿಗೆ
ಧಾರ್ಮಿಕವಾಙ್ಮಯದಲ್ಲಿ ಸ್ವತಂತ್ರಸ್ಥಾನವು ಕೊಡಲ್ಪಟ್ಟಿದೆ. ಆದುದರಿಂದ
ಬಹುಶಃ ಯಾವಾಗಲೂ ವೇದ ಮತ್ತು ಉಪನಿಷತ್ತು ಈ ಗ್ರಂಥಗಳನ್ನು
ಪ್ರತ್ಯೇಕವಾಗಿ ಉಲ್ಲೇಖಿಸುವ ರೂಢಿಯು ಅಂದರೆ ವೇದೋಪನಿಷತ್ತ್ರುಗಳು
ಎಂದೆನ್ನುವ ರೂಢಿಯು ಪ್ರಚಲಿತವಾಗಿರುವದು. ಉಪನಿಷತ್ತು ಎಂಬ
ಹೆಸರಿನ ಅನೇಕ ಗ್ರಂಥಗಳು ಈಗ ವಿಚಾರದಲ್ಲಿದ್ದರೂ ಈಶ, ಕೇನ, ಕಠ,
ಪ್ರಶ್ನ, ಮುಂಡಕ, ಮಾಂಡೂಕ್ಯ, ಐತರೇಯ, ತೈತ್ತಿರೀಯ, ಛಾಂದೋಗ್ಯ,
ಮತ್ತು ಬೃಹದಾರಣ್ಯಕ ಈ ದಶೋಪನಿಷತ್ತ್ರುಗಳೇ ಮುಖ್ಯ ಮತ್ತು
ಪ್ರಮಾಣಭೂತವೆಂದು ತಿಳಿಯಲ್ಪಡುತ್ತವೆ. ಇವುಗಳಲ್ಲಿಯ ಪ್ರತಿಯೊಂದು
ಉಪನಿಷತ್ತು ವೇದಗಳಲ್ಲಿ ಯಾವುದೊಂದನ್ನು ಹೊಂದಿರುವದು. ಉದಾ:
ಐತರೇಯವು ಋಗ್ವೇದವನ್ನು, ಕೇನಛಾಂದೋಗ್ಯಗಳು ಸಾಮವೇದವನ್ನು,
ಈಶ, ತೈತ್ತಿರೀಯ, ಬೃಹದಾರಣ್ಯಕ ಇವು ಯಜುರ್ವೇದವನ್ನು, ಹೀಗೆ
ಹೊಂದಿರುವವು. ಆತ್ಮಾನಾತ್ಮವಿಚಾರ, ಆತ್ಮಸ್ವರೂಪ, ಮೋಕ್ಷ
ಸ್ವರೂಪ, ಬ್ರಹ್ಮಜ್ಞಾನದಮಾರ್ಗ ಇವೇ ವಿಷಯಗಳು ಮುಖ್ಯವಾಗಿ
ಉಪನಿಷತ್ತ್ರುಗಳಲ್ಲಿ ಚರ್ಚಿಸಲ್ಪಟ್ಟಿವೆ. ಆದುದರಿಂದ ವೇದ ಮತ್ತು ಉಪ
ನಿಷತ್ತು ಇವು ಕ್ರಮವಾಗಿ ಕರ್ಮ ಮತ್ತು ಜ್ಞಾನಮಾರ್ಗವನ್ನು ಪ್ರತಿ
ಪಾದಿಸುವವು, ಎಂದು ಹೇಳಬಹುದು. ಉಪನಿಷತ್ತ್ರುಗಳು ಮುಖ್ಯವಾಗಿ
ಅಧ್ಯಾತ್ಮವನ್ನೆ ಹೇಳುತ್ತಿದ್ದರೂ ಅದನ್ನು ತಾವು ವೇದಗಳ ಆಧಾರದಿಂದಲೆ
ಹೇಳುತ್ತಿರುವಂತೆ ನಡುನಡುವೆ, **ತದೇತದೃಚಾಭ್ಯುಕ್ತಮ್**– ಅದು ಈ
ಋಜೆಯಿಂದ ಹೇಳಲ್ಪಟ್ಟಿದೆ, ಅಥವಾ **ತದೇಷ ಶ್ಲೋಕಃ**– ಆ ಬಗ್ಗೆ ಈ
ಶ್ಲೋಕವು, ಎಂದು ಅವು ಪೂರ್ವವಚನಗಳನ್ನು ಮತ್ತು ವೇದಗಳಲ್ಲಿಯ
ಅವತರಣಗಳನ್ನು ಕೊಡುವವು. ವೇದಗಳಲ್ಲಿಯ ಕೇವಲ ಕರ್ಮಮಾರ್ಗ

ವನ್ನೂ ಸಕಾಮ ಯಜ್ಞಯಾಗಾದಿಗಳನ್ನೂ ತತ್ಫಲವಾದ ಸ್ವರ್ಗಾದಿ ಭೋಗಲೋಕಗಳನ್ನೂ ಉಪನಿಷತ್ತುಗಳು ಹೀಯಾಳಿಸುವವು. ಹೀಗಿದ್ದರೂ ವೇದಗಳು ಪ್ರತಿಪಾದಿಸಿದ ತತ್ವಗಳನ್ನೆ ಉಪನಿಷತ್ತುಗಳು ಹೆಚ್ಚು ಸ್ಪಷ್ಟೀಕರಿಸುವವು ಅಥವಾ ವೇದಗಳಿಗೆ ಉಪನಿಷತ್ತುಗಳು ಪೂರಕರೂಪವಾಗಿರುವವು, ಎಂದು ಅನ್ನಬಹುದು. ವೇದೋಪನಿಷತ್ತುಗಳಲ್ಲಿಯ ಚಿಕ್ಕಪುಟ್ಟ ಅನ್ಯೋನ್ಯಮತಭೇದಗಳಿಗೆ ಮಹತ್ವಕೊಡದೆ ಎರಡೂ ಒಂದಕ್ಕೊಂದು ಅವಿರೋಧವಾಗಿ ಒಂದೇ ಧರ್ಮಮಾರ್ಗವನ್ನು ಅಧಿಕಾರಭೇದದಿಂದ ಹೇಳುವವು ಎಂದೂ ಈ ಎರಡೂ ಗ್ರಂಥಗಳಲ್ಲಿ ತಾತ್ವಿಕ ಏಕವಾಕ್ಯತೆ ಇರುವದೆಂದೂ ತಿಳಿದುಕೊಳ್ಳುವದು ಅವಶ್ಯವು. ಹೀಗೆ ಮಾಡುವುದರಿಂದ ಪರಂಪರಾಭಂಗದ ದೋಷವು ಬಾರದು ಮತ್ತು ಈ ಎರಡೂ ಗ್ರಂಥಗಳಿಗೆ ಕೂಡಿ ಇಟ್ಟ ಶ್ರುತಿ ಎಂಬ ಪ್ರಾಮಾಣ್ಯದರ್ಶಕವಾದ ಹೆಸರು ಅಯಥಾರ್ಥವಾಗದು.

೨೬. ವೇದೋಪನಿಷತ್ತುಗಳು ಒಂದೇ ಶ್ರುತಿಯ ಪೂರ್ವೋತ್ತರ ಭಾಗಗಳಿದ್ದರೂ ವೇದಗಳಲ್ಲಿ ಪ್ರಧಾನವಾದ ಕಾಮ್ಯಕರ್ಮ ಮತ್ತು ಸ್ವರ್ಗೇಚ್ಛೆ ಇವುಗಳನ್ನು ಉಪನಿಷತ್ತುಗಳು ಬಲವಾಗಿ ಖಂಡಿಸಿದ್ದರಿಂದ ಮುಂದೆ ಯಜ್ಞಯಾಗಾದಿ ಕರ್ಮಗಳಿಗೆ ಗೌಣತ್ವವು ಬಂದಿತು ಮತ್ತು ತತ್ವಜ್ಞಾನ ಹಾಗೂ ಉಪಾಸನೆ ಇವುಗಳೇ ಪ್ರಧಾನವಿದ್ದ ಜ್ಞಾನಮಾರ್ಗವು ಹೆಚ್ಚು ಪ್ರಚಾರಗೊಂಡಿತು. ಪಶುವಧಕ್ಕೆ ಕಾರಣವಾಗುವ ಯಜ್ಞಯಾಗಾದಿಗಳನ್ನು ತಡೆಯಲಿಕ್ಕೆ ಜ್ಞಾನಮಾರ್ಗವು ಸಹಾಯಕವಾದಂತೆ ಪೂರ್ಣ ಅಹಿಂಸೆಯನ್ನು ಪದೇಶಿಸುವ ಜೈನ ಬೌದ್ಧಮತಗಳೂ ಎಷ್ಟೋಪಟ್ಟಿಗೆ ಕಾರಣವಾದವು. ವೇದೋಕ್ತ ಅನೇಕ ದೇವತೆಗಳಿಗೆ ಯಾವ ಮಹತ್ವವನ್ನೂ ಕೊಡದೆ ಉಪನಿಷತ್ತುಗಳು ಬ್ರಹ್ಮನನ್ನೆ ಅಥವಾ ಪರಮಾತ್ಮನನ್ನೆ ಪರಮದೈವತವೆಂದು ತಮ್ಮ ಧ್ಯೇಯವನ್ನಾಗಿಟ್ಟುಕೊಂಡಿರುವವು. ಸಕಾಮಕರ್ಮದ ಬದಲು ನಿಷ್ಕಾಮ ಉಪಾಸನೆಯನ್ನು ಮುಖ್ಯವಾಗಿ ಹೇಳಿ 'ಅಕಾಮಹತನಾದ' ಅಂದರೆ ಕಾಮಗಳಿಂದ ಪೀಡಿತನಾಗದೆ ಇರುವ ಜ್ಞಾನಿಯು ಪರಮ ಬ್ರಹ್ಮಾನಂದವನ್ನು ಪಡೆಯುವನು, (ತೈತ್ತಿರೀಯ-೩-೮ ಅನುವಾಕ) ಎಂದು ಉಪನಿಷತ್ಕಾರರು ವಿಧಾನ ಮಾಡಿರುವರು. ಮಿತ್ರ, ವರುಣ, ಇಂದ್ರ, ಅಗ್ನಿ, ಮರುದ್ಗಣ, ಮುಂತಾದ ವೈದಿಕ ದೇವತೆಗಳಿಗೆ ಉಪನಿಷತ್ತುಗಳಲ್ಲಿ ಸ್ಥಳವೇ ಇಲ್ಲವೆಂದರೂ ಸಲ್ಲುವದು. ನಿರ್ಗುಣನಿರಾಕಾರ, ಅನಾದಿಅನಂತ, ಸರ್ವವ್ಯಾಪಿ, ಸಚ್ಚಿತ್

ಸ್ವರೂಪನಾದ ಏಕವೇವ ಪರಮಾತ್ಮನೆ ಎಲ್ಲಕ್ಕೂ ಮೂಲವಸ್ತುವು, ಅವನ ಇಚ್ಛಾಮಾತ್ರದಿಂದಲೆ ಅನೇಕತ್ವವು ಆಗಿದ್ದರೂ ತತ್ವತಃ ಅವನೇ ಎಲ್ಲೆಲ್ಲಿಯೂ ಇರುವನು, ಓಂಕಾರಾದಿ ಪ್ರತೀಕಗಳಿಂದ ಅವನು ಉಪಾಸ್ಯನು. ಶ್ರದ್ಧೆ, ತಪಸ್ಸು, ಧ್ಯಾನ, ಅರಣ್ಯಾದಿಗಳಲ್ಲಿ ಏಕಾಂತವಾಸ, ಬ್ರಹ್ಮಚರ್ಯ ಇತ್ಯಾದಿ ಸಾಧನಗಳಿಂದ ಚಿತ್ತವನ್ನು ಶುದ್ಧೀಕರಿಸಿ ಅದನ್ನು ಪರಮಾತ್ಮನಲ್ಲಿ ಏಕಾಗ್ರಮಾಡಿ ಚಿತ್ತಲಯವನ್ನು ಸಾಧಿಸಿ ಜನ್ಮಮರಣರಹಿತ ಬ್ರಹ್ಮೈಕ್ಯವನ್ನು ಪಡೆಯುವದೆ ಎಲ್ಲಕ್ಕೂ ಶ್ರೇಷ್ಠವಾದ ಧ್ಯೇಯವು, ಎಂದು ಉಪನಿಷತ್ತುಗಳು ಪ್ರತಿಪಾದಿಸುವವು. ಮುಂದೆ ವೇದೋಪನಿಷತ್ತುಗಳ ಪರಂಪರೆಯನ್ನೆ ಹೇಳುವ ಮತ್ತು ಅವುಗಳಿಂದ ಸ್ವಲ್ಪ ಬೇರೆಯಾಗಿದ್ದರೂ ಅವುಗಳಿಗೆ ಅತ್ಯಂತ ವಿರೋಧಿಯೆಂದು ಪ್ರತಿಪಾದಿಸುವ ಜ್ಞಾನ, ಕರ್ಮ, ಉಪಾಸನೆಗಳನ್ನು ಒಳಗೊಂಡ ಆಗಮಗಳು ಅಸ್ತಿತ್ವದಲ್ಲಿ ಬಂದವು. ತತ್ವಜ್ಞಾನದ ಪ್ರತಿಪಾದನೆಗಿಂತ ಉಪಾಸನಾಕ್ರಮಗಳೆ ಇವುಗಳಲ್ಲಿ ಹೆಚ್ಚು ವಿಸ್ತಾರವಾಗಿ ಹೇಳಲ್ಪಟ್ಟದ್ದರಿಂದ ಇವುಗಳಿಗೆ ತಂತ್ರಗಳೆಂದೂ ಅನ್ನುವದುಂಟು. ಈ ಆಗಮಗ್ರಂಥಗಳಲ್ಲಿ ಮತ್ತೆ ಶೈವಾಗಮ, ಶಾಕ್ತಾಗಮ, ಮತ್ತು ವೈಷ್ಣವಾಗಮ ಅಥವಾ ಪಾಂಚರಾತ್ರಾಗ್ರಮ ಎಂಬ ಮೂರು ಮುಖ್ಯ ಬಗೆಗಳಿರುವವು. ಆಯಾ ಆಗಮಗಳಲ್ಲಿ ಉಕ್ತವಾದ ಇಷ್ಟ ದೇವತೆಗಳು ಹಾಗೂ ವಿಶಿಷ್ಟ ಉಪಾಸನಾಕ್ರಮಗಳು ಇವುಗಳ ಮೂಲಕವೆ ಈ ಮೂರು ಭೇದಗಳು ಆಗಿವೆ. ಇದಲ್ಲದೆ, ವೈದಿಕ ಹಾಗೂ ಅವೈದಿಕವೆಂಬ ಅಥವಾ ದಕ್ಷಿಣಾಚಾರ ಹಾಗೂ ವಾಮಾಚಾರವೆಂಬ ಮೇಲು ಕೀಳು ಆಚಾರಗಳನ್ನು ಹೇಳುವ ಗ್ರಂಥಗಳು ಎಂದು ಈ ಆಗಮಗಳಲ್ಲಿ ಮತ್ತೆ ಭೇದಗಳಿರುವವು. ಆದರೆ ಇಲ್ಲಿ ನಮಗೆ ಪ್ರಸ್ತುತವಾದ ಗ್ರಂಥಗಳೆಂದರೆ ವೈದಿಕವೆಂದೆನಿಸುವ ಇಪ್ಪತ್ತೆಂಟು ಶೈವಾಗಮಗಳು. ವಿಚಾರಪರಂಪರೆಯ ದೃಷ್ಟಿಯಿಂದ ಇವೇ ಕನ್ನಡ ವಚನಶಾಸ್ತ್ರದ ತಳಹದಿಯಾಗಿರುವವು.

೨೭. ಆಗಮ ಎಂದರೆ ಜ್ಞಾನ, ಶಾಸ್ತ್ರ ಎಂಬ-ಅರ್ಥವಿರುವದು. ಶೈವಾಗಮಗಳೆಂದರೆ ಶಿವೋಕ್ತ ಆಗಮಗಳು ಅಥವಾ ಪರತತ್ವವಾದ ಶಿವನ ವಿಷಯಕ ಜ್ಞಾನವು ಅಥವಾ ಶಾಸ್ತ್ರವು. ಕಾಮಿಕಾದಿ ವಾತುಲಾಂತ ಮುಖ್ಯ ಇಪ್ಪತ್ತೆಂಟು ಆಗಮಗಳಿರುವವು. ಇದಲ್ಲದೆ ಉಪಾಗಮಗಳೂ ಇರುವವು. ಇವೂ ವೇದಗಳಂತೆ ಅಪೌರುಷೇಯ ವಾಣಿಯೆ ಇರುವವೆಂದು ಶೈವರ ನಂಬಿಗೆ ಇರುವದು. 'ಇಪ್ಪತ್ತೆಂಟು ದಿವ್ಯಾಗಮಂಗಳು' ಎಂದು ಗಣದಾಸೀ ವೀರಣ್ಣನು ಅವುಗಳನ್ನು ಉಲ್ಲೇಖಿಸಿರುವನು. ಅಪೌರುಷೇಯ

ವೆಂದರೆ ಇಲ್ಲಿಯಾದರೂ ದೈವೀಸೃಷ್ಟಿಯಿಂದ ನಿರ್ಮಾಣವಾದ ಶಾಸ್ತ್ರವು ಎಂದು ತಿಳಿಯುವುದು ಉಚಿತವು. ತತ್ವಜ್ಞಾನಕ್ಕಿಂತ ಶೈವ ಆಗಮಗ್ರಂಥಗಳಲ್ಲಿ ಸಾಧನವಿಷಯವೆ ಹೆಚ್ಚು ಇರುವದು. ಶಿವಾದ್ವೈತವೆ ಇವುಗಳಲ್ಲಿ ಹೇಳಿದ ತತ್ವಜ್ಞಾನದ ತಿರುಳು. ಪರಶಿವನು ತನ್ನ ವಿಮರ್ಶಾಶಕ್ತಿಯಿಂದ ಈ ಸೃಷ್ಟಿ ಮತ್ತು ತದಂತರ್ಗತವಾದ ಭೂತಗಳನ್ನು ನಿರ್ಮಿಸಿದನು; ಹೀಗೆ ನಿರ್ಮಿಸುವಾಗ ಉತ್ಪನ್ನವಾದ ಮಾಯೆಯಿಂದ ಅಥವಾ ನಿಗೂಹನ ಶಕ್ತಿಯಿಂದ ಜೀವನು ತನ್ನ ಜ್ಞಾನವನ್ನು ಮರೆತು ಸಂಸಾರಚಕ್ರದಲ್ಲಿ ದುಃಖದಿಂದ ತೊಳಲಾಡುವನು, ಆದುದರಿಂದ ಈ ಪ್ರವೃತ್ತಿಪೂರ್ಣ ಸೃಷ್ಟಿಯಲ್ಲಿ ಅವನು ನಿವೃತ್ತಿಮೂಲಕವಾದ ವೈರಾಗ್ಯ, ಭಕ್ತಿ, ಜ್ಞಾನ, ನಿಷ್ಕಾಮಕರ್ಮ ಈ ಸಾಧನಗಳಿಂದ ಶಿವೈಕ್ಯವನ್ನು ಪಡೆಯಲು ಪ್ರಯತ್ನಿಸಬೇಕು; ಪರಮ ಧ್ಯೇಯವಾದ ಈ ಶಿವೈಕ್ಯವನ್ನು ಪಂಚಾಚಾರ ಪಾಲನೆ, ಅಷ್ಟಾವರಣ ಮುಂತಾದವುಗಳಿಂದ ಸಾಧಿಸಬೇಕು; ಮತ್ತು ಆಯಾ ಸ್ಥಲಗಳಲ್ಲಿರುವಾಗ ಷಟ್‌ಸ್ಥಲಗಳಿಗೆ ಯೋಗ್ಯವಾದ ಆಚಾರಗಳನ್ನು ನಿಷ್ಠೆಯಿಂದ ಆಚರಿಸಬೇಕು, ಎಂದು ಮುಂತಾಗಿ ಶೈವಾಗಮಗಳು ಉಪದೇಶಿಸುವವು. ಅದ್ವೈತ ತತ್ವಜ್ಞಾನ, ಶಿವಸರ್ವೋತ್ತಮತ್ವ, ಶಿವೈಕ್ಯವೆಂಬ ಧ್ಯೇಯ, ಸರ್ವಭಾವದಿಂದ ಪರಶಿವನಿಗೆ ಪೂರ್ಣಾರ್ಪಣ, ಇಷ್ಟಲಿಂಗ ಪೂಜೆಯ ಮುಖಾಂತರ ಧ್ಯಾನ ಸಾಧನ, ನೀತಿಯುಕ್ತ ಸದಾಚರಣೆ, ಇವೇ ಮುಂತಾದವುಗಳು ಶೈವಾಗಮಗಳಲ್ಲಿರುವ ಉಪದೇಶದ ಮುಖ್ಯ ಲಕ್ಷಣಗಳು. ವಚನಶಾಸ್ತ್ರವು ಈ ಎಲ್ಲ ಲಕ್ಷಣಗಳಿಂದ ಲಕ್ಷಿತವಿರುವದೆಂದು ಬೇರೆ ಹೇಳಬೇಕಾಗಿಲ್ಲ. ಇಷ್ಟೇ ಅಲ್ಲ. ಆಗಮೋಕ್ತ ಆಚಾರಗಳ ಅಪಯೋಗದ ಅಥವಾ ಅತಿರೇಕದ ಮೂಲಕ ಸಮಾಜದಲ್ಲಿ ಬೆಳೆದ ಅನೇಕ ದೋಷಗಳನ್ನು ವಚನಕಾರರು ಒಳ್ಳೆ ಸೇರವಾಗಿ ಬಲವುಳ್ಳ ಭಾಷೆಯಿಂದ ಖಂಡಿಸಿ, ಕುಗ್ಗಿಸಿ ಆಗಮಗಳಿಗಿಂತ ಒಂದೆರಡು ಹೆಜ್ಜೆ ಮುಂದೆಯೆ ಹೋಗಿರುವರೆಂದು ಅನ್ನಬಹುದು.

೨೮. ಹೀಗೆ ವಚನಶಾಸ್ತ್ರದ ಪರಂಪರೆಯು ಶೈವಾಗಮಗಳ ಮುಖಾಂತರ ವೇದೋಪನಿಷತ್ತುಗಳವರೆಗೆ ಅಂದರೆ ಹಿಂದೂಧರ್ಮದ ಆದಿಗ್ರಂಥಗಳವರೆಗೆ ಹೋಗಿಮುಟ್ಟುವದು. ಅವುಗಳಲ್ಲಿ ಹೇಳಿದ ತತ್ವಜ್ಞಾನವೆ ಈ ಶಾಸ್ತ್ರದಲ್ಲಿಯ ತತ್ವವಿಚಾರಗಳ ಬೀಜವು, ಅವುಗಳಲ್ಲಿಯ ಉಪಾಸನೆಯೆ ಬೇರೆ ರೂಪಗಳನ್ನು ಧರಿಸಿ ಈ ಶಾಸ್ತ್ರದಲ್ಲಿ ಮೈದೋರುವದು. ಒಟ್ಟಿಗೆ ವಚನಶಾಸ್ತ್ರಕ್ಕೆ 'ಕನ್ನಡ ಶೈವಾಗಮಗಳು' ಎಂದು ಹೆಸರಿಟ್ಟರೆ ಯಥಾರ್ಥವೆ ಆಗುವದು. ಹೀಗೆ ಅಂದಾಕ್ಷಣಕ್ಕೆ ಈ ವಚನ

ಶಾಸ್ತ್ರವು ಶೈವಾಗಮಗಳ ಕೇವಲ ಕನ್ನಡ ಭಾಷಾಂತರವು ಅಥವಾ ಸಂಸ್ಕೃತ ಶೈವಾಗಮಗಳ ಬರಿಯ ಕನ್ನಡ ಪ್ರತಿಯು, ಎಂದು ಮಾತ್ರ ಯಾರೂ ತಿಳಿಯಕೂಡದು. ಈ ಶಾಸ್ತ್ರವನ್ನು ಯಾರು ರಚಿಸಿರುವರು ಮತ್ತು ಇದರ ಉಗಮವು ಹೇಗೆ ಆಗಿರುವದು ಇದನ್ನು ಚನ್ನಾಗಿ ವಿಮರ್ಶಿಸಿದರೆ ಹಾಗೂ ಇದರಲ್ಲಿಯ ವಿಚಾರಪ್ರೌಢಿಮೆ, ಭಾವೈಶ್ವರ್ಯ, ಬಲಶಾಲಿಯಾದ ಭಾಷಾಶೈಲಿ ಇವುಗಳನ್ನು ಲಕ್ಷಿಸಿದರೆ ಇದೊಂದು ವೈಲಿಕವಾದ, ಧಾರ್ಮಿಕವಾಙ್ಮಯವೆ ಇರುವದೆನ್ನಬೇಕಾಗುವದು.

೨೯. ವೇದೋಪನಿಷತ್ತುಗಳ ಕಾಲದ ನಂತರ ಪ್ರಚಲಿತವಾದ, ವಿಷ್ಣು, ಶಿವ, ಶಕ್ತಿ ಈ ದೇವತೆಗಳೆ ಇಷ್ಟದೇವತೆಗಳಿರುವ ವೈಷ್ಣವ, ಶೈವ, ಮತ್ತು ಶಾಕ್ತಪಂಥಗಳು ಯಾವ ಸಂಧಿಗೆ ಅಸ್ತಿತ್ವದಲ್ಲಿ ಬಂದವು ಇದನ್ನು ನಿಶ್ಚಿತವಾಗಿ ಹೇಳುವದು ಕಠಿಣ. ಇವು ಮೂರೂ ಒಮ್ಮೆಲೆ ಪ್ರಚಾರಗೊಂಡವೊ ಅಥವಾ ಹಿಂದೆ ಮುಂದೆ ಪ್ರಚಾರದಲ್ಲಿ ಬಂದವೊ, ಇವು ಸ್ವತಂತ್ರವಾಗಿ ಅಸ್ತಿತ್ವದಲ್ಲಿ ಬಂದವೊ ಅಥವಾ ಆರ್ಯೇತರ ಜನಾಂಗಗಳಲ್ಲಿ ಪ್ರಚಲಿತವಿದ್ದ ಉಪಾಸನೆಗಳಿಗೆ ಆರ್ಯಸಂಸ್ಕೃತಿಯ ಸಂಪರ್ಕ ಸಂಗಸಹವಾಸಗಳ ಮೂಲಕ ಮುಂದೆ ಈ ಸ್ವರೂಪವು ಪ್ರಾಪ್ತವಾಯಿತೊ ಎಂಬ ಮುಂತಾದ ಮಾತುಗಳನ್ನು ವಿಚಾರಿಸುವದು ಅವಶ್ಯವಿದ್ದರೂ ಈಗ ಸದ್ಯಕ್ಕೆ ಅವುಗಳ ಬಗ್ಗೆ ನಿಶ್ಚಿತವಾಗಿ ಇಲ್ಲಿ ಹೇಳುವದು ದುಃಸಾಧ್ಯವು. ಅದೇ ರೀತಿ, ಶೈವಾಗಮಗಳಲ್ಲಿ ಹೇಳಿದ ಶೈವಮಾರ್ಗವು ಕರ್ನಾಟಕದಲ್ಲಿ ಯಾವ ಕಾಲದಿಂದ ಪ್ರಚಾರದಲ್ಲಿ ಬಂದಿರುವದು ಇದೂ ಸಂಶೋಧನದ ವಿಷಯವೆ ಇರುವದು. ಅದು ವೈಷ್ಣವ ಮತ್ತು ಶಾಕ್ತಮಾರ್ಗಗಳಷ್ಟೆ ಪುರಾತನವಿರುವದೆಂಬಲ್ಲಿ ಯಾವ ಸಂಶಯವೂ ಇಲ್ಲ. ನಮ್ಮ ಪ್ರಸ್ತುತ ವಿಷಯವಾದ ವಚನಶಾಸ್ತ್ರವು ಸುಮಾರು ಒಂದು ಸಾವಿರ ವರ್ಷಗಳಿಗಿಂತ ಹೆಚ್ಚು ಹಳೆಯದಿರುವದೆಂದು ಸದ್ಯಕ್ಕೆ ಯಾರೂ ಪ್ರತಿಪಾದಿಸುವುದಿಲ್ಲ. ಇದರ ಮೇಲಿಂದ ನೋಡಲಾಗಿ, ಶೈವಮಾರ್ಗವು ಮತ್ತು ಶೈವಾಗಮಗಳು ಕರ್ನಾಟಕದಲ್ಲಿ ನೆಲೆಗೊಂಡ ಬಳಿಕ ಎಷ್ಟೋ ಶತಕಗಳ ನಂತರ ವಚನ ಶಾಸ್ತ್ರರಚನೆಗೆ ಪ್ರಾರಂಭವಾಯಿತೆನ್ನಬಹುದು. ಇನ್ನು ಕನ್ನಡದಲ್ಲಿ ವಚನಶಾಸ್ತ್ರದ ಅವತಾರವಾಗಲಿಕ್ಕೆ ಕಾರಣವೇನು ಎಂಬುದು ವಿಚಾರಣೀಯವಿರುವದು.

೩೦. ವೇದೋಪನಿಷತ್ತುಗಳಂಥ ಶ್ರೇಷ್ಠ ಗ್ರಂಥಗಳು ಅಸ್ತಿತ್ವದಲ್ಲಿದ್ದರೂ ಬೇರೆ ಸುಲಭ ಸಂಸ್ಕೃತ ಧರ್ಮಗ್ರಂಥಗಳು ರಚಿಸಲ್ಪಡಲಿಕ್ಕೆ

ಮತ್ತು ಪ್ರಾಂತಿಕ ಭಾಷೆಗಳಲ್ಲಿ ಮತಗ್ರಂಥಗಳಾಗಲಿಕ್ಕೆ ಯಾವ ಕಾರಣಗಳಾದವೊ ಅವೇ ಕನ್ನಡ ವಚನಶಾಸ್ತ್ರದ ಅವತಾರವಾಗಲಿಕ್ಕೆ ಕಾರಣವಾಗಿರುವವು ಎಂಬಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಕನ್ನಡದಲ್ಲಿ ಮೊದಲು ಮತಗ್ರಂಥಗಳನ್ನು ವಿಶೇಷವಾಗಿ ರಚಿಸಿದವರು ಜೈನರು. ಸರ್ವಸಾಮಾನ್ಯರಲ್ಲಿ ಧರ್ಮಕಲ್ಪನೆಗಳನ್ನು ಹರಡಬೇಕಾದರೆ ಅವರವರ ಮಾತೃಭಾಷೆಯಲ್ಲಿಯೆ ಅವುಗಳ ಪ್ರಚಾರವಾಗುವದು ಅತ್ಯವಶ್ಯವು. ಈ ಮಾತನ್ನು ಮೊದಲು ತಿಳಿದುಕೊಂಡು ಜೈನ ಕವಿಗಳು ತಮ್ಮ ಧರ್ಮತತ್ವಗಳನ್ನೂ ಧರ್ಮವಿಚಾರಗಳನ್ನೂ ಪ್ರೌಢಶೈಲಿಯಲ್ಲಿ ಬರೆದ ಕನ್ನಡ ಪುರಾಣಗಳ ಮುಖಾಂತರ ಕರ್ನಾಟಕದಲ್ಲಿ ಪ್ರಚಾರಗೊಳಿಸಿದರು. ಪಂಪ, ರನ್ನ, ಪೊನ್ನ, ನೇಮಿಚಂದ್ರ ಮುಂತಾದ ಶ್ರೇಷ್ಠ ಕವಿಗಳು ಜಿನಶಾಸನವನ್ನು ತಮ್ಮ ಕಾವ್ಯಗಳಿಂದ ಜನರಿಗೆ ಅರುಹಲು ಜನ್ಯಾಗಿ ಯತ್ನಿಸಿದ್ದಾರೆ. ಯಾವದೊಂದು ಜನರ ಧರ್ಮಗ್ರಂಥಗಳು ಅನ್ಯ ಅಥವಾ ಕಠಿಣ ಭಾಷೆಯಲ್ಲಿ ಅಂದರೆ ಅವರವರಿಗೆ ಸಹಜವಾಗಿ ತಿಳಿಯದ ಭಾಷೆಯಲ್ಲಿ ಇದ್ದರೆ ಅವರ ವಿಚಾರಸ್ವಾತಂತ್ರ್ಯವು ಕುಗ್ಗಿ ಧಾರ್ಮಿಕ ವಿಷಯಗಳಲ್ಲಿ ಒಂದು ಬಗೆಯ ದಾಸ್ಯವು ನೆಲೆಗೊಳ್ಳುತ್ತಿದೆ. ಅಂಥ ಧರ್ಮಗ್ರಂಥಗಳನ್ನು ತಿಳಿದುಕೊಳ್ಳಬಲ್ಲ ವರ್ಗದವರು ಸ್ವಯಂಮನ್ಯರಾಗಿ ಜನರನ್ನು ಒಂದು ಮಾದರಿಯ ವಿಚಾರದಾಸ್ಯದಲ್ಲಿಡಲು ಯತ್ನಿಸುತ್ತಾರೆ. ಧರ್ಮತತ್ವ, ಧರ್ಮವಿಚಾರ ಮತ್ತು ಧರ್ಮಾಚಾರ ಇವುಗಳ ಬಗ್ಗೆ ಅನವಶ್ಯಕವಾದ ಮತ್ತು ಪ್ರಸಂಗವಶಾತ್ ಘಾತಕವಾದ ಒಂದು ಗೂಢ ಮತ್ತು ಗುಪ್ತ ಭಾವವು ಜನರಲ್ಲಿ ಹಬ್ಬುತ್ತದೆ. ಈ ದೋಷಗಳು ಉಂಟಾಗಬಾರದು ಎಂಬ ಇಚ್ಛೆ ಇದ್ದರೆ, ಇಲ್ಲವೆ ಈಗಾಗಲೆ ಉಂಟಾದ ಈ ಬಗೆಯ ದೋಷಗಳು ಅಳಿಯಬೇಕಾದರೆ, ಧರ್ಮವಿಚಾರಗಳ ಗುತ್ತಿಗೆ ಇದ್ದ ಯಾವದೊಂದು ವಿಶಿಷ್ಟವರ್ಗವು ಸಮಾಜದಲ್ಲಿ ಇಲ್ಲದಿರುವಿಕೆ, ಸರಳ ಮತ್ತು ಸುಲಭವಾದ ಮಾತೃಭಾಷೆಯಲ್ಲಿ ಇಹಪರ ಸುಖ ಸಾಧನವಾದ ಧರ್ಮದ ವಿವೇಚನೆ, ಮತ್ತು ಧರ್ಮತತ್ವಗಳ ನಿರರ್ಗಲ ಪ್ರಸಾರ ಈ ಸಂಗತಿಗಳು ಅವಶ್ಯ. ವಚನವಾಙ್ಮಯವನ್ನು ರಚಿಸುವಾಗ ಮುಖ್ಯವಾಗಿ ಈ ಉದ್ದೇಶಗಳೆಲ್ಲ ವಚನಕಾರರ ಕಣ್ಣೆದುರಿಗೆ ಇದ್ದವೆಂದು ಹೇಳಬಹುದು. ಆದುದರಿಂದ, ಆತ್ಯೋದ್ಧಾರದ ಧರ್ಮಮಾರ್ಗವು ಆಬಾಲವೃದ್ಧರಿಗೂ ಸ್ತ್ರೀಪುರುಷರಿಗೂ ಜಾತಿಪಂಥಪಂಗಡಗಳ ನಿರ್ಬಂಧವಿಲ್ಲದೆ ಮನುಷ್ಯಮಾತ್ರರಿಗೆಲ್ಲ ಮುಕ್ತದ್ವಾರವಿರಬೇಕು, ಅದನ್ನು ತಿಳಿದುಕೊಳ್ಳುವ ಮಾರ್ಗದಲ್ಲಿ ಸಾಧಕನಿಗೆ ಯಾವ ಕೃತಕವಾದ ಅಡಚಣಿಗಳೂ ಅಡ್ಡ

ಬರಬಾರದು, ಅದೊಂದೇನೋ ಕಠಿಣ ವಿಷಯ ಅಥವಾ ತಿಳಿಯದ ವಿಷಯ ಎಂಬ ತಪ್ಪುತಿಳಿವಳಿಕೆಯು ಜನರಲ್ಲಿ ಹುಟ್ಟಬಾರದು, ಬಯಸುವವರಿಗೆ ಆ ಮಾರ್ಗವು ಸಹಜ ಗೋಚರವಾಗಬೇಕು, ಈ ಮುಂತಾದ ದೃಷ್ಟಿಯಿಂದ ನೋಡಿದರೆ ವಚನಶಾಸ್ತ್ರವು ಕನ್ನಡದಲ್ಲಿ ಬಹಳೇ ಅನುಪಮವಾದ ವಾಙ್ಮಯವು ಎಂದು ಹೇಳಬಹುದು.

೩೧. ವಚನಶಾಸ್ತ್ರದ ಉಗಮ ಮತ್ತು ವೇದೋಪನಿಷತ್ತುಗಳೊಡನೆ ಅದರ ಸಂಬಂಧ ಈ ವಿಷಯವನ್ನು ಕುರಿತು ಶ್ರೀ. ಹಳಕಟ್ಟೀಯವರು ಏನನ್ನುವರು ಇದನ್ನು ಈ ಸ್ಥಳದಲ್ಲಿ ನೋಡಿ ಮುಂದೆಸಾಗುವದು ಉಚಿತವೆಂದು ತೋರುವದು. ಅವರು ವಚನಶಾಸ್ತ್ರಸಾರ ಭಾಗ ೧ ರ ಮೊದಲನೇ ಆವೃತ್ತಿಯ ಪ್ರಸ್ತಾವನೆಯಲ್ಲಿ ಅನ್ನುವದೇನಂದರೆ, "·····ಇವುಗಳಲ್ಲಿ (ಅಂದರೆ ವಚನಶಾಸ್ತ್ರಸಾರ, ಭಾಗ ೧ ರ ಪುಟ ೧–೯೧ ರಲ್ಲಿ ಬಂದ ವಚನಗಳಲ್ಲಿ) ವೇದೋಪನಿಷತ್ತುಗಳಲ್ಲಿಯು ಮಹತ್ವದ ತತ್ವಗಳೆ ಅಡಕವಾಗಿವೆ. ·····ಅದರೆ ವಚನಕಾರರು ವೇದಶಾಸ್ತ್ರಾಗಮಪುರಾಣಗಳ ವಿಷಯವಾಗಿ ಆಗಿಂದಾಗ್ಗೆ (ಮೇಲಿಂದ ಮೇಲೆ) ಕಡುತರವಾದ ಟೀಕೆಗಳನ್ನು ಮಾಡುವದುಂಟು. ಪುಟ ೩೨ ರಿಂದ ೩೭ ರ ವರೆಗಿನ ವಚನಗಳನ್ನು ನೋಡಿರಿ. ಆಗಮಗ್ರಂಥಗಳಿಗೂ ವಚನಕಾರರ ತತ್ವಗಳಿಗೂ ಪ್ರತ್ಯಕ್ಷ ಸಂಬಂಧವುಂಟು, ಆಗಮಗ್ರಂಥಗಳಲ್ಲಿಯೆ ಷಟ್‌ಸ್ಥಲದ ವಿವರಣೆ ಇರುತ್ತದೆ···· ಅವರ ತತ್ವಗಳೆಲ್ಲ ವೇದಾಗಮೋಪನಿಷತ್ತುಗಳೊಳಗಿಂದಲೆ ತೆಗೆದುಕೊಂಡವಿರುತ್ತವೆ, ಮತ್ತು ಅವರ ವಚನಗಳಲ್ಲಿ ಅವುಗಳಲ್ಲಿಯ ಅವತರಣಗಳು ತುಂಬಿಹೋಗಿರುತ್ತವೆ. ಒಂದು ವೇಳೆ ಅವರು ಈ ಗ್ರಂಥಗಳನ್ನು ಅವಿಶ್ವಸಿಸುತ್ತಿದ್ದರೆ ಅವುಗಳಲ್ಲಿಯ ಉಕ್ತಿಗಳನ್ನು ಹೀಗೆ ತಮಗೆ ಆಧಾರವಾಗಿಟ್ಟುಕೊಂಡು ಎಂದೂ ಅವುಗಳನ್ನು ಉದಹರಿಸುತ್ತಿದ್ದಿಲ್ಲ. ·····ವಚನಕಾರರು ಸ್ವತಂತ್ರ ವಿಚಾರದಪರಿದ್ದು ವೇದಾಗಮೋಪನಿಷತ್ತುಗಳ ತತ್ವಗಳ ಮೇಲಿಂದ ತಮ್ಮದೊಂದು ಸಿದ್ಧಾಂತವನ್ನೇ ವರ್ಪಡಿಸಿದ್ದಾರೆ····" ಈ ಬಗೆಯಾಗಿ ವೇದ, ಉಪನಿಷತ್ತುಗಳು, ಆಗಮ ಮತ್ತು ವಚನಶಾಸ್ತ್ರ ಇವುಗಳ ಸಂಬಂಧವನ್ನು ಅವರು ಹೇಳಿದ್ದಾರೆ. ವಚನಕಾರರು ಸ್ವತಃ ತಮ್ಮ ವಚನಗಳಲ್ಲಿ ಉದಹರಿಸಿದ ಸಂಸ್ಕೃತವಾಕ್ಯ ಅಥವಾ ವಾಕ್ಯಾರ್ಥಗಳಿಂದ ಇದೇ ಮಾತು ಸಿದ್ಧವಾಗುವದು. ಅವರು ಆಗಮಗಳಿಂದ ವಾಕ್ಯಗಳನ್ನೆತ್ತಿ ಅವತರಣಗಳನ್ನು ಕೊಡುವುದೆ ಬಹಳ. ಕ್ವಚಿತ್ ವೇದೋಪನಿಷತ್ತುಗಳಿಂದಲೂ ವಾಕ್ಯಗಳನ್ನು ಉದಹರಿಸಿರುವರು. ಉದಾ

ಹರಣಾರ್ಥವಾಗಿ ಸಿದ್ಧರಾಮೇಶ್ವರನು ಪರಮಾತ್ಮಸ್ವರೂಪವನ್ನು ಹೇಳುವಾಗ 'ಸತ್ಯಂ ಜ್ಞಾನಮನಂತಂ ಬ್ರಹ್ಮ, ಎಂಬ ಶ್ರುತಿ ಸಾರುತ್ತಿದೆ, ಎಂದು ತೈತ್ತಿರೀಯೋಪನಿಷತ್ತಿನ ಅವತರಣಿಕೆಯನ್ನು ಕೊಟ್ಟಿದ್ದಾನೆ. ಮಹೇಶ್ವರನ ಶಿವಲಿಂಗಸ್ಥಲವನ್ನು ವರ್ಣಿಸುವಾಗ ಚನ್ನಬಸವೇಶ್ವರನು 'ಓಂ ಭೂರ್ಭುವಃ ಸ್ವಃ' ಎಂಬ ಮುಂತಾದ ವೈದಿಕ ಗಾಯತ್ರೀಮಂತ್ರವನ್ನು ಉದಹರಿಸಿದ್ದಾನೆ. ಅವುಗಳಿಗೆ ಅವರು ವೇದ, ಶ್ರುತಿ, ಅಥವಾ ಶ್ಲೋಕ ಎನ್ನುವರು. ಆಗಮಗಳಿಗೆ ಕೂಡ ವಚನಕಾರರು 'ಶ್ರುತಿ' ಎಂದು ಅನ್ನುವದುಂಟು. ಯಾಕಂದರೆ ಶೈವಾಗಮಗಳು, ಶೈವರಿಗೆ, ಶ್ರುತಿಗಳಷ್ಟೆ ಪ್ರಮಾಣವಿರುವವು ಮತ್ತು ಪೂಜ್ಯವಿರುವವು.

೩೨. ವೇದ, ಉಪನಿಷತ್ತು, ಮತ್ತು ಶೈವಾಗಮ ಇವುಗಳಂಥ ಉದಾತ್ತಪರಂಪರೆಯುಳ್ಳ ವಚನಶಾಸ್ತ್ರವು ಮೇಲಿಂದಮೇಲೆ ಆದ್ಯರನ್ನು ಅಥವಾ ಪುರಾತನರನ್ನು ಉಲ್ಲೇಖಿಸುವದುಂಟು. ಶೈವಸಂಪ್ರದಾಯದಲ್ಲಿ ಅರವತ್ತುಮೂರು ಪುರಾತನರು ಅತ್ಯಂತ ಪ್ರಸಿದ್ಧರು ಮತ್ತು ಪೂಜ್ಯರು. ಕೇವಲ ವೈದಿಕಪರಂಪರೆಯವರು ವಸಿಷ್ಠ ವಿಶ್ವಾಮಿತ್ರ, ಮನುಯಾಜ್ಞವಲ್ಕ್ಯ, ವ್ಯಾಸವಾಲ್ಮೀಕ ಈ ಮುಂತಾದ ಋಷಿಮುನಿಗಳ ಹೆಸರುಗಳನ್ನು ಎಷ್ಟು ಆದರದಿಂದ ಉಚ್ಚರಿಸುವರೊ ಅಷ್ಟೇ ಆದರದಿಂದ ವೀರಶೈವರು ತ್ರಿಷಷ್ಟಿಪುರಾತನರ ಹೆಸರುಗೊಳ್ಳುವರು ಮತ್ತು ಈಗ್ಯೂ ಪುರಾತನರ ಪೂಜೆ ಎಂಬ ಸಮಾರಂಭವನ್ನು ಮಾಡುವರು. ಈ ಸಮಾರಂಭದಲ್ಲಿ ಪುರಾತನರ ಆವ್ಹಾನಪೂರ್ವಕ ಜಂಗಮರ ಪೂಜೆಮಾಡುವುದೆ ಮುಖ್ಯವಾತು. ಈ ಪುರಾತನರ ಹೆಸರುಗಳನ್ನು ಹಾಗೂ ಅವರಿದ್ದ ಊರುಗಳ ಹೆಸರುಗಳನ್ನು ವಿಚಾರಿಸಿದರೆ ಅವರು ಬಹುಶಃ ಎಲ್ಲರೂ ತಮಿಳು ಹಾಗೂ ತೆಲುಗು ಪ್ರಾಂತದವರೇ ಇರುವರೆಂದು ತೋರುತ್ತಿದೆ. ಇದರಿಂದ ವೀರಶೈವ ಪಂಥವು ಆ ಎರಡು ಪ್ರಾಂತಗಳಲ್ಲಿ ಮೊದಲು ಪ್ರಚಲಿತವಿರಲಿಕ್ಕೆಸಾಕು. ಈ ಪುರಾತನರೆಂದರೆ ಸಾಧುಗಳು, ಸತ್ಪುರುಷರು, ವೀರಶೈವಪಥದಿಂದ ನಡೆದು ಈಶ್ವರಾನುಗ್ರಹವನ್ನು ಪಡೆದವರು, ಮೋಕ್ಷವನ್ನು ದೊರಕಿಸಿದವರು. ಅವರ ಚರಿತ್ರೆಗಳಲ್ಲಿ ಅನೇಕ ಪವಾಡಗಳೂ ಕಂಡುಬರುವವು. ಆಧ್ಯಾತ್ಮಿಕದೃಷ್ಟಿಯಿಂದ ಆ ಪವಾಡಗಳಿಗೆ ಮಹತ್ವಕೊಡುವದುಚಿತವೂ ಅಲ್ಲ, ಇಷ್ಟವೂ ಅಲ್ಲ. ಶೈವ ಜನಸಾಮಾನ್ಯರ ಮನಸಿನಲ್ಲಿ ಆ ಮತದ ಬಗ್ಗೆ ಒಂದು ತರಿದ ಆಶ್ಚರ್ಯಭಾವವು ಉಂಟಾಗುವಮಟ್ಟಿಗೆಯೆ ಅವುಗಳ ಉಪಯೋಗವು. ಐತಿಹಾಸಿಕ ದೃಷ್ಟಿಯಿಂದಾಗಲಿ, ವಿಜ್ಞಾನದೃಷ್ಟಿಯಿಂದಾಗಲಿ, ಆಧ್ಯಾತ್ಮಿಕ ಸಾಧನದೃಷ್ಟಿಯಿಂದಾಗಲಿ ಅಂಥ ಪವಾಡಗಳಿಗೆ ಯಾವ ಸ್ಥಾನವೂ ಇಲ್ಲವೆಂದು ಹೇಳಬಹುದು. ಇರಲಿ. ಈ ತ್ರಿಷಷ್ಟಿ ಪುರಾತನರೆಂಬವರು ಬಹಳ ಪೂರ್ವಕಾಲದಲ್ಲಿ ಆಗಿಹೋದರು, ಎಂಬುದು 'ಆದ್ಯರು' ಅಂದರೆ ಮೊದಲಿಗರು ಅಥವಾ 'ಪುರಾತನರು' ಅಂದರೆ ಪ್ರಾಚೀನ ಕಾಲದವರು, ಎಂಬ ಅವರ ಹೆಸರಿನಿಂದ ಸ್ಪಷ್ಟವಾಗುವದು. ಈಗ ಪ್ರಚಲಿತವಿದ್ದ ಅವರ ಚರಿತ್ರೆಗಳಲ್ಲಿ ತುಂಬಿದ ಚಮತ್ಕಾರದ ಭಾಗವನ್ನು ಕಳೆದು ಆ ಕಥೆಗಳ ಕಡೆಗೆ ನೋಡಿದರೆ ಅವರು ನಡೆನುಡಿಯಲ್ಲಿ ಶುದ್ಧರು, ಸಚ್ಚರಿತ್ರರು, ಏಕಾಂತಭಕ್ತರು, ನಿಷ್ಠಾವಂತರು, ವೀರಶೈವ ಸಾಂಪ್ರದಾಯದ ಪಂಚಾಚಾರ ಅಷ್ಟಾವರಣಾದಿಗಳನ್ನು ಶ್ರದ್ಧಾಪೂರ್ವಕವಾಗಿ ಪಾಲಿಸುವವರು ಇದ್ದರೆಂದು ಗೊತ್ತಾಗುವದು. ಅವರಲ್ಲಿ ಕೇವಲ ವಿದ್ವತ್ವ ಅಥವಾ ಪಾಂಡಿತ್ಯದಕಿಂತ ಮುಖ್ಯವಾಗಿ ನಿರ್ಮಲಭಾವವೇ ವ್ಯಕ್ತವಾದುದು ಕಂಡುಬರುವದು. ಅವರಲ್ಲಿ ಹಲವು ಸ್ತ್ರೀಯರು ಮತ್ತು ಸಮಾಜದಲ್ಲಿಯ ಎಲ್ಲ ಬಗೆಯ ಜಾತಿಪಂಗಡದ ಜನರು ಸಹ ಇರುವರು. ಭಕ್ತಿರಾಜ್ಯದಲ್ಲಿ ಭಾವವೇ ಮುಖ್ಯವು ಹೊರತು ಜಾತಿಪಂಥವಾಗಲಿ, ವಯಸ್ಸು ಲಿಂಗವಾಗಲಿ ಮಹತ್ವದ್ದಲ್ಲ, ಎಂಬುದು ಆ ಚರಿತ್ರೆಗಳಿಂದ ಸಿದ್ಧವಾಗುವದು. ವಚನಕಾರರು ಅಲ್ಲಲ್ಲಿ ಅವರ ಉಲ್ಲೇಖಮಾಡುವುದಲ್ಲದೆ ಬಗೆಬಗೆಯಿಂದ ಅವರ ನಡೆನುಡಿಸಹವಾಸಗಳನ್ನು ಹೊಗಳಿರುವರು.

೩೩. ಇನ್ನು ಆದ್ಯರು ಅಥವಾ ಪುರಾತನರು, ಎಂಬ ಶಬ್ದಗಳನ್ನು ಉಪಯೋಗಿಸುವಾಗ ಬರಿಯ ತ್ರಿಷಷ್ಟಿ ಪುರಾತನರಷ್ಟೇ ಯಾವಾಗಲೂ ವಚನಕಾರರ ಕಣ್ಣೆದುರಿಗೆ ಇರುವರೆಂದು ಹೇಳಲಿಕ್ಕಾಗುವುದಿಲ್ಲ. ಆ ಪೂರ್ವಪುರಾತನರ ನಂತರ ಅವರ ಪರಂಪರೆಯನ್ನೆ ಅನುಸರಿಸಿ ಆಗಿಹೋದ ಅನ್ಯ ವೀರಶೈವ ಸಾಧುಸಜ್ಜನರನ್ನೂ ಶರಣರನ್ನೂ ಅವರು ಇದೇ ಹೆಸರಿನಿಂದ ಕರೆದಿರುವರು. ಆದುದರಿಂದ ಆದ್ಯರು, ಪುರಾತನರು, ಅಂದರೆ ಒಟ್ಟಿಗೆ ವೀರಶೈವ ಸಾಧುಸಮೂಹ, ಅಥವಾ ವೀರಶೈವ ಸತ್ಪುರುಷಪರಂಪರೆ, ಅಥವಾ ವೀರಶೈವ ಸಂತಮಾಲಿಕೆ ಎಂಬರ್ಥವು. ಅಲ್ಲಲ್ಲಿಯ ಸಂದರ್ಭದ ಮೇಲಿಂದ ಆ ಶಬ್ದಗಳ ಅರ್ಥವು ಒಮ್ಮೆ ಅರವತ್ತುಮೂರು ಪುರಾತನರು, ಎಂದು ಆಗಬಹುದು ಅಥವಾ ಇನ್ನೊಮ್ಮೆ ಇಡೀ ವೀರಶೈವ ಭಕ್ತವೃಂದವೆಂದು ಆಗಬಹುದು. ಇದಲ್ಲದೆ, ಈ ಬಗೆಯ ಆದರ್ಶಭೂತ ಭಕ್ತಶ್ರೇಷ್ಠರಿಗೆ ಶರಣರು, ಅನುಭಾವಿಗಳು, ಎಂದೂ ವಚನಕಾರರು ಅನ್ನುವದುಂಟು. ವೇದ, ಉಪನಿಷತ್ತು, ಆಗಮ, ಈ ಗ್ರಂಥಗಳಿಗೆ ವಚನಕಾರರು

ಯಾವ ಮಹತ್ವ ಕೊಟ್ಟಿರುವರೊ ಅದೇ ಬಗೆಯ ಮಹತ್ವವನ್ನು ಅವರು ಪುರಾತನರ ಅಥವಾ ಶಿವಶರಣರ ವಚನಗಳಿಗೆ ಕೊಟ್ಟಿರುವರು. ವೇದಾಗ ಮಾದಿ ಗ್ರಂಥಗಳಲ್ಲಿಯ ವಾಕ್ಯಗಳನ್ನು ಅಥವಾ ವಾಕ್ಯಭಾಗಗಳನ್ನು ವಚನ ಕಾರರು ತಮ್ಮ ವಚನಗಳಲ್ಲಿ ಉದಹರಿಸುವಂತೆ ಪುರಾತನರ ವಚನಗಳನ್ನು ಪಾತ್ರ ಉದ್ಧರಿಸುವ ಪದ್ಧತಿಯು ವಿಶೇಷ ಕಂಡುಬರುವದಿಲ್ಲ. ಆ ಪದ್ಧತಿ ಇದ್ದರೆ ಒಳ್ಳೆಯದಾಗುತ್ತಿತ್ತು. ಯಾಕಂದರೆ ಆಯಾ ಪುರಾತನರ ಕಾಲ ನಿರ್ಣಯಕ್ಕೆ ಅದು ಬಹಳ ಸಹಾಯಕವಾಗುತ್ತಿತ್ತು. 'ಆದ್ಯರ ವಚನ ಪರುಷ ಕಂಡಯ್ಯ,' ಅವರು 'ಶ್ರುತಿಯ ತೋರಿ ನುಡಿವರು, ದೃಷ್ಟವ ತೋರಿ ನಡೆವರು,' (ವ. ಪು. ೩೧೨) ಶ್ರುತಿಸ್ಮೃತ್ಯಾದಿಗಳೆಲ್ಲ ಪಾಯ ವಾದರೂ 'ಇಷ್ಟವಾದ ಪುರಾತನರ ನುಡಿಗಳುಳಿದರೆ ಸಾಕು,' ಯಾಕಂದರೆ ಪರಮಾತ್ಮಜ್ಞಾನವಾಗಲಿಕ್ಕೆ 'ಆದ್ಯರ ವಚನ ಬಹು ವೇದ್ಯವಯ್ಯ' (೩೧೪) ಎಂದು ಮುಂತಾಗಿ ಆದ್ಯರ ವಚನಗಳನ್ನು ವಚನಕಾರರು ಹೊಗ ಳಿರುವರು. 'ನಿಮ್ಮ ಅನುಭಾವಿಗಳ ಸಂಗದಿಂದೆ ಎನ್ನ ಭವ ಕೆಡುವುದು' ಆದುದರಿಂದ 'ಮಹಾನುಭಾವರ ಸಂಗವನೆ ಕರುಣಿಸಯ್ಯ,' 'ಅಹೋರಾತ್ರಿ ಶರಣರ ಸೇವೆಯಲ್ಲಿರಿಸು' ಎಂದು ವಚನಕಾರರು ದೇವರನ್ನು ಪ್ರಾರ್ಥಿಸು ವರು. 'ಶರಣರೊಡನೆ ಸರಸವಾಡಿದರೆ ದ್ರೋಹ,' (ವ. ಪು. ೧೪೬) ಹಾಗೆ ಮಾಡಿದರೆ 'ಹಲ್ಲು ಹೋಹುದು ತಪ್ಪದು,' ಎಂದು ಭಕ್ತರೊಡನೆ ಜೇಷ್ಮೆಮಾಡಬಾರದೆಂದೂ ಅವರೊಡನೆ ಆದರದಿಂದ ನಡಕೊಳ್ಳಬೇಕೆಂದೂ ವಚನಕಾರರು ಇಲ್ಲಿ ಎಚ್ಚರಕೊಟ್ಟಿರುವರು. ಈ ರೀತಿ ಆದ್ಯರನ್ನೂ, ಪುರಾ ತನರನ್ನೂ, ಶರಣರನ್ನೂ, ಅನುಭಾವಿಗಳನ್ನೂ, ಅಂದರೆ ಒಟ್ಟಿಗೆ ವೀರಶೈವ ಭಕ್ತಶ್ರೇಷ್ಠರನ್ನೂ ವರ್ಣಿಸಿ ಅವರ ವಚನಗಳು ಮತ್ತು ಸಂಗವು ಅತ್ಯಂತ ಪಾವನ ಹಾಗೂ ಮಾನ್ಯ ಎಂದು ಹೇಳಿದ್ದಾರೆ.

೩೪. ವಚನಶಾಸ್ತ್ರದ ಪರಂಪರೆಯನ್ನು ಕುರಿತು ಹೇಳಿದ ಮೇಲಿನ ಎಲ್ಲ ವಿಷಯಗಳನ್ನು ವಿಚಾರಿಸಿದರೆ, ಚತುರ್ವೇದಗಳು, ವೇದಾಂತ ಭಾಗಗ ಳಾದ ಮುಖ್ಯ ಉಪನಿಷತ್ತುಗಳು, ವೇದೋಪನಿಷತ್ತುಗಳ ತತ್ವಗಳನ್ನೆ ಅನುಸರಿಸಿರುವ, ಆದರೆ ಶಿವನೇ ಪರದೈವತವೆಂದು ಇಟ್ಟುಕೊಂಡು ವಿಶಿಷ್ಟ ವಾದ ಭಕ್ತಿಪ್ರಧಾನ ಸಾಧನಮಾರ್ಗವನ್ನು ಉಪದೇಶಿಸಿದ ಇಪ್ಪತ್ತೆಂಟು ಶೈವಾಗಮಗಳು, ಮತ್ತು ಈ ಮಾರ್ಗದಿಂದ ನಡೆದು ತೋರಿಸಿದ ಶಿವಭಕ್ತರ ನುಡಿಗಳು, ಈ ಶ್ರೇಷ್ಠವಾದ ವಜ್ರ ವೈಡೂರ್ಯ ಮುತ್ತುರತ್ನಗಳ ತಳ ಹದಿಯ ಮೇಲೆ ಶಿವಶರಣರ ಸುಂದರ ಸುವರ್ಣಮಯ ವಚನಮಂದಿರವು

ಕಟ್ಟಲ್ಪಟ್ಟಿದೆ, ಎಂಬದು ಸ್ಪಷ್ಟವಾಗುವದು. ಈ ಪರಂಪರೆಯಲ್ಲಿ ವಚನ ಕಾರರು ಶೈವಾಗಮಗಳಿಗೆಯೆ ಎಲ್ಲಕ್ಕೂ ಹೆಚ್ಚು ಮಹತ್ವಕೊಟ್ಟಿರುವರು, ಮತ್ತು ಅವುಗಳೊಡನೆಯೆ ವಚನಶಾಸ್ತ್ರದ ಪ್ರತ್ಯಕ್ಷ ಹಾಗೂ ನಿಕಟ ಸಂಬಂಧವಿರುವದು, ಎಂಬ ಮಾತನ್ನು ಮರೆಯಕೂಡದು. ವೇದ ಎಂದು ಅಥವಾ ಉಪನಿಷತ್ತು ಎಂದು ವಚನಕಾರರು ಹಲವು ಸಾರೆ ಏಕೋದೇವ, ರುದ್ರನೇ ಶ್ರೇಷ್ಠ ದೇವತೆ, ಎಲ್ಲವೂ ಬ್ರಹ್ಮಮಯವಿರುವದು, ಎಂಬ ಮುಂತಾದ ವಿಷಯಗಳನ್ನು ಪ್ರತಿಪಾದಿಸುವಾಗ ಅವುಗಳಲ್ಲಿಯ ವಾಕ್ಯಗ ಳನ್ನು ಉದಹರಿಸಿದ್ದಾದರೂ ಶೈವಾಗಮಗಳು ಮಾಡಿದ ವೇದೋಪನಿಷತ್ತು ಗಳ ಅರ್ಥವನ್ನು ಗ್ರಾಹ್ಯವೆಂದು ತಿಳಿದು ಆಗಮಗಳೆ ಶ್ರುತಿ ಎಂದು ವಚನ ಕಾರರು ಅವುಗಳನ್ನು ಉದಾಹರಿಸಿದ್ದೆ ಬಹಳ. ತತ್ವಜ್ಞಾನದ ಪ್ರತಿಪಾದನೆ ಹಾಗೂ ವಿಶ್ವರಚನೆಯ ವಿವರಣೆ ಇವುಗಳನ್ನು ಮಾಡುವಾಗ ಕೂಡ ವಚನ ಕಾರರು ಉಪನಿಷತ್ತುಗಳಿಗಿಂತ ಆಗಮಗಳನ್ನು ಮುಂದಿಟ್ಟುಕೊಂಡೇ ಬರೆದಿರುವರು. ಸಾಧನಮಾರ್ಗದ ವಿಷಯದಲ್ಲಿಯಂತೂ ವಚನಕಾರರು ಸರ್ವಶಃ ಆಗಮಾನುಗಾಮಿಗಳು. ಇನ್ನು ಶೈವಾಗಮಗಳಲ್ಲಿ ಹೇಳಿದ ಮಾರ್ಗವನ್ನು ಪ್ರತ್ಯಕ್ಷ ಆಚರಿಸಿ ತೋರಿಸಿದ ಪುರಾತನರ ಅನುಭವಕ್ಕೆ ಸ್ವಾಭಾವಿಕವಾಗಿಯೆ ವಚನಕಾರರು ವಿಶೇಷ ಮಹತ್ವವನ್ನು ಕೊಟ್ಟಿರು ವರು. ಯಾಕಂದರೆ, ಬರಿಯ ಗ್ರಂಥಗಳಲ್ಲಿದ್ದ ಧರ್ಮವು ಯಾವಾಗಲೂ ನಿರ್ಜೀವವೇ ಸೈ. ಆಚರಣೆಗೆ ಬಾರದ ಧರ್ಮವು ಪೊಳ್ಳು ಬಯಲೊಳಗಿನ ಜೊಳ್ಳು ಶಬ್ದವು. ಅದೊಂದು ಶಿಲಾಮೂರ್ತಿ ಇದ್ದಂತೆ. ಅದರಲ್ಲಿ ಭಾವದ ಕಳೆ ತುಂಬಿ, ಆಚಾರದ ಪ್ರಾಣಪ್ರತಿಷ್ಠೆ ಮಾಡುವತನಕ ಅದು ಬೇರೆಯಲ್ಲ, ಕಣಿಯ ಕಲ್ಲು ಬೇರೆಯಲ್ಲ. ಯಾವಾಗಲೂ ನುಡಿಗಿಂತ ನಡೆ ಹೆಚ್ಚು ಮಹ ತ್ವದ್ದು. ಆದುದರಿಂದ ಆದರ್ಶಪ್ರಾಯರಾದ ಆದ್ಯರ ಆಚಾರವನ್ನು ಅನು ಲಕ್ಷಿಸಿ ವಚನಕಾರರು ತಮ್ಮ ವಚನಗಳನ್ನು ರಚಿಸಿದ್ದಾರೆ. ಆ ಮೂಲಕ, ಅವರ ವಚನಗಳಲ್ಲಿ ಬರಿಯ ಜಡ ಅಥವಾ ತಾರ್ಕಿಕ ಇಲ್ಲವೆ ಕಾಲ್ಪನಿಕ ತತ್ವವಾದವಿರದೆ ತತ್ವಪ್ರೇರಿತ ಆಚಾರದ ಜೈತನ್ಯಯುಕ್ತ ಪ್ರವಾಹವಿದೆ ಎಂದು ಹೇಳಬಹುದು. ಈ ಬಗೆಯ ಪರಂಪರೆಯುಳ್ಳ 'ವಚನಶಾಸ್ತ್ರವು ಹೇಗೆ ಇರುವದು, ಇದನ್ನು ಯಾಕೆ ಮತ್ತು ಯಾರು ಬರೆದರು, ಯಾವಾಗ ಮತ್ತು ಯಾವರೀತಿ ಬರೆದರು, ಎಂಬ ಮುಂತಾದ ಮಾತುಗಳನ್ನು ಪರೀ ಕ್ಷಿಸಿದರೆ ಅದರ ವಿಶಿಷ್ಟವಾದ ಮಹತ್ವವು ಸಪುಗೆ ಜನ್ನಾಗಿ ತಿಳಿಯುವದು.

೩೫. ವಚನಶಾಸ್ತ್ರವೆಂದೊಡನೆ ಇದು ಯಾವನೊಬ್ಬ ದೊಡ್ಡ ಋಷಿಮುನಿಯು ಬರೆದ ಘನವಾದ ಹೊತ್ತಿಗೆ ಇರಬಹುದು, ಎಂದು

ಕಲ್ಪನೆಯಾಗುವ ಸಂಭವವಿದೆ. ಆದರೆ ಅದು ಹಾಗೇನೂ ಇಲ್ಲ. ನೂರಾರು ಶಿವಶರಣರು ವಿವಿಧ ಕಾಲಕ್ಕೆ ನಾನಾಪ್ರಸಂಗಗಳಲ್ಲಿ ಸ್ಫೂರ್ತಿಯಿಂದ ತಾಳಬದ್ಧ ಇಲ್ಲವೆ ಪ್ರಸಾದಪೂರ್ಣ ಅಥವಾ ಪ್ರಾಸಯುಕ್ತ ತಿಳಿಗನ್ನಡ ಗದ್ಯದಲ್ಲಿ ಉಸುರಿದ ಅನುಭವಸಿದ್ಧ ಆತ್ಮವಾಣಿಯೆ ವಚನಶಾಸ್ತ್ರವೆಂದು ಕಂಗೊಳಿಸುವದು. ಒಂದೊಂದು ವಚನವು ಬಹುಶಃ ಒಂದೊಂದೆ ವಿಷಯದ ಬಗ್ಗೆ ಇರುವದು. ನಾಲ್ಕೈಂಟು ಶಬ್ದಗಳುಳ್ಳ ಒಂದೇ ಚಿಕ್ಕ ವಾಕ್ಯವು ಕೂಡ ಎಷ್ಟೋಸಾರೆ ಒಂದು ವಚನವೆನಿಸುವದು. ಒಮ್ಮೊಮ್ಮೆ ಒಂದೆರಡು ಪುಟಗಳು ತುಂಬುವಷ್ಟು ವಿಸ್ತಾರವುಳ್ಳ ವಚನಗಳೂ ಇರುವವು. ಆದರೆ ಅಂಥವು ಕಡಿಮೆ. ನಾಲ್ಕೈಂಟು ವಾಕ್ಯಗಳುಳ್ಳ ಗೂಢಭಾವಗರ್ಭಿತವಾದ ಚಿಕ್ಕ ಚಿಕ್ಕ ವಚನಗಳೇ ಬಹಳ. ಎಷ್ಟೋ ವಚನಗಳು ಸೂತ್ರಗಳಂತೆ ಒಂದು ಪ್ರತ್ಯೇಕ ಗ್ರಂಥದ ವಿಷಯವಾಗುವಂತೆ ಸಾರಗರ್ಭವಿರುವವು. ಅದೇ ಅವುಗಳ ಸಾಮಾನ್ಯಸ್ವರೂಪವೆಂದು ಹೇಳುವದು ಉಚಿತವು. ಅವುಗಳಲ್ಲಿ ಕೆಲವು ಅನ್ಯಭಕ್ತರೊಡನೆ ಅನುಭಾವಗೋಷ್ಠಿ ಮಾಡುವಾಗ ಪ್ರಶ್ನೋತ್ತರರೂಪ ಇಲ್ಲವೆ ಉತ್ತರ ಪ್ರತ್ಯುತ್ತರರೂಪವಿರುವವು, ಹಲವು ಆತ್ಮಭಾವವನ್ನು ವ್ಯಕ್ತಮಾಡುವ ಆತ್ಮಗತಭಾಷಣದಂತೆ ಇರುವವು, ಇನ್ನೂ ಹಲವು ತಮ್ಮ ಮನಸಿಗೆ ಉಪದೇಶಮಾಡಿದಂತೆ, ಮತ್ತೆ ಕೆಲವು ಅನ್ಯರಿಗೆ ಹೇಳಿದಂತೆ ಇರುವವು. ನೂರಾರು ಜನರು ಬೇರೆ ಬೇರೆ ಕಾಲಕ್ಕೆ ಈ ವಚನಗಳನ್ನು ಬರೆದಿದ್ದರೂ ಅವುಗಳಲ್ಲಿ ಬೇಕಾದಷ್ಟು ವಿವಿಧತೆ ಇದ್ದರೂ ಅವೆಲ್ಲವುಗಳಲ್ಲಿ ಒಂದು ಬಗೆಯ ವಿಲಕ್ಷಣವಾದ ಏಕಸೂತ್ರತೆಯೂ ವಿಕವಾಕ್ಯತೆಯೂ ಸುಸಂಬದ್ಧತೆಯೂ ಕಂಡುಬರುವದು. ಈ ವಚನಗಳು ನೂರಾರು ಬಾಯಿಂದ ನೂರಾರು ಸಮಯಗಳಲ್ಲಿ ಹೊರಬಿದ್ದರೂ ಯಾವನೋ ಒಬ್ಬನು ನಿತ್ಯ ಅಧ್ಯಕ್ಷನಾಗಿ ಅವೆಲ್ಲವುಗಳನ್ನು ಏಕಪ್ರಕಾರವಾಗಿ ಸುದಿಸಿರುವಂತೆ ತೋರುವವು. ಯಾಕಂದರೆ ಅವೆಲ್ಲ ಆತ್ಮಾನುಭವದ ಮಾತುಗಳು. ಅವುಗಳ ಶೈಲಿಯಲ್ಲಿಯೂ ಅಷ್ಟೊಂದು ಪರಸ್ಪರಸಾಮ್ಯವು ಕಂಡುಬರುವದು. ಸಹಸಾ ಈ ವಚನಗಳನ್ನು ಇಂಥವರೇ ಬರೆದರೆಂದು ಎಲ್ಲರೂ ಹೇಳಲಿಕ್ಕೆ ಸಮರ್ಥರಾಗುವದು ಕಠಿಣ. ಈ ರೀತಿ, ಸುಮಾರು ಒಂದು ಸಾವಿರ ವರ್ಷಗಳಾಚೆಗಿಂದ ಇದುವರೆಗೆ ಅನೇಕ ಸ್ತ್ರೀಪುರುಷ ಶಿವಭಕ್ತರು ತಮ್ಮತಮಗೆ ಹೊಳೆದ ವಿಚಾರಗಳನ್ನು ಸುಬೋಧವಾಗಿ ಕನ್ನಡ ವಚನರೂಪದಿಂದ ಬರೆದ ವಾಙ್ಮಯವೆಲ್ಲ ವಚನಶಾಸ್ತ್ರವೆಂದು ಕರೆಯಲ್ಪಡುತ್ತಿರುವದು.

೩೬. ವಚನಶಾಸ್ತ್ರದ ಬಾಹ್ಯಸ್ವರೂಪವನ್ನು ಮೇಲೆ ಸ್ವಲ್ಪ ವಿವರಿಸಿದ್ದಾಯಿತು. ಇನ್ನು ಆ ಶಾಸ್ತ್ರವನ್ನು ಯಾಕೆ ಮತ್ತು ಯಾರು ನಿರ್ಮಾಣ ಮಾಡಿದರು ಇದನ್ನು ವಿಚಾರಿಸುವ. ಅದನ್ನು ಯಾಕೆ ನಿರ್ಮಾಣ ಮಾಡಿದರು ಎಂಬ ಪ್ರಶ್ನೆಯು, ಕವಿಗಳು ಕಾವ್ಯವನ್ನು ಯಾಕೆ ನಿರ್ಮಾಣ ಮಾಡಿದರು, ಎಂದು ಕೇಳಿದಂತೆಯೆ ಇರುವದು. ವಚನಕಾರರಿಗೆ ಧರ್ಮಸ್ಫೂರ್ತಿಯಾದುದರಿಂದ ಮತ್ತು ಆದಾಗ ಅವರು ಈ ಶಾಸ್ತ್ರವನ್ನು ಬರೆದಿರುವರು, ಎಂದು ಈ ಪ್ರಶ್ನೆಗೆ ಉತ್ತರಕೊಡಬಹುದು. ಹೀಗೆ ಅವರು ಬರೆದುದರಿಂದ ಬಹುಜನ ಸಮಾಜದಮೇಲೆ ದೊಡ್ಡ ಉಪಕಾರವಾಯಿತು ಎಂಬಲ್ಲಿ ಸಂಶಯವಿಲ್ಲ. ತಮಿಳುನಾಡಿನಲ್ಲಿ ಆಳ್ವರ್ ಮತ್ತು ಅರಿವರ್ ಇವರ ಬರಹಗಳಿಂದ, ಆಂಧ್ರದಲ್ಲಿ ತ್ಯಾಗರಾಜಾದಿ ಭಕ್ತರ ಕೀರ್ತನೆಗಳಿಂದ, ಮಹಾರಾಷ್ಟ್ರದಲ್ಲಿ ಜ್ಞಾನೇಶ್ವರ, ಏಕನಾಥ, ತುಕಾರಾಮ, ರಾಮದಾಸ, ಮುಂತಾದ ಸಾಧುಸಂತರ ಪದ್ಯರಚನೆಯಿಂದ, ಬಂಗಾಲದಲ್ಲಿ ರಾಮಾನಂದ, ಚೈತನ್ಯ ಮುಂತಾದ ಭಕ್ತಿಪಂಥಿಗಳಿಂದ ಬರೆಯಲ್ಪಟ್ಟ ಕಾವ್ಯಗಳಿಂದ, ಉತ್ತರ ಹಿಂದುಸ್ಥಾನದಲ್ಲಿ ತುಳಸೀದಾಸ, ಕಬೀರ, ಮೀರಾಬಾಯಿ, ಸೂರದಾಸ ಮುಂತಾದವರ ವಾಣಿಯಿಂದ ಜನಸಾಮಾನ್ಯರಲ್ಲಿ ಯಾವ ಧಾರ್ಮಿಕ ಜಾಗ್ರತಿಯಾಯಿತೊ, ಯಾವ ಬಗೆಯ ಆಧ್ಯಾತ್ಮಿಕ ಜ್ಞಾನವು ಪಸರಿಸಿತೊ, ಅದೇ ತರದ ಕಾರ್ಯವು ಕರ್ನಾಟಕದಲ್ಲಿ ಈ ವಚನಗಳಿಂದ ಆಯಿತು, ಇದು ನಿರ್ವಿವಾದವು. ಇದೇ ಲೋಕಜಾಗ್ರತಿಯ ಕಾರ್ಯವು ಕರ್ನಾಟಕದಲ್ಲಿ ಇನ್ನೊಂದು ರೀತಿಯಿಂದ ದಾಸರ ಸುಲಭ, ಸರಲ, ಸಂಗೀತ, ಭಕ್ತಿಪೂರ್ಣ ಕೀರ್ತನೆಗಳಿಂದಲೂ ಮುಂದುವರಿಸಲ್ಪಟ್ಟಿತು. ಈ ಜಾಗ್ರತಿಯೆ ವಚನಕಾರರ ಮೂಲೋದ್ದೇಶವಾಗಿತ್ತು ಎಂದು ಹೇಳಬಹುದು. ಇದನ್ನು ಸಾಧಿಸುವುದಕ್ಕಾಗಿಯೆ ಇದೀ ಧರ್ಮಜ್ಞಾನ ಭಾಂಡಾರವನ್ನು ಆತ್ಮಸಾತ್ ಮಾಡಿಕೊಂಡು, ಅದಕ್ಕೆ ತಮ್ಮ ಭಾವದ ಪುಟಕೊಟ್ಟು, ಅದನ್ನು ಸುಗ್ರಾಸ ಅನ್ನದಂತೆ ವಚನಗಳಲ್ಲಿ ಬಿಡಿಬಿಡಿಯಾಗಿ ಬಡಿಸಿ, ವಚನಕಾರರು ಬಾಲಪೆಸಿಸ ಕನ್ನಡ ಜನತೆಯ ಮುಂದೆ ಇಟ್ಟಿರುವರು.

೩೭. ಈ ವಚನಶಾಸ್ತ್ರವನ್ನು ಬರೆದವರು ವೀರಶೈವಸಾಧುವರ್ಯರು ಮತ್ತು ಸಾಧ್ವೀಮಣಿಗಳು. ಇವರು ಶೈವಾಗಮೋಕ್ತ ಆಚಾರವಿಚಾರಗಳಲ್ಲಿ ಪೂರ್ಣ ಶ್ರದ್ಧೆಯುಳ್ಳವರು ಮತ್ತು ಅದೇ ಎಲ್ಲಕ್ಕೂ ಶ್ರೇಷ್ಠವಾದ ಮೋಕ್ಷಮಾರ್ಗವೆಂದು ಅದನ್ನು ಆಚರಿಸುವವರು. ಇವರಲ್ಲಿ ಹಲವು ಜನರು ಪಂಡಿತರಿದ್ದರೂ ವಚನಕಾರರಲ್ಲಿ ಪಾಂಡಿತ್ಯಕ್ಕೆ ಯಾವ ಮಹತ್ವವೂ

ಕೊಡಲ್ಪಟ್ಟಿಲ್ಲ. ಆ ಪಾಂಡಿತ್ಯವನ್ನು ಅವರು ತಮ್ಮ ವಚನಗಳಲ್ಲಿ ತೋರ ಲಕ್ಕೂ ಯತ್ನಿಸಿಲ್ಲ. ತಾನು ಪಂಡಿತಶ್ರೇಷ್ಠನಿದ್ದರೂ ತಂದೆಯು ತನ್ನ ಚಿಕ್ಕ ಮಗುಗಳೊಡನೆ ಒಬ್ಬ ಮಗುವಾಗಿಯೆ ಮಾತಾಡುವಂತೆ, ಇವರು ಕರ್ನಾಟಕ ಜನತೆಗೆ ತಿಳಿಸುದಿಯಲ್ಲಿಯೆ ತಮ್ಮ ಉಪದೇಶಾಮೃತವನ್ನು ಉಣಿಸಲೆತ್ನಿಸಿದ್ದಾರೆ. ಪಾಂಡಿತ್ಯಕ್ಕಿಂತ ಅನುಭಾವ ಅಥವಾ ಸಾಕ್ಷಾತ್ಕಾರ ಇದೇ ಶ್ರೇಷ್ಠವು ಮತ್ತು ಅದೇ ಎಲ್ಲ ಅಧ್ಯಾತ್ಮಜ್ಞಾನಕ್ಕೆ ಮೂಲ ಆಧಾರವು, ಎಂಬುದು ಅವರ ನಿಶ್ಚಿತ ಸಿದ್ಧಾಂತವು. ಅವರು ಬರಿಯ ತತ್ವಜ್ಞಾನಿಗಳಲ್ಲ ಆದರೆ ಸಾಕ್ಷಾತ್ಕಾರವಾದಿಗಳು. ಅವರು ತನುಪ್ರಾಣ ಭಾವದಲ್ಲಿ ನಿರ್ಮಲರು, ತಮ್ಮ ಎಲ್ಲ ವ್ಯಾಪಾರವ್ಯವಹಾರಗಳಲ್ಲಿ ಸರಲರು, ಸದಾ ಸರ್ವಭೂತಹಿತರತರು, ಮತ್ತು ನಿರ್ಹೇತುಕ ಅನನ್ಯಭಕ್ತರು. ವಚನ ಕಾರರಲ್ಲಿ ಎಲ್ಲ ಕುಲದವರು, ಜಾತಿಯವರು, ಪಂಥದವರು ಕಂಡು ಬರುವರು. ಮೇಲು ಕೀಳೆಂದು ತಿಳಿದು ಹೊಟ್ಟೆಗಾಗಿ ಇಂತಹದೊಂದು ಕಾಯಕವನ್ನು ಮಾಡಬೇಕು ಅಥವಾ ಬಿಡಬೇಕು, ಎಂಬ ಒಣ ಕಾಲ್ಪನಿಕ ನಿರ್ಬಂಧವು ಅವರಲ್ಲಿರಲಿಲ್ಲ. ಎಲ್ಲ ಕಾಯಕಗಳು ಅಷ್ಟೇ ಪಾವನವಾದವು ಗಳು, ಸಮವಾಗಿ ಶುದ್ಧವಾದವುಗಳು, ಎಂದು ಅವರ ಭಾವನೆಯು. ಮಾಡುವ ಕಾಯಕವನ್ನು ಪ್ರಾಮಾಣಿಕತನದಿಂದ ಪರಮಾತ್ಮಸೇವೆಯೆಂದು ಮಾಡಿ, ಬಂದ ಹಣದಿಂದ ಮತ್ತೆ ಭಕ್ತರ ಸೇವೆಮಾಡುತ್ತಿರುವುದೆ ತಮ್ಮ ಕರ್ತವ್ಯವೆಂದು ಅವರು ತಿಳಿದಿದ್ದರು. ಆದುದರಿಂದ ಅವರಲ್ಲಿ ಕಟ್ಟಿಗೆಯ ಹೊರೆ ಮಾರುವ ಮೋಳಿಗೆಯ ಮಾರಯ್ಯ, ನುಲಿಮಾಡಿ ಹೊಟ್ಟೇತುಂಬ ಕೊಳ್ಳುವ ನುಲಿಯ ಚಂದಯ್ಯ, ಅದೇ ಸ್ಕಾರ ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಮುಂತಾದವರು ಇದ್ದರು. ಭಿಕ್ಷೆಬೇಡಿ ಎರಡನೆ ಯವರಿಗೆ ಭಾರವಾಗುವದು ಅತಿಶಯ ಗೌಣವೆಂದು ಅವರು ತಿಳಿದಿದ್ದರು. ಅವರು ಶೀಲವನ್ನು ಲಕ್ಷಿಸುತ್ತಿದ್ದರು ಹೊರತು ಕುಲವನ್ನರಸುತ್ತಿರಲಿಲ್ಲ. ಬರಿಯ 'ಮಾತಿನ ಮಾಲೆಗೆ' ಅಥವಾ 'ವಚನದ ರಚನೆಗೆ' ಅವರು ಎಳ್ಳಷ್ಟೂ ಲಕ್ಷ ಗೊಡುವವರಲ್ಲ. 'ಒಂದು ಕೋಟಿವೇಳೆ ಆದ್ಭೃತವ ನುಡಿಯ ಬಹುದು,' ಆದರೆ ಅದನ್ನು ಒಂದು ಕ್ಷಣಹೊತ್ತು ಆಚರಿಸುವದು ಅದಕ್ಕಿಂತ ಹೆಚ್ಚು ಎಂದು ಅವರ ಸ್ಪಷ್ಟಮತವು ಒಟ್ಟಿಗೆ, ಅವರು ವಿಚಾರಕ್ಕಿಂತ ಆಚಾರಕ್ಕೆ, ನುಡಿಗಿಂತ ನಡೆಗೆ, ಬುದ್ಧಿಗಿಂತ ಭಾವಕ್ಕೆ, ತರ್ಕಕ್ಕಿಂತ ಅನುಭಾವಕ್ಕೆ, ಕುಲಕ್ಕಿಂತ ಶೀಲಕ್ಕೆ ಹೆಚ್ಚು ಮಹತ್ವವನ್ನು ಕೊಡುವವರು. ಆಯಾ ಗುಣಗಳು ಅಳವಟ್ಟು, ಆಯಾ ಆಚಾರಗಳು ನೆಲೆಗೊಂಡು, ಅವು

ಅವರೊಡನೆ ತನ್ಮಯವಾದಾಗ ಅವರ ಅಂತಃಕರಣದಲ್ಲಿ ಉದಯಿಸಿದ ಸ್ಫೂರ್ತಿಯಿಂದ ಅವರು ವಚನಗಳನ್ನು ರಚಿಸಿದರೇ ಹೊರತು ಏನೋ ವಾಙ್ಮಯಸೇವೆ ಮಾಡಬೇಕೆಂದು ಹೊರಟ ಆಧುನಿಕ ಭಾಷಾಸೇವಕರಂತೆ ಅವರು ಇವುಗಳನ್ನು ಬರೆದಿಲ್ಲ. ಪರಮಾತ್ಮನಿಗೆ ಬೊಕೆಹೊಕ್ಕು, ಅವನಿಗೆ ಎಲ್ಲವನ್ನು ಅರ್ಪಿಸಿ, ಅವನೇ ಸರ್ವಸ್ವವೆಂದು ಅವನಿಗೆ ಶರಣುಹೋದುದರಿಂದ ವಚನಕಾರರು ಶರಣರೆಂಬ ಹೆಸರನ್ನು ಪಡೆದಿರುವರು. ಅತ್ಯಂತ ವಿನಯದರ್ಶಕವಾದ ಈ ಹೆಸರೇ ತಮ್ಮ ಶ್ರೇಷ್ಠಬಿರುದೆಂದು ಅವರು ಒಳ್ಳೆ ಅಭಿಮಾನಗೊಳ್ಳುವರು. ತಾವು ಬರೆದ ವಚನಗಳಲ್ಲಿ ತಮ್ಮ ಹೆಸರನ್ನು ಸಹ ಹಾಕದೆ ಅವರು ತಮ್ಮ ಇಷ್ಟದೇವತೆಗಳ ಹೆಸರುಗಳನ್ನೆ ತಮ್ಮ ತಮ್ಮ ಮುದ್ರಿಕೆಗಳನ್ನಾಗಿ ಮಾಡಿಕೊಂಡಿರುವರು. ಇಷ್ಟೊಂದು ನಿರಹಂಕಾರಿತ್ವವು ಅವರಲ್ಲಿ ನೆಲೆಗೊಂಡಿರುವದು. 'ಕಾಮವ ತೊರೆದಾತ, ಹೇಮವ ಜರಿದಾತ, ಭಾನುವಿನ ಉದಯಕ್ಕೆ ಒಳಗಾಗದಾತ ಶರಣನು,' 'ಸಂಚಲವಿಲ್ಲದ ಭಕ್ತಿ ಅವನಲ್ಲಿ,' 'ಪಂಜನೆಯಿಲ್ಲದ ಮಹಂತನವನು, 'ದೇವರನರಿವಡೆ ಶರಣರ ಸಂಗವೇ ಮೊದಲು,' 'ಅನುಪಮ ಸುಖಸಾರಾಯ ಶರಣರು,' ಎಂದು ಈ ಶರಣರನ್ನು ವಚನಕಾರರೇ ವರ್ಣಿಸಿದ್ದಾರೆ. ಈ ಬಗೆಯ ನಿರ್ಮಲ ಮತ್ತು ನಿರಹಂಕಾರವಾದ ಭಾವಭೂಮಿಯಲ್ಲಿ ಭಕ್ತಿಬೀಜವು ಮೊಳೆತು ಭರದಿಂದ ಬೆಳೆದು ಪೇರ್ಮರವಾಗಿ ಅದು ಕರ್ನಾಟಕದ ಸಂತಪ್ತರಿಗೆ ನೆಳಲನೀಡಿ ಅವರನ್ನು ಸಂತೈಸಿತು, ಆರ್ತರಿಗೆ ಅನಾಥರಿಗೆ ಆಶ್ರಯ ಕೊಟ್ಟು ಅವರನ್ನು ಸಲಹಿತು, ಸಂಸಾರಯಾತ್ರೆಯಲ್ಲಿ ದಣಿದವರಿಗೆ ತಂಪು ಕಂಪಾದ ಪುಷ್ಪಪರಿಮಲವನ್ನು ಬೀರಿ ಅವರ ದಣುವಾರಿಸಿತು, ಮತ್ತು ಜಿಜ್ಞಾಸುಗಳಿಗೆ ಜ್ಞಾನಫಲವನ್ನು ಕೊಟ್ಟು ಅವರ ಹಸಿವನ್ನು ಹಿಂಗಿಸಿತು. ಈ ವಚನಕಾರರ ಸಂಖ್ಯೆಯೂ ಚಿಕ್ಕದಿಲ್ಲ. ಇದುವರೆಗೆ ಸುಮಾರು ೫೧೩ ವಚನಕಾರರ ಹೆಸರುಗಳನ್ನು ಇಲ್ಲವೆ ಮುದ್ರಿಕೆಗಳನ್ನು ಶ್ರೀ. ಹಳಕಟ್ಟಿಯವರು ಪ್ರಸಿದ್ಧಮಾಡಿದ್ದಾರೆ. ಇವರಲ್ಲಿ ೩೮ ಸ್ತ್ರೀಯರಿರುವರು. ಸರ್ವಭಕ್ಷಕ ಕಾಲನ ಕೈಯೊಳಗಿಂದ ಪಾರಾಗಿ ಈ ಹೆಸರುಗಳು ಉಳಿದಿರುವವು ಎಂಬುದನ್ನು ನಾವು ಲಕ್ಷದಲ್ಲಿಡಬೇಕು.

೩೮. ವಚನಗಳ ರಚನೆಯು ಇಂತಹ ಒಂದು ವಿಶಿಷ್ಟ ವರುಷವೆ ಪ್ರಾರಂಭವಾಯಿತು, ಎಂದು ಸದ್ಯಕ್ಕೆ ಹೇಳಲಿಕ್ಕೆ ಬರುವಂತಿಲ್ಲ. ಬಸವೇಶ್ವರನ ಕಾಲದಿಂದ (ಶಾ. ಶ. ೧೦೭೯) ವಚನಪದ್ಧತಿಗೆ ಒಂದು ತೇಜವೂ ಮಹತ್ವವೂ ಅಭಿವೃದ್ಧಿಯ ಪ್ರಸಂಗವೂ ಬಂದಿದ್ದರೂ ಆ

ಪದ್ಧತಿಯು ಅವರ ಕಾಲಕ್ಕೂ ಸುಮಾರು ಒಂದು ನೂರು ವರ್ಷವಾದರೂ ಮೊದಲೇ ಆರಂಭವಾಯಿತು, ಎಂದು ವಿದ್ವಾಂಸರ ಮತವಿರುವದು. ತನುಗಿಂತ ಪೂರ್ವದಲ್ಲಿಯೆ ರೂಢವಾದ ಮತ್ತು ಜನರಲ್ಲಿ ತಕ್ಕಮಟ್ಟಿಗೆ ಲೋಕಪ್ರಿಯವಿದ್ದ ಉಪದೇಶಪದ್ಧತಿಯನ್ನು ಬಸವೇಶ್ವರನೂ ಅವನ ಅನುಯಾಯಿಗಳೂ ಉಪಯೋಗಿಸಿದರು ಮತ್ತು ತಮ್ಮ ಭಕ್ತಿಸಂದೇಶವನ್ನು ಕರ್ನಾಟಕದ ತುಂಬ ಹರಡಿದರು. ವಚನಕಾರರು ವಚನಗಳನ್ನು ಕರ್ನಾಟಕದಲ್ಲಿಯ ಸಾಮಾನ್ಯ ಜನತೆಯಲ್ಲಿ ವಿಲಕ್ಷಣವಾದ ಧಾರ್ಮಿಕಜಾಗ್ರತಿಯನ್ನುಂಟುಮಾಡುವಗೋಸುಗ ಉಪಯೋಗಿಸಿದರು. ಇಂಥ ಸಂಧಿಗೆ ಮತ್ತು ಈ ಬಗೆಯ ಕಾರ್ಯಕ್ಕೆ ಈ ತರದ ಹೃದಯಪ್ರವೇಶಿಯಾದ ಸುಲಭ ಮಾಧ್ಯಮವೇ ಯೋಗ್ಯವು. ಇನ್ನು ಅವರವರ ಮುದ್ರಿಕೆಗಳಿದ್ದ ಆಯಾ ಬಗೆಯ ವಚನಗಳನ್ನು ಆಯಾ ವಚನಕಾರರೇ ಬರೆದರೊ ಅಥವಾ ಅವರ ಅನುಯಾಯಿಗಳಾಗಲಿ ಶಿಷ್ಯರಾಗಲಿ ನೆನಪಿನಿಂದ ಅವರ ಪಶ್ಚಾತ್ ಬರೆದರೂ ಈ ಪ್ರಶ್ನೆಯು ವಿಚಾರಣೀಯವಿದೆ. ಯಾಕಂದರೆ, ಜೀಸಸ್ ಕ್ರಾಯಿಸ್ಟ ಅಥವಾ ಬುದ್ಧ ಭಗವಾನರಂಥ ಮಹಾತ್ಮರು ಆಡಿದ ಮಾತುಗಳು ಎಂದು, ಈಗ ಪ್ರಸಿದ್ಧವಿರುವ ಎಷ್ಟೋ ಮಾತುಗಳು ಅವರ ಕಾಲದಲ್ಲಿ ಗ್ರಂಥಸ್ಥವಾದವುಗಳಲ್ಲ. ಆದರೆ ಬಾಯಿಂದಬಾಯಿಗೆ ಪರಂಪರೆಯಿಂದ ಬಂದು ಅವು ಅವರ ಪಶ್ಚಾತ್ ನೂರಾರು ವರ್ಷಗಳ ಬಳಿಕ ಅವರ ಪ್ರತಿಭಾಶಾಲಿ ಅನುಯಾಯಿಗಳಿಂದ ಬರೆದಿಡಲ್ಪಟ್ಟವುಗಳು ಮತ್ತು ಅವೇ ಈಗ ಗಾಸ್‌ಪೆಲ್ಸ (gospels) ಹಾಗೂ 'ಜಾತಕ'ಗಳೆಂದು ಪ್ರಸಿದ್ಧವಿರುವವು, ಎಂದು ಪರಿಶೋಧಕರ ಮತವಿರುವದು. ಅನುಯಾಯಿಗಳು ಬರೆದ ಮಾತುಗಳು ಕೇವಲ ಕಾಲ್ಪನಿಕ ಎಂದು ಇದರ ಅರ್ಥವಲ್ಲ. ಆದರೆ ಅವುಗಳಲ್ಲಿಯ ತತ್ವಾಂಶವು ನಿಜವಿದ್ದರೂ ಅವುಗಳ ಈಗಿನ ರೂಪವು ಐತಿಹಾಸಿಕ ದೃಷ್ಟಿಯಿಂದ ಪೂರ್ಣವಾಗಿ ಕ್ರಾಯಿಸ್ಟ ಅಥವಾ ಬುದ್ಧ ಇವರಿಂದ ಕೊಡಲ್ಪಟ್ಟದ್ದಲ್ಲ, ಎಂಬುದು ನಿಜವು. ಛಂದೋಬದ್ಧ ಅಥವಾ ಕಾವ್ಯರೂಪವಿಲ್ಲದ್ದರಿಂದ ಅವರ ಸುದ್ದಿಗಳು ಪರಂಪರಾಗತ ಬರಹದಲ್ಲಿ ಅಥವಾ ಬಾಯಿಂದಬಾಯಿಗೆ ಹೋಗುವಾಗ ಹಲಕೆಲವು ಹೆಚ್ಚುಕಡಿಮೆಗಳನ್ನು ಹೊಂದಿರುವದೂ ಸಹಜವಿರುವದು ಮತ್ತು ಶಕ್ಯವಿರುವದು. ಹಲಕೆಲವು ವಚನಕಾರರ ಹಲಕೆಲವು ವಚನಗಳ ಸಂಬಂಧದಿಂದಲೂ ಇದೇ ತೆರದ ಸಂಗತಿಗಳು ಸಂಭವಿಸಿರುವದು ಅಶಕ್ಯವಿಲ್ಲ. ವಿಶೇಷವಾಗಿ 'ಶೂನ್ಯಸಂಪಾದನೆ'ಯಂಥ ಗ್ರಂಥವನ್ನು ಬರೆಯುವಾಗ ಈ ಬಗೆಯ ಮಾತುಗಳು ಆಗಿರುವದು ಅಶಕ್ಯವಿಲ್ಲ. ಅದ

ರಲ್ಲಿಯ ಪವಾಡ, ವರ್ಣನೆ ಮುಂತಾದವುಗಳನ್ನು ನೋಡಿದರೆ ಐತಿಹಾಸಿಕ ಸತ್ಯಕ್ಕಿಂತ ಗ್ರಂಥಕಾರನು ತತ್ಪೋಪದೇಶಕ್ಕೆಯೆ ಹೆಚ್ಚು ಮಹತ್ವ ಕೊಟ್ಟಿರುವನು ಎಂಬುದು ಒಡೆದುಕಾಣುವದು. ಆದರೆ ಇದು ಇನ್ನೂ ಸಂಶೋಧನದ ವಿಷಯವಿರುವದು ಎಂಬ ಮಾತನ್ನಷ್ಟೇ ಇಲ್ಲಿ ಹೇಳಿ ಸದ್ಯಕ್ಕೆ ಹೆಚ್ಚಿನ ಅನುಮಾನಗಳನ್ನು ಮಾಡಲಿಕ್ಕೆ ಹೋಗುವದಿಲ್ಲ. ಕದಾಚಿತ್ ಕೆಲವೊಂದು ವಚನಗಳನ್ನು ಆಯಾ ವಚನಕಾರರು ಬರೆಯದೆ ಅವರ ಪಶ್ಚಾತ್ ಅವರು ಉಪದೇಶಿಸಿದ ತತ್ವಗಳನ್ನೆ ಮುಂದಿಟ್ಟುಕೊಂಡು ಅವರ ಅನುಯಾಯಿಗಳು ಬರೆದಿರುವರೆಂದು ತಿಳಿದುಕೊಂಡರೂ ಅದರಿಂದ ಒಟ್ಟಿಗೆ ವಚನಶಾಸ್ತ್ರಕ್ಕೆ ಯಾವ ಕುಂದೂ ಬರುವದಿಲ್ಲ, ಎಂಬುದನ್ನು ವಾಚಕರು ಲಕ್ಷದಲ್ಲಿಡತಕ್ಕದ್ದು.

೫೯. ವಚನಗತವಾದ ಅನೇಕ ಗುಣಗಳ ಮೂಲಕ ಆ ಪದ್ಧತಿಗೆ ಒಳ್ಳೆ ಪ್ರೋತ್ಸಾಪ ದೊರೆತು ಎಲ್ಲ ಆಧ್ಯಾತ್ಮ ವಿಷಯಗಳನ್ನು ಕುರಿತು ಶ್ರೇಷ್ಠ ಸತ್ಪುರುಷರು ವಚನಗಳನ್ನು ಬರೆದುದರಿಂದ ತೀವ್ರವೆ ಸಂಕಲಿತ ವಚನಸಂಗ್ರಹಕ್ಕೆ ಶಾಸ್ತ್ರರೂಪವು ಬಂದಿತು. ಬಬ್ಬೊಬ್ಬರೆ ಯಾರಾದರೂ ಹಲಕೆಲವು ವಿಷಯಗಳನ್ನು ಮಾತ್ರ ಸಂಬಂಧಿಸಿ ವಚನಗಳನ್ನು ಬರೆದಿದ್ದರೆ ಅವು ಶಾಸ್ತ್ರರೂಪವನ್ನು ಅಥವಾ ಪೂರ್ಣತ್ವವನ್ನು ಹೊಂದುತ್ತಿರಲಿಲ್ಲ. ಅದೇ ರೀತಿ ಅವುಗಳಲ್ಲಿ ತಾಳಮೇಳವಿಲ್ಲದೆ ಪರಸ್ಪರ ವಿರೋಧ ಹಾಗೂ ಅಸಂಬದ್ಧತೆ ಇವು ಇದ್ದಿದ್ದಾದರೆ ಅವು ಶಾಸ್ತ್ರವೆನಿಸುತ್ತಿದ್ದಿಲ್ಲ. ಹಾಗೆ ಆಗದೆ, ಬೇರೆ ಬೇರೆ ಕಾಲಕ್ಕೆ ಆಗಿಹೋದ ವಚನಕಾರರ ವಿಚಾರ ಸರಣಿ, ಆಚಾರ, ಅನುಭಾವ ಇವೆಲ್ಲ ಹೆಚ್ಚುಕಡಿಮೆ ಒಂದೇ ಬಗೆಯವಾದುದರಿಂದ ಅವೆಲ್ಲವುಗಳಿಗೆ ಒಂದೇ ತರದ ವಾಙ್ಮಯ ರೂಪವು ಬಂದಿತು. ಅವರೆಲ್ಲರು ಆಗಮಗಳನ್ನೂ ಹಾಗೂ ಆಗಮೋಕ್ತ ಷಟ್‌ಸ್ಥಲಶಾಸ್ತ್ರವನ್ನೂ ಮತ್ತು ಅನುಭಾವವನ್ನೂ ಅಥವಾ ಸತ್ಯಸಾಕ್ಷಾತ್ಕಾರವನ್ನೂ ಮುಖ್ಯವೆಂದು ಇಟ್ಟುಕೊಂಡರು. ಆಯಾ ವಿಷಯದಲ್ಲಿ ತನ್ಮಯರಾಗಿ ಸ್ಫೂರ್ತಿಗೊಂಡಾಗ ಅವರು ವಚನಗಳನ್ನು ರಚಿಸಿದರು. ತಮ್ಮ ಅಜ್ಞ ಬಾಂಧವರಿಗೆಲ್ಲ ಸಹಜ ಬೋಧವಾಗಬೇಕು, ಎಂಬ ಪರಮ ಪರಹಿತ ಬುದ್ಧಿಯು ಅವರೆಲ್ಲರಲ್ಲಿ ಮೊದಲಿನಿಂದ ನೆಲೆಗೊಂಡದ್ದರಿಂದ ಅವರ ಬಾಯಿಂದ ಸ್ವಾಭಾವಿಕವಾಗಿ ಸುಲಭ ಸೊಲ್ಲೇ ಹೊರಬಿದ್ದಿತು. ಆ ಸೂಳು ಸುಡಿಯನ್ನು ಅವರು ಸ್ವತಃ ಆಗಿಂದಾಗ ಬರೆದಿಟ್ಟಿರಲಿ, ಅಥವಾ ಅವರೇ ನೆನಪಿನಿಂದ ಆಮೇಲೆ ಬರೆದಿರಲಿ, ಅಥವಾ ಅವರ ಅದಿಬದಿಯವರು ಇಲ್ಲವೆ ಶಿಷ್ಯರು ಅಥವಾ ಅನುಯಾಯಿ

ಗಳು ಬರೆದಿಟ್ಟಿರಲಿ, ಅವೆಲ್ಲ ವಿಸ್ತಾರವಾದ ವಚನಶಾಸ್ತ್ರದ ಭಾಗವಾದವು. ಆ ವಚನಗಳಲ್ಲಿ ಮಿತ್ರ, ಕಾಲವಶವಾಗದೆ ಎಷ್ಟು ಉಳಿದವೊ ಅವು ಪರಂಪರೆಯಿಂದ ಈ ವರ್ತಮಾನಕಾಲದವರೆಗೆ ಬಂದಿರುವವು.

೪೦. ಕನ್ನಡ ವಾಙ್ಮಯದ ದೃಷ್ಟಿಯಿಂದ ಕೂಡ ವಚನಶಾಸ್ತ್ರವು ಕರ್ನಾಟಕದಲ್ಲಿ ಬಹಳ ಮಹತ್ವದ ಕಾರ್ಯವನ್ನು ಮಾಡಿದೆ ಎಂದು ಒಪ್ಪಬೇಕಾಗುವದು. ವಚನಕಾರರು ಒಂದು ಪ್ರತ್ಯೇಕವಾದ ಗದ್ಯರಚನೆಯ ರೀತಿಯನ್ನು ರೂಢಿಯಲ್ಲಿ ತಂದಿರುವರು. ಸಾಹಿತಿಗಳೆಲ್ಲ ಪದ್ಯರೂಪದಿಂದಲೆ ಬರೆಯುತ್ತಿರುವ ಕಾಲದಲ್ಲಿ ವಚನಕಾರರು ಅತ್ಯುಚ್ಚ ಮಾನವೀ ವಿಚಾರಗಳನ್ನೂ ಭಾವಗಳನ್ನೂ ಗದ್ಯದಲ್ಲಿ, ಬಹಳ ಸುಲಭ ಬಾಲಬೋಧ ಗದ್ಯದಲ್ಲಿ ವ್ಯಕ್ತಗೊಳಿಸಿ, ಅಂಥ ಭಾವಗಳನ್ನು ಅತ್ಯಂತ ಬಲವುಳ್ಳ ತಿಳಿಗನ್ನಡ ಗದ್ಯದಲ್ಲಿ ಪ್ರಕಟಿಸುವದು ಶಕ್ಯವು, ಎಂಬುದನ್ನು ಸಿದ್ಧಮಾಡಿ ತೋರಿಸಿದರು ಈಗ್ಯೂ ವಚನಗಳು ಕನ್ನಡದಲ್ಲಿ ಗದ್ಯಶೈಲಿಯ ಮಾದರಿಯಾಗಿ ಕಂಗೊಳಿಸುವವು. ಪೂರ್ವದ ಜಂಪೂಗ್ರಂಥಗಳಲ್ಲಿರುವ ಗದ್ಯ, ಕೆಲವು ವಚನಗಳನ್ನು ಕುರಿತು ಬರೆದ ಟೀಕೆಯಲ್ಲಿಯ ಗದ್ಯ, ಇವುಗಳಿಗಿಂತ ಬೇರೆ ಬಗೆಯ ಹೆಚ್ಚು ಶ್ರೇಷ್ಠವಾದ ಶೈಲಿಯಲ್ಲಿ ವಚನಗಳು ಬರೆಯಲ್ಪಟ್ಟಿರುವವು. ಸ್ವಲ್ಪೇ ಶಬ್ದಗಳಲ್ಲಿ ಬಹಳ ಮತ್ತು ಗೂಢ ಅರ್ಥವನ್ನು ವ್ಯಕ್ತಮಾಡುವ ವಚನದ ಸಂಕ್ಷೇಪ ಶಕ್ತಿ, ವಚನರಚನೆಯಲ್ಲಿರುವ ಒಂದು ಬಗೆಯ ತಾಳ, ಪ್ರಾಸ, ಮತ್ತು ಪ್ರಮಾಣಬದ್ಧತೆ, ಯಥಾಯೋಗ್ಯ ಶಬ್ದಗಳನ್ನು ಉಪಯೋಗಿಸುವ ಕೌಶಲ, ವಿಚಾರವ್ಯಕ್ತಿಯಲ್ಲಿ ಸಾಧಿಸಿದ ಸಮತೂಕ, ತಿಳಿಗನ್ನಡ ಶಬ್ದಗಳ ಕುಶಲ ಬಳಕೆ, ಈ ಮುಂತಾದ ಗುಣಗಳು ವಚನವಾಙ್ಮಯದಲ್ಲಿ ಪರಮಾವಧಿಯನ್ನು ಮುಟ್ಟಿವೆ ಎಂದು ಹೇಳಲಿಕ್ಕೆ ಯಾವ ಪ್ರತ್ಯವಾಯವೂ ಇಲ್ಲ.

೪೧. ಈ ಬಗೆಯಾಗಿ ವಚನಶಾಸ್ತ್ರದ ಸಾಮಾನ್ಯ ಲಕ್ಷಣಗಳು, ಅದರ ವಿಷಯ, ಅದು ಯಾವಾಗ ಯಾರಿಂದ ಯಾಕೆ ಹೇಗೆ ರಚಿಸಲ್ಪಟ್ಟಿತು, ವಾಙ್ಮಯದ ದೃಷ್ಟಿಯಿಂದ ಅದರ ಮಹತ್ವ, ಈ ಮುಂತಾದ ಮಾತುಗಳನ್ನು ಇದುವರೆಗೆ ಸಂಕ್ಷೇಪದಿಂದ ಚರ್ಚಿಸಿದ್ದಾಯಿತು. ಈ ಚರ್ಚೆಯ ಮೇಲಿಂದ ವಿಷಯ ಮತ್ತು ರೀತಿ ಈ ಎರಡೂ ದೃಷ್ಟಿಯಿಂದ ವಚನಶಾಸ್ತ್ರವು ಎಷ್ಟು ಮಹತ್ವದ್ದಿರುವದು ಎಂಬದು ಗೊತ್ತಾಗುವಂತಿದೆ. ವೇದ, ಉಪನಿಷತ್ತು ಮತ್ತು ಶೈವಾಗಮಗಳು ಆಧ್ಯಾತ್ಮಿಕ ಸ್ವಾನುಭಾವವನ್ನು ತಮ್ಮ ಆಧಾರವಾಗಿಟ್ಟುಕೊಂಡಿವೆ. ಅವು ಸ್ಫೂರ್ತಿಮೂಲಕ ಸಂಸ್ಕೃತದಲ್ಲಿ ಬರೆಯಲ್ಪಟ್ಟಿವೆ. ಉಪನಿಷತ್ತುಗಳು ಅಧ್ಯಾತ್ಮದಲ್ಲಿ ಬುದ್ಧಿ ಶಕ್ತಿಗೆ, ಕೇಳಿದ ಜ್ಞಾನಕ್ಕೆ,

ತರ್ಕವಾದಕ್ಕೆ ಯಾವ ಮಹತ್ವದ ಸ್ಥಾನವನ್ನೂ ಕೊಟ್ಟಿಲ್ಲ. ಶ್ರದ್ಧೆ, ಅನುಭವ ಇವುಗಳಿಗೆಯೆ ಉಪನಿಷತ್ಕಾರರು ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ಆಗಮೋಪನಿಷದಾದಿ ಗ್ರಂಥಗಳನ್ನೂ ಅವುಗಳಲ್ಲಿ ಹೇಳಿದ ಅಧ್ಯಾತ್ಮವನ್ನೂ ತಮ್ಮ ಅನುಭಾವಕ್ಕೆ ಸರಿಹಚ್ಚಿ ನೋಡಿ, ಬಳಿಕ ವಚನಕಾರರು ಸ್ಫೂರ್ತಿಯಿಂದ ಕನ್ನಡದಲ್ಲಿ ಯಾವ ವಚನಗಳನ್ನು ಬರೆದರೊ ಅವುಗಳ ಸಂಗ್ರಹವೆ ವಚನಶಾಸ್ತ್ರವೆನಿಸುವದು. ಗುರುಗಳ ಉಪದೇಶ, ಶಾಸ್ತ್ರವಚನ, ಮತ್ತು ಸ್ವಾನುಭಾವ ಈ ಮೂರು ಮಾತುಗಳ ಏಕವಾಕ್ಯತೆಯಾದಲ್ಲಿ ಸತ್ಯದ ಸಂಪೂರ್ಣ ಪರೀಕ್ಷೆಯಾಗಿ ಅದು ಒರೆಗೆ ಹತ್ತಿದಂತಾಯಿತು, ಎಂದು ತಿಳಿಯಬೇಕು. ವಚನಕಾರರ ಮಾತುಗಳಲ್ಲಿ ಈ ಬಗೆಯ ತ್ರಿವೇಣೀಸಂಗಮವು ಕಂಡುಬರುವದು. ಈ ಮೂರು ಮಾತುಗಳಲ್ಲಿ ಮತ್ತೆ ಅನುಭವವೆ ಮುಖ್ಯವು. ಅಧ್ಯಾತ್ಮದಲ್ಲಿ ಅನುಭಾವಕ್ಕೆ ಎಲ್ಲಕ್ಕೂ ಹೆಚ್ಚು ಮಹತ್ವವು ಮತ್ತು ನಿರ್ಣಾಯಕ ಪ್ರಾಮಾಣ್ಯವು ಇರುವದು. ಉಪನಿಷತ್ಕಾರರಂತೆ ವಚನಕಾರರೂ ಅನುಭಾವಕ್ಕೆ ಪ್ರಥಮಸ್ಥಾನವನ್ನು ಕೊಡುವರು. 'ಅನುಭಾವವಿಲ್ಲದ ಭಕ್ತ ಮನುಜ,' 'ಅರುವಿನ ತೃಪ್ತಿಗೆ ಅನುಭಾವವೆ ಆಶ್ರಯ,' 'ಅನುಭಾವಸಾಮರ್ಥ್ಯದಿಂದಲೆ ತನುಮನ ಕರ್ಮ ಗುಣಗಳು ಅಳಿಯುವವು, 'ಅನುಭಾವವೆಂಬದು ತಾನಾರೆಂಬುದ ತೋರುವದು,' ಎಂದು ಮುಂತಾಗಿ ಅನುಭಾವವನ್ನು ವಚನಕಾರರು ವರ್ಣಿಸಿರುವರು. ಆದುದರಿಂದ ವಚನಗಳಲ್ಲಿ ಪ್ರತಿಪಾದಿಸಲ್ಪಟ್ಟ ಅಧ್ಯಾತ್ಮವು ಶುದ್ಧವು. ಅನುಭಾವಸಿದ್ಧವು, ಮತ್ತು ಆಧಾರಭೂತವು ಇರುವದು.

೪೨. ಹೀಗೆ ಸ್ವಾನುಭಾವದ ಆಧ್ಯಾತ್ಮಿಕ ಸಂಗತಿಗಳನ್ನು ಸ್ಫೂರ್ತಿಯುಕ್ತ ಭಾಷೆಯಲ್ಲಿ ವಚನಕಾರರು ಬರೆದಿರುವರು. 'ಶರಣರ ಮನೋಮಧ್ಯದಲ್ಲಿ ಶಿವನು ಮೂರ್ತಿಗೊಂಡು ಆ ಶರಣರ ಜಿಹ್ವೆಯ ಕೊನೆಯ ಮೊನೆಯ ಮೇಲೆ ವಚನವೆಂಬ ಪರಮಾಮೃತವ ಕರೆದು, ಕೆಲಬಲದ ಗಣಂಗಳಿಗೆ ಸವಿಯ ತೋರಿ ಆ ಶರಣರಲ್ಲಿ ಪರಿಪೂರ್ಣನಾಗಿಪ್ಪನು,' (೫೩೩) ಎಂದು ದೈವೀಸ್ಫುರಣದಿಂದ ಬರೆದ ವಚನಗಳ ಉಗಮವನ್ನು ವಚನಕಾರನೊಬ್ಬನು ವರ್ಣಿಸಿರುವನು. ಸ್ಫೂರ್ತಿ ಎಂದ ಬಳಿಕ ಅದು ಎಲ್ಲಿ ಹೋದರೂ ಒಂದೇ. ಕಾವ್ಯಸ್ಫೂರ್ತಿ ಅಥವಾ ಕಲಾಸ್ಫೂರ್ತಿ ಹಾಗೂ ದಿವ್ಯಸ್ಫೂರ್ತಿ ಅಥವಾ ದೈವೀಸ್ಫೂರ್ತಿ ಇವೆರಡೂ ಸ್ವರೂಪತಃ ಒಂದೇ ಇರುವವು. ವಾಸನಶಾಸ್ತ್ರದ ದೃಷ್ಟಿಯಿಂದ ಅವುಗಳಲ್ಲಿ ಯಾವ ಭೇದವೂ ಇಲ್ಲ. ಆದರೆ ಅವುಗಳಲ್ಲಿಯ ವಿಷಯ ಮತ್ತು ಅವುಗಳಿಂದ

ಜನರಿಗೆ ಆಗುವ ಉಪಯೋಗ ಇವುಗಳಲ್ಲಿ ಮಹದಂತರವಿರುವದು. ಯಾವದೊಂದು ಬಗೆಯ ಸೌಂದರ್ಯವೆ ಕಲಾಸ್ಫೂರ್ತಿಯ ಕಾರಣವು. ಅದು ಯಾವದೊಂದು ಕಲಾರೂಪವನ್ನು ನಿರ್ಮಿಸುವುದರಲ್ಲಿ ಪರಿಣಮಿಸಿ ಜನರಿಗೆ ಸೂಕ್ಷ್ಮವಾದ ಕಲಾನಂದವನ್ನು ದೊರಕಿಸಿಕೊಡುವುದರಲ್ಲಿ ಅದರ ಪರಿಪೂರ್ತಿಯಾಗುವದು. ಆದರೆ ಪರಮಾತ್ಮ ಸಾಕ್ಷಾತ್ಕಾರವು ಅಥವಾ ಸತ್ಯಸಾಕ್ಷಾತ್ಕಾರವು ದೈವೀಸ್ಫೂರ್ತಿಗೆ ಕಾರಣವಾಗುವದು. ಆಧ್ಯಾತ್ಮಿಕ ಇಲ್ಲವೆ ಧಾರ್ಮಿಕ ಸತ್ಯಗಳ ರೂಪದಿಂದ ಅದು ಶಬ್ದಗಳಲ್ಲಿ ಪ್ರಕಟವಾಗುವದು ಮತ್ತು ನಿರತಿಶಯ ಆತ್ಮಾನಂದವನ್ನು ಜನರಿಗೆ ದೊರಕಿಸಿಕೊಡುವುದರಲ್ಲಿ ಅದು ಕೊನೆಗಾಣುವದು. ವಚನಕಾರರು ಸತ್ಯವನ್ನು ನೋಡಿ, ಅನುಭವಿಸಿ, ಅದನ್ನು ಸ್ಫೂರ್ತಿಯಿಂದ ನುಡಿದವರಾದುದರಿಂದಲೆ ಅವರ ವಾಣಿಯಲ್ಲಿ ತೇಜವೂ ಬಲವೂ ವರ್ಚಸ್ಸೂ ಕಂಡುಬರುವವು.

೪೩. ಇನ್ನು ವಚನಶಾಸ್ತ್ರವು ವೀರಶೈವ ಸಾಧುಗಳಿಂದ ಬರೆಯಲ್ಪಟ್ಟದ್ದರಿಂದ ಅದು ಶೈವರಿಗೆ ಮಾತ್ರ ಉಪಯುಕ್ತವು, ಸಾಂಪ್ರದಾಯಿಕ ವಿರುವುದರಿಂದ ಅದು ಎರಡನೆಯವರಿಗೆ ತಿಳಿಯುವದು ಸಹ ಕಠಿಣ, ಎಂಬ ಆಕ್ಷೇಪಗಳನ್ನು ಕೆಲವರು ಎತ್ತಬಹುದು. ಈ ಆಕ್ಷೇಪಗಳಲ್ಲಿ ವಿಶೇಷ ತಥ್ಯವಿಲ್ಲ. ಯಾಕಂದರೆ ಹಿಂದುಸ್ಥಾನದಲ್ಲಿ ಯಾವದೇ ಲೇಖಕನಾದರೂ ಶೈವ, ವೈಷ್ಣವ, ಶಾಕ್ತ, ಗಾಣಪತ್ಯ ಮುಂತಾದವುಗಳಲ್ಲಿ ಯಾವದೊಂದು ಸಾಂಪ್ರದಾಯವನ್ನು ಸೇರಿದವನೆ ಇರುವನು. ಹಾಗೆ ಇದ್ದಾಕ್ಷಣಕ್ಕೆ ಅವನ ಲೇಖನವು ಎರಡನೇಯವರಿಗೆ ಉಪಯುಕ್ತವಿಲ್ಲವೆಂದು ಹೇಳುವದು ತೀರ ತಪ್ಪಾಗುವದು. ಅಲ್ಲಿಲ್ಲಿ, ಅಪ್ಪಿಷ್ಟು, ಹೆಚ್ಚುಕಡಿಮೆಗಳಿದ್ದರೂ ವಚನತತ್ವಜ್ಞಾನವೆಲ್ಲ ಭಾರತೀಯರಿಗೆ ಸಾಮಾನ್ಯವಾದ ವೇದಾಂತವನ್ನೆ ಬಹುಮಟ್ಟಿಗೆ ಹೊಂದಿರುವದು. ಇನ್ನೂ ಎಷ್ಟೋ ವಚನಗಳು ಸಾಂಪ್ರದಾಯಿಕವಿರುವವೆಂಬ ಮಾತು ನಿಜವು. ಆದರೆ ಆ ಸಾಂಪ್ರದಾಯದ ಪರಿಭಾಷೆಯನ್ನು ವಾಚಕರು ಸ್ವಲ್ಪ ತಿಳಿದುಕೊಂಡುಬಿಟ್ಟರೆ ಸಾಂಪ್ರದಾಯಿಕ ವಚನಗಳಲ್ಲಿಯ ಅರ್ಥವು ಸಹ ಅವರಿಗೆ ಸಹಜ ತಿಳಿಯುವದು. ಉದಾಹರಣಾರ್ಥವಾಗಿ, ಶಿವ ಎಂದರೆ ಪರಮಾತ್ಮ, ಲಿಂಗ ಎಂದರೆ ಪರಮಾತ್ಮ ಅಥವಾ ಪರಮಾತ್ಮಪ್ರತೀಕ, ಷಟ್‌ಸ್ಥಲಗಳೆಂದರೆ ಸಾಧಕನು ಸಿದ್ಧನಾಗುವವರೆಗೆ ಏರತಕ್ಕ ವಿಶಿಷ್ಟ ಲಕ್ಷಣಗಳುಳ್ಳ ಆರು ಮೆಟ್ಟುಗಳು, ಭಕ್ತ, ಮಹೇಶ, ಪ್ರಾಣಲಿಂಗಿ, ಪ್ರಸಾದಿ, ಶರಣ, ಐಕ್ಯ ಎಂಬವೇ ಆ ಆರು ಸ್ಥಳಗಳು, ಷಟ್‌ಸ್ಥಲಗಳಲ್ಲಿ ಐಕ್ಯಸ್ಥಳವನ್ನು ಮುಟ್ಟಿ ಸುಖವಾತನೆ

ಜಂಗಮನು, ಸದಾಚಾರ ಅಂದರೆ ಶುದ್ಧ ಆಚಾರ, ಗಣಾಚಾರ ಅಂದರೆ ಸತ್ಯ ಮತ್ತು ಧರ್ಮ ಇವುಗಳ ರಕ್ಷಣೆ, ನಿತ್ಯಾಚಾರ ಅಂದರೆ ಪೂಜಾದಿ ನಿತ್ಯಕರ್ಮಗಳು, ಶಿವಾಚಾರ ಅಂದರೆ ಲಿಂಗಧಾರಿಗಳನ್ನು ಆದರಿಸುವದು, ಲಿಂಗಾಚಾರ ಅಂದರೆ ಲಿಂಗಧಾರಣ ಮತ್ತು ಅದರ ಪೂಜೆ ಇವೇ ಪಂಚಾಚಾರಗಳು. ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದ, ಪಂಚಾಕ್ಷರಮಂತ್ರ ಇವುಗಳನ್ನು ಯೋಗ್ಯರೀತಿಯಿಂದ ವ್ಯವಹರಿಸುವುದೆ ಅಷ್ಟಾವರಣ. ಇಷ್ಟು ಮಾತುಗಳನ್ನು ಸ್ಪಷ್ಟವಾಗಿ ಅರಿತುಕೊಂಡರೆ ವಚನಕಾರರ ಸಾಂಪ್ರದಾಯಿಕ ವಚನಗಳು ಕೂಡ ಸ್ಪಷ್ಟವಾಗಿ ತಿಳಿಯುವವು. ಇಷ್ಟುಮೀರಿ, ಹಲಕೆಲವು ತೀರ ಸಾಂಪ್ರದಾಯಿಕ ಹಟದ ವಚನಗಳೇನಾದರೂ ಇದ್ದರೆ ಅವುಗಳನ್ನು ಬಿಟ್ಟರೂ ವಚನಶಾಸ್ತ್ರದ ರಹಸ್ಯವನ್ನು ತಿಳಿದುಕೊಳ್ಳಲಿಕ್ಕೆ ಯಾವ ಅಡ್ಡಿಯೂ ಆಗಲಿಕ್ಕಿಲ್ಲ. ತಾತ್ಪರ್ಯವೇನೆಂದರೆ, ಅನುಭವದಲ್ಲಿ ಉಗಮಹೊಂದಿ, ಸ್ಫೂರ್ತಿಯಿಂದ ರೂಪುಗೊಂಡು, ಶರಣರ ನಡೆಯಲ್ಲಿ ಮೆರೆಯುವ ಈ ಶಾಸ್ತ್ರವನ್ನು ತಿಳಿದುಕೊಂಡು ಅದರ ಗುಣಗ್ರಹಣಮಾಡಲಿಕ್ಕೆ ಅದರಲ್ಲಿಯ ಸಾಂಪ್ರದಾಯಿಕತ್ವವು ನಮಗೆ ಅಡ್ಡಬರಲಾರದು.

೪೪. ಕನ್ನಡದಲ್ಲಿ ಈ ವಚನಶಾಸ್ತ್ರದಂಥ ವಾಙ್ಮಯವಿದ್ದುದು ಕನ್ನಡಿಗರ ಭಾಗ್ಯವು ಮತ್ತು ಕನ್ನಡಿಗರಿಗೆ ಅದು ಭೂಷಣಾಸ್ಪದವೆ ಎಂದು ಹೇಳಬೇಕಾಗುವದು. ಇದು ಕನ್ನಡ ಭಾಷೆಯ ಗೌರವವನ್ನಷ್ಟೇ ಅಲ್ಲ, ಕನ್ನಡಿಗರ ಗೌರವವನ್ನೂ ಸ್ಪಷ್ಟಗೊಳಿಸುವದು. ಇಂಥ ವಾಙ್ಮಯವನ್ನೂ ನಿರ್ಮಾಣಮಾಡುವಷ್ಟು ಶಕ್ತಿಯುಳ್ಳವರು ಕನ್ನಡನಾಡಿನಲ್ಲಿರುವರು ಮತ್ತು ಇಂಥ ಉಚ್ಚ ಹಾಗೂ ಕಠಿಣ ವಿಚಾರಗಳನ್ನು ಸಹಜವಾಗಿ ವ್ಯಕ್ತಮಾಡುವ ಸಾಮರ್ಥ್ಯವು ಕನ್ನಡಸುದಿಯಲ್ಲಿರುವದು, ಈ ಎರಡೂ ಮಾತುಗಳು ಈ ವಚನಶಾಸ್ತ್ರದಿಂದ ಸಿದ್ಧವಾಗುತ್ತಿವೆ. ಪಂಡಿತರಲ್ಲದವರು, ಗುರುಮನೆ ಅರಮನೆಗಳ ವಿಶೇಷ ಬೆಂಬಲವಿಲ್ಲದವರು, ಅಷ್ಟೊಂದು ಸಿರಿ ಸಂಪತ್ತುಗಳ ಸಹಾಯವಿಲ್ಲದವರು, ತಮ್ಮ ತಮ್ಮ ಕಾಯಕಗಳನ್ನು ನಮ್ರತನದಿಂದ ಮಾಡುತ್ತಿರುವ ಶಿವಶರಣರು ಈ ವಚನಗಳನ್ನು ರಚಿಸಿದರು, ಎಂಬುದು ಆ ಶರಣರ ಸಂಸ್ಕೃತಿಯ ಹಿರಿಮೆಯನ್ನು ಅಥವಾ ಮೇಲ್ಮೆಯನ್ನು ತೋರಿಸುವದು. ವಚನಕಾರರಲ್ಲಿ ಎಷ್ಟೋ ಸ್ತ್ರೀಯರೂ ಇದ್ದರೆಂಬ ಸಂಗತಿಯು ಮತ್ತಷ್ಟು ಮಹತ್ವದ್ದು. ಧರ್ಮಜಾಗೃತಿಯ ಪ್ರಕಾಶವು ಎಲ್ಲೆಲ್ಲಿಯೂ ಸೇರಿ ಎಲ್ಲರನ್ನು ಆಗ ಎಚ್ಚರಿಸಿತ್ತು, ಎಂಬ ಮಾತು ಅದರಿಂದ

ಸಿದ್ಧವಾಗುವದು. ಈ ವಚನಗಳನ್ನು ಬರೆದವರು ಸತ್ಪುರುಷರು, ಶೀಲವಂತರು, ಸತ್ಯವನ್ನು ಆಚರಿಸಿದವರು; ವಚನವಿಷಯವು ಅಧ್ಯಾತ್ಮವು ಅಥವಾ ಮಾನವರ ಮೋಕ್ಷಧರ್ಮವು; ಅವುಗಳ ತಳಹದಿಯು ಆತ್ಮಾನುಭಾವವು; ಆ ವಚನಗಳು ಹೊರಹೊಮ್ಮುವ ಕಾರಣವು ದೈವೀ ಸ್ಫೂರ್ತಿಯು; ಅವು ಇಷ್ಟು ಸುಬೋಧ ಕನ್ನಡಸ್ವರೂಪವನ್ನು ಧರಿಸಿದ್ದು ಕರ್ನಾಟಕದಲ್ಲಿ ಆಬಾಲವೃದ್ಧರಿಗೆ ತಿಳಿಯಬೇಕೆಂಬ ಸದ್ಭಾವದ ಮೂಲಕ; ಈ ಪ್ರಕಾರ ವಚನಶಾಸ್ತ್ರವನ್ನು ಸಂಬಂಧಿಸಿದ ಯಾವದೇ ಸಂಗತಿಯನ್ನು ಪ್ರತ್ಯೇಕವಾಗಿ ಅಥವಾ ಎಲ್ಲವುಗಳನ್ನು ಸಾಮೂಹಿಕವಾಗಿ ವಿಚಾರಿಸಿದಂತೆ ವಚನಶಾಸ್ತ್ರದ ಮಹತ್ವವು ಹೆಚ್ಚೆಚ್ಚು ಗೋಚರವಾಗುತ್ತಹೋಗುವದು. ಇಂಥ ವಚನಶಾಸ್ತ್ರದ ಉಪದೇಶವು ಏನಿರುವದು, ಇದರ ತಿರುಳೇನು, ಕನ್ನಡಿಗರಿಗೆ ಇದರ ಸಂದೇಶವೇನು ಇದನ್ನು ನಾವು ಚನ್ನಾಗಿ ತಿಳಿದುಕೊಳ್ಳಲೆತ್ನಿಸುವದು ಅವಶ್ಯವು. ಆ ಕಾರ್ಯವನ್ನು ಮುಂದಿನ ಪ್ರಕರಣವು ಮಾಡುವದು.

---

೩. ವಚನಶಾಸ್ತ್ರದ ಸಾರಸರ್ವಸ್ವವು

(೪೫) ವಚನಶಾಸ್ತ್ರದಲ್ಲಿ ಸಾಂಪ್ರದಾಯಿಕ ಮತ್ತು ಸಾಮಾನ್ಯ ಹೀಗೆ ಎರಡು ಬಗೆಯ ಉಪದೇಶವಿರುವದು. (೪೬) ಸಾಂಪ್ರದಾಯ ಮತ್ತು ಮೂಲತತ್ವ ಇವುಗಳ ಸಂಬಂಧ. (೪೭) ವಚನಾಮೃತದ ಆಯ್ಕೆಯ ರೀತಿ. (೪೮–೪೯) ವಚನಾಮೃತದಲ್ಲಿಯ ವಿಷಯಗಳು. (೫೦–೫೧) ಪರಮಾತ್ಮಸ್ವರೂಪ, ಅವನ ಲೀಲೆಯಿಂದ ಸೃಷ್ಟಿರಚನೆ. (೫೨) ಅಜ್ಞಾನ ಮತ್ತು ಜೀವ ಇವುಗಳ ಉತ್ಪತ್ತಿ ಮತ್ತು ಸ್ವರೂಪ. (೫೩) ಮಾಯೆ, ಅಹಂಕಾರ, ಆಶೆ, ಇವುಗಳಿಂದ ಮನುಷ್ಯನಿಗೆ ಬಂಧನವು. (೫೪) ಮನುಷ್ಯನು ಯಾವಾಗ ಸ್ವತಂತ್ರ ಕರ್ತನಾಗುವನು. (೫೫) ಆತ್ಮಜ್ಞಾನದಿಂದ ಮುಕ್ತಿಯು, ಆತ್ಮಸುಖವೆ ಮುಕ್ತಿಯ ಆನಂದವು. (೫೬) ಪರಮಾತ್ಮೈಕ್ಯ ಮತ್ತು ಆತ್ಮಜ್ಞಾನ ಇವು ಒಂದೇ ಮುಕ್ತಿಯ ಆನಂದವು. (೫೭) ಮುಕ್ತಿಯ ಲಕ್ಷಣಗಳು, ಜೀವನ್ಮುಕ್ತಿಯೆ ಮುಖ್ಯ. (೫೮–೫೯) ಕರ್ಮ, ಭಕ್ತಿ, ಜ್ಞಾನ ಈ ಮುಂತಾದ ಸಾಧನಗಳಲ್ಲಿ ಸರ್ವಾರ್ಪಣವೇ

ಶ್ರೇಷ್ಠ. (೬೦–೬೩) ಜ್ಞಾನ-ಭಕ್ತಿ-ಕರ್ಮ-ಧ್ಯಾನಯೋಗಗಳ ಲಕ್ಷಣಗಳು. (೬೪) ಜ್ಞಾನ-ಭಕ್ತಿ-ಕರ್ಮ-ಧ್ಯಾನ ಇವುಗಳ ಪರಸ್ಪರ ಸಂಬಂಧವು ಮತ್ತು ಅವುಗಳ ಅವಶ್ಯಕತೆ. (೬೫) ಸಾಧಕನ ಗುಣಶೀಲಕರ್ಮಗಳು. (೬೬) ವಿಧಿನಿಷೇಧಗಳು. (೬೭) ವಚನಸಿದ್ಧನ ನಿಲುಕಡೆ. (೬೮) ವಚನಶಾಸ್ತ್ರರಹಸ್ಯದಲ್ಲಿ ತತ್ವವಿಚಾರ ಮತ್ತು ಸಾಧನ ಎಂಬ ಎರಡು ಭಾಗಗಳು. (೬೯) ತತ್ವವಿಚಾರವು. (೭೦) ಮುಕ್ತಿಯ ಮಾರ್ಗವು.

೪೫. ಹೋದ ಪ್ರಕರಣದಲ್ಲಿ ವಚನಶಾಸ್ತ್ರದ ಸ್ವರೂಪ ಮತ್ತು ಅದರ ಮಹತ್ವ, ವಿಶೇಷತಃ ಕನ್ನಡಿಗರಿಗೆ ಆ ಶಾಸ್ತ್ರವು ಎಷ್ಟು ಅವಶ್ಯಕವಿರುವದು ಮತ್ತು ಉಪಯುಕ್ತವಿರುವದು, ಎಂಬುದರ ವಿಚಾರವಾಯಿತು. ಇನ್ನು ಆ ಶಾಸ್ತ್ರದ ತಿರುಳು ಏನು ಇರುವದು, ಅದು ಯಾವ ಬಗೆಯ ಉಪದೇಶವನ್ನು ಮಾಡುವದು, ಅದು ನಮಗೆ ಏನು ಮಾಡಬೇಕೆಂದು ಹೇಳುವದು, ಅದರ ಸಾರಸರ್ವಸ್ವವೇನು, ಇದರ ವಿಚಾರವನ್ನು ಈ ಪ್ರಕರಣದಲ್ಲಿ ಮಾಡಬೇಕಾಗಿದೆ. ವಚನಶಾಸ್ತ್ರದ ಸಾರದ ವಿಚಾರವನ್ನು ಮಾಡುವಾಗ ಸಾಂಪ್ರದಾಯಿಕ ಉಪದೇಶ ಮತ್ತು ಸಾಮಾನ್ಯ ಉಪದೇಶ, ಎಂದು ವಚನಕಾರರ ಉಪದೇಶವನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ವಚನಗ್ರಂಥಗಳಲ್ಲಿ ಈ ಎರಡೂ ಬಗೆಯ ಉಪದೇಶವಿರುವದು. ಸಾಂಪ್ರದಾಯಿಕ ಉಪದೇಶವು ವೀರಶೈವ ದೀಕ್ಷೆಪಡೆದವರನ್ನಷ್ಟೆ ಉದ್ದೇಶಿಸಿರುವದು, ಸಾಮಾನ್ಯ ಉಪದೇಶವು ಇಡೀ ಮಾನವಕುಲವನ್ನು ಸಂಬಂಧಿಸಿರುವದು. ವಚನಶಾಸ್ತ್ರದಲ್ಲಿಯ ಸಾಮಾನ್ಯ ಧರ್ಮರಹಸ್ಯವನ್ನು ಆವಿಷ್ಕರಿಸಿ ಅದನ್ನು ಇಡೀ ಕನ್ನಡಜನಾಂಗದೆದುರಿಗೆ ಇಡುವುದೆ ಈ ಗ್ರಂಥದ ಮೂಲ ಮತ್ತು ಮುಖ್ಯ ಉದ್ದೇಶವಿರುವುದರಿಂದ ಸಾಂಪ್ರದಾಯಿಕವಲ್ಲದ ಉಪದೇಶವನ್ನಷ್ಟೆ ಈ ಪ್ರಕರಣದಲ್ಲಿ ವಿವೇಚಿಸುವ ವಿಚಾರವಿದೆ. ಯಾವದೇ ಮಾರ್ಗವು ಅಥವಾ ಸಾಧನಪಥವು ಎಷ್ಟೇ ಸಾಂಪ್ರದಾಯಿಕವಿದ್ದರೂ ಅದು ಹಲವು ಸಾಮಾನ್ಯ ತತ್ವಗಳ ಆಧಾರದಿಂದಲೆ ನಿಂತಿರುತ್ತದೆ. ತತ್ವಭೇದಕ್ಕಿಂತ ಆಚಾರಭೇದವೆ ಭಿನ್ನ ಸಾಂಪ್ರದಾಯಗಳ ಅಸ್ತಿತ್ವಕ್ಕೆ ಕಾರಣವಾಗುತ್ತದೆ. ಮತ್ತು ಆಚಾರಭೇದಗಳು ಯಾವಾಗಲೂ ದೇಶಕಾಲ ಪರಿಸ್ಥಿತಿಯನ್ನು ಅವಲಂಬಿಸಿರುತ್ತವೆ. ಒಮ್ಮೆ ಯಾವದೊಂದು ಸಂಪ್ರದಾಯವು ಅಸ್ತಿತ್ವದಲ್ಲಿ ಬಂದಿತೆಂದರೆ ಸಾಂಪ್ರದಾಯಿಕ ಅಭಿಮಾನವು ಮತ್ತು ಇತರರಿಂದ ಭಿನ್ನವಿರುವ ಆಚಾರಗಳು ಅದನ್ನು ಉಳಿದವುಗಳಿಂದ ಪ್ರತ್ಯೇಕ ಮಾಡಲಿಕ್ಕೆ ಮತ್ತು ಇಡಲಿಕ್ಕೆ ಕಾರಣವಾಗುತ್ತವೆ. ಇದೇ ಮಾತು ವೀರಶೈವ ಸಾಂಪ್ರ

ದಾಯವನ್ನು ಅನ್ವಯಿಸುತ್ತದೆ. ಆದುದರಿಂದ ವೀರಶೈವಾಚಾರಗಳು ಭಿನ್ನ ಕಂಡರೂ ಅವುಗಳಿಗೆ ಆಧಾರವಾದ ತತ್ವಗಳು ಎಲ್ಲಾ ಪಂಥಗಳ ಆಚಾರಕ್ಕೆ ಮೂಲವಾದ ತತ್ವಗಳೊಡನೆ ಹೇಗೆ ಹೋಲುತ್ತವೆ ಎಂಬದು ಷಟ್‌ಸ್ಥಲಶಾಸ್ತ್ರವೆಂಬ ಪ್ರಕರಣವನ್ನು ಓದಿದರೆ ತಿಳಿಯಬಹದು. ಸದ್ಯಕ್ಕೆ ಇಲ್ಲಿ, ಜನಸಾಮಾನ್ಯರಿಗೆ ವಚನಶಾಸ್ತ್ರದ ಉಪದೇಶವೇನಿರುವದು, ಎಂಬು ದನ್ನಷ್ಟೆ ನೋಡತಕ್ಕದ್ದಿದೆ.

೪೬. ಸಾಂಪ್ರದಾಯವೆಂಬುದು ಯಾವದೇ ಧರ್ಮತತ್ವಗಳ ಬಾಹ್ಯ ಸ್ವರೂಪವು ಅಥವಾ ದೇಹವು ಮತ್ತು ತತ್ವಗಳೆಂಬುದು ಆಯಾ ಸಾಂಪ್ರ ದಾಯದ ಹೃದಯವು ಅಥವಾ ಪ್ರಾಣವು. ಆಯಾ ಧರ್ಮಗಳ ಅಥವಾ ಪಂಥಗಳ ಸಾಂಪ್ರದಾಯಿಕಸ್ವರೂಪವು ಎಷ್ಟೋ ಮಟ್ಟಿಗೆ ಆಯಾ ಧರ್ಮ ಗಳು ಪ್ರಜಲಿತವಿದ್ದ ದೇಶಕಾಲ ಪರಿಸ್ಥಿತಿಯ ಮೂಲಕ ಆ ಪ್ರಕಾರದ್ದು ಆಗಿರುತ್ತದೆ. ಉದಾಹರಣಾರ್ಥವಾಗಿ, ಭಕ್ತಿ ಎಂಬ ಭಾವವು ಅಲ್ಲಿಗಿಲ್ಲಿಗೆ ಇಡೀ ಮಾನವವರ್ಗಕ್ಕೆ ಒಂದೇ ಬಗೆಯದ್ದಿರುವದು. ಆದರೆ ಅದು ಬೇರೆ ಬೇರೆ ಸಾಂಪ್ರದಾಯಗಳಲ್ಲಿ ಬೇರೆ ಬೇರೆ ಸ್ವರೂಪವನ್ನು ತಾಳಿ ವಿವಿಧ ಭಜನೆ, ವಿಧವಿಧದ ಕೀರ್ತನೆ, ನಾನಾಜಪ, ಬಗೆಬಗೆಯ ಪ್ರಾರ್ಥನೆ, ಹೀಗೆ ಅಸಂಖ್ಯ ರೀತಿಯಿಂದ ಪ್ರಜಲಿತವಾಗಿದೆ. ಹೀಗಾಗುವ ಕಾರಣವೆಂದರೆ, ಆಯಾ ಧರ್ಮಗಳು ಯಾವ ದೇಶಕಾಲಪರಿಸ್ಥಿತಿಯಲ್ಲಿ ಪ್ರಜಲಿತವಾದವೊ ಅವುಗಳ ವಿವಿಧತೆ ಮತ್ತು ವಿಶಿಷ್ಟತೆ. ಇಷ್ಟೇ ಏಕೆ? ಒಂದೇ ಧರ್ಮದ ಸ್ವರೂಪವು ಕೂಡ ದೇಶಕಾಲಪರಿಸ್ಥಿತಿಯಂತೆ ಬದಲಾಗುತ್ತದೆ. ಹಿಂದೂ ಧರ್ಮವು ಆಸೇತುಹಿಮಾಚಲ ಒಂದೇ ಇದ್ದರೂ ವೇದೋಪನಿಷತ್ತು, ಮನುಧರ್ಮಶಾಸ್ತ್ರ, ಎಂಬ ಮುಂತಾದ ಗ್ರಂಥಗಳನ್ನೆ ತನ್ನ ಪ್ರಮಾಣ ಗ್ರಂಥಗಳೆಂದು ಅದು ತಿಳಿಯುತ್ತಿದ್ದರೂ ಹಿಂದುಸ್ಥಾನದಲ್ಲಿಯ ಬೇರೆ ಬೇರೆ ಪ್ರಾಂತಗಳಲ್ಲಿಯ ಹಿಂದೂ ಧರ್ಮದ ಸಾಂಪ್ರದಾಯಗಳು ಬೇರೆ ಬೇರೆ ಇರುವುದು ಕಂಡುಬರುವದು. ಹೀಗಿರುವುದರಿಂದ ಧರ್ಮಗಳ ಮತ್ತು ಧರ್ಮಪಂಥಗಳ ತಾತ್ವಿಕ ವಿಚಾರಮಾಡುವವರು ಯಾವಾಗಲೂ ಸಾಂಪ್ರ ದಾಯವೆಂಬ ಮೇಲಣ ಸ್ವರೂಪವನ್ನು ನೋಡಿ ತಮ್ಮ ಅನುಮಾನಗಳನ್ನು ಕಟ್ಟದೆ ಆ ಹೊದಿಕೆಯ ಕೆಳಗೆ ಇರುವ ತತ್ವಗಳನ್ನು ಅರಿತುಕೊಂಡು ಅವುಗಳ ವಿಮರ್ಶಿಮಾಡತಕ್ಕದ್ದು. ಹೀಗೆ ಮಾಡುವದು ಅವಶ್ಯವೂ ಇರು ವದು. ಯಾಕಂದರೆ, ಹೀಗೆ ಮಾಡದೆ ಹೋದರೆ ಕೇವಲ ತೋರಿಕೆಯ ಭಿನ್ನತೆಯು ಮೂಲಕ ನಮ್ಮ ಕಲ್ಪನೆಗಳು ತಪ್ಪಿ, ಇಲ್ಲದಸಲ್ಲದ ಪೂರ್ವಗ್ರಹ

ಗಳು ಉಂಟಾಗಿ, ಅಸಹ್ಯತೆ ಮುಂತಾದವುಗಳು ನೆಲೆಗೊಂಡು ಅನರ್ಥ ಗಳಿಗೆ ಕಾರಣವಾಗುವವು. ಬಾಹ್ಯಭಿನ್ನತೆಗಳಿದ್ದರೂ ಅವೆಲ್ಲವುಗಳಲ್ಲಿರುವ ಏಕಸೂತ್ರವು ಯಾವುದು ಎಂಬುದನ್ನು ಗೊತ್ತುಹಚ್ಚಿ ಅದನ್ನು ಎಲ್ಲರಿಗೂ ತಿಳಿಸುವುದರಿಂದ ಬೇರೆ ಬೇರೆ ಸಾಂಪ್ರದಾಯಗಳ ಜನರಲ್ಲಿರುವ ಅಥವಾ ಉಂಟಾಗಬಹುದಾದ, ತಾವು ಮೇಲು ಅನ್ಯರು ಕೀಳು ಎಂಬ ಕಲ್ಪನೆ, ಮತ್ಸರ, ದ್ವೇಷ, ಅಸೂಯೆ ಮುಂತಾದ ಭಾವಗಳು ಅಳಿದು ಪರಸ್ಪರ ಪ್ರೀತಿ, ಆದರ, ಸಹಿಷ್ಣುತೆ ಇವು ಹುಟ್ಟಿ ಸುಸೂತ್ರವಾದ ಸಾಂಘಿಕ ಮತ್ತು ಸಾಮಾಜಿಕಜೀವನಕ್ಕೆ ಹಾದಿಯಾಗುವದು ಹಾಗೂ ಎಲ್ಲರೂ ಪ್ರಗತಿಹೊಂದಲಿಕ್ಕೆ ಅನುಕೂಲವಾಗುವದು. ವೀರಶೈವಸಾಂಪ್ರದಾಯದ ಸಾಧುಗಳು ಬರೆದ ವಚನಶಾಸ್ತ್ರದ ಸಾಂಪ್ರದಾಯಿಕಭಾಗದ ಕಡೆಗೆ ಸಹ ಇದೇ ವಿಶಾಲ ಮತ್ತು ಉದಾತ್ತ ದೃಷ್ಟಿಯಿಂದ ನೋಡುವದು ಅವಶ್ಯವು. ಹೀಗೆ ಮಾಡಿದರೆ ಮಾತ್ರ ನಮ್ಮ ಗುಣಗ್ರಾಹಕಶಕ್ತಿಯು ಹೆಚ್ಚಿ ನಮಗೆ ಈ ಶಾಸ್ತ್ರದ ಅಭ್ಯಾಸದಿಂದ ಒಳ್ಳೇ ಲಾಭವಾಗುವದು. ಈ ತೆರದ ಅಭ್ಯಾಸ ಮಾಡಲಿಕ್ಕೆ ಜನ್ಮಾಗಿ ಅನುಕೂಲವಾಗಬೇಕೆಂದು ಸದ್ಯಕ್ಕೆ ಉಪಲಬ್ಧವಿದ್ದ ವಚನಗಳನ್ನೆಲ್ಲ ಪರಿಶೀಲಿಸಿ ಈ ಗ್ರಂಥದ ಮೊದಲನೆಯ ಭಾಗವಾದ ವಚನಾಮೃತದಲ್ಲಿ ಈ ಶಾಸ್ತ್ರದ ಸಾರವನ್ನು ತೆಗೆಯಲು ಈ ಲೇಖಕನು ಪ್ರಯತ್ನಮಾಡಿದ್ದಾನೆ.

೪೭. ಅಂದಬಳಿಕ, ವಚನಶಾಸ್ತ್ರದ ತತ್ತ್ವೋಪದೇಶವನ್ನು ಒತ್ತ ಟ್ಟಿಗೆ ಕಲೆಹಾಕುವುದೆ ಆ ವಚನಾಮೃತದ ಮುಖ್ಯ ಉದ್ದೇಶವು. ಆ ಉಪದೇಶವು ಎಲ್ಲರಿಗೂ ಸಹಜವಾಗಿ ತಿಳಿಯಬೇಕಾಗಿದ್ದರೆ ಸಾಂಪ್ರ ದಾಯಿಕ ಪರಿಭಾಷೆಯು ಆ ವಚನಾಮೃತಲ್ಲಿ ಆದಷ್ಟು ಇಲ್ಲದಿರುವುದೆ ಉಚಿತವು. ಆ ಸಂಗ್ರಹಕ್ಕಾಗಿ ವಚನಗಳನ್ನು ಆರಿಸುವಾಗ ಮುಖ್ಯವಾಗಿ ಆ ದೃಷ್ಟಿಯು ಇಡಲ್ಪಟ್ಟಿದೆ. ಸಾಂಪ್ರದಾಯಿಕವೆಂದೆನಿಸುವ ವಚನಗಳನ್ನು ಅದರಲ್ಲಿ ಆದಷ್ಟು ಮಟ್ಟಿಗೆ ಹಾಕಿಲ್ಲ. ಎರಡನೆಯ ಸಂಗತಿಯೇನಂದರೆ, ಶೈವಾಗಮಗಳಲ್ಲಿ ಉಕ್ತವಾದ ಮತ್ತು ವೀರಶೈವರು ಅನುಸರಿಸುವ ಷಟ್‌ಸ್ಥಲಗಳಿಗನುಗುಣವಾಗಿ ವಚನಗಳನ್ನು ಕ್ರಮಪಡಿಸದೆ ಇಲ್ಲಿ ಇಡೀ ಹಿಂದೀ ಜನಾಂಗಕ್ಕೆ ಸಾಮಾನ್ಯವಾದ ವೇದಾಂತದ ವಿಚಾರಕ್ರಮದಂತೆ ಅವು ಕ್ರೋಡೀಕರಿಸಲ್ಪಟ್ಟಿವೆ. ಹೀಗೆ ಮಾಡುವುದರಿಂದ ಷಟ್‌ಸ್ಥಲಗಳ ಪರಿಭಾಷೆಯು ಗೊತ್ತಿಲ್ಲದವರಿಗೂ ಮಹತ್ವದ ವಚನಗಳ ಮತ್ತು ಅವುಗಳ ಮುಖ್ಯ ಉಪದೇಶದ ಪರಿಚಯವಾಗಲಿಕ್ಕೆ ಅನುವು ದೊರೆಯುವುದು. ಈ

ವಚನಗಳನ್ನು ಆರಿಸುವಾಗ ಲಕ್ಷಿಸಿದ ಮೂರನೆಯ ಸಂಗತಿಯೇನಂದರೆ, ಆಯಾ ವಚನಗಳನ್ನು ಯಾರು ರಚಿಸಿದರು ಮತ್ತು ಯಾವ ಕಾಲಕ್ಕೆ ರಚಿಸಿದರು ಇದರ ಕಡೆಗೆ ವಿಶೇಷ ನೋಡದೆ ಅವು ತತ್ವಪ್ರತಿಪಾದನೆಯನ್ನು ಜನ್ನಾಗಿ ಮಾಡಿರುವವೊ ಇಲ್ಲವೊ ಎಂಬುದೆ ಮುಖ್ಯವಾಗಿ ವಿಚಾರಿಸಲ್ಪಟ್ಟಿದೆ. ಹೀಗೆ ಮಾಡುವುದರಿಂದ ಬರಿಯ ವಚನಕಾರನ ಕೀರ್ತಿಯ ಕಡೆಗೆ ಲಕ್ಷವು ಎಳೆಸದೆ ಕಣ್ಣುಮುಂದಿದ್ದ ವಚನದ ಸಾಮರ್ಥ್ಯದ ಕಡೆಗೆ ಮತ್ತು ಅದರ ಮಹತ್ವದಕಡೆಗೆಯೆ ಲಕ್ಷವನ್ನು ಪೂರೈಸಲಿಕ್ಕೆ ಆಸ್ಪದವು ದೊರೆತಿದೆ. ಈ ಆಯ್ಕೆಯಲ್ಲಿ ನಾಲ್ಕನೆಯ ಮಹತ್ವದ ಮಾತೇನೆಂದರೆ, ಯಾವ ವಚನಗಳಲ್ಲಿ ಸತ್ಯದ ಪ್ರಕಟನೆ ಮತ್ತು ಸ್ಫೂರ್ತಿ ಇವು ಕಂಡು ಬರುವವೊ ಅಂಥ ವಚನಗಳೆ ಈ ವಚನಾಮೃತದಲ್ಲಿ ಕಾಲಿಡಲು ಯೋಗ್ಯವೆಂದು ತಿಳಿಯಲ್ಪಟ್ಟಿವೆ. ಇದರಿಂದ ಈ ಸಂಗ್ರಹದಲ್ಲಿ ಅತ್ಯುತ್ತಮ ವಚನಗಳು ಸಮಾವಿಷ್ಟವಾಗಲಿಕ್ಕೆ ಅನುವಾಗಿದೆ. ಇನ್ನು ಯಾವದೊಂದು ವಚನವು ಸತ್ಯವನ್ನು ಸುರುವುದೊ ಇಲ್ಲವೊ ಎಂಬುದನ್ನು ಹೇಳುವದು ಸುಲಭವಿದ್ದರೂ ಅದರಲ್ಲಿ ಸ್ಫುರಣವಿರುವುದೊ ಇಲ್ಲವೊ ಎಂಬುದನ್ನರಿಯುವುದು ಕಠಿಣ. ಆ ಸ್ಫೂರ್ತಿಯನ್ನು ಇದೇ ಬಗೆಯಿಂದ ಅರಿಯಬೇಕೆಂದು ಹೇಳುವದು ಅಷ್ಟೇ ದುರ್ಘಟ. ಯಾವದೊಂದು ಕಾವ್ಯವು ಸ್ಫೂರ್ತಿಯಿಂದ ಬರೆದದ್ದು, ಎಂದು ನಾವು ಯಾವ ಲಕ್ಷಣಗಳಿಂದ ಗೊತ್ತುಹಿಡಿಯುವೆವೊ ಅವೇ ಲಕ್ಷಣಗಳಿಂದ ಯಾವದೊಂದು ವಚನವು ಸ್ಫೂರ್ತವು, ಎಂದು ಕಂಡುಹಿಡಿಯತಕ್ಕದ್ದು, ಇಷ್ಟೇ ಇಲ್ಲಿ ಹೇಳಬಹುದು. ವಚನಾಮೃತವನ್ನು ಸಂಗ್ರಹಿಸುವಾಗ ಅನುಲಕ್ಷಿಸಿದ ಐದನೆಯ ವಿಷಯವೇನಂದರೆ, ಆರಿಸಿದ ವಚನಗಳ ಸಂಕ್ಷೇಪಶಕ್ತಿ, ಸಹಜತೆ, ಸ್ಫುಟತೆ, ಸುಬೋಧತೆ, ಮತ್ತು ಸೌಂದರ್ಯ ಇವುಗಳನ್ನು ಜನ್ನಾಗಿ ನೋಡಿದ ಬಳಿಕ ಅವುಗಳನ್ನು ಆರಿಸಿದ್ದೇವೆ. ಸಂಕ್ಷೇಪಶಕ್ತಿಯೆಂದರೆ ಬಹಳ ಅರ್ಥವನ್ನು ಸ್ವಲ್ಪ ಶಬ್ದಗಳಲ್ಲಿ ಸ್ಪಷ್ಟವಾಗಿ ವ್ಯಕ್ತಗೊಳಿಸುವ ಸಾಮರ್ಥ್ಯವು. ಇದನ್ನು ಲಕ್ಷಿಸಿದ್ದರಿಂದ ಇದರಲ್ಲಿ ವಿಶೇಷ ದೊಡ್ಡ ಮತ್ತು ವಾಙ್ಮಯ ವಚನಗಳು ಬಂದಿಲ್ಲ. ಸಹಜತೆ ಅಂದರೆ ಕೃತ್ರಿಮವಿಲ್ಲದಿರುವಿಕೆ. ಸ್ವಾಭಾವಿಕ ಭಾಷೆಯೆ ಸಹಜ ಭಾಷೆಯು. ಸಹಜತೆಯ ಕಡೆಗೆ ಲಕ್ಷಗೊಟ್ಟಿದ್ದರಿಂದ ಕೃತ್ರಿಮ ಅಲಂಕಾರಾತಿಶಯ ಮುಂತಾದ್ದರಿಂದ ತುಂಬಿದ ವಚನಗಳಿಗೆ ಇಲ್ಲಿ ಸ್ಥಲ ದೊರೆತಿಲ್ಲ. ಒಡೆದು ನುಡಿಯುವುದೆ ಸ್ಫುಟಭಾಷಣವೆನಿಸುವದು. ಇದನ್ನು ಅನುಲಕ್ಷಿಸಿದ್ದರಿಂದ ಮುಂದಿಗೆ ಗಳಂಥ ಅವಾಸ್ತವ ಗೂಢವಾದ ವಚನಗಳು ಇದರಲ್ಲಿ ಆದಷ್ಟು ಸೇರಿಸಲ್ಪ

ಟ್ಟಿಲ್ಲ. ಸುಬೋಧ ಅಂದರೆ ಸಹಜ ತಿಳಿಯುವಂಥವು. ಇಂಥವುಗಳನ್ನು ಆರಿಸಿದ್ದರಿಂದ ವಚನಗಳು ಎಲ್ಲರಿಗೂ ತಿಳಿದುಕೊಳ್ಳಲು ಸುಲಭಸಾಧ್ಯವಾಗಿರುವವು. ಸೌಂದರ್ಯ ಅಂದರೆ ಸಾಹಿತ್ಯದೃಷ್ಟಿಯಿಂದ ತಾಲ, ಪ್ರಾಸ, ಪ್ರಮಾಣ, ರಸ, ಪ್ರಸಾದ, ಅಲಂಕಾರ, ಸವಿ, ಸೊಬಗು ಮುಂತಾದ ಗುಣಗಳಿಂದ ಕೂಡಿದ್ದು. ಸೌಂದರ್ಯದ ಕಡೆಗೂ ಲಕ್ಷಗೊಟ್ಟಿದ್ದರಿಂದ ಆದಷ್ಟು ಮನೋರಮ ವಚನಗಳು ಈ ಸಂಗ್ರಹದಲ್ಲಿ ಬಂದಿವೆ. ಮೇಲೆ ಹೇಳಿದ ಎಲ್ಲ ಗುಣಗಳು ಎಲ್ಲ ವಚನಗಳಲ್ಲಿ ಸರಿಯಾಗಿ ಅಷ್ಟೇ ಪ್ರಮಾಣದಿಂದ ಇರುವವು, ಎಂದು ಮಾತ್ರ ಹೇಳಲಿಕ್ಕಾಗದು. ಆದರೆ ವಚನಗಳನ್ನು ಆರಿಸುವಾಗ ಈ ಮುಂತಾದ ಗುಣಗಳ ಕಡೆಗೆ ಆಯ್ಕೆಗಾರನ ಲಕ್ಷವಿತ್ತು, ಎಂದು ತಿಳಿಯಬೇಕು. ವಚನಶಾಸ್ತ್ರದಲ್ಲಿರುವ ಎಲ್ಲ ತತ್ವವಿಚಾರವೂ ಉಪದೇಶವೂ ಇದರಲ್ಲಿ ಬರಬೇಕು ಎಂಬ ಮುಖ್ಯ ಉದ್ದೇಶವನ್ನು ಕಣ್ಣೆದುರಿಗಿಟ್ಟುಕೊಂಡು ಮೇಲೆ ಕಾಣಿಸಿದ ಐದು ಸಂಗತಿಗಳನ್ನೂ ಲಕ್ಷಿಸಿ ವಚನಾಮೃತವು ಸಿದ್ಧಗೊಳಿಸಲ್ಪಟ್ಟಿದೆ.

೪೪. ಈ ಉದ್ದೇಶದಿಂದ ಸಂಗ್ರಹಿಸಿದ ವಚನಾಮೃತವನ್ನು ಪರಿಶೀಲಿಸಿದರೆ ವಚನಶಾಸ್ತ್ರದ ಉಪದೇಶಸರ್ವಸ್ವವು ವಾಚಕರಿಗೆ ತಿಳಿಯುವದೆಂಬಲ್ಲಿ ಸಂಶಯವಿಲ್ಲ. ಅಥವಾ ಈ ವಚನಾಮೃತವು ವಚನರೂಪದಲ್ಲಿಯೆ, ವಚನಕಾರರ ಸ್ವಂತ ಶಬ್ದಗಳಲ್ಲಿಯೆ, ವಚನಶಾಸ್ತ್ರದ ಪ್ರತ್ಯಕ್ಷ ಇಡೀ ಉಪದೇಶವಿರುವದೆಂದರೂ ಸಲ್ಲುವದು. ಈ ಉಪದೇಶವನ್ನು ವಿವರವಾಗಿ ತಿಳಿದುಕೊಳ್ಳುವದು ಅವಶ್ಯವು. ಹಾಗೆ ಮಾಡಬೇಕಾದರೆ ಈ ವಚನಾಮೃತವನ್ನು ಪೃಥಕರಿಸಿ ಅದರಲ್ಲಿರುವ ಪ್ರಕರಣಗಳು, ಅವುಗಳ ವಿಷಯ, ಅವುಗಳ ಕ್ರಮ, ಮುಂತಾದವುಗಳನ್ನು ನೋಡಿ, ಅವುಗಳ ಸಾರಾಂಶವೇನು ಇದನ್ನು ಅರಿತುಕೊಳ್ಳಲಿಕ್ಕೆ ಬೇಕು. ಅಂದರೆ ವಚನಗಳ ಬೋಧವು ಸಂಕ್ಷೇಪದಲ್ಲಿ ಗೊತ್ತಾಗುವದು. ಈ ಆಯ್ಕೆಯಲ್ಲಿ ಒಟ್ಟು ಇಪ್ಪತ್ತು ಪ್ರಕರಣಗಳು ಇರುವವು. ಆಯಾ ಪ್ರಕರಣಗಳಲ್ಲಿಯ ವಿಷಯವನ್ನು, ಅವುಗಳ ಹೆಸರುಗಳು ಸಂಕ್ಷೇಪದಿಂದಾದರೂ ಸ್ಪಷ್ಟವಾಗಿ ತೋರುವವು. ವಚನಾಮೃತದ ಆಯ್ಕೆಯೆಂದರೆ ವಚನಸಾರಾಂಶವನ್ನು ವಚನಗಳ ರೂಪದಿಂದಲೆ ಕೊಡುವ ಪ್ರಯತ್ನವು ಎಂದು ಹೇಳಬಹುದು.

೪೫. ಇನ್ನು ವಚನಾಮೃತದಲ್ಲಿ ಪ್ರತ್ಯೇಕ ಪ್ರಕರಣದ ಆರಂಭದಲ್ಲಿ ಕೊಡಲ್ಪಟ್ಟ ಆಯಾ ಪ್ರಕರಣದ ಮುಖ್ಯಾಂಶವನ್ನು ಮತ್ತು ಅಲ್ಲಲ್ಲಿ ಬಂದ ವಿವರಣೆಯನ್ನು ಓದಿದರೆ ಆ ಪ್ರಕರಣದ ಮಥಿತಾರ್ಥವು ತಕ್ಕಮಟ್ಟಿಗೆ

ಜನ್ಮಾಗಿ ಹೊಳೆಯಬಹುದು. ವಚನಾಮೃತದಲ್ಲಿ ಯಾವ ಕ್ರಮದಿಂದ ವಿಷಯಗಳು ಇಡಲ್ಪಟ್ಟಿವೆಯೊ ಅದೇ ಕ್ರಮದಿಂದ ಈಗ ಇಲ್ಲಿ ಅವುಗಳನ್ನು ವಿಚಾರಿಸುವದು ಯೋಗ್ಯವೂ ಸುಲಭವೂ ಆಗುವದು. ವಚನಶಾಸ್ತ್ರವು ವಚನರೂಪದಿಂದ ಹೇಳಲ್ಪಟ್ಟ ಅಧ್ಯಾತ್ಮಶಾಸ್ತ್ರವಿರುವದು, ಎಂದು ಹೋದ ಪ್ರಕರಣದಲ್ಲಿ ಒಮ್ಮೆ ಹೇಳಲ್ಪಟ್ಟಿದೆ. ಅಧ್ಯಾತ್ಮಶಾಸ್ತ್ರವೆಂದರೆ ಆತ್ಮವನ್ನು ಅಥವಾ ವಿಶ್ವದಲ್ಲಿಯ ಮೂಲವಸ್ತುವನ್ನು ಅಥವಾ ಮೂಲ ತತ್ವವನ್ನು ಸಂಬಂಧಿಸಿದ ಶಾಸ್ತ್ರವು. ಅರ್ಥಾತ್, ಈ ವಿಶ್ವದಲ್ಲಿ ಆತ್ಯಂತಿಕ ಮೂಲತತ್ವವು ಯಾವುದು, ಅದರ ಯಥಾರ್ಥಸ್ವರೂಪವೇನು, ನಮ್ಮೆಲ್ಲರಿಗೂ ಗೋಚರವಾಗುವ ಮತ್ತು ಕ್ಷಣಶಃ ಬದಲಾಗುವಂತೆ ತೋರುವ ಈ ವಿಶ್ವವು ಯಾಕೆ, ಹೇಗೆ, ಮತ್ತು ಯಾವ ಕ್ರಮದಿಂದ ನಿರ್ಮಾಣವಾಯಿತು, ನಾವು ಅಂದರೆ ನಮ್ಮ ಜೀವಗಳು ಎಲ್ಲಿಂದ ಮತ್ತು ಹೇಗೆ ಅಸ್ತಿತ್ವದಲ್ಲಿ ಬಂದವು, ಇವುಗಳ ಸ್ವರೂಪವೇನು, ಜೀವನ ಧ್ಯೇಯವೇನು, ಆ ಧ್ಯೇಯವನ್ನು ಪ್ರಾಪ್ತಮಾಡಿಕೊಳ್ಳುವಾಗ ಜೀವನಿಗೆ ಬರುವ ತೊಂದರೆಗಳಾವವು ಮತ್ತು ಅವುಗಳ ಸ್ವರೂಪವೇನು, ಜೀವನು ಆ ತೊಂದರೆಗಳನ್ನು ಹೇಗೆ ದಾಟಬೇಕು, ಧ್ಯೇಯಸಿದ್ಧಿಗಾಗಿ ಜೀವನು ಯಾವ ಸಾಧನಗಳನ್ನು ಉಪಯೋಗಿಸತಕ್ಕದ್ದು, ಧ್ಯೇಯವನ್ನು ದೊರಕಿಸಿದ ಸಿದ್ಧನ ನಿಲವು ಹೇಗೆ ಇರುವದು, ಸಾಧಕನ ಗುಣಶೀಲಕರ್ಮಗಳು ಹೇಗೆ ಇರತಕ್ಕದ್ದು, ಸಂಕ್ಷೇಪದಲ್ಲಿ ಹೇಳುವುದಾದರೆ ಜೀವ, ಜಗತ್, ಮತ್ತು ಈಶ್ವರ, ಅಥವಾ ಜ್ಞಾತಾ, ಜ್ಞಾನ, ಮತ್ತು ಜ್ಞೇಯ, ಅಥವಾ ಧ್ಯಾತ್ಯಾ, ಧ್ಯೇಯ, ಮತ್ತು ಧ್ಯಾನ ಈ ತ್ರಿಪುಟಿಯ ಪರಸ್ಪರ ಸಂಬಂಧವೇನು, ಈ ಮುಂತಾದ ಮಾತುಗಳ ವ್ಯವಸ್ಥಿತ ವಿಚಾರವೆ ಅಧ್ಯಾತ್ಮಶಾಸ್ತ್ರವೆನಿಸುವದು. ಈ ಎಲ್ಲ ವಿಚಾರಗಳು ವಚನಾಮೃತದಲ್ಲಿ ಬಂದಿವೆ ಮತ್ತು ಅವು ಪರಿವಿಡಿಯಿಂದ ಜನ್ಮಾಗಿ ಹಚ್ಚಲ್ಪಟ್ಟಿವೆ, ಆದರೆ ಅಲ್ಲಿ ಅವು ವಚನರೂಪದಲ್ಲಿ ಅಥವಾ ವಚನಪದ್ಧತಿಯಲ್ಲಿ ಇರುವವು. ಅವುಗಳನ್ನೆ ನಾವು ಇಲ್ಲಿ ಸಾಮಾನ್ಯ ಗದ್ಯರೀತಿಯಲ್ಲಿ ಸಂಕ್ಷೇಪದಿಂದ ವ್ಯಕ್ತಮಾಡಿದರೆ ತಿಳಿದುಕೊಳ್ಳಲಿಕ್ಕೂ ಹೆಚ್ಚು ನೆಟ್ಟಗಾಗುವದು. ಈ ದೃಷ್ಟಿಯಿಂದ ನೋಡಿದರೆ ವಚನಾಮೃತದಲ್ಲಿ ಬಂದ ಎಲ್ಲ ವಿಷಯಗಳನ್ನು ಪರಮಾತ್ಮನ ಸ್ವರೂಪ ಅಥವಾ ಆತ್ಯಂತಿಕ ಸತ್ಯದ ಸ್ವರೂಪ, ವಿಶ್ವನಿರ್ಮಾಣ, ಜೀವಸ್ವರೂಪ, ಮುಕ್ತಿ ಎಂಬ ಧ್ಯೇಯ, ಮುಕ್ತಿಯ ಸಾಧನಮಾರ್ಗ, ಸಾಧಕನ ನಿಲುಕಡೆ ಈ ರೀತಿ ವಿಂಗಡಿಸಿ, ಇವುಗಳನ್ನು ಕುರಿತು ವಚನಶಾಸ್ತ್ರದ ಅಂಬೋಣವೇನಿರುವದು ಇದನ್ನು

ನೋಡಿದರೆ ಸಾಕು. ಹೀಗೆ ನೋಡುವಾಗ, ಇಲ್ಲಿ ನಾವು ವಚನಗಳಲ್ಲಿ ಸ್ಪಷ್ಟವಾಗಿ ಉಕ್ತವಾದ ಸಂಗತಿಗಳನ್ನೆ ಪ್ರಮಾಣವೆಂದು ಹಿಡಿಯತಕ್ಕದ್ದು. ಈ ಕೆಳಗೆ ನಾವು ಒಂದು ಬೇರೆ ವಿವೇಚನಾಪದ್ಧತಿಯನ್ನು ಮತ್ತು ಕ್ರಮವನ್ನು ಸ್ವೀಕರಿಸಿದ್ದರೂ ಇಲ್ಲಿ ಹೇಳಿದ ವಿಚಾರಗಳು ಮತ್ತು ಸಿದ್ಧಾಂತಗಳು ಮಾತ್ರ ವಚನಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಟ್ಟವುಗಳೇ ಇರುವವು ಎಂಬುದನ್ನು ವಾಚಕರು ಲಕ್ಷದಲ್ಲಿಡಬೇಕು.

೫೦. ನಮ್ಮ ಕಣ್ಣು, ಕಿವಿ, ಮೂಗು, ನಾಲಿಗೆ, ಮತ್ತು ತ್ವಕ್ಕು ಈ ಪಂಚಜ್ಞಾನೇಂದ್ರಿಯಗಳಿಗೆ ಗೋಚರವಾಗುವ ಹಾಗೂ ಪ್ರತಿಕ್ಷಣಕ್ಕೆ ಪರಿವರ್ತನ ಹೊಂದುವ ಈ ಸೃಷ್ಟಿಯೊಳಗಿನ ಅಖಿಲ ಪದಾರ್ಥಗಳಾಚೆಗೆ ಎಂದೂ ಬದಲಾಗದ ಏಕರೂಪವಾದ ಸತ್ಯ ನಿತ್ಯವಸ್ತುವೊಂದು ಇರುವದು, ಅದೇ ಪರಾತ್ಪರ ಸತ್ಯವು ಎಂದು ವಚನಕಾರರ ಸಿದ್ಧಾಂತವಿರುವದು. ಆ ವಸ್ತುವು ಶಬ್ದಗಳಿಂದ ಅವರ್ಣನೀಯವು. ಯಾಕಂದರೆ ಅದು ವಾಙ್ಮನಕ್ಕಗೋಚರವು, ನುಡಿಗೆ ನಿಲುಕದ ವಸ್ತು ಅದು. ಆದರೂ ಅದನ್ನು ವರ್ಣಿಸಲೆತ್ನಿಸುವದು ಅವಶ್ಯವಿರುವುದರಿಂದ ವಚನಕಾರರು ಉಪನಿಷತ್ಕಾರರಂತೆ ವಿರೋಧಾಭಾಸಾತ್ಮಕ ಶೈಲಿಯಲ್ಲಿ ಆ ಪರವಸ್ತುವನ್ನು ಬಣ್ಣಿಸಿದ್ದಾರೆ. ಈ ವರ್ಣನೆಯು ಯಥಾರ್ಥವಲ್ಲ, ಅದರೆ ನಿರ್ದೇಶಮಾತ್ರವು, ಎಂದು ತಿಳಿಯತಕ್ಕದ್ದು. ಆ ವಸ್ತುವು, ಕಾರ್ಯ-ಕಾರಣ, ಇಹಪರ, ಆದಿಅನಾದಿ, ಪುಣ್ಯಪಾಪ, ಸುಖದುಃಖ, ಒಳಗುಹೊರಗು, ಮೇಲೆಕೆಳಗೆ, ಎಂಬ ಮುಂತಾದ ದ್ವಂದ್ವಗಳ ಆಚೆಗಿನದು ಇರುವದು. (೧) ಈ ವಿಶ್ವಪ್ರಪಂಚವಾಗುವ ಮುನ್ನ ಅದು ಇದ್ದುದು. ಅದು ಅಖಂಡ, ಅದ್ವಯ, ಸ್ವಯಂಭು, ಸ್ವತಂತ್ರ, ನಿರಾಲಂಬ, ಮತ್ತು ನಾಮರೂಪ ಕ್ರಿಯಾತೀತವು. ಅದು ಒಂದೇ ಒಂದು, ಬಯಲಿನಂತೆ ನಿರ್ಗುಣವಿದ್ದು ಎಲ್ಲೆಲ್ಲಿಯೂ ವ್ಯಾಪ್ತವು. ವೇದಾದಿಗಳು ಸಹ ಆ ವಸ್ತುವನ್ನು ವರ್ಣಿಸಲು ಸಮರ್ಥವಾಗಲಿಲ್ಲ. (೩) ಆ ವಸ್ತುವಿನ ಇರವನ್ನು ಅನುಭವದಿಂದ ತಿಳಿಯ ಬಹುದೆ ಹೊರತು ಅರಿವಿನಿಂದ ಅರಿತು ಅದನ್ನು ಕುರುಹಿಟ್ಟು ಕಾಣುವದು ಅಶಕ್ಯವು. (೧೦) ಈ ಬಗೆಯ ತಿರಹಿಲ್ಲದ ಅತೀತ ಚಿದ್ವಸ್ತುವನ್ನು ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ ಎಂದು ವಚನಕಾರರು ನಿರ್ದೇಶಿಸುವರು. ಸತ್ ಹಾಗೂ ನಿತ್ಯ ಅಂದರೆ ಯಾವಾಗಲೂ ಇರುವಂತಹದು. ಚಿತ್ ಅಂದರೆ ಜ್ಞಾನಸ್ವರೂಪವು. ಆನಂದವೆಂದರೆ ಆನಂದಮಯವು, ಸುಖದುಃಖಾತೀತ ಸತತ ಪ್ರಸನ್ನಭಾವವುಳ್ಳದ್ದು. ಪರಿಪೂರ್ಣವೆಂದರೆ ಅಪ್ರು

ಮೇಯ ಮತ್ತು ಅಸುಪಮವಾದ ಅನಂತಗುಣ ಮತ್ತು ಅನಂತಶಕ್ತಿಸಮೇತ ವಾದದ್ದು. ಈ ಪರಾತ್ಪರ ಸತ್ಯವನ್ನು ವಚನಕಾರರು ಬುದ್ಧಿಯಿಂದ ಗ್ರಹಿಸಿ ಕೇವಲ ನಿರವಯ, ಶೂನ್ಯ, ಅಥವಾ ಬಟ್ಟಬಯಲು, ಎಂದು ಒಂದು ವಸ್ತು ರೂಪವಾಗಿ ಸಂಬೋಧಿಸಿರುವರು. ಅದೇ ಸತ್ಯವನ್ನು ಭಾವದಿಂದ ಅನುಭವಿಸಿ ಅದನ್ನು ಪರಮಾತ್ಮನು ಅಥವಾ ಪರಶಿವನು, ಎಂದು ಪುರುಷ ವಾಚಕವಾಗಿ ಸಂಬೋಧಿಸಿರುವರು. (೭) ಈ ಎರಡು ಬಗೆಯ ವರ್ಣನೆಗಳು ಪರಸ್ಪರ ವಿರೋಧಿಯೂ ಅಲ್ಲ ಅಥವಾ ಒಂದು ಸತ್ಯ ಒಂದು ಮಿಥ್ಯೆ ಯೆಂತಲೂ ಅಲ್ಲ. ಸತ್ಯವನ್ನು ನೋಡುವ ಮತ್ತು ಬಣ್ಣಿಸುವ ಎರಡು ಬಗೆ ಗಳಿವು, ಇಷ್ಟೇ. ಕಣ್ಣಿನಿಂದ ನೋಡಿ, ಮೂಗಿನಿಂದ ಮೂಸಿ, ಒಂದೇ ಹೂವನ್ನು ಹೇಗೆ ವಿವಿಧವಾಗಿ ವರ್ಣಿಸಬಹುದೊ ಹಾಗೆ ಒಂದೇ ಪರವಸ್ತು ವನ್ನು ಬುದ್ಧಿ ಮತ್ತು ಭಾವಗಳಿಂದ ಅರಿತುಕೊಂಡು ವಚನಕಾರರು ವರ್ಣಿ ಸುವರು. ಆ ವರ್ಣನೆಗಳು ಪರಸ್ಪರ ಪೂರಕವಿರುವವೇ ಹೊರತು ಒಂದ ಕ್ಕೊಂದು ಅಸಂಬದ್ಧವಿಲ್ಲ.

೫೧. ಅತ್ಯಂತಿಕಸತ್ಯವಸ್ತುವು ಬಟ್ಟಬಯಲು, ನಿಃಕಲ, ನಿರವಯ, ಶೂನ್ಯವಿರುವದು, ಎಂಬುದು ವಚನಕಾರರಿಗೆ ಅನುಭವದ ಮಾತು. ತುರೀಯಾತೀತಾವಸ್ಥೆಯಲ್ಲಿ ಅಂದರೆ ನಿರ್ವಿಕಲ್ಪಸಮಾಧಿಸ್ಥಿತಿಯು ಸ್ಥಿರ ಮತ್ತು ನಿತ್ಯವಾದಲ್ಲಿ ಈ ಅನುಭವವು ಬರುವದು ಎಂದು ಅನುಭಾವಿಗಳು ಹೇಳುವರು. ಸತ್ ಚಿತ್ ಆನಂದ ನಿತ್ಯಪರಿಪೂರ್ಣ, ಎಂಬ ಗುಣಗಳು ಸವಿಕಲ್ಪಸಮಾಧಿಸ್ಥಿತಿಯಲ್ಲಿ ಗೋಚರವಾಗುವವು. ಯಾಕಂದರೆ, ಸವಿಕಲ್ಪ ಸಮಾಧಿಯಲ್ಲಿಯೆ ಗುಣಗಳು ಗೋಚರವಾಗಬಲ್ಲವು. ಇನ್ನು ಈ ಅಖಂಡ ಅದ್ವಯ, ನಿಃಕಲ ನಿರ್ಗುಣ, ಅನಾದಿ ಅನಂತ, ದ್ವಂದ್ವಾತೀತ ಅದ್ವೈತ, ಏಕವಸ್ತುವಿನಿಂದ ಈ ಸಾದಿಸಾಂತ, ಸಕಲಸಗುಣ, ದ್ವಂದ್ವಪೂರ್ಣವಾದ ಮತ್ತು ಅನೇಕ ವಿವಿಧವಸ್ತುಗಳಿಂದ ಕೂಡಿದ ವಿಶ್ವವು ಹೇಗೆ ನಿರ್ಮಾಣ ವಾಯಿತು, ಎಂಬುದು ವಿಚಾರಣೀಯವು. ವೇದಾಂತಶಾಸ್ತ್ರದಲ್ಲಿ ಇದು ಬಹಳ ಮಹತ್ವದ ಪ್ರಶ್ನೆಯು. ಸೃಷ್ಟಿಯು ಕಾರ್ಯವೆಂದು ತಿಳಿದರೆ ಇದಕ್ಕೆ ಕಾರಣ ಮತ್ತು ಕರ್ತೃ ಇವೆರಡೂ ಅವಶ್ಯ, ಇದು ಕಾರ್ಯವಲ್ಲ ಎಂದು ತಿಳಿದರೆ, ತತ್ವತಃ ಸೃಷ್ಟಿ ಎಂಬುದು ಇಲ್ಲೇ ಇಲ್ಲ; ಇದು ಕೇವಲ ಮೃಗ ಜಲದಂತೆ ಅಥವಾ ವಿವರ್ತದಂತೆ ಬರಿಯ ತೋರಿಕೆಯು ಮಾತ್ರ. ಸೃಷ್ಟಿಯು ಕಾರ್ಯವೆಂದೇ ವಚನಕಾರರ ಮತವು. ಮಹಾಕರ್ತನು ಅಂದರೆ ಪರಶಿವನು ತನ್ನ ಶಕ್ತಿಯ ವಿನೋದಕ್ಕಾಗಿ ಜಗವ ನಿರ್ಮಿಸಿದನು. (೧೩) ಕರ್ತನು

ಕಾರ್ಯಮಾಡಬೇಕಾದರೆ ಯಾವದೊಂದು ಉದ್ದೇಶವು ಅವಶ್ಯವು. ಇನ್ನು ಅಕಾಮನಾದ ಶಿವನಲ್ಲಿ ಯಾವದೊಂದು ಉದ್ದೇಶವೆಲ್ಲಿಂದಬರಬೇಕು? ಆದುದರಿಂದ ವಿನೋದ, ಲೀಲೆ, ಆಟ ಈ ಮೂಲಕವೆ ಅವನು ಸೃಷ್ಟಿಯನ್ನು ರಚಿಸಿದನು ಎಂದು ನಿರ್ಧಾರವು ಮಾಡಲ್ಪಟ್ಟಿದೆ. ಪರಶಿವನು ತನ್ನ ಶಕ್ತಿಯಿಂದ ಈ ವಿಶ್ವವನ್ನು ನಿರ್ಮಿಸಿದನು ಅಂದರೆ ಈ ವಿಶ್ವದೊಳಗಿನ ಜರಾಜರ ಜಡಚೇತನವಸ್ತುಗಳನೆಲ್ಲವನ್ನು ನಿರ್ಮಿಸಿದನು ಎಂದು ಅರ್ಥವು. ಜೀವರಾಶಿಗಳನ್ನೂ ಅವನೇ ನಿರ್ಮಿಸಿದನು (೧೩). ತಾನೊಬ್ಬನೇ ಇರು ತಿರಲು ಈ ವಿವಿಧಸೃಷ್ಟಿಯನ್ನು ಯಾತರಿಂದ ಮತ್ತು ಹೇಗೆ ನಿರ್ಮಿಸಿದನು? ನಿರ್ಗುಣ ಪರಶಿವನ ನೆನಹಿನಿಂದ ಅಥವಾ ಸಂಕಲ್ಪದಿಂದ ಮೊದಲು ಅವನ ಚಿತ್‌ಶಕ್ತಿಯು ತೋರಿತು. ಅದು ಸತ್, ಚಿತ್, ಆನಂದ, ನಿತ್ಯ, ಪರಿ ಪೂರ್ಣವು. ಅದು ನಿಃಕಲ ಶಿವತತ್ವವಾಯಿತು. ಅದು ತನ್ನ ಶಕ್ತಿಯ ಜಲನಮಾತ್ರದಿಂದ ಪ್ರವೃತ್ತಿ, ನಿವೃತ್ತಿ ಅಥವಾ ಶಕ್ತಿ, ಭಕ್ತಿ, ಎಂದು ಎರಡು ತೆರವಾಯಿತು. ಆ ಶಕ್ತಿಯ ಕ್ರಿಯಾಶಕ್ತಿ ಎಂಬ ಅಂಶದಿಂದ ಮಾಯಾಶಕ್ತಿ ಯಾಯಿತು. ಅದರಿಂದ ಪುರುಷ, ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಪಂಚತನ್ಮಾತ್ರಗಳು, ಮತ್ತು ಪಂಚಮಹಾಭೂತಗಳು ಹೀಗೆ ಇಪ್ಪತ್ತ್ಮೈದು ತತ್ವಗಳು ಹುಟ್ಟಿದವು. ಆ ಇಪ್ಪತ್ತ್ಮೈದು ತತ್ವಗಳಿಂದ ಕಾಪಿಲಸಾಂಖ್ಯದ ಪ್ರಕಾರ ಈ ಸೃಷ್ಟಿಯ ವಿಸ್ತಾರವೆಲ್ಲ ಆಯಿತು (೩೧). ಇನ್ನೊಂದೆಡೆಗೆ, ಒಂದೇ ವಸ್ತುವಿನಲ್ಲಿ ಗುಣತ್ರಯಗಳಾದವು, ಅವುಗಳಿಂದ ಆಣವಮಲ, ಮಾಯಾಮಲ, ಕಾರ್ಮಿಕ ಮಲ, ಎಂಬ ಮೂರು ಮಲಗಳಾದವು, ಅಲ್ಲಿಂದ ಮುಂದೆ ಸೃಷ್ಟಿ ಯಾಯಿತು, ಎಂದು ವರ್ಣನೆಯಿರುವದು (೩೧. ಬ). ಆ ವಚನವು ಪ್ರಕೃತಿ ಯಲ್ಲಿ ಆದ ಸತ್ವ ರಜ ತಮ ಎಂಬ ಮೂರು ಗುಣಗಳ ಪ್ರಾದುರ್ಭಾವ ವನ್ನೂ ಮುಂದೆ ಗುಣಕ್ಷೋಭದಿಂದ ಆದ ಸೃಷ್ಟಿಯನ್ನೂ ವರ್ಣಿಸುವದು. ಈ ಪ್ರಕಾರ ಸೃಷ್ಟಿಗೆ ಪರಶಿವನೆಂಬ ಕರ್ತನ ವಿನೋದವೆ ಹೇತುವು, ಅವನ ಸಂಕಲ್ಪವೆ ಕಾರಣವು. ಮಡಿಕೆಗೆ ಮಣ್ಣು ಇದ್ದಂತೆ ಅವನ ಶಕ್ತಿಯೆ ಉಪಾದಾನ ಕಾರಣವು. ಪರಶಿವನು ತನ್ನ ಸ್ವೇಚ್ಛಾವಿಲಾಸದ ನೆನಹಿನಿಂದ ಅನಂತಕೋಟಿ ಬ್ರಹ್ಮಾಂಡಗಳನ್ನು, ಅನಂತಕೋಟಿ ಆತ್ಮರುಗಳನ್ನು ತನ್ನಲ್ಲಿಯೆ ಹುಟ್ಟಿಸಿ, ಆ ಆತ್ಮರುಗಳಿಗೆ ಇಪ್ಪತ್ತ್ಮೈದು ತತ್ವಗಳನ್ನು ಸಂಬಂಧಿಸಿ ದಲ್ಲಿ ಆ ಆತ್ಮರುಗಳು ದೇಹೋಽಹಂ ಎಂದು ತಮ್ಮ ನಿಜಸ್ವರೂಪವನ್ನು ಮರೆತು ಕಾಮುಕಾಲಗಳಿಗೆ ವಶರಾಗಿ ಬಂಧನಕ್ಕೆ ಒಳಗಾಗುವರು (೨೯). ಈ ಸೃಷ್ಟಿಯಲ್ಲಿ ಉತ್ಪನ್ನವಾದ ಜೀವಗಳೆಲ್ಲ ಮಾಯಾಶಕ್ತಿಯ ಮೂಲಕ

ತಮ್ಮ ಆತ್ಮಭಾವವನ್ನು ಮರೆತು ದೇಹಭಾವವನ್ನು ತಾಳಿ ಪುಣ್ಯ ಪಾಪ, ಸುಖದುಃಖ, ಮುಂತಾದ ದ್ವಂದ್ವಗಳಿಗೆ ಬಳಗಾಗಿರುವವು, ವಿಷಯಗಳಿಗೆ ವಶವಾಗಿರುವವು. ಈ ಪ್ರಕಾರ ಈ ಸೃಷ್ಟಿ ಮತ್ತು ಅದರ ರಚನೆಯ ಕ್ರಮವು ಇರುವವು. ಇಲ್ಲಿ, ಪರಶಿವನೆ ಕರ್ತನಿದ್ದರೆ ಅವನಿಗೆ ಈ ಕರ್ಮದ ಬಂಧನವಿಲ್ಲವೊ, ಎಂಬುದೊಂದು ಸಂಶಯವು ಬರುವದು ಸಹಜವು. ಅದಕ್ಕೆ ವಚನಕಾರರು ಹೇಳುವ ಸಮಾಧಾನವೇನಂದರೆ, ಪರಶಿವನು ಏನೂ ಹೊದ್ದನು, ಮಾಡಿಯೂ ಮಾಡದವನಂತೆ ಅವನು ಇರುವನು. ಯಾಕಂದರೆ ಅವನು ನಿಷ್ಕಾಮಿಯು ಮತ್ತು ಅಲಿಪ್ತನು. ಆದುದರಿಂದ ವೈಷಮ್ಯ ನೈರ್ಘೃಣ್ಯಾದಿ ದೋಷಗಳೂ ಅವನಿಗೆ ತಗಲವು.

೫೨. ಪರಶಿವನು ತನ್ನ ಲೀಲಾವಿನೋದದಿಂದ ತನ್ನ ಶಕ್ತಿಯ ಮುಖಾಂತರ ಮಾಡಿದ ವಿಶ್ವದಲ್ಲಿ ಜೀವವೆಂಬುದೊಂದು ಘಟಕವು (೧೩). ಅದೊಂದು ಚೈತನ್ಯಸಾಗರದ ಹನಿಯು, ಚಿತ್ಸೂರ್ಯನ ಕಿರಣವು, ಜ್ವಾಲನ ಘನ ಅಗ್ನಿಯ ಸ್ಫುಲಿಂಗವು. ತತ್ವತಃ ಪರಮಾತ್ಮನು ಈ ವಿಶ್ವದಲ್ಲಿ ಎಲ್ಲೆಲ್ಲಿಯೂ ವ್ಯಾಪ್ತನಿದ್ದರೂ ಜಡಕ್ಕಿಂತ ಜಲದಲ್ಲಿ, ಜಲಕ್ಕಿಂತ ಜೇತನದಲ್ಲಿ, ಜೇತನಕ್ಕಿಂತ ಜೀವದಲ್ಲಿ, ಸಾಮಾನ್ಯ ಜೀವಕ್ಕಿಂತ ಬುದ್ಧಿಯುಕ್ತ ಜೀವಗಳಲ್ಲಿ, ಬರಿಯ ಬುದ್ಧಿಯುಕ್ತ ಜೀವಗಳಿಗಿಂತ ಮನುಷ್ಯಮಾತ್ರನಲ್ಲಿ, ಎಲ್ಲ ಮನುಷ್ಯರಿಗಿಂತ ಸತ್ವಶೀಲಭಕ್ತನಲ್ಲಿ ಅಥವಾ ಜ್ಞಾನಿಯಲ್ಲಿ ಅವನ ಆವಿರ್ಭಾವವು ಹೆಚ್ಚು ಒಡೆದುಕಾಣುವದು. ಆದುದರಿಂದಲೆ ಪರಮಾತ್ಮ ಸ್ವರೂಪವು ಭಕ್ತನಿಗೆ ಇಲ್ಲವೆ ಜ್ಞಾನಿಗೆ ತಿಳಿಯುವದು ಶಕ್ಯವಿದ್ದಂತೆ ಅನ್ಯರಿಗೆ ತಿಳಿಯುವದು ಸಾಧ್ಯವಿಲ್ಲ (೩೫). ಮಿಕ್ಕವರೆಲ್ಲ ಮಾಯಾಮೋಹದಿಂದ ಮುಸುಕಿ, ಅಜ್ಞಾನಕ್ಕೆ ಒಳಗಾಗಿ, ದ್ವಂದ್ವಗಳಲ್ಲಿ ಸಿಕ್ಕು ಕರ್ಮ ಜಕ್ಕದಲ್ಲಿ ಸುತ್ತಾಡುವರು. ಅಹಂಕಾರ, ಅಭಿಮಾನ, ಹೊನ್ನು, ಹೆಣ್ಣು, ಮಣ್ಣುಗಳ ಲೋಭ, ಕಾಮಕ್ರೋಧಾದಿ ಅರಿಷಡ್ವರ್ಗ ಇವೇ ಮಾಯೆಯ ವಿವಿಧರೂಪಗಳು (೧೪). ಇವುಗಳ ಮೂಲಕವೆ ಮನುಷ್ಯನು ಕರ್ಮ ಬಂಧನಕ್ಕೆ ಗುರಿಯಾಗುವನು. ಇದೇ ಅವಿದ್ಯೆಯು, ಅಜ್ಞಾನವು ಅಥವಾ ನಿಗೂಹನಶಕ್ತಿಯು. ತಾನು ಈ ದೇಹದಿಂದ ಮರ್ಯಾದಿತನು, ಏವಂಗುಣ ವಿಶಿಷ್ಟನು, ಇಂತಹ ಕುಲಶೀಲವುಳ್ಳವನು, ಎಂಬ ಮುಂತಾದ ಉಪಾಧಿಗಳಿಗೆ ಮನುಷ್ಯನಲ್ಲಿರುವ ಚೈತನ್ಯವು ಸಿಲುಕುವದಾದರೂ ಈ ಅಜ್ಞಾನದ ಮೂಲಕವೆ (೫೯). ತಿಳಿದುನೋಡಲಾಗಿ, ಈ ದೇಹವು ಪಾಂಚಭೌತಿಕ, ಧನವು ಕುಬೇರನದು, ಮನವು ವಾಯುಕೂಡಿದ್ದು, ಕರ್ಮಮಾಡುವ

ಶಕ್ತಿಯು ಆದಿಶಕ್ತಿಯಿಂದ ಬಂದದ್ದು, ಜ್ಞಾನವು ಚಿದ್ಘನದಿಂದ ದೊರೆತದ್ದು (೫೪). ಆದರೆ ಇವೆಲ್ಲವುಗಳಿಗೆ ಜೀವನು ನಾನು, ನನ್ನದು ಎಂದು ಬಡಕೊಳ್ಳುವನು. ಈ ಅಜ್ಞಾನದ ಆವರಣವು ಮಾಯವಾಗುವ ವರೆಗೆ ಜೀವನು ಆತ್ಮಸ್ವರೂಪವನ್ನು ಅರಿಯನು. ಈ ರೀತಿ ಬದ್ಧ ಆತ್ಮನೆ ಜೀವನೆನಿಸುವನು. ಪರಮಾತ್ಮನಿಂದ ಅಧೋಮುಖಿಯಾದ ಅರ್ಥಾತ್ ಅವನಿಂದ ಪರಾಙ್ಮುಖವಾದ ಚೈತನ್ಯವಿಶಿಷ್ಟವೆ ಜೀವನು. ವಿಷಯೋನ್ಮುಖ ಜೀವನೆ ಬದ್ಧನೆನಿಸುವನು. ಅವನು ವಿಷಯಗಳತ್ತ ಸುಳಿಯದೆ, ಇಂದ್ರಿಯಗಳಿಗೆ ವಶನಾಗದೆ, ಅಂತರ್ಮುಖನಾಗಿ ತನ್ನ ನಿಜಸ್ವರೂಪವನ್ನು ತಿಳಿಯಲಿಚ್ಛಿಸಿದನೆಂದರೆ ಆತನ ಉದಯಕಾಲವು ಬಂದಿತೆಂದು ತಿಳಿಯತಕ್ಕದ್ದು (೫೫). ಬದ್ಧ ಜೀವಗಳೆಲ್ಲ ಪಶು ಎನಿಸುವವು, ಯಾಕಂದರೆ ಅವು ಇನ್ನೂ ಪಶುವೃತ್ತಿಯನ್ನು ಬಿಟ್ಟಿರುವುದಿಲ್ಲ. ಅಜ್ಞಾನರೂಪ ಮಾಯೆಯು ಪಾಶವೆನಿಸುವದು, ಯಾಕಂದರೆ ಅದು ಎಲ್ಲರನ್ನೂ ಕಟ್ಟುವದು. ಪರಶಿವನು ಪಶುಪತಿಯೆನಿಸುವನು, ಯಾಕಂದರೆ ಅವನು ಜೀವರಾಶಿಗಳ ಒಡೆಯನು, ಜೀವಗಳನ್ನು ಪಾಶದಿಂದ ಮುಕ್ತಮಾಡಲು ಸಮರ್ಥನು (೧೩). ದುಃಖಗಳ ಅನುಭವದಿಂದ ಒಂದು ಬಗೆಯ ಉಪರತಿ ಹುಟ್ಟಿ, ವಿಷಯಸುಖವು ನಿಜ ಸುಖವಲ್ಲ ಎಂಬ ಪ್ರತೀತಿಯಾಗಿ, ಆ ಭಾವವು ಸ್ಥಿರವಾಯಿತೆಂದರೆ ವಿಷಯ ವಿರಾಗವು ನೆಲೆಗೊಂಡು ನಿಜಸುಖದ ಹಸಿವು ತಲೆದೋರುವದು. ಅದೇ ಸತ್ಯನಿತ್ಯ ಆತ್ಮಸುಖದ ಅಭಿಲಾಷೆಯು.

೫೩. ಜೀವನು ತತ್ವತಃ ಪರಮಾತ್ಮನ ಅಂಶನಿದ್ದರೂ ಸೃಷ್ಟಿಯ ಉತ್ಪತ್ತಿಗೆ ಮುಖ್ಯ ಸಹಾಯಕವಾದ ಮಾಯಾಶಕ್ತಿಯ ಮೂಲಕ ತನ್ನ ನಿಜರೂಪವನ್ನು ಮರೆತು ಅವನು ದುಃಖದಲ್ಲಿ ತೊಳಲಾಡುವನು. ಮೂಲ ಸ್ವರೂಪವನ್ನು ಮರೆಸುವಷ್ಟು ಸಾಮರ್ಥ್ಯವುಳ್ಳ ಈ ಮಾಯೆಯ ಬಗ್ಗೆ ಹೆಚ್ಚು ವಿವೇಚನೆ ಮಾಡುವದು ಅವಶ್ಯವು. ವಿಶ್ವೋತ್ಪತ್ತಿಯೆಂದರೆ ಸಂಸಾರವು. ಈ ಸಂಸಾರದಿಂದ ಮರವು ಆಯಿತು, ಮರವು ಎಂಬ ಮಹಾಮಾಯೆಯು ವಿಶ್ವವನ್ನು ಮುಸುಕಿದಲ್ಲಿ ಬಲ್ಲಿದರೆಲ್ಲ ತಾಮಸಕ್ಕೊಳಗಾದರು, ಎಂದು ಮರವಿನ ರೂಪವನ್ನು ತಾಳಿ ಕಾರ್ಯಮಾಡುತ್ತಿರುವ ಮಾಯೆಯ ಬಲವನ್ನು ವಚನಕಾರರು ವರ್ಣಿಸಿರುವರು (೧೪). ಅಹಂಕಾರವೆಂಬುದು ಮಾಯೆಯ ಅಥವಾ ಅಜ್ಞಾನದ ದೊಡ್ಡ ಆಯುಧವು. ಅಹಂಕಾರವು ತಲೆದೋರಿತೆಂದರೆ ಕುಟಿಲ ಕುಹಕ ಕಲ್ಪನೆಗಳೆಂಬ ಬಿರುಗಾಳಿ ಬಿಟ್ಟು ಜ್ಞಾನ ಜ್ಯೋತಿಯು ಕೆಟ್ಟು ಮನುಷ್ಯನು ಹಾಳಾಗುವನು (೧೫). ಕಾಮ

ಕ್ರೋಧ ಲೋಭ ಮೋಹ ಮದ ಮತ್ಸರ ಎಂಬ ಮನುಷ್ಯನ ಶತ್ರುಗಳಲ್ಲಿ ಎಲ್ಲಕ್ಕೂ ಹೆಚ್ಚಿನದೆಂದರೆ ಕಾಮವು, ಆಸೆಯು, ತೃಷ್ಣೆಯು, ಇಂತಹದು ಬೇಕು ಎಂಬ ಇಚ್ಛೆಯು. ಅದೇ ದುಃಖಪರಂಪರೆಗೆ ಮೂಲವು. ಹೊನ್ನು ಹೆಣ್ಣು ಮಣ್ಣು, ಇವು ಮಾಯೆಯೆಂದು ಜನರು ಅನ್ನುವರು, ಅವು ಎಲ್ಲ ರನ್ನೂ ಹಣ್ಣು ಮಾಡುವವು (೧೬೨), ಎಂದು ಅವುಗಳ ಸಾಮರ್ಥ್ಯವನ್ನು ಶರಣರು ವರ್ಣಿಸುವರು. ನಿಜವಾಗಿ ಪರೀಕ್ಷಿಸಿ ನೋಡಿದರೆ, ಮನದ ಮುಂದಣ ಆಸೆಯೆ ಮೂಲ ಮಾಯೆ, ಎಂದು ಹೇಳುವದು ಉಚಿತವಾಗು ವದು (೧೫೬). ದೇಹವೆಂದರೇ ತಾನು, ತನ್ನ ದೇಹವು ಶಾಶ್ವತವು, ಧನಕನ ಕಾದಿಗಳು ಸ್ಥಿರವಾದವುಗಳು, ವಿಷಯಸುಖವೆ ಮುಖ್ಯಸುಖವು, ಪಂಚೇಂ ದ್ರಿಯಗಳೆ ಸುಖಸಾಧನಗಳು, ಎಂದು ತಿಳಿದು ವರ್ತಿಸುವವನಿಗೆ ಎಂದೂ ಸುಖವಾಗದು (೧೬೫). ಯಾಕಂದರೆ, ನಿಜಸುಖವು ಪರಾವಲಂಬಿಯಿರ ಲಾರದು, ಅದು ಜಯಾಪಜಯ, ನಿಂದಾಸ್ತುತಿ, ಮುಂತಾದ ದ್ವಂದ್ವಗಳನ್ನು ಅವಲಂಬಿಸಿರಲಾರದು. ಅದು ಅಂತಃಕರಣದಲ್ಲಿಯ ಆತ್ಮನನ್ನೂ, ಅಂತ ರ್ಯಾಮಿಯನ್ನೂ ಅವಲಂಬಿಸಿರುವದು. ನಿಜಸುಖವು ಪರಮಾತ್ಮನ ಜ್ಞಾನದಿಂದಲೆ ದೊರೆಯತಕ್ಕದ್ದು (೧೬೮). ಈ ಅರಿವಿನಿಂದ ಮನುಷ್ಯನು ಮಲಕ್ಕೆ ಹೊರಗಾಗಬಲ್ಲನು, ಆದರೆ ಇದನ್ನು ಮರೆತನೆಂದರೆ ಮತ್ತೆ ಮಲಕ್ಕೆ ಒಳಗಾಗುವನು (೧೫೮). ತಾತ್ಪರ್ಯವೇನೆಂದರೆ, ಸೃಷ್ಟಿಯಲ್ಲಿ ಪ್ರತಿಯೊಂದು ಜೀವವೆಂಬುದು ಒಂದು ವ್ಯಕ್ತಿಯಾಗಿ ಬಿಡಿಬಿಡಿ ಇದ್ದಂತೆ ತೋರಿದರೂ ಅದು ಸಕಲ ಜೀವಗಳೊಡನೆ ಹಾಗೂ ಜಡಾಜಡ ವಸ್ತುಗಳೊಡನೆ ನಿಕಟವಾಗಿ ಸಂಬದ್ಧವು, ಅದೃಶ್ಯವಾಗಿದ್ದರೂ ಬಲವಾದ ಬಂಧನಗಳಿಂದ ಸಂಬದ್ಧವು. ಆ ಜೀವದ ಹುಟ್ಟು, ಬೆಳವಣಿಗೆ, ಜೀವನಕ್ರಮ, ಮತ್ತು ಸಾವು ಇವು ಅನಂತ ವಿಶ್ವವ್ಯಾಪಾರದಲ್ಲಿಯ ಒಂದು ಅಂಶರೂಪವಾಗಿರುವ ವ್ಯಾಪಾರವು. ಇದನ್ನು ಜನ್ಮಾಗಿ ಅರಿತು ತನ್ನ ಪರಿಮಾಣವನ್ನು ತಿಳಿದು ಕೊಳ್ಳದೆ ವ್ಯಕ್ತಿಯು ಅಹಂಭಾವದಿಂದ, ಅಭಿಮಾನದಿಂದ, ಗರ್ವದಿಂದ, ನಾನು ಸನ್ನದು ಎಂದೂ ತನ್ನಷ್ಟಕ್ಕೆ ತಾನೇ ವೃಥಾ ದೊಡ್ಡಿನ್ತನದ ಕಲ್ಪನೆ ಗಳನ್ನು ಬೆಳೆಯಿಸಿ ಕೈಲಾಗದ ಮತ್ತು ಎಂದೂ ಪೂರೈಸದ ವಿಷಯಕಾಮನೆ ಗಳ ಬೆನ್ನ ಬಿದ್ದು, ಆಸೆ ಎಂಬ ಪಾರಿಗೆ ಮನಸೋತು, ಕೋಟಲೆಗೊಳ್ಳು ವನು ಹಾಗೂ ಜನ್ಮಜನ್ಮಾಂತರಗಳ ವರೆಗೆ ಕರ್ಮಬಂಧನವನ್ನು ಕೊಂಡು ಕೊಳ್ಳುವನು. ಇದು ಮಾಯೆಗೆ ಮೋಸಹೋದವನ ಮಾತಾಯಿತು. ಹಾಗೆ ಮಾಡದೆ, ವ್ಯಕ್ತಿಯು ತನ್ನ ಯಥಾರ್ಥ ಸ್ವರೂಪವನ್ನು ತಿಳಿದು

ಕೊಂಡು, ತನ್ನ ವೈಯಕ್ತಿಕ ಜೀವನದ ಅವಶ್ಯಕತೆಗಳ ಪೂರ್ತಿಯೆ ವಿಷಯ ಗಳನ್ನು ಸೇವಿಸಿ, ತನ್ನ ಶಕ್ತಿಸಾಮರ್ಥ್ಯಗಳನ್ನೆಲ್ಲ ಲೋಕಹಿತಕ್ಕಾಗಿ ವೆಚ್ಚ ಮಾಡಿ, ಸಮಾಧಾನಪಡೆಯುವವನು ಮಾಯಾತೀತನು. ಅವನು ಮುಕ್ತಿ ಮಾರ್ಗವನ್ನು ಆಕ್ರಮಿಸಲು ಅರ್ಹನು.

೫೪. ಈ ವಿಶಾಲವಾದ ಮಹಾವಿಶ್ವದಲ್ಲಿ ಜೀವವೆಂಬುದು ಒಂದು ಜೈತನ್ಯಕಣವು. ಅದಕ್ಕೆ ಒಳಿತುಕೆಡಕುಗಳು ತಿಳಿಯಲಾರಂಭಿಸಿ, ಪುಣ್ಯ ಪಾಪಗಳ ಕಲ್ಪನೆ ಬಂದು, ತಾನು ಇಂತಹದನ್ನು ಮಾಡಬೇಕು ಇಂತಹ ದನ್ನು ಬಿಡಬೇಕು, ಎಂಬ ಅರಿವು ಹುಟ್ಟಿದಾಗ, ಅದು ತನಗೆ ಇಷ್ಟವಾದ ಮಾರ್ಗವನ್ನು ಆಕ್ರಮಿಸಲಿಕ್ಕೆ ಯೋಗ್ಯವಾಗುವದು. ಅಲ್ಲಿಯ ವರೆಗೆ ವಿಶ್ವನಿಯಮಗಳಿಗನುಸರಿಸಿ ಗಾಳಿಗೊಡ್ಡಿದ ತೆರೆಗಳಂತೆ ವಿವಶವಾಗಿ, ತನ್ನ ಪಾರತಂತ್ರ್ಯದ ಎಚ್ಚರವು ಸಹ ಇಲ್ಲದೆ, ಅದು ಅಲೆದಾಡುವದು. ಚಿಕ್ಕ ಮಕ್ಕಳು ಏನಾದರೂ ತಪ್ಪುಮಾಡಿದರೆ ಅವುಗಳಿಗೆ ನಾವು ಅಜ್ಞಾನಿಗಳು ಎಂದೆನ್ನುವೆವು ಮತ್ತು ಮಾಡಿದ ತಪ್ಪುಗಳಿಗೆ ಅವರು ಹೊಣೆಗಾರರಲ್ಲ, ಎಂದು ತಿಳಿಯುವೆವು ಅದೇ ರೀತಿ, ಒಂದು ಜೀವನು ಪಾಪಪುಣ್ಯಗಳಲ್ಲಿಯು ಭೇದವನ್ನರಿಯದೆ ಅನೇಕ ಭವಗಳಲ್ಲಿ ಬಂದುಹೋಗಿರಬಹುದು (೫೫೦). ಆ ಸ್ಥಿತಿಯಲ್ಲಿ ಅವನು ಯಾವುದಕ್ಕೂ ಹೊಣೆಗಾರನಲ್ಲ. ಯಾಕಂದರೆ, ಅಂಥ ಹೊಣೆಹೊರಲಿಕ್ಕೆ ಅಥವಾ ಹೊರಿಸಲಿಕ್ಕೆ ಅವಶ್ಯವಿದ್ದ ಎಚ್ಚರವು ಅಥವಾ ಜ್ಞಾನವು ಆ ಸ್ಥಿತಿಯಲ್ಲಿ ಅವನಲ್ಲಿರುವುದಿಲ್ಲ. ಮೇಲೆ ಹೇಳಿದಂತೆ, ಒಮ್ಮೆ ಆ ಜ್ಞಾನವು ಹುಟ್ಟಿತೆಂದರೆ ಆ ಜೀವನಿಗೆ ಪ್ರಗಲ್ಭಾವಸ್ಥೆಯು ಉಂಟಾಯಿತೆಂದು ತಿಳಿಯಬೇಕು ಮತ್ತು ಅಂದಿನಿಂದ ಮುಂದೆ ಅವನು ತನ್ನ ಪುಣ್ಯಪಾಪಗಳಿಗೆ ಹೊಣೆಗಾರನಾಗುವನು. ಅಲ್ಲಿಯವರೆಗೆ, ಅವನಿಗೆ ತನ್ನ ಕರ್ಮಗಳ ಫಲಗಳನ್ನು ಭೋಗಿಸಬೇಕಾಗುವದಿಲ್ಲ, ಎಂದು ಮಾತ್ರ ಯಾರೂ ತಿಳಿಯಕೂಡದು. ಆದರೆ ಅಲ್ಲಿಯವರೆಗೆ ಅವನು ಸ್ವತಂತ್ರ ಕರ್ತನಲ್ಲ, ಕರ್ಮದಿಂದ ಮುಕ್ತನಾಗಲು ಯೋಗ್ಯನಲ್ಲ, ಆ ಪ್ರಯತ್ನವನ್ನು ಮಾಡುವ ಪಾತ್ರತೆಯು ಅವನಲ್ಲಿ ಬಂದಿಲ್ಲ, ಇಷ್ಟೇ ಇದರ ಅರ್ಥವು. ಸದಸದ್ವಿವೇಕಬುದ್ಧಿಯು ಒಮ್ಮೆ ಜಾಗ್ರತವಾದಬಳಿಕ ಅವನಲ್ಲಿ ವಿಷಯ ಸುಖ ಮತ್ತು ಆತ್ಮಸುಖ ಇವುಗಳ ಬಗ್ಗೆ ತಾರತಮ್ಯಬುದ್ಧಿಯು ಹುಟ್ಟು ವದು. ಮೊದಲನೆಯದನ್ನು ಬಿಟ್ಟು ಎರಡನೆಯದನ್ನೆ ಹಿಂಬಾಲಿಸುವದು ಯೋಗ್ಯವು, ಅದೇ ತನಗೆ ಹಿತಕರವು ಎಂಬ ನಿರ್ಣಯವನ್ನು ಅವನು ಆಗ ಮಾಡುವನು. ಬುದ್ಧಿಯು ಮಾಡಿದ ಈ ನಿರ್ಣಯದ ಪ್ರಕಾರ ಅವನು

ವಿಷಯಸುಖವನ್ನು ಕುರಿತು ಹೇಯಭಾವವನ್ನು ತಾಳಿದನೆಂದರೆ ಅವನಲ್ಲಿ ಮುಕ್ತಿಯ ಬಯಕೆಯು ಮೊಳೆಯಿತೆನ್ನಬಹುದು. ಆ ಬಳಿಕ ಅಹಂಕಾರ, ಕಾಮಕ್ರೋಧಾದಿಗಳು, ಇವುಗಳನ್ನೆಲ್ಲ ತ್ಯಜಿಸಿ ನಿರಹಂಕಾರನೂ ನಿಷ್ಕಾಮನೂ ಆಗಬೇಕು, ಎಂಬ ಭಾವವು ಸಾಧಕನಲ್ಲಿ ಹೆಚ್ಚುತ್ತಹೋಗುವದು ವಿಷಯಸುಖವು ಬಯಲಭ್ರಮವು, ಇದರಲ್ಲಿ ಇನಿತು ಲೇಸಿಲ್ಲ (೧೭೬). ಒಂದು ಸುಖವನ್ನು ಪಡೆಯುವಷ್ಟರಲ್ಲಿ ಇನ್ನೊಂದು ದುಃಖವು ಬಂದಡರುವದು (೧೮೨), ಆದುದರಿಂದ ಈ ಸಂಸಾರದಂದುಗದಿಂದ ಮುಕ್ತಮಾಡು, ಮನಸಿನಲ್ಲಿ ಸಮಾಧಾನವನ್ನುಂಟುಮಾಡು, ನನಗೆ ಪರಮಸಂತೋಷವಾಗುವಂತೆ ಮಾಡು, ಎಂದು ಮನುಷ್ಯನು ದೇವರಿಗೆ ಮೊರೆ ಇಡುವನು (೧೮೦). ಇದೇ ಬಗೆಯ ಮೋಕ್ಷದ ಆತುರವು ಹೆಚ್ಚುತ್ತಹೋಯಿತೆಂದರೆ ಪಂಜರದೊಳಗಿನ ಗಿಳಿಯು ತನ್ನ ಹಿಂಡನು ನೆನೆವಂತೆ, ಹಿಡಿದುತಂದ ಆನೆ ತನ್ನ ಮಲೆಯನು ನೆನೆವಂತೆ, ಜೀವನು ತನ್ನ ನಿಜಧಾಮವಾದ ಪರಮಾತ್ಮನನ್ನು ನೆನೆಯುವನು (೧೮೩). ಆಗ ತಾನು ಯಾರು, ಎಲ್ಲಿಂದ ಬಂದನು, ಎಲ್ಲಿಗೆ ಹೋಗತಕ್ಕದ್ದು, ಎಂಬ ಮುಂತಾದ ಮಾತುಗಳ ಬಗ್ಗೆ ತೀವ್ರ ಜಿಜ್ಞಾಸೆಯು ಉತ್ಪನ್ನವಾಗುವದು (೧೯೦). ಈ ಜಿಜ್ಞಾಸೆಯು ಹುಟ್ಟಿತೆಂದರೆ ಆತ್ಮಜ್ಞಾನದ ಕಡೆಗೆ ಜೀವನ ದೃಷ್ಟಿಯು ತಿರುಗುವದು.

೫೫. ಈ ಆತ್ಮಜ್ಞಾನವೆ ಮುಕ್ತಿಯ ಮುಖ್ಯ ಸಾಧನವು. ಆ ಸಾಧನದ ವಿಚಾರವನ್ನು ಮಾಡುವ ಪೂರ್ವದಲ್ಲಿ ಮುಕ್ತಿಯನ್ನು ಕುರಿತು ವಚನಕಾರರ ಅಂಬೋಣವೇನಿರುವದು ಇದನ್ನು ನೋಡುವ. ಸುಖವೇ ಎಲ್ಲ ಜೀವಗಳ ಧ್ಯೇಯವು, ಎಂಬ ಬಗ್ಗೆ ಯಾರಲ್ಲಿಯೂ ಮತಭೇದವಿಲ್ಲ. ಅನುಕೂಲವೇದನೆಯೆ ಸುಖವು ಮತ್ತು ಪ್ರತಿಕೂಲವೇದನೆಯೆ ದುಃಖವು, ಎಂಬ ಬಗ್ಗೆಯೂ ಒಮ್ಮತವಿರುವದು. ಆದರೆ ಸುಖದುಃಖಗಳಲ್ಲಿ ತರಗತಿಗಳಿರುವವು. ಪಶುವಿನ ಆನಂದಕ್ಕಿಂತ ಮನುಷ್ಯನ ಆನಂದವು ಹೆಚ್ಚಿನದು, ಸಾಮಾನ್ಯ ಮನುಷ್ಯನ ಆನಂದಕ್ಕಿಂತ ವಿದ್ವಾಂಸನ ಆನಂದವು ಶ್ರೇಷ್ಠವು, ಅದಕ್ಕಿಂತ ನಿಷ್ಕಾಮಿಯ ಆನಂದವು ಹೆಚ್ಚಿನದು, ಎಂಬುದು ಅನುಭವದ ಮಾತು. ಆನಂದದ ವಿಮೀಮಾಂಸೆ ಮಾಡುವಾಗ ಉಪನಿಷತ್ಕಾರರು (ತೈ. ೨. ೮ ಅನುವಾಕ) ಈ ತರಗತಿಗಳ ಸ್ಪಷ್ಟೀಕರಣವನ್ನೂ ಪೃಥಕ್ಕರಣವನ್ನೂ ಮಾಡಿರುವರು. ಸಾಮಾನ್ಯವಾಗಿ, ಇಂದ್ರಿಯಗಳ ಮುಖಾಂತರ ವಿಷಯಗಳಿಂದ ಆಗುವ ದುಃಖಗಳನ್ನು ತಪ್ಪಿಸಬೇಕು ಮತ್ತು ತದ್ವಾರಾ ಆಗುವ ಸುಖಗಳನ್ನಷ್ಟೆ ಪಡೆಯಬೇಕು ಎಂದು, ಎಲ್ಲ ಜೀವಗಳು ಹವಣಿ

ಸುತ್ತಿರುತ್ತವೆ. ಜೀವನ ಪ್ರಗತಿಯಾಗುತ್ತ ನಡೆದಂತೆ ಅವನಿಗೆ ಇಂದ್ರಿಯ ಸುಖಗಳಿಗಿಂತ ಹೆಚ್ಚಿನ ಮತ್ತು ಸೂಕ್ಷ್ಮತರವಾದ ಸುಖದ ಕಲ್ಪನೆಯು ಬರಲಾರಂಭಿಸುವದು. ಚತುಷ್ಪಾದ ಪಶುವು ಕೇವಲ ಇಂದ್ರಿಯ ಸುಖಗಳಲ್ಲಿ ಮಗ್ನವಿರುವದು. ಅದರ ಮನಸು ಯಾವದೇ ರೀತಿಯಿಂದ ಸಂಸ್ಕೃತವಿಲ್ಲದ್ದರಿಂದ ಅದಕ್ಕೆ ಮಾನಸಿಕಸುಖವೆಂಬುದು ಇರುವುದೊ ಇಲ್ಲವೊ ಇದರ ಸಂಶಯವೇ. ಒಬ್ಬ ಅಸಂಸ್ಕೃತ ಮನುಷ್ಯನು ಸಹ ಪಶುಗಳಿಗಿಂತ ಶ್ರೇಷ್ಠತರವಾದ ಸುಖವನ್ನು ಸಂಗೀತಾದಿಗಳಿಂದ ಪಡೆಯುವನು. ಹೆಚ್ಚು ಸುಸಂಸ್ಕೃತನಾದಂತೆ ಮನುಷ್ಯನು ಸತ್ಕಾರ್ಯ, ಸ್ವಾರ್ಥತ್ಯಾಗಾದಿಗಳಿಂದ ಆಗುವ ಸುಖವನ್ನು ಅಂದರೆ ಕಲಾದಿಗಳಿಂದಾಗುವ ಆನಂದಕ್ಕಿಂತ ಹೆಚ್ಚಿನ ಸುಖವನ್ನನುಭವಿಸುವನು. ಈ ಬಗೆಯ ಸುಖವು ಇಂದ್ರಿಯಗಳನ್ನಾಗಲಿ ಸ್ವಾರ್ಥಮಯ ಕಾಮನಾಪೂರ್ತಿಯನ್ನಾಗಲಿ ಅವಲಂಬಿಸಿಲ್ಲ. ಇದೇ ರೀತಿ, ಕೇವಲ ಭಕ್ತನೆಂಬವನು ನಿರ್ಹೇತುಕ ಪರಮಾತ್ಮಪ್ರೀತಿಯಿಂದ, ಎಲ್ಲವೂ ಪರಮಾತ್ಮನದೆ ಎಂಬ ಪ್ರತೀತಿಯಿಂದ, ಸರ್ವಲೋಕಹಿತವನ್ನು ಸಾಧಿಸುವ ಪ್ರಯತ್ನದಿಂದ, ಒಂದು ತೆರದ ಅತ್ಯಂತ ಸೂಕ್ಷ್ಮಸುಖವನ್ನು ಪಡೆಯುವನು. ಇದು ಆತ್ಮಸುಖವು. ಜ್ಞಾನಿಯ ಮಾತಾದರೂ ಹೀಗೆಯೆ ಇರುವದು. ಗೋಚರವಾಗುವುದೆಲ್ಲ ನಶ್ವರವು, ಕ್ಷಣಿಕವು, ಆತ್ಮವೊಂದೆ ಸತ್ಯವು, ಎಂಬ ನಿಶ್ಚಿತ ಜ್ಞಾನವು ಭವದಿಂದ ಅವನು ನಿತ್ಯ ಆ ಜ್ಞಾನದಲ್ಲಿ ರತನಾಗಿ ಇಂದ್ರಿಯಗಳಿಂದಾಗುವ ಸುಖದುಃಖಗಳಿಗೆ ಬಲಿಬೀಳದೆ ಯಾವಾಗಲೂ ಆ ತನ್ನ ಜ್ಞಾನಾನಂದದಲ್ಲಿಯೆ ಇದ್ದು ಎಲ್ಲೆಲ್ಲಿಯೂ ಒಂದೇ ಆತ್ಮನಿರುವನೆಂಬ ವೃತ್ತಿಯಿಂದ ವರ್ತಿಸುವನು. ಅದೂ ಆತ್ಮಸುಖವು. ಈ ಬಗೆಯ ಆತ್ಮಸುಖದಲ್ಲಿ ನಿತ್ಯನಿರತನಾಗುವ ಸಾಮರ್ಥ್ಯವೆ ಮುಕ್ತಿ ಎನಿಸುವದು. ಆದುದರಿಂದ ವಚನಕಾರರು, ಸಕಲೇಂದ್ರಿಯಗಳಲ್ಲಿ ವಿಕಾರಿಸುವ ಮನವನ್ನು ಸೆಳೆದು ನಿಂದಾತನೆ ಸುಖಿಯು, ಪಂಚೇಂದ್ರಿಯಗಳ ಇಚ್ಛೆಯಲ್ಲಿ ಕೀಳು ಮನಂಗೊಂಡು ಸುಳಿವಾತನೆ ದುಃಖಿಯು, ಮನಸು ಬಹಿರ್ಮುಖವಾಗಲು ಅವನು ಮಾಯಾಪ್ರಪಂಚಿಯು, ಅಂತರ್ಮುಖಿಯಾಗಲು ಅವಿರಳ ಜ್ಞಾನಿಯು, ಮನವು ಮಹದಲ್ಲಿ ನಿಂತಿತೆಂದರೆ ಅವನು ಮುಕ್ತನು (೫೪), ಎಂದು ಮುಕ್ತನ ಸ್ಥಿತಿಯನ್ನು ವರ್ಣಿಸಿರುವರು. ವಿಷಯಸುಖಕ್ಕೂ ಆತ್ಮಸುಖಕ್ಕೂ ಆಡುಆನೆಗಳಿಗಿದ್ದಷ್ಟು ಅಂತರವಿರುವದು, ಎಂಬ ಮಾತು ಸ್ಪಷ್ಟವೆ ಇದೆ. ವ್ಯಸನಾಧೀನನು ಅಥವಾ ಸ್ತ್ರೀಲಂಪಟನು ತನ್ನ ವಿಷಯ

ವನ್ನು ಯಾವಾಗಲೂ ಅತ್ಯಂತ ಆತುರತೆಯಿಂದ ಅರಸುವಂತೆ ಒಮ್ಮೆ ಆತ್ಮ ಸುಖದ ರುಚಿಗೊಂಡವನಾದರೂ ಯಾವಾಗಲೂ ಆ ಆತ್ಮಸುಖವನ್ನೆ ಅರಸುವನು ಪುತ್ತು ಅದನ್ನು ಪಡೆದು ನಿತ್ಯಸುಖಿಯಾಗುವನು. ಇಂಥ ಆತ್ಮ ಸುಖಿಯು ಬಾಹ್ಯಸುಖದುಃಖಗಳಿಂದ ವಿಕೃತನಾಗದೆ ಆಂತರಿಕ ಸುಖದಿಂದ ನಲಿದಾಡುವನು. ವಿಷಯಸುಖವು ಪರಾವಲಂಬಿಯು, ಪರತಂತ್ರವು, ಸದೋಷವು, ಅತೃಪ್ತಿಕರವು, ಕ್ಷಣಿಕವು. ಆತ್ಮಸುಖವು ಸ್ವಾವಲಂಬಿಯು, ಸ್ವತಂತ್ರವು, ನಿರ್ದೋಷವು, ಪೂರ್ಣ ತೃಪ್ತಿದಾಯಕವು, ಮತ್ತು ನಿತ್ಯವು. ಈ ಬಗೆಯ ಸುಖವನ್ನು ಪಡೆದವನು ಮುಕ್ತನೆನಿಸುವನು, ವಿಷಯಸುಖ ಗಳಲ್ಲಿ ನಿಮಗ್ನನಾಗಿ ಅವುಗಳ ಬಗ್ಗೆ ತೊಳಲಾಡುವವನು ಬದ್ಧನೆನಿಸುವನು.

೫೬. ನಿತ್ಯ, ನಿರ್ದೋಷ, ಸ್ವತಂತ್ರ ಆನಂದವೆ ಪರಮಧ್ಯೇಯವು ಮತ್ತು ಅದು ವಿಷಯಗಳಲ್ಲಿ ದೊರೆಯದೆ ಆತ್ಮನಲ್ಲಿಯೆ ದೊರೆಯುವದು, ಎಂದು ವಚನಕಾರರ ಸ್ಪಷ್ಟ ಅಭಿಪ್ರಾಯವಿರುವದು. ಇನ್ನು ಈ ಸುಖವು ಯಾರಿಗೆ ಹೇಗೆ ದೊರೆಯುವದು, ಆ ಸುಖವು ದೊರೆತವನ ನಿಲವು ಹೇಗೆ ಇರುವದು, ಎಂಬ ಮುಂತಾದ ವಿಷಯಗಳನ್ನು ವಿಚಾರಿಸುವದು ಅವಶ್ಯವು. ಆತ್ಮನು ತನ್ನ ಮರವಿನ ಮೂಲಕ ಜೀವತ್ವವನ್ನು ಹೊಂದಿ ತಾನು ಅಲ್ಪನು, ಮರ್ಯಾದಿತನು, ದುಃಖಿತನು, ಪಾಪಿಯು, ನಶ್ವರನು, ಎಂಬ ದೇಹಭಾವ ಗಳನ್ನೆಲ್ಲ ತನ್ನಲ್ಲಿ ಆರೋಪಿಸಿ ಬದ್ಧನೂ ಪತಿತನೂ ಆಗಿರುವನು. ಈ ಮರವು ಮಾಯವಾಗಿ, ಚಂದ್ರನ ಕಲೆ ಚಂದ್ರನಲ್ಲಿ ಸಮನಿಸಿದಂತೆ, ಸೂರ್ಯನಕಿರಣ ಸೂರ್ಯನಲ್ಲಿ ಸೇರಿದಂತೆ, ದೀಪದ ಬೆಳಕು ದೀಪದಲ್ಲಿ ಕೂಡಿಕೊಂಡಂತೆ, ಅಗ್ನಿಯ ಕಾಂತಿ ಅಗ್ನಿಯ ನ್ನೊಡಗೊಂಡಂತೆ, ಮುನ್ನೀರು ನೀರಾಗಿ ನದಿಯಾಗಿ ಮತ್ತೆ ಮುನ್ನೀರನ್ನು ಕೂಡಿದಂತೆ, ವ್ಯಕ್ತಿ ಎಂದು ಸುಳಿದಾಡುವ ಚಿತ್ಕಣವು ಮತ್ತೆ ಚಿದ್ಘನದಲ್ಲಿ ಲೀನವಾಯಿತೆಂದರೆ ಅದು ಪೂರ್ಣ ವಿದೇಹಮುಕ್ತಿಯನ್ನು ಪಡೆದಂತಾಯಿತು (೫೩). ಅಥವಾ ಇನ್ನೊಂದು ದೃಷ್ಟಾಂತವನ್ನು ಕೊಡಬೇಕಾದರೆ, ಚಿನ್ನದ ಆಭರಣವು ಪುನಃ ಚಿನ್ನವಾದಂತೆ, ಆಣೇಕಲ್ಲು ಮರಳಿ ನೀರಾದಂತೆ ಶುದ್ಧಚಿತ್ತದ ಲೀಲಾ ವಿಲಾಸದಿಂದೊಗೆದ ಜೀವನು ಪುನಃ ಉಪಾಧಿರಹಿತ ಚಿನ್ಮಾತ್ರನಾದನೆಂದರೆ (೫೩) ಅದೇ ಪೂರ್ಣಮುಕ್ತಿ ಎನಿಸುವದು. ಉರಿಯುಂಡ ಕರ್ಪುರಗಿರಿಗೆ ಇದ್ದಲಿ ಇರಬಲ್ಲದೆ, ಮಂಜಿನ ಮಂದಿರಕ್ಕೆ ಬಿಸಿಲಿನ ಕಳಸವಿರಬಲ್ಲದೆ, ಮುಕ್ತನಾದ ಬಳಿಕ ಮತ್ತೆ ಅವನಿಗೆ ಭವವುಂಟೆ, ನಾನೊಬ್ಬ ವ್ಯಕ್ತಿ ಎಂಬ ಅರಿವುಂಟೇ (೫೬), ಎಂದು ವಚನಕಾರರು ಹೇಳುವರು. ಆ ಸ್ಥಿತಿಯಲ್ಲಿ,

ನಾನೆಂಬುದಿಲ್ಲ ನೀನೆಂಬುದಿಲ್ಲ, ಸ್ವಯವೆಂಬುದಿಲ್ಲ ಪರವೆಂಬುದಿಲ್ಲ, ಅರಿವೆಂಬುದಿಲ್ಲ, ಮರವೆಂಬುದಿಲ್ಲ, ಒಳಗೆಂಬುದಿಲ್ಲ ಹೊರಗೆಂಬುದಿಲ್ಲ (೫೪). ಇದರ ಅರ್ಥವೇನಂದರೆ, ದ್ವಂದ್ವಾತೀತ ನಿರವಯ ಪರವಸ್ತು, ಎಂದು ಯಾವ ಪರಾತ್ಪರಸತ್ಯದ ವರ್ಣನೆಯನ್ನು ವಚನಕಾರರು ಮಾಡಿರುವರೊ ಆ ಸತ್ಯದಲ್ಲಿ ಒಂದಾಗುವುದೆ ಮುಕ್ತಿ, ಪರಾಕಾಷ್ಠೆಯ ಸ್ಥಿತಿ. ವಾಙ್ಮನಕ್ಕೆ ಬಾರದ ವಸ್ತುವಾದ, ಬೆಳಗಿನೊಳಗಣ ಮಹಾಬೆಳಗಾದ ಆ ಪರವಸ್ತು ವನ್ನು ಕೂಡಿದಬಳಿಕ ಆಗುವ ಪರಮಾನಂದವನ್ನು ಏನೆಂದುಪಮಿಸುವದು ಸಾಧ್ಯವು, ಎಂದು ವಚನಕಾರರು ಕೇಳುವರು (೫೭). ಆ ಐಕ್ಯಸುಖವನ್ನು ಒಮ್ಮೊಮ್ಮೆ ಸಲ್ಲಸಲ್ಲೆಯರ ಸಮರತಿಯ ಸವಿಕೂಟಕ್ಕೆ ಹೋಲಿಸುವರು. ಆ ಕೂಟದಲ್ಲಿಯೂ ಒಂದು ಬಗೆಯ ಐಕ್ಯಾನುಭವವಾಗುವದೆಂಬುದೇನೋ ನಿಜವು (೫೮, ೫೯). ಎರಡನೆಯ ಎಲ್ಲ ಇಂದ್ರಿಯ ಸುಖಗಳಿಗಿಂತ ಅದು ಹೆಚ್ಚಿನ ಸುಖವು ಎಂಬುದೂ ನಿಜವು. ಆದರೂ ಸಾತ್ವಿಕ ಶುದ್ಧ ಆತ್ಮೈಕ್ಯದ ಪರಮಾನಂದವೆತ್ತ, ಈ ಭೌತಿಕ ಭೂಮಿಕೆಯಲ್ಲಿ ದೇಹಪ್ರಾಣಗಳ ಕ್ಷಣಿಕ ಐಕ್ಯದಿಂದಾಗುವ ವಿಷಯಾನಂದವೆತ್ತ? ಆತ್ಯಂತಿಕ ನಿಜಸುಖವನ್ನು ವರ್ಣಿಸುವಾಗ, ಸ್ನೇಹದ ಸುಖವನ್ನು ನೋಟವು ಸುಂಗಿತ್ತು, ನೋಟದ ಸುಖವನ್ನು ಕೂಟವು ಸುಂಗಿತ್ತು, ಕೂಟದ ಸುಖವನ್ನು ಆಲಿಂಗನವು ಸುಂಗಿತ್ತು, ಆಲಿಂಗನದ ಸುಖವನ್ನು ಸಂಗವು ಸುಂಗಿತ್ತು, ಸಂಗದ ಸುಖವನ್ನು ಸಮರಸವು ಸುಂಗಿತ್ತು, ಸಮರಸದ ಸುಖವನ್ನು ಪರವಶವು ಸುಂಗಿತ್ತು, ಆ ಪರವಶದ ಸುಖವನ್ನು ವರ್ಣಿಸುವ ಸಾಮರ್ಥ್ಯವು ಯಾರ ನಾಲಿಗೆಗೂ ಇಲ್ಲ, ಅದನ್ನು ಭಕ್ತನು ಪರಮಾನುಭವದಿಂದಲೆ ಅರಿತುಕೊಳ್ಳ ಬೇಕು, ಎಂದು ಆತ್ಮೈಕ್ಯದ ಆನಂದ ಸೋಪಾನವನ್ನು (೬೩) ವಚನಕಾರರು ವರ್ಣಿಸಿದ್ದಾರೆ. ಈ ರೀತಿ ಇಲ್ಲಿ ವಿಷಯಸುಖದ ಪರಿಭಾಷೆಯನ್ನು ವಚನ ಕಾರರು ಉಪಯೋಗಿಸಿದ್ದರೂ ಸಂಪೂರ್ಣ ಕಾಮಗಂಧಹೀನರಾಗದ ಹೊರತು, ಅತ್ಯಂತ ಜಿತೇಂದ್ರಿಯರಾಗದ ಹೊರತು ಆತ್ಮಾನಂದದ ನೆಲವು ಸಹ ನಮಗೆ ನೋಡಲಿಕ್ಕೆ ದೊರಕುವದು ಅಸಾಧ್ಯವೆಂಬುದನ್ನು ಎಲ್ಲರೂ ಲಕ್ಷದಲ್ಲಿಡಲಿಕ್ಕೆ ಬೇಕು.

೫೭. ಇನ್ನು ವಿದೇಹಮುಕ್ತಿ ಹಾಗೂ ಜೀವನ್ಮುಕ್ತಿ ಇವುಗಳಲ್ಲಿಯ ಭೇದವನ್ನು ಮತ್ತು ಜೀವನ್ಮುಕ್ತಿಯ ಲಕ್ಷಣಗಳನ್ನು ನೋಡುವ. ವಿದೇಹ ಮುಕ್ತಿ ಅಂದರೆ ಈ ದೇಹಪಾತದ ನಂತರ ಪ್ರಾಪ್ತವಾಗತಕ್ಕ ಮುಕ್ತಿಯು. ವಿದೇಹಮುಕ್ತಿ ಅಥವಾ ಚಿರಸಮಾಧಿ, ಈ ಎರಡು ಅವಸ್ಥೆಗಳಲ್ಲಿ ಮಾತ್ರ

ಮೇಲೆ ವರ್ಣಿಸಿದ ನಿರತಿಶಯ ಆನಂದಸ್ಥಿತಿಯು ನಿತ್ಯ ನಿರಂತರ ತೆರಹಿಲ್ಲದೆ ಇರಬಲ್ಲದು. ದೇಹವಿರುವವರೆಗೆ ಈ ಆನಂದದ ಅನುಭವವು ಬರುವದು ಸಾಧ್ಯವಿದ್ದರೂ ಅದು ತೆರಹಿಲ್ಲದೆ ನೆಲೆಯಾಗಿರಲರಿಯದು. ಯಾಕಂದರೆ, ದೇಹಧಾರಣೆ ಮತ್ತು ಅದರ ಎಚ್ಚರ ಇವು ದೇಹಧಾರಿಯ ಮನವನ್ನು ಸ್ವಲ್ಪಾದರೂ ವ್ಯಗ್ರಮಾಡುವವು. ಆ ವ್ಯಗ್ರತೆಯು ಆನಂದದ ನಿರಂತರತೆಯನ್ನು ಆ ಮಟ್ಟಿಗೆ ಕೆಡಿಸುವದು. ಇನ್ನು ಆ ಆನಂದವು ತೆರಹಿಲ್ಲದೆ ಇರಲಾರಂಭಿಸಿತೆಂದರೆ ಅದೇ ಚಿರಸಮಾಧಿಯಾಗಿ ಪರಿಣಮಿಸಿ ವಿದೇಹಮುಕ್ತಿಯಲ್ಲಿ ಅದರ ಪರ್ಯವಸಾನವಾಗುವದು. ಆದರೆ ದೇಹವಿರುವವರೆಗೆ, ಚಿತ್ರಗಳಿಗೆ ಭಿತ್ತಿಯು ಅಥವಾ ನಟರಿಗೆ ರಂಗಭೂಮಿಯು ಆಧಾರವಾಗಿರುವಂತೆ ಒಬ್ಬ ಜೀವಂತ ಮನುಷ್ಯನ ಮಿಕ್ಕ ಎಲ್ಲ ವೃತ್ತಿಗಳಿಗೆ ಈ ಸ್ಥಿತಿಯು ಆಧಾರವಾಗಿ ಇರಬಲ್ಲದು. ಆಧಿವ್ಯಾಧಿಗಳಿಂದ ಆಗುವ ದುಃಖಾದಿಗಳು ಮೇಲೆ ತಾಪಗೊಡುತ್ತಿದ್ದರೂ ಜೀವನ್ಮುಕ್ತನು ಅಂತರದಲ್ಲಿ ಸಮುದ್ರಗರ್ಭದಂತೆ ಶಾಂತನೂ ಗಂಭೀರನೂ ಇರಬಲ್ಲನು. ಒಬ್ಬ ಪ್ರಸನ್ನಚಿತ್ತ ಬಾಲನ ದೃಷ್ಟಾಂತವು ಇದಕ್ಕೆ ಸಲ್ಲುವದು. ಆ ಬಾಲನು ಅನೇಕ ವಿವಿಧ ವ್ಯಾಪಾರಗಳಲ್ಲಿ ವ್ಯಾಪೃತನಾದಂತೆ ಕಂಡರೂ ಅವನ ಪ್ರಸನ್ನತೆಯು ಅಳಿಯದೆ ಉಳಿದು ಮಿಕ್ಕ ಎಲ್ಲ ವ್ಯಾಪಾರಗಳಿಗೆ ಒಂದು ಬಗೆಯ ಒಪ್ಪನ್ನಿಟ್ಟು ಶೋಭೆಯನ್ನುಂಟುಮಾಡುವದು. ಇಂಥ ಸ್ಥಿತಿಯು ಜೀವನ್ಮುಕ್ತಿಯೆನಿಸುವದು. ಈ ಸ್ಥಿತಿಯಲ್ಲಿ, ಮನುಷ್ಯನು ಆತ್ಮೈಕ್ಯವನ್ನು ಅನುಭವದಿಂದ ಅರಿತದ್ದರಿಂದ ಅವನು ಮುಂದೆ ಮೋಹಕ್ಕೆ ಒಳಗಾಗುವದಿಲ್ಲ ಮತ್ತು ಕರ್ಮಗಳಿಂದ ಬದ್ಧನಾಗುವದಿಲ್ಲ. ಮಾಡಿದರೂ ಮಾಡದೆ ಇದ್ದವನಂತೆ, ಮಾಟದ ಕೋಟಲೆಗೆ ಎಂದಿಗೂ ಒಳಗಾಗದೆ ನಿಸ್ಸಂಗ, ನಿರಾಭಾರಿ, ನಿಸ್ಸೀಮ, ನಿರ್ದೇಹಿಯಾಗಿ ನಿಜದಲ್ಲಿ ಅಡಗಿ ಅವನು ನಿತ್ಯಮುಕ್ತನಿರುವನು (೭೪). ಅಂಥ ಜೀವನ್ಮುಕ್ತನು ಕರ್ಮದ ಕಠೋರ ಕಟ್ಟಳೆಯಿಂದ ಕಟ್ಟಲ್ಪಡುವುದಿಲ್ಲ. ಯಾಕಂದರೆ ಬಂಧನವು ಕರ್ಮದೊಳಗಿರದೆ ಕಾಮನೆಯಲ್ಲಿರುವದು, ಕರ್ಮಫಲದಲ್ಲಿರದೆ ಕರ್ಮದ ಫಲಾಶೆಯಲ್ಲಿರುವದು, ಕರ್ತನಲ್ಲಿರದೆ ಅವನ ಆಸಕ್ತಿಯಲ್ಲಿರುವದು. ಜೀವನ್ಮುಕ್ತನು ಸರ್ವಕಾಮನೆಗಳನ್ನು ತೊರೆದವನಾದುದರಿಂದ, ಫಲಾಶೆಯನ್ನು ಬಿಟ್ಟವನಾದುದರಿಂದ, ಆಸಕ್ತಿಯನ್ನು ತ್ಯಜಿಸಿದವನಾದುದರಿಂದ ನಿರ್ಲೇಪನಿರುವನು (೭೫). ಅವನು ಯಾವ ಕ್ರಿಯೆ ಮಾಡಿದರೂ ಯಾವ ಕರ್ಮವನ್ನಾಚರಿಸಿದರೂ ಉಪಚಾರವಾಗಿ ಅದನ್ನು ಆಡರಿಸುವನಲ್ಲದೆ ಫಲಪದವನ್ನು ಪಡೆಯಬೇಕೆಂದಲ್ಲ (೭೬). ಅವನು

ಇದ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ, ಪಡೆದು ಪಾತಕಿಯಲ್ಲ, ಯಾವ ಸಂಗವೂ ಇಲ್ಲದ ನಿಜೈಕ್ಯನವನು (೭೭). ಸತ್ತಬಳಿಕವೆ ಮುಕ್ತಿದೊರೆಯುವದು ಎಂದು ಕೆಲವರು ಅನ್ನುವರು. ಅದು ವಚನಕಾರರಿಗೆ ಸಮ್ಮತವಿಲ್ಲ. ಇದ್ದಾಗ ಜೀವನ್ಮುಕ್ತನಾಗದವನು ಸತ್ತಬಳಿಕ ಮುಕ್ತನಾಗುವ ಬಗೆ ಹೇಗೆ? ಸಾಯದೆ ನೋಯದೆ ಸ್ವತಂತ್ರನಾಗಿ ಸಂದು ಭೇದವಿಲ್ಲದಿರ್ಪನೆ ನಿಜಸಿದ್ಧನು (೭೦), ಎಂದು ವಚನಕಾರರ ಮತವು. ಹೀಗೆ, ನೇಹಹತ್ತದ ನಾಲಿಗೆಯಂತೆ, ನೀರುತಾಕದ ತಾವರೆಯಂತೆ ಜೀವನ್ಮುಕ್ತನಾದವನು ಮರಣಪಶ್ಚಾತ್ ಸಹಜವೆ ವಿದೇಹಮುಕ್ತಿಯನ್ನು ಪಡೆಯುವನು. ಪರಿಕಿಸಿನೋಡಿದರೆ, ಮುಕ್ತಿ ಎಂಬುದು ಒಂದು ವಿಶಿಷ್ಟವ್ಯಕ್ತಿಯು, ಅದು ಚಿತ್ತದ ಒಂದು ನಿಲವು ಹೊರತು ಅದೊಂದು ಬೇರೆ ಸ್ಥಾನವಿಶೇಷವಲ್ಲ. ಅದುದರಿಂದ ಸಾವು ಅದನ್ನು ಇಲ್ಲಿಯೆ, ಇದ್ದಲ್ಲಿಯೆ, ಸಮ್ಮೊಳಗೆಯೆ, ಪಡೆಯಬಲ್ಲೆವು. ಆತ್ಮನಿಶ್ಚಯವಾದಲ್ಲಿಯೆ ಕೈಲಾಸ, ಮುಂದೊಂದು ಕಲ್ಪಿಸದೆ ಹಿಂದೊಂದು ಭಾವಿಸದೆ ಸಲೆ ಸಂದಿದ್ದಾಗಳೆ ಕೈಲಾಸ (೭೫), ಭಾವಜಯಕೆಗಳನತಿಗಳೆದು ವರ್ತಿಸುವುದೆ ಮುಕ್ತಿ (೭೭), ಈ ಮುಂತಾದ ನುಡಿಗಳು ಮೇಲಿನ ಮಾತನ್ನು ಸ್ಪಷ್ಟವಾಗಿ ಹೇಳುವವು.

೫೮. ಕಾಯಿಯು ಬಲಿತು ಹಣ್ಣಾಗಬೇಕು, ಎಂಬ ವಿಧಿ ಇದ್ದಂತೆ ಜೀವನ್ಮುಕ್ತಿಯು ವಿದೇಹಮುಕ್ತಿಯಲ್ಲಿ ಕೊನೆಗಾಣಬೇಕು ಎಂಬುದು ಸಿದ್ಧವಾದ ಸಂಗತಿಯು. ಆದುದರಿಂದ ಪ್ರತ್ಯೇಕವಾಗಿ ವಿದೇಹಮುಕ್ತಿಯ ವಿಚಾರಮಾಡುವ ಕಾರಣವಿಲ್ಲ. ಜೀವನ್ಮುಕ್ತಿಯನ್ನು ಹೇಗೆ ಪಡೆಯಬೇಕು ಇದನ್ನು ತಿಳಿದುಕೊಂಡರೆ ಸಾಕು. ಸೊಂಡೆಹಿಡಿದು ಎಳೆದರೆ ಆನೆಯು ತಾನೇ ಬರುವಂತೆ ಜೀವನ್ಮುಕ್ತಿಯನ್ನು ದೊರಕಿಸಿದ ಬಳಿಕ ವಿದೇಹಮುಕ್ತಿಯು ತಾನೇ ಕೈವಶವಾಗುವದು. ಇದುವರೆಗೆ ಆದ ವಿವೇಚನೆಯಲ್ಲಿ ಅಲ್ಲಲ್ಲಿ ಮುಕ್ತಿಸಾಧನಗಳ ಉಲ್ಲೇಖವು ಅಲ್ಪಸ್ವಲ್ಪ ಆಗಿದೆ. ಮನುಷ್ಯನು ಕಾಮನೆಗಳನ್ನು ಬಿಟ್ಟು ಜಿತೇಂದ್ರಿಯನಾಗಲಿಕ್ಕೆಬೇಕು, ನಾನುತಾನೆಂಬಹಂಕಾರವನ್ನು ತ್ಯಜಿಸಿ ಆತ್ಮಸ್ವರೂಪವನ್ನು ಅರಿತು ಕೊಳ್ಳಲು ಯತ್ನಿಸಲಿಕ್ಕೆಬೇಕು, ಭಕ್ತಿಯುಕ್ತನಾಗಲಿಕ್ಕೆಬೇಕು, ಈ ಮುಂತಾದ ಹಲಕೆಲವು ಸಾಧನವಿಷಯಕ ಸಂಗತಿಗಳು ಬಂದಿವೆ. ಇವೆಲ್ಲವುಗಳನ್ನು ವಚನಕಾರರು ಹೇಳೇಹೇಳಿರುವರು. ಆದರೆ ಅವರು ಎಲ್ಲಕ್ಕೂ ಹೆಚ್ಚು ಮಹತ್ವಕೊಟ್ಟದ್ದು ಸರ್ವಾರ್ಪಣ ಅಥವಾ ಆತ್ಮನಿವೇದನ, ಎಂಬ ಸಾಧನಕ್ಕೆ. ಯಾಕಂದರೆ, ಅದು ಎಲ್ಲ ಸಾಧನಮಾರ್ಗಗಳನ್ನು ಒಂದೇ

ತೆಕ್ಕೆಯಲ್ಲಿ ಹಿಡಿದು ಸಮನ್ವಯಿಸುವದು. ಚಿಕ್ಕಣವಾದ ಜೀವನು ಚಿದ್ವ್ಯಾಪಕವಾದ ಪರಮಾತ್ಮನಿಗೆ ಒಮ್ಮೆಲೆ ತನ್ನ ಎಲ್ಲ ಶಕ್ತಿ–ಯುಕ್ತಿ–ಭಕ್ತಿಗಳನ್ನು, ತನು–ಮನ–ಭಾವಗಳನ್ನು, ಪ್ರಾಣ–ಕರಣ–ಕರ್ತುಗಳನ್ನು ಅರ್ಪಿಸಿ ಅವನಿಗೆ ಪೂರ್ಣ ಶರಣಾಗತನಾಗುವುದೆ ಸರ್ವಾರ್ಪಣವೆನಿಸುವದು. ಹೀಗೆ ಮಾಡುವುದರಿಂದ ಸಾಧಕನ ಪ್ರತಿಯೊಂದು ಕರ್ಮವು ಪ್ರತಿ ಕ್ಷಣಕ್ಕೆ ಅವನನ್ನು ಮುಕ್ತಿಯ ಕಡೆಗೆ ಒಯ್ಯುವದು. ಅವನಿಗೆ ಮುಂದೆ ಎಲ್ಲೆಲ್ಲಿಯೂ ಪರಮಾತ್ಮನ ಸಾಕ್ಷಾತ್ಕಾರವಾಗುವದು. ಪರಮಾತ್ಮನಿಗೆ ಕಾಯವನ್ನರ್ಪಿಸಿದರೆ ಕರ್ಮವಿಲ್ಲ, ಜೀವವನ್ನರ್ಪಿಸಿದರೆ ಜನಿತವಿಲ್ಲ, ಭಾವವನ್ನರ್ಪಿಸಿದರೆ ಭ್ರಮೆ ಇಲ್ಲ, ಅರಿವನರ್ಪಿಸಿದರೆ ಅಜ್ಞಾನವಿಲ್ಲ, ಹೀಗೆ ಎಲ್ಲ ಮಾಯಾಪ್ರಪಂಚವನತಿಗಳೆದು ಜ್ಯೋತಿಯುಂಡ ತೈಲದಂತೆ, ಸರ್ವಾರ್ಪಣ ಮಾಡಿದ ಸಾಧಕನು ಅತೀತನಾಗಬಲ್ಲನು (೨೨೦). ತನ್ನ ಇಂದ್ರಿಯಗಳಿಗೆ ಎದುರಾದ ಎಲ್ಲ ಸುಖಗಳನ್ನು ಪರಮಾತ್ಮನಿಗೆ ಅರ್ಪಿಸಿ ಕೇವಲ ಪ್ರಸಾದ ಭಾವದಿಂದ ಕೊಂಬ ಪರಮಾತ್ಮಭೋಗೋಪಭೋಗಿಯಾದ ಸಾಧಕಾಗ್ರಣಿಯು ಯಾವ ಸುಖಗಳಲ್ಲಿಯೂ ಸಕ್ತನಾಗಲಾರನು (೨೨೧). ಪೂರ್ಣಾರ್ಪಣಮಾಡಿದವನಿಗೆ ತನ್ನದೆಂಬುದೇನೂ ಉಳಿಯಲಾರದು. ಆದುದರಿಂದ ಅವನು ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ (೧೯೫). ಅವನು ತನ್ನ ಯೋಗಕ್ಷೇಮದ ಭಾರವನ್ನು ಸಹ ಪರಮಾತ್ಮನ ಮೇಲೆಯೆ ಹಾಕಿರುವನು (೨೦೪). ತನ್ನ ದೇಹದಲ್ಲಿಯ ಸರ್ವೇಂದ್ರಿಯಗಳ ಮುಖದಲ್ಲಿ ಪರಮಾತ್ಮನನ್ನೆ ಸ್ಥಾಪಿಸಿ ಶರಣನು ತಾನು ಕೇವಲ ಸೇವಾನಿರತನಾಗಿರುವನು (೨೦೫). ಹೀಗೆ ಕ್ಷುದ್ರ ವ್ಯಕ್ತಿತ್ವವೆಂಬುದು ನಷ್ಟವಾದ ಬಳಿಕ ಸರ್ವ ಸಂಕಲ್ಪಗಳ ನಾಶವಾಗಿ ಸರ್ವಾರ್ಥಸಿದ್ಧಿಯು ಆದಂತೆಯೆ ಸೈ (೨೧೦). ಅಂಥವನು ದೇಹವನ್ನೆ ದೇಗುಲಮಾಡಿಕೊಂಡು ತನ್ನ ಭಾವಪೀಠದಲ್ಲಿ ದೇವರನ್ನು ಪೂಜಿಸಬಲ್ಲನು (೨೧೨). ಈ ಸರ್ವಾರ್ಪಣಭಾವವು ಪರಮಾತ್ಮೈಕ್ಯದಲ್ಲಿ ಪರಮಾವಧಿಯನ್ನು ಮುಟ್ಟುವದು. ಆಗ ಪರಮನ ನೆನಹೇ ನೆನಹು ಆಗಿ ಸಾಧಕನು ಪರಮಸುಖದಲ್ಲಿ ಸುಖಿಸುವನು (೨೧೫). ದೇಹವು ಅತ್ಮನಲ್ಲಿ, ಮನವು ಜ್ಞಾನದಲ್ಲಿ, ಭಾವವು ನಿರ್ಭಾವದಲ್ಲಿ, ಸಮತೆಯು ಶಾಂತಿಯಲ್ಲಿ ಜೆರೆತುಹೋದ ಸರ್ವಾರ್ಪಣಭಾವಿಯು ನಿತ್ಯಮುಕ್ತನಾಗಿ ನಲಿನಲಿದಾಡುವನು (೨೧೬).

೫೯. ಸರ್ವಾರ್ಪಣ ಮಾಡುವುದು, ಶರಣು ಹೋಗುವುದು, ಅಥವಾ ಆತ್ಮನಿವೇದನೆ, ಎಂಬ ಕೈವಲ್ಯ ಸಾಧನವನ್ನು ವಚನಕಾರರು

ಮಿಕ್ಕ ಎಲ್ಲ ಸಾಧನಗಳ ಶಿರೋಭಾಗದಲ್ಲಿ ಇಡುವರು. ಎಲ್ಲ ಬೇರೆ ಸಾಧನಗಳು ತದ್ಗತವಾಗಿರುವವು, ಅದರ ಹೊಟ್ಟೆಯಲ್ಲಿಯೆ ಬರುವವು. ಆದರೆ ಅವುಗಳ ಸ್ವರೂಪವೂ ಚನ್ನಾಗಿ ತಿಳಿಯಬೇಕೆಂದು ಜ್ಞಾನ, ಭಕ್ತಿ, ಕರ್ಮ, ಮತ್ತು ಧ್ಯಾನಯೋಗ ಈ ಸಾಧನಗಳ ಬಗ್ಗೆ ವಚನಕಾರರ ಅಭಿಪ್ರಾಯವು ಏನಿರುವದು ಇದನ್ನು ಇನ್ನು ಇಲ್ಲಿ ಹೇಳುವ ವಿಚಾರವಿದೆ. ಸಾಧಕನು ಸರ್ವಾರ್ಪಣಮಾಡಿ ತನ್ನ ಸಾಧನವನ್ನು ಪ್ರಾರಂಭಿಸಿದರೂ ಪ್ರತಿಯೊಬ್ಬ ವ್ಯಕ್ತಿಗತವಾದ ಬುದ್ಧ್ಯಾದಿ ಶಕ್ತಿಗಳು ಹೆಚ್ಚುಕಡಿಮೆ ಪ್ರಮಾಣದಲ್ಲಿ ವಿಕಾಸಹೊಂದಿರುವುದರಿಂದ ಆಯಾ ಸಾಧಕನು ತನ್ನಲ್ಲಿ ಪ್ರಗಲ್ಭಸ್ಥಿತಿಗೆ ಬಂದ ಶಕ್ತಿಯನ್ನೆ ತನ್ನ ಸಾಧನದಲ್ಲಿ ಹೆಚ್ಚು ಉಪಯೋಗಿಸುವದು ಸ್ವಾಭಾವಿಕವು. ಈ ರೀತಿ, ಮೇಲೆ ಹೇಳಿದ ನಾಲ್ಕು ಮಾರ್ಗಗಳಿಗೆ ಬೇಕಾಗುವ ಶಕ್ತಿಗಳೆಂದರೆ ಅನುಕ್ರಮವಾಗಿ ಜ್ಞಾನಮಾರ್ಗಕ್ಕೆ ಬುದ್ಧಿ, ಭಕ್ತಿಮಾರ್ಗಕ್ಕೆ ಭಾವನಾಶಕ್ತಿ, ಕರ್ಮಮಾರ್ಗಕ್ಕೆ ಕ್ರಿಯಾಸಾಮರ್ಥ್ಯ, ಮತ್ತು ಧ್ಯಾನ ಮಾರ್ಗಕ್ಕೆ ಚಿತ್ತದ ಏಕಾಗ್ರತೆ. ಈ ಶಕ್ತಿಗಳು ಹೆಚ್ಚುಕಡಿಮೆ ಇದ್ದಂತೆ ಆಯಾ ಸಾಧಕನು ತನಗೆ ಅನುಕೂಲವಿದ್ದ ಶಕ್ತಿಗಳ ಮುಖಾಂತರ ಸಿದ್ಧಿಯನ್ನು ಪಡೆಯಲೆತ್ನಿಸುವನು. ಆದುದರಿಂದ ಸಹಜವಾಗಿಯೆ ಸರ್ವಾರ್ಪಣ ಮಾಡಿದ ಶರಣರಲ್ಲಿ ಒಬ್ಬನು ಜ್ಞಾನಮಾರ್ಗಿಯಿರಬಹುದು, ಇನ್ನೊಬ್ಬನು ಭಕ್ತಿಮಾರ್ಗಿಯಿರಬಹುದು, ಮತ್ತೊಬ್ಬನು ಕರ್ಮಮಾರ್ಗಿಯಿರಬಹುದು, ಮತ್ತಿನ್ನೊಬ್ಬನು ಧ್ಯಾನಮಾರ್ಗಿ ಇರಬಹುದು. ಆಯಾ ಶರಣರು ಮಿಕ್ಕ ಶಕ್ತಿಗಳನ್ನು ಉಪಯೋಗಿಸುವುದಿಲ್ಲ, ಎಂದು ಯಾರೂ ಅರ್ಥವನ್ನು ಮಾಡಕೂಡದು. ಅವರು ಪ್ರಾಧಾನ್ಯವಾಗಿ ಈ ಶಕ್ತಿಗಳನ್ನು ಉಪಯೋಗಿಸುವರು, ಎಂಬುದೇ ಇದರ ಅರ್ಥವು. ಈಗ ಆ ಎಲ್ಲ ಮಾರ್ಗಗಳ ಪ್ರತ್ಯೇಕ ವಿವೇಚನೆಯನ್ನು ಸ್ವಲ್ಪ ಮಾಡುವದು ಅವಶ್ಯವು. ಮೊದಲು ಜ್ಞಾನ ಮಾರ್ಗವನ್ನು ನೋಡುವ.

೬೦. ಜ್ಞಾನಮಾರ್ಗದಲ್ಲಿ ಮುಖ್ಯವಾಗಿ ಬೇಕಾದುದು ಆತ್ಮಾನಾತ್ಮ ವಿವೇಕವು, ನಿಶ್ಚಿತ ನಿಃಸಂಶಯ ಜ್ಞಾನವು. ಇದು ತೀವ್ರ ಅಥವಾ ಕುಶಾಗ್ರಬುದ್ಧಿ ಇದ್ದವರಿಗೆಯೆ ಬೇಗ ಸಾಧ್ಯವಾಗುವದು. ಒಮ್ಮೆ ಈ ಬಗೆಯ ಜ್ಞಾನವಾದ ಬಳಿಕ ಅದನ್ನು ಸ್ಥಿರವಾಗಿಟ್ಟುಕೊಂಡು ಅದರಲ್ಲಿಯೆ ನೆಲೆಯಾಗಿ ತಮ್ಮ ಚಿತ್ತವನ್ನಿಡುವದು, ಇದು ಎರಡನೆಯ ಮೆಟ್ಟಲು. ಈ ಜ್ಞಾನವಾಗುವ ಪೂರ್ವದಲ್ಲಿ ತತ್ಸಾಧನವಾದ ಬುದ್ಧಿಯನ್ನು ನಿರ್ಮಲಗೊಳಿಸಲಿಕ್ಕೆ ಬೇಕು. ಅಹಂಕಾರ, ಕುಕಲ್ಪನೆ, ವಿಭ್ರಾಂತಿಕರ್ಕ, ಕಾಮನೆ

ಮುಂತಾದವುಗಳನ್ನೆಲ್ಲ ಹೊರಗೆ ಹಾಕಿ ಬುದ್ಧಿಯನ್ನು ಶುದ್ಧೀಕರಿಸಿ, ಸಾಧಕನು ಕೇವಲ ಸತ್ಯೋಪಾಸಕನಾಗುವದು ಅವಶ್ಯವು. ಇಲ್ಲದಿದ್ದರೆ ಆತ್ಮ ನಿಶ್ಚಯವಾಗದು ಮತ್ತು ಆತ್ಮನಿಶ್ಚಯವಾಗದಿದ್ದರೆ ಕೈವಲ್ಯವು ಕೈಸೇರಲರಿಯದು (೨೪೦). ಕೊನೆಗೆ ಬುದ್ಧಿಯಿಂದ ತಿಳಿದುಕೊಂಡ ಜ್ಞಾನದ ಅನುಭವವು ಆತ್ಮನಿಗಲ್ಲದೆ ಇನ್ನಾರಿಗೂ ಬರಲರಿಯದು; ಯಾಕಂದರೆ ಮದ್ದಾನೆಯೆ ಮದ್ದಾನೆಯನ್ನು ಹಿಡಿಯುವುದಲ್ಲದೆ ಎಲ್ಕ್ಕವರಿಗೆ ಅಸಾಧ್ಯ, ಹಾಗೆ ಅರೂಪನಾದ ಆತ್ಮನೆ ಅರೂಪಪರಮಾತ್ಮನನ್ನು ಅನುಭವಿಸಬಲ್ಲನು (೨೨೪). ತನ್ನಲ್ಲಿ ತಾನೇ ಪ್ರತ್ಯಕ್ಷಾನುಭವದಿಂದ ಜ್ಞಾನವನ್ನು ತಿಳಿದುಕೊಂಡು, ಆ ಜ್ಞಾನವು ತಾನೇ ಎಂಬುದನ್ನು ನಿಶ್ಚಯಿಸಿ, ಅಲ್ಲಿಯೆ ಇರುವ ಸಾಮರ್ಥ್ಯವು ಬಂದಿತೆಂದರೆ ಅದೇ ಆತ್ಮಜ್ಞಾನವು (೨೨೭). ವಾಚಾತೀತ, ಮನೋತೀತ, ವರ್ಣಾತೀತ, ಅಕ್ಷರಾತೀತ ಪರಮಾತ್ಮತತ್ವವೆ ತಾನು ಎಂಬುದನ್ನು ಬುದ್ಧಿಯಿಂದ ಅರಿದು ಅಲ್ಲಿ ಸ್ಥಿರವಾಗುವುದೆ ಸ್ವರೂಪಜ್ಞಾನವು (೨೩೬). ಅನೇಕ ವಿದ್ಯೆಗಳನ್ನು ಕಲಿತು ಅಕ್ಷರಾಭ್ಯಾಸಮಾಡಿ ಹೊತ್ತಿಗೆಗಳನ್ನು ತಿರುವಿಹಾಕಿದರೆ ಅದು ನಿಜಜ್ಞಾನವೆನಿಸದು (೨೩೭). ಅಥವಾ ಪರಮಾತ್ಮನ ಕೇವಲ ಬೌದ್ಧಿಕಜ್ಞಾನವೂ ಜ್ಞಾನವೆನಿಸದು. ಆತ್ಮಜ್ಞಾನವನ್ನು ಮಾಡಿಕೊಳ್ಳಲೆತ್ನಿಸದೆ ದೇವರನ್ನು ಅತ್ತಿತ್ತ ಹುಡುಕಾಡುವುದು ವ್ಯರ್ಥವು (೨೪೧). ಆತ್ಮನಿಗೆ ಜ್ಞಾನವಿಲ್ಲದಿದ್ದರೆ ಅವನು ಕರ್ಮಪಾಶಗಳನ್ನು ನಾಶಪಡಿಸಲಾರನು (೨೪೨). ಕಮಲದ ಎಸಳುಗಳಿಂದ ಆನೆಯನ್ನು ಕಟ್ಟುವದು, ತರಗೆಲೆಗಳ ರಾಶಿಯಿಂದ ಬೆಂಕಿಯನ್ನು ತಡೆಯುವದು, ಮಂಜಿನಿಂದ ಸೂರ್ಯನನ್ನು ಮುಸುಕುವದು ಎಷ್ಟು ಸಾಧ್ಯವೊ ಅಷ್ಟೇ ಆತ್ಮಜ್ಞಾನಿಯನ್ನು ಪಾಪಪುಣ್ಯಾದಿ, ಸುಖದುಃಖಾದಿ, ಜಯಾಪಜಯಾದಿ ದ್ವಂದ್ವಗಳು ಕಟ್ಟುವದು ಇಲ್ಲವೆ ಕೆಡಿಸುವದು ಸಾಧ್ಯವು (೨೪೫). ಒಮ್ಮೆ ಜ್ಞಾನ ನಿಶ್ಚಯವಾಯಿತೆಂದರೆ ಈ ಭವದ ಬಂಧಕತ್ವವನ್ನು ನೀಗಿದಂತಾಯಿತು, ಬಳಿಕ ಸಾಧಕನಿಗೆ ಯಾವ ಭಯವೂ ಇಲ್ಲ (೨೪೬). ದೇಹಭಾವವಳಿದು, ಜೀವಭಾವವು ನಷ್ಟವಾಗಿ, ಭಕ್ತಿಯಳವಟ್ಟು, ಅರಿವು ತೋರಿ, ಕುರುಹು ನಷ್ಟವಾಯಿತೆಂದರೆ ಮಾಯೆ ಹಿಂಗುವದು. ಮಾಯೆ ಹಿಂಗಿದಲ್ಲಿ ಕೈವಲ್ಯ ಕೈವಶವಾಗುವದು (೨೪೮). ಆ ಜ್ಞಾನವು ಜ್ಯೋತಿಯಂತಿರುವದು. ಬೆಳಗಿನೊಳಗಣ ಮಹಾಬೆಳಗದು. ಅದು ತಿಳಿದಲ್ಲಿ ಅದೇ ಆತ್ಮವಸ್ತುವು. ಆ ಅಖಂಡ ಬೆಳಗಿನೊಳಗೆ ಇರಬಲ್ಲರೆ ಅದೇ ಮುಕ್ತಿ (೨೫೧).

೬೧. ಜ್ಞಾನಮಾರ್ಗಿಯಾದ ಶರಣನು ಮುಖ್ಯವಾಗಿ ತನ್ನ ಶುದ್ಧ ಬುದ್ಧಿಯನ್ನವಲಂಬಿಸಿದರೆ ಸರ್ವಾರ್ಪಣಮಾಡಿದ ಭಕ್ತನು ತನ್ನ ಶುದ್ಧ

ಭಾವಶಕ್ತಿಯನ್ನೆ ಪ್ರಧಾನವಾಗಿ ನೆಮ್ಮಿ ಮುಕ್ತಿಪಥದಲ್ಲಿ ಸಾಗುವನು. ಬೇರೆ ಬೇರೆ ವಸ್ತುಗಳಲ್ಲಿ ಮತ್ತು ವಿಷಯಗಳಲ್ಲಿ ಹರಿದು ಹಂಚಿಹೋದ ತನ್ನ ಪ್ರೇಮಭಾವವನ್ನು ಒಂದೇ ಒಂದು ಪರಮಾತ್ಮನಲ್ಲಿ ಅನನ್ಯಭಾವದಿಂದಲೂ ನಿಷ್ಕಾಮಬುದ್ಧಿಯಿಂದಲೂ ಏಕೀಕರಿಸುವುದೆ ಪರಮಭಕ್ತಿಯ ಮುಖ್ಯ ಲಕ್ಷಣವು. ಮುಕ್ತಿಗೆ ಆತ್ಮಜ್ಞಾನವು ಯಾವಾಗಲೂ ಅವಶ್ಯವು. ಜ್ಞಾನಮಾರ್ಗಿಯು ಅದನ್ನು ತನ್ನ ಶುದ್ಧ ವಿಮರ್ಶಾಶಕ್ತಿಯಿಂದ ಪಡೆದರೆ, ಭಕ್ತನು ನಿರ್ಹೇತುಕ ಪ್ರೇಮಭಾವದಿಂದ ಅದನ್ನು ಪಡೆಯುವನು. ವಚನಕಾರರು ಭಕ್ತಿಯ ಮಹತ್ವವನ್ನು ಬಹಳವಾಗಿ ಕೊಂಡಾಡಿರುವರು. ಬ್ರಹ್ಮ ಅದ್ವೈತ, ಶೂನ್ಯ ಎಂದು ಮುಂತಾಗಿ ಬರಿಯ ಬಾಯಿಂದ ನುಡಿದು ದುಃಖಿಯಾಗುವದಕ್ಕಿಂತ ಸಜ್ಜನಸಂಗದಿಂದ ಸದ್ಭಕ್ತನಾಗುವದು ಲೇಸು (೨೫೩). ಹಿರಿದಾದ ಆನೆಗೆ ಕಿರಿದಾದ ಅಂಕುಶವು ಸಾಕಾಗುವಂತೆ, ಕಾರ್ಗತ್ತಲೆಯನ್ನು ಒಂದೇ ಕಿರಣವು ಕಳೆಯುವಂತೆ, ಮರಹಿನ ರಾಶಿಯನ್ನು ಪರಮಾತ್ಮನ ನೆನಹು ನಾಶಪಡಿಸುವದು (೨೫೪), ಪರಮಾತ್ಮನ ನೋಟವು ಅನಂತಸುಖವನ್ನು ಕೊಡುವದು, ಅವನ ಕೂಟವು ಪರಮಸುಖವನ್ನು ಅಳವಡಿಸುವದು (೨೫೬), ಎಂದು ವಚನಕಾರರು ಹೇಳಿರುವರು. ಪರಮಾತ್ಮನು ತನ್ನ ಭಕ್ತರನರಸಿ ಬರುವನು (೨೫೮) ಅವನು ಎಲ್ಲೆಲ್ಲಿಯೂ ವ್ಯಾಪ್ತನು, ಮಾಡುವುದೆಲ್ಲವೂ ಅವನಸೇವೆ, ನುಡಿವುದೆಲ್ಲವೂ ಅವನ ಗೀತ, ಎಂದು ಅವನಲ್ಲಿ ಭಾವವನ್ನಿಟ್ಟು ಭಕ್ತನು ಸಾಗಿದರೆ ಅವನಿಗೆ ಸಮಸ್ಥಿತಿಯೂ ಜ್ಞಾನವೂ ಪ್ರಾಪ್ತವಾಗುವವು. ಭಕ್ತನು ಪೂಜೆಪುರಸ್ಕಾರಾದಿಗಳನ್ನು ಮಾಡುವಾಗ ಪ್ರತೀಕವನ್ನು ಉಪಯೋಗಿಸುವದುಂಟು. ಆದರೆ ಅದು ಪ್ರತೀಕವು ಮಾತ್ರ ಎಂಬುದನ್ನು ಯಾವಾಗಲೂ ಮರೆಯಕೂಡದು.. ಯಾಕಂದರೆ, ದೇವರು ಆ ಪ್ರತೀಕದಲ್ಲಿರದೆ ಅದನ್ನು ನೋಡುವ ಬಳಗಣ ಭಾವದಲ್ಲಿರುವನು. ಅವನು ನಿರಾಳ, ನಿಃಶೂನ್ಯ, ನಿರಾಕಾರನೆಂದು ತಿಳಿದು, ಅವನ ಕುರುಹೆಂದು ಯಾವದೊಂದು ವಸ್ತುವನ್ನು ಪೂಜಿಸಿದರೆ ಮಾತ್ರ ಅದು ಉಪಯುಕ್ತವು (೨೬೬) ಇಲ್ಲದಿದ್ದರೆ ಕಲ್ಲು ಮರ ನೀರುಗಳು ದೇವರೆಂದು ಪೂಜಿಸಿ ನೀವೂ ಕಲ್ಲು ಮರ ನೀರಾಗುವಿರಿ, ಎಂದು ಅಂಧವಿಶ್ವಾಸಿಗಳಿಗೆ ವಚನಕಾರರು ಎಚ್ಚರಕೊಟ್ಟಿರುವರು. ನಿಷ್ಠೆಬಲಿದು, ಭಾವತುಂಬಿ, ನಂಬುಗೆ ಇಂಬುಗೊಂಡು ಭಜನ ಪೂಜನ ಜಪ ನಾಮಸ್ಮರಣಾದಿಗಳನ್ನು ಮಾಡಬೇಕಲ್ಲದೆ (೨೭೧) ಮಣಿಯನೆಣಿಸಿ ಕಣಿಯ ಪೂಜಿಸಿ ದಿನವ ಕಳೆಯಬಾರದು. ಕ್ಷಣವಾದರೂ ನಿಜದ ನೆನಹೇ ಬೇಕು. (೨೭೫), ಎಂದು ವಚನ

ಕಾರರು ಸ್ಪಷ್ಟವಾಗಿ ಹೇಳಿರುವರು. ಭಕ್ತನು ಕೇವಲ ನಿಷ್ಕಾಮನಾಗಿ ಭಕ್ತಿಯನ್ನು ಮಾಡತಕ್ಕದ್ದು. ದೇವರು ಫಲಪದವನ್ನು ಕೊಟ್ಟರೂ ಭಕ್ತರು ಅದನ್ನು ಬಲ್ಲರು, ಯಾಕಂದರೆ ತಾವೇ ತಮ್ಮ ಸರ್ವಸ್ವವಾದ ತನುಮನ ಧನಗಳನ್ನು ಅರ್ಪಿಸಿದ ಬಳಿಕ ಅವರು ದೇವರಿಂದ ಅಪೇಕ್ಷಿಸುವುದಾದರೂ ಏನು. (೨೭)? ಭಕ್ತನು ಪರಮಾತ್ಮನಿಗಾಗಿ ಎಳೆ ಕರುವಿನಂತೆ ಬಳಲುವನು ಮತ್ತು ತನ್ನ ಮನಕ್ಕೆ ದೇವರು ನೆಲೆಮನೆಯಾಗಬೇಕೆಂದು ಪ್ರಾರ್ಥಿಸುವನು (೨೮). ವಾರ ತಿಥಿ ಮುಂತಾದ ಮುಹೂರ್ತಗಳ ಹಾದೀ ನೋಡದೆ ಹಗಲಿರುಳು ಯಾವತ್ತೂ ಪರಮಾತ್ಮನನ್ನು ಸ್ಮರಿಸುವದೆ ನಿಜ ಭಕ್ತಿಯು (೨೯). ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಇಷ್ಟ ದೇವತೆಯ ಮೂರುತಿ ತುಂಬಿ, ಕಿವಿಗಳಲ್ಲಿ ದೇವರ ಕೀರ್ತಿ ತುಂಬಿ, ಭಕ್ತನು ಶ್ರೀಚರಣಕಮಲದ ಬಂಡನುಂಬ ತುಂಬಿಯಾಗಿ ಸದೈವ ಸುಖಿಯಾಗಿರುವನು (೩೦). ದೇವರೇ ತಾಯಿ, ದೇವರೇ ತಂದೆ. ದೇವರೇ ಬಂಧು, ದೇವರೇ ಬಳಗ, ದೇವರೇ ಮಿತ್ರ, ದೇವರೇ ಸರ್ವಸ್ವ, ಅವನೇ ಹಾಲವ್ವಲಿ, ನೀರಲದ್ದಲಿ, ಎಂದು ಭಕ್ತನು ಪರಮಾತ್ಮಪಾದಕ್ಕೆರಗುವನು. (೩೭) ಪೂಜ್ಯ ಪೂಜಕನ, ಸೇವ್ಯ ಸೇವಕನ ಐಕ್ಯವೆ ಭಕ್ತನ ಪರಮಾವಧಿಯ ಧ್ಯೇಯವು. ಆಗ, 'ತನುಮನಪ್ರಾಣಗಳೆಲ್ಲ ನಿನ್ನ ರೂಪಾದ ಬಳಿಕ, ಅರಿವು ಸ್ವಯವಾದ ಬಳಿಕ, ನಾನು ಯಾರನ್ನು ಇದಿರಿಟ್ಟು ಪೂಜಿಸಬೇಕು? ಆಗ ನೀನೇ ನೀನಾದುದರಿಂದ ಉಪಚಾರವೆಲ್ಲ ಅಳಿದು ಹೋಗುವದು', ಎಂದು ಭಕ್ತನು ದೇವರನ್ನು ಸಂಬೋಧಿಸುವನು (೩೮) ಈ ಸ್ಥಿತಿಯಲ್ಲಿ ಆತ್ಮಜ್ಞಾನವಾಗಿ ಭಕ್ತಿನಿಷ್ಠೆ ಮತ್ತು ಜ್ಞಾನನಿಷ್ಠೆಗಳೆರಡೂ ಒಂದೇ ಆಗಿ, ಭಕ್ತ ಜ್ಞಾನಿಯು ಅಥವಾ ಜ್ಞಾನಿ ಭಕ್ತನ ನಿಲವು ಸರಿಸಮವಾಗಿ ಪರಮಾನಂದದಾಯಿಯಾದ ಮುಕ್ತಿಪದವು ಪ್ರಾಪ್ತವಾಗುವದು.

೬೨. ಪರಮಭಕ್ತನು ತನ್ನ ನಿರ್ಹೇತುಕ ಪ್ರೇಮಾತಿಶಯದಿಂದ ದೊರಕಿಸುವ ಆತ್ಮಜ್ಞಾನವನ್ನಿ ಕರ್ಮಯೋಗಿಯು ನಿರಹಂಕಾರಿಯಾಗಿ, ಫಲಾಶಾರಹಿತವಾದ ನಿಷ್ಕಾಮ ಕರ್ತವ್ಯಕರ್ಮವನ್ನು ಸತತ ಮಾಡುವುದರಿಂದ ಪಡೆಯುವನು. ಇಲ್ಲಿ ಕರ್ಮಿಯಾದರೂ ಸರ್ವಾರ್ಪಣ ಮಾಡಿದವನಿಗೆ ಇರುವುದರಿಂದ ಸ್ವಸಂಕಲ್ಪವೆಂಬುದೇನೂ ಅವನಲ್ಲಿ ಉಳಿದಿರುವುದಿಲ್ಲ. ಪರಮಾತ್ಮಸಂಕಲ್ಪಗಳನ್ನೆ ಅವನು ಕೇವಲ ನಿಮಿತ್ತಮಾತ್ರನಾಗಿ ಮಾಡುತ್ತಿರುವನು. ನಾಟಕದಲ್ಲಿ ಸೂತ್ರಧಾರನ ಅಪ್ಪಣೆಯ ಮೇರೆಗೆ ಎಲ್ಲ ನಟರೂ ಕುಣಿಯುವಂತೆ ಕರ್ಮಯೋಗಿಯು ವಿಶ್ವರಂಗದಲ್ಲಿ ಸೂತ್ರಾತ್ಮನ

ಆಣತಿಯ ಮೇರೆಗೆ ತನ್ನ ಮಣಿಹವನ್ನು ಮಾಡಿ ಕಾಲಬಂದೊಡನೆ ಮಾಯವಾಗಲನುವಾಗುವನು. (೩೩. ಅ) ಜ್ಞಾನಮಾರ್ಗಿಗೆ ಶುದ್ಧ ಬುದ್ಧಿ, ನಿಶ್ಚಿತ ಜ್ಞಾನ, ಆ ಜ್ಞಾನದಲ್ಲಿ ಸ್ಥಿರವಾದ ನಿಲವು, ಇವು ಅವಶ್ಯವಿದ್ದಂತೆ, ಭಕ್ತನಿಗೆ ನಿರ್ಮಲ ಕೋಮಲ ಅಂತಃಕರಣ, ಶುದ್ಧ ಭಾವ, ಮತ್ತು ಅನನ್ಯ ನಿರ್ಹೇತುಕಪ್ರೇಮ, ಇವು ಅವಶ್ಯವಿದ್ದಂತೆ, ಕರ್ಮಯೋಗಿಗೆ ಕಾರ್ಯಾ ಕಾರ್ಯದ ನಿರ್ಣಯಶಕ್ತಿ, ನಿರ್ಣೀತ ಕಾರ್ಯವನ್ನು ಮಾಡಿತೀರಬೇಕು ಎಂಬ ದೃಢ ಸಂಕಲ್ಪಶಕ್ತಿ, ಪರಮ ಉತ್ಸಾಹ, ನಿರಹಂಕಾರ, ಪೂರ್ಣ ನಿಷ್ಕಾಮತೆ, ಲೋಕಹಿತದೃಷ್ಟಿ ಇವು ಅವಶ್ಯವಾದವುಗಳು. ಸಾಮಾನ್ಯವಾಗಿ ಕರ್ಮವೆಂಬುದು ಬಂಧಕವಿದ್ದರೂ ಮೇಲೆ ಹೇಳಿದ ಗುಣಗಳಿಂದ ಯುಕ್ತವಾದ ಕರ್ಮಿಗೆ ಕರ್ಮವು ಬಾಧಕವಾಗದೆ ಸಾಧಕವೆ ಆಗುವದು. ಕ್ರಿಯೆಯೆಂಬುದು ಯಾರಿಗೂ ಎಂದಿಗೂ ಬಿಟ್ಟದ್ದಲ್ಲ, ಅದನ್ನು ತಪ್ಪಿಸಿದರೂ ಅದು ತಪ್ಪದು, ಮತ್ತು ಇಷ್ಟವು ಸಾಧ್ಯವಾಗಲಿಕ್ಕೆ ಅದು ಅವಶ್ಯವು, ಎಂದು ವಚನಕಾರರ ಮತವಿರುವದು. ಅರಿದೆನೆಂಬುವವರಿಗೆ ಸಹ ಪೂರ್ಣತ್ವ ಹೊಂದಲಿಕ್ಕೆ ಸತ್ಕ್ರಿಯಾಚಾರವೆ ಸಾಧನವು (೩೭). ಕರ್ಮಯೋಗವನ್ನು ಆಚರಿಸದಿದ್ದರೆ ನಿರ್ಮಲ ಸುಚಿತ್ತವನ್ನು ತಿಳಿದುಕೊಳ್ಳುವದು ಅಸಾಧ್ಯವು. ಸತ್ಕ್ರಿಯೋಪಚಾರವ ಮಾಡಲಾಗಿ ಜ್ಞಾನವಾಗುವದು, ಜ್ಞಾನವಾಗಿ ಸಮ್ಯಕ್ ಜ್ಞಾನವಾಗುವದು, ಅಲ್ಲಿಂದ ಮುಂದೆ ಐಕ್ಯಸ್ಥಿತಿಯು ಪ್ರಾಪ್ತವಾಗುವದು (೩೧). ಕರ್ಮಮಾಡಬೇಕು ಎಂಬ ಬುದ್ಧಿಯೊಡನೆ, ಎಂಥ ಪ್ರಸಂಗ ಬಂದರೂ ತನ್ನ ಕರ್ತವ್ಯವನ್ನು ಬಿಡಲಿಕ್ಕಿಲ್ಲ, ಎಂಬ ನಿಷ್ಠೆ ಬೇಕು. ಮಾಡುವಾಗ ಧೃತಿಗೆಟ್ಟು ಧಾತುಗೆಟ್ಟರೆ ಭವ ತಪ್ಪದು (೩೪). ಸಮಾಜದಲ್ಲಿ ಹೊಟ್ಟೆಗಾಗಿ ಮಾಡತಕ್ಕ ಉದ್ಯೋಗವನ್ನು ತಪ್ಪದೆ ಮಾಡುತ್ತಿರುವುದಕ್ಕೆ ವಚನಕಾರರು ಬಹಳ ಮಹತ್ವವನ್ನು ಕೊಟ್ಟಿರುವರು. ಬರಿಯ ಭಿಕ್ಷೆಯಿಂದ ಹೊಟ್ಟೇ ಹೊರಕೊಳ್ಳುವ ಉನ್ನತನವನ್ನು ಬಿಟ್ಟು ಯಾವ ಕಾಯಕಕ್ಕೂ ಮೇಲು ಕೀಳೆನ್ನದೆ ಪ್ರತಿಯೊಬ್ಬನು ತನ್ನ ಉದ್ಯೋಗವನ್ನು ನೇಮದಿಂದ ಮಾಡತಕ್ಕದ್ದು, ಎಂದು ವಚನಕಾರರ ಅಚಲವಾದ ಅಭಿಪ್ರಾಯವಿರುವದು. ಕಾಯಕ ತಪ್ಪಿದರೆ ಸೈರಿಸಬಾರದು (೩೭). ಗುರುಗಳಾದರೂ ಅವರಿಗೆ ಕಾಯಕದಿಂದಲೆ ಮುಕ್ತಿಯು ದೊರಕಬಲ್ಲದು (೩೪). ಸತ್ಯ ಶುದ್ಧ ಕಾಯಕದಲ್ಲಿ ಚಿತ್ತ ಸ್ವಚ್ಛಂದವಾಗಿರಬೇಕು, ನೇಮದ ಕೂಲಿಯು ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಾಗುವದು (೩೦), ಕಾರಿಯ ಸೊಪ್ಪಾದರೂ ಕಾಯಕದಿಂದ

ಬಂದುದು ದೇವರಿಗೆ ಅರ್ಪಿತವು (೫೨೨), ಎಂಬ ಅರ್ಥದ ವಚನಗಳು ಶುದ್ಧ ಮತ್ತು ನಿಯಮಿತ ಕಾಯಕದ ಮಹತಿಯನ್ನು ವರ್ಣಿಸುವವು. ಏನು ಮಾಡಿದರೂ ಏನು ಗಳಿಸಿದರೂ ದೇವರು ಕೊಟ್ಟ ಶಕ್ತಿಯನ್ನು ಅವನ ಕಾರ್ಯಕ್ಕಾಗಿಯೆ ವೆಚ್ಚ ಮಾಡಬೇಕು (೫೨೩). ಇನ್ನು ಈ ಕರ್ಮ ವೆಂಬುದು ಎಂದೆಂದಿಗೂ ಸಕಾಮ ಇರಕೂಡದು, ಎಂಬುದೊಂದು ಮುಖ್ಯ ಮಾತು. ಅರ್ಥ ಪ್ರಾಣ ಅಭಿಮಾನಗಳನ್ನು ದೇವರಿಗೆ ಅರ್ಪಿಸಿ ಮತ್ತೆ ಇದು ತನ್ನದು ಅದು ತನ್ನದು, ಎಂದೆನ್ನುವವನು ಭಕ್ತನೂ ಅಲ್ಲ ಕರ್ಮಯೋಗಿಯೂ ಅಲ್ಲ (೫೨೬). ಫಲಪದವಾಸೆ ಇಟ್ಟುಕೊಂಡು ಕರ್ಮ ಮಾಡಿದರೆ ಆಯಾ ನಶ್ವರ ಭಂಗುರ ಫಲಗಳು ದೊರೆಯಬಹುದಲ್ಲದೆ ನಿತ್ಯ ಮುಕ್ತಿಯು ಮೈದೋರದು (೫೨೮). 'ಮನ ವಚನ ಕಾಯದಲ್ಲಿ ನೀನಲ್ಲದೆ ಇನ್ನಾರಿಲ್ಲ' ಎಂಬ ಭಾವವು ಗಟ್ಟಿಯಾಗಿರಬೇಕು (೫೩೧). ಹೀಗೆ ಅರ್ಪಣಪೂರ್ವಕ ಮಾಡುವ ಕರ್ತನಿಗೆ ಮುಕ್ತಿಯ ಆಸೆ ಸಹ ಉಳಿಯದು, ಯಾಕಂದರೆ ಅವನಿಗೆ ಅದು ಸ್ವಯಂಭು, ಸಹಜಸ್ವಭಾವವಾಗುವದು (೫೩೨). ಇಂಥ ಯೋಗಿಯು 'ನನಗೆ ಪರಮ ಪದವಿಯು ಬೇಡ, ನಿನ್ನ ತೊತ್ತುಸೇವೆಯೆ ಸಾಕು' ಎಂದು ಹೇಳುವನು (೫೩೩). ಈ ರೀತಿ ಕರ್ಮಯೋಗದ ಸಾಧನವನ್ನು ಮಾಡುತ್ತ ಹೋದರೆ, ಮಾಡುವವನೂ ದೇವರೇ ಮಾಡಿಸುವಾತನೂ ದೇವರೇ, ಕೊಡುವವನು ಕೊಳ್ಳುವವನು ಅವನೇ, ಎಂಬ ನಿಲವು ನೆಲೆಯಾಗಿ ಅಹಂಕಾರ, ಕಾಮ ಮುಂತಾದವುಗಳೆಲ್ಲ ಪೂರ್ಣ ಅಳಿದು ಹೋಗುವವು (೫೩೫). ಅವನು ಆ ಬಳಿಕ, ಮಾಡಿ ಮಾಡದಂತೆ, ಮಾಡುವ ಮಾಟದೊಳಗೆ ತಾನಿಲ್ಲದಂತೆ, ಹುಡಿ ಹತ್ತದ ಗಾಳಿಯಂತೆ, ಕಾಡಿಗೆ ಕೂಡದ ಆಲಿಯಂತೆ, ಆಚರಿಸಿ ಆಚರಿಸದಂತೆ ಇದ್ದು, ನಿತ್ಯ ಮುಕ್ತ ಸ್ಥಿತಿಯನ್ನನುಭವಿಸುವನು (೫೩೮). ಆ ಸ್ಥಿತಿಯಲ್ಲಿ ಸಾಧಕನ ವ್ಯಕ್ತಿತ್ವವು ಪರಮಾತ್ಮನಲ್ಲಿ ಪೂರ್ಣ ಲೀನವಾಗಿ ಹೋಗಿರುವುದರಿಂದ ಅವನ ಪರಮಾನಂದಕ್ಕೆ ಸೀಮೆ ಇಲ್ಲದಂತಾಗುವದು.

೬೩. ಇನ್ನು ಸಾಧನಮಾರ್ಗಗಳಲ್ಲಿ ಧ್ಯಾನವೆಂಬುದೊಂದು ಉಳಿಯಿತು. ಪಾತಂಜಲ ಯೋಗದ ಮುಖ್ಯ ತತ್ವಗಳನ್ನೆಲ್ಲ ಸ್ವೀಕರಿಸಿ ವಚನಕಾರರು ಅವುಗಳನ್ನು ಚಿತ್ತಶುದ್ಧಿಗಾಗಿ ಮತ್ತು ಚಿತ್ತಸ್ಥಿರೀಕರಣಕ್ಕಾಗಿ ಉಪಯೋಗಿಸಿರುವರು. ಯಾವದೇ ಸಾಧನವನ್ನು ಕೈಕೊಂಡರೂ ಅದಕ್ಕೆ ಏಕಾಗ್ರತೆಯು ಅಥವಾ ಚಿತ್ತಸ್ಥೈರ್ಯವು ಅತ್ಯವಶ್ಯವು. ಚಿತ್ತೈಕಾಗ್ರ್ಯವಿಲ್ಲದಿದ್ದರೆ ಸಾಮಾನ್ಯವ್ಯವಹಾರವು ಕೂಡ ಚನ್ನಾಗಿ ಸಾಗುವುದಿಲ್ಲ. ಅಂದ ಬಳಿಕ ನಮ್ಮ ಶಕ್ತಿಸರ್ವಸ್ವಗಳನ್ನು ಒಂದೇ ಒಂದು ಪರಮಾತ್ಮನಲ್ಲಿ ಅರ್ಪಿ

ಸುವ ಮಹಾಸಾಧನವು ಜಂಜಲಚಿತ್ತರಿಗೆ ಸಾಧ್ಯವಾಗುವ ಬಗೆ ಹೇಗೆ? ಸರ್ವಥಾ ಸಾಧ್ಯವಿಲ್ಲ. ವಚನಕಾರರು ತಮ್ಮ ಪದ್ಧತಿಯಂತೆ ಮತ್ತು ಸರ್ವಸಮರ್ಪಣವೆಂಬ ಸಮನ್ವಯಮಾರ್ಗದ ಅಧ್ವರ್ಯುಗಳಂತೆ ಬರಿಯ ಧ್ಯಾನಯೋಗಕ್ಕೆ ಮಹತ್ವಕೊಡದೆ ಭಕ್ತಿಯುಕ್ತ ಕ್ರಿಯಾಸಹಿತ ಧ್ಯಾನವನ್ನು ಪ್ರತಿಪಾದಿಸಿದ್ದಾರೆ. ಆದುದರಿಂದಲೆ ಅವರು 'ಲಿಂಗ'ರಹಿತ ಮತ್ತು 'ಶಿವಾಚಾರ'ವಿಲ್ಲದ ಧ್ಯಾನಯೋಗವನ್ನು ಹೀಯಾಳಿಸಿರುವರು. ಸಾಕಾರವುಳ್ಳ ತಲೆಯಲ್ಲಿ ನಿರಾಕಾರ ಅಮೃತವನ್ನು ಉಣ್ಣಲು ಹವಣಿಸುವದು ಮತ್ತು ಬಂಜೆ ಆಕಳಲ್ಲಿ ಕ್ಷೀರವನ್ನರಸುವದು ಅಷ್ಟೇ ನಿರರ್ಥಕವು (೫೪೦)! ಹರಿಯುವ ಮನ ಮತ್ತು ಪ್ರಾಣವಾಯು ಇವೆರಡನ್ನೂ ಒಂದೇ ಹುರಿ ಮಾಡಿದರೆ ಮನಸು ಸ್ಥಿರವಾಗುವದು. ಆಗ ಅದನ್ನು ಸಗುಣದಲ್ಲಿ ನಿಶ್ಚಲ ಮಾಡಿ ಮುಂದೆ ನಿರ್ಗುಣಕ್ಕೆ ಹೋಗಬೇಕು. ಅಲ್ಲಿ ಚಿತ್ತವು ನಿಜದಲ್ಲಿ ಲೀನವಾಯಿತೆಂದರೆ ಅದೇ ರಾಜಯೋಗದ ಪರಮಸಾಧ್ಯವು (೫೪೩). ಆ ನಿಜವು ಪರಮಜ್ಯೋತಿಃಸ್ವರೂಪವಿರುವದು. ಅದು ಮನದ ನೆನಹಿಗೆ ವಿಶ್ರಾಮಸ್ಥಾನವು. ಅಲ್ಲಿ ಪರಮಸುಖವು ದೊರೆಕೊಳ್ಳುವದು (೫೪೪). ಎಂಬತ್ತುನಾಲ್ಕು ಆಸನಗಳಲ್ಲಿ ಸಿದ್ಧಾಸನವು ಎಲ್ಲಕ್ಕೂ ಶ್ರೇಷ್ಠವು. ಆ ಆಸನದಲ್ಲಿ ಕುಳಿತು, ಷಣ್ಮುಖೀಮುದ್ರೆಯಿಂದ ಎಲ್ಲ ದ್ವಾರಗಳನ್ನು ಮುಚ್ಚಿ, ಮೂಲಾಧಾರದಲ್ಲಿ ಮಲಗಿರುವ ಕುಂಡಲಿಶಕ್ತಿಯನ್ನು ಜಾಗ್ರತ ಮಾಡಿ ಅದನ್ನು ಅನಂತಕೋಟಿಸೂರ್ಯಪ್ರಭವಾದ ಆತ್ಮಜ್ಯೋತಿಯಲ್ಲಿ ಲಯಗೊಳಿಸಬೇಕು (೫೪೬). ಅದೇ ನಿಜಸುಖದಾಯಕವಾದ ಚಿತ್ತ ಲಯವು. ರಾಜಯೋಗಸಿದ್ಧಿಗೆ ಅವಶ್ಯವಿದ್ದ ಯಮನಿಯಮಗಳಿಗೆ ವಚನಕಾರರು ಮಹತ್ವವನ್ನು ಕೊಟ್ಟದ್ದು ಸ್ವಾಭಾವಿಕವು, ಯಾಕಂದರೆ ಅವು ಚಿತ್ತಶುದ್ಧಿಗೆ ಮೂಲಾಧಾರವಾಗಿರುವವು. ಆಶಾರೋಷ ಹರ್ಷಾದಿಗಳನ್ನು ಬಿಟ್ಟು (೫೪೨), ಅನೃತ, ಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ ಇವುಗಳನ್ನು ಸಮೂಲ ತೊರೆದು, ಬ್ರಹ್ಮಚರ್ಯ, ನಿಷ್ಕಾಮತೆ, ಜಪತಪ ಮುಂತಾದವುಗಳಲ್ಲಿ ರತನಿರುವವನಿಗೆ ಧ್ಯಾನಸಿದ್ಧಿಯು ಸುಲಭವು (೫೫೯). ಕ್ರಿಯಾರಹಿತ ಧ್ಯಾನವು ವ್ಯರ್ಥವಿರುವುದರಿಂದ, ಧ್ಯಾನಿಸಿ ಕಾಂಬ ಕುರುಹ ಎನಗೊಂದು ಬಾರೆ ತೋರಾ, ಎಂದು ಉಪರೋಧಿಕವಾಗಿ ವಚನಕಾರರು ಹೇಳಿರುವರು (೫೬೯). ಹೀಗೆ ಅಷ್ಟಾಂಗ ಪಾತಂಜಲಯೋಗದ ಯಮನಿಯಮಾಸನ ಪ್ರಾಣಾಯಾಮಪ್ರತ್ಯಾಹಾರ, ಎಂಬ ಪೂರ್ವಯೋಗ, ಮತ್ತು ಧ್ಯಾನ ಧಾರಣಾಸಮಾಧಿ, ಎಂಬ ಉತ್ತರಯೋಗ, ಇವೆರಡನ್ನೂ ತಮ್ಮ ಸಾಧನೆಯಲ್ಲಿ ವಚನಕಾರರು ಚನ್ನಾಗಿ ಬಳಸಲು ಯತ್ನಿಸಿರುವರು.

೬೪. ಸರ್ವಾರ್ಪಣವೆಂಬ ಎಲ್ಲಕ್ಕೂ ಶ್ರೇಷ್ಠಸಾಧನ ಮತ್ತು ತದಂಗ ಭೂತವಾದ ಜ್ಞಾನ, ಭಕ್ತಿ, ಕರ್ಮ, ಮತ್ತು ಧ್ಯಾನ ಈ ಮಾರ್ಗಗಳು, ಇದುವರೆಗೆ ಹೇಳಲ್ಪಟ್ಟವು. ಈ ಮಾರ್ಗಗಳು ಪರಸ್ಪರ ಸ್ವತಂತ್ರವಲ್ಲ, ಅವು ಪರಸ್ಪರಾವಲಂಬಿ ಮತ್ತು ಅನ್ಯೋನ್ಯಪೋಷಕ ಹೀಗೆ ಇರುವವು, ಎಂದು ವಚನಕಾರರು ಮೇಲಿಂದಮೇಲೆ ಹೇಳಿರುವರು. ಈ ಅವರ ಮತವನ್ನು ನಾವು ಅಲ್ಲಲ್ಲಿ ವ್ಯಕ್ತಪಡಿಸಿದ್ದರೂ ಇಲ್ಲಿ ಪುನಃ ಅದನ್ನು ಒಂದೇ ಕಡೆಗೆ ಸಾರಾಂಶರೂಪವಾಗಿ ಹೇಳುವದು ಅವಶ್ಯವಿರುವದು. ಜ್ಞಾನವು ನಮಗೆ ಅರಿವನ್ನು ಕೊಟ್ಟರೂ ಭಕ್ತಿಭಾವದ ಹೊರತು ಅದರಲ್ಲಿ ರಸವುಂಟಾಗದು, ಕರ್ಮದ ಹೊರತು ಅದು ವ್ಯಕ್ತ ಸ್ವರೂಪವನ್ನು ತಾಳಲಾರದು, ಮತ್ತು ಧ್ಯಾನದ ಹೊರತು ಅದು ನೆಲೆಯಾಗಿ ನಿಲಲರಿಯದು. ಜ್ಞಾನವಿಲ್ಲದ ಭಕ್ತಿ ಕುರುಡವು, ಕರ್ಮವಿಲ್ಲದ ಭಕ್ತಿ ಬರೀ ಭಾವಮಯವು, ಧ್ಯಾನವಿಲ್ಲದ ಭಕ್ತಿ ಅಸ್ಥಿರವು. ಅದೇ ರೀತಿ ಜ್ಞಾನ ಭಕ್ತಿ ರಹಿತ ಕರ್ಮವು ಯಾಂತ್ರಿಕವು ಮತ್ತು ನೀರಸವು, ಧ್ಯಾನರಹಿತ ಕರ್ಮವು ಅದೃಢವು ಹಾಗೂ ಅಸಂಬದ್ಧವು. ಜ್ಞಾನ ಭಕ್ತಿ ಕರ್ಮಗಳಿಲ್ಲದ ಧ್ಯಾನವು ಕೇವಲ ಚಿತ್ತವ್ಯಾಯಾಮವು. ಆದುದರಿಂದ ಇವೆಲ್ಲ ಯೋಗ್ಯ ಪ್ರಮಾಣದಲ್ಲಿ ಒಂದಕ್ಕೊಂದು ಒಪ್ಪಿಟ್ಟಂತೆ ಇದ್ದರೆ ಸರ್ವಾಂಗಸುಂದರವಾದ ಸಾಧನ ಮಾರ್ಗವು ಸಿದ್ಧವಾಗುವದು. ಉದ್ದನೇರುವುದಕ್ಕೆ ಗದ್ದುಗೆ ಬೇಕಾಗುವಂತೆ ಚಿದ್ರೂಪವನರಿವುದಕ್ಕೆ ಪೂಜನಾದಿ ಬಾಹ್ಯ ಕರ್ಮಗಳು ಅವಶ್ಯ (೫೫ಳ). ಕೇವಲ ಬೆರಳನೆಣಿಸಿ ಮೂಗ ಮುಚ್ಚಿ ಧ್ಯಾನಿಸಿ ದೇವರನ್ನು ಕಾಣಬಹುದು ಎನ್ನುವವರನ್ನು ಕಂಡು ವಚನಕಾರರು ಆಶ್ಚರ್ಯವನ್ನು ವ್ಯಕ್ತ ಮಾಡುವರು (೫೫೭). ಶಿವನನ್ನು ನೆನೆದರೆ ಭವ ಹರಿವುದೆಂಬ ವಿವರಗೇಡಿಗಳ ಮಾತು ಕೇಳಲಾಗದು. ನೆನೆದರಾಗದು, ನಿರ್ಧರಿಸಿ ಧ್ವಂದ್ವವನು ದಾಟಿ ಬೆರೆಯಬಲ್ಲರೆ ಮುಕ್ತಿಯು ಪ್ರಾಪ್ತವಾಗುವದು (೫೫೬). ಬರಿಯ ಮಾತಿನ ಮಾಲೆಯಿಂದ ಭಕ್ತಿಯಾಗದು, ತನು ಮನ ಧನಗಳು ಪರಮಾತ್ಮನ ಕಾರ್ಯದಲ್ಲಿ ಸವೆದಾಗಲೆ ಅದು ನಿಜ ಭಕ್ತಿಯೆನಿಸುವದು (೫೬೨). ಕ್ರಿಯೆ ಇಲ್ಲದ ಭಕ್ತ ಮನುಜನು, ಕ್ರಿಯೆ ಇಲ್ಲದ 'ಲಿಂಗೈಕ್ಯನು' ಸಹ ಜನಕ್ಕೊಳಗು (೫೬೩). ಕ್ರಿಯೆಯು ಶುದ್ಧವಿದ್ದಾಗಲೆ ಭಾವವು ಶುದ್ಧವಿರಬಲ್ಲದು, ಭಾವ ಶುದ್ಧಿಯಾದಾಗಲೆ ಶುದ್ಧ ಭಕ್ತಿಯು ಸಾಧ್ಯವು. ಭಕ್ತಿ ಎಂಬುದು ಸಾಧನ ವೃಕ್ಷದ ಬೇರು, ಎಂದು ಬಗೆದರೆ ಜ್ಞಾನವು ಅದರ ಫಲವೆನಿಸುವದು (೫೬೪). ಸಾಧನ ರಥಕ್ಕೆ ಹೂಡಿದ ಎರಡು ಜೋಡು ಕುದುರೆಗಳಂತೆ

ಜ್ಞಾನಕ್ರಿಯೆಗಳೆರಡೂ ಸಾಗುವದು ಅವಶ್ಯವು. ಬರಿಯ ಅರಿವು ಆದಾಕ್ಷಣಕ್ಕೆ ಏನು ಉಪಯೋಗವು ? ಸತ್ಕ್ರಿಯಾಚಾರವಿಲ್ಲದೆ ಜ್ಞಾನವು ವ್ಯರ್ಥವು. ಜ್ಞಾನವಿಲ್ಲದ ಕ್ರಿಯೆಯು ಜಡವು, ಕ್ರಿಯೆ ಇಲ್ಲದ ಜ್ಞಾನವು ಬಯಲ ಭ್ರಮವು (೫೬೮). ಒಂದು ಪಕ್ಷಿ ಗಗನಕ್ಕೆ ಹಾರಬೇಕಾದರೆ ಎರಡೂ ರೆಕ್ಕೆಗಳು ಬೇಕಾಗುವಂತೆ ಸಾಧಕನಿಗೆ ಜ್ಞಾನಕ್ರಿಗಳೆರಡೂ ಬೇಕು. ಜ್ಞಾನ ಕ್ರಿಯೆಗಳಲ್ಲಿ ತತ್ವತಃ ಏನೂ ಭೇದವಿಲ್ಲ. ಕ್ರಿಯೆಯೇ ಜ್ಞಾನವು, ಜ್ಞಾನವೇ ಕ್ರಿಯೆಯು. ಜ್ಞಾನವೆಂದರೆ ತಿಳಿಯುವದು, ಕ್ರಿಯೆಯೆಂದರೆ ತಿಳಿದಂತೆ ಮಾಡುವದು, ಹಾಗೆ ಮಾಡದಿರುವುದೇ ಅಜ್ಞಾನವು (೫೬೮). ತನ್ನೊಳಗೆ ಪರತತ್ವವಿರುವದೆಂದು ಬರೀ ತಿಳಿದುಕೊಂಡರೆ ಮುಕ್ತಿಯಳವಡದು, ಅಲ್ಲಿ ಭಾವವು ದೃಢವಾಗಿ ಶ್ರದ್ಧೆ ಪ್ರೇಮಗಳು ನೆಲೆಗೊಳ್ಳಲಿಕ್ಕೆ ಬೇಕು. ಧ್ಯಾನದಿಂದ ಆ ತಿಳಿವಳಿಕೆಯು ದೃಢವೂ ಸ್ಥಿರವೂ ಆಗಲಿಕ್ಕೆ ಬೇಕು. ಅನೇಕ ಸತ್ಕಾರ್ಯಗಳಲ್ಲಿ ಆ ಅರಿವನ್ನು ಅನುಭವಿಸಲಿಕ್ಕೆ ಬೇಕು. ಅಂದರೆ, ಅರಿವಿನ ಬೀಜವು ಬಲಿತು ಮೊಳೆತು ಸಸಿಯಾಗಿ, ಆ ಸಸಿಗೆ ಮುಂದೆ ಸವಿಯಾದ ಸ್ವಾನುಭವ ಫಲವು ಬರುವದು. ಹೀಗೆ ವಚನಕಾರರು ಹೇಳಿದ ಸಾಧನ ಸಫಲವಿರುವದು.

೬೫. ವಚನಕಾರರು ಹೇಳಿದ ಸಾಧನಪಥದಂತೆ ನಡೆಯುವ ಸಾಧಕನು ಯಾವ ರೀತಿ ತನ್ನ ಸಾಧನವನ್ನು ನಡೆಸಬೇಕು, ಎಂಬುದನ್ನು ಹೇಳಿದಂತಾಯಿತು. ಇನ್ನು ಅಂಥ ಸಾಧಕನ ಸಾಮಾನ್ಯ ಆಚಾರವು ಹೇಗೆ ಇರುವದು, ಅವನಲ್ಲಿ ಇರತಕ್ಕ ಗುಣಶೀಲಕರ್ಮಗಳು ಯಾವವು, ಅವನು ಯಾವ ವಿಧಿನಿಷೇಧಗಳನ್ನು ಪಾಲಿಸುವನು ಅಥವಾ ಪಾಲಿಸಬೇಕು, ಇದನ್ನೆಲ್ಲ ಸಂಕ್ಷೇಪದಿಂದ ಇಲ್ಲಿ ಹೇಳಿದರೆ ಈ ಸಾಧನಮಾರ್ಗವು ಎಲ್ಲರಿಗೂ ಚನ್ನಾಗಿ ತಿಳಿಯಲಿಕ್ಕೆ ಆಸ್ಪದವಾಗುವದು. ಸಾಧಕನಲ್ಲಿ ಚಿತ್ತಶುದ್ಧಿ, ಶ್ರದ್ಧೆ, ನಿಷ್ಠೆ, ನಮ್ರತೆ, ಧ್ಯೇಯವನ್ನು ತೀವ್ರ ಮುಟ್ಟಬೇಕು ಎಂಬುದನ್ನು ಕುರಿತು ಅತ್ಯಂತ ಆತುರತೆ ಅಥವಾ ವಿವ್ಹಲತೆ, ಸತ್ಯ, ಅಹಿಂಸೆ, ಅಸ್ತೇಯ, ಪರಹಿತದಕ್ಷತೆ ಈ ಮುಂತಾದ ಅನೇಕ ಗುಣಶೀಲಕರ್ಮಗಳು ಅವಶ್ಯವಿರುವವು. ಅವುಗಳಲ್ಲಿ ಮುಖ್ಯಮುಖ್ಯವಾದವುಗಳನ್ನು ಮಾತ್ರ ಇಲ್ಲಿ ವಿವರಿಸುವದು ಸಾಧ್ಯವು. ಸಾಧಕನ ಅಂತಃಕರಣವು ಅತ್ಯಂತ ಶುದ್ಧವಿರಲಿಕ್ಕೆ ಬೇಕು. ಅಂತರಂಗ ನಿರ್ಮಲವಿಲ್ಲದವರ ಹಾಡು ಅತ್ತಿಯಹಣ್ಣಿನಂತೆ, ಅದು ಶುದ್ಧವಿದ್ದವರ ಪರಿ ಬಾಳೆಯ ಹಣ್ಣಿನಂತೆ. ಬರಿಯ ಬಾಹ್ಯಶುದ್ಧಿಯು ವ್ಯರ್ಥವು, ಅಂತಃಶುದ್ಧಿಯಿಲ್ಲದವರ ಸಂಗವು ಹೊಲ್ಲ (೫೬೪). ಸಾಧಕನು

ಸಂಬಿಗೆಯುಳ್ಳವನಿರಬೇಕು. ಸಂಬಿ, ಸೆಚ್ಚಿ, ಮೆಚ್ಚಿ ಕರೆದರೆ ದೇವರು 'ಓ' ಎನ್ನುವನು (೩೮೭). ಒಮ್ಮೆ ಹಿಡಿದ ಮಾರ್ಗವನ್ನು ಬಿಡಲಿಕ್ಕಿಲ್ಲ, ಎಂಬ ನಿಷ್ಠೆಯುಳ್ಳ ಭಕ್ತನು ನಟ್ಟಡವಿಯಲ್ಲಿದ್ದರೂ ಅದು ಪಟ್ಟಣವಾಗುವದು (೩೮೯). ವ್ರತಾಚರಣೆಯ ಮಹಿಮೆಯೆ ಹಾಗೆ ಇರುವದು ಅದು ನಾಯಕ ರತ್ನವು, ಜೀವದ ಕಳೆಯು (೩೯೧). ಸಾಧಕನು ಯಾವಾಗಲೂ 'ಶಿವವಚನ,' ಗುರುವಚನ, ಪುರಾತನರ ವಚನಗಳನ್ನು ಕೇಳಿ, ಅನುಭಾವಿಗಳ ಉಪದೇಶ ವನ್ನು ಮನ್ನಿಸಿ ಆಚರಿಸಿದರೆ ಅವನು ಕೃತಾರ್ಥನಾಗುವನು ಹಾಗೂ ಸುರಕ್ಷಿತವಾಗಿ ತನ್ನ ಧ್ಯೇಯವನ್ನು ಮುಟ್ಟುವನು (೩೯೪). ಸದ್ಭಕ್ತರ ಸಂಗವು ಅವರ ವಚನದಷ್ಟೆ ಮಹತ್ವದ್ದಿರುವದು. ಆಯುಷ್ಯ, ಧನಧಾನ್ಯ, ಸಂಪದೈಶ್ವರ್ಯ ಮುಂತಾದವುಗಳನ್ನು ಬೇಡಿಕೊಳ್ಳದೆ ಸಾಧಕನು ದೇವರಲ್ಲಿ ಸಜ್ಜನಸಂಗವನ್ನೆ ಬೇಡುವನು (೩೯೬). ಅಹಂಕಾರವು, ನಾನು ಮಾಡಿದೆನೆಂಬ ಅಭಿಮಾನವು, ಸಾಧಕನಿಗೆ ಘಾತಕವು. ಎಳ್ಳಿಲ್ಲದ ಗಾಣವು ಹೇಗೆ ವ್ಯರ್ಥವೊ ಹಾಗೆ ಅಹಂಕಾರಿಸಾಧಕನ ಭಕ್ತಿಯು ವ್ಯರ್ಥವು (೩೯೮). ಮದ್ಯಮಾಂಸಾದಿಗಳನ್ನು ಬಿಟ್ಟಾಕ್ಷಣಕ್ಕೆ ಸಾಧಕನು ವ್ರತಿಯಾದಂತಾಗ ಲಿಲ್ಲ ಯಾಕಂದರೆ, ಅಷ್ಟಮದಗಳು ಮತ್ತು ಸಂಸಾರದ ಆಸಕ್ತಿ ಇವೇ ನಿಜವಾದ ಮದ್ಯಮಾಂಸಗಳು (೩೯೯). ಇವೆಲ್ಲವುಗಳಿಗಿಂತ ಆಸೆಯೆಂಬುದು ಹಿರೇ ಮಾರಿಯು. ಆಸೆಯ ಮೂಲಕ ಮನುಷ್ಯನು ತನ್ನ ಅಳಿವಿನಕ್ಕೆ ದಾಸನಾಗುವುದಲ್ಲದೆ ಕೇವಲ ಪರಾಧೀನನಾಗುವನು. ಆಸೆಯ ಕೊಸೆ ಯನ್ನು ತಿಳಿದುಕೊಂಡವನೆ ಕೈಲಾಸದಾಜೆ ಹೋಗಬಲ್ಲನು (೪೦೨). ತಾನು ಅಜಾತ ಆತ್ಮನು, ದೇಹವಲ್ಲ, ಎಂಬುದನ್ನರಿತು ಸಾಧಕನು ಭಯರಹಿತ ನಿರಬೇಕು. ಬೇಕಾದಂಥ ಕಠಿಣಪ್ರಸಂಗಬಂದರೂ ದೇವರಲ್ಲಿಯ ತನ್ನ ನಂಬಿಗೆನಿಷ್ಠೆಗಳನ್ನು ಅವನು ಬಿಡಕೂಡದು. ನಿಂದಾಸ್ತುತಿಗಳಿಗೆ ಅಳುಕದೆ ತನ್ನ ದೋಷಗಳನ್ನು ಅವನು ತಿದ್ದುತ್ತಹೋಗಬೇಕು. ಕಬ್ಬನ್ನು ಕಡಿದು ತುಂಡುಮಾಡಿ ಗಾಣದಲ್ಲಿಕ್ಕಿದರೂ ಅದು ಸವಿರಸವನ್ನೆ ಕೊಡುವಂತೆ ಸಾಧಕನು ಸಂಕಟಗಳಿಗೆ ಒಳಗಾದಂತೆ ಹೆಚ್ಚು ತೇಜಸ್ವಿಯೆ ಆಗುತ್ತ ಹೋಗುವನು (೪೦೬). ಸಾವಿರ ತೀರ್ಥಾದಿಗಳನ್ನು ಸುತ್ತಿದರಿಲ್ಲ, ಲಕ್ಷ ಗಂಗೆಯ ಮಿಂದರಿಲ್ಲ, ಅನೇಕಾನೇಕ ಬಾಹ್ಯ ಸಾಧನಗಳನ್ನು ಎಷ್ಟು ಮಾಡಿದರೂ ಹುಸಿ. ಅತ್ತಲಿತ್ತ ಹರಿವ ಮನವನ್ನು ಚಿತ್ತದಲ್ಲಿ ಸ್ಥಿರವಾಗಿ ನಿಲಿಸಬಲ್ಲರೆ ಮುಕ್ತಿಯಹುದು, ಎಂಬುದನ್ನು ಸಾಧ ಕನು ಜನ್ಮಾಗಿ ಅರಿತಿರಬೇಕು (೪೦೮). ತಾನು ಬಡವನಿದ್ದರೂ ಘನಮನ ಸಂಪನ್ನನಿರಬೇಕು (೪೧೦). ಎಲ್ಲರನ್ನು ಸಮದೃಷ್ಟಿಯಿಂದ ನೋಡುವವ

ನಿರಬೇಕು, ಯಾಕಂದರೆ ಹಿರಿಕಿರಿದೆಂಬ ಶಬ್ದವಡಗಿದವನೆ ನಿಜಭಕ್ತನು (೪೧೧). ಜಪತಪ ನಿತ್ಯನೇಮಗಳಿಗಿಂತ ಸದಾಚಾರವೆಂಬುದು ಹೆಚ್ಚಿನದು. ಆತ್ಮ ಪದವನ್ನೇರುವುದಕ್ಕೆ ಸದಾಚಾರವೆ ಸೋಪಾನವು, ಸದಾಚಾರವನರಿಯ ದವನು, ಅದನ್ನರಿತು ಅದರಂತೆ ಆಚರಿಸದವನು, ಪಾಪಿಯು. ಸದಾಚಾರಿ ಗಳಲ್ಲದವರ ಭಕ್ತಿ ವ್ಯರ್ಥವು (೪೧೫). ಸಾಧಕನು ನುಡಿದಂತೆ ನಡೆಯಬೇಕು. ನುಡಿದಂತೆ ನಡೆವ, ನಡೆದಂತೆ ನುಡಿವ ಸದ್ಭಕ್ತಿ ಸದಾಚಾರಯುಕ್ತ ಮಹಾ ತ್ಮರ ಪಾದಗಳನ್ನು ತೋರಿ ಬದುಕಿಸಯ್ಯ (೪೧೬), ಎಂದು ವಚನಕಾರರು ದೇವರನ್ನು ಬೇಡಿಕೊಂಡಿರುವರು.

೬೬. ಮೇಲೆ ಹೇಳಿದ ಗುಣಶೀಲಕರ್ಮಗಳನ್ನು ತನ್ನಲ್ಲಿ ವೃದ್ಧಿ ಗೊಳಿಸುವುದಲ್ಲದೆ ಸತ್ಯಅಹಿಂಸಾದಿ ತತ್ವಗಳನ್ನು ಅರಿತು ಸಾಧಕನು ಅವು ಗಳನ್ನು ಆಚರಿಸುತ್ತಿರಬೇಕು. ಸತ್ಯವು ಎಲ್ಲಕ್ಕೂ ಶ್ರೇಷ್ಠ ಶೀಲವು. ಸತ್ಯ ನುಡಿವುದೆ ದೇವಲೋಕ ಮತ್ತು ಸದಾಚಾರವೆ ಸ್ವರ್ಗ, ಇಷ್ಟು ಇವುಗಳ ಮಹತ್ವವಿರುವದು. ಸಜ್ಜನಸದಾಚಾರದಲ್ಲಿ ವರ್ತಿಸಿ ಸತ್ಯವನರಿವುದೆ ಶೀಲವು. ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಬಾರದು. (೪೧೭–೪೨೦). ಅಹಿಂಸೆಯು ಸತ್ಯದಷ್ಟೆ ಪರಮಧರ್ಮವು. ದಯೆಯೇ ಧರ್ಮದ ಮೂಲವು. ಎಲ್ಲೆಲ್ಲಿಯೂ ಪರಮಾತ್ಮನೆ ತುಂಬಿರುವುದರಿಂದ ಹಿಂಸೆಯು ಅತಿ ಹೊಲ್ಲವು. ಆತ್ಮನಲ್ಲಿ ಸತತ ಸರ್ವಭೂತಹಿತವನ್ನು ಬಯಸಿ ಆದರಂತೆ ನಡೆಯುವವನೆ ನಿಜ ಭಕ್ತನು (೪೨೨). ಸ್ತ್ರೀಯರೆಲ್ಲರೂ ಮಹಾದೇವಿಯರೆಂದು ತಿಳಿದು ಮನಸೋಲದೆ ಇದ್ದು ಅವರನ್ನು ಮನ್ನಿಸ ಬೇಕು. ಸ್ತ್ರೀಯರಿಗೆ ಅಳುಪದಿರು ಮನವೇ, ಎಂದು ವಚನಕಾರರು ಮನಸ್ಸಿಗೆ ಉಪದೇಶ ಮಾಡುವರು (೪೨೭). ದಾನ ಮಾಡುವುದೊಂದು ದೊಡ್ಡ ಗುಣವು. ಕಾಗೆ ಕೂಡ ತನ್ನ ಬಳಗದವರನ್ನು ಕರೆದು ಊಟ ಮಾಡುವದು. ದಾನವೆಂಬುದು ಇಷ್ಟೊಂದು ಸಾಮಾನ್ಯ ಗುಣವು. ಆದರೆ ಸತ್ಪಾತ್ರದಲ್ಲಿ ದಾನ ಮಾಡುವವರು ಬಹಳ ಕಡಿಮೆ. ಕಲ್ಲನಾಗರಕ್ಕೆ ಹಾಲ ನೆರೆದು, ಬದುಕಿದುದನ್ನು ನೋಡಿದೊಡನೆ ಕೊಲ್ಲೆಂಬುದು ಧರ್ಮವೇ? ಉಪವಾಸದಿಂದ ಬಳಲುತ್ತಿರುವ ಮನುಜನನ್ನು ಬಿಟ್ಟು ಕಲ್ಲ ದೇವರಿಗೆ ಎಡೆ ಬಡಿಸಿ ತಾವು ಧರ್ಮವಂತರೆಂದು ತಿಳಿಯುವದು ಸರ್ವಥಾ ವಿಪರೀತವೆ (೪೨೯). ಸಾಧಕನು ಅಂಥಿಂಥ ದೇವದೇವತೆಗಳ ಬೆನ್ನು ಬೀಳಕೂಡದು. ನಂಬಿದ ಹೆಂಡತಿಗೆ ಒಬ್ಬನೇ ಗಂಡನಿರುವಂತೆ, ಪ್ರತಿಯಾದ ಗಂಡಸಿಗೆ ಒಬ್ಬಳೇ ಹೆಂಡತಿಯಿರುವಂತೆ ಭಕ್ತನು ಅವ್ಯಭಿಚಾರಿಯಾಗಿರಬೇಕು (೪೩೭).

ಅನನ್ಯಭಕ್ತನು ಕೇವಲ ಬಾಹ್ಯಪೂಜೆಯಲ್ಲಿ ತೊಡಗದೆ, ಪೊಟ್ಟಿಪೊಟ್ಟಿ ಪತ್ರಪುಷ್ಪಗಳನ್ನು ಹರಿದು ದೇವರ ಮೇಲೆ ಹೇರದೆ, ದೇವಕಾರ್ಯಕ್ಕೆ ತನ್ನ ಮನಧನವನ್ನು ಕೊಡಬೇಕು ಮತ್ತು ಹುಸಿ, ಕಳವು, ಪರದಾರ, ಹಿಂಸೆ ಇವುಗಳಲ್ಲಿ ಹರಿಯುವ ಮನವನ್ನು ತಡೆದು ನಿಲ್ಲಿಸಬೇಕು (೪೫). ಮಾರಿ ಮಸಣಿ ಮುಂತಾದವೆಲ್ಲ ದೇವರೆಂದು ಹಲವರು ಪೂಜಿಸುವರು; ಆದರೆ, ಕಣ್ಣುಗಳು ತಪ್ಪಿ ನೋದಿದರೆ ಅದೇ ಮಾರಿ, ತುಟಿ ತಪ್ಪಿ ನುಡಿದರೆ ಅದೇ ಮಾರಿ. ಮನಸಿನಲ್ಲಿಯ ಸಂಶಯವೆ ಕನಸಿನಲ್ಲಿ ಭೂತವಾಗಿ ಕಾಡುವದು (೪೬). ಆದುದರಿಂದ ಅವೆಲ್ಲ ಪೂಜನೀಯವಲ್ಲ. ಶುಭಶಕುನ ಸಾಮುದ್ರಿಕ ಜ್ಯೋತಿಷಾದಿಗಳಲ್ಲಿಯೂ ಸಾಧಕನು ವಿಶ್ವಾಸವಿಡಕೂಡದು. ಸತ್ಯದಿಂದ ನಡೆಯುವ ಭಕ್ತನಿಗೆ ಎಲ್ಲವೂ ಶುಭವೇ. ಸಾಧಕನು ತಪ್ಪು ಮಾಡಿದರೆ ಹೊನ್ನು ಕೊಟ್ಟು ಪಾಪಮುಕ್ತನಾಗಲು ಇಚ್ಛಿಸಕೂಡದು. ಯಾಕಂದರೆ, ಪಶ್ಚಾತ್ತಾಪವೆ ನಿಜವಾದ ಪ್ರಾಯಶ್ಚಿತ್ತವು (೪೫೪). ಸಾಧಕನು ಭಿಕ್ಷೆ ಬೇಡಿ ಹೊಟ್ಟೇ ಹೊರಕೊಳ್ಳಕೂಡದು (೪೫೫). ಅದು ಪರಮಾರ್ಥವಲ್ಲ. ಅವನು ಸಿದ್ಧಿಗಳಿಂದಲೂ ಮೋಹಿತನಾಗಬಾರದು. ಸಿದ್ಧಿಗಳಿಂದ ವಿಷಯಸುಖದ ಸಾಧನಗಳು ಪ್ರಾಪ್ತವಾಗಬಹುದೇ ಹೊರತು ಮುಕ್ತಿ ಸುಖವು ದೊರೆಕೊಳ್ಳದು (೪೫೫). ಜ್ಞಾನವಿಲ್ಲದೆ ಕಡುತರ ತಪವನ್ನೆಸಗಿದರೂ ಅದು ವ್ಯರ್ಥವು (೪೫೯). ಜ್ಞಾನಿಯಾದ ಬಳಿಕ ಸಂಸಾರ ಬಿಟ್ಟು ಹೋಗುವದು ತಪ್ಪು. ಅಂಥವನು ಸಂಸಾರದಲ್ಲಿಯೆ ನಿರ್ಲೇಪನಾಗಿ ನೀರ ತಾವರೆಯಂತೆ ಸತ್ಕಾರ್ಯದಲ್ಲಿ ವರ್ತಿಸುತ್ತಿರಬೇಕು (೪೬೦). ವೇದ ಶಾಸ್ತ್ರಾಗಮಾದಿಗಳು ಎಷ್ಟು ಶ್ರೇಷ್ಠವೆಂದೆನಿಸಿದರೂ ಅವುಗಳ ಬರಿ ಮುಖ ಪಾಠಕ್ಕಿಂತ ಹರಿಯುವ ಮನಸನ್ನು ನಿಲ್ಲಿಸುವುದೆ ಮೇಲು (೪೭೦). ಸಾಧಕನು ತಾನು ಜ್ಞಾನಿಯಾದರೂ ಎಲ್ಲರೊಡನೆ ಅತ್ಯಂತ ನಮ್ರತೆಯಿಂದ ನಡೆಯತಕ್ಕದ್ದು. ಬರಿಯ ವೇಷಧಾರಿಯಾಗಿ ಕಾಷಾಯಾಂಬರಗಳಿಂದ ಇಲ್ಲವೆ ಜಡೆಮುಡಿಗಳಿಂದ ಸದ್ಭಕ್ತನ ನಿಲವು ಪ್ರಾಪ್ತವಾಗುವುದಿಲ್ಲ. ನಿಜಭಕ್ತರಲ್ಲಿ ಈ ವೇಷವನ್ನೂ ನೋಡಬಾರದು ಅಥವಾ ಕುಲವನ್ನೂ ಅರಸಬಾರದು, ಅವರಲ್ಲಿ ನಿಜಗುಣಗಳನ್ನು ನೋಡಬೇಕು. ಮೇಲೆ ಹೇಳಿದ ಗುಣಕರ್ಮ ಶೀಲಗಳಿಂದ ಯುಕ್ತನಾದ ಸಾಧಕನು ತೀವ್ರವೇ ಪರಮಪದವನ್ನು ಪಡೆಯಲು ಅರ್ಹನಾಗುವನು.

೬೭. ಮೇಲೆ ಹೇಳಿದ ಸಾಧನಮಾರ್ಗಗಳಿಂದ ನಡೆಯುವ ಸಾಧಕನು ಸಿದ್ಧಸ್ಥಿತಿಯನ್ನು ಹೊಂದುವನು. ಆ ಸಿದ್ಧನ ನಿಲವು ಹೇಗಿರುವದು

ಇದನ್ನು ಇನ್ನು ನೋಡಬೇಕಾಗಿದೆ. ಸಿದ್ಧನು ದೇಹಪಾತದನಂತರ ಜನನ ಮರಣಗಳನ್ನು ದಾಟಿ, ವಿದೇಹಮುಕ್ತಿಯನ್ನು ಪಡೆದು, ಪರಮಾತ್ಮನಲ್ಲಿ ಐಕ್ಯನಾಗುವನು. ಆ ಸ್ಥಿತಿಯ ವರ್ಣನೆಯು ಇಲ್ಲಿ ಅನವಶ್ಯಕವು. ಜೀವದಿಂದಿರುವಾಗ ಅವನ ವೃತ್ತಿವ್ಯವಹಾರಗಳು ಹೇಗೆ ಇರುವವು ಇದನ್ನೆ ಇಲ್ಲಿ ವಿಚಾರಿಸುವದು ಯೋಗ್ಯವು ಮತ್ತು ಉಪಯುಕ್ತವು. ಅವನು ಸಿದ್ಧನಾದ ಬಳಿಕ ಜೀವನ್ಮುಕ್ತನೆನಿಸುವನು. ಸಾಧಕನಲ್ಲಿರತಕ್ಕ ಸದ್ಗುಣಗಳೆಲ್ಲ ಅವನಲ್ಲಿ ಪೂರ್ಣ ಉತ್ಕರ್ಷಹೊಂದಿರುವವು. ಜ್ಞಾನಿಯ ನಿಲವನ್ನು ವಚನಕಾರರು ಈ ಕೆಳಗಿನಂತೆ ವರ್ಣಿಸಿರುವರು. ತಾವು ಜ್ಞಾನಿಗಳು ಆದಬಳಿಕ ಸಂಶಯರಹಿತರು, ಪಾಪವಾಸನೆಗಳನ್ನು ತೊರೆದವರು, ಅನ್ಯರ ನುಡಿನಿಂದೆಗಳಿಗೆ ಒಳಗಾಗದವರು ಇರಬೇಕು. ಅವರು ಗುರುಹಿರಿಯರಿಗಂಜಿ ನಡೆಯಬೇಕು, ಅನ್ಯಸ್ತ್ರೀಯರನ್ನು ಮಾತೆಯಂತೆ ಮನ್ನಿಸಬೇಕು. ಅವರು ಪರದ್ರವ್ಯವನ್ನ ಪಹರಿಸಬಾರದು, ವಿಶ್ವಾಸಘಾತ ಮಾಡಬಾರದು, ಪರದೂಷಣೆಯಲ್ಲಿ ತೊಡಗಬಾರದು, ಜ್ಞಾನಿಗಳು ವಚನಕೊಡಬಾರದು, ಕೊಟ್ಟಬಳಿಕ ಅದಕ್ಕೆ ತಪ್ಪಬಾರದು. ಅಸತ್ಯವೆ ಅವರಿಗೆ ಆತ್ಮಹತ್ಯೆಯಾಗಿರಬೇಕು. ಅವರು ಯಾರ ಹಂಗಿಗೂ ಒಳಗಾಗಬಾರದು. ಜ್ಞಾನಿಗಳು ಮತಾಭಿಮಾನವನ್ನು ಹಿಡಿಯಬಾರದು. ಯಾವ ರೀತಿಯಿಂದಲೂ ಅವರು ಪರಮಾತ್ಮಮಾರ್ಗದಿಂದ ಚ್ಯುತರಾಗಬಾರದು (೪೮೪). ಅದೇ ಪ್ರಕಾರ ಅವನು ತ್ರಿಕರಣ ಶುದ್ಧನು, ಗುರುಕಾರುಣ್ಯವೇದ್ಯನು, ಗುರುಭಕ್ತಿಸಂಪನ್ನನು, ಮತ್ತು ನಿಷ್ಠಾಪರನು. ಅವನು ಪರಸ್ತ್ರೀಯರನ್ನು ಬೆರಿಸನು, ಪರಧನವನೊಲ್ಲನು, ಪರನಿಂದೆಯನಾಡನು, ಅನೃತವನುಡಿಯನು, ತಾಮಸಭಕ್ತರ ಸಂಗವ ಮಾಡನು. ಅವನು ಅರ್ಥಪ್ರಾಣಾಭಿಮಾನಗಳನ್ನೆಲ್ಲ ಪರಮಾತ್ಮನಿಗೆ ಅರ್ಪಿಸಿ ಪ್ರಸಾದ ಮುಂತಾಗಿ ಭೋಗಿಸುವನು. ಅವನು ಅನ್ಯರ ಆಸೆಗೆಯ್ಯನು, ಪಾತ್ರಾಪಾತ್ರವನರಿವನು, ಚತುರ್ವಿಧಪದವಿಯನಿಚ್ಛಿಸನು, ಅರಿಷಡ್ವರ್ಗಕ್ಕೆ ಅಳುಕನು, ಕುಲಾದಿ ಅಷ್ಟಮದಂಗಳನ್ನು ಬಗೆಗೊಳ್ಳನು. ಅವನು ದ್ವೈತಾದ್ವೈತವ ನುಡಿಯನು, ಸಂಕಲ್ಪವಿಕಲ್ಪಗಳಲ್ಲಿ ವ್ಯರ್ಥ ಕಾಲವನ್ನು ಕಳೆಯನು, ಕಾಲೋಚಿತವನರಿತವನು. ಈ ಮುಂತಾದ ಸಕಲ ಗುಣೈಶ್ವರ್ಯಸಂಪನ್ನನಿದ್ದು ಅವನು ಜಗತ್ತಿನ ಹಿತಾರ್ಥವಾಗಿ ಹಗಲಿರುಳು ದುಡಿಯುವನು (೫೧೩). ಅವನು ಸತ್ಯವನ್ನು ಪ್ರತ್ಯಕ್ಷ ಪ್ರತೀತಿಯಿಂದ ಕಣ್ಣಾರೆ ಕಂಡವನಾದುದರಿಂದ ಸಾಕ್ಷಾತ್ಕಾರಿಯು. ತನ್ನಾತ್ಮನಲ್ಲಿ ಪರಮಾತ್ಮಜ್ಯೋತಿಯ ಅನುಭವವನ್ನು ಪಡೆದವನಾದುದರಿಂದ ಅವನು ಅನುಭಾವಿಯು. ಎಲ್ಲ

ತತ್ವಜ್ಞಾನವನ್ನು ಕರತಲಾಮಲಕದಂತೆ ಸ್ಪಷ್ಟವಾಗಿ ಅರಿತಿರುವುದರಿಂದ ಜ್ಞಾನಿಯವನು. ಜ್ಞಾನಿಯಾದುದರಿಂದ ಅವನು ಕರ್ಮಬಂಧನವನ್ನು ದಾಟಿದವನು. ಕಾಮನೆಗಳ ಪರಮಾವಧಿಯನ್ನು ಕಂಡವನಾದುದರಿಂದ ಅವನು ನಿಷ್ಕಾಮನು. ಆತ್ಯಂತಿಕಸುಖವನ್ನನುಭವಿಸಿದವನಾದುದರಿಂದ ಅವನು ಪರಮಾನಂದಿಯು. ಕಾಣಬಾರದ ವಸ್ತು ಕೈಸೇರಿದುದರಿಂದ ಅನು ಭಾವಿಯು ಆನಂದದಿಂದಾಡುವನು. ಕಣ್ಣಾತುಂಬ ಪರಮಾತ್ಮನನ್ನು ಎಲ್ಲೆಲ್ಲಿಯೂ ಕಂಡು ಪರಮಸುಖಿಯಾಗಿರುವನು (೧೦೩). ಅವನಿಗೆ ತೆರ ಹಿಲ್ಲದ ನಡೆ, ತೆರಹಿಲ್ಲದ ನುಡಿ, ತೆರಹಿಲ್ಲದ ಸಂಭಾಷಣೆಯ ಸುಖವು ದೊರೆ ಕೊಳ್ಳುವದು (೧೧೫). ಅವನು ಪರಮಾತ್ಮನೊಡನೆ ಐಕ್ಯಭೂಮಿಕೆಯಲ್ಲಿ ಇರುವುದರಿಂದ ದ್ವಂದ್ವಾತೀತನಿರುವನು (೧೩೮). ಈ ಪರಿ ನಿತ್ಯಮುಕ್ತನಿದ್ದು ಅವನು ಮೈಗೆ ಮಣ್ಣುಹತ್ತದ ಕುಂಡಲಿಗ ಕೀಟದಂತೆ, ಜಲದೊಳಗಿನ ತಾವರೆಯಂತೆ, ತನುಮನಗುಣಗಳನ್ನು ಹೊದ್ದದೆ ಸತ್ಕಾರ್ಯಮಾಡುತ್ತ ಪ್ರಪಂಚದಲ್ಲಿ ವಿಹರಿಸುವನು (೧೪೩). ಅವನು ಕಾಮಿಸಿ ಕಾಮಿಯಲ್ಲ, ಭಾವಿಸಿ ಭಾವಿಯಲ್ಲ, ಮಾಡಿ ಬದ್ಧನಲ್ಲ. ಯಾಕಂದರೆ ಅವನು ಜಗಹಿತಕ್ಕಾಗಿ ಕಾಮಿಸುವನು, ಭಾವಿಸುವನು, ಆಚರಿಸುವನು, ಹೊರತು ತನಗಾಗಿ ಏನೂ ಮಾಡನು, ನೋಡನು, ನುಡಿಯನು, ನಡೆಯನು. ಅವನು ಅಂತರದಲ್ಲಿ ನಿರಂಜನನು, ನಿರಾಮಯನು (೧೪೫). ನೀರೊಳಗಿನಿಂದ ನಾವನ್ನು ನಡೆಸುವ ಅಂಬಿಗನಿಗೆ ನೀರುತಾಕದಂತೆ ಸಂಸಾರವನ್ನು ಸುಸೂತ್ರ ಸಾಗಿಸುವ ಶರಣಭಕ್ತನಿಗೆ ಸಂಸಾರವು ಹೊದ್ದದು (೧೪೭). ವಚನಸಿದ್ಧನ ನಿಲುಕಡೆ ಈ ರೀತಿ ಇರುವದು.

೬೮. ಇದುವರೆಗೆ ವಚನಶಾಸ್ತ್ರದ ಉಪದೇಶಸಾರವನ್ನು ಅದಷ್ಟು ಸಂಕ್ಷೇಪದಿಂದ ಹೇಳಿದ್ದಾಯಿತು. ಇನ್ನು ಆ ವಿಷಯದ ಉಪಸಂಹಾರ ಮಾಡಿ ಈ ಪ್ರಕರಣವನ್ನು ಮುಗಿಸಬಹುದು. ವಚನಶಾಸ್ತ್ರವೆಂದರೆ ವಚನ ರೂಪದಲ್ಲಿ ಉಪದೇಶಿಸಲ್ಪಟ್ಟ ಅಧ್ಯಾತ್ಮಶಾಸ್ತ್ರವು ಅಥವಾ ಮೋಕ್ಷ ಶಾಸ್ತ್ರವು. ಅಧ್ಯಾತ್ಮಶಾಸ್ತ್ರವೆಂದರೆ ಆತ್ಮಸ್ವರೂಪದ ಅಥವಾ ಪರಾತ್ಪರ ಮೂಲವಸ್ತುವಿನ ರೂಪದ ಪ್ರತ್ಯಕ್ಷ ಜ್ಞಾನವನ್ನುಂಟುಮಾಡಿಕೊಡುವ ಶಾಸ್ತ್ರವು. ಮೋಕ್ಷಶಾಸ್ತ್ರವೆಂದರೆ ಮನುಷ್ಯನಿಗೆ ಮುಕ್ತಿಯನ್ನು ದೊರಕಿಸಿಕೊಡುವ ಶಾಸ್ತ್ರವು. ಇವೆರಡೂ ಒಂದೇ, ಯಾಕಂದರೆ ಆತ್ಮಸ್ವರೂಪದ ಸಾಕ್ಷಾತ್ಕಾರವಾಗದೆ ಮುಕ್ತಿಯು ಕೈವಶವಾಗಲರಿಯದು. ಮನುಷ್ಯನ ಅಂತಃಕರಣದಲ್ಲಿ ಜನ್ಮತಃ ಮತ್ತು ಸ್ವಾಭಾವಿಕವಾಗಿರುವ ನಿತ್ಯ ಸತ್ಯ ಆನಂದದ ಹಸಿವೆ

ಯನ್ನು ಹಿಂಗಿಸುವದೆ ಈ ಶಾಸ್ತ್ರದ ಉದ್ದೇಶವು. ಈ ಉದ್ದೇಶವನ್ನು ಸಫಲಗೊಳಿಸುವದಕ್ಕಾಗಿ ಅನೇಕ ಮಹನೀಯರು ಸ್ಫೂರ್ತಿಯಿಂದ, ನಿರಪೇಕ್ಷ ನಿರ್ಮಲ ಮತ್ತು ಸುತೀಕ್ಷ್ಣಬುದ್ಧಿಯಿಂದ, ಸ್ವಾನುಭವದಿಂದ ಶೋಧಿಸಿ ನಿಶ್ಚಯಿಸಿದ ಮಾರ್ಗವೆ ಈಗ ಅಧ್ಯಾತ್ಮಶಾಸ್ತ್ರ ಅಥವಾ ಮೋಕ್ಷ ಶಾಸ್ತ್ರ, ಎಂದು ಕರೆಯಲ್ಪಡುತ್ತಿರುವದು. ಕರ್ನಾಟಕದ ವಚನಕಾರರು ಅದೇ ಮಾರ್ಗದಿಂದ ತಾವು ಸ್ವತಃ ನಡೆದು, ಅನುಭವಪಡೆದು, ತಮ್ಮ ಅನುಭಾವವಾಣಿಯಿಂದ ಆ ಮಾರ್ಗವನ್ನು ಕನ್ನಡನುಡಿಯಲ್ಲಿ ಹೇಳಿದ್ದು ವಚನಶಾಸ್ತ್ರವೆನಿಸುತ್ತಿರುವದು. ನಿತ್ಯಸತ್ಯ ಆನಂದದ ಶೋಧಮಾಡುವಾಗ ಸ್ವಾಭಾವಿಕವಾಗಿ, ಸುಖದುಃಖಗಳ ಸ್ವರೂಪ, ನಿತ್ಯಾನಿತ್ಯಸುಖಗಳ ಸ್ವರೂಪ, ವ್ಯಕ್ತಿಗೆ ಈ ಸುಖಗಳು ಯಾಕೆ ಆಗುವವು, ವ್ಯಕ್ತಿ ಅಂದರೆ ಯಾರು, ಅವನು ಎಲ್ಲಿಂದ ಬಂದನು, ಎಲ್ಲಿಗೆ ಹೋಗುವನು, ದುಃಖವನ್ನು ನೀಗಿ ಅವನು ನಿತ್ಯ ಆನಂದವನ್ನು ಹೇಗೆ ಪಡೆಯಬಲ್ಲನು, ಎಂಬ ಪ್ರಶ್ನೆಗಳ ಶೋಧವು ಮಾಡಲ್ಪಟ್ಟಿತು. ಆ ಬಳಿಕ ಆ ನಿತ್ಯ ಆನಂದವನ್ನು ಅಳವಡಿಸುವ ಮಾರ್ಗವು ಅನುಭವದಿಂದ ನಿಶ್ಚಯಿಸಲ್ಪಟ್ಟಿತು. ಹೀಗೆ ಈ ಶಾಸ್ತ್ರದಲ್ಲಿ ತತ್ವವಿವೇಚನೆ ಮತ್ತು ಸಾಧನಮಾರ್ಗ ಎಂಬ ಎರಡು ಭಾಗಗಳನ್ನು ಮಾಡ ಬಹುದು. ಮೊದಲನೆಯ ಭಾಗವು ಸತ್ಯವನ್ನು ಸ್ಪಷ್ಟವಾಗಿ ವಿವರಿಸುವದು, ಎರಡನೆಯ ಭಾಗವು ಆ ಸತ್ಯವನ್ನು ಸಾಕ್ಷಾತ್ಕರಿಸುವ ಹಾದಿಯನ್ನು ಹೇಳುವದು.

೬೯. ಮೊದಲು ವಚನಕಾರರ ತತ್ವವಿವರಣೆಯನ್ನು ನೋಡುವ. ನಮಗೆ ಗೋಚರವಾಗುವ ವಿಶ್ವವು ವಿವಿಧವು, ಪರಿವರ್ತನಶೀಲವು, ವ್ಯಕ್ತಿಗಳಿಂದ ಕೂಡಿದ್ದು, ಜಡ ಚೇತನರೂಪವು, ಸಗುಣವು. ಹೀಗೆ ಇದ್ದರೂ ಇದೆಲ್ಲ ಪಸಾರವು ಒಂದೇ ಒಂದು ನಿತ್ಯ, ನಿರ್ಗುಣ, ಶುದ್ಧ ಚೈತನ್ಯರೂಪ, ಅನಾದಿ, ಅನಂತ ಪರತತ್ವದಿಂದಲೆ ಉಂಟಾಯಿತು. ಆ ನಿರ್ಗುಣ ಪರ ತತ್ವವು ಸ್ವಲೀಲೆಯಿಂದ ಅಥವಾ ಸ್ವಭಾವದಿಂದ ಸತ್ ಚಿತ್ ಆನಂದ ನಿತ್ಯ ಪರಿಪೂರ್ಣವಾಗಿ ನಿಃಕಲ ತತ್ವವೆನಿಸುವದು. ಆ ನಿಃಕಲ ತತ್ವವು ತದ್ಗತವಾದ ಶಕ್ತಿಯು ಚಲನಮಾತ್ರದಿಂದ ಪ್ರವೃತ್ತಿ ನಿವೃತ್ತಿರೂಪವಾಗಿ ಎರಡು ತೆರವಾಯಿತು. ವಿಶ್ವನಿರ್ಮಾಣಕಾರ್ಯವು ಪ್ರವೃತ್ತಿಮುಖದಿಂದಾಗುವದು, ವಿಶ್ವನಿವೃತ್ತಿಕಾರ್ಯವು ನಿವೃತ್ತಿಮುಖದಿಂದ ಆಗುವದು. ಪ್ರವೃತ್ತಿಯ ಕ್ರಿಯಾಶಕ್ತಿಯ ದ್ವಾರಾ ಮತ್ತು ಮಾಯಾಶಕ್ತಿಯ ಸಹಾಯದಿಂದ ಒಂದೆಡೆಗೆ ಪುರುಷ, ಇನ್ನೊಂದೆಡೆಗೆ ಪ್ರಕೃತಿ ಇವು ಉತ್ಪನ್ನವಾಗುವವು. ಪುರು

ಷನು ಚೈತನ್ಯರೂಪನು ಪ್ರಕೃತಿಯು ಜಡರೂಪವು. ತ್ರಿಗುಣಾತ್ಮಕ ಪ್ರಕೃತಿಯಿಂದ ಮುಂದೆ ಮಹತ್ ಅಥವಾ ಬುದ್ಧಿ, ಅಹಂಕಾರ, ಮನಸ್ಸು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ತನ್ಮಾತ್ರೆಗಳು, ಮತ್ತು ಐದು ಮಹಾಭೂತಗಳು ಹೀಗೆ ಇಪ್ಪತ್ತುಮೂರು ತತ್ವಗಳು ನಿರ್ಮಾಣವಾದವು. ಪುರುಷನಿಂದ ಮೊದಲುಮಾಡಿ ಐದು ಮಹಾಭೂತಗಳಿಂದ ಕಡೆಮಾಡಿ ಆಗುವ ಒಟ್ಟು ಇಪ್ಪತ್ತೈದು ತತ್ವಗಳ ಪರಸ್ಪರ ಸಂಯೋಗದಿಂದ ಈ ವಿವಿಧ ಸೃಷ್ಟಿ ಮತ್ತು ಅದರಲ್ಲಿಯ ಅನೇಕ ಪದಾರ್ಥಗಳು ಹುಟ್ಟಿದವು. ಈ ೨೫ ತತ್ವಗಳಲ್ಲಿ ಶಿವ, ಶಕ್ತಿ, ಸಾದಾಖ್ಯ ಅಥವಾ ಸದಾಶಿವ, ಈಶ್ವರ, ಸದ್ವಿದ್ಯೆ, ಮಾಯೆ, ಕಾಲ, ನಿಯತಿ, ಕಲಾ, ವಿದ್ಯೆ, ರಾಗ ಈ ಹನ್ನೊಂದು ತತ್ವಗಳನ್ನು ಕೂಡಿಸಿ ಒಟ್ಟು ೩೬ ತತ್ವಗಳೆಂದು ಹೇಳುವದುಂಟು (ವಿವರವನ್ನು ೧೮೨ ನೆಯ ಪರಿಚ್ಛೇದದಲ್ಲಿ ನೋಡಿಕೊಳ್ಳಬೇಕು). ಲೋಕಾದಿಲೋಕಂಗಳು, ಅನಂತ ವಸ್ತುಗಳು, ಮತ್ತು ಅನಂತ ಜೀವರಾಶಿಗಳು ಈ ರೀತಿ ನಿರ್ಮಾಣವಾದವು. ಈ ವಿಶ್ವದಲ್ಲಿ ಕೇವಲ ಜಡ ವಸ್ತು ಅಥವಾ ಕೇವಲ ಚೇತನವಸ್ತು ಎಂಬುದು ಇಲ್ಲ. ಇದರ ಅರ್ಥವೇನಂದರೆ, ಅವುಗಳ ಪ್ರಮಾಣವು ಎಷ್ಟೇ ಹೆಚ್ಚು ಕಡಿಮೆ ಇದ್ದರೂ ಪುರುಷ ಮತ್ತು ಪ್ರಕೃತಿ ಇವೆರಡರ ಸಂಯೋಗವಿಲ್ಲದೆ ವಸ್ತುನಿರ್ಮಿತಿಯು ಆಗಲರಿಯದು. ಪುರುಷಾಂಶವು ಹೆಚ್ಚಿದಂತೆ ಜೀವಕೋಟಿಯು ನಿರ್ಮಾಣವಾಗಿ ಅದರಲ್ಲಿ ಮತ್ತೆ ಬುದ್ಧಿಯು ಹೆಚ್ಚಾಗಿ ಪ್ರಾಣಿಗಳು ಹುಟ್ಟುವವು. ಪ್ರಕೃತಿಯ ಅಂಶವು ಹೆಚ್ಚಿದಂತೆ ಕಲ್ಲು, ಮಣ್ಣು, ನೀರು, ಮುಂತಾದ ಜಡ ಪದಾರ್ಥಗಳು ಹುಟ್ಟುವವು. ಅದೇರೀತಿ ಕೇವಲ ಪ್ರವೃತ್ತಿ ಅಥವಾ ಕೇವಲ ನಿವೃತ್ತಿ ಇದು ಪ್ರತ್ಯೇಕವಾಗಿ ವಿಶ್ವದಲ್ಲಿರುವದು ಅಶಕ್ಯವು. ಪ್ರವೃತ್ತಿಯು ಅಧೋಮುಖವು, ಸಂಸೃತಿಕಾರಣವು, ಬಂಧನಕಾರಕವು. ನಿವೃತ್ತಿಯು ಊರ್ಧ್ವಮುಖವು, ಐಕ್ಯಕಾರಣವು, ಮುಕ್ತಿದಾಯಕವು. ಅನೇಕ ಜನ್ಮಗಳ ಅನುಭವದ ನಂತರ ಜೀವಾತ್ಮನ ಜಡಾವರಣವು ಕಡಿಮೆಯಾಗಿ, ಅವನಲ್ಲಿಯ ಚೇತನಾಂಶವು ಹೆಚ್ಚಾಗಿ ಅವನಿಗೆ ಇಂದ್ರಿಯಗಳಿಂದಾಗುವ ಅನಿತ್ಯ ಸುಖವು ಬೇಡಾಗುವದು ಮತ್ತು ನಿತ್ಯಸುಖವು ಬೇಕಾಗುವದು. ಅದೇ ಮುಕ್ತಿಯ ಬಯಕೆಯು. ಅವನು ಇಂದ್ರಿಯಸುಖಗಳಿಗೆ ಮರುಳಾಗಿ ವಿಷಯಗಳನ್ನು ಬೆಂಬಳಿಸಿದರೆ ಪುನಃಪುನಃ ಜನನಮರಣಕ್ಕೆ ಒಳಗಾಗಿ ಕರ್ಮಚಕ್ರದಲ್ಲಿ ಸುತ್ತಾಡುವನು. ಅನಿತ್ಯ ಮತ್ತು ಸದೋಷವಾದ ಇಂದ್ರಿಯಸುಖಗಳನ್ನು ಹೀಯಾಳಿಸಿ ನಿತ್ಯನಿರ್ದೋಷ ಆನಂದವನ್ನರಸಲಾ

ರಂಭಿಸಿದರೆ ಅವನು ಮೆಲ್ಲಮೆಲ್ಲನೆ ಮೋಕ್ಷಮಾರ್ಗವನ್ನು ಹಿಡಿಯುವನು. ಕೊನೆಗೆ, ದ್ವಂದ್ವರಹಿತನಾಗಿ, ನಿತ್ಯಸುಖವನ್ನನುಭವಿಸುವ ಜೀವನ್ಮುಕ್ತನಾಗಿ, ಅವನು ಜನನಮರಣರಹಿತ ಮೋಕ್ಷವನ್ನು ಪಡೆಯುವನು. ಅವನು ದೇಹಧಾರಿ ಇದ್ದರೂ ಅವನ ದೇಹಕ್ಕೆ ಶೀತೋಷ್ಣಾದಿಗಳು ತಗಲುತ್ತಿದ್ದರೂ ಅವೆಲ್ಲವುಗಳನ್ನು ಅವನು ಶಾಂತರೀತಿಯಿಂದ ತಾಳುವನು. ಅವನ ಮನಸ್ಸು ಸಾಮ್ಯವನ್ನು ಅಂದರೆ ಸಮ ಅವಸ್ಥೆಯನ್ನು ಪಡೆದಿರುವುದರಿಂದ ಮತ್ತು ಎಲ್ಲೆಲ್ಲಿಯೂ ಪರಮಾತ್ಮನನ್ನು ಕಾಣುತ್ತಿರುವುದರಿಂದ ಅವನು ಸತತ ಶಾಂತಿಯನ್ನು ಅನುಭವಿಸುವನು. ಆಪ್ತಕಾಮನಾದುದರಿಂದ ಅವನು ಕೇವಲ ಲೋಕಹಿತಾರ್ಥವಾಗಿ ಸತ್ಕಾರ್ಯಮಾಡುತ್ತ ಕರ್ಮಬಂಧನವಿಲ್ಲದೆ ಜೀವನವನ್ನು ನಿತ್ಯಾನಂದದಿಂದ ಸಾಗಿಸುವನು.

೭೦. ಇದೆಲ್ಲ ತತ್ವವಿಚಾರವಾಯಿತು. ಇನ್ನು ಈ ಬಗೆಯ ಮುಕ್ತ ಸ್ಥಿತಿಯನ್ನು ಹೇಗೆ ಪಡೆಯಬೇಕು ಎಂದು ಹೇಳುವುದೇ ಸಾಧನಮಾರ್ಗವು. ಜೀವಾತ್ಮನು ತಾನೊಂದು ಪ್ರತ್ಯೇಕ ವ್ಯಕ್ತಿಯು, ತಾನು ದುಃಖಿಯು, ಪಾಪಿಯು, ಅಲ್ಪಬುದ್ಧಿಯು, ಅಲ್ಪಶಕ್ತಿಯು, ಎಂಬುದನ್ನು ಅನುಭವಿಸುವನು. ಅದೇ ಕಾಲಕ್ಕೆ ತನ್ನ ಸುತ್ತಲಿರುವ ವಿಶಾಲ ವಿಶ್ವವು ಸುಬದ್ಧವೂ ಸುಸೂತ್ರವೂ ನಿಯಮಾಂಕಿತವೂ ಆಗಿ ನಡೆದಿರುವದೆಂಬುದನ್ನು ಪ್ರತ್ಯಕ್ಷ ನೋಡುವನು. ಈ ಪರಿ, ವಿಶ್ವವು ಯಾವ ಶಕ್ತಿಯ ಮೂಲಕ ನಡೆದಿರುವದೊ ಅದಕ್ಕೆ ಅನನ್ಯ ಶರಣಾಗತನಾಗಿ ತಾನೊಂದು ಪ್ರತ್ಯೇಕ ಬೇರೆ ವ್ಯಕ್ತಿಯಲ್ಲ, ತಾನೂ ಒಂದು ಆ ಪ್ರಚಂಡ ವಿಶ್ವಶಕ್ತಿಯ ಅಂಶನು ಮಾತ್ರ, ಎಂಬುದನ್ನು ಅರಿತುಕೊಳ್ಳಬೇಕು. ಅಂದರೆ ಅವನ ಅಹಂಕಾರಾಭಿಮಾನಗಳು ಅಳಿದು ಹೋಗುವವು. ವಿಷಯಸುಖಗಳು ಭಂಗುರವಿರುವುದರಿಂದಲೂ ಸದೋಷವಿರುವುದರಿಂದಲೂ ಅವುಗಳನ್ನು ಬಿಟ್ಟು ನಿತ್ಯಸುಖದ ಕಡೆಗೆ ಹೆಚ್ಚೆಚ್ಚು ಪ್ರವೃತ್ತನಾಗಲಿಕ್ಕೆ ಅವನು ಯತ್ನಿಸಬೇಕು. ಅಂದರೆ ಅವನಲ್ಲಿ ವೈರಾಗ್ಯವು ನೆಲೆಗೊಂಡು ಮುಮುಕ್ಷುವೃತ್ತಿಯು ಸ್ಥಿರವಾಗುವದು. ತಾನು ಈ ದೇಹವಲ್ಲ, ದೇಹಗತವಾದ ಮನಸ್ಸಲ್ಲ, ಮನೋಗತವಾದ ಬುದ್ಧಿಯಲ್ಲ, ಆದರೆ ತಾನು ಪರಮಾತ್ಮನ ಅಂಶನಾದ ಚೈತನ್ಯಮಯ ಆತ್ಮನು, ಎಂಬ ಭಾವವನ್ನು ದೃಢಪಡಿಸುತ್ತ ಹೋಗುವದು ಅವಶ್ಯವು. ಇದೇ ಆತ್ಮವಿಚಾರವೆನಿಸುವದು ಅಥವಾ ಆತ್ಮಾನಾತ್ಮ ವಿವೇಕವೆನಿಸುವದು. ಹೀಗಾಯಿತೆಂದರೆ ತಾನು ಮತ್ತು ವಿಶ್ವನಿಯಾಮಕ ಶಕ್ತಿ ಇವೆರಡೂ ತತ್ವತಃ ಒಂದೇ, ಎಂಬ ಭಾವವು ಉದ್ಭವಿಸಿ ಭಯಶೋಕಮೋಹಾದಿಗಳು

ಮಾಯವಾಗುವವು. ವಿಷಯಸುಖಗಳನ್ನು ಬಿಟ್ಟು ಆತ್ಮಸುಖವನ್ನು ಬೆಂಬಳಿಸುತ್ತ ಹೋದಂತೆ ಮನಸು ಹೆಚ್ಚೆಚ್ಚು ನಿಷ್ಕಾಮ ಮತ್ತು ಶಾಂತವಾಗುತ್ತ ನಡೆಯುವದು ನಿಷ್ಕಾಮತೆಯ ಮೂಲಕ ಮನಸು ನಿರ್ಮಲವೂ ಉತ್ಸಾಹಪೂರ್ಣವೂ ಅರಿಷಡ್ವರ್ಗಂಗಳಿಂದ ಮುಕ್ತವೂ ಆಗುವದು. ಸಾಧಕನು ಆ ಬಳಿಕ ತನ್ನ ಭಾವಸರ್ವಸ್ವವನ್ನೆಲ್ಲ ಪರಮಾತ್ಮನಿಗೆ ಅರ್ಪಣ ಮಾಡಲು ಸಮರ್ಥನಾಗುವನು ಹಾಗೂ ಅವನ ವಿಚಾರ, ಉಚ್ಚಾರ, ಆಚಾರ, ಇವೆಲ್ಲ ಪರಮಾತ್ಮ ಪ್ರೀತ್ಯರ್ಥ ಅಥವಾ ಅವನ ಕಾರ್ಯಸಿದ್ಧ್ಯರ್ಥವಾಗಿಯೆ ಆಗುವವು. ಸಾಧಕನು ಪರಮಾತ್ಮಧ್ಯಾನದಲ್ಲಿಯೆ ಸತತ ರತನಾಗಲು ಯತ್ನಿಸಬೇಕು ಅಂದರೆ ಈ ಅವನ ಭಾವವು ಸ್ಥಿರವಾಗುವದು. ಈ ಸ್ಥಿತಿಯನ್ನು ಮುಟ್ಟಿದವನು ಸ್ವಾಭಾವಿಕವಾಗಿ ಸತ್ಯ, ಅಹಿಂಸೆ, ಅಸ್ತೇಯ, ಪರಧನ ಪರಸ್ತ್ರೀಯರ ಬಗ್ಗೆ ನಿರಪೇಕ್ಷೆ, ಬ್ರಹ್ಮಚರ್ಯ, ಈ ಮುಂತಾದ ನೈತಿಕ ಗುಣಗಳಿಂದ ಯುಕ್ತನಾಗುವನು. ತನ್ನದೆಂಬ ಕರ್ತವ್ಯವೇನೂ ಅವನಿಗೆ ಉಳಿಯದಿರುವದರಿಂದ ಅವನು ತನ್ನ ಚಿತ್ತವನ್ನು ಪರಮಾತ್ಮನಲ್ಲಿಟ್ಟು ಸರ್ವಲೋಕಹಿತದಕ್ಷನಾಗಬೇಕು. ಸರ್ವಾರ್ಪಣ ಅಥವಾ ಸ್ವಾತ್ಮಾರ್ಪಣದಿಂದ ಪ್ರಾರಂಭಿಸಿದ ತನ್ನ ಸಾಧನವನ್ನು ಸಾಧಕನು ನಿಶ್ಚಿತ ನಿಃಸಂಶಯ ಆತ್ಮಜ್ಞಾನ, ಅನನ್ಯ ನಿರ್ಹೇತುಕ ಪರಮಾತ್ಮಭಕ್ತಿ, ನಿಷ್ಕಾಮ ಫಲಾಶಾರಹಿತ ಸ್ವಕರ್ಮ, ಪರಮಾತ್ಮಧ್ಯಾನ ಇವುಗಳಿಂದ ಪರಿಪೂರ್ಣಗೊಳಿಸಬೇಕು, ಅಂದರೆ ಅವನು ಜೀವನ್ಮುಕ್ತನಾಗಿ, ಪರಮಾತ್ಮನೊಡನೆ ಸಮರಸನಾಗಿ, ಪರಮಾನಂದಪದವಿಯಲ್ಲಿ ಆರೂಢನಾಗುವನು. ವಚನಕಾರರ ತತ್ವವಿವರಣೆ ಮತ್ತು ಸಾಧನಮಾರ್ಗ ಇವು ಹೀಗೆ ಇರುವವು. ಇದೇ ವಚನಶಾಸ್ತ್ರದ ಸಾರವಿರುವದು.

---

೪. ಪೂರ್ಣ ಮತ್ತು ನಿಜಧರ್ಮದ ಸ್ವರೂಪವು

(೭೧) ಧರ್ಮವೆಂದರೇನು? ಧರ್ಮಶಾಸ್ತ್ರ ಮತ್ತು ಅಧ್ಯಾತ್ಮಶಾಸ್ತ್ರ. ಅಭ್ಯುದಯನಿಶ್ರೇಯಸಗಳೇ ಧರ್ಮದ ಧ್ಯೇಯಗಳು. (೭೨) ಮನುಷ್ಯನು ಸಾಮಾಜಿಕ ಪ್ರಾಣಿಯು. ಅವನ ವ್ಯಕ್ತಿತ್ವವೆಂದರೇನು? (೭೩) ವ್ಯಕ್ತಿ ಹಾಗೂ ಸಮಾಜ ಈ ಇಬ್ಬರ ಹಿತವನ್ನು ಸಾಧಿಸತಕ್ಕದ್ದು. (೭೪) ಅಭ್ಯುದಯ ನಿಶ್ರೇಯಸಗಳೆಂದರೇನು? (೭೫) ಪರಮ ಸುಖವೇ

ಅತ್ಯಂತಿಕ ಧ್ಯೇಯವು ಮತ್ತು ಅಭ್ಯುದಯವು ಅದರ ಪೂರ್ವ ಸಾಧನವು. (೭೬) ಮನುಷ್ಯನ ವ್ಯಕ್ತಿತ್ವದ ಘಟಕಗಳಾವವು? (೭೭) ದೇಹ, ಮನ, ಮತ್ತು ಆತ್ಮಾ ಇವೇ ಮುಖ್ಯ ಮೂರು ಘಟಕಗಳು. (೭೮) ದೇಹ, ಮನ, ಸಮಾಜ ಇವುಗಳ ಸುಸ್ಥಿತಿಯೆ ಅಭ್ಯುದಯವು. (೭೯) ಸಾಧಕ ಮತ್ತು ಸಿದ್ಧ ಈ ಎರಡೂ ಅವಸ್ಥೆಗಳಲ್ಲಿ ದೇಹ ಮನ ಸಮಾಜಗಳ ಸುಸ್ಥಿತಿಯು ಅವಶ್ಯವು. (೮೦) ದೇಹದ ಅಭ್ಯುದಯವೆಂದರೇನು? (೮೧) ಮನಸಿನ ಅಭ್ಯುದಯವೆಂದರೇನು? (೮೨) ಸಮಾಜದ ಅಭ್ಯುದಯವೆಂದರೇನು? (೮೩) ದೇಹದ ಸುಸ್ಥಿತಿಗಾಗಿ ಅನ್ಯ ಶಾಸ್ತ್ರಗಳ ಅಭ್ಯಾಸ. (೮೪) ಮನಸಿನ ಸುಸ್ಥತಿಗಾಗಿ ಅನ್ಯ ಶಾಸ್ತ್ರಗಳ ಅಭ್ಯಾಸ. (೮೫) ಸಮಾಜದ ಸುಸ್ಥಿತಿಗಾಗಿ ಅರ್ಥಶಾಸ್ತ್ರಾದಿಗಳ ಅಭ್ಯಾಸ. (೮೬) ಆತ್ಮನು ಮತ್ತು ಅವನ ಕಲ್ಯಾಣ. (೮೭) ಜೀವನ್ಮುಕ್ತಿಯ ಮುಖ್ಯ ಲಕ್ಷಣಗಳು. (೮೮) ಅಭ್ಯುದಯನಿಶ್ರೇಯಸಗಳನ್ನು ಏಕಕಾಲಕ್ಕೆ ಸಾಧಿಸತಕ್ಕದ್ದು. (೮೯) ಯೋಗಸಮನ್ವಯರೂಪಸಾಧನಮಾರ್ಗವು. (೯೦) ಆದರ್ಶಧರ್ಮದ ಮುಖ್ಯ ಲಕ್ಷಣಗಳು.

೭೧. ಹೋದ ಎರಡು ಪ್ರಕರಣಗಳಲ್ಲಿ ವಚನಶಾಸ್ತ್ರದ ಸ್ವರೂಪ ಮತ್ತು ಮಹತ್ವ ಹಾಗೂ ಆ ಶಾಸ್ತ್ರದ ಸಾರೋಪದೇಶ ಇವುಗಳ ವಿವರಣೆಯಾಯಿತು. ಇನ್ನು ನಿಜಧರ್ಮವೆಂದರೇನು, ಅದರ ಸ್ವರೂಪವು ಹೇಗೆ ಇರುವದು, ಎಂಬುದನ್ನು ಈ ಪ್ರಕರಣದಲ್ಲಿ ವಿಚಾರಿಸುವೆವು ಅಂದರೆ ವಚನಶಾಸ್ತ್ರದಲ್ಲಿ ಹೇಳಲ್ಪಟ್ಟ ಧರ್ಮವು ಎಷ್ಟರಮಟ್ಟಿಗೆ ಆದರ್ಶಧರ್ಮವನ್ನು ಸರಿಗಟ್ಟುವದು, ಇವನ್ನು ನೋಡಿಕೊಳ್ಳಲಿಕ್ಕೆ ವಾಚಕರಿಗೆ ಅನುಕೂಲವಾಗುವದು. ಧರ್ಮಶಬ್ದವು, ಕರ್ತವ್ಯ, ಸ್ವಭಾವ, ಆಚಾರ, ಈ ಮುಂತಾದ ಅನೇಕಾರ್ಥಗಳಲ್ಲಿ ಉಪಯೋಗಿಸಲ್ಪಡುವದು. ಇಲ್ಲಿ, ಯಾವ ತತ್ವಗಳ ಹಾಗೂ ಆಚರಣೆಯ ಮೂಲಕ ಮನುಷ್ಯನು ತನ್ನ ವೈಯ್ಯಕ್ತಿಕ ಮತ್ತು ಸಾಮಾಜಿಕ ಅತ್ಯಂತಿಕ ಉಚ್ಚ ಧ್ಯೇಯಗಳನ್ನು ಸಾಧಿಸಬಲ್ಲನೊ ಆ ತತ್ವಗಳ ಹಾಗೂ ಆಚರಣೆಯ ಸಮೂಹಕ್ಕೆ ಧರ್ಮವೆಂಬ ಹೆಸರು ಕೊಡಲ್ಪಟ್ಟಿದೆ. ಇನ್ನೊಂದು ರೀತಿ ಹೇಳಬೇಕಾದರೆ, ಮನುಷ್ಯನ ಇತಿ ಕರ್ತವ್ಯವನ್ನು ನಿಶ್ಚಯಿಸುವ ತತ್ವವಿಚಾರ ಮತ್ತು ತದನುಸಾರವಾಗಿ ನಿಶ್ಚಯಿಸಿದ ಕರ್ತವ್ಯ, ಇವೆರಡೂ ಕೂಡಿ ಇಲ್ಲಿ ಧರ್ಮವೆನಿಸುವದು. ಈ ವಿಷಯಗಳನ್ನು ವಿಚಾರಿಸುವ ಶಾಸ್ತ್ರಕ್ಕೆ ಧರ್ಮಶಾಸ್ತ್ರವೆನ್ನಬಹುದು. ಈ ಅರ್ಥವನ್ನು ಲಕ್ಷದಲ್ಲಿಟ್ಟುನೋಡಿದರೆ, ಅಧ್ಯಾತ್ಮಶಾಸ್ತ್ರದಲ್ಲಿಯ ಅಥವಾ

ಮೋಕ್ಷಶಾಸ್ತ್ರದಲ್ಲಿಯ ಸಾಧನದ ಮೂಲತತ್ವಗಳು ಮತ್ತು ಆ ಸಾಧನಗಳು, ಇವೇ ಧರ್ಮಶಾಸ್ತ್ರದ ವಿಷಯಗಳಾಗಿರುವವೆಂದು ಕಂಡುಬರುವದು. ತತ್ವತಃ ನೋಡಿದರೆ, ಅಧ್ಯಾತ್ಮಶಾಸ್ತ್ರ ಮತ್ತು ಧರ್ಮಶಾಸ್ತ್ರ ಇವುಗಳಲ್ಲಿ ಪೋಷ್ಯಪೋಷಕ ಸಂಬಂಧವಿರುವದು. ಅಧ್ಯಾತ್ಮಶಾಸ್ತ್ರವು ವಿಶೇಷತಃ ತತ್ವಜ್ಞಾನವನ್ನು ಕುರಿತು ವಿವೇಚಿಸುವದು. ಧರ್ಮಶಾಸ್ತ್ರವು ವಿಶೇಷವಾಗಿ ಮಾನವೀಧ್ಯೇಯವನ್ನು ಮುಟ್ಟುವ ಸಾಧನವನ್ನು ಕುರಿತು ವಿವೇಚಿಸುವದು. ಧರ್ಮಶಬ್ದದ ವ್ಯುತ್ಪತ್ತಿಯನ್ನು ನೋಡಿದರೆ, ಅದು 'ಧೃ' ಎಂಬ ಧಾತುವಿನಿಂದ ಸಿದ್ಧವಾಗಿರುವನು. 'ಧೃ' ಅಂದರೆ ಹಿಡಿ, ಎತ್ತಿಹಿಡಿ, ನಿಲ್ಲುವಂತೆ ಮಾಡು, ಪೋಷಿಸು. ಇದೇ ಧಾತುವಿನಿಂದ, ಧೃತಿ ಅಂದರೆ ಒಂದೇ ಸ್ಥಿತಿಯಲ್ಲಿ ಸ್ಥಿರವಾಗಿ ನಿಲ್ಲಿಸುವಸಾಮರ್ಥ್ಯವು, ಧೈರ್ಯ ಅಂದರೆ ನಿರ್ಧಯತೆಯಿಂದ ಸಹಿಸುವದು ಅಥವಾ ಮುಂದಕ್ಕೆ ಸಾಗುವದು, ಧಾರಣೆ ಅಂದರೆ ಒಂದೇ ಸ್ಥಿತಿಯಲ್ಲಿ ನಿಲ್ಲಿಸೋಣ, ಆಧಾರ ಅಂದರೆ ಯಾವುದರ ಮೂಲಕ ವಸ್ತುವು ಸ್ಥಿರವಾಗಿ ಇರುವುದೊ ಅದು, ಹೀಗೆ ಬೇರೆ ಬೇರೆ ಶಬ್ದಗಳು ಸಿದ್ಧವಾಗಿರುವವು. ಧ್ರಿಯತೇ ಅನೇನ ಇತಿ, ಅಂದರೆ ಯಾವ ನಿಯಮಾದಿಗಳ ಮೂಲಕ ವ್ಯಕ್ತಿಯು ಮತ್ತು ಸಮಾಜವು ಒಳ್ಳೇ ಸ್ಥಿತಿಯಲ್ಲಿ ಎತ್ತಿಹಿಡಿಯಲ್ಪಡುವುವೋ ಅದು ಧರ್ಮವು. ಅಥವಾ ಧಾರಣಾದ್ಧರ್ಮಾತ್, ಅಂದರೆ ವ್ಯಕ್ತಿ ಮತ್ತು ಸಮಾಜಗಳನ್ನು ಒಳ್ಳೇ ಸ್ಥಿತಿಯಲ್ಲಿ ಎತ್ತಿಹಿಡಿಯುವ ಗುಣವುಳ್ಳದ್ದರಿಂದ ಆಯಾ ತತ್ವಗಳು ಮತ್ತು ಆಚಾರಗಳು ಕೂಡಿ ಧರ್ಮವೆಂದೆನಿಸುವವು. ಯಾವ ಮಾರ್ಗದಿಂದ ಹೋದರೆ ಇಹದಲ್ಲಿ ಅಂದರೆ ದೃಶ್ಯವಾದ ಸ್ಥೂಲ ಬಾಹ್ಯಸೃಷ್ಟಿಯಲ್ಲಿ ಅಭ್ಯುದಯವೂ ಪರದಲ್ಲಿ ಅಂದರೆ ಅದೃಶ್ಯವಾದ ಸೂಕ್ಷ್ಮ ಅಂತಃಸೃಷ್ಟಿಯಲ್ಲಿ ನಿಃಶ್ರೇಯಸವೂ ಪ್ರಾಪ್ತವಾಗುವವೊ ಆ ಮಾರ್ಗವೆ ಧರ್ಮವು. ಹೀಗೆ ಧರ್ಮ ಶಬ್ದದ ವ್ಯುತ್ಪತ್ತಿ ಮತ್ತು ವ್ಯಾಖ್ಯೆಯು ಇರುವದು. ಇದರ ಮೇಲಿಂದ, ನೋಡಿದರೆ ಮಾನವೀ ಸಮಾಜದ ಹಾಗೂ ಆ ಸಮಾಜದ ಘಟಕವಾದ ವ್ಯಕ್ತಿಯ ಅತ್ಯುಚ್ಚ ಧ್ಯೇಯಗಳು ಯಾವ ತತ್ವಗಳ ತಿಳಿವಳಿಕೆ ಯಿಂದ ಮತ್ತು ಯಾವ ತತ್ವಗಳ ಆಚರಣೆಯಿಂದ ಹಸ್ತಗತವಾಗುವವೊ ಅವೆಲ್ಲ ಕೂಡಿ ಮಾನವೀ ಧರ್ಮವೆಂದು ಎನಿಸುವದು. ಯಾವ ತತ್ವಗಳು ಮತ್ತು ಮಾರ್ಗವು ಎಲ್ಲ ಮಾನವರಿಗೂ ಅತ್ಯಂತ ಶ್ರೇಷ್ಠ ಧ್ಯೇಯಗಳನ್ನು ಪಡೆಯಲು ಸಹಜವಾಗಿ ಮತ್ತು ತೀವ್ರವಾಗಿ ಅನುಕೂಲಮಾಡಿಕೊಡುವದೊ ಅದೇ ನಿಜಧರ್ಮವು, ಪೂರ್ಣಧರ್ಮವು, ಶ್ರೇಷ್ಠಧರ್ಮವು, ಅತ್ಯುಚ್ಚ ಧರ್ಮವು, ಆದರ್ಶಧರ್ಮವು.

೭೨. ಮನುಷ್ಯನ ಅತ್ಯಂತಿಕಧ್ಯೇಯಗಳನ್ನು ತೀವ್ರವಾಗಿ ಮತ್ತು ಸಹಜವಾಗಿ ಪ್ರಾಪ್ತಮಾಡಿಕೊಡುವ ಮಾರ್ಗವೆ ಧರ್ಮವು, ನಿಜಧರ್ಮವು ಎಂದೆನಿಸುವುದರಿಂದ ಮನುಷ್ಯನ ಧ್ಯೇಯಗಳು ಯಾವವು, ಆ ಧ್ಯೇಯಗಳನ್ನು ಮುಟ್ಟಲು ಯಾವ ಮಾರ್ಗವನ್ನು ಸ್ವೀಕರಿಸಲಿಕ್ಕೆ ಬೇಕು ಇದನ್ನು ನೋಡುವದು ಅವಶ್ಯವು. ಇಹದಲ್ಲಿ ಅಭ್ಯುದಯಪ್ರಾಪ್ತಿ ಮತ್ತು ಪರದಲ್ಲಿ ನಿಃಶ್ರೇಯಸಪ್ರಾಪ್ತಿ ಇವು ಧರ್ಮದ ಮೂಲ ಉದ್ದೇಶಗಳು, ಎಂದು ಸಂಕ್ಷೇಪದಿಂದ ಮೇಲೆ ಹೇಳಲ್ಪಟ್ಟಿದೆ. ಆದರೆ ಅಭ್ಯುದಯವೆಂದರೇನು, ನಿಃಶ್ರೇಯಸವೆಂದರೇನು, ಈ ಮಾತುಗಳನ್ನು ಇಲ್ಲಿ ಇನ್ನೂ ನಿರ್ಣಯಿಸಬೇಕಾಗಿದೆ. ಸದ್ಯಕ್ಕೆ, ಪರಮಸುಖವೇ ಮನುಷ್ಯನ ಅತ್ಯಂತಿಕ ಧ್ಯೇಯವಿರುವದು ಎಂದು ಹೇಳಿದರೆ ಸಾಕು. ಆ ಪರಮಸುಖವೆಂದರೇನು, ಅದು ಪ್ರಾಪ್ತವಾಗಬೇಕಾದರೆ ಮನುಷ್ಯನು ಯಾವ ಸ್ಥಿತಿಯಲ್ಲಿರುವದು ಅವಶ್ಯವು, ಇದನ್ನು ನೋಡಬೇಕು. ಸಹಜ ನೋಡುವವರಿಗೆ, ಮನುಷ್ಯನು ಒಂಟಿಗನಾಗಿ, ಒಬ್ಬನೇ ವ್ಯಕ್ತಿಯಾಗಿ ಹುಟ್ಟಿ, ಬಾಳಿ, ಸತ್ತುಹೋಗುತ್ತಿರುವಂತೆ ಕಂಡರೂ ಅವನು ಸ್ವಭಾವತಃ ಸಾಮಾಜಿಕಪ್ರಾಣಿಯಿರುವನೆಂಬುದು ಅನುಭವಸಿದ್ಧವಾತು. ಹುಟ್ಟಿದಂದಿನಿಂದ ಸಾಯುವ ವರೆಗೆ ಅವನಿಗೆ ಸಮಾಜದ ಅವಶ್ಯಕತೆ ಇರುವದು. ಅಂದಬಳಿಕ, ಮನುಷ್ಯನು ಕೇವಲ ಒಂದು ಪ್ರತ್ಯೇಕ ವ್ಯಕ್ತಿಯಲ್ಲ, ಅವನೊಬ್ಬ ಸಾಮಾಜಿಕ ವ್ಯಕ್ತಿಯು, ಅದೃಶ್ಯವಾದ ಅನಂತಬಂಧನಗಳಿಂದ ಸಮಾಜದೊಡನೆ ಸಂಬಂದ್ಧವಾದ ವ್ಯಕ್ತಿಯು, ಮನುಷ್ಯನು ಸಾಮಾಜಿಕನಿರುವುದರಿಂದ ಅವನ ಸುಖದುಃಖಗಳೂ ಅವನ ಧ್ಯೇಯ ಹಾಗೂ ಧ್ಯೇಯಸಾಧನಗಳೂ ಅವನಿರುವ ಸಮಾಜದ ಸುಖದುಃಖ ಹಾಗೂ ಧ್ಯೇಯಸಾಧನಗಳೊಡನೆ ನಿತ್ಯ ಸಂಬದ್ಧವಿರುವವು. ಇದೇ ಮೇರೆಗೆ ಮನುಷ್ಯನ ಧ್ಯೇಯ ಮತ್ತು ಸಾಧನಗಳನ್ನು ನಿಶ್ಚಯಿಸುವಾಗ ಮನುಷ್ಯನ ವ್ಯಕ್ತಿತ್ವವು ಯಾವ ಪ್ರಕಾರದ್ದಿರುವದು, ಅದು ಹೇಗೆ ಸಿದ್ಧವಾಗಿರುವದು, ಅದರಲ್ಲಿಯ ಘಟಕಾವಯವಗಳು ಯಾವವು, ಅವುಗಳ ಪರಸ್ಪರ ಸಂಬಂಧವೇನು ಮತ್ತು ಅವುಗಳ ಅನ್ಯೋನ್ಯ ಮಹತ್ವ ಪಿಷ್ಟ, ಈ ಮುಂತಾದ ಸಂಗತಿಗಳನ್ನು ಪೃಥಃಕರಿಸುವದು ಅವಶ್ಯವು. ಮನುಷ್ಯನೆಂದರೆ, ನಮ್ಮ ಕಣ್ಣಿದುರಿಗೆ ಕಾಣಿಸುವ ದೇಹವೊ ಅದರಲ್ಲಿಯ ಚೈತನ್ಯವಿಶೇಷವೊ ಅದರಲ್ಲಿಯ ಜ್ಞಾನತಂತುಗಳ ಪುಂಜವೊ ಜ್ಞಾನತಂತುಗಳ ಏಕೀಕರಣಮಾಡುವ ಮಿದುಳೊ ಮಿದುಳಿನಲ್ಲಿರುವ ಮನಸೊ ಅಥವಾ ಮನುಷ್ಯನು ಮಲಗಿರುವಾಗ ಕೂಡ ಅವನಲ್ಲಿ ಎಚ್ಚರವಿರುವ ಆತ್ಮನೊ

ಅಥವಾ ಇವೆಲ್ಲ ಕೂಡಿ ಮನುಷ್ಯವ್ಯಕ್ತಿ ಎಂಬ ವಸ್ತು ಸಿದ್ಧವಾಗುವದೊ? ನಿಜಧರ್ಮವನ್ನು ನಿಶ್ಚಯಿಸುವ ಪೂರ್ವದಲ್ಲಿ ಈ ಎಲ್ಲ ಮಾತುಗಳನ್ನು ನಿರ್ಣಯಿಸುವದು ಅವಶ್ಯವು. ಹಾಗೆ ಮಾಡಿದರೆ, ನಮಗೆ ಮನುಷ್ಯನ ಯಥಾರ್ಥಕಲ್ಪನೆಯಾಗುವದು; ಅವನ ಘಟಕಗಳಾವವು, ಅವನ ಸ್ವಭಾವ ವೇನು, ಅವನ ಗುಣಕರ್ಮಗಳು ಹೇಗಿರುವವು ಇದೆಲ್ಲ ಚನ್ನಾಗಿ ತಿಳಿದರೆ ನಾವು ಅವನ ಧ್ಯೇಯಗಳ ಹಾಗೂ ಅವುಗಳನ್ನು ಪ್ರಾಪ್ತಮಾಡಿಕೊಳ್ಳುವ ಸಾಧನಗಳ ನಿರ್ಣಯಮಾಡಲಿಕ್ಕೆ ಸಮರ್ಥರಾಗುವೆವು.

೭೩. ಮನುಷ್ಯನು ಒಬ್ಬ ಸಾಮಾಜಿಕ ಪ್ರಾಣಿಯಿರುವನು. ಮತ್ತು ಅವನಿಗೆ ಅಭ್ಯುದಯವನ್ನೂ ನಿಶ್ರೇಯಸವನ್ನೂ ಪ್ರಾಪ್ತಮಾಡಿಕೊಡುವ ಮಾರ್ಗವೆ ಧರ್ಮವೆನಿಸುವದು, ಹಾಗೂ ಎಲ್ಲ ಮಾರ್ಗಗಳಲ್ಲಿ ಯಾವ ಮಾರ್ಗವು ಉತ್ತಮವೊ ಅದೇ ನಿಜಧರ್ಮವು ಎಂಬ ಮಾತಂತೂ ಸತ್ಯವು. ಇನ್ನು ಮನುಷ್ಯನು ಸಾಮಾಜಿಕನಿರುವುದರಿಂದ ಮತ್ತು ಅವನ ಪ್ರಗತಿಯು ಸಮಾಜವನ್ನು ಅವಲಂಬಿಸಿರುವುದರಿಂದ ಆ ಸಮಾಜದ ಸ್ಥಿತಿಯು ಯಾವ ಮಟ್ಟಿಗೆ ಅನುಕೂಲವಿರುವದೊ ಆ ಮಟ್ಟಿಗೆ ಅವನ ಧ್ಯೇಯವಾದರೂ ಬೇಗ ಸಾಧ್ಯವಾಗುವದು. ಆದುದರಿಂದ ಕೇವಲ ವ್ಯಕ್ತಿಯ ಅಭ್ಯುದಯನಿಃಶ್ರೇಯಸಗಳನ್ನಷ್ಟೆ ಲಕ್ಷಿಸದೆ ಸಮಾಜದ ಹಿತವನ್ನಾದರೂ ಲಕ್ಷಿಸುವದು ನಿಜಧರ್ಮದ ಕ್ರಮಪ್ರಾಪ್ತವಾದ ಕರ್ತವ್ಯವಾಗುವದು. ಈ ಪ್ರಕಾರ, ಮನುಷ್ಯ ಎಂಬ ಸಮಾಜದ ಘಟಕ ಹಾಗೂ ಅನೇಕ ಮನುಷ್ಯರಿಂದ ಕೂಡಿದ ಸಮಾಜ, ಇವೆರಡೂ ಪರಸ್ಪರ ಸಂಬದ್ಧ ವಸ್ತುಗಳಿರುವುದರಿಂದ ಈ ಎರಡೂ ವಸ್ತುಗಳ ಅಭ್ಯುದಯನಿಃಶ್ರೇಯಸಗಳು ಯಾವ ಮಾರ್ಗದಿಂದ ಕೈಗೂಡುವವೊ ಅದೇ ಧರ್ಮವೆನಿಸುವದು. ವ್ಯಕ್ತಿಯು ಸಮಾಜವನ್ನು ಲೆಕ್ಕಿಸದೆ ತನ್ನ ಧ್ಯೇಯಗಳನ್ನು ಪಡೆಯುವದು ಎಷ್ಟು ಅಸಾಧ್ಯವೊ ಅಷ್ಟೇ ಸಮಾಜವು ವ್ಯಕ್ತಿಯನ್ನು ಲೆಕ್ಕಿಸದೆ ತನ್ನ ಧ್ಯೇಯಗಳನ್ನು ಪಡೆಯುವದು ಅಸಾಧ್ಯವು. ಯಾವ ಸಮಾಜದಲ್ಲಿಯ ವ್ಯಕ್ತಿಗಳು ಸ್ವಾರ್ಥಿಗಳೂ ತಮ್ಮ ವೈಯ್ಯಕ್ತಿಕ ಹಿತವನ್ನೆ ನೋಡುವವರೂ ಇರುವರೊ ಆ ಸಮಾಜವು ಬಹುದಿನ ಬಾಳುವದು ಅಶಕ್ಯವು. ಅದೇ ರೀತಿ ವ್ಯಕ್ತಿಗಳ ಸ್ವಭಾವ ಆಕಾಂಕ್ಷೆಗಳನ್ನು ದುರ್ಲಕ್ಷಿಸಿ, ಅವರ ಹಿತಾಹಿತಗಳನ್ನು ನೋಡದೆ, ಅವರ ಮೇಲೆ ಜುಲುಮೆಮಾಡಲುದ್ಯುಕ್ತವಾದ ಸಮಾಜವು ತೀವ್ರವೆ ವಿಸ್ಫಳಿತವಾಗಿ ಹಾಳಾಗಿಹೋಗುವದೆಂಬಲ್ಲಿ ಸಂಶಯವಿಲ್ಲ. ಆದುದರಿಂದ ಯಾವ ಧರ್ಮವು ವ್ಯಕ್ತಿಗೆ ಅಭ್ಯುದಯ

ನಿಶ್ರೇಯಸಗಳು ದೊರೆಯುವಂತೆ ಅನುಕೂಲಮಾಡಿಕೊಟ್ಟು ಅದೇಕಾಲಕ್ಕೆ ಸಮಾಜವನ್ನು ಸುಸಂಘಟಿತವಾಗಿಯೂ ಸುವ್ಯವಸ್ಥಿತವಾಗಿಯೂ ಸಮಾಧಾನಸ್ಥಿತಿಯಲ್ಲಿಯೂ ಇಡಬಲ್ಲದೊ ಅದೇ ನಿಜಧರ್ಮವು. ಮೇಲೆ ಹೇಳಿದಂತೆ, ಮನುಷ್ಯ ಹಾಗೂ ಸಮಾಜ ಇವರ ನಿಕಟಸಂಬಂಧವನ್ನು ಯಾವಾಗಲೂ ಅನುಲಕ್ಷಿಸಿಯೆ ಧರ್ಮದ ನಿಜಸ್ವರೂಪವನ್ನು ನಿಶ್ಚಯಿಸುವದು ಅವಶ್ಯವಿರುವದು. ಆ ಎರಡರಲ್ಲಿ ಒಂದನ್ನೂ ದುರ್ಲಕ್ಷಿಸದೆ ಸಮತೂಕದಿಂದ ಸಾಗಿದರೆ ಮಾತ್ರ ನಿಜಧರ್ಮವು ಸಿದ್ಧವಾಗುವದು.

೭೪. ಇನ್ನು ಅಭ್ಯುದಯನಿಃಶ್ರೇಯಸಗಳೆಂದರೇನು? ಸಾಮಾನ್ಯವಾಗಿ ಅಭ್ಯುದಯವೆಂದರೆ ಇಹಲೋಕದಲ್ಲಿ ಪ್ರಗತಿ, ಅಭಿವೃದ್ಧಿ, ಯಶಸ್ಸಂಪಾದನೆ ಎಂದು, ಮತ್ತು ನಿಃಶ್ರೇಯಸವೆಂದರೆ ಆತ್ಮಕಲ್ಯಾಣ ಮತ್ತು ಮುಕ್ತಿ ಎಂದು, ಅರ್ಥವು ಆಗುವದು. ಇವೆರಡನ್ನೂ ಪ್ರಾಪ್ತಮಾಡಿಕೊಡಲು ಧರ್ಮವು ಕಂಕಣಬದ್ಧವು. ಇದೇ ಮಾತನ್ನು ಇನ್ನೊಂದು ಬಗೆಯಿಂದ ಹೇಳುವುದಾದರೆ, ಧರ್ಮವು ಅರ್ಥ, ಕಾಮ, ಮತ್ತು ಮೋಕ್ಷ ಇವುಗಳನ್ನು ದೊರಕಿಸುವ ಮಾರ್ಗವಿರುವದು ಮೇಲೆ ಹೇಳಿದ ಅರ್ಥ, ಕಾಮ, ಪ್ರಗತಿ, ಅಭಿವೃದ್ಧಿ, ಯಶಸ್ಸು ಇವು ನಿಃಶ್ರೇಯಸಕ್ಕೆ ಅವಿರುದ್ಧವಾದವುಗಳು ಇರಲಿಕ್ಕೆಬೇಕು, ಎಂಬುದನ್ನು ಎಲ್ಲರೂ ಲಕ್ಷದಲ್ಲಿಡತಕ್ಕದ್ದು. ಯಾವ ಅಭ್ಯುದಯದ ಹೊರತು ಮತ್ತು ಯಾವ ಅರ್ಥಕಾಮಸಿದ್ಧಿಗಳ ಪರಿಪೂರ್ತಿಯಹೊರತು ಇಹಲೋಕದ ಯಾತ್ರೆಯು ಸಹ ಸುಸೂತ್ರವಾಗಿ ಸಾಗುವದು ಸಾಧ್ಯವಿಲ್ಲವೊ ಮತ್ತು ಯಾವವು ಆತ್ಮಕಲ್ಯಾಣಕ್ಕೆ ಅಡ್ಡಬರುವುದಿಲ್ಲವೊ ಅವೇ ಧರ್ಮಕ್ಕೆ ವಿರುದ್ಧವೆಂದು ತಿಳಿಯತಕ್ಕದ್ದು. ಅಭ್ಯುದಯ ಮತ್ತು ನಿಶ್ರೇಯಸ, ಎಂಬ ಕಲ್ಪನೆಗಳನ್ನು ಇಲ್ಲಿ ಇನ್ನೂ ಹೆಚ್ಚು ವಿಮರ್ಶಿಸಲಿಕ್ಕೆಬೇಕು. ಸಮಾಜದ ಯಾವ ಬಗೆಯ ಅಹಿತವೂ ಆಗದೆ ಸಮಾಜದ ಪ್ರಗತಿಗೆ ಅಡ್ಡಬರದೆ ಮನುಷ್ಯನ ಶಾರೀರಿಕ, ಮಾನಸಿಕ, ಬೌದ್ಧಿಕಶಕ್ತಿಗಳ ಯೋಗ್ಯ ಮತ್ತು ಸುಂದರ ಬೆಳೆವಣಿಗೆಯಾಗುವುದಕ್ಕೆ ಅಭ್ಯುದಯವೆನ್ನಬಹುದು. ಅದೇಪ್ರಕಾರ ಸಮಾಜಹಿತಕ್ಕೆ ಅವಿರೋಧವಾಗಿ ಮನುಷ್ಯನ ಅಧ್ಯಾತ್ಮಬುದ್ಧಿಯ ವಿಕಾಸವೂ ಆತ್ಮಸಮಾಧಾನವೂ ಹೆಚ್ಚುತ್ತಹೋದರೆ ಅದು ನಿಶ್ರೇಯಸವು ಅಥವಾ ಆತ್ಮಕಲ್ಯಾಣವು, ಎಂದು ಹೇಳಬಹುದು. ಈ ರೀತಿ ಮನುಷ್ಯನ ಸ್ವಾಭಾವಿಕ ಆಕಾಂಕ್ಷೆಗಳನ್ನೂ ಶಕ್ತಿಸಾಮರ್ಥ್ಯಗಳನ್ನೂ ಅನುಲಕ್ಷಿಸಿ ಅವನ ಐಹಿಕ ಮತ್ತು ಪಾರಮಾರ್ಥಿಕ ಹಿತವು ಸಾಧಿಸುವ ಮಾರ್ಗವನ್ನು ತೋರಿಸಬೇಕೆಂದು ಧರ್ಮವು

ಪ್ರವೃತ್ತವಾಗಿರುವದು. ಹೀಗೆ ಮಾಡುವಾಗ ಬರಿಯ ವ್ಯಕ್ತಿಯ ಹಿತಾಹಿತಗಳನ್ನು ನೋಡುವ ಅದೂರದೃಷ್ಟಿಯನ್ನಿಟ್ಟುಕೊಳ್ಳದೆ ನಿಜಧರ್ಮವು ಇಡೀ ಸಮಾಜದ ಸುಸ್ಥಿತಿಯನ್ನೂ ಎಚ್ಚರದಿಂದ ಕಾಯುವದು. ಇನ್ನು ಮನುಷ್ಯನ ಧ್ಯೇಯವೇನಿರುವದು ಮತ್ತು ಧರ್ಮವು ಅವನಿಗೆ ಧ್ಯೇಯ ಸಾಧನಕಾರ್ಯದಲ್ಲಿ ಹೇಗೆ ಸಹಾಯಕವಾಗುವದು ಇದನ್ನು ನೋಡುವ.

೭೫. ಪರಮ ಸುಖವೇ ಮನುಷ್ಯನ ಧ್ಯೇಯವಿರುವುದು ಎಂದು ಮೇಲೆ ಸಂಕ್ಷೇಪದಿಂದ ಹೇಳಿದೆ. ಇದು ಅನುಭವಸಿದ್ಧ ಮಾತು. ಇದನ್ನು ತರ್ಕದಿಂದ ಅಥವಾ ದೃಷ್ಟಾಂತಗಳಿಂದ ಸ್ಪಷ್ಟೀಕರಿಸುವದು ಅವಶ್ಯವಿಲ್ಲ. ಮನುಷ್ಯನು ಅವ್ಯಾಹತವಾಗಿ ಮಾಡುತ್ತಿರುವ ಕ್ರಿಯಾಮಾಲೆಯ ಮುಖಾಂತರ ಅವನು ಅರಸುತ್ತಿರುವ ವಸ್ತುವು ಒಂದೇ ಒಂದು ಮತ್ತು ಅದಾವುದೆಂದರೆ ಸುಖವು, ಪರಮಸುಖವು. ಹಾಗಾದರೆ ಒಬ್ಬ ಮನುಷ್ಯನಿಗೆ ಎಷ್ಟು ಸುಖಗಳು ದೊರೆಯುತ್ತಿದ್ದರೂ ಅವನು ತೃಪ್ತನಾಗದೆ ಮತ್ತೆ ಸುಖಗಳನ್ನು ಅರಸುವನು, ಇದರ ಅರ್ಥವೇನು, ಎಂದು ಯಾರಾದರೂ ಕೇಳಬಹುದು. ಮನುಷ್ಯನು ನಿಃಸ್ಸೀಮ, ನಿರ್ದೋಷ, ನಿತ್ಯಸುಖವನ್ನು ಬಯಸುತ್ತಿರುವನು. ಆದುದರಿಂದ ಅವನು ಪರಿಮಿತ, ಅನಿತ್ಯ, ದುಃಖಮಿಶ್ರಿತ ಸುಖಗಳಿಂದ ತೃಪ್ತನಾಗುವುದಿಲ್ಲ, ಮತ್ತು ಇವು ದೊರೆತರೂ ಅವನು ಸತ್ಯ ಸುಖವನ್ನು ಹಾಗೆಯೆ ಹುಡುಕುತ್ತಲಿರುವನು. ಅನಿತ್ಯ ಪರಿಮಿತ ಸುಖಗಳು ನಿತ್ಯಸುಖದ ಛಾಯೆಗಳು ಮಾತ್ರ. ಛಾಯೆಯ ಪ್ರಾಪ್ತಿಯಿಂದ ನಿಜವಸ್ತುವು ಕೈಸೇರದು. ಇದನ್ನು ತಿಳಿಯದೆ ಮನುಷ್ಯನು ಪುನಃ ಪುನಃ ನಿಜಾನಂದದ ಛಾಯಾಮಾತ್ರವಾದ ವಿಷಯಸುಖಗಳ ಬೆನ್ನಬಿದ್ದು ತೃಪ್ತಿ ಪಡೆಯದೆ ತೊಳಲುವನು. ಯಾವದಿನ ಅವನಿಗೆ ನಿಜಸುಖವಾದ ಆತ್ಮ ಸುಖವು ದೊರೆಯುವದೊ ಆ ದಿನ ಅವನು ಸಂತೃಪ್ತನಾಗುವನು, ಕೃತಾರ್ಥನಾಗುವನು. ಮನುಷ್ಯನಿಗೆ ಈ ಬಗೆಯ ಪರಮಸುಖವನ್ನು ದೊರಕಿಸಿಕೊಡುವ ಕಾರ್ಯದಲ್ಲಿ ಧರ್ಮವೇ ಮುಖ್ಯ ಸಾಧನವು. ಯಾಕಂದರೆ, ಮೇಲೆ ಹೇಳಿರುವಂತೆ, ಅಭ್ಯುದಯ ಮತ್ತು ನಿಃಶ್ರೇಯಸ ಇವೆರಡೂ ಧರ್ಮದ ಉದ್ದೇಶಗಳು. ಇಲ್ಲಿ ನಿಃಶ್ರೇಯಸವೆಂದರೆ ಆತ್ಮಹಿತವು, ಆತ್ಮ ಕಲ್ಯಾಣವು, ಆತ್ಮಸುಖವು. ಆ ಆತ್ಮಸುಖದ ಜೊತೆಗೆಯೆ ಧರ್ಮವು ಅಭ್ಯುದಯವನ್ನೂ ತನ್ನ ಉದ್ದೇಶವನ್ನಾಗಿ ಇಟ್ಟುಕೊಂಡಿದೆ. ಮನುಷ್ಯನು ದೇಹ ಮನ ಬುದ್ಧಿಗಳಿಂದ ಯುಕ್ತನಿರುವುದರಿಂದಲೂ ಸಾಮಾಜಿಕ ಪ್ರಾಣಿಯಿರುವುದರಿಂದಲೂ ದೇಶಕಾಲಪರಿಸ್ಥಿತಿಯಿಂದ ಪರಿಮಿತನಿರುವುದರಿಂ

ದಲೂ ಆತ್ಮನು ಭಾವ, ಪ್ರಾಣ, ಮನ, ದೇಹ ಇವುಗಳಲ್ಲಿ ಮತ್ತು ಇವುಗಳ ಮುಖಾಂತರವೆ ಇಲ್ಲಿ ಆವಿರ್ಭವಿಸಿ ಕಾರ್ಯ ಮಾಡುತ್ತಿರುವುದರಿಂದಲೂ ನಿಃಶ್ರೇಯಸ ಪ್ರಾಪ್ತಿಗೆ ಅಭ್ಯುದಯವು ಅವಶ್ಯವಾದ ಪೂರ್ವಸಾಧನೆಯಿರುವದು, ಎಂಬ ದೃಢಭಾವನೆಯ ಮೂಲಕವೆ ಧರ್ಮವು ಆ ಉದ್ದೇಶವನ್ನೂ ಇಟ್ಟುಕೊಂಡಿದೆ. ಇನ್ನು ಮನುಷ್ಯನ ಘಟಕಗಳು ಯಾವವು ಮತ್ತು ಅವುಗಳ ಅಭ್ಯುದಯವೆಂದರೇನು, ಆ ಅಭ್ಯುದಯದ ಸ್ವರೂಪವು ಹೇಗಿರಬೇಕು, ಅದು ನಿಃಶ್ರೇಯಸ ಪದದ ಪೂರ್ವಾಂಗವು ಹೇಗೆ ಆಗುವದು ಇದನ್ನು ನೋಡುವ.

೭೬. ಸೃಷ್ಟಪದಾರ್ಥಗಳಲ್ಲಿ ಜಡ ಮತ್ತು ಚೇತನ, ಎಂದು ಎರಡು ಮುಖ್ಯ ವರ್ಗಗಳನ್ನು ಮಾಡುವರು. ಅವುಗಳಿಗೆಯೆ ವೈಜ್ಞಾನಿಕರು ನಿರೀಂದ್ರಿಯ ಮತ್ತು ಸೇಂದ್ರಿಯ ಎಂಬ ಹೆಸರುಗಳನ್ನು ಕೊಟ್ಟಿರುವರು. ಆಯಾ ಪದಾರ್ಥಗಳ ಗುಣಕರ್ಮಗಳನ್ನು ನೋಡಿಯೆ ಈ ವರ್ಗಗಳು ಮಾಡಲ್ಪಟ್ಟಿವೆ. ಸೇಂದ್ರಿಯ ಪದಾರ್ಥಗಳು, ನಿರೀಂದ್ರಿಯ ಹಾಗೂ ಅನ್ಯ ಸೇಂದ್ರಿಯ ಪದಾರ್ಥಗಳನ್ನು ಅರಗಿಸಿಕೊಂಡು ತಮ್ಮಂಥ ಎರಡನೇ ಸೇಂದ್ರಿಯ ಪದಾರ್ಥಗಳನ್ನು ನಿರ್ಮಾಣಮಾಡಬಲ್ಲವು ಮತ್ತು ಅವು ಇಚ್ಛಾಶಕ್ತಿಯುಳ್ಳವುಗಳು ಎಂದು ಅನ್ನಬಹುದು. ಈ ಗುಣಕರ್ಮಶಕ್ತಿಗಳು ನಿರೀಂದ್ರಿಯ ಪದಾರ್ಥಗಳಲ್ಲಿಲ್ಲ. ಅವುಗಳಲ್ಲಿ ಇಚ್ಛಾಶಕ್ತಿಯಿಲ್ಲದಿರುವುದರಿಂದ ಅವು ಅಸಹಾಯವಾಗಿ, ಬಾಹ್ಯ ಆಘಾತಗಳಿಗೆ ಒಳಗಾಗಿ, ಯಾಂತ್ರಿಕಕ್ರಿಯೆಗಳಲ್ಲಿ ತೊಡಗಿದಂತೆ ತೋರುವವು. ಆದರೆ ತಮ್ಮಲ್ಲಿರುವ ಇಚ್ಛಾಶಕ್ತಿಯ ಮೂಲಕ ಸೇಂದ್ರಿಯ ಪದಾರ್ಥಗಳು ತಮ್ಮ ಕರ್ಮದಲ್ಲಿ ಸ್ವತಂತ್ರವಿದ್ದಂತೆ ಕಂಡುಬರುವವು. ಇನ್ನು ಸೇಂದ್ರಿಯ ವಸ್ತುಗಳಲ್ಲಿಯೂ ಅನೇಕ ತರಗತಿಗಳಿರುವವು. ಗಿಟಗಂಟಿಗಳು ಸೇಂದ್ರಿಯವೆನಿಸಿದರೂ ಅವುಗಳಲ್ಲಿ ಸಂವೇದವಾಗಲಿ ಇಚ್ಛಾಶಕ್ತಿಯಾಗಲಿ ಬಹಳೇ ಅಲ್ಪಪ್ರಮಾಣದಲ್ಲಿರುವದು. ಒಂದು ಅತ್ಯಂತ ಕ್ಷುದ್ರಹುಳದಲ್ಲಿ ಕೂಡ ಒಂದು ದೊಡ್ಡ ಮರಕ್ಕಿಂತ ಹೆಚ್ಚು ಸಂವೇದಶಕ್ತಿಯೂ ಇಚ್ಛಾಶಕ್ತಿಯೂ ಕಂಡುಬರುವದು. ಸೇಂದ್ರಿಯವಿದ್ದು ಜಂಗಮವಿರುವ ಪದಾರ್ಥಗಳು ಪ್ರಾಣಿಗಳೆನಿಸುವವು. ಸಂವೇದನೆ, ಸಂವೇದನಾವಾಹಿಯಾದ ಜ್ಞಾನತಂತುಜಾಲ, ಸಂವೇದನೆಯ ಕೇಂದ್ರವಾದ ಮಿದುಳು ಇವು ಪ್ರಾಣಿಗಳ ವಿಕಾಸದೊಡನೆ ಹೆಚ್ಚೆಚ್ಚು ಬೆಳೆಯುತ್ತಹೋದಂತೆ ಕಂಡುಬರುವವು. ಪ್ರಾಣಿಕೋಟಿಯಲ್ಲಿ ಏಕಾಣುಜೀವಗಳೆ ಎಲ್ಲಕ್ಕೂ ಮೂಲವಾದವುಗಳು.

ಅಲ್ಲಿಂದ ಮುಂದೆ ಅನೇಕಾಣುಜೀವಗಳ ಉತ್ಪತ್ತಿಯು. ಮನುಷ್ಯನು ಎಲ್ಲ ಪ್ರಾಣಿಗಳಲ್ಲಿ ಹೆಚ್ಚಿನವನು, ಯಾಕಂದರೆ ಅವನ ಮಿದುಳು ಎಲ್ಲಕ್ಕೂ ದೊಡ್ಡದು, ಅವನ ಶರೀರದಲ್ಲಿರುವ ಜ್ಞಾನತಂತುಜಾಲವು ಎಲ್ಲಕ್ಕೂ ಬಹಳ ವಿಸ್ತೃತವಾದದ್ದು, ಮತ್ತು ಅವನ ಸಂವೇದಶಕ್ತಿಯು ಅತಿಶಯ ಸೂಕ್ಷ್ಮವಾದದ್ದು. ಇಲ್ಲಿ ಜೀವಸೃಷ್ಟಿಗೆ ಕಳಸದಂತೆ ಇರುವ ಮನುಷ್ಯ ಪ್ರಾಣಿಯ ಘಟಕಗಳನ್ನೆ ನಾವು ವಿಚಾರಿಸಬೇಕಾಗಿದೆ. ಮೊಟ್ಟಮೊದಲು ಮನುಷ್ಯನ ಶರೀರವು ನಮ್ಮ ದೃಷ್ಟಿಗೆ ಬೀಳುವದು. ಅದು ಕಣ್ಣಿಗೆ ಜಡ ಪದಾರ್ಥದಂತೆ ಕಾಣುವದು. ಯಥಾರ್ಥವಾಗಿ ನೋಡಿದರೂ ಅದರಲ್ಲಿ ನಡೆದಿರುವ ಎಷ್ಟೋ ಕ್ರಿಯೆಗಳು ರಸಾಯನ ಮತ್ತು ಪದಾರ್ಥವಿಜ್ಞಾನ ಶಾಸ್ತ್ರದಂತೆಯೆ, ಅಂದರೆ ನಿರೀಂದ್ರಿಯ ಪದಾರ್ಥಗಳ ಕ್ರಿಯೆಗಳು ನಡೆದಂತೆಯೆ, ನಡೆದಿರುವವು. ಆದರೆ ಈ ಶರೀರದ ಕಣಕಣದಲ್ಲಿ ತೀವ್ರ ಚೈತನ್ಯವು ತುಂಬಿದೆ ಕ್ಷಣಶಃ ಅನಂತ ಜೀವನಕ್ರಿಯೆಗಳು ಮನುಷ್ಯನ ಶರೀರದಲ್ಲಿ ನಡೆದಿವೆ. ಕೋಟಿಗಟ್ಟಲೆ ಜೀವಗಳು ಹುಟ್ಟಿ ಅಲ್ಲಿ ಸಾಯುತ್ತಿರುವವು ಹೊರಗಿನಿಂದ ಬಂದ ಅನೇಕ ರೋಗಜಂತುಗಳೊಡನೆ ಈ ಶರೀರದಲ್ಲಿಯ ರಕ್ಷಕಜಂತುಗಳು ತುಮುಲ ಯುದ್ಧವನ್ನು ಹೂಡಿರುವವು. ತಾರಾ ಯಂತ್ರದ ಜಾಲದಂತೆ ಶರೀರದ ರೋಮರೋಮದಲ್ಲಿ ಪಸರಿಸಿದ ಜ್ಞಾನ ತಂತುಗಳ ಮುಖಾಂತರ ಮಿದುಳು ತನ್ನ ಕೆಲಸವನ್ನು ನಡೆಸಿರುವದು. ಕಿವಿ, ಕಣ್ಣು, ಮೂಗು, ತ್ವಕ್ಕು, ನಾಲಿಗೆ ಈ ಪಂಚ ಜ್ಞಾನೇಂದ್ರಿಯಗಳ ಮುಖಾಂತರ ಮಿದುಳು ಹೊರಗಿನ ಜ್ಞಾನವನ್ನು ಪಡೆಯುತ್ತಲಿದೆ. ಹೊರಗಿನಿಂದ ಬರುವ ಈ ಅನೇಕ ಸಂವೇದ ಮತ್ತು ಜ್ಞಾನಖಂಡಗಳನ್ನು ಪರಸ್ಪರ ಸಂಬಂಧಿಸಿ, ಅವುಗಳನ್ನು ಕೇಂದ್ರೀಕರಿಸಿ, ಶೀತೋಷ್ಣ, ಸುಖದುಃಖ, ಒಳಿತು ಕೆಡಕು ಮುಂತಾದವುಗಳನ್ನು ತಿಳಿದುಕೊಂಡು ಮಿದುಳು ಇಷ್ಟವಾದ ಆಜ್ಞೆಗಳನ್ನು ಕೈಕಾಲು ಮುಂತಾದ ಕರ್ಮೇಂದ್ರಿಯಗಳಿಗೆ ಕೊಡುತ್ತಲಿರುವದು. ಆ ಆಜ್ಞೆಗಳನ್ನು ಈ ಕರ್ಮೇಂದ್ರಿಯಗಳು ತಮ್ಮ ತಮ್ಮ ಶಕ್ತಿಯ ಮಟ್ಟಿಗೆ ನಿರ್ವಹಿಸುತ್ತಿರುವವು. ತಾನು ಜೀವದಿಂದಿರಬೇಕು, ತಾನು ಬೆಳೆಯಬೇಕು, ತಾನು ತನ್ನಂಥ ಇತರ ಪ್ರಾಣಿಗಳನ್ನು ನಿರ್ಮಿಸಬೇಕು ಈ ಪ್ರಕಾರದ ಪ್ರಯತ್ನವು ಅವ್ಯಾಹತವಾಗಿ ಈ ಶರೀರದಲ್ಲಿ ನಡೆದಿರುವದು. ಈ ಬಗೆಯ ನಾನಾಗುಣಕರ್ಮಶಕ್ತಿಗಳ ಪುಂಜವಾದ ವ್ಯಕ್ತಿಯೆ ಮನುಷ್ಯನೆನಿಸುವನು. ಇವುಗಳನ್ನೆಲ್ಲ ಜನ್ಮಾಗಿ ಪೃಥಕ್ಕರಿಸಿ ಬೇಕಬೇರೆ ಹೆಸರುಗಳನ್ನು ಕೊಟ್ಟರೆ ನಮಗೆ ಮನುಷ್ಯನ ಘಟಕಗಳಾವವು

ಎಂಬುದು ಸ್ಪಷ್ಟವಾಗಿ ತಿಳಿಯುವದು. ಹೀಗೆ ನಾವು ಇಲ್ಲಿ ಪೃಥಕ್ಕರಿಸುತ್ತಿರುವದು ಸಾಧನದೃಷ್ಟಿಯಿಂದ ಹೊರತು ಶಾಸ್ತ್ರೀಯದೃಷ್ಟಿಯಿಂದಲ್ಲ, ಎಂಬದನ್ನು ವಾಚಕರು ಲಕ್ಷದಲ್ಲಿಡಬೇಕು.

೨೨. ಮೇಲೆ ಹೇಳಿದ ಎಲ್ಲ ಶಕ್ತಿಗುಣಕರ್ಮಗಳು, ಮನುಷ್ಯನ ಜಡ ಶರೀರ, ಅದರಲ್ಲಿರುವ ಜೀವತಸರೂಪಪ್ರಾಣ, ಸಕಲಸಂವೇದಗಳ ಸ್ವಾಮಿಯಾದ ಮತ್ತು ಮಿದುಳಿನಲ್ಲಿರುವ ಮನಸು, ಮನಸಿನಲ್ಲಿರುವ ಬುದ್ಧಿ ಎಂಬ ವಿಮರ್ಶಕ ಶಕ್ತಿ, ಮತ್ತು ಇವೆಲ್ಲವುಗಳಿಗೆ ತಳಹದಿಯಾಗಿರುವ ಅಹಂಭಾವದಿಂದ ಯುಕ್ತನಾದ ಜೀವಾತ್ಮ, ಇವುಗಳಲ್ಲಿ ವಾಸಮಾಡುತ್ತಿರುವವು. ಈ ಘಟಕಗಳನ್ನು ಪುನಃ ವಿಮರ್ಶಿಸಿ, ಅವುಗಳ ಕಾರ್ಯಾಕಾರ್ಯಗಳನ್ನು ನೋಡಿ ಶರೀರ, ಮನಸು, ಮತ್ತು ಆತ್ಮ ಎಂಬ ಮೂರೇ ಘಟಕಗಳನ್ನು ಇಟ್ಟುಕೊಳ್ಳುವದು ವಿಚಾರಕ್ಕೆ ಹೆಚ್ಚು ಸುಕರವಾಗುವದು. ಈ ಮೂರು ಘಟಕಗಳಲ್ಲಿ ಶರೀರವೆಂದರೆ ಜೀವಂತ ಶರೀರವು; ಮನಸೆಂದರೆ ಸಂವೇದಗಳನ್ನು ತಿಳಿದುಕೊಳ್ಳುವ, ಸಂಕಲ್ಪವಿಕಲ್ಪಗಳಿಗೆ ಆಧಾರವಾದ, ಮತ್ತು ವಿಮರ್ಶಕಶಕ್ತಿಯುಳ್ಳ ಅಂತರಿಂದ್ರಿಯವು; ಆತ್ಮವೆಂದರೆ ವ್ಯಕ್ತಿತ್ವಕ್ಕೆ ಆಧಾರಭೂತವಾದ ಮತ್ತು ತಾನು ವಿಕೃತನಾಗದಂತೆ ಇದ್ದು ಎಲ್ಲ ಅನುಭವಗಳಿಗೆ ಹೇತುವಾದ ಚಿದಾತ್ಮಕವಸ್ತುವು. ಈ ಘಟಕಗಳಿಂದ ಕೂಡಿದ ಮನುಷ್ಯನೆಂಬ ವ್ಯಕ್ತಿಯು ಈಗ ಶೀತೋಷ್ಣ, ಸುಖದುಃಖ ಮುಂತಾದ ದ್ವಂದ್ವಗಳಿಗೆ ಗುರಿಯಾಗಿರುವನು. ಅವನು ತಾನು ಪರಮ ಸುಖವನ್ನು, ನಿತ್ಯಸುಖವನ್ನು ಪಡೆಯಬೇಕೆಂದು ಹಾರೈಸುತ್ತಿರುವನು. ಅದನ್ನು ಅವನು ಹೇಗೆ ಪಡೆಯಬೇಕು, ಇದು ಮುಖ್ಯ ಪ್ರಶ್ನೆಯು. ಆ ಸುಖವನ್ನು ಅವನು ಈ ಶರೀರದಲ್ಲಿರುವಾಗಲೆ ಅಂದರೆ ಜೀವಂತನಿರುವಾಗಲೆ ಪ್ರಯತ್ನಪೂರ್ವಕವಾಗಿ ಪಡೆಯುವದು ಅವಶ್ಯವಿರುವದು. ನಾವು ಸದೇಹವಿರುವಾಗ ಪಡೆಯದೆಹೋದ ಮುಕ್ತಿಯನ್ನು ನಿರ್ದೇಹವಾದಬಳಿಕ ಅಂದರೆ ಮರಣಪಶ್ಚಾತ್ ಪಡೆಯುವದು ಅಸಾಧ್ಯವು. ಯಾಕಂದರೆ, ಸತ್ತಬಳಿಕ ನಾವು ಕರ್ಮಭೂಮಿಯನ್ನು ಬಿಟ್ಟು ಭೋಗಭೂಮಿಗೆ ಹೋಗುವೆವು. ಬಿತ್ತಿದ್ದನ್ನು ಬೆಳೆಯುವ ಕೆಲಸವಷ್ಟೇ ಅಲ್ಲಿ ಆಗುವದು. ಆದುದರಿಂದ ದೇಹ, ಮನ, ಆತ್ಮ ಈ ಮುಖ್ಯ ಮೂರು ಘಟಕಗಳಿಂದ ಕೂಡಿದ ಮನುಷ್ಯನೆಂಬ ವ್ಯಕ್ತಿಯು ಸದ್ಯಕ್ಕೆ, ತಾನು ಅಲ್ಪನು, ಪಾಪಿಯು, ದುಃಖಿಯು, ಎಂದು ಬಳಲುತ್ತಿರುವನು; ಆದರೆ ತಾನು ಜೀವದಿಂದಿರುವಾಗಲೆ ನಿರಂತರಸುಖಿಯು, ನಿರ್ದೋಷಿಯು, ನಿಷ್ಪಾಪನು, ನಿಷ್ಕಾಮನು

ಆಗಬೇಕು ಎನ್ನುವನು. ಈ ಎಲ್ಲ ಸಂಗತಿಗಳನ್ನು ಲಕ್ಷದಲ್ಲಿಟ್ಟುಕೊಂಡು ಸಾಧನಮಾರ್ಗವನ್ನು ನಿಶ್ಚಯಿಸುವದು ಅವಶ್ಯವಿರುವದು.

೭೮. ಮನುಷ್ಯನ ಘಟಕಗಳನ್ನು ಕುರಿತು ಮಾಡಿದ ಮೇಲಿನ ಎಲ್ಲ ವಿವೇಚನೆಯ ಸಾರವೇನಂದರೆ, ಮನುಷ್ಯನು ದೇಹ, ಮನಸ್ಸು, ಆತ್ಮ ಈ ಮೂರೂ ಕೂಡಿ ಆದ ಒಂದು ಪ್ರಾಣಿಯು, ದೇಹ ಮತ್ತು ಮನಸಿನ ಎಲ್ಲ ದೋಷಗಳಿಂದ, ಪಾಪಗಳಿಂದ, ದುಃಖಗಳಿಂದ ಮುಕ್ತನಾಗಬೇಕೆಂದು ಹವಣಿಸುವ ವ್ಯಕ್ತಿಯು. ಆ ವ್ಯಕ್ತಿಯು ತನ್ನ ಹುಟ್ಟು, ಜೀವನ, ಬೆಳವಣಿಗೆ ಮುಂತಾದವುಗಳ ವಿಷಯದಲ್ಲಿ ತನ್ನಂತಹ ಅನ್ಯವ್ಯಕ್ತಿಗಳನ್ನು ಅವಲಂಬಿಸಿ, ಪರಸ್ಪರ ಸಹಕಾರದಿಂದ ನಡೆಯಬೇಕಾಗುವದು. ಈ ಅವಶ್ಯಕತೆಯ ಮೂಲಕ ಅವನು ಸಾಮಾಜಿಕವ್ಯಕ್ತಿಯೆನಿಸುವನು. ಅವನು ಮುಕ್ತನಾಗಿ ಈ ದೇಹಬಿಟ್ಟು ಹೋದಬಳಿಕ, ನಾನು ಒಂದು ವ್ಯಕ್ತಿ, ಎಂಬ ಅಹಂಕಾರಬೀಜವನ್ನು ಕೂಡ ಸುಟ್ಟುಹಾಕಿ, ಕೇವಲ ಆತ್ಮಸ್ಥಿತಿಯಲ್ಲಿ ಇರುತ್ತಿರಬಹುದು. ಆದರೆ ಜೀವದಿಂದಿರುವ ವರೆಗೆ ಅವನು ಜೀವನ್ಮುಕ್ತನಾದರೂ ಕೂಡ ಈ ದೇಹ–ಮನ–ಸಮಾಜಗಳ ಸಂಗತಿಯು ಆತ್ಮನಿಗೆ ತಪ್ಪಿದ್ದಲ್ಲ. ಯಾಕಂದರೆ, ಇವುಗಳ ಮಧ್ಯದಲ್ಲಿ ಆವಿರ್ಭವಿಸಿ ಅವನು ಇವುಗಳಲ್ಲಿಯೆ ವ್ಯವಹರಿಸುತ್ತಿರುವನು. ತಾನು ಶುದ್ಧ ಆತ್ಮನು, ತಾನು ನಶ್ವರ ದೇಹವಲ್ಲ, ತಾನು ಚಂಚಲ ಮನಸಲ್ಲ, ತಾನು ಈ ಸಮಾಜಕ್ಕೆ ಸಂಬಂಧಿಸಿದವನಲ್ಲ, ಎಂದು ಮನುಷ್ಯನಲ್ಲಿಯ ನಿತ್ಯನಿರಂತರಘಟಕವಾದ ಆತ್ಮನು ಜೀವನ್ಮುಕ್ತ ಸ್ಥಿತಿಯಲ್ಲಿ ಸಾಕ್ಷಾತ್ಕರಿಸುವನು. ಆದರೂ ಸಮಾಧಿಯ ಅವಧಿಯನ್ನುಳಿದರೆ ದೇಹ ಮನಾದಿಗಳ ಮತ್ತು ಅವುಗಳಲ್ಲಿ ನಡೆದ ವ್ಯಾಪಾರಗಳ ಎಚ್ಚರವು ಆತ್ಮನಿಗೆ ಇದ್ದೇ ಇರುವದು. ಇಷ್ಟೇ ಅಲ್ಲ. ತಾನು ದೇಹಮನಗಳಲ್ಲ, ಎಂಬ ಮುಂತಾದ ವಿಚಾರಗಳನ್ನು ಸಹ ಅವನು ಈ ದೇಹದಲ್ಲಿಯ ವಿಮುಖನ್ನವಲಂಬಿಸಿದ ಮನಸಿನ ಸಹಾಯದಿಂದಲೆ ಮಾಡುವನು. ಜೀವನ್ಮುಕ್ತನಾದ ಬಳಿಕ ಸಹ ಪ್ರತ್ಯಕ್ಷ ದೇಹಪಾತವಾಗುವ ವರೆಗೆ ದೇಹ, ಮನ, ಆತ್ಮ ಇವುಗಳ ಸಂಘಾತವು ಇದ್ದೇ ಇರುವದು. ಆದರೆ ಈ ದೇಹಮನಗಳೇ ನಾನು, ಇದರ ಸುಖ ದುಃಖಿಗಳು ನಸ್ಸವೇ, ಎಂದು ಬದ್ಧನು ತಿಳಿಯುವಂತೆ ಮುಕ್ತನು ತಿಳಿಯದೆ, ಇವೆಲ್ಲ ಬೇರೆ ತಾನು ಬೇರೆ, ಅವು ಅನಿತ್ಯ, ನಶ್ವರ, ದೋಷಪೂರ್ಣ, ಇದ್ದರೆ ತಾನು ನಿತ್ಯನು, ಶುದ್ಧನು, ಬುದ್ಧನು, ಎಂದು ತಿಳಿಯುವನು, ಮತ್ತು ಇವುಗಳ ದೋಷಗಳಿಂದ ಮುಕ್ತನಿರುವನು. ಈ ಬಗೆಯ ಸಾಕ್ಷಾತ್ಕಾರ

ವಾಗಬೇಕಾದರೆ ಅತಿಶಯ ತೀವ್ರವಾದ ಸಾಧನೆಯು ಬೇಕಾಗುವದು. ಈ ಸ್ಥಿತಿಯು ಪ್ರಾಪ್ತವಾಗುವವರೆಗೆ ಆತ್ಮನು ದೇಹಮನಸಮಾಜಗಳನ್ನವಲಂಬಿಸಿಯೆ ಇರುವನು. ಆದುದರಿಂದ ಅವೆಲ್ಲ ಸುಸ್ಥಿತಿಯಲ್ಲಿರುವದು ಅವಶ್ಯವು. ಅವು ಹಾಗೆ ಇದ್ದರೆ ಸಾಧನವು ಚನ್ನಾಗಿ ನಡೆಯುವದು. ಜೀವನ್ಮುಕ್ತನಾದ ಬಳಿಕ ವಿದೇಹಮುಕ್ತನಾಗುವವರೆಗೆ ಅವನು ಇವುಗಳನ್ನವಲಂಬಿಸಿರದೆ ಇವುಗಳನ್ನು ಕುರಿತು ಉದಾಸೀನನಾಗಿರಬಹುದು. ಆದರೆ, ಜೀವನ್ಮುಕ್ತ ಸ್ಥಿತಿಯು ನಿರ್ವಿಘ್ನವಿರಬೇಕಾದರೆ ಮತ್ತು ಇಂಥ ಜೀವನ್ಮುಕ್ತ ಸ್ಥಿತಿಯನ್ನೆ ಅನ್ಯರಿಗೂ ಪ್ರಾಪ್ತಮಾಡಿಕೊಡಬೇಕಾದರೆ ದೇಹಮನಸಮಾಜಗಳ ಸುಸ್ಥಿತಿಯು ಅವಶ್ಯವು. ಈ ರೀತಿ ಮನುಷ್ಯನು ಮೂಲದಲ್ಲಿ ಕೇವಲ ನಿರಹಂಕಾರ ಆತ್ಮಸ್ವರೂಪನಿದ್ದರೂ ಅವನು ಮುಕ್ತನಾಗುವನಕ ದೇಹ, ಮನ, ಮತ್ತು ದೇಹಮನಗಳ ಮುಖಾಂತರ ಸಮಾಜ, ಇವುಗಳೊಡನೆ ಸಂಬದ್ಧನಿದ್ದು ಇವುಗಳಲ್ಲಿ ಮಮಕಾರವುಳ್ಳವನಿರುವನು. ಈ ಮಾಯಾ ಮಮಕಾರದಿಂದ ಮುಕ್ತನಾಗಲಿಕ್ಕೆ ಅವಶ್ಯವಿದ್ದ ಸಾಧನಾವಸ್ಥೆಯಲ್ಲಿ ಸಾಧನದ ಉಪಕರಣಗಳಾದ ಈ ದೇಹಮನಸಮಾಜಗಳು ಸುಸ್ಥಿತಿಯಲ್ಲಿರುವದು ಅವಶ್ಯವು. ಅದೇ ರೀತಿ, ಮನುಷ್ಯನು ಸಿದ್ಧನಾದ ಬಳಿಕ ಆ ಸ್ಥಿತಿಯು ನಿರಂತರವಿರಬೇಕೆಂದು ಹಾಗೂ ಅನ್ಯರೂ ಅದೇ ರೀತಿ ಸಿದ್ಧರಾಗಲಿಕ್ಕೆ ಅವನು ಸಹಾಯಮಾಡಬೇಕೆಂದು ಅವನ ದೇಹಮನಾದಿಗಳು ಸುಸ್ಥಿತಿಯಲ್ಲಿರಲಿಕ್ಕೆಬೇಕು. ದೇಹಮನಾದಿಗಳ ಈ ಬಗೆಯ ಸುಸ್ಥಿತಿಯೆ ಅಭ್ಯುದಯವೆಂದೆನಿಸುವದು. ಇದಕ್ಕಾಗಿ ಆತ್ಮಕಲ್ಯಾಣವನ್ನೆ ಧ್ಯೇಯವಾಗಿಟ್ಟುಕೊಂಡ ಧರ್ಮವು ಅಭ್ಯುದಯ ನಿಃಶ್ರೇಯಸವೆಂಬ ಇಬ್ಬಗೆಯ ಉದ್ದೇಶಗಳನ್ನು ಸಾಧಿಸುವುದಕ್ಕೆ ಪ್ರವೃತ್ತವಾಗಿದೆ.

೭೯. ಮನುಷ್ಯನು ಕೇವಲ ಆತ್ಮನಿದ್ದರೆ ಮತ್ತು ಅವನಿಗೆ ಯಾವ ಅವಸ್ಥೆಯಲ್ಲಿಯೂ ದೇಹ ಮನ ಸಮಾಜಗಳ ಅವಶ್ಯಕತೆಯೆ ಇರದಿದ್ದರೆ ಅವುಗಳ ಸುಸ್ಥಿತಿಯಾಗಲಿ ಅಭ್ಯುದಯವಾಗಲಿ ಇವು ಅವನಿಗೆ ಅವಶ್ಯಕವಿರುತ್ತಿರಲಿಲ್ಲ. ಆದರೆ ವಸ್ತುಸ್ಥಿತಿಯು ಹಾಗಿಲ್ಲ. ಮನುಷ್ಯನು ಮೂಲ ತನ್ನ ಆತ್ಮಸ್ವರೂಪವನ್ನು ತಿಳಿದುಕೊಂಡು ಅದನ್ನು ಪಡೆಯುವನಕ ಅವನು ದೇಹವೂ ಅಹುದು, ಮನಸೂ ಅಹುದು, ಅವನು ಸಾಮಾಜಿಕನೂ ಅಹುದು; ಮತ್ತು ಜೀವನ್ಮುಕ್ತಸ್ಥಿತಿಯನ್ನು ಮುಟ್ಟಿದ ಬಳಿಕ ಕೂಡ ಅನ್ಯರನ್ನು ಆ ಸ್ಥಿತಿಗೆ ತರಲಿಕ್ಕೆ ಅವನಿಗೆ ಈ ಸಾಧನಗಳು ಬೇಕೇಬೇಕಾಗುವವು. ತಾನು ಸಿದ್ಧಿಯನ್ನು ಪಡೆದರಾಯಿತು, ಅನ್ಯರನ್ನು ಆ ಸ್ಥಿತಿಗೆ ತರುವ

ಗೋಜಿಗೆ ಅವನು ಏಕೆ ಹೋಗಬೇಕು, ಎಂದು ಹಲವರು ಅನ್ನಬಹುದು. ಇದು ತೀರ ತಪ್ಪು. ಯಾಕಂದರೆ, ತಾನು ಸಿದ್ಧನಾದಬಳಿಕ ಅನ್ಯರನ್ನು ಅದೇ ಸ್ಥಿತಿಗೆ ಒಯ್ಯುವುದರಹೊರತು ಅವನಿಗೆ ಬೇರೆ ಕಾರ್ಯವೆ ಉಳಿಯುವುದಿಲ್ಲ! ನೀರುಹರಿಯುವೆಡು ಎಷ್ಟು ಸಹಜವೂ ನೈಸರ್ಗಿಕವೂ ಇರುವದೊ ಅಷ್ಟೇ ಸಿದ್ಧನು ಸಾಧಕರಿಗೆ ಸಹಾಯಕನಾಗುವದು ಸ್ವಾಭಾವಿಕವು. ಹಾಗೆ ಸಹಾಯಮಾಡದವನು ನಿಜಸಿದ್ಧನೇ ಅಲ್ಲ! ಅವನು ಪರಮಾತ್ಮ ಸಂಕಲ್ಪದೊಡನೆ ತಾದಾತ್ಮ್ಯವನ್ನು ಹೊಂದಿಯೆ ಇಲ್ಲ, ಎಂದು ಹೇಳ ಬಹುದು. ಈ ರೀತಿ, ಅವು ಮನುಷ್ಯನಿಗೆ ಮೊದಲು ಸಿದ್ಧಿಯ ಸಾಧನ ವೆಂದು, ಬಳಿಕ ಸಿದ್ಧಿಯ ಮಾರ್ಗದ ಜ್ಞಾನವನ್ನು ಇತರರಿಗೆ ಕೊಡುವ ಸಾಧನವೆಂದು, ಅವನು ವಿದೇಹನಾಗುವವರೆಗೆ ಅವಶ್ಯವಾದವುಗಳು. ಆದುದರಿಂದ ಅವನು ಅವುಗಳನ್ನು ಎಂದೂ ಉಪೇಕ್ಷಿಸಲಾರನು. ಒಟ್ಟಿಗೆ, ಈ ಸಾಧನಗಳು ಮತ್ತು ಇವುಗಳ ಅಭ್ಯುದಯ ಹಾಗೂ ಸುಸ್ಥಿತಿ ಇವುಗಳ ಕಡೆಗೆ ಮನುಷ್ಯನು ತನ್ನ ಲಕ್ಷವನ್ನು ಪೂರೈಸುವದು ಅವಶ್ಯವು. ಒಂದು ವೇಳೆ ಇವು ಸುಸ್ಥಿತಿಯಲ್ಲಿಲ್ಲದಿದ್ದರೆ ಆತ್ಮಕಲ್ಯಾಣವನ್ನರಸುವ ಸಾಧಕನ ಸ್ಥಿತಿಯು ಏನಾಗುವನು ನೋಡುವ. ಉದಾಹರಣಾರ್ಥವಾಗಿ, ಅವನ ದೇಹವು ದುರ್ಬಲವೂ ರೋಗದಿಂದ ಪೀಡಿತವೂ ಇರುವದೆಂದು ಕಲ್ಪಿಸಿದರೆ ಅವನ ಸಾಧನಶಕ್ತಿಯು ಮೊದಲು ಕುಗ್ಗುವದು, ಧೈರ್ಯ ಉತ್ಸಾಹಗಳು ಕುಂದುವವು, ಅವನು ಹೆಚ್ಚೆಚ್ಚು ಪರಾವಲಂಬಿಯಾಗುವನು, ಮನಸೆಲ್ಲ ಆ ರೋಗಗಳ ಕಡೆಗೆ ಮತ್ತು ದೇಹಾರೋಗ್ಯದ ಕಡೆಗೆ ಎಳೆಯಲ್ಪಟ್ಟು ಅವನ ಸಾಧನಕಾಲವು ವ್ಯರ್ಥ ಹೋಗುವದು. ಅದೇ ಪ್ರಕಾರ, ಮನಸು ವಿಕಸಿತವೂ ಸುಸಂಸ್ಕೃತವೂ ಇರದೆಹೋದರೆ ಅಥವಾ ಕುಕಲ್ಪನೆಗಳಿಂದಾಗಲಿ ದುಷ್ಟ ವಿಚಾರಗಳಿಂದಾಗಲಿ ತುಂಬಿಹೋಗಿದ್ದರೆ ಅಥವಾ ಚಿಂತೆಯಿಂದ ವ್ಯಾಪ್ತವಾಗಿದ್ದರೆ ಆ ಮನಸನ್ನು ಸುಸ್ಥಿರ ಹಾಗೂ ಪ್ರಸನ್ನವಿಡುವದು ಬಹಳ ದುರ್ಘಟವು. ಸಮಾಜದ ಸಂಗತಿಯಾದರೂ ಹೀಗೆಯೆ ಇರುವದು. ಸಾಧಕನು ಯಾವ ಸಮಾಜದಲ್ಲಿರುವನೊ ಆ ಸಮಾಜವು ಸುಸ್ಥಿತಿಯಲ್ಲಿಲ್ಲದಿದ್ದರೆ ಅವನಿಗೆ ಅನೇಕ ತೊಂದರೆಗಳುಂಟಾಗುವವು. ಸಮಾಜದಲ್ಲಿ ಅರಾಜಕತೆ, ಅನ್ಯಾಯ, ಕೊಲೆಪಾತಕಗಳು, ನೀತಿಗೇಡಿತನ ಮುಂತಾದವುಗಳು ಸುಳಿದಾಡುತ್ತಿದ್ದರೆ, ಇಲ್ಲವೆ ರೋಗಾದಿಗಳ ಪ್ರಸಾರವಾಗಿದ್ದರೆ ಸಾಧನೆಗೆ ಅನುಕೂಲ ವಾತಾವರವು ಇರಲರಿಯದು, ಮತ್ತು ಈ ಮುಂತಾದ ಅನಾಹುತಗಳ ಮೂಲಕ ಸಾಧನೆಯು ಯೋಗ್ಯಪ್ರಕಾರ

ವಾಗಿ ನಡೆಯದಿದ್ದರೆ ಸಿದ್ಧಿಯು ಪ್ರಾಪ್ತವಾಗಲರಿಯದು. ಅರ್ಥಾತ್ ನಿಃಶ್ರೇಯಸವು ಕನ್ನಡಿಯಲ್ಲಿಯ ಗಂಟಾಗಿ ಕೂಡುವದು. ಇನ್ನು ಒಬ್ಬನು ಸಿದ್ಧನಾದನೆಂದು ತಿಳಿದರೂ ಅವನಿಗೆ ಕೂಡ ದೇಹಮನಸಮಾಜಗಳ ಸುಸ್ಥಿತಿಯು ಬೇಕೇಬೇಕು. ಇಲ್ಲದಿದ್ದರೆ ಅವನ ಸಿದ್ಧಿಯು ಕಾಡ ಬೆಳದಿಂಗಳಂತೆ ಅವನ ಪೂರ್ತಿಯೆ ಉಳಿದುಬಿಡುವದು. ಇನ್ನು ನಿಃಶ್ರೇಯಸ ಪ್ರಾಪ್ತಿಗೆ ಯಾವ ಅಭ್ಯುದಯವು ಬೇಕು ಎಂದು ಮೇಲೆ ಹೇಳಿದೆಯೊ ಅದರ ಸ್ವರೂಪವನ್ನು ತಿಳಿದುಕೊಳ್ಳುವದು ಅವಶ್ಯವು.

೬೦. ಮನುಷ್ಯನ ಆತ್ಯಂತಿಕ ಧ್ಯೇಯವು ಆತ್ಮಕಲ್ಯಾಣವಿದ್ದರೂ ಆ ಧ್ಯೇಯವು ಪ್ರಾಪ್ತವಾಗುವವರೆಗೆ ದೇಹ, ಮನ, ಸಮಾಜ, ಎಂಬ ಸಾಧನಗಳು ಅವಶ್ಯ, ಮತ್ತು ಆ ಧ್ಯೇಯವು ಪ್ರಾಪ್ತವಾದ ಬಳಿಕ ಧ್ಯೇಯ ಪ್ರಾಪ್ತಿಯ ಮಾರ್ಗವನ್ನು ಎರಡನೆಯವರಿಗೆ ಅರುಹಲಿಕ್ಕೆ ದೇಹಮನಗಳು ಅವಶ್ಯ ಎಂಬುದನ್ನು, ಹಾಗೂ ಸಾಧನವು ಚನ್ನಾಗಿ ಸಾಗಲಿಕ್ಕೆ ಈ ಸಾಧನಗಳು ಸುಸ್ಥಿತಿಯಲ್ಲಿರುವದು ಅವಶ್ಯ, ಎಂಬುದನ್ನು ಇದುವರೆಗೆ ನೋಡಿದೆವು. ಆದರೆ ಈ ಸುಸ್ಥಿತಿ ಮತ್ತು ಅಭ್ಯುದಯವೆಂದರೇನು, ಇದನ್ನು ಇನ್ನು ಹೆಚ್ಚು ಸ್ಪಷ್ಟಗೊಳಿಸಲಿಕ್ಕೆ ಬೇಕು. ದೇಹಮನಸಮಾಜಗಳ ಅಭ್ಯುದಯದ ಮತ್ತು ಸುಸ್ಥಿತಿಯ ವಿಚಾರವನ್ನು ವಿಂಗಡವಾಗಿ ಮಾಡುವದು ಉಚಿತವು. ಯಾಕಂದರೆ, ಇವು ಮೂರೂ ಪರಸ್ಪರಾವಲಂಬಿ ಇದ್ದು ಬೇರೆ ಬೇರೆ ವಸ್ತುಗಳಿರುವವು. "ಶರೀರಮಾದ್ಯಂ ಖಲು ಧರ್ಮಸಾಧನಂ" ಎಂಬ ಉಕ್ತಿಯು, ದೇಹವು ಧರ್ಮದ ಮೊದಲನೆಯ ಸಾಧನವು, ಎಂದು ಹೇಳುವದು. ಈ ದೇಹವು ತಾಯಿತಂದೆಗಳಿಂದ ಹುಟ್ಟಿ, ಕೆಲವು ವರ್ಷಗಳವರೆಗೆ ಅತಿಶಯ ದುರ್ಬಲ ಮತ್ತು ಪರಾವಲಂಬಿ ಸ್ಥಿತಿಯಲ್ಲಿದ್ದು, ಬೆಳೆಬೆಳೆಯುತ್ತ ಸಮರ್ಥವೂ ಸ್ವಾವಲಂಬಿಯೂ ಆಗುವದು. ಹೀಗೆ ಹಲವು ವರ್ಷ ಇದ್ದು, ಪುನಃ ಮುಪ್ಪಾಗಿ, ಅಸಹಾಯವಾಗಿ ಮರಣಹೊಂದುವದು. ಮುಪ್ಪನ್ನು ಮತ್ತು ಸಾವನ್ನು ಅಲ್ಪಸ್ವಲ್ಪ ಮುಂದಕ್ಕೆ ಹಾಕಬಹುದೇ ಹೊರತು ಅವುಗಳನ್ನು ಪೂರ್ಣ ತಪ್ಪಿಸುವದು ಅಸಾಧ್ಯವು, ಅದೇ ರೀತಿ, ಶೈಶವ, ಬಾಲ್ಯ, ಕೌಮಾರ ಈ ಸ್ಥಿತಿಗಳನ್ನೂ ತಪ್ಪಿಸುವದು ಸಾಧ್ಯವಿಲ್ಲ. ಯಾವ ಮನುಷ್ಯನೂ ಇಪ್ಪತ್ತು ವರ್ಷದ ತರುಣನಾಗಿ ಒಮ್ಮೆಲೆ ಹುಟ್ಟಿಲ್ಲ, ಮುಂದೆ ಹುಟ್ಟಲಿಕ್ಕಿಲ್ಲ! ಹೀಗೆ, ಮೊದಲು ಹುಟ್ಟಿ, ಬಳಿಕ ಬೆಳೆದು, ಕೊನೆಗೆ ಸಾಯುವ ದೇಹದ ಅಭ್ಯುದಯ ಸುಸ್ಥಿತಿಗಳೆಂದರೇನು? ಯಾವ ಸ್ಥಿತಿಯಲ್ಲಿರುವುದರಿಂದ ಈ ದೇಹವು ಧರ್ಮಸಾಧನಕ್ಕೆ ಎಲ್ಲಕ್ಕೂ ಹೆಚ್ಚು ಉಪ

ಯುಕ್ತವಾಗುವುದೊ ಆ ಸ್ಥಿತಿಯೆ ಅದರ ಸುಸ್ಥಿತಿಯು ಮತ್ತು ಆ ಸ್ಥಿತಿಗೆ ಆ ದೇಹವು ಏರುವ ಕ್ರಿಯೆಯೆ ಅದರ ಅಭ್ಯುದಯವು. ಇಲ್ಲಿ ಅಭ್ಯುದಯ ಶಬ್ದವು ಗತಿವಾಚಕವೂ ಸುಸ್ಥಿತಿ ಶಬ್ದವು ಸ್ಥಿತಿವಾಚಕವೂ ಇರುವದು. ಪೂರ್ಣ ಬೆಳೆದ, ನಿರೋಗಿ, ತೇಜಸ್ವಿ, ಉತ್ಸಾಹಿ, ದೃಢ, ಸರ್ವಾಂಗಪೂರ್ಣ ಇದ್ದ ಶರೀರವೆ ಸುಸ್ಥಿತಿಯಲ್ಲಿರುವುದೆನ್ನಬಹುದು, ಈ ಸ್ಥಿತಿಯನ್ನು ಪ್ರಾಪ್ತ ಮಾಡಿಕೊಳ್ಳುವುದೆ ಅದರ ಅಭ್ಯುದಯವೆನಿಸುವದು. ಶರೀರಕ್ಕೆ ಈ ಸ್ಥಿತಿಯನ್ನು ತಂದುಕೊಟ್ಟು ಅದನ್ನು ಅದೇ ಸ್ಥಿತಿಯಲ್ಲಿ ಅದಷ್ಟು ಹೆಚ್ಚು ಅವಧಿಯವರೆಗೆ ಇಡಲೆತ್ನಿಸುವದು ಪ್ರತಿಯೊಬ್ಬ ಸಾಧಕನ ಕರ್ತವ್ಯವಿರುವದು. ಆದರೆ ಶರೀರವು ಧರ್ಮದ ಸಾಧನವು ಮಾತ್ರ ಎಂಬ ಮಾತನ್ನು ಎಂದಿಗೂ ಯಾರೂ ಮರೆಯಕೂಡದು. ಹಾಗೆ ಮರೆತರೆ ಸಾಧಕನು ಈ ಶರೀರದುರುಪಯೋಗ ಮಾಡಿ ಅಧೋಗತಿಗೆ ಹೋಗುವ ಸಂಭವವಿದೆ ಅಥವಾ ಶರೀರದ ಸುಸ್ಥಿತಿಯನ್ನು ಸಾಧಿಸುವುದೇ ಪರಮಸಾಧ್ಯವೆಂದು ತಿಳಿದು ಸಾಧ್ಯಸಾಧನಗಳ ಸಂಕರವನ್ನು ಮಾಡುವ ಸಂಭವವಿದೆ.

ಆಗ. ದೇಹದ ಸುಸ್ಥಿತಿ ಮತ್ತು ಅದರ ಅಭ್ಯುದಯವೆಂದರೇನು ಇದನ್ನು ಮೇಲೆ ಹೇಳಿದ್ದಾಯಿತು. ಇನ್ನು ಮನಸಿನ ಸುಸ್ಥಿತಿ ಮತ್ತು ಅಭ್ಯುದಯವೆಂದರೇನು? ಯಾವ ಸ್ಥಿತಿಯಲ್ಲಿರುವುದರಿಂದ ಮನಸು ನಿಃಶ್ರೇಯಸಪ್ರಾಪ್ತಿಗೆ ಉತ್ತಮ ಸಾಧನವಾಗುವುದೊ ಅದೇ ಅದರ ಸುಸ್ಥಿತಿಯು ಮತ್ತು ಆ ಸ್ಥಿತಿಯು ಅದಕ್ಕೆ ಪ್ರಾಪ್ತವಾಗುವುದೆ ಅದರ ಅಭ್ಯುದಯವು. ನಿಃಶ್ರೇಯಸಪ್ರಾಪ್ತಿಗೆ ಅಂದರೆ ನಿತ್ಯ, ನಿರಾಲಂಬ, ಪರಮ ಆಂತಃಸುಖ ಪ್ರಾಪ್ತಿಗೆ ನಿರ್ಮಲ, ನಿಷ್ಪಾಪ, ನಿಶ್ಚಿಂತವಾದ, ದೃಢ, ಹಾಗೂ ಸಂಯಮಿತವಾದ, ಏಕಾಗ್ರವಾಗುವ ಸಾಮರ್ಥ್ಯವುಳ್ಳ ಮತ್ತು ಅರಿವುಳ್ಳ, ಸುಸಂಸ್ಕೃತ ಹಾಗೂ ಪ್ರಸನ್ನವಾದ ಮನಸು ಅವಶ್ಯವು. ಮನಸಿನ ಈ ಸ್ಥಿತಿಯು ಅದರ ಸುಸ್ಥಿತಿಯೆನಿಸುವದು. ಮನಸನ್ನು ಈ ಸ್ಥಿತಿಗೆ ತರುವ ಕ್ರಿಯೆಗೆ ಅಭ್ಯುದಯವೆಂಬ ಹೆಸರು. ದೇಹವು ಮೊದಲು ಚಿಕ್ಕದೂ ಅಸಹಾಯವೂ ಪರಾವಲಂಬಿಯೂ ಇದ್ದು ಮುಂದೆ ಬೆಳೆದು ಸಮರ್ಥವೂ ಸ್ವಾವಲಂಬಿಯೂ ಆಗುವಂತೆ ಮನುಷ್ಯನ ಮನಸಾದರೂ ಮೊದಲು ದುರ್ಬಲವೂ ಅಜ್ಞಾನಿಯೂ ಇದ್ದು ಬರಬರುತ್ತ ವಿಕಾಸಹೊಂದಿ ಬಲವುಳ್ಳದ್ದೂ ದೃಢವೂ ಆಗುವದು. ಸುಸಂಸ್ಕಾರಗಳಿಂದ ವ್ಯವಸ್ಥಿತವಾಗಿ ಅದನ್ನು ಹಾಗೆ ಬೆಳೆಸುವದು ಪ್ರತಿಯೊಬ್ಬ ಸಾಧಕನ ಕರ್ತವ್ಯವಾಗಿದೆ. ದೇಹವು ಮುಪ್ಪಾದರೂ ಏಳುಳು ಸುರಕ್ಷಿತವಿರುವವರೆಗೆ ಮನುಷ್ಯನ ಮನಸಿನ ಬೆಳೆವಣಿಗೆಯು

ನಿಲ್ಲುವುದಿಲ್ಲ. ಮನುಷ್ಯದೇಹದ ಬೆಳೆವಣಿಗೆಯು, ಅದರಲ್ಲಿಯ ಅಸ್ಥಿಪಂಜರಾದಿ ಮುಖ್ಯ ವಸ್ತುಗಳ ಬೆಳೆವಣಿಗೆಯು ಸಾಧಾರಣವಾಗಿ ವಯಸ್ಸಿನ ಇಪ್ಪತ್ತೈದನೆಯ ವರುಷ ಪೂರ್ಣವಾಗುವದು. ಆ ಬಳಿಕ ಮೇಲಿನ ರಕ್ತ ಮಾಂಸಮಜ್ಜಾದಿಗಳು ಹೆಚ್ಚುಕಡಿಮೆಯಾದರೂ ಬೆಳೆವಣಿಗೆ, ನಿಲವು, ಅಸ್ಥಿ, ಜ್ಞಾನತಂತು, ಮುಂತಾದವು ಹೆಚ್ಚಾಗಲಾರವು. ಮನುಷ್ಯನ ಮನಸಿನ ಮಾತು ಹಾಗಿಲ್ಲ. ಅದರ ಬೆಳೆವಣಿಗೆಯು ವಯಸ್ಸಿನಿಂದ ಮರ್ಯಾದಿತವಿಲ್ಲ. ವಯಸ್ಸು ಎಷ್ಟೇ ಆಗಲಿ, ಮಿದುಳಿಗೆ ಎಲ್ಲಿಯವರೆಗೆ ಯಾವ ಪೆಟ್ಟೂ ತಗಲಿಲ್ಲವೊ ಅಥವಾ ಎಲ್ಲಿಯವರೆಗೆ ಅದಕ್ಕೆ ಯಾವ ವಿಕಾರವೂ ಆಗಿಲ್ಲವೊ ಅಲ್ಲಿಯವರೆಗೆ ಮನಸು ವಿಕಾಸಹೊಂದಬಲ್ಲದು ಮತ್ತು ಸುಸ್ಥಿತಿಯಲ್ಲಿರಬಲ್ಲದು. ದೇಹವು ಅತ್ಯಂತ ಮುಪ್ಪಾದರೂ ಮನಸು ಉತ್ತಮಸ್ಥಿತಿಯಲ್ಲಿದ್ದ ಉದಾಹರಣೆಗಳು ಅನೇಕವಿರುವವು. ದೇಹದ ಬಗ್ಗೆ ಮೇಲೆ ಹೇಳಿದಂತೆ, ಮನಸಿನ ಅಭ್ಯುದಯವೆ ನಮ್ಮ ಸಾಧ್ಯವೆಂದು ತಿಳಿಯಕೂಡದು, ಎಂದು ಇಲ್ಲಿ ಮನಸಿನ ಬಗ್ಗೆಯೂ ಹೇಳುವುದು ಅವಶ್ಯವಿದೆ. ದೇಹವು ಸಾಧನವಿದ್ದಂತೆ ಮನಸೂ ನಿಃಶ್ರೇಯಸಸಾಧನವಿರುವದು. ಇವುಗಳ ಅಭ್ಯುದಯವನ್ನು ಸಾಧಿಸುತ್ತಿರುವಾಗ ಕೂಡ ಮನುಷ್ಯನು ನಿಃಶ್ರೇಯಸವೆಂಬ ಧ್ರುವನಕ್ಷತ್ರವನ್ನು ತನ್ನ ಕಣ್ಣೆದುರಿಗೆ ಸ್ಪಷ್ಟವಾಗಿಟ್ಟುಕೊಂಡು ಸಾಧನನೌಕೆಯನ್ನು ನಡೆಸುವದು ಉಚಿತವು ಮತ್ತು ಕಲ್ಯಾಣಕಾರಕವು.

೮೨. ಈಗ ದೇಹಮನಗಳ ಸುಸ್ಥಿತಿ ಮತ್ತು ಅಭ್ಯುದಯ ಇವುಗಳ ಸಂಕ್ಷಿಪ್ತ ವರ್ಣನೆಯಾಯಿತು. ಮನುಷ್ಯನು ಸಾಮಾಜಿಕಪ್ರಾಣಿಯಿರುವುದರಿಂದ ಅವನು ಯಾವ ಸಮಾಜದಲ್ಲಿದ್ದು ನಿಃಶ್ರೇಯಸದ ಸಾಧನವನ್ನು ಮಾಡಬೇಕಾಗಿದೆಯೊ ಆ ಸಮಾಜದ ಸುಸ್ಥಿತಿ ಮತ್ತು ಅಭ್ಯುದಯ ಇವುಗಳ ಕಡೆಗೆ ನೋಡುವದು ಕ್ರಮಪ್ರಾಪ್ತವಿರುವದು. ಸಮಾಜದ ಸುಸ್ಥಿತಿ ಹಾಗೂ ಅಭ್ಯುದಯವೆಂದರೇನು? ಯಾವ ಸ್ಥಿತಿಯಲ್ಲಿ ಸಮಾಜವು ಇರುವುದರಿಂದ ಅದರ ಘಟಕಗಳಾದ ಮನುಷ್ಯವ್ಯಕ್ತಿಗಳು ತಮ್ಮ ಆತ್ಯಂತಿಕ ಧ್ಯೇಯಸಾಧನೆಯ ಮಾರ್ಗದಿಂದ ಸುಸೂತ್ರ ಸಾಗಲು ಅನುವಾಗುವುದೊ ಅದೇ ಅದರ ಸುಸ್ಥಿತಿಯು. ಸಮಾಜವು ಆ ಸ್ಥಿತಿಗೆ ಹೋಗಿ ಮುಟ್ಟುವುದೆ ಅದರ ಅಭ್ಯುದಯವು. ಒಂದಕ್ಕಿಂತ ಹೆಚ್ಚು ವ್ಯಕ್ತಿಗಳು ಕೂಡಿ ಇರೋಣವೆ ಸಮಾಜವೆನಿಸುವದು. ಇಂಥ ಸಮಾಜವು ಅಥವಾ ಸಂಘವು ಸುಸೂತ್ರವಿರಬೇಕಾದರೆ ಅಲ್ಲಿ ಶಾಂತಿ, ಸಮಾಧಾನ, ಪರಸ್ಪರರ ಬಗ್ಗೆ ಪ್ರೇಮಾದರಗಳು, ವ್ಯವಸ್ಥೆ, ನೀತಿ, ಎಲ್ಲರೂ ತಮ್ಮ ತಮ್ಮ ಸಾಮಾಜಿಕ

ಕರ್ತವ್ಯಗಳನ್ನು ಮಾಡುವಂತೆ ನಿರ್ಬಂಧ, ಈ ಮುಂತಾದ ಸಂಗತಿಗಳು ಇರಬೇಕಾಗುವವು. ಅಂದರೆ ಯಾವದೇ ಸಮಾಜವು ಒಳ್ಳೆ ಸುಸ್ಥಿತಿಯಲ್ಲಿದ್ದು ಎಲ್ಲರೂ ನಿಃಶ್ರೇಯಸಸಾಧನೆ ಮಾಡಲಿಕ್ಕೆ ಆಸ್ಪದವಾಗುವದು. ಸಮಾಜದಲ್ಲಿ ಒಂದು ವ್ಯಕ್ತಿಯು ಎರಡನೆಯ ವ್ಯಕ್ತಿಯೊಡನೆ ಹೇಗೆ ನಡಕೊಳ್ಳಬೇಕು ಎಂಬುದನ್ನು ನಿರ್ಣಯಿಸುವುದೆ ನೀತಿಯ ಕೆಲಸವಿರುವದು. ಒಂದೇ ಸಮಾಜದಲ್ಲಿರುವ ವ್ಯಕ್ತಿಗಳ ವಿಕಾಸ ಅಭ್ಯುದಯ ನಿಃಶ್ರೇಯಸಗಳಿಗೆ ಯಾವಬಗೆಯ ಅಡ್ಡಿಯೂ ಬಾರದಂತೆ ಅವರವರ ಸಂಬಂಧಗಳನ್ನು ನಿಶ್ಚಯಿಸುವ ನೀತಿಯೆ ಅತ್ಯುತ್ತಮ ನೀತಿಯು. ಮನುಷ್ಯನ ದೇಹಮನಗಳಂತೆ ಸಮಾಜಕ್ಕಾದರೂ ಹುಟ್ಟು ಬೆಳವಣಿಗೆ ಮುಂತಾದವುಗಳಿರುವವು. ಜಗತ್ತಿನಲ್ಲಿ ಮಾನವೀಸಮಾಜಗಳು ಅತ್ಯಂತ ಕಾಡು ಸ್ಥಿತಿಯನ್ನು ಮೊದಲು ಮಾಡಿ ಅತ್ಯಂತ ಸುಸಂಸ್ಕೃತ ಸ್ಥಿತಿಯವರೆಗೆ ನಾನಾವಿಧ ಅವಸ್ಥೆಗಳಲ್ಲಿದ್ದುದು ಕಂಡುಬರುವದು. ಯಾವ ಸಮಾಜವು ಕೇವಲ ಆಹಾರ ನಿದ್ರಾಭಯಾದಿ ಪಾಶವೀ ವೃತ್ತಿಗಳಿಂದಲೆ ಪ್ರೇರಿತವಾಗಿ ಜೀವಿಸುವುದೊ ಮತ್ತು ಯಾವ ಸಮಾಜದಲ್ಲಿರುವುದರಿಂದ ಹೆಚ್ಚು ಉಚ್ಚಕಲ್ಪನೆಗಳು ಸಹ ಬರುವುದು ಅಸಾಧ್ಯವೊ ಅದು ತೀರ ಕೀಳು ಸಮಾಜವೆಂದು ಹೇಳಬಹುದು. ಆದರೆ ಯಾವ ಸಮಾಜದಲ್ಲಿ ಪ್ರೇಮ, ಶಾಂತಿ, ಅಭಯಾದಿ ಶ್ರೇಷ್ಠ ಭಾವನೆಗಳು ನೆಲೆಗೊಂಡು ಇರುವವೊ ಅದು ಒಳ್ಳೆ ಮೇಲಾದ ಸಮಾಜವೆಂದು ಕರೆಯಲ್ಪಡುವದು. ಈ ಬಗೆಯ ಪೂರ್ಣ ವಿಕಸಿತ ಸಮಾಜವೆ ಎಲ್ಲರ ಆದರ್ಶವಿರಲಿಕ್ಕೆ ಬೇಕು ಮತ್ತು ಇಂಥ ಸಮಾಜವನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯನ್ನು ಪ್ರತಿಯೊಬ್ಬ ಸಾಧಕನು ಇಟ್ಟುಕೊಳ್ಳಲಿಕ್ಕೆ ಬೇಕು. ಇಂಥ ಉಚ್ಚ ಸಮಾಜವು ಕೂಡ ನಿಃಶ್ರೇಯಸದ ಸಾಧನಮಾತ್ರವಿರುವದು ಎಂಬ ಮಾತನ್ನು ಯಾವಾಗಲೂ ನೆನಪಿನಲ್ಲಿಡತಕ್ಕದ್ದು.

೬೩. ಮನುಷ್ಯನ ದೇಹ, ಮನ, ಮತ್ತು ಅವನಿರುವ ಸಮಾಜ ಇವುಗಳನ್ನು ಸುಸ್ಥಿತಿಯಲ್ಲಿಡುವದು ಅವಶ್ಯವು, ಅವು ಮೂರೂ ನಿಶ್ರೇಯಸ ಪ್ರಾಪ್ತಿಗೆ ಉತ್ತಮ ಸಾಧನಗಳಾಗಲು ಯಾವ ಸ್ಥಿತಿಯಲ್ಲಿ ಸಮರ್ಥವಿರುವವೊ ಅದೇ ಅವುಗಳ ಸುಸ್ಥಿತಿಯು, ಆ ಸ್ಥಿತಿಗೆ ಅವು ಏರುವುದೆ ಅವುಗಳ ಅಭ್ಯುದಯವು, ಎಂಬ ಮಾತುಗಳನ್ನು ಇದುವರೆಗೆ ಸಂಕ್ಷೇಪದಿಂದ ವಿವೇಚಿಸಿದ್ದಾಯಿತು. ಆದರೆ ಸ್ವಲ್ಪ ವಿವರವನ್ನು ಹೇಳದಹೊರತು ಈ ವಿಷಯದ ವ್ಯಾಪಕತೆಯು ಜನ್ಮಾಗಿ ಲಕ್ಷಕ್ಕೆ ಬರುವದು ಶಕ್ಯವಿಲ್ಲ. ಆದುದರಿಂದ ದೇಹಮನಸಮಾಜಗಳ ಅಭ್ಯುದಯ ಮತ್ತು ಸುಸ್ಥಿತಿ ಇವು

ಗಳಿಗಾಗಿ ಮನುಷ್ಯನು ಯಾವ ಯಾವ ಅನ್ಯ ವಿಷಯಗಳ ಕಡೆಗೆ ಲಕ್ಷ ಗೊಡಬೇಕಾಗುವದು ಮತ್ತು ಏನೇನು ಮಾಡಬೇಕಾಗುವದು ಇದನ್ನು ಇಲ್ಲಿ ನೋಡೋಣ. ದೇಹವೆಂದರೆ ಜೈತನ್ಯಯುಕ್ತ ಜೀವಂತಶರೀರವೆಂದು ಮೇಲೆ ಹೇಳಿದ್ದಾಗಿದೆ. ಈ ದೇಹವು ನಿರೋಗಿಯೂ ಬಲವುಳ್ಳದ್ದೂ ಸುಂದರವೂ ಆಯುಷ್ಮಾನವೂ ಆಗಬೇಕಾದರೆ ನಾವು ಅನೇಕ ಶಾಸ್ತ್ರಗಳನ್ನು ಅಭ್ಯಸಿಸಿ ಅವುಗಳಂತೆ ಆಚರಿಸುವದು ಅವಶ್ಯವು. ನಿಸರ್ಗನಿಯಮಗಳಂತೆ ದೇಹವು ಹುಟ್ಟುವದು, ಬೆಳೆಯುವದು, ಬಾಳುವದು, ಮತ್ತು ಅಳಿಯುವದು. ಆದುದರಿಂದ ಮನುಷ್ಯದೇಹವನ್ನು ಮೇಲೆ ಹೇಳಿದಂತೆ ಸುಸ್ಥಿತಿಯಲ್ಲಿಡಬೇಕಾದರೆ ಆಯಾ ಸ್ಥಲದ ಜಲವಾಯು, ಆಹಾರಶಾಸ್ತ್ರ, ವ್ಯಾಯಾಮಶಾಸ್ತ್ರ, ಆರೋಗ್ಯಶಾಸ್ತ್ರ, ವೈದ್ಯಶಾಸ್ತ್ರ, ರಸಾಯನಶಾಸ್ತ್ರ, ಈ ಮುಂತಾದ ಅನೇಕ ಶಾಸ್ತ್ರಗಳನ್ನು ಕಲಿತು, ಅವುಗಳ ನಿಯಮಗಳನ್ನು ಪರಿಶೋಧಿಸಿ, ಅವುಗಳಂತೆ ನಡೆಯುವ ನಿಶ್ಚಯಮಾಡಿ, ಹಾಗೆ ನಡೆಯುವಂತೆ ಅನುಕೂಲತೆಯನ್ನುಂಟುಮಾಡಿಕೊಂಡಾಗ ಈ ಧ್ಯೇಯವು ಸಾಧ್ಯವಾಗಬಲ್ಲದು. ಇದನ್ನೆಲ್ಲ ಪೂರ್ಣ ವಿಚಾರಿಸಿದರೆ, ದೇಹದ ಅಭ್ಯುದಯ ಮತ್ತು ಸುಸ್ಥಿತಿಯೆಂದರೇನು ಮತ್ತು ಅವುಗಳನ್ನು ಪಡೆಯಲು ಏನೇನು ಮಾಡಬೇಕಾಗುವದು, ಇದರ ಯಥಾರ್ಥ ಕಲ್ಪನೆಯು ಬರುವದು. ಆಗರ್ಭಮರಣಪರಿಯಂತರ ಈ ದೇಹವು ಅಬಾಧಿತವಾದ ನಿಸರ್ಗನಿಯಮಗಳಿಂದ ನಿಗಡಿತವಿರುವದು. ಅವುಗಳನ್ನು ಜನ್ಮಾಗಿ ಅರಿತುಕೊಂಡು ಅವುಗಳಂತೆ ನಡೆಯುವುದರಹೊರತು ದೇಹದ ಸುಸ್ಥಿತಿಯನ್ನು ಸಾಧಿಸಲಿಕ್ಕೆ ಅನ್ಯ ರಾಜಮಾರ್ಗವಿಲ್ಲ. ಯಾವದೊಂದು ಮಂತ್ರತಂತ್ರದಿಂದ ಇಲ್ಲವೆ ಇಂದ್ರಜಾಲದಿಂದ ಈ ಮಾತು ಸಿದ್ಧವಾಗಲರಿಯದು.

೬೪. ಇದೇ ಮಾತು, ದೇಹಕ್ಕಿಂತ ಬಹಳೇ ಸೂಕ್ಷ್ಮವಾದ ಮನಸಿನ ಅಭ್ಯುದಯಸುಸ್ಥಿತಿಗಳನ್ನು ಇನ್ನೂ ಹೆಚ್ಚಾಗಿ ಅನ್ವಯಿಸುವದು. ದೇಶ ಕಾಲಗಳೆಂಬ ರಂಗಸ್ಥಲದಲ್ಲಿ ನಾವು ಮಾಡತಕ್ಕ ಎಲ್ಲ ಕಾರ್ಯಗಳ ಮುಖ್ಯ ಸಾಧನವು ದೇಹವಿರುವಂತೆ, ಸೂಕ್ಷ್ಮವಾದ ಕಲ್ಪನಾಸಾಮ್ರಾಜ್ಯದಲ್ಲಿ ನಾವು ಮಾಡುವ ಕಾರ್ಯಗಳ ಮುಖ್ಯ ಸಾಧನವು ನಮ್ಮ ಮನಸು ಇರುವದು. ಬಾಹ್ಯ ಸಂವೇದಗಳ ಅರಿಕೆ, ಅವುಗಳ ಸಂಗ್ರಹ, ಅವುಗಳಿಂದ ತೆಗೆದ ಅನುಮಾನಗಳು, ಅವುಗಳ ಆಧಾರದಿಂದ ಕಟ್ಟಿದ ಕಲ್ಪನೆಗಳು, ಭೂತಕಾಲದ ಸ್ಮರಣ, ವರ್ತಮಾನಕಾರ್ಯದ ಸಂಕಲ್ಪ, ಭವಿಷ್ಯತ್ಕಾರ್ಯದ ಆಸೆ ಆಕಾಂಕ್ಷೆ, ವಿವಿಧ ಭಾವನೆಗಳು, ಸಂಶಯ ಈ ಮುಂತಾದ ಅನೇಕ

ಊರ್ಮಿಗಳ ಜಲ್ಲಾಟವು ನಮ್ಮ ಮನಃಸಾಗರದಲ್ಲಿ ಸತತವೂ ನಡೆದಿರುವದು. ಈ ಅಲ್ಲೋಲಕಲ್ಲೋಲ ಕಲ್ಪನಾತರಂಗಗಳ ಕ್ಷೇತ್ರವಾದ ಮನಸ್ಸೆಂಬ ಸೂಕ್ಷ್ಮ ಅಂತಃಸಾಧನದ ಅಭ್ಯುದಯದ ಹಾಗೂ ಸುಸ್ಥಿತಿಯ ನಿಯಮಗಳನ್ನು ಪರಿಶೋಧಿಸಿ ಅದರಂತೆ ನಾವು ನಡೆದರೆ ಈ ಸಾಧನವು ನಮಗೆ ನಿಃಶ್ರೇಯಸಪ್ರಾಪ್ತಿಯನ್ನು ಮಾಡಿಕೊಡುವದು. ಮನುಷ್ಯನ ಜ್ಞಾನೇಂದ್ರಿಯಗಳ ಅಭ್ಯಾಸವೂ ಮಾನಸಶಾಸ್ತ್ರ ಹಾಗೂ ಯೋಗಮಾರ್ಗಗಳ ಒಳ್ಳೆ ಜ್ಞಾನವೂ ಈ ವಿಷಯದಲ್ಲಿ ಅವಶ್ಯವಾದವುಗಳು. ಆ ಜ್ಞಾನದಿಂದ ಮನಸನ್ನು ತೀಕ್ಷ್ಣ, ಸ್ಥಿರ, ಪ್ರಸನ್ನ, ಏಕಾಗ್ರ, ಮತ್ತು ಶಾಂತ ಮಾಡುವುದರಿಂದ ಮುಂದೆ ನಿಃಶ್ರೇಯಸಪ್ರಾಪ್ತಿಯಾಗಬಲ್ಲದು.

೮೫. ಸಮಾಜದ ಸುಸ್ಥಿತಿಯನ್ನು ಸ್ಥಾಪಿಸಬೇಕಾದರೂ ಅನೇಕ ಶಾಸ್ತ್ರಗಳ ಅಭ್ಯಾಸವು ಮತ್ತು ತದನುಸಾರ ವರ್ತನವು ಅವಶ್ಯವು. ಅನೇಕ ವಿವಿಧ ವ್ಯಕ್ತಿಗಳ ಸಂಘವು ಕೂಡಿ ಸಮಾಜವೆನಿಸುವದು. ಅನೇಕ ತೆರದ, ವಿವಿಧ ಸ್ವಭಾವದ, ಬಗೆಬಗೆಯ ಹಿತಸಂಬಂಧಗಳುಳ್ಳ ಜನರು ಸಮಾಜದಲ್ಲಿ ಇದ್ದು ಪರಸ್ಪರರೊಡನೆ ಸಹಕಾರದಿಂದ ನಡೆಯಬೇಕಾಗುವದು. ಸಮಾಜವು ನಿರೋಗಿಯೂ ನಿತಿಬದ್ಧವೂ ಶಾಂತಿಪೂರ್ಣವೂ ಇರುವದು ಅಗತ್ಯವು. ಹಾಗೆ ಇದ್ದರೆ ಮಾತ್ರ ಎಲ್ಲ ವ್ಯಕ್ತಿಗಳ ಹಿತವು ಆಗುವದು. ಇಂಥ ಸಮಾಜ ಸ್ಥಿತಿಯನ್ನು ಸಾಧಿಸಬೇಕಾದರೆ ಅರ್ಥಶಾಸ್ತ್ರ, ರಾಜಕಾರಣ, ನೀತಿಶಾಸ್ತ್ರ, ಸಮಾಜಶಾಸ್ತ್ರ, ಈ ಮುಂತಾದವುಗಳನ್ನು ಅಭ್ಯಸಿಸಿ ಅವುಗಳ ನಿಯಮದಂತೆ ಸಮಾಜಘಟನೆ ಮಾಡಲೆತ್ನಿಸಲಿಕ್ಕೆ ಬೇಕು. ದೇಹಾರೋಗ್ಯಕ್ಕೆ ನಿರ್ದೋಷ ಜಲವಾಯುಗಳು ಎಷ್ಟು ಅವಶ್ಯವೊ ಅಷ್ಟೇ ನಿಜವಾದ ವ್ಯಕ್ತಿ ಹಿತವನ್ನು ಸಾಧಿಸಬೇಕಾದರೆ ನಿರ್ದೋಷ ಸಮಾಜವು ಅತ್ಯವಶ್ಯಕವು. ದೇಹದ ಯಾವದೇ ಭಾಗಕ್ಕೆ ನೋವು ರೋಗಾದಿಗಳಾದರೂ ಇಡೀ ದೇಹಕ್ಕೆ ಅದರಿಂದ ಪೀಡೆಯುಂಟಾಗುವಂತೆ ಸಮಾಜದ ಯಾವದೇ ಭಾಗವು ದುರ್ಬಲ ಅಥವಾ ದುಷ್ಟವಿದ್ದರೆ ಅದರ ಪರಿಣಾಮವು ಪ್ರತಿಯೊಂದು ವ್ಯಕ್ತಿಯ ಮೇಲೆ ಯಾವಾಗಾದರೂ ಒಮ್ಮೆ ಆಗದೆ ಇರದು. ಆದುದರಿಂದ ಯಾವ ಮನುಷ್ಯನೂ ತಾನೊಂದು ಪ್ರತ್ಯೇಕ ವ್ಯಕ್ತಿ ಎಂದು ತಿಳಿದು ಸಮಾಜದ ಸುಸ್ಥಿತಿಯ ಉಪೇಕ್ಷೆ ಮಾಡುವದು ಅತ್ಯಂತ ವಿಘಾತಕವು. ಹಾಗೆ ಮಾಡದೆ ಯಾವನು ಸಮಾಜದ ಸುಸ್ಥಿತಿಯೆ ತನ್ನ ಸುಸ್ಥಿತಿ ಎಂದು ತಿಳಿದು ಏಕಭಾವದಿಂದ ವರ್ತಿಸುವನೊ ಅವನೇ ಸಮಾಜದ ಯೋಗ್ಯ ಘಟಕನೆನಿಸಿ ತನ್ನ ಮತ್ತು ಸಮಾಜದ ಹಿತವನ್ನು ಸಾಧಿಸುವನು.

೮೬. ದೇಹ, ಮನ, ಸಮಾಜಗಳು ನಿಃಶ್ರೇಯಸಪ್ರಾಪ್ತಿಗೆ ಯೋಗ್ಯವಾದ ಮತ್ತು ಶ್ರೇಷ್ಠವಾದ ಸಾಧನಗಳಾಗಬೇಕಾದರೆ ಅವು ಅಭ್ಯುದಯ ಹೊಂದಿ ಸುಸ್ಥಿತಿಯಲ್ಲಿರಲಿಕ್ಕೆ ಬೇಕು, ಮತ್ತು ಆ ಸುಸ್ಥಿತಿಯನ್ನು ಸಾಧಿಸಬೇಕಾದರೆ ಮೇಲೆ ಹೇಳಿದಂತೆ ಅನೇಕ ಶಾಸ್ತ್ರಾದಿಗಳ ಅಭ್ಯಾಸವೂ ತದನುಸಾರ ಪ್ರಯತ್ನಪೂರ್ವಕ ವರ್ತನವೂ ಅವಶ್ಯ, ಎಂಬುದು ಸ್ಪಷ್ಟವಾಯಿತು. ಈ ಪ್ರಕಾರ ಮನುಷ್ಯನ ದೇಹ, ಮನ, ಆತ್ಮ ಎಂಬ ಮೂರು ಘಟಕಗಳಲ್ಲಿ ಮೊದಲಿನ ಎರಡರ ಅಭ್ಯುದಯಾದಿಗಳ ವಿಚಾರವಾಯಿತು. ಇನ್ನು ಮೂರನೆಯ ಘಟಕವಾದ ಆತ್ಮನ ವಿಚಾರವು ಕರ್ತವ್ಯವು. ದೇಹ ಮನಗಳನ್ನು ವರ್ಣಿಸಿದಂತೆ ಆತ್ಮನನ್ನು ವರ್ಣಿಸುವದು ಬಹು ಕಠಿಣವು. ಯಾಕಂದರೆ ಆ ವಸ್ತುವೆ ಅಪ್ರಕಾರ ಅತ್ಯಂತ ಸೂಕ್ಷ್ಮವೂ ವರ್ಣಿಸಲಿಕ್ಕೆ ಬಾರದ್ದೂ ಇರುವದು. ಪ್ರತಿಯೊಂದು ವ್ಯಕ್ತಿಯಲ್ಲಿ ಅವನವನ ವ್ಯಕ್ತಿತ್ವಕ್ಕೆ ಮೂಲಭೂತವಾಗಿರುವ ಚಿದಂಶವೆ ಇಲ್ಲಿ ಆತ್ಮವೆಂದು ಸಂಬೋಧಿಸಲ್ಪಟ್ಟಿದೆ. ಅದಕ್ಕೆ ಜೀವಾತ್ಮವೆಂದೂ ಅನ್ನಬಹುದು. ಚಿತ್ರಕ್ಕೆ ಭಿತ್ತಿಯಂತೆ, ಮಂಜು ಮೋಡಗಳಿಗೆ ಮುಗಿಲಿನಂತೆ, ತೆರೆನೊರೆಗಳಿಗೆ ಸಾಗರದಂತೆ, ಕಲ್ಪನೆಗಳಿಗೆ ಚಿತ್ತದಂತೆ ಆತ್ಮವು ದೇಹಮನಾದಿಗಳಿಗೆ ಮೂಲಾಧಾರವಾಗಿರುವದು. ಅದು ಮೂಲ ನಿರವಯ, ಅನಾದಿ ಅನಂತ, ಸ್ವಯಂಭು, ಸರ್ವವ್ಯಾಪಕ, ಒಂದೇ ಒಂದು ಇರುವ ಚಿದ್ಘನ ವಸ್ತುವಿನ ಅಂಶಮಾತ್ರವು. ಒಂದು ದೇಹ ಮನಗಳಿಂದ ಪರಿಮಿತವಾದ ವ್ಯಕ್ತಿಯೆ ತಾನು, ಎಂಬ ಭಾವದ ಮೂಲಕ ಆ ಮೂಲ ಚಿದಂಶವು ಜೀವಾತ್ಮನಾಗಿ ಈ ವ್ಯಕ್ತಿಯ ದೇಹಮನ, ದೇಶ ಕಾಲ, ಮುಂತಾದ ಎಲ್ಲ ಉಪಾಧಿಗಳಿಗೆ ಒಳಗಾಗಿರುವದು. ಈ ಭಾವ ಕಳಿದು, ತನ್ನ ಮೂಲಸ್ವರೂಪದ ಅರಿವಾಗಿ, ತನ್ನ ಮತ್ತು ಪರಮಾತ್ಮನ ಸಂಬಂಧದ ಸಾಕ್ಷಾತ್ಕಾರವಾಯಿತೆಂದರೆ ಜೀವಾತ್ಮನು ಮುಕ್ತನಾಗಿ ಸುಖದುಃಖಗಳಾಚೆಗಿನ ಸ್ವರೂಪಾನಂದದಲ್ಲಿ ಇರಲಾರಂಭಿಸುವನು. ಇದೇ ಆತ್ಮನ ವಿಕಾಸವು, ಅಭ್ಯುದಯವು, ಅಥವಾ ಸುಸ್ಥಿತಿಯು. ಈ ಸ್ಥಿತಿಯು ಸ್ಥಿರವಾಯಿತೆಂದರೆ ಅದೇ ನಿಶ್ರೇಯಸವೆನಿಸುವದು. ಈ ಸ್ಥಿತಿಯನ್ನು ಪ್ರಾಪ್ತಮಾಡಿಕೊಳ್ಳುವುದೆ ಮನುಷ್ಯಮಾತ್ರನ ಧ್ಯೇಯವಿರುವದು. ದೇಹ ವಿರುವಾಗಲೆ ಈ ಸ್ಥಿತಿಯು ಪ್ರಾಪ್ತವಾಗಬಲ್ಲದು. ಇಷ್ಟೇ ಅಲ್ಲ, ದೇಹ ವಿರುವಾಗಲೆ ಇದನ್ನು ಎಲ್ಲರೂ ದೊರಕಿಸತಕ್ಕದ್ದು ಇಲ್ಲದಿದ್ದರೆ ದೊಡ್ಡ ಘಾತವಾಗುವದು, (**ಮಹತೀ ವಿನಷ್ಟಿಃ**– ಕೇನ ಉಪ. ೨–೪). ಎಂದು ಉಪನಿಷತ್ಕಾರರು ಹೇಳಿರುವರು. ಇಂಥ ಮುಕ್ತಿಯು ಜೀವನ್ಮುಕ್ತಿ

ಯೆಸಿಸುವದು. ದೇಹಪಾತದ ನಂತರ, ಜೀವನ್ಮುಕ್ತನು ನಿರಂತರ, ನಿರತಿಶಯ ಆನಂದದಲ್ಲಿ ವಿಹರಿಸುವನು. ಅದೇ ಪೂರ್ಣ ಮುಕ್ತಿಯು ಅಥವಾ ಮೋಕ್ಷವು.

೮೭. ಜೀವನ್ಮುಕ್ತನು ಆತ್ಮಸ್ವರೂಪವನ್ನು ಅರಿತವನು ಮತ್ತು ಆತ್ಮಸ್ಥಿತಿಯಲ್ಲಿಯೆ ಇರುವವನಾದುದರಿಂದ ವಿಶ್ವದಲ್ಲೆಲ್ಲ ಒಂದೇ ಒಂದು ಆತ್ಮವಸ್ತುವು ತುಂಬಿರುವದು ಎಂಬುದನ್ನು ಅವನು ಯಾವಾಗಲೂ ಅನುಭವಿಸುತ್ತಿರುವನು. ಅವನಿಗೆ ದೇಹಮನಗಳಿದ್ದರೂ ಅವನು ಜಗತ್ತಿನಲ್ಲಿ ವ್ಯವಹರಿಸುತ್ತಿದ್ದರೂ ಅವನ ಈ ಆತ್ಮೈಪಮ್ಯಬುದ್ಧಿಯು ಎಂದಿಗೂ ಅಳಿಯುವದಿಲ್ಲ. ಅವನು ತನ್ನ ದೇಹಮನಗಳ ಮತ್ತು ಸರ್ವಶಕ್ತಿಗಳ ಪೂರ್ಣ ಸ್ವಾಮಿಯಿರುವನು. ಅವನು ಅತಿಶಯ ಶಾಂತನೂ ಪ್ರಸನ್ನನೂ ಸಮಬುದ್ಧಿಯುಳ್ಳವನೂ ಶೀತೋಷ್ಣ, ಸುಖದುಃಖ, ನಿಂದಾಸ್ತುತಿ ಈ ಮುಂತಾದ ದ್ವಂದ್ವಗಳಿಗೆ ಸಿಲುಕದವನೂ ಇರುವನು. ಅವನು ತನ್ನ ಅಹಂಭಾವವನ್ನು ಪೂರಾ ತೊರೆದವನಿರುವನು. ಅವನು ಸರ್ವಕರ್ಮಗಳನ್ನು ಮಾಡುತ್ತಿದ್ದರೂ ಪದ್ಮಪತ್ರದಂತೆ ಅಲಿಪ್ತನಿರುವನು, ಯಾಕಂದರೆ ಅವನು ನಿಷ್ಕಾಮನೂ ಫಲಾಶಾರಹಿತನೂ ಇರುವನು. ಕೇವಲ ನಿಸರ್ಗಶಕ್ತಿಗಳಂತೆ ಅವನು ನಿರಪೇಕ್ಷನಿದ್ದು ಕರ್ಮಮಾಡುವನು. ಪಾಪಪುಣ್ಯಗಳಾವವೂ ಅವನಿಗೆ ತಗಲವು. ಅವನ ಕರ್ಮಗಳು ಯಾವಾಗಲೂ ಸ್ವಾಭಾವಿಕವಾಗಿ ಲೋಕಹಿತಾರ್ಥವಾಗಿಯೆ ಇರುವವು. ಯಾಕಂದರೆ, ಲೋಕಹಿತದೊಡನೆ ಅವನು ಅಷ್ಟೊಂದು ತಾದಾತ್ಮ್ಯಹೊಂದಿದವನಿರುವನು. ಅವನ ಆಂತರಿಕ ಆನಂದಭಾವವು ಯಾವ ಘಟನೆಯಿಂದಲೂ ಕೆಡದು. ಅದನ್ನು ಯಾರೂ ಯಾವ ರೀತಿಯಿಂದಲೂ ಕೆಡಿಸಲಾರರು. ಅವನು ಕೇವಲ ಸತ್‌ಚಿತ್ ಆನಂದಸ್ವರೂಪನಿರುವನೆಂದರೂ ಸಲ್ಲುವದು. ಸದೇಹನಾಗಿ ಜೀವದಿಂದಿರುವವರೆಗೆ ಈ ರೀತಿ ಇದ್ದು, ತನ್ನ ಕರ್ತವ್ಯವನ್ನು ಮಾಡಿ, ತನ್ನ ಜೀವನ ಯಾತ್ರೆಯನ್ನು ಮುಗಿಸಿ, ಪರಿಬಿಟ್ಟ ಹಾವಿನಂತೆ ಅವನು ಈ ದೇಹಬಿಟ್ಟು ಹೋಗುವನು. ಈ ಸ್ಥಿತಿಯೆ ನಿಃಶ್ರೇಯಸವೆನಿಸುವದು, ಇದೇ ಆತ್ಮಕಲ್ಯಾಣವು, ಆತ್ಮವಿಕಾಸದ ಪರಮಾವಧಿಯು, ಆತ್ಮಶ್ರೇಯಸ್ಸು, ಪರಂಧಾಮವು, ಅತ್ಯಂತಿಕ ಶ್ರೇಷ್ಠಪದವು. ಇದನ್ನು ದೊರಕಿಸುವುದೆ ಎಲ್ಲರ ಧ್ಯೇಯವು. ಇದನ್ನು ಪಡೆಯುವದಕ್ಕಾಗಿಯೆ ವಿುಕ್ಕ ಎಲ್ಲ ಉಪಕರಣಗಳ ಉಪಯೋಗವು. ಇದನ್ನು ವ್ಯಕ್ತಿಯು ತಾನು ಪಡೆದು, ಅದು ಅನ್ಯರಿಗೆ ದೊರೆಯುವಂತೆ ಹೆಣಗತಕ್ಕದ್ದು. ಇದರಲ್ಲಿಯೆ ಅವನ ಇಹಪರ

ಸಾಫಲ್ಯವಿರುವದು, ಅವನ ಸರ್ವಶಕ್ತಿಗಳ ಸಾರ್ಥಕತೆ ಇರುವದು, ಅವನ ಜೀವನದ ಕೃತಾರ್ಥತೆ ಇರುವದು.

೮೮. ಇನ್ನು, ದೇಹಮನಸಮಾಜಗಳ ಅಭ್ಯುದಯ ಮತ್ತು ಸುಸ್ಥಿತಿಗಳು ನಿಃಶ್ರೇಯಸದ ಪೂರ್ವಸಾಧನಗಳಿದ್ದಾದರೆ ಅವುಗಳನ್ನು ಸಾಧಿಸುವುದರಲ್ಲಿಯೆ ಮನುಷ್ಯನ ಇಡೀ ಆಯುಷ್ಯವು ವೆಚ್ಚವಾಗಿ ಹೋಗಬಹುದು. ಅಂದಬಳಿಕ ಮುಂದೆ ಅವನಿಗೆ ನಿಃಶ್ರೇಯಸದ ಪ್ರಾಪ್ತಿಯು ಯಾವಾಗ ಮತ್ತು ಹೇಗೆ ಆಗಬೇಕು, ಎಂದು ಯಾರಾದರೂ ಆಕ್ಷೇಪಿಸಿದರೆ ಅದು ಅಯೋಗ್ಯವಾಗಲಿಕ್ಕಿಲ್ಲ. ಪೂರ್ವಸಾಧನೆ ಇದರ ಅರ್ಥವನ್ನು ನಾವು ಜನ್ಮಾಗಿ ತಿಳಿದುಕೊಂಡರೆ ಈ ಆಕ್ಷೇಪವು ತನ್ನಿಂದ ತಾನೆ ಕರಗಿ ಹೋಗುವದು. ಪೂರ್ವಸಾಧನೆಯೆಂದರೆ ಇವುಗಳನ್ನು ಸಾಧಿಸುವನಕ ನಿಃಶ್ರೇಯಸದ ಪ್ರಯತ್ನವು ಕುಂಠಿತವಾಗುವದು ಎಂದು ಯಾರೂ ತಿಳಿಯಕೂಡದು, ಅಥವಾ ಅಲ್ಲಿಯವರೆಗೆ ಮೋಕ್ಷದ್ವಾರವು ಮುಚ್ಚಿರುವದು ಎಂದು ಯಾರೂ ಕಲ್ಪಿಸಕೂಡದು. ನಿಃಶ್ರೇಯಸಪ್ರಾಪ್ತಿಯ, ಆತ್ಮಸಮಾಧಾನವನ್ನು ಪಡೆಯುವ ಯತ್ನವನ್ನು ನಾವು ಇದ್ದಬಿದ್ದ ಸಾಧನಗಳ ಸಹಾಯದಿಂದಲೆ ನಡೆಸಿರಬೇಕು. ಇಷ್ಟೇ ಅಲ್ಲ. ಆ ಸಾಧನಗಳನ್ನು ಅಂದರೆ ದೇಹಮನಸಮಾಜಗಳನ್ನು ಹೆಚ್ಚು ಶುದ್ಧ ಮತ್ತು ಸಮರ್ಥ ಮಾಡುವ ಕರ್ಮವನ್ನು ಸಹ ನಾವು ಆತ್ಮಕಲ್ಯಾಣಕ್ಕಾಗಿ ಮಾಡಿ ನಿಃಶ್ರೇಯಸಮಾರ್ಗದಲ್ಲಿ ಒಂದೊಂದು ಹೆಜ್ಜೆಯನ್ನು ಮುಂದೆ ಇಡುತ್ತ ಹೋಗುವದು ಸಾಧ್ಯವು. ಆ ಕರ್ಮವನ್ನು ಕೂಡ ನಾವು ನಿಷ್ಕಾಮ, ಫಲಾಶಾರಹಿತ, ಮತ್ತು ಪರಮಾತ್ಮಾರ್ಪಣಭಾವದಿಂದ ಮಾಡಿದರೆ ಅದು ನಮಗೆ ಸತ್ಯಸಾಕ್ಷಾತ್ಕಾರದ ಸಾಧನವೆ ಆಗುವದು. ಈ ರೀತಿ ಅಭ್ಯುದಯಕ್ಕಾಗಿ ಮಾಡಿದ ಕರ್ಮಗಳು ಕೂಡ ಫಲಾಶಾರಹಿತವಿದ್ದರೆ ಅವು ನಿಶ್ರೇಯಸಕರವೇ ಆಗುವವು. ಈ ರೀತಿ ಯಾವ ಕ್ಷಣದಲ್ಲಿಯೂ ನಿಷ್ಕಾಮ ಕರ್ಮಿಯು ತನ್ನ ನಿಶ್ರೇಯಸಪ್ರಯತ್ನವನ್ನು ಬಿಟ್ಟಂತಾಗುವುದಿಲ್ಲ. ಇನ್ನು, ಸಾಧನಗಳು ಎಷ್ಟು ಹೆಚ್ಚು ಸುಸ್ಥಿತಿಯಲ್ಲಿರುವವೊ ಅಷ್ಟು ನಿಶ್ರೇಯಸವು ಹೆಚ್ಚು ಸುಲಭಸಾಧ್ಯವಾಗುವದು, ಇಷ್ಟೇ ಹೊರತು, ಯಾವದೇ ಕಾಲಕ್ಕೆ ದೇಹಮನಾದಿಗಳು ಯಾವ ಸ್ಥಿತಿಯಲ್ಲಿದ್ದರೂ ನಿಃಶ್ರೇಯಸದ ದಾರಿಯು ಕಟ್ಟಾಗುವದೆಂದು ಯಾರೂ ತಿಳಿಯಕೂಡದು. ತೀವ್ರ ಮುಮುಕ್ಷುಭಾವವೂ ದೃಢಸಂಕಲ್ಪವೂ ಇದ್ದರೆ ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಸಾಧಕನ ಹೆಜ್ಜೆಯು ಮುಂದೆ ಬೀಳಬಲ್ಲದು.

ರ್ಮ. ಇನ್ನು ಈ ಜೀವನ್ಮುಕ್ತಿಯನ್ನು ಹೇಗೆ ಪಡೆಯಬೇಕು, ಅದರ ಸಾಧನಮಾರ್ಗವು ಯಾವುದು, ಎಂಬುದನ್ನು ಸಂಕ್ಷೇಪದಿಂದ ಇಲ್ಲಿ ವಿಚಾರಿಸಿದರೆ ಆದರ್ಶಧರ್ಮದ ಸಾಮಾನ್ಯಸ್ವರೂಪವನ್ನು ನಾವು ನೋಡಿ ಕೊಂಡಂತಾಗುವದು. ವ್ಯಕ್ತಿಯೆಂದರೆ ಈ ದೇಹಮನಬುದ್ಧಿಗಳಲ್ಲ, ವ್ಯಕ್ತಿ ಎಂದರೆ ಆತ್ಮನು, ಎಂಬುದನ್ನು ಸಾಕ್ಷಾತ್ಕರಿಸಿ, ಆತ್ಮಗುಣಗಳನ್ನು ಕಾಯವಾಣಿಮನಗಳಲ್ಲಿ ಅಳವಡಿಸಿ, ಯಾವಾಗಲೂ ಆತ್ಮಭಾವದಿಂದ ಆಚರಿಸುವುದೆ ಜೀವನ್ಮುಕ್ತಿಯೆನಿಸುವದು, ಹಾಗೆ ದೇಹಭಾವವಳಿದು ದೇವ ಭಾವವು, ಕಾಯಭಾವವಳಿದು ಆತ್ಮಭಾವವು ನೆಲೆಗೊಳ್ಳಬೇಕಾದರೆ ಮನುಷ್ಯನು ತನ್ನ ಸರ್ವಸ್ವವನ್ನು ಆತ್ಮಾರ್ಪಣಮಾಡಿ ಸಾಧನವನ್ನು ಪ್ರಾರಂಭಿಸಲಿಕ್ಕೆಬೇಕು. ಉತ್ಕಟ ಇಚ್ಛೆ, ನಿಷ್ಠೆ, ಶ್ರದ್ಧೆ, ಏಕಾಗ್ರತೆ ಈ ಗುಣಗಳು ಸಾಧಕನಿಗೆ ಅತ್ಯವಶ್ಯವಿರುವವು, ಸಾಧಕನು ತನ್ನ ಪ್ರಾಣಶಕ್ತಿ, ಭಾವಶಕ್ತಿ, ಮನಃಶಕ್ತಿ, ಕ್ರಿಯಾಶಕ್ತಿ, ಬುದ್ಧಿಶಕ್ತಿ ಇವುಗಳನ್ನು ಶುದ್ಧೀಕರಿಸಿ, ಸಂಯಮಿಸಿ, ಸಂಗ್ರಹಿಸಿ, ಏಕಾಗ್ರಮಾಡಿ ಅವೆಲ್ಲವುಗಳನ್ನು ಪರಮಾತ್ಮನಿಗರ್ಪಿಸಿ ಏಕನಿಷ್ಠೆಯಿಂದ ಪ್ರತಿಕ್ಷಣವೂ ಆತ್ಮಸ್ಥಿತಿಯನ್ನು ಸಾಧಿಸಲೆತ್ನಿಸಿದರೆ ಅವನು ತೀವ್ರವೆ ಸಿದ್ಧನಾಗಬಲ್ಲನು. ಸಾಮಾನ್ಯತಃ ಈ ಎಲ್ಲ ಶಕ್ತಿಗಳು ಅಶುದ್ಧವಿರುವವು, ಅಂದರೆ, ಮನುಷ್ಯನು ವಿಕಾರವಶನಾಗಿ ಇವುಗಳನ್ನು ಕೇವಲ ಸ್ವಾರ್ಥದ ಸಲುವಾಗಿ ಉಪಯೋಗಿಸುತ್ತಿರುವನು. ಅವುಗಳನ್ನು ಯಾವಾಗಲೂ ಯೋಗ್ಯ ಮತ್ತು ನೈಸರ್ಗಿಕ ಕಾರ್ಯಗಳಲ್ಲಿಯೆ ಮಿತವಾಗಿ ಉಪಯೋಗಿಸುವುದಕ್ಕೆ ಆ ಶಕ್ತಿಗಳ ಸಂಯಮವೆನ್ನಬಹುದು. ಶುದ್ಧೀಕರಣ ಮತ್ತು ಸಂಯಮ ಈ ಎರಡು ಕೆಲಸಗಳಾದವೆಂದರೆ ಆಯಾ ಶಕ್ತಿಗಳು ನಮ್ಮಲ್ಲಿ ಹೆಚ್ಚು ಸಮರ್ಥವಾಗುವವು. ಅದೇ ಅವುಗಳ ಸಂಗ್ರಹವೆನಿಸುವದು. ಅವುಗಳನ್ನು ಒಂದೇ ಕಾರ್ಯಕ್ಕಾಗಿ ಅರ್ಥಾತ್ ಪರಮಾತ್ಮಕಾರ್ಯಕ್ಕಾಗಿ ಉಪಯೋಗಿಸುವುದೆ ಅವುಗಳ ಏಕಾಗ್ರೀಕರಣವೆನಿಸುವದು. ಎಲ್ಲವನ್ನು ಯಾವಾಗಲೂ ಪರಮಾತ್ಮಾರ್ಪಣಮಾಡುವುದು ಸರ್ವಾರ್ಪಣವೆನಿಸುವದು. ಇದೇ ಶ್ರೇಷ್ಠವಾದ ಸಮನ್ವಯ ಮಾರ್ಗವು. ಇದೇ ಪೂರ್ಣ ಯೋಗವು. ಇದು ಮಿಕ್ಕ ಎಲ್ಲ ಯೋಗ ಮಾರ್ಗಗಳನ್ನು ಒಳಗೊಂಡಿರುವದು. ಸಂಪೂರ್ಣ ಜೀವನ್ಮುಕ್ತಿಯಲ್ಲಿ, ನಿಃಶೇಷ ನಿಃಶ್ರೇಯಸಪ್ರಾಪ್ತಿಯಲ್ಲಿ ಈ ದಿವ್ಯಮಾರ್ಗದ ಪರ್ಯವಸಾನವಾಗುವದು. ಈ ಸಾಧನದಿಂದ ಮನುಷ್ಯನು ಏಕಾತ್ಮತ್ವದ ಅನುಭವ ಪಡೆಯುವನು, ಸಾಮ್ಯಬುದ್ಧಿಯನ್ನು ಸಾಧಿಸುವನು, ದ್ವಂದ್ವಾತೀತನಾಗುವನು, ನಿಷ್ಕಾಮತೆಯನ್ನು ಅಳವಡಿಸಿ ಕರ್ಮಮಾಡಿಯೂ ಕರ್ಮಬಂಧನದಿಂದ ಮುಕ್ತನಿರಬಲ್ಲನು, ಸತತ ಸ್ವಕರ್ಮನಿರತನಿದ್ದು ನಿಜ ಆನಂದಭಾವದಲ್ಲಿ ನಿಮಗ್ನನಾಗಿರಬಲ್ಲನು. ಈ ಸಾಧನವು, ಪ್ರತಿಯೊಬ್ಬ ವ್ಯಕ್ತಿಯ ಶಕ್ತಿಗಳ ವಿಕಾಸಕ್ಕೆ ಯೋಗ್ಯ ಅವಕಾಶಕೊಟ್ಟು, ಅವುಗಳ ಉಪಯೋಗವು ವ್ಯಕ್ತಿಯ ಪ್ರಗತಿಯಗೋಸುಗ ಮತ್ತು ಸಮಾಜದ ಸುಸ್ಥಿತಿಯಗೋಸುಗ ಆಗುವಂತೆ ಮಾಡಿ, ಪರಮಧ್ಯೇಯವಾದ ನಿಃಶ್ರೇಯಸವನ್ನು ದೊರಕಿಸಿಕೊಡುವದು.

೯೦. ಆದರ್ಶಧರ್ಮವೆಂಬುದು ಈ ಪರಿ ಇರುವದು. ಮನುಷ್ಯನ ಅತ್ಯುಚ್ಚ ಸ್ಥಿತಿಯು ಯಾವುದು, ಅವನ ಪರಮ ಧ್ಯೇಯವು ಏನು, ಎಂಬುದನ್ನು ವೇದಾಗಮಾದಿಗಳು, ಸಾಕ್ಷಾತ್ಕಾರಿಗಳು, ತತ್ವಜ್ಞಾನಿಗಳು ನಿಶ್ಚಯಿಸಿರುವರು. ಪರಮಸುಖಪ್ರಾಪ್ತಿ, ನಿತ್ಯಾನಂದಸ್ಥಿತಿ, ಜೀವನ್ಮುಕ್ತಿ, ನಿಃಶ್ರೇಯಸ ಇದೇ ಆ ಧ್ಯೇಯವು. ಅದನ್ನು ಯೋಗ್ಯರೀತಿಯಿಂದ ಮತ್ತು ಬೇಗನೆ ಪಡೆಯುವ ಮಾರ್ಗವನ್ನೆ ಆದರ್ಶಧರ್ಮವು ಹೇಳುವದು. ಮನುಷ್ಯನ ಘಟಕಗಳನ್ನೂ ಅವನ ಶಕ್ತಿವಿಶೇಷಗಳನ್ನೂ ಮನುಷ್ಯನು ಇರುವ ಸಮಾಜವನ್ನೂ ಅವನ ಪರಂಪರೆಯನ್ನೂ ವಿಚಾರಿಸಿ ಅವುಗಳಲ್ಲಿ ಹಿತಕಾರಕವಿದ್ದ ಯಾವುದಕ್ಕೂ ಬಾಧೆ ಬರದೆ, ಅವುಗಳಲ್ಲಿ ವ್ಯಕ್ತಿಗೆ ಅಥವಾ ಸಮಾಜಕ್ಕೆ ಘಾತಕವಿದ್ದವುಗಳನ್ನಷ್ಟೆ ಕುಗ್ಗಿಸಿ ಮಿಕ್ಕವುಗಳ ಉಪಯೋಗವನ್ನು ನಿಃಶ್ರೇಯಸಪ್ರಾಪ್ತಿಗಾಗಿ ಯಾವ ಧರ್ಮವು ಮಾಡಿಕೊಳ್ಳುವುದೊ ಅದೇ ಆದರ್ಶಧರ್ಮವು. ಕೇವಲ ವ್ಯಕ್ತಿಯ ಧ್ಯೇಯಕ್ಕೆಯೆ ಮಹತ್ವಕೊಡುವ, ಇಲ್ಲವೆ ಬರಿಯ ಸಮಾಜದ ಹಿತದ ಕಡೆಗೆಯೆ ಲಕ್ಷಗೊಡುವ ಧರ್ಮವು ಪೂರ್ಣಧರ್ಮವೆನಿಸಲಾರದು. ಮನುಷ್ಯನ ಪ್ರಾಣ, ಭಾವ, ಕ್ರಿಯಾ, ಬುದ್ಧಿ, ಚಿತ್ತ ಶಕ್ತಿಗಳಲ್ಲಿ ಯಾವುದೊಂದನ್ನು ಕುಗ್ಗಿಸುವ ಮುಗ್ಗಿಸುವ ಧರ್ಮವು ಸಮನ್ವಯಧರ್ಮವಲ್ಲ, ಜೀವನೋತ್ಸಾಹವನ್ನು ಭಂಗಿಸಿ ಇಲ್ಲವೆ ಜೀವನವೆಂದರೊಂದು ಭಯಂಕರವಾದ ಪಾಪವು, ಎಂಬ ಕಲ್ಪನೆಯನ್ನು ಹರಡಿ, ಇದನ್ನು ತಪ್ಪಿಸಿಕೊಳ್ಳುವುದೆ ಎಲ್ಲರ ಕರ್ತವ್ಯ, ಎಂಬ ನಿರಾಶಾವಾದವನ್ನು ಅಥವಾ ಹೇಯಭಾವವನ್ನು ಪದೇಶಿಸುವ ಧರ್ಮವೂ ಆದರ್ಶಧರ್ಮವಲ್ಲ. ದುಷ್ಟನಿಗ್ರಹ ಶಿಷ್ಟಪರಿಪಾಲನ ಎಂಬ ನ್ಯಾಯದಿಂದ ದುಷ್ಟ, ಘಾತಕ ಪ್ರವೃತ್ತಿಗಳ ನಿಗ್ರಹ ಮತ್ತು ಸತ್‌ಪ್ರವೃತ್ತಿಗಳ ಪೋಷಣ, ಇದೇ ಶ್ರೇಷ್ಠಧರ್ಮದ ಕರ್ತವ್ಯವು. ಯಾವ ಧರ್ಮದ ಮೂಲಕ ಈ ಜೀವನೋದ್ಯಾನವು, ಪ್ರತಿಯೊಂದು ರೀತಿಯಿಂದ ಚನ್ನಾಗಿ ಬೆಳೆದು ಸ್ತ್ರೀಪುರುಷರು ಆನಂದಪೂರ್ವಕವಾಗಿ ಮಾಡಿದ ಸತ್ಕಾರ್ಯಸುಮನಗಳಿಂದ ಪ್ರಫುಲ್ಲಿತ

ವಾಗುವುದೊ ಅದೇ ಉಚ್ಚಧರ್ಮವು. ಯಾವ ಧರ್ಮದ ಮೂಲಕ ಮನುಷ್ಯನ ಹೃದಯವೀಣೆಯಲ್ಲಿ ಸುಪ್ತವಿರುವ ಸಪ್ತಸ್ವರಗಳು ಸ್ವಕರ್ಮವೆಂಬ ಸುರಮ್ಯಸಂಗೀತವಾಗಿ ಪ್ರವಹಿಸಿ ಸಮಾಜವು ತಲ್ಲೀನವಾಗಿ ಆ ತಾಳದಲ್ಲಿ ತನ್ನ ಹೆಜ್ಜೆಯನ್ನು ಮುಂದೆ ಇಡುವುದೊ ಅದೇ ಶ್ರೇಷ್ಯಧರ್ಮವು, ಯಾವ ಧರ್ಮದ ಮೂಲಕ ಮನುಷ್ಯನು ಚರಾಚರ ಜಡಚೇತನಗಳಲ್ಲೆಲ್ಲ ಏಕ ರೂಪ, ಏಕರಸನಾಗಿ ಬೆರೆತಿರುವ ಸೂಕ್ಷ್ಮ ಆತ್ಮನನ್ನು ಸಾಕ್ಷಾತ್ಕರಿಸಿ ಅವನೊಡನೆ ಏಕತಾನನಾಗಿ, ತನ್ನ ದೇಹಮನಗಳ ಮೇಲೆ ಪ್ರಭುತ್ವವನ್ನು ಸಂಪಾದಿಸಿ, ಸಮಾಜದ ಪುಷ್ಟಿ ತುಷ್ಟಿ ಶಾಂತಿಗಳನ್ನು ಸಾಧಿಸಲನುವಾಗುವನೊ ಅದೇ ಆದರ್ಶಧರ್ಮವು. ಇಂಥ ಆದರ್ಶಧರ್ಮವನ್ನೂ, ಸತ್ಯಧರ್ಮವನ್ನೂ ಶೋಧಿಸಿ ತದನುಸಾರವಾಗಿ ತನ್ನ ಜೀವನವನ್ನು ಮಾರ್ಪಡಿಸುವುದೆ ಯುಗಯುಗಾಂತರಗಳಿಂದ ಮನುಷ್ಯಪ್ರಾಣಿಯ ಪ್ರಯತ್ನವಾಗಿದೆ. ಆ ಧರ್ಮದ ಕಿಂಚಿತ್ ದರ್ಶನವಾದವನು ಕೂಡ ಧನ್ಯನೇ ಸೈ, ಮಾನ್ಯನೇ ಸೈ, ಅನುಕರಣೀಯನೇ ಸೈ.

---

೫. ವಚನಕಾರರ ಸಾಕ್ಷಾತ್ಕಾರವಾದವು

(೯೦) ಸಾಕ್ಷಾತ್ಕಾರವೆಂದರೇನು ಮತ್ತು ವಚನಕಾರರ ಸಾಕ್ಷಾತ್ಕಾರ ಇವು ಈ ಪ್ರಕರಣದ ವಿಷಯಗಳು. (೯೨) ಅತ್ಯಂತಿಕ ಸತ್ಯದ ಶೋಧವು ಮನುಷ್ಯನಿಗೆ ಸ್ವಾಭಾವಿಕ. (೯೩) ಆ ಶೋಧದಿಂದಲೆ ಚಿರಶಾಂತಿಯು. (೯೪) ಸತ್ಯಶೋಧನದ ವಿವಿಧ ಯತ್ನಗಳು. (೯೫) ಬುದ್ಧಿ, ಭಾವನೆ, ಮತ್ತು ಸ್ಫೂರ್ತಿ ಇವು ಸತ್ಯಶೋಧನದ ಸಾಧನಗಳು. (೯೬) ವಚನಕಾರರು ಸಾಕ್ಷಾತ್ಕಾರವಾದಿಗಳು. ಸಾಕ್ಷಾತ್ಕಾರವಾದವೆಂದರೇನು ? (೯೭) ಸತ್ಯಸಾಕ್ಷಾತ್ಕಾರದ ಮುಖ್ಯ ಲಕ್ಷಣಗಳು. (೯೮) ಸಾಕ್ಷಾತ್ಕಾರಿಯಲ್ಲಿ ತೋರುವ ಹಲವು ಲಕ್ಷಣಗಳು. (೯೯) ಭಾರತವರ್ಷದಲ್ಲಿ ಸಾಕ್ಷಾತ್ಕಾರದ ಪೂರ್ವಪರಂಪರೆ. (೧೦೦) ಉಪನಿಷತ್ತುಗಳಲ್ಲಿ ಸಾಕ್ಷಾತ್ಕಾರವಾದವು. (೧೦೧) ಗೀತೆಯು ಸಾಕ್ಷಾತ್ಕಾರದ ಗ್ರಂಥವು. (೧೦೨) ಆಗಮಗಳಲ್ಲಿಯ ಸಾಕ್ಷಾತ್ಕಾರವು. (೧೦೩) ಭಕ್ತಿಸೂತ್ರ ಮತ್ತು ಪುರಾಣಗಳಲ್ಲಿಯ ಸಾಕ್ಷಾತ್ಕಾರ. (೧೦೪) ಆಚಾರ್ಯರೂ ಸಾಕ್ಷಾತ್ಕಾರವೂ. (೧೦೫) ಸಾಕ್ಷಾತ್ಕಾರವು ಎಲ್ಲ ಪ್ರಮಾಣಗಳ ಸಮನ್ವಯವು ಅಥವಾ ಕಳಸವು. (೧೦೬) ದಕ್ಷಿಣದ ಮತ್ತು ಕರ್ನಾಟಕದ ಸಾಕ್ಷಾತ್ಕಾರವಾದಿಗಳ ಪರಂಪರೆ. (೧೦೭) ಪಾಶ್ಚಾತ್ಯರಾಷ್ಟ್ರಗಳಲ್ಲಿ ಸಾಕ್ಷಾತ್ಕಾರವಾದವು. (೧೦೮) ಅನ್ಯದೇಶ ಮತ್ತು ಧರ್ಮಗಳಲ್ಲಿಯ ಸಾಕ್ಷಾತ್ಕಾರಿಗಳು. (೧೦೯) ವಚನಕಾರರ ಸಾಕ್ಷಾತ್ಕಾರವಾದವು. (೧೧೦) ಸಾಕ್ಷಾತ್ಕಾರವನ್ನು ಕುರಿತು ವಚನಗಳು. (೧೧೧) ವಚನಕಾರರ ತತ್ವಜ್ಞಾನವು. (೧೧೨) ವಚನಕಾರರ ಆಧ್ಯಾತ್ಮಿಕ ಬಯಕೆ. (೧೧೩) ವಚನಕಾರರು ತಮ್ಮ ಧ್ಯೇಯವನ್ನು ಪಡೆದರು. (೧೧೪) ಸಾಕ್ಷಾತ್ಕಾರವೆ ಎಲ್ಲಕ್ಕೂ ಹೆಚ್ಚಿನದೆಂದು ವಚನಕಾರರ ಮತವು.

೯೧. ಈ ಗ್ರಂಥದ ಮೂಲ ಉದ್ದೇಶ ಮತ್ತು ರೂಪರೇಖೆ ಇವುಗಳನ್ನು ಮೊದಲನೆಯ ಪ್ರಕರಣದಲ್ಲಿ ಹೇಳಿ, ವಚನಶಾಸ್ತ್ರದ ಮಹತ್ವವನ್ನು ಎರಡನೆಯದರಲ್ಲಿ ವರ್ಣಿಸಿ, ಆ ಮೇಲೆ ಮೂರನೆಯ ಪ್ರಕರಣದಲ್ಲಿ ವಚನಶಾಸ್ತ್ರದ ಸಾರೋಪದೇಶವನ್ನು ವಿವರಿಸಿದ್ದಾಯಿತು; ಬಳಿಕ ಆದರ್ಶಧರ್ಮದ ದಿಗ್ದರ್ಶನವು ಹೋದ ಪ್ರಕರಣದಲ್ಲಿ ಮಾಡಲ್ಪಟ್ಟಿತು. ಇನ್ನು ಈ ಪ್ರಕರಣದಲ್ಲಿ ಮುಖ್ಯವಾಗಿ ವಚನಕಾರರ ಸಾಕ್ಷಾತ್ಕಾರವಾದದ ಅಥವಾ ಅನುಭಾವಮಾರ್ಗದ ವೈಶಿಷ್ಟ್ಯವನ್ನು ಹೇಳುವೆವು. ಸಾಕ್ಷಾತ್ಕಾರವಾದವೆಂದರೇನು, ಅದರ ಮುಖ್ಯ ಲಕ್ಷಣಗಳೇನು, ಅದರ ಉಗಮ, ವಚನಕಾರರ ಸಾಕ್ಷಾತ್ಕಾರವಾದ, ಅವರ ತತ್ವಜ್ಞಾನ, ಅವರ ಆಧ್ಯಾತ್ಮಿಕ ಧ್ಯೇಯ, ಈ ಮುಂತಾದವುಗಳ ಬಗ್ಗೆ ಅವರ ವಿಚಾರಗಳು, ಈ ಮತ್ತು ಈ ಬಗೆಯ ವಿಷಯಗಳು ಈ ಪ್ರಕರಣದಲ್ಲಿ ಬರುವವು. ಇದುವರೆಗಿನ ಪ್ರಕರಣಗಳನ್ನು ಬರೆದಂತೆ ಈ ಪ್ರಕರಣವನ್ನಾದರೂ ವಚನಕಾರರ ಸಾಂಪ್ರದಾಯಿಕವಲ್ಲದ ವಿಚಾರಗಳನ್ನೆ ನಮ್ಮ ಕಣ್ಣುಮುಂದೆ ಇಟ್ಟುಕೊಂಡು ಬರೆದಿರುವೆವು. ಪ್ರಸ್ತುತ ಪ್ರಕರಣವನ್ನು ಬರೆಯುವಾಗ ವಚನಧರ್ಮವು ಯಾವ ರೀತಿ ಮತ್ತು ಎಷ್ಟರಮಟ್ಟಿಗೆ ಅನ್ಯಪ್ರಾಂತಗಳಲ್ಲಿಯ ಅಥವಾ ದೇಶಗಳಲ್ಲಿಯ ಸಾಕ್ಷಾತ್ಕಾರವಾದವನ್ನು ಹೋಲುವದು ಹಾಗೂ ಇದು ಎಷ್ಟರಮಟ್ಟಿಗೆ ಆದರ್ಶಧರ್ಮವಿರುವದು, ಎಂಬ ಮುಂತಾದ ಮಾತುಗಳು ಸ್ವಾಭಾವಿಕವಾಗಿ ಇಲ್ಲಿ ಅನುಷಂಗದಿಂದ ಬಂದಿರುವವು. ಇಲ್ಲಿ ವಿಶೇಷ ವಿಸ್ತಾರವನ್ನು ಬೆಳೆಸುವದು ಸಾಧವಿಲ್ಲ. ಆದುದರಿಂದ ಈ ವಿಷಯವನ್ನು ಹೇಗೆ ಅಭ್ಯಸಿಸಬಹುದು ಎಂಬುದನ್ನು ಸಂಕ್ಷೇಪವಾಗಿಯೆ ತೋರಿಸಿ ಈ ಪ್ರಕರಣವು ಮುಗಿಸಲ್ಪಟ್ಟಿದೆ.

೯೨. ಜಗದಾದಿಯಿಂದ ಮನುಷ್ಯನು ಸತ್ಯವನ್ನು –ಅತ್ಯಂತಿಕಸತ್ಯವನ್ನು– ಶೋಧಿಸುತ್ತಲೆ ಇರುವನು. ತೀರ ಕಾಡುಸ್ಥಿತಿಯಲ್ಲಿರುವ ಜನರಲ್ಲಿಸಹ ಈ ಶೋಧವು ನಡೆದೇ ಇರುವದು. ಅವರಲ್ಲಿ ಕೂಡ ಜೀವ, ಜಗತ್ತು, ಜಗತ್ಕರ್ತ ಇವುಗಳ ಸ್ವರೂಪದ ಬಗ್ಗೆ ಸಂಕಲ್ಪವಿಕಲ್ಪಗಳು, ತರ್ಕವಿತರ್ಕಗಳು ಯಾವಾಗಲೂ ನಡೆದಿರುವವು. ಈ ಸ್ವಾಭಾವಿಕವಾದ ಜಿಜ್ಞಾಸೆಯನ್ನು ಮನುಷ್ಯನು ತನ್ನ ದೇಶಕಾಲಪರಿಸ್ಥಿತಿಗೆ ಅನುಸರಿಸಿ ತನ್ನ ಬುದ್ಧಿ, ಭಾವನೆ, ಮತ್ತು ಸ್ಫೂರ್ತಿ ಇವುಗಳ ಸಹಾಯದಿಂದ ತೃಪ್ತಿಬಡಿಸಲೆತ್ನಿಸುವನು. ಹೀಗೆ ಶೋಧಿಸಿವ ಪರಾತ್ಪರಸತ್ಯಕ್ಕೆ ಅವನು 'ದೇವರು' ಎನ್ನುವನು ಮತ್ತು ಆ ದೇವರಾಚೆಗೆ ಏನೂ ಇಲ್ಲ, ಅವನೇ ಪರಮಾವಧಿಯು, ಅವನೇ ಪರಮಗತಿಯು, ಎಂದು ಭಾವಿಸಿ ಮುಂದುಗಾಣದೆ ಅಲ್ಲಿಗೆ ತನ್ನ ಮನಸಿನ ಓಟವನ್ನು ತಡೆಯುವನು. ಯಾವ ರೀತಿ, ಈ ಭೌತಿಕದೃಶ್ಯ ಸೃಷ್ಟಿಯಲ್ಲಿಯ ಜಲಸ್ಥಲಗಳನ್ನೆಲ್ಲ, ಜಗತ್ತಿನಲ್ಲಿಯ ವಿವಿಧ ಚರಾಚರವಸ್ತುಗಳನ್ನೆಲ್ಲ, ಖಗೋಲದಲ್ಲಿಯ ಗ್ರಹನಕ್ಷತ್ರತೇಜೋಪೇಘಗಳನ್ನೆಲ್ಲ ಮನುಷ್ಯನು ತಿಳಿದುಕೊಳ್ಳಬೇಕೆನ್ನುವನೊ ಅವುಗಳ ಗುಣಧರ್ಮಗಳನ್ನೆಲ್ಲ ಪರಿಶೋಧಿಸಬೇಕೆನ್ನುವನೊ ಅದೇ ರೀತಿ, ಇದರಾಚೆಗಿನ ಅದೃಶ್ಯ ಮಾನಸಿಕ ಹಾಗೂ ಆಧ್ಯಾತ್ಮಿಕ ಸೃಷ್ಟಿಯಲ್ಲಿಯ ವ್ಯಾಪಾರಗಳನ್ನೂ ಅವುಗಳ ಉಗಮವನ್ನೂ ಧ್ಯೇಯವ್ಯವನ್ನೂ ತಿಳಿದುಕೊಳ್ಳಲು ಅವಿಶ್ರಾಂತವಾಗಿ ಅವನು ಯತ್ನಿಸುತ್ತಿರುವನು. ಅಥವಾ, ದೃಶ್ಯಾದೃಶ್ಯ ಸೃಷ್ಟಿಗಳ ಗುಣಧರ್ಮಗಳನ್ನೂ ನಿಯಮಗಳನ್ನೂ ತಿಳಿದುಕೊಂಡು ಅವುಗಳನ್ನು ತನ್ನ ಜೀವನದ ಪ್ರಗತಿಗೂ ಸುಖಸಾಧನೆಗೂ ಉಪಯೋಗಿಸುವುದೆ ಇಡೀ ಮಾನವಕುಲದ ಜೀವನವ್ಯಾಪೀಕರ್ತವ್ಯವಿರುವದೆಂದರೂ ಸಲ್ಲುವದು. ಮನುಷ್ಯನು ಪ್ರತಿಕ್ಷಣವೂ ನಿಸರ್ಗನಿಯಮಗಳನ್ನರಿಯಲು ಪ್ರಯತ್ನಿಸುತ್ತಿರುವನು ಮತ್ತು ಬುದ್ಧಿಪುರಸ್ಸರವಾಗಿ ಅವುಗಳಂತೆ ನಡೆದು ತನ್ನ ಶಾರೀರಿಕ ಮಾನಸಿಕ ಆಧ್ಯಾತ್ಮಿಕಹಿತವನ್ನು ಮಾಡಿಕೊಳ್ಳಲು ಹೆಣಗುತ್ತಿರುವನು. ಈ ಪ್ರಯತ್ನದಲ್ಲಿ ಅವನಿಗೆ ಯಾವಾಗಲು ಯಶಸ್ಸೇ ದೊರೆಯುತ್ತಿರುವದೆಂದು ಹೇಳಲಿಕ್ಕಾಗುವುದಿಲ್ಲ. ಅವನಿಗೆ ವಿಶ್ವನಿಯಮಗಳು ಯಾವಾಗಲೂ ತಪ್ಪದೆ ಸರಿಯಾಗಿ ತಿಳಿಯುವವೆಂದೂ ಹೇಳಲಿಕ್ಕಾಗುವುದಿಲ್ಲ. ಎಷ್ಟೋ ಸಾರೆ ತಿಳಿದರೂ ಅವುಗಳಂತೆ ನಡೆಯುವ ಬಲವು ಅವನಲ್ಲಿ ಎಲ್ಲ ಪ್ರಸಂಗಗಳಲ್ಲಿ ಇದ್ದೇ ಇರುವದೆಂದೂ ಹೇಳಲಿಕ್ಕೆ ಬರುವಂತಿಲ್ಲ. ಹೀಗೆ ಅಜ್ಞಾನ, ಅಪಯಶ, ಸಂಕಟ ಮುಂತಾದವುಗಳು ಮನುಷ್ಯನ ಜೀವನಮಾರ್ಗವನ್ನು

ಮುತ್ತಿದ್ದರೂ ಅವನ ಪ್ರಯತ್ನವು ಇದುವರೆಗೆ ನಿಂತಿಲ್ಲ ಮತ್ತು ಮುಂದೆಯಾದರೂ ನಿಲ್ಲಲಾರದು. ಶರೀರಕ್ಕೆ ಎಷ್ಟೇ ರೋಗಾದಿಗಳು ಅಂಟಿಕೊಂಡರೂ ಅದು ಎಷ್ಟೇ ದುರ್ಬಲವಾದರೂ ಅದು ತೀರ ಸಾವಿನ ಸಮೀಪ ಹೋಗಿದ್ದರೂ ಅದರಲ್ಲಿಯ ಪ್ರಾಣವು ಬುದಕಿ ಬಾಳಲು ಸತತ ಯತ್ನಿಸುತ್ತಿರುವಂತೆ ಮನುಷ್ಯನಿಗೆ ಬೇಕಾದಷ್ಟು ಮತ್ತು ಬೇಕಾದಂಥ ಅಡಚಣೆಗಳು ಬಂದರೂ ಅವನು ಮೇಲೆ ಕಾಣಿಸಿದ ತನ್ನ ಸತ್ಯಶೋಧನದ ಪ್ರಯತ್ನವನ್ನು ಬಿಡಲಾರನು. ಯಾಕಂದರೆ, ಜಿಜ್ಞಾಸೆಯೆಂಬುದು ಅಷ್ಟೊಂದು ಅವನ ಹುಟ್ಟುಗುಣವಿರುವದು.

೯೩. ಮನುಷ್ಯನ ನೈಸರ್ಗಿಕವಾಗಿರುವ ಈ ಜಿಜ್ಞಾಸೆಯು ಭೌತಿಕ ವಿಷಯಗಳಲ್ಲಿ ಯಾವ ರೀತಿ ಕಾರ್ಯವನ್ನು ಮಾಡಿರುವದು ಇದನ್ನು ಇಲ್ಲಿ ಹೇಳಬೇಕಾಗಿಲ್ಲ. ಯಾಕಂದರೆ, ಅದು ಪ್ರಸ್ತುತ ವಿಷಯವಲ್ಲ. ಬಾಹ್ಯ ಭೌತಿಕ ಸೃಷ್ಟಿಯ ಮೇಲೆ ಮನುಷ್ಯನು ಪೂರ್ಣಪ್ರಭುತ್ವವನ್ನು ದೊರಕಿಸಿದರೂ ಅದರಿಂದ ಅವನಿಗೆ ಅತ್ಯಂತಿಕ ಸಮಾಧಾನವು ಉಂಟಾಗುವುದಿಲ್ಲ, ಎಂಬುದು ಮಾತ್ರ ಸಾಮಾನ್ಯ ಅನುಭವದ ಮಾತಾಗಿದೆ. ಭೌತಿಕ ಐಕಾಂಕ್ಷೆಗಳಿಗೆ ಮರ್ಯಾದೆಯೆ ಇಲ್ಲ. ಮನುಷ್ಯನು ಪೂರ್ಣಶಾಂತಿಯನ್ನು ಪಡೆಯಬೇಕಾದರೆ ಅವನು ಅಂತರ್ಲೋಕದ ಕಡೆಗೆಯೆ ತನ್ನ ದೃಷ್ಟಿಯನ್ನು ತಿರುವಲಿಕ್ಕೆಬೇಕು, ಎಂದು ಶ್ರೇಷ್ಠರ ಅನುಭವವಾಣಿಯಿದೆ. ಇದನ್ನು ಅರಿತುಕೊಂಡು ತನ್ನ ಅತ್ಯಂತಿಕ ಸಮಾಧಾನವನ್ನು ಮನುಷ್ಯನು ತನ್ನ ಅಂತರದಲ್ಲಿಯೆ ಹುಡುಕುವನು. ಅಂತಃಸಾಮ್ರಾಜ್ಯದ ಸಿಂಹಾಸನದ ಮೇಲೆ ಸಮ್ರಾಟನಂತೆ ವಿರಾಜಿಸುವುದೆ ಪರಮಶಾಂತಿಯ ಪಥವು, ಎಂಬುದು ಸಿದ್ಧಾಂತವೆಂದು ಹೇಳಬಹುದು. ಆದುದರಿಂದ ಅಂತರ್ಲೋಕದಲ್ಲಿಯ ಗೂಢ ಸತ್ಯದ ಶೋಧವನ್ನು ಮನುಷ್ಯನು ಮಾಡುವಷ್ಟು ಇನ್ನಾವುದರ ಶೋಧವನ್ನೂ ಮಾಡಲೆತ್ನಿಸುವದಿಲ್ಲ. ಇದರ ಮುಖ್ಯ ಕಾರಣವೇನಂದರೆ, ಕ್ಷಣಕ್ಷಣಕ್ಕೆ ಪಲ್ಲಟಿಸುವ ಈ ವಿವಿಧ ವಿಶ್ವದ ಆಚೆಗೆ ಅಥವಾ ಇದರ ಮೂಲದಲ್ಲಿ ಏನಾದರೊಂದು ಶಾಶ್ವತ ಮತ್ತು ಎಂದೆಂದಿಗೂ ಪಲ್ಲಟಿಸದಂಥ ಸ್ಥಿರಚಿರ ತತ್ವವು ಇರುವದು, ಎಂದೂ ಈ ದೇಹವು ನೂರಾರು ವರ್ಷ ಬದುಕಿ, ಬಾಳಿ, ಅಳಿದುಹೋದರೂ ಅದರಲ್ಲಿಯ ಆತ್ಮವೆಂಬ ವಸ್ತುವು ಅಮರವಿರುವದು, ಎಂದೂ ಈ ಆತ್ಮನಿಗೆ ಮೇಲೆ ಹೇಳಿದ ಶಾಶ್ವತ ಪರವಸ್ತುವೆ ಕೊನೆಯ ಆಶ್ರಯಸ್ಥಾನವು, ಎಂದೂ ಮನುಷ್ಯನು ಭಾವಿಸಿರುವನು. ಇದು ಸಾಮಾನ್ಯ ಭಾವನೆಯಾಯಿತು. ಇನ್ನು ಹಲವರು ಇಂಥ

ಭಾವನೆಗಳಿಲ್ಲದವರೂ ಇರಬಹುದು. ದೇವರು ಅಥವಾ ಆತ್ಮ ಇವುಗಳ ಅಸ್ತಿತ್ವದಲ್ಲಿ ವಿಶ್ವಾಸವಿಲ್ಲದವರು ಕೂಡ ದೃಶ್ಯಸೃಷ್ಟಿಯ ಅದೃಶ್ಯನಿಯಮಗಳ ಮತ್ತು ಅದೃಶ್ಯವಾದ ಮನಃಸೃಷ್ಟಿಯ ನಿಯಮಗಳ ಪರಿಶೋಧವನ್ನು ಮಾಡಲೇಬೇಕಾಗುವದು. ಒಟ್ಟಿಗೆ, ಚಿತ್ತದ ಪರಮಸಮಾಧಾನವನ್ನರಸುವವರೆಲ್ಲರೂ ದೃಶ್ಯಸೃಷ್ಟಿಯ ಆಚೆಗಿನ ಅದೃಶ್ಯಲೋಕದ ಪರಿಶೋಧವನ್ನು ಮಾಡಿ, ಅದರ ನಿಯಮಗಳನ್ನು ಗುರುತಿಸಿ, ತದನುಸಾರ ವಿಧಿನಿಷೇಧಗಳನ್ನು ಕಲ್ಪಿಸಿ, ಅವುಗಳಂತೆ ನಡೆದೇ ತಮ್ಮ ಧ್ಯೇಯವನ್ನು ಮುಟ್ಟಬೇಕಾಗುವದು.

೯. ದೃಶ್ಯವಿಶ್ವದಾಚೆಗೆ, ವಿಶ್ವಕ್ಕೆ ಮೂಲಭೂತವಾದ ಅದೃಶ್ಯ ಪರವಸ್ತುವು ಯಾವುದಿರುವದು, ಮನುಷ್ಯನ ದೃಶ್ಯದೇಹಾದಾಚೆಗೆ ಅದಕ್ಕೆ ಮೂಲಭೂತವಾದ ತತ್ವವು ಯಾವುದಿರುವದು, ಈ ಎರಡರ ಸಂಬಂಧವೇನು, ಆ ಸಂಬಂಧವು ಯಾವ ಬಗೆಯದಿದ್ದರೆ ಮನುಷ್ಯನಿಗೆ ಅತ್ಯಂತಿಕ ಸುಖವಾಗುವದು, ಈ ಎರಡರ ನಡುವೆ ನಮಗೆ ಇಷ್ಟವಾದ ಸಂಬಂಧವನ್ನು ನಾವು ಯಾವ ಸಾಧನಮಾರ್ಗದಿಂದ ಸ್ಥಾಪಿಸಬೇಕು, ಎಂಬುದನ್ನು ಪರಿಶೋಧಿಸುವುದೆ ತತ್ವಜ್ಞಾನದ ಮತ್ತು ಧರ್ಮದ ಕರ್ತವ್ಯವಿರುವದು. ಈ ಬಗೆಯ ಪರಿಶೋಧವನ್ನು ನಡೆಯಿಸಿ, ವಿವಿಧ ದಾರ್ಶನಿಕರು ತಮ್ಮ ತಮ್ಮ ಶಕ್ತಿಯ ಮಟ್ಟಿಗೆ ವಿಚಾರಮಾಡಿ, ಬೇರೆ ಬೇರೆ ಸಿದ್ಧಾಂತಗಳನ್ನು ಕಟ್ಟಿ, ಅದರಂತೆ ವರ್ತಿಸುವ ಮಾರ್ಗಗಳನ್ನು ಹಾಕಿಕೊಟ್ಟು, ಜನರಿಗೆ ಸುಖದ ದಾರಿಯನ್ನು ತೋರಿರುವರು. ಎಲ್ಲವೂ ಜಡಮಯವಿರುವದು, ಜಡಪದಾರ್ಥಗಳೇ ತಮ್ಮ ಸ್ವಾಭಾವಿಕ ಗುಣಧರ್ಮಕ್ಕನುಸರಿಸಿ ವರ್ತಿಸುವದರ ಮೂಲಕ ಸೃಷ್ಟಿಯ ಉತ್ಪತ್ತಿ ಸ್ಥಿತಿಲಯಗಳಾಗುವವು, ಮನುಷ್ಯನೂ ಜಡನೇ ಇರುವನು, ಸತ್ತನೆಂದರೆ ಅವನ ಇತಿಹಾಸವು ಮುಗಿಯುವದು, ಎಂದು ಮುಂತಾಗಿ ಪ್ರತಿಪಾದಿಸುವ ಜಡವಾದವನ್ನು ಅಥವಾ ಕೇವಲ ಆಧಿಭೌತಿಕವಾದವನ್ನು ಮೊದಲ್ಗೊಂಡು, ಎಲ್ಲವೂ ಶುದ್ಧ ಚೈತನ್ಯವೆ ಇದೆ, ದೃಶ್ಯಸೃಷ್ಟಿಯೆಲ್ಲ ಮಾಯೆಯು ಇರುವದು, ಮನುಷ್ಯನು ಜ್ಞಾನದಿಂದ ಈ ಮಾಯೆಯನ್ನು ಹೋಗಲಾಡಿಸುವುದೊಂದೇ ತಡವು ಅವನು ಕೇವಲ ಶುದ್ಧ ಚೈತನ್ಯಸ್ವರೂಪನೆ ಇರುವನು, ಎಂಬ ಕೇವಲ ಚೈತನ್ಯವಾದದವರೆಗೆ ಅನೇಕ ದರ್ಶನಗಳು ಇರುವವು. ಇವುಗಳ ವಿವರವನ್ನು ಷಡ್‌ದರ್ಶನ ಸಂಗ್ರಹ ಇಲ್ಲವೆ ಸರ್ವದರ್ಶನಸಂಗ್ರಹಾದಿ ಗ್ರಂಥಗಳಲ್ಲಿ ನೋಡಬಹುದು. ಇದು ಹಿಂದುಸ್ಥಾನದಲ್ಲಿಯ ದರ್ಶನಗಳ ಮಾತಾಯಿತು. ಇದೇ ರೀತಿ

ಅನ್ಯದೇಶಗಳಲ್ಲಿಯೂ ಇದೇ ತೆರದ ಬಗೆಬಗೆಯ ದರ್ಶನಗಳೂ ತದನುಸಾರ ವರ್ತಿಸುವ ಧರ್ಮಗಳೂ ಪ್ರಚಲಿತವಿರುವವು. ಅವುಗಳ ಹೆಸರುಗಳು ಮತ್ತು ಆಯಾ ಜನರ ಆಚಾರಗಳು ಭಿನ್ನವೆಂದು ತೋರಿದರೂ ತತ್ವತಃ ಅವು ಹಿಂದುಸ್ಥಾನದಲ್ಲಿಯ ವಿವಿಧ ದರ್ಶನಗಳಿಗೂ ಆಚಾರಗಳಿಗೂ ಎಷ್ಟೋ ಹೋಲುವವು. ಅವೆಲ್ಲವುಗಳ ನಾಮನಿರ್ದೇಶವನ್ನು ಮಾಡುವದು ಇಲ್ಲಿ ಅವಶ್ಯವಿಲ್ಲ. ಎಲ್ಲೆಲ್ಲಿಯೂ ಎಲ್ಲ ದೇಶ ಮತ್ತು ಸಮಾಜಗಳಲ್ಲಿಯೂ ಇಂಥ ಪ್ರಯತ್ನಗಳಾಗಿವೆ, ಆ ಎಲ್ಲ ಪ್ರಯತ್ನಗಳು ಉತ್ಕಟವಾಗಿ ಮತ್ತು ಮನಮುಟ್ಟಿ ಮಾಡಲ್ಪಟ್ಟಿವೆ, ಎಂಬುದನ್ನು ನಾವು ಲಕ್ಷದಲ್ಲಿಟ್ಟರೆ ಸದ್ಯಕ್ಕೆ ಸಾಕು.

೯. ಇನ್ನು ಮನುಷ್ಯನು ಯಾವ ಉಪಕರಣಗಳನ್ನುಪಯೋಗಿಸಿ ಸತ್ಯಶೋಧನವನ್ನು ಮಾಡಲೆತ್ನಿಸುವನು ಎಂಬುದನ್ನು ನೋಡುವ. ಜ್ಞಾನವನ್ನು ದೊರಕಿಸಲಿಕ್ಕೆ ಮನುಷ್ಯನಿಗೆ ಮುಖ್ಯವಾಗಿ ಎರಡು ಸಾಧನಗಳಿರುವವು. ಅವಾವೆಂದರೆ, ಬಾಹ್ಯವಾಗಿರುವ ಪಂಚಜ್ಞಾನೇಂದ್ರಿಯಗಳೆನಿಸುವ ಕಣ್ಣು, ಕಿವಿ, ಮೂಗು, ನಾಲಿಗೆ, ಮತ್ತು ಮೈ ಅಥವಾ ತ್ವಕ್ಕು ಇವು ಮತ್ತು ಅಂತಃಕರಣವೆಂದೆನಿಸುವ ಮನಸು. ಬಾಹ್ಯ, ದೃಶ್ಯ, ಅಥವಾ ಗೋಚರವೆನಿಸುವ ಸೃಷ್ಟಿಯು ಜ್ಞಾನವು ನಮಗೆ ಬಾಹ್ಯೇಂದ್ರಿಯಗಳ ಮುಖಾಂತರವೆ ಆಗುವದು. ಅದೃಶ್ಯವಿರುವ ಕಲ್ಪನಾಸೃಷ್ಟಿಯ ಅಥವಾ ಅಂತರ್ಲೋಕದ ಜ್ಞಾನವು ಮನುಷ್ಯನಿಗೆ ಮನಸಿನಿಂದಲೆ ಆಗಬಲ್ಲದು. ಮನಸ್ಸೆಂಬುದು ಒಂದೇ ಇದ್ದರೂ ಕಾರ್ಯಪರತ್ವದಿಂದ ಅದರಲ್ಲಿ ಬುದ್ಧಿ, ಭಾವನೆ, ಮತ್ತು ಸ್ಫೂರ್ತಿ ಎಂಬ ಮೂರು ಜ್ಞಾನಪಡೆಯುವ ಶಕ್ತಿಗಳಿರುವವೆಂದು ಅಥವಾ ಅದಕ್ಕೆ ಮೂರು ಮುಖಗಳಿರುವವೆಂದು ಹೇಳಬಹುದು. ಹೀಗೆ ಹೇಳುವಾಗ ಇವು ಮೂರೂ ಪ್ರತ್ಯೇಕ ಅಥವಾ ಪರಸ್ಪರ ವಿರೋಧಿ ಅಥವಾ ಪರಸ್ಪರ ಅವ್ಯಾಪಕಶಕ್ತಿಗಳಿರುವವೆಂದು ಇಲ್ಲವೆ ಇವು ಪಂಚೇಂದ್ರಿಯಗಳಿಗೆ ಸಂಬಂಧಿಸಿಲ್ಲವೆಂದು ಯಾರೂ ತಿಳಿಯಕೂಡದು, ಅಥವಾ ಒಂದು ಶಕ್ತಿಯು ಕಾರ್ಯಮಾಡುತ್ತಿರುವಾಗ ಇನ್ನೊಂದು ಮಲಗಿರುವದು ಅಥವಾ ಲುಪ್ತವಾಗಿರುವದು, ಎಂದು ತಿಳಿಯಕೂಡದು. ಮನಸ್ಸು ತರ್ಕಪ್ರಧಾನವಿದ್ದಾಗ ಬುದ್ಧಿ ಎಂದು, ಶ್ರದ್ಧಾಪ್ರಧಾನವಿದ್ದಾಗ ಭಾವನೆಯೆಂದು, ದರ್ಶನಪ್ರಧಾನವಿದ್ದಾಗ ಸ್ಫೂರ್ತಿ, ಎಂದು ಎನಿಸುವದು. ಹಲವು ಗೊತ್ತಿದ್ದ ಮಾತುಗಳ ಆಧಾರದಿಂದ ಗೊತ್ತಿಲ್ಲದ ಮಾತುಗಳನ್ನು ಅನುಮಾನಮಾಡಿ ನಿರ್ಣಯಿಸುವುದೆ ತರ್ಕವೆನಿಸುವದು. ತಮಗೆ ತಿಳಿದ ಅಥವಾ ಎರಡನೆ

ಯವರು ಹೇಳಿದ ಯಾವದೇ ಒಂದು ಮಾತು ನಿಜವು ಎಂದು ವಿಶ್ವಾಸವಿಡುವುದೆ ಶ್ರದ್ಧೆ ಎನಿಸುವದು. ತರ್ಕದಿಂದ ಅಥವಾ ಶ್ರದ್ಧೆಯಿಂದ ತಿಳಿಯದೇ ಇದ್ದ ಯಾವದೇ ಒಂದು ಮಾತು ಸತ್ಯವೆಂದು ಒಮ್ಮೆಲೆ ಮನಸಿನಲ್ಲಿ ಪ್ರತ್ಯಕ್ಷ ಹೊಳೆಯುವುದೆ ಸ್ಫೂರ್ತಿ ಎನಿಸುವದು. ಉದಾ: ದೇವರ ಇರುವಿಕೆಯ ವಿಷಯವನ್ನೆ ವಿಚಾರಿಸುವ. ಈ ಸೃಷ್ಟಿಗೆ ಕರ್ತನೂ ನಿಯಾಮಕನೂ ಯಾರಾದರೂ ಇರಲಿಕ್ಕೆ ಬೇಕು, ಯಾಕಂದರೆ ಕರ್ತನಿಲ್ಲದೆ ಸೃಷ್ಟಿರೂಪ ಕರ್ಮವಾಗದು, ನಿಯಾಮಕನಿಲ್ಲದೆ ನಿಯಮಿತ ಕಾರ್ಯವು ನಡೆಯದು, ಎಂಬ ಮುಂತಾದ ಅನುಮಾನಗಳಿಂದ ದೇವರೆಂಬ ಒಂದು ಅದೃಶ್ಯ ಶಕ್ತಿ ಇದೆ, ಎಂದು ನಾವು ತರ್ಕದಿಂದ ನಿರ್ಣಯಿಸುವೆವು. ಇಲ್ಲಿ ನಮ್ಮ ಬುದ್ಧಿಯೆ ಮುಖ್ಯವಾಗಿ ಅಥವಾ ಪ್ರಧಾನವಾಗಿ ಕಾರ್ಯಮಾಡುವದು. ಪ್ರಮಾಣ ಗ್ರಂಥಗಳಾದ ವೇದಗಳಲ್ಲಿ, ದೇವರು ಇದ್ದಾನೆ, ಎಂದು ಹೇಳಲ್ಪಟ್ಟಿದ್ದರಿಂದ ಅವನು ನಿಜವಾಗಿ ಇರಲಿಕ್ಕೆಬೇಕು, ಎಂದು ದೇವರ ಅಸ್ತಿತ್ವದಲ್ಲಿ ನಾವು, ಶ್ರದ್ಧಾಪೂರ್ವಕವಾಗಿ ವಿಶ್ವಾಸವಿಡುವೆವು. ಇಲ್ಲಿ ನಮ್ಮ ಭಾವನಾಶಕ್ತಿಯೆ ಮುಖ್ಯವಾಗಿ ಅಥವಾ ಪ್ರಧಾನವಾಗಿ ಕಾರ್ಯಮಾಡುವದು. ನಾನಾರೀತಿಯಿಂದ ವಿಚಾರಮಾಡುತ್ತಿರಲು ದೇವರ ಅಸ್ತಿತ್ವದ ಬಗ್ಗೆ ಮನಸ್ಸಿನಲ್ಲಿ ಒಮ್ಮೆಲೆ ಬೆಳಕುಬಿದ್ದು ಅವನ ದರ್ಶನವಾಯಿತೆಂದರೆ ನಾವು ಅವನನ್ನು ಸ್ಫೂರ್ತಿಯಿಂದ ಕಾಣುವೆವು. ಇಲ್ಲಿ ಸ್ಫೂರ್ತಿಶಕ್ತಿಯೆ ಮುಖ್ಯವಾಗಿ ಕಾರ್ಯಮಾಡುವದು. ಈ ನಮ್ಮ ಮೂರು ಶಕ್ತಿಗಳನ್ನು ಅನ್ವಯಿಸಿಯೆ ಅನುಮಾನ, ಆಪ್ತವಾಕ್ಯ, ಮತ್ತು ಪ್ರತ್ಯಕ್ಷ ಎಂಬ ಮೂರು ಜ್ಞಾನದ ಪ್ರಮಾಣಗಳು ಅಥವಾ ಒರೆಗಲ್ಲುಗಳು ಪ್ರಚಾರದಲ್ಲಿರುವವು. ಅನುಮಾನವು ಬುದ್ಧಿಯನ್ನವಲಂಬಿಸಿದೆ, ಆಪ್ತವಾಕ್ಯವು ಶ್ರದ್ಧೆಯನ್ನವಲಂಬಿಸಿದೆ. ಪ್ರತ್ಯಕ್ಷವು ಬಾಹ್ಯಸೃಷ್ಟಿಯ ಸಂಬಂಧದಿಂದಿರುವಾಗ ಜ್ಞಾನೇಂದ್ರಿಯಗಳನ್ನೂ ಅಂತಃಸೃಷ್ಟಿಯ ಸಂಬಂಧದಿಂದಿರುವಾಗ ಸ್ಫೂರ್ತಿಯನ್ನೂ ಅವಲಂಬಿಸಿದೆ.

೯೬. ಈ ರೀತಿ ಮಾನವರು ಇದುವರೆಗೆ ಮಾಡಿದ ಸತ್ಯಶೋಧನದ ಪ್ರಯತ್ನಗಳಲ್ಲಿ ವಚನಕಾರರ ಪ್ರಯತ್ನವು ಯಾವ ಪ್ರಕಾರದ್ದಿತ್ತು, ಅವರು ಆ ಪ್ರಯತ್ನಗಳಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾದರು, ಅವರು ಯಾವ ಸಾಧನಗಳನ್ನು ಪ್ರಯೋಗಿಸಿದರು, ಎಂಬ ವಿಷಯಗಳನ್ನು ಇನ್ನು ವಿಚಾರಿಸುವ. ವಚನಕಾರರು ಸ್ವೀಕರಿಸಿದ ಮಾರ್ಗಕ್ಕೆ ಸಾಕ್ಷಾತ್ಕಾರಮಾರ್ಗ ಎಂದೆನ್ನಬಹುದು. ಈ ಮಾರ್ಗದಲ್ಲಿ ಪರಮಸತ್ಯದ ಪ್ರತ್ಯಕ್ಷ ಅನುಭವವು

ಅಥವಾ ಸಾಕ್ಷಾತ್ಕಾರವು ಮತ್ತು ಆ ಅನುಭವದಲ್ಲಿ ಸತತ ನಿಂತು ನಲಿದಾಡುವುದು ಕೊನೆಯ ಧ್ಯೇಯವಿರುವದು. ಮನುಷ್ಯನು ಸೂರ್ಯಚಂದ್ರರನ್ನು ತನ್ನ ಹೊರಗಣ್ಣಿನಿಂದ ಪ್ರತ್ಯಕ್ಷ ಕಾಣುವಂತೆ, ಸುಗಂಧಪರಿಮಳಾದಿಗಳನ್ನು ಮೂಗಿನಿಂದ ಪ್ರತ್ಯಕ್ಷ ಮೂಸುವಂತೆ, ಷಡ್ರಸಗಳನ್ನು ನಾಲಿಗೆಯಿಂದ ಪ್ರತ್ಯಕ್ಷ ರುಚಿಸುವಂತೆ, ಪರಮಾತ್ಮನನ್ನು ಅಥವಾ ದೇವರನ್ನು ಅನುಭಾವಿಯು ತನ್ನ ಅಂತಃಕರಣದಲ್ಲಿರುವ ಸ್ಫೂರ್ತಿಶಕ್ತಿಯಿಂದ ಪ್ರತ್ಯಕ್ಷ ಸಂದರ್ಶಿಸುವನು. ಪರಮಾತ್ಮನು ಸರ್ವವ್ಯಾಪಕನಿದ್ದರೂ ಅಗೋಚರನೂ ಇಂದ್ರಿಯಗಳಾಚೆಗಿನವನೂ ಇದ್ದುದರಿಂದ ಸಾಕ್ಷಾತ್ಕಾರಿಗಳು ಅವನನ್ನು ಸ್ಫೂರ್ತಿಯಿಂದಲೆ ಪಡೆಯಬೇಕಾಗುವದು. ಒಮ್ಮೆ ಆ ಸಾಕ್ಷಾತ್ಕಾರವಾಯಿತೆಂದರೆ ಅವರ ಎಲ್ಲ ಸಂಶಯಗಳೂ ಮುಂಜಾವಿನ ಮಂಜಿನಂತೆ ದೆಸೆದೆಸೆಗೆಟ್ಟು ಓಡುವವು, ಮಿಕ್ಕ ಎಲ್ಲ ಕ್ಷುದ್ರಕಾಮನೆಗಳು ಕರಗಿ ನೀರಾಗುವವು, ಮತ್ತು ಅವರು ಕೃತಕೃತ್ಯರಾಗುವರು. ಬಿಸಿಲುಗಾಲದಲ್ಲಿಯ ಮಧ್ಯಾಹ್ನದ ಪ್ರಖರ ಪ್ರಚಂಡ ಸೂರ್ಯನನ್ನು ನೋಡಿದವನು ಮುಂದೆ ಸೂರ್ಯನ ಅಸ್ತಿತ್ವದ ಬಗ್ಗೆ ಇಲ್ಲವೆ ಸ್ವರೂಪ, ಗುಣಧರ್ಮ, ಮುಂತಾದವುಗಳ ಬಗ್ಗೆ ಎಂದಿಗೂ ಸಂಶಯಿತನಾಗುವದು ಹೇಗೆ ಅಸಾಧ್ಯವೊ ಅಥವಾ ಪ್ರಶಾಂತವಾದ ಇರುಳಿನಲ್ಲಿ ಶರತ್‌ಚಂದ್ರನ ಸಂತಾಪಹಾರಕ ಕಿರಣಗಳಿಂದ ತಣಿದವನು ಮುಂದೆ ಚಂದ್ರನ ಅಸ್ತಿತ್ವಾದಿಗಳನ್ನು ಕುರಿತು ಎಂದಿಗೂ ಸಂಶಯವನ್ನು ತಾಳುವದು ಹೇಗೆ ಅಶಕ್ಯವೊ ಹಾಗೆಯೆ ಆತ್ಮಸ್ವರೂಪವನ್ನು ಕರತಲಾಮಲಕದಂತೆ ಸ್ಪಷ್ಟವಾಗಿ ಕಂಡವನು ಪರಮಾತ್ಮನ ಅಸ್ತಿತ್ವಾದಿಗಳನ್ನು ಕುರಿತು ಮುಂದೆ ಎಂದೆಂದಿಗೂ ಸಂಶಯಗ್ರಸ್ತನಾಗನು. ಅನಂತ ಕಾಮನೆ ಕಲ್ಪನೆಗಳಿಗೆ ಬೀಡಾದ ಮನೋಮಂಡಲದಲ್ಲಿ ಈ ಸಾಕ್ಷಾತ್ಕಾರವು ಮೊದಲು ಒಂದು ಕೋಲ್ಮಿಂಚಿನಂತೆ ಹೊಳೆದು ಸಾಧಕನಿಗೆ ಸತ್ಯಮೂರ್ತಿಯನ್ನು ತೋರಿಸಿ ಹೋಗಬಹುದು, ಅಥವಾ ಅಡಗಿದ ಸೂರ್ಯನ ಕಿರಣಪುಂಜದಂತೆ ಮೋಡಗಳನ್ನೊಡೆದು ಬಂದು ಸಾಧಕನ ಮನಸನ್ನು ಕೆಲಹೊತ್ತು ಪ್ರಕಾಶಿಸಿ ಹೋಗಬಹುದು. ಏನೇ ಆದರೂ ಒಮ್ಮೆ ಈ ಸಾಕ್ಷಾತ್ಕಾರದ ಸವಿಗಂಡ ಸಾಧಕನು ಅದನ್ನು ತನ್ನಲ್ಲಿ ಸತತ ನೆಲೆಸಲು ಹಗಲಿರುಳು ಹೆಣಗುವನು. ಅದು ಅವನಿಗೆ ಅಷ್ಟೊಂದು ಪ್ರಿಯವಾಗುವದು. ಅದೇ ಅವನ ಧ್ಯೇಯವು, ಅವನ ಧ್ರುವನಕ್ಷತ್ರವು, ಅವನ ಜೀವನ ಸರ್ವಸ್ವವು. ವಿರಹಿವಿರಹಿಣಿಯರ ಉತ್ಕಟತೆಯು ಸಾಧಕನ ಉತ್ಕಟತೆಯ ಮುಂದೆ ಏನೂ ಅಲ್ಲ. ಎಲ್ಲಬಗೆಯ

ಮಾನವೀ ಉತ್ಕಟೇಚ್ಛೆಗಳನ್ನು ಇದರ ಮೇಲಿಂದ ನಿವಾಳಿಸಿ ಚೆಲ್ಲಬಹುದು. ನೀರಿನ ಪ್ರವಾಹವು ಇಳಿಜಾರಿನಲ್ಲಿ ತಡೆಗಳನ್ನು ಲೆಕ್ಕಿಸದೆ ಭೋರೆಂದು ಸಾಗುವಂತೆ, ಲೋಹವು ಲೋಹಚುಂಬಕದ ಕಡೆಗೆ ಅಪ್ರತಿಹತವಾಗಿ ಎಳೆಯಲ್ಪಡುವಂತೆ, ಸಾಧಕನು ಪರಮಾತ್ಮನ ಕಡೆಗೆ ಪ್ರೇಮತಂತುವಿನಿಂದ ಒಂದೇಸವನೆ ಎಳೆಯಲ್ಪಡುವನು. ಪ್ರಥಮಸಾಕ್ಷಾತ್ಕಾರದಲ್ಲಿ ಅವನು ಪ್ರತ್ಯಕ್ಷ ನೋಡಿದ, ಪ್ರತ್ಯಕ್ಷ ಅನುಭವಿಸಿದ ದರ್ಶನವನ್ನು ತನ್ನಲ್ಲಿ ಸ್ಥಿರ ಪಡಿಸಲು ಅವನು ಅಷ್ಟೊಂದು ಆತುರನು. ಆ ಅನುಭವದಿಂದ ಅವನಿಗೆ ಅಷ್ಟೊಂದು ಪರಮಸುಖವು, ಅಷ್ಟೊಂದು ಅಸೀಮ ಸಂತೋಷವು, ಅಷ್ಟೊಂದು ಅನುಪಮ ಅದ್ವಿತೀಯ ಅಖಂಡ ಆನಂದವು ಆಗುವದು. ತಾನು ಏನೇ ಮಾಡುತ್ತಿರಲಿ, ಬಾಹ್ಯಕರಣಗಳಿಂದ ತಾನು ಯಾವ ಕರ್ಮ ದಲ್ಲಿಯೆ ತೊಡಗಿರಲಿ, ಆ ಆಂತರಿಕ ಆನಂದಾಬ್ಧಿಯಲ್ಲಿ ಸಮರಸನಾಗಿ ತಾನು ಸತತ ನಲಿಯುತ್ತಿರಬೇಕು, ಎಂಬುದೆ ಸಾಧಕನ ಏಕಮಾತ್ರವಾದ ಬಯಕೆಯು ಮತ್ತು ಪ್ರಯತ್ನವು. ಆ ನಿಲವನ್ನು ಅಳವಡಿಸಿದವನೆ ಸಿದ್ಧ ನೆನಿಸುವನು. ಅವನೇ ಜೀವನ್ಮುಕ್ತನು, ಅವನೇ ಸತ್ಯದ ನಿತ್ಯ ಸಾಕ್ಷಾ ತ್ಕಾರಿಯು, ಪರಮಯೋಗಿಯು.

೯೭. ಮೇಲೆ ಹೇಳಿದ ಸತ್ಯಸಾಕ್ಷಾತ್ಕಾರದ ತಾತ್ವಿಕಸ್ವರೂಪವು ಒಂದೇ ಇದ್ದರೂ ಅದು ಬೇರೆಬೇರೆ ಸಾಧಕರಿಗೆ ಬೇರೆಬೇರೆ ರೀತಿಯಲ್ಲಿ ಅನುಭವಕ್ಕೆ ಬರುವದು. ಸಾಕ್ಷಾತ್ಕಾರವು ಸತ್ಯದ ಪ್ರತ್ಯಕ್ಷದರ್ಶನವು, ಅದು ಬುದ್ಧಿಗೆ ಪೂರಾ ಸ್ಪಷ್ಟವು ಮತ್ತು ಭಾವವನ್ನು ಪೂರ್ಣ ತುಂಬು ವಂತಹದು. ಅದು ಸೂಕ್ಷ್ಮವಾದ ಅಂತರಿಂದ್ರಿಯಕ್ಕೆ ಸ್ಫೂರ್ತಿಯಿಂದಲೆ ಆಗಬಲ್ಲದು ಇಲ್ಲವೆ ಅದನ್ನು ಶ್ರೇಷ್ಠಗುರುವುಪಾತ್ರ ಕರುಣಿಸಬಲ್ಲನು. ಆ ಅನುಭವವು ನಿಜವಾಗಿ ಅವರ್ಣನೀಯವು, ಶಬ್ದದಿಂದ ತಿಳಿಯದೆ ಅದು ಸ್ವಂತ ಅನುಭವದಿಂದಲೆ ತಿಳಿಯತಕ್ಕದ್ದು. ಆ ದರ್ಶನವು ಒಮ್ಮೆ ಆಯಿ ತೆಂದರೆ ಸಾಧಕನ ಸರ್ವಸಂಶಯಗಳ ಪರಿಹಾರವಾಗುವದು, ಸಾಧಕನು ಮುಂದೆ ಅದನ್ನೆ ನಿತ್ಯಗೊಳಿಸುವ ಉದ್ಯೋಗದಲ್ಲಿ ತೊಡಗುವನು. ಸಾಕ್ಷಾತ್ಕಾರವೆಂಬುದು ಈ ಮುಂತಾದ ಲಕ್ಷಣಗಳಿಂದ ಲಕ್ಷಿತವು ಎಂದು ಹೇಳಬಹುದು. ಇನ್ನು ಯಾವುದೊಂದು ಬಾಹ್ಯಪದಾರ್ಥವನ್ನು ನಾವು ಕಣ್ಣು, ಕಿವಿ, ಮೂಗು, ನಾಲಿಗೆ, ಮೈ ಮುಂತಾದವುಗಳಲ್ಲಿ ಯಾವುದೇ ಒಂದು ಅಥವಾ ಹೆಚ್ಚು ಇಂದ್ರಿಯಗಳಿಂದ ಹೇಗೆ ಪ್ರತ್ಯಕ್ಷ ಅನುಭವಿಸ ಬಹುದೊ ಅದೇ ರೀತಿ ಅವ್ಯಕ್ತವಿದ್ದರೂ ಸರ್ವವ್ಯಾಪಿಯಿರುವ ಪರಮ ಸತ್ಯ

ತತ್ವವನ್ನು ಬೇರೆಬೇರೆ ಸಾಧಕರು ಬೇರೆಬೇರೆ ರೀತಿಯಲ್ಲಿ ಅನುಭವಿಸ ಬಹುದು. ಆ ಅನುಭವವು ಮೊದಲು ಆಂತರಿಕವಿದ್ದು ಮುಂದೆ ಬಾಹ್ಯ ಇಂದ್ರಿಯಗಳನ್ನು ಕೂಡ ಅದು ವ್ಯಾಪಿಸಿಬಿಡುವದು. ಮೊದಲು ಆ ಅನು ಭವವಾಗುವಾಗ ಬಾಹ್ಯೇಂದ್ರಿಯಗಳೆಲ್ಲ ಸ್ತಿಮಿತ ಅಥವಾ ಮೂರ್ಛಿತಸ್ಥಿತಿ ಯಲ್ಲಿ ಹಲವು ಕಾಲವಿದ್ದುದೂ ಕಂಡುಬರುವದು. ಯಾಕಂದರೆ, ಆ ಅನು ಭವವು ಇಂದ್ರಿಯಾತೀತವು, ಅವುಗಳಿಗೆ ತೀರ ಅಪರಿಚಿತವು. ಆ ಕಾಲಾಂತ ರವು ಇಂತಿಷ್ಟೇ ಎಂದು ಹೇಳಲಿಕ್ಕಾಗದು. ಬೇರೆ ಬೇರೆ ಸಾಧಕರ ವಿಷಯ ದಲ್ಲಿ ಆ ಕಾಲಾವಧಿಯು ಬೇರೆ ಬೇರೆ ಇರಬಲ್ಲದು. ಸಾಕ್ಷಾತ್ಕಾರದಲ್ಲಿ ಸಾಧಕನು ಈ ಕಣ್ಣಿಗೆ ಕಾಣದ ಯಾವುದೋ ಒಂದು ದಿವ್ಯರೂಪವನ್ನಾಗಲಿ ಪ್ರಕಾಶವನ್ನಾಗಲಿ ಜ್ಯೋತಿಯನ್ನಾಗಲಿ ಕಾಣುವನು ಮತ್ತು ಅದರಲ್ಲಿ ತನ್ಮಯನಾಗುವನು; ಅಥವಾ ಅವನು ಈ ಕಿವಿಗಳಿಗೆ ಕೇಳದ ಸ್ವರ್ಗೀಯ ಸಂಗೀತವನ್ನು ಕೇಳಿ ತಲ್ಲೀನನಾಗುವನು; ಇಲ್ಲವೆ ಈ ಮೈಗೆಸೋಂಕದ ಬ್ರಹ್ಮಸಂಸ್ಪರ್ಶದಿಂದ ಧನ್ಯನಾಗಿ ಆತ್ಯಂತಿಕಸುಖಾನುಭವವನ್ನು ಪಡೆಯು ವನು; ಅಥವಾ ಈ ನಾಲಿಗೆಗೆಬಾರದ ಅಮೃತರಸವನ್ನುಂಡು ಪರಮಸುಖ ವನ್ನು ಸೇವಿಸುವನು; ಇಲ್ಲವೆ ಈ ಮೂಗು ಅರಿಯದ ದಿವ್ಯಗಂಧವನ್ನು ಮೂಸಿ ಅದರಲ್ಲಿ ಮುಳುಗುವನು; ಅಥವಾ ಇವುಗಳಲ್ಲಿಯ ಒಂದಕ್ಕಿಂತ ಹೆಚ್ಚು ಅನುಭವಗಳು ಒಬ್ಬನಿಗೆಯೆ ಬರಬಹುದು. ಹೀಗಿದ್ದರೂ ಈ ಅನು ಭವಗಳಲ್ಲಿಯೂ ತರಗತಿಗಳಿರುವವೆಂಬುದನ್ನು ಮತ್ತು ಅಪೂರ್ಣ ಇಲ್ಲವೆ ಅಸ್ಪಷ್ಟ ಸಾಕ್ಷಾತ್ಕಾರವಾಗುವ ಸಂಭವವೂ ಇದೆ ಎಂಬ ಮಾತನ್ನು ನಾವು ಮರೆಯಕೂಡದು. ಯಾವ ಅನುಭವವು ಸ್ಮರಣಮಾತ್ರದಿಂದ ಮಿಕ್ಕದ್ದ ನ್ನೆಲ್ಲ ಮರೆಯಿಸಬಲ್ಲದೊ ಯಾವದು ಇದೇ ಕೊನೆಯ ಸತ್ಯ ಎಂಬ ದೃಢ ವಾದ ನಂಬಿಗೆಯನ್ನು ನೆಲೆಗೊಳಿಸುವುದೊ ಯಾವುದು ಸರ್ವಭಾವಪ್ರವಾಹ ವನ್ನೂ ತನ್ನಕಡೆಗೆ ಸೆಳೆದುಕೊಳ್ಳುವುದೊ ಯಾವುದರ ಬಗ್ಗೆ ಯತ್ಕಿಂಚಿತ ವಾದರೂ ಸಂಶಯವು ತಲೆದೋರದಿರುವುದೊ ಯಾವುದು ಸರ್ವಸಂಶಯ ಪರಿಹಾರಮಾಡಿ ತದೇಕಧ್ಯಾನದಲ್ಲಿ ಸಾಧಕನನ್ನು ಪ್ರವರ್ತಿಸುವುದೊ ಯಾವುದು ಸಾಧಕನನ್ನು ನಿಷ್ಕಾಮಮಾಡಿ ನಿರ್ದ್ವಂದ್ವ ಮತ್ತು ಸಮಸ್ಥಿತಿಗೆ ಒಯ್ಯುವುದೊ ಯಾವುದು ವಿಭುವಾದ ಏಕಾತ್ಮಪ್ರತ್ಯಯವನ್ನು ತಂದು ಕೊಡುವದೊ ಯಾವುದು ಸಾಧಕನಲ್ಲಿ ಒಂದು ಬಗೆಯ ದಿವ್ಯ ಧನ್ಯಭಾವ ವನ್ನುಂಟುಮಾಡುವುದೊ ಅದೇ ಸತ್ಯವಾದ ಮತ್ತು ಪೂರ್ಣ ಸಾಕ್ಷಾತ್ಕಾ ರವು. ಅಲ್ಲಿ ಇಲ್ಲಿ, ಅಷ್ಟು ಇಷ್ಟು, ಏನಾದರೂ ಕಂಡು ತಮಗೆ ಸಾಕ್ಷಾ

ತ್ಕಾರವಾಯಿತೆಂದು ಯಾರೂ ಭ್ರಮೆಗೊಳ್ಳಬಾರದು. ಸಾಕ್ಷಾತ್ಕಾರವು ಅದೃಶ್ಯ, ಅವ್ಯಕ್ತ ಸೃಷ್ಟಿಯಲ್ಲಿಯ ಅವರ್ಣನೀಯವಾದ ಆನಂದಾನುಭವ ವಿದ್ದರೂ ಅದನ್ನು ನಾವು ಮೇಲೆ ಹೇಳಿದ ಒರೆಗಲ್ಲಿನಿಂದ ಪರೀಕ್ಷಿಸಬಹುದು. ಈ ಪರೀಕ್ಷೆಗೆ ಬಾರದ ಅನುಭವವು ಸಾಕ್ಷಾತ್ಕಾರವಲ್ಲ, ಎಂದು ಧಾರಾಳವಾಗಿ ಹೇಳಬಹುದು. ಅದೊಂದು ಕನಸಿರಬಹುದು, ಸವಿ ಕಲ್ಪನೆಗಳ ತರಂಗವಿರಬಹುದು, ತಪ್ತಜ್ಞಾನತಂತುಗಳ ತಾತ್ಕಾಲಿಕ ಒಂದು ಸೋಟವಿರಬಹುದು, ಆತುರಸಾಧಕನ ಆಕಾಂಕ್ಷೆಗಳ ಆಟವಿರಬಹುದು, ಅಥವಾ ಬಹಳವೆಂದರೆ ಯೋಗಸ್ವಪ್ನವಿರಬಹುದು. ಆದರೆ ಅದು ಬ್ರಹ್ಮಸಾಕ್ಷಾತ್ಕಾರವಲ್ಲ. ಸಾಕ್ಷಾತ್ಕಾರಿಗಳು ಯಾವ ಒಂದು ದರ್ಶನವನ್ನು ಬಮ್ಮೆ ಪಡೆಯುವರೊ ಅದರ ಬೆಳಕಿನಿಂದ ಮುಂದೆ ಅಜೀವ ಅವರು ಆಚರಣೆ ಮಾಡುವರು. ಸೂರ್ಯನಿಗೆ ಅವನ ತೇಜವು ಹೇಗೊ ವೀರನಿಗೆ ಅವನ ಧೈರ್ಯವು ಹೇಗೊ ವ್ರತಿಗೆ ಅವನ ನಿಷ್ಠೆಯು ಹೇಗೊ ಯೋಗಿಗೆ ಅವನ ಧ್ಯಾನವು ಹೇಗೊ ಹಾಗೆ ಸಾಧಕನಿಗೆ ಅವನ ಸಾಕ್ಷಾತ್ಕಾರವು ಸತತ ಮಾರ್ಗದರ್ಶಿಯು. ಅದಕ್ಕೆಯೆ ನಿಜವಾದ ಪೂರ್ಣ ಸಾಕ್ಷಾತ್ಕಾರವೆನ್ನ ಬೇಕು.

೯೮. ಸಾಕ್ಷಾತ್ಕಾರಮಾರ್ಗದಲ್ಲಿ, ಸಾಕ್ಷಾತ್ಕಾರವೆಂದರೆ ಆತ್ಯಂತಿಕ ಸತ್ಯದ ಪ್ರತ್ಯಕ್ಷ ಅಂತರ್ದರ್ಶನವು, ಅನುಭವವು, ಪ್ರತೀತಿಯು. ಅಂಥ ಪ್ರತ್ಯಕ್ಷ ಜ್ಞಾನವೆ ಸತ್ಯದ ಒರೆಗಲ್ಲಿರುವುದರಿಂದ ಯಾವನೊಬ್ಬನಿಗೆ ಸಾಕ್ಷಾತ್ಕಾರವಾಗಿರುವುದೊ ಇಲ್ಲವೊ ಎಂಬುದನ್ನು ಮುಖ್ಯವಾಗಿ ಸಾಧಕನು ತನ್ನ ಆತ್ಮಸಾಕ್ಷಿಯಿಂದಲೆ ತಿಳಿಯತಕ್ಕ ವಿಷಯವಾಗಿದೆ. ಹಾಗೆ ತಿಳಿದು ಕೊಳ್ಳದೇಕಾದರೆ ಮೇಲೆ ಹೇಳಿದ ಸಾಕ್ಷಾತ್ಕಾರದ ಲಕ್ಷಣಗಳು ಒಳ್ಳೆ ಸಹಾಯಕವಾಗಿರುವವು. ಆ ಲಕ್ಷಣಗಳು ತನಗಾದ ಸಾಕ್ಷಾತ್ಕಾರದಲ್ಲಿ ಇರುವವೊ ಇಲ್ಲವೊ ಎಂಬುದನ್ನು ಪ್ರತಿಯೊಬ್ಬ ಸಾಧಕನು ತಾನೇ ಗುರು ತಿಸಲಿಕ್ಕೆ ಬೇಕು. ಇನ್ನು ಯಾವನಿಗೆ ಸಾಕ್ಷಾತ್ಕಾರವಾಗಿರುವುದೊ ಅವನಲ್ಲಿ ಕಾಣುವ ಹಲಕೆಲವು ಪ್ರದರ್ಶಕ ಚಿನ್ಹಗಳಿಂದ ಅವನಿಗೆ ಸಾಕ್ಷಾತ್ಕಾರವಾಗಿರುವದು, ಎಂದು ಅನ್ಯರು ಕೂಡ ಅರಿತುಕೊಳ್ಳಬಹುದು. ಸಾಕ್ಷಾತ್ಕಾರದ ಅನುಭವವು ಎಂಬುದು ತತ್ವತಃ ಒಂದೇ ಇದ್ದರೂ ಬೇರೆ ಬೇರೆ ಸಾಧಕರಿಗೆ ಆಗುವ ಸಾಕ್ಷಾತ್ಕಾರದ ಬಾಹ್ಯಸ್ವರೂಪವು ಬೇರೆ ಬೇರೆ ಇರಬಹುದು, ಎಂದು ಮೇಲೆ ಹೇಳಿದ್ದೇವೆ. ಹಾಗೆ ಆಗುವ ಮುಖ್ಯ ಕಾರಣವೇನಂದರೆ, ಅವರವರ ಪ್ರಕೃತಿಸ್ವಭಾವ, ಅವರವರ ಶಕ್ತಿ, ಮತ್ತು

ಅವರವರು ಕೈಕೊಂಡ ವಿಶಿಷ್ಟ ಸಾಧನಪಥಗಳು. ಸಾಧಕರಲ್ಲಿ ಹಲವರು ಬುದ್ಧಿಪ್ರಧಾನರು, ಹಲವರು ಭಾವನಾಪ್ರಧಾನರು, ಅನ್ಯರು ಕ್ರಿಯಾಶಕ್ತಿ ಪ್ರಬಲರು, ಮತ್ತೆ ಕೆಲವರು ಯೋಗಶಕ್ತಿಯುಳ್ಳವರು, ಹೀಗೆ ಇರುವರು, ಮತ್ತು ಆಯಾ ಜನರು ತಮ್ಮ ತಮ್ಮ ಶಕ್ತಿಸ್ವಭಾವಗಳಂತೆ ಜ್ಞಾನ, ಭಕ್ತಿ, ಕರ್ಮ, ಧ್ಯಾನ ಮುಂತಾದ ಮಾರ್ಗಗಳನ್ನು ಅನುಸರಿಸುವರು. ಆ ಸಾಧನಮಾರ್ಗಗಳಿಗನುಸರಿಸಿ ಆಯಾ ಸಾಧಕರಿಗೆ ಸಾಕ್ಷಾತ್ಕಾರವಾಗುವದು. ಹೀಗೆ ಇದ್ದರೂ ಎಲ್ಲ ಸಾಕ್ಷಾತ್ಕಾರಿಗಳ ದರ್ಶನವು ತತ್ವತಃ ಒಂದೇ ಇರುವದು ಎಂಬುದನ್ನು ಮೇಲೆ ಹೇಳಿದ ಸಾಮಾನ್ಯಲಕ್ಷಣಗಳಿಂದ ತಿಳಿದು ಕೊಳ್ಳಬಹುದು. ಬೇರೆಬೇರೆ ಸಾಕ್ಷಾತ್ಕಾರಿಗಳ ದೇಶಭಾಷೆ, ಧರ್ಮಜಾತಿ, ಲಿಂಗವಯ, ಮತಪಥ ಮುಂತಾದವುಗಳಲ್ಲಿ ಬೇಕಾದಷ್ಟು ಭೇದಾಭೇದಗಳು ಕಂಡರೂ ಅವರ ಆಂತರಿಕ ಅನುಭವವು ಒಂದೇ ಮಾದರಿಯದೂ ಎಲ್ಲರಿಗೂ ಸಾಮಾನ್ಯವೂ ಇರುವದು. ಯಾರು ಎಲ್ಲಿಂದ ನೋಡಿದರೂ ಪ್ರಕಾಶ ವೆಂಬುದು ಒಂದೇತರ ಕಾಣುವಂತೆ ಸತ್ಯದ ಸಾಕ್ಷಾತ್ಕಾರವು ಎಲ್ಲರಿಗೂ ಒಂದೇ ಬಗೆಯದ್ದಾಗುವದು. ಸಾಕ್ಷಾತ್ಕಾರಿಯು ಜ್ಞಾನ, ಭಕ್ತಿ, ಕರ್ಮ, ಧ್ಯಾನ ಮುಂತಾದವುಗಳಲ್ಲಿ ಯಾವ ಮಾರ್ಗದಿಂದ ಮುಖ್ಯವಾಗಿ ಮೇಲಕ್ಕೇರಿರುವನೊ ತದನುಗುಣವಾಗಿ ಅವನಲ್ಲಿ ಆಯಾ ಶಕ್ತಿಯು ಉಚ್ಚಸ್ಥಿತಿಯನ್ನು ಪಡೆದು ಅತ್ಯಂತ ವಿಕಸಿತವಾದದ್ದು ಕಂಡುಬರುವದು. ಸತ್ಯ ದರ್ಶನವು ಅಂತಃಪ್ರಕ್ಷುವಿಗಾಗುವುದಾದರೂ ಅದರ ಪ್ರಭಾವಪೂರ್ಣ ಪರಿಣಾಮವು ಸಾಧಕನ ಇಡೀ ಜೀವನಶಕ್ತಿಗಳ ಮೇಲೆ ಆಗದೆ ಇರದು. ಅವನ ಬುದ್ಧಿಯು ನಿಚ್ಚಳವೂ ಭಾವವು ಶುದ್ಧವೂ ತೇಜಸ್ವಿಯೂ ಕರ್ಮವು ನಿಷ್ಕಾಮವೂ ವೀರ್ಯವತ್ತರವೂ ಚಿತ್ತವು ಏಕಾಗ್ರವೂ ಆಗುವದು. ಇನ್ನು ಇವುಗಳಲ್ಲಿ ಯಾವನು ಯಾವ ಪಥದಿಂದ ಸಾಗಿರುವನೊ ಅವನ ಆ ಶಕ್ತಿಯೆ ಎಲ್ಲಕ್ಕೂ ಹೆಚ್ಚು ತೇಜಸ್ವಿಯೂ ಪರಿಪಕ್ವವೂ ಆಗುವದು ಸ್ವಾಭಾವಿಕವು. ಅವನ ತನುಮನಧ್ಯಾನಗಳೆಲ್ಲ ಅವನು ಸಾಕ್ಷಾತ್ಕರಿಸಿದ ಸರ್ವಾತ್ಮನಲ್ಲಿ ಏಕರಸವಾಗಿರುವುದರಿಂದ ಆ ಸರ್ವಾತ್ಮನ ಸಂಕಲ್ಪದಂತೆಯೆ ಅವನಿಂದ ಯಾವಾಗಲೂ ಸರ್ವಭೂತಹಿತದ ಕಾರ್ಯಗಳು ಆಗುವವು. ಅವನು ಸ್ವತಃ ನೀತಿಧರ್ಮಗಳ ಉಗಮಸ್ಥಾನನೆ ಆಗುವನು. ವಿಶ್ವದಲ್ಲಿ ಗೂಢವಾಗಿರುವ ಸತ್ಯಾತ್ಮನ ಸಾಕ್ಷಾತ್ಕಾರವನ್ನು ತನ್ನ ಶಕ್ತಿಸರ್ವಸ್ವದಿಂದ ಪಡೆದು ಅದರೊಡನೆ ಅಂತರದಲ್ಲಿ ಒಂದಾಗಿಹೋಗಿರುವುದರಿಂದ ಸಾಕ್ಷಾತ್ಕಾರಿಯು ಅಹಂಕಾರಶೂನ್ಯನೂ ನಿರಪೇಕ್ಷನೂ ನಿಷ್ಕಾಮಿಯೂ ಆಗಿ ತನ್ನ ಬಾಹ್ಯಕರಣ

ಗಳಿಂದ ವಿಶ್ವಕರ್ಮದಲ್ಲಿ ಲೀಲಾವಿಹಾರಿಯಾಗಿ ವಿಜರಿಸುವನು. ಈ ರೀತಿ, ಧನ್ಯಭಾವ ಅಥವಾ ಕೃತಾರ್ಥಭಾವ, ಯಾವುದೋ ಒಂದು ಅಪಾರ್ಥಿವ ಆನಂದವನ್ನು ಸವಿಯುತ್ತಿರೋಣ, ತನ್ನಿಂದಾಚೆಗಿನ ವಾಣಿಯನ್ನು ಕೇಳಿ ಕರ್ಮಗಳನ್ನು ಮಾಡೋಣ, ಸ್ಫೂರ್ತಿಪರವಶತೆ, ಪೂರ್ಣನಿಷ್ಕಾಮತೆ, ಆತ್ಮೌಪಮ್ಯ ಬುದ್ಧಿ ಮುಂತಾದವುಗಳೆಲ್ಲ ದೈವೀಸಾಕ್ಷಾತ್ಕಾರದ ಕುರುಹುಗಳೆಂದು ಹೇಳಬಹುದು. ಒಬ್ಬ ಸಾಕ್ಷಾತ್ಕಾರಿಯು ಒಳ್ಳೆ ಪಂಡಿತನಿರಬಹುದು, ಇನ್ನೊಬ್ಬನು ಉತ್ಕಟಭಕ್ತನಿರಬಹುದು, ಮತ್ತೊಬ್ಬನು ಕರ್ಮಯೋಗಿ ಇರಬಹುದು, ಮತ್ತಿನ್ನೊಬ್ಬನು ಧ್ಯಾನಿಯೂ ವೈರಾಗಿಯೂ ಇರಬಹುದು. ಇವೆಲ್ಲ ಸಾಕ್ಷಾತ್ಕಾರಿಗಳ ಭೂಮಿಕೆಗಳು. ಇವು, ಮೇಲೆ ಹೇಳಿದಂತೆ, ಆಯಾ ಸಾಧಕನಲ್ಲಿ ವಿಕಸಿತವಾದ ಶಕ್ತಿ ಮತ್ತು ಅವನವನ ಸಾಧನಮಾರ್ಗ, ಇವುಗಳನ್ನವಲಂಬಿಸಿವೆ. ಆದರೆ ಈ ಅವರ ಭೂಮಿಕೆಗಳನ್ನೆಲ್ಲ ಒಂದೇ ಸತ್ಯದರ್ಶನದ ದಿವ್ಯಪ್ರಕಾಶವು ಬೆಳಗುವದು ಮತ್ತು ಆ ಪ್ರಕಾಶದ ಬೆಳಕಿನಿಂದ ಬೆಳಗಿದ ರಂಗದಲ್ಲಿ ಅವರು ತಮ್ಮ ತಮ್ಮ ನಾಟ್ಯವನ್ನು ಮಾಡಿ ತಮ್ಮ ನಿಜಧಾಮಕ್ಕೆ ತೆರಳುವರು.

೯. ಸಾಕ್ಷಾತ್ಕಾರವು ದೇಶಕಾಲಪರಿಸ್ಥಿತಿಗಳಿಂದ ಪರಿಮಿತವಿಲ್ಲವೆಂದು ನಾವು ಮೇಲೆ ಹೇಳಿದ್ದೇವೆ. ಇಡೀ ಜಗತ್ತಿನಲ್ಲಿ, ಅಖಿಲ ಮಾನವಕುಲದಲ್ಲಿ, ಈ ಮಾರ್ಗವನ್ನವಲಂಬಿಸಿದ ಅನೇಕ ಸತ್ಪುರುಷರು ಮತ್ತು ಸತ್‌ಸ್ತ್ರೀಯರು ಕಾಲಕಾಲಕ್ಕೆ ಆಗಿಹೋಗಿರುವರು. ಅವರು ತಮ್ಮ ತಮ್ಮ ಪರಿಯಿಂದ ಸತ್ಯದೇವರ ದರ್ಶನವನ್ನು ಪಡೆದು ಅದರಿಂದ ಕೃತಾರ್ಥರಾಗಿ, ಅನ್ಯರಿಗೆ ಮಾರ್ಗದೋರಿ ಮಾಯವಾಗಿರುವರು. ಮೊದಲು ಈ ಭಾರತವರ್ಷದಲ್ಲಿಯು ಈ ಮಾರ್ಗದ ಪೂರ್ವಪರಂಪರೆಯನ್ನು ಸ್ವಲ್ಪ ನೋಡುವ. ಅದರ ಇಡೀ ಇತಿಹಾಸವನ್ನು ಇಲ್ಲಿ ಕೊಡುವದು ಅಸಾಧ್ಯವು. ಈ ವಿಶಾಲ ದೇಶದಲ್ಲಿಯು ಒಂದೊಂದು ಪ್ರಾಂತದಲ್ಲಿಯ ಸಾಕ್ಷಾತ್ಕಾರಮಾರ್ಗದ ಇತಿಹಾಸವನ್ನು ಬರೆಯಬೇಕಾದರೂ ಒಂದೊಂದು ದೊಡ್ಡ ಗ್ರಂಥವನ್ನು ಬೀಸಲಾಗಿಡಬೇಕಾದೀತು. ಅಷ್ಟು ಈ ವಿಷಯವು ವಿಸ್ತೃತವೂ ಮಹತ್ವದ್ದೂ ಇರುವದು. ಇಲ್ಲಿಯ ಆರ್ಯರ ಪ್ರಾಚೀನತಮ ಗ್ರಂಥಗಳೆಂದರೆ ವೇದಗಳು. ಅವು ಸಾಕ್ಷಾತ್ಕಾರಿಗಳಿಂದಲೆ ಬರೆಯಲ್ಪಟ್ಟಿರುವವೆಂಬಲ್ಲಿ ಏನೂ ಸಂಶಯವಿಲ್ಲ. ಹಾಗೆ ಇರುವುದರಿಂದಲೆ ಅವು ಅಪೌರುಷೇಯ ಅಂದರೆ ಪುರುಷಕೃತವಲ್ಲದವು, ಶ್ರುತಿಗಳು ಅಂದರೆ ಅಶರೀರವಾಣಿಯನ್ನು ಅಂತರದಲ್ಲಿ ಕೇಳಿ ಬರೆದವು, ಎಂದು ಪ್ರಸಿದ್ಧವಿರುವವು. ಅವುಗಳನ್ನು ಬರೆ

ದವರು ಮಂತ್ರದ್ರಷ್ಟಾರರು ಅಂದರೆ ಪ್ರತ್ಯಕ್ಷ ಮಂತ್ರಗಳನ್ನು ನೋಡಿದವರು ಎನಿಸಿಕೊಳ್ಳುವರು. ವೇದಮಂತ್ರಗಳನ್ನು ಸುರಿದ ಋಷಿಗಳು ಸತ್ಯವನ್ನು ಅಂತಃಕರಣಗಳಿಂದ ನೋಡಿ, ಕೇಳಿ, ಆ ಸತ್ಯದ ಪ್ರಕಟನೆಗೆ ಕೇವಲ ನಿಮಿತ್ತಮಾತ್ರರಾಗಿರುವರು. ಅವರಿಗೆ ಪ್ರತ್ಯಕ್ಷ ಅನುಭವವಾದುದರಿಂದಲೆ ಅದು ಸತ್ಯವೆನಿಸಿತು ಮತ್ತು ಅದನ್ನೊಳಗೊಂಡ ವೇದಗಳು ಇಡೀ ಆರ್ಯಜನಾಂಗದ ಆದಿಗ್ರಂಥಗಳೆಂದು ಈಗ್ಯೂ ಮೆರೆಯುವವು. ಈ ರೀತಿ ಸಾಕ್ಷಾತ್ಕಾರಮಾರ್ಗದ ಪರಂಪರೆಯು ವೇದಕಾಲದವರೆಗೆ ಹೋಗುವದು. ವೇದಗಳ ಅಂತ್ಯಭಾಗವೆಂದು ಪ್ರಸಿದ್ಧವಿರುವ ಉಪನಿಷತ್ತುಗಳಲ್ಲಿ ಬಹಳ ಪುರಾತನವೆನಿಸುವ ಬೃಹದಾರಣ್ಯಕದಲ್ಲಿ, ಈ ಸೂಕ್ಷ್ಮಮಾರ್ಗವು ಪ್ರಾಚೀನ ಕಾಲದಿಂದ ಪ್ರಚಲಿತವಿರುವದು (**ಅಣುಃ ಪಂಥಾ ವಿತತಃ ಪುರಾಣಃ** – ಬೃಹ. ೪. ೪. ೮), ಎಂದು ಸ್ಪಷ್ಟ ಉಲ್ಲೇಖವಿರುವದು. ಅಂದಬಳಿಕ ಬೃಹದಾರಣ್ಯದ ಕಾಲಕ್ಕೆಯೆ ಈ ಮಾರ್ಗವು ಪುರಾತನವೆನಿಸುತ್ತಿರಲಿಕ್ಕೆ ಬೇಕು. ಇದರ ಮೇಲಿಂದ ಇದು ಎಷ್ಟು ಹಳೆಯದು ಎಂಬುದನ್ನು ಊಹಿಸಬಹುದು. ಈ ಮಾರ್ಗವು ಕತ್ತಿಯ ಮೊನೆಯಂತೆ ಕೂರಾದದ್ದೂ ಕಠಿಣವೂ (**ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ ದುರ್ಗಂ ಪಥಃ**– ಕಠ ೧. ೩. ೧೪) ಇರುವದೆಂದು ಉಪನಿಷತ್ತಿನಲ್ಲಿಯೆ ವರ್ಣನವಿರುವದು. ಉಪನಿಷತ್ತುಗಳು ಅನೇಕ ಅನ್ಯ ತತ್ತ್ವಜ್ಞಾನಗಳ ಬೀಜಭೂಮಿ ಇರುವಂತೆ ಅವು ಸಾಕ್ಷಾತ್ಕಾರವಾದದ ತವರುಮನೆ ಇರುವವೆಂದು ಹೇಳಬಹುದು. ಆತ್ಯಂತಿಕ ಸತ್ಯವಸ್ತುವನ್ನೆ ಉಪನಿಷತ್ಕಾರರು ಪರಮಾತ್ಮ, ಬ್ರಹ್ಮ, ಆತ್ಮ, ಪರಬ್ರಹ್ಮ, ಎಂದು ಕರೆದಿರುವರು. ಅದನ್ನು ವಿಚಾರಿಸಿದರೆ ಇನ್ನಾವುದನ್ನೂ ವಿಚಾರಿಸುವ ಅವಶ್ಯಕತೆ ಉಳಿಯದು, ಅದು ತಿಳಿದರೆ ಇನ್ನಾವುದನ್ನೂ ತಿಳಿದುಕೊಳ್ಳುವದೆಂಬದು ಉಳಿಯದು, (ಮುಂ ೧. ೨. ೩) ಎಂದು ಅವರ ಅಭಿಪ್ರಾಯವು. ಆತ್ಮವಸ್ತುವಿನ ವರ್ಣನೆಯನ್ನು ಸ್ವಯಂಭು, ಪರಿಭು, ಇಂದ್ರಾಯಾತೀತ, ಅಣುವಿಗಿಂತ ಅಣುವು ಮತ್ತು ಮಹತ್ತಿಗಿಂತ ಮಹತ್ತು, ಬಳಕೊರಗೆ ಎಲ್ಲೆಲ್ಲಿಯೂ ಇದ್ದದ್ದು, ಅಂತರಾಕಾಶದಲ್ಲಿ ಅಂದರೆ ಹೃದಯಗುಹೆಯಲ್ಲಿ ಜ್ಯೋತಿರೂಪವಾಗಿ ಇರುವಂತಹದು, ಸತ್ಯವು, ಜ್ಞಾನರೂಪವು, ಅನಂತವು, ಸತ್ಯಸಂಕಲ್ಪವು, ಸರ್ವಸಾಕ್ಷಿಯು, ಸರ್ವದ ಉಗಮವು ಎಂದು ಮುಂತಾಗಿ ಉಪನಿಷತ್ಕಾರರು ಅನೇಕ ಕಡೆಗೆ ಮಾಡಿರುವರು. ಈ ಸತ್ಯವಸ್ತುವಿನ ಸಾಕ್ಷಾತ್ಕಾರವೆ ಅವರ ಆತ್ಯಂತಿಕ ಧ್ಯೇಯವಿರುವದು.

೧೨೦. ಈ ವಿಶ್ವವೆಲ್ಲ ಪರಮಾತ್ಮನ ವಾಸಸ್ಥಾನವಿರುವದೆಂಬದನ್ನೂ ಸರ್ವವೂ ಆತ್ಮಮಯವಿರುವದೆಂಬದನ್ನೂ ಸಾಕ್ಷಾತ್ಕರಿಸಿ, ಏಕತ್ವದ ಪ್ರತ್ಯಕ್ಷ ಅನುಭವವನ್ನು ಯಾವನು ಪಡೆಯುವನೋ ಅವನಿಗೆ ಶೋಕವೆಲ್ಲಿಯದು ಮೋಹವೆಲ್ಲಿಯದು, ಎಂದು ಈಶಾವಾಸ್ಯೋಪನಿಷತ್ತು (ಮಂ. ೭) ಆವ್ಹಾನ ಪೂರ್ವಕವಾಗಿ ಕೇಳುವದು. ಮೋಹಕವಾದ ಈ ಸೃಷ್ಟಿಯೆಂಬ ಮುಚ್ಚಳ ದಿಂದ ಮುಚ್ಚಲ್ಪಟ್ಟ ಸತ್ಯಸ್ವರೂಪವನ್ನು ನನಗೆ ಪ್ರತ್ಯಕ್ಷ ತೋರಿಸು, (ಮಂ. ೧೫) ಎಂದು ಈಶಾವಾಸ್ಯಕಾರರು ಜ್ಞಾನಸೂರ್ಯನನ್ನು ಪ್ರಾರ್ಥಿ ಸುವರು. ಆತ್ಮಸ್ವರೂಪವು ಇಂದ್ರಿಯಮನಾದಿಗಳಿಗೆ ಸಿಲುಕದು, ಅದೇ ಇವೆಲ್ಲವುಗಳ ಕರ್ಮಕ್ಕೆ ಸಾಕ್ಷಿಯಾಗಿರುವದು ಅದರ ಅನುಭವವು ಅವರ್ಣ ನೀಯವಿರುವದು, ಆ ಅನುಭವವು ವಿಂಚಿನೋಪಾದಿಯಲ್ಲಿ ಇಲ್ಲವೆ ಸ್ಫೂರ್ತಿ ಯಿಂದ ಹೊಳೆದ ಕಲ್ಪನೆಯೋಪಾದಿಯಲ್ಲಿ ಇರುವದು (ಖಂ ೧. ಮಂ. ೩. ಮತ್ತು ಖಂ. ೪. ಮಂ. ೯, ೩೦.) ಎಂದು ಕೇನೋಪನಿಷತ್ತಿನಲ್ಲಿ ಉಲ್ಲೇಖ ವಿರುವದು. ಪ್ರವಚನ, ಮೇಧಾಶಕ್ತಿ, ಶ್ರವಣ ಇವುಗಳಿಂದ ಆತ್ಮನು ಪ್ರಾಪ್ಯನಲ್ಲ, ಅವನು ತಾನೇ ಪ್ರೀತನಾಗಿ ಸಾಧಕನಿಗೆ ಪ್ರಕಟನಾದರೆ ಮಾತ್ರ ಸಾಧ್ಯನು, (೧ ೨. ೨೨) ಸಾಕ್ಷಾತ್ಕಾರಿಯಲ್ಲದವನು ಆತ್ಮಸ್ವರೂ ಪದ ಜ್ಞಾನವನ್ನು ಎರಡನೆಯವರಿಗೆ ಹೇಳಲಾರನು, (೧. ೨. ೪) ಎಂದು ಕಠವು ಹೇಳುವದು. ಜ್ಯೋತಿರ್ಮಯನಾಗಿ ಅಂತರಾಕಾಶದಲ್ಲಿರುವ ಆತ್ಮನು ಕ್ಷೀಣದೋಷರಾದ ಯತಿಗಳಿಗೆ ಮಾತ್ರ ಕಾಣುವನು, (೩. ೧. ೫) ಪಕ್ಷ್ಮವಿದಿಗಳಿಗೆ ಗೋಚರನಾಗದೆ ಶುದ್ಧ ಚಿತ್ತನು ಧ್ಯಾನ ಮಾಡುತ್ತಿರಲು ಆತ್ಮನು ಜ್ಞಾನಪ್ರಸಾದದಿಂದ ದರ್ಶನವನ್ನು ಕೊಡುವನು, (೩. ೧. ೮) ಎಂದು ಮುಂಡಕದ ಉಕ್ತಿ ಇರುವದು. ಅಂತರ್ಹೃದಯದಲ್ಲಿ ಆತ್ಮನು ಅತ್ಯಂತ ಸೂಕ್ಷ್ಮನಾಗಿ ಇರುವನು, ಅವನೇ ಪರಂಜ್ಯೋತಿಯು, ಅವನನ್ನೆ ಸಾಧಕನು ಹುಡುಕತಕ್ಕದ್ದು ಮತ್ತು ಸಾಕ್ಷಾತ್ಕರಿಸತಕ್ಕದ್ದು, ಎಂದು ಛಾಂದೋಗ್ಯಾದಿ ಉಪನಿಷತ್ತುಗಳಲ್ಲಿ ಉಪದೇಶವಿರುವದು. ಮನುಷ್ಯನು ಆತ್ಮಜ್ಯೋತಿಯ ಪ್ರಕಾಶದಿಂದಲೆ ಎಲ್ಲವನ್ನು ಮಾಡುವನು, ಆ ಆತ್ಮನನ್ನು ಅನುಭವದಿಂದ ತಿಳಿದುಕೊಳ್ಳತಕ್ಕದ್ದು, ಎಂದು ಜನಕರಾಜನಿಗೆ ಯಾಜ್ಞ ವಲ್ಕ್ಯನು ಬೃಹದಾರಣ್ಯಕದಲ್ಲಿ ಹೇಳಿರುವನು. ಉಪಾಸನಾಮಾರ್ಗದಿಂದ ಸಾಗಿರುವಾಗ ಸತ್ಯಕಾಮಜಾಬಾಲನಿಗೂ (ಛಾಂ. ೪. ೪. ೯) ವಾರುಣೀ ಪುತ್ರನಾದ ಭೃಗುವಿಗೂ (ತೈ. ಭೃಗುವಲ್ಲಿ ೬) ಇದೇ ಪ್ರಕಾರದ ಸಾಕ್ಷಾ ತ್ಕಾರವಾಗಿ ಅವರು ಧನ್ಯರಾಗಿರುವರು. ಉಪಕೋಸಲನ ಸಂಗತಿಯಾ

ದರೂ (ಛಾಂ. ೪. ೧೪. ೨) ಹೀಗೆಯೆ ಇರುವದು. ಮೂವರೂ ಪರಮ ಗುರುಭಕ್ತರು, ಏಕನಿಷ್ಠೆಯಿಂದ ಬ್ರಹ್ಮಚರ್ಯವನ್ನು ಪಾಲಿಸುವವರು, ಮತ್ತು ಸತ್ಯಶೋಧನದಲ್ಲಿ ನಿಮಗ್ನರು. ಮುಂದೆ ಅವರವರ ಗುರುಗಳು ಅವರ ಸಾಕ್ಷಾತ್ಕಾರವು ನಿಜವಿರುವದು ಎಂದು ತಮ್ಮ ಗುರುಮುದ್ರೆ ಯನ್ನು ಒತ್ತಿ ಅವರನ್ನು ಆಶೀರ್ವದಿಸಿದರು. ಕೇನೋಪನಿಷತ್ತಿನಲ್ಲಿ ಇಂದ್ರ ನಿಗೂ ಸಾಕ್ಷಾತ್ಕಾರದಿಂದಲೆ (೪. ೨೬) ಬ್ರಹ್ಮಜ್ಞಾನವಾಯಿತು. ಸಾಕ್ಷಾ ತ್ಕಾರದಿಂದ ಆಗತಕ್ಕ ಪರಿಣಾಮಗಳನ್ನೂ ಉಪನಿಷತ್ಕಾರರು ಅಲ್ಲಲ್ಲಿ ವರ್ಣಿಸಿದ್ದಾರೆ. ಒಮ್ಮೆ ಸಾಕ್ಷಾತ್ಕಾರವಾಯಿತೆಂದರೆ ಮುಂದೆ ಸಾಕ್ಷಾ ತ್ಕಾರಿಗೆ ತಿಳಿದುಕೊಳ್ಳತಕ್ಕುದೆಂಬುದೇನೂ ಉಳಿಯುವುದಿಲ್ಲ. ಅವನ ಹೃದ ಯದ ಕಗ್ಗಂಟುಗಳೆಲ್ಲ ಒಡೆದು ಅವನು ಸಂಶಯರಹಿತನಾಗುತ್ತಾನೆ. (ಮುಂ. ೨. ೨. ೪) ಅವನು ನಿಷ್ಕಾಪನೂ ನಿರ್ದ್ವಂದ್ವನೂ ನಿಷ್ಕಾಮನೂ ಆಗುತ್ತಾನೆ. ಅವನಲ್ಲಿ ಕೃತಕೃತ್ಯಭಾವವು ನೆಲೆಗೊಳ್ಳುತ್ತದೆ. ಅವನು ಅಮೃತತ್ವದ ಅಧಿಕಾರಿಯಾಗುತ್ತಾನೆ. (ಕಠ. ೨. ೬. ೧೪. ೧೫) ಅವನು ಆತ್ಮನಲ್ಲಿ ರಮಿಸುವವನೂ ಆತ್ಮನೊಡನೆ ಕ್ರೀಡಿಸುವವನೂ ಆಗುತ್ತಾನೆ. (ಮುಂ. ೩ ೧. ೪) ಶೋಕಮೋಹಗಳನ್ನು ದಾಟಿ ವಿರಜನಾಗಿ ಅವನು ಪರಾತ್ಪರ ಪದವಿಯ ಒಡೆಯನಾಗುತ್ತಾನೆ. ಅವನು ನಿರ್ಭಯನಾಗು ತ್ತಾನೆ, ಎಲ್ಲೆಲ್ಲಿಯೂ ಆತ್ಮನನ್ನೆ ಕಾಣುವವನಾಗುತ್ತಾನೆ, ಅವನು ಕೇವಲಾ ನಂದದ ಅನುಭವವನ್ನು ಪಡೆಯುತ್ತಾನೆ. ಈ ಬಗೆಯ ಪರಿಣಾಮವನ್ನುಂಟು ಮಾಡುವ ಸತ್ಯ ಸಾಕ್ಷಾತ್ಕಾರವನ್ನು ಹೇಗೆ ಪಡೆಯಬೇಕು, ಎಂಬ ಬಗ್ಗೆ ಹಲಕೆಲವು ಸಾಧನಗಳನ್ನೂ ಉಪನಿಷತ್ಕಾರರು ಹೇಳಿರುವರು. ಶ್ರದ್ಧೆ, ತಪಸ್ಸು, ಶಮದಮ, ಬ್ರಹ್ಮಚರ್ಯ, ಸತ್ಯನಿಷ್ಠೆ, ಅಹಿಂಸೆ, ಏಕಾಂತವಾಸ, ಧ್ಯಾನ, ಲಯಯೋಗ, ಉಪಾಸನೆ, ಸೂಕ್ಷ್ಮಬುದ್ಧಿಯಿಂದ ಆತ್ಮನನ್ನು ತಿಳಿದುಕೊಳ್ಳುವ ಪ್ರಯತ್ನ, ನಿಷ್ಕಾಮಕರ್ಮ, ಚಿತ್ತಶುದ್ಧಿ, ಪರಾವಿದ್ಯೆ, ಶಾಂತಿ, ಸ್ಥೈರ್ಯ, ಇವೇ ಮುಂತಾದವುಗಳು ಸಾಕ್ಷಾತ್ಕಾರದ ಸಾಧನ ಗಳೆಂದು ಅವರು ಅಲ್ಲಲ್ಲಿ ವಿವರಿಸಿರುವರು.

೧೦೧. ಉಪನಿಷತ್ತುಗಳ ನಂತರ ಅವುಗಳ ಸಮನ್ವಯವನ್ನೆ ಮಾಡುವ ಬ್ರಹ್ಮಸೂತ್ರಗಳನ್ನು ಒತ್ತಟ್ಟಿಗೆ ಇಟ್ಟರೆ ಶ್ರೀಮದ್ಭಗವದ್ಗೀತೆಯೆ ಅತ್ಯಂತ ಮಹತ್ವದ, ವರ್ಜಸ್ಸುಳ್ಳ, ಮತ್ತು ಪ್ರಭಾವಶಾಲಿಯಾದ ಗ್ರಂಥವು. ಭಾರತೀಯರ ತತ್ವವಿಚಾರ ಮತ್ತು ಸಾಧನಪಥ ಇವುಗಳ ಮೇಲೆ ಭಗವದ್ಗೀತೆಯು ಮಾಡಿದ ಪರಿಣಾಮವು ಕೊನೆಗಾಲದ ವರೆಗೆ ಬಾಳು

ವಂತಹದಿರುವನು. ಆ ಗ್ರಂಥವು ಬುದ್ಧಿಯನ್ನು ಮನಗಾಣಿಸುವ ವಿಚಾರ ಗಳನ್ನು ಎಷ್ಟು ಅಧಿಕಾರದಿಂದ ಹೇಳಿರುವುದೊ ಅಷ್ಟೇ ಬಲದಿಂದ ಸಾಕ್ಷಾತ್ಕಾರವಾದವನ್ನೂ ಪ್ರತಿಪಾದಿಸಿರುವದು. ಉಳಿದದ್ದೇನೇ ಇರಲಿ ಬಿಡಲಿ, ಗೀತೆಯು ಆತ್ಮಸಾಕ್ಷಾತ್ಕಾರದ ಮತ್ತು ತತ್ಸಾಧನದ ಅತ್ಯಂತ ಅನುಭವಯುಕ್ತ ಗ್ರಂಥವಿರುವದೆಂದು ನಾವು ಕಂಠೋಕ್ತವಾಗಿ ಹೇಳು ವೆವು. ಅರ್ಜುನನ ಸಂಶಯಪಿಶಾಚಿಯನ್ನು ಶ್ರೀಕೃಷ್ಣನು ವಿರಾಟರೂಪ ದರ್ಶನದ ಮಹಾಮಂತ್ರದಿಂದಲೆ ಬಿಡಿಸಿದನು, ಮತ್ತು ಅವನ ಮನಸಿನಲ್ಲಿಯ ಕುಕಲ್ಪನೆಗಳ ಕಗ್ಗಂಟುಗಳನ್ನು ಕತ್ತರಿಸಿ ಅಜೀವ ನಿಷ್ಕಾಮಕರ್ಮ ಮಾಡಿ ಸ್ವಧರ್ಮವನ್ನು ಪರಿಪಾಲಿಸುವ ಉಜ್ವಲ ಉಪದೇಶವನ್ನು ಸುರಿ ದನು. ಅರ್ಜುನನು ಬುದ್ಧಿವಂತನಿದ್ದನು, ಭಕ್ತಶ್ರೇಷ್ಠನಿದ್ದನು. ಆದರೆ ಸಾಕ್ಷಾತ್ಕಾರದ ಮುದ್ರೆಬೀಳುವವರೆಗೆ ಅವನ ಕೈಯಿಂದಾಗತಕ್ಕ ವೀರ ಕರ್ಮವು ಆಗಲೊಲ್ಲದಾಯಿತು. ಶ್ರೀಕೃಷ್ಣನು ಅವನಿಗೆ ದಿವ್ಯದೃಷ್ಟಿಯನ್ನು ಕೊಟ್ಟು, ಮುಚ್ಚಿದ ಹೃದಯಕವಾಟಗಳನ್ನು ತೆರೆದು, ವಿಶ್ವರೂಪವನ್ನೂ ಅದರಲ್ಲಿ ಅವನ ಸ್ಥಾನವನ್ನೂ ತೋರಿಸಿ, ಅವನನ್ನು ಸರ್ವಸಮರ್ಪಣದ ಶ್ರೇಷ್ಠಮಾರ್ಗಕ್ಕೆ ಹಚ್ಚಿದನು. ಗೀತೆಯು ಅನ್ಯ ಅನೇಕ ದೃಷ್ಟಿಯಿಂದ ಬಹಳ ಮಹತ್ವದ ಗ್ರಂಥವಿರುವದಿದ್ದು ಅದು ಸಾಕ್ಷಾತ್ಕಾರವಾದದ ಸತ್ಯತೆಗೆ ಸದಾ ಸಾಕ್ಷಿಯಾಗಿ ನಿಲ್ಲುವದು ಎಂಬಲ್ಲಿ ಎಳ್ಳಷ್ಟು ಸಂಶಯವಿಲ್ಲ.

೧೨೨. ವೇದಗಳು ಸಾಕ್ಷಾತ್ ಸತ್ಯದರ್ಶನಪರವಶರಾದ ದ್ರಷ್ಟಾರ ರಿಂದಲೆ ಹೇಳಲ್ಪಟ್ಟವು, ಉಪನಿಷತ್ತುಗಳು ಆತ್ಮಸಾಕ್ಷಾತ್ಕಾರವನ್ನೆ ತಮ್ಮ ಗುರಿ, ಎಂದು ಇಟ್ಟುಕೊಂಡಿರುವವು, ಗೀತೆಯು ಸಾಕ್ಷಾತ್ಕಾರಮಾರ್ಗದ ಮಹಾಗ್ರಂಥವು, ಎಂದು ಇದುವರೆಗೆ ಹೇಳಿದ್ದಾಯಿತು. ಇನ್ನು ಆಗಮ ಪುರಾಣ ಮುಂತಾದವುಗಳಲ್ಲಿ ಈ ವಾದವು ಎಷ್ಟರ ಮಟ್ಟಿಗೆ ಇದೆ ಇದನ್ನು ನೋಡುವ. ಆಗಮಗಳು ಮೂರು ಬಗೆಯವಿರುವವು – ಶೈವ, ಶಾಕ್ತ, ಮತ್ತು ವೈಷ್ಣವ ಅಥವಾ ಪಾಂಚರಾತ್ರ. ಇವು ಮೂರೂ, ತತ್ವಜ್ಞಾನ ಕ್ಕಿಂತ ಸಾಧನಕ್ಕೆಯೆ ಹೆಚ್ಚು ಮಹತ್ವವನ್ನು ಕೊಡುವವು. ಮೂರ ರಲ್ಲಿಯೂ ಭಕ್ತಿಪಂಥಕ್ಕೆ ಪ್ರಧಾನಸ್ಥಾನವಿರುವದು. ಆಗಮಗಳು ಯಾವುದೇ ಸಾಧನಮಾರ್ಗವನ್ನು ಹಿಡಿದಿದ್ದರೂ ಅವೆಲ್ಲ ಪರದೈವತದ ಪೂರ್ಣ ಪ್ರತ್ಯಕ್ಷ ಅನುಭವವನ್ನೆ ತಮ್ಮ ಉದ್ದೇಶವನ್ನಾಗಿಟ್ಟುಕೊಂಡದ್ದ ರಿಂದ ಆ ಮಟ್ಟಿಗೆ ಅವು ಸಾಕ್ಷಾತ್ಕಾರವಾದವನ್ನೆ ಅನುಸರಿಸಿವೆ, ಎಂದು ಹೇಳಬಹುದು. ಆಗಮಗಳು ವೇದಗಳಂತೆ ಇಂದ್ರ, ಸೂರ್ಯ,

ವರುಣಾದಿ ದೇವತೆಗಳನ್ನವಲಂಬಿಸಿ ಪರವಸ್ತುವಿನ ಉಪಾಸನೆ ಮಾಡುವ ದಿಲ್ಲ, ಮತ್ತು ಸ್ತುತಿಸ್ತೋತ್ರ ಇಲ್ಲವೆ ಯಜ್ಞಯಾಗ ಇವೇ ತಮ್ಮ ಧರ್ಮಾಚಾರಗಳೆಂದು ತಿಳಿಯುವದಿಲ್ಲ. ಉಪನಿಷತ್ತುಗಳಂತೆ ಅಪೌರುಷ ನಿರ್ಗುಣ ನಿರಾಕಾರ ವಸ್ತುವೆ ಮೂಲವೆಂಬುದನ್ನು ತಳಹದಿಯನ್ನಾಗಿರಿ ಸಿದ್ದರೂ ಸಗುಣಪ್ರತೀಕದ ಸಹಾಯವಿಲ್ಲದೆ (ಅಲಿಂಗಾತ್ ನಲಭ್ಯಃ –ಕೇನ) ಅದನ್ನು ಸಾಕ್ಷಾತ್ಕರಿಸುವದು ದುರಾಪಾಸ್ತವು ಎಂದು ಆಗಮಕಾರರು ಪುರುಷವಿಧವಾದ ವಿಷ್ಣು, ಶಿವ, ಶಕ್ತಿ ಇವರಲ್ಲಿ ಒಂದನ್ನು ತಮ್ಮ ಇಷ್ಟ ದೇವತೆಯೆಂದು ಉಪಾಸಿಸುವರು. ತಮ್ಮ ಇಷ್ಟದೇವತೆಯನ್ನು ಪುರುಷ ವಿಧ ಮಾಡಿದೊಡನೆ ಸಾಧಕರು ಸ್ವಾಭಾವಿಕವಾಗಿಯೆ ಆ ದೇವತೆಯೊಡನೆ ಮಾತೃ, ಪಿತೃ, ಗುರುಶಿಷ್ಯ, ಸಖಸಖೀ, ಸತಿಪತಿ, ಸೇವ್ಯ ಸೇವಕ ಮುಂತಾದ ಎಲ್ಲ ಮಾನವೀ ಸಂಬಂಧಗಳನ್ನು ಕಲ್ಪಿಸಿ ಆರೀತಿ ಆಚಾರ ವಿಚಾರ ಆಲಾಪಗಳನ್ನು ಪ್ರಚಾರಕ್ಕೆ ತರುವದು ಅಪರಿಹಾರ್ಯವು. ಈ ಮಾರ್ಗವೆ ಭಕ್ತಿಮಾರ್ಗವಾಗಿ ಪರಿಣಮಿಸಿರುವದು. ಸ್ಮರಣಾದಿ ನವವಿಧ ಭಕ್ತಿ ಇಲ್ಲವೆ ವಾತ್ಸಲ್ಯಾದಿ ಪಂಚವಿಧ ಭಕ್ತಿ ಇವು ಮೂಲ ಸಗುಣ ಪುರುಷ ವಿಧ ಪರಮಾತ್ಮನ ಭಕ್ತಿಮಾರ್ಗಕ್ಕೆ ಒಡೆದ ವಿಶಾಲ ಕವಲುಗಳು. ಇದಲ್ಲದೆ ಮಂತ್ರ, ಧ್ಯಾನ, ನ್ಯಾಸ, ಮುಂತಾದ ಸಾಧನಗಳನ್ನು ಆಗಮಕಾರರು ಒಳ್ಳೆ ಬಲವಾಗಿ ಹೇಳಿರುವರು. ಯಾವ ಸತ್ಯವನ್ನು ಏಕಾಂತದಲ್ಲಿ ತದೇಕ ಧ್ಯಾನರತರಾದ ತಪಸ್ವಿಗಳು ತಮ್ಮ ಅಂತರಂಗದಲ್ಲಿ ಗೂಢವಾಗಿ ಕಾಣ ಬಹುದೊ ಅದನ್ನು ಲಿಂಗ ವಯ ಜಾತಿ ಮುಂತಾದ ಭೇದಗಳಿಲ್ಲದೆ ಸ್ತ್ರೀ ಪುರುಷರೆಲ್ಲರೂ ಪ್ರತಿನಿತ್ಯ ವ್ಯವಹಾರದಲ್ಲಿ ಪ್ರತ್ಯಕ್ಷಿಸಬೇಕಾದರೆ ಯಾವ ವಿಧಿ ನಿಯಮ ಆಚಾರ ವಿಚಾರಗಳನ್ನು ರೂಢ ಮಾಡುವದು ಅವಶ್ಯವೊ ಅವುಗಳನ್ನೆಲ್ಲ ಪ್ರಸಿದ್ಧಿಸಲು ಆಗಮಕಾರರು ಯತ್ನಿಸಿದ್ದಾರೆ. ಅಲ್ಲಿ ಇಲ್ಲಿ, ಹಲಕೆಲವು ಅರಿಸಿದ ಬುದ್ಧಿಪ್ರಧಾನ ಸಜ್ಜೀವಗಳಷ್ಟೆ ಬ್ರಹ್ಮಜ್ಞಾನದ ಗೋಜಿಗೆ ಹೋಗಬಹುದು, ಮಿಕ್ಕವರು ಅತ್ತ ಹಾಯಲಾಗದು, ಎಂಬ ಬೆದರು ಕಲ್ಪನೆಯನ್ನು ತಳ್ಳಿ ಎಲ್ಲರೂ ಅತ್ತಕಡೆಗೆ ಸಾಗಲು ಬರುವಂಥ ಧಾರ್ಮಿಕ ರಾಜಮಾರ್ಗವನ್ನು ಕಟ್ಟಲಿಕ್ಕೆ ಅವರು ಯತ್ನಿಸಿದರು. ಜ್ಞಾನವೂ ಮೊದಲಿನದೇ, ತತ್ವವೂ ಪುರಾತನವೇ, ಬ್ರಹ್ಮನಿರ್ದೇಶಗಳೂ ಹಳೆಯವೇ, ನೀತಿ ನಿರ್ಬಂಧ ವಿಧಿನಿಷೇಧಗಳೂ ಮೊದಲು ಪ್ರಚಲಿತವಿದ್ದವು ಗಳೇ. ಆದರೆ ಆಗಮಕಾರರು ಅವೆಲ್ಲವುಗಳಿಗೆ ಹೊಸ ಸಂಗಮ ರೂಪ ಗಳನ್ನು ಕಲ್ಪಿಸಿ, ಅವರಿವರು ಆ ಮಾರ್ಗಕ್ಕೆ ಹೋಗಬಾರದೆಂಬ ಕಟ್ಟು

ಗಳನ್ನೆಲ್ಲ ಸಡಲಿಸಿ, ಜನಸಾಮಾನ್ಯರೆಲ್ಲ ಸಾಧನತತ್ವಗಳನ್ನು ಅಳವಡಿಸಲು ಸಾಧ್ಯವಾಗುವಂತೆ ಯತ್ನಿಸಿದರು. ಇಲ್ಲಿ ನಾವು, ಆಗಮಮಾರ್ಗದಲ್ಲಿ ವಿಶೇಷತಃ ಶಾಕ್ತ ಆಗಮಮಾರ್ಗದಲ್ಲಿ ಮುಂದೆ ವಿಶೇಷವಾಗಿ ಪ್ರಚಲಿತವಾದ ಅನಿಷ್ಟ ಮತ್ತು ಅನೀತಿಕರ ವಾಮಾಚಾರ ಗೂಢಾಚಾರಗಳನ್ನು ಎಳ್ಳಷ್ಟೂ ಸಮರ್ಥಿಸಲಾರೆವೆಂಬುದನ್ನು ಎಲ್ಲರೂ ಲಕ್ಷದಲ್ಲಿಡಬೇಕು, ಮತ್ತು ಆಗಮಗಳಲ್ಲಿಯ ಮುಖ್ಯ ತಾತ್ವಿಕ ಹಾಗೂ ಸಾತ್ವಿಕಭಾಗವನ್ನು ಲಕ್ಷಿಸಿಯೆ – ಅದೇ ಅವುಗಳ ಜೀವಾಳವಿರುವದು – ಬರೆಯುತ್ತಿರುವೆವೆಂಬುದನ್ನು ಮರೆಯಬಾರದು. ಆಗಮಾಚಾರ್ಯರು ಯಾವುದೇ ಸಾಧನ ಮಾರ್ಗಗಳನ್ನು ಸ್ವೀಕರಿಸಿದ್ದರೂ ಅವರ ಉದ್ದೇಶವು ಸತ್ಯಸಾಕ್ಷಾತ್ಕಾರವು ಅಥವಾ ದೇವರ ಅಪರೋಕ್ಷಜ್ಞಾನವು ಮತ್ತು ತದ್ವಾರದಿಂದ ನಿತ್ಯಾನಂದ ಸ್ಥಿತಿಯಾದ ಮೋಕ್ಷವು ಇತ್ತು ಎಂಬ ಬಗ್ಗೆ ಯಾವ ಸಂಶಯವೂ ಇಲ್ಲ. **ಜ್ಞಾನಿನಾಂ ಮುಕ್ತಿಕಾರಣಮ್, ಭುಕ್ತಿ ಮುಕ್ತಿ ಪ್ರದಾಯಕಮ್** ಎಂದು ವಾತುಲಾಗಮದ ಮತ್ತು **ಭೋಗಮೋಕ್ಷೈಕಸಾಧನಮ್** ಎಂದು ಪಾರಮೇಶ್ವರಾಗಮದ ವಾಕ್ಯಗಳಿರುವವು. ಇಲ್ಲಿ ಶೈವಾಗಮಗಳೆ ಮುಖ್ಯವಾಗಿ ಪ್ರಸ್ತುತವಿರುವುದರಿಂದ ಅವುಗಳಲ್ಲಿಯ ವಾಕ್ಯಗಳನ್ನಷ್ಟೆ ಉದಹರಿಸಿರುವೆವು.

೧೦೩. ಇನ್ನು ನಾರದೀಯ ಭಕ್ತಿ ಗ್ರಂಥವೂ ಶಾಂಡಿಲ್ಯ ಸೂತ್ರಗಳೂ ಸಾಧನವೆಂದು ಭಕ್ತಿಮಾರ್ಗವನ್ನು ಹೇಳುತ್ತಿದ್ದರೂ ಕೊನೆಗೆ ಸ್ವಯಂ ಪ್ರಮಾಣವಾದ ಸಾಕ್ಷಾತ್ಕಾರವನ್ನೆ ಸತ್ಯದ ಒರೆಗಲ್ಲೆಂದು ನಿಶ್ಚಯಿಸಿ, ಅದೇ ಎಲ್ಲ ಸಾಧನದ ಗುರಿಯು, ಸರ್ವ ಸುಖಗಳ ಶಿಖರವು, ಎಂದು ಅವು ಪ್ರತಿಪಾದಿಸುವವು. ಸಾಧಕನ ಶರೀರ ಮನ, ಬುದ್ಧಿ ಭಾವನೆ, ನೀತಿ ನಡತೆ ಮುಂತಾದವುಗಳ ಮೇಲೆ ಸಾಕ್ಷಾತ್ಕಾರದಿಂದ ಆಗುವ ಪರಿಣಾಮವನ್ನು ಯಥಾರ್ಥವಾಗಿ ವರ್ಣಿಸಿ ಆ ಸೂತ್ರಗಳು ಸ್ವಾನುಭವದ ಮಹತಿಯನ್ನು ಹೊಗಳುವವು. ಪತಂಜಲಯೋಗದ ಧ್ಯೇಯವಾದರೂ ಆತ್ಮಸಾಕ್ಷಾತ್ಕಾರವೇ ಇರುವದು, ಅದರಲ್ಲಿಯ ಸಿದ್ಧನ ಲಕ್ಷಣಗಳೂ ಸಾಕ್ಷಾತ್ಕಾರಿಯ ಲಕ್ಷಣಗಳೂ ಒಂದೇ ಇರುವವು. ಪುರಾಣಗಳಲ್ಲಿ ಎಷ್ಟೋ ಪುರಾಣಗಳು ಬೇರೆ ಬೇರೆ ಇಷ್ಟದೇವತೆಗಳನ್ನು ಕುರಿತು ಬರೆಯಲ್ಪಟ್ಟಿದ್ದರೂ ಭಕ್ತಿ ಧ್ಯಾನಾದಿ ಬೇರೆ ಬೇರೆ ಸಾಧನಗಳನ್ನು ಅವು ಹೇಳಿದ್ದರೂ ಎಲ್ಲವುಗಳ ಸಾರ ಸರ್ವಸ್ವವು ಆತ್ಮಾನುಭವದ ಮುಖಾಂತರವಾಗಿ ಮುಕ್ತಿಯನ್ನು ಪಡೆಯುವುದೆ ಇರುವದು. ಸಾಕ್ಷಾತ್ಕಾರವಾದದ ದೃಷ್ಟಿಯಿಂದ ಭಾಗವತ ಪುರಾ

ಣವು ವಿಶೇಷ ಮಹತ್ವದ್ದಿರುವದು. ಧ್ರುವ, ಪ್ರಲ್ಹಾದಾದಿ, ಅಗ್ರಣಿಗಳ ಚರಿತ್ರವು ಅದರಲ್ಲಿ ಒಳ್ಳೆ ಮನೋಹರವಾಗಿ ಕೊಡಲ್ಪಟ್ಟಿರುವದು. ಮೊದಲೊಮ್ಮೆ ಆದ ಸಾಕ್ಷಾತ್ಕಾರವನ್ನು ಪುನಃ ಆಗುವಂತೆ ಮಾಡಿರೆಂದು ನಾರದನು ಕೇಳಿದಾಗ ಭಾಗವತದಲ್ಲಿ ಅವನಿಗೆ ಸನತ್ಕುಮಾರನು ಕೊಟ್ಟ ಉತ್ತರವು ವಿಚಾರಾರ್ಹವಿರುವದು.

೧೦೪. ಈ ದೇಶದಲ್ಲಿಯ ಸಾಕ್ಷಾತ್ಕಾರ ಮಾರ್ಗದ ಇತಿಹಾಸವನ್ನು ಬರೆಯುವಾಗ ಶಂಕರ, ರಾಮಾನುಜ, ಮಧ್ವ, ವಲ್ಲಭ ಈ ಆಚಾರ್ಯಚತುಷ್ಟಯವನ್ನು ಮರೆಯುವದು ಸಾಧ್ಯವಿಲ್ಲ. ಇವರು ಮುಖ್ಯವಾಗಿ ತತ್ವಜ್ಞರೆಂದೂ ದ್ವೈತಾದ್ವೈತಾದಿ ಸಂಪ್ರದಾಯಗಳನ್ನು ರೂಢಮಾಡಿದವರೆಂದೂ ಪ್ರಸಿದ್ಧರಿರುವರು. ಆದರೆ ರಾಮಾನುಜ, ಮಧ್ವ ಮತ್ತು ವಲ್ಲಭ ಈ ಮೂವರು ಜ್ಞಾನಕ್ಕಿಂತ ಭಕ್ತಿಯೆ ಹೆಚ್ಚಿನ ಸಾಧನವೆಂದು ಒತ್ತಿ ಹೇಳಿದರು. ಶಂಕರಾಚಾರ್ಯರು ತತ್ವಜ್ಞಾನವನ್ನು ಹೇಳುವಾಗ ಬುದ್ಧಿ ಪ್ರಧಾನರೆಂದು ಕಂಡರೂ ಅವರ ಭಕ್ತಿಯು ಅಷ್ಟೇ ಪ್ರಬಲವಿತ್ತೆಂಬುದು ಅವರು ರಚಿಸಿದ ಸ್ತೋತ್ರಾದಿಗಳಿಂದ ವ್ಯಕ್ತವಾಗುವದು. ಭರತಖಂಡದ ಬೇರೆ ಬೇರೆ ಪ್ರಾಂತಗಳಲ್ಲಿ ಹನ್ನೊಂದು ಹನ್ನೆರಡನೆಯ ಶತಮಾನಗಳಿಂದ ಮುಂದೆ ಭಕ್ತಿಭಾವನೆಯ ಪ್ರಚಂಡ ತೆರೆಗಳೆದ್ದು ಜನಸಾಮಾನ್ಯರನ್ನೆಲ್ಲ ಆವರಿಸಿಬಿಟ್ಟು ಅವರನ್ನು ಧರ್ಮಮಾರ್ಗದಲ್ಲಿ ಮುಂದುವರಿಸಿ ಆತ್ಮ ಸಾಮ್ರಾಜ್ಯದಲ್ಲಿ ಮೇಲಕ್ಕೇರಿಸಿದವು. ಈ ಉಕ್ಕಿಗೆ ಈ ಆಚಾರ್ಯರು ಎಷ್ಟೋ ಮಟ್ಟಿಗೆ ಕಾರಣರಾದರು. ಆ ಭಕ್ತಿಮಾರ್ಗದ ಪರಂಪರೆಯಲ್ಲಿ ಆದ ಸಾಧುಸತ್ಪುರುಷರು ತಮ್ಮ ಆತ್ಮಸಾಕ್ಷಾತ್ಕಾರದ ಬಲದಿಂದಲೆ ಸತ್ಯವನ್ನೂ ಸನ್ಮಾರ್ಗವನ್ನೂ ಸಮಾಜಕ್ಕೆಲ್ಲ ಸಾರಿ ಸರಿಯಾಗಿ ನಿಜಸುಖದ ಹಾದಿಯನ್ನು ತೋರಿದರು. ಭಕ್ತಾಗ್ರಣಿಗಳು ಆಯಾ ಪ್ರಾಂತಿಕ ಭಾಷೆಗಳಲ್ಲಿ ಧರ್ಮಜೀವನವನ್ನು ತುಂಬಿ, ಅವುಗಳನ್ನು ಚೈತನ್ಯವಾಹಿನಿಗಳನ್ನಾಗಿ ಮಾಡಿ, ಎಲ್ಲ ಜನರಲ್ಲಿ ಹೊಸ ಧಾರ್ಮಿಕ ಆಕಾಂಕ್ಷೆಗಳನ್ನು ಜಾಗ್ರತಗೊಳಿಸಿದರು. ವಂಗದೇಶದಲ್ಲಿ ಪರಮಭಕ್ತ ರಾಮಾನಂದ, ಚಂಡಿದಾಸ, ಗೌರಾಂಗನೆಂಬ ಬಿರುದಾಂಕಿತನಾದ ಚೈತನ್ಯ, ಹಿಂದೀ ಭಾಷೆಯಲ್ಲಿ ರಾಮಭಕ್ತ ತುಳಸೀದಾಸ, ರಾಣೀ ಮೀರಾಬಾಯಿ, ಕುರುಡ ಸೂರದಾಸ, ಪಂಜಾಬದಲ್ಲಿ ಸೀಖ ಪಂಥ ಪ್ರವರ್ತಕನಾದ ನಾನಕ, ಹಿಂದೂ ಮುಸಲ್ಮಾನೀ ಧರ್ಮಗಳಲ್ಲಿ ಐಕ್ಯಭಾವವನ್ನು ನೆಲೆಗೊಳಿಸಲೆತ್ನಿಸಿದ ಕಬೀರ, ಗುಜರಾಥದಲ್ಲಿ ನರಸೀ ಮೇಹತಾ, ಮಹಾರಾಷ್ಟ್ರದಲ್ಲಿ

ಜ್ಞಾನೇಶ್ವರ, ನಾಮದೇವ, ಏಕನಾಥ, ರಾಮದಾಸ, ತುಕಾರಾಮ ಮುಂತಾದವರು ಮೇಲೆ ಹೇಳಿದ ಕಾರ್ಯವನ್ನು ಉತ್ತಮ ರೀತಿಯಿಂದ ಮಾಡಿದರು.

೧೦೫. ಇನ್ನು ದ್ರಾವಿಡ ದೇಶಗಳಲ್ಲಿಯ ಮತ್ತು ವಿಶೇಷವಾಗಿ ಕರ್ನಾಟಕದಲ್ಲಿಯ ಸಾಕ್ಷಾತ್ಕಾರವಾದದ ಪರಂಪರೆಯನ್ನು ಹೇಳುವ ಪೂರ್ವದಲ್ಲಿ ಇದುವರೆಗೆ ಸಾಕ್ಷಾತ್ಕಾರವನ್ನು ಕುರಿತು ಹೇಳಿದ ವಿಷಯವನ್ನು ಸ್ವಲ್ಪ ಪರ್ಯಾಲೋಚಿಸುವದು ಅಗತ್ಯವು. ಹೀಗೆ ನಾವು ಮಾಡುವದು ಸಾಕ್ಷಾತ್ಕಾರವಾದದ ಸ್ವರೂಪವನ್ನು ಇನ್ನಿಷ್ಟು ಸ್ಪಷ್ಟಗೊಳಿಸಬೇಕೆಂಬ ಉದ್ದೇಶದಿಂದಲೆ. ಅತ್ಯಂತಿಕ ಸತ್ಯವು, ವಿಶ್ವದ ಮೂಲಭೂತ ಸತ್ಯವು, ಪಾರಮಾರ್ಥಿಕ ಸತ್ಯವು ನಮ್ಮ ಜ್ಞಾನೇಂದ್ರಿಯಗಳಿಂದ– ಮನಸು, ಬುದ್ಧಿ, ಭಾವನೆ, ಸಂಕಲ್ಪ, ಇವುಗಳಿಂದ– ತಿಳಿಯತಕ್ಕ ವಿಷಯವಲ್ಲ. ಆಧ್ಯಾತ್ಮಿಕ ಸತ್ಯವು ಇವುಗಳಿಗೆ ನಿಲುಕದು. ಅದನ್ನು ದೊರಕಿಸುವದರಲ್ಲಿ ಇವು ಸಹಾಯಭೂತವಾಗಬಹುದು. ಆದರೆ ಇವುಗಳಿಗೆಯೆ ಆ ಜ್ಞಾನವಾಗದು. ಯಾವ ಪ್ರಕಾರವಾಗಿ ಬಾಹ್ಯ ವಿಷಯುಗಳನ್ನು ಮನಸೇ ತಿಳಿದುಕೊಳ್ಳಬಲ್ಲದು ಹೊರತು ಇಂದ್ರಿಯಗಳು ತಿಳಿದುಕೊಳ್ಳಲಾರವೊ ಹಾಗೆ ಪರಮಾತ್ಮನನ್ನು ಆತ್ಮನೆ ತಿಳಿದುಕೊಳ್ಳಬಲ್ಲನು ಹೊರತು ಇಂದ್ರಿಯ ಮನಾದಿಗಳು ತಿಳಿದುಕೊಳ್ಳಲಾರವು. ಆ ಜ್ಞಾನವು ಪ್ರತ್ಯೇಕ ವ್ಯಕ್ತಿಯಲ್ಲಿರುವ ಪರಮಾತ್ಮನ ಅಂಶವಾದ ಶುದ್ಧಾತ್ಮನಿಗೆಯೆ ತಿಳಿಯುವದು ಸಾಧ್ಯವು. ತಾತ್ಪರ್ಯವೇನಂದರೆ, ಆತ್ಮನು ಆತ್ಮನಿಂದಲೆ ತಿಳಿಯುವನು, ದೇವರು ನಮ್ಮಲ್ಲಿಯ ದೇವಾಂಶದಿಂದಲೆ ತಿಳಿಯಲು ಸಾಧ್ಯನು. ನಮ್ಮಲ್ಲಿಯ ಶುದ್ಧ ಆತ್ಮವೆ ಪರಮಾತ್ಮನನ್ನು ಗುರುತಿಸಬಲ್ಲದು. ಉಪಾಧಿರಹಿತನೂ ನಿಷ್ಕಾಪನೂ ನಿಷ್ಕಾಮನೂ ಆಗಿರುವಾಗ ಆ ಸ್ಥಿತಿಯಲ್ಲಿ ಜೀವಾತ್ಮನಿಗೆ ಆದ ಪರಮಾತ್ಮನ ಗುರುತು, ದರ್ಶನ, ಭೆಟ್ಟಿ ಇದೇ ಸಾಕ್ಷಾತ್ಕಾರವೆನಿಸುವದು. ಇದು ಆಗುವ ವರೆಗೆ ನಿಜವಾದ ಆತ್ಮಜ್ಞಾನವಾದಂತೆ ಅಲ್ಲೇ ಅಲ್ಲ. ಇದು ಆಗದೆ ಸಾಧಕನಲ್ಲಿ ಪೂರ್ಣ ಕೃತಾರ್ಥತೆಯು ಎಂದೂ ನೆಲೆಗೊಳ್ಳದು. ಈ ಸಾಕ್ಷಾತ್ಕಾರವೆಂಬುದು ಇಷ್ಟ ಕಾಲಕ್ಕೆ ಇಂಥ ರೀತಿಯಲ್ಲಿ ಆಗುವದು ಎಂದು ಹೇಳಲಿಕ್ಕಾಗದು. ಸಾಧನವನ್ನು ಮಾಡುತ್ತಿರಲು ಒಮ್ಮೆಲೆ ಸ್ಫೂರ್ತಿಯಂತೆ ಈ ಸಾಕ್ಷಾತ್ಕಾರವಾಗುವದು. ಇದರ ನಿಯಮಗಳನ್ನು ಇನ್ನೂ ಯಾರೂ ಕಂಡಿಲ್ಲ ಮತ್ತು ಕಾಣುವದು ಶಕ್ಯವಿಲ್ಲ. ನಿಯಮ ಬಾಹ್ಯವಿರುವುದರಿಂದಲೆ ಗುರುಕರುಣೆಯಿಂದ, ಪರಮಾತ್ಮ ಕೃಪೆಯಿಂದ,

ಇಲ್ಲವೆ ಯದೃಚ್ಛೆಯಿಂದ ಸಾಕ್ಷಾತ್ಕಾರವು ಆಗುವದು ಎಂದು ಹೇಳುವರು. ಸಾಧನವು ಅವಶ್ಯವಿಲ್ಲ ಅಥವಾ ಜ್ಞಾನೇಂದ್ರಿಯಾದಿಗಳನ್ನು ಸಾಧನದಂತೆ ಉಪಯೋಗಿಸಬಾರದು, ಎಂದು ಇದರ ಅರ್ಥವಲ್ಲ. ಅರಸನು ಓಲಗಕ್ಕೆ ಬಂದು ಸಿಂಹಾಸನಾರೂಢನಾಗುವದು ಅವನ ಇಚ್ಛೆಯನ್ನೆ ಅವಲಂಬಿಸಿದ್ದರೂ ಸೇವಕರು ಓಲಗವನ್ನು ಸಿದ್ಧಗೊಳಿಸುವ ತಮ್ಮ ಕರ್ತವ್ಯವನ್ನು ಮಾಡುವದು ಅವಶ್ಯವಿದ್ದಂತೆ ಸಾಧನವೆಂಬುದು ಅವಶ್ಯವೆ ಇರುವದು. ಮೇಲಾಗಿ ಜೀವಾತ್ಮನು ಇಂದ್ರಿಯಾದಿಗಳಿಂದ ಕೂಡಿದವನಿರುವುದರಿಂದಲೂ ಮನುಷ್ಯನು ಜೀವಂತನಿರುವವರೆಗೆ ಸಾಕ್ಷಾತ್ಕಾರವನ್ನು ಇಂದ್ರಿಯಾದಿಗಳಲ್ಲೆಲ್ಲ ಅಳವಡಿಸುವದು ಅವಶ್ಯವಿರುವುದರಿಂದಲೂ ಅವುಗಳನ್ನು ಶುದ್ಧೀಕರಿಸುತ್ತಹೋಗಿ ಕೊನೆಗೆ ಪರಮಾತ್ಮನಲ್ಲಿ ಅವುಗಳನ್ನೆಲ್ಲ ಸಮರ್ಪಿಸುವದು ಅವಶ್ಯಕವಿರುವದು. ಈ ಕಾರ್ಯಕ್ಕೆ ಶುದ್ಧಬುದ್ಧಿ, ಪ್ರೇಮಭಾವಪೂರ್ಣ ಅಂತಃಕರಣ, ದೃಢಸಂಕಲ್ಪ ಇವು ಬೇಕೇಬೇಕು. ಇವು ಇದ್ದಾಕ್ಷಣಕ್ಕೆ ಪಾತ್ರ ಕಾರ್ಯವು ಆಯಿತೆಂದು ತಿಳಿಯಲಾಗದು. ಯಾಕಂದರೆ, ಆತ್ಮ ಸಾಕ್ಷಾತ್ಕಾರವು ಇವೆಲ್ಲವುಗಳಾಚೆಗಿನ ಆತ್ಮಭೂಮಿಕೆಯಲ್ಲಿಯೆ ಆಗುವದು. ಇನ್ನು ಕೇವಲ ಒಮ್ಮೆ ಸತ್ಯದರ್ಶನವನ್ನು ಮಾಡಿಕೊಂಡು ಸುಮ್ಮನೆ ಕೂಡುವದು ಸಾಕ್ಷಾತ್ಕಾರಿಯ ಧ್ಯೇಯವಲ್ಲ. ಅದನ್ನು ತನ್ನಲ್ಲಿ ನಿತ್ಯಗೊಳಿಸಬೇಕೆಂಬುದು, ಅದರ ದಿವ್ಯಪ್ರಕಾಶದಲ್ಲಿ ತಾನು ಯಾವಾಗಲೂ ಇರಬೇಕೆಂಬುದು, ಅದರಿಂದ ಪ್ರೇರಿತನಾಗಿಯೆ ವ್ಯವಹರಿಸಬೇಕೆಂಬುದು ಅವನ ಮುಖ್ಯ ಗುರಿಯು. ಆತ್ಮಸಾಕ್ಷಾತ್ಕಾರವಾದೊಡನೆ ಅದರ ಪ್ರಕಾಶವು ನಡುಮನೆಯಲ್ಲಿ ಹಚ್ಚಿದ ದೀಪದ ಬೇಳಕಿನಂತೆ ಸಾಧಕನ ಎಲ್ಲ ಇಂದ್ರಿಯಗಳನ್ನೂ ಅವನ ಇಡೀ ಜೀವನವನ್ನೂ ಬೆಳಗದೆ ಇರದು. ಸಾಕ್ಷಾತ್ಕಾರದಿಂದ ಸಕಲೇಂದ್ರಿಯಗಳ ತೃಷ್ಣೆಯು ಅಲ್ಲಿಯೆ ಹಿಂಗಿಹೋಗುವದು. ಅವರ್ಣನೀಯವಾದ ಸಂಪೂರ್ಣ ಸಂತುಷ್ಟಿಯೂ ಶಾಂತಿಯೂ ಸಾಕ್ಷಾತ್ಕಾರದ ಮುಖ್ಯ ಪರಿಣಾಮಗಳಿರುವವು. ಪರಾತ್ಪರನ ದರ್ಶನದಿಂದ ವಿಷಯುಗಳಲ್ಲಿಯ ರಸವು ಒಣಗಿಹೋಗುವದು (೨.೫೯) ಎಂದು ಗೀತೆಯ ವಚನವಿರುವದು. ಸಾಕ್ಷಾತ್ಕಾರವಾದವು ಸಾಧನಗಳ ಬಗ್ಗೆ ಯಾವ ಹಟವನ್ನೂ ಹಿಡಿಯುವದಿಲ್ಲ. ಬೇಕಾದರೆ ತೀವ್ರ ವಿಮರ್ಶಕಬುದ್ಧಿಯು ಅವಶ್ಯವಿರುವ ಜ್ಞಾನಮಾರ್ಗದಿಂದ ಸಾಧಕನು ನಡೆಯಲಿ, ಶ್ರದ್ಧೆ ಪ್ರೇಮಭಾವನೆಗಳು ಪ್ರಧಾನವಿದ್ದ ಭಕ್ತಿಪಥದಿಂದ ಸಾಗಲಿ, ಚಿತ್ತದ ಏಕಾಗ್ರತೆಯೆ ಮುಖ್ಯವಿರುವ ಧ್ಯಾನದ ಹಾದಿಯಿಂದ ಹೋಗಲಿ, ಕ್ರಿಯಾಶಕ್ತಿಯು

ಬೇಕಾಗುವ ಕರ್ಮಯೋಗವನ್ನಾಚರಿಸಲಿ. ಕೊನೆಗೆ ಅವನು ಮುಟ್ಟತಕ್ಕ ಮೆಟ್ಟನ್ನು ಕಂಡರಾಯಿತು. ಹೀಗೆ ಇರುವುದರಿಂದ ಸಾಕ್ಷಾತ್ಕಾರಿಗಳಲ್ಲಿ ಹಲವರು ಅತ್ಯಂತ ಸೂಕ್ಷ್ಮ ತತ್ವಜ್ಞಾನಿಗಳಿರಬಹುದು, ಕೆಲವರು ಉತ್ಕಟ ಭಕ್ತರಿರಬಹುದು, ಅನ್ಯರು ಯೋಗಿಗಳಿರಬಹುದು, ಮತ್ತೆ ಹಲವರು ಶ್ರೇಷ್ಠ ಕರ್ಮಯೋಗಿಗಳಿರಬಹುದು, ಅಥವಾ ಹಲವರಲ್ಲಿ ಇವೆಲ್ಲ ಶಕ್ತಿಗಳು ಕೂಡಿ ಇರಬಹುದು. ಅದೇ ರೀತಿ ಹಲವರು ಬ್ರಹ್ಮಚಾರಿಗಳಿರಬಹುದು, ಕೆಲವರು ಸಂಸಾರಿಗಳಿರಬಹುದು, ಹಲವರು ಸನ್ಯಾಸಿಗಳಿರಬಹುದು, ಕೆಲವರು ವ್ಯವಹಾರಚತುರರಿರಬಹುದು. ಅವರು ಏನೇ ಮಾಡುತ್ತಿದ್ದರೂ ಅವರ ಜೀವನವು ಶುದ್ಧವೂ ನೀತಿಪೂರ್ಣವೂ ಆದರ್ಶಪ್ರಾಯವೂ ಇರುವದು. ಅವರು ಸರ್ವಸಂಶಯವಿನಾಶಕವಾದ ಸತ್ಯದ ಪ್ರತ್ಯಕ್ಷ ಅನುಭವವೆ ಎಲ್ಲಕ್ಕೂ ಹೆಚ್ಚಿನದು, ಎಂದು ಪ್ರತಿಪಾದಿಸುವವರಾದುದರಿಂದ ಮತ್ತು ಅದನ್ನು ಅಳವಡಿಸುವುದೆ ತಮ್ಮ ಜೀವನದ ಕರ್ತವ್ಯ ಸರ್ವಸ್ವವೆಂದು ತಿಳಿದಿರುವುದರಿಂದ ಅವರು ಸಾಕ್ಷಾತ್ಕಾರವಾದಿಗಳು, ಅನುಭವವಾದಿಗಳು ಎಂದೆನಿಸುವರು. ಸಾಕ್ಷಾತ್ಕಾರವಾದಿಗಳು ಸಾಧನ ಮಾರ್ಗಗಳನ್ನು ಕುರಿತು ಯಾವ ಹಟವನ್ನೂ ಹಿಡಿಯದಿರುವಂತೆ ಪರಾತ್ಪರ ಸತ್ಯವು ದ್ವೈತವೊ ಅದ್ವೈತವೊ, ದೇವರು ಸಗುಣನೊ ನಿರ್ಗುಣನೊ, ಸಾಕಾರನೊ ನಿರಾಕಾರನೊ, ಪುರುಷವಿಧನೊ ಅಲ್ಲವೊ ಈ ಮುಂತಾದ ಪ್ರಶ್ನೆಗಳ ಬಗ್ಗೆಯೂ ಅವರು ಹಟವನ್ನು ತಾಳುವುದಿಲ್ಲ. ಆದುದರಿಂದ ಈ ಎಲ್ಲ ಬಗೆಯ ಮತಗಳುಳ್ಳವರಲ್ಲಿ ನಮಗೆ ಸಾಕ್ಷಾತ್ಕಾರಿಗಳು ಸಿಕ್ಕುವರು. ಯಾಕಂದರೆ, ಬುದ್ಧಿ ಹಾಗೂ ಭಾವನೆಗಳ ಭೂಮಿಯಲ್ಲಿಯೆ ಈ ವಾದಗಳ ಮತ್ತು ಸಂಶಯಗಳ ಜಲ್ಲಾಟವು ನಡೆಯುವದು. ಸಾಕ್ಷಾತ್ಕಾರವು ಇವುಗಳ ಸಮನ್ವಯಸ್ಥಾನವಾದ ಆತ್ಮಭೂಮಿಕೆಯಲ್ಲಿಯ ದರ್ಶನವಿರುವುದರಿಂದ ಅಲ್ಲಿ ಇವುಗಳ ವಿರೋಧವು ಮಾಸಿಹೋಗುವದು. ಇನ್ನು ಅಲ್ಲಿ ಆದ ಅನುಭವವನ್ನು ಶಬ್ದಗಳಲ್ಲಿ ವ್ಯಕ್ತಮಾಡುವಾಗ ತಮ್ಮ ತಮ್ಮ ಸಾಧನ ಮಾರ್ಗವನ್ನನುಸರಿಸಿ ಅಥವಾ ಆ ಕನ್ನಡಕಗಳನ್ನು ಹಾಕಿಕೊಂಡೇ ಸಾಧಕರು ಅದನ್ನು ವಿವೇಚಿಸಬಹುದು. ಆದರೆ ಅದು ಪೂರ್ವಸಂಸ್ಕಾರಗಳಂತೆ ಮಾಡಿದ ಸಾಕ್ಷಾತ್ಕಾರದ ಅರ್ಥವು ಹೊರತು ಪ್ರತ್ಯಕ್ಷ ಸಾಕ್ಷಾತ್ಕಾರದ ವರ್ಣನೆಯಲ್ಲ. ನಿಜವಾದ ಸಾಕ್ಷಾತ್ಕಾರವು ಅವರ್ಣನೀಯವೆ ಇರುವದು. ಅದು ದ್ವಂದ್ವಗಳಾಚೆಗಿನದು, ಸರ್ವಧರ್ಮಗಳ, ಪಕ್ಷಪಂಗಡಗಳ, ಮತ ಪಂಥಗಳ ಸಮನ್ವಯ ಭೂಮಿಯದು. ದೇಹಧಾರಿ ಮನುಷ್ಯನ ಆತ್ಮನು

ಜೀವ ಶಿವ, ದೇಹ ದೇವ, ಜಡ ಚೇತನ, ಇಹಪರ, ಎಂಬ ಎರಡೂ ಲೋಕಗಳಲ್ಲಿ ವಿಹರಿಸಬಲ್ಲವನಾದುದರಿಂದ ಮೇಲೆ ಹೇಳಿದ ಪರಸ್ಪರ ವಿರೋಧಿ ವಿಚಾರಗಳು ಮನುಷ್ಯನನ್ನು ಸಂಶಯವಲ್ಲಿ ನೂಕುವವು. ಆದರೆ ಆತ್ಯಂತಿಕ ಸಾಕ್ಷಾತ್ಕಾರವು ಈ ಎರಡೂ ಲೋಕಗಳನ್ನೂ ಎಲ್ಲ ದ್ವಂದ್ವಗಳನ್ನೂ ಸಾಕ್ಷಿಯಂತೆ ನೋಡುವ ಸಾಮರ್ಥ್ಯವನ್ನು ಕೊಡುವುದರಿಂದ ಸಾಕ್ಷಾತ್ಕಾರಿಯು ಈ ಎಲ್ಲ ವಾದಗಳನ್ನು ದಾಟುವನು.

೧೩೬. ಧರ್ಮಜಾಗ್ರತಿಯನ್ನುಂಟುಮಾಡುವ ಗುತ್ತಿಗೆಯು ಧರ್ಮಭೂಮಿಯಾದ ಈ ದೇಶದಲ್ಲಿ ಯಾವ ವಿಶಿಷ್ಟ ಭಾಗಕ್ಕೂ ಕೊಡಲ್ಪಟ್ಟಿಲ್ಲವೆಂಬುದು ನಿಜವು. ಆದರೂ ಇಡೀ ಭರತಖಂಡದ ತತ್ವವಿಚಾರಗಳಿಗೆ ವಿಶಿಷ್ಟ ರೂಪವನ್ನು ಕೊಡುವ ಸಾಮರ್ಥ್ಯವುಳ್ಳ ಶಂಕರ, ರಾಮಾನುಜ, ಮಧ್ವ, ಸಾಯಣ, ಮಾಧವ ಮುಂತಾದವರು ದ್ರಾವಿಡ ಪ್ರಾಂತಗಳಲ್ಲಿಯೆ ಆಗಿಹೋದರೆಂಬುದು ಅವುಗಳಿಗೆ ಭೂಷಣಾಸ್ಪದವಾಗಿದೆ. ಇಲ್ಲಿ ನಾವು ಮುಖ್ಯವಾಗಿ ದಕ್ಷಿಣದಲ್ಲಿಯು ಮತ್ತು ಕರ್ನಾಟಕದಲ್ಲಿಯು ಸಾಕ್ಷಾತ್ಕಾರದ ಪರಂಪರೆಯನ್ನು ನೋಡತಕ್ಕದ್ದಿದೆ. ಈ ವಿಷಯದಲ್ಲಿ ತಮಿಳುನಾಡಿಗೆ ಅಗ್ರಸ್ಥಾನವನ್ನು ಕೊಡಬೇಕಾಗುವದು. ಕ್ರಿಸ್ತೀಶಕದ ಆರಂಭದಿಂದ ಅಲ್ಲಿ ಆಳ್ವರ್ ಮತ್ತು ಅರಿವರ್ ಎಂಬ ಎರಡು ಬಗೆಯ ಸಾಕ್ಷಾತ್ಕಾರೀ ಸತ್ಪುರುಷರು ಪ್ರಸಿದ್ಧರಿರುವರು. ಅವರಲ್ಲಿ, ಆಳ್ವರ್ ಅಂದರೆ ಮುಳುಗುವವರು ಅಥವಾ ತಲ್ಲೀನರಾಗುವವರು ಅರ್ಥಾತ್ ತತ್ವತಸ್ಮಯರು, ಆಳ್ವರ್ ಅಂದರೆ ಆಳುವವರು (ಶ್ರೀ ರಾಮಾನುಜ ಚರಿತ್ರ–ಬಂಗಾಲೀ ಭಾಷೆಯಲ್ಲಿ ಶ್ರೀ ಕೃಷ್ಣಾನಂದ ಪ್ರಣೀತ) ಎಂದು ಹಲವರು ಮತ್ತು ಸಮ್ರುರು (ಕಿಟ್ಟೆಲ್ ನಿಘಂಟು) ಎಂದು ಹಲವರು ಅರ್ಥಮಾಡಿರುವರು. ಆದರೆ ಅವುಗಳಿಗಿಂತ ನಾವು ಮಾಡಿದ ಅರ್ಥವೆ ಯೋಗ್ಯವು ಮತ್ತು ಸಮಂಜಸವಿರುವದು. ಇವರು ವೈಷ್ಣವರು. ಅರಿವರ್, ಅಂದರೆ ಅರಿಯುವವರು, ಜ್ಞಾನಿಗಳು, ಇವರು ಶೈವರು. ವಿಷ್ಣು ಮತ್ತು ಶಿವ ಈ ಅವರ ಎರಡು ಬೇರೆ ಬೇರೆ ಇಷ್ಟದೇವತೆಗಳ ಮೂಲಕ ಅವರಲ್ಲಿ ಹೀಗೆ ಎರಡು ಬಗೆಗಳು ಇದ್ದದ್ದು ನಮಗೆ ಕಂಡು ಬರುವದು. ಅವರಲ್ಲಿ ನಮ್ಮಾಳ್ವರ್ ಇವರು (ಕ್ರಿ. ಶ. ೮–೧೦ ಶತಕ) ಬರೆದ ಕೆಲವು ಧರ್ಮಪ್ರಬಂಧಗಳಿಗೆ 'ದ್ರಾವಿಡ ವೇದ' ಎಂಬ ಪ್ರೌಢ ಹೆಸರು ಇರುವದು ಮತ್ತು ಅವು ಈಗ್ಯೂ ಪೂಜ್ಯ ಹಾಗೂ ಅನುಕರಣೀಯವಿರುವವು. ಕ್ರಿ. ಶ. ೧೦೦೦ ಸುಮಾರಿಗೆ ಆದ ನಾಥಮುನಿಯು ೪೦೦೦ ಪ್ರಬಂಧಗಳನ್ನು ಸಂಗ್ರಹಿಸಿದನು. ಹನ್ನೆರಡನೆಯ ಶತಮಾನದಲ್ಲಿ (ಕ್ರಿ. ಶ.

೧೦೫೦–೧೧೩೭) ಆಗಿಹೋದ ರಾಮಾನುಜಾಚಾರ್ಯರ ಭಕ್ತಿಮಾರ್ಗದ ಪರಂಪರೆಯು ಈ ಪ್ರಾಚೀನ ಆಳ್ವಾರರವರೆಗೆ ಹೋಗಿ ಮುಟ್ಟುವದು. ಯಾಕಂದರೆ ಅವನು ನಾಥಮುನಿಯ ಮೊಮ್ಮಗನಾದ ಯಮುನಾಚಾರ್ಯನ ಗುರುಪರಂಪರೆಯಲ್ಲಿಯವನು. ಭಕ್ತಿಮಾರ್ಗದ ಒಗ್ಗಿ ಪದ್ಮ ಪುರಾಣದಲ್ಲಿ 'ಉತ್ಪನ್ನೋ ದ್ರಾವಿಡೇ ದೇಶೇ ವೃದ್ಧಿಂ ಕರ್ನಾಟಕೇ ಗತಾ,' ಎಂಬುದೊಂದು ಉಲ್ಲೇಖವಿರುವದು. ಅದು ಶಬ್ದಶಃ ನಿಜವಿರಲಿ ಬಿಡಲಿ. ಅದು ಜನರಲ್ಲಿ ರೂಢವಿದ್ದ ಭಕ್ತಿಮಾರ್ಗ ಪರಂಪರೆಯ ಕಲ್ಪನೆಯನ್ನು ಕೆಲಮಟ್ಟಿಗಾದರೂ ಸೂಚಿಸುವದು, ಎಂದು ಹೇಳಬಹುದು. ಕರ್ನಾಟಕದಲ್ಲಿ ವಿಷ್ಣುದೇವತಾಪರವಾದ ಸಾಕ್ಷಾತ್ಕಾರಪ್ರಧಾನವುಳ್ಳ ಭಕ್ತಿಮಾರ್ಗವು ಮಧ್ವಾಚಾರ್ಯರಿಂದ ಅಂದರೆ ಹನ್ನೆರಡನೆಯ ಶತಮಾನದಿಂದಲೆ ಪ್ರಮುಖವಾಗಿ ಮುಂಪೆ ಬಂದಿತು. ಅದಕ್ಕೂ ಮೊದಲು ಅಲ್ಲಿ ಸಾಕ್ಷಾತ್ಕಾರಿಗಳಾರೂ ಆಗಿಲ್ಲವೆಂದು ಇದರ ಅರ್ಥವಲ್ಲ. ಅವರ ಯಥಾಸ್ಥಿತ ಉಲ್ಲೇಖವು ಇದು ವರೆಗೆ ಸಿಕ್ಕಿಲ್ಲ ಇಷ್ಟೇ ಇದರ ಅರ್ಥವು. ಮಧ್ವಾಚಾರ್ಯರು ಊರಿದ ಬೀಜವು ಮಾತ್ರ ಮುಂದೆ ದಾಸಕೂಟವೆಂಬ ಪ್ರಚಂಡ ವೃಕ್ಷವಾಗಿ, ಆರ್ತಾದಿ ಚತುರ್ವಿಧ ಭಕ್ತರಿಗೆ ಆಶ್ರಯವನ್ನು ಕೊಟ್ಟು ಸಂತೈಸಿತು. ಅತ್ತ ಶಿವನೇ ಪರದೈವತವೆಂದು ತಿಳಿದುಕೊಂಡು ಶೈವಾಗಮಗಳನ್ನವಲಂಬಿಸಿದ ಅರಿವರ್ ಎಂಬ ತಮಿಳು ಸಾಕ್ಷಾತ್ಕಾರಿಗಳು ಮೊದಲುಮಾಡಿದ ಮಾರ್ಗದ ವಟವೃಕ್ಷವು ಆಂಧ್ರದೇಶದಲ್ಲಿ ಹಬ್ಬಿ ಕರ್ನಾಟಕದಲ್ಲಿಯೂ ಬೇರುಬಿಟ್ಟಿತು. ಅಲ್ಲಮಪ್ರಭು ಬಸವೇಶ್ವರಾದಿ ಶರಣರ ಕಾಲಕ್ಕೆ ಮತ್ತು ಮುಂದೆ ಆ ಮಾರ್ಗವು ಇಡೀ ಕರ್ನಾಟಕವನ್ನು ವ್ಯಾಪಿಸಿಬಿಟ್ಟಿತು. ಈ ರೀತಿ, ವಚನಕಾರರು ತ್ರಿಷಷ್ಟಿ ಪುರಾತನರೆಂದು ಪ್ರಸಿದ್ಧರಿರುವ ತಮಿಳು ಮತ್ತು ಆಂಧ್ರ ಸಾಧುಸಂತರ ಪಶ್ಚಾತ್ ಅವರ ಪರಂಪರೆಯಲ್ಲಿಯೆ ಅದರೆಂದು ಹೇಳಬಹುದು.

೧೦೭. ಇನ್ನು ಸ್ವಂತಕ್ಕೆ ಆದ ಸಾಕ್ಷಾತ್ಕಾರವೆ ಸತ್ಯದ ಒರೆಗಲ್ಲು ಎಂದು ನಿಶ್ಚಯಿಸಿ ಅದನ್ನು ಪಡೆಯಲು ತಮ್ಮ ಅತ್ಯುತ್ಕಟ ಸಂಕಲ್ಪವೊಂದನ್ನೆ ಮುಖ್ಯ ಮೂಲಧನವನ್ನಾಗಿಟ್ಟುಕೊಂಡು ಸತ್ಯಸಾಮ್ರಾಜ್ಯದಲ್ಲಿ ಅಡಿಯಿಡಲುದ್ಯುಕ್ತರಾದ ಸಾಕ್ಷಾತ್ಕಾರವಾದಿಗಳು ಜೇರೆ ದೇಶಗಳಲ್ಲಿಯೂ ಅನ್ಯ ಧರ್ಮಪಂಥಗಳಲ್ಲಿಯೂ ಆಗಿಹೋಗಿರುವರು. ದೇವರು ಬುದ್ಧಿಗ್ರಾಹ್ಯನಲ್ಲ, ಶ್ರುತಿಗ್ರಾಹ್ಯನಲ್ಲ, ಗ್ರಂಥಗ್ರಾಹ್ಯನಲ್ಲ. ಅವನು ಇವೆಲ್ಲವುಗಳಾಚೆಗಿದ್ದು ಕೇವಲ ಆತ್ಮಗ್ರಾಹ್ಯನು ಮತ್ತು ವಾಙ್ಮನಾತೀತನಿರುವುದರಿಂದ

ಅವರ್ಣನೀಯನು, ಎಂದು ಉಪನಿಷತ್ಕಾರರು ಉಸುರಿದ ಸನಾತನ ಸತ್ಯವನ್ನು ಪ್ಲೇಟೋ, ಪ್ಲೋಟಿನಸ್ ಮುಂತಾದವರೂ ಪ್ರಾಚೀನ ಕಾಲದಲ್ಲಿ ಯುರೋಪಖಂಡದಲ್ಲಿ ಗುರುತಿಸಿದ್ದರು. ಇದೇ ಮಾತನ್ನು ಹದಿನಾರನೇ ಶತಮಾನದ ಕಾಂಟ ಎಂಬ ಜರ್ಮನ್ ತತ್ವಜ್ಞನು , ನೇತಿ ' ಎಂಬ ರೀತಿಯಲ್ಲಿ ಸತ್ಯವು (the thing in itself) ಇಂದ್ರಿಯ ಮನ ಬುದ್ಧಿಗಳಿಗೆ ಗೋಚರವಾಗದು, ಆ ಸತ್ಯದ ಬರಿಯ ಬಾಹ್ಯತೋರಿಕೆಯಷ್ಟೆ (the thing in appearance) ನಮಗೆ ಗೋಚರವಾಗಬಲ್ಲದು, ಎಂದು ಹೇಳಿ ಅಲ್ಲಿಗೆ ಸುಮ್ಮನಾಗಿರುವನು. ಆದರೆ ಯುರೋಪಖಂಡದಲ್ಲಿ ಈ ಶತಮಾನದ ಆದಿಯಿಂದ ಸಾಕ್ಷಾತ್ಕಾರದ ಸತ್ಯತೆಗೆ ಹೆಚ್ಚು ಮಹತ್ವವು ಬರತೊಡಗಿದೆ. ಆತ್ಯಂತಿಕ ಸತ್ಯವು ಇಂದ್ರಿಯಾದಿಗಳಿಗೆ ಗೋಚರವಾಗದಿದ್ದರೆ ಅದು ನಮಗೆ ಹೇಗೆ ಗೋಚರವಾಗಬಲ್ಲದು, ಅಥವಾ ಅದು ಗೋಚರವಾಗಬೇಕೆಂಬ ಗೋಜಿಗೆಯೆ ನಾವು ಹೋಗುವದನ್ನು ಬಿಟ್ಟು ಬಿಡುವಷ್ಟು ಅದು ನಮ್ಮಿಂದ ದೂರವಿರುವದೊ ? ಈ ಪ್ರಶ್ನೆಗೆ, ಆಧುನಿಕ ಪಾಶ್ಚಾತ್ಯ ತತ್ವಜ್ಞರಲ್ಲಿ ಅಗ್ರಣಿಗಳೆಂದೆನಿಸಿಕೊಂಡವರನೇಕರು ಆಶಾಜನಕವಾದ ಉತ್ತರವನ್ನು ಕೊಟ್ಟಿರುವರು. ಅಮೇರಿಕೆಯ ಪ್ರಸಿದ್ಧ ತತ್ವಜ್ಞನೂ ಮಾನಸಶಾಸ್ತ್ರವೇತ್ತನೂ ಆದ ಪ್ರೊ. ವುಯಿಲ್ಯಮ್ ಜೇಮ್ಸ್ (Prof William James) ಇವನು ತನ್ನ 'ದಿ ವುಯಿಲ್ ಟು ಬಿಲೀವ್' (The Will to Believe) ಎಂಬ ಮುಂತಾದ ಗ್ರಂಥಗಳಲ್ಲಿ ಸಾಕ್ಷಾತ್ಕಾರವೆಂಬುದು ಸತ್ಯವಿರುವದು, ಪಾರಮಾರ್ಥಿಕ ಸತ್ಯವನ್ನು ಸಾಕ್ಷಾತ್ಕಾರದಿಂದಲೆ ಅನುಭವಿಸುವದು ಸಾಧ್ಯವು, ಆ ಅನುಭವವು ನಮ್ಮ ಅಂತರದಲ್ಲಿರುವ ಆತ್ಮನಿಗೆ ಆಗುವದು, ಒಮ್ಮೆ ಆ ಸಾಕ್ಷಾತ್ಕಾರವಾಯಿತೆಂದರೆ ಅದರ ಪ್ರಕಾಶವು ಸಾಧಕನ ಜೀವನಸರ್ವಸ್ವವನ್ನು ತುಂಬಿಬಿಡುವದು, ಎಂಬ ಮುಂತಾದ ಮಾತುಗಳನ್ನು ಹೇಳಿದ್ದಾನೆ. ಇದಲ್ಲದೆ 'ಧಾರ್ಮಿಕ ಅನುಭವಗಳ ವಿವಿಧಬಗೆಗಳು' (Varieties of Religious Experience) ಎಂಬ ತನ್ನ ಗ್ರಂಥದಲ್ಲಿ ಅವನು ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಸಾಕ್ಷಾತ್ಕಾರಿಗಳ ಪಾರಮಾರ್ಥಿಕ ಅಥವಾ ಆಧ್ಯಾತ್ಮಿಕ ಅನುಭವಗಳನ್ನು ವಿಮರ್ಶಾತ್ಮಕದೃಷ್ಟಿಯಿಂದ ಕೊಟ್ಟಿರುವನು. ಮಿಸ್ ಎವ್ಹಲಿನ್ ಅಂಡರ ಹಿಲ್ (Miss. Evelyn Underhill) ಎಂಬ ವಿದುಷಿಯು ಸಾಕ್ಷಾತ್ಕಾರವಾದವನ್ನು ಕುರಿತು ಒಂದು ಸ್ವತಂತ್ರ ಗ್ರಂಥವನ್ನೆ ಬರೆದಿರುವಳು ಮತ್ತು ಅದರಲ್ಲಿ ಈ ವಾದವೆಂದರೇನು ಮುಂತಾದ ವಿಷಯಗಳನ್ನು

ಚರ್ಚಿಸಿ ಅನೇಕ ಪಾಶ್ಚಾತ್ಯ ಸಾಧುಸತ್ಪುರುಷರ ಅನುಭವಗಳನ್ನು ಉದಾಹರಿಸಿರುವಳು. ಇಂಗ್ಲಂಡದ ಪ್ರಸಿದ್ಧ ಲೇಖಕನಾದ ದೀನ ಇಂಗ (Dean Inge) ಇವನು ದೇವರನ್ನು ತಿಳಿದುಕೊಳ್ಳಲಿಕ್ಕೆ ಬುದ್ಧಿ ಮುಂತಾದವುಗಳಾಜೆಗಿನ ಶಕ್ತಿಯು ಅವಶ್ಯವಿಲ್ಲ, ಎಂದು ಒಮ್ಮೆ ಪ್ರತಿಪಾದಿಸಿದ್ದರೂ ಇನ್ನೊಮ್ಮೆ ಅವನೇ ದೇವರ ಅನುಭವವು ನಮ್ಮಲ್ಲಿ ಗೂಢವಾಗಿರುವ ದೇವಸದೃಶ ಅಂಶಕ್ಕೆಯೆ (deiform) ಆಗುವದು, ಎಂದು ಹೇಳಿರುವನು. ಹೇನ್ರಿ ಬರ್ಗಸನ್ (Henri Bergson) ಎಂಬ ಫ್ರೆಂಚ ತತ್ವಜ್ಞನೂ ಅದಿಸತ್ಯದ ಅರಿವು ಬುದ್ಧಿಗೆ ಆಗದು, ಚಿತ್‌ಶಕ್ತಿಯು ಶುದ್ಧ, ನಿರಪೇಕ್ಷ, ಸ್ಥಿರ, ಮತ್ತು ಏಕಾಗ್ರವಾದಾಗ ಮಾತ್ರ ಅದರಲ್ಲಿ ಸತ್ಯದ ಪ್ರತಿಬಿಂಬವು ಬೀಳಬಲ್ಲದು, ಎಂದು ಪ್ರತಿಪಾದಿಸಿರುವನು. ಪ್ರೊ. ರಾಧಾಕೃಷ್ಣನ್ ಎಂಬ ಪ್ರಸಿದ್ಧ ಹಿಂದೀ ಲೇಖಕನು ಇತ್ತೀಚೆಗಿನ ಪಾಶ್ಚಾತ್ಯ ತತ್ವಜ್ಞಾನದ ಮೇಲೆ ಸಾಕ್ಷಾತ್ಕಾರ ಮಾರ್ಗದ ಪ್ರಭಾವವು ಹೇಗೆ ಬಿದ್ದಿರುವದು ಎಂಬುದನ್ನು ತನ್ನ 'ರೇನ ಆಫ್ ರಿಲಿಜನ್ ಇನ್ ಕಾಂಟೆಂಪರರಿ ಫಿಲಾಸಫಿ' (Reign of Religon in contemporary Philosophy) ಎಂಬ ಗ್ರಂಥದಲ್ಲಿ ಬರೆದಿರುವನು. 'ಸ್ಫೂರ್ತಿಯೆಂಬ ಜ್ಞಾನಶಕ್ತಿಯು ಬುದ್ಧಿಯಾಜೆಗಿದ್ದಾಕ್ಷಣಕ್ಕೆ ಅದು ಬುದ್ಧಿಗೆ ವಿರೋಧಿಯಿರುವದೆಂದು ಯಾರೂ ತಿಳಿಯಕೂಡದು. ಸ್ಫೂರ್ತಿಯು ಬುದ್ಧಿಗೆ ಮುಕುಟಪ್ರಾಯವು. ಅದು ಬುದ್ಧಿಗಿಂತ ಆಳವಾದ, ಬುದ್ಧಿಗಿಂತ ಆಜೆಗಿನ ಅನುಭವವು. ಈ ಸ್ಫೂರ್ತ ಅನುಭವವು ನಮ್ಮ ವಿಕಾಸಮಂದಿರದ ಶಿಖರದಂತೆ ಕಂಗೊಳಿಸುವದು, ಬಾಹ್ಯ ವಿಶ್ವದಲ್ಲಿ, ಜಲಸ್ಥಲಆಕಾಶಗಳಲ್ಲಿ ಎಂದೂ ತೋರದ ದಿವ್ಯಪ್ರಕಾಶವಿದು,' (ರೇನ ಆಫ್ ರಿಲಿಜನ್ ಇನ್ ಕಾಂಟೆಂಪರರಿ ಫಿಲಾಸಫಿ – Reign of Religion in Contemporary Philosophy), ಎಂದು ಸಾಕ್ಷಾತ್ಕಾರಶಕ್ತಿಯನ್ನು ಸ್ವತಃ ಪ್ರೊ. ರಾಧಾಕೃಷ್ಣನ್ ಇವನು ವರ್ಣಿಸಿರುವನು. ಸಾಕಷ್ಟು ಯತ್ನಮಾಡಿದರೆ ಈ ಶಕ್ತಿಯನ್ನು ಎಲ್ಲರೂ ಪಡೆಯಬಹುದು ಎಂದು ಅವನು ಆಶ್ವಾಸನವನ್ನೂ ಕೊಟ್ಟಿರುವನು. '..... ಆತ್ಮದೃಷ್ಟಿಯಿಂದ ನೋಡಿದರೆ ಈ ವಿಶ್ವವು ಒಂದು ಛಾಯೆಯಂತೆ ತೋರುವದು. ಆತ್ಮಸೂರ್ಯನಿಂದ ಪ್ರಕಾಶಿತವಾದ ಆ ದಿವ್ಯಸ್ಥಾನದಿಂದ ಅಂದರೆ ಆತ್ಮಸ್ಥಿತಿಯಿಂದ ನೋಡಿದರೆ ಇದೆಲ್ಲವು ಸತ್ಯದ ಕೇವಲ ಶಾಂತವಾದ ಪ್ರತಿಬಿಂಬದಂತೆ ಪ್ರತೀತವಾಗುವದು,' (ಫಿಲಾಸಫೀ ಆಫ್ ರಿಲಿಜನ್ – Philosophy of Religion i. 3) ಎಂದು ಪ್ರಸಿದ್ಧ ಜರ್ಮನ್ ತತ್ವಜ್ಞನಾದ

ಹೆಗೆಲ್ (Hegel) ಇವನ ಅಂಬೋಣವಿರುವದು. ಸಾಕ್ಷಾತ್ಕಾರವೆ ಸತ್ಯದ ಕೊನೆಯ ಒರೆಗಲ್ಲು ಎಂಬುದನ್ನು ಒತ್ತಿ ಹೇಳುವಾಗ, 'ಸಾಕ್ಷಾತ್ಕಾರದಿಂದ ಪ್ರತೀತವಾಗುವ ಸತ್ಯಕ್ಕಿಂತ ಹೆಚ್ಚು ಪ್ರತ್ಯಕ್ಷ ಸತ್ಯವನ್ನು ನಾನು ಕಾಣಲಿಚ್ಛಿಸುವೆನು, ಎಂದು ಅನ್ನುವವನಿಗೆ, ತನಗೆ ಏನು ಬೇಕಾಗಿರುವದು ಇದರ ಎಚ್ಚರವೆ ಇಲ್ಲ!' (ಅಪೀಯರನ್ಸ ಆ್ಯಂಡ ರಿಯಾಲಿಟಿ– (Appearance and Reality–P. 449), ಎಂದು ಬ್ರ್ಯಾಡಲೇ (Bradley) ಎಂಬ ಆಂಗ್ಲ ತತ್ವಜ್ಞನು ಸಾಕ್ಷಾತ್ಕಾರದ ಮಹತ್ವವು ಯಾರಿಗೆ ಗೊತ್ತಿಲ್ಲವೊ ಅವರ ಜೇಷ್ಟೆ ಮಾಡಿರುವನು. 'ಸಾಕ್ಷಾತ್ಕಾರವಾದವು ಅತ್ಯಂತ ಶಾಸ್ತ್ರಶುದ್ಧ (Scientific) ಧರ್ಮವು,' ಎಂದು ದೀನ ಇಂಗ (Dean Inge) ಇವನು ಪ್ರತಿಪಾದಿಸಿರುವನು. 'ನಮ್ಮ ಬುದ್ಧಿಯಲ್ಲದೆ, ಅದನ್ನುಳಿದು ಅದರಾಜೆಗೆ, ತರ್ಕದ ಸಹಾಯವಿಲ್ಲದೆ, ಅದೇಕೆ ಎಷ್ಟೋ ಸಾರೆ ಯಾವ ಬಗೆಯ ಶಿಕ್ಷಣಸಂಸ್ಕಾರಗಳೂ ಇಲ್ಲದೆ, ವಿವಿಧ ಶಕ್ತಿಗಳ ಗೊಂದಲದಿಂದ ಮುಸುಕಿಟ್ಟಿರುವ ಈ ವಿಶ್ವದ ಸತ್ಯಾರ್ಥವನ್ನೂ ಈ ಶಕ್ತಿಗಳ ಗುರುತ್ವಮಧ್ಯವನ್ನೂ ಒಮ್ಮೆಲೆ ಗುರುತಿಸುವ ಶಕ್ತಿಯೊಂದು, ಆತ್ಮದೃಷ್ಟಿಯೆಂಬುದೊಂದು (Soul-Sight) ಮನುಷ್ಯನಲ್ಲಿದೆ,' ಸ್ಪೆಸಿಮೆನ್ ಡೇಜ್ ಆ್ಯಂಡ ಕಲೆಕ್ಶನ್ಸ– (Specimen Days and Collections P 174), ಎಂದು ವಾಲ್ಟ ವ್ಹಿಟಮನ್ (Walt whitman) ಇವನು ಸಾಕ್ಷಾತ್ಕಾರವಾದಕ್ಕೆ ಸಾಕ್ಷೀಭೂತನಾಗಿ ನಿಂತಿರುವನು. ಬ್ರಾವುನಿಂಗ (Browning) ಕವಿವರ್ಯನು ತನ್ನ ಸ್ವಂತ ಅನುಭವವನ್ನು ಹೇಳುವಾಗ 'ನಾನರಿತೆನು, ನಾನನುಭವಿಸಿದೆನು..... ದೇವರೆಂದರೇನು, ನಾವಾರು, ಈ ಜೀವನವೆಂದರೇನು, ಅನಂತವಾಗಿರುವ ಅನಂತಾನಂದವನ್ನೂ ದೇವರು ಅನಂತ ಮುಖದಿಂದ ಹೇಗೆ ಅನುಭವಿಸುವನು. .... ಎಂಬುದನ್ನು ನಾನರಿತೆನು, ನಾನನುಭವಿಸಿದೆನು,' ಎಂದು ಸಾಕ್ಷಾತ್ಕಾರದ ವಾಣಿಯಿಂದ ಉಸುರಿರುವನು. ಒಟ್ಟಿಗೆ ನೋಡಲಾಗಿ, ಕೇವಲ ತರ್ಕಶಾಸ್ತ್ರದಿಂದ ಇಲ್ಲವೆ ಬುದ್ಧಿಯಿಂದ ಆತ್ಯಂತಿಕ ಸತ್ಯವು ತಿಳಿಯಬಲ್ಲದು, ಎಂಬ ಪಕ್ಷದ ಬಲವು ಈಗ ಕಡಿಮೆಯಾಗಿ ಸಾಕ್ಷಾತ್ಕಾರದ ಕಡೆಗೆ ಪಾಶ್ಚಾತ್ಯತತ್ವಜ್ಞರ ಒಲವು ಹೆಚ್ಚಾಗಿದೆ, ಎಂದು ಹೇಳಬಹುದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮೊದಲು ಅನೇಕ ಸಾಕ್ಷಾತ್ಕಾರಿಗಳು ಆಗಿಹೋಗಿದ್ದರೂ ಅವರಿಗೆ ತತ್ವಜ್ಞರು ವಿಶೇಷ ಮಹತ್ವವನ್ನು ಕೊಟ್ಟಿದ್ದಿಲ್ಲ. ಈಗ ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ತತ್ವಜ್ಞರ ಆವೃತ್ತಿಯು

ಬದಲಾಗಿ ಧರ್ಮಜೀವನದಲ್ಲಿಯೂ ತತ್ವಜ್ಞಾನದಲ್ಲಿಯೂ ಸಾಕ್ಷಾತ್ಕಾರ ವಾದಕ್ಕೆ ಅವರು ಯೋಗ್ಯ ಸ್ಥಾನವನ್ನು ಕೊಡಲು ಮುಂದಾಗುತ್ತಲಿದ್ದಾರೆ.

೧೦೮. ಅನ್ಯ ದೇಶಗಳಲ್ಲಿ ಮತ್ತು ಧರ್ಮಗಳಲ್ಲಿ ಆಗಿಹೋದ ಸಾಕ್ಷಾತ್ಕಾರಿಗಳ ನಾಮನಿರ್ದೇಶವನ್ನು ಮಾಡುವದಕ್ಕಿಂತ ಹೆಚ್ಚಿನದೇನೂ ಇಲ್ಲಿ ಮಾಡುವದು ಶಕ್ಯವಿಲ್ಲ. ಅತ್ತ ಯುರೋಪದಲ್ಲಿ ಕ್ರಿಸ್ತಪೂರ್ವ ಧರ್ಮಗಳೆಂದರೆ ಗ್ರೀಸ ಮತ್ತು ರೋಮದಲ್ಲಿ ಪ್ರಚಲಿತವಿದ್ದವುಗಳೇ. ಇತ್ತ ಕಡೆಗೆ ಏಸಿಯಾಖಂಡದಲ್ಲಿ ಬುದ್ಧನ ಶ್ರೇಷ್ಠ ನೀತಿಪ್ರಧಾನವಾದ ಧರ್ಮ, ಜೈನ ಧರ್ಮ, ಮತ್ತು ಝರಥುಷ್ಟ್ರನ ಧರ್ಮ. ನಿಜವಾಗಿ ಇವು ಮೂರೂ ಹಿಂದು ಸ್ಥಾನದ ವೈದಿಕ ಧರ್ಮದೊಡನೆ ಬಹಳ ಸಂಬಂಧವುಳ್ಳವುಗಳು. ಅವುಗಳಲ್ಲಿ ಜೈನಧರ್ಮವೊಂದು ಹಿಂದುಸ್ಥಾನದಲ್ಲಿಯಷ್ಟೇ ಇದ್ದರೂ ಬುದ್ಧನ ಮತ್ತು ಝರಥುಷ್ಟ್ರನ ಧರ್ಮಗಳು ಇತ್ತ ಇರಾಣ ಮತ್ತು ಅತ್ತ ಚೀನ, ಜಪಾನ, ಕೋರಿಯಾ, ಮುಂತಾದ ರಾಷ್ಟ್ರಗಳಲ್ಲಿ ಪಸರಿಸಿದ್ದನ್ನು ನಾವು ಕಾಣಬಹುದು. ಅವರಲ್ಲಿಯ ಸಾಕ್ಷಾತ್ಕಾರಿಗಳ ಪರಿಚಯವು ಇನ್ನೂ ಜಗತ್ತಿಗೆ ಸಾಕಷ್ಟು ಆಗಿಲ್ಲವೆಂದು ವ್ಯಸನಪಡಬೇಕಾಗಿದೆ. ಇದಲ್ಲದೆ ಪಾಲ್ಡಿಯಾ ಮತ್ತು ಮಿಸರ ದೇಶಗಳಲ್ಲಿ ಪ್ರಚಲಿತವಿದ್ದ ಧರ್ಮಗಳೂ ಯಹುದೀಯರ ಧರ್ಮವೂ ಇವೆ. ಕ್ರಿಸ್ತೋತ್ತರ ಧರ್ಮಗಳಲ್ಲಿ ಮಹಮ್ಮದೀಯ ಧರ್ಮವೆ ಎಲ್ಲಕ್ಕೂ ಪ್ರಬಲವಾದದ್ದು. ಇನ್ನು ಆಯಾ ಧರ್ಮಗಳ ಸಂಬಂಧದಿಂದ ಈಗ ಸದ್ಯಕ್ಕೆ ಉಪಲಬ್ಧವಿದ್ದ ಧಾರ್ಮಿಕ ವಾಙ್ಮಯವನ್ನು ನೋಡಿದರೂ ಅನೇಕ ಗ್ರಂಥಗಳನ್ನು ಬರೆಯುವಷ್ಟು ಸಾಕ್ಷಾತ್ಕಾರೀ ಪುರುಷರು ಆಯಾ ಧರ್ಮಗಳಲ್ಲಿ ಆಗಿ ಹೋಗಿರುವರು. ಕ್ರಿಸ್ತಪೂರ್ವ ಕಾಲದಲ್ಲಿ ನಾವು ಮೇಲೆ ಹೇಳಿದ ಪ್ಲೇಟೋನ (Plato) ಹೆಸರೇ ಅತಿಶಯ ಮಹತ್ವದ್ದಿರುವದು. ಅವನು ಪುರಾತನಕಾಲದ ಅತ್ಯಂತ ಶ್ರೇಷ್ಠ ತತ್ವಜ್ಞಾನಿಯೆನಿಸಿರುವನು. 'ಆತ್ಮಸಾಕ್ಷಾತ್ಕಾರವು ಅವರ್ಣನೀಯವಿರುವದು. ಆದುದರಿಂದ ನಾನು ಈ ವಿಷಯದ ಬಗ್ಗೆ ಏನೂ ಬರೆದಿಲ್ಲ. ಆ ವಿಷಯವನ್ನು ಕುರಿತು ಬರೆಯುವದು ಸಾಧ್ಯವಿದ್ದರೆ ನಾನು ನನ್ನ ಆಯುಷ್ಯವನ್ನೆಲ್ಲ ಅದರಲ್ಲಿಯೆ ಕಳೆಯುತ್ತಿದ್ದೆನು' ಎಂದು ಅವನು ಬರೆದಿದ್ದಾನೆ. ಪ್ಲೋಟಿನಸ್ (Plotinus) ಎಂಬವನು ಕ್ರಿ. ಶ ಮೂರನೇ ಶತಮಾನದಲ್ಲಿ ಆಗಿಹೋದನು. ಆಗ ಕ್ರಿಸ್ತೀ ಮತವು ಇನ್ನೂ ತೀರ ಬಾಲ್ಯಾವಸ್ಥೆಯಲ್ಲಿತ್ತು. ಅದರ ಪರಿಣಾಮವು ಅವನ ಮನಸಿನ ಮೇಲೆ ಅಥವಾ ವಿಚಾರಗಳ ಮೇಲೆ ಏನೂ ಆದಂತೆ ಕಂಡುಬರುವುದಿಲ್ಲ. ಅವನ ಗ್ರಂಥಗಳನ್ನು ಪರಿಶೀಲಿಸಿದರೆ

ಅವು ಪ್ಲೇಟೋನಿಗಿಂತ ಹೆಚ್ಚು ಸಾಕ್ಷಾತ್ಕಾರವಾದದಿಂದ ತುಂಬಿದಂತೆ ಕಾಣಿಸುವವು. ಅವನು ಸಮಾಧಿಸ್ಥಿತಿಯನ್ನು ಅಥವಾ ಐಕ್ಯಾನುಭೂತಿಯನ್ನು ಉಪನಿಷತ್ತಿನಲ್ಲಿಯ ಮಹಾಜ್ಞಾನಿ ಯಾಜ್ಞವಲ್ಕ್ಯನಂತೆ ಇಲ್ಲವೆ ತೈತ್ತಿರೀಯೋಪನಿಷತ್ತಿನ ಕರ್ತನಂತೆ ಆನಂದಪರವಶನಾಗಿ ಮಾಡಿದ್ದಾನೆ. ಕ್ರಿಶ್ಚನ್ ಧರ್ಮದ ಮುಖ್ಯ ಗ್ರಂಥವಾದ ಬಾಯಬಲ್ಲಿನ 'ಓಲ್ಡ ಟೆಸ್ಟಾಮೆಂಟ' (old Testament) ಎಂಬ ಪ್ರಥಮ ಭಾಗವನ್ನು ಓದಿದರೆ ಅದರಲ್ಲಿಯ ಎಷ್ಟೋ ಪ್ರಕರಣಗಳು ಮೋಝಿಸ್ (Moses) ಮುಂತಾದ ಸಾಕ್ಷಾತ್ಕಾರಿಗಳಾದ ಯಹುದೀ ಸಾಧುಗಳಿಂದಲೆ ಬರೆಯಲ್ಪಟ್ಟಿರಲಿಕ್ಕೆ ಬೇಕು, ಎಂದು ಮನವರಿಕೆ ಆಗುವದು. ಸ್ವತಃ ಜೀಸಸ್ ಕ್ರಾಯಿಸ್ಟನ (Jesus Christ) ಬಗ್ಗೆಯಂತೂ ಮಾತಾಡಲಿಕ್ಕೆಯೆ ಬೇಡ. ಅವನು ಆತ್ಮಪ್ರಕಾಶದಿಂದಲೆ ಆಚರಿಸುತ್ತಿದ್ದನು, ಎಂದು ಅಂದರೆ ಎಳ್ಳಷ್ಟೂ ಅಯೋಗ್ಯವಾಗಲಾರದು. ಅವನ ಶಿಷ್ಯಂದಿರಲ್ಲಿ ಸೆಂಟ ಜಾನ್ (St. John) ಮತ್ತು ಸೆಂಟ ಪಾಲ್ (St. Paul) ಇವರು ಶ್ರೇಷ್ಠ ಸಾಕ್ಷಾತ್ಕಾರಿಗಳಿದ್ದರು. ಮುಂದೆ ಇದೇ ಪರಂಪರೆಯಲ್ಲಿ ಸೆಂಟ ಆಗಸ್ಟಾಯಿನ (St. Augustine) ಡಾಯೋನೀಸಸ್, (Dionysus) ಸೆಂಟ ಫ್ರಾನ್ಸಿಸ್ ಆಫ್ ಅಸೀಸಿ, (St. Frances of Assisi) ಡಾಂಟೇ, (Dante) ರುಯಿಸ್ ಬ್ರೊಕ್, (Ruyesbrock) ಸೆಂಟ ಜಾನ್ ಆಫ್ ದಿ ಕ್ರಾಸ್, (St. John of the Cross) ಜಾನ್ ಬನಿಯನ್, (John Bunyan) ಇಗ್ನೇಸಿಯಸ್ ಲಾಯೋಲಾ, (Ignatius Loyola) ಜಾರ್ಜ ಫಾಕ್ಸ್, (George Fox) ವುಯಿಲ್ಯಮ್ ಬ್ಲೇಕ, (William Blake) ವರ್ಡ್ಸವರ್ಥ, (Wordsworth) ಬ್ರಾವುನಿಂಗ (Browning) ಹೀಗೆ ಅನೇಕರು ಯುರೋಪದ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಾಲಕ್ಕೆ ಆಗಿಹೋದರು. ಇದಲ್ಲದೆ ಸೆಂಟ ಕ್ಯಾಥರಾಯಿನ್, ಟೆರೆಸಾ, ಜೂಲಿಯನ್ ಆಫ್ ನಾರವಿಚ್ ಮುಂತಾದ ಸ್ತ್ರೀಯರು ಇದೇ ಮಾಲಿಕೆಗೆ ಸೇರಿದವರು. ಇದೇ ಪ್ರಕಾರ ಇಸ್ಲಾಮೀ ಧರ್ಮದ ಅನುಯಾಯಿಗಳಲ್ಲಿಯೂ ಅನೇಕರು ಕಂಡುಬರುವರು. ವಿಶೇಷವಾಗಿ ಸುಫೀ ತತ್ವಜ್ಞರಲ್ಲಿ ಮತ್ತು ಆ ಪರಂಪರೆಯಲ್ಲಿ ಇರಾಣದಲ್ಲಿ ಆಗಿಹೋದವರಲ್ಲಿ ಅಲ್ ಗಜಾಲಿ, ಸಾದಿ, ಜಲಾಲುದ್ದೀನ ರುಮಿ, ಹಾಫಿಜ್ ಮುಂತಾದ ಹೆಸರುಗಳು ಪ್ರಸಿದ್ಧವಿರುವವು. ಸಾಕ್ಷಾತ್ಕಾರವಾದವು ಎಷ್ಟು ವಿಶಾಲವಿರುವದು ಮತ್ತು ಹೇಗೆ ಅಖಿಲ ಮಾನವಕುಲವ್ಯಾಪಿಯೂ ದೇಶ ಧರ್ಮಕಾಲ ಭಾಷೆ ಕುಲಶೀಲ ಲಿಂಗವಯ

ಇವುಗಳಿಂದ ಅಮರ್ಯಾದಿತವೂ ಇರುವದು ಎಂಬುದು ಈ ಮೇಲಿನ ಹೆಸರು ಗಳ ಮೇಲಿಂದ ವ್ಯಕ್ತವಾಗುವದು.

೧೦೯. ಸಾಕ್ಷಾತ್ಕಾರವಾದ ಮತ್ತು ಬೇರೆಬೇರೆ ದೇಶಭಾಷೆಧರ್ಮ ಗಳಲ್ಲಿಯ ಸಾಕ್ಷಾತ್ಕಾರಿಗಳು, ಈ ಬಗ್ಗೆ ಇದುವರೆಗೆ ಆದ ಚರ್ಚೆಯು ಸದ್ಯಕ್ಕೆ ಸಾಕು. ಇನ್ನು ಕರ್ನಾಟಕದ ವಚನಕಾರರ ಸಾಕ್ಷಾತ್ಕಾರ ವಾದವನ್ನು ವಿಚಾರಿಸುವ. ಈ ಗ್ರಂಥದ ಮೊದಲನೆಯ ಭಾಗವಾದ ವಚನಾಮೃತದಲ್ಲಿಯ ಪ್ರಕರಣಗಳ ಪರಿವಿಡಿಯನ್ನು ನೋಡಿದರೆ ಅದರಲ್ಲಿ 'ಮುಕ್ತಿಯೆ ಮಾನವರ ಧ್ಯೇಯ' ಎಂಬ ಪ್ರಕರಣದ ಮುಂದೆ 'ಸಾಕ್ಷಾ ತ್ಕಾರ' ಮತ್ತು 'ಸಾಕ್ಷಾತ್ಕಾರಿಯ ನಿಲವು' ಎಂಬ ಎರಡು ಪ್ರಕರಣ ಗಳು ಇರುವವು. ಈ ಎರಡು ಪ್ರಕರಣಗಳನ್ನು ಜನ್ನಾಗಿ ಪರಿಶೀಲಿಸಿದರೆ ವಚನಕಾರರ ಸಾಕ್ಷಾತ್ಕಾರವಾದದ ಯಥಾರ್ಥಕಲ್ಪನೆಯು ಆಗುವದು. ನಿಜವಾಗಿ ಜೀವನ್ಮುಕ್ತಸ್ಥಿತಿ ಮತ್ತು ಸಾಕ್ಷಾತ್ಕಾರಿಯ ನಿಲವು ಇವೆರಡರಲ್ಲಿ ಭೇದವಿಲ್ಲ. ಆದರೆ ವಚನಾಮೃತದಲ್ಲಿ ಐದನೆಯ ಪ್ರಕರಣದಲ್ಲಿ ನಾವು ಮುಖ್ಯವಾಗಿ ಮುಕ್ತನ ಅಂತರ್ವೃತ್ತಿಯನ್ನೆ ಬಣ್ಣಿಸುವ ವಚನಗಳನ್ನು ಕೊಟ್ಟಿದ್ದರೆ ಅದರ ಏಳನೆಯ ಪ್ರಕರಣದಲ್ಲಿ ಅವನು ಈ ಲೋಕ ಮತ್ತು ವ್ಯವಹಾರ ಇವುಗಳನ್ನು ಕುರಿತು ಯಾವ ವೃತ್ತಿಯನ್ನು ತಾಳಿರುವನು ಎಂಬ ಬಗ್ಗೆ ವಚನಗಳನ್ನು ಕೊಟ್ಟಿರುತ್ತೇವೆ. ಸಾಕ್ಷಾತ್ಕಾರವಾಯಿತೆಂದರೆ ಮತ್ತು ಅದು ನಿತ್ಯವಾಗಿ ನಿಂತಿತೆಂದರೆ ಅದೇ ಮುಕ್ತಿಯು ಮತ್ತು ಅದನ್ನು ಪಡೆದವನೆ ಮುಕ್ತನು, ಅಥವಾ ಜೀವನ್ಮುಕ್ತನು. ಸಾಕ್ಷಾತ್ಕಾರವೆಂದರೆ ಆಧ್ಯಾತ್ಮಿಕಸತ್ಯದ ಪ್ರತ್ಯಕ್ಷಪ್ರತೀತಿ, ಪ್ರತ್ಯಯ, ಪ್ರತ್ಯಕ್ಷ ಅನುಭವ ಎಂದು ಮೇಲೆಯೆ ಹೇಳಿದ್ದೇವೆ. ಅದಕ್ಕೆ ಸ್ವಾನುಭವ, ಅನುಭೂತಿ, ಅನುಭವ, ಅನುಭಾವ, ಆತ್ಮಾನುಭವ, ಆತ್ಮಸಾಕ್ಷಾತ್ಕಾರ, ಆತ್ಮಜ್ಞಾನ, ಅಪರೋಕ್ಷಜ್ಞಾನ, ಅಪರೋಕ್ಷಾನುಭೂತಿ, ಬ್ರಹ್ಮಜ್ಞಾನ, ಬ್ರಹ್ಮ ಸಾಕ್ಷಾತ್ಕಾರ, ಬ್ರಹ್ಮಾನುಭವ ಎಂಬ ಮುಂತಾದ ಹೆಸರುಗಳೂ ಇರು ವವು. ವಚನಕಾರರು ವಾಡಿಕೆಯಾಗಿ 'ಅನುಭಾವ' ಎಂಬ ಶಬ್ದವನ್ನೆ ಉಪ ಯೋಗಿಸುವರು. ಪರಮಾರ್ಥಮಾರ್ಗದಲ್ಲಿ ಇಂಥ ಅನುಭಾವವೆ ಮುಖ್ಯವು ಮತ್ತು ಅದೇ ತಮ್ಮ ಧ್ಯೇಯವು, ಎಂದು ವಚನಕಾರರು ಅಲ್ಲಲ್ಲಿ ಸ್ಪಷ್ಟ ಗೊಳಿಸಿದ್ದಾರೆ. ಈ ಬಗ್ಗೆ ಅನೇಕ ವಚನಗಳಿರುವವು. ಅವುಗಳಲ್ಲಿ, ಅವರು ತಪಸ್ಸು, ಭಕ್ತಿ, ಜ್ಞಾನ, ಶಾಸ್ತ್ರಾಭ್ಯಾಸ, ಅನೇಕ ಧರ್ಮಾಚಾರ ಮುಂತಾ ದವುಗಳನ್ನೆಲ್ಲ ಅನುಭಾವಕ್ಕೆ ಹೋಲಿಸಿ ಅನುಭಾವವೆ ಎಲ್ಲಕ್ಕೂ ಹೆಚ್ಚಿನದು,

ಅದರಿಂದಲೆ ಮಿಕ್ಕವುಗಳೆಲ್ಲ ಸಾರ್ಥಕವೆನಿಸುವವು, ಅದೊಂದಿಲ್ಲದಿದ್ದರೆ ಅವೆಲ್ಲವು ನಿರರ್ಥಕ, ಎಂದು ಪ್ರತಿಪಾದಿಸಿದ್ದಾರೆ. ಅನುಭಾವವೆ ಪಾರ ಮಾರ್ಥಿಕ ಪ್ರಯತ್ನಗಳ ಏಕಮೇವ ಪ್ರಾಪ್ತವ್ಯವು ಎಂಬುದೆ ಇದರ ತಾತ್ಪರ್ಯವು. ತಪಸ್ಸು ಭಕ್ತಿ ಮುಂತಾದವುಗಳು ವ್ಯರ್ಥ ಅಥವಾ ಸಾಧ ಕರು ಇವುಗಳನ್ನು ಉಪಯೋಗಿಸಬಾರದು ಹೀಗೆ ಇದರ ಅರ್ಥವಲ್ಲ. ಅನುಭಾವವಿಲ್ಲದಿದ್ದರೆ ಇವೆಲ್ಲ ಪರಿಮಳವಿಲ್ಲದ ಪುಷ್ಪದಂತೆ, ಸೂರ್ಯ ಚಂದ್ರರಿಲ್ಲದ ಆಕಾಶದಂತೆ, ಕಳೆಯಿಲ್ಲದ ಮುಖದಂತೆ, ಪ್ರತಿಭೆ ಇಲ್ಲದ ಕಾವ್ಯದಂತೆ ನಿಸ್ತೇಜ ಮತ್ತು ನೀರಸವಾಗುವವು, ಎಂಬುದೆ ವಚನಕಾರರ ಅಭಿಪ್ರಾಯವು. ಯಾವ ಶಾಸ್ತ್ರಕ್ಕಾದರೂ ಅನುಭವವೆ ಒರೆಗಲ್ಲು. ಇಂತಹ ಔಷಧದಿಂದ ಇಂತಹ ರೋಗವು ನೆಟ್ಟಗಾಗುವದು ಎಂಬುದು ಅನುಭವ ದಿಂದಲ್ಲದೆ ತಿಳಿಯದು. ವೈದ್ಯನನ್ನು ಅದರ ಹಣ್ಣಿನಿಂದ ಪರೀಕ್ಷಿಸಬೇಕು ಎಂದೆನ್ನುವಂತೆ ವಿದ್ಯೆಯನ್ನು ಅದರ ಪರಿಣಾಮದಿಂದ ಪರೀಕ್ಷಿಸತಕ್ಕದ್ದು. ಅಧ್ಯಾತ್ಮವಿದ್ಯೆಯನ್ನು ಅದರ ಪರಿಣಾಮವಾದ ಸಾಕ್ಷಾತ್ಕಾರ ಮತ್ತು ತದನುಷಂಗಿಯಾದ ಪರಮಸಂತೋಷದಿಂದಲೆ ಪರೀಕ್ಷಿಸಬೇಕು. ಇಂದ್ರಿ ಯಾತೀತ ಅಧ್ಯಾತ್ಮವು ಸತ್ಯವು ಎಂಬುದು ಅನುಭವದಿಂದಲೆ ಸಿದ್ಧವಾಗ ತಕ್ಕ ಮಾತು. ಹೊರಿಹೊರೆ ಹೊತ್ತಿಗೆಗಳನ್ನು ಓದಿದರೂ ಅಷ್ಟೇ ಬರೆದರೂ ಅಷ್ಟೇ, ಕಲ್ಪಕಲ್ಪಾಂತಗಳ ವರೆಗೆ ಜಪತಪಾನುಷ್ಠಾನಗಳನ್ನು ಮಾಡಿದರೂ ಅಷ್ಟೇ ಧ್ಯಾನಮಗ್ನವಾದರೂ ಅಷ್ಟೇ. ಎಲ್ಲಿಯ ವರೆಗೆ ಚಿತ್ಸೂರ್ಯದರ್ಶನ ವಾಗಿಲ್ಲವೊ ಅಲ್ಲಿಯ ವರೆಗೆ ತಮಂಧ ಹರಿಯದು, ಸಂಸಾರದ ತೊಡಕು ಬಿಡದು, ಕರ್ಮಬಂಧನವು ಕತ್ತರಿಸದು, ದುಃಖದ ಬೀಜವು ಸುಡದು, ಸುಖದ ಬೀಡು ಸಿಗದು ಮತ್ತು ಧನ್ಯಭಾವವಳವಡದು.

೧೧೦. ಇದೇ ಮಾತನ್ನು ವಚನಕಾರರು ಒಳ್ಳೆ ಹುರಿಕಟ್ಟಾದ ಭಾಷೆ ಯಲ್ಲಿ ಹೇಳಿರುವರು. ಅನಂತಕಾಲ ಕಡುತರ ತಪ, ಗುರುಸೇವೆ, ದೇವ ಪೂಜೆ, ಪಾದೋದಕ ಪ್ರಸಾದ ಮುಂತಾದವುಗಳನ್ನು ಮಾಡುವುದಕ್ಕಿಂತ 'ಒಂದು ನಿಮಿಷ ನಿಮ್ಮ ಶರಣರ ಅನುಭಾವಸಾಲದೆ' (೯೪), ಎಂದು ಚನ್ನಬಸವೇಶ್ವರನು ಕೇಳಿರುವನು. ಅದೇ ಪ್ರಕಾರ, ವೈಕ್ಷವಾಸಿ ಇದ್ದರೇನು, ಭಿಕ್ಷಾಪರಿಣಾಮಿ ಇದ್ದರೇನು, ಕಾಲಕರ್ಮರಹಿತರಾದರೇನು, ಅನುಭಾವವನರಿಯದವರು ಏನು ಕಾಲ ಇರ್ದರೇನು (೧೦೯), ಎಂದು ಅದೇ ವಚನಕಾರನು ಕೇಳಿರುವನು. ಅನುಭಾವವಿಲ್ಲದ ಭಕ್ತಿ ಅರಿವಿಂಗೆ ಬಾರದು, ಅನುಭಾವವಿಲ್ಲದೆ ಏನೇನೂ ಅರಿಯಬಾರದು, ಅನುಭಾವವು ಮಾತಿನ ಮಥನ

ವೆನಲಾಗದು (೯೫), ಎಂದು ಭಕ್ತಿಜ್ಞಾನಗಳು ಅನುಭಾವದಿಂದಲೆ ಸಾರ್ಥಕವಾಗುವವು, ಎಂದು ಬಸವಣ್ಣನು ಹೇಳಿರುವನು. ಅರುಹಿನ ತೃಪ್ತಿಗೆ ಅನುಭಾವದಾಶ್ರಯವು ಬೇಕು (೯೮), ಕಲ್ಲೊಳಗಿನ ಕಿಚ್ಚಿನಂತೆ, ಬೀಜದೊಳಗಣ ವೃಕ್ಷದಂತೆ ಇರುವ ದೇವರ ನಿಲವನ್ನು ಅನುಭಾವಸುಖಿಯೇ ಬಲ್ಲ (೧೦೫), ಅನುಭಾವವಿದ್ದವರೆ ಮೇಳದಿಂದ ಅನುಭಾವಗೋಷ್ಠಿಯನಾಡಬಲ್ಲರು (೧೦೮), ಎಂದು ವಚನಕಾರರ ಸ್ಪಷ್ಟವಾದ ಅಭಿಪ್ರಾಯವಿರುವದು. ಅನುಭಾವವು ಸಹಜವಾಗಿ ದೊರೆಯತಕ್ಕ ವಸ್ತುವಲ್ಲ. ಅದು ರಚ್ಚೆಯ ಮಾತಲ್ಲ, ಸಂತೆಯ ಸುದ್ದಿಯಲ್ಲ, ಬೀದಿಯ ಪಸಾರವಲ್ಲ. ಅದು ಬೇಕುಬೇಕಾದಾಗ ಬೇಕುಬೇಕಾದವರಿಗೆ ಸಿಕ್ಕತಕ್ಕ ವಿಷಯವಲ್ಲ, ಎಂದು ಅದರ ಬಗ್ಗೆ ಒಣ ಚರ್ಚೆ ಮಾಡಿ ವ್ಯರ್ಥ ವೇಳೆಗಳೆಯುವ ಮೂಢರನ್ನು ಹೀಯಾಳಿಸಿ, ಅದು ನೆಲದ ಮರೆಯ ನಿಧಾನವು, ಅದು ಅಂತರಂಗದ ರತ್ನವು (೧೧೦), ಎಂದು ಬಸವಣ್ಣನು ಅದನ್ನು ಹೊಗಳಿರುವನು. ಅನುಭಾವವು ಶಾಸ್ತ್ರಜಾಲದ ಪಸಾರವಲ್ಲ, ಅದು ಆತ್ಮವಿದ್ಯೆ, ಅದು ತಾನಾರೆಂಬುದ ತೋರುವದು, ಅದು ನಿಜ ನಿವಾಸದಲ್ಲಿರಿಸುವದು (೧೧೧), ಎಂದು ಅದರ ಮಹತಿಯನ್ನು ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರನೆಂಬ ಅಂಕಿತವುಳ್ಳ ವಚನಕಾರನು ಹೇಳಿರುವನು. ಅನುಭಾವದಿಂದಲೆ ಆತ್ಮಪ್ರತೀಕ, ಅದರಿಂದಲೆ ಪ್ರಸಾದಾದಿಗಳು ಹುಟ್ಟಿರುವುದರಿಂದ ಆ ಅನುಭಾವದಲ್ಲಿರುವ ಶರಣನು ಅನುಪಮ ಸುಖಿಯು (೧೦೬). ಸಾಕ್ಷಾತ್ಕಾರವು ಪ್ರಕಾಶರೂಪವೂ ಅವರ್ಣನೀಯವೂ ಐಕ್ಯಭಾವವನ್ನು ನೆಲೆಸುವಂತಹದೂ ಆನಂದವನ್ನುಂಟು ಮಾಡುವಂತಹದೂ ಧನ್ಯಭಾವವನ್ನಳವಡಿಸುವಂತಹದೂ ಇರುವದೆಂದು ವಚನಕಾರರು ಬಗೆಬಗೆಯಿಂದ ಬಣ್ಣಿಸಿರುವರು. ಗುರುಕಾರುಣ್ಯದಿಂದ ನಿತ್ಯನಿರಂಜನ ಪರಂಜ್ಯೋತಿಯ ಪ್ರಕಾಶವಾಯಿತ್ತು (೯೬), ಎಂದು ಒಬ್ಬ ವಚನಕಾರನು ಹೇಳಿದ್ದರೆ, ಧ್ಯಾನವಿಶ್ರಾಂತಿಯಲ್ಲಿ ದಿಟದಿಟವೆಂಬುದೊಂದು ದರುಶನವ ನೋಡುತ್ತ ಗಗನಗಂಭೀರದಲ್ಲಿ ದೇವರು ಉದಯವಾದುದನು ಕಂಡೆನು (೧೦೧) ಎಂದು ಇನ್ನೊಬ್ಬನು ವರ್ಣಿಸಿರುವನು. ಇದೇ ಮಾತನ್ನು, ಕಾಂತಿಯಿಂ ಈರೇಳು ಭುವನವುಂ ಬೆಳಗುವ ದಿವ್ಯಸ್ವರೂಪನ ಕಂಡು ಎನ್ನ ಕಂಗಳ ಬರಹಿಂಗಿತ್ತು, ಎಂದು ಮಹಾದೇವಿಯಕ್ಕನು ತನ್ನ ದರ್ಶನವನ್ನು ನಿರೂಪಿಸಿರುವಳು. ಎನ್ನಂತರಂಗದ ಆತ್ಮನೊಳಗೆ ಅನಿಮಿಷ ನಿಜೈಕ್ಯನ ಕಂಡು ಬೆರಗಾದೆನು (೧೦೭), ಎಂದು ಅಲ್ಲಮಪ್ರಭುಗಳು ತಮ್ಮ ವಿಸ್ಮಯವನ್ನು ಸುರಿಯುವರು. ಈ ಐಕ್ಯಭಾವವು ಅವರ್ಣನೀಯವೇ ಸೈ. ಹಾಲುಂಡ

ಸವಿಯ ಮೇಲುಂಡ ಪಂಕ್ತಿಯ ಹೇಳಬಹುದಲ್ಲದೆ ಸುಖಸೋಂಕಿನ ಸ್ವಾನುಭಾವವ ಹೇಳಬಾರದು ಕೇಳಬಾರದು (೯೭); ಯಾಕಂದರೆ, ಅದು ವಾಙ್ಮನಾತೀತವು. ಈ ಪ್ರಕಾರ ವರ್ಣನೆಗೆ ಬಾರದ ದಿವ್ಯದರ್ಶನದಿಂದ ಪರಮಾನಂದವಲ್ಲದೆ ಇನ್ನಾವ ಪರಿಣಾಮವು ಉಂಟಾಗಬಲ್ಲದು? ಆದುದರಿಂದ, ನಿಮ್ಮ ನೋಟವನಂತಸುಖ, ಕೂಟ ಪರಮಸುಖ, ಅಷ್ಟಕೋಟಿ ರೋಮಂಗಳೆಲ್ಲ ಕಂಗಳಾಗಿ ನಿಮ್ಮನು ನೋಡುತಿದ್ದೆನು (೧೦೨), ಕಾಣಬಾರದ ವಸ್ತು ಕೈ ಸೇರಿತು, ಇನ್ನು ಆನಂದದಿಂದ ಆಡುವೆ, ಎನ್ನ ಮನ ಒಲಿದು ಭಕ್ತಿಯ ಮಾಡುವೆ (೧೦೩), ಎಂದು ತನ್ನ ಆನಂದವನ್ನು ಬಸವಣ್ಣನು ವ್ಯಕ್ತಗೊಳಿಸಿರುವನು. ಇಂಥ ಆನಂದವು, ಎನ್ನ ನೆನಹಿನ ನಿಧಿಯ ನೋಡಾ, ಎನ್ನರಿವಿನ ಘನವ ನೋಡಾ, ಅಹಾ ಎನ್ನ ಪುಣ್ಯವೆ, ಅಹಾ ಎನ್ನ ಭಾಗ್ಯವೆ, ಎನ್ನ ಕಂಗಳ ಮನೆಯ ಮಾಡಿಕೊಂಡಿಪ್ಪ ನಿತ್ಯದ ಬೆಳಗೆ, ಎನ್ನ ಧ್ಯಾನದೊಳಗಣ ದೃಢವೆ, ಎನ್ನ ಸುಖದೊಳಗಣ ಸುಗ್ಗಿಯೆ (೧೦೪), ಎಂದು ಹಾಡುವ ಮಹಾದೇವಿಯಕ್ಕನ ಧನ್ಯಭಾವದಲ್ಲಿ ಕೊನೆಗಂಡು ಸಾಧಕನನ್ನು ಪೂರ್ಣ ಕೃತಾರ್ಥಮಾಡದೆ ಇರಲರಿಯದು.

೧೧೧. ಅನುಭಾವವೆ ಎಲ್ಲ ಅಧ್ಯಾತ್ಮಿಕಸಾಧನದ ಉಗಮಸ್ಥಾನವು, ಅದರಿಂದಲೆ ಎಲ್ಲ ಸಾಧನಗಳು ಸಾರ್ಥವಾಗುವವು, ಮತ್ತು ಎಲ್ಲ ಸಾಧನಗಳ ಶಿಖರವಾದರೂ ಅದೇ ಇರುವದು, ಎಂದು ವಚನಕಾರರು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುವರು. ಈ ಮಾತು ಮೇಲಿನ ವಚನಗಳಿಂದ ಸಿದ್ಧವಾಗುವದು. ಇನ್ನು ವಚನಕಾರರು ಅನುಸರಿಸಿದ ತತ್ವಜ್ಞಾನದ ಸಾಮಾನ್ಯ ಸ್ವರೂಪವೇನು, ಅವರು ತಮ್ಮ ಜೀವನದಲ್ಲಿ ಪಡೆಯಬೇಕೆಂದು ಹವಣಿಸಿದ ಪದವಾವುದು, ಮತ್ತು ಅದನ್ನು ಅವರು ಎಷ್ಟರ ಮಟ್ಟಿಗೆ ಪಡೆದರು ಎಂಬ ವಿಷಯವನ್ನು ಈ ಪ್ರಕರಣದಲ್ಲಿ ಚರ್ಚಿಸಿ ಅಪರ ಸಾಧನಮಾರ್ಗದ ವಿಚಾರವನ್ನು ಮುಂದಿನ ಪ್ರಕರಣದಲ್ಲಿ ಮಾಡುವ. ಇಲ್ಲಿ ತತ್ವಜ್ಞಾನವೆಂದರೆ, ಈ ಇಂದ್ರಿಯಗೋಚರ ಸೃಷ್ಟಿಯ ಮೂಲದಲ್ಲಿ ಏನಿರುವದು, ಅದರ ಸ್ವರೂಪವೇನು, ಜೀವನ ಮೂಲ ಸ್ವರೂಪವೇನು, ಈ ಜೀವನಿಗೂ ಈ ಸೃಷ್ಟಿಗೂ ಸೃಷ್ಟಿಯ ಮೂಲದಲ್ಲಿರುವ ಪರಮಾತ್ಮವಸ್ತುವಿಗೂ ಏನು ಮತ್ತು ಯಾವ ತರದ ಸಂಬಂಧವು, ಈ ಮುಂತಾದವುಗಳ ಬಗ್ಗೆ ಜ್ಞಾನವು. ಜೀವ, ಜಗತ್, ಮತ್ತು ಈಶ್ವರ ಇವರ ಯಥಾರ್ಥಸ್ವರೂಪ ಮತ್ತು ಸಂಬಂಧ ಇವುಗಳನ್ನು ಗೊತ್ತುಹಚ್ಚಲಿಕ್ಕೆ ಯತ್ನಿಸಿ ಈ ಬಗ್ಗೆ ಕೆಲವು ನಿಶ್ಚಿತ ಸಿದ್ಧಾಂತಗಳನ್ನು ನಿರ್ಣಯಿಸುವುದೆ ತತ್ವಜ್ಞಾನದ ಕಾರ್ಯವು. ವಚನಕಾರರು ತರ್ಕಾತ್ಮಕ

ವಾಗಿ ಇಲ್ಲವೆ ಪಂಡಿತರಂತೆ ಈ ವಿಷಯವನ್ನು ಎಲ್ಲಿಯೂ ಚರ್ಚಿಸಲೆತ್ನಿಸಿಲ್ಲ. ತಮ್ಮ ಪದ್ಧತಿಯಂತೆ ಹಲವು ಸಾರೆ ವೇದೋಪನಿಷತ್ತುಗಳಲ್ಲಿಯ ಮತ್ತು ಹೆಚ್ಚಾಗಿ ಶೈವಾಗಮಗಳಲ್ಲಿಯ ವಾಕ್ಯಗಳನ್ನು ಉದಹರಿಸಿ ಅಥವಾ ಸ್ಫುರಣಾತ್ಮಕವಾಗಿ ಈ ಬಗ್ಗೆ ತಮ್ಮ ವಿಚಾರಗಳನ್ನು ವ್ಯಕ್ತಗೊಳಿಸಿದ್ದಾರೆ. ಅವರು ಘಟಪಟನ್ಯಾಯಮಾಡಿ-'ಇತಿ ಸಿದ್ಧಂ' ಎಂದು ಬೆರಳಿಟ್ಟುಹೇಳುವ ಗೋಜಿಗೆ ಹೋಗಿಲ್ಲ. ಸತ್ಯವನ್ನು ತಾರ್ಕಿಕಬುದ್ಧಿಗೆ ತಿಳಿಸಿ ಹೌದೆನಿಸಜೇಕೆಂಬ ಹಂಬಲಕ್ಕಿಂತ ಅದನ್ನು ಅನುಭವಿಸಿ ಅದರಲ್ಲಿ ಹೇಗೆ ಸ್ಥಿತರಾಗಬೇಕು ಇತ್ತಕಡೆಗೆ ಅವರ ಲಕ್ಷವು ಹೆಚ್ಚು ಇತ್ತು. ಶೈವಾಗಮಗಳ ತತ್ವಸಿದ್ಧಾಂತಗಳನ್ನೆ ಅವರು ಇದ್ದಕ್ಕಿದ್ದ ಹಾಗೆ ಎತ್ತಿ ಅವನ್ನು ತಮಗೆ ಇಷ್ಟವಿದ್ದಲ್ಲಿ ತಮ್ಮ ಓಜಸ್ಸುಳ್ಳ ಸುಲಭ ಕನ್ನಡದಲ್ಲಿ ಬರೆದಿದ್ದಾರೆ ಎಂದು ಹೇಳಬಹುದು. ಈ ಸಿದ್ಧಾಂತಗಳು ಮುಖ್ಯವಾಗಿ 'ವಚನಾಮೃತ'ದ ಮೊದಲನೆಯ ನಾಲ್ಕು ಪ್ರಕರಣಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ, ಮತ್ತು ಅವೇ ಸಂಕ್ಷೇಪದಿಂದ ಈ ಗ್ರಂಥದ ಮೂರನೆಯ ಪ್ರಕರಣದಲ್ಲಿ ೫೦-೫೪ ರ ವರೆಗಿನ ಪರಿಚ್ಛೇದಗಳಲ್ಲಿ ಹೇಳಲ್ಪಟ್ಟಿವೆ. ಆ ಸಿದ್ಧಾಂತಗಳ ಸಾಂಗೋಪಾಂಗ ವಿವರಣೆಯನ್ನು ಮುಂದೆ ಷಟ್‌ಸ್ಥಲ ಪ್ರಕರಣದಲ್ಲಿ ಮಾಡುವೆವು. ಈಗ ಇಲ್ಲಿ ಅವಶ್ಯವಿದ್ದ ಮಟ್ಟಿಗೆ ಅವುಗಳನ್ನು ಉಲ್ಲೇಖಿಸುವೆವು. ಪ್ರಥಮದಲ್ಲಿ ಅಖಂಡ, ಅದ್ವಯ, ಅನುಪಮ, ನಿರವಯ, ನಿರಂಜನ, ನಿಃಕಲ ಕೇವಲ ಚೈತನ್ಯರೂಪ ಪರಾತ್ಪರ ವಸ್ತುವು ಇರುವದು. ಅದು ಇಂದ್ರಿಯಾತೀತವು, ವಾಙ್ಮನಕ್ಕಗೋಚರವು, ಆದುದರಿಂದ ಅವರ್ಣನೀಯವು. ಅದು ತನ್ನ ಸ್ವೇಚ್ಛಾವಿಲಾಸದಿಂದ ತನ್ನ ಚಿತ್‌ಶಕ್ತಿಯ ಮುಖಾಂತರ ಮೊದಲು ಸತ್ತು ಚಿತ್ತಾನಂದ ನಿತ್ಯಪರಿಪೂರ್ಣ ನಿಃಕಲ ಶಿವತತ್ವವಾಗುವದು. ಆ ಶಿವ ತತ್ವವು ತನ್ನ ಶಕ್ತಿಯ ಜಲನ ಮಾತ್ರದಿಂದ ಪ್ರವೃತ್ತಿ ನಿವೃತ್ತಿ ಎಂದು ಎರಡು ತೆರನಾಗುವದು. ಪ್ರವೃತ್ತಿಯಲ್ಲಿ ಮುಂದೆ ಚಿತ್‌ಶಕ್ತಿ, ಆದಿಶಕ್ತಿ, ಪರಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ ಎಂದು ಆರು ತೆರಗಳು. ಆರನೆಯದಾದ ಕ್ರಿಯಾಶಕ್ತಿಯಿಂದ ಮಾಯೆ, ಮಾಯೆಯಿಂದ ಪ್ರಕೃತಿ ಪುರುಷಾದಿ ಸಾಂಖ್ಯರು ಹೇಳುವ ಇಪ್ಪತ್ತೈದು ತತ್ವಗಳು ಮೆತ್ತು ಅವುಗಳಿಂದ ನಿರಿಂದ್ರಿಯ ಹಾಗೂ ಸೇಂದ್ರಿಯ ಸೃಷ್ಟಿ ಹೀಗೆ ಸೃಷ್ಟಿರಚನೆಯ ಕ್ರಮವಿರುವದು (೫೧) ಇತ್ತ ನಿವೃತ್ತಿ ಅಂಶದಿಂದ ಜೀವನಲ್ಲಿ ಮುಮುಕ್ಷುತ್ವವು ಹುಟ್ಟಿ ಯೋಗ್ಯ ಸಾಧನೆಯಿಂದ ಮುಂದೆ ಅವನು ಮುಕ್ತನಾಗುವನು. ವಚನಕಾರರು ತತ್ವತಃ ಅದ್ವೈತಿಗಳು, ಆದರೆ ಸೃಷ್ಟಿಯು ಕೇವಲ ಮಾಯೆ

ಯೆಂದು ಅಥವಾ ವಿವರ್ತವೆಂದು ಅವರು ಒಪ್ಪುವದಿಲ್ಲ. ಪರಮಾತ್ಮನ ಶಕ್ತಿಯ ಅಂಶವೇ ಉಪಾದಾನಕಾರಣವಾಗಿ ಈ ಸೃಷ್ಟಿ ಮತ್ತು ಜೀವಗಳು ಹುಟ್ಟಿದವು, ಜೀವನು ಪರಮಾತ್ಮನ ಅಂಶನೇ ಇರುವನು, ಅಜ್ಞಾನವೆಂಬ ಪಾಶದಿಂದ ಬದ್ಧನಿರುವುದರಿಂದ ಅವನು ಜೀವನೆನಿಸುವನು, ಪಾಶಮುಕ್ತನಾದ ಜೀವನೆ ಶಿವನಾಗುವನು, ಅಲ್ಲಿಯವರೆಗೆ ಅವನು ಜನ್ಮಜನ್ಮಾಂತರಗಳನ್ನು ತಾಳಿ, ಬಳಲುವನು, ಎಂದು ಅವರು ನಂಬಿರುವರು. ಪರಮಾತ್ಮನು ಸ್ವತಃ ಅಕರ್ತನಿದ್ದು ಅವನ ಶಕ್ತಿಯೆ ಕಾರ್ಯಕರ್ತ್ರಿಯಾಗಿರುವುದರಿಂದ ಈ ತತ್ವಜ್ಞಾನಕ್ಕೆ ಶಕ್ತಿವಿಶಿಷ್ಟಾದ್ವೈತವೆಂದು ಹೇಳುವದುಂಟು. ಮುಕ್ತಜೀವನು ಸಂಪೂರ್ಣ ಶಿವೈಕ್ಯವನ್ನು ಹೊಂದುವನು ಎಂದೆನ್ನುವುದರಿಂದ ವಚನಕಾರರು ದ್ವೈತಿಗಳಲ್ಲ ಅಥವಾ ವಿಶಿಷ್ಟಾದ್ವೈತಿಗಳಲ್ಲ, ಸೃಷ್ಟಿಯು ಕೇವಲ ಮಾಯೆಯಲ್ಲ ಎಂದು ಪ್ರತಿಪಾದಿಸುವುದರಿಂದ ಅವರು ಶಂಕರಾದ್ವೈತಿಗಳಲ್ಲ. ಮೂಲ ಅದ್ವೈತವಿರುವ ಪರಮಾತ್ಮನಿಂದ ದ್ವೈತಮಯ ವಿಶ್ವವು ಹುಟ್ಟಿರುವದು, ಆದರೆ ಸಾಧಕನು ಈ ದ್ವೈತದಾಚೆಗೆ ಹೋಗಿ ಅದ್ವೈತಸ್ಥಿತಿಯನ್ನು ಅನುಭವಿಸಬಲ್ಲನು, ಎಂದು ವಚನಕಾರರು ಪ್ರತಿಪಾದಿಸುವರು. ವಚನಕಾರರ ತತ್ವಜ್ಞಾನದಲ್ಲಿ ಜಗತ್ತೆಂಬುದು ನಶ್ವರ ಅಥವಾ ಕ್ಷಣಶಃ ಪರಿವರ್ತನಹೊಂದುವಂತಹದಿದ್ದರೂ ಅದು ಮಿಥ್ಯೆಯಲ್ಲ, ಅದು ಸತ್ಯವಿದ್ದು ಪರಮಾತ್ಮಶಕ್ತಿಯ ಅಂಶದ ಆವಿರ್ಭಾವವೇ ಇರುವದು. ಈ ಜಗತ್ತನ್ನು ಅನುಭವಿಸುವ ಜೀವನೂ ಪರಮಾತ್ಮನ ಅಂಶನಿದ್ದು ಚೈತನ್ಯರೂಪನಿರುವನು. ಆದರೆ ಆ ಶಕ್ತಿಯ ನಿಗೂಹನ ಸಾಮರ್ಥ್ಯದ ಮೂಲಕ ಜೀವನು ಅಜ್ಞಾನಕ್ಕೆ ಒಳಗಾಗಿ ತಾನು ಸಚ್ಚಿದಾನಂದ ನಿತ್ಯಪರಿಪೂರ್ಣ ಸ್ವರೂಪನು ಎಂಬುದನ್ನು ಮರೆತು ಕಾಮವಶನಾಗಿ ಕಾಲಕರ್ಮಗಳ ಪಾಶದಲ್ಲಿ ಸಿಕ್ಕು ದುಃಖಿಸುತ್ತಿರುವನು. ಜೀವನಿಗೆ ಆದ ನಿಜಸ್ವರೂಪದ ಈ ಮರವು ಮಾಯವಾಗಿ ಅರಿವು ತಲೆದೋರಿ ಅದು ಅನುಭವಕ್ಕೆ ಬಂದಿತೆಂದರೆ ಜೀವನು ಮುಕ್ತನಾಗುವನು. ಜೀವ ಮತ್ತು ಜಗತ್ತು ಇವುಗಳಾಚೆಗೆ ಇವುಗಳ ಆದಿಕಾರಣನಾಗಿ ಪರಮಾತ್ಮನು ವಿರಾಜಿಸುವನು. ಆದರೆ ಅವನು ಕಾರಣನೆಂದು ಹೇಳಲು ಬರುವಂತಿಲ್ಲ, ಯಾಕಂದರೆ ಅವನು ಅಕರ್ತನು. ಆದುದರಿಂದ ಅವನ ನೆನಹಿನಿಂದುತ್ಪನ್ನವಾದ ಶಕ್ತಿಯೆ ಜೀವ ಜಗತ್ತುಗಳ ಅಸ್ತಿತ್ವಕ್ಕೆ ಕಾರಣವು. ಪರಮಾತ್ಮ ಮತ್ತು ಅವನ ಶಕ್ತಿ ಇಬ್ಬರೂ ತತ್ವತಃ ಒಂದೇ ಇರುವವು. ಅವನಿಲ್ಲದೆ ಆ ಶಕ್ತಿ ಇರದು. ಆ ಶಕ್ತಿರಹಿತನಾಗಿ ಅವನು ಎಂದೂ ಇರನು. ಸೂರ್ಯ ಮತ್ತು ಅವನ

ಕಿರಣ ಈ ರೂಪಕವು ಶಿವ ಮತ್ತು ಶಕ್ತಿ ಇವರಿಗೆ ಅನ್ವಯಿಸುವದು. ಆದರೆ ಈ ವಿಶ್ವದ ಪಸಾರಕ್ಕೆ ಅವನ ಶಕ್ತಿಯು ಕಾರಣವು ಹೊರತು ಅವನಲ್ಲ, ಹೀಗೆ ವಚನಕಾರರ ತತ್ವಜ್ಞಾನದ ಸಾಮಾನ್ಯಸ್ವರೂಪವಿರುವದು.

೧೧೨. ವಚನಕಾರರ ತತ್ವಜ್ಞಾನವು ಮೇಲೆ ಹೇಳಿದಂತೆ ಇರುವುದರಿಂದ ಸದ್ಯದ ದುಃಖಪೂರ್ಣ ಸ್ಥಿತಿಯನ್ನು ದಾಟಿ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ, ಎಂಬ ಸ್ಥಿತಿಯಲ್ಲಿ ಐಕ್ಯವಾಗುವುದೆ ಜೀವನ ಪರಮಧ್ಯೇಯವಾಗುವದು. ಅದೇ ಐಕ್ಯಸ್ಥಲವೆನಿಸುವದು. ಅದೇ ಜೀವನ್ಮುಕ್ತಿಯು ಅಂದರೆ ಸದೇಹವಿರುವಾಗ ಕೂಡ ಪರಮಾತ್ಮನೊಡನೆ ಸಮರಸಭಾವದಿಂದಿದ್ದು ಈ ಸೃಷ್ಟಿಯಲ್ಲಿ ನಿರ್ಲೇಪನಾಗಿ ವ್ಯವಹರಿಸುವದು. ಪರಶಿವನೊಡನೆ ಸಮಭಾವಿಯಾದಾತನೆ ಮುಕ್ತನಯ್ಯಾ (೧೩೮), ಎಂದು ವಚನಕಾರರು ಅಂದಿರುವರು. ಹೀಗೆ ಸಮಭಾವಿಯಾದವನು, ನೀರು ತನ್ನ ನಾಸಿಕದಲ್ಲಿ ಸೇರದಂತೆ ಸುಳಿಯುವ ಮೀನದಂತೆ (೧೪೨) ವ್ಯವಹರಿಸಿಯೂ ಅದರಿಂದ ಅಲಿಪ್ತನಿರುವನು. ವಚನಕಾರರು ತಮ್ಮ ಜೀವನದಲ್ಲಿ ಈ ಗುರಿಯನ್ನೆ ಮುಟ್ಟಲು ಹವಣಿಸಿದರು. ಆಕಾಶದಲ್ಲಿ ತೋರುವ ಇಂದ್ರಚಾಪವಡಗುವುದಕ್ಕೆ ಆಕಾಶವೆ ಆಶ್ರಯವಿದ್ದಂತೆ, ಗಾಳಿಯಿಂದ ತೋರಿದ ಸುಳಿಗಾಳಿಯಡಗುವುದಕ್ಕೆ ಗಾಳಿಯೆ ಆಶ್ರಯವಿದ್ದಂತೆ ಪರವಸ್ತುವಿನಲ್ಲಿ ರೂಪಿಸಿ ತೋರಿದ ಜೀವನಿಗೆ ಆ ಪರವಸ್ತುವೆ ಆಶ್ರಯವು (೪೨), ಎಂದು ವಚನವಿರುವದು. ಎಲ್ಲ ನೀರುಗಳ ಆಶ್ರಯವು ಸಮುದ್ರವೆ ಇದ್ದಂತೆ, ಎಲ್ಲ ಕಲ್ಪನೆಗಳ ಆಶ್ರಯವು ಮನವೇ ಇದ್ದಂತೆ, ಎಂದು ಅನೇಕ ಉಪಮೆಗಳನ್ನು ಕೊಟ್ಟು ಯಾಜ್ಞವಲ್ಕ್ಯನು ಬೃಹದಾರಣ್ಯಕದಲ್ಲಿ ಆತ್ಮನ ವರ್ಣನೆಯನ್ನು ಮಾಡಿದ್ದು ಇಲ್ಲಿ ತಟ್ಟನೆ ನೆನಪಿಗೆ ಬರದಿರದು. ಉದಕದಿಂದಾದ ವಾರಿಕಲ್ಲು ಕರಗಿ ಮುನ್ನಿನ ಉದಕವೆ ಆದಂತೆ ಚಿನ್ಮಯವಸ್ತುವಿನಿಂದ ಉದಯವಾದ ಚಿತ್ಸ್ವರೂಪ ಭಕ್ತನು ಆ ಚಿನ್ಮಯ ಪರವಸ್ತುವನೆ ಬೆರೆಸಿ ಪರಮಯೋಗಿಯಾಗುವನು (೪೩) ಎಂಬ ವಚನವು ಜೀವಾತ್ಮಪರಮಾತ್ಮರ ಸಂಬಂಧವನ್ನೂ ಜೀವನ ಹವಣನ್ನೂ ಜನ್ಮಾಗಿ ವ್ಯಕ್ತವಾಡುವದು. ವಚನಕಾರರಲ್ಲಿ ಇಂಥ ಜೀವನ್ಮುಕ್ತ ಸ್ಥಿತಿಯನ್ನು ಕುರಿತು ಕಡುತರವಾದ ಹಂಬಲವಿತ್ತು, ಎಂಬುದನ್ನು ಅನೇಕ ವಚನಗಳಲ್ಲಿ ಕಾಣಬಹುದು. ಜೀವನು ಪರಮಾತ್ಮನನ್ನು ಬಿಟ್ಟು ಎರಡನೆಯ ವಿಷಯಗಳನ್ನು ಬೆನ್ನಟ್ಟುವುದೆಂದರೆ ಅಮೃತವನ್ನು ಬಿಟ್ಟು ವಿಷವನ್ನರಸಿದಂತೆಯೆ ಸೈ (೧೭೫). ಕರ್ಮವು ಬಂಧಕವಾಗಬೇಕಾದರೆ ಕಾಮನೆ, ವಾಸನೆ, ಅಥವಾ ಆಶೆಯೆ ಮೂಲವು. ಆ ಆಶೆಯ ಕೆಡಿಸಿ

ಮೋಕ್ಷದ ಲೇಸ ತೋರು (೧೪೧), ಎಂದು ವಚನಕಾರರು ದೇವರನ್ನು ಬೇಡಿಕೊಂಡಿರುವರು. ಹಿಂಡನಗಲಿದ ಆನೆ ಅಥವಾ ಬಂಧನಕ್ಕೊಳಗಾದ ಗಿಳಿ ತನ್ನ ಬಳಗವನ್ನೆ ನೆನೆಯುತ್ತಿರುವಂತೆ ಮುಮುಕ್ಷು ಜೀವನು ಪರಮಾತ್ಮನನ್ನು ಒಂದರಕ್ಷಣವಾದರೂ ಬಿಡದೆ ಸ್ಮರಿಸುವನು (೧೪೩). ಈ ಪರಿ ಆತುರತೆಯು ಯಾತರ ಸಲುವಾಗಿ? ಅರ್ಥಾತ್ ಪರಮಾತ್ಮೈಕ್ಯವನ್ನು ಪಡೆಯುವುದಕ್ಕಾಗಿ ತನ್ನಲ್ಲಿ ತಾನು ಪ್ರತ್ಯಕ್ಷಾನುಭವದಿಂದ ತಿಳಿದುನೋಡಿ, ಆ ತಿಳಿದ ತಿಳಿವಿನೊಳಗೆ ಪರಮಾತ್ಮನ ನಿಜವ ಕಂಡು, ಕಾಣುವ ಜ್ಞಾನವು ತಾನೆಂದರಿದು, ಕಾಣುವದು ಕಾಣಿಸಿಕೊಳ್ಳುವದು ಎರಡೂ ಒಂದಾದ ನಿಲವೆ ನಿಮ್ಮ ನಿಲವು (೨೨೭), ಎಂದು ವಚನಕಾರರು ದೇವರಿಗೆ ಹೇಳುವರು. ನಿನ್ನ ನಿಜವು ಕೇವಲ ಜ್ಯೋತಿ, ಅದು ವರ್ಣಾತೀತವು, ಅದು ನಿನ್ನ ಪೂರ್ಣತ್ವದ ನೆಲೆ, ಅದರಲ್ಲಿ ಪರಮಾತ್ಮನನ್ನು ಕಂಡು ನಿಶ್ಚಿಂತನಾಗು, ಅಲ್ಲಿ ನೀನೆಂಬ ನೆರೆ ಹಿಂಗುವದು, ಅದೇ ಮುಕ್ತಿ, ಅದೇ ಬ್ರಹ್ಮಜ್ಞಾನ, (೨೫೦), ಎಂದು ವಚನಕಾರರು ತಮ್ಮ ಮನಸಿಗೆ ತಿಳಿಹೇಳಿರುವರು. ಈ ವಚನಗಳಿಂದ ವಚನಕಾರರ ಆಧ್ಯಾತ್ಮಿಕ ಬಯಕೆಯ ಯಥಾರ್ಥಜ್ಞಾನವಾಗುವದು.

೧೧೩. ಮೇಲೆ ಕಾಣಿಸಿದ ಬಯಕೆಯು ವಚನಕಾರರಿಗೆ ಕೈಗೂಡಿತೊ ಇಲ್ಲವೊ ಇದನ್ನು ಇಲ್ಲಿ ನೋಡುವದು ಅವಶ್ಯವು. ಜೀವಾತ್ಮನು ಮುಟ್ಟಬಹುದಾದ ಆತ್ಯಂತಿಕ ಉಚ್ಚಸ್ಥಿತಿಯ ವರ್ಣನೆಯನ್ನು ಅವರು ಅಲ್ಲಲ್ಲಿ ಮಾಡಿದ್ದಾರೆ. ಪರಮಾತ್ಮನೊಡನೆ ಐಕ್ಯಹೊಂದಿ ಸಮರಸ, ಸಮಭಾವವಾಗುವುದೆ ಎಲ್ಲಕ್ಕೂ ಹೆಚ್ಚಿನ ಮೆಟ್ಟು. ಆ ಸ್ಥಿತಿಯಲ್ಲಿ ಸಾಧಕನ ಚಿತ್ತವು ಪರಮಾತ್ಮನೊಡನೆ ಒಂದಾಗಿರುವದು ಮತ್ತು ಅವನು ಮಾಡುತ್ತಿರುವ ಕರ್ಮವು ಕೇವಲ ಪರಮಾತ್ಮನ ಸಂಕಲ್ಪದಂತೆ ಆಗುತ್ತಿರುವದು. ಕರ್ಮ ಮಾಡುವಲ್ಲಿ ಅಹಂಭಾವ ಅಥವಾ ಅದರ ಫಲದಲ್ಲಿ ಆಶೆ ಇಲ್ಲವೆ ಮಮತ್ವ ಇವು ಕಿಂಚಿತ್ತಾದರೂ ಜೀವನ್ಮುಕ್ತನಲ್ಲಿರುವುದಿಲ್ಲ. ಹೀಗೆ ಸತ್ಯವನ್ನು ಕಂಡು, ಸತ್ಯದಲ್ಲಿದ್ದು, ಸತ್ಯದಲ್ಲಿಯೆ ಸುಳಿಯುವನು ನಿಜವಾದ ಸತ್ಯ ಸಾಕ್ಷಾತ್ಕಾರಿಯು. ಅದೇ ಪರಮಪಾವನವಾದ ಪರಮಾನಂದಪದವಿಯ ಪೀಠವು. ಈಸ್ಥಿತಿಯನ್ನು ವಚನಕಾರರು ಅತ್ಯಂತ ಉಜ್ವಲವಾದ ಭಾಷೆಯಲ್ಲಿ ವರ್ಣಿಸಲೆತ್ನಿಸಿ, ಅದನಿನ್ನು ವರ್ಣಿಸುವ ಬಗೆಯಾವುದು, ಅದನೇನೆಂದುಪಮಿಸುವೆವು, ಎಂದು ತಮ್ಮ ಭಾಷೆಯ ಬಡತನವನ್ನೂ ಅಲಂಕಾರಗಳ ಕೊರತೆಯನ್ನೂ ಒಪ್ಪಿಕೊಂಡಿದ್ದಾರೆ. ಜ್ಞಾನಜ್ಯೋತಿಯ ಉದಯವು

ಕಿರಣ ಈ ರೂಪಕವು ಶಿವ ಮತ್ತು ಶಕ್ತಿ ಇವರಿಗೆ ಅನ್ವಯಿಸುವದು. ಆದರೆ ಈ ವಿಶ್ವದ ಪಸಾರಕ್ಕೆ ಅವನ ಶಕ್ತಿಯು ಕಾರಣವು ಹೊರತು ಅವನಲ್ಲ, ಹೀಗೆ ವಚನಕಾರರ ತತ್ವಜ್ಞಾನದ ಸಾಮಾನ್ಯಸ್ವರೂಪವಿರುವದು.

೧೧೨. ವಚನಕಾರರ ತತ್ವಜ್ಞಾನವು ಮೇಲೆ ಹೇಳಿದಂತೆ ಇರುವುದರಿಂದ ಸದ್ಯದ ದುಃಖಪೂರ್ಣ ಸ್ಥಿತಿಯನ್ನು ದಾಟಿ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ, ಎಂಬ ಸ್ಥಿತಿಯಲ್ಲಿ ಐಕ್ಯವಾಗುವುದೆ ಜೀವನ ಪರಮಧ್ಯೇಯವಾಗುವದು. ಅದೇ ಐಕ್ಯಸ್ಥಲವೆನಿಸುವದು. ಅದೇ ಜೀವನ್ಮುಕ್ತಿಯು ಅಂದರೆ ಸದೇಹವಿರುವಾಗ ಕೂಡ ಪರಮಾತ್ಮನೊಡನೆ ಸಮರಸಭಾವದಿಂದಿದ್ದು ಈ ಸೃಷ್ಟಿಯಲ್ಲಿ ನಿರ್ಲೇಪನಾಗಿ ವ್ಯವಹರಿಸುವದು. ಪರಶಿವನೊಡನೆ ಸಮಭಾವಿಯಾದಾತನೆ ಮುಕ್ತನಯ್ಯಾ (೧೩೮), ಎಂದು ವಚನಕಾರರು ಅಂದಿರುವರು. ಹೀಗೆ ಸಮಭಾವಿಯಾದವನು, ನೀರು ತನ್ನ ನಾಸಿಕದಲ್ಲಿ ಸೇರದಂತೆ ಸುಳಿಯುವ ಮೀನದಂತೆ (೧೪೨) ವ್ಯವಹರಿಸಿಯೂ ಅದರಿಂದ ಅಲಿಪ್ತನಿರುವನು. ವಚನಕಾರರು ತಮ್ಮ ಜೀವನದಲ್ಲಿ ಈ ಗುರಿಯನ್ನೆ ಮುಟ್ಟಲು ಹವಣಿಸಿದರು. ಆಕಾಶದಲ್ಲಿ ತೋರುವ ಇಂದ್ರಜಾಪವಡಗುವುದಕ್ಕೆ ಆಕಾಶವೆ ಆಶ್ರಯವಿದ್ದಂತೆ, ಗಾಳಿಯಿಂದ ತೋರಿದ ಸುಳಿಗಾಳಿಯಡಗುವುದಕ್ಕೆ ಗಾಳಿಯೆ ಆಶ್ರಯವಿದ್ದಂತೆ ಪರವಸ್ತುವಿನಲ್ಲಿ ರೂಪಿಸಿ ತೋರಿದ ಜೀವನಿಗೆ ಆ ಪರವಸ್ತುವೆ ಆಶ್ರಯವು (೪೨), ಎಂದು ವಚನವಿರುವದು. ಎಲ್ಲ ನೀರುಗಳ ಆಶ್ರಯವು ಸಮುದ್ರವೆ ಇದ್ದಂತೆ, ಎಲ್ಲ ಕಲ್ಪನೆಗಳ ಆಶ್ರಯವು ಮನವೇ ಇದ್ದಂತೆ, ಎಂದು ಅನೇಕ ಉಪಮೆಗಳನ್ನು ಕೊಟ್ಟು ಯಾಜ್ಞವಲ್ಕ್ಯನು ಬೃಹದಾರಣ್ಯಕದಲ್ಲಿ ಆತ್ಮನ ವರ್ಣನೆಯನ್ನು ಮಾಡಿದ್ದು ಇಲ್ಲಿ ತಟ್ಟನೆ ನೆನಪಿಗೆ ಬರದಿರದು. ಉದಕದಿಂದಾದ ವಾರಿಕಲ್ಲು ಕರಗಿ ಮುನ್ನಿನ ಉದಕವೆ ಆದಂತೆ ಚಿನ್ಮಯವಸ್ತುವಿನಿಂದ ಉದಯವಾದ ಚಿತ್ಸವರೂಪ ಭಕ್ತನು ಆ ಚಿನ್ಮಯ ಪರವಸ್ತುವನೆ ಬೆರೆಸಿ ಪರಮಯೋಗಿಯಾಗುವನು (೪೩) ಎಂಬ ವಚನವು ಜೀವಾತ್ಮಪರಮಾತ್ಮರ ಸಂಬಂಧವನ್ನೂ ಜೀವನ ಹವಣನ್ನೂ ಜನ್ಮಾಗಿ ವ್ಯಕ್ತವಾಡುವದು. ವಚನಕಾರರಲ್ಲಿ ಇಂಥ ಜೀವನ್ಮುಕ್ತ ಸ್ಥಿತಿಯನ್ನು ಕುರಿತು ಕಡುತರವಾದ ಹಂಬಲವಿತ್ತು, ಎಂಬುದನ್ನು ಅನೇಕ ವಚನಗಳಲ್ಲಿ ಕಾಣಬಹುದು. ಜೀವನು ಪರಮಾತ್ಮನನ್ನು ಬಿಟ್ಟು ಎರಡನೆಯ ವಿಷಯಗಳನ್ನು ಬೆನ್ನಟ್ಟುವುದೆಂದರೆ ಅಮೃತವನ್ನು ಬಿಟ್ಟು ವಿಷವನ್ನರಸಿದಂತೆಯೆ ಸೈ (೧೭೫). ಕರ್ಮವು ಬಂಧಕವಾಗಬೇಕಾದರೆ ಕಾಮನೆ, ವಾಸನೆ, ಅಥವಾ ಆಶೆಯೆ ಮೂಲವು. ಆ ಆಶೆಯ ಕೆಡಿಸಿ

ಮೋಕ್ಷದ ಲೇಸ ತೋರು (೧೪೧), ಎಂದು ವಚನಕಾರರು ದೇವರನ್ನು ಬೇಡಿಕೊಂಡಿರುವರು. ಹಿಂಡನಗಲಿದ ಆನೆ ಅಥವಾ ಬಂಧನಕ್ಕೊಳಗಾದ ಗಿಳಿ ತನ್ನ ಬಳಗವನ್ನೆ ನೆನೆಯುತ್ತಿರುವಂತೆ ಮುಮುಕ್ಷು ಜೀವನು ಪರಮಾತ್ಮನನ್ನು ಬಂದರಕ್ಷಣವಾದರೂ ಬಿಡದೆ ಸ್ಮರಿಸುವನು (೧೪೩). ಈ ಪರಿ ಆತುರತೆಯು ಯಾತರ ಸಲುವಾಗಿ? ಅರ್ಥಾತ್ ಪರಮಾತ್ಮೈಕ್ಯವನ್ನು ಪಡೆಯುವುದಕ್ಕಾಗಿ ತನ್ನಲ್ಲಿ ತಾನು ಪ್ರತ್ಯಕ್ಷಾನುಭವದಿಂದ ತಿಳಿದುನೋಡಿ, ಆ ತಿಳಿದ ತಿಳಿವಿನೊಳಗೆ ಪರಮಾತ್ಮನ ನಿಜವ ಕಂಡು, ಕಾಣುವ ಜ್ಞಾನವು ತಾನೆಂದರಿದು, ಕಾಣುವದು ಕಾಣಿಸಿಕೊಳ್ಳುವದು ಎರಡೂ ಒಂದಾದ ನಿಲವೆ ನಿಮ್ಮ ನಿಲವು (೨೨೭), ಎಂದು ವಚನಕಾರರು ದೇವರಿಗೆ ಹೇಳುವರು. ನಿನ್ನ ನಿಜವು ಕೇವಲ ಜ್ಯೋತಿ, ಅದು ವರ್ಣಾತೀತವು, ಅದು ನಿನ್ನ ಪೂರ್ಣತ್ವದ ನೆಲೆ, ಅದರಲ್ಲಿ ಪರಮಾತ್ಮನನ್ನು ಕಂಡು ನಿಶ್ಚಿಂತನಾಗು, ಅಲ್ಲಿ ನೀನೆಂಬ ನೆರೆ ಹಿಂಗುವದು, ಅದೇ ಮುಕ್ತಿ, ಅದೇ ಬ್ರಹ್ಮಜ್ಞಾನ, (೨೫೦), ಎಂದು ವಚನಕಾರರು ತಮ್ಮ ಮನಸಿಗೆ ತಿಳಿಹೇಳಿರುವರು. ಈ ವಚನಗಳಿಂದ ವಚನಕಾರರ ಆಧ್ಯಾತ್ಮಿಕ ಬಯಕೆಯು ಯಥಾರ್ಥಜ್ಞಾನವಾಗುವದು.

೧೧೩. ಮೇಲೆ ಕಾಣಿಸಿದ ಬಯಕೆಯು ವಚನಕಾರರಿಗೆ ಕೈಗೂಡಿತೊ ಇಲ್ಲವೊ ಇದನ್ನು ಇಲ್ಲಿ ನೋಡುವದು ಅವಶ್ಯವು. ಜೀವಾತ್ಮನು ಮುಟ್ಟಬಹುದಾದ ಅತ್ಯಂತಿಕ ಉಚ್ಚಸ್ಥಿತಿಯ ವರ್ಣನೆಯನ್ನು ಅವರು ಅಲ್ಲಲ್ಲಿ ಮಾಡಿದ್ದಾರೆ. ಪರಮಾತ್ಮನೊಡನೆ ಐಕ್ಯಹೊಂದಿ ಸಮರಸ, ಸಮಭಾವವಾಗುವುದೆ ಎಲ್ಲಕ್ಕೂ ಹೆಚ್ಚಿನ ಮೆಟ್ಟು. ಆ ಸ್ಥಿತಿಯಲ್ಲಿ ಸಾಧಕನ ಚಿತ್ತವು ಪರಮಾತ್ಮನೊಡನೆ ಒಂದಾಗಿರುವದು ಮತ್ತು ಅವನು ಮಾಡುತ್ತಿರುವ ಕರ್ಮವು ಕೇವಲ ಪರಮಾತ್ಮನ ಸಂಕಲ್ಪದಂತೆ ಆಗುತ್ತಿರುವದು. ಕರ್ಮ ಮಾಡುವಲ್ಲಿ ಅಹಂಭಾವ ಅಥವಾ ಅದರ ಫಲದಲ್ಲಿ ಆಶೆ ಇಲ್ಲವೆ ಮಮತ್ವ ಇವು ಕಿಂಚಿತ್ತಾದರೂ ಜೀವನ್ಮುಕ್ತನಲ್ಲಿರುವುದಿಲ್ಲ. ಹೀಗೆ ಸತ್ಯವನ್ನು ಕಂಡು, ಸತ್ಯದಲ್ಲಿದ್ದು, ಸತ್ಯದಲ್ಲಿಯೆ ಸುಳಿಯುವವನು ನಿಜವಾದ ಸತ್ಯ ಸಾಕ್ಷಾತ್ಕಾರಿಯು. ಅದೇ ಪರಮಪಾವನವಾದ ಪರಮಾನಂದಪದವಿಯ ಪೀಠವು. ಈಸ್ಥಿತಿಯನ್ನು ವಚನಕಾರರು ಅತ್ಯಂತ ಉಜ್ವಲವಾದ ಭಾಷೆಯಲ್ಲಿ ವರ್ಣಿಸಲೆತ್ನಿಸಿ, ಅದನ್ನಿನ್ನು ವರ್ಣಿಸುವ ಬಗೆಯಾವುದು, ಅದನೇನೆಂದುಪಮಿಸುವೆವು, ಎಂದು ತಮ್ಮ ಭಾಷೆಯ ಬಡತನವನ್ನೂ ಅಲಂಕಾರಗಳ ಕೊರತೆಯನ್ನೂ ಒಪ್ಪಿಕೊಂಡಿದ್ದಾರೆ. ಜ್ಞಾನಜ್ಯೋತಿಯ ಉದಯವು

ಭಾಸುಕೋಟಿಯನ್ನು ಮೀರಿದ, ಹಾಗೂ ಸ್ವಾನುಭವದ ಉದಯವು ಜ್ಞಾನಶೂನ್ಯದಲ್ಲಿ ಅಡಗಿದ ಘನವನ್ನು ಏನೆಂಬೆನು (೬೯) ಎಂದು ಅಲ್ಲಮ ಪ್ರಭುವು ಕೇಳಿರುವನು. ಬೆಳಗಿನೊಳಗಿನ ಬೆಳಗಾದ ಮಹಾಬೆಳಗನ್ನು ಕಂಡ ಪರಮಾನಂದಿಯ ಆನಂದವನು ಏನೆಂದುಪಮಿಸುವೆನು (೬೬), ಎಂದು ವಚನಕಾರರು ತಾವು ವರ್ಣನೆಮಾಡಲು ಅಸಮರ್ಥರು ಎಂದು ಕೊಂಡಿರುವರು. ಆ ಸ್ಥಿತಿಯಲ್ಲಿ ಅಂಬುಧಿಯೊಳಗೆ ಬಿದ್ದ ವಾರಿಕಲ್ಲಂತೆ ಭಿನ್ನ ಭಾವವಿಲ್ಲದೆ ಸಾಧಕನು ದೇವರನ್ನು ನೆನೆಯುವನು (೪೭) ಅಲ್ಲಿ ಆನೆಂಬುದಿಲ್ಲ ನೀನೆಂಬುದಿಲ್ಲ, ಸ್ವಯವೆಂಬುದಿಲ್ಲ ಪರವೆಂಬುದಿಲ್ಲ, ಅರಿವೆಂಬುದಿಲ್ಲ ಮರವೆಂಬುದಿಲ್ಲ, ಒಳಗೆಂಬುದಿಲ್ಲ ಹೊರಗೆಂಬುದಿಲ್ಲ (೪೮), ಎಂಬ ದ್ವಂದ್ವಾತೀತ ಸ್ಥಿತಿಯ ಅನುಭವವಾಗುವದು. ತನು, ಮನ, ನೆನಹು, ಭಾವ, ಜ್ಞಾನ, ಈ ಐದೂ ಅಳಿದುಹೋಗಿ ಅಲ್ಲಿ ನಿಃಶಬ್ದ ಬ್ರಹ್ಮಮಾತ್ರವಿರುವದು (೪೯), ಮತ್ತು ಸಾಧಕನು ದೇವರ ದೇವರಲ್ಲಿ ಬೆರೆತು ಬೇರೆ ಇಲ್ಲದೆ ಇರುವನು (೫೦). ಈ ರೀತಿ ವಾಙ್ಮನಕ್ಕೆ ಬಾರದ ದೇವರನು ಕೂಡಿ ಅಚಲಾನಂದದೊಳಗಿಪ್ಪ ಪರಮನಿರ್ಲೇಪಿಯ ಸುಖವು (೫೨) ಎಷ್ಟೆಂದು ಹೇಳಬೇಕು? ಆ ಸುಖವು ಸಾಕ್ಷಾತ್ಕಾರಿಗೆ ಮಾತ್ರ ತಿಳಿಯತಕ್ಕದ್ದು. ಮೂಕನು ಸಕ್ಕರೆ ಸವಿದರೂ ಒಂದು ಸವಿಗನಸು ಕಂಡರೂ ಅದನ್ನು ಅನ್ಯರಿಗೆ ಹೇಗೆ ಹೇಳಲರಿಯನೊ ಹಾಗೆ ಈ ಸುಖದ ಪಾಡು ಇರುವದು. ಆರೂಢಸ್ಥಿತಿಯ ಸುಖವನು ದೇವರೇ ಬಲ್ಲ, ಭಕ್ತನೇ ಬಲ್ಲ, ಮಿಕ್ಕವರೇನು ಬಲ್ಲರು (೬೫)? ನೇಹ ನೋಟ ಕೂಟ ಸಂಗಸುಖಗಳಿಗಿಂತ ಸಮರಸಸುಖವೇ ಎಲ್ಲಕ್ಕೂ ಹೆಚ್ಚಿನದು. ಅನುಭವಿಸಿದ ಅನುಭಾವಿಗೆ ಮಾತ್ರ ಅದು ಗೊತ್ತು (೬೩). ವಚನಸಿದ್ಧನು ಈಪರಿಯ ಆಂತರಿಕ ಅನುಭವದಿಂದ ಧನ್ಯನಾಗಿ ಪರಮಾತ್ಮೈಕ್ಯಸುಖವನ್ನು ಅನುಭೋಗಿಸುವನು. ಹೀಗೆ ಅವನು ಸ್ವಚಿತ್ತದಲ್ಲಿಯಷ್ಟೇ ಪರಮಾತ್ಮನನ್ನು ಕಾಣುವನೆಂದಲ್ಲ. ಆದರೆ-ಅವನು ಎಲ್ಲಿ ನೋಡಿದಡಲ್ಲಿ, ಎಲ್ಲಿ ಮುಟ್ಟಿದಲ್ಲಿ, ಎಲ್ಲಿ ಭಾವಿಸಿದಲ್ಲಿ, ಎಲ್ಲೆಡೆಯಲ್ಲಿ ಮಹಾಪ್ರಭೆಯನ್ನೆ ಕಾಣುವನು, ಮತ್ತು ಅವನಿಗೂ ಪರಮಾತ್ಮನಿಗೂ ತೆರಹಿಲ್ಲದಂತಾಗುವದು (೪೪). ಇಂಥ ಅತ್ಯುಚ್ಚ ಸ್ಥಿತಿಯನ್ನು ಕೈವಶಮಾಡಿಕೊಂಡಿದ್ದರಿಂದ ಅವನು ಕ್ಷುತ್, ಪಿಪಾಸೆ, ಶೋಕ, ಮೋಹ, ಮದ ಮತ್ಸರಾದಿ ಅರಿಷಡ್ವರ್ಗಂಗಳಿಂದ ಪೀಡಿತನಾಗನು. ಅವನು, ನಾಹಂ ಕೋಹಂ ಸೋಹಂ, ಎಂಬ ಮುಂತಾದ ಭಾವನಾರಹಿತನಾಗಿರುವನು. ಕರ್ಪೂರತಿಪಿಸಂಯೋಗವಾಗಿ ಕರ್ಪೂರಗುಣವಳಿದು ಅಗ್ನಿಗುಣವಳವಟ್ಟಂತೆ

ಪರಮಾತ್ಮನನ್ನು ನೆನೆನೆನೆದು ಸಾಧಕನು ಪರಮಾತ್ಮನೆ ತಾನಾಗಿರುವನು (೪೬). ಅಂಥವನಲ್ಲಿ ಕಾಮವೆಂಬುದೆಲ್ಲಿಂದ ಬರಬೇಕು? ಅವನು ಅಂತರದಲ್ಲಿ ಭಾವಿಸುವದಿಲ್ಲ, ಬಹಿರಂಗದಲ್ಲಿ ಬಯಸುವದಿಲ್ಲ, ಎರಡನ್ನೂ ಅತಿಗಳೆದು ಅವನು ತನ್ನಲ್ಲಿ ತಾನೇ ಸಿದ್ಧವಾದ ಸಹಜ ಸ್ಥಿತಿಯಲ್ಲಿರುವನು (೪೭). ಈ ಪರಿ ನಿಷ್ಕಾಮನೂ ಅಕಾಮನೂ ಆಪ್ತಕಾಮನೂ ಆಗಿ ವರ್ತಿಸುವುದರಿಂದ ಅವನು ಇದ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ, ಆವ ಸಂಗವೂ ಇಲ್ಲದ ನಿಜೈಕ್ಯನವನು (೭೭). ಅವನು ಆಚರಿಸುವದು ಉಪಚಾರಕ್ಕಾಗಿ, ಎರಡನೆಯವರಿಗೆ ಮಾರ್ಗತೋರಿಸಬೇಕೆಂದು ಹೊರತು ಫಲಪದವನ್ನು ಪಡೆಯಬೇಕೆಂದಲ್ಲ (೭೬). ಇಂಥವರು ಅಮೃತರು, ಅವರಿಗೆ ಸಾವಿಲ್ಲ. ಪರಮಾತ್ಮನಲ್ಲಿ ಉದಯಹೊಂದಿದವರಿಗೆ ಸಾವೆಲ್ಲಿಯದು (೮೨)? ಇದೇ ನಿಜ ಸಹಜ ಸಮಾಧಿಯು. ಇದೇ ವಚನಕಾರರ ಇಷ್ಟಧ್ಯೇಯವು, ಇದನ್ನು ಪಡೆದು ಅವರು ಕೃತಕೃತ್ಯರಾದರು ಮತ್ತು ಅನ್ಯರಿಗೆ ಅದರ ಹಾದಿಯನ್ನು ತೋರಿ ಅವರನ್ನು ಕೃತಾರ್ಥಮಾಡಿದರು.

೧೧೪. ಇದೇ ಪರಾತ್ಪರಸತ್ಯವು ಎಂಬ ನಿಶ್ಚಯವಾಗಬೇಕಾದರೆ ಶ್ರುತಿ, ಯುಕ್ತಿ, ಅನುಭೂತಿ, ಮತ್ತು ಗುರುವಾಕ್ಯ ಇವುಗಳ ಏಕವಾಕ್ಯತೆಯಾಗಬೇಕು, ಎಂದವರು ಹೇಳುವರು. ಆದರೆ ಇವುಗಳಲ್ಲಿ ಮುಖ್ಯವು ಯಾವುದು, ಎಲ್ಲಕ್ಕೂ ಹೆಚ್ಚಿನದು ಆವುದು, ಯಾವುದು ಇಲ್ಲದಿದ್ದರೆ ಮಿಕ್ಕವು ವ್ಯರ್ಥವಾಗುವವು, ಯಾವುದು ಇದ್ದರೆ ಮಿಕ್ಕವುಗಳ ಅವಶ್ಯಕತೆಯು ಅಷ್ಟೊಂದಿಲ್ಲ, ಇದನ್ನೆಲ್ಲ ವಿಚಾರಿಸಿದರೆ ಅನುಭೂತಿಯೆ ಮುಖ್ಯವು ಎನ್ನಬೇಕಾಗುವದು. ಅದಿದ್ದರೆ ಮಾತ್ರ ಸಾಧಕನ ಜನ್ಮವು ಸಾರ್ಥಕವು, ಇಲ್ಲದಿದ್ದರೆ ವ್ಯರ್ಥವು. ಸಾಕ್ಷಾತ್ಕಾರವಾದಿಗಳು ಇದನ್ನೆ ಪ್ರತಿಪಾದಿಸುವರು ಮತ್ತು ಆ ಅನುಭೂತಿಯನ್ನು ಪಡೆಯುವುದೆ ತಮ್ಮ ಕರ್ತವ್ಯವೆಂದು ತಿಳಿಯುವರು. ಶ್ರುತಿ, ಯುಕ್ತಿ, ಗುರುವಾಕ್ಯ ಇವು ಮಾರ್ಗದರ್ಶಕವಿದ್ದರೂ ಸತ್ಯದ ಪೂರ್ಣ ಸಾಕ್ಷಿಗಳಲ್ಲ; ಯಾಕಂದರೆ, ಅವು ಮನುಷ್ಯನನ್ನು ಪೂರ್ಣವಾಗಿ ಮನಗಾಣಿಸಲು ಅಸಮರ್ಥವಿರುವವು ಮತ್ತು ಅವುಗಳಿಂದ ಮನುಷ್ಯನ ಸತ್ಯದ ಹಸಿವು ಪೂರ್ಣವಾಗಿ ಹಿಂಗದು. ಶ್ರುತಿ ಎಂದರೆ ಪೂರ್ವಕಾಲದ ಸಾಕ್ಷಾತ್ಕಾರಿಗಳು ಹೇಳಿದ ಮಾತು. ಯುಕ್ತಿ ಎಂದರೆ ತರ್ಕಶಾಸ್ತ್ರಕ್ಕೆ ಸಲ್ಲುವ ಮಾತು. ಗುರುವಾಕ್ಯ ಅಂದರೆ ಪ್ರತ್ಯಕ್ಷ ಜೀವಂತ ಸಿದ್ಧಪುರುಷನ ವಾಕ್ಯವು. ಇವುಗಳೆಲ್ಲ ಮನುಷ್ಯನನ್ನು ಸತ್ಯೋನ್ಮುಖಮಾಡಬಹುದು, ಅವನನ್ನು ಸಾಧನಪಥಕ್ಕೆ ಹಚ್ಚಬಹುದು, ಇದು ಸತ್ಯವಿರುವದು ಇದರತ್ತ

ಸಾಗಬೇಕು, ಎಂಬ ಶ್ರದ್ಧೆಯನ್ನು ಹುಟ್ಟಿಸಬಹುದು. ಆದರೆ ಪ್ರತ್ಯಕ್ಷ ಅನುಭವವಾದಾಗ ಮಾತ್ರ ಮನುಷ್ಯನು ಪೂರಾ ನಿಃಸಂಶಯನಾಗುವನು ಮತ್ತು ಅವನಿಗೆ ಇದೇ ಸತ್ಯವೆಂಬ ಪೂರ್ಣ ನಿಶ್ಚಯವಾಗುವದು. ಆಗ ಬುದ್ಧಿಯು ಮನವರಿಕೆಯಾಗುವದು, ಭಾವನೆಯು ಒಪ್ಪುವದು, ಮತ್ತು ಸತ್ಯವನ್ನು ಕಾಣಬೇಕೆಂಬ ಸಂಕಲ್ಪವು ತಣಿಯುವದು. ಶ್ರುತಿಯನ್ನು ನಾವು ಕೇಳಿ ಅಥವಾ ಓದಿ ಅದರಲ್ಲಿ ಶ್ರದ್ಧೆಯನ್ನಿಡುವೆವು. ಅದೇ ಮಾತು ಗುರುವಾಕ್ಯವನ್ನೂ ಅನ್ವಯಿಸುವದು. ಅದು ಒಬ್ಬ ಪ್ರತ್ಯಕ್ಷ, ಯೋಗ್ಯ ಜೀವಂತ ಮನುಷ್ಯನ ಬಾಯಿಯಿಂದ ಬರುವುದರಿಂದ ಶ್ರದ್ಧೆಗೆ ಹೆಚ್ಚು ಪಾತ್ರವಿರಬಹುದು. ಅದನ್ನು ನಾವು ತರ್ಕದಿಂದ ಚರ್ಚಿಸಿ ನಮ್ಮ ಬುದ್ಧಿಯನ್ನು ಮನಗಾಣಿಸುವೆವು. ಆದರೆ ಸಾಕ್ಷಾತ್ಕಾರದಿಂದ ನಮ್ಮ ಇಡೀ ಜೀವನ ಶಕ್ತಿಗಳೆಲ್ಲ ತಣಿದು ನಮ್ಮ ಸತ್ಯಾನ್ವೇಷಣ ಪ್ರಯತ್ನಗಳು ವಿರಮಿಸುವಂತೆ ಈ ಯಾವುದರಿಂದಲೂ ಆಗದು. ಎರಡನೇಯವರು ಸಕ್ಕರೆ ಸವಿದು ಅದು ಸವಿ ಇರುವದೆಂದು ಎಷ್ಟು ಹೇಳಿದರೂ ಅದನ್ನು ನಾವು ಸ್ವತಃ ಸವಿಯುವನಕ ನಮಗೆ ಸಂತೃಪ್ತಿಯಾಗದಿರುವಂತೆ ಸಾಕ್ಷಾತ್ಕಾರವಾಗುವವರೆಗೆ ಎಲ್ಲವೂ ಕೇಳಿಕೆಯ ಮಾತೇ ಸೈ, ಸುಮ್ಮನೆ ಕೇಳಿ ತಲೆದೂಗುವುದೇ ಸೈ. ಪ್ರತ್ಯಕ್ಷ, ಅನುಮಾನ, ಆಪ್ತವಾಕ್ಯ ಇವುಗಳಲ್ಲಿ ಪ್ರತ್ಯಕ್ಷವೇ ಎಲ್ಲಕ್ಕೂ ಹೆಚ್ಚು ಪ್ರಮಾಣವಿರುವಂತೆ ಪಾರಮಾರ್ಥಿಕ ಸತ್ಯದ ವಿಷಯದಲ್ಲಿ ಸಾಕ್ಷಾತ್ಕಾರವೇ ಎಲ್ಲಕ್ಕೂ ಹೆಚ್ಚಿನದು, ಮತ್ತು ಪ್ರಾಮಾಣ್ಯವುಳ್ಳದ್ದು. ಅನುಮಾನ ಹಾಗೂ ಆಪ್ತವಾಕ್ಯ ಇವು ಪ್ರತ್ಯಕ್ಷಕ್ಕೆ ವಿರೋಧಿಯಾಗಿದ್ದರೆ ಅವು ಸಲ್ಲವು. ಅದೇ ಮಾತು ಸಾಕ್ಷಾತ್ಕಾರದ ವಿಷಯದಲ್ಲಿಯೂ ಸತ್ಯವಿರುವದು. ಆ ಸಾಕ್ಷಾತ್ಕಾರವು ಸ್ಫೂರ್ತಿಯಿಂದಲೆ ಆಗಬಲ್ಲದು. ಆ ಸ್ಫೂರ್ತಿಶಕ್ತಿಯು, ಆ ಅಂತಃಸ್ಫೂರ್ತಿಯು ಮನುಷ್ಯನ ಏಳ್ಕ ಶಕ್ತಿಗಳಾಚೆಗೆ ಇರುವದು. ಸ್ಫೂರ್ತಿಯ ಕಣ್ಣಿನಿಂದ ಕಂಡ ದರ್ಶನವೆ ಸಾಕ್ಷಾತ್ಕಾರವು, ಅದೇ ದಿವ್ಯದರ್ಶನವು. ವಚನಕಾರರು ಇಂಥ ಸಾಕ್ಷಾತ್ಕಾರವೆ ಎಲ್ಲಕ್ಕೂ ಹೆಚ್ಚಿನ ಅನುಭವವು, ಎಂದು ಪ್ರತಿಪಾದಿಸಿದರು ಮತ್ತು ಅದನ್ನು ಪಡೆದರು. ಆ ಸಾಕ್ಷಾತ್ಕಾರವೆಂಬುದು, 'ಹೀಗೆ, ಇದೇ ರೀತಿಯಿಂದ, ಇದೇ ಮಾರ್ಗದಿಂದ ಹೋದರೆ ಆಗುವದು ಎಂದು ಎದೆತಟ್ಟಿ ಹೇಳಲಿಕ್ಕೆ ಬರುವಂತಿಲ್ಲ. ಅದರೂ ಭೂಮಿಯನ್ನು ಹಸನಮಾಡಿ, ನೇಗಿಲಹೊಡೆದು ಬೀಜವನ್ನೂರಿ ಒಕ್ಕಲಿಗನು ಮಳೆಯ ಸಲುವಾಗಿ ಮುಗಿಲಿನ ಕಡೆಗೆ ನೋಡುತ್ತ ಕೂಡುವಂತೆ ಸಾಧಕನು ತನ್ನ ಚಿತ್ತಕ್ಷೇತ್ರವನ್ನು ಶುದ್ಧೀ

ಕರಿಸಿ ಯಮನಿಯಮಗಳಿಂದ ಅದನ್ನು ಹರಗಿ, ಅದರಲ್ಲಿ ನಿರ್ಹೇತುಕ ಪರಮಾತ್ಮಪ್ರೇಮದ ಬೀಜವನ್ನು ಹಾಕಿ, ಉತ್ಕಂಠಿತನಾಗಿ ಸಾಕ್ಷಾತ್ಕಾರದ ಹಾದೀ ಕಾಯಬೇಕು. ಅಂದರೆ ಸಾಕ್ಷಾತ್ಕಾರವು ಮೈದೋರಿ, ಮನಸಿನ ಆಕಾಂಕ್ಷೆಯನ್ನು ಪೂರ್ತಿಗೊಳಿಸುವದು. ಇನ್ನು ಸಾಕ್ಷಾತ್ಕಾರವನ್ನು ಪಡೆಯಲು ವಚನಕಾರರು ಯಾವ ಬಗೆಯ ಸಾಧನಪಥದಿಂದ ಸಾಗಿದರು ಇದನ್ನು ಮುಂದಿನ ಪ್ರಕರಣವು ವಿಚಾರಿಸುವದು.

---

೬. ವಚನಕಾರರ ಸಾಧನಮಾರ್ಗವು

(೧೧೫) ಮನುಷ್ಯನಲ್ಲಿಯ ಐದು ಶಕ್ತಿಗಳು. ಯೋಗ ಅಥವಾ ಸಾಧನ ಎಂದರೇನು? (೧೧೬) ಐದು ಶಕ್ತಿಗಳಿಗನುಗುಣವಾಗಿ ಐದು ಯೋಗಮಾರ್ಗಗಳು. (೧೧೭) ಪಂಚಯೋಗಗಳ ಸಾಧನಕ್ರಮವು. (೧೧೮) ಸಮನ್ವಯಯೋಗದ ಲಕ್ಷಣಗಳು. (೧೧೯) ವಚನಕಾರರು ಸಮನ್ವಯಯೋಗಿಗಳು. (೧೨೦) ಭಕ್ತಿ, ಜ್ಞಾನ, ಕ್ರಿಯೆ, ಧ್ಯಾನ ಇವುಗಳ ಪರಸ್ಪರ ಸಂಬಂಧ. (೧೨೧) ಜ್ಞಾನಯೋಗದ ಬಗ್ಗೆ ವಚನಕಾರರು. (೧೨೨) ಭಕ್ತಿ ಮತ್ತು ಅದರ ವಿಧಗಳು. (೧೨೩) ಭಕ್ತಿಮಾರ್ಗದ ಬಗ್ಗೆ ವಚನಕಾರರು. (೧೨೪) ಕರ್ಮಯೋಗದ ಸ್ವರೂಪವು. (೧೨೫) ಕರ್ಮಯೋಗವನ್ನು ಕುರಿತು ವಚನಕಾರರು. (೧೨೬) ಧ್ಯಾನಯೋಗವನ್ನು ಕುರಿತು ವಚನಕಾರರು. (೧೨೭) ಸಾಧನಕ್ಕೆ ಅವಶ್ಯವಿದ್ದ ಗುರುಕಾರುಣ್ಯ, ಚಿತ್ತಶುದ್ಧಿ ಮುಂತಾದವು. (೧೨೮) ಶ್ರದ್ಧೆ, ನಿಷ್ಠೆಗಳು. (೧೨೯) ದೀಕ್ಷೆ, ನಾಮಮಹಿಮೆ, ಮತ್ತು ಸತ್ಸಂಗ. (೧೩೦) ವಚನಕಾರರ ಸಾಧನಮಾರ್ಗವು ಎಲ್ಲರಿಗೂ ಮುಕ್ತದ್ವಾರವು.

೧೧೫. ಅನುಭಾವವಾದಿಗಳಾದ ವಚನಕಾರರು ಆ ಅನುಭಾವವನ್ನು ಪಡೆಯಲು ಯಾವ ಪ್ರಯತ್ನಗಳನ್ನು ಮಾಡಿದರು, ಯಾವ ಸಾಧನಗಳನ್ನು ಪ್ರಯೋಗಿಸಿದರು, ಯಾವ ಸೋಪಾನದಿಂದ ಏರಿ ಆರೂಢರಾದರು, ಇದು ಈ ಪ್ರಕರಣದ ಪ್ರಧಾನ ವಿಷಯವಿರುವದು. ಜಗತ್ತಿನ ಭಿನ್ನ ಭಿನ್ನ ದೇಶಗಳಲ್ಲಿ ಆಗಿಹೋದ ಸಾಕ್ಷಾತ್ಕಾರಿಗಳ ಅನುಭವವು ತತ್ವತಃ ಒಂದೇ ಬಗೆಯು

ದಿದ್ದರೂ ಅವರ ಸಾಧನಗಳು ಅವರವರ ಸ್ವಭಾವ, ಅವರವರ ದೇಶಕಾಲ ಪರಿಸ್ಥಿತಿ, ಇವುಗಳಿಗನುಸರಿಸಿ ಬೇರೆಬೇರೆ ಇದ್ದವು. ಹೀಗಿದ್ದರೂ ಮನುಷ್ಯನು ತನ್ನ ಆತ್ಮವಿಕಾಸಕ್ಕಾಗಿ ಉಪಯೋಗಿಸಬಹುದಾದ ಶಕ್ತಿಗಳಿಗನುಗುಣವಾಗಿ ಸಾಧನಮಾರ್ಗಗಳಲ್ಲಿ ವರ್ಗಗಳನ್ನು ಮಾಡಿ, ಅವುಗಳ ಲಕ್ಷಣಗಳನ್ನು ಹೇಳಬಹುದು ಮತ್ತು ಆಯಾ ಸಾಕ್ಷಾತ್ಕಾರಿಗಳು ಯಾವ ವರ್ಗದ ಸಾಧಕರಿದ್ದರು ಅಥವಾ ಇರುವರು ಎಂಬುದನ್ನು ಗೊತ್ತುಹಚ್ಚಬಹುದು. ಆ ದೃಷ್ಟಿಯಿಂದ ಮನುಷ್ಯನಲ್ಲಿಯ ಶಕ್ತಿಗಳನ್ನು ವಿಂಗಡಿಸಿದರೆ ಪ್ರಾಣಶಕ್ತಿ, ಕ್ರಿಯಾಶಕ್ತಿ, ಧ್ಯಾನಶಕ್ತಿ, ಭಾವನಾಶಕ್ತಿ, ಮತ್ತು ಬುದ್ಧಿಶಕ್ತಿ, ಎಂಬ ಐದು ಶಕ್ತಿಗಳು ನಮಗೆ ಕಾಣುವವು. ಈ ಶಕ್ತಿಗಳು ಮನುಷ್ಯನಲ್ಲಿ ಬೇರೆಬೇರೆಯಾಗಿ ಪರಸ್ಪರ ಸ್ವತಂತ್ರಸ್ಥಿತಿಯಲ್ಲಿರುವುದಿಲ್ಲ. ಇವು ಯಾವಾಗಲೂ ಪರಸ್ಪರ ಅವಲಂಬನದಿಂದಲೆ ಇರುವವು ಮತ್ತು ಇವೆಲ್ಲ ಒಂದೇ ವ್ಯಕ್ತಿತ್ವದ ಘಟಕಗಳಿರುವವು. ಒಬ್ಬ ಮನುಷ್ಯನ ಕಣ್ಣು ಕಿವಿ ಮೂಗು ಮುಂತಾದ ಬಾಹ್ಯ ಪಂಚಜ್ಞಾನೇಂದ್ರಿಯಗಳು ಬೇರೆಬೇರೆಯಾಗಿ ಕಂಡರೂ ಬೇರೆಬೇರೆ ಕಾರ್ಯಗಳನ್ನು ಮಾಡುವಂತೆ ತೋರಿದರೂ ಅವು ಒಂದೇ ಶರೀರದಲ್ಲಿದ್ದು ಜ್ಞಾನಸಂಗ್ರಹದ ಒಂದೇ ಕಾರ್ಯವನ್ನು ಮಾಡುತ್ತಿರುವುದರಿಂದ ಅವೆಲ್ಲ ತತ್ವತಃ ಒಂದೇ ಇರುವವು ಮತ್ತು ಪರಸ್ಪರ ಸಹಕಾರದಿಂದ ಕಾರ್ಯಮಾಡಿ, ಪರಸ್ಪರರ ಸಂರಕ್ಷಣೆಮಾಡಿ, ತಮ್ಮ ವಿಕಾಸವನ್ನು ಸಾಧಿಸುವವು. ಅದೇ ಪ್ರಕಾರ, ಈಗ ಹೇಳಿದ ಮನುಷ್ಯನ ಅಂತರದಲ್ಲಿರುವ ಪಂಚಶಕ್ತಿಗಳ ಸಂಗತಿಯೂ ಇರುವದು. ಯಾವನೊಬ್ಬನ ಕಣ್ಣು, ಇನ್ನೊಬ್ಬನ ಕಿವಿ, ಮತ್ತೊಬ್ಬನ ಮೂಗು ತೀಕ್ಷ್ಣವಿರುವಂತೆ ಬೇರೆಬೇರೆ ಜನರಲ್ಲಿ ಈ ಆಂತಃಶಕ್ತಿಗಳು ಹೆಚ್ಚು ಕಡಿಮೆ ಬಲವುಳ್ಳವುಗಳಿರಬಲ್ಲವು. ಹೀಗೆ ಬಲಾಬಲಗಳ ಪ್ರಮಾಣದಲ್ಲಿ ಹೆಚ್ಚು ಕಡಿಮೆ ಇದ್ದರೂ ಇವೆಲ್ಲ ಶಕ್ತಿಗಳು ಮನುಷ್ಯಮಾತ್ರನಲ್ಲಿ ಇದ್ದೇಇರುವವು. ಇನ್ನು ಯಾವನಿಗೊಬ್ಬನಿಗೆ ಹುಚ್ಚುಗಿಚ್ಚು ಹಿಡಿದಿದ್ದರೆ ಮಾತು ಬೇರೆ! ಈ ಶಕ್ತಿಗಳಿಗೆ ಮನುಷ್ಯನ ಆತ್ಮವೆಂಬುದೆ ಆಶ್ರಯಿಸ್ಥಾನವು. ಜ್ಞಾನೇಂದ್ರಿಯಗಳ ಸಮನ್ವಯವು ಮನಸಿನಲ್ಲಿ ಆಗುತ್ತಿರುವಂತೆ ಈ ಶಕ್ತಿಗಳ ಸಮನ್ವಯವು ಜೀವಾತ್ಮನಲ್ಲಿ ಆಗುವದು. ಮನುಷ್ಯನು ಸಾಮಾನ್ಯವಾಗಿ ಈ ಶಕ್ತಿಗಳ ಉಪಯೋಗವನ್ನು ತನ್ನ ವಿಷಯವಾಸನೆಗಳ ತೃಪ್ತಿಗಾಗಿ ಮಾಡುವನು. ಇಲ್ಲಿ ವಿಷಯ ವಾಸನೆಯೆಂದರೆ, ಸ್ಥೂಲ ಸೂಕ್ಷ್ಮ ಇಂದ್ರಿಯ ಸುಖಗಳ ಸಲುವಾಗಿ ಮನಸಿನಲ್ಲಿ ಉತ್ಪನ್ನವಾಗುವ

ಮತ್ತು ಯಾವದೇ ಇಂದ್ರಿಯವಿಷಯವನ್ನವಲಂಬಿಸಿದ ಆಶಾಜಾಲವು. ಈ ವಿಷಯವಾಸನೆಗಳ ತೃಪ್ತಿಯಿಂದ ಉಂಟಾದ ಸುಖಗಳು ಭಂಗುರ, ಪಾಯಿಕ, ಮತ್ತು ದೋಷಮಿಶ್ರಿತವಿದ್ದು ದುಃಖಬೀಜಗಳಾಗಿರುವವು ಎಂಬುದನ್ನು ತಿಳಿದುಕೊಂಡು, ಇವುಗಳಾಚೆಗಿರುವ ನಿರಾಲಂಬ ಆತ್ಮಸುಖವನ್ನು ಪಡೆಯುವ ಇಚ್ಛೆಯುಂಟಾಗಿ, ಅದರ ಪ್ರಾಪ್ತಿಗಾಗಿ ಮನುಷ್ಯನು ಈ ಶಕ್ತಿಗಳನ್ನು ಉಪಯೋಗಿಸಲನುವಾಗುವನು. ಅದೇ ಅವನ ಸಾಧನದ ಪ್ರಾರಂಭವು, ಅವನ ಮುಮುಕ್ಷುತ್ವದ ಮೊದಲನೆಯ ಮಾತು, ಅವನ ಮೋಕ್ಷಸೋಪಾನದ ಮೊದಲನೆಯ ಮೆಟ್ಟಲು. ಈ ರೀತಿ, ನಮ್ಮ ಶಕ್ತಿಗಳನ್ನು ಆತ್ಮಸುಖಪ್ರಾಪ್ತಿಗಾಗಿ ಬುದ್ಧಿಪೂರ್ವಕ ಉಪಯೋಗಿಸುವುದೆ, ಸಾಧನವು ಅಥವಾ ಯೋಗವು ಅಥವಾ ಯೋಗಮಾರ್ಗವು.

೧೧೬. ಆಯಾ ಶಕ್ತಿಗಳನ್ನವಲಂಬಿಸಿದ ಯೋಗಮಾರ್ಗಗಳನ್ನು ಮತ್ತು ವಚನಕಾರರು ಅನುಸರಿಸಿದ ವಿಶಿಷ್ಟ ಯೋಗವನ್ನು ಹೇಳುವದಕ್ಕೂ ಪೂರ್ವದಲ್ಲಿ ಮೇಲೆ ಹೇಳಿದ ಶಕ್ತಿಗಳ ಕಾರ್ಯಗಳು ಯಾವವು, ಏನು, ಇದನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳುವದು ಅವಶ್ಯ. ಹೊರಗಿನ ಉಗುರು ತುದಿ ಮೊದಲುಮಾಡಿ ಒಳಗಿನ ಮಿದುಳಿನ ಕಣಗಳವರೆಗೆ ನಮ್ಮ ಶರೀರದ ಯಾವದೇ ಭಾಗದಿಂದ ನಮ್ಮ ಶರೀರದ ರಕ್ಷಣೆ ಪೋಷಣೆಗಾಗಿ ನಡೆದ ಎಲ್ಲ ಚಲನವಲನಗಳಿಗೆ ಆಧಾರವಾದ ಶಕ್ತಿಯೆ ಪ್ರಾಣಶಕ್ತಿ ಎನಿಸುವದು. ನಮ್ಮ ಈ ಶರೀರವನ್ನು ಒಂದು ಜೀವಂತ ಯಂತ್ರವನ್ನಾಗಿ ಮಾಡಿಡಲಿಕ್ಕೆ ಅದೇ ಶಕ್ತಿಯು ಕಾರಣವು. ಈ ಶರೀರದಿಂದ ಇಲ್ಲವೆ ಮನದಿಂದ ಸಂಕಲ್ಪಪೂರ್ವಕವಾಗಿ ಮಾಡತಕ್ಕ ಎಲ್ಲ ಕರ್ಮಗಳನ್ನು ಮಾಡುವ ಶಕ್ತಿಯು ಕ್ರಿಯಾಶಕ್ತಿಯು. ಯಾವ ಶಕ್ತಿಯ ಮೂಲಕ ಮನುಷ್ಯನ ಮನಸಿನಲ್ಲಿ ಸಂಕಲ್ಪವಿಕಲ್ಪಗಳೂ ನಾನಾವೃತ್ತಿಗಳೂ ಉಂಟಾಗುವವೊ ಅದೇ ಧ್ಯಾನಶಕ್ತಿಯು. ರಾಗದ್ವೇಷಾದಿ ಕಾಮಕ್ರೋಧಾದಿ ಆವೇಗಗಳಿಗೆ ಆಧಾರವಾದ ಶಕ್ತಿಯೆ ಭಾವನಾಶಕ್ತಿಯು. ಒಳಿತು ಕೆಡಕು, ಸಟೆ ದಿಟ, ಮುಂತಾದವುಗಳನ್ನು ಪ್ರತ್ಯಕ್ಷ, ಅನುಮಾನ, ಆಪ್ತವಾಕ್ಯ ಈ ಪ್ರಮಾಣಗಳಿಂದ ನಿಶ್ಚಯಿಸುವ ಶಕ್ತಿಯೆ ಬುದ್ಧಿಯು. ಈ ಐದು ಶಕ್ತಿಗಳಲ್ಲಿ ಯಾವುದೊಂದು ಶಕ್ತಿಯನ್ನು ವಿಶೇಷವಾಗಿ ಅವಲಂಬಿಸಿ ಆತ್ಮಸುಖದ ಮಾರ್ಗವನ್ನು ಹಿಡಿಯಲಿಕ್ಕೆ ಬರುವದು. ಸಾಧಕನು ಮುಖ್ಯವಾಗಿ ಯಾವ ಶಕ್ತಿಯನ್ನವಲಂಬಿಸುವನೊ ಆ ಪ್ರಕಾರ, ಆಯಾ ಯೋಗದ ಹೆಸರು ಬೇರೆಯಾಗುವದು. ಹೀಗೆ ಅನುಕ್ರಮವಾಗಿ, ಪ್ರಾಣಶಕ್ತಿಯನ್ನವಲಂಬಿಸಿದರೆ ಹಠಯೋಗ ಅಥವಾ ಪ್ರಾಣಯೋಗ, ಕ್ರಿಯಾಶಕ್ತಿಯನ್ನವ

ಲಂಬಿಸಿದರೆ ಕ್ರಿಯಾಯೋಗ ಅಥವಾ ಕರ್ಮಯೋಗ, ಧ್ಯಾನಶಕ್ತಿಯನ್ನವ ಲಂಬಿಸಿದರೆ ಧ್ಯಾನಯೋಗ ಅಥವಾ ರಾಜಯೋಗ ಅಥವಾ ಪಾತಂಜಲ ಯೋಗ ಅಥವಾ ಅಷ್ಟಾಂಗಯೋಗ, ಭಾವನಾಶಕ್ತಿಯನ್ನವಲಂಬಿಸಿದರೆ ಭಕ್ತಿಯೋಗ ಅಥವಾ ಭಾವನಾಯೋಗ, ಮತ್ತು ಕೊನೆಗೆ ಬುದ್ಧಿಯನ್ನವ ಲಂಬಿಸಿದರೆ ಜ್ಞಾನಯೋಗ, ಎಂಬ ಹೆಸರುಗಳನ್ನು ನಾವು ಉಪಯೋಗಿಸ ಬಹುದು. ಈ ಶಕ್ತಿಗಳು ಕಾರ್ಯಪರತ್ವದಿಂದ ಬೇರೆ ಹೆಸರುಗಳನ್ನು ಪಡೆದಿದ್ದರೂ ಅವು ಪೂರ್ಣ ಸ್ವತಂತ್ರ ಮತ್ತು ಪ್ರತ್ಯೇಕವಿರದೆ ಪರಸ್ಪರಾವ ಲಂಬಿ ಇರುವಂತೆ ಈ ಯೋಗಮಾರ್ಗಗಳೂ ಅನ್ಯೋನ್ಯ ಅವಲಂಬನದಿಂದಲೆ ಸಿದ್ಧವಾಗುವವು. ಪ್ರತಿಯೊಂದು ಮಾರ್ಗದಲ್ಲಿ ಒಂದೇ ಶಕ್ತಿಯ ವಿಶೇಷ ಉಪ ಯೋಗವಾಗುತ್ತಿದ್ದರೂ ಎಲ್ಲ ಶಕ್ತಿಗಳ ಉಪಯೋಗವನ್ನೂ ಮಾಡಿಯೇ ಮಾಡಬೇಕಾಗುವದು. ಎಲ್ಲ ಮಾರ್ಗಗಳ ಗುರಿಯು ಒಂದೇ–ಆತ್ಮಸುಖ, ಪರಮಾನಂದ, ನಿತ್ಯಾನಂದ ಸ್ಥಿತಿ. ಅವೆಲ್ಲವುಗಳ ಪ್ರಕ್ರಿಯೆಯಾದರೂ ಒಂದೇ ತರಹದ್ದಿರುವದು. ಪ್ರತಿಯೊಂದು ಯೋಗದಲ್ಲಿ ಆಯಾ ಶಕ್ತಿಯ ಶುದ್ಧೀ ಕರಣ, ಸಂಯಮ ಮತ್ತು ಸಂಗ್ರಹ, ಅದರ ಏಕಾಗ್ರೀಕರಣ ಮತ್ತು ಪರಾತ್ಪರ ಸತ್ಯದಲ್ಲಿ ಅಥವಾ ಪರಮಾತ್ಮನಲ್ಲಿ ಅದರ ಸಮರ್ಪಣ, ಹೀಗೆ ಸಾಧನಸಪ್ತಕ ಇರುವದು.

೧೩೭. ಎಲ್ಲ ಯೋಗಗಳ ಪ್ರಕ್ರಿಯೆಯು ಒಂದೇ ಇರುವಂತೆ ಅವು ಗಳನ್ನು ಸಾಧಿಸುವಾಗ ಸಾಧಕನು ಪಾಲಿಸತಕ್ಕ ಕೆಲವು ನಿಯಮಗಳು ಮತ್ತು ಮಾಡತಕ್ಕ ಶುದ್ಧ ಆಚರಣೆಯು ಒಂದೇ ಬಗೆಯವಿರುವವು. ಅವನಿಗೆ ತನ್ನ ಧ್ಯೇಯದಲ್ಲಿ ಶ್ರದ್ಧೆಯೂ ಕರ್ಮದಲ್ಲಿ ನಿಷ್ಠೆಯೂ ಅವಶ್ಯವು. ಅವನು ಬ್ರಹ್ಮಚರ್ಯ, ಸತ್ಯ, ಅಹಿಂಸೆ, ಅಸ್ತೇಯ, ಮುಂತಾದ ವ್ರತಗ ಳನ್ನು ಪಾಲಿಸಲಿಕ್ಕೆ ಬೇಕು. ಅವನು ನೀತಿವಂತನೂ ಸದಾಚಾರಿಯೂ ಆಗಿರಬೇಕು. ಇನ್ನು ಪ್ರತಿಯೊಂದು ಯೋಗದ ಪ್ರಕ್ರಿಯೆಯ ಮತ್ತು ವ್ರತನಿಯಮಗಳ ಸಾಮಾನ್ಯಸ್ವರೂಪವು ಈವರೆಗೆ ಹೇಳಿದಂತೆ ಇದ್ದರೂ ಆಯಾ ಯೋಗದ ಮುಖ್ಯ ಸಾಧನವೆಂದು ಬೇರೆ ಬೇರೆ ಶಕ್ತಿಗಳು ಉಪ ಯೋಗಿಸಲ್ಪಡುತ್ತಿರುವುದರಿಂದ ಆಯಾ ಶಕ್ತಿಯ ಶುದ್ಧೀಕರಣಾದಿಗಳನ್ನು ಸಾಧಿಸುವುದಕ್ಕಾಗಿ ವಿಶಿಷ್ಟ ಮತ್ತು ಬೇರೆ ಬೇರೆ ರೀತಿಯಿಂದ ಸಾಗಬೇಕಾ ಗುತ್ತದೆ. ಹಠಯೋಗ ಅಥವಾ ಪ್ರಾಣಯೋಗದಲ್ಲಿ ಸ್ನಾನ, ನೌಲಿ, ಧೌತಿ, ಬಸ್ತಿ ಮುಂತಾದ ಕ್ರಿಯೆಗಳಿಂದ ಶರೀರದ ಅಂತರ್ಬಾಹ್ಯಗಳನ್ನು ಶುಚಿ ಮಾಡುವರು. ಆಸನಾದಿಗಳಿಂದ ಶರೀರದ ಸ್ಥಿರತೆ ಆರೋಗ್ಯಗಳನ್ನು ಸಾಧಿಸು

ವರು. ಭಸ್ರಿಕಾದಿ ಪ್ರಾಣಾಯಾಮ ಪರ್ಯಾಯಗಳಿಂದ ನಾಡಿಶುದ್ಧಿ, ಕುಂಭಕದಿಂದ ಚಿತ್ತಸ್ಥೈರ್ಯ ಇವುಗಳನ್ನು ಪಡೆಯಲು ಹವಣಿಸುವರು. ಮೂಲಬಂಧ, ಷಣ್ಮುಖೀಮುದ್ರೆ ಮುಂತಾದವುಗಳಿಂದ ಕುಂಡಲಿನಿ ಶಕ್ತಿಯನ್ನು ಜಾಗ್ರತಗೊಳಿಸಿ ಸಹಸ್ರದಲಕಮಲದಲ್ಲಿರುವ ಬ್ರಹ್ಮನನ್ನು ಕೂಡುವ ಯತ್ನವನ್ನು ಮಾಡುವರು. ಹಾಗೆ ಬ್ರಹ್ಮನನ್ನು ಕೂಡುವುದೆ ಪ್ರಾಣಯೋಗದಲ್ಲಿ ಪರಮಸಿದ್ಧಿಯು, ಅದೇ ಪರಮಾನಂದ ಸ್ಥಾನವು. ಕರ್ಮ ಯೋಗದಲ್ಲಿ ಸಂಕಲ್ಪಶುದ್ಧಿಯು ಅವಶ್ಯ. ಆದುದರಿಂದ ಮೊದಲು, ಫಲಾಶೆ ಬಿಟ್ಟು ತಮ್ಮ ಕರ್ತವ್ಯವನ್ನು ಮಾಡಲಾರಂಭಿಸುವರು. ಆ ಕರ್ತವ್ಯವನ್ನು ಕೂಡ ಸ್ವ ಅರ್ಥಕ್ಕಾಗಿ ಮಾಡದೆ ಪರಾರ್ಥಕ್ಕಾಗಿ, ಲೋಕಸಂಗ್ರಹಾರ್ಥ ವಾಗಿ ಮಾಡುವರು. ಸ್ವಾರ್ಥ, ಅಹಂಭಾವ, ಕಾಮನೆ, ದೇಹಾತ್ಮಬುದ್ಧಿ ಇವುಗಳನ್ನು ತೊರೆದು ಸಮಬುದ್ಧಿಯನ್ನು ಪಡೆಯಲಿಚ್ಛಿಸುವರು. ಸಮ ಬುದ್ಧಿಯು ಸರ್ವಾತ್ಮತ್ವವನ್ನು ಅಳವಡಿಸಿಕೊಡುವದು. ಆಗ, ತಾನು, ತಾ ಮಾಡಿದ ಕರ್ಮ, ಆ ಕರ್ಮದ ಫಲ, ಅದರ ಉದ್ದೇಶ ಅವೆಲ್ಲ ಬ್ರಹ್ಮ ಮಯವೆ ಆಗಿ ಸಾಧಕನು ಕರ್ಮಸಮಾಧಿಯ ಶಿಖರವನ್ನು ಮುಟ್ಟುವನು. ಕರ್ಮಯೋಗಿಯ ಪರಮೋಚ್ಚಸ್ಥಿತಿಯು ಇದೇ. ಧ್ಯಾನಯೋಗದಲ್ಲಿ ಸ್ನಾನಾದಿ ವಿಧಿಗಳಿಗೂ ಆಸನಗಳಿಗೂ ಅಷ್ಟೊಂದು ಮಹತ್ವವಿಲ್ಲ. ಸಾಮಾನ್ಯ ಸ್ವಚ್ಛತೆ ಹಾಗೂ ಸಹಜ, ಸುಖಕರ, ಮತ್ತು ಸ್ಥಿರವಾದ ಆಸನವಿದ್ದರೆ ಸಾಕು. ಪ್ರಾಣಾಯಾಮದ ಭಸ್ರಿಕಾದಿ ಪ್ರಕಾರಗಳಿಗಿಂತ ಕುಂಭಕಕ್ಕೆ ಈ ಯೋಗದಲ್ಲಿ ಅತ್ಯಂತ ಮಹತ್ವವಿರುವದು. ಯಾಕಂದರೆ, ಚಿತ್ತವೃತ್ತಿನಿರೋಧವೆ ಈ ಯೋಗದ ಮುಖ್ಯ ಉದ್ದೇಶವು, ಮತ್ತು ಅದನ್ನು ಸಾಧಿಸಲಿಕ್ಕೆ ಕುಂಭಕವು ಸಹಾಯಕವು. ಯಾವದೊಂದು ಪರಮಾತ್ಮ ಪ್ರತೀಕದಲ್ಲಿ ಚಿತ್ತವನ್ನು ಏಕಾಗ್ರಮಾಡಿ ಧ್ಯಾನಮಾಡುತ್ತ, ಧಾರಣೆಯನ್ನು ಸಾಧಿಸಿ, ಸಾಧಕನು ಸಮಾಧಿಯಲ್ಲಿ ಸ್ಥಿರನಾಗುವನು. ಇದೇ ಧ್ಯಾನ ಯೋಗಿಯ ಕೊನೆಯ ಮೆಟ್ಟು, ಮತ್ತು ಇದೇ ನಿತ್ಯಾನಂದ ಸ್ಥಿತಿಯು. ಭಕ್ತಿಯೋಗದಲ್ಲಿ, ಮನಸಿನಲ್ಲಿ ಉತ್ಪನ್ನವಾಗುವ ಅನೇಕ ವಾಸನಾಮೂಲಕ ಮತ್ತು ದುಃಖಜನಕ ಭಾವನೆಗಳ ಆವೇಗವನ್ನು ತಡೆದು ಅವೆಲ್ಲವುಗಳ ಶಕ್ತಿಯನ್ನು ಪರಮಾತ್ಮಪ್ರೇಮದಲ್ಲಿ ಪರಿವರ್ತಿಸುವರು. ನಿರ್ಹೇತುಕ, ನಿರತಿಶಯ ಪರಮಾತ್ಮಪ್ರೇಮವೆ ಈ ಯೋಗದ ಮುಖ್ಯ ಲಕ್ಷಣವು. ಪರ ಮಾತ್ಮನನ್ನು ಕಂಡು ಕೂಡಿಕೊಳ್ಳಬೇಕೆಂಬ ಅತ್ಯಂತ ಉತ್ಕಟತೆಯೆ ಸಾಧಕ ನನ್ನು ಈ ಮಾರ್ಗದಲ್ಲಿ ಮುಂದೆ ಒಯ್ಯುವದು. ಶ್ರವಣಕೀರ್ತನಾದಿಗಳಲ್ಲಿ

ತೊಡಗಿ ನವವಿಧ ಭಕ್ತಿಯನ್ನು ಮಾಡುತ್ತ ಕೊನೆಗೆ ಆತ್ಮನಿವೇದನ ಅಂದರೆ ಪರಮಾತ್ಮ ಚರಣದಲ್ಲಿ ಸರ್ವಸಮರ್ಪಣಮಾಡಿ ಸಾಧಕನು ಧನ್ಯನಾಗುವನು. ಅದೇ ಭಕ್ತಿಯೋಗಿಯ ಪರಮಾನಂದಸ್ಥಿತಿಯು. ಜ್ಞಾನಯೋಗದಲ್ಲಿ ಸ್ವಾರ್ಥಪರಾಯಣ ವಿಚಾರಗಳನ್ನು ಪೂರ್ಣಬಿಟ್ಟು, ನಿರಪೇಕ್ಷರಾಗಿ, ಬುದ್ಧಿಯ ಬಲದಿಂದ ಕೇವಲ ಸತ್ಯವನ್ನು ಹುಡುಕುವರು. ಹಾಗೆ ಹುಡುಕುತ್ತಿರಲು, ತಾನು ಈ ದೇಹವಲ್ಲ, ಮನವಲ್ಲ, ಬುದ್ಧಿಯಲ್ಲ, ತಾನು ಆತ್ಮ ಸ್ವರೂಪನು, ಈ ವಿಶ್ವದ ಮೂಲದಲ್ಲಿಯೂ ಆತ್ಮವಸ್ತುವೆ ಇರುವದು ಎಂಬುದನ್ನು ಸಾಧಕನು ನಿಶ್ಚಯಿಸುವನು. ಆ ಆತ್ಮನ ಯಥಾರ್ಥವಾದ ಅಮೃತ, ಅವ್ಯಯ, ಅನಂತ, ಅಖಂಡ, ಅದ್ವಯ ಸ್ವರೂಪವನ್ನು ಅರಿತು ಕೊಂಡು ಅದರಲ್ಲಿಯೆ ಸಾಧಕನು ಸ್ಥಿರನಾಗುವನು. ಹೀಗೆ ಆತ್ಮಾನಾತ್ಮ ವಿವೇಕಮಾಡಿ ಸಂಶಯರಹಿತ ಆತ್ಮಜ್ಞಾನದಲ್ಲಿ ತನ್ಮಯನಾಗುವುದೆ ಜ್ಞಾನಯೋಗಿಯ ಪರಮಧ್ಯೇಯವು. ಹೀಗೆ ಈ ಪಂಚಯೋಗಗಳ ಲಕ್ಷಣಗಳು ಮತ್ತು ಪ್ರಕ್ರಿಯೆಗಳು ಇರುವವು.

೧೫೮. ಮೇಲೆ ಹೇಳಿದಂತೆ ಮನುಷ್ಯನ ಪ್ರತಿಯೊಂದು ಶಕ್ತಿಯನ್ನವಲಂಬಿಸಿದ ಒಂದೊಂದು ಯೋಗಮಾರ್ಗವಿರುವದು. ಇದಲ್ಲದೆ ಸಮನ್ವಯ ಯೋಗವೆಂಬದೊಂದು ಮಾರ್ಗವೂ ಇರುವದೆಂದು ಹೇಳಬಹು. ಈ ಮಾರ್ಗವು ಅವುಗಳಿಗಿಂತ ಭಿನ್ನವು ಅಥವಾ ತೀರ ಪ್ರತ್ಯೇಕವೆಂದು ಹೇಳಲಿಕ್ಕೆ ಬರದಿದ್ದರೂ ಇದರಲ್ಲಿಯ ಪ್ರಕ್ರಿಯೆಯು ಅವುಗಳಿಗಿಂತ ಸ್ವಲ್ಪ ಬೇರೆಯಿರುವದು. ಅದು ಹೇಗಂದರೆ, ಎಲ್ಲ ಯೋಗಗಳು ಶುದ್ಧೀಕರಣದಿಂದ ಪ್ರಾರಂಭಮಾಡಿ ಸಮರ್ಪಣದಲ್ಲಿ ಪರ್ಯವಸಾನಹೊಂದಿದರೆ ಸಮನ್ವಯ ಯೋಗವು ಸಮರ್ಪಣದಿಂದಲೆ ಪ್ರಾರಂಭವಾಗುವದು. ಅವು ಯಾವದೊಂದು ಶಕ್ತಿಯನ್ನು ವಿಶೇಷವಾಗಿ ಉಪಯೋಗಿಸಿದರೆ ಈ ಯೋಗವು ಸರ್ವಶಕ್ತಿಗಳನ್ನು ಒಮ್ಮೆಲೆ ಪರಮಾತ್ಮಪದಕ್ಕೆ ಅರ್ಪಣಮಾಡುವದು. ಈ ಯೋಗದ ಪ್ರಕ್ರಿಯೆಯು ಹೀಗೆ ಇರುವುದರಿಂದ ಇದರಲ್ಲಿ ಅತ್ಯಂತ ಬಲವುಳ್ಳ ಸಂಕಲ್ಪಶಕ್ತಿಯು ಅವಶ್ಯವು. ಪ್ರಥಮದಲ್ಲಿಯೆ ತನ್ನ ಹಂಕಾರವನ್ನು ಸುಟ್ಟು ಬಿಟ್ಟು, ಸರ್ವಸಮರ್ಪಣಮಾಡಿ ಆತ್ಮವಿಕಾಸದ ಸಕಲಸೂತ್ರಗಳನ್ನು ಪರಮಾತ್ಮನಿಗೆ ಒಪ್ಪಿಸುವದು ಸಾಮಾನ್ಯ ಮಾತಲ್ಲ. ಈ ಮಾರ್ಗದಲ್ಲಿ ಅವಶ್ಯವಿರುವ ಉತ್ಕಟತೆ ಸಾಧಕನಲ್ಲಿ ಇದ್ದರೆ ಅವನ ಹೆಜ್ಜೆಯು ಕ್ಷಣಕ್ಷಣಕ್ಕೂ ಮುಂದೆ ಬಿದ್ದು ತೀವ್ರವೆ ಅವನು ಸಾಕ್ಷಾತ್ಕಾರಿಯಾಗಬಲ್ಲನು. ಅವನು ಮಾಡುತ್ತಿರುವ ಪ್ರತಿಯೊಂದು ಜಲನವಲನವು ಅವನನ್ನು ಕ್ರಮವಾಗಿ

ಪರಮಾತ್ಮನ ಬಳಿಗೆ ಒಯ್ಯಲು ಸಮರ್ಥವಾಗುವದು. ಈ ಯೋಗದಲ್ಲಿ ಸಾಧಕನ ಎಲ್ಲ ಶಕ್ತಿಗಳು ಅವ್ಯಾಹತವಾಗಿ ಪರಮಾತ್ಮಸಂಕಲ್ಪದಂತೆ ಆಚರಿಸುವುದರಲ್ಲಿ ನಿಮಗ್ನವಾಗಿರುವವು. ತಮ್ಮದೆಂಬ ಯಾವ ಸಂಕಲ್ಪವೂ ಇಲ್ಲದೆ ಯಾವ ಪ್ರಕಾರವಾಗಿ ನಿಸರ್ಗಶಕ್ತಿಗಳು ಪರಮಾತ್ಮಸಂಕಲ್ಪದಂತೆ ನಿರಪೇಕ್ಷವಾಗಿ ವರ್ತಿಸುವವೊ ಹಾಗೆ ಈ ಯೋಗದ ಸಾಧಕನು ನಿರಪೇಕ್ಷ ವೃತ್ತಿಯಿಂದ ವರ್ತಿಸುವನು. ಸಾಧಕನು ಪರಮಾತ್ಮನೊಡನೆ ಪೂರ್ಣ ಏಕತಾನತೆಯನ್ನು ಹೊಂದುವುದರಲ್ಲಿ ಈ ಯೋಗದ ಪರ್ಯವಸಾನವು ಆಗುವದು. ಅದೇ ಪರಮಾನಂದಸ್ಥಿತಿಯು. ಭಕ್ತಿಯೋಗದಲ್ಲಿಯು ಕೊನೆಯು ಮೆಟ್ಟಿನಂತೆ ಈ ಯೋಗವು ಕಂಡರೂ ಆದಕ್ಕೂ ಇದಕ್ಕೂ ಭೇದವೇನಂದರೆ, ಆ ಯೋಗದಲ್ಲಿ ಸಾಧಕನು ಭಾವನಾಶಕ್ತಿಯ ಅವಲಂಬನವನ್ನೆ ಮುಖ್ಯವಾಗಿ ಮಾಡುತ್ತಿರುವುದರಿಂದ ಆ ಶಕ್ತಿಯನ್ನುಳಿದು ಎಲ್ಲ ಶಕ್ತಿಗಳು ಎಷ್ಟೋ ಮಟ್ಟಿಗೆ ಕುಗ್ಗುವ ಸಂಭವವಿದೆ. ಆ ಭಯವು ಇದರಲ್ಲಿಲ್ಲ. ಯಾಕಂದರೆ, ಸರ್ವಶಕ್ತಿಗಳ ಪೂರ್ಣವಿಕಾಸ ಮತ್ತು ಅವುಗಳ ಪೂರ್ಣ ಸಮರ್ಪಣ ಇದೇ ಈ ಯೋಗದ ಧ್ಯೇಯವು. ಈ ಯೋಗವನ್ನು ಆಶ್ರಯಿಸುವ ಸಾಧಕನಲ್ಲಿ ಕೂಡ ಯಾವದೊಂದು ಶಕ್ತಿಯ ಪ್ರಾಬಲ್ಯವು ಕಾಣಬಹುದು. ಆದರೆ ಎರಡನೆ ಶಕ್ತಿಗಳನ್ನು ಕುಗ್ಗಿಸುವ ಭಾವವು ಅದರಲ್ಲಿ ಎಳ್ಳಷ್ಟೂ ಇಲ್ಲ. ಇದಲ್ಲದೆ ಮೇಲೆ ಕಾಣಿಸಿದಂತೆ ಇದರ ಪ್ರಕ್ರಿಯೆಯು ಬೇರೆ ಇರುವುದರಿಂದ ಮತ್ತು ಇದು ಸರ್ವಯೋಗಮಾರ್ಗಗಳ ಸಮನ್ವಯವನ್ನು ಮಾಡುತ್ತಿರುವುದರಿಂದ ಇದಕ್ಕೆ 'ಸಮನ್ವಯಯೋಗ' ಎಂಬ ಹೆಸರೇ ಹೆಚ್ಚು ಶೋಭಿಸುವದು. ಇದರಲ್ಲಿ, ಪ್ರಥಮದಲ್ಲಿಯೆ ಸರ್ವಶಕ್ತಿಗಳ ಸಮರ್ಪಣವಿರುವುದರಿಂದ ಇದಕ್ಕೆ 'ಸರ್ವಸಮರ್ಪಣಯೋಗ' ಅಲ್ಲಿಪೆ 'ಪೂರ್ಣಯೋಗ' ಎಂಬ ಹೆಸರೂ ಅಯೋಗ್ಯವಾಗಲಿಕ್ಕಿಲ್ಲ.

೧೫೯. ವಚನಕಾರರು ತಮ್ಮ ಧ್ಯೇಯದ ವಿಷಯದಲ್ಲಿ ಸಾಕ್ಷಾತ್ಕಾರವಾದಿಗಳಿದ್ದಂತೆ ತಮ್ಮ ಸಾಧನಮಾರ್ಗದಲ್ಲಿ ಸಮನ್ವಯಯೋಗವನ್ನು ಇಲ್ಲವೆ ಸರ್ವಸಮರ್ಪಣಯೋಗವನ್ನು ಪ್ರತಿಪಾದಿಸುವವರಾಗಿದ್ದರು. ಎಷ್ಟೋ ವಚನಕಾರರು ತಮ್ಮೊಳಗಿನ ಸಾಕ್ಷಾತ್ಕಾರಿಗಳಿಗೆ 'ಶರಣರು' ಎಂದು ಅಂದಿರುವುದರಿಂದ ಅವರು ಅನುಸರಿಸಿದ ಸಾಧನಮಾರ್ಗಕ್ಕೆ 'ಶರಣಮಾರ್ಗ' ಎಂದೂ ಅನ್ನಬಹುದು. ಪರಮಾತ್ಮನಿಗೆ ಸಂಪೂರ್ಣ ಶರಣಾಗತರಾದವರೆ ಅರ್ಥಾತ್ ಸರ್ವಸಮರ್ಪಣ ಮಾಡಿದವರೆ ಶರಣರು ಮತ್ತು ಅವರು ನಡೆದ ಸಾಧನಮಾರ್ಗವೆ ಶರಣಮಾರ್ಗವು.

ಸಾಕ್ಷಾತ್ಕಾರವಾದವು ಸಾಧನಮಾರ್ಗಗಳ ಬಗ್ಗೆ ಯಾವ ಪಟವನ್ನೂ ಹಿಡಿಯುವದಿಲ್ಲವೆಂದು ನಾವು ಒಮ್ಮೆ ಹೇಳಿಯೇ ಇದ್ದೇವೆ. ತಿಳಿದು ಕೊಳ್ಳುವ ಮನಸ್ಸು ಒಂದೇ ಇದ್ದರೂ ಬೇರೆಬೇರೆ ಜ್ಞಾನೇಂದ್ರಿಯಗಳ ಮುಖಾಂತರ ವಿವಿಧಸಂವೇದಗಳು ಬಂದು ಮನಸನ್ನು ಮುಟ್ಟುವಂತೆ, ಒಂದೇಒಂದು ಪರಮಾತ್ಮನನ್ನು ಬೇರೆ ಬೇರೆ ಸಾಧಕರು ಬೇರೆ ಬೇರೆ ಸಾಧನಮಾರ್ಗಗಳಿಂದ ಸಾಕ್ಷಾತ್ಕರಿಸಲೆತ್ನಿಸುವರು. ವಚನಕಾರರೊಳಗೆ ಹಲವರಲ್ಲಿ ಭಕ್ತಿ, ಹಲವರಲ್ಲಿ ಜ್ಞಾನ, ಮತ್ತೆ ಕೆಲವರಲ್ಲಿ ಕ್ರಿಯೆ, ಅನ್ಯರಲ್ಲಿ ಯೋಗ, ಇವು ವಿಶೇಷ ಪ್ರಮುಖವಾಗಿ ಕಂಡುಬಂದರೂ ಒಟ್ಟಿಗೆ ಅವರ ಗ್ರಂಥಗಳನ್ನು ಪರಿಶೀಲಿಸಿದರೆ ಅವರು ಸರ್ವಸಮರ್ಪಣಯೋಗವನ್ನೆ ವಿಶೇಷವಾಗಿ ಮಂಡಿಸಿರುವರೆಂಬದು ಸ್ಪಷ್ಟವಾಗುವದು. ಭಕ್ತಿ, ಜ್ಞಾನ, ಕ್ರಿಯೆ, ಮತ್ತು ಧ್ಯಾನ ಇವು ಪರಸ್ಪರಾವಲಂಬಿಯಿರುವವು, ಒಂದನ್ನು ಬಿಟ್ಟು ಇನ್ನೊಂದಿರಲರಿಯದು, ಎಲ್ಲವೂ ಮೇಳವಾಗಿ ಮತ್ತು ಸಮನ್ವಯದಿಂದ ಇದ್ದರೆಯೆ ಹಾಗೂ ಅವೆಲ್ಲವನ್ನು ಪರಮಾತ್ಮನಿಗೆ ಅರ್ಪಣಮಾಡಿದರೆಯೆ ಉತ್ತಮ ಸಿದ್ಧಿಯು ದೊರಕುವದು, ಎಂದು ಅವರ ಪ್ರತಿಪಾದನವಿರುವದು. ಅವರು ಹಠಯೋಗಕ್ಕೆ ಅಷ್ಟೊಂದು ಮಹತ್ವವನ್ನು ಕೊಟ್ಟೇ ಇಲ್ಲ. ಒಮ್ಮೊಮ್ಮೆ ಹಠಯೋಗಿಗಳೆಂದರೆ ಡೊಂಬರು, ಅಟಮಟಕಾರರು (ವ. ೪೭೩) ಎಂದು ಅದರ ಜೇಷ್ಟೆಯನ್ನು ಸಹ ಮಾಡಿರುವರು! ಎಷ್ಟೋ ಸಾರೆ ಅವರು ಈ ಯೋಗಮಾರ್ಗಗಳನ್ನು ಬೇರೆ ಬೇರೆ ಮತ್ತು ಬಿಡಿಬಿಡಿಯಾಗಿ ಆಚರಿಸುವವರನ್ನು ಟೀಕಿಸಿರುವರು. ಶಕ್ತಿಯುಕ್ತಿಭಕ್ತಿಗಳನ್ನು, ತನುಮನಭಾವಗಳನ್ನು, ಪ್ರಾಣಕರಣಕರ್ಮಗಳನ್ನು ಪರಮಾತ್ಮ ಚರಣದಲ್ಲಿ ಅನನ್ಯವಾಗಿ ಅರ್ಪಿಸಿಬಿಡುವುದೆ ಮುಖ್ಯ ಸಾಧನವೆಂದು ವಚನಕಾರರು ಹೇಳುವರು. ತನುಮನ ಇಂದ್ರಿಯಗಳು ಶುದ್ಧ ಸುಯಿಧಾನವಾಗಿ ಪರಮಾತ್ಮನಿಗೆ ವೇದ್ಯವಾಗಿಯಲ್ಲದೆ ಅಂದರೆ ಅರ್ಪಿತವಾಗದೆ ದೇವರ ಸುದ್ದಿಯನ್ನು ಕೇಳಬಾರದು (೧೯೨), ಎಂದು ಅವರು ಸರ್ವಾರ್ಪಣ ಮಾಡದೆ ಇದ್ದವರು ದೇವರ ಗೋಜಿಗೆ ಹೋಗುವದು ವ್ಯರ್ಥ, ಅನ್ನುವರು. ದೇವರಿಗೆ ಅರ್ಪಣವನ್ನೆ ಮಾಡುವ ಪಣವನ್ನು, ತೊಟ್ಟಬಳಿಕ ಅಷ್ಟು ಇಷ್ಟು, ಅದನ್ನು ಇದನ್ನು, ಅರ್ಪಿಸುವುದರಲ್ಲಿ ಏನು ತಾತ್ಪರ್ಯವು? ಅರ್ಪಣ ಮಾಡುವಾಗ ತನ್ನನ್ನೆ ದೇವರಿಗೆ ಅರ್ಪಿಸಿ, ದೇವರೊಳಗಾಗುವತನಕ ಏನು ಉಪಯೋಗ (೨೦೮), ಎಂದು ಅವರು ಕೇಳುವರು. ಪೂರ್ಣಾರ್ಪಣ ಮಾಡಿದವನ ಇರವು ನಿಜೈಕ್ಯನ ಇರವಿನಂತೆಯೆ ಇರುವದು. ಸರ್ವಾರ್ಪಣ

ಮಾಡಿದ ಸಾಧಕನ ಅಂಗಮನಪ್ರಾಣಗಳಲ್ಲಿ ದೇವರೇ ನಿಂತಿರುವನು, ಅವನ ಪ್ರಾಣವು ದೇವರಲ್ಲಿಯೆ ಅಡಗಿ ಹೋಗಿರುವದು (೧೯೩). ಆಗ ಸಾಧಕನ ತನುವು ಮಹಾತನುವಾಗಿ ಹೋಗುವದು, ಮನವು ಘನಮನವಾಗಿ ಹೋಗುವದು, ಭಾವವು ನಿರ್ಭಾವವಾಗುವದು; ಈ ರೀತಿ ಅವನ ತ್ರಿವಿಧವೆಲ್ಲ ನಿರ್ಲೇಪವಾಗಿ ಮೈದೋರದೆ ಇರುವದು (೧೯೪). ಅವನ ಹಠಣ ಮನ ಸೀಪಕರಣಗಳೆಲ್ಲ ದೇವರವಾದುದರಿಂದ ಸರ್ವವೂ ಇದ್ದು ಸರ್ವವೂ ಇಲ್ಲದಂತಾಗಿ ಹೋಗುವದು. ಆ ಸ್ಥಿತಿಯಲ್ಲಿ ಶರಣನು ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ (೧೯೫). ಅದೇ ಜ್ಞಾತೃ ಜ್ಞೇಯ ಜ್ಞಾನ ಇವುಗಳನ್ನು ಮೀರಿದ ಸುಖಸ್ಥಿತಿಯು (೩೦೪). ಶರಣನ ಮನದ ತಲೆಬಾಗಿಲಲ್ಲಿಯೆ ದೇವರು ಕುಳಿತು ಸರ್ವವನು ಅವಧರಿಸುತ್ತಿರುವನು, ಅವನನ್ನು ಮುಟ್ಟದೆ ಶರಣನ ಮನದೊಳಗೆ ಏನೂ ಸೇರಲರಿಯದು (೧೯೪). ಆದುದರಿಂದ ಶರಣನು ಮಾಡುವದು ನೋಡುವದು, ಕೊಡುವದು ಕೊಂಬುವದು, ತ್ಯಜಿಸುವದು ಭುಜಿಸುವದು, ದೇವರಿಗೆ ಮೊದಲು ಅರ್ಪಣಮಾಡಿಯೇ ಅರ್ಪಿತವಾದುದನ್ನೆ ಅವನ ಅನುಭವಿಸುವನು, ಭೋಗಿಸುವನು (೨೦೧). ಹೀಗಿದ್ದ ಬಳಿಕ ಶರಣನ ಯೋಗಕ್ಷೇಮವನ್ನು, ಹಾನಿವೃದ್ಧಿಗಳನ್ನು, ನೋಡುವ ಭಾರವಾದರೂ ದೇವರದೆ ಅಲ್ಲವೆ (೨೦೪)? ತನುಮನಧನವೆಂಬ ತ್ರಿವಿಧವೆಲ್ಲ ಪರಮಾತ್ಮನದೇ ಆದಬಳಿಕ ಸಾಧಕನಿಗೆ ಬೇರೆ ವಿಚಾರವುಂಟೇ (೨೦೬)? ತನುಕೊಟ್ಟು ಶರಣನ ತನು ಬಯಲು. ಮನಕೊಟ್ಟು ಮನ ಬಯಲು, ಧನಕೊಟ್ಟು ಧನ ಬಯಲು. ಇಂತೀ ತ್ರಿವಿಧವನ್ನು ಕೊಟ್ಟ ಕಾರಣ ಶರಣನಿಗೆ ಬಯಲಸಮಾಧಿಯ ಸಂಭ್ರಮವು (೨೦೭)! ಆ ಸಮಾಧಿಸುಖದಲ್ಲಿರುವ ಶರಣನು ಧನ್ಯನು! ಅವನ ಸುಖಕ್ಕೆ ಉಪಮೆಯೆಲ್ಲಿಯದು? ಅವನು ನಿಃಕಾಮಿ, ನಿರ್ಭಾವಿ, ನಿರ್ಲಿಪ್ತ, ನಿರಂಜನ, ನಿತ್ಯಾನಂದಿ.

೧೫೦. ವಚನಕಾರರು ಸಮನ್ವಯಯೋಗಿಗಳಾದುದರಿಂದ ಅವರು ಭಕ್ತಿ, ಜ್ಞಾನ, ಕ್ರಿಯೆ, ಧ್ಯಾನ ಮುಂತಾದವುಗಳಿಗೆ ಪ್ರತ್ಯೇಕವಾಗಿ ಮಹತ್ವ ಕೊಡದೆ ಅವು ಪರಸ್ಪರಾವಲಂಬಿಗಳಿರುವವು, ಒಂದು ಇದ್ದು ಇನ್ನೊಂದಿಲ್ಲದಿದ್ದರೆ ಸಾಧನವು ಪೂರ್ಣವಾಗದು, ಅಂಥ ಸಾಧನವು ಸಿದ್ಧಿಯನ್ನು ಕೊಡದು, ಎಂದು ಒತ್ತಿ ಹೇಳಿದ್ದಾರೆ. ಸರ್ವಾರ್ಪಣಮಾಡಿ ಸಾಧನವನ್ನು ಪ್ರಾರಂಭಿಸಿದ ಸಾಧಕನಿಗೆ ಅದು ಹೆಜ್ಜೊ ಇದು ಹೆಜ್ಜೊ, ಅದನ್ನನುಸರಿಸಬೇಕೊ, ಇದನ್ನನುಸರಿಸಬೇಕೊ, ಎಂಬ ಪ್ರಶ್ನೆಯೆ ಎದುರಾಗುವುದಿಲ್ಲ. ಯಾಕಂದರೆ, ಅವನು ಸರ್ವಶಕ್ತಿಗಳನ್ನು ಪರಮಾತ್ಮನಿಗೆ ಅರ್ಪಿಸಿದ್ದರಿಂದ

ಅವುಗಳಲ್ಲಿ ತಾರತಮ್ಯದ ವಿಚಾರವೆ ಉಳಿದಿರುವುದಿಲ್ಲ. ಬೇರೆ ಬೇರೆ ಯೋಗ ಮಾರ್ಗಗಳನ್ನು ಅನುಸರಿಸುವವರನ್ನು ಮತ್ತು ಅವುಗಳ ಅಭಿಮಾನ ತಾಳುವವರನ್ನು ಕುರಿತೇ ವಚನಕಾರರು ಆಯಾ ಮಾರ್ಗಗಳಲ್ಲಿಯ ಪರಸ್ಪರ ಪೂರಕತ್ವವನ್ನೂ ಅನ್ಯೋನ್ಯ ಅವಲಂಬನವನ್ನೂ ಸ್ಪಷ್ಟೀಕರಿಸಿರುವರು, ಎಂದು ಹೇಳಬಹುದು. ಯಥಾರ್ಥವಾಗಿ ನೋಡಿದರೆ, ಒಂದು ಮಾರ್ಗವು ಹೆಚ್ಚಿನದು ಇನ್ನೊಂದು ಕಡಿಮೆತರದ್ದು, ಎಂದು ಅನ್ನಲಿಕ್ಕಾಗದು. ತಮ್ಮ ಸ್ವಭಾವಾನುಸಾರವಾಗಿ, ಯಾವದು ಯಾವ ಸಾಧಕರಿಗೆ ಸುಲಭವೊ ಅದನ್ನು ಅವರು ಸ್ವೀಕರಿಸಿ ಸಿದ್ಧಿಯನ್ನು ಪಡೆಯತಕ್ಕದ್ದು ವಿಹಿತವು. ಹಾಗೆ ಮಾಡುವಾಗ ತಮ್ಮ ಪಥವೇ ಶ್ರೇಷ್ಠ ಎಂಬ ಮುಂತಾದ ವೃಥಾಭಿಮಾನವನ್ನು ತಾಳುವದು ಯೋಗ್ಯವಾಗದು. ಭಕ್ತಿ–ಜ್ಞಾನ–ಕ್ರಿಯೆ, ಭಾವನೆ – ಬುದ್ಧಿ – ಕ್ರಿಯಾ ಶಕ್ತಿ ಇವು ಮೂರೂ ಅವಶ್ಯ ಎಂದು ವಚನಕಾರರು ಹೇಳಿರುವರು. ಹಾಲೊಳಗಿರುವ ತುಪ್ಪವು ಅರಸಿದರೆ ಸಿಕ್ಕುವುದೆ, ಕಬ್ಬಿನೊಳಗಿನ ಬೆಲ್ಲವು ಕಣ್ಣಿಗೆ ಕಾಣುವುದೆ, ತನ್ನೊಳಗಿನ ಆತ್ಮತತ್ವವು ನೆನೆದಾಕ್ಷಣಕ್ಕೆ ಅನುಭವಕ್ಕೆ ಬರುವುದೆ, ಎಂದು ವಚನಕಾರರ ಪ್ರಶ್ನೆಯು. ಇದಕ್ಕೆ ತಾವೇ ಉತ್ತರ ಕೊಡುವರು. ಅದು ಹೇಗಂದರೆ, ಭಾವಶಕ್ತಿಯಿಂದ ಆತ್ಮವನ್ನು ಭಾವಿಸಿ, ಬುದ್ಧಿಶಕ್ತಿಯಿಂದ ಅದನ್ನು ತಿಳಿದುಕೊಂಡು, ಕ್ರಿಯಾಶಕ್ತಿಯಿಂದ ಆ ಜ್ಞಾನವನ್ನು ಪ್ರತ್ಯಕ್ಷ ಆಚರಣೆಯಲ್ಲಿ ತಂದು, ಪ್ರಸನ್ನತ್ವವನ್ನು ಪಡೆದು, ತದನುಭವಸುಖದೊಳೋಲಾಡುವದು ಅತಿ ಚತುರನಾದ ಶರಣನಿಗೆ ಮಾತ್ರ ಶಕ್ಯವು ಹೊರತು ಉಳಿದವರಿಗೆ ಆ ಸೌಭಾಗ್ಯವು ದೊರೆಯದು (೩೮೧). ಬರಿಯ ನೆನಹಿಗೆ, ಧ್ಯಾನಕ್ಕೆ, ಸ್ಮರಣೆಗೆ ವಚನಕಾರರು ವಿಶೇಷ ಮಹತ್ವವನ್ನು ಕೊಟ್ಟಿಲ್ಲ. ಅದರೊಡನೆ ಭಕ್ತಿಕ್ರಿಯಾದಿಗಳು ಬೇಕು, ಎಂದು ಅವರ ಅಭಿಪ್ರಾಯವು. ದೇವನನ್ನು ನೆನೆದರೆ ಭವವು ಹಿಂಗುವದು, ಎಂಬುದು ವಿವರಗೇಡಿಗಳ ಮಾತು, ಅದನ್ನು ಕೇಳಬಾರದು. ಯಾಕೆಂದರೆ, ಜ್ಯೋತಿಯನ್ನು ನೆನೆದರೆ ಕತ್ತಲೆ ಹರಿಯುವುದೇ, ಮೃಷ್ಟಾನ್ನವನು ನೆನೆದರೆ ಹೊಟ್ಟೆ ತುಂಬುವುದೇ, ರಂಭೆಯನ್ನು ನೆನೆದರೆ ಕಾಮದ ಕಳವಳವು ಕಳೆಯುವುದೇ (೩೫೬), ಎಂದು ಅವರು ಪ್ರಶ್ನೆಮಾಡಿರುವರು? ಬೆರಳುಗಳನ್ನೆಣಿಸಿ ಪರಮಾತ್ಮನನ್ನು ಪಡೆಯಲೆಣಿಸುವದು, ಮೂಗುಮುಚ್ಚಿ ಮುಕ್ತಿಯನರಸುವದು ನಗೆಗೀಡು (೩೫೭), ಎಂದು ವಚನಕಾರರು ಬರಿಯ ಧ್ಯಾನಾದಿಗಳನ್ನು ಹೀಯಾಳಿಸಿರುವರು. ಧ್ಯಾನವನ್ನು ಮಾಡೇಬಾರದು ಅಥವಾ ನಾಮಸ್ಮರಣಾದಿ ಸಾಧನಗಳು ವ್ಯರ್ಥ, ಎಂದು ವಚನಕಾರರ ಉಪದೇಶದ

ಅರ್ಥವಲ್ಲ. ಬರಿಯ ಅದನ್ನೆ ಮಾಡುತ್ತ ಕೂಡುವವರನ್ನು ಅವರು ಇಲ್ಲಿ ಕೆಳಗೆಳೆದಿರುವರು, ಇಷ್ಟೇ. ಸ್ಮರಣಧ್ಯಾನಾದಿಗಳೊಡನೆ ಜ್ಞಾನ, ಭಕ್ತಿ, ನಿಷ್ಠೆ, ಕ್ರಿಯೆ ಇವೆಲ್ಲ ಬೇಕು, ಎಂದು ಹೇಳುವುದೇ ಅವರ ಉದ್ದೇಶವು. ಇದೇ ರೀತಿ, ಅವರು ಬರಿಯ ಯಾಂತ್ರಿಕ ಕರ್ಮಮಾರ್ಗವನ್ನು ಕೂಡ ಅಲ್ಲಗಳೆದಿರುವರು. ತತ್ವಾರ್ಥವನ್ನರಿಯದೆ ಜನರು ಪೂಜಿಸಿಪೂಜಿಸಿ ಒಳಲುತ್ತಿರುವರು, ಏನೆಂದರಿಯರು ಎಂತೆಂದರಿಯರು, ಪೂಜಿಸಿಪೂಜಿಸಿ ಏನನ್ನೂ ಕಾಣದೆ ಹೋಗುವರಲ್ಲ (೩೫೦), ಎಂದು ವಚನಕಾರರಿಗೆ ಕರ್ಮಠರ ಬಗ್ಗೆ ಕನಿಕರವು! ಇದು ಹೊಟ್ಟೆಯ ಮೇಲೆ ಕಟ್ಟೋಗರದ ಪೊಟ್ಟೆಯನ್ನು ಕಟ್ಟಿದಂತೆ ಆಯಿತು. ಅದರಿಂದ ಹಸಿವು ಹಿಂಗಬಲ್ಲದೇ (೩೫೧)? ಮಾಡುವ ಕಾರ್ಯಕ್ಕೆ ಭಾವಭಕ್ತಿಜ್ಞಾನಗಳ ಬೆಂಬಲವು ಬೇಕು. ಮನವಿಲ್ಲದೆ ಮಾಡಿ ಮಾಡಿ ಕೆಟ್ಟುಹೋಗುವರು, ನಿಜವಿಲ್ಲದೆ ನೀದಿನೀದಿ ಕೆಡುವರು, ಮಾಡುವ ನೀಡುವ ನಿಜಗುಣವುಳ್ಳವರೆ ಧನ್ಯರಾಗಬಲ್ಲರು (ವ. ೩೫೩). ಪೂಜೆದಾನಾದಿಗಳನ್ನು ಮಾಡಬಾರದು, ಎಂದು ಇದರ ಅರ್ಥವಲ್ಲ. ಪೂಜಾದಿ ಕರ್ಮಗಳು ಬೇಕೇಬೇಕು. ಉದ್ಭವನೇರುವುದಕ್ಕೆ ಗದ್ದುಗೆ ಇಲ್ಲದೆ ಹೋಗಬಾರದು; ಚಿದ್ರೂಪವನರಿವುದಕ್ಕೆ ಅರ್ಚನೆ ಪೂಜನೆ ನಿತ್ಯನೇಮ ಇವು ಅತ್ಯಾವಶ್ಯಕವಾದ ಮಾತುಗಳು (೩೫೪). ಪ್ರತೀಕವೆಂಬುದು ಅದರ ಸಲುವಾಗಿಯೇ ಇರುವದು. ಕ್ರಿಯಾಶುದ್ಧಿಯಿಂದಲೆ ಭಾವಶುದ್ಧಿಯಾಗುವದು. ಭಾವಶುದ್ಧಿಯಿಂದ ಮುಂದೆ ಆತ್ಮಶುದ್ಧಿಯಾಗುವದು. ಅದರಿಂದ ಮುಂದೆ ಸಮ್ಯಕ್‌ಜ್ಞಾನವು ಅಳವಡುವದು (೩೬೧). ಭಕ್ತಿಯಾದರೂ ಮಾತಿನ ಮಾಲೆಯಲ್ಲಿಲ್ಲ. ಮಾಡಿಮಾಡಿ ದೇಹ ಸವೆಯುವನಕ, ಮನ ಸವೆಯುವನಕ, ಧನ ಸವೆಯುವನಕ ಭಕ್ತಿ ಎಂಬುದು ಸಿದ್ಧವಾಗುವುದೇ (೩೬೨)? ಕ್ರಿಯೆ ಇಲ್ಲದ ಭಕ್ತನಿಗೂ ಸಾಮಾನ್ಯ ಮನುಜನಿಗೂ ಏನೂ ಭೇದವಿಲ್ಲ, ಕ್ರಿಯೆ ಇಲ್ಲದ ಶರಣನು ಅಜ್ಞಾನಿಯು (೩೬೩). ಕ್ರಿಯೆ ಮತ್ತು ಭಕ್ತಿ ಇವುಗಳ ಸಂಬಂಧವು ಎಷ್ಟು ನಿಕಟವೊ ಅಷ್ಟೇ ಭಕ್ತಿಜ್ಞಾನಗಳ ಸಂಬಂಧವು ನಿಕಟವಿರುವದು. ಭಕ್ತಿವೃಕ್ಷಕ್ಕೆ ಜ್ಞಾನವೆಂಬುದೇ ಫಲವು, ಅದು ಹಣ್ಣಾಗಿ ತೊಟ್ಟುಬಿದ್ದರೆ ಅದೇ ಪರಮಜ್ಞಾನವು (೩೬೪). ಕ್ರಿಯೆಜ್ಞಾನಗಳ ಸಂಬಂಧವಾದರೂ ಹೀಗೆಯೆ ಇರುವದು. ಜ್ಞಾನವನ್ನು ಬರೀ ಅರಿದು ಸತ್ಕ್ರಿಯಾಚಾರವಿಲ್ಲದಿದ್ದರೇನು ಉಪಯೋಗ? ಕುರುಡನು ಪಥವನ್ನು ಕಾಣನು, ಹೆಳವನು ಹಾದಿಯನ್ನು ನಡೆಯನು. ಇಬ್ಬರೂ ಕೂಡಿದರೆ ಸುಸೂತ್ರ ದಾರಿಯ ನಡೆಯಬಹುದು, ಜ್ಞಾನವಿಲ್ಲದ ಕ್ರಿಜಡವು,

ಕ್ರಿ ಇಲ್ಲದ ಜ್ಞಾನವು ಭ್ರಾಂತು (೩೬೮). ಕ್ರಿಯೆಯೇ ಅಧಿಕ ಇಲ್ಲವೆ ಜ್ಞಾನವೇ ಅಧಿಕ ಎಂದೆನ್ನುವವರಿಗೆ, ಪಕ್ಷಿಯು ಉಭಯ ರೆಕ್ಕೆಗಳಿಂದ ಗಗನಕ್ಕೆ ಹಾರುವುದೆ ಹೊರತು ಒಂದರಿಂದಲ್ಲ, ಎಂಬುದೆ ಇದಕ್ಕೆ ದೃಷ್ಟಾಂತವು. ಅಂತರಂಗದಲ್ಲಿ ಜ್ಞಾನ ಬಹಿರಂಗದಲ್ಲಿ ಸತ್ಕ್ರಿಯೆ, ಇವೆರಡೂ ಇದ್ದವರೆ ಸತ್ಯಶರಣರು (೩೭೦). ಅಂತರಂಗದ ಅರಿವಿಂಗೆ ಆಚಾರವೇ ಕಾಯವು. ಆಚಾರಕಾಯವಿಲ್ಲದೆ ಅರಿವಿಗೆ ಆಶ್ರಯವಿಲ್ಲ. ಅರಿವು ಆಚಾರದಲ್ಲಿ ಸಮುದೇದಿಸಿದ ನಿಜೈಕ್ಯನು ಮಾಡುವ ಕ್ರಿಯೆಯಿಂದ ಅವನು ಎಂದೆಂದಿಗೂ ಬದ್ಧನಾಗನು (೩೭೯). ತತ್ವತಃ ಜ್ಞಾನ ಕ್ರಿಯೆ ಭಕ್ತಿಗಳು ಒಂದೇ. ಸತ್ಯವನ್ನು ಭಾವಿಸುವದು ಭಕ್ತಿ, ಅದನ್ನು ನಿಚ್ಚಳವಾಗಿ ಕಾಣುವದು ಜ್ಞಾನ, ಸತ್ಯದಂತೆ ಆಚರಿಸುವುದು ಕ್ರಿಯೆ. ಸತ್ಯವೆ ಈ ಮೂರನ್ನು ಪೋಣಿಸುವ ಸೂತ್ರವು. ಜ್ಞಾನವೆಂದರೆ ತಿಳಿದುಕೊಂಬುವದು, ಕ್ರಿಯೆಯೆಂದರೆ ತಿಳಿದಂತೆ ಮಾಡುವದು. ಅಂತರಂಗದ ಅರಿವು ಬಹಿರಂಗದ ಕ್ರಿಯೆ ಈ ಉಭಯ ಸಂಪುಟ ಒಂದಾದ ಶರಣನ ಎಲ್ಲ ಸೂತಕಗಳು ಸಮೂಲ ನಾಶವಾಗುವವು. (೩೭೭,೩೭೮),

೧೩. ಸಮನ್ವಯಯೋಗದ ತಳಹದಿಯನ್ನು ಗಟ್ಟಿಯಾಗಿಟ್ಟುಕೊಂಡು ವಚನಕಾರರು ತಮ್ಮ ಸಾಧನಪಥವನ್ನು ಕಟ್ಟಿದ್ದಾರೆಂಬದು ಮೇಲಿನ ವಿವೇಚನೆಯಿಂದ ಸ್ಪಷ್ಟವಾಗುವದು. ಅದೇ ರೀತಿ, ಭಕ್ತಿ ಜ್ಞಾನಾದಿಗಳ ಪರಸ್ಪರ ನಿಕಟಸಂಬಂಧವು ಏನು ಇರುವದು, ಎಂಬ ಬಗ್ಗೆ ಅವರ ವಿಚಾರಗಳು ಮೇಲೆ ವ್ಯಕ್ತವಾಗಿರುವವು. ಇನ್ನು ಪ್ರತ್ಯೇಕವಾಗಿ ಜ್ಞಾನ, ಭಕ್ತಿ, ಕ್ರಿಯೆ, ಧ್ಯಾನ ಇವುಗಳ ಮಹತ್ವಮತ್ತು ಕಾರ್ಯ ಇದರ ಬಗ್ಗೆ ಅವರು ಏನು ಅಂದಿರುವರು ಇದನ್ನು ನೋಡುವ. ಈ ಬಗ್ಗೆ ಇದ್ದ ಅವರ ವಿಚಾರಗಳನ್ನು ಪರಿಶೀಲಿಸುವಾಗ ತಮ್ಮ ಸಮನ್ವಯಯೋಗದ ಭಾಗವೆಂದೇ ಅವರು ಈ ಸಂಗತಿಗಳನ್ನು ಹೇಳಿದ್ದಾರೆಂಬುದನ್ನು ನಾವು ಲಕ್ಷದಲ್ಲಿಡತಕ್ಕದ್ದು. ಇಲ್ಲಿ ಜ್ಞಾನವೆಂದರೆ ಅಧ್ಯಾತ್ಮಜ್ಞಾನವು, ಪರಾತ್ಪರ ಸತ್ಯದ ಜ್ಞಾನವು, ಯಾವ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುವುದರಿಂದ ಮುಂದೆ ನಾವು ಮುಕ್ತರಾಗಬಲ್ಲೆವೊ ಆ ಜ್ಞಾನವು. ಆ ಜ್ಞಾನವು ಎಲ್ಲರಿಗೂ ದಕ್ಕದು, ಎಲ್ಲರೂ ಆ ಜ್ಞಾನವನ್ನು ಮಾಡಿಕೊಳ್ಳಲರಿಯರು. ಕುರುಡನಿಗೆ ಕನ್ನಡಿ ತೋರಿದರೆ, ಅವನು ನೋಡಬಲ್ಲನೇ, ಮೂಢನಿಗೆ ಬುದ್ಧಿಯ ಮಾತು ಹೇಳಿದರೆ ಅವನು ಕೇಳಬಲ್ಲನೇ? ಹಾಗೆಯೆ, ಈ ಸತ್ಯಜ್ಞಾನವು ಅವಿವೇಕಿಗಳಿಗೆ ರುಚಿಸುವುದೇ (೩೪೪)? ಈ ಜ್ಞಾನವೆಂಬುದು ಅತ್ಯಂತ ಮಹತ್ವದ ವಸ್ತುವು. ತನ್ನಲ್ಲಿದ್ದ

ಆತ್ಮನನ್ನು ತಾನರಿಯದನಕ ಏನು ಕೇಳಿ, ಏನು ಓದಿ, ಏನು ಹೇಳಿದರೇನು ಫಲ? ಈ ಜ್ಞಾನವಿಲ್ಲದವರು ಕೇವಲ ಕುರುಡರು (೩೪೩). ಜ್ಞಾನವಾಗುವನಕ ಕರ್ಮಬಂಧನವು ಬಿಡದು. ಬೆಂಕಿಯಲ್ಲಿ ಸುಡುವ ಶಕ್ತಿ ಇಲ್ಲದಿದ್ದರೆ ತೃಣಕಾಷ್ಠಾದಿಗಳು ಸುಡದಿರುವಂತೆ ಜ್ಞಾನವಿಲ್ಲದವನ ಕರ್ಮಬೀಜವು ಹುರಿದುಹೋಗದು (೩೪೨). ಆತ್ಮನಿಶ್ಚಯವಾದಲ್ಲಿಯೆ ಕೈವಲ್ಯವು ಕೈಗೂಡುವದು (೩೪೦). ಜಗತ್ತಿನಲ್ಲಿ ಜ್ಞಾನರತ್ನವೆಂಬುದೆ ಅತ್ಯಂತ ಶ್ರೇಷ್ಠವು, ಅದೇ ಮಹಾನಿಧಿಯು (೩೩೦). ಅರಿದ್ದವನೆ ಎಲ್ಲರಿಗಿಂತ ಹಣವಂತನು, ಭಾಗ್ಯವಂತನು, ಧನ್ಯನು. ಅಂಥ ಜ್ಞಾನಸಂಪನ್ನನನ್ನು ದುಃಖಶೋಕಮೋಹಾದಿಗಳು ಮುಸುಕಲಾರವು. ಜ್ಞಾನದ ಮುಂದೆ ಅವೆಲ್ಲ ಸೂರ್ಯನೆದುರಿನ ಮಂಜಿನಂತೆ ಮಾಯವಾಗಿ ಹೋಗುವವು. ಸೂರ್ಯೋದಯವಾದ ಬಳಿಕ ತಿಮಿರ ಉಂಟೇ (೩೩೩), ಎಂದು ವಚನಕಾರರು ಕೇಳುವರು. ತನ್ನನ್ನು ತಾನರಿದು ತಾನಾರೆಂಬುದನು ತಿಳಿಯುವುದೆ ಜ್ಞಾನವು. ಹೀಗೆ ಅರಿದವನ ಅರಿವೆ ಅವನಿಗೆ ಗುರುವು (೩೩೦). ಬರಿಯ ಗ್ರಂಥಾಭ್ಯಾಸವು ಜ್ಞಾನವಲ್ಲ. ಸ್ವ-ರೂಪವು ಆವುದು ಎಂಬುದನ್ನು ಗುರುತಿಸುವುದೆ ನಿಜವಾದ ಜ್ಞಾನವು (೩೩೭). ತನ್ನ ತಾನರಿದು, ತನ್ನ ಅಜ್ಞಾನ, ಆಶಾಪಾಶ, ಅನಾಚಾರ, ಅಸತ್ಯ ನಡೆನುಡಿಗಳನ್ನು ತೊರೆದು, ತನ್ನ ನಿಜದಲ್ಲಿ ನಿಂದರೆ ತಾನೇ ಜೈತನ್ಯ ಮೂರ್ತಿಯು (೩೩೯). ಬ್ರಹ್ಮಜ್ಞಾನದ ಲಕ್ಷಣವನ್ನು ಹೇಳುವಾಗ, ಆವಲ್ಲಿ ಸರ್ವಪ್ರಪಂಚನಿವೃತ್ತಿಯಾಗುವುದೊ, ಆವಲ್ಲಿ ಕೇವಲ ನಿಶ್ಚಿಂತವಾಗಿಹುದೊ, ಆವಲ್ಲಿ ತಾನೆಂಬ ತೋರಿಕೆ ಹುಟ್ಟದಿಹುದೊ, ಆವಲ್ಲಿ ಪರಮಾತ್ಮನಲ್ಲದೆ ಇನ್ನೊಂದರಿವು ಆಗದೊ ಆದೇ ಬ್ರಹ್ಮಜ್ಞಾನವು (೩೪೯), ಎಂದು ವಚನಕಾರರು ವಿವರಿಸಿರುವರು. ಹೀಗೆ ಜ್ಞಾನದ ಮಹಾತ್ಮ್ಯವೂ ಲಕ್ಷಣಗಳೂ ಪರಿಣಾಮವೂ ಹೇಳಲ್ಪಟ್ಟಿರುವವು.

೧೪. ಜ್ಞಾನವನ್ನು ಕುರಿತು ತಮ್ಮ ವಿಚಾರಗಳನ್ನು ವಚನಕಾರರು ಹೇಳಿರುವಂತೆ ಭಕ್ತಿಯ ಬಗ್ಗೆಯೂ ಅಲ್ಲಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸಾಧನಗಳಲ್ಲಿ ಭಕ್ತಿಯು ಎಲ್ಲಕ್ಕೂ ಸುಲಭವಿರುವದೆಂಬುದು ಪ್ರಸಿದ್ಧವಿರುವದು. ಜ್ಞಾನಸಂಪಾದನೆಗೆ ತೀವ್ರಬುದ್ಧಿ, ಅಭ್ಯಾಸ, ಇವುಗಳ ಅವಶ್ಯಕತೆ ಇರುವದು. ಭಕ್ತಿಯು ಮಾತು ಹಾಗಿಲ್ಲ. ಭಕ್ತಿಗೆ ಭಾವನೆಯೆ ಮುಖ್ಯವು. ಆರಂಭದಲ್ಲಿ ಭಕ್ತಿಗೆ ಅವಶ್ಯವಿದ್ದಷ್ಟು ಭಾವನೆಯು ಎಲ್ಲರಲ್ಲಿಯೂ ಇರಬಲ್ಲದು. ಆದುದರಿಂದ ಸಾಧುಸತ್ಪುರುಷರು ಇದು ಅತಿ ಸುಲಭವೆಂದು ಈ ಸಾಧನವನ್ನು ಅಪ್ಪಿಕೊಂಡು ಹೊಗಳಿರುವರು ಮತ್ತು ಈ

ಮಾರ್ಗದ ಉಪದೇಶವನ್ನೆ ಎಲ್ಲರಿಗೂ ಮಾಡಿರುವರು. ದೇವರು ಇರುವನು, ಅವನು ಎಲ್ಲಕ್ಕೂ ದೊಡ್ಡವನು, ಅವನೇ ನಮ್ಮನ್ನು ರಕ್ಷಿಸುವವನು ಮತ್ತು ದುಃಖಮುಕ್ತಮಾಡುವವನು, ಎಂಬ ಶ್ರದ್ಧೆಯಿಂದ ನಾವು ಅವನಿಗೆ ಮೊರೆ ಇಡಬೇಕು, ಎಂದು ಭಕ್ತಿಮಾರ್ಗಿಗಳು ಹೇಳಿರುವರು. ಪರಮಾತ್ಮನ ಗುಣ ವರ್ಣನೆಯನ್ನು ಕೇಳುವದು, ಸ್ವತಃ ಅವನ ಗುಣಗಾಯನಮಾಡುವದು, ದೇವರ ನಾಮಸ್ಮರಣೆ, ಅವನ ಸೇವೆ, ಅವನ ಪೂಜೆ, ಅವನ ಚರಣಕ್ಕೆ ನಮಸ್ಕಾರ ಮುಂತಾದ್ದನ್ನು ಮಾಡುವದು, ಅವನ ದಾಸ್ಯವನ್ನು ಸ್ವೀಕರಿಸುವದು, ಅವನೊಡನೆ ಗೆಳೆಯನಂತೆ ವರ್ತಿಸುವದು, ಅವನಿಗೆ ಪೂರ್ಣ ಶರಣು ಹೋಗುವದು ಅಥವಾ ಅವನಿಗೆ ಸರ್ವಾರ್ಪಣಮಾಡಿಬಿಡುವದು, ಹೀಗೆ ಭಕ್ತಿಯು ನವವಿಧವಿರುವದೆಂದು ಉಲ್ಲೇಖವಿರುವದು. ಇನ್ನೊಂದು ವಿಧವಾಗಿ ಭಕ್ತಿಮಾರ್ಗವನ್ನು ವರ್ಗೀಕರಿಸುವರು. ದೇವರನ್ನು ತಂದೆತಾಯಿಗಳಂತೆ ಆರಾಧಿಸುವದು ವಾತ್ಸಲ್ಯಭಕ್ತಿ ಎನಿಸುವದು. ದಾಸ್ಯ ಮತ್ತು ಸಖ್ಯಭಕ್ತಿಗಳಂತೂ ಮೇಲೆ ಉಕ್ತವಾಗಿವೆ. ಇನ್ನೊಂದು ಮಧುರಾಭಕ್ತಿಯು. ಪರಮಾತ್ಮನು ಪ್ರಾಣೇಶ್ವರನೆಂದು ಅವನನ್ನು ತನ್ನ ನಲ್ಲನಂತೆ ಆರಾಧಿಸುವದು ಮಧುರಾಭಕ್ತಿ ಎನಿಸುವದು. ವಚನಸಂಗ್ರಹದಲ್ಲಿ ಮಧುರಾಭಕ್ತಿಯ ವಚನಗಳು ಎಷ್ಟೋ ಕಂಡುಬರುವವು. ಭಕ್ತಿಮಾರ್ಗದಲ್ಲಿ ಈಬಗೆಯ ಭಕ್ತಿಯು ಹೊಸದೂ ಅಲ್ಲ ವಿರಲವೂ ಅಲ್ಲ. ಭಾಗವತ ಪುರಾಣದಲ್ಲಿ ಗೋಪೀಜನರ ಭಕ್ತಿಯು ಮಧುರಾಭಕ್ತಿಯು. ಜಯದೇವ ಕವಿಯ ಪ್ರಸಿದ್ಧ ಗೀತಗೋವಿಂದವೆಂಬ ಕಾವ್ಯವು ಆ ಭಕ್ತಿಯ ಅತ್ಯುತ್ತಮ ಉದಾಹರಣೆಯು. ಪಾಶ್ಚಿಮಾತ್ಯ ಸಾಕ್ಷಾತ್ಕಾರಿಗಳಲ್ಲಿಯೂ ಇರಾಣದ ಸುಫೀಪಂಥದ ಸಾಧುಗಳಲ್ಲಿಯೂ ಎಷ್ಟೋ ಜನರು ಈ ತರದ ಭಕ್ತಿಯನ್ನು ಮಾಡಿದ್ದು ಅವರ ಕಾವ್ಯಗಳಿಂದ ವ್ಯಕ್ತವಾಗುವದು. ವೈಷ್ಣವದಾಸರಲ್ಲಿ ಅನೇಕರು ಮಧುರಾಭಕ್ತಿಮಯ ಹಾಡುಗಳನ್ನು ಹಾಡಿರುವರು. ಈ ಬಗ್ಗೆ ಮುಂದೆ ತುಲನಾತ್ಮಕಪ್ರಕರಣವನ್ನು ನೋಡಬಹುದು. ಭಕ್ತಿಮಾರ್ಗದಲ್ಲಿ ದೇವರೊಡನೆ ಈ ಬಗೆಯ ಮಾನವೀಸಂಬಂಧಗಳನ್ನು ಕಲ್ಪಿಸಿದರೂ ಅನನ್ಯ, ನಿರತಿಶಯ, ಅಹೇತುಕ ಪ್ರೇಮದ ಪರಮಾವಧಿಯೆ ಭಕ್ತಿಮಾರ್ಗದ ಮುಖ್ಯ ಲಕ್ಷಣವಿರುವದೆಂಬುದನ್ನು ನಾವು ಮರೆಯಕೂಡದು. ಆದುದರಿಂದ ವ್ಯವಹಾರದಲ್ಲಿ ಉಪಲಬ್ಧವಿದ್ದ ಈ ಬಗೆಬಗೆಯ ಸಂಬಂಧಗಳಿಗೂ ಭಕ್ತಿಮಾರ್ಗದಲ್ಲಿ ಕಲ್ಪಿಸಿದ ಅದೇ ತರದ ಸಂಬಂಧಗಳಿಗೂ ಭೂಮ್ಯಾಕಾಶದಷ್ಟು ಭೇದವಿರುವದು. ಭಕ್ತಿಮಾರ್ಗವು ದೇವರನ್ನು ಸಗುಣ ಮತ್ತು ಪುರುಷವಿಧ

ಮಾಡುವುದರಿಂದ ಈ ಎಲ್ಲ ಸಂಬಂಧಗಳನ್ನು ಕಲ್ಪಿಸಲು ಅನುವಾಗುವದು. ಆದರೆ ಇವೆಲ್ಲ ನಮ್ಮ ಸಾಮಾನ್ಯ ಭಾವನೆಗಳನ್ನೆಲ್ಲ ಹೆಚ್ಚಿಚ್ಚು ಉಚ್ಚ ಮತ್ತು ಪವಿತ್ರಮಾಡುವ ಸಾಧನಗಳೇ ಹೊರತು ಈ ಪರಿ ಕಲ್ಪಿಸಿದ ಸಂಬಂಧಗಳಲ್ಲಿ ಹೆಚ್ಚಿನ ಮಹತ್ವವೇನೂ ಇಲ್ಲ. ಪ್ರತೀಕಕ್ಕೆ ಅಥವಾ ಮೂರ್ತಿಗೆ ಎಷ್ಟು ಮಹತ್ವವೊ ಅಷ್ಟೇ ಮಹತ್ವವು ಈ ಸಂಬಂಧಗಳಿಗೆ ಇರುವದು. ಈ ಕಲ್ಪಿತ ಸಂಬಂಧಗಳನ್ನು ಸ್ವಾರ್ಥರಹಿತ ಮತ್ತು ಸಂಪೂರ್ಣ ಕಾಮುಗಂಧಹೀನ ಮಾಡುತ್ತ ಹೋಗುವದು ಈ ಮಾರ್ಗದಲ್ಲಿ ಅತ್ಯಂತ ಮಹತ್ವದ್ದಿರುವದು. ಹಾಗೆ ಮಾಡಿದರೆ ಮಾತ್ರ ಸಿದ್ಧಿಯು ಕೈವಶವಾಗುವದು ಮತ್ತು ಅವುಗಳ ಯೋಗ್ಯ ಉಪಯೋಗವನ್ನು ಮಾಡಿದಂತಾಗುವದು. ಶಬ್ದಾದಿಗಳನ್ನುಪಯೋಗಿಸಿ ಶಬ್ದಾತೀತವನ್ನು, ಸಗುಣವನ್ನುಪಯೋಗಿಸಿ ಗುಣಾತೀತವನ್ನು, ಸಾಕಾರವನ್ನುಪಯೋಗಿಸಿ ಆಕಾರಾತೀತವನ್ನು ಸಾಧಕನು ಕಾಣಲಿಕ್ಕೆ ಯತ್ನಿಸುವಂತೆ ತಾಯಿತಂದೆ, ಸಖಸಖೀ ಮುಂತಾದವರ ಬಗ್ಗೆ ನಮ್ಮ ಅಂತಃಕರಣದಲ್ಲಿ ಉಂಟಾಗುವ ಪ್ರೇಮಭಾವನೆಗಳನ್ನುಪಯೋಗಿಸಿ ಅವುಗಳಿಗೆ ಉಚ್ಚವಾದ ಸ್ವರೂಪವನ್ನು ಕೊಟ್ಟು, ಅವುಗಳನ್ನು ನಿಷ್ಕಾಮ ಪ್ರೇಮಭಾವನೆಯಲ್ಲಿ ಪರಿವರ್ತಿಸಿ, ನಾವು ಭಕ್ತಿಸೋಪಾನದ ಕೊನೆಯ ಮೆಟ್ಟನ್ನು ಮುಟ್ಟಲಿಕ್ಕೆ ಯತ್ನಿಸಬಹುದು. ವಚನಗಳಲ್ಲಿ ಸತಿಪತಿಭಾವದ ವಚನಗಳೇ ಮಧುರಾಭಕ್ತಿಯ ಮಾದರಿಗಳು. ಅವುಗಳನ್ನೊೀದಿದರೆ ಮೊದಲ್ನೊೀಟಕ್ಕೆ ಅವು ಕಾಮಹತವಾದ ವಿರಹಿಣಿಯ ಆಲಾಪಗಳಂತೆ ಕಂಗೊಳಿಸುವವು. ಭಕ್ತಜನರ ಉತ್ಕಟ ವಿರಹಭಾವನೆಯ ಕಲ್ಪನೆಯನ್ನು ಕೊಡುವುದಕ್ಕಾಗಿ 'ಸತಿಪತಿ' ಎಂಬುದು ಒಂದು ರೂಪಕವಿರುವದೆಂದು ಹೇಳಬಹುದು. ಆದರೆ ಪಾರ್ಥಿವ ವಿರಹಿವಿರಹಿಣಿಯರ ಸಕಾಮ, ಆರ್ತ, ಆತುರ ಭಾವವೆಲ್ಲಿ ಮತ್ತು ಶುದ್ಧಾಂತಃಕರಣಿಯಾದ ದಿವ್ಯಭಕ್ತನ ಪರಮಾತ್ಮನನ್ನೊಡಗೂಡಬೇಕೆನ್ನುವ ತವಕವೆಲ್ಲಿ! ಎರಡೂ ಪ್ರೇಮಸ್ಫುರಣಗಳೇ ಆದರೆ ಒಂದು ಮಾತ್ರ ಜಡವು ಇನ್ನೊಂದು ಜೈತನ್ಯಮಯವು, ಒಂದು ಸಕಾಮ ಮತ್ತೊಂದು ನಿಷ್ಕಾಮ, ಒಂದು ಐಹಿಕ ಇನ್ನೊಂದು ಪಾರಮಾರ್ಥಿಕ, ಒಂದು ದೇಹಿಕ ಇನ್ನೊಂದು ಆತ್ಮಿಕ, ಒಂದು ಮಾನುಷ ಮತ್ತೊಂದು ದೈವಿಕ, ಒಂದರ ಪರ್ಯವಸಾನವು ಭಂಗುರ ಸುಖದಲ್ಲಿ ಆದರೆ ಇನ್ನೊಂದು ಪರಮಾನಂದದಲ್ಲಿ ಪರಿಣಮಿಸುವದು. ಹೀಗೆ ಅಜಗಜಾಂತರವು ಇವೆರಡರಲ್ಲಿ!

೧೬೩. ಇನ್ನು ಈ ಭಕ್ತಿಮಾರ್ಗವನ್ನು ಕುರಿತು ವಚನಕಾರರ ಅಂಬೋಣವೇನಿರುವದು ಇದನ್ನು ನೋಡುವ. ಭಕ್ತಿಯು ತೀವ್ರ ಮತ್ತು ಪ್ರತ್ಯಕ್ಷ ಫಲವನ್ನು ಕೊಡುವಂತಹ ಮಾರ್ಗವು, ಎಂದು ವಚನಕಾರರ ಮತವಿರುವದು. ವೇದವು ಓದಿನ ಮಾತು, ಶಾಸ್ತ್ರವು ಸಂತೆಯ ಸುದ್ದಿ, ಪುರಾಣವು ಪುಂಡರಗೋಷ್ಠಿ, ತರ್ಕವು ಟಗರ ಕಾದಾಟವು; ಆದರೆ ಭಕ್ತಿ ಎಂಬುದು ತೋರಿ ಉಂಬ ಲಾಭವು (೫೫). ಭಕ್ತಿಮಾರ್ಗವು ಸುರಕ್ಷಿತವು ಮತ್ತು ಸುಲಭವು, ಎಂದು ಹೇಳುವಾಗ, ಅದ್ವೈತವ ನುಡಿದು ನಾನು ಅಹಂಕಾರಿಯಾದೆ, ಬ್ರಹ್ಮವ ನುಡಿದು ಭ್ರಮಿತನಾದೆ, ಶೂನ್ಯವ ನುಡಿದು ಸುಖದುಃಖಕ್ಕೆ ಒಳಗಾದೆ, ಆದರೆ ಸತ್ಸಂಗದಿಂದ ಭಕ್ತನಾಗಿ ಬದುಕಿದೆನು (೫೫), ಎಂದು ಒಬ್ಬ ವಚನಕಾರನು ಅಂದಿರುವನು. ಮೇಲಾಗಿ, ದೇವರು ಭಕ್ತಿಯನ್ನೆ ಪ್ರೀತಿಸುವನು. ಅವನು ವೇದಪ್ರಿಯನಲ್ಲ, ಯುಕ್ತಿಪ್ರಿಯನಲ್ಲ, ಶಾಸ್ತ್ರಪ್ರಿಯನಲ್ಲ, ನಾದಪ್ರಿಯನಲ್ಲ, ಸ್ತೋತ್ರಪ್ರಿಯನಲ್ಲ, ಕ್ರಿಯಾಪ್ರಿಯನಲ್ಲ, ಆದರೆ ಭಕ್ತಿಪ್ರಿಯನು (೫೯). ಭಕ್ತಿಯು ಸಫಲವಾಗಬೇಕಾದರೆ ವ್ಯಾಕುಲತೆ, ನಿಷ್ಠೆ, ಪರಮಾತ್ಮನ ಅನುಗ್ರಹ ಇವೆಲ್ಲವೂ ಅವಶ್ಯವಿರುವವು. ಎಳೆಕರುವು ತನ್ನ ತಾಯನರಸಿ ಬಳಲುವಂತೆ (೬೮೧) ಭಕ್ತನು ವಿರಹದಿಂದ ಬಳಲಬೇಕು. ದೇವರ ಉದರವ ಬಗಿದು ಹೊಗುವ ಧರವು ಅವನಲ್ಲಿ ಉಂಟಾಗಬೇಕು (೫೯). ಅಡವಿಯ ಪಾಲಾದ ನಲ್ಲನ ನಗಲಿದ ಓರ್ವ ವಿರಹವಿವ್ಹಲೆಯು ಅಥವಾ ವಿರಹಾಕ್ರಾಂತರಾದ ವಿಕ್ರಮ, ದುಷ್ಯಂತ, ರಾಮ ಮುಂತಾದ ಪೌರಾಣಿಕ ಅರಸರು ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಂಡಿರುವಿರಾ, ಸ್ವರವೆತ್ತಿ ಹಾಡುವ ಕೋಗಿಲೆಗಳಿರಾ ನೀವು ನೋಡಿರುವಿರಾ, ಎಂದು ಘುಂತಾಗಿ ಸಿಕ್ಕಸಿಕ್ಕವರನ್ನು ಸುದ್ದೀ ಕೇಳುತ್ತ ತಿರುಗುವಂತೆ ಆತುರ ಭಕ್ತನ ಸ್ಥಿತಿಯಾಗಲಿಕ್ಕೆ ಬೇಕು (೧೮೫). ಈ ಪರಿ ಆತುರನಾದ ಭಕ್ತನು ಗರ್ವಾದಿಗಳನ್ನು ಬಿಟ್ಟು ಏಕ ನಿಷ್ಠೆಯಿಂದ ತನ್ನ ಇಷ್ಟದೇವತ್ವನ್ನು ಹುಡುಕಬೇಕು. ಗರ್ವದಿಂದ ಮಾಡುವ ಭಕ್ತಿ, ದೃಢವಿಲ್ಲದೆ ಮಾಡುವ ಭಕ್ತಿ, ನಡೆಯಿಲ್ಲದ ನುಡಿಯಂತೆ, ಅಡಿವಡೆದ ಕುಂಭದಲ್ಲಿ ಸುಖಜಲವನ್ನು ತುಂಬಿದಂತೆ ವ್ಯರ್ಥವು (೬೭೦). ಮಾವಿನ ಕಾಯೊಳಗೊಂದು ಎಕ್ಕೆಕಾಯಿ ನಾನು, ಭಕ್ತನೆನಿಸಿಕೊಳ್ಳುವ ಯೋಗ್ಯತೆಯು ಕೂಡ ನನ್ನಲ್ಲಿಲ್ಲ, ಎಂಬ ವಿನಮ್ರಭಾವದಿಂದ ಭಕ್ತನು ವರ್ತಿಸಲಿಕ್ಕೆ ಬೇಕು (೫೪೪). ಅದೇರೀತಿ ನೈಷ್ಠಿಕಭಾವವಿಲ್ಲದೆ ಎಷ್ಟು ಓದಿದರೇನು, ಕೇಳಿದರೇನು, ಜಪಮಾಡಿದರೇನು? ಅದು ನಿಷ್ಫಲ. ಭಾವತುಂಬಿ,

ನಂಬುಗೆ ಇಂಬುಗೊಂಡು, ಮಾಡುವ ಪೂಜೆಯೆ ದೇವರನ್ನು ಒಲಿಸಬಲ್ಲದು (೬೭೧). ದೇವರು ಅಟ್ಟಿ, ಮುಟ್ಟಿ, ತಟ್ಟಿ ತನ್ನ ಭಕ್ತರನ್ನು ಪರೀಕ್ಷಿಸುವನು. ಅವರು ಅದನ್ನೆಲ್ಲ ಸಹಿಸಿ ತಮ್ಮ ನಿಷ್ಠೆಯನ್ನು ಬಿಡದಿದ್ದರೆ ಅವನು ತನ್ನನ್ನೆ ಅವರಿಗೆ ಕೊಟ್ಟು ಬಿಡುವನು (೬೭೨). ಇದಲ್ಲದೆ, ಭಕ್ತಿಯು ಅನನ್ಯವಿರಬೇಕು. ಭಕ್ತನಿಗೆ ತನ್ನ ದೇವರ ನೆನಪೇ ಉದಯ, ಅವನ ಮರವೇ ಅಸ್ತಮಾನವಾಗಿರಬೇಕು. ಅವನ ನೆನಹೇ ಜೀವಾಳ, ಅದೇ ಅವನ ಪ್ರಾಣ ಸರ್ವಸ್ವವಾಗಬೇಕು (೬೭೬). ಅವನನ್ನು ಬಿಟ್ಟು ಅನ್ಯವನ್ನು ನೆನೆದರೆ ತಲೆದಂಡ ಒಪ್ಪಿಸುವ ನಿರ್ಧಾರವಿರಬೇಕು ಭಕ್ತನದು (೬೭೩). ಭಕ್ತನು ಏಕ ಪತ್ನೀವ್ರತಿಯಂತೆ, ಪತಿವ್ರತೆಯಂತೆ ಒಂದೇ ದೇವರನ್ನು ನಂಬಿಕೊಂಡಿರಬೇಕು. ಹಲವು ದೇವರುಗಳನ್ನು ಹಿಂಬಾಲಿಸುವುದೆಂದರೆ ಕೊಂಬಿನಿಂದ ಕೊಂಬಿಗೆ ಹಾರುವ ಮಂಗನ ಪಾಡೇ ಸೈ (೬೭೪)! ಕಾರುಣ್ಯನಿಧಿಯಾದ ದೇವರು ಒಲಿದರೆ ಭಕ್ತನಿಗೇನು ಕಡಿಮೆ? ಅವನು ಒಲಿದರೆ ಕೊರಡು ಕೊನರುವದು, ಬರಡು ಹಯನಾಗುವದು, ವಿಷವು ಕೂಡ ಅಮೃತವಾಗುವದು (೬೮೨). ನಿಜವಾದ ಭಕ್ತಿಯು ಸಹೇತುಕವಿರಲರಿಯದು. ನಿಜಭಕ್ತನು ದೇವರಿಗೆ ಕೈಯ್ಯೊಡ್ಡಿ ಏನೂ ಬೇಡನು. ಇಷ್ಟೇ ಅಲ್ಲ. ತಾನೇ ಅವನಿಗೆ ಎಲ್ಲವನ್ನು ಕೊಟ್ಟುಬಿಡುವನು. ಭಕ್ತರು ಫಲಪದಗಳನೊಲ್ಲರು. ತಮ್ಮ ತನುಮನಧನಗಳನ್ನೆಲ್ಲ ಅವರು ದೇವರಿಗೆ ಅರ್ಪಿಸಿಬಿಡುವರು (೬೭೭). ತಂದೆತಾಯಿ ನೀನು, ಬಂಧುಬಳಗ ನೀನು, ಬೇಕಾದತೆ ಹಾಲಿನಲ್ಲಿ ಎದ್ದು, ಬೇಕಾದರೆ ನೀರಿನಲ್ಲಿ ಎದ್ದು, ಕುಡಗೋಲು ಕುಂಬಳಕಾಯಿ ನಿನ್ನ ಕೈಯಲ್ಲಿರುವವು (೬೭೭), ನೀನೇ ನನ್ನ ತನುಮನ ಧನಗಳ ಒಡೆಯನು. ನನ್ನ ಅರಿವುಮರವುಗಳೂ ನೀನೇ ಮತ್ತು ನಿನ್ನವೇ. ನೀ ಮಾಡಿರುವೆ ಎಂದು, ನೀ ಮಾಡಿದಂದೆ ನಾನಾದೆನು (೬೮೮, ೬೮೯), ಎಂದು ಎಲ್ಲವನ್ನು ದೇವರಿಗೆ ಒಪ್ಪಿಸಿದ ಭಕ್ತನಿಗೆ ಯಾವ ಭಯವು, ಎಲ್ಲಿಯ ಚಿಂತೆಯು? ಹೀಗೆ ಸರ್ವಸ್ವವನ್ನು ಒಪ್ಪಿಸಿದ ಬಳಿಕ, ಭಕ್ತನು ತಾನು ಭಕ್ತನಲ್ಲ, ಯುಕ್ತನಲ್ಲ, ದೇವರು ಮಾಡಿದ ಸೂತ್ರದ ಗೊಂಬೆ ತಾನು, ತಾನು ತಿಲಮಾತ್ರ ಸ್ವತಂತ್ರನಲ್ಲ, ತನ್ನಂತರಂಗ ಬಹಿರಂಗವೆಲ್ಲ, ತನ್ನಲೇನು ಕೇಡುಗಳಿಲ್ಲ, ದೇವರೇ ಇರುವನು (೬೦೨, ೬೦೩), ಹೀಗೆ ಅಂದರೂ ಅದು ಯೋಗ್ಯವೇ ಆಗುವದು. ಆಗ, ಎನ್ನ ದೇಹವ ದಂಡಿಗೆಯ ಮಾಡಿ, ಎನ್ನ ಶಿರವ ಸೋರೆಯ ಮಾಡಿ, ಎನ್ನ ನರವ ತಂತಿಯ ಮಾಡಿ, ಎನ್ನ ಬೆರಳ ಕಡ್ಡಿಯ ಮಾಡಿ, ಮೂವತ್ತೆರಡು ರಾಗವ ಹಾಡು, ಎನ್ನ ಉರದಲೊತ್ತಿ ನಿನ್ನ ಜಯ

ಗಾನವನ್ನು ಬಾರಿಸು (೩೦೪). ಎಂದು ಭಕ್ತನು ತನ್ನ ಅಹಂಭಾವದ ಪೂರ್ಣಾಹುತಿಯನ್ನು ಕೊಡುವನು. ಭಕ್ತಿಭಾವೋದ್ರೇಕದಿಂದ ಪರಮಾನಂದಪರವಶನಾದ ಭಕ್ತನ ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ, ಮನದಲ್ಲಿ ದೇವರ ನೆನಹು ತುಂಬಿ, ಕಿವಿಯಲ್ಲಿ ದೇವರ ಕೀರ್ತಿ ತುಂಬಿ, ಅವನು ಪರಮಾತ್ಮನ ಪಾದಾರವಿಂದದಲ್ಲಿರುವ ಪ್ರೇಮ ಮಧುವನ್ನುಣ್ಣುವ ತುಂಬಿಯಾಗಿ ನಲಿಯುವನು (೩೧೦). ಆ ತನ್ಮಯ ಸ್ಥಿತಿಯಲ್ಲಿ ತನುಕರಣಾದಿ ತಾನೆಂಬರಿವು ನಷ್ಟವಾಗುವದು, ಪರಮಾತ್ಮನ ಸ್ಪರ್ಶಸುಖದಿಂದ ಮೈಮೇಲೆ ಪುಳಕಂಗಳೆದ್ದು ಭಕ್ತನು ಹರ್ಷನಿರ್ಭರನಾಗುವನು, ಕಣ್ಣುಗಳು ಆನಂದಾಶ್ರುಗಳಿಂದ ತುಂಬಿಹೋಗುವವು, ಪ್ರೇಮಭರದಿಂದ ಕಂಠವು ಗದ್ಗದಿತವಾಗುವದು. ಇವೇ ಆ ಸ್ಥಿತಿಯ ಲಕ್ಷಣಗಳು (೩೧೧). ಇಂಥ ಭಕ್ತಿಯೆ ಉಪಾಸಕನನ್ನು ಐಕ್ಯಸ್ಥಳಕ್ಕೆ ಒಯ್ಯುವದು. ಭಕ್ತನು ಭವರಹಿತನಾಗಿ ದೇವನೇ ತಾನಾಗುವನು (೩೧೯). ಭಕ್ತನ ಶಿರವು ಪರಮಾತ್ಮನ ಚರಣಗಳನೊರಸೊರಸಿ ಭೇದವಿಲ್ಲದಂತಾಗುವದು (೩೨೪). ಮುಂದೆ ಪ್ರತೀಕಾದಿಗಳ ಅವಶ್ಯಕತೆ ಕೂಡ ಉಳಿಯದು. ದೇಹವೆ ದೇಗುಲವಾಗಿ ಆತ್ಮನೆ ದೇವನಾಗುವನು (೩೬೭), ತನು ಮರೆದು ಇದಿರ ಹರಿದು ಇರಬಲ್ಲರೆ ಆತ ಭಕ್ತ (೩೬೯), ಎಂದು ವಚನಕಾರರು ಐಕ್ಯಸ್ಥಳದ ಒಳ್ಳೇ ಮಾರ್ಮಿಕವರ್ಣನೆಯನ್ನು ಮಾಡಿರುವರು ಮಣಿಯನು ಎಣಿಸಿ, ಕಣಿಯನು ಪೂಜಿಸಿ ದಿನವ ಕಳೆಯಲುಬೇಡ, ಕ್ಷಣವಾದರೂ ನಿಜದ–ಆತ್ಮನ–ನೆನಹು ಸಾಕು, ಕ್ಷಣದೊಳಗಿನ ಅರ್ಧವಾದರೂ ನಿಜದ ನೆನಹೇ ಸಾಕು (೩೭೫), ಎಂದು ಆತ್ಮಚಿಂತನದ ಮಹಾತ್ಮ್ಯವನ್ನು ವಚನಕಾರರು ಹೊಗಳಿರುವರು. ಹೀಗೆ ಭಕ್ತಿಯ ಪರ್ಯವಸಾನವಾದರೂ ಆತ್ಮಜ್ಞಾನದಲ್ಲಿಯೆ ಆಗಿ ಸಾಧಕನಿಗೆ ಪರಮಗತಿಯು ದೊರಕುವದು. ಅದರಲ್ಲಿಯೆ ಅವನ ಕೃತಾರ್ಥತೆಯು.

೧೨೪. ಜ್ಞಾನ ಭಕ್ತಿಗಳನ್ನು ಕುರಿತು ವಚನಕಾರರು ತಮ್ಮ ಮತವನ್ನು ವ್ಯಕ್ತ ಮಾಡಿರುವಂತೆ ಕರ್ಮ ಮತ್ತು ಕರ್ಮಯೋಗವನ್ನು ಕುರಿತು ಏನು ಅಂದಿರುವರು ಇದನ್ನು ನೋಡಬೇಕು. ಕರ್ಮವೆಂದರೆ ಸಾಮಾನ್ಯವಾಗಿ ಜೀವನ ವ್ಯಾಪಿಯಾದ ಅಖಿಲ ಚಲನವಲನಗಳು. ಅವುಗಳಲ್ಲಿ ಯಾವವನ್ನು ಮಾಡಬೇಕು ಯಾವವನ್ನು ಬಿಡಬೇಕು, ಇದನ್ನು ಕರ್ತವ್ಯಾಕರ್ತವ್ಯಗಳ ವಿಚಾರಮಾಡಿ ನಿಶ್ಚಯಿಸತಕ್ಕದ್ದು. ಹಾಗೆ ನಿಶ್ಚಯಿಸಿದ ಕರ್ತವ್ಯವೆ ಪ್ರತಿಯೊಂದು ವ್ಯಕ್ತಿಯ ಸ್ವಕರ್ಮವೆನಿಸುವದು. ಸ್ವಧರ್ಮದಂತೆ ಅಂದರೆ

ಪ್ರತಿಯೊಬ್ಬನ ಸ್ವಭಾವಗುಣ, ಆಯಾ ದೇಶ ಕಾಲ ಪರಿಸ್ಥಿತಿ, ಅವನವನ ಶಕ್ತಿ, ಒಲವುಗಳು, ಮತ್ತು ಶಾಸ್ತ್ರ ಇವೆಲ್ಲವುಗಳನ್ನು ನೋಡಿ ನಿಶ್ಚಯಿಸಿದ ಕರ್ಮವೆ ಕರ್ತವ್ಯವು. ಕರ್ಮಯೋಗದ ಚರ್ಚೆಮಾಡುವಾಗ, ಕರ್ಮ ಮಾಡಬೇಕು ಇದರ ಅರ್ಥವು ಸ್ವಕರ್ಮಮಾಡಬೇಕು, ಎಂದೇ ಆಗುವದು; ಅದೇ ರೀತಿ, ಇಲ್ಲಿ ಕರ್ಮಬಿಡುವುದೆಂದರೆ ಸ್ವಕರ್ಮವನ್ನು ಇಲ್ಲವೆ ಕರ್ತವ್ಯವನ್ನು ಬಿಡುವದು, ಎಂದು ಅರ್ಥವಾಗುವದು. ಈ ಸ್ವಕರ್ಮವನ್ನು ಆತ್ಮವಿಕಾಸವಾಗುವಂತೆ, ಆತ್ಮಜ್ಞಾನವಾಗುವಂತೆ ಮಾಡುವುದೆ ಕರ್ಮಯೋಗವೆನಿಸುವದು. ಫಲಾಶೆಬಿಡುವದು, ಕರ್ತವ್ಯವೆಂದು ಕರ್ತವ್ಯವಾಡುವದು, ಅನಾಸಕ್ತರಾಗಿ ಕರ್ಮಮಾಡುವದು, ಅಹಂಕಾರಬಿಡುವದು, ಮಾಡುವ ಕರ್ಮಗಳನ್ನೆಲ್ಲ ಪರಮಾತ್ಮನಿಗೆ ಅರ್ಪಿಸುವದು, ಇದೇ ಕರ್ಮಯೋಗದ ಮಾರ್ಗವು. ಜ್ಞಾನಭಕ್ತಿಗಳ ಪರೀಕ್ಷೆಯು ಕರ್ಮಮಾಡುವಾಗ ಚನ್ನಾಗಿ ಆಗುವದು. ಕರ್ಮಮಾಡದೆ ನಮ್ಮ ಜೀವನಯಾತ್ರೆಯು ಕೂಡ ಮುಂದಕ್ಕೆ ಸಾಗದು. ವ್ಯಕ್ತಿ ಮತ್ತು ಸಮಾಜಗಳು ಸುಸೂತ್ರ ಇರಬೇಕಾದರೆ ಕರ್ಮವು ಅತ್ಯವಶ್ಯವು. ದೇವರ ಋಣವನ್ನು ತೀರಿಸಬೇಕಾಗಿದ್ದರೆ ಕರ್ಮವನ್ನು ಮಾಡಿಯೇ ತೀರಬೇಕು. ಯಾಕಂದರೆ, ನಾವು ಸೋಮಾರಿಗಳಾಗಬೇಕೆಂದು ಅಥವಾ ಕರ್ಮಸನ್ಯಾಸಮಾಡಬೇಕೆಂದು ದೇವರು ನಮಗೆ ಕರ್ಮಶಕ್ತಿಯನ್ನು ಕೊಟ್ಟಿಲ್ಲ. ಅದು ಅವನು ನಮಗೆ ಕೊಟ್ಟ ವಿಶ್ವಾಸದ ನಿಧಿಯು. ಅದರ ಯೋಗ್ಯ ಉಪಯೋಗವನ್ನು ನಾವು ಮಾಡಬೇಕೆಂದೆ ಅದನ್ನು ನಮಗೆ ಅವನು ದಯಪಾಲಿಸಿರುವನು. ಸ್ವಾರ್ಥಬಿಟ್ಟು ಪರಾರ್ಥಕ್ಕಾಗಿ, ತನಗಾಗಿ ಅಲ್ಲದಿದ್ದರೂ ಲೋಕಸಂಗ್ರಹಕ್ಕಾಗಿ, ಪರಮೇಶ್ವರಾರ್ಪಣಪೂರ್ವಕ ಸತತ ಸ್ವಕರ್ಮಮಾಡುತ್ತಿರುವುದೆ ಕರ್ಮಶಕ್ತಿಯ ಉಚಿತವಾದ ಉಪಯೋಗವಿರುವದು. ಈ ಮಾತನ್ನು ವಚನಕಾರರು ಚನ್ನಾಗಿ ಮನಗಂಡಿದ್ದರಿಂದ ಅವರು ಕರ್ಮಕ್ಕೆ ಒಳ್ಳೇ ಮಹತ್ವವನ್ನು ಕೊಟ್ಟಿದ್ದಾರೆ. ಇದಲ್ಲದೆ ಕಾಯಕವನ್ನು ಅಂದರೆ ಹೊಟ್ಟೆಗಾಗಿ ಪ್ರತಿಯೊಬ್ಬನು ಮಾಡತಕ್ಕ ಉದ್ಯೋಗವನ್ನು ಎಂದೂ ಬಿಡಕೂಡದು, ಭಿಕ್ಷೆಬೇಡಿ ಭೂಮಿಗೆ ಭಾರವಾಗಿ ಹೊಟ್ಟೇಹೊರಕೊಳ್ಳುವದು ನಾಚಿಕೆಗೇಡು, ಎಂದು ಅವರು ತಿಳಿದಿದ್ದರು.

೧೨೫. ಕ್ರಿಯೆಯು, ಕರ್ಮವು, ಕರ್ತವ್ಯಕರ್ಮವು ಯಾವಾಗಲೂ ಅತ್ಯವಶ್ಯವೆಂದೇ ವಚನಕಾರರ ಮತವಿರುವದು. ಕ್ರಿಯಾಮಥನವಿಲ್ಲದೆ, ಇಕ್ಷುವಿನೊಳಗಣ ಮಧುರವು, ಕ್ಷೀರದೊಳಗಣ ತುಪ್ಪವು, ಕಾಷ್ಠದೊಳಗಣ ಅಗ್ನಿಯು ಕಾಣಬಲ್ಲದೆ? ಆದುದರಿಂದ ಸತ್ಕ್ರಿಯಾಚರಣೆಯೆ ಮುಖ್ಯ

ಸಾಧನವು (೩೦೭), ಎಂದು ಅವರು ಒತ್ತಿಹೇಳುವರು. ಗತಿ, ಮತಿ, ಜೈತಸ್ಯಶಬ್ದವುಳ್ಳನ್ನಕ್ಕರ ಅಂದರೆ ನಮ್ಮ ಇಡೀ ಜೀವಮಾನದಲ್ಲಿ ನಾವು ಯಾವಾಗಲೂ ಯೋಗ್ಯಕ್ರಿಯೆಗಳನ್ನು ಮಾಡುತ್ತಲೆ ಇರಬೇಕು (೪೦೮). ಕರ್ಮಯೋಗವನ್ನಾಚರಿಸದೆ ನಿರ್ಮಲ ಸುಚಿತ್ತವನ್ನರಿಯುವ ಪರಿ ಇನ್ನಾವುದು (೩೧೯), ಎಂದು ವಚನಕಾರರ ಪ್ರಶ್ನೆಯು. ವಿಶ್ವದಲ್ಲಿ ಜ್ಞಾನದ ಪ್ರತಿಷ್ಠೆಯನ್ನು ಹೇಳುವರು. ಅದು ಗೋವಿನದೇಹದಲ್ಲಿಯ ತುಪ್ಪವಿದ್ದಂತೆ. ಅದು ತಾನಿದ್ದಲ್ಲಿಯೆ ಗೋವಿಗೆ ಪುಷ್ಟಿಕೊಡದು. ಗೋವ ಪೋಷಿಸಿ, ಹಾಲ ಕರೆದು ಕಾಸಿ, ಹೆಪ್ಪುಹಾಕಿ, ಕಡೆದು ಬೆಣ್ಣೆತೆಗೆದು, ತುಪ್ಪಮಾಡಿ ಅದನ್ನು ಆ ಗೋವಿಗೆ ಕುಡಿಸಿದರೆ ಪುಷ್ಟಿಕರವಾಗಬಲ್ಲದು. ಹಾಗೆ ಸತ್ಕ್ರಿಯೋಪಚಾರವನ್ನು ಮಾಡುವನಕ ಜ್ಞಾನದ ಆಶೆ ಇಲ್ಲ, ಜ್ಞಾನವಾಗುವನಕ ಮುಕ್ತಿಯ ಸುಳುವಿಲ್ಲ (೩೧೧). ಕರ್ಮಭೂಮಿಯಲ್ಲಿ ನಾವು ಕಡುಗಲಿಗಳಂತೆ ಕಾಲಿಡಲಿಕ್ಕೆಬೇಕು, ಇದರಲ್ಲಿ ನಾವು ಗೆದ್ದೇತೀರುವೆವೆಂಬ ಆತ್ಮವಿಶ್ವಾಸವಿರಬೇಕು ನಮಗೆ. ಕರ್ಮಕ್ಷೇತ್ರವನ್ನು ಬಿಟ್ಟು ಓಡಿಹೋಗುವವನು ದೇವರ ನಿಜವಾದ ಲೆಂಕನಲ್ಲ. ಅಂಜಿದರೆ, ಓಡಿದರೆ ನಮ್ಮ ಕರ್ಮವೇನಾದರೂ ನಮ್ಮನ್ನು ಬಿಡಬಲ್ಲದೊ? ಇಲ್ಲ, ಸರ್ವಥಾ ಇಲ್ಲ. ಅಂದ ಬಳಿಕ ವ್ಯರ್ಥ ಓಡಿ, ಕರ್ಮವನ್ನು ತಪ್ಪಿಸಲು ಹವಣಿಸಿ ನಗೆಗೀಡಾಗುವದು ನಾಚಿಕೆಯ ಸಂಗತಿಯು. ಆದುದರಿಂದ ಧೃತಿಗೆಡದೆ, ಧಾತುಗೆಡದೆ, ಬೇಕಾದಂತಹ ಪ್ರಸಂಗ ಬಂದರೂ ಹಿಂಜರಿಯದೆ, ದೇವರು ನಮ್ಮನ್ನು ಯಾವ ರೀತಿ ಪರೀಕ್ಷಿಸಿದರೂ ಬೆದರದೆ ಬೆಚ್ಚದೆ, ಅಂಜದೆ ಅಳುಕದೆ, ಇರಬೇಕು. ದೇವರು ನಮ್ಮನ್ನು ಅರೆದು ನೋಡಿದರೆ ಚಂದನದಂತೆ ಮತ್ತಿಷ್ಟು ಕಂಪನ್ನು ಬೀರಿ, ಹಿಂಡಿ ನೋಡಿದರೆ ಕಬ್ಬಿನಂತೆ ಮತ್ತಿಷ್ಟು ತನಿರಸವನ್ನು ಒಸರಿ, ಅವನು ಪ್ರೀತನಾಗಿ ನಮ್ಮನ್ನು ಕೈಹಿಡಿದು ಎತ್ತಿಕೊಳ್ಳುವಂತೆ ಧೈರ್ಯದಿಂದಲೂ ಉತ್ಸಾಹದಿಂದಲೂ ವರ್ತಿಸಬೇಕು (೩೧೨, ೩೧೫). ಸಮಾಜದಲ್ಲಿ ನಾವು ಯಾರಿಗೂ ಭಾರವಾಗಕೂಡದು. ಸ್ವಸಂತೋಷಿತರೂ ಸ್ವಸಂರಕ್ಷಿತರೂ ಆಗುವ ಆಕಾಂಕ್ಷೆ ಇರಬೇಕು ನಮಗೆ. ಕಾಯಕವೆಂಬುದೊಂದು ಪರಮಕರ್ತವ್ಯವು. ಅದರಿಂದಲೆ ಕರ್ಮಯೋಗಿಯು ದೇವರನ್ನು ಪೂಜಿಸುವನು. ಕಾಯಕವೆ ಕೈಲಾಸವು. ಕಾಯಕ ತಪ್ಪಿದರೆ ಸೈರಿಸಲಾಗದು. ಗುರುಗಳಿದ್ದವರಿಗೆ ಕೂಡ ಕಾಯಕದಿಂದಲೆ ಜೀವನ್ಮುಕ್ತಿ. ತಮ್ಮ ಕಾಯಕವನ್ನು ಬಿಟ್ಟು ಮನೆಮನೆ ಭಿಕ್ಷೆಗೆ ತಿರುಗುವದು ಅತಿಶಯ ಅನುಚಿತವು. ಕಾಯಕಮುಖದಿಂದ ಸಿಕ್ಕುವ

ಕೂಲಿಯೆ ತನಗೆ ಸಾಕೆಂದು ಸಾಧಕನು ಸಂತುಷ್ಟನಿರಬೇಕು. ಹೆಚ್ಚಿನ ಹೇಮದಾಸೆಗೆ ಅವನು ಹೋಗಕೂಡದು. ಯಾವನ ಚಿತ್ತವು ಶುದ್ಧವಿಲ್ಲವೊ ಅವನಿಗೆ ಮಾತ್ರ ದ್ರವ್ಯದ ಬಡತನವಿರುವದು, ಹೊರತು ಶುದ್ಧಚಿತ್ತನಾಗಿ ಕಾಯಕವನ್ನು ಮಾಡುವವನಿಗೆ ಎತ್ತ ನೋಡಿದತ್ತ ಲಕ್ಷ್ಮಿಯೆ ಕೈವಶಳಾಗುವಳು. ಬೇಡಿ ಕಾಡಿ ತಂದ ಹಣದಿಂದ ದೇವರಿಗೆ ಮಾಡಿದರೂ ಅದು ದೇವರಿಗೆ ಸಲ್ಲದು. ತನು ಕರಗಿ, ಮನ ಬಳಲಿ ಬಂದ ಹಣದಿಂದ ಮಾಡಿದ್ದೇ ದೇವರಿಗೆ ಪ್ರಿಯವು. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದದ್ದು ದೇವರಿಗೆ ಅರ್ಪಿತವಾಗುವದು. ಸತ್ಯ ಶುದ್ಧಕಾಯಕದ ನಿತ್ಯದ್ರವ್ಯದಿಂದ ಮಾಡಿದ ನೈವೇದ್ಯವನ್ನು ದೇವರು ಪ್ರೇಮಪುರಸ್ಸರವಾಗಿ ಸ್ವೀಕರಿಸುವನು. (೩೧೬–೩೨೨). ಹೆಚ್ಚಿಗೇನು ಹೇಳಬೇಕು? ಕಾಯಕವಿಲ್ಲದೆ ಕೂಳು ಸಹ ದೊರಕದು. ಬೇಯದೆ ಉಂಬ ಠಾವು ಅದಾವುದು, ಕಾಯಕವಳಿದ ಠಾವಿನಲ್ಲಿ ಜೀವದ ಎಡೆಯಾಟ ಉಂಟೇ (೩೧೨)? ಎಂದು ವಚನಕಾರರು ಕೇಳುವರು. ಇಷ್ಟೊಂದು ಅವರು ಮಹತ್ವಕೊಟ್ಟಿರುವರು ಕಾಯಕಕ್ಕೆ. ಇನ್ನು ಸಾಧಕನು ಮಾಡತಕ್ಕ ಎಲ್ಲ ಕರ್ಮಗಳನ್ನೂ ಅವನು ಅಹಂಭಾವವನ್ನು ಬಿಟ್ಟು, ಕಾಮನೆಗಳನ್ನು ತೊರೆದು ಮಾಡಲಿಕ್ಕೆ ಬೇಕು. ನಾನು ಮಾಡುವೆನು, ಎಂಬ ಭಾವನೆಯು ಇರುವವರೆಗೆ, ಈ ಕರ್ಮದಿಂದ ನನಗೆ ಈ ಫಲವು ದೊರೆಯಬೇಕು, ಎಂಬ ಆಶೆ ಇರುವವರೆಗೆ ಮನುಷ್ಯನಿಗೆ ಶಾಂತಿಯು ದೊರೆಯದು. (೩೨೫). ಅರ್ಥಿಗೆ ಮಾಡಬಲ್ಲ ಕೃತ್ಯವಂತರೆಲ್ಲರು ಭಕ್ತರಾಗಬಲ್ಲರೇ (೩೨೭)? ಕ್ರಿಯೆಯಲ್ಲಿ ಫಲಪದದಾಶೆಯನ್ನು ತಿಲಮಾತ್ರ ಮಾಡಬಾರದು. ಯಾಕಂದರೆ, ಬಯಕೆಯ ಭಕ್ತಿಗೆ ಪೂರ್ವಪುರಾತನರು ಮೆಚ್ಚರು. ದೇವರು ಹಂಗಿನ ಭಕ್ತಿಯನೊಲ್ಲ (೩೩೦). ಅರ್ಥ, ಪ್ರಾಣ, ಅಭಿಮಾನಗಳನ್ನೆಲ್ಲ ಸರ್ವಕರ್ತನಿಗೆ ಒಪ್ಪಿಸಿಬಿಟ್ಟವನೆ ಸದ್ಭಕ್ತನಾಗಬಲ್ಲನು (೩೩೬). ಭಕ್ತನು ಏನು ಮಾಡಿದರೂ ದೇವರಿಗಾಗಿ ಮಾಡಬೇಕು. ದೇವರು ಕೊಟ್ಟ ದ್ರವ್ಯವನ್ನು ದೇವಕಾರ್ಯಕ್ಕೆಯೆ ವೆಚ್ಚಮಾಡಬೇಕು. ದೇವರ ಸೊಮ್ಮು ದೇವರಿಗೆ ಸಲ್ಲಿಸಿಬಿಟ್ಟರೆ ಯಾವ ತೊಡಕೂ ಇಲ್ಲ (೩೩೩). ಯಾರು ಎಲ್ಲಿಹೋದರೂ ಯಾರು ಏನು ಮಾಡಿದರೂ ಅವರವರ ಕರ್ಮ ಅವರನ್ನು ಬಿಡದು. ಆದುದರಿಂದ ಅಖಂಡವಾಗಿ ತಮ್ಮ ಕರ್ತವ್ಯವನ್ನು ಮಾಡುತ್ತ ಆತ್ಮನೈವೇದ್ಯಮಾಡಿ ಭಕ್ತನು ಧನ್ಯನಾಗಬೇಕು. (೩೩೪). ಕರ್ಮಯೋಗಿಯು ಅತ್ಯಂತ ನಿಷ್ಕಾಮಿಯಾಗಲಿಕ್ಕೆ ಬೇಕು. ನನಗೆ ಬೇಕು, ಎಂಬ ಭಾವವು ಅವನ ಮನದಲ್ಲಿ ಎಂದಿಗೂ ಹೊಳೆಯದಿರಬೇಕು. ಮನ

ವಚನಕಾಯದಲ್ಲಿ ಎಲ್ಲವೂ ಪರಮಾತ್ಮನದು, ಎಲ್ಲವೂ ಪರಮಾತ್ಮನಿಗಾಗಿ, ಎಂಬ ಭಾವವೇ ತುಂಬಿರಬೇಕು. ಹಾಗೆ ಆಗುವತನಕ ಕರ್ಮಬಂಧನವು ಬಿಡದು (೩೩೧). ಕರ್ಮಯೋಗಿಯು ಮುಕ್ತಿಯ ಬಯಕೆಯನ್ನು ಕೂಡ ಕಳೆದಿರಬೇಕು. ದೇವರ ತೊತ್ತು ನೇವೆಯೆ ತನಗೆ ಸಾಕು, ಎಂದು ಅವನು ಯಾವ ಆಕೆಯೂ ಇಲ್ಲದೆ ಸ್ವಕರ್ಮನಿರತನಿರಬೇಕು (೩೩೩). ಈ ಬಗೆಯ ಉಚ್ಚ ನಿಷ್ಕಾಮಭಾವವು ನೆಲೆಗೊಂದಿತೆಂದರೆ, ಮಾಡುವವನು ನೀನೇ ಮಾಡಿಸಿಕೊಂಬವನು ನೀನೇ, ಮಾಡುವಲ್ಲಿ ನೀಡುವಲ್ಲಿ, ಭುಜಿಸುವಲ್ಲಿ ತ್ಯಜಿಸುವಲ್ಲಿ ನೀನೇ ನೀನು, ಎಂದು ಸಾಧಕನು ದೇವರಿಗೆ ಅನ್ನಬಲ್ಲನು (೩೩೪). ಆ ಸ್ಥಿತಿಯಲ್ಲಿ ಅವನು ನಿರ್ಲಿಪ್ತ ಕರ್ಮನಾಗುವನು, ಮತ್ತು ಕರ್ಮಬಂಧನವನ್ನು ಹರಿದೊಗೆದು ಮುಕ್ತಕರ್ಮವನ್ನಾಚರಿಸಲು ಸಮರ್ಥನಾಗುವನು. ಆಗ, ಲೋಕವಿಡಿದು ಲೋಕವ ಹಿಂಗದಂತಿರುವನವನು, ಹೊರಗೆ ಬಳಸಿ ಒಳಗೆ ಮರೆದಂತಿರುವನು, ಬೆಂದ ನುಲಿಯಂತೆ ಹುರಿಗುಂದದೆ ಇರುವನು, ಅವನು ನೀರತಾವರೆಯಂತಿರುವನು (೩೩೬). ನೇಯಿ ಹತ್ತದ ನಾಲಿಗೆಯಂತೆ, ಹುಡಿ ಹತ್ತದ ಗಾಳಿಯಂತೆ, ಕಾಡಿಗೆ ಹತ್ತದ ಕಣ್ಣಿನಂತೆ ಅವನು ಪೂರ್ಣ ಅಲಿಪ್ತಕರ್ಮನಾಗಿ ಪರಮಾನಂದದಲ್ಲಿ ಲೀಲೆಯಿಂದ ವಿಹರಿಸುವನು. ಅದೇ ಜೀವನ್ಮುಕ್ತ ಸ್ಥಿತಿಯು.

೧೩೬. ಇನ್ನು ಧ್ಯಾನಯೋಗದ ಬಗ್ಗೆ ವಚನಕಾರರು ಏನು ಹೇಳುವರು ಇದನ್ನು ನೋಡುವ. ಇಲ್ಲಿ ಧ್ಯಾನಯೋಗವೆಂದರೆ ಪಾತಂಜಲ ಮುನಿಯು ಹೇಳಿದ ಅಷ್ಟಾಂಗಯೋಗವು. ಅದಕ್ಕೆ ರಾಜಯೋಗವೆಂಬ ಹೆಸರೂ ಇರುವದು. ಚಿತ್ತದಲ್ಲಿ ಏಳುವ ವೃತ್ತಿಗಳ ಸಂಪೂರ್ಣ ನಿರೋಧವೆ ಯೋಗವು, ಎಂದು ಇದರ ವ್ಯಾಖ್ಯೆ ಇರುವದು. ಅದನ್ನು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣಾ, ಸಮಾಧಿ, ಎಂಬ ಎಂಟು ಸಾಧನಗಳಿಂದ ಸಾಧಿಸುವರು. ಆದ್ದರಿಂದ ಇದಕ್ಕೆ ಅಷ್ಟಾಂಗಯೋಗವೆಂಬ ಹೆಸರು ರೂಢವಾಗಿದೆ. ಇವುಗಳಲ್ಲಿ ಮೊದಲಿನ ಐದು ಮೆಟ್ಟಲುಗಳು ಮುಂದಿನ ಮೂರಕ್ಕೆ ಪೂರ್ವಾಂಗಗಳಾಗಿರುವುದರಿಂದ ಅವುಗಳಿಗೆ ಪೂರ್ವಯೋಗವೆನ್ನುವರು. ಮುಂದಿನವು ಮೂರು ಕೂಡಿ ಉತ್ತರಯೋಗವೆನಿಸುವದು. ಇವುಗಳಲ್ಲಿ ಧ್ಯಾನವೆ ಮುಖ್ಯವು. ಅದೇ ಹೆಜ್ಜೆ ಮತ್ತು ಹೆಜ್ಜೆ ಘನವಾಯಿತೆಂದರೆ ಧಾರಣೆಯೆನಿಸುವದು. ಧ್ಯೇಯವಸ್ತುವಿನಲ್ಲಿ ಚಿತ್ತದ ಪೂರ್ಣ ಲಯವಾಗಲಾರಂಭಿಸಿತೆಂದರೆ ಅದೇ ಸಮಾಧಿಯು. ಧ್ಯಾನಸಿದ್ಧಿಗೆ ಚಿತ್ತದ ಏಕಾಗ್ರತೆ ಬೇಕು. ಚಿತ್ತೈಕಾಗ್ರತೆಗೆ

ಅಡ್ಡಿಮಾಡುವ ಮುಖ್ಯ ಮಾತೆಂದರೆ ಮನಸಿನ ಚಾಂಚಲ್ಯವು. ಆ ಚಾಂಚಲ್ಯವು ಕಾಮನೆಗಳನ್ನೂ ಇಂದ್ರಿಯಗಳ ಆವೇಗಗಳನ್ನೂ ಅವಲಂಬಿಸಿದೆ. ಆ ದೋಷಗಳನ್ನೆಲ್ಲ ದೂಡಬೇಕೆಂದು ಯಮನಿಯಮಾದಿಗಳ ಯೋಜನೆಯಿರುವದು. ವಚನಕಾರರು ಈ ಯೋಗಮಾರ್ಗವನ್ನು ಚಿತ್ತಸ್ಥೈರ್ಯಕ್ಕಾಗಿ ಉಪಯೋಗಿಸಬೇಕೆಂದಿರುವರು. ತಮ್ಮ ಸಾಂಪ್ರದಾಯಕ್ಕನುಸರಿಸಿ ಶಿವಲಿಂಗವನ್ನೆ ತಮ್ಮ ಪ್ರತೀಕವನ್ನಾಗಿ, ಪ್ರಣವಪಂಚಾಕ್ಷರಿಯನ್ನೆ ತಮ್ಮ ಮಂತ್ರವನ್ನಾಗಿ, ಶಿವೈಕ್ಯವನ್ನೆ ತಮ್ಮ ಧ್ಯೇಯವನ್ನಾಗಿ ಇಟ್ಟುಕೊಂಡಿರುವುದರಿಂದ ಅವರು ಕೆಲವೆಡೆಗೆ ಈ ಯೋಗಕ್ಕೆ ಶಿವಯೋಗ, ಅಂದರೆ ಶಿವನೊಡನೆ ಕೂಡುವ ಮಾರ್ಗ, ಎಂದಿರುವರು. ಅನೃತ, ಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ ಇವೈದನ್ನು ಬಿಡುವುದೆ ಯಮಯೋಗವು. ಬ್ರಹ್ಮಚಾರಿಯಾಗಿ ನಿರಪೇಕ್ಷಿತನಾಗಿ ನಡೆಯುವವನು, ದೇವರ ನಿಂದೆಯನ್ನು ಕೇಳದಿರುವವನು, ಯಾವಾಗಲೂ ಮಂತ್ರವನ್ನು ಜಪಿಸುತ್ತಿರುವವನು, ಶುಚಿಯಾಗಿರುವವನು, ಪಾಪಭೀರು ಇದ್ದವನು, ನಿಯಮಯೋಗಿಯು. ಸಿದ್ಧಾಸನ ಪದ್ಮಾಸನಾದಿಗಳಲ್ಲಿ ಕುಳಿತು ಸುಸ್ಥಿರಚಿತ್ತನಾಗಿ ದೇವರನ್ನು ಪೂಜಿಸುವುದು ಆಸನಯೋಗವು. ರೇಚಕ ಪೂರಕ ಕುಂಭಕಗಳಿಂದ ಮನ ಪ್ರಾಣಗಳನ್ನು ಸಂಯಮಿಸಿ, ಹೃದಯದಲ್ಲಿ ದೇವರನ್ನು ಪ್ರತಿಷ್ಠಾಪಿಸಿ, ಅವನನ್ನೆ ನೆನೆಯುತ್ತಿರುವುದು ಪ್ರಾಣಾಯಾಮವು. ಸರ್ವೇಂದ್ರಿಯಗಳನ್ನು ಸಂಯಮಿಸಿ ಪರಮಾತ್ಮಾರ್ಪಿತವನ್ನಷ್ಟೆ ಸೇವಿಸುವದು ಪ್ರತ್ಯಾಹಾರವು. ಪರಮಾತ್ಮಪ್ರತೀಕವನ್ನು ಷಟ್‌ಚಕ್ರಗಳಲ್ಲಿಯೂ ನೆನೆಯುವುದೆ ಧ್ಯಾನವು, ಅದನ್ನು ಮನಪ್ರಾಣಾದಿಗಳಲ್ಲಿ ಸ್ಥಿರವಾಗಿ ಧರಿಸುವುದೆ ಧಾರಣೆಯು. ಆ ಸತ್ಕ್ರಿಯಾ ಜ್ಞಾನಯೋಗದಿಂದ ಧ್ಯೇಯವಸ್ತುವಿನಲ್ಲಿ ಭಿನ್ನವಿಲ್ಲದೆ ಏಕಾರ್ಥಿಯಾಗಿ ಇರುವುದೀಗ ಸಮಾಧಿಯೋಗವು (೩೩೯). ಇನ್ನೊಂದು ಪರಿ ಈ ಆಸನಾದಿಗಳ ಬಗ್ಗೆ ವಚನಕಾರರು ಹೇಳಿರುವರು. ಹೇಗಂದರೆ, ಆಸನಗಳಲ್ಲಿ ಶುದ್ಧಾಸನವೆ ಅಂದರೆ ಸಿದ್ಧಾಸನವೆ ಮುಖ್ಯವು. ಅದನ್ನು ಹಾಕಿ ಬೆನ್ನು ಹುರಿಯು ಮಣಿಯುದಂತೆ ನೆಟ್ಟನೆ ಕೂಡಬೇಕು. ಎರಡೂ ಕಣ್ಣುಗಳ ದೃಷ್ಟಿಯನ್ನು ಹುಬ್ಬಿನ ನಡುವೆ ಒಂದಿಸಬೇಕು. ಬಳಿಕ ಷಣ್ಮುಖೀ ಮುದ್ರೆಯನ್ನು ಮಾಡಬೇಕು. ಅಂದರೆ ಮೂಲಾಧಾರದಲ್ಲಿ ಮಲಗಿರುವ ಕುಂಡಲಿನಿ ಅಗ್ನಿಯು ಎದ್ದು ಮೇಲಕ್ಕೇರಿ ಬ್ರಹ್ಮರಂಧ್ರವನ್ನು ಸೇರುವದು. ಆಗ ದಿವ್ಯ ಜ್ಯೋತಿಯ ಸ್ಪಷ್ಟದರ್ಶನವಾಗುವದು (೩೪೬). ಅದೇರೀತಿ, ಅರೆದೆರೆದೆವೆ, ನಾಸಿಕಾಗ್ರದೃಷ್ಟಿ ಹೃದಯಕಮಲಮಧ್ಯದಲ್ಲಿ ಪರಮಾತ್ಮಪ್ರತೀಕದ ಧಾನ್ಯ,

ತನುಮನ ಇಂದ್ರಿಯ ಮತ್ತು ವಿಷಯಗಳ ಪೂರ್ಣ ಮರವು, ಹೀಗೆ ಸಾಧಕನ ಸ್ಥಿತಿಯು ಇರುವಾಗ ಅವನು ನಿಜ ಜ್ಯೋತಿಯನ್ನು ಕಾಣಬಲ್ಲನು (೩೪೭), ಎಂದು ವಚನಕಾರರ ನುಡಿಯಿರುವದು. ಅಂತರಂಗದಲ್ಲಿ ಬೆಳಗುವ ಈ ಜ್ಯೋತಿಯು ಒಳಹೊರಗೆ ತೆರಹಿಲ್ಲದೆ ವ್ಯಾಪಿಸಿಬಿಟ್ಟು ಮನದ ನೆನಹಿನ ವಿಶ್ರಾಮಸ್ಥಾನವಾದ ಆ ಜ್ಯೋತಿಯನ್ನೆ ನೆನೆಯುತ್ತ ಅದರಲ್ಲಿಯೆ ತರಹರನಾದನೆಂದರೆ ಸಾಧಕನು ಸುಖಿಯಾಗುವನು (೩೪೪). ಅದೇ ಯೋಗ ಸುಖವು. ಹರಿಯುವ ಮನವಾಯುಗಳಿರಡನ್ನೂ ಒಂದೇ ಹುರಿಮಾಡಿ ಮನಸನ್ನು ಸ್ಥಿರಗೊಳಿಸಬೇಕು. ಮೊದಲು ಯಾವದೊಂದು ಪ್ರತೀಕವನ್ನು ಕೈಕೊಂಡು, ಸಗುಣ ಧ್ಯಾನವನ್ನು ಸಾಧಿಸಿ, ಮುಂದೆ ನಿರ್ಗುಣಕ್ಕೆ ಹೋಗಬೇಕು. ಆ ನಿರ್ಗುಣ ಧ್ಯಾನವು ಬಲಿಯಿತೆಂದರೆ, ಸಗುಣವೆಲ್ಲವು ನಿರ್ಗುಣದಲ್ಲಿ ಅಡಗುವದು ಮತ್ತು ಮನವು ನಿರ್ಗುಣದಲ್ಲಿ ಲಯವಾಗುವದು. ಅದೇ ಪರಮ ರಾಜಯೋಗವು (೩೪೩). ಈ ಪರಿ, ಮನಸು ದೇವರಲ್ಲಿ ನಿಂತಿತೆಂದರೆ ಪರಮಸುಖವು ದೊರೆಕೊಳ್ಳುವದು, ಸಾಧಕನು ಜನನಮರಣರಹಿತನಾಗುವನು, ಮತ್ತು ಕರ್ಮಬಂಧಗಳಿಂದ ಪೂರಾ ಮುಕ್ತನಾಗುವನು.

೧೩. ಸಾಧನವೆಂದರೇನು, ಅದರ ವಿಧಿಗಳೆಷ್ಟು ಇರುವವು, ವಚನಕಾರರು ಅನುಸರಿಸಿದ ಸಾಧನಪಥದ ಸಾಮಾನ್ಯ ಸ್ವರೂಪವೇನು, ಎಂಬ ಮುಂತಾದ ವಿಷಯಗಳ ವಿವರಣೆಯು ಇದುವರೆಗೆ ಆಯಿತು. ಸಾಧಕನು ಪಾಲಿಸತಕ್ಕ ನೈತಿಕ ನಿಯಮ ಮುಂತಾದವುಗಳನ್ನು ' ವಚನಕಾರರ ನೈತಿಕ ಮತ್ತು ಸಾಮಾಜಿಕ ವಿಚಾರಗಳು, ' ಎಂಬ ಮುಂದಿನ ಪ್ರಕರಣದಲ್ಲಿ ಕೊಡುವ ಸಂಕಲ್ಪವಿದೆ. ಆದುದರಿಂದ ಇನ್ನು ವಚನಕಾರರು ಸಾಧನಕ್ಕೆ ಅವಶ್ಯವೆಂದು ಹೇಳಿರುವ ಗುರುಕಾರುಣ್ಯ, ದೀಕ್ಷೆ, ಚಿತ್ತಶುದ್ಧಿ ಮುಂತಾದ ಹೇಳದೇ ಉಳಿದ ವಿಷಯಗಳನ್ನು ಹೇಳಿ ಈ ಪ್ರಕರಣವನ್ನು ಮುಗಿಸಬೇಕೆಂದಿದ್ದೇವೆ. ಗುರು ಅಂದರೆ ಶಿಷ್ಯನಿಗೆ ಆತ್ಮಜ್ಞಾನವನ್ನು ಮಾಡಿಕೊಡುವ ಅನುಭಾವಿಯು. ಅವನು ಸ್ವತಃ ಸಾಕ್ಷಾತ್ಕಾರಿಯಿದ್ದು ಅನ್ಯರಿಗೆ ಆತ್ಮಜ್ಞಾನವನ್ನು ಕೊಡುವಷ್ಟು ಸಾಮರ್ಥ್ಯವು ಅವನಲ್ಲಿರಬೇಕು. ಅಂದರೆಯೆ ಅವನು ನಿಜವಾದ ಗುರುವೆನಿಸುವನು. ಗುರುವು ಅವಶ್ಯನೆಂದು ಹಲವರು, ಅನವಶ್ಯಕನೆಂದು ಅನ್ಯರು, ಅನ್ನುವದುಂಟು. ಈ ವಾದವಲ್ಲಿ ಇಲ್ಲಿ ವಿಶೇಷ ಸೇರುವದು ಸಾಧ್ಯವಿಲ್ಲ. ಹೀಗಿದ್ದರೂ ಗುರು ಮಹಾತ್ಮ್ಯವು ಹೆಚ್ಚಿನದು. ಗುರುಕಾರುಣ್ಯದಿಂದಲ್ಲದೆ ಮುಕ್ತಿಯಾಗದು. (ಶೂ. ೧೦), ಗುರುಪಾದವ ಹಿಡಿವಲ್ಲಿ ಕಾಣದುದ ಕಾಣಬಹುದು (ಶೂ.೧೧),

ಎನ್ನುವಷ್ಟು ಅದು ಮಹತ್ವದ್ದಿರುವದು. ' ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟಿತ್ತು, ಮಾಯಾ ಪ್ರಪಂಚ ಬಿಟ್ಟಿತ್ತು, ಹುಟ್ಟರತು ಹೋಯಿತ್ತು, ನೆಟ್ಟಗೆ ಗುರುಪಾದವ ಮುಟ್ಟಿ ಭವಗೆಟ್ಟೆನು ಕಾಣಾ, ರಾಮನಾಥಾ ' (ದೇ. ೧೮) ಎಂದು ದೇವರದಾಸಿಮಯ್ಯನು ನೇರವಾಗಿ ಹೇಳಿರುವನು. ಅನುಭೂತಿಯು ಅಥವಾ ಸಾಕ್ಷಾತ್ಕಾರವು ಎಲ್ಲಕ್ಕು ಹೆಚ್ಚಿನ ಪ್ರಮಾಣವೆಂಬುದು ನಿರಪವಾದವು. ಆದರೆ ಅದಕ್ಕೆ ತರುವಾಯ, ಜೀವಂತ ಸಾಕ್ಷಾತ್ಕಾರೀ ಸದ್ಗುರುವಿನ ವಚನವು ಪ್ರಮಾಣವೆಂದು ಹೇಳಬಹುದು. ಇನ್ನು ಗುರುವು ದೊರೆಯಲಿಲ್ಲವೆಂದು ಅವನನ್ನು ಹುಡುಕುವದರಲ್ಲಿಯೆ ವೇಳೆ ಗಳೆಯುವದು, ಅಥವಾ ಅವನು ದೊರೆಯುವನಕ ಸಾಧನವನ್ನು ಬಿಟ್ಟು ಕೂಡುವದು ಎಂದೂ ಜಾಣತನದ್ದಾಗದು. ಸದ್ಗುರುವು ದೊರೆತರೆ ಶಿಷ್ಯನಿಗೆ ಮಹಾಲಾಭವೆ ಆದಂತೆ ಆಗುವದು ಹೊರತು ಯಾವ ಬಗೆಯ ಹಾನಿಯೂ ಆಗದು ಎಂಬುದು ನಿರ್ವಿವಾದವು! ಗುರುವು ದೊರೆಯುವನಕ ಮಾತ್ರ ಸ್ವಸ್ಥ ಕೂಡದೆ ಅಂತರಾತ್ಮನನ್ನೆ ತನ್ನ ಗುರುವನ್ನಾಗಿಟ್ಟುಕೊಂಡು ಸಾಧಕನು ಮುಂದೆ ಸಾಗತಕ್ಕದ್ದು. ಎಷ್ಟೋ ವಚನಕಾರರು ಹೀಗೆ ಮಾಡಿರಬಹುದೆಂದು ಊಹಿಸುವದು ತಪ್ಪಾಗಲಿಕ್ಕಿಲ್ಲ. ಅಂಥ ಉದಾಹರಣೆಗಳಲ್ಲಿ ಅಲ್ಲಮ ಪ್ರಭುವಿನದೆ ಮುಖ್ಯವಾದದ್ದು. ಅನುಮಿಷ ದೇವರು ತನಗೆ ಗುರುವೆಂದು ಅಲ್ಲಮನು ಹೋಗಲಾಗಿ, ' ಅವರು ಸಮಾಧಿಸ್ಥರು, ತಾನಿದಿರೆಂಬುದನರಿಯದವರು, ಇದಿರಿಟ್ಟು ಉಪದೇಶ ಮಾಡುವವರಲ್ಲ, ' ಎಂಬುದನ್ನು ನೋಡಿ, ' ಎನಗೆ ನಾನೇ ಗುರು ಉಪದೇಶವ ಪಡೆಯಬೇಕೆಂದು, ' ಅವನು ನಿಶ್ಚೈಸಿದನೆಂದು (ಶೂ. ೧೨) ಉಲ್ಲೇಖವಿರುವದು. ತನ್ನ ತಾನರಿದಡೆ ತಾನೇ ಗುರು (೫೯), ಎಂಬ ವಚನವಾದರೂ ಇದೇ ಮಾತನ್ನು ಸಮರ್ಥಿಸುವದು. ಸಾಕ್ಷಾತ್ಕಾರಮಾರ್ಗದಲ್ಲಿ ಈ ಪರಿಯು ಅಂಥ ಹೊಸತೂ ಅಲ್ಲ. ಇದೇ ರೀತಿ, ಕನಸಿನಲ್ಲಿ ದೀಕ್ಷೆ ಪಡೆದ ಉದಾಹರಣೆಗಳೂ ಅನೇಕವಿರುವವು. ಬಣಹುಲ್ಲಿನಂತೆ ಶಿಷ್ಯನ ಮನಸು ದೀಕ್ಷೆಗೆ ಸಿದ್ಧವಾದಾಗ ಅದಕ್ಕೆ ಕಿಡಿಯು ಗುರುವಿನಿಂದಲೆ ಬರಬೇಕು, ಎಂದು ಯಾರಾದರೂ ಅಂದರೆ ಮೇಲೆ ಹೇಳಿದಂತೆ ಪ್ರತ್ಯಕ್ಷ ಗುರುಗಳಿಲ್ಲದೆ ಸಿದ್ಧಿಪಡೆದ ಸಾಧಕರ ಉದಾಹರಣೆಗಳಿರುವುದರಿಂದ ಆ ನಿಯಮವು ಅಷ್ಟೊಂದು ಬಿಗಿಯಿಲ್ಲ, ಎಂದು ಹೇಳಬೇಕಾಗುತ್ತದೆ. ಇನ್ನು ಗುರುವಿನ ಯೋಗ್ಯತೆಯು ಬಹಳ ದೊಡ್ಡದು, ಅವನು ಎಂತಹನಿರಬೇಕು, ಏನು ಎಂಬ ಬಗ್ಗೆ ವಚನಕಾರರು ಹಲವೆಡೆಗೆ ಹೇಳಿರುವರು. ಅಯ್ಯಾ ಕ್ರಿಯಾಚಾರದಲ್ಲಿ

ಮೋಹವುಳ್ಳಾತನೆ ಸದ್ಗುರುವೆಂಬೆ (೫೦೪), ಸದಾಚಾರ ಸದ್ಭಕ್ತಿ ಇಲ್ಲದೆ ಗುರುತ್ವವಿರಲಾಗದು (ವ. ೧೭೫), ಸದಾಚಾರ ಸದ್ಭಕ್ತಿವಿಡಿದು ಆಚರಿಸಿದ ಗುರುವೇ ಪರಾತ್ಪರ ಬ್ರಹ್ಮ (ವ. ೧೭೩), ತನುವಿನಾಕೆಯಳಿದಾತನ ಸತ್ಯ ಚಿತ್ಸಾನಂದಗುರುವೆಂಬೆ (ವ. ೯೮), ಎಂಬುದೆ ಅವರ ಹೇಳುವಿಕೆಯ ತಾತ್ಪರ್ಯವು. ಈ ಬಗೆಯಾಗಿ ಸಂಸಾರಪಾಶವಿಲ್ಲದವನು ಅಂದರೆ ನಿರ್ಲಿಪ್ತ ನಿದ್ದು ನಿತ್ಯನೇಮಕ್ಕೆ ತಪ್ಪದಿರುವವನು ಮತ್ತು ಸದಾಚಾರಸದ್ಭಕ್ತಿಯುಕ್ತ ಸಾಕ್ಷಾತ್ಕಾರಿಯು ಗುರುಪದವಿಗೆ ಯೋಗ್ಯನು. ಅಂಥವನಿಂದ ದೀಕ್ಷೆ ಪಡೆದ ಶಿಷ್ಯನು ಧನ್ಯನಾಗಬಲ್ಲನು.

೧೫. ಗುರುವು ಹೇಗಿರಬೇಕು, ಇದನ್ನು ಹೇಳಿದಂತಾಯಿತು. ಇನ್ನು ಶಿಷ್ಯನಾದರೂ ಅಧಿಕಾರಿಯೂ ಆಜ್ಞಾಧಾರಕನೂ ಶ್ರದ್ಧಾವಂತನೂ ಇರಲಿಕ್ಕೆಬೇಕು. ಗುರುವು ಕೊಟ್ಟ ಜ್ಞಾನವನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯವು ಅವನಲ್ಲಿರಬೇಕು. ಇಲ್ಲದಿದ್ದರೆ ಒಳ್ಳೇ ಬೀಜವನ್ನು ಕಗ್ಗ ಭೂಮಿಯಲ್ಲಿ ಊಳಿದಂತೆ ವ್ಯರ್ಥವಾಗುವದು. ಶಿಷ್ಯನಲ್ಲಿ ಬೇಕಾದ ಮುಖ್ಯ ಗುಣವೆಂದರೆ ಉತ್ಕಟ ಮುಮುಕ್ಷುಭಾವವು. ಅದರೊಡನೆ ಶ್ರದ್ಧೆ, ಮತ್ತು ಸ್ವೀಕೃತಕಾರ್ಯದಲ್ಲಿ ನಿಷ್ಠೆ ಇವು ಅತ್ಯವಶ್ಯ. ಚಿತ್ತವು ಶುದ್ಧವಾಗದ ವಿನಾ ಮಾತ್ರ ಸಾಧಕನ ಹೆಜ್ಜೆಯು ಮುಂದೆ ಬೀಳದು. ಬಾಹ್ಯಶುಚಿತ್ವವೂ ಬೇಕು. ಆದರೆ ಬಾಹ್ಯಶುಚಿತ್ವವಷ್ಟೆ ಸಾಲದು ಮತ್ತು ಕೇವಲ ಅದರಿಂದಲೆ ಅಂತಃ ಶುದ್ಧಿಯು ನೆಲೆಗೊಳ್ಳದು. ಮನಶುಚಿಯಾಗುವನಕ ತನು ಬತ್ತಲೆ ಇದ್ದರೇನು, ಭಾವ ಬಯಲಾಗುವನಕ ಮಂಡೆ ಬೋಳಾದರೇನು, ಕರಣಂಗಳ ಸೊಕ್ಕನ್ನು ಸುಟ್ಟುಬಿಡುವನಕ ಭಸ್ಮವ ಹೂಸಿದರೇನು, ಎಂದು ಕೇಳಿ, ಇದು ಬರಿಯ ವೇಷದ ಶುಚಿತ್ವವು, ಎಂದು ವಚನಕಾರರು ಇದಕ್ಕೆ ಛೀಹಾಕಿರುವರು (೫೮೩). ಅಂತರಂಗವು ಶುದ್ಧಬೇಕು; ಯಾರ ಅಂತರಂಗವು ಶುದ್ಧವಿಲ್ಲವೊ ಅವರು ಅತ್ತೀಹಣ್ಣಿನಂತೆ, ಹೊರಗೆ ಹಸನ ಒಳಗೆ ಹುಳುಕ. ಯಾರ ಅಂತರಂಗವು ಶುದ್ಧವೊ ಅವರು ಬಾಳೇಹಣ್ಣಿನಂತೆ ಹೊರಗೆ ಹುರುಬರಕು ಕಂಡರೂ ಒಳಗೆ ಬೆಣ್ಣೆಯಂತೆ ಮೆತ್ತಗೆ ಮತ್ತು ಸಕ್ಕರೆಯಂತೆ ಸವಿ. ಅಂತರಂಗ ಶುದ್ಧವಿಲ್ಲದವರ ಸಂಗವು ಹೊಲ್ಲವು (೫೮೪). ಕೈಮುಟ್ಟಿ ದೇವರನ್ನು ಪೂಜಿಸುವುದಾದರೆ ಕೈ ಶುಚಿಯಿರಬೇಕು, ಮನ ಮುಟ್ಟಿ ಪೂಜಿಸುವುದಾದರೆ ಮನ ಶುದ್ಧವಿರಬೇಕು, ಭಾವಮುಟ್ಟಿ ಅವನನ್ನು ಅರ್ಚಿಸಬೇಕಾದರೆ ಭಾವವು ನಿರ್ಮಲವಿರಬೇಕು. ಅಂದರೆ ದೇವರು ಭಕ್ತನನ್ನು ಪ್ರೀತಿಯಿಂದ ಎತ್ತಿಕೊಳ್ಳುವನು (೫೮೫). ಹೀಗೆ ಶುದ್ಧ

ವಿದ್ದ ಚಿತ್ತದಲ್ಲಿ ದೃಢವಾದ ಶ್ರದ್ಧೆ ಇರಬಲ್ಲದು. ನಂಬು ಕಕೆಡರೆ ಮಾತ್ರ ದೇವರು 'ಓ' ಎನ್ನುವನು. ನಂಬದೆ ನೆಚ್ಚದೆ ಬರಿ ಬಾಹ್ಯವಾಗಿ, ದೇವರೇ, ಎಂದು ದೊಡ್ಡದನಿಯಿಂದ ಮೊರೆ ಇಟ್ಟರೆ ಅವನು ಮೌನದಿಂದಲೆ ಇರುವನು (೫೮೭). ನಾವು ನೆಚ್ಚಿದ್ದು ಮೆಚ್ಚಿದ್ದು ನಿಜವಾಗಿದ್ದರೆ ದೇವರು ನಮ್ಮ ತನುಮನಧನಗಳನ್ನಲ್ಲಾಡಿಸಿ ನೋಡುವನು. ಅದಕ್ಕೆಲ್ಲ ಅಂಜದೆ ಅಳುಕದೆ ನಾವು ಗಟ್ಟಿಯಾಗಿ ನಿಂತರೆ ಭಕ್ತಲಂಪಟ ದೇವರು ಭಕ್ತಿಕಂಪಿತನಾಗಿ ಒಲಿಯುವನು (೫೮೮). ತತ್ಪದಲ್ಲಿ ಸಾಧಕನ ಶ್ರದ್ಧೆ ಇದ್ದಂತೆ ಕರ್ಮದಲ್ಲಿ, ತನ್ನ ಪ್ರತಾಚಾರದಲ್ಲಿ ಅವನು ನೇಮಸ್ಥನಿರಬೇಕು. ಅವನು ತನ್ನ ಕಾರ್ಯದಲ್ಲಿ ನಿಷ್ಕಾಮಂತನಿರಬೇಕು. ನಿಷ್ಠೆಯುಳ್ಳ ಭಕ್ತನು ನಟ್ಟಡವಿಯಲ್ಲಿದ್ದರೂ ಅದು ಪಟ್ಟಣವೆನಿಸುವದು (೫೮೯). ಹಿಡಿದುದನ್ನು ಎಂದೆಂದಿಗೂ ಬಿಡಲಿಕ್ಕಿಲ್ಲ, ಎಂಬ ಛಲವು ಸಾಧಕನಲ್ಲಿ ಬೇಕು (೫೯೦). ವ್ರತವೆಂಬುದು ನಾಯಕರತ್ನವು, ಅದು ಜೀವದ ಕಳೆಯು. ಅದನ್ನು ತಪ್ಪಿಸುವುದೆಂದರೆ ತನ್ನ ಜೀವವನ್ನು ಕಳಕೊಂಡಷ್ಟು ಅವನಿಗೆ ದುಃಖವಾಗಬೇಕು (೫೯೧). ಅಷ್ಟು ನಿಷ್ಠೆಯಿಂದ ಭಕ್ತನು ತನ್ನ ಆಚಾರಗಳನ್ನು ಪಾಲಿಸಲಿಕ್ಕೆಬೇಕು. ಸದ್ಭಕ್ತಿಗೆಷ್ಟೋ ಅಷ್ಟೇ ಸದಾಚಾರಕ್ಕೆ ಮತ್ತು ಆ ಆಚಾರವನ್ನು ನಿಷ್ಠೆಯಿಂದ ಪಾಲಿಸುವುದಕ್ಕೆ ಮಹತ್ವವಿರುವುದು.

೧೬. ಶುದ್ಧಚಿತ್ತನಾಗಿರುವ ಅಧಿಕಾರೀ ಶಿಷ್ಯನು ತನ್ನ ಪ್ರಗತಿಪಥವನ್ನು ತಡವಿಲ್ಲದೆ ನಡೆಯುವನು. ಹಾಗೆ ಇಲ್ಲದವನ ಬಗ್ಗೆ ವಚನಕಾರರು ತಮ್ಮ ಕನಿಕರವನ್ನೂ ತಿರಸ್ಕಾರವನ್ನೂ ವ್ಯಕ್ತಮಾಡಿದ್ದಾರೆ. ಗುರುವು ದೀಕ್ಷೆಕೊಡಬೇಕಾದರೆ, ನಡೆನುಡಿ ಶುದ್ಧವಾದವರನ್ನಲ್ಲದೆ ಅನುಗ್ರಹಿಸ ಕೂಡದು. ಪರಮಾರ್ಥದ ರುಚಿ ಇಲ್ಲದ ಭವಭಾರಿಗಳ ಮುಖದತ್ತ ದೇವರು ಕಣ್ಣೆತ್ತಿ ನೋಡನು. ಅಳಿಮನದವನಿಗೆ ದೀಕ್ಷೆಕೊಡುವುದೆಂದರೆ ಕುಂಬಳ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟಂತೆ. ಅದರಿಂದ ಕುಂಬಳವು ಕೊಳೆವುದಲ್ಲದೆ ಗಟ್ಟಿಯಾಗಲರಿಯದು. ಮಣ್ಣುಪುತ್ಥಳಿಯನ್ನು ಬಿಟ್ಟುಬಿಡದೆ ನೀರಲ್ಲಿ ತೊಳೆದರೂ ನಿತ್ಯಸಿತ್ಯ ಕೆಸರು ಹೊರಹಬಲ್ಲದು ಹೊರತು ಅದು ಸ್ವಚ್ಛವಾಗಲರಿಯದು (ವ. ೬೯). ಇಂಥ ಅನಧಿಕಾರಿಗಳು ದೀಕ್ಷೆಗೆ ಅಯೋಗ್ಯರು. ಜನ್ನಾಗಿ ತಿಳಿದ ಸದ್ಗುರುವು ಇಂಥವರಿಗೆ ಎಂದೂ ದೀಕ್ಷೆ ಕೊಡನು. ಯಾಕಂದರೆ, ಅದು ವ್ಯರ್ಥವೆಂದು ಅವನು ಬಲ್ಲನು. ಇನ್ನು ಸದಾಚಾರ ಸಂಪನ್ನನೂ ಜಿಜ್ಞಾಸುವೂ ಆದ ಶಿಷ್ಯನು ಬಂದು ಅಡಿಗೆರಗಿ ಜ್ಞಾನವನ್ನು ಕೇಳಲು ಗುರುವು ಅರಳಿದೆಯಿಂದ ಅವನಿಗೆ ತನ್ನ ಗೂಢಜ್ಞಾನವನ್ನು

ಹೇಳಿ ಅವನನ್ನು ಧನ್ಯಗೊಳಿಸುವನು. ನಿಜವಾದ ದೀಕ್ಷೆಪಡೆದ ಶಿಷ್ಯನು ಕೃತಾರ್ಥನು. ಯಾಕಂದರೆ, ಸದ್ಗುರುವು ಸತ್‌ಶಿಷ್ಯನಿಗೆ ಕೊಟ್ಟ ದೀಕ್ಷೆಯು ಎಂದೂ ಹುಸಿಹೋಗದು. ಇಲ್ಲಿ ದೀಕ್ಷೆಯೆಂದರೆ ಕೇವಲ ಲೌಕಿಕವಾಗಿ ಕೊಡಕೊಳ್ಳತಕ್ಕ ದೀಕ್ಷೆಯಲ್ಲ. ಯಾವ ದೀಕ್ಷೆಯ ಮೂಲಕ ಶಿಷ್ಯನು ಸತ್ಪಥದಲ್ಲಿ ದೃಢನಾಗಿ, ಗುರುಕೃಪೆಗೆ ಪಾತ್ರನಾಗಿ, ಪರಮಾತ್ಮದರ್ಶನಕ್ಕೆ ಅರ್ಹನಾಗುವನೊ ಅದೇ ನಿಜವಾದ ದೀಕ್ಷೆಯು. ಯಾವ ಉಪದೇಶದ ಮೂಲಕ ಶಿಷ್ಯನಿಗೆ ಅಂತರ್ಜ್ಯೋತಿಯ ಅರಿವು ಆಗುವುದೊ ಯಾವ ಉಪದೇಶಸಾಮರ್ಥ್ಯದಿಂದ ಅವನು ಭವಬಂಧನದ ಕುಣಿಕೆಯನ್ನು ಕಳಿಯುವನೊ ಅದೇ ನಿಜವಾದ ಉಪದೇಶವು. ಗುರುವು ಶಿಷ್ಯನ ತಲೆಯ ಮೇಲೆ ಹಸ್ತವನ್ನಿಟ್ಟೊಡನೆ ಲೋಹದ ಮೇಲೆ ಪರುಷವಿಟ್ಟಂತಾಗಬೇಕು. ಸದ್ಗುರು ಕಾರುಣ್ಯದಲ್ಲಿ ಅಷ್ಟೊಂದು ಪರಿವರ್ತನಮಾಡುವ ಬಲವಿರಬೇಕು. ಕರ್ಪೂರಜ್ಯೋತಿಯಂತೆ, ಉರಿಯುಂಡ ತೃಣದಂತೆ, ಮಾಡಿತೆನ್ನ ಶ್ರೀಗುರು ವಿನುಪದೇಶ, ಎಂದು ವಚನಕಾರನೊಬ್ಬನು ತನ್ನ ಧನ್ಯತೆಯನ್ನು ವರ್ಣಿಸಿರುವನು (ವ. ೫೩). ಇಂಥ ಗುರೂಪದೇಶವು ಶಿಷ್ಯನನ್ನು ಮುಕ್ತನನ್ನಾಗಿ ಮಾಡದೆ ಬಿಟ್ಟೀತೆ? ಶಿವಪಥವನರಿವಡೆ ಗುರುಪಥವೇ ಮೊದಲು (ಬ. ಪ. ೧೧) ಪರಪದವನೇರುವುದಕ್ಕೆ ಗುರುಗಳು ಹೇಳಿದ ಸದಾಚಾರಸೋಪಾನದಂಥ ಇನ್ನೊಂದು ಸೋಪಾನವಿರುವುದೇ (೪೧೩)? ಗುರುವಚನವನ್ನೆ ಕೇಳಿ ಬದುಕಬೇಕು, ಗುರುವಚನಪರಾಙ್ಮುಖನಿಗೆ ಭವಹಿಂಗದು (೫೯೪), ಎಂದು ವಚನಕಾರರು ಗಟ್ಟಿಯಾಗಿ ಹೇಳಿರುವರು. ಇನ್ನು ಚಿತ್ತಶುದ್ಧಿ, ಶ್ರದ್ಧೆ, ನಿಷ್ಠೆ, ದೀಕ್ಷೆ, ಗುರುಕಾರುಣ್ಯ ಮುಂತಾದವುಗಳನ್ನು ಹೇಳಿದಂತೆ ವಚನಕಾರರು ನಾಮಮಹಾತ್ಮ್ಯವನ್ನೂ ಸತ್ಸಂಗದ ದೊಡ್ಡಸ್ತಿಕೆಯನ್ನೂ ಹೆಚ್ಚಾಗಿ ಬಣ್ಣಿಸಿರುವರು. ತಮಂಧವಂಜುವದು ಜ್ಯೋತಿಗೆ, ಕಾನನ ವಂಜುವದು ದೇಗೆಗೆ, ಹಾಗೆ, ಪಂಚಮಹಾಪಾತಕಗಳಂಜುವವು ದೇವರ ನಾಮಕ್ಕೆ. ದೇವರ ನಾಮವೇ ಮಹಾಮಂತ್ರವು. ದೇವರನ್ನು ಹೆಸರು ಗೊಂಡು ಸತತ ನೆನೆಯುತ್ತಿರುವುದೆ ಮಹಾಜಪವು. ಅದು ಸರ್ವಜನ ವಶ್ಯವು, ಎಲ್ಲರಿಗೂ ಕಾಮಧೇನುವಿನಂತೆ (ಬ. ೧೨). ಸತ್ಸಂಗವೆಂದರೆ ಸತ್ಪುರುಷರ ಸಂಗ, ಸಾಧುಸಜ್ಜನರ ಸಂಗ, ಭಕ್ತರ ಸಂಗ, ಶರಣರ ಸಂಗ, ಸದಾಚಾರಸಂಪನ್ನರ ಸಂಗ. ಸಂಗವಶದಿಂದ ಮಲ್ಲಿಗೆಯ ಪರಿಮಳವು ಮಣ್ಣಿಗೂ ಹತ್ತಬಲ್ಲದು, ಹಾಗೆ ಸತ್ಸಂಗದಿಂದ ಸಾಮಾನ್ಯ ಮನುಷ್ಯನು ಕೂಡ ಸದ್ಗುಣಿಯಾಗುವನು. ಸಂಗದಿಂದಲ್ಲದೆ ಅಗ್ನಿ ಹುಟ್ಟದು, ಸಂಗ

ದಿಂದಲ್ಲದೆ ಬೀಜ ಮೊಳೆದೋರದು, ಸಂಗದಿಂದಲ್ಲದೆ ಸರ್ವಸುಖದೋರದು, ಶರಣರ ಅನುಭಾವಸಂಗದಿಂದೆ ನಾನು ಬದುಕಿದೆನು (೫೯೫), ಎಂದು ವಚನಕಾರರು ಹೇಳಿರುವರು. ತಮಗೆ ಇನ್ನಾವ ಪದವಿಯೂ ಬೇಡ, ಶರಣರ ಸಂಗವೊಂದಿದ್ದರೆ ಸಾಕು (೫೯೬). ದೇವರನರಿವಡೆ ಶರಣರ ಸಂಗವೇ ಮೊದಲು (ಬ. ೧೧), ಎಂದು ಅವರು ಶರಣಸಂಗವನ್ನು ಹೊಗಳಿರುವರು.

೧೩೦. ಮೇಲೆ ಹೇಳಿದಂತೆ ವಚನಕಾರರ ಸಾಧನಪಥದ ಸಾಮಾನ್ಯ ಸ್ವರೂಪವಿರುವದು. ಅದರ ಮುಖ್ಯ ಲಕ್ಷಣಗಳನ್ನೆಲ್ಲ ನಾವು ತಕ್ಕಮಟ್ಟಿಗೆ ಸಂಕ್ಷೇಪದಿಂದ ಹೇಳಿದ್ದೇವೆ. ಈ ಪಥದಲ್ಲಿ ವಚನಕಾರರು ಎಲ್ಲರಿಗೂ ಮುಕ್ತದ್ವಾರವನ್ನಿಟ್ಟಿದ್ದಾರೆ. ಈ ಮಾರ್ಗದಿಂದ ಅಂಥವರೇ ಸಾಗಬೇಕು, ಇಂಥವರೇ ಸಾಗಬೇಕು, ಎಂಬ ಯಾವ ಬಗೆಯ ಜಾತಿ ವಯ ಲಿಂಗ ಮುಂತಾದವುಗಳ ನಿರ್ಬಂಧವೂ ಇಲ್ಲ. **ಗುಣಾಃ ಪೂಜಾಸ್ಥಾನಂ ಗುಣಿಷು ನ ಚ ಲಿಂಗಂ ನ ಚ ವಯಃ (ನ ಜಾತಿಃ)** ಅಂದರೆ ಗುಣಿಗಳಲ್ಲಿ ನಾವು ಗುಣಕರ್ಮಗಳನ್ನೆ ಮುಖ್ಯವಾಗಿ ಅರಸತಕ್ಕದ್ದು ಹೊರತು ಅಲ್ಲಿ ಜಾತಿ ವಯ ಲಿಂಗ ಇವುಗಳನ್ನೆಣಿಸತಕ್ಕದ್ದಲ್ಲ, ಎಂಬ ತತ್ವವು ಅವರಿಗೆ ಪೂರ್ಣ ಮಾನ್ಯವು. ಮೇಲೆ ಮುಡಿಬಿಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು. ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥಾ, ದೇ. ಗೀಳಿ) ಎಂದು ಪರಮಾರ್ಥದಲ್ಲಿ ಲಿಂಗ ಭೇದವನ್ನು ಕೂಡ ಒರಸಿಬಿಡುವ ವಚನಕಾರರು ಜಾತಿಭೇದಗಳನ್ನು ಅದೇ ದಾರಿಗೆ ಹಚ್ಚುವರು. ತಾವು ಶ್ರಮಪಟ್ಟು ಅನುಭವಪಡೆದು ಸ್ವತಃ ನಡೆದು ತೋರಿದ ಹರವಾದ ಹಾದಿಯಲ್ಲಿ ಎಲ್ಲರೂ ನಡೆದು ಧನ್ಯರಾಗಲಿ ಎಂಬುದೆ ಅವರ ಸದಿಚ್ಛೆಯು. ಸಾಧಕನಲ್ಲಿ, ಅವರು ನಡೆದ ಸುಂದರ ಸುಲಭ ಸಮಸ್ಯ ಮಾರ್ಗಕ್ಕೆ ಅವಶ್ಯವಿದ್ದ ಉತ್ಕಟಭಾವವೊಂದಿದ್ದರೆ ಸಾಕು. ಅವನು ಈ ಮಾರ್ಗವನ್ನು ಸ್ವೀಕರಿಸಿ, ತಾನು ಇದ್ದ ಸ್ಥಿತಿಯಲ್ಲಿ, ಇದ್ದ ಸ್ಥಾನದಲ್ಲಿ, ತನ್ನ ಆಶ್ರಮ ಉದ್ಯೋಗ ಮುಂತಾದವುಗಳನ್ನು ಬಿಡದೆ, ಮುಕ್ತಿಪಥವನ್ನು ಹಿಡಿದು ಮೆಲ್ಲಮೆಲ್ಲನೆ ಸಾಗಲಾರಂಭಿಸಬಹುದು. ಅವ ಜಾತಿಯಲ್ಲಿ ಹುಟ್ಟಿದಾತನಾದರೂ ಗುರುಕಾರುಣ್ಯವ ಪಡೆದು ಆಚಾರ ಸಂಪನ್ನ ಸತ್ಕ್ರಿಯಾವಂತನಾದ ಮಹಾತ್ಮನೆ ಮೂರು ಲೋಕಕ್ಕೆ ಅಧಿಕಾರಿಯು (೪೯೦), ಎಂದು ವಚನಕಾರರು ಈ ಮೇಲಿನ ಮಾತನ್ನು ಹೇಳಿರುವರು. ವಚನಕಾರರು ಸ್ಥಾಪಿಸಿದ ಆತ್ಮವಿಕಾಸದ ರಹಸ್ಯೋದ್ಯಾನವು ಅರಮನೆಯ ಹಿತ್ತಲ ತೋಟದಂತೆ ಹಲವರಿಗೆ ಮಾತ್ರ ಸೇವಿಸಲಿಕ್ಕೆ ಬರು

ವಂತೆ ಇರದೆ, ಜಾಪಥದಲ್ಲಿರುವ ನಗರೋಪವನದಂತೆ ಸಕಲರಿಗೂ ತೆರೆ ಎಟ್ಟಿದೆ. ಈ ಆನಂದವನದ ಹೆಬ್ಬಾಗಿಲು ಈ ರೀತಿ ಎಲ್ಲರಿಗೂ ಆಮಂತ್ರಣ ಕೊಡುವಂತೆ ಹಗಲಿರುಳು ತೆರೆದೇ ಇರುವುದರಿಂದ ಜಾತಿಮತ, ಪಥಪಂಗಡ, ವಯ ಲಿಂಗ, ಮುಂತಾವ ಯಾವ ತೊಡರೂ ಇಲ್ಲದೆ ಯಾವ ಕೃತಕ ಉಚ್ಚ ನೀಚ ಭಾವಗಳೂ ಇಲ್ಲದೆ, ಎಲ್ಲ ಜಾತಿಯ ಜನರು, ಸ್ತ್ರೀಪುರುಷರು, ವಿಧ ವಿಧದ ಕಾಯಕಗಳನ್ನು ಮಾಡುವವರು, ಹಿರಿಯರು ಕಿರಿಯರು ಈ ಪಥದಲ್ಲಿ ಪ್ರವೇಶಿಸಿ ತಮ್ಮ ತಮ್ಮ ಪ್ರಗತಿಯನ್ನು ಮಾಡಿಕೊಂಡು ಅನ್ಯರಿಗೆ ಮಾರ್ಗ ದೋರಿ ಹೋಗಿರುವರು.

---

೭. ವಚನಕಾರರ ನೈತಿಕ ಮತ್ತು ಸಾಮಾಜಿಕ ವಿಚಾರಗಳು

(೧೩೦) ನೀತಿಶಾಸ್ತ್ರವೆಂದರೇನು? (೧೩೨) ನೀತಿ ಮತ್ತು ಸಮಾಜ ಸ್ಥಿರತೆ. ನೀತಿಯ ಮಹತ್ವ. (೧೩೩) ಅಹಂಕಾರ ಮತ್ತು ಆಸೆ ಇವು ಅನೀತಿಯ ಬೀಜಗಳು. (೧೩೪–೧೩೮) ಸತ್ಯ, ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ, ಇಂದ್ರಿಯನಿಗ್ರಹ, ತಾಳ್ಮೆ, ಅದಂಭಿತ್ವ, ವಿನಯ, ಮುಂತಾದವು. (೧೩೯) ನಿಜವಾದ ನೈತಿಕ ಆಚಾರ. (೧೪೦) ವಚನಕಾರರ ಸಾಮಾಜಿಕ ವಿಚಾರಗಳು. (೧೪೧) ಜಾತಿ ಕುಲಕ್ಕಿಂತ ಗುಣ ಕರ್ಮಗಳೆ ಮುಖ್ಯ. (೧೪೨) ಸ್ತ್ರೀಯರಿಗೆ ಸಮಾನ ಹಕ್ಕು ಮತ್ತು ಎಲ್ಲರಿಗೂ ದೀಕ್ಷೆ. (೧೪೩–೧೪೪) ವಚನಕಾರರು ಸಮಾಜದೆದುರಿಗೆ ಇಟ್ಟ ಆದರ್ಶ ಮತ್ತು ಆದರ್ಶಪುರುಷರು. (೧೪೫) ಶ್ರೇಷ್ಠ ಧಾರ್ಮಿಕ ಸಮಾಜರಚನೆಯೆ ವಚನಕಾರರ ಉದ್ದೇಶ.

೧೩೦. ಸಾಧಕನು ಪರಮಾತ್ಮನೊಡನೆ ಯಾವ ವೃತ್ತಿಯಿಂದ ಮತ್ತು ಹೇಗೆ ವರ್ತಿಸಿ ತನ್ನ ಆತ್ಮವಿಕಾಸವನ್ನು ಸಾಧಿಸಿಕೊಳ್ಳತಕ್ಕದ್ದು ಈ ವಿಷಯವನ್ನು ಮುಖ್ಯವಾಗಿ ಹೋದ ಪ್ರಕರಣದಲ್ಲಿ ಹೇಳಿರುವೆವು. ಇನ್ನು ಸಾಧಕನು ಇತರರೊಡನೆ ಹೇಗೆ ವರ್ತಿಸಬೇಕು ಇದನ್ನು ನೋಡತಕ್ಕದ್ದಿದೆ. ಸಮಾಜದಲ್ಲಿ ನಮ್ಮ ಬಂಧುಬಳಗದವರೊಡನೆ, ಆಪ್ತ ಇಷ್ಟರೊಡನೆ, ತಂದೆ

ತಾಯಿ ಮಡದಿಮಕ್ಕಳೊಡನೆ, ಅಥವಾ ನಮ್ಮ ಸಂಬಂಧವು ಯಾರಾರೊಡನೆ ಹಾಗೂ ಯಾತಾತರೊಡನೆ ಬರುವುದೊ ಅವರೆಲ್ಲರೊಡನೆ ನಾವು ಯಾವ ರೀತಿಯಿಂದ ನಡೆಯಬೇಕೆಂಬುದನ್ನು ಯಾವ ಶಾಸ್ತ್ರವು ವಿಧಿಸುವುದೊ ಅದಕ್ಕಷ್ಟೆ ಇಲ್ಲಿ ನಾವು ನೀತಿಶಾಸ್ತ್ರ ಎಂದಿರುವೆವು. ಈ ಮರ್ಯಾದಿತ ಅರ್ಥದಿಂದ ಆ ಶಬ್ದವನ್ನು ಇಲ್ಲಿ ಉಪಯೋಗಿಸಿರುವೆವು. ವ್ಯಕ್ತಿಯ ಮತ್ತು ಸಮಾಜದ ಅತ್ಯಂತಿಕ ಕಲ್ಯಾಣವನ್ನು ಲಕ್ಷಿಸಿ ನೀತಿಶಾಸ್ತ್ರವು ನಿಯಮಗಳನ್ನೂ ನಿರ್ಬಂಧಗಳನ್ನೂ ವಿಧಿನಿಷೇಧಗಳನ್ನೂ ನಿರ್ಧರಿಸುವದು. ನೀತಿ ಎಂಬುದು ಹೇಗೆ ವ್ಯಕ್ತಿಗೋ ಹಾಗೆ ಸಮಾಜಕ್ಕೆ ಹಿತಕರವಿರುವುದು. ಯಾವದೇ ವ್ಯಕ್ತಿಗೆ ಅಥವಾ ಸಮಾಜಕ್ಕೆ ನೈತಿಕ ಆಚರಣೆಯೆಂಬುದು ಆಭರಣಪ್ರಾಯವಿರುವದು. ಜೀವನಪಥದಲ್ಲಿ ನಮಗೆ ಯಾವ ನಿರ್ಜೀವ ಜಡ ಪದಾರ್ಥಗಳ ಸಂಬಂಧವು ಬರುವುದೊ ಅವುಗಳ ಸದುಪಯೋಗವನ್ನು ಮಾಡಿಕೊಂಡು ನಾವು ನಮ್ಮ ಐಹಿಕ ಮತ್ತು ಪಾರಮಾರ್ಥಿಕ ಹಿತವನ್ನು ಹೇಗೆ ಮಾಡಿಕೊಳ್ಳಬೇಕು ಎಂಬುದನ್ನು ಸಹ ನಮಗೆ ನೀತಿಯೆ ಹೇಳುವದು. ಅದೇ ಪ್ರಕಾರ, ನಮಗೆ ಯಾವ ಮೂಕ ಪ್ರಾಣಿಗಳ ಸಂಬಂಧವು ಬರುವುದೊ ಅವುಗಳೊಡನೆ ದಯಾಭಾವದಿಂದಲೂ ಅಹಿಂಸಾವೃತ್ತಿಯಿಂದಲೂ ಹೇಗೆ ನಡೆಯಬೇಕು ಹಾಗೂ ಅವುಗಳಿಂದ ನಮ್ಮ ಹಿತವನ್ನು ಹೇಗೆ ಮಾಡಿಕೊಳ್ಳಬೇಕು ಇದನ್ನಾದರೂ ನಮಗೆ ನೀತಿಯೆ ಹೇಳಬಲ್ಲದು. ಮನುಷ್ಯನ ಬಾಹ್ಯ ಮತ್ತು ಆಂತರಿಕ ಹಿತವನ್ನು ಸಾಧಿಸಲು ಯಾವ ಆಚರಣೆಯು ಅವಶ್ಯವೊ ಅದನ್ನು ವಿಧಿಸುವ ಶಾಸ್ತ್ರವೆ ನೀತಿಶಾಸ್ತ್ರವು, ಎಂಬ ವ್ಯಾಖ್ಯೆಯು ನಿಜವಿದ್ದ ಪಕ್ಷದಲ್ಲಿ ಮನುಷ್ಯನ ಎಲ್ಲ ಐಹಿಕ ಸಂಬಂಧಗಳನ್ನು ನಿಯಮಿಸುವದು ಆ ಶಾಸ್ತ್ರದ ಮರ್ಯಾದೆಯಲ್ಲಿ ಬರುವುದು ಉಚಿತವು. ಹೀಗೆ ನೀತಿಶಾಸ್ತ್ರದ ಮರ್ಯಾದೆಯು ತತ್ವದೃಷ್ಟಿಯಿಂದ ಬಹಳ ವಿಶಾಲವಿದ್ದರೂ ವಾಡಿಕೆಯಾಗಿ ಮನುಷ್ಯನು ಮನುಷ್ಯರೊಡನೆ ಹೇಗೆ ಆಚರಿಸಬೇಕು, ಇದನ್ನೆ ಮುಖ್ಯವಾಗಿ ನೀತಿಶಾಸ್ತ್ರವು ವಿಚಾರಿಸುವದು. ವ್ಯಕ್ತಿಯ ಯಾವ ಆಚರಣೆಯ ಇಷ್ಟಾನಿಷ್ಟ ಪರಿಣಾಮವು ಸಮಾಜದ ಮೇಲೆ ಆಗುವುದೊ ಅದನ್ನೆ ಬಹುಶಃ ನೀತಿಕರ ಅಥವಾ ಅನೀತಿಕರವೆಂದು ನೀತಿಶಾಸ್ತ್ರವು ನಿರ್ಧರಿಸುವದು. ವ್ಯಕ್ತಿಯ ವಿಕ್ಕ ಆಚಾರಗಳ ಕಡೆಗೆ ಪ್ರಜಲಿತ ನೀತಿಶಾಸ್ತ್ರವು ಅಷ್ಟೊಂದು ಲಕ್ಷ ಗೊಡುವುದಿಲ್ಲ. ಉದಾ: ಯಾವನೊಬ್ಬನು ಹೆಚ್ಚು ಉಂಡರೆ ಅಥವಾ ಹೆಚ್ಚು ಮಲಗಿದರೆ ಅದು ಅನಾರೋಗ್ಯಕರವೆಂದು ಅನ್ನುವರೇ ಹೊರತು ಅನೀತಿಕರವೆಂದು ಯಾರೂ ಅನ್ನುವದಿಲ್ಲ.

ಯಾಕಂದರೆ, ಅದರಿಂದಾಗುವ ಪರಿಣಾಮಗಳನ್ನು ಎರಡನೇಯವರು ವಿಶೇಷ ಭೋಗಿಸಬೇಕಾಗುವುದಿಲ್ಲ. ಅದೇ, ಶೆರೆ ಕುಡಿಯುವದು ಈ ನಮ್ಮ ದೇಶದಲ್ಲಿ ಅನೀತಿಕರವೆನಿಸುವದು. ಯಾಕಂದರೆ, ಅದರ ಪರಿಣಾಮವು ಕುಡಿಯುವವನ ಮೇಲೆ ಆಗುವುದಲ್ಲದೆ ಅವನ ಸಂಬಂಧಿಕರ ಮೇಲೆಯೂ ವಿಶೇಷವಾಗಿ ಆಗುವದು. ಇರಲಿ. ಸ್ಥೂಲಮಾನದಿಂದ ನೋಡಿದರೆ, ಒಬ್ಬನು ಇನ್ನೊಬ್ಬನೊಡನೆ ಪರಸ್ಪರರ ಹಿತವಾಗುವಂತೆ ನಡೆಯುವುದೆ ನೀತಿ ಸಮ್ಮತವು, ತದ್ವಿರುದ್ಧ ಆಚರಣೆಯು ನೀತಿಬಾಹ್ಯವು. ಈ ಬಗ್ಗೆ ವಚನಕಾರರು ಯಾವ ನಿರ್ಬಂಧಗಳನ್ನು ಹಾಕಿರುವರು ಮತ್ತು ಅವರು ಯಾವ ಬಗೆಯ ಸಮಾಜವನ್ನು ಏರ್ಪಡಿಸಬೇಕೆಂದಿರುವರು ಇದನ್ನು ನೋಡುವುದು ಈ ಪ್ರಕರಣದ ಮುಖ್ಯ ಧ್ಯೇಯವಾಗಿದೆ.

೧೩೨. ಯಾವದೇ ವ್ಯಕ್ತಿಯು ಅಥವಾ ಸಮಾಜವು ಪ್ರಗತಿಹೊಂದಬೇಕಾದರೆ ಶಾಂತಿ, ಸ್ವಾಸ್ಥ್ಯ, ಸ್ಥಿರ ಸ್ಥಾವರತೆ ಇವು ಸಮಾಜದಲ್ಲಿ ಅವಶ್ಯಬೇಕು. ನೀತಿನಿಯಮಗಳ ನಿರ್ಬಂಧವಿಲ್ಲದಿದ್ದರೆ, ಪ್ರಗತಿಗೆ ಅವಶ್ಯವಿದ್ದ ಈ ಶಾಂತಿಯು ನೆಲೆಗೊಳ್ಳದು. ಈ ಬಗೆಯ ನಿರ್ಬಂಧಗಳಿಲ್ಲದಿದ್ದರೆ ಮನುಷ್ಯನಲ್ಲಿಯ ಪಾಶವೀಪ್ರವೃತ್ತಿಗಳು ಪ್ರಬಲವಾಗಿ ಸಮಾಜದಲ್ಲಿ ಅವ್ಯವಸ್ಥೆಯೂ ಅರಾಜಕತೆಯೂ ಹಬ್ಬಿ, ಪ್ರತಿಯೊಬ್ಬನು ತನ್ನ ಸಂರಕ್ಷಣ ಮಾಡಿಕೊಳ್ಳುವುದರಲ್ಲಿಯೆ ತನ್ನ ವೇಳೆಶಕ್ತಿಗಳನ್ನೆಲ್ಲ ಪೆಚ್ಚ ಮಾಡಬೇಕಾಗುವದು. ಸ್ವಾರ್ಥ, ಸ್ವೈರ ಇಂದ್ರಿಯ ಪ್ರವೃತ್ತಿ, ವಿಷಯೇಚ್ಛೆ, ಮತ್ಸರ, ದ್ವೇಷ, ಕ್ರೋಧ ಆಲಸ್ಯ, ಇವುಗಳ ನಿಯಮನವೇ ನೀತಿಯ ತಳಹದಿಯು. ಈ ತರದ ಸಂಯಮನ ಮತ್ತು ದಯೆ, ದಾನ, ಪ್ರೇಮ, ಸತ್ಯ, ಪ್ರಾಮಾಣಿಕತನ, ಮುಂತಾದ ಸದ್ಗುಣಸದಾಚಾರಗಳು ಮಾನವ ಪ್ರಾಣಿಯನ್ನು ಪಶುವರ್ಗದಿಂದ ಬೇರ್ಪಡಿಸಿ ಮನುಷ್ಯವರ್ಗಕ್ಕೆ ಸೇರಿಸುವವು. ಈ ಗುಣಗಳಿ ಹೆಚ್ಚು ಬಲಿತ ಬೆಂದರೆ ಮನುಷ್ಯನು ದೇವಸದೃಶನಾಗಿ ದೇವಕೋಟಿಗೆ ಹೋಗುವನು. ನೀತಿಯು ಎರಡು ಕಾರ್ಯಗಳನ್ನು ಮಾಡುವದು; ವ್ಯಕ್ತಿಯ ದುಷ್ಪ್ರವೃತ್ತಿಗಳನ್ನು ನಿಗ್ರಹಿಸಿ ಸುಪ್ತ ಪ್ರವೃತ್ತಿಗಳನ್ನು ವೃದ್ಧಿಗೊಳಿಸುವದು ಮತ್ತು ಸಮಾಜದಲ್ಲಿ ಶಾಂತಿಪುಷ್ಟಿಗಳು ನೆಲೆಗೊಳ್ಳಲು ಅನುವು ಮಾಡಿಕೊಡುವದು. ನೀತಿಯು ಎರಡು ಮುಖಗಳುಳ್ಳದ್ದು ಎಂದು ಹೇಳಬಹುದು. ನಿಷೇಧಕ ಮತ್ತು ವಿಧಾಯಕ. ಇಂಥಿಂಥ ಕಾರ್ಯಗಳನ್ನು ಮಾಡಕೂಡದು, ಎಂದು ಹೇಳುವ ನೀತಿಯ ವಿಭಾಗವು ನಿಷೇಧಕವು, ಇಂಥಿಂಥ ಕಾರ್ಯಗಳನ್ನು ಮಾಡಬೇಕು, ಎಂದು ಹೇಳುವ ವಿಭಾಗವೆ

ವಿಧಾಯಕವು. ಮೊದಲನೆಯದು ಸಂಯಮಪ್ರಧಾನವಿರುವದು. ಎರಡನೆಯದು ಸತ್ಪ್ರವೃತ್ತಿ ಪೂರ್ಣವಿರುವದು. ಮೊದಲನೆಯದು ಮನುಷ್ಯನಲ್ಲಿಯ ಪಶುವೃತ್ತಿಯನ್ನು ಹಿಂಸಿಸುವದು, ಎರಡನೆಯದು ಅವನಲ್ಲಿಯ ದೇವತ್ವವನ್ನು ಸದ್ಗುಣಸದಾಚಾರಗಳಿಂದ ಹೊರಪಡಿಸಲು ಮತ್ತು ಬೆಳೆಸಲು ಯತ್ನಿಸುವದು. ಜಗತ್ತಿನಲ್ಲಿ ಪ್ರಚಲಿತವಿದ್ದ ಪ್ರತಿಯೊಂದು ಧರ್ಮದಲ್ಲಿಯೂ ನೀತಿ ಎಂಬುದು ಧರ್ಮಾಚಾರದ ಮುಖ್ಯಾಂಗವಾಗಿರುವದು. ನೀತಿರಹಿತ ಧರ್ಮವನ್ನು ಕಲ್ಪಿಸುವುದೇ ಅಸಾಧ್ಯವೆಂದು ಹೇಳಬಹುದು. ಹಲವು ಧರ್ಮಗಳು ನೀತಿಯಲ್ಲಿಯ ಕೆಲವೊಂದು ನಿಯಮಗಳನ್ನು ಹೆಚ್ಚು ಕಡಿಮೆ ಒತ್ತಿ ಹೇಳುತ್ತಿರಬಹುದು. ಹಿಂದು ಧರ್ಮವು ಸತ್ಯವನ್ನು ಹೆಚ್ಚು ಹೊಗಳಿದ್ದರೆ ಜೈನಪಂಥವು ಅಹಿಂಸೆಯನ್ನು ಹೆಚ್ಚು ಎತ್ತಿ ಹಿಡಿದಿರುವದು. ಬೌದ್ಧರು ತೃಷ್ಣಾಜಯವನ್ನು ವಿಶೇಷ ಒತ್ತಿ ಹೇಳಿದ್ದರೆ ಕ್ರಿಶ್ಚನ್ನರು ಪ್ರೇಮವನ್ನು ಸ್ತುತಿಸಿರುವರು. ಆದರೆ ಈ ಎಲ್ಲ ಧರ್ಮಗಳಲ್ಲಿಯೂ ನಿಷೇಧಕ ಹಾಗೂ ವಿಧಾಯಕವಾದ ಅನೇಕ ನೀತಿನಿಯಮಗಳು ಹೇಳಲ್ಪಟ್ಟಿವೆ. ಸತ್ಯ, ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ ಮುಂತಾದವುಗಳು ಸರ್ವ ಧರ್ಮಗಳಿಗೂ ಸಾಮಾನ್ಯವಾಗಿರುವ ನೀತಿನಿಯಮಗಳಿರುವವು. ವಚನಕಾರರು ನೀತಿಯ ಆಚರಣೆಯನ್ನು ಬಹಳ ಬಲಗೊಂಡು ಹೇಳಿರುವರು. ನೀತಿ ಇಲ್ಲದೆ ಯಾವ ಧರ್ಮವೂ ಸಿದ್ಧವಾಗದು ಎಂಬುದನ್ನು ಅವರು ಚನ್ನಾಗಿ ಬಲ್ಲವರಾದುದರಿಂದ ಅದಕ್ಕೆ ತಕ್ಕ ಶ್ರೇಷ್ಠ ಸ್ಥಾನವನ್ನು ಅವರು ತಮ್ಮ ಉಪದೇಶದಲ್ಲಿ ಕೊಟ್ಟಿರುವರು.

೧೩೩. ನೀತಿಯ ವಿಷಯಕ್ಕೆ ವಚನಶಾಸ್ತ್ರದಲ್ಲಿ ಅಸಂಖ್ಯ ವಚನಗಳಿರುವವು. ಈ ಬಗ್ಗೆ ವಚನಾಮೃತದ ೧೬ ಮತ್ತು ೧೭ನೇ ಪ್ರಕರಣಗಳನ್ನು ನೋಡಬೇಕು. ಎಲ್ಲ ಅನೀತಿಗಳ ಬೀಜವು ಅಹಂಕಾರದಲ್ಲಿಯೂ ತತ್ಪ್ರೇರಿತವಾದ ಆಸೆಯಲ್ಲಿಯೂ ಬೆಳೆಯುವದು. ಅಹಂಕಾರ ಆಸೆಗಳು ನಷ್ಟವಾದರೆ ಅನೀತಿಯೂ ನಷ್ಟವಾಗುವದು. 'ನಾನು' ಒಬ್ಬ ಪ್ರತ್ಯೇಕ ಸ್ವತಂತ್ರ ವ್ಯಕ್ತಿಯಿರುವೆನು, ಎಲ್ಲವೂ ನನ್ನ ಸುಖಕ್ಕಾಗಿಯೆ ಇದೆ, ಎಂಬ ಭಾವನೆಯೆ ಅಹಂಕಾರದ ಮೂಲವು. ನಾ ನೀನೆಂಬ ಅಹಂಕಾರವು ತಲೆದೋರಿದಲ್ಲಿ ಅಟಮಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟುವದು, ಆ ಬಿರುಗಾಳಿ ಹುಟ್ಟಿದೊಡನೆ ಜ್ಞಾನಜ್ಯೋತಿಯು ಕೆಡುವದು. ಅದು ಕೆಟ್ಟೊಡನೆ ಬಲ್ಲಬಲ್ಲವರೆಲ್ಲರೂ ತಾಮಸಕ್ಕೊಳಗಾಗಿ ಸೀಮೆತಪ್ಪಿ ಕೆಟ್ಟುಹೋಗುವರು (೩೯೭). ಅಹಂಕಾರ ರಾಕ್ಷಸವು ಇಷ್ಟು ಭಯಾ

ಸಕವೂ ವ್ಯಾಪಕವೂ ಬಲವುಳ್ಳದ್ದೂ ಇರುವದು ಯಾವುದೇ ವಸ್ತುವು ನನಗೆ, ನನ್ನ ಸುಖಕ್ಕಾಗಿಯೆ ಬೇಕು, ಎಂಬುದು ಆಸೆ ಎನಿಸುವದು. ಆಸೆ, ತೃಷ್ಣೆ, ಕಾಮನೆ, ವಾಸನೆ, ಎಂಬವು ಮನುಷ್ಯನಿಗೆ ಹುಚ್ಚು ಹಿಡಿಸಿಬಿಡುವವು. ಅಳಿಯಾಸೆ ಬೇಡೆಲೊ ಮನುಜಾ, ಕಾಡಬೆಳದಿಂಗಳ ಸಿರಿಯು ಸ್ಥಿರವಲ್ಲ (೪೦೦), ತೆರಣಿಯ ಹುಳವು ಸ್ನೇಹದಿಂದ ನೂತು ತನ್ನ ನೂಲಿನಿಂದಲೆ ಸುತ್ತಿಕೊಂಡು ಸಾಯುವಂತೆ ಮನುಷ್ಯನು ತನ್ನ ದುರಾಶೆಗಳ ಪಾಶದಲ್ಲಿ ಸಿಕ್ಕು ಸಾಯುವನು (೪೦೧), ಆಶೆಯುಳ್ಳವನು ಒಬ್ಬರಾಧಿನನಾಗಿ ತನ್ನ ಸ್ವಾತಂತ್ರ್ಯವನ್ನು ಕಳಕೊಳ್ಳುವನು, ಆದೇ ಆಸೆಯ ಕೊನೆಯನ್ನರಿದವನು ಕೈಲಾಸದ ಅಧಿಕಾರಿಯಾಗುವನು (೪೦೨), ಎಂದು ವಚನಕಾರರು ಆಶೆಯಿಂದುಂಟಾಗುವ ನಾಶವನ್ನೂ ನಿರಾಶೆಯಿಂದುಂಟಾಗುವ ಸೌಖ್ಯವನ್ನು ವರ್ಣಿಸಿರುವರು. ಆದುದರಿಂದ ಆಶೆಗಿಂತ ಕಿರಿಯರಿಲ್ಲ, ನಿರಾಶೆಗಿಂತ ಹಿರಿಯರಿಲ್ಲ; ಕಂಗಳ ಮುಂದಣ ಕಾಮವನ್ನು ಕೊಂದು ಮನದ ಮುಂದಣ ಆಸೆಯನ್ನು ತಿಂದು ದೇವರನ್ನು ಅರಿತುಕೊಳ್ಳುವುದೆ ಎಲ್ಲರ ಕರ್ತವ್ಯವಿರುವದು (ವ. ೧೫೫). ಇನ್ನು ಸತ್ಯಾದಿ ನೀತಿನಿಯಮಗಳ ಬಗ್ಗೆ ವಚನಕಾರರ ಅಭಿಪ್ರಾಯಗಳೇನಿರುವವು ಇದನ್ನು ನೋಡುವಾ.

೧೫೪. ವಚನಕಾರರು ಅತ್ಯಂತ ಸತ್ಯಪ್ರಿಯರು. ಸತ್ಯವು ನಿಜವಾಗಿ ಎಲ್ಲ ನೈತಿಕವಿಧಿಗಳ ಶಿರೋಭಾಗದಲ್ಲಿ ಮೆರೆಯಲಿಕ್ಕೆ ಯೋಗ್ಯವಾದಂತಹದು. ಸತ್ಯವೆಂದರೆ ವಿಶ್ವದಲ್ಲಿಯ ವಸ್ತುಗಳ, ವಿಶ್ವದ, ವಿಶ್ವನಿಯಮಗಳ, ವಿಶ್ವಾತೀತ ವಸ್ತುವಿನ ನಿಜಸ್ಥಿತಿಯು. ಸತ್ಯವೆಂದರೆ ಯಾವಾಗಲೂ ಒಂದೇಸವನಾಗಿ ಇರುವಂತಹದು. ಯಾವದೇ ಸಂಗತಿಯನ್ನು ಇದ್ದಕ್ಕಿದ್ದಹಾಗೆ ನಿರ್ಮಂಡನೆಯಿಂದ ಹೇಳುವುದೆ ಸತ್ಯನುಡಿಯು. ಈ ಸತ್ಯಕ್ಕೆ ಅಳಿವೆಂಬುದಿಲ್ಲ. ಕರ್ಮಕ್ಕೂ ಕರ್ಮಫಲಕ್ಕೂ ಯಾವ ರೀತಿ ಬಿಡುಗಡೆ ಇಲ್ಲವೊ ಹಾಗೆ ಸತ್ಯಕ್ಕೂ ಸತ್ಯದಿಂದುಂಟಾಗುವ ಜಯಕ್ಕೂ ಬಿಡುಗಡೆ ಇಲ್ಲ. ಈ ಒಗೆಯ ಸತ್ಯದ ಮಹಿಮೆಯನ್ನೆ, ಸತ್ಯಕ್ಕೆ ಸಾವಿಲ್ಲ ಅಸತ್ಯಕ್ಕೆ ಜಯವಿಲ್ಲ, **ಸತ್ಯಾನ್ನಾಸ್ತಿ ಪರೋಧರ್ಮಃ** – ಸತ್ಯಕ್ಕಿಂತ ಹೆಚ್ಚಿನ ಧರ್ಮವಿಲ್ಲ, **ಸತ್ಯೇನ ಪಂಥಾ ವಿತತೋ ದೇವಯಾನಃ** – ದೇವಯಾನಪಥವು ಅಂದರೆ ಮುಕ್ತಿಪಥವು ಸತ್ಯದಿಂದಲೆ ಕಟ್ಟಲ್ಪಟ್ಟಿದೆ, ಸತ್ಯವಂತರೆ ಆ ಮಾರ್ಗದಿಂದ ಹೋಗಬಲ್ಲರು, ಎಂಬ ಮುಂತಾದ ಶ್ರುತಿವಾಕ್ಯಗಳು ಹೊಗಳುತ್ತಿರುವವು. ಸತ್ಯವ ನುಡಿವುದೆ ದೇವಲೊಕ, ಅಸತ್ಯವ ನುಡಿವುದೆ ಮೃತ್ಯುಲೋಕ (೪೧೭), ಸತ್ಯದಿಂದ ನಡೆವುದು ಶೀಲ, ಸತ್ಯವನ್ನು ನುಡಿವುದು ಶೀಲ (೪೧೮), ದಿಟ

ನುಡಿವುದು ಶೀಲ, ನುಡಿದಂತೆ ನಡೆವುದು ಶೀಲ (೪೧೯), ಎಂದು ಮುಂತಾಗಿ ವಚನಕಾರರು ಸತ್ಯವನ್ನು ಹಾಡಿದ್ದಾರೆ. ಆ ಸತ್ಯವನ್ನು ಸಜ್ಜನಸಂಗದಿಂದಲೂ ಸದಾಚಾರದಿಂದಲೂ ತಿಳಿದುಕೊಳ್ಳತಕ್ಕದ್ದೆಂದು (೪೧೮), ಅವರ ಅಭಿಪ್ರಾಯವು. ಸತ್ಯವು ಬರಿಯ ಬೌದ್ಧಿಕ ವಿಷಯವಲ್ಲ. ಅದು ಆಚರಣೆಯಿಂದ ತಿಳಿಯತಕ್ಕ ವಿಷಯವು, ಎಂಬುದು ಇದರಿಂದ ಸ್ಪಷ್ಟವಾಗುವದು. ಇನ್ನು ಯಾರು ಸತ್ಯವಾದಿಗಳಿಲ್ಲವೊ ಅವರೊಡನೆ ಒಮ್ಮೆಯೂ ಮಾತಾಡಕೂಡದು, ಅವರೊಡನೆ ಒಡತನವೇ ಬೇಡ (೪೨೦), ಎಂದು ವಚನಕಾರರ ಆಂಬೋಣವಿರುವದು. ಅಸತ್ಯವೆಂದರೆ ಆತ್ಮವಂಚನೆಯೆ ಅಥವಾ ಆತ್ಮಘಾತವೆ ಸೈ. ಸತ್ಯದಂತೆ ಅಹಿಂಸಾಧರ್ಮವನ್ನೂ ದಯಾಧರ್ಮವನ್ನೂ ಅವರು ಪ್ರತಿಪಾದಿಸಿರುವರು. ಹಿಂಸೆಯೆಂದರೆ ಕಾಯಾವಾಚಾಮನಸಾ ಅನ್ಯಪ್ರಾಣಿಗಳ ದೇಹಮನಗಳಿಗೆ ಪೀಡೆಕೊಡುವದು. ಅಹಿಂಸೆಯೆಂದರೆ ಹಾಗೆ ಮಾಡದಿರುವುದು. ಸರ್ವಭೂತಗಳಲ್ಲಿಯೂ ಆತ್ಮನು ಹಬ್ಬಿಕೊಂಡು ಇರುವುದರಿಂದ ಯಾವುದೇ ಪ್ರಾಣಿಯನ್ನು ಹಿಂಸಿಸುವುದೆಂದರೆ ಆತ್ಮನನ್ನು ಅಥವಾ ತನ್ನಲ್ಲಿಯ ಅಂತರಾತ್ಮನನ್ನು ಪೀಡಿಸಿದಂತೆಯೇ ಸೈ. ಹಾಗೆ ವರ್ತಿಸದೆ, ತನ್ನಂತೆ ಪರರು, ಎಂಬ ಉಜ್ಜ್ವಲಭಾವನೆಯಿಂದ ನಡೆಕೊಂಡರೆ ಸಮಾಜದಲ್ಲಿ ಎಲ್ಲೆಲ್ಲಿಯೂ ಶಾಂತಿಯು ನೆಲೆಗೊಳ್ಳುವದು. ಅಹಿಂಸೆಯ ಪ್ರತಿಷ್ಠಾಪನೆಯಿಂದ ದ್ವೇಷವೈರಾದಿ ದುಷ್ಪಭಾವಗಳು ನಷ್ಟವಾಗಿ ಎಲ್ಲೆಲ್ಲಿಯೂ ಪ್ರೇಮಭಾವವು ಪಸರಿಸುವದು. ಸಕಲಪ್ರಾಣಿಗಳ ಬಗ್ಗೆ ದಯೆಯಿರಬೇಕು, ದಯೆಯೇ ಎಲ್ಲ ಧರ್ಮಗಳ ಮೂಲವು (೪೨೧) ಎಂದು ಹೇಳಿ, ದಯೆಯಿಲ್ಲದ ಧರ್ಮವಾವುದಯ್ಯಾ, ಎಂದು ವಚನಕಾರರು ಪ್ರಶ್ನೆಯನ್ನು ಕೇಳಿರುವರು. ಶ್ರುತಿಸ್ಮೃತಿಪುರಾಣಗಳೆಲ್ಲ ಕೊಲಬೇಕೆಂದು ಹೇಳುವವೇ, ಅವು ಸರ್ವಭೂತಹಿತವನ್ನು ಸಾರುವುದಿಲ್ಲವೇ, ಎಲ್ಲವನು ಅರಿತಬಳಿಕ ಕಡೆಯಲ್ಲಿ ಕೊಲಬೇಕು ಎಂಬುದೊಂದು ತತ್ವವಿರುವುದೇ, ಪುರಾಣಗಳು ಸರ್ವಜೀವಗಳನ್ನು ಕೊಲ್ಲು ಕೊರೆ ಎಂದು ಉಸುರುವವೇ (೪೨೩)? ಎಂದು ಒಳ್ಳೆ ಮಾರ್ಮಿಕರೀತಿಯಿಂದ ವಚನಕಾರರು ಪ್ರಶ್ನೆ ಮಾಡಿರುವರು. ಯಜ್ಞದಲ್ಲಿ ಮಾಡುವ ಪಶುಹತ್ಯಾದಿಗಳು ಅವರ ದೃಷ್ಟಿಯಿಂದ ಅತ್ಯಂತ ನಿಂದ್ಯವಿರುವವು. ಆದುದರಿಂದ ಅತ್ಯಂತ ತ್ಯಾಜ್ಯವಿರುವವು. ಮಾಂಸಭಕ್ಷಣಾದಿಗಳನ್ನು ವಚನಕಾರರು ಪೂರ್ಣ ನಿಷೇಧಿಸಿರುವರು. ವೇದಗಳಲ್ಲಿ ಪಶುವಧವು ಹೇಳಲ್ಪಟ್ಟಿದೆ, ಎಂದು ಯಾರಾದರೂ ಆಧಾರವನ್ನು ಹೇಳಿದರೆ ವೇದಶಾಸ್ತ್ರಗಳೆಲ್ಲ ಹೋತಿಗೆ ಮಾರಿಯಾದವೇ

ಎಂದು ಅವರು ಜೇಷ್ಟೆ ಮಾಡಿರುವರು! ಯಾವದೇ ದೇವತೆಗೆ ಯಾವದೇ ಪ್ರಾಣಿಬಲಿಯನ್ನು ಕೊಡುವ ಪ್ರಘಾತವನ್ನು ಅವರು ಬಲವಾಗಿ ಖಂಡಿಸಿರುವರು.

೧೩೫. ಸತ್ಯ ಮತ್ತು ಅಹಿಂಸೆ ಇವುಗಳಷ್ಟೆ ಅಲ್ಲದಿದ್ದರೂ ಅಸ್ತೇಯ ಹಾಗೂ ಬ್ರಹ್ಮಚರ್ಯ ಇವೂ ಬಹಳ ಮಹತ್ವದ ನೀತಿನಿಯಮಗಳಿರುವವು. ಅ-ಸ್ತೇಯವೆಂದರೆ ಕಳವುಮಾಡದೆ ಇರುವದು. ಎರಡನೆಯವರ ಒಡವೆಯನ್ನು ಅವರ ಸಮ್ಮತಿ ಇಲ್ಲದೆ, ಅವರಿಗೆ ತಿಳಿಯದೆ, ಇಲ್ಲವೆ ಬಲಾತ್ಕಾರದಿಂದ ತೆಗೆದುಕೊಳ್ಳುವುದೆ ಕಳವು ಎನಿಸುವದು. ಇದಕ್ಕೂ ಸೂಕ್ಷ್ಮವಾಗಿ ನೋಡಿದರೆ, ತಮ್ಮ ಶರೀರಮನಗಳ ಆರೋಗ್ಯಕ್ಕೆ ಯಾವ ಮತ್ತು ಎಷ್ಟು ವಸ್ತುಗಳು ಬೇಕೋ ಅವಕ್ಕೂ ಹೆಚ್ಚು ತಮ್ಮ ಕಡೆಗೆ ಇಟ್ಟುಕೊಳ್ಳುವದು ಸಹ ಕಳವೇ ಸೈ. ತನ್ನ ಸ್ವಂತಕ್ಕಾಗಿ ಅಥವಾ ಮಡದಿಮಕ್ಕಳಿಗಾಗಿ ಯಾವದೇ ಒಡವೆಯ ಹೆಚ್ಚು ಸಂಗ್ರಹಮಾಡುವದು ಕೂಡ ಕಳವೇ ಆಗುವದು. ಯಾಕಂದರೆ, ಆ ಮಟ್ಟಿಗೆ ನಾವು ಪರರ ಒಡವೆಯನ್ನು ಅಂದರೆ ಪರರಿಗೆ ಬೇಕಾಗುವ ಒಡವೆಯನ್ನು ಅಪಹರಿಸಿದಂತಾಗುವದು. ನಾವು ನಮ್ಮ ಶ್ರಮದಿಂದ ಧನವನ್ನು ದೊರಕಿಸಿ, ನಮ್ಮ ಶರೀರಧಾರಣೆ ಮತ್ತು ನಮ್ಮ ಕುಟುಂಬದ ಪಾಲನಪೋಷಣೆಮಾಡಿ, ಉಳಿದುದನ್ನೆಲ್ಲ ಪುನಃ ಸತ್ಪಾತ್ರದಲ್ಲಿ ದಾನಮಾಡಿಬಿಡತಕ್ಕದ್ದು. ಈ ರೀತಿ ಇದ್ದರೆಯೆ ಅಸ್ತೇಯ ವ್ರತವನ್ನು ಪಾಲಿಸಿದಂತೆ ಆಗುವದು. ಅನ್ಯರ ಯಾವದೇ ವಸ್ತು ಬೀದಿಯಲ್ಲಿ ಬಿದ್ದಿದ್ದರೂ ಅದನ್ನು ಆಶಿಸಿ ಎತ್ತಕೂಡದು. ಯಾಕಂದರೆ, ಅದು ಕಳವು ಎನಿಸುವದು. ದೇವರು ಕೊಟ್ಟದ್ದರಲ್ಲಿ, ಕೊಟ್ಟಷ್ಟರಲ್ಲಿ ಸಾಧಕನು ಸಂತುಷ್ಟನಿರಲಿಕ್ಕೆ ಬೇಕು. ಆಳಿಮನವಮಾತಿ ಬಟ್ಟೆಯಲ್ಲಿ ಬಿದ್ದ ಪರದ್ರವ್ಯವನ್ನು ಎತ್ತಿದರೆ ಅವನಿಗೆ ನರಕವೇ ಗತಿಯು (೪೫೫). ಪರಧನವನ್ನು ಬೆಂಕಿಯಂತೆ ಕಂಡು ದೂರ ಹಾಯಬೇಕು. ಬರಿಯ ದೊಡ್ಡ ದೊಡ್ಡ ತೀರ್ಥಗಳಿಗೆ ಹೋಗಿ ಅವುಗಳಲ್ಲಿ ಮಿಂದರೆ ಶುಚಿತ್ವವು ಬರಲರಿಯದು. ಪರಧನವ ತೊರೆದು, ಪರದ್ರವ್ಯವ ಬಿಟ್ಟು, ಸ್ನಾನಮಾಡಿದರೆ ದೇವರು ಪ್ರಸನ್ನನಾಗುವನು (೪೫೪). ವ್ರತಗಳಲ್ಲಿ ಪರಧನವನೊಲ್ಲದಿಪ್ಪುದೆ ದೊಡ್ಡ ವ್ರತವು (೪೫೩). ಇಲ್ಲದುದನ್ನು ಕಡ ತರದೆ, ಪರಧನವನ್ನು ಮುಟ್ಟದೆ ಇರುವುದೆ ದೊಡ್ಡ ಶೀಲವು (೪೫೪). ಈ ರೀತಿ ಪರಧನ ಸ್ವೀಕಾರವನ್ನು ವಚನಕಾರರು ಪರಿಪರಿಯಾಗಿ ಜರಿದಿರುವರು. ಸಾಧಕರು ಭಿಕ್ಷೆಯಿಂದ ಕೂಡ ಧನವನ್ನು ದೊರಕಿಸಕೂಡದು. ದುಡಿದು, ಏನಾದರೊಂದು ಉದ್ಯೋಗಮಾಡಿಯೇ

ಹಣವನ್ನು ಗಳಿಸಬೇಕು, ಎಂದು ವಚನಕಾರರು ಸ್ಪಷ್ಟವಾಗಿ ವಿಧಿಸಿರುವರು. ಅತ್ತ ಬಾಯಿಂದ ದೊಡ್ಡ ಪರಮಾರ್ಥದ ಮಾತು ಹೇಳುತ್ತ ಇತ್ತ ಕೈಯ್ಯಾಂತು ಭಿಕ್ಷೆಬೇಡುವದು ನಾಚಿಕೆಗೀಡು (೪೫೫), ಎಂದು ಅವರು ಭಿಕ್ಷಾವೃತ್ತಿಯನ್ನು ಜನ್ಯಾಗಿ ಹೀಯಾಳಿಸಿರುವರು. ಕಂಡಕಂಡವರಿಗೆ ಕಯ್ಯೊಡ್ಡಿ ಬೇಡುವ ಭಂಡರನು ದೇವರೊಲ್ಲ (ವ. ೪೫೫). ಪ್ರಾಮಾಣಿಕತನದಿಂದ ಮಾಡಿದ ಯಾವದೇ ಕಾಯಕವು ಶ್ಲಾಘ್ಯವು ಮತ್ತು ಅದರಿಂದ ಗಳಿಸಿದ ಧನವೇ ಅಮೃತವು. ಇದೇ ಸಂಗತಿಯನ್ನು, ಸತ್ಯಶುದ್ಧ ಕಾಯಕದಲ್ಲಿ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗಿರಬೇಕು, ನೇಮದ ಕೂಲಿ ಅಂದಿನ ನಿತ್ಯನೇಮದಲ್ಲಿ ಸಂದಿರಬೇಕು, ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ ಸಾಧಕನು ತಾ ಮಾಡುತ್ತಿರುವ ದೇವರ ಸೇವೆಗೆ ಕುಂದುತಂದಂತಾಗುವದು (೪೫೦), ಎಂದು ವಚನಕಾರರು ಹೇಳಿರುವರು. ಅವರು ಹೀಗೆ ಬರಿಯ ಬಾಯಿಮಾತಿನಿಂದ ಉಪದೇಶಿಸಿ ಸುಮ್ಮನಿರಲಿಲ್ಲ. ಅವರಲ್ಲಿ ಅನೇಕರು, ಸಮಾಜದವರು ಕೀಳೆಂದು ತಿಳಿದುಕೊಂಡ ಉದ್ಯೋಗಗಳನ್ನು ಪ್ರಾಮಾಣಿಕತನದಿಂದಲೂ ಮರ್ಯಾದೆಯಿಂದಲೂ ಮಾಡಿ, ತಮ್ಮ ವ್ರತನೇಮಗಳನ್ನು ನಡೆಯಿಸಿ, ಇಹ ಪರದಲ್ಲಿ ಸುಖಶಾಂತಿಗಳನ್ನು ಪಡೆದರು. ಉದಾ: ಮೋಳಿಗೆಯ ಮಾರಯ್ಯನು ಕಟ್ಟಿಗೆಯ ಹೊರೆಗಳನ್ನು ಮಾರಿ, ನುಲಿಯ ಚಂದಯ್ಯನು ಹಗ್ಗಗಳನ್ನು ಹೊಸೆದು, ಡೋಹರ ಕಕ್ಕಯ್ಯನು ಸಮಗಾರಕೆಲಸವನ್ನು ಮಾಡಿ, ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳುತ್ತಿದ್ದರು. ಬಡತನವೆಂದರೊಂದು ಪಾಪವೆಂದು ಇಲ್ಲವೆ ದೊಡ್ಡ ಆಪತ್ತೆಂದು ಸಾಧಕನು ಎಂದೂ ಭಾವಿಸುವುದಿಲ್ಲ. ಶುದ್ಧ, ಶಾಂತ, ಪರೋಪಕಾರೀ ಜೀವನವೆ ಶ್ರೇಷ್ಠವು ಹೊರತು ಸಿರಿವಂತ ಜೀವನವು ಶ್ರೇಷ್ಠವಲ್ಲ. ಭಕ್ತನು ಧನದಲ್ಲಿ ಬಡವನಿದ್ದರೂ ಮನದಲ್ಲಿ ಬಡವನಲ್ಲ. ಅವನಲ್ಲಿ ಧನವಿಲ್ಲದಿದ್ದರೂ ಧನ್ಯತೆಗೆ ಕೊರತೆಯಿಲ್ಲ. ಶರಣರ ಮನೆ ನೋಡಿದರೆ ಬಡವರು, ಮನ ನೋಡಿದರೆ ಸಂಪನ್ನರು, ಅವರ ಧನ ನೋಡಿದರೆ ಬಡವರು, ಆದರೆ ಘನಮನಸಂಪನ್ನರು (೪೧೦), ಎಂದು ವಚನಕಾರರು ಶರಣಜನರ ಮನಸಿನ ಔದಾರ್ಯವನ್ನು ವರ್ಣಿಸಿದ್ದಾರೆ. ತನ್ನಲ್ಲಿದ್ದ ಅಲ್ಪಸ್ವಲ್ಪ ಧನದಿಂದ ಕೂಡ ದಾನಾದಿ ಸತ್ಕರ್ಮಗಳನ್ನು ಸಾಧಕನು ಮಾಡಿಯೆ ತೀರುವನು. ಇದೇ ಅಸ್ತೇಯವ್ರತವು.

೧೩೬. ಇನ್ನು ಮೂಲದಲ್ಲಿ, ಬ್ರಹ್ಮನನ್ನು ಪಡೆಯಬೇಕೆಂದು ವ್ರತಸ್ಥವಿರುವುದಕ್ಕೆ ಬ್ರಹ್ಮಚರ್ಯವೆನ್ನುತ್ತಿದ್ದರು. ಆ ಅರ್ಥವು ಈಗ

ರೂಢವಿದ್ದ ಅರ್ಥಕ್ಕಿಂತ ಬಹಳ ವ್ಯಾಪಕವಿತ್ತು. ಈಗ ಸಾಮಾನ್ಯವಾಗಿ ಬ್ರಹ್ಮಚರ್ಯವೆಂದರೆ ಕಾಯಾವಾಚಾಮನಸಾ ಸ್ತ್ರೀಸಂಬಂಧವಿಲ್ಲದಿರುವುದು ಎಂದು ಅರ್ಥವು ಆಗುವದು. ಈ ಅರ್ಥವಲ್ಲದೆ, ಧರ್ಮಕ್ಕೆ ವಿರುದ್ಧವಾಗಿ ಸ್ತ್ರೀಸಂಬಂಧವನ್ನು ಮಾಡದಿರುವುದು, ಎಂದೂ ಈ ಶಬ್ದದ ಅರ್ಥವಾಗುವದು. ಶಾಸ್ತ್ರೋಕ್ತವಾದ ಪ್ರಸಂಗಗಳಲ್ಲಿ ಮಾತ್ರ ತನ್ನ ಧರ್ಮಪತ್ನಿಯೊಡನೆಯಷ್ಟೇ ಸಂಬಂಧವನ್ನಿಡುವವನು ಬ್ರಹ್ಮಚರ್ಯದಿಂದ ಇದ್ದಂತೆಯೆ ಎಂದು ಸ್ಮೃತಿಗ್ರಂಥಗಳು ಹೇಳಿರುವವು. ವಚನಕಾರರು ಇದೇ ಅರ್ಥವನ್ನಿಟ್ಟುಕೊಂಡು ಬ್ರಹ್ಮಚರ್ಯ ಈ ಶಬ್ದವನ್ನು ಉಪಯೋಗಿಸಿರುವರು, ಎಂಬುದು ಸ್ಪಷ್ಟವಿದೆ. ಯಾಕಂದರೆ, ಅವರು ಸ್ವಾಭಾವಿಕ ಇಂದ್ರಿಯಪ್ರವೃತ್ತಿಗಳ ಸಂಯಮವನ್ನು ಉಪದೇಶಿಸುವರು ಹೊರತು ಅವರು ಅವುಗಳನ್ನು ಪೂರ್ಣ ಕೊಂದುಬಿಡಬೇಕೆನ್ನುವದಿಲ್ಲ; ಮತ್ತು ಬ್ರಹ್ಮಚರ್ಯದ ಬಗ್ಗೆ ಹೇಳುವಾಗ ಅವರು 'ಪರಸ್ತ್ರೀ' ಎಂಬ ಶಬ್ದವನ್ನು ಉಪಯೋಗಿಸುವುದರಿಂದ ಸ್ವಸ್ತ್ರೀಯೊಡನೆ ಧರ್ಮಪತಿಯು ಇಡತಕ್ಕ ಯೋಗ್ಯ ಮತ್ತು ನಿಯಮಿತ ಸಂಬಂಧವನ್ನು ಅವರು ಅಲ್ಲಗಳೆಯುವದಿಲ್ಲವೆಂಬುದು ಒಡೆದು ಕಾಣುವದು. ಅಂಗೀಕರಿಸಿದ ಹೆಣ್ಣು ಬಿಟ್ಟರೆ ಘೋರನರಕ ಬಿಡದು (೪೬೦), ಎಂದು ಅವರ ಅಂಬೋಣವು. ಪರಮಾತ್ಮದರ್ಶನವಾಗಬೇಕಾದರೆ ಮನುಷ್ಯನು ನಿಃಕಾಮಿಯಾಗಲಿಕ್ಕೆ ಬೇಕು. ಆ ಬಗೆಯ ನಿಃಕಾಮಿತ್ವವು ಸಾಧಿಸಬೇಕಾದರೆ ಇಂದ್ರಿಯ ಸಂಯಮದ ಮುಖಾಂತರ ಅಳವಡಿಸಿದ ಇಂದ್ರಿಯ ಜಯವು ಅವಶ್ಯವು. ವಿಷಯಗಳನ್ನು ನೋಡಿದೊಡನೆ ಅವುಗಳನ್ನು ಭೋಗಿಸಬೇಕೆಂದು ಇಂದ್ರಿಯ ಮನಗಳಲ್ಲಿ ಉಂಟಾಗುವ ಚಾಂಚಲ್ಯವು ನಿಂತು ಚಿತ್ತವು ಸ್ಥಿರವಾಗುವವರೆಗೆ ಪೂರ್ಣ ಇಂದ್ರಿಯ ಜಯವು ಸಿದ್ಧವಾಯಿತು, ಎಂದು ಹೇಳಲಿಕ್ಕಾಗದು. ಬ್ರಹ್ಮಚರ್ಯವ್ರತವನ್ನು ಹೇಳುವಾಗ ವಚನಕಾರರು, ಶ್ರೋತ್ರ, ತ್ವಕ್ಕು, ನಾಸಿಕ, ನೇತ್ರ, ಜಿಹ್ವೆ ಈ ಪಂಚೇಂದ್ರಿಯಗಳಲ್ಲಿಯೂ ಶರಣನು ಬ್ರಹ್ಮಚಾರಿಯಾಗಿರಬೇಕು (೪೬೪) ಎಂದಿರುವರು. ಸ್ತ್ರೀ ಎಂಬ ವಿಷಯವು ವಿಶೇಷತಃ ಪರಸ್ತ್ರೀ ಎಂಬ ವಸ್ತುವು ಅತ್ಯಂತ ಮೋಹಕವೂ ಮನಸನ್ನು ಸೆಳೆದುಕೊಳ್ಳುವಂತಹದೂ ಇರುವುದರಿಂದ ಅದರಿಂದ ಅದಷ್ಟು ದೂರವಿರಬೇಕು, ಎಂದು ಅವರು ಎಚ್ಚರಕೊಟ್ಟಿರುವರು. ಸ್ತ್ರೀಯರನು ಕಂಡು ಕಂಗೆಡದಿರು ಮನವೇ, ಉಚ್ಚಂಖಿಲವೃತ್ತಿಯಿಂದ ನಡೆದರೆ ನಾಯಕನರಕವು ತಪ್ಪಿದ್ದಲ್ಲ (೪೬೭), ಎಂದು ಮನಸಿಗೆ ಅವರು ಭಯವನ್ನು ತೋರಿಸಿದ್ದಾರೆ. ನಾವು ಹರಿವ

ಹಾವಿಗೆ ಅಂಜುವವರಲ್ಲ, ಉರಿಯ ನಾಲಿಗೆಗೆ ಅಂಜುವವರಲ್ಲ, ಖಡ್ಗದ ಬಾಯಿಧಾರೆಗೆ ಅಂಜುವವರಲ್ಲ, ಪರಸ್ತ್ರೀಯೆಂಬ ಜೂಜಿಗೆ ಮಾತ್ರ ಅಂಜುವೆವು (೪೬೧), ಎಂದು ಆ ವಿಷಯದ ಭಯಾನಕತ್ವವನ್ನು ವರ್ಣಿಸಿದ್ದಾರೆ. ಪರನಾರಿಯನ್ನು ನೆರೆಯಹೋದವರೆಲ್ಲ ನರಕಭಾಜನರಾದರು, ಎಂದು ರಾವಣಾದಿಗಳ ದೃಷ್ಟಾಂತಗಳನ್ನು ಅವರು ಅಲ್ಲಲ್ಲಿ ಕೊಟ್ಟಿರುವರು. ಹೀಗಿರುವಾಗ ಈ ಪ್ರಬಲವಾದ ಪ್ರವೃತ್ತಿಯನ್ನು ಗೆಲ್ಲುವ ಬಗೆ ಹೇಗೆ? ಪೂರ್ಣ ಇಂದ್ರಿಯ ಜಯವು ಆಗದೆಹೋದರೆ, ಪೂರ್ಣ ಬ್ರಹ್ಮಚರ್ಯವನ್ನು ಪಾಲಿಸುವುದು ಆಗದಿದ್ದರೆ, ಸ್ವಸ್ತ್ರೀಯಲ್ಲಿ ನಿಯತವಾಗಿ ಆ ಪ್ರವೃತ್ತಿಗೆ ಅನುವುಗೊಟ್ಟು ಅದನ್ನು ಮೆಲ್ಲಮೆಲ್ಲನೆ ಗೆಲ್ಲುತ್ತ ಸಡೆಯಬೇಕು. ನಾರಿಯೆಂದರೊಂದು ಭೋಗ್ಯವಿಷಯ, ಎಂಬ ಸಾಮಾನ್ಯ ಕಲ್ಪನೆಯನ್ನು ಕಿತ್ತಿಹಾಕಿ, ನಾರಿ ಎಂದರೆ ಜಗನ್ಮಾತೆ, ನಾರಿ ಎಂದರೆ ಪ್ರತ್ಯಕ್ಷ ದೇವತೆ (೪೬೩), ನಾರಿ ಎಂದರೆ ಮಹಾದೇವಿ, ಎಂಬ ಭಾವನೆಯನ್ನು ದೃಢಮಾಡುತ್ತ ಹೋಗಬೇಕು (೪೬೬), ಅಂದರೆ ಸಮ್ಮಲ್ಲಿಯ ಪಶುವೃತ್ತಿಗಳು ತಮ್ಮಷ್ಟಕ್ಕೆ ತಾವೇ ಕಳಚಿಬೀಳುವವು. ಈ ರೀತಿಯಾಗಿ ಬ್ರಹ್ಮಚರ್ಯವ್ರತವನ್ನು ಆಚರಿಸುತ್ತಹೋದರೆ ಸಾಧಕನ ಮಾರ್ಗವು ಹೆಚ್ಚೆಚ್ಚು ಸುಗಮವಾಗುತ್ತಹೋಗುವದು.

೧೩೭. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಮತ್ತು ಇಂದ್ರಿಯನಿಗ್ರಹ ಇವೈದು ಮುಖ್ಯ ಸಾಮಾನ್ಯನಿಯಮಗಳೆಂದು ಅನ್ನಬಹುದು. ಅವುಗಳಲ್ಲಿ ನಾಲ್ಕರ ಬಗ್ಗೆ ವಚನಕಾರರ ಮತಗಳೇನಿರುವವು ಇದನ್ನು ಮೇಲೆ ಹೇಳಿರುವೆವು. ಇನ್ನು ಇಂದ್ರಿಯನಿಗ್ರಹ ಮತ್ತು ಮನೋನಿಗ್ರಹ ಅಥವಾ ಮನೋಜಯವೆಂದರೇನು ಹಾಗೂ ಅವುಗಳನ್ನು ಕುರಿತು ವಚನಕಾರರು ಏನನು ಹೇಳಿರುವರು ಇದನ್ನು ನೋಡುವ. ಇಂದ್ರಿಯನಿಗ್ರಹವೆಂದರೆ ಇಂದ್ರಿಯಗಳ ಸ್ವಾಭಾವಿಕ ಪ್ರವೃತ್ತಿಗಳನ್ನು ಸಂಯಮಿಸುವದು ಅಥವಾ ನಿಯಮಿಸುವದು. ಇಂದ್ರಿಯ ಮತ್ತು ತದ್ವಿಷಯ ಇವುಗಳಲ್ಲಿ ಸ್ವಾಭಾವಿಕ ಹಾಗೂ ದುರ್ದಮನೀಯವಾದ ಆಕರ್ಷಣಶಕ್ತಿಯಿರುವದು. ಎಲ್ಲ ಪ್ರಾಣಿಗಳಲ್ಲಿರುವ ಹುಟ್ಟಬುದ್ಧಿಯೆ ಆಯಾ ಪ್ರವೃತ್ತಿಗಳನ್ನು ನಿಯಮಿಸುವದಾದ್ದರಿಂದ ಆ ಪ್ರಾಣಿಗಳಿಗೆ ನೀತಿ ಅಥವಾ ಸಂಯಮನ ಪ್ರಯತ್ನ ಇವುಗಳ ಅವಶ್ಯಕತೆಯೆ ಇಲ್ಲವೆನ್ನಬಹುದು. ಮನುಷ್ಯನು ಹೆಚ್ಚು ಸ್ವತಂತ್ರಬುದ್ಧಿಯುಳ್ಳವನಿದ್ದುದರಿಂದ ಮತ್ತು ಅವನ ಜೀವನವು ಹೆಚ್ಚು ಕೃತ್ರಿಮವಿರುವುದರಿಂದ ಅವನು ಪ್ರಯತ್ನಪೂರ್ವಕವಾಗಿ ಇಂದ್ರಿಯಸಂಯಮವನ್ನು ಮಾಡಬೇಕಾಗುವದು. ಈ ಬಗೆಯ ಸಂಯಮನದಿಂದಲೆ

ಅವನ ಮನಸು ಹೆಚ್ಚು ಬಲವುಳ್ಳದ್ದಾಗಿ ಅವನ ಪ್ರಗತಿಯಾಗುವದು. ಉದಾ: ಅನ್ಯ ಪ್ರಾಣಿಗಳ ಅನ್ನಪಾನಾದಿಗಳು ನಿಸರ್ಗದಿಂದಲೆ ನಿಶ್ಚಿತವಾಗಿರುವುದರಿಂದ ಅವುಗಳಲ್ಲಿ ಏನೂ ಹೆಚ್ಚುಕಡಿಮೆಯನ್ನು ಮಾಡುವ ಸ್ವಾತಂತ್ರ್ಯವು ಅವುಗಳಿಗಿಲ್ಲ. ಮನುಷ್ಯನ ಮಾತು ಹಾಗಿಲ್ಲ. ಅವನು ಅನೇಕಾನೇಕ ಪದಾರ್ಥಗಳನ್ನು ತಿನ್ನಬಲ್ಲನು, ಬೇರೆಬೇರೆ ಪದಾರ್ಥಗಳನ್ನು ಕೂಡಿಸಿ ಹೊಸ ರುಚಿಗಳನ್ನು ಹುಟ್ಟಿಸಬಲ್ಲನು. ಬಗೆಬಗೆಯು ಅಡಿಗೆಮಾಡಿ ಉಣಬಲ್ಲನು. ಆದುದರಿಂದ ಜಿಹ್ವೇಂದ್ರಿಯವನ್ನು ಸಂಯಮಿಸುವ ಪ್ರಶ್ನೆಯು ಉಂಟಾಗುವದು. ಇದೇ ಮಾತು ಅವನ ಅನ್ಯ ಇಂದ್ರಿಯಗಳನ್ನು ಅನ್ವಯಿಸುವದು. ಮನುಷ್ಯನು ತನ್ನ ಇಂದ್ರಿಯಗಳ ಹಸಿವೆಯನ್ನೆ ಹಿಂಗಿಸುವದರಲ್ಲಿ ತೊಡಗಿದರೆ ಎಷ್ಟು ಜನ್ಮಗಳಾದರೂ ಅವನಿಗೆ ಸಾಲದೆಹೋಗುವವು ಮತ್ತು ಅವನ ಚಿತ್ತವೆಲ್ಲ ಆ ಕೆಲಸದಲ್ಲಿಯೆ ಅಂಟಿಕೊಳ್ಳುವದು. ಹಾಗೆ ಇಂದ್ರಿಯ ವಿಷಯಗಳಲ್ಲಿ ಸಿಕ್ಕಿಕೊಳ್ಳಗೊಡದೆ, ಅದನ್ನು ತತ್ವವಿಚಾರದಲ್ಲಿ ತೊಡಗಿಸಿ, ಹೆಚ್ಚಿನ ಆತ್ಮಿಕ ಆನಂದವನ್ನು ಪಡೆಯುವುದೆ ಇಂದ್ರಿಯನಿಗ್ರಹದ ಉದ್ದೇಶವು. ಇಂದ್ರಿಯೇಚ್ಛೆಯು ಅದರ ಉಪಭೋಗದಿಂದ ಎಂದೂ ಶಮನವಾಗದು. ಮನುಷ್ಯನಿಗೆ ವಿಷಯಗಳಲ್ಲಿದ್ದ ರಸವು ಕೂಡ ಪರತತ್ವವನ್ನು ಅರಿತಾಗಲೆ ಇಲ್ಲದಂತಾಗಬಲ್ಲದು (ಗೀ. ೨,೫೯). ಬೇಕಾದ ವಿಷಯಂಗಳು ದೊರೆಯದ ಹಾಗಾದವೆಂದರೆ, ಅಥವಾ ಅವು ದೊರೆಯಲಿಕ್ಕೆ ಯಾರಾದರೂ ಅಡ್ಡೀಮಾಡಿದರೆ, ಕ್ರೋಧಾದಿಗಳು ಉಕ್ಕಿ ಅವು ಅನರ್ಥಪರಂಪರೆಗೆ ಕಾರಣವಾಗುವವು. ಇಂದ್ರಿಯಸುಖವು ಭಂಗುರವೂ ದುಃಖಪರಿಣಾಮಿಯೂ ದೋಷಮಿಶ್ರಿತವೂ ಇರುವದು. ಆದುದರಿಂದ ಇಂದ್ರಿಯನಿಗ್ರಹವು ಇಷ್ಟವು ಮತ್ತು ಕರ್ತವ್ಯವು. ಇದರ ಮುಂದಿನ ಹೆಜ್ಜೆಯೆಂದರೆ, ಸರ್ವೇಂದ್ರಿಯಗಳಲ್ಲಿ ಸೋಂಕುವ ಪದಾರ್ಥಗಳನ್ನು ಪರಮಾತ್ಮನಿಗೆ ಅರ್ಪಿಸಿ ಬಳಿಕ ಭೋಗಿಸುವದು: ಅಧರ ತಾಗುವ ರುಚಿಯು, ಉದರತಾಗುವ ಸುಖವ ದೇವರಿಗೆ ಅರ್ಪಿಸದಿದ್ದರೆ ಅದು ಪ್ರತ್ಯಕ್ಷ ವಿಷವು (ವ. ೩೬೬), ಎಂದು ವಚನಕಾರರು ಅನರ್ಪಿತದ ಸ್ವೀಕಾರವನ್ನು ಜರೆದಿರುವರು. ಮನುಷ್ಯನು ವಿಷಯಗಳನ್ನು ಬೆನ್ನಟ್ಟಲಾರಂಭಿಸಿದನೆಂದರೆ ಅವನು ದೇವರನ್ನು ಬಿಟ್ಟನೆಂದೇ ತಿಳಿಯಬೇಕು. ಯಾಕಂದರೆ, ದೇವರೆತ್ರ ವಿಷಯದ ಸವಿ ಎತ್ತ? ವಿಷಯದ ಸವಿ ತಲೆಗೇರಿತೆಂದರೆ ಮನುಷ್ಯನು ಹೇಸದೆ ವೇಶಿಯ ಎಂಬಲ ತಿನ್ನುವಷ್ಟು ಅಧೋಗತಿಗೆ ಇಳಿಯುವನು (೪೬೨). ಇಂದ್ರಿಯಗಳ ಬೆನ್ನುಹತ್ತಿ ಹಲವು ಕಡೆ ಹೋಹ ಮನವನ್ನು ಧ್ಯಾನದಲ್ಲಿರಿಸ ಬಲ್ಲಡೆ ಅಲ್ಲಿಯೆ ದೇವರಿರುವನು (೪೪೩). ಇಂದ್ರಿ

ಯೇಚ್ಛೆಗಳಿಂದಲೆ ಹುಟ್ಟುವ ಕಾಮಕ್ರೋಧಾದಿ ಷಡ್ರಿಪುಗಳನ್ನು ಮನುಷ್ಯನು ಗೆಲ್ಲಲಿಕ್ಕೆ ಬೇಕು. ಅಂದರೆ, ಮನುಸು ಶಾಂತವಾಗಬಲ್ಲದು. ಕಾಮ ಕ್ರೋಧ, ಲೋಭ, ಮೋಹ, ಮದ, ಮತ್ಸರ, ರಾಗ, ದ್ವೇಷ, ಇವು ನಮ್ಮಲ್ಲಿ ಇರುವವರೆಗೆ ನಾವು ಮಾತಾಡುವ ಬ್ರಹ್ಮಜ್ಞಾನವು ಬರಿಯ ಬಾಯಿಯ ಉಸಿರೇ ಸೈ. (೪೪೯). ಅವುಗಳನ್ನು ಕಳೆಯುವನಕ ಮತ್ತು ಅನ್ನ ಅರ್ಥಾದಿಗಳಿಂದುಂಟಾಗುವ ಹಾಗೂ ಪರಿಣಾಮದಲ್ಲಿ ಪ್ರತ್ಯಕ್ಷ ಮದ್ಯದಂತಿರುವ ಅಷ್ಟಮದಗಳನ್ನು ಬಿಡುವನಕ ನಾವು ಶೀಲವಂತರೆಂದೆನಿಸಿಕೊಳ್ಳಲು ಅರ್ಹರಾಗಲಾರೆವು ೪೩೬).

೧೩೮. ಇಂದ್ರಿಯನಿಗ್ರಹ, ಮನೋಜಯ ಎಂಬ ಶಬ್ದಗಳು ಚಿಕ್ಕವು ಕಂಡರೂ ಅವುಗಳಲ್ಲಿ ಗೂಢಾರ್ಥವು ತುಂಬಿದೆ. ಇಡೀ ನೀತಿಶಾಸ್ತ್ರದ ರಹಸ್ಯವೆಲ್ಲ ಈ ಎರಡು ಶಬ್ದಗಳಲ್ಲಿದೆ ಎಂದರೂ ಸಲ್ಲುವದು. ಉಚ್ಚತರದ ಆನಂದವನ್ನು ದೊರಕಿಸುವದು ಮತ್ತು ಸಮಾಜವನ್ನು ಶಾಂತ ಹಾಗೂ ಸುಸ್ಥಿತವಾಗಿಡುವುದು ನೀತಿಯ ಉದ್ದೇಶವಾಗಿದೆ ಎಂದು ಮೇಲೆ ಹೇಳಿದೆ. ಪ್ರತಿಯೊಂದು ವ್ಯಕ್ತಿಯು ಇಂದ್ರಿಯನಿಗ್ರಹ ಮತ್ತು ಮನೋಜಯ ಇವುಗಳನ್ನು ಸಾಧಿಸುವ ಯತ್ನವನ್ನು ಮಾಡುತ್ತ ಹೋದರೆ ನೀತಿಯ ಆ ಎರಡೂ ಉದ್ದೇಶಗಳು ಅನಾಯಾಸವಾಗಿ ಸಫಲವಾಗುವವು. ಯಾವನು ತನ್ನ ಇಂದ್ರಿಯಪ್ರವೃತ್ತಿಗಳ ಪ್ರಭುವಿರುವನೊ ಯಾವನು ಸ್ವತಃ ಸಾಕ್ಷಿರೂಪನಾಗಿ ಮನೋವ್ಯಾಪಾರಗಳನ್ನೆಲ್ಲ ತನ್ನ ಇಚ್ಛೆಯಂತೆ ನಿಯಮಿಸಬಲ್ಲನೊ ಅವನಿಗೆ ಅವೆಲ್ಲ ಹುಡುಗರ ಆಟದಂತೆ ಸುಲಭವಿರುವವು. ವಚನಕಾರರು ಈ ಗುಣಗಳನ್ನು ಕುರಿತು ತಮ್ಮ ಅನುಭವಸಿದ್ಧ ಅಭಿಪ್ರಾಯಗಳನ್ನು ಅಲ್ಲಲ್ಲಿ ವ್ಯಕ್ತಗೊಳಿಸಿರುವರು. ತಾಳ್ಮೆ, ಶಾಂತಿ, ಸಹನ ಅಂದರೆ ದುಃಖ ಕಷ್ಟಗಳನ್ನು, ಅಪಮಾನ ಅವಮಾನಗಳನ್ನು ಸಮಾಧಾನದಿಂದ ತಾಳುವಿಕೆ, ಸಹನ ಮಾಡುವಿಕೆ. ಇದೊಂದು ದೊಡ್ಡ ಗುಣವು. ಯಾವನೊಬ್ಬನು ಅವಿಚಾರದಿಂದ ಶಿರದ ಮೇಲೆ ಆಯುಧವನ್ನೆಸೆಯಲಿ ಅಥವಾ ಗಂಧಾಕ್ಷತೆಯನ್ನು ಏರಿಸಲಿ, ಎರಡೂ ಸಮಾನವೆಂದೇ ತಿಳಿದು ತನ್ನ ಕರ್ತವ್ಯದಲ್ಲಿ ರತನಿರುವುದು ಉತ್ತಮ ಮಾರ್ಗವು (೪೦೭). ನಮ್ಮ ತಪ್ಪುಗಳೆಲ್ಲವನ್ನು ಯಾರಾದರೂ ನಮ್ಮ ಕಣ್ಣಿದುರಿಗೆ ಕಟ್ಟಿದರೆ ಅದಕ್ಕೆ ಎಂದೆಂದಿಗೂ ಮುನಿಯಬಾರದು. ಅದನ್ನೆಲ್ಲ ಸಹಿಸಿ ನಮ್ಮ ತಪ್ಪುಗಳನ್ನು ನಾವು ಸುಧಾರಿಸಿಕೊಳ್ಳಬೇಕು. ಎರಡನೆಯವರು ನಮ್ಮ ಮೇಲೆ ಸಿಟ್ಟಾದರೂ ನಾವು ಅವರ ಮೇಲೆ ಸಿಟ್ಟಾಗ

ಕೂಡದು. ಯಾಕಂದರೆ, ತನುವಿನ ಕೋಪವು ತನ್ನ ಹಿರಿಯತನದ ಕೇಡು, ಮನದ ಕೋಪವು ತನ್ನ ಅರುವಿನ ಕೇಡು. ಮನೆಯೊಳಗಿನ ಕಿಚ್ಚು ಮನೆಯನ್ನು ಸುಟ್ಟೀ ಮುಂದೆ ನೆರೆಮನೆಗೆ ಹೋಗುವಂತೆ ಕೋಪಿಯನ್ನು ಮೊದಲು ಕೆಡಿಸಿಯೆ ಆ ಕೋಪವು ಮುಂದೆ ಅನ್ಯರನ್ನು ಕೆಡಿಸಲಿಕ್ಕೆ ಕೈ ಹಾಕುವದು (೪೦೪). ಮೇಲಾಗಿ, ಸಂಸಾರದಲ್ಲಿದ್ದು ನಾವು ಸೈರಿಸದೆ ಇರುವದು ತಪ್ಪು. ಅದು ಬೆಟ್ಟದ ಮೇಲೆ ಮನೆಮಾಡಿ ಮೃಗಗಳಿಗಂಜಿದಂತೆ, ಇಲ್ಲವೆ ಸಂತೆಯಲ್ಲಿ ಅಂಗಡಿ ಹಾಕಿ ಶಬ್ದಕ್ಕಂಜಿದಂತೆ (೪೦೩). ಯಾಕಂದರೆ, ಜನರು ಯಾರನ್ನೂ ಟೀಕಿಸದೆ, ನಿಂದಿಸದೆ ಬಿಡರು. ಯಾವ ನೊಬ್ಬನು ಹೊನ್ನು ಬಿಟ್ಟರೆ ಅವರು ಅವನಿಗೆ ದರಿದ್ರನೆಂಬರು, ಹೆಣ್ಣು ಬಿಟ್ಟರೆ ನಪುಂಸಕನೆಂಬರು, ಮಾತು ಬಿಟ್ಟರೆ ಮೂಕನೆಂಬರು, ನಿಜನ ನುಡಿದರೆ ನಿಷ್ಠುರನೆಂಬರು. ಹೀಗೆ, ಲೋಕದಿಚ್ಛೆ ಎಂಬುದು ಹಿಂಬಾಲಿಸಲು ಅಸಾಧ್ಯವು (೪೦೩). ಪ್ರಾಮಾಣಿಕತನವೆಂದರೆ ಯಾವ ಕೆಲಸದಲ್ಲಿಯೂ ಮೋಸ ಮಾಡದಿರುವಿಕೆ. ಅದು ಸತ್ಯದ ಒಂದು ಅಂಗವೇ ಇರುವದು. ಇದ್ದು ದನ್ನು ಇದ್ದಕ್ಕಿದ್ದ ಹಾಗೆ ಹೇಳುವವನ ಕೈಯಿಂದ ಮೋಸವೆಂಬುದು ಎಂದೂ ಆಗದು. ಇದ್ದುದನ್ನು ವಂಚನೆಯ ಮಾಡದಿರುವುದು ಒಂದು ದೊಡ್ಡ ಶೀಲವಿರುವದು (೪೦೫). ಅದಂಭಿತ್ವವು ಕೂಡ ಸತ್ಯದ ಒಂದು ಅಂಗವೇ ಸೈ. ಯಾಕಂದರೆ, ಸತ್ಯತನದಿಂದ ಆಚರಿಸುವವನು ದಾಂಭಿಕ ನಿರಲಾರನು. ದಂಭವೆಂದರೆ ಒಳಗೊಂದು ಹೊರಗೊಂದು ಇರುವಿಕೆ, ಮಾಡುವಿಕೆ. ತೋರಿಕೆಗೆ ಮಾಡುವುದು ಬೇರೆ ನಿಜವಾಗಿದ್ದುದು ಬೇರೆ, ಹೀಗೆ ಇದ್ದಲ್ಲಿ ದಂಭವಿರುವದು, ಹೊರತು ನಿಜ ಸಾಧಕನಲ್ಲಿ ದಂಭವಿರಲರಿಯದು (೪೭೫). ಹೊರಗಿನ ವೇಷವು ಹೇಗೆ ಇದ್ದರೂ ನಡೆನುಡಿ ಸಿದ್ಧಾಂತ ವಿರಬೇಕು, ಒಳಹೊರಗೆ ಏಕರೂಪವಿರಬೇಕು, ಅಂದರೆ ಅವನೇ ಸ್ವಯಂ ಜ್ಯೋತಿಯು (೪೭೬). ನಿಜವಾದ ವಿರಕ್ತನು ಬರಿಯ ಬಾಹ್ಯವೇಷಭೂಷಣ ಗಳಿಗೆ ಮಹತ್ವಕೊಡದೆ ಅಂತರಂಗದಲ್ಲಿ ರಾಗದ್ವೇಷರಹಿತನಿರುವನು. ಬಾಹ್ಯತಃ ವಿಷಯಗಳನ್ನು ಬಿಟ್ಟು ಮನಸಿನಲ್ಲಿ ಅವುಗಳನ್ನು ಬಯಸುತ್ತಿದ್ದರೆ ಅದು ವಿರಕ್ತಿ ಎನಿಸಿದೆ ವಿಮಿಥ್ಯಾಚಾರವೆನಿಸುವದು. ಬರಿಯ ತನುಬತ್ತಲೆ ಮಾಡಿ ಸನ್ಯಾಸಿಯೆಂದು ಮೆರೆಯುವದಕ್ಕಿಂತ ಮನಬತ್ತಲೆ ಮಾಡಿ ಸಂಸಾರಿಯಾದರೂ ಲೇಸು (೪೭೪). ಇನ್ನು ಮೆಲ್ನುಡಿಯಲ್ಲಿ ವ್ಯಕ್ತವಾಗುವ ವಿನಯವೆಂಬುದು ಕಾಣಲಿಕ್ಕೆ ದೊಡ್ಡ ಗುಣವೆಂದು ತೋರದಿದ್ದರೂ ಅದು ಮನುಷ್ಯನ ಅಂತರಂಗದ ಉನ್ನತಿಯನ್ನು ಚನ್ನಾಗಿ ಚಿತ್ರಿಸುತ್ತಿದೆ

'ಅಯ್ಯಾ' ಎಂದರೆ ಸ್ವರ್ಗ, 'ಎಲವೋ' ಎಂದರೆ ನರಕ. (೪೭೭), ಎಂದು ಈ ಮಾತನ್ನು ವಚನಕಾರರು ಸಂಕ್ಷೇಪದಿಂದ ಹೇಳಿದ್ದಾರೆ. ಇದೇ ರೀತಿ ಹಿರಿದುಕಿರಿದೆನ್ನದೆ ನೀತಿಯ ಪ್ರತಿಯೊಂದು ನಿಯಮವನ್ನು ಒಂದಿಲ್ಲೊಂದು ಕಡೆಗೆ ಯಾವದೊಂದು ಬಗೆಯಿಂದ ಅವರು ಒಡನುಡಿದಿದ್ದಾರೆ.

೧೫೯. ಮನುಷ್ಯನು ಬಾಹ್ಯತಃ ಎಷ್ಟೇ ಧಾರ್ಮಿಕನಾಗಿ ಕಂಡರೂ ಅವನ ಅಂತರಂಗವು ಶುದ್ಧವೂ ಅವನ ಆಚರಣೆಯು ನೈತಿಕವೂ ಇಲ್ಲದಿದ್ದರೆ ಎಲ್ಲವೂ ವ್ಯರ್ಥವು, ಎಂದು ವಚನಕಾರರು ಅನೇಕ ಕಡೆಗೆ ಹೇಳಿರುವರು. ಪೊಟ್ಟಿಪೊಟ್ಟೆ ಹೂಪತ್ರಿಗಳನ್ನು ತಂದು, ದೇವರ ಮೇಲೆ ಹೇರಿ, ಪೂಜೆ ಮಾಡಿದರೂ ಹುಸಿ-ಕಳವು-ಪರದಾರ ವ್ಯಾಪಾರದಲ್ಲಿ ಹರಿದಾಡುವ ಮರುಳ ಬುದ್ಧಿಯು ದುರಾಚಾರಿಗಳಿಂದ ದೇವರು ದೂರವೆ ಇರುವನು (೪೫೯). ಅಂತರಂಗದ ಅರಿಷಡ್ವರ್ಗಗಳನ್ನು ಗೆಲ್ಲುವನಕ ಬಾಹ್ಯಶೀಲವು ಯಾತಕ್ಕುಬಾರದು. ಆದರಿಂದ ಸಂಸಾರಮಾಯಾಮೋಹವು ನೀಗದು. ಹುಟ್ಟು ಬಿಡಿದರೆ ಹಾವು ಎಂದೂ ಸಾಯದು, ಎಂಬುದು ಎಲ್ಲರ ಅನುಭವದ ಮಾತಾಗಿರುವದು. (೪೭೬). ಸಾಧಕನಿಗೆ ಅವಶ್ಯವಿದ್ದ ನೈತಿಕ ಗುಣಶೀಲಗಳನ್ನು ವಚನಕಾರರು ಎಷ್ಟೋ ಸಾರೆ ಒಂದೇ ಕಡೆಗೆ ಹೇಳಿರುವರು. ಶಮ, ದಮ, ವಿವೇಕ, ವೈರಾಗ್ಯ, ಪರಿಪೂರ್ಣಭಾವ, ಶಾಂತಿ, ಕಾರುಣ್ಯ, ಶ್ರದ್ಧೆ, ಸತ್ಯ, ಸದ್ಭಕ್ತಿ, ಪರಮಾತ್ಮಜ್ಞಾನ ಇವು ಯಾವ ಸದ್ಭಕ್ತನ ಹೃದಯದಲ್ಲಿ ಉದಯವಾಗಿರುವವೊ ಅವನಲ್ಲಿ ದೇವರ ಆವಿರ್ಭಾವವು ಆಗಬಲ್ಲದು. ಅಂಥವರ ಸಂಗಸಹವಾಸಗಳು ಪ್ರತ್ಯಕ್ಷ ಮುಕ್ತಿಯೆ ಇದ್ದಂತೆ (೫೫೭). ಯಾವನು ನೀತಿವಂತನಿರುವನೊ ಅವನು ಜಪತಪಗಳನ್ನೆ ಆಚರಿಸುತ್ತಿರುವನೆಂದು ಹೇಳಬಹುದು. ಅವನು ಬೇರೆ ನೇಮನಿಷ್ಠೆಗಳನ್ನು ಮಾಡುವ ಕಾರಣವಿಲ್ಲ. ಯಾಕಂದರೆ, ಕೊಲ್ಲದಿಪ್ಪುದೆ ಧರ್ಮವು, ಅಧರ್ಮದಿಂದ ಬಂದುದನ್ನು ಸ್ವೀಕರಿಸದಿರುವುದೆ ನೇಮವು, ಆಶೆ ಇಲ್ಲದಿರುವುದೆ ತಪವು, ರೋಷವಿಲ್ಲದಿರುವುದೆ ಜಪವು, ವಂಚನೆ ಇಲ್ಲದಿರುವುದೆ ಭಕ್ತಿಯು (೫೫೮). ಈ ಪ್ರಕಾರ, ಧರ್ಮ ಮತ್ತು ಧರ್ಮಾಂಗಗಳು ನೀತಿಗತವಿರುವವು, ಎಂದು ವಚನಕಾರರು ಹೇಳಿರುವರು. ಅಂತರಂಗ ಬಹಿರಂಗದ ಶುದ್ಧಿಯು ಕೂಡ ನೀತಿನಿಯಮಗಳ ಪರಿಪಾಲನೆಯಲ್ಲಿಯೆ ಇರುವದೆಂಬ ಮಾತನ್ನು, ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯವ ಆಡಲುಬೇಡ, ತನ್ನ ಬಗ್ಗೆ ಬಣ್ಣಿಸಬೇಡ, ಇದಿರು ಹಳಿಯಲುಬೇಡ (೫೬೧), ಎಂದು ಮುಂತಾಗಿ ಅವರು ಸೂತ್ರರೂಪವಾಗಿ ಹೇಳಿರುವರು.

ಪರಧನ, ಪರಾನ್ನ, ಪರಸ್ತ್ರೀ ಇವುಗಳ ಆಸೆಯ ಸುಳುವು ಸಹ ವಿಷಗಾಳಿಯಷ್ಟು ಘಾತಕವಿರುವದು (ಪ. ೧೬೧). ಅವುಗಳಲ್ಲಿ ಮತ್ತೆ ಪರಸ್ತ್ರೀಯರ ಸಂಗವು ಪಂಚಮಹಾಪಾತಕದಷ್ಟು ಘೋರವೆಂದು ಹಡಪದಣ್ಣನು ಹೇಳಿರುವನು. ಅವನೇ, ವಂದನೆಗೆ ನಿಲಬೇಡ, ನಿಂದೆಗಂಜಿ ಓಡಬೇಡ, ಹಿಂದು ಮುಂದು ಆಡಬೇಡ, ಸಂದೇಹಗೊಳಬೇಡ, ದ್ವಂದ್ವಬುದ್ಧಿಯ ಹಿಡಿಯಬೇಡ, ಕಂಡವರ ಕಾಡಬೇಡ, ನರರನ್ನು ಬೇಡಬೇಡ, ಅನೃತವನ್ನು ನುಡಿಯಬೇಡ, ಪರಸ್ತ್ರೀಯನ್ನು ನೆರೆಯುವದಂತೂ ಒತ್ತಟ್ಟಿಗಿರಲಿ ಅವರತ್ತ ನೋಡಬೇಡ, ಮನವನ್ನು ಅತ್ತಿತ್ತ ಹರಿದಾಡಗೊಡಬೇಡ, ಮದವನ್ನು ಮೆಟ್ಟದಿರಬೇಡ, ಸಪ್ತವ್ಯಸನಗಳಿಗೆ ಎಡೆಗೊಡಬೇಡ (ಹ. ೧೬, ೧೭), ಎಂದು ನೀತಿಯ ಉಪದೇಶವನ್ನು ಮಾಡಿದ್ದಾನೆ. ಈ ಬಗೆಯ ನೀತಿಶುದ್ಧನಾದ ಸಾಧಕನು ಪರಮಾರ್ಥಪದವನ್ನು ಹಾಂ, ಹಾಂ, ಎನ್ನುವಷ್ಟರಲ್ಲಿ ನಡೆದು ಹೋಗಬಲ್ಲನು. ಇನ್ನು ಸಾಧಕನು ಸ್ವತಃ ಎಷ್ಟೋ ಎಚ್ಚರದಿಂದ ನಡೆಯುತ್ತಿದ್ದರೂ ಪರಂಪರೆಯಿಂದ ಬಂದ ಕೆಲವು ಅಂಧ ನಂಬಿಗೆಗಳ ಮೂಲಕ ಅವನ ಮನಸು ಪ್ರಸಂಗವಶಾತ್ ದುರ್ಬಲವಾಗುವ ಸಂಭವವು ಬಹಳ. ಉದಾ: ಶಕುನ, ಜ್ಯೋತಿಷ, ಭೂತ, ಪಿಶಾಚ, ಮುಂತಾದವುಗಳಲ್ಲಿರುವ ಸಾಮಾನ್ಯ ವಿಶ್ವಾಸದ ಮೂಲಕ ಮನುಷ್ಯನು ಎಷ್ಟೋ ಸಾರೆ ತಾನು ಕೈಕೊಂಡ ಕೆಲಸವನ್ನು ಬಿಡುವನು ಅಥವಾ ಮುಂದಕ್ಕೆ ಹಾಕುವನು. ಯಾತರಲ್ಲಿಯೂ ಈ ಬಗೆಯ ಅಂಧವಿಶ್ವಾಸವನ್ನಿಡಕೂಡದು, ಎಂದು ವಚನಕಾರರು ಎಲ್ಲರಿಗೂ ಸಾರಿಹೇಳುವರು. ಕಾಗೆ, ವಿಹಂಗ, ಬೆಕ್ಕು ಮುಂತಾದ ಪ್ರಾಣಿಗಳು ಅಡ್ಡಹಾಯ್ದಾಕ್ಷಣಕ್ಕೆ ಅದು ಬಳಿತು ಕೆಡಕೆಂದು ತಿಳಿದರೆ ವ್ರತಕ್ಕೆ ಧಂಗ, ಆಚಾರಕ್ಕೆ ದೂರ (ಳಳಒ). ನಮ್ಮನಮ್ಮ ಮನಸಿನ ಸಂಶಯವೆ ಕನಸಿನ ಭೂತವಾಗಿ ಕಾಡುವದು. ಮನಸಿನ ಸಂಶಯವಳಿದರೆ ಕನಸಿನ ಕಾಟವು ಬಿಟ್ಟೋಡುವದೆಂಬಲ್ಲಿ ಸಂಶಯವಿಲ್ಲ (ಳಳಟ). ದೇವರ ಭಕ್ತರಿಗೆ ಎಲ್ಲ ದಿನಗಳೂ ಯೋಗಗಳೂ ಶುಭವೇ ಇರುವವು (ಳಞಗ). ದೇವ ಭಕ್ತನಿಗೆ ಯಾವದಾದರೂ ಒಂದೇ ದಿನವು ಮತ್ತು ಅದು ಮಂಗಲಕರವು (ಳಞಜ). ಪೂರ್ಣ ಜ್ಞಾನಿಯ ಆಚರಣೆಯನ್ನು ವಿವರಿಸುವಾಗ ಅನೇಕ ನೈತಿಕ ಸದ್ಗುಣಗಳನ್ನು ಸಂಕಲಿತವಾಗಿ ವಚನಕಾರರು ಒತ್ತಟ್ಟಿಗೆ ಹೇಳಿರುವರು. ಅವುಗಳಲ್ಲಿಯ ಮುಖ್ಯವಾದವುಗಳನ್ನು ಇಲ್ಲಿ ಹೇಳಿ ಈ ವಿಷಯವನ್ನು ಮುಗಿಸುವದು ಉಚಿತವು. ಜ್ಞಾನಿಗಳು ಹೇಗೆ ಆಚರಿಸಬೇಕು, ಈ ಬಗ್ಗೆ ಆ ವಚನವಿರುವದು. ಜ್ಞಾನಿಗಳು ತಾವಾದ ಬಳಿಕ ಮುಕುರದ

ಬಿಂಬದಂತಿರಬೇಕು, ಜ್ಞಾನದಲ್ಲಿ ಕನಕದಂತಿರಬೇಕು, ಸಂಶಯರಹಿತರಾಗಿರಬೇಕು, ತಮ್ಮಲ್ಲಿ ಪಾಪವಾಸನೆ ತಲೆದೋರದಿರಬೇಕು, ಅನ್ಯರ ನುಡಿಗೆ ಒಳಗಾಗಬಾರದು, ಅನ್ಯರ ನಿಂದೆಗೆ ಈಡಾಗಬಾರದು, ಗುರು ಹಿರಿಯರಿಗಂಜಿ ನಡೆಯಬೇಕು, ಅನ್ಯಸ್ತ್ರೀಯರನ್ನು ಮಾತೆಯಂತೆ ನೋಡಬೇಕು, ಎಂದೂ ವಿಶ್ವಾಸಘಾತಮಾಡಬಾರದು, ಪರದೂಷಣೆಗೆ ಹೋಗಬಾರದು, ಪರದ್ರವ್ಯಕ್ಕೆ ಕೈ ಇಕ್ಕಬಾರದು, ತಾವು ನುಡಿ ಕೊಡಬಾರದು, ಕೊಟ್ಟ ನುಡಿಗೆ ತಪ್ಪಬಾರದು, ಅನ್ಯರ ಹಂಗಿಗೊಳಗಾಗಬಾರದು, ಅಸತ್ಯವ ನುಡಿಯಬಾರದು, ಜನರಪವಾದಕ್ಕೆ ಅನುಕೂಲವಾಗಬಾರದು, ಮತಾಫಿ ಮಾನವನ್ನು ತೋರಬಾರದು, ಇತ್ಯಾದಿ (ಳಲಳ). ಜ್ಞಾನಿಗಳು ಇದರಂತೆ ನೀತಿಪೂರ್ಣರಿರಬೇಕು.

೧೪೦. ಇನ್ನು ವಚನಕಾರರ ಸಾಮಾಜಿಕ ವಿಚಾರಗಳನ್ನು ಸ್ವಲ್ಪ ನೋಡುವ. ಸಮಾಜವೆಂದರೆ ದೇಶ, ಭಾಷೆ, ಜಾತಿ, ಗುಣ, ಧರ್ಮ, ಹಿತಾಹಿತ ಸಂಬಂಧ ಇವುಗಳಲ್ಲಿ ಒಂದೆರಡು ಅಥವಾ ಎಲ್ಲವೂ ಯಾವ ವ್ಯಕ್ತಿಗಳ ಗುಂಪಿಗೆ ಸಾಮಾನ್ಯವಿರುವವೊ ಆ ಗುಂಪು ಸಮಾಜದಲ್ಲಿ ಶಾಂತಿಯನ್ನು ಸ್ಥಿರತೆಯನ್ನೂ ಪ್ರಸ್ಥಾಪಿಸುವ ಉದ್ದೇಶದಿಂದಲೆ ನೀತಿನಿಯಮಗಳು ಅಸ್ತಿತ್ವದಲ್ಲಿ ಬಂದಿರುವವು. ಆದುದರಿಂದ ವಚನಕಾರರು ಹೇಳಿದ ನೀತಿನಿಯಮಗಳನ್ನು ನೋಡಿದರೆ, ಒಂದು ನೀತಿಶುದ್ಧವಾದ, ಸ್ಥಿರ, ಮತ್ತು ಧರ್ಮಭಾವನೆಯುಳ್ಳ ಸಮಾಜವನ್ನು ಕಟ್ಟುವದು ಅವರ ಉದ್ದೇಶವಾಗಿತ್ತೆಂಬುದು ಒಡೆದು ಕಾಣುವಂತಿದೆ. ನೀತಿನಿಯಮಗಳಲ್ಲದೆ ಸಮಾಜದ ಶಾಂತಿ ಸ್ಥಿರತೆ ಮುಂತಾದವುಗಳನ್ನು ಭದ್ರವಾಗಿಡಲಿಕ್ಕೆ ಇನ್ನಾವ ಸಂಗತಿಗಳು ಅವಶ್ಯ ಎಂಬ ಬಗ್ಗೆ ವಿಚಾರಮಾಡಿದರೆ, ಸಮಾಜದಲ್ಲಿ ಕೃತ್ರಿಮ ಉಚ್ಚ, ನೀಚ ಭಾವಗಳಿಲ್ಲದಿರೋಣ, ಸಮಾನತೆ, ಉಚ್ಚ ಆದರ್ಶಗಳು, ಸಮಾನ ಸಂಸ್ಕೃತಿ, ಗುಣಗ್ರಾಹಕತೆ, ಉದ್ಯೋಗಶೀಲತೆ, ಮುಂತಾದವುಗಳು ಅವಶ್ಯವೆಂದು ಕಂಡುಬರುವದು. ಜಾತಿಸಂಸ್ಥೆಯು ಮತ್ತು ಅದರೊಡನೆ ಹಲವು ಜಾತಿಗಳು ಉಚ್ಚ ಮತ್ತು ಹಲವು ನೀಚ, ಎಂಬ ಭಾವವು ಹಿಂದುಸ್ಥಾನದಲ್ಲಿ ಬಹಳ ಪುರಾತನಕಾಲದಿಂದ ಪ್ರಚಲಿತವಿರುವದು. ಈ ಬಗೆಯ ಭೇದವೂ ವೈಷಮ್ಯವೂ ಯಾಕೆ ಮತ್ತು ಸರಿಯಾಗಿ ಯಾವಕಾಲಕ್ಕೆ ಉತ್ಪನ್ನವಾದವು ಇದನ್ನು ಪರಿಶೋಧಿಸುವ ಸ್ಥಳವು ಇದಲ್ಲ. ಇಲ್ಲಿ ಅನೇಕ ವಿವಿಧಸಂಸ್ಕೃತಿಯ ಜನಾಂಗಗಳು ಒತ್ತಟ್ಟಿಗೆ ಇರುವ ಪ್ರಸಂಗವು ಬಂದುದರಿಂದ ಈ ಅನೇಕ ಜಾತಿಗಳು ಉಂಟಾದವು, ಎಂದು ಐತಿಹಾಸಿಕ ದೃಷ್ಟಿಯಿಂದ

ನೋಡುವವರ ಮತವಿರುವದು. ಕದಾಚಿತ್ ಅವು ಆಯಾ ಕಾಲಕ್ಕೆ ಅವಶ್ಯವೂ ಅನಿವಾರ್ಯವೂ ಇದ್ದಿರಬಹುಮು. ಆದರೆ ಕಾಲಾಂತರದಿಂದ ಆ ಪದ್ಧತಿಯಲ್ಲಿ ಅನೇಕ ದೋಷಗಳು ಉಂಟಾಗಿ ಸಮಾಜದಲ್ಲಿ ಒಡಕು ದುರ್ಬಲತೆಗಳು ಹಬ್ಬಿದವು. ಹೀಗಾಗುವದರಿಂದ ಸಮಾಜದ ಬಲವು ಕುಗ್ಗಿಹೋಯಿತು. ಉಚ್ಚರೆನಿಸಿಕೊಳ್ಳುವವರಲ್ಲಿ ಅಹಂಮನ್ಯತೆ, ದುರಭಿಮಾನ, ಈಶ್ವರಭಾವ ಅಂದರೆ ಎರಡನೆಯವರನ್ನು ಆಳಬೇಕು ಎಂಬ ಬುದ್ಧಿ, ಇವು ಉತ್ಪನ್ನವಾದವು; ಮತ್ತು ನೀಚರೆನಿಸಿಕೊಳ್ಳುವವರಲ್ಲಿ ದಾಸ್ಯಭಾವ, ಸ್ವಾಭಿಮಾನಶೂನ್ಯತೆ, ಆತ್ಮವಿಶ್ವಾಸಹೀನತೆ ಇವು ಹೆಚ್ಚಾದವು. ಸಮಾಜದ ಕರ್ತೃತ್ವಶಕ್ತಿಯು ಹಾಳಾಗಿಹೋಯಿತು. ಕೃತ್ರಿಮ ವಿಷಮತೆಯ ಮೂಲಕ ಹೀಗೆ ಮಾತ್ಸರ್ಯಾದಿಗಳು ಪ್ರಬಲವಾದುದನ್ನು ನೋಡಿ ವಚನಕಾರರು ಸಮಾಜದಲ್ಲಿ ಎಲ್ಲರ ಸಮಸಮಾನತೆಯನ್ನು ಸಾರಿದರು. ಜನ್ಮಕುಲಾದಿಗಳಿಂದ ಮನುಷ್ಯನು ಯೋಗ್ಯಾಯೋಗ್ಯನೆನ್ನದೆ ಗುಣಕರ್ಮಗಳಿಂದ ಅವನನ್ನು ಪರೀಕ್ಷಿಸಬೇಕು, ಎಂಬ ತತ್ವವನ್ನು ಅವರು ಒಹಳ ಒತ್ತಿ ಹೇಳಿರುವರು. ಅವರು ಮಾಡಿದ ಇನ್ನೊಂದು ಮಹತ್ವದ ಸುಧಾರಣೆಯೆಂದರೆ, ತಾವು ನಡೆದ ಮುಕ್ತಿಮಾರ್ಗವನ್ನು ಹಿರಿಯರು ಕಿರಿಯರು, ಹೆಂಗಸರು ಗಂಡಸರು, ಉಚ್ಚರು ನೀಚರು, ಎನ್ನದೆ ಅವರು ಎಲ್ಲರಿಗೂ ಸಮವಾಗಿ ತೆರೆದಿಟ್ಟರು. ಭಕ್ತಿಸೂತ್ರದ ಕರ್ತರಾದ ನಾರದಶಾಂಡಿಲ್ಯರು ಮತ್ತು ಆಗಮಕಾರರು ಪ್ರಾರಂಭಿಸಿದ ಪರಂಪರೆಯನ್ನೆ ಅವರು ಮುಂದರಿಸಿ ಸಮಾಜದಲ್ಲಿಯ ಎಲ್ಲ ತರಗತಿಯ ಜನರಲ್ಲಿ ಪ್ರಚಂಡ ಧರ್ಮೋತ್ಸಾಹವನ್ನುಂಟುಮಾಡಿದರು. ಸಮಾಜವು ಮುಂದೆ ಸಾಗಬೇಕಾದರೆ ಇನ್ನೊಂದು ಮಹತ್ವದ ಸಂಗತಿಯ ಅವಶ್ಯಕತೆ ಇರುವದು. ಅದಾವುದೆಂದರೆ, ಉಚ್ಚ ಆದರ್ಶಗಳ ಪ್ರೇರಣೆಯು. ಸಮಾಜದ ಕಣ್ಣೆದುರಿಗೆ ಉಚ್ಚ ಆದರ್ಶಗಳು ಇರದೆ ಹೋದರೆ ಸಮಾಜದಲ್ಲಿಯ ವ್ಯಕ್ತಿಗಳು ಬೇಗನೆ ಇಂದ್ರಿಯಪ್ರವೃತ್ತಿಗಳ ಸೆಳವಿಗೆ ಸಿಕ್ಕು ಅಧೋಗತಿಗೆ ಹೋಗಲಾರಂಭಿಸುವವು. ಈ ಆದರ್ಶಗಳು ಸಹ ಬರಿಯ ಶಾಬ್ದಿಕ ಇಲ್ಲವೆ ಗ್ರಾಂಥಿಕವಿದ್ದು ಉಪಯೋಗವಿಲ್ಲ! ಆಯಾ ಆದರ್ಶವನ್ನು ಪ್ರತ್ಯಕ್ಷ ಆಚರಣೆಯಲ್ಲಿ ತರುವವರು ಸಮಾಜಕ್ಕೆ ಮುಂದಾಳುಗಳಾಗಿ ನಿಲ್ಲುವದು ಅವಶ್ಯವಿರುವದು. ಹಾಗೆ ಆದರೆ ಸ್ವಾಭಾವಿಕವಾಗಿ ಸಮಾಜದ ತರಗತಿಯು ಏರುವದು. ಒಳ್ಳೇ ಸಮಾಜವನ್ನು ನಿರ್ಮಿಸುವ ಪ್ರಯತ್ನದಲ್ಲಿ ವಚನಕಾರರು ಇನ್ನೊಂದು ಹೆಜ್ಜೆಯನ್ನಿಟ್ಟರು. ಒಂದೇ ಇಷ್ಟದೇವತೆ, ಒಂದೇ ಮಂತ್ರ, ಒಂದೇ ದೀಕ್ಷೆ, ಒಂದೇ ಬಗೆಯ

ಸಾಧನಮಾರ್ಗ, ಒಂದೇ ಬಗೆಯ ಆಚಾರ, ತಾತ್ಪರ್ಯವೇನಂದರೆ, ಒಂದೇ ಬಗೆಯ ಧಾರ್ಮಿಕ ಸಂಸ್ಕೃತಿಯನ್ನು ರೂಢಿಯಲ್ಲಿ ತಂದು ಅದನ್ನನುಸರಿಸುವ ಎಲ್ಲರಲ್ಲಿ ಧರ್ಮಬಂಧುತ್ವವನ್ನು ನೆಲೆಗೊಳಿಸಲು ಅವರು ಯತ್ನಿಸಿದರು. ಭಕ್ತಿಸಾಮ್ರಾಜ್ಯದಲ್ಲಿ ಕಾಲಿಟ್ಟವರೆಲ್ಲರೂ ಭಕ್ತಬಂಧುಗಳಾಗುವರು, ಶಿವದೀಕ್ಷೆಯನ್ನು ಪಡೆದವರೆಲ್ಲರೂ ಒಂದೇ ಮನೆಯವರು, ಎಂದು ವಚನಕಾರರು ಬರಿಯ ಬಾಯಿಂದ ಸಾರಿ ಸುಮ್ಮನಿರದೆ ಆ ಪ್ರಕಾರದ ರೂಢಿಗಳನ್ನು ಪ್ರಚಾರದಲ್ಲಿ ತಂದರು. ಸಮಾಜವು ಸ್ವಯಂಪೂರ್ಣವಿರಬೇಕಾದರೆ ಸಮಾಜಧಾರಣೆಗೆ ಅವಶ್ಯವಿದ್ದ ಪ್ರತಿಯೊಂದು ಕೆಲಸವನ್ನು ಮೇಲು ಕೀಳೆನ್ನದೆ ಎಲ್ಲರೂ ಮಾಡಲಿಕ್ಕೆ ಸಿದ್ಧರಿರಬೇಕು. ಅಂದರೆ ಎಲ್ಲ ಕೆಲಸಗಳೂ ಸುಸೂತ್ರವಾಗಿ ಸಾಗಿ ಅವೇ ಆಯಾ ಜನರ ಆತ್ಮಿಕ ಉನ್ನತಿಯ ಸಾಧನಗಳೂ ಆಗುವವು. ಕಾಯಕದ ತತ್ವವನ್ನು ಪ್ರತಿಪಾದಿಸಿ ಈ ಮಾತನ್ನು ವಚನಕಾರರು ಸಾಧಿಸಿದರು. ಈ ತತ್ವದ ಮುಖ್ಯ ಲಕ್ಷಣಗಳಾವವೆಂದರೆ, ಸಮಾಜದಲ್ಲಿಯ ಪ್ರತಿಯೊಬ್ಬನು ಏನಾದರೊಂದು ಉದ್ಯೋಗ ಮಾಡಿಯೆ ಹೊಟ್ಟೇ ತುಂಬಿಕೊಳ್ಳಲಿಕ್ಕೆಬೇಕು, ಮತ್ತು ಒಕ್ಕಲತನ, ಬಡಿಗತನ, ಸಮಗಾರತನ, ಅಥವಾ ಮತ್ತಿನ್ನಾವ ಉದ್ಯೋಗವೇ ಆಗಲಿ, ಅದು ಸಮಾಜಕ್ಕೆ ಅವಶ್ಯವೂ ನೀತಿಕರವೂ ಇದ್ದ ಪಕ್ಷದಲ್ಲಿ ಅದು ದೇವರ ಪೂಜೆಯಷ್ಟೆ ಪವಿತ್ರವೂ ಕರ್ತವ್ಯವೂ ಇರುವದು. ಈ ತತ್ವದ ಪ್ರಚಾರದ ಮೂಲಕ ಸಮಾಜದಲ್ಲಿ ಪ್ರಚಲಿತವಿದ್ದ ಎಲ್ಲ ಉದ್ಯೋಗಗಳಿಗೂ ಮಹತ್ವವು ಪ್ರಾಪ್ತವಾಯಿತು ಮತ್ತು ಸೋಮಾರಿಗಳ ಸುಳಿದಾಟವು ಅಡಗಿತು. ಜಂಗಮರು ಸರ್ವಸಂಗಪರಿತ್ಯಾಗಮಾಡಿದವರಿದ್ದರೂ ಅವರು ಭಿಕ್ಷೆಬೇಡಿ ಅನ್ಯರಿಗೆ ಭಾರವಾಗುವದಕ್ಕಿಂತ ಯಾವದೊಂದು ಕಾಯಕದಲ್ಲಿ ತೊಡಗಬೇಕು, ಜಂಗಮರಿಗೆ ಕೂಡ ಕಾಯಕದಿಂದಲೆ ಮುಕ್ತಿ, ಎಂದು ವಚನಕಾರರು ನುಡಿದಿರುವರು. ಅವರು ಈ ವಿಷಯಕ್ಕೆ ಇಷ್ಟೊಂದು ಮಹತ್ವವನ್ನು ಕೊಟ್ಟರು. ಸಮಾಜರಚನೆಯಲ್ಲಿ ಸ್ತ್ರೀಪುರುಷರ ಪರಸ್ಪರ ಸಂಬಂಧವೆಂಬುದೊಂದು ವಿಚಾರಕ್ಕೆ ಪಾತ್ರವಾದ ವಿಷಯವಿರುವದು ಈ ಬಗ್ಗೆಯೂ ವಚನಕಾರರು ಮನನೀಯ ವಿಚಾರಗಳನ್ನು ವ್ಯಕ್ತಗೊಳಿಸಿದ್ದಾರೆ. ಪರಸ್ತ್ರೀಯೆಂದರೆ ಮಾತೆಯ ಸಮಾನ, ಎಂದು ಗಂಡಸರಿಗೆ ಏಕಪತ್ನೀವ್ರತದ ಕಟ್ಟಳೆಯನ್ನು ಹಾಕಿದ್ದಲ್ಲದೆ ನಾರಿಯು ಪ್ರತ್ಯಕ್ಷ ಮಹಾದೇವಿಯು, ಎಂಬ ಭಾವನೆಯನ್ನು ರೂಢಪಾಡಿ ಒಂದು ಉಚ್ಚ ಆದರ್ಶವನ್ನು ಸಮಾಜದೆದುರಿಗೆ ಇಟ್ಟರು. ಸಮಾಜದೊಳಗೆ ಸ್ತ್ರೀಗೆ ಮಾನದ ಸ್ಥಾನವನ್ನು ಕೊಟ್ಟದ್ದರಿಂದಲೂ ಆಧ್ಯಾ

ತ್ಮಿಕವಿಷಯಗಳಲ್ಲಿ ಪುರುಷರಿಗಿದ್ದ ಅಧಿಕಾರಗಳನ್ನೆಲ್ಲ ಅವರಿಗೆ ಕೊಟ್ಟದ್ದರಿಂದಲೂ ವಚನಕಾರರಲ್ಲಿ ನಮಗೆ ಅನೇಕ ಸ್ತ್ರೀಯರು ಕಂಡುಬರುವರು ಮತ್ತು ಮಹಾದೇವಿಯಕ್ಕನಂಥ ದಿವ್ಯ ಸಾಧ್ವಿಯು ಎಲ್ಲರ ಮುಕುಟಮಣಿಯಂತೆ ಕಂಗೊಳಿಸುತ್ತಿರುವಳು. ಯಾವದೇ ವ್ಯಕ್ತಿಯಾಗಲಿ, ಸಮಾಜವಾಗಲಿ, ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳನ್ನು ಸಾಧಿಸಲು ಯತ್ನಿಸುವುದು ಅದರ ಸ್ವಭಾವವಾಗಿದೆ. ಅವುಗಳಲ್ಲಿ ಕಾಮವೆಂಬುದು ದೇಹೇಂದ್ರಿಯಗಳ ಹಸಿವೆಯು. ಅರ್ಥವೆಂಬುದು ಆ ಹಸಿವೆಯನ್ನು ಪೂರೈಸುವ ಸಾಧನವು. ಮೋಕ್ಷವು ಆತ್ಮನ ಹಸಿವು. ಧರ್ಮವು ಅದನ್ನು ತೃಪ್ತಿಪಡಿಸುವ ಸಾಧನವು. ಕಾಮ ಅರ್ಥಗಳು ಅಭ್ಯುದಯವನ್ನು ಸಂಬಂಧಿಸಿದವುಗಳು. ಧರ್ಮಮೋಕ್ಷಗಳು ನಿಶ್ರೇಯಸವನ್ನು ಸಂಬಂಧಿಸಿದವುಗಳು. ಈ ನಾಲ್ಕೂ ಧ್ಯೇಯಗಳು ಯಾವ ವ್ಯಕ್ತಿಯ ಜೀವನದಲ್ಲಿ ಸಮನ್ವಯದಿಂದ ಕೈಸೇರಬಲ್ಲವೊ ಮತ್ತು ಯಾವ ಸಮಾಜದಲ್ಲಿದ್ದರೆ ಇವು ವ್ಯಕ್ತಿಗಳಿಗೆ ಕೈವಶವಾಗಬಲ್ಲವೊ ಆ ವ್ಯಕ್ತಿಯ ಜೀವನಕ್ರಮವು ಮತ್ತು ಆ ಸಮಾಜದ ರಚನೆಯು ಆದರ್ಶಪ್ರಾಯವು ಎಂದು ಹೇಳಬಹುದು. ಅಂಥ ಸಮಾಜವನ್ನು ರಚಿಸಲು ವಚನಕಾರರು ಎತ್ನಿಸಿದರೆಂಬುದು ಅವರ ವಚನಗಳಿಂದ ವ್ಯಕ್ತವಾಗುವದು

೧೪೧. ವಚನಕಾರರ ಸಾಮಾಜಿಕ ವಿಚಾರಗಳನ್ನು ಪರಿಶೀಲಿಸುವಾಗ ಬರಿಯ ಕುಲಶೀಲ, ಜನ್ಮ ಅಥವಾ ವಯ ಇವುಗಳ ವರ್ಚಸ್ಸನ್ನು ಕಿತ್ತಿಹಾಕಿ ಗುಣಕರ್ಮಗಳ ಮಹತ್ವವನ್ನು ಸಮಾಜದಲ್ಲಿ ಪ್ರತಿಷ್ಠಾಪಿಸಲಿಕ್ಕೆ ಅವರು ಹೇಗೆ ಹೆಣಗಿದರು ಇದನ್ನು ಮೊಟ್ಟಮೊದಲು ನೋಡೆಬೇಪಡು ಅವಶ್ಯವು. ನಾನು ಶ್ರೇಷ್ಠ ನೀನು ಶ್ರೇಷ್ಠ ಎನ್ನುವವರು ಜಗತ್ತಿನಲ್ಲಿ ಹಿರಿಯರೆನಿಸಿಕೊಳ್ಳಲಾರರು. ಅವರು ನಿಜವಾದ ಹಿರಿಯರಲ್ಲ. ಹಿರಿಕಿರಿದೆಂಬ ಶಬ್ದವಡಗಿ ಸಮದೃಷ್ಟಿಯು ನೆಲೆಗೊಂಡಲ್ಲಿಯೆ ನಿಜ ಹಿರಿತನವು. ಇರಬಲ್ಲದು (೪೧೧). ಮೇಲಿನ ದೇಹವು ಹೆಣ್ಣಿರಲಿ ಗಂಡಿರಲಿ, ಬ್ರಾಹ್ಮಣನದಿರಲಿ ಹೊಲೆಯನದಿರಲಿ. ಆವರ ಪ್ರಾಣಮನಆತ್ಮಗಳಲ್ಲಿ ಹೆಣ್ಣು ಗಂಡು, ಹಾರುವ ಹೊಲೆಯ, ಎಂಬ ಭೇದಗಳಿರಬಲ್ಲವೆ? ಇವೆಲ್ಲ ಕೃತಕ ಭೇದಭಾವಗಳು. ಆತ್ಮವು ಎಲ್ಲಿ ಹೋದರೂ ಒಂದೇ (೪೧೨). ಆತ್ಮಂಗೆ ಆವ ಕುಲ ಉಂಟು ಹೇಳಿಕೋ (ವ. ೩೨೦), ಎಂದು ವಚನಕಾರರು ಆಹ್ವಾನಿಸಿರುವರು! ಬರಿಯ ಜಾತಿ ಬ್ರಾಹ್ಮಣರ ಹೊಟ್ಟೆಯಲ್ಲಿ ಹುಟ್ಟಿದರೆ ಅಥವಾ, ಅದೇಕೆ, ಪ್ರತ್ಯಕ್ಷ ಬ್ರಹ್ಮಜ್ಞಾನಿಯ ಹೊಟ್ಟೆಯಲ್ಲಿ ಹುಟ್ಟಿದರೂ ಮನು

ಷ್ಯನು ನಿಜವಾದ ಬ್ರಾಹ್ಮಣನಾಗನು. ಅದೇ ಪ್ರಕಾರ, ವೇದಗಳನ್ನೋದುವುದರಿಂದ, ಯಜ್ಞಯಾಗಾದಿ ಕರ್ಮಗಳನ್ನು ಮಾಡುವುದರಿಂದ ಯಾರಾದರೂ ಬ್ರಾಹ್ಮಣರಾಗಬಲ್ಲರೇ? ಬ್ರಹ್ಮವನ್ನರಿತವನೆ ಬ್ರಾಹ್ಮಣನು, ಎಂದು ಶ್ರುತಿಯು ಸಾರುತ್ತಿರಲು ಬ್ರಾಹ್ಮಣತ್ವವು ಹೀಗೆ ಅಗ್ಗವಾಗಿ ಹೇಗೆ ಸಿಕ್ಕಬಲ್ಲದು (೪೧೩)? ಗುಣದಿಂದ ಹಾರುವನಾಗಬಲ್ಲನಲ್ಲದೆ ಅಗಣಿತ ಅಭ್ಯಾಸದಿಂದಲ್ಲ. ಮೂಲತ್ರಯಗಳನ್ನೂ ದ್ವಂದ್ವಗಳನ್ನೂ ಸೃಷ್ಟಿಸ್ಥಿತಿಲಯಗಳನ್ನೂ ಹಾರಿದವನೆ ಹಾರುವನು ಹೊರತು, ಹಾದಿಯಿಂದ ಹೋಗುವಾಗ ಮುದಿಮುದಿ ಎಂದು ಹಾರುವವನು ಹಾರುವನಾಗಲರಿಯನು (೪೧೪)! ಬ್ರಹ್ಮವನರಿದವನು ಬ್ರಾಹ್ಮಣನು, ಸರ್ವಜೀವಹಿತಕ್ಕೊಳಗಾದವನು ಸಮ್ಮಕಾರನು. ಹೀಗೆ ಇವೆರಡೇ ಉಚ್ಚನೀಚ ಭೇದಗಳು. ಇವು ಗುಣಕರ್ಮಗಳನ್ನವಲಂಬಿಸಿರುವವು (೪೧೫). ಅರಿದಲ್ಲಿಯೆ ಪರತತ್ವಭಾವಿ, ಮರೆದಲ್ಲಿಯೆ ಮಾಯಾಮೂಲ ಸಂಬಂಧಿ (೪೧೬), ಆಚಾರವೆ ಕುಲ ಅನಾಚಾರವೆ ಹೊಲೆ (೪೧೦), ಕೊಲ್ಲುವವನೆ ಹೊಲೆಯನು, ಹೊಲಸು ತಿಂಬುವವನೆ ಹೊಲೆಯನು, ಸಕಲ ಜೀವಾತ್ಮರಿಗೆ ಲೇಸನೆ ಬಯಸಿ ಲೇಸನೆ ಮಾಡುವವನು ಕುಲಜನು (೪೧೧). ಕೆಟ್ಟ ಕೆಲಸಗಳನ್ನು ಮಾಡುವವನೆ ಹೊಲೆಯನೆನಿಸುವನೆಂದು ಮಾದರಿಗಾಗಿ ಹಲವು ದುರಾಚಾರಗಳನ್ನು ವಚನಕಾರರು ಕೊಟ್ಟಿರುವರು. ತಂದೆತಾಯಿಗೆ ಬೈದವನೆ ಹೊಲೆಯ, ತಂದೆಗೆ ಮಾರುತ್ತರವನಿತ್ತವನೆ ಹೊಲೆಯ, ನಡುದಾರಿಗೆ ಮುಳ್ಳು ಬಡಿದವನೆ ಹೊಲೆಯ, ಹತ್ತು ಆಡಿ ನಂದೂ ನಿಜವಿಲ್ಲದವನೆ ಹೊಲೆಯ, ಧನಕ್ಕಾಗಿ ಜೀವಕೊಲ್ಲುವವನೆ ಹೊಲೆಯ, ಚಿತ್ತದಲ್ಲಿ ಪರಸತಿಯ ಬಯಸುವವನೆ ಹೊಲೆಯ, ಪರನಿಂದೆಗೆಳಸುವವನೆ ಹೊಲೆಯ, ಧರ್ಮವನಾಚರಿಸದವನೆ ಹೊಲೆಯ. ಇಂಥ ಹೊಲೆಯರು ಊರತುಂಬ ಇರುವರು. ಇವರನ್ನು ಹುಡುಕಲು ಹೊಲಗೇರಿಗೆ ಹೋಗುವ ಕಾರಣವೇನು (ವ. ೩೨೪)? ಇದೇ ಪ್ರಕಾರ, ಸ್ನಾನ, ಮುದಿ, ತೀರ್ಥಾಟನ, ಸೋಸಿ ನೀರುಕುಡಿಯುವದು ಮುಂತಾದ್ದನ್ನು ಮಾಡಿ ತಾವು ತಮ್ಮ ಶೀಲದ ಮೂಲಕ ಹೆಚ್ಚಿನವರೆಂದು ಹೇಳಿಕೊಳ್ಳುವವರ ಸದಾಚಾರವನ್ನೂ ಅವರು ಜನ್ಮಾಗಿ ತೆಗೆದುಕೊಂಡಿದ್ದಾರೆ. ಶೀಲಶೀಲವೆಂದು ಗರ್ವದಿಂದ ಹೇಳಬೇಡಿರಿ. ಅದರಿಂದ ನಾವು ಹೆಚ್ಚು ನೀವು ಹೆಚ್ಚು ಎಂದು ಹೇಳಿಕೊಳ್ಳಬೇಡಿರಿ. ಯಾಕಂದರೆ, ನಿಜ ಶೀಲವು ಈ ಬಾಹ್ಯಾಚಾರಗಳಲ್ಲಿಲ್ಲ. ಅದು ನೀತಿಶುದ್ಧ ಆಚಾರದಲ್ಲಿದೆ (೪೩೫). ಕೆಟ್ಟಭಾವಿಹಳ್ಳಗಳ ನೀರುಬಿಟ್ಟರೆ, ಕೂಡದ ಬಾಯಿಗೆ ಅರಿವೆ ಹಾಕಿ ನೀರು ಸೋಸಿದರೆ, ಆ ಹಣ್ಣು ಈ ಕಾಯಿ

ಮುಂತಾದವುಗಳನ್ನು ಬಿಟ್ಟರೆ, ಉಪ್ಪುಕಾರಗಳನ್ನು ತೊರೆದರೆ, ಪರಪಾಕ ಬಿಟ್ಟರೆ, ಅದು ಶೀಲವೇ? ಇದೆಲ್ಲ ಬಾಹ್ಯ ಆಡಂಬರವು. ಸಂಸಾರ ವಿಷಯ ರಸವನ್ನು ಬಿಟ್ಟು, ಅರಿಷಡ್ವರ್ಗಂಗಳನ್ನು ಮೆಟ್ಟಿ, ಅಂತಃಶುದ್ಧಿಯನ್ನು ಮಾಡಿದರೆಯೆ ಅದು ನಿಜವಾದ ಶೀಲವು. ಅದರಿಂದ ಮನುಷ್ಯನು ಉಚ್ಚ ನೆನಿಸಬಲ್ಲನು ಹೊರತು ಬಾಹ್ಯಾಚಾರಗಳಿಂದಲ್ಲ (೪೩೬). ನಿಜವಾದ ಕುಲ ಶೀಲಗಳು ಯಾವವು ಎಂಬುದನ್ನು ಈ ಪ್ರಕಾರ ತೋರಿಸಿ ಸದಾಚಾರ ಸದ್ಭಕ್ತಿಗಳ ಗುಣಗಾನವನ್ನು ವಚನಕಾರರು ಮಾಡಿರುವರು. ಆದರೆ ಅವರು ಪ್ರತಿಪಾದಿಸಿದ ಸಮಾನತೆಯು ರೂಢಿಯಲ್ಲಿ ಬರುವ ಬಗೆಯಾವುದು? ಆದುದರಿಂದ, ಶಿವದೀಕ್ಷೆಯನ್ನು ಪಡೆದು ಶಿವಲಿಂಗವನ್ನು ಧರಿಸಿದವರು ಯಾವ ಕುಲಜಾತಿಗಳನ್ನೆಣಿಸದೆ ಒಂದೇ ಮನೆಯವರಂತೆ ಆಚರಿಸಬೇಕೆಂದು ವಚನಕಾರರು ಸಾರಿದರು ಮತ್ತು ಅದರಂತೆ ಸ್ವತಃ ನಡೆದು ರೂಢಿಯನ್ನು ಹಾಕಿದರು. ಉಂಬಲ್ಲಿ ಉಡುವಲ್ಲಿ ಕ್ರಿಯೆ ಅಳಿಯಿತು ಎನ್ನುವದು ತಪ್ಪು. ಕೊಂಬಲ್ಲಿ ಕೊಡುವಲ್ಲಿ ಕುಲವನ್ನರಸುವದೂ ತಪ್ಪು. ಹಾಗೆ ಕುಲವನ್ನು ನೋಡುವವರು ಭಕ್ತರೂ ಅಲ್ಲ ಯುಕ್ತರೂ ಅಲ್ಲ (೫೨೯) ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನು ಒಂದೇ ಎಂದು, ಆದೇ ರೀತಿ ಹಾರುವ ಮೊದಲು ಶ್ವಪಚಕಡೆಯಾಗಿ ಭವಿಯಾದವರನೆಲ್ಲರನು ಅಂದರೆ ಶಿವದೀಕ್ಷೆಯನ್ನು ಹೊಂದದೆ ಕೇವಲ ವಿಷಯಲಂಪಟರಿದ್ದವರನೆಲ್ಲರನು ಒಂದೇ ಎಂದು ಭಾವಿಸತಕ್ಕದ್ದು (೪೭೯), ಭಕ್ತರು ತಮ್ಮತಮ್ಮೊಳಗೆ ಒಬ್ಬರನ್ನೊಬ್ಬರು ದೂರ ನೋಡಿದರೆ ಅಥವಾ ಅನ್ನೋದಕ ಲಗ್ನವ್ಯವಹಾರಗಳನ್ನು ಮಾಡದಿದ್ದರೆ ಅವರಲ್ಲಿ ಪರಸ್ಪರ ಸ್ನೇಹವೂ ಹಿತಸಂಬಂಧಾದಿಗಳೂ ಬೆಳೆಯುವದು ಅಸಾಧ್ಯವು. ಯಾಕಂದರೆ, ಎಡೆಗೆ ಬಾರದಾತ ಅಡಿಗೆಗೆ ದೂರ. ಅಡಿಗೆಗೆ ದೂರಾದಾತ ಮನೆಗೆ ದೂರ, ಮನೆಗೆ ದೂರಾದಾತ ಮನಕ್ಕೆ ದೂರ (೫೮೮). ಹೀಗೆ ಅವರು ಒಬ್ಬರ್ಕೊಬ್ಬರಿಗೆ ದೂರಾಗುತ್ತಲೆ ಹೋಗುವರು. ಆದುದರಿಂದ ಶರಣರಲ್ಲಿ ಕುಲವನ್ನರಸದೆ ಆಚಾರವನ್ನೆ ಅರಸಬೇಕು. ದೀಕ್ಷೆ ಪಡೆದು ಶಿವಾಚಾರಸಂಪನ್ನರಾದವರೆಲ್ಲರ ಕುಲವು ಶಿವಕುಲವೆಂಬುದೊಂದೇ. ಆಬಳಿಕ ತನ್ನ ಕುಲಶೀಲದಭಿಮಾನವನ್ನು ತಾಳಕೂಡದು. ಒಮ್ಮೆ ಭವಿತನ ಬಿಟ್ಟು ಭಕ್ತನಾದಮೇಲೆ ಸಿರಿಯಾಳನು ಸೆಟ್ಟಿಯಲ್ಲ. ಮಾಚಯ್ಯನು ಮಡಿವಾಳನಲ್ಲ, ಕಕ್ಕಯ್ಯನು ಡೋಹರನಲ್ಲ, ಜನ್ನಯ್ಯನು ಮಾದಾರನಲ್ಲ. ಯಾಕಂದರೆ, ಅವರೆಲ್ಲರೂ ಭಕ್ತಬಂಧುಗಳಾಗಿರುವರು (ವ. ೩೩೩). ವಚನಕಾರರು ಆ ರೀತಿ ಜಾತಿಕುಲಗಳನ್ನು ಅಲ್ಲಗಳೆದು, ಪರಸ್ಪರ ಅನ್ನೋದಕ

ಲಗ್ನವ್ಯವಹಾರಗಳನ್ನು ಮಾಡಿ, ತಾವು ನುಡಿದಂತೆ ನಡೆದು ತೋರಿಸಿದರು. ಈ ವಿಷಯವನ್ನು ಕುರಿತು ಅವರು ಪುರಾತನ ಋಷಿ ಮುನಿಗಳ ಉದಾಹರಣೆಯನ್ನಾದರೂ ಕೊಟ್ಟು ಜಾತಿಕುಲಗಳಿಗಿಂತ ಗುಣಕರ್ಮಗಳೇ ಶ್ರೇಷ್ಠ ಎಂದು ಸಿದ್ಧಮಾಡಿದ್ದಾರೆ. ಆ ಪುರಾತನರಲ್ಲಿ ಎಷ್ಟೋ ಜನರು ಕೀಳೆಂದು ತಿಳಿಯಲ್ಪಟ್ಟ ಜಾತಿಯವರಿದ್ದರೂ ತಮ್ಮ ಗುಣಕರ್ಮಗಳಿಂದ ಶ್ರೇಷ್ಠರಾಗಿ ಸಮಾಜದ ಶಿರೋಭಾಗದಲ್ಲಿ ಮೆರೆದು ಎಲ್ಲರಿಗೂ ಪೂರ್ಗದರ್ಶಿಗಳಾದರು. (೫೨೭).

೧೪೨. ಇದೀ ಸಮಾಜದಲ್ಲಿಯ ಜಾತಿಭೇದಾದಿಗಳನ್ನು ಒಮ್ಮೆಲೆ ತೆಗೆದುಹಾಕುವದು ಸಾಧ್ಯವಾಗದ ಮಾತಾದುದರಿಂದ ವಚನಕಾರರು ತಮ್ಮ ಸಂಪ್ರದಾಯದೊಳಗಿಂದ ಅವುಗಳನ್ನು ತೆಗೆದುಹಾಕಿ ಅದರಿಂದ ಸುತ್ತಲಿನ ಜನಸಾಮಾನ್ಯರಲ್ಲಿ ಉಂಟಾಗುವ ಉತ್ಸಾಹವನ್ನೂ ಇದೀ ಸಮಾಜಕ್ಕೆ ಆಗುವ ಲಾಭವನ್ನೂ ತೋರ್ಪಡಿಸಿದರು. ಅವರು ದೀಕ್ಷೆಕೊಡುವಾಗ ಜಾತಿಕುಲಗಳನ್ನು ನೋಡದೆ ಆಚಾರವನ್ನು ನೋಡಬೇಕೆಂದು ಉಪದೇಶಿಸಿದರು. ನಡೆನುಡಿ ಶುದ್ಧವಾಗದವರಿಗಲ್ಲದೆ ದೇವರು ಅನುಗ್ರಹಿಸನು. ಆದುದರಿಂದ ಅಂಥವರಿಗೆ ದೀಕ್ಷೆಕೊಟ್ಟು ವ್ಯರ್ಥ (ವ. ೬೯). ಒಮ್ಮೆ ದೀಕ್ಷೆ ಕೊಟ್ಟ ಬಳಿಕ, ಯಾವದೇ ಜಾತಿಯವನಾಗಲಿ, ಅವನು ಪರಿಶುದ್ಧನು, ಮತ್ತು ಪೂರ್ವಜನ್ಮ (ಜಾತಿ) ವಿವರ್ಜಿತನು (ವ. ೩೫೫). ಉರಿಯುವ ಕೆಂಡದ ಮೇಲೆ ತೃಣವನ್ನು ತಂದಿರಿಸಿದರೆ ಆ ತೃಣವನ್ನು ಕಿಚ್ಚು ನುಂಗಿದಂತೆ ಗುರುಚರಣದ ಮೇಲೆ ತಲೆಯಿಟ್ಟ ಬಳಿಕ ಅವನ ಜಾತಿಭೇದಾದಿಗಳೆಲ್ಲ ನುಟ್ಟುಹೋಗುವವು (ವ. ೭೧). ಹೀನಹೀನವೆಂದು ಜನರು ಅನ್ನುವ ಜಾತಿಯಲ್ಲಿ ಜನಿಸಿದ ನರನು ಗುರುವಿನ ಕಾರುಣ್ಯದಿಂದ ಶಿವದೀಕ್ಷೆಯನ್ನು ಪಡೆದ ಬಳಿಕ ಮರಳಿ ಹೀನನೆನಿಸಿಕೊಳ್ಳನು. ಯಾಕಂದರೆ, ನೀರು ಗಟ್ಟಿಗೊಂಡು ಮುತ್ತಾಗಬಲ್ಲದಲ್ಲದೆ ಮುತ್ತು ಮರಳಿ ನೀರಾಗಲರಿಯದು (ವ. ೭೫). ಗುರುವುಪದೇಶ ಪಡೆದು ಗುರುಪುತ್ರನೆನಿಸಿಕೊಂಡ ಬಳಿಕ ಪೂರ್ವಜಾತಿಯ ಸಂಬಂಧವನ್ನೆ ಇಡಕೂಡದು. ಯಾಕಂದರೆ, ಆ ದೀಕ್ಷೆ ಪಡೆದವನು ಎಲ್ಲರೂ ಸಮಸಮಾನವಿದ್ದ ಹೊಸ ಸಮಾಜವನ್ನು ಸೇರಿರುವನು (ವ. ೭೮). ಜಾತಿ, ಕುಲ, ವಯ, ಉದ್ಯೋಗ ಮುಂತಾದ ಭೇದಗಳನ್ನು ಮನ್ನಿಸದೆ ದೀಕ್ಷೆ ಕೊಟ್ಟು ವಚನಕಾರರು ಎಲ್ಲರನ್ನು, ಸಮಾನತೆಯ ತಳಹದಿಯಾಗಿರುವ ಸಮಾಜದಲ್ಲಿ ಸೇರಿಸಲೆತ್ನಿಸಿರುವರು. ಅದೇ ಪ್ರಕಾರ, ಅವರು ಧರ್ಮ ವಿಷಯದಲ್ಲಿ ಲಿಂಗಭೇದವನ್ನು ತೆಗೆದುಹಾಕಿ ಸ್ತ್ರೀಯರಿಗೆ ಪುರುಷರಿಗಿದ್ದ

ಎಲ್ಲ ಹಕ್ಕುಗಳನ್ನು ಕೊಟ್ಟುಬಿಟ್ಟರು. ಸತಿಪತಿಗಳಿಬ್ಬರೂ ಸರಿಯಾಗಿ ಭಕ್ತಿ ಮಾಡಿದರೆ ಅದು ದೇವರಿಗೆ ಹಿತವಾಗಿರುವದು. ಇಲ್ಲದಿದ್ದರೆ ಅಮೃತದೊಳಗೆ ವಿಷಕಲಸಿದಂತಾಗುವದು. ಕಣ್ಣುಗಳು ಎರಡು ಇದ್ದರೂ ದೃಷ್ಟಿಯು ಒಂದೇ ಇರುವಂತೆ ಗಂಡಹೆಂಡಿರು ಏಕಭಾವರಾಗಿ ಭಜಿಸಿದರೆ ಅದು ದೇವರಿಗೆ ಯೋಗ್ಯರೀತಿಯಿಂದ ಅರ್ಪಿತವಾಗುವದು (ವ. ೧೪೨). ಧರ್ಮ ಸಾಧನೆಯಲ್ಲಿ ಧರ್ಮಪತ್ನಿಯ ಪೂರ್ಣ ಸಾಹಚರ್ಯವನ್ನು ಎಷ್ಟು ಹೊಗಳಿದರೂ ಸಾಲದು. ಆತರದ ಸಾಹಚರ್ಯವಿಲ್ಲದಿದ್ದರೆ ಆಗುವ ತೊಂದರೆಗೂ ಧರ್ಮಪಥದಲ್ಲಿ ಬರುವ ಅಡ್ಡಿಗೂ ಎಣೆಯಿಲ್ಲ. ಆದುದರಿಂದ ದೀಕ್ಷೆ, ಪೂಜೆ, ಮುಂತಾದ ಪ್ರತಿಯೊಂದು ವಿಷಯದಲ್ಲಿ ಸ್ತ್ರೀಯರು ಪುರುಷರಷ್ಟೇ ಅರ್ಹರು, ಎಂದು ವಚನಕಾರರು ನಿರ್ಣಯಿಸಿ ಅದರಂತೆ ಸ್ತ್ರೀಯರಿಗೆ ಧರ್ಮಸಾಮ್ರಾಜ್ಯದಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರುವರು.

೧೪೩. ಇನ್ನು ವಚನಕಾರರು ಸಮಾಜದೆದುರಿಗೆ ಯಾವ ಆದರ್ಶಗಳನ್ನಿಟ್ಟರು ಇದನ್ನು ವಿಚಾರಿಸುವದು ಇಷ್ಟವು. ಪೂರ್ವಪರಂಪರೆಯು ಏನೇ ಇರಲಿ, ಗ್ರಂಥಸ್ಥಧರ್ಮವು ಯಾವದೇ ಇರಲಿ, ಆಯಾ ಕಾಲದ ರೂಢಿಗಳು ಹೇಗೇ ಇರಲಿ, ಪ್ರತ್ಯಕ್ಷ ಜೀವಂತ ಮಹಾನುಭಾವರ ಆದರ್ಶಗಳ ಮತ್ತು ವರ್ತನದ ಪರಿಣಾಮವು ವರ್ತಮಾನಕಾಲದ ಮೇಲೆ ಯಾವಾಗಲೂ ಆಗೇಆಗುವದು. ಶ್ರೇಷ್ಠರು ನಡೆದಂತೆ ನಡೆಯುವದು ಜನರ ಹುಟ್ಟು ಸ್ವಭಾವವು. ಮಹಾಜನರು ಹೋದ ಹಾದಿಯಿಂದ ಜನರು ಸಾಗುವದು ಸ್ವಾಭಾವಿಕವು. ಅಂತರ್ಬಾಹ್ಯಶುದ್ಧರೂ ಪರಮಾತ್ಮಪರಾಯಣರೂ ಆತ್ಮಜ್ಞಾನಿಗಳೂ ಸಮಚಿತ್ತರೂ ಆತ್ಮೌಪಮ್ಯಬುದ್ಧಿಯುಳ್ಳವರೂ ಲೋಕಹಿತದಕ್ಷರೂ ಇದ್ದವರೆ ಸಮಾಜಕ್ಕೆ ದಾರಿತೋರಲು ಸಮರ್ಥರು. ಇಂಥವರು ಸಮಾಜದ ಮುಂದೆ ಇಟ್ಟ ಆದರ್ಶಗಳು ಆದರಣೀಯವಾಗಿ ಅವು ಎಲ್ಲರಿಂದ ಅನುಕರಿಸಲ್ಪಡುವವು. ಪರಮಾತ್ಮನಿಗೆ ಸರ್ವಾರ್ಪಣವಾಡಿದ ಕರ್ಮಯೋಗಿಯ ಆದರ್ಶವನ್ನೆ ವಚನಕಾರರು ಸಮಾಜದೆದುರಿಗೆ ಇಟ್ಟಿರುವರೆಂದು ಹೇಳಬಹುದು. ಅವರ ದೃಷ್ಟಿಯಿಂದ ಈ ಸೃಷ್ಟಿಯು ಮಿಥ್ಯೆಯಿರದೆ ಸತ್ಯವಿರುವದು. ಈ ಸೃಷ್ಟಿಯಲ್ಲಿರುವವರೆಗೆ ಪರಮಾತ್ಮನೊಡನೆ ಸಮರಸವಾಗಿರುವುದೆ ಅತ್ಯಂತಶ್ರೇಷ್ಠ ನಿಲವು ಎಂದು ಅವರ ಮತವಿರುವದು. ಆದುದರಿಂದ ಪರಮಾತ್ಮಲೀಲೆಯಿಂದೊಗೆದ ಈ ವಿಶ್ವದಲ್ಲಿ ಎಲ್ಲವನ್ನು ಅವನಿಗೆಯೆ ಸಮರ್ಪಿಸಿ, ಅಂತರದಲ್ಲಿ ತತ್ಪರಾಯಣರಾಗಿ, ಬಾಹ್ಯದಲ್ಲಿ ಅವನ ಸಂಕಲ್ಪದಂತೆ ಸ್ವಕರ್ಮ ಮಾಡುತ್ತ ಪರಮಾನಂದದಲ್ಲಿರುವುದೆ ಐಕ್ಯಸ್ಥಲವೆನಿಸುವದು. ಪರಮಾತ್ಮನ

ಸ್ನೇಹ, ಸೋಟ, ಕೂಟಗಳಿಗಿಂತ ಪರಮಾತ್ಮನೊಡನೆ ಸಮರಸವಾಗಿ ಪರವಶರಾಗುವುದೆ ಶ್ರೇಷ್ಠವೆಂದು (೬೩) ವಚನಕಾರರು ಅಂದಿರುವರು. ತನು ವಿಡಿದಲ್ಲಿಯೆ ನಿತ್ಯನಿರಂಜನರೂಪನಲ್ಲಿ ಏಕರಸರಾಗಿ ಆಚರಿಸಿದರೆ ಅದೇ ನಿಜೈಕ್ಯವು. (ವ. ೬೫). ಈ ಆದರ್ಶವು ಈ ಲೋಕದ ಮತ್ತು ಪರಲೋಕದ ಧ್ಯೇಯಗಳನ್ನು ಸಮನ್ವಯಿಸುವದು, ಅಭ್ಯುದಯ ನಿಃಶ್ರೇಯಸಗಳನ್ನು ಒಮ್ಮೆಲೆ ಸಾಧಿಸುವುದು, ಕಾಮ ಮತ್ತು ಮೋಕ್ಷ ಇವೆರಡಕ್ಕೂ ಎಡೆ ಕೊಡುವದು. ಅಗಮಿಕಾರರ ಭುಕ್ತಿ ಮುಕ್ತಿ ಮಾರ್ಗವೆಂದರೆ ಇದೇ. ಇದು ಕೇವಲ ಸನ್ಯಾಸಮಾರ್ಗವೂ ಅಲ್ಲ ಸಂಸಾರಮಾರ್ಗವೂ ಅಲ್ಲ. ಸಂಸಾರದಲ್ಲಿದ್ದು ಸನ್ಯಾಸವ್ರತವನ್ನಾಚರಿಸುವ ಮಾರ್ಗವಿದು. ಬಳಸಿ ಬ್ರಹ್ಮಚಾರಿಗಳು, ಉಂಡು ಉಪವಾಸಿಗಳು, ವ್ಯವಹರಿಸಿ ನಿರ್ಲೇಪರು ಇರುವ ರಹಸ್ಯವಿದು. ಇದೇ ದೃಷ್ಟಿಯಿಂದ ಅರ್ಪಣಕ್ಕೆ ಮತ್ತು ಕಾಯಕಕ್ಕೆ ಹೆಚ್ಚಿನ ಪ್ರಾಮುಖ್ಯವನ್ನು ವಚನಕಾರರು ಕೊಟ್ಟಿರುವರು. ಮನುಷ್ಯನು ಸದೇಹ ನಿರುವನಕ ಜೀವಂತನಿರಲಿಕ್ಕೆ ಅವಶ್ಯವಿದ್ದ ಇಂದ್ರಿಯಕರ್ಮಗಳು ನಿಲ್ಲಲಾರವು. ಉಸುರಾಡಿಸುವದು, ಉಣ್ಣುವದು, ಉಡುವದು, ಮೂಸುವದು, ನೋಡುವದು, ಮಲಗುವದು, ಏಳುವದು, ಈ ಮುಂತಾದ ಕ್ರಿಯೆಗಳು ಸತತ ಹಗಲಿರುಳು ನಡೆದೇ ಇರುವವು. ಈ ನೈಸರ್ಗಿಕ ಕ್ರಿಯೆಗಳನ್ನೂ ನಾವು ಬುದ್ಧಿಪುರಸ್ಸರವಾಗಿ ಮಾಡುವ ಕರ್ತವ್ಯಕರ್ಮಗಳನ್ನೂ ನಾವು ಭೋಗಿಸುವ ಭೋಗಗಳನ್ನೂ ಅಥವಾ ಒಂದೇ ಶಬ್ದದಿಂದ ಹೇಳುವುದೆಂದರೆ ನಾವು ಆಜೀವನ ಮಾಡುತ್ತಿರುವ ಕರ್ಮವಾತ್ರವನ್ನು ಪರಮಾತ್ಮನಿಗೆ ಅರ್ಪಣಮಾಡುತ್ತಿರುವುದೆ ಅರ್ಪಣತತ್ವವು. ಅರ್ಪಣವೆಂದರೆ ಇದು ನನ್ನದಲ್ಲ ನಿನ್ನದೇ, ಪರಮಾತ್ಮನದೇ, ಎಂದು ಭಾವಿಸುವದು. ಭಕ್ತನು ಈ ತತ್ವದಂತೆ ಆಚರಿಸಿದರೆ ಅವನು ಭೋಗಿಸುವುದೆಲ್ಲ ಪ್ರಸಾದವೆನಿಸುವದು, ಅವನು ಕಲ್ಪಿಸುವುದೆಲ್ಲ ಈಶಪ್ರೇರಣೆಯೆನಿಸುವದು, ಮತ್ತು ಅವನು ಮಾಡುವುದೆಲ್ಲ ಈಶ್ವರಲೀಲೆಯೆನಿಸುವದು. ಈ ಅರ್ಪಣತತ್ವವು ಸಾಧಕನಲ್ಲಿಯ ಅಹಂಕಾರದ ಕಸವನ್ನು ಕಿತ್ತಿ ಅವನ ಮನಸಿನಲ್ಲಿ ನಿಷ್ಕಾಮ ಕರ್ಮದ ಬೀಜವನ್ನೂರುವದು. ಕಾಯಕದ ತತ್ವವು ಸಮಾಜದ ಆದರ್ಶವೆಂಬ ದೃಷ್ಟಿಯಿಂದ ಅರ್ಪಣತತ್ವದಂತೆಯೆ ಮಹತ್ವದ್ದಿರುವದು. ಮನುಷ್ಯನು ತನ್ನ ಶಕ್ತಿಯ ಉಪಯೋಗವನ್ನು ಸಮಾಜಸೇವೆಗಾಗಿ ಮಾಡಿಯೆ ತನ್ನ ಪೋಷಣೆಮಾಡಿಕೊಳ್ಳಬೇಕು ಹೊರತು ಸೋಮಾರಿತನದಿಂದ ಭೂಮಿಗೆ ಭಾರುತ್ತು ಬಾಂಧವರಿಗೆ ಭಾರನಾಗಿ ಜೀವಿಸಬಾರದು, ಎಂದು ಈ ತತ್ವವು

ಹೇಳುವದು. ಭಿಕ್ಷೆಬೇಡುವ ಅಧಿಕಾರವು ಯಾರಿಗೂ ಇಲ್ಲವೆಂದು ವಚನ ಕಾರರು ಸಾರಿರುವರು. ಈ ತತ್ವದ ಎರಡನೆಯ ಲಕ್ಷಣವೆಂದರೆ, ಯಾವದೇ ಉದ್ಯೋಗವಾಗಲಿ ಅದು ಅನೀತಿಮಯವಿಲ್ಲದಿದ್ದರೆ ಆಯಿತು, ಅದು ಮಿಕ್ಕ ಶ್ರೇಷ್ಠವೆಂದೆನಿಸುವ ಉದ್ಯೋಗಗಳಷ್ಟೆ ಪವಿತ್ರವಿರುವದು. ಈ ರೀತಿ, ಎಲ್ಲರೂ ತಮ್ಮ ಉದ್ಯೋಗಗಳನ್ನು ಭಾವಿಸಿದರೆ ಮತ್ತು ಅನ್ಯರ ಉದ್ಯೋಗ ಗಳಿಗೂ ಮಾನಕೊಟ್ಟರೆ ಉದ್ಯೋಗಗಳ ಮೂಲಕ ಹುಟ್ಟಿದ ಉಚ್ಚ ನೀಚ ಭಾವಗಳೆಲ್ಲ ನಷ್ಟವಾಗಿ ಹೋಗುವವು ಮತ್ತು ಎಲ್ಲ ಉದ್ಯೋಗಗಳು ಚನ್ನಾಗಿ ಸಾಗುವವು. ಇದಲ್ಲದೆ, ತಮ್ಮಂತೆ ಎಲ್ಲರೂ ಇರುವರು, ಅವರೂ ಪರಮಾತ್ಮನ ಅಂಶರು, ಎಂಬ ಭಾವನೆಯಿಂದ ಆದರ್ಶಪುರುಷರು ಅವರೆಲ್ಲರ ಲೇಸನ್ನೆ ಬಯಸಿ ಅದನ್ನೆ ಮಾಡುವುದರಲ್ಲಿ ತಮ್ಮ ಆಯುಷ್ಯವನ್ನು ಕಳೆಯುವರು. ಈ ರೀತಿ ವಚನಕಾರರ ಆದರ್ಶಜೀವನವು ಪರಮಾತ್ಮಾರ್ಪಿತವು, ಭಕ್ತಿಪೂರ್ಣವು, ನಿಷ್ಕಾಮಕರ್ಮನಿರತವು, ನೀತಿಮಯವು ಕಾಯಕ ಯುಕ್ತವು, ಲೋಕಹಿತದಕ್ಷವು ಇರುವದು.

೧೪೪. ವಚನಕಾರರು ಸಮಾಜದ ಮುಂದೆ ಇಟ್ಟ ಆದರ್ಶವು ಪೂರ್ಣವಾಗಿ ಆಚರಿಸಲಿಕ್ಕೆ ಕಠಿಣ ಕಂಡರೂ ಆ ಹಾದಿಯಿಂದ ಹೋಗಲಾ ರಂಭಿಸಲು ಎಲ್ಲರಿಗೂ ಬಹಳ ಸುಲಭವಿರುವದು. ಯಾಕಂದರೆ, ಯಾರಾರು ಎಲ್ಲೆಲ್ಲಿರುವರೊ ಅಲ್ಲಲ್ಲಿಯೆ ಈ ಸಾಧನಮಾರ್ಗವನ್ನು ಪ್ರಾರಂಭಿಸಲು ಅವರಿಗೆ ಅನುಕೂಲವಿರುವದು. ಈ ಆದರ್ಶವು ಅತಿಶಯ ಉಚ್ಚವಾದದ್ದು ಎಂಬಲ್ಲಿ ಏನೂ ಸಂಶಯವಿಲ್ಲ. ಹಾವಿನ ಹಲ್ಲ ಕಳೆದು ಹಾವನ್ನಾಡಿಸ ಬಂದರೆ ಅದೇ ಲೇಸು. ಹಾಗೆ ಕಾಯದ ಸಂಗವ ವಿಪರಿಸಬಂದರೆ ಕಾಯದ ಸಂಗವೆ ಲೇಸು. ಯಾಕಂದರೆ, ಯಾರಿಗೆ ದೇವನೊಲಿದಿರುವನೊ ಅವರು ಕಾಯಗೊಂಡಿದ್ದರೇಸು ಕುಂದು (೧೪೧)? ಶರಣರು ಈ ಸಂಸಾರ ಪ್ರಪಂಚ ದೊಳಗಿದ್ದರೂ ಅವರಿಗೆ ಅದು ಹೊದ್ದದು. ಮೀನಗಳು ನೀರಲ್ಲಿ ಸುಳಿ ದಾಡಿದರೂ ನೀರು ಅವುಗಳ ಮೂಗಿಸತ್ತ ಹೋಗವು (೧೪೨). ಇದರ ಗುಟ್ಟನ್ನು ಶರಣರೇ ಬಲ್ಲರು. ಆದರ್ಶಪುರುಷರು ತನುವಿನಲ್ಲಿ ನಿರ್ಮೋ ಹರು, ಮನದಲ್ಲಿ ನಿರಹಂಕಾರಿಗಳು, ಪ್ರಾಣದಲ್ಲಿ ನಿರ್ಭಯರು, ಚಿತ್ತದಲ್ಲಿ ನಿರಪೇಕ್ಷರು, ವಿಷಯದಲ್ಲಿ ಉದಾಸೀನರು, ಭಾವದಲ್ಲಿ ದಿಗಂಬರರು, ಜ್ಞಾನದಲ್ಲಿ ಪರಮಾನಂದಿಗಳು (೨೨೨). ಹೀಗೆ ಇದ್ದು ಅವರು ಪರಮಾತ್ಮ ಸಂಕಲ್ಪದಂತೆ ಈ ಲೋಕದಲ್ಲಿ ಜನಹಿತದ ಕಾರ್ಯವನ್ನು ಮಾಡುತ್ತ ತಮ್ಮ ಆಯುಷ್ಯವನ್ನು ಕಳೆಯುವರು. ಅವರು ಮಾಡುವ ಪೂಜೆಯ ಪರಿಯು

ವಿಲಕ್ಷಣವು. ಅವರು ದೇವರಿಗೆ ಹೂ ಏರಿಸುವರು. ಆದರೆ ಅವು ಪಾರ್ಥಿವ ಪುಷ್ಪಗಳಲ್ಲ. ಸರ್ವ ಜೀವಂಗಳಲ್ಲಿ ಹಿಂಸೆಯ ಮಾಡದಿಪ್ಪುದೆ ಅವರ ಪ್ರಥಮ ಪುಷ್ಪವು. ಸರ್ವೇಂದ್ರಿಯಗಳನ್ನು ಸಂಯಮಿಸಿಕೊಂಡಿರುವುದೆ ದ್ವಿತೀಯ ಪುಷ್ಪವು. ಸರ್ವಾಹಂಕಾರವಳಿದು ಶಾಂತರಾಗಿರುವುದೆ ತೃತೀಯಪುಷ್ಪವು. ಸರ್ವಚಾಂಚಲ್ಯರಹಿತರಾಗಿ ಮನವು ನಿರ್ವ್ಯಾಪಾರವಾಗಿರಬಲ್ಲರೆ ಅದು ನಾಲ್ಕನೆಯ ಪುಷ್ಪವು. ದುರ್ಭಾವಗಳಡಗಿ ಸದ್ಭಾವಗಳು ತುಂಬಿದರೆ ಅದು ಐದನೆಯ ಪುಷ್ಪವು. ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಗಳಿರಲು ಬಂದರೆ ಅದು ಆರನೆಯ ಪುಷ್ಪವು. ಅನೃತವ ಬಿಟ್ಟು ಸತ್ಯವ ನುಡಿದರೆ ಅದು ಏಳನೆಯ ಪುಷ್ಪವು. ಸಕಲ ಪ್ರಪಂಚವಳಿದು ಪರಮಾತ್ಮಜ್ಞಾನಸಂಪನ್ನ ರಾಗಿರಬಲ್ಲರೆ ಅದು ಅಷ್ಟಮಪುಷ್ಪವು (೨೨೯). ಹೀಗೆ ಅಷ್ಟದಳ ಕಮಲ ದಿಂದ ಅವರು ಹೃದಯಸ್ಥ ಈಶ್ವರನನ್ನು ಪೂಜಿಸುವರು. ಈ ಪ್ರಕಾರದ ದಿವ್ಯ ಪೂಜೆಯವರದು! ಹೀಗೆ ಇರುವ ಶರಣರಿಗೆ ಮಂತ್ರಪರ್ವತಾದಿಗಳ ಅವಶ್ಯಕತೆಯಿಲ್ಲ, ಜನ ನಿರ್ಜನವೆಂಬ ಭೇದವಿಲ್ಲ. ಯಾಕಂದರೆ, ಅವರು ಎಲ್ಲಿದ್ದರೂ ಸಮಾಧಾನಿಗಳು, ಸ್ಥಿತಪ್ರಜ್ಞರು. ಅವರಿಗೆ ಚಿಂತೆ ಧ್ಯಾನ ಪೌನಾದಿಗಳ, ಜಪತಪಗಳ ಅವಶ್ಯಕತೆ ಕೂಡ ಇಲ್ಲ. ಯಾಕಂದರೆ, ಅವರು ಮಾಡುತ್ತಿರುವುದೆಲ್ಲ ತಪವೇ ಸೈ. ಅವರು ಮಾತಾಡಿದ್ದೆಲ್ಲ ಪೌನವೇ ಇರುವದು, ಮತ್ತು ಅವರು ಕಲ್ಪಿಸಿದ್ದೆಲ್ಲ ಧ್ಯಾನವೇ ಇರುವದು (೫೬೪). ಇಂಥವರು ದೇವರಿಗೆ, ನೀವು ಹೇಳಿದ ಮಣಿಹವ ಮಾಡುತ್ತಿರುವೆವು. (ಶೂ. ೩೯೫), ಎಂದು ಸ್ವಕರ್ಮದಲ್ಲಿ, ಸ್ವಕರ್ತವ್ಯದಲ್ಲಿ ಆನಂದದಿಂದ ರತ ರಿರುವರು. ಈಬಗೆಯ ಜೀವನ್ಮುಕ್ತ ಸ್ಥಿತಿಯಲ್ಲಿದ್ದು ಅವರು ಕೊನೆಗೆ, ಗಾಳಿಯಲ್ಲಿ ಸುಳಿಗಾಳಿ ಅಡಗಿದಂತೆ, ನಭದೊಳಿಸೆದ ತಡಿಲ್ಲತೆ ನಭದೊಳು ಹೊಡೆದಡಗಿದಂತೆ, ಉದಕದಿಂದಾದ ವಾರಿಬಿಲೆ ಆ ಉದಕದೊಳಡಗಿದಂತೆ, ಪಾಲೋಳ್ಪಾಲು ಬೆರಸಿದಂತೆ, ಚಂದ ನೋಳ್ಕಳೆಯುದಯಿಸಿ ಚಂದ ನೋಳ್ಕೆರಸಿದಂತೆ, ಪರಮಾತ್ಮನಲ್ಲಿ ಒಂದಾಗುವರು. (ಶೂ. ೩೯೬).

೧೪೫. ಇದುವರೆಗೆ ವಿವರಿಸಿದ ವಚನಕಾರರ ನೈತಿಕ ಮತ್ತು ಸಾಮಾಜಿಕ ವಿಚಾರಗಳನ್ನೂ ಅವರು ಸಮಾಜದ ಮುಂದೆ ಇಟ್ಟ ಆದರ್ಶ ಗಳನ್ನೂ ನೋಡಿದರೆ ಅವರು ಯಾವ ಬಗೆಯ ಸಮಾಜಸಂಘಟನೆಯನ್ನು ಮಾಡಬೇಕೆನ್ನುತ್ತಿದ್ದರು, ಎಂಬುದು ಸ್ಪಷ್ಟವಾಗುವದು. ಅವರು ಸಂಸಾರ ವನ್ನು ಬಿಡಹೇಳದೆ ಆತ್ಮವಿಕಾಸವಾಗುವಂತೆ ಅದನ್ನು ಮಾಡಬೇಕೆಂದು ಉಪದೇಶಿಸಿದರು. ಪ್ರಪಂಚವನ್ನು ತೊರೆಯಿರೆಂದು ಉಪದೇಶಿಸದೆ ಪರ

ಮಾರ್ಗವೆ ಪ್ರಧಾನವೆಂದು ಅವರು ಹೇಳಿದರು. ಈ ರೀತಿ, ವಚನಕಾರರಿಗೆ ಇಷ್ಟವಾದ ಸಮಾಜಸಂಘಟನೆಯಲ್ಲಿ ಪ್ರತಿಯೊಬ್ಬನು ಮೋಕ್ಷಾರ್ಥಿಯಾಗಿರುವನು. ಪರಮಾತ್ಮನೊಡನೆ ಸಮರಸವಾಗಿರುವುದೆ ಮೋಕ್ಷವೆನಿಸುವುದರಿಂದ ಸಾಧಕನು ಈ ಮೋಕ್ಷವನ್ನು ಎಲ್ಲಿಯಾದರೂ ಸಮಾಜದಿಂದ ಸಿಡಿದುಹೋಗಿ ತನಗೊಬ್ಬನಿಗಾಗಿಯೆ ಶೋಧಿಸುತ್ತ ಕೂಡದೆ ಸಮಾಜದಲ್ಲಿಯೆ ಇದ್ದು ಜೀವನ್ಮುಕ್ತಸ್ಥಿತಿಯನ್ನು ಪ್ರಾಪ್ತಮಾಡಿಕೊಳ್ಳಲು ಅವನು ಇಚ್ಛಿಸುವನು. ಈ ಸಮಾಜವೆಂಬುದಾದರೂ ಪರಮಾತ್ಮನಿರ್ಮಿತವೆ ಇರುವುದರಿಂದ ಇದು ಪರಮಾತ್ಮಸಾಕ್ಷಾತ್ಕಾರಮಾಡಿಕೊಡಲಿಕ್ಕೆ ಸಹಾಯಭೂತವಾಗಬಲ್ಲದು. ತಾನಿರುವ ಸಮಾಜವೆ ಸಾಧನಭೂಮಿಯಾಗಬೇಕೆಂದೂ ಸಮಾಜದಲ್ಲಿರುವ ವಿವಿಧ ವ್ಯಕ್ತಿಗಳೆಲ್ಲ ತನ್ನ ಅಧ್ಯಾತ್ಮಬಂಧುಗಳಾಗಬೇಕೆಂದೂ ಅವನು ಹವಣಿಸುವವನಾದ್ದರಿಂದ ಅವರೆಲ್ಲರೂ ಸಮಸಮಾನರೆಂದು ಅವನು ಭಾವಿಸುವನು. ಅವರು ಯಾವದೇ ಜಾತಿಯವರಿರಲಿ, ಯಾವದೇ ಕುಲದಲ್ಲಿ ಹುಟ್ಟಿರಲಿ, ಯಾವದೇ ಉದ್ಯೋಗವನ್ನು ಮಾಡುತ್ತಿರಲಿ, ಅವರೆಲ್ಲರೂ ಮೋಕ್ಷಬಂಧುಗಳು. ಯಾರು ಪರಮಾರ್ಥವನ್ನು ಹೀಯಾಳಿಸಿಬಿಡುವರೊ ಅವರು ಮಾತ್ರ ಭವಿಗಳು ಹೊರತು ಮಿಕ್ಕವರೆಲ್ಲರು ಭಕ್ತರು. ಸ್ತ್ರೀಯರೆಲ್ಲರು ಮಾತೆಯ ಸಮಾನರು ಅಥವಾ ಜಗನ್ಮಾತೆಯಾದ ಪ್ರತ್ಯಕ್ಷ ಮಹಾದೇವಿಗೆ ಸಮಾನರು. ಈ ಸಮಾಜದಲ್ಲಿಯ ಪ್ರತಿಯೊಬ್ಬನು ತನ್ನ ಪಾಲಿಗೆಬಂದ ಕಾಯಕವನ್ನು ಮಾಡಿ, ಸಮಾಜದ ಋಣದಿಂದ ಮುಕ್ತನಾಗಿ ಹೊಟ್ಟೇತುಂಬಿಕೊಳ್ಳುವನು, ಮತ್ತು ತನ್ನ ಶಕ್ತಿಯ ಸದುಪಯೋಗವನ್ನು ಮಾಡುವನು. ಪ್ರತಿಯೊಬ್ಬನು ಸುಬದ್ಧವಾದ ನೀತಿನಿಯಮಗಳನ್ನು ಪಾಲಿಸಬೇಕೆಂದು ಅವುಗಳನ್ನು ವಚನಕಾರರು ವಿವರವಾಗಿ ಹೇಳಿರುವರು. ನೀತಿಯು ಸಮಾಜದ ಆಧಾರಸ್ತಂಭವಿರುವದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನೀತಿನಿಯಮಗಳಲ್ಲು ಸತ್ಯವನ್ನು ನುಡಿಯಬೇಕು, ಹಿಂಸೆಯನ್ನು ಮಾಡಬಾರದು, ಕಳವುಮಾಡಕೂಡದು, ಬ್ರಹ್ಮಚರ್ಯದಿಂದಿರಬೇಕು, ಅಹಂಕಾರವನ್ನು ತೊರೆಯಬೇಕು, ಆಶೆಯನ್ನು ಬಿಡಬೇಕು, ಇಂದ್ರಿಯಗಳನ್ನು ಸಂಯಮಿಸಬೇಕು, ಎಂಬವೇ ಮುಖ್ಯವಾದವುಗಳು. ವಚನಕಾರರು ಉಪದೇಶಿಸಿದ ಮುಕ್ತಿಪಂಥದಲ್ಲಿ ಎಲ್ಲರಿಗೂ ಮುಕ್ತದ್ವಾರವಿರುವುದರಿಂದ, ನಾವು ಇದನೊಲ್ಲೆವು, ಎಂಬುವವರೆ ಪತಭಾಗಿಗಳು ಹೊರತು ಅವರು ವಿಶ್ವಕ್ಕೆಯೆ ಆಮಂತ್ರಣವನ್ನು ಕೊಟ್ಟಿರುವರು! ಒಂದೇ ದೈವತ, ಒಂದೇ ಕುರುಹು, ಒಂದೇ ಮಂತ್ರ,

ಒಂದೇ ಆಚಾರ, ಇವುಗಳಿಂದ ಏಕಸೂತ್ರದಲ್ಲಿ ಬದ್ಧವಾದ ಮತ್ತು ಸಮತೆಯ ತಳಹದಿಯ ಮೇಲೆ ರಚಿಸಲ್ಪಟ್ಟ ಸಮಾಜವನ್ನು ಏರ್ಪಡಿಸಲು ಅವರು ಯತ್ನಿಸಿದರು. ಈ ಅವರ ಶ್ರೇಷ್ಠ ಪ್ರಯತ್ನವು ವಚನಶಾಸ್ತ್ರದಲ್ಲಿ ಉತ್ತಮರೀತಿಯಿಂದ ಪ್ರತಿಬಿಂಬಿತವಾಗಿದೆ. ಬಸವಾದಿ ಪ್ರಮಥರು ತಮ್ಮ ಜೀವಮಾನದಲ್ಲಿ ಈ ಪ್ರಯತ್ನವನ್ನು ಎಷ್ಟೋ ಮಟ್ಟಿಗೆ ಯಶಸ್ವಿಯನ್ನಾದರೂ ಮಾಡಿದರು.

---

೮. ವಚನಕಾರರೂ ಅವರಲ್ಲಿ ಹಲವರ ವಿಶೇಷಗಳೂ

(೧೪೬) ವಚನಕಾರರ ಚರಿತ್ರಗಳನ್ನು ನೋಡುವ ದೃಷ್ಟಿ. (೧೪೭-೧೪೮) ಅವರು ಯಾರು, ಅವರ ಸಾಮಾನ್ಯ ವರ್ಣನೆ. (೧೪೯) ಸ್ತ್ರೀ ವಚನಕಾರರು ಅಥವಾ ವಚನಕಾರ್ತಿಯರು. (೧೫೦) ವಚನಕಾರರ ಆದಿಯು. (೧೫೧) ಅನುಭವಮಂಟಪವು. (೧೫೨) ವಚನಕಾರರ ಸಂಖ್ಯೆ, ಮುದ್ರಿಕೆ, ಮುಂತಾದವುಗಳು. (೧೫೩) ಹಲವು ವಚನಕಾರರ ವಿಶೇಷಗಳು – ವಚನಕಾರ್ತಿಯರು ಮತ್ತು ವಚನಕಾರರು. (೧) ಮುಕ್ತಾಯಕ್ಕ. (೨) ಮಹಾದೇವಿಯಮ್ಮ. (೩) ಮಹಾದೇವಿಯಕ್ಕ. (೪) ಲಕ್ಕಮ್ಮ. (೫) ಆದಯ್ಯ. (೬) ಸಕಲೇಶ ಮಾದರಸ. (೭) ಹಡಪದಪ್ಪಣ್ಣ. (೮) ಸಂಗನಬಸವೇಶ್ವರ. (೯) ಘನಲಿಂಗ. (೧೦) ಸಿದ್ಧರಾಮಯ್ಯ. (೧೧) ಚನ್ನಬಸವಣ್ಣ. (೧೨) ಅಲ್ಲಮಪ್ರಭು. (೧೩) ಬಸವಣ್ಣ. (೧೪) ಮೋಳಿಗೆಯ ಮಾರಯ್ಯ.

೧೪೬. ಹೋದ ಏಳು ಪ್ರಕರಣಗಳಲ್ಲಿ ಮುಖ್ಯವಾಗಿ ವಚನಗಳನ್ನು ಕುರಿತು ಬರೆದಿದ್ದೇವೆ. ಇನ್ನು ಎಲ್ಲ ವಚನಕಾರರಿಗೆ ಸಾಮಾನ್ಯವಾದ ಕೆಲವು ಮಾತುಗಳನ್ನು ಮೊದಲು ಹೇಳಿ ಅವರಲ್ಲಿ ಹಲವರ ವೈಶಿಷ್ಟ್ಯಗಳನ್ನು ಈ ಪ್ರಕರಣದಲ್ಲಿ ವಿವರಿಸುವ ವಿಚಾರವಿದೆ. ಈ ವಿಷಯವನ್ನು ಸಂಬಂಧಿಸಿ ಇಲ್ಲಿ ನಾವು ಎಷ್ಟು ಬರೆಯಬೇಕೆಂದು ಇಚ್ಛಿಸುವೆವೊ ಅಷ್ಟು ಬರೆಯುವದು ಸಾಧ್ಯವಿಲ್ಲ. ಯಾಕಂದರೆ, ಸ್ವತಂತ್ರ ವಿಚಾರಮಾಡುವಷ್ಟು ವಚನಸಂಗ್ರಹವು ಪ್ರಸಿದ್ಧವಾಗಿದ್ದರೂ ವಚನಕಾರರ ಚರಿತ್ರದ ಸಂಗತಿಗಳು ತೀರ ಕಡಿಮೆ ಗೊತ್ತಾಗಿವೆ. ಅವರ ಚರಿತ್ರಗಳು ಇನ್ನೂ ಸಂಶೋಧನದ

ವಿಷಯಗಳಾಗಿವೆ. ಅವರವರ ಚರಿತ್ರೆಗಳಿಗಿಂತ ಅವರ ವಚನಗಳೇ ಜನರಿಗೆ ಹೆಚ್ಚು ಮಹತ್ವವುಳ್ಳವುಗಳು. ಹೀಗಿದ್ದರೂ ವಚನಗಳೊಡನೆ ಅವರ ಚರಿತ್ರೆಗಳೂ ಗೊತ್ತಾದರೆ ಆ ವಚನಗಳ ಅಭ್ಯಾಸಕ್ಕೆ ಹೆಚ್ಚು ಅನುಕೂಲವಾಗುವದು. ಬರೆದವರು ಹೇಳಹೆಸರಿಲ್ಲದೆ ಹೋಗಿ ಅವರ ಬರಹಗಳು ಶತಕಾನು ಶತಕಗಳ ವರೆಗೆ ಉಳಿಯುವದು ಅಷ್ಟೊಂದು ವಿರಳವಾದ ಸಂಗತಿಯಲ್ಲ. ಜಗತ್ತಿನಲ್ಲಿಯ ಅನೇಕ ಶ್ರೇಷ್ಠ ಲೇಖಕರ ಹಾಗೂ ಸಾಧುಸತ್ಪುರುಷರ ಚರಿತ್ರೆಗಳು ನಸುಗತ್ತಲೆಯಲ್ಲಿ ಮಸಕುಮಸಕಾಗಿ ಕಾಣುವ ಪದಾರ್ಥಗಳಂತೆ ತೀರ ಅಸ್ಪಷ್ಟವಿದ್ದರೂ ಅವರ ಸುಧಾಮಯ ವಾಣಿಯು ನಿರಭ್ರ ಆಕಾಶದಲ್ಲಿ ಬೆಳಗುವ ಜ್ಯೋತಿಗಳಂತೆ ಈಗಲೂ ಮಾನವಕುಲಕ್ಕೆ ನಿಚ್ಚಳವಾದ ಹಾದಿಯನ್ನು ತೋರುತ್ತಿರುವದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ಲೇಟೋ (Plato) ಅರಿಸ್ಟಾಟಲ್, (Aristotle) ಮುಂತಾದವರ ಬರಹಗಳು ಇಷೀ ಪಾಶ್ಚಾತ್ಯ ತತ್ವಜ್ಞಾನದ ಅಡಿಗಲ್ಲಾಗಿದ್ದರೂ ಅವರ ಚರಿತ್ರೆಗಳು ಭೂತಕಾಲದ ಕರೆತೆರೆಯ ಹಿಂದೆ ಮರೆಯಾಗಿ ಹೋಗಿವೆ. ಆರುಣಿ, ಯಾಜ್ಞವಲ್ಕ್ಯ ಮುಂತಾದ ಋಷಿವರ್ಯರು ಉಪನಿಷತ್ತಿನಲ್ಲಿಯ ತತ್ವಜ್ಞಾನದ ಜನಕರು. ಆದರೆ ಅವರ ಚರಿತ್ರೆಗಳ ಬಗ್ಗೆ ಸಹ ನಮಗೆ ಯಾವ ವಿಶೇಷ ಕಲ್ಪನೆಯೂ ಇಲ್ಲ. ದೇಹವಳಿದ ಬಳಿಕ ಅಜರಾಮರ ಆತ್ಮನು ಯಾವ ರೀತಿ ಚಿನ್ಮಂಡಲದಲ್ಲಿ ವಿರಾಜಿಸುವನೊ ಹಾಗೆ ಈ ಮಹಾತ್ಮರು ಕಾಲವಶರಾದ ಬಳಿಕ ಅವರ ವಾಣಿರೂಪ ಆತ್ಮವು ಶಬ್ದಸೃಷ್ಟಿಯಲ್ಲಿ ನಿಂತು ಮಾನವರಿಗೆ ಮಾರ್ಗದರ್ಶಕವಾಗಿರುವದು. ಇಂಥವರ ಅಖಂಡ ಚರಿತ್ರವು ದೊರೆಯದಿದ್ದರೂ ಇವರು ಬಿಟ್ಟುಹೋದ ಲೇಖಸಂಗ್ರಹವನ್ನು ಬೆಳಗುವಷ್ಟು ಇವರ ಚರಿತ್ರಭಾಗವು ಗೊತ್ತಾದರೂ ಇವರ ಉಪದೇಶವು ಒಪ್ಪುಹಾಕಿದಂತೆ ಮತ್ತಷ್ಟು ಶೋಭಿಸುವದು. ದುರ್ದೈವದಿಂದ ಇಂಥ ಮಹನೀಯರ ಚರಿತ್ರೆಗಳ ಕಡೆಗೆ ಲಕ್ಷಗೊಡುವ ಪದ್ಧತಿಯು ಮೊದಲು ವಿಶೇಷ ಪ್ರಚಾರದಲ್ಲಿದ್ದಿಲ್ಲ. ಪಾಡಿಕೆಯಾಗಿ, ಕಾಲಾಂತರದಿಂದ ಇಂಥ ಮಹಾನುಭಾವರ ಚರಿತ್ರದ ಸುತ್ತಲು ಪವಾಡಗಳ ಪಡಿಸೆಳಲುಬಿದ್ದು ಜನರಿಗೆ ಪರಂಪರೆಯಿಂದ ಗೊತ್ತಿದ್ದ ಒಂದೆರಡು ಸಂಗತಿಗಳು ಕೂಡ ಸಂಶಯಕ್ಕೆ ಈಡಾಗುತ್ತಿವೆ. ಹೀಗಾಯಿತೆಂದರೆ, ಜನರು ಅವರನ್ನು ಸತ್ಯಸೃಷ್ಟಿಯೊಳಗಿಂದ ಎತ್ತಿ ಕಲ್ಪನಾ ಸೃಷ್ಟಿಯೊಳಗೆ ಇಡುವರು ಮತ್ತು ಅವರನ್ನು ದೇವದೇವತೆಗಳ ಜೋಡಿಗೆ ಕೂಡಿಸಿ, ಅವರು ಬರಿಯ ಅಜ್ಞರಿಗೆ ಕಾರಣರು, ಪೂಜಾರ್ಹರು, ಹೊರತು ಅನುಕರಣಕ್ಕೆ ಅಸಾಧ್ಯರು, ಎಂದು ತಿಳಿಯಲಾರಂಭಿಸುವರು! ಅವರಲ್ಲಿ

ವಿಶೇಷ ಶ್ರೇಷ್ಠರಿದ್ದವರು ಅವತಾರಪದವಿಯನ್ನು ಹೊಂದುವರು ಮತ್ತು ಸಾಧಾರಣರು ಆ ಅವತಾರಿಯ ಅವತಾರಕಾರ್ಯಪೂರ್ತಿಗಾಗಿ ಜನ್ಮವೆತ್ತಿದ ಅನ್ಯದೇವತೆಗಳೆಂದು ಪ್ರಸಿದ್ಧರಾಗುವರು. ಹೀಗಾಗಿ ಯಾರ ಚರಿತ್ರವು ಮಾನವಮಾತ್ರರಿಗೆ ಪ್ರೇರಕವೂ ಪ್ರೋತ್ಸಾಹಕರವೂ ಅನುಕರಣೀಯವೂ ಆಗಬೇಕೊ ಅದು ಬರಿಯ ವಿಸ್ಮಯಕ್ಕೂ ಮನುಷ್ಯನ ದೌರ್ಬಲ್ಯದ ಎಚ್ಚರವನ್ನು ಸತತ ಜಾಗ್ರತವಿಡಲಿಕ್ಕೂ ಕಾರಣವಾಗುವದು! ಇಲ್ಲಿ ನಾವು ಅವರ ಚರಿತ್ರೆಗಳಲ್ಲಿಯ ಅಂಥ ಚಮತ್ಕಾರ ಭಾಗವನ್ನು ಪೂರ್ಣ ಬಿಟ್ಟು ಆಯಾ ವಚನಕಾರರ ವಚನಗಳು ಹೆಚ್ಚು ಜನ್ಯಾಗಿ ತಿಳಿಯಲಿಕ್ಕೆ ಎಷ್ಟು ಅವಶ್ಯವೊ ಅಷ್ಟೇ ಅವರ ಚರಿತ್ರಭಾಗವನ್ನು ಉಪಯೋಗಿಸುವವರಿದ್ದೇವೆ. ಬಹಳೇ ಸ್ವಲ್ಪ ಚರಿತ್ರೆಗಳು ಉಪಲಬ್ಧವಿರುವುದರಿಂದ ಹೀಗೆ ಮಾಡಲಿಕ್ಕೆ ನಮಗೆ ವಿಶೇಷ ತೊಂದರೆಯೂ ಇಲ್ಲ. ಸದ್ಯಕ್ಕೆ ಪೂರ್ಣ ಚರಿತ್ರೆಗಳು ಸಿಕ್ಕದಿದ್ದರೂ ಮುಂದೆ ಅವರವರ ಚರಿತ್ರೆಗಳು ಶೋಧಿಸಲ್ಪಟ್ಟ ಬಳಿಕ ಸಹ ಯಾವ ರೀತಿ ಆ ಚರಿತ್ರೆಗಳನ್ನು ಉಪಯೋಗಿಸಬೇಕು ಎಂಬುದರ ರೂಪರೇಖೆಯನ್ನಾದರೂ ಇಲ್ಲಿ ತೋರಿಸಿದಂತಾಗುವದು, ಎಂಬ ವಿಚಾರದಿಂದ ನಾವು ಈ ಕಾರ್ಯವನ್ನು ಇಲ್ಲಿ ಕೈಕೊಂಡಿರುತ್ತೇವೆ.

೧೪೭. ವಚನಗಳೆಂದರೇನು, ಇದರ ಊಹಾಪೋಹವು ಈ ಪೊದಲೆ ಆಗಿಹೋಗಿದೆ. ಈಗ ಆ ವಚನಗಳನ್ನು ಯಾರು ಬರೆದರೊ ಅವರನ್ನು ಕುರಿತು ಅಂದರೆ ವಚನಕಾರರನ್ನು ಕುರಿತು ವಿಚಾರಿಸಬೇಕಾಗಿದೆ. ವಚನಗಳೆಂದರೆ ಅಮೃತವಾಣಿ ಇದ್ದಂತೆ. ಹಾಲ ತೊರೆಗೆ ಬೆಲ್ಲದಂತಹ ಕೆಸರು, ಸಕ್ಕರೆಯಂತಹ ಮಳಲು, ತವರಾಜದಂತಹ ತೆರೆನೊರೆಗಳಿದ್ದರೆ ಅದು ಹೇಗೆ ಉತ್ತಮೋತ್ತಮವೊ ಹಾಗೆ ಆದ್ಯರ ವಚನಗಳು ಅನುಭಾವ, ಸ್ಫೂರ್ತಿ, ನಡೆ-ನುಡಿಗಳ ಮೇಳ, ಮತ್ತು ಸುಲಭಶೈಲಿ ಇವೆಲ್ಲವುಗಳ ಸಂಗಮಸ್ಥಾನವಾಗಿವೆ (೪೬೬). ಶುದ್ಧ ಆಚಾರವಿಚಾರಗಳನ್ನರಿಯಲು ಅಥವಾ ಅವು ತಪ್ಪಿದರೆ ಅವುಗಳನ್ನು ತಿದ್ದಲು ವಚನಗಳನ್ನೆ ನೋಡತಕ್ಕದ್ದು. ಯಾಕಂದರೆ ಶರಣರ ಈ ವಚನಗಳು ಮೋಕ್ಷದ ಬೀಡು, ದೇವರ ನಾಡು, ಮತ್ತು ಮಾಯೆಯ ಕೇಡು ಇರುವವು (೪೬೭). ದೀರ್ಘಸಾಧನದಿಂದ ಮತ್ತು ಗುರುದೇವರ ಕೃಪಾಪ್ರಸಾದದಿಂದ ಶರಣರ ಅಂತಃಕರಣದಲ್ಲಿ ಉಂಟಾದ ಅನುಭಾವವೆ ಇವುಗಳ ಉಗಮಸ್ಥಾನವು. ಆ ಅನುಭಾವವು ಶಬ್ದ ಮೂರ್ತಿಯಾಗಿ ಯಾರ ಅಂತರಂಗದಲ್ಲಿ ಒಡಮೂಡಿ ಹೊರದೋರಿತೊ ಅವರೇ ವಚನಕಾರರು. ಅವರು ಅನುಭಾವಿಗಳು, ಸಾಕ್ಷಾತ್ಕಾರಿಗಳು,

ಸತ್ಯವನ್ನು ಸಂದರ್ಶಿಸಿದವರು. ಅವರು ಆದ್ಯರು, ಪುರಾತರು, ಪುರಾತನರು, ಶರಣರು ಎಂಬ ಹೆಸರುಗಳಿಂದಲೂ ವಚನಗಳಲ್ಲಿ ಎಷ್ಟೋ ಸಾರೆ ಕರೆಯಲ್ಪಟ್ಟಿರುವರು. ಒಮ್ಮೊಮ್ಮೆ, ಭಕ್ತರು ಎಂಬ ಅಭಿಧಾನವೂ ಅವರ ಬಗ್ಗೆ ಉಪಯೋಗಿಸಲ್ಪಟ್ಟಿರುವದು. ಇವರಿಗೆ ಸಾಧುಗಳು, ಸತ್ಪುರುಷರು, ಸಂತರು, ಎಂದೂ ಅನ್ನಬಹುದು. ಈ ಎಲ್ಲ ಹೆಸರುಗಳಲ್ಲಿ ಶರಣರು ಎಂಬ ಹೆಸರೇ ಅವರಿಗೆ ವೆಚ್ಚು ಶೋಭಿಸುವದು ಮತ್ತು ಅದು ಅನ್ವರ್ಥಕವಿರುವದು. ಅವರು ದೇವರಿಗೆ ಸಂಪೂರ್ಣ ಶರಣಾಗತರಾದವರು, ಅವನಿಗೆ ಸರ್ವಾರ್ಪಣ ಮಾಡಿದವರು, ಅನನ್ಯನಾಗಿ ತಮ್ಮ ತನುಮನಧನಗಳನ್ನು, ಕಾಯ ಪ್ರಾಣ ಭಾವಗಳನ್ನು ದೇವರ ಚರಣಕ್ಕೆ ಒಪ್ಪಿಸಿದವರು. ವಚನಕಾರರು ಈ ಹೆಸರನ್ನೆ ಹೆಚ್ಚಾಗಿ ಉಪಯೋಗಿಸಿರುವರು. ಅಯ್ಯ, ನೀನಿಲ್ಲದಿದ್ದರೆ ಎನಗೆ ಮುನ್ನ ನಾಮರೂಪುಂಟೆ, ಎಂದು ಕೇಳಿ, ನೀ ಮಾಡಲಾನಾದೆ ನಯ್ಯ, ಎಂದು ತಮ್ಮ ಆಗುಹೋಗುಗಳೆಲ್ಲ ಅವನಿಂದಲೆ, ಎಂಬುದನ್ನು ಅವರು ವ್ಯಕ್ತಗೊಳಿಸುವರು (ಹ. ೬೭). ಶರಣರೆಂದರೆ ನಡೆನುಡಿಯುರಿದು ಏಕವಾಗಿ ತಾವು ದೇವಸ್ವರೂಪರಾದವರು. ಅವರು ಬರಿಯ ಓದುವವರಲ್ಲ ಬರೆಯುವವರಲ್ಲ, ಅವರು ವಿಶ್ವದ ಭೇದಾದಿಭೇದಗಳನರಿದು ದೇವರಲ್ಲಿ ತೀವ್ರ ಸಾಧನೆಯ ಮಾಡುವ ಜಿತಾತ್ಮರು (ಹ. ೫೬). ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಇವರು ದೊಡ್ಡ ಕ್ರಾಂತಿಯನ್ನುಂಟುಮಾಡಿದರೆನ್ನಬಹುದು, ದಕ್ಷಿಣದಲ್ಲಿ ಆಳ್ವಾರ್ ಮತ್ತು ಅರಿಪರ್ ಎಂಬವರು ಸಾಮಾನ್ಯ ಜನಸಮಾಜದಲ್ಲಿ ಧರ್ಮಜಾಗ್ರತಿಯನ್ನುಂಟುಮಾಡಲಿಕ್ಕೂ ಅವರೆಲ್ಲರಿಗೂ ದೀಕ್ಷೆಕೊಟ್ಟು ಮುಕ್ತಿಮಾರ್ಗವನ್ನು ತೋರಿಸಿ ಅವರಲ್ಲಿ ಧರ್ಮೋತ್ಸಾಹವನ್ನು ತುಂಬಲಿಕ್ಕೂ ಕಾರಣರಾದಂತೆ ಈ ಕರ್ನಾಟಕದಲ್ಲಿ ಅದೇ ಕಾರ್ಯವನ್ನು ಕೈಗೂಡಿಸಲಿಕ್ಕೆ ವಚನಕಾರರು ಕಾರಣರಾದರು. ಅವರೇನು ಒಂದು ಹೊಸ ತತ್ವಜ್ಞಾನವನ್ನು ನಿರ್ಮಾಣಮಾಡಲಿಲ್ಲ ಅಥವಾ ಭಾಷ್ಯಗಳನ್ನು ಬರೆದು ತಮ್ಮ ಜ್ಞಾನದೀಪ್ತಿಯಿಂದ ಜಗತ್ತಿನ ಕಣ್ಣುಗಳನ್ನು ಕುಕ್ಕಿಸಲಿಲ್ಲ. ಶೈವಾಗಮಗಳು ಪ್ರತಿಪಾದಿಸಿದ ತತ್ವಜ್ಞಾನ ಮತ್ತು ಆಚಾರಧರ್ಮ ಇವುಗಳನ್ನೆ ಆಚರಣೆಯಲ್ಲಿ ತಂದು ಪ್ರತ್ಯಕ್ಷ ಸಾಕ್ಷಾತ್ಕಾರಿಗಳಾಗಿ, ಸಾಕ್ಷಾತ್ಕಾರವೆಂಬುದು ಎಲ್ಲಕ್ಕಿಂತ ಹೆಚ್ಚಿನದು, ಎಂದು ಧೈರ್ಯದಿಂದ ಅವರು ಸಾರಿದರು. ಅನುಭಾವದಿಂದಲೆ ವೇದಗಳು, ಅನುಭಾವದಿಂದಲೆ ಆಗಮಗಳು ಆದವು ಎಂದು ಅವರು ಒಂದೆಡೆಗೆ ಅಂದಿರುವರು. '....ಆಗಮ ಅರುಹಿನ ಪೂರ್ತಿ ಮಾಡಿದರಾದವು, ವೇದ ವಿವೇಕಿ ನುಡಿದ

ರಾದವು, ಶಾಸ್ತ್ರ ಸರ್ವಜ್ಞ ನಿರ್ಮಿಸಿದರಾದವು....' (ವ. ೩೫೩) ಎಂದು ವಚನಭಾಗವಿರುವದು. ಅದೇ ರೀತಿ, ಲಿಂಗ ಜಂಗಮ ಪ್ರಸಾದಗಳು ಅನುಭಾವದಿಂದ ಹುಟ್ಟಿದವು, ಶರಣನು ಅನುಭಾವದಲ್ಲಿ ಅನುಪಮಸುಖಿಯು, ಎಂದು (೧೦೬) ಅಲ್ಲಮನು ಹೇಳಿರುವನು. ಈ ಮಾತು ಸತ್ಯವು. ಅನುಭಾವಿಗಳು ಬರೆದುದರಿಂದಲೆ ವೇದಗಳಿಗೆ ವೇದತ್ವವು ಬಂದಿತು, ಆಗಮುಗಳಿಗೆ ಅವುಗಳ ಆಗಮತ್ವವು ಬಂದಿತು. ಇಷ್ಟೇ ಅಲ್ಲ, ಈಗ ಅನುಭಾವವಿದ್ದರೆಯೆ ವೇದಾಗಮಗಳ ಸಾರವು ಅನುಭವಕ್ಕೆ ಬರಬಲ್ಲದು, ಇಲ್ಲದಿದ್ದರೆ ಅದು ಕೇವಲ ಜೊಳ್ಳು ಶಬ್ದವಾಗಿ ಉಳಿಯುವದು. ವಚನಕಾರರು ಸಂಸ್ಕೃತದಲ್ಲಿದ್ದ ಅಧ್ಯಾತ್ಮಜ್ಞಾನವನ್ನು ಕನ್ನಡಕ್ಕಿಳಿಸಿದರು. ಇಷ್ಟೇ ಅಲ್ಲ, ಸುಸಂಸ್ಕೃತರಲ್ಲಿ ಮಾತ್ರ ಇದ್ದ ಜ್ಞಾನವನ್ನು ಅಸಂಸ್ಕೃತರಲ್ಲಿ ಹರಡಿ ಅವರನ್ನು ಧನ್ಯಗೊಳಿಸಿದರು. ಉಚ್ಚ ತತ್ವಗಳ ಪ್ರತ್ಯಕ್ಷ ಆಚರಣೆಯನ್ನು ಮಾಡುತ್ತ ಅವರು ಜನರಲ್ಲಿ ಕೂಡಿಕೊಂಡು ನಡೆದದ್ದರಿಂದ, ವಚನಗಳನ್ನು ಕನ್ನಡದಲ್ಲಿ ಬರೆದುದರಿಂದ, ಮತ್ತು ಸರ್ವಸುಲಭವಾದ ಸಗುಣಭಕ್ತಿಯನ್ನೆ ತಮ್ಮ ಸಂಪ್ರದಾಯದ ಮುಖ್ಯ ಲಕ್ಷಣವನ್ನಾಗಿ ಮಾಡಿದ್ದರಿಂದ ಅವರು ಧರ್ಮರಾಜ್ಯದಲ್ಲಿ ಲೋಕಸತ್ತೆಯನ್ನು ಸ್ಥಾಪಿಸಿದರೆಂದು ಹೇಳಬಹುದು.

೧೪೮. ವಚನಕಾರರು ಯಾವದೇ ಸಾಧನಮಾರ್ಗವನ್ನು ಉಪಯೋಗಿಸಿರಲಿ, ಅವರು ಸಾಕ್ಷಾತ್ಕಾರದ, ಅನುಭಾವದ, ಅನುಭವಯುಕ್ತ ಜ್ಞಾನದ, ಸತ್ಯದ ಪ್ರತ್ಯಕ್ಷದರ್ಶನದ ಉಪಾಸಕರಿರುವರು, ಎಂಬ ಮಾತನ್ನು ನಾವು ಒಂದು ಕ್ಷಣ ಹೊತ್ತಾದರೂ ಮರೆಯಕೂಡದು. ತಮ್ಮ ತೀವ್ರ ಸಾಧನದಿಂದ ಸತ್ಯ ಪರಂಜ್ಯೋತಿಯನ್ನು ಕಣ್ಣಾರೆ ಕಂಡು ಅದರ ಕಿರಣಗಳ ದಿವ್ಯ ಪ್ರಕಾಶದಿಂದ ತಮ್ಮ ಮಾರ್ಗವನ್ನು ನಡೆಯಬೇಕೆನ್ನುವ ಹಪಹಪಿ ಆ ವಚನಕಾರರಿಗೆ. ಅಂತರಾಕಾಶದಲ್ಲಿ ಸುಳಿಯುವ ಸತ್ಯದ ಸವಿಸೊಲ್ಲನ್ನು ತಾವೇ ಕವಿಯಾರೆ ಕೇಳಿ ಆ ಸತ್ಯಸಂಗೀತದೊಡನೆ ತಮ್ಮ ನಡೆಯಿಂದ ತಾಳಹಿಡಿಯಬೇಕೆಂದು ಅಹೋರಾತ್ರ ಅವರ ಪ್ರಯತ್ನವು. ಸತ್ಯಸುಧಾಮೃತವನ್ನು ಸ್ವತಃ ದಣಿ ಉಂಡು ಆ ಪರಮಾನಂದದಿಂದ ಇಹಪರದಲ್ಲಿ ಧನ್ಯರಾಗಬೇಕೆಂದು ಅವರ ಆಂತರಿಕ ಇಚ್ಛೆಯು. ಅವರು ನೋಡುವದು ಮಾಡುವದು, ಜಪಿಸುವದು ತಪಿಸುವದು, ಧ್ಯಾನಿಸುವದು ಮೌನಿಸುವದು, ಪ್ರೀತಿಸುವದು ಕೀರ್ತಿಸುವದು ಈ ಸತ್ಯಸಾಕ್ಷಾತ್ಕಾರಕ್ಕಾಗಿ. ಯಾವ ಸಾಧನವು ಈ ಸಾಕ್ಷಾತ್ಕಾರವನ್ನು ತನ್ನ ಧ್ಯೇಯವನ್ನಾಗಿ ಇಟ್ಟುಕೊಂಡಿಲ್ಲವೊ ಆ ಸಾಧನವು ತಲೆ ಇಲ್ಲದ ಮುಂಡದಂತೆ, ಪೊಲೆ ಇಲ್ಲದ ಅವಿನಂತೆ;

ಜಲವಿಲ್ಲದ ಕೆರೆಯಂತೆ, ಕಲಿತನವಿಲ್ಲದ ಬಂಟನಂತೆ ಅದೆಲ್ಲ ಒಂದು ಗುರಿ ಇಲ್ಲದ ಗೊಂದಲವು. ತನ್ನ ಗುರಿಯೆ ಬಿಲ್ಲುಗಾರನ ಏಕಮಾತ್ರ ಲಕ್ಷ್ಯವಿದ್ದಂತೆ, ಸಮರಸಕೂಟವೆ ವಿರಹಿವಿರಹಿಣಿಯರ ಏಕಮಾತ್ರ ಗುರಿ ಇದ್ದಂತೆ, ಭಗವತ್ಕೃಪೆಯೆ ಭಕ್ತನ ಏಕಮಾತ್ರ ಉದ್ದೇಶವಿದ್ದಂತೆ, ಸತ್ಯ ಸಾಕ್ಷಾತ್ಕಾರವೆ ವಚನಕಾರರ ಏಕಮೇವ ಧ್ಯೇಯವಿರುವದು. ಅವರೆಲ್ಲರೂ ಶೈವಾಗಮದ ಅನುಗಾಮಿಗಳು. ಆ ಆಗಮಗಳಲ್ಲಿಯ ತತ್ಪಜ್ಞಾನವನ್ನು ಅವರು ಸ್ವೀಕರಿಸಿರುವರು. ಆ ಧ್ಯೇಯವು ಕೈಸೇರಬೇಕೆಂದು ಅವರು ಷಟ್‌ಸ್ಥಲ ಪದ್ಧತಿಯನ್ನು (೧೦ನೆಯ ಪ್ರಕರಣ) ಅನುಸರಿಸಿರುವರು. ನಿಃಕಲ ಶಿವನೇ ವಚನಕಾರರ ಪರದೈವತವು. ಲಿಂಗವೆ ಆ ದೈವತದ ಅನನ್ಯ ಮತ್ತು ಅನುಪಮ ಪ್ರತೀಕವು ಆಥವಾ ಕುರುಹು. ಅದನ್ನು ಗುರುಹಸ್ತ ದಿಂದ ಪಡೆಯುವುದೆ ದೀಕ್ಷೆಯು. ಆಗ 'ಓಂ ನಮಃ ಶಿವಾಯ' ಎಂಬ ಷಡಕ್ಷರಿ ಮಹಾಮಂತ್ರದ ಉಪದೇಶವು ಕೊಡಲ್ಪಡುವದು. ತಾವು ಶಿವಕಿಂಕರರೆಂಬುದಕ್ಕೆ ವಚನಕಾರರು ಬಾಹ್ಯಲಾಂಛನಗಳೆಂದು ವಿಭೂತಿರುದ್ರಾಕ್ಷಿಗಳನ್ನು ಧರಿಸುವರು. ಅಂಗವೆ ಜೀವಾತ್ಮವು ಲಿಂಗವೆ ಪರಮಾತ್ಮವು. ಅಂಗಗುಣಗಳನ್ನೆಲ್ಲ ಅಳಿಸಿ ಲಿಂಗಮಯವಾಗುವುದೆ ವಚನಕಾರರ ಸಾಧನದ ಧ್ಯೇಯವು. ಅಂಗದ ಭಾಗಗಳಾದ ತನುಮನಧನಗಳನ್ನೂ, ಕಾಯಪ್ರಾಣ ಭಾವಗಳನ್ನೂ, ಕಾಯಕರಣಕರ್ಮಗಳನ್ನೂ ಲಿಂಗಕ್ಕೆ ಸರ್ವತೋಪರಿ ಅರ್ಪಿಸುತ್ತ ಕೊನೆಗೆ ಲಿಂಗೈಕ್ಯವನ್ನು ಹೊಂದುವುದೆ ಈ ಸಾಧನದ ಮುಖ್ಯ ಪ್ರಕ್ರಿಯೆಯು. ಈ ಪ್ರಕಾರ ಸತ್ಯಸಾಕ್ಷಾತ್ಕಾರವೆ ಧ್ಯೇಯ, ಸರ್ವಾರ್ಪಣೆ ಸಾಧನ, ಇವುಗಳನ್ನು ಮುಖ್ಯವಾಗಿಟ್ಟುಕೊಂಡು ವಚನಕಾರರು ತಮ್ಮ ತಮ್ಮ ಒಲವಿನಂತೆ ಭಕ್ತಿ, ಜ್ಞಾನ, ಕರ್ಮ, ಧ್ಯಾನ ಮುಂತಾದ ಉಪಸಾಧನಗಳನ್ನೂ ಉಪಯೋಗಿಸಿರುವರು. ಹಲವರು ಭಕ್ತಿಪ್ರಧಾನರಿದ್ದರೆ ಅನ್ಯರು ಜ್ಞಾನಪ್ರಧಾನರಿರುವರು. ಮತ್ತೆ ಕೆಲವರು ಕರ್ಮಯೋಗಿಗಳಿದ್ದರೆ ಹಲವರು ಧ್ಯಾನಯೋಗಿಗಳಿರುವರು. ಉದಾ: ಬಸವಣ್ಣನು ಭಕ್ತಿ ಭಾಂಡಾರಿ ಎಂದು ಪ್ರಸಿದ್ಧನಿದ್ದರೆ ಜನ್ನ ಬಸವನು ಜ್ಞಾನಿಯೆಂದು ಹೆಸರು ವಾಸಿಯಾಗಿರುವನು. ಅಖಂಡೇಶ್ವರನೆಂಬ ಅಂಕಿತವುಳ್ಳ ಷಣ್ಮುಖ ಸ್ವಾಮಿಯೂ ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರನೆಂಬ ಅಂಕಿತವುಳ್ಳವನೂ ಯೋಗಾಭ್ಯಾಸವನ್ನು ಜನ್ಮಾಗಿ ಮಾಡಿದಂತೆ ತೋರುತ್ತಿದೆ. ಆಯದಕ್ಕಿ ಮಾರಯ್ಯನು ಕಾಯಕದ ಮಹತ್ವವನ್ನು ಹೊಗಳುವಾಗ ಕರ್ಮಯೋಗದ ತತ್ವಗಳನ್ನೆ ಹೇಳುತ್ತಿರುವನು. ವಚನಕಾರರು ಮಾಡುತ್ತಿದ್ದ ಉದ್ಯೋಗಗಳೂ ಒಳ್ಳೆ ವಿವಿಧವಾಗಿದ್ದವು. ವಚನಕಾರರೆಂದರೊಂದು ಸನ್ಯಾಸಿಗಳ ತಂಡವಲ್ಲ, ವಾಜಿವೀರರ ಗುಂಪಲ್ಲ. ಅವರಲ್ಲಿ ಅಲ್ಲಮಪ್ರಭುಗಳಂತೆ ಕೇವಲ ವೈರಾಗ್ಯಸಂಪನ್ನರು ಹಲವರಿದ್ದರೆಂಬುದು ನಿಜವು. ಆದರೆ ಅವರಲ್ಲಿ ಬಹುಸಂಖ್ಯರು ಬೇರೆಬೇರೆ ಉದ್ಯೋಗಗಳಲ್ಲಿ ತೊಡಗಿದ ಸಂಸಾರಿಗಳಿದ್ದರು. ಅವರು ಉಪದೇಶಿಸಿದ ಸಮನ್ವಯಮಾರ್ಗಕ್ಕೆ ಇದು ಅನ್ವಯಿಸಿಯೆ ಇರುವದು. ಸ್ವತಃ ಬಸವಣ್ಣನು ಮೊದಲು ಕರಣಿಕನೂ ಬಳಿಕ ಮಂತ್ರಿಯೂ ಆಗಿದ್ದನು. ಸಕಲೇಶ ಮಾದರಸನು ಅರಸನಿದ್ದಾಗಲೆ ಶರಣ ಮಾರ್ಗವನ್ನು ಹಿಡಿದನು ಮತ್ತು ಮುಂದೆ ರಾಜ್ಯವನ್ನೆಲ್ಲ ಮಗನಿಗೆ ಒಪ್ಪಿಸಿ ತಾನು ವಿರಕ್ತನಾದನು. ಎಷ್ಟೋ ವಚನಕಾರರ ಹೆಸರುಗಳೊಡನೆ ಅವರವರ ಉದ್ಯೋಗಗಳೂ ತಪ್ಪದೆ ಉಲ್ಲೇಖಿಸಲ್ಪಡುತ್ತಿರುವವು. ಉದಾ: ಅಂಬಿಗರ ಚೌಡಯ್ಯ, ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ ಹಡಪದಪ್ಪಣ್ಣ ಮುಂತಾದವು. ಅವರು ತಮ್ಮ ತಮ್ಮ ಕಾಯಕಗಳನ್ನು ಉತ್ತಮರೀತಿಯಿಂದ ಮಾಡುತ್ತ ಪರಮಾರ್ಥವನ್ನು ಸಾಧಿಸಿದರು. ಅವರು ಮಾಡುವ ಉದ್ಯೋಗಗಳು ಇಂತಹವೇ ಇರಬೇಕು ಎಂಬ ಯಾವ ನಿರ್ಬಂಧವೂ ಇರಲಿಲ್ಲ. ಅವುಗಳಲ್ಲಿ ಅನೀತಿ, ಅಪ್ರಾಮಾಣಿಕತನ ಇವು ಇಲ್ಲದಿದ್ದರಾಯಿತು. ಉದ್ಯೋಗಗಳೆಂದಬಳಿಕ ಅವು ಎಲ್ಲ ಸವನಾಗಿ ಪವಿತ್ರವಿರುವವು. ಅವುಗಳಲ್ಲಿ ಕೃತಕವಾಗಿ ಉಚ್ಚನೀಚ ಭಾವಗಳನ್ನು ಕಲ್ಪಿಸುವದು ಮತ್ತು ಆ ಉಚ್ಚನೀಚ ಭಾವಗಳನ್ನು ಆ ಉದ್ಯೋಗಗಳನ್ನು ಮಾಡುವವರಿಗೆ ಹಚ್ಚುವದು ತೀರ ತಪ್ಪು. ವಚನಕಾರರು ಮಾಡುವ ಉದ್ಯೋಗಗಳು ಅವರ ಆತ್ಮವಿಕಾಸದ ಮಾರ್ಗದಲ್ಲಿ ಎಂದಿಗೂ ಬರಲಿಲ್ಲ. ಯಾಕಂದರೆ, ತಾವು ಮಾಡುವುದನ್ನೆಲ್ಲ ಅವರು ಪರಮಾತ್ಮಸೇವೆಯೆಂದೆ ಮಾಡುತ್ತಿದ್ದರು. ತಮ್ಮ ತಮ್ಮ ಉದ್ಯೋಗಗಳನ್ನು ಅನುಸರಿಸುತ್ತ ವಚನಕಾರರು ದಾಸೋಹವೃತ್ತಿಯಿಂದ ಇರುತ್ತಿದ್ದರು. ತಮಗೆ ಬಂದ ಆದಾಯದೊಳಗಿಂದ ಯಥಾಶಕ್ತಿಯಾಗಿ ಅವರು ಗುರುಗಳ, ದೇವರ, ಮತ್ತು ಭಕ್ತರ ಸೇವೆಯನ್ನು ನಡೆಸುತ್ತಿದ್ದರು. ತಾವು ದೇವರ ದಾಸರು, ತಾವು ಗಳಿಸಿದ್ದೆಲ್ಲ ದೇವರದು, ತಾವು ಮಾಡುವ ಮಾಟವೆಲ್ಲ ದೇವರದು, ತಾವೇ ದೇವರವರು, ಎಂಬ ಭಾವದಿಂದ ಅವರು ಯಾವಾಗಲೂ ವರ್ತಿಸುತ್ತಿದ್ದರು. ಅವರ ನೀತಿಯು ಅತ್ಯಂತ ಉಚ್ಚಪ್ರತಿಯದಿತ್ತು, ಎಂದು ಇಲ್ಲಿ ಪುನಃ ಹೇಳುವ ಅವಶ್ಯಕತೆ ಇಲ್ಲ. ನುಡಿಯಂತೆ ನಡೆ, ಎಂಬುದು ಅವರ ಬಿರುದು, ಅವರು ಅಹಿಂಸೆಯ ಅಧ್ವರ್ಯುಗಳಾದುದರಿಂದ ಪ್ರಾಣಿಗಳನ್ನು ದೇವರಿಗೆ ಬಲಿಕೊಡುವ ಮತ್ತು

ಮಾಂಸಾಶನದ ರೂಢಿಗಳನ್ನು ತಮ್ಮ ಸಂಪ್ರದಾಯದೊಳಗಿಂದ ಪೂರ್ಣ ತಳ್ಳಿಬಿಟ್ಟರು. ಮದ್ಯವಂತೂ ಬಹಳೇ ಹಾನಿಕಾರಕ ಪೇಯವಿರುವದರಿಂದ ಮತ್ತು ಮದ್ಯಪಾನವು ಪಂಚಮಹಾಪಾತಕಗಳಲ್ಲಿ ಒಂದಾಗಿರುವುದರಿಂದ ಅದನ್ನು ಅವರು ಬೇರುಸಹ ಕಿತ್ತೊಗೆದದ್ದು ಆಶ್ಚರ್ಯದ ಸಂಗತಿಯಲ್ಲ. ಮದ್ಯಮಾಂಸ, ಪರಧನ ಪರಸ್ತ್ರೀ, ಹಿಂಸೆ ಅಸತ್ಯ ಇವುಗಳಿಂದ ತಾವು ಸ್ವತಃ ಅತ್ಯಂತ ಅಲಿಪ್ತರಿದ್ದು ಅವುಗಳನ್ನು ಸಮಾಜದೊಳಗಿಂದ ನಿರ್ಮೂಲ ಮಾಡಲು ಅವರು ಸತತ ಪ್ರಯತ್ನಪಟ್ಟರು. ವಚನಕಾರರ ವಚನಗಳೂ ಅವರಿಗೆ ಒಪ್ಪುವಂತೆಯೆ ಇವೆ. ಅವರ ಅನುಭಾವವು ಪ್ರಕಾಶಮಾನವಿದ್ದಂತೆ, ಅವರ ತತ್ವಜ್ಞಾನವು ಓಜಸ್ವಿ ಇದ್ದಂತೆ, ಅವರ ನೀತಿಯು ನಿರ್ಮಲವಿದ್ದಂತೆ, ಅವರ ನಡೆಯು ವರ್ಚಸ್ಸುಳ್ಳದ್ದಿದ್ದಂತೆ, ಅವರ ಜೀವನವು ಪರೋಪಕಾರಪೂರ್ಣವಿದ್ದಂತೆ, ಅವರ ವಚನಶೈಲಿಯಾದರೂ ಈ ಎಲ್ಲ ಶ್ರೇಷ್ಠ ಗುಣಗಳ ಪ್ರತಿಬಿಂಬರೂಪವಾಗಿ ಕಂಗೊಳಿಸುತ್ತಿರುವದು.

೧೪೯. ವಚನಕಾರರ ಉದಾರ ಮತ್ತು ಮುಕ್ತದ್ವಾರ ಧಾರ್ಮಿಕ ಧೋರಣದ ಮೂಲಕ ವಿವಿಧ ಜಾತಿಪಂಥದವರು ಮೇಲುಕೀಳೆನ್ನದೆ ಅವರ ಸಂಪ್ರದಾಯವನ್ನು ಸ್ವೀಕರಿಸಿ ಹೇಗೆ ಸಮಸಮಾನರಾಗಿ ಧರ್ಮಬಂಧುಗಳಂತೆ ನಡೆದು ಧನ್ಯರಾದರೊ ಅದರಂತೆ ಅನೇಕ ಸ್ತ್ರೀಯರು ಧರ್ಮಪಥದಲ್ಲಿ ಮುಂದಾಗಿ ವಚನಕಾರ್ತಿಯರಾದರು. ಸ್ತ್ರೀಪುರುಷರಲ್ಲಿ ಏನೂ ಭೇದಗಳೇ ಇಲ್ಲ ಎಂದು ನಾವು ಅನ್ನುವದಿಲ್ಲ. ಅವರ ದೇಹದಲ್ಲಿ ಭಿನ್ನತೆ ಇದ್ದಂತೆ ಅವರ ಗುಣಕರ್ಮಗಳಲ್ಲಿಯೂ ಹಲಕೆಲವು ಭಿನ್ನತೆಗಳಿರುವ ವೆಂಬುದು ನಿಜವು. ಹೀಗೆ ಭಿನ್ನತೆಗಳಿದ್ದಾಕ್ಷಣಕ್ಕೆ ಧರ್ಮಜೀವನದಲ್ಲಿ ಅವರಿಗೆ ಕೀಳು ಸ್ಥಾನವನ್ನು ಕೊಡುವದು ಎಂದೂ ಯೋಗ್ಯವಾಗಲಿಕ್ಕಿಲ್ಲ. ಸ್ತ್ರೀಯರು ತಮ್ಮ ಪಾತಿವ್ರತ್ಯರಕ್ಷಣಕ್ಕಾಗಿ ಅಥವಾ ತಮ್ಮ ಅಸತ್ಯಗಳ ಸಂರಕ್ಷಣಕ್ಕಾಗಿ ಮಾಡಿದ ತ್ಯಾಗ ಸಾಹಸಗಳ ಇತಿಹಾಸವನ್ನು ನೋಡಿದರೆ ಅವರಲ್ಲಿ ಎಂಥ ಉತ್ಕಟ ಭಕ್ತಿಭಾವವು ಮತ್ತು ಧ್ಯೇಯನಿಷ್ಠೆಯು ಇರಬಲ್ಲದು ಎಂಬುದು ಒಡೆದುಕಾಣುವದು. ಇಂಥ ಶ್ರೇಷ್ಠ ಗೌರವಪೂರ್ಣ ಗುಣಗಳಿಗೆ ಆಶ್ರಯಸ್ಥಾನವಾದ ಇಡೀ ಸ್ತ್ರೀ ಜಾತಿಯನ್ನು 'ಅನಧಿಕೃತ' ಎಂಬ ಮುದ್ರೆ ಹೊಡೆದು ದೂರಸರಿಸಿ ಬಿಡುವದು ಯೋಗ್ಯವಲ್ಲೆಂದು ವಚನಕಾರರು ಅವರನ್ನು ಸನ್ನಿಧಿ ಕರೆದು ಅವರಿಗೂ ಪುರುಷರಂತೆಯೆ ದೀಕ್ಷೆಕೊಟ್ಟರು ಮತ್ತು ಅವರಿಗೆ ಮುಂದೆ ಬಂದು ತಮ್ಮ ಗುಣವರ್ಧನ ಮಾಡಲಿಕ್ಕೆ ಅನುವುಗೊಟ್ಟರು. ಹೀಗೆ ಆದುದರಿಂದ ಅನೇಕ ಶಿವಶರಣೆ

ಯರು ಸತ್ಪಥದಿಂದ ಸಾಗಿ, ಸಾಕ್ಷಾತ್ಕಾರ ಪಡೆದು ತಮ್ಮ ಅಂತಃಸ್ಫೂರ್ತಿಯನ್ನು ವಚನರೂಪದಿಂದ ವ್ಯಕ್ತಗೊಳಿಸಿದರು. ಹೀಗೆ ವಚನಗಳನ್ನು ಬರೆವ ಸಾಧ್ವಿಯರು ಅನೇಕರಿದ್ದರೂ ಅವರೆಲ್ಲರ ವಚನಗಳು ಈಗ ಉಪಲಬ್ಧವಿಲ್ಲ. ಅವರಲ್ಲಿ ಉಡುತಡಿಯ ಮಹಾದೇವಿಯಕ್ಕ, ಮುಕ್ತಾಯಕ್ಕ ಎಂಬ ಮುಂತಾದ ಹಲವರೆ ಪ್ರಸಿದ್ಧರಿದ್ದು ಅವರ ವಚನಗಳು ಪ್ರಕಟವಾಗಿರುವವು. ಧರ್ಮವೀರರಿಗೆ ಶೋಭಿಸುವ ಆಕೆಯ ಚಾರಿತ್ರ್ಯದ ಮೂಲಕ ಮಹಾದೇವಿಯಕ್ಕನ ವಚನಗಳಿಗೆ ಹೆಚ್ಚಿನ ಮಹತ್ವವೂ ತೇಜವೂ ಬಲವೂ ಬಂದಿರುವದು. ಸ್ತ್ರೀಸುಲಭವಾದ ಭಕ್ತಿರಸವನ್ನು ವ್ಯಕ್ತಮಾಡುವದರಲ್ಲಿ ವಚನಕಾರ್ತಿಯರು ಯಾರನ್ನು ಅನಾಯಾಸದಿಂದ ಮೀರುವರು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

೧೫೦. ಅನುಭಾವಪೂರ್ಣ ವಚನಗಳನ್ನು ಬರೆಯುವ ಈ ವಚನಕಾರರ ಆದಿಯು ಮಾತ್ರ ಇನ್ನೂ ನಮಗೆ ನಿಶ್ಚಯವಾಗಿ ಗೊತ್ತಾಗಿಲ್ಲ. ಕನ್ನಡವಾಙ್ಮಯದ ಇತಿಹಾಸಕಾರರು ಇನ್ನೂ ಆ ಸಂಗತಿಯನ್ನು ಪೂರ್ಣವಾಗಿ ಶೋಧಿಸಬೇಕಾಗಿದೆ. ಮೊದಲನೆಯ ವಚನಕಾರನು ಯಾವಾಗ ಆಗಿಹೋದನು ಇದು ತಿಳಿಯುವದು ನಿಜವಾಗಿ ಮಹತ್ವದ ಮಾತಾಗಿದೆ. ಬಸವಣ್ಣನೆ ಮೊದಲನೆಯ ವಚನಕಾರನು ಎಂಬ ತಪ್ಪುತಿಳಿವಳಿಕೆಯು ಒಮ್ಮೆ ರೂಢಿಯಿತ್ತು. ಆದರೆ ಅದು ಈಗ ಅಳಿದು ಬಹಳ ದಿನಗಳಾದವು. ಬಸವಣ್ಣನ ಕಾಲಕ್ಕೆ, ವಿಶೇಷತಃ ಅವನು ಕಲ್ಯಾಣಪಟ್ಟಣದಲ್ಲಿ ಮಂತ್ರಿಪದಾರೂಢನಾಗಿ ಅನುಭವಮಂಟಪವನ್ನು ಏರ್ಪಡಿಸಿದಾಗ, ಅಲ್ಲಿ ಅನೇಕ ವಚನಕಾರರು ಒಟ್ಟುಗೂಡಿದರು. ಹೀಗಿದ್ದರೂ ಅವನ ಕಾಲಕ್ಕಿಂತ ಪೂರ್ವದಲ್ಲಿಯೆ ಎಷ್ಟೋ ವಚನಕಾರರು ಆಗಿಹೋಗಿರಲಿಕ್ಕೆಬೇಕು ಮತ್ತು ಅಷ್ಟೊತ್ತಿಗೆ ಅವರು ಓಜಸ್ಸುಳ್ಳ ಭಾವ ಮತ್ತು ವರ್ಚಸ್ಸುಳ್ಳ ವಿಚಾರ ಇವುಗಳ ಯೋಗ್ಯವಾಹನವಾಗುವ ಸಾಮರ್ಥ್ಯವನ್ನು ಕನ್ನಡನುಡಿಗೆ ತಂದುಕೊಟ್ಟಿರಲಿಕ್ಕೆಬೇಕು. ಬಸವಣ್ಣನ ಕಾಲಕ್ಕಿಂತ ಅಂದರೆ ಶಾ. ಶ. ೧೦೮೨ (ಕ್ರಿ. ಶ. ೧೧೬೦) ಕ್ಕಿಂತ ಪೂರ್ವದಲ್ಲಿ ಒಂದು ಶತಮಾನವಾದರೂ ವಚನಕಾರರು ವಚನಗಳನ್ನು ಬರೆಯಲು ಪ್ರಾರಂಭಿಸಿರಬಹುದೆಂದು ಈಗ ಊಹೆ ಇವೆ. ಹೀಗೆ ಊಹಿಸಲಿಕ್ಕೆ ಹಲವು ಆಧಾರಗಳೂ ಇವೆ. ಬಸವನ ಕಾಲದಷ್ಟೊತ್ತಿಗೆ, ಒಂದು ಸಾಹಿತ್ಯರೂಪ, ಎಂಬ ದೃಷ್ಟಿಯಿಂದ ವಚನವು ರೂಢಿಯಲ್ಲಿ ಬಂದಿತ್ತು ಮತ್ತು ಆ ಕಾಲದ ವಚನಕಾರರೆಲ್ಲರೂ ಭಾವ ವ್ಯಕ್ತಿಯ ಒಂದು ಸುಲಭ ಮತ್ತು ಪ್ರಚಲಿತವಿರುವ ಸಾಧನವೆಂದೇ ಅದನ್ನು

ಉಪಯೋಗಿಸಿರುವರು. ಆದುದರಿಂದ ವಚನಕ್ಕೆ ಪೂರ್ವೇತಿಹಾಸವೇನಾ ದರೂ ಇರಲಿಕ್ಕೆಬೇಕು, ಎಂದು ತಿಳಿಯುವದು ಯೋಗ್ಯವು. ಈ ವಚನಗಳು ಯಾವ ಧರ್ಮಜಾಗ್ರತಿಯ ವ್ಯಕ್ತಸ್ವರೂಪವೊ ಆ ಧರ್ಮಜಾಗ್ರತಿ ಯಾದರೂ ಬಸವಣ್ಣನ ಕಾಲಕ್ಕಿಂತ ಪೂರ್ವದಲ್ಲಿಯೆ ಸುಮಾರು ಒಂದು ಶತಕ ಪ್ರಾರಂಭವಾಗಿತ್ತು ಮತ್ತು ಅದು ಬಸವಣ್ಣನ ಕಾಲಕ್ಕೆ ಅತ್ಯುಚ್ಚ ಶಿಖರಕ್ಕೆ ಮುಟ್ಟಿತು. ಆದುದರಿಂದ ಆ ಜಾಗ್ರತಿಯ ಜನ್ಮದೊಡನೆ ಆ ವಚನ ಗಳು ಮೊದಲು ವ್ಯಕ್ತವಾಗಿರಲಿಕ್ಕೆಸಾಕು. ಸಕಲೇಶ ಮಾದರಸನು ಬಸ ವಣ್ಣನಿಗಿಂತಲೂ ೪೦-೫೦ ವರ್ಷ ಹಿಂದಿನವನೆಂದು ಶ್ರೀ. ಹಳಕಟ್ಟೀಯವರು ಅಂದಿರುವರು. ಅವನು ರಾಜ್ಯಮಾಡುತ್ತಿರುವಾಗಲೆ ವೈರಾಗ್ಯಶೀಲನೂ ಧರ್ಮಿಷ್ಠನೂ ಆಗಿದ್ದನು. ಅವನು ಮುಂದೆ ಉತ್ತರ ವಯಸ್ಸಿನಲ್ಲಿ ವಿರಕ್ತ ನಾಗಿ ಶ್ರೀಶೈಲದಲ್ಲಿದ್ದ ತನ್ನ ತಂದೆಯ ಆಣತಿಯ ಮೇರೆಗೆ ಕಲ್ಯಾಣಕ್ಕೆ ಬಂದು ನಿಂತನು. ಈ ಸಂಗತಿಯು ಪದ್ಮರಾಜಪುರಾಣದಲ್ಲಿ ಹೇಳಲ್ಪಟ್ಟಿರು ವದು. ಅವನು ಬರೆದ ವಚನಗಳು ಪ್ರಸಿದ್ಧವಾಗಿವೆ. ಆದರೆ ಅವು ಕಲ್ಯಾಣಕ್ಕೆ ಬರುವ ಪೂರ್ವದಲ್ಲಿ ಬರೆದವುಗಳೂ ಅಲ್ಲಿ ಬಂದ ಮೇಲೆಯೆ ಬರೆಯಲ್ಪಟ್ಟವು ಗಳೊ ಎಂಬುದನ್ನು ಹೇಳಲಿಕ್ಕೆ ಬರುವಂತಿಲ್ಲ. ಕಲ್ಯಾಣಕ್ಕೆ ಬರುವ ಪೂರ್ವ ದಲ್ಲಿಯೆ ಅವನಿಗೆ ಶರಣಮಾರ್ಗವು ಪರಿಚಿತವಿತ್ತು ಎಂಬುದು ಮಾತ್ರ ಅವನ ಚರಿತ್ರದ ಮೇಲಿಂದ ಸ್ಪಷ್ಟವಾಗುವದು. ದೇವರದಾಸಿಮಯ್ಯನೂ ಬಸ ವಣ್ಣನ ಪೂರ್ವಿಕನೆಂದು ಶ್ರೀ. ಹರ್ಡೇಕರ ಮಂಜಪ್ಪನವರೂ ಶ್ರೀ. ಹಳ ಕಟ್ಟೀಯವರೂ ಉಲ್ಲೇಖಿಸಿರುವರು. ಇವನು ವಿಜಾಪೂರ ಜಿಲ್ಲೆಯ ಶಿಂದಗಿ ತಾಲೂಕಿನ ಮುದನೂರು ಎಂಬ ಊರವನು. ಕ್ರಿ. ಶ. ೧೦೦೮-೧೩೫೦ ರ ವರೆಗೆ ಆಳಿದ ಚಾಲುಕ್ಯ ಜಯಸಿಂಹನ ಕಾಲಕ್ಕಿದ್ದನೆಂದು ತಿಳಿ ಯುತ್ತಿದೆ. ಕವಿಚರಿತೆಕಾರರು ಈ ಮಾತನ್ನು ಹೇಳಿದ್ದಾರೆ. ತನಗೆ ಬಂದರ ಗಳಿಗೆ ಶರಣರ ಸೂಳು ನುಡಿಗಳನಿತ್ತರೆ ತಾನು ದೇವರನ್ನು ಸಹ ಕೊಟ್ಟು ಬಿಡಲು ಸಿದ್ಧನು ಎಂದು ಇವನು ಹೇಳಿರುವನು (ವ. ೩೦೯)! ಅವನು ಇಲ್ಲಿ ತನಗಿಂತ ಪೂರ್ವದಲ್ಲಿರುವ ಶರಣರ ಸೂಳುನುಡಿಗಳನ್ನು ಹೀಗೆ ಹೊಗಳಿರ ಲಿಕ್ಕೆಬೇಕು. ಅವನೇ ಮೊದಲು ಬಸವಣ್ಣನಿಗಿಂತ ಮೊದಲಿನವನು. ಅವನು ಕೊಂಡಾಡಿದ ಸೂಳುನುಡಿಗಳು ವಚನಗಳೇ ಆಗಿದ್ದರೆ ಅವನ ಪೂರ್ವದಲ್ಲಿ ಅನೇಕ ವಚನಕಾರರು ಇದ್ದಿರಲಿಕ್ಕೆಬೇಕು. ಐಘಟದೂರ ರಾಮೇಶ್ವರಲಿಂಗ ಎಂಬ ಅಂಕಿತದಿಂದ ಬರೆದ ಪೆರೆಮಿಂಡಯ್ಯ ಎಂಬ ವಚನಕಾರನು ಕ್ರಿ. ಶ. ೧೧೦೦ ರಲ್ಲಿ ಇದ್ದಿರಬಹುದು ಎಂದು ಕವಿಚರಿತೆಕಾರರು ಹೇಳಿರುವರು.

ಇದಲ್ಲದೆ, ಬಸವಾದಿ ವಚನಕಾರರು ಸ್ವತಃ ತಾವು ಬರೆದ ವಚನಗಳಲ್ಲಿ 'ಆದ್ಯರ ವಚನ,' 'ಶರಣರ ವಚನ,' 'ಪುರಾತನರ ವಚನ,' ಎಂದು ಉಲ್ಲೇಖಿ ಪಿಸಿ ವಚನಗಳ ಮಹತ್ವವನ್ನು ಬಣ್ಣಿಸಿದ್ದಾರೆ. ಅವು ವೇದಾಗಮಗಳಿಗಿಂತ ಹೆಚ್ಚು ಆದರಣೀಯವಾದವುಗಳು, ಎಂದು ಸಹ ಅಂದಿದ್ದಾರೆ (೪೬೬). ಈ ಬಗೆಯ ಗೌರವಪೂರ್ಣ ಉಲ್ಲೇಖವು ಆ ಕಾಲಕ್ಕೆ ಪ್ರಚಲಿತವಿದ್ದ ಪೂರ್ವ ಕರ ವಚನಗಳ ಬಗ್ಗೆಯೆ ಇದ್ದಿರಬೇಕೆಂದು ಊಹಿಸಲಿಕ್ಕೆ ಅವಕಾಶವಿದೆ. 'ಇಂತಪ್ಪ ಆದ್ಯರ ವಚನಭಂಡಾರವ ನಮ್ಮ ಪ್ರಭುದೇವರು ಮುಖ್ಯವಾದ ಏಳುನೂರೆಪ್ಪತ್ತು ಅಮರಗಣಂಗಳು, ಅಸಂಖ್ಯಾತ ಪುರಾತನರು, ಪ್ರಮಥ ಗಣಂಗಳು ಕೇಳಿ ಹೇಳಿ ಕೊಂಡಾಡಿದ ಕಾರಣ' (ವ. ೩೧೧), ಎಂದು ಜನ್ನ ಬಸವಣ್ಣನು ತನ್ನ ಒಂದು ವಚನದಲ್ಲಿ ಮಾಡಿದ ಉಲ್ಲೇಖವು ತನ್ನ ಸಮಕಾಲೀನರ ವಚನಗಳನ್ನು ಕುರಿತು ಇರಲಾರದು. 'ಪ್ರಭುದೇವರು ಮುಖ್ಯವಾದ' ಎಂದು ಹೇಳಿದ ಶರಣಸಮುದಾಯದಲ್ಲಿ ಆಗಿನ ಎಲ್ಲ ಪ್ರಸಿದ್ಧ ಶರಣರೂ ವಚನಕಾರರೂ ಒಳಗೊಂಡಿರುವರು, ಎಂಬುದು ಸ್ಪಷ್ಟವಿದೆ. ಅವರು ಕೇಳಿ ಹೇಳಿದ ವಚನಭಂಡಾರವು ತಮ್ಮ ಸ್ವಂತದ್ದೇ ಇರಲಾರದು. ಅದು ಆ ಕಾಲಕ್ಕೆ ಪ್ರಚಲಿತವಿದ್ದ ಪೂರ್ವಿಕರ ವಚನ ಗಳೇ ಇರಲಿಕ್ಕೆ ಬೇಕೆಂದು ಹೇಳಬೇಕಾಗುವದು. ಆದ್ಯರ ವಚನ ಪರುಷವು, ಶರಣರ ವಚನಗಳು ಬೇವ ಸವಿದಂತೆ ಅಧರಕ್ಕೆ ಕಹಿ ಉದರಕ್ಕೆ ಸಿಹಿ ಇರುವವು, ಎಂದು ಬಸವಣ್ಣನು ಹೇಳಿದ್ದು, ಅದೇ ಪ್ರಕಾರ ಪುರಾತನರು ಶಬ್ದಸೋಪಾನವ ಕಟ್ಟಿ ದೇವಲೋಕಕ್ಕೆ ಬಟ್ಟೆಯ ನಿರ್ಮಿಸಿದರು (ವ. ೩೦೯), ಎಂದು ಜನ್ನ ಬಸವಣ್ಣನು ಅಂದದ್ದು ತಮಗಿಂತ ಪೂರ್ವದ ವಚನಕಾರರನ್ನುದ್ದೇಶಿಸಿಯೆ ಇರಬೇಕು. ಈ ವಿಷಯದಲ್ಲಿ ಹೆಚ್ಚು ಸಂಶೋಧನವಾಗಿ, ವಿಶ್ವಸನೀಯ ಐತಿಹಾಸಿಕ ಸಾಮಗ್ರಿಯು ಕೈಸೇರಿ, ಪ್ರತ್ಯಕ್ಷ ಪುರಾವೆಯು ದೊರೆಯುವನಕ ಈ ಊಹೆ ಅನುಮಾನ ಗಳನ್ನೆ ಅವಲಂಬಿಸಬೇಕಾಗಿದೆ. ಒಟ್ಟಿಗೆ ನೋಡಲಾಗಿ, ವೃಕ್ಷವು ದೊಡ್ಡ ದಾಗಿ ಅದಕ್ಕೆ ರಸಪೂರ್ಣವಾದ ಹಣ್ಣುಗಳಾಗುವ ಪೂರ್ವದಲ್ಲಿ ಅದು ಮೊಳೆತು, ಚಿಗಿತು, ಕವಲೊಡೆದು, ಬೆಳೆದು, ಹೂತು, ಎಡಿ, ಕಾಯಿಗ ಳಾಗುವದು ಹೇಗೆ ಅವಶ್ಯವೊ ಹಾಗೆ ಕರ್ನಾಟಕದಲ್ಲಿ ಬಸವಾದಿ ಭಕ್ತರು ಉದಯವಾಗುವ ಮೊದಲೇ ಅನೇಕ ಶರಣರು ತಮ್ಮ ಕೈಲಾದಮಟ್ಟಿಗೆ ಧರ್ಮಜಾಗ್ರತಿಯ ಕಾರ್ಯವನ್ನು ಮಾಡಿದ್ದರು. ಬಸವನ ಕಾಲಕ್ಕೆ ಈ ಜಾಗ್ರತಿಯ ಉಕ್ಕು ಎಲ್ಲಕ್ಕೂ ಮೇಲಕ್ಕೇರಿತು. ಆಗ ಕಲ್ಯಾಣದ ಮಧ್ಯ

ಬಿಂದುವಿನಿಂದ ಸುತ್ತಲೂ ಧರ್ಮಪ್ರವಾಹವು ಕರ್ನಾಟಕದಲ್ಲೆಲ್ಲ ಹರಿಯಿತು. ಅನುಭವಮಂಟಪದ ಸಂಘಟನೆಯು ಈ ಪ್ರಚಂಡ ಜಾಗ್ರತಿರೂಪ ದೇವಾಲಯಕ್ಕೆ ಕಲಶವಿಟ್ಟಂತೆ ಕಂಗೊಳಿಸಿತು.

೧೫೧. ಅನುಭವಮಂಟಪವೆಂದರೆ ಒಂದು ಧಾರ್ಮಿಕ ಸಂಸ್ಥೆಯಿತ್ತು ಎನ್ನಬಹುದು. ಈ ಹೆಸರನ್ನು ಹಲವು ವಚನಕಾರರೆ ಸ್ವತಃ ಉಪಯೋಗಿಸಿರುವರು. ಉದಾ: ಸಂಗನಬಸವೇಶ್ವರ ಎಂಬ ಅಂಕಿತದ ವಚನಕಾರನು. 'ನಿಜಾಚರಣೆಯ ನಿಲುಕಡೆಯನ್ನು ನಮಗೆ ಹೇಳು,' ಎಂದು ಬಸವಾದಿ ಪ್ರಮಥರು ಪ್ರಭುದೇವರಿಗೆ ಬಿಸಗೊಂಡಾಗ ಅವನು ಕಲ್ಯಾಣಪಟ್ಟಣದ ಅನುಭವಮಂಟಪದ ಶೂನ್ಯಸಿಂಹಾಸನದಲ್ಲಿ ವಿರಾಜಮಾನನಾಗಿದ್ದನು (ಸಂ. ೧), ಎಂದು ತನ್ನ ವಚನಗಳನ್ನು ಪ್ರಾರಂಭಿಸಿರುವನು. ಅದಕ್ಕೆ ಶಿವಾನುಭವಮಂಟಪವೆಂಬ ಹೆಸರೂ ಇರುವದು. ಶಿವನೇ ಪರಮದೈವತವೆಂದು ಶರಣರು ತಿಳಿಯುತ್ತಿರುವುದರಿಂದ ಹಾಗೆ ಹೆಸರುಬಿದ್ದಿದೆ. ಅನುಭವಕ್ಕೆ ಅಥವಾ ಸಾಕ್ಷಾತ್ಕಾರಕ್ಕೆ ಶರಣರು ಎಷ್ಟು ಮಹತ್ವವನ್ನು ಕೊಡುತ್ತಿದ್ದರು ಎಂಬುದು ಈ ಹೆಸರಿನಿಂದಲೂ ಗೊತ್ತಾಗುವದು. ತನ್ನೊಳಗರಿವ ಅನುಭಾವಿಯಿಂದ ಘನವಿಲ್ಲ (ವ. ೩೫), ಎಂದು ಪ್ರತಿಪಾದಿಸುವವರ ಸಭೆಗೆ ಅನುಭವಮಂಟಪವೆಂಬ ಹೆಸರು ಅನ್ವರ್ಥಕವೇ ಸರಿ. ಈಗ ನಿಜಾಮಕರ್ನಾಟಕದಲ್ಲಿರುವ ಕಲಬುರ್ಗಿಯಿಂದ ಸುಮಾರು ಅರುವತ್ತುಮೈಲಿನ ಮೇಲೆ ಕಲ್ಯಾಣ ಎಂಬ ಊರು ಇರುವದು. ಅದು ಬಿಜ್ಜಳ ಭೂಪನ ರಾಜಧಾನಿಯಾಗಿತ್ತು. ಅವನು ಶಾ. ಶ. ೧೦೭೯–೧೦೮೮ರ ವರೆಗೆ (ಕ್ರಿ. ಶ. ೧೧೫೭–೧೧೬೭) ಆಳಿದನು. ಭಕ್ತಿಭಾಂಡಾರಿ ಬಸವನು ತನ್ನ ಗುಣಶೀಲಕರ್ಮಗಳ ಬಲದಿಂದ ಅವನ ರಾಜ್ಯದಲ್ಲಿ ಮಂತ್ರಿಪದಾರೂಢನಾದನು. ಬಿಜ್ಜಳನು ಜೈನಮತದವನಿದ್ದರೂ ಅವನಿಗೆ ಬಸವನಲ್ಲಿ ಭಕ್ತಿವಿಶ್ವಾಸಗಳು ಬಹಳ. ಮುಂದೆ ಅನೇಕ ಕೊಂಡೆಗಾರರು ಸುಳ್ಳುಸೊಟ್ಟು ಹೇಳಿ ಬಸವನವಿಷಯಕ್ಕೆ ಬಿಜ್ಜಳನ ಮನಸನ್ನು ಕೆಡಿಸಲಿಕ್ಕೆ ಯತ್ನಮಾಡಿದರು. ಆದರೂ ಆ ಎಲ್ಲ ಗಂಡಾಂತರಗಳೊಳಗಿಂದ ಬಸವನು ಪಾರಾದನು. ಬಸವನು ಅತ್ಯಂತ ಧರ್ಮಿಷ್ಠನೂ ಉತ್ಕಟ ಭಕ್ತನೂ ಸತ್ಯಧರ್ಮದ ಪ್ರಸಾರಮಾಡಬೇಕೆಂಬ ಉತ್ಸುಕತೆಯುಳ್ಳವನೂ ಇದ್ದುದರಿಂದ ಮತ್ತು ಅದೇ ತನ್ನ ಮಹಿಮ ಅಥವಾ ಅವತಾರಕಾರ್ಯ ಎಂದು ನಂಬಿದ್ದರಿಂದ ಅವನು ಸ್ವಾಭಾವಿಕವಾಗಿಯೆ ಅನೇಕ ಶರಣರಿಗೆ ಆಶ್ರಯಕೊಟ್ಟನು. ಸುಮಾರು ಒಂದು ಲಕ್ಷ ತೊಂಬತ್ತಾರು ಸಾವಿರ

ಜಂಗಮರು ಬಸವನ ಆಶ್ರಯಕ್ಕಿದ್ದರೆಂದು (ಶೂ. ೩೨೦) ಉಲ್ಲೇಖವಿರುವದು. ಈ ಸಂಖ್ಯೆಯು ಸರಿಯಾಗಿರಲಿ, ಬಿಡಲಿ. ಬಹುಜನರು ಅವನಲ್ಲಿದ್ದರು ಎಂಬುದು ನಿರ್ವಿವಾದವು. ಬಸವನು ಬಂದು ಕಲ್ಯಾಣದಲ್ಲಿ ಮನೆಯ ಕಟ್ಟಿದರೆ ಮರ್ತ್ಯಲೋಕವೆಲ್ಲವು ಭಕ್ತಿಸಾಮ್ರಾಜ್ಯವಾಯಿತು. (ಶೂ. ೯೦), ಅವನು ಪ್ರಮಥನಾಯಕನಾಗಿ ಅಸಂಖ್ಯ ಭಕ್ತರಿಗೆ ಒಡನಾಡಿಯಾಗಿದ್ದನು. (ಶೂ ೪೫), ಎಂಬ ಮುಂತಾದ ವರ್ಣನೆಗಳಿರುವವು. ಹೀಗೆ ಅಲ್ಲಿ ಕೂಡಿದ ಸಾಮಾನ್ಯ ಭಕ್ತಸಮುದಾಯದಲ್ಲಿ ಸಾಧನಪಥದಲ್ಲಿ ವಿಶೇಷ ಮುಂದೆ ಸಾಗಿದವರೂ ಸಾಕ್ಷಾತ್ಕಾರಿಗಳೂ ಇದ್ದರು. ಅವರು ಆಗಾಗ್ಗೆ ಕೂಡಿ ಅನುಭವ ಸಂಗೋಷ್ಠಿಗಳನ್ನು ಮಾಡುತ್ತಿದ್ದರು. ಅವರು ಈ ರೀತಿಯಲ್ಲಿ ಜ್ಞಾನಜಡ್ಡಿ ಎಲ್ಲಿ ಮಾಡುತ್ತಿದ್ದರೊ ಅದೇ ಅನುಭವಮಂಟಪವು. ಶೂನ್ಯಸಿಂಹಾಸನವನ್ನೇರುವಾಗ ಪ್ರಭುದೇವರು ಬಸವನ ಅರಮನೆಗೆ ಹೋದನು, ಎಂದು ಉಲ್ಲೇಖವಿರುವುದರಿಂದ (ಶೂ. ೩೧೬) ಅನುಭವಮಂಟಪವೂ ಬಸವನ ಮನೆಯಲ್ಲಿಯೆ ಇದ್ದಿರಬಹುದು. ಆ ಅನುಭವಮಂಟಪಕ್ಕೆ ಬನವಾಸಿಯ ವೈರಾಗ್ಯರಾಜನಾದ ಅಲ್ಲಮಪ್ರಭುವೆ ಅಧ್ಯಕ್ಷನಾಗಿದ್ದನು. ಅವನು ಅನುಭವಮಂಟಪದಲ್ಲಿಯು ಶೂನ್ಯಸಿಂಹಾಸನಾಧೀಶ್ವರನು. ಅಂಗಗುಣವು ಸಂಪೂರ್ಣ ಅಳಿದು ಶೂನ್ಯವಾಗಿ ಲಿಂಗಗುಣವಳವಡುವುದೆ ಶೂನ್ಯಪದವು. ಪ್ರಭುದೇವರು ಶೂನ್ಯಪೀಠವನ್ನು ಅಲಂಕರಿಸಿದನು, ಎಂದು ವರ್ಣಿಸುವಾಗ ಯಾವದೊಂದು ಭೌತಿಕ ಪೀಠವನ್ನೇರಿದನು, ಎಂಬ ವರ್ಣನೆಯು ಅಲ್ಲಿ ಇಲ್ಲ, ಇದು ಲಕ್ಷ್ಯದಲ್ಲಿಡತಕ್ಕ ಸಂಗತಿಯಾಗಿದೆ. ಆ ಸಿಂಹಾಸನವನ್ನು, ಅಂತರಂಗವಿಲ್ಲದ, ಒಳಗು ಅವಲಂಬವಿಲ್ಲದ, ಹೊರಗು ನೋಡಲಳವಲ್ಲದ, ಕುಸುಮದ ಗದ್ದುಗೆಯಲ್ಲಿ ಒಡಲಿಲ್ಲದ ಘನವು ಮೂರ್ತಿಗೊಂಡರೆ ವಿಚಿತ್ರವಾಯಿತು ಜಗವೆಲ್ಲ (ಶೂ. ೩೧೭), ಎಂದೂ ಪರಮಾತ್ಮನು ಬರಬೇಕೆಂದು ನಾನು ಹಾರೈಸುತ್ತಿರಲು ತಾನೆ ಬಂದು ಎನ್ನ ಹೃದಯದ ಸಿಂಹಾಸನದ ಮೇಲೆ ಮೂರ್ತಿಗೊಂಡನು (ಶೂ. ೩೧೮), ಎಂದೂ ಬಸವಣ್ಣನು ವರ್ಣಿಸಿರುವನು. ಹೀಗೆ ಶೂನ್ಯಸಿಂಹಾಸನಾರೂಢನಾದಾಗ ಅಲ್ಲಮನನ್ನು ಬಸವನು ಪೂಜಿಸಿದನು, ಎಂದು ಮುಂದೆ ಉಲ್ಲೇಖವಿದೆ. ಹೀಗೆ ಅಲ್ಲಮಪ್ರಭುವೇ ಅಧ್ಯಕ್ಷನಾಗಿರುವ ಅನುಭವಮಂಟಪದಲ್ಲಿ ನಿಕಟಯುವ ಆ ಸಭೆಯಲ್ಲಿ ಅನುಭವಗೋಷ್ಠಿಗಳಿಗಲ್ಲದೆ ಇನ್ನಾವ ಮಾತುಗಳಿಗೂ ಎಡೆಇರಲಿಲ್ಲ. ಅನುಭಾವಿಗಳಿದ್ದಲ್ಲಿ ಅನುಭವದ ಮಾತೇ ನಡೆಯುವದು ವಾಸ್ತವಿಕವು. ಅನುಭಾವ ತಿಳಿಯದವರೊಡನೆ ಅನುಭವಗೋಷ್ಠಿಗಳನ್ನಾಡಕೂಡದೆಂದೂ,

ಕಂಡಕಂಡಲ್ಲಿ ಅಂಥ ಗೋಷ್ಠಿಯನ್ನು ಹೇಳಬಾರದೆಂದೂ (೧೧೦) ವಚನಕಾರರ ನಿರ್ಬಂಧವಿರುವದು. ಆದುದರಿಂದ, ಬೇಕುಬೇಕಾದವರ ಪ್ರವೇಶವು ಆ ಸಭೆಯಲ್ಲಿ ಆಗುತ್ತಿರಲಿಲ್ಲವೆಂದು ಕಾಣುತ್ತಿದೆ. ಮಹಾದೇವಿಯಕ್ಕನು ಅಲ್ಲಿಗೆ ಬಂದಾಗ ಆಕೆಗೆ ಅಲ್ಲಿಯವರು ಮಾಡಿದ ಪ್ರಶ್ನೆಗಳನ್ನು ನೋಡಿದರೆ, ಮತ್ತು ಅಲ್ಲಿ ನಡೆದ ವಾದವಿವಾದಗಳ ಸ್ವರೂಪವನ್ನು ಲಕ್ಷಿಸಿದರೆ, ಅಲ್ಲಿ ಎಂಥವರಿಗೆ ಪ್ರವೇಶವಿತ್ತು ಎಂಬುದನ್ನು ಸಹಜವಾಗಿ ಊಹಿಸಬಹುದು. ಸಾಮಾನ್ಯರಿಗೆ ಅಂಥ ಮಾತುಕಥೆಗಳು ಮೊದಲು ರುಚಿಸುವದೂ ಕಠಿಣ, ರುಚಿಸಿದರೂ ಮುಂದೆ ದಕ್ಕುವದು ಅಸಾಧ್ಯ. ಮಹಾದೇವಿಯು ಅಲ್ಲಿ ಬಂದಾಗ ಕಲ್ಯಾಣಪಟ್ಟಣವನ್ನು, ಅರ್ಥಾತ್ ಬಸವನ ಮತ್ತು ವಿಶೇಷತಃ ಅನುಭವಮಂಟಪದಲ್ಲಿ ಭಾಗಿಗಳಾದ ಶರಣರ ಇರವಿನಿಂದ ಪವಿತ್ರವಾದ ಕಲ್ಯಾಣವನ್ನು, ಯಾವ ಗೌರವದಿಂದ ಹೊಗಳಿರುವಳು ಎಂಬದನ್ನು ನೋಡಿದರೆ ಅದು ಆ ಕಾಲಕ್ಕೆ ಇಡೀ ಕರ್ನಾಟಕದಲ್ಲಿ ಆತ್ಮಾನುಭೂತಿಯ ದಿವ್ಯ ಕೇಂದ್ರವಾಗಿತ್ತೆಂಬುದು ಸಿದ್ಧವಾಗುತ್ತಿದೆ. ಅಸೆಆಮಿಷಗಳನಳಿದವರಲ್ಲದೆ ಇನ್ನಿತರರು ಕಲ್ಯಾಣದತ್ತಲಡಿ ಇಡಬಾರದು, ಒಳಹೊರಗು ಶುದ್ಧವಾದವರಿಗಲ್ಲದೆ ಅಲ್ಲಿ ಪ್ರವೇಶವಿಲ್ಲ, ನಾನೆಂಬುದನು ಹರಿದವರಲ್ಲದೆ ಅಲ್ಲಿ ಸೇರ ಕೂಡದು (ಶೂ. ೨೭೮), ಎಂದು ಅಕ್ಕನು ನುಡಿದಿರುವಳು. ಆ ಅನುಭವ ಮಂಟಪದಲ್ಲಿ ಯಾವಾಗಲೂ ತತ್ವಚರ್ಚೆಯೂ ಧರ್ಮ ಮತ್ತು ಆಚಾರಗಳ ಬಗ್ಗೆ ವಾದವಿವಾದವೂ ನಡೆಯುತ್ತಿತ್ತು. ಅದರಲ್ಲಿ ಇಂತಿಷ್ಟೇ ಜನರು ಇದ್ದರು ಎಂದು ಎಣಿಸಿ ಹೇಳಲಿಕ್ಕೆ ಬರುವಂತಿಲ್ಲ. ಜಾತಿ ಗೋತ್ರ, ಲಿಂಗವಯ, ಉದ್ಯೋಗವ್ಯವಸಾಯ ಮುಂತಾದ ಯಾವದೇ ನಿರ್ಬಂಧಗಳಿಲ್ಲದೆ ಕೇವಲ ಅನುಭಾವದೃಷ್ಟಿಯಿಂದ ಮುಂಡಿರಿದವರೆಲ್ಲರಿಗೂ ಅಲ್ಲಿ ನಿರರ್ಗಲವಾದ ಪ್ರವೇಶವಿತ್ತು ಮತ್ತು ಪೂರ್ಣ ಸ್ವಾತಂತ್ರ್ಯವಿತ್ತು. ಅಲ್ಲಿ ಅರಸರೂ ಇದ್ದರು ಆಳುಗಳೂ ಇದ್ದರು, ಪಂಡಿತರೂ ಇದ್ದರು ಪಾಮರರೂ ಇದ್ದರು, ಗಂಡಸರೂ ಇದ್ದರು ಹೆಂಗಸರೂ ಇದ್ದರು, ಸನ್ಯಾಸಿಗಳೂ ಇದ್ದರು ಸಂಸಾರಿಗಳೂ ಇದ್ದರು. ಬೇರೆ ಬೇರೆ ಪ್ರಾಂತದಿಂದ ಬಂದ ಶರಣರೂ ಅಲ್ಲಿದ್ದರು. ಕಟ್ಟಿಗೆಯ ಹೊರೆಗಳನ್ನು ಮಾರುವ ಮೋಳಿಗೆಯ ಮಾರಯ್ಯನು ಕಾಶ್ಮೀರದ ಅರಸನೆಂದು (ಶೂ. ೨೩೫) ಉಲ್ಲೇಖವಿದೆ. ಸಕಲೇಶ ಮಾದರಸನು ದಕ್ಷಿಣದಲ್ಲಿರುವ ಕಲ್ಲುಕುರಿಕೆಯ ಅರಸನು. ಆದಯ್ಯನು ಗುರ್ಜರ ಪ್ರಾಂತದ ವರ್ತಕನಿದ್ದು ಲಕ್ಷ್ಮೇಶ್ವರದಲ್ಲಿ ಬಂದು ನೆಲೆಗೊಂಡಿದ್ದನು. ಅನುಭವಮಂಟಪಕ್ಕೆ ಸಂಬಂಧಿಸಿದ ಹೆಸರುಗಳನ್ನು ಪರಿಶೀಲಿಸಿದರೆ ಅಲ್ಲಿ

ನೆರೆಯುತ್ತಿದ್ದ ಬಗೆಬಗೆಯ ಶರಣರ ಯಥಾರ್ಥಕಲ್ಪನೆಯು ಒರಬಹುದು. ಜೇಡರ ದಾಸಿಮಯ್ಯ, ಮಡಿವಾಳ ಮಾಚಯ್ಯ, ಮೇದಾರ ಕೇತಯ್ಯ, ಹಡಪದಪ್ಪಣ್ಣ, ಅಂಬಿಗರ ಚೌಡಯ್ಯ, ಫಕ್ಕೆಯ ಬೊಮ್ಮಣ್ಣ, ತುರುಗಾಹಿ ರಾಮಣ್ಣ, ಸುಂಕದ ಬಂಕಣ್ಣ, ಒಕ್ಕಲು ಮುದ್ದಯ್ಯ, ಡೋಹರ ಕಕ್ಕಯ್ಯ, ಮಾದರ ಚನ್ನಯ್ಯ, ತಳವಾರ ಕಾಮಿದೇವ, ಗಾಣದ ಕನ್ನಪ್ಪ, ವೈದ್ಯ ಸಂಗಣ್ಣ, ಕಿರಾತ ಸಂಗಯ್ಯ, ಸುಲಿಯ ಚಂದಯ್ಯ, ಸೂಜಿಕಾಯಕದ ರಾಮಿತಂದೆ, ಬಾಚಿಕಾಯಕದ ಬಸವಪ್ಪ, ಸತ್ತಿಗೆ ಕಾಯಕದ ರಾಮಿತಂದೆ, ಕನ್ನಡಿಯ ಕಾಯಕದ ಅಮ್ಮಿದೇವಯ್ಯ, ಕದಿರುಕಾಯಕದ ರಿಮ್ಮವ್ವೆ, ಆಯುದಕ್ಕಿ ಮಾರಯ್ಯ, ಸಿಂಪಿಗನಾದ ಶಂಕರದಾಸಿಮಯ್ಯ, ಅಕ್ಕಸಾಲಿಗನಾದ ಕಿನ್ನರಿ ಬೊಮ್ಮಣ್ಣ, ಸೈನ್ಯದಲ್ಲಿದ್ದ ಜೇಡರ ಮಾದಣ್ಣ, ಹಳೇವಸ್ತ್ರಗಳನ್ನು ಸರಿಪಡಿಸುವ ಮುಲಹರಕಾಯಕದ ಚಿಕ್ಕದೇವಯ್ಯ, ಕುಟ್ಟುವ ಕಾಯಕ ಮಾಡುವ ಕೊಟ್ಟಣದ ರೇಮುವ್ವೆ, ಮುಂತಾದ ಹೆಸರುಗಳು ಅನುಭವ ಮಂಟಪದಲ್ಲಿ ಕೂಡುವ ವಚನಕಾರರ ವಿವಿಧ ಜಾತಿ ಕುಲ ಉದ್ಯೋಗಾದಿಗಳನ್ನು ವ್ಯಕ್ತಪಡಿಸುತ್ತಿವೆ. ಈ ಪ್ರಕಾರ ಲೌಕಿಕದೃಷ್ಟಿಯಿಂದ ಉಚ್ಚ ನೀಚವೆಂದು ಎನಿಸಿಕೊಳ್ಳುವ ಜಾತಿಯವರೂ ನಾನಾವಿಧ ಉದ್ಯೋಗಗಳನ್ನು ಮಾಡುವವರೂ ಆ ಅನುಭವಮಂಟಪದಲ್ಲಿ ಏಕರಾಗಿ, ಏಕಚಿತ್ತರಾಗಿ, ಸರ್ವರಿಗೂ ಸಮನೂ ಸರ್ವರ ಅಂತರ್ಯಾಮಿಯೂ ಆದ ಏಕಾತ್ಮನನ್ನು ಕುರಿತು ಚರ್ಚೆಮಾಡಿ ಆತ್ಮಾನುಭವದ ದಿವ್ಯ ಆನಂದದಲ್ಲಿ ನಲಿದಾಡುತ್ತಿದ್ದರು. ವಚನಕಾರರ ಒಂದೇ ಒಂದು ದೊಡ್ಡ ಮತ್ತು ಸುಸಂಘಟಿತ ಗುಂಪನ್ನು ಎಲ್ಲಿಯಾದರೂ ಒತ್ತಟ್ಟಿಗೆ ಕಾಣಬೇಕಾಗಿದ್ದರೆ ನಾವು ಅನುಭವ ಮಂಟಪದ ಕಡೆಗೆಯೆ ನೋಡಬೇಕಾಗುವದು. ಹೀಗೆ ಅವರು ಒಟ್ಟುಗೂಡಿ ಚರ್ಚೆಮಾಡುವುದರಿಂದ ಅವರ ಉಪದೇಶಕ್ಕೆ ಒಂದು ಬಗೆಯ ಭವ್ಯಸ್ವರೂಪವೂ ಏಕರೂಪತೆಯೂ ಸುಸಂಬದ್ಧತೆಯೂ ಪರಸ್ಪರ ಪೂರಕತ್ವವೂ ಬಂದಿರುವದು.

೧೫೨. ಅನುಭವಮಂಟಪವೆಂದರೊಂದು ವಚನಕಾರರ ದೊಡ್ಡ ಕೂಟವಿತ್ತು ಎಂದು ಹೇಳಿ ಅದರ ಸ್ವರೂಪವನ್ನು ಸ್ವಲ್ಪ ಮಟ್ಟಿಗೆ ವಿವರಿಸಿದ್ದಾಯಿತು. ಇನ್ನು ಹಲವು ವಚನಕಾರರನ್ನು ಆರಿಸಿ ಅವರ ಕೆಲವು ವಿಶೇಷಗಳನ್ನು ನಿರ್ದೇಶಿಸುವ ಪೂರ್ವದಲ್ಲಿ ವಚನಕಾರರು ಎಷ್ಟು ಜನರಿದ್ದರು, ಏನು, ಎಂಬ ಮುಂತಾದ ಒಂದೆರಡು ಮಾತುಗಳ ಬಗ್ಗೆ ಬರೆಯುವದು ಅವಶ್ಯವು. ವಚನಗಳು ಕೋಟ್ಯಾನುಕೋಟಿ ಇರುವವು ಎಂಬ ಐತಿಹ್ಯ

ವಿದ್ದರೂ ವಚನಕಾರರು ಅಸಂಖ್ಯರಿದ್ದರೆಂಬ ಐತಿಹ್ಯವು ಎಲ್ಲಿಯೂ ಪ್ರಚಲಿತವಿಲ್ಲ! ವಚನಶಾಸ್ತ್ರಸಾರದ ಮೊದಲನೆಯ ಭಾಗದ (ಪ್ರಥಮ ಆವೃತ್ತಿ) ಬ. ಪರಿಶಿಷ್ಟದಲ್ಲಿ ಒಟ್ಟು ೫೧೩ ವಚನಕಾರರ ಉಲ್ಲೇಖವಿದೆ. ಆ ಪಟ್ಟಿಯಲ್ಲಿ ೧೬೮ ಜನರ ಹೆಸರು ಮತ್ತು ಮುದ್ರಿಕೆ ಎರಡೂ ಇವೆ. ೪೫ ಜನರ ಬರಿಯ ಮುದ್ರಿಕೆಗಳೆ ಇವೆ. ಅವರ ಹೆಸರುಗಳು ಇನ್ನೂ ಗೊತ್ತಾಗಿಲ್ಲವೆಂದು ತೋರುತ್ತದೆ. ಆ ೫೧೩ ರಲ್ಲಿ ೨೮ ವಚನಕಾರ್ತಿಯರಿರುವರು. ಹಲವು ಉತ್ತಮ ವಚನಗಳನ್ನು ಬರೆದವರ ಹೆಸರುಗಳು ಸಹ ಇನ್ನೂ ಗೊತ್ತಾಗಿಲ್ಲ. ಇದಕ್ಕೆ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೆಂಬ ಮುದ್ರಿಕೆಯುಳ್ಳ ವಚನಗಳೇ ದೃಷ್ಟವ್ಯ. ತಮ್ಮ ಸರ್ವಾರ್ಪಣ ತತ್ವವನ್ನನುಸರಿಸಿ ವಚನಕಾರರೆಲ್ಲರೂ ತಮ್ಮ ಹೆಸರಿನಿಂದ ಬರೆಯದೆ ತಮ್ಮ ಇಷ್ಟದೇವತೆಯ ಅಥವಾ ಗುರುದೇವರ ಹೆಸರನ್ನೆ ಮುದ್ರಿಕೆಗಳನ್ನಾಗಿ ಇಟ್ಟುಕೊಂಡು ವಚನಗಳನ್ನು ರಚಿಸಿದ್ದಾರೆ. ಅಪವಾದಾತ್ಮಕವಾಗಿ ಎಲ್ಲಿಯಾದರೂ ಒಬ್ಬರಿಬ್ಬರು ತಮ್ಮ ಸ್ವಂತ ಹೆಸರನ್ನು ಉಪಯೋಗಿಸಿದ್ದಾರೆ. ಅನಂತದೇವನೆಂಬವನು ಅನಂತ ಗುರು, ಅಲ್ಲಮ ಮಹಾಪ್ರಭು ಎಂದು ತನ್ನ ಗುರುಗಳ ಹೆಸರನ್ನೆ ತನ್ನ ಮುದ್ರಿಕೆಮಾಡಿಕೊಂಡಿದ್ದಾನೆ. ಅಜಗಣ್ಣನ 'ಬೆನ್ನ ಬಳಿಯಲಿ ಬಂದ' ಮುಕ್ತಾಯಕ್ಕನು ಅಜಗಣ್ಣ ಎಂಬ ಮುದ್ರಿಕೆಯಿಂದ ಬರೆದಿರುವಳು. ಅತನು ತನ್ನಣ್ಣನೆಂದು ಹಾಗೆ ಮಾಡದೆ ತನ್ನ ಗುರುವೆಂದೇ ಆ ಮುದ್ರಿಕೆಯನ್ನು ಸ್ವೀಕರಿಸಿರಬೇಕು ಎನ್ನುವದು ಹೆಚ್ಚು ಯುಕ್ತಿಯುಕ್ತವು. ಸ್ವಂತ ಹೆಸರಿನಿಂದ ಬರೆದ ವಚನಕಾರರೆಂದರೆ ಅಂಬಿಗರಚೌಡಯ್ಯ, ಗುರುಪುರದ ಮಲ್ಲಯ್ಯ, ನಿವೃತ್ತಿಸಂಗಯ್ಯ, ಸೊಡ್ಡಳ ಬಾಚರಸ, ನಿರಾಲಂಬ ಮುಂತಾದವರು. ಈ ರೀತಿ ೫೧೩ ವಚನಕಾರರಲ್ಲಿ ಒಟ್ಟಿಗೆ ಹತ್ತೆಂಟು ಅಪವಾದಗಳು ಮಾತ್ರ ಕೊರಡಬಹುದು. ಮಿಕ್ಕವರೆಲ್ಲರೂ ತಮ್ಮ ಇಷ್ಟದೇವತೆಯ ಹೆಸರನ್ನೆ ಮುದ್ರಿಕೆಯಾಗಿ ಮಾಡಿಕೊಂಡಿದ್ದಾರೆ. ಐತಿಹಾಸಿಕ ದೃಷ್ಟಿಯಿಂದ ತಮ್ಮ ಊರು, ಹೆಸರು, ಕಾಲ, ಇವುಗಳನ್ನು ಶರಣರು ಎಲ್ಲಿಯಾದರೂ ತಮ್ಮ ಲೇಖಗಳಲ್ಲಿ ಕೊಟ್ಟಿದ್ದರೆ ಅದು ಬಹಳ ಸಹಾಯಕವಾಗುತ್ತಿತ್ತು. ಆದರೆ ಪಾರಮಾರ್ಥಿಕ ದೃಷ್ಟಿಯಿಂದ ಅವರಿಗೆ ಅದರದೇನು ಮಹತ್ವವು? ದೇವರ ಭಕ್ತರು ದೇವರ ನಿಮಿತ್ತಮಾತ್ರರಾಗಿ ವರ್ತಿಸಿ ಹೇಳಹೆಸರಿಲ್ಲದೆ ಹೋದರಾಯಿತು, ಎಂದು ಅವರ ವಿಚಾರವಿರಬಹುದು. 'ಸಂಗನ ಬಸವೇಶ್ವರ' ಮತ್ತು ಗುಹೇಶ್ವರ ಸಿದ್ಧನಾಯಕ ಇವರಂತೆ ಹಲವರು ತಮ್ಮ ಗುರುಪರಂಪರೆಯನ್ನಾದರೂ ಕೊಟ್ಟಿರುವರು, ಮಿಕ್ಕವರು ಅದನ್ನೂ

ಕೊಟ್ಟಿಲ್ಲ. ಈ ರೀತಿ, ವಚನಕಾರರಲ್ಲಿ ಬಹುಸಂಖ್ಯರ ಚರಿತ್ರಗಳು ಉಪಲಬ್ಧವಿಲ್ಲ, ಇಷ್ಟೇ ಅಲ್ಲ; ಅವರ ಸ್ಥಲಕುಲಕಾಲಗಳು ಸಹ, ಅದೇಕೆ ಅನೇಕರ ಹೆಸರುಗಳು ಸಹ ಗೊತ್ತಾಗಿಲ್ಲ! ತಮ್ಮ ಸ್ಥಲಕುಲಗಳನ್ನು ನಮಗೆ ಅರಿಯುಗೊಡದಿದ್ದರೂ ಮುಗಿಲವಿಂಚಿನಂತೆ ಅವರು ಅನೇಕರಿಗೆ ಬೆಳಕು ಬೀರಿ ದಾರಿತೋರಿ ಮಾಯವಾಗಿರುವರು. ತಾವು ಯಾರು ಏನೆಂಬುದನು ನಮಗೆ ತಿಳಿಯಗೊಡದಿದ್ದರೂ ಅವರು ತಮ್ಮ ಸೂಳುನುಡಿಗಳನ್ನು ಸಾರಿ ಹೇಳಿ ತಮ್ಮ ನೀತಿಯ ನಡೆಯ ಹೆಜ್ಜೆಗಳ ಗುರುತನ್ನು ಪ್ರಪಂಚಪಥದಲ್ಲಿ ಬಿಟ್ಟುಹೋಗಿರುವರು. ತಾವು ವಚನಗಳನ್ನು ಬರೆಯಬೇಕು, ಸಾಹಿತಿಗಳೆಂದೆನಿಸಿಕೊಳ್ಳಬೇಕು, ಅವುಗಳಿಗೆ ವ್ಯವಸ್ಥಿತ ಸ್ವರೂಪವನ್ನು ಕೊಡಬೇಕು, ಅವುಗಳನ್ನು ತಿಳಿಯಾಗಿ ಬರೆಯಿಸಿ ಆಕರ್ಷಕರೀತಿಯಿಂದ ಆಧುನಿಕವರ್ತಕರಂತೆ ಜನರ ಮುಂದಿಡಬೇಕು, ಎಂಬ ಹವಣು ಅಥವಾ ತಾವು ಮುಂದೆ ವಾಙ್ಮಯೇತಿಹಾಸದಲ್ಲಿ ಅಜರಾಮರರಾಗಿರಬೇಕು, ಎಂಬ ಆಕಾಂಕ್ಷೆ ಅವರಲ್ಲಿ ತುಸು ಆದರೂ ಇದ್ದಂತೆ ಕಂಡುಬರುವದಿಲ್ಲ. ಹಾಗೇನಾದರೂ ಇದ್ದರೆ, ಅವರು ತಮ್ಮ ಹೆಸರು ಉಳಿಯಬೇಕೆಂದು ಬುದ್ಧಿಪುರಸ್ಸರ ಪ್ರಯತ್ನವನ್ನು ಮಾಡುತ್ತಿದ್ದರು. ಅವರು ದೇವರದರ್ಶನಕ್ಕಾಗಿ ಹುಚ್ಚರಾದವರು, ತನುಮನಧನಗಳನ್ನು ಪ್ರಾಣಭಾವಗಳನ್ನು ಪರಮಾತ್ಮನಿಗರ್ಪಿಸಿದ ಶರಣರು, ಆತ್ಮಾನುಭವಕ್ಕಾಗಿ ಆತುರರಾದ ಸಾಧಕರು, ಸಾಕ್ಷಾತ್ಕಾರವೆ ಸರ್ವಸ್ವವೆಂದು ಜೀವಭಾವದಿಂದ ನಂಬಿದವರವರು. ಈ ತಮ್ಮ ಸ್ವಭಾವಸ್ವಧರ್ಮಗಳಿಗನುಸರಿಸಿ ನಡೆಯುತ್ತಿರುವಾಗ ಅವರು ಸ್ಫೂರ್ತಿಯಿಂದ ನುಡಿದುದೆ ವಚನವೆನಿಸಿತು. ತಮ್ಮ ಅನುಭಾವಗೋಷ್ಠಿಗಳನ್ನು ಒಬ್ಬರಿಗೊಬ್ಬರು ನಿರೂಪಿಸುವಾಗ ಹೊರಹೊಮ್ಮಿದ ಶಬ್ದವೆ ವಚನರೂಪವನ್ನು ತಾಳಿತು. ಆ ವಚನಗಳು ಸಂಗ್ರಹಣೀಯ, ಆದರಣೀಯ, ಅನುಕರಣೀಯ, ಪೂಜಾರ್ಹ ಎಂದು ಜನರು ಅವುಗಳನ್ನು ಕೂಡಿಸಿ, ಜೋಡಿಸಿ, ಪೂಜಿಸಲಾರಂಭಿಸಿದರು. ಅವೇ ವಚನಶಾಸ್ತ್ರವೆಂಬ ರೂಪವನ್ನು ಧರಿಸಿದವು, ಅವೇ ಜನಸಾಮಾನ್ಯರಿಗೆಲ್ಲ ಮಾರ್ಗದರ್ಶಕವಾದವು.

೫೫೩. ಇದುವರೆಗೆ ಎಲ್ಲ ವಚನಕಾರರಿಗೆ ಸಾಮಾನ್ಯವಾದ ಮುಖ್ಯ ಮಾತುಗಳನ್ನು ಹೇಳಿದೆವು. ಇನ್ನು ಕೆಲವು ವಚನಕಾರರ ವೈಶಿಷ್ಟ್ಯಗಳನ್ನು ಕೊಡುವ ವಿಚಾರವಿದೆ. ಹೀಗೆ ಮಾಡುವಾಗ ನಾವು ಅನುಸರಿಸಿದ ಹೆಸರುಗಳ ಕ್ರಮವು ಯಾವದೊಂದು ಹೆಚ್ಚು ಕಡಿಮೆ ಅಥವಾ ಹಿರಿಯ ಕಿರಿಯ

ಎಂಬ ತತ್ವವನ್ನು ಅವಲಂಬಿಸಿಲ್ಲ. ಮೊದಲು ಕೆಲವು ವಚನಕಾರ್ತಿಯರನ್ನು ಕುರಿತು ಬರೆದು ಬಳಿಕ ಒಬ್ಬೊಬ್ಬ ವಚನಕಾರರ ಬಗ್ಗೆ ಪ್ರತ್ಯೇಕವಾಗಿ ಬರೆಯುವೆವು. ಈ ಬರಹವು ಕೇವಲ ನಿರ್ದೇಶಮಾತ್ರವಿರುವದು ಎಂಬು ದನ್ನು ಮರೆಯಕೂಡದು. ಯಾಕಂದರೆ, ಪ್ರತಿಯೊಬ್ಬ ವಚನಕಾರನ ವೈಶಿಷ್ಟ್ಯಗಳ ಸಾಂಗೋಪಾಂಗ ವಿವೇಚನ ಮಾಡುವಷ್ಟು ಸಾಮಗ್ರಿಯೂ ಉಪಲಬ್ಧವಿಲ್ಲ ಮತ್ತು ಈ ಗ್ರಂಥದಲ್ಲಿ ಹಾಗೆ ಮಾಡಲಿಕ್ಕೆ ಆಸ್ಪದವೂ ಇಲ್ಲ. ವಚನಶಾಸ್ತ್ರಸಾರದಲ್ಲಿ ೩೮ ಸ್ತ್ರೀವಚನಕಾರರ ಹೆಸರುಗಳಿದ್ದರೂ ಅವರಲ್ಲಿ ಒಬ್ಬಿಬ್ಬರ ವಚನಗಳೆ ಪ್ರತ್ಯೇಕವಾಗಿ ಬಂದೆಡೆಗೆ ಪ್ರಸಿದ್ಧಮಾಡಲ್ಪಟ್ಟಿವೆ. ಮಹಾದೇವಿಯಕ್ಕ, ಲಿಂಗಮ್ಮ ಇವರ ವಚನಗಳಷ್ಟೆ ಹಾಗೆ ಪ್ರಕಟವಾಗಿವೆ. ಇಲ್ಲಿ ವಚನಕಾರ್ತಿಯರೊಳಗೆ ಮುಕ್ತಾಯಕ್ಕ, ಮೋಳಿಗೆಯ ಮಾರಯ್ಯಗಳ ಧರ್ಮಪತ್ನಿಯಾದ ಮಹಾದೇವಿಯಮ್ಮ, ಮತ್ತು ಉಡುತಡಿಯ ಮಹಾದೇವಿಯಕ್ಕ, ಮತ್ತು ಸುಲಿಯ ಚಂದಯ್ಯನ ಸತಿ ಲಕ್ಕಮ್ಮ ಈ ನಾಲ್ವರ ಬಗ್ಗೆ ಮಾತ್ರ ನಾಲ್ಕು ಮಾತುಗಳನ್ನು ಬರೆಯುವ ವಿಚಾರ ವಿದೆ:– (೧) ಗುರುಕಾರುಣ್ಯವನ್ನು ಪಡೆದ ಅಲ್ಲಮಪ್ರಭುವು ಉಪದೇಶ ಮಾಡುತ್ತ ದೇಶಸಂಚಾರದಲ್ಲಿರುವಾಗ ಅವನಿಗೆ ಮುಕ್ತಾಯಕ್ಕನು ಭೆಟ್ಟಿಯಾದಳು. ಆಕೆಯ ಅಣ್ಣನಾದ ಜ್ಞಾನಿ ಅಜಗಣ್ಣನು ಐಕ್ಯಹೊಂದಲು ಆಕೆ ವಿಯೋಗದುಃಖದಿಂದ ಪ್ರಲಪಿಸುತ್ತಿದ್ದಳು. ಆ ಪ್ರಲಾಪವನ್ನು ಕೇಳಿ ಆಕೆ ಮಹಾಜ್ಞಾನಿಯೆಂದು ಪ್ರಭುದೇವರು ಗುರುತಿಸಿದನು. ಆಗ ಪ್ರಭುವಿಗೂ ಆಕೆಗೂ ಆದ ಸಂಭಾಷಣವು ಶೂನ್ಯಸಂಪಾದನೆಯ ಪುಟ ೨೨ ರಿಂದ ೩೫ ರ ವರೆಗೆ ಕೊಡಲ್ಪಟ್ಟಿದೆ. ಆ ಸಂಭಾಷಣವು ಬಹಳೇ ತಾತ್ವಿಕವೂ ಉದಾತ್ತವೂ ಉದ್ಬೋಧಕವೂ ಇರುವದು. ಎಷ್ಟು ತಂಗೆಂದಿರ ಅಣ್ಣಂದಿರು ಸಾಯುವದಿಲ್ಲ? ಆದರೆ ಈ ಪರಿ ಮುಕ್ತಾಯಕ್ಕನಂತೆ ಪ್ರಲಪಿಸುವ ತಂಗೆಂದಿರೆಷ್ಟು ಜನರಿರುವರು? 'ಅಜಗಣ್ಣ, ನನ್ನ ಕಣ್ಣುಕಟ್ಟಿ ಕನ್ನಡಿಯ ತೋರಿತ್ತು ನಿನ್ನ ಯೋಗವು,' ಎಂದು ತನಗೆ ಅಂತರ್ಜ್ಞಾನವನ್ನಿತ್ತ ಅಜಗಣ್ಣನನ್ನು ಆಕೆ ನೆನೆಸುವಳು. ಅಜಗಣ್ಣನು ಒಂದೇ ತಾಯಿತಂದೆಯ ಹೊಟ್ಟೆಯಲ್ಲಿ ಹುಟ್ಟಿದ ಸಹೋದರನಷ್ಟೇ ಅಲ್ಲ, ಅವನು ತನ್ನ ಅರಿವಿನಮುಂದೆ ತೋರುವ ಪರವಸ್ತುವು, ಆ ವಸ್ತುವು ದೂರಾಗಿರುವದು, ಎಂದು ಆಕೆ ಶೋಕಿಸುವುದನ್ನು ನೋಡಿ ಪ್ರಭುವು, 'ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದು ಕೊಂಡು ಕಂಗಳ ಮುತ್ತು ಪವಣಿಸುವಾಕೆ ನೀನಾರು,' ಎಂದು ಕೇಳಿದನು. ಅದಕ್ಕೆ ಆಕೆಯು, 'ತಲೆಯಳಿದು ತಲೆಗೆಟ್ಟು ಬೆಳಗುವ ಜ್ಯೋತಿ ಎನ್ನ

ಅಜಗಣ್ಣ ತಂದೆಯ ಪೆಸ್ನು ಬಳಿಯುವಳು,' ಹೀಗೆ ತಾನು ಅಜಗಣ್ಣನ ತಂಗಿಯು ಎಂದು ಹೇಳುವಾಗ ಆತ್ಮನ ಅಮರತ್ವಸೂಚಕವಾದ ಮತ್ತು ಆತ್ಮದ ಚಿನ್ಮಯತ್ವದ ದ್ಯೋತಕವಾದ ಉತ್ತರವನ್ನು ಕೊಟ್ಟಿರುವಳು. 'ಹೀಗೆ ಬಳಲಬೇಡ, ನೀನು ಜ್ಞಾನಿಯಿರುವಿ,' ಎಂದು ಪ್ರಭುವು ಸಮಾಧಾನ ಹೇಳಲು ತನ್ನಣ್ಣನ ದಿವ್ಯಜ್ಞಾನವನ್ನೂ ಶ್ರೇಷ್ಠ ನಿಲವನ್ನೂ ವರ್ಣಿಸಿ, 'ಅವನನ್ನಗಲಿ ನಾನು ಸುಖದಿಂದ ಬಾಳುವ ಬಗೆಯಾವುದು,' ಎಂದು ಕೇಳುವಳು. ಬಳಿಕ ಗುರುವಿಲ್ಲದೆ ಮುಕ್ತಿಇಲ್ಲ, ತಾನೆ ತನ್ನನ್ನರಿದರೆ ಅರಿವೇ ಗುರುವು, ಬೇರೆ ಗುರುವಿನ ಅವಶ್ಯಕತೆ ಇಲ್ಲ, ಎಂಬ ಮುಂತಾದ ಮಾತುಗಳು ನಡೆಯುವವು. ಮುಕ್ತಾಯಕ್ಕನು ಸಮಾಧಾನಗೊಳ್ಳದೆ, 'ನಿನಗಿನ್ನೂ ಒಡಲ ಹಂಗು ಬಿಡದು, ನಿನ್ನ ಮಾತಿನ ಮಥನ ಮಾಯದು, ಎನಗೇತರಿವ ಹೇಳುವೆ ಹೋಗು,' ಎಂದು ಅಲ್ಲಮ್ಮನನ್ನು ಹೀಯಾಳಿಸುವಳು! ವಿಕಳಾವಸ್ಥೆಯ ಮೂಲಕ ತನ್ನನ್ನು ಹೀಗೆ ಜರಿದರೂ ಖತಿಗೊಳ್ಳದೆ ಅಲ್ಲಮಪ್ರಭುವು ಪುನಃ, 'ಶರಣನು ನಡೆದು ನಿರ್ಗಮನಿಯು, ನುಡಿದು ಮುಗ್ಧನು, ಅವನು ತನ್ನಲ್ಲಿ ತಾನು ತದ್ಗತನಾಗಿರುವುದರಿಂದ ನಿರ್ಲೇಪನು,' ಎಂದು ಜೀವನ್ಮುಕ್ತನ ಸ್ಥಿತಿಯನ್ನು ವರ್ಣಿಸಿ ಹೇಳುವನು. ಅದನ್ನು ಒಪ್ಪಿ, ಶಿವಶರಣರ ನಿಲವು ಕಬ್ಬುನ ಉಂಡ ನೀರಿನಂತೆ, ಬಯಲನಪ್ಪಿದ ವಾಯುವಿನಂತೆ ಇರುವದು, ಎಂದು ಮುಕ್ತಾಯಕ್ಕನು ಶೋಕಾದಿಗಳನ್ನು ಬಿಟ್ಟು, ಶಬ್ದಮುಗ್ಧಳಾಗಿ, 'ಎನ್ನ ಅಜಗಣ್ಣ ತಂದೆಯ ಬೆರಸಿದ ಬಳಿಕ ಉರಿಯುಂಡ ಕರ್ಪುರದಂತಾದೆನಯ್ಯಾ,' ಎಂಬ ಧನ್ಯಭಾವವನ್ನು ವ್ಯಕ್ತಮಾಡುವಳು! ಈ ಸಂಭಾಷಣವು ಆಕೆಯ ನಿಸ್ಸೀಮ ಬಂಧುಪ್ರೇಮ, ತತ್ವನಿಷ್ಠೆ, ಆಳವಾಗಿ ವಿಚಾರಮಾಡುವ ಶಕ್ತಿ ಈ ಮುಂತಾದ ಗುಣಗಳನ್ನು ವ್ಯಕ್ತಗೊಳಿಸುತ್ತಿದೆ.

(೨) 'ನೀನೇನು ನನಗೆ ಸಮಾಧಾನ ಹೇಳಬಲ್ಲೆ ಹೋಗತ್ತ,' ಎಂದು ಪ್ರಭುದೇವರಂಥ ಸಿದ್ಧನಿಗೆ ಇದಿರುನುಡಿಯುವ ಸಾಮರ್ಥ್ಯವೂ ಧೈರ್ಯವೂ ಮುಕ್ತಾಯಕ್ಕನಲ್ಲಿದ್ದರೆ ತನ್ನ ಗಂಡನಿಗೆ ನಿಜೈಕ್ಯದ ತತ್ವವನ್ನು ತಿಳಿಸಿ ಒಡಂಬಡಿಸುವ ಯೋಗ್ಯತೆಯು ಮೋಳಿಗೆಯ ಮಾರಯ್ಯನ ಪುಣ್ಯಾಂಗನೆಯಾದ ಮಹಾದೇವಿಯಮ್ಮನಲ್ಲಿತ್ತು. ಈ ವಿಷಯವು ಶೂನ್ಯಸಂಪಾದನೆಯಲ್ಲಿ ಪುಟ ೨೪೨ ರಿಂದ ೨೪೮ ರ ವರೆಗೆ ಬಂದಿದೆ. 'ನೀವು ಈಗ ಲಿಂಗೈಕ್ಯವಾಗಿಹೆವೆಂದು ನುಡಿಯಬೇಕಾದರೆ ಈ ಮುನ್ನ ಲಿಂಗದಲ್ಲಿ ವಿಕಾರ್ಥವಾಗಿಲ್ಲವೆ,' ಎಂದು ಆಕೆ ಮಾರಯ್ಯನಿಗೆ ಒಂದು ಮಾರ್ಮಿಕಪ್ರಶ್ನೆಯನ್ನು ಕೇಳುವಳು. 'ಸಕಲ ದೇಶ ಕೋಶ ವಾಸ ಭಾಂಡಾರ ಬಿಟ್ಟು ಬಂದು ಭಕ್ತಿಮಾಡಿದ್ದಕ್ಕೆ ಈಗ

ಐಕ್ಯವಾಗುವದು ಎಂದರೆ ಈ ಭಕ್ತಿಯು ಕೈಕೂಲಿಯೆ! ಕಾಷ್ಯದ ತುಂಡು ಗಳನ್ನು ಮಾಡಿದ್ದಕ್ಕೆ ನಿಮಗೆ ಅಹಂಕಾರವಾಯಿತೇ? ಹಾಗೆ ಅನ್ನಬೇಡಿ. ಹೊರಗೆ ಕೂಡಿಹೆವೆಂಬುದು ನಿಮ್ಮ ಅರುವಿಂಗೆ ಹಾನಿ,' ಎಂದು ತನ್ನ ಗಂಡನಿಗೆ ಚನ್ನಾಗಿ ಬುದ್ಧಿಯ ಮಾತು ಹೇಳಿ, ಮೇಲೆ ಮತ್ತೆ, 'ಇವು ಶಕ್ತಿಯ ಮಾತೆಂದು (ಸ್ತ್ರೀಯ ಮಾತೆಂದು) ಧಿಃಕರಿಸಬೇಡಿ,' ಎಂಬ ವಿನಯ ಪೂರ್ಣ ವಿನೋದವನ್ನು ಮಾಡುವಳು! ತನ್ನ ತಪ್ಪು ತಿಳಿಯಲು ಮಾರಯ್ಯನು ನಿಜೈಕ್ಯದ ನಿಲವಿನ ಗುಟ್ಟನ್ನು ಹೇಳೆಂದು ಹೆಂಡತಿಯನ್ನು ಕೇಳಲು, ಸತಿಯಾದ ಆಕೆಯು, 'ಮಹಾಘನಲಿಂಗಸ್ವರೂಪರು ನೀವಾನಕಾರಣ ಎನಗೆ ಸ್ವತಂತ್ರವಿಲ್ಲ, ಎನ್ನ ಸ್ತ್ರೀಜಾತಿ ನಿಮ್ಮ ಶ್ರೀಪಾದಪದ್ಮದಲ್ಲಿ ಅಡ ಗಿರುವದು, ಎನಗೆ ಭಿನ್ನದ ಮಾತಿಲ್ಲ,' ಎಂದು ತನ್ನ ವಿನಯಾತಿಶಯ ವನ್ನು ಪುನಃ ವ್ಯಕ್ತಗೊಳಿಸುವಳು. ಆಗ, 'ನೀನು ನಿಜವಾದ ಪತಿಪರಾ ಯಣ ಧರ್ಮಪತ್ನಿಯಂತೆ ಎನ್ನ ಸದಾಚಾರಸದ್ಭಕ್ತಿಗೆ ಒಳಗಾದಕಾರಣ ಎನಗೂ ನಿನಗೂ ಭಿನ್ನಭಾವವಿಲ್ಲ, ನಿನ್ನ ಭಕ್ತಿಯ ಬೆಳೆಯೆ ಎನ್ನ ಸತ್ಯದ ಹಾದಿ, ಎನ್ನ ಭಕ್ತಿಗೆ ನಿನ್ನ ಶಕ್ತಿ,' ಎಂದು ಮಾರಯ್ಯನು ಸತಿಪತಿಗಳ ನಿಲವು ಎಷ್ಟು ಉಚ್ಚಬಗೆಯದ್ದಿರಬಲ್ಲದು, ಎಂಬುದನ್ನು ನುಡಿದುತೋರಿ ಸುವನು. ಇದನ್ನು ಕೇಳಿ, ಮಹಾದೇವಿಯಮ್ಮನು ಮಾರಯ್ಯನಿಗೆ ಐಕ್ಯ ಸ್ಥಲದ ರಹಸ್ಯವನ್ನು ಬಿಚ್ಚಿಹೇಳಿರುವಳು. 'ಅಂಧಕನ ಕೈಯಲ್ಲಿ ರತ್ನ ವಿದ್ದರೂ ಅದು ಅವನಿಗೆ ಕಾಣದಿರುವಂತೆ ನಿಮ್ಮ ಸ್ಥಿತಿಯಾಯಿತು,' ಎಂದು ಮೊದಲು ಗಂಡನನ್ನು ಹೀಯಾಳಿಸಿ ಮುಂದೆ, 'ಆತ್ಮನಿಶ್ಚಯವಾದಲ್ಲಿಯೆ ಕೈಲಾಸ, ಭಿನ್ನಭಾವವಿಲ್ಲದೆ ಅರಿದರುಹಿಸಿಕೊಂಬ ಕುರುಹು ಏಕವಾದಲ್ಲಿ ಐಕ್ಯಸ್ಥಲವು,' ಎಂದು ಹೇಳಿ, ಆ ಐಕ್ಯಾನಂದವನ್ನು ಉಪನಿಷತ್ಕಾರರಂತೆ, 'ಎನ್ನ ನಿನ್ನ ಕೂಟದ ಸುಖದಂತೆ,' ಎಂದು ಉಪಮಿಸಿರುವಳು. ಇಲ್ಲಿ ಮಹಾದೇವಿಯಮ್ಮನ ಜ್ಞಾನ, ವಿನಯ, ವಿನೋದ, ಸತಿತ್ವದ ಸೀಮೆ ಮುಂತಾದವುಗಳು ಬಹಳೇ ಸ್ಪಷ್ಟವಾಗಿ ಹೊರದೋರಿರುವವು. ಈ ಸಂಭಾ ಷಣವು ಸತಿಪತಿಗಳ ಆಧ್ಯಾತ್ಮಿಕ ಸಂಬಂಧದ ಶ್ರೇಷ್ಠ ಆದರ್ಶವನ್ನು ನಮ್ಮ ಮುಂದೆ ಇಡುವದು. ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯನು ತನ್ನ ಸತಿ ಮೈತ್ರೇಯಿಗೆ ಆತ್ಮಜ್ಞಾನವನ್ನು ಹೇಳಿರುವನು. ಇಲ್ಲಿ ಮಹಾದೇವಿಯು ತನ್ನ ಗಂಡನ ಅಹಂಕಾರ ಅವಿದ್ಯೆಗಳನ್ನು ಅಲ್ಲಗಳೆದು ಅವನಿಗೆ ದಿವ್ಯಜ್ಞಾನದ ಉಪದೇಶವನ್ನು ಮಾಡಿರುವಳು.

(೩) ಮುಕ್ತಾಯಕ್ಕನು ಅಣ್ಣನ ಅಗಲಿಕೆಯಿಂದ ವಿಸ್ಮಲೆಯಾದ

ಜ್ಞಾನಿಯು, ಮಹಾದೇವಿಯಮ್ಮನು ತಿಳಿವಿನ ಬೆಳಗಿನಿಂದ ಕಾಮಿಗೆ ಸಹ ಸುಪಥದೋರುವ ಮಹಾಸತಿಯು. ಇನ್ನು ನಾವು ಬಣ್ಣಿಸುವ ಉಡುತಡಿಯ ಮಹಾದೇವಿಯಕ್ಕನು ವೀರ ವೈರಾಗ್ಯ ಮತ್ತು ಉಜ್ವಲ ಅನುಭಾವ ಇವುಗಳಿಂದ ಯುಕ್ತಳಾದ ಸಾಹಸೀ ಧರ್ಮಾಂ ಗನೆಯು. ಎಲ್ಲ ಶಿವಶರಣೆಯರ ಶಿರೋಭಾಗದಲ್ಲಿ ಮುಕುಟಮಣಿಯಂತೆ ಶೋಭಿಸುವ ಮಹಾದೇವಿಯ ವಚನಗಳಿಗೆ ಆಕೆಯ ಶೀಲದ ಮೂಲಕ ವಿಶೇಷ ಒಪ್ಪ ಉಂಟಾಗಿದೆ. ಆಕೆಯ ತೇಜಃಪುಂಜ ಚಾರಿತ್ರ್ಯವು ಆಕೆಯ ಶಬ್ದರತ್ನಕ್ಕೆ ಅಪರಂಜಿಯ ಕುಂದಣದಂತೆ ಕಂಗೊಳಿಸುವದು. ಸ್ವಲ್ಪ ಮಟ್ಟಿಗೆ ಆಕೆಯ ಚರಿತ್ರವು ಚಾಮರಸ ಕವಿಯ ಪ್ರಭುಲಿಂಗಲೀಲೆ ಯಲ್ಲಿ ಬಂದಿದೆ. ಆಕೆ ಕಲ್ಯಾಣಕ್ಕೆ ಹೋದ ವಿಷಯವು ಶೂನ್ಯಸಂಪಾದ ನೆಯ ಪುಟ ೨೭೬ರಿಂದ ೨೯೯ ವರೆಗೆ ಕೊಡಲ್ಪಟ್ಟಿರುವದು. ಉಡುತಡಿ ಎಂಬ ಗ್ರಾಮದಲ್ಲಿ ವಿಮಲ ಮತ್ತು ಸುಮತಿ ಎಂಬ ಒಂದು, ಬಡವಾದರೂ ಸುಶೀಲಸಂಪನ್ನ, ವೀರಶೈವ ದಂಪತಿಯು ಇರುತ್ತಿತ್ತು. ಅಕ್ಕನು ಅವರ ಬಸಿರಲ್ಲಿ ಬಂದ ಮಹಾಮಹಿಮಾಶಾಲಿ ಮಹಿಳೆಯು. ಆ ಚನ್ನೆಯ ಸೌಂದ ರ್ಯಕ್ಕೆ ಮೆಚ್ಚಿ ಆಕೆಯನ್ನು ನೆರೆಯಬೇಕೆಂಬ ಬಯಕೆಯಿಂದ ಬಂದ ಕೌಶಿಕ ನೆಂಬ ಆ ಊರ ಜೈನ ಅರಸನು ತನ್ನ ಇಷ್ಟದಂತೆ ದೀಕ್ಷೆಪಡೆಯಲು ಒಪ್ಪದ್ದರಿಂದ ಆಕೆಯು ತಕ್ಷಣವೆ ಅಲ್ಲಿಂದ ದಿಗಂಬರದುಡುಗೆಯನುಟ್ಟು ಕೇಶವೆಂಬಂಬರದ ಮುಸುಕಿಟ್ಟು ಕಲ್ಯಾಣದತ್ತ ಹೊರಟಳು. ಒಳ್ಳೆ ಹದಿ ನಾರು ವರ್ಷದ ಪ್ರಾಯದಲ್ಲಿ ನವಯೌವ್ವನದ ಸುಖದ ಸುಗ್ಗಿಯು ತನ್ನ ನರಮನೆಗೆ ಕರೆಯುತ್ತಿರಲು ಆ ಭೌತಿಕ ಭೋಗಭಾಗ್ಯಗಳನ್ನೆಲ್ಲ ಆತ್ಮಬಲ ದಿಂದ ಬಹಿಷ್ಕರಿಸಿ, ಭವಸಾಗರವನ್ನು ದಾಟಿ, ಆ ಲಾವಣ್ಯವತಿಯು ಶಿವ ನೋಳ್ಪರವಶವನೈದಿ, ಸರ್ವಕರಣಂಗಳನ್ನು ಅರುವಿಂಗೆ ಆಹುತಿಯನಿಕ್ಕಿ, 'ಚನ್ನಮಲ್ಲಿಕಾರ್ಜುನನೆ ಗಂಡನೆನಗೆ, ಮಿಕ್ಕ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯ,' ಎನ್ನುತ್ತ ತನ್ನ ಸರ್ವಸ್ವವನ್ನು ಧರ್ಮಜೀವನಕ್ಕೆ ಧಾರೆಯೆರೆದಳು! ಆಕೆ ಕಲ್ಯಾಣದ ಅನುಭವಮಂಟಪದಲ್ಲಿ ಅಲ್ಲಮಪ್ರಭುಗ ಳೆದುರಿಗೆ ಬರಲು, ನೀನು ಒಳ್ಳೆ ಚಲುವೆಯಾದ ಪ್ರಾಯದ ಹೆಣ್ಣುಮಗಳು, ನಿನ್ನ ಪತಿಯು ಕುರುಹು ಹೇಳಿದರೆ ಶರಣರ ಸಂಗದಲ್ಲಿ ಬಂದು ಕುಳ್ಳಿರು, ಇಲ್ಲದಿರೆ ಅತ್ತ ತೊಲಗು ತಾಯೆ, ಎಂದು ಅವನು ಬೆಸಸಿದನು. ಅದಕ್ಕೆ ಒಡನೆ, 'ದೇವರೇ ನನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸುತ್ತಿದ್ದೆನು, ಅತನೊಡನೆಯೆ ಮದುವೆನಾಡಿ ಎಲ್ಲರೂ ಎನ್ನ ಬಯಕೆಯನ್ನು ಪೂರೈಸಿ

ದರು,' ಎಂದು ಹೇಳಿದಳು. ಆ ಕಾಲಕ್ಕೆ ಪ್ರಭುವು ಪ್ರಶ್ನಿಹಾಕಿ ಮಾಡಿದ ಅಕ್ಕನ ಪರೀಕ್ಷೆ ಮತ್ತು ಅಕ್ಕನು ಕೊಟ್ಟ ಸಮರ್ಪಕ ಹಾಗೂ ಜ್ಞಾನ ಪೂರ್ಣ ಉತ್ತರ ಇವೆರಡೂ ಬಹಳೇ ಮನೋವೇಧಕವಿರುವವು. 'ನಿನ್ನ ಮಾತು ನಂಬಲಾರೆ, ಕೌಶಿಕನು ದೀಕ್ಷೆಹೊಂದಲಿಲ್ಲ ಎಂಬ ನಿಮಿತ್ತವನ್ನು ಅವನ ಮೇಲೆ ಹೊರಿಸಿ ನೀನು ಸಿಟ್ಟಿನಿಂದ ಹೊರಟುಬಂದಿರುವಿ. ನಿನ್ನಲ್ಲಿ ನಿಜ ವಿರಕ್ತಿ ಇದ್ದರೆ, ನಿನ್ನ ಭಾವವು ಸತ್ಯವಾಗಿ ಶುದ್ಧವಿದ್ದರೆ ಈ ಕೇಶದ ಮಕೆ ಏಕೆ,' ಎಂದು ಅಲ್ಲಮಪ್ರಭುವು ಪ್ರಶ್ನಿಮಾಡಿದನು. ಅದಕ್ಕೆ ಅಕ್ಕನು ಕೊಟ್ಟ ಮಾರುತ್ತರವು ಹೃದಯಂಗಮವೂ ಹೃದಯಭೇದಿಯೂ ಇರುವದು. 'ನನಗೆ ನನ್ನ ಕಾಯದ ಪರಿವೆಯಿಲ್ಲ. ನನ್ನ ಕಾಯವು ಕರ್ರನೆ ಕಂದಿದರೂ ಅಷ್ಟೇ. ಮಿರ್ರನೆ ಮಿಂಚಿದರೂ ಅಷ್ಟೇ. ಆದರೆ ಕಾಮನ ಮುದ್ರೆಯ ಕಂಡು ನಿಮಗೆ ನೋವಾದೀತೆಂಬ ಭಾವದಿಂದ ಎನ್ನ ಕೂದಲ ಮುರೆಮಾಡಿರುವೆ,' ಎಂದು ಅಕ್ಕನ ಪ್ರತ್ಯುತ್ತರವಿರುವದು!

ಹೀಗೆಯೆ ಪ್ರಸಂಗ ನಡೆದು ಕೊನೆಗೆ ಪ್ರಭುದೇವರು ಆಕೆಯ ಅರಿವಿಗೆ ಮೆಚ್ಚಿ, 'ಅಂಗನೆ ಅಂಗನೆಯ ರೂಪಲ್ಲದೆ ಮನವು ಪರವಸ್ತು ವಿನಲ್ಲಿ ಬೆಚ್ಚಂತೆ ಇದೆ,' ಎಂದು ಕೊಂಡಾಡಿರುವನು. ಅದೇ ಕಾಲಕ್ಕೆ ಬಸವಣ್ಣ ಚನ್ನಬಸವಣ್ಣ ಮುಂತಾದವರು ಆಕೆಯನ್ನು ಮಾತಾಡಿಸಿ ನೋಡಿ ಸಂಪ್ರೀತರಾಗಿ ಆಕೆಯ ಉನ್ನತವಾದ ನಿಲವನ್ನು ಪರಿಪರಿಯಾಗಿ ಹೊಗಳಿರುವರು. ಆಕೆ ಬ್ರಹ್ಮವನಾಚರಿಸಿ ತನ್ನನು ಮರೆದು ಇಪ್ಪಳು, ಎಂದು ಬಸವನು ಅಂದಿರುವನು. ಈ ಎಲ್ಲ ಕೊಂಡಾಟಿಕೆಯನ್ನು ಕೇಳಿ ಅಕ್ಕನು ವಿನಯದಿಂದ, ತನ್ನನ್ನು ಹೀಗೆ ಕೊಂಡಾಡಕೂಡದು, ತಾನು ಪ್ರಪಂಚಿನ ಪುತ್ಥಳಿ, ತನ್ನ ತಪ್ಪುಗಳನ್ನು ಒಪ್ಪಿಕೊಳ್ಳಬೇಕು, ತನ್ನ ತಪ್ಪು ಹಿಡಿದರೆ ತನಗೆ ಹಿತವೇ ಹೊರತು ಕುಂದಿಲ್ಲ, ಎನ್ನುವಳು. ಇದಕ್ಕೆ, ಜಂಡಸವ ಕಡಿದು, ಕೊರೆದು, ತೇದಡೆ ಅದು ನೊಂದು ತನ್ನ ಕಂಪಬಿಡುವುದೇ, ಎಂಬ ದೃಷ್ಟಪನ್ನು ಕೊಟ್ಟಿರುವಳು. ಬಸವಣ್ಣನನ್ನು ಆಕೆ ಸ್ವತಃ ವಿಶೇಷವಾಗಿ ಕೊಂಡಾಡಿರುವಳು, ಮತ್ತು "ಎನ್ನ ಭಕ್ತಿ ನಿಮ್ಮ ಧರ್ಮ, ಎನ್ನ ಜ್ಞಾನ ಪ್ರಭುದೇವರ ಧರ್ಮ, ಎನ್ನ ಪರಿಣಾಮ ಚನ್ನಬಸವಣ್ಣನ ಧರ್ಮ,' ಎಂದು ಅವರವರ ಪ್ರಮುಖ ಗುಣಗಳನ್ನು ಹೇಳಿರುವಳು. 'ಚನ್ನ ಸಂಗಯ್ಯನಲ್ಲಿ ಆಕೆಯು ಬೆರಸಿ ಬೇರೆ ಇಲ್ಲದೆ ಇರ್ಪಳು, ಆಕೆಯ ಒಂದು ವಚನವು ಆದ್ಯರ ಅರುವತ್ತು ವಚನಗಳಿಗೆ, ದಾಸ್ಯಾಯಕರ ಇಪ್ಪತ್ತು ವಚನಗಳಿಗೆ, ಪ್ರಭುದೇವರ ಹತ್ತು ವಚನಗಳಿಗೆ, ಅಜಗಣ್ಣನ ಐದು ವಚನಗಳಿಗೆ

ಸರಿಯಾಗಿರುವದು,' ಎಂದು ಆಕೆಯ ಅನುಭಾವವನ್ನೂ ಆಕೆಯ ವಚನ ಮಹಾತ್ಮ್ಯವನ್ನೂ ಚನ್ನಬಸವನು ವಿವರವಿವರವಾಗಿ ಹೇಳಿರುವನು.

ಇದೇ ಸಂದರ್ಭದಲ್ಲಿ, ಆಕೆಯು ವಿಕಳಾವಸ್ಥೆಯಲ್ಲಿ ಮಾಡಿದ ದೇವರ ಸ್ಮರಣೆಯು ಬಹಳೇ ಸ್ವಾಭಾವಿಕವೂ ಮನೋಹರವೂ ಇರುವದು. ಸೀತೆಯನ್ನು ಕಳಕೊಂಡ ರಾಮನು ವಿಲಪಿಸಿ ಗಿಡಬಳ್ಳಿಗಳನ್ನು ಕೇಳುತ್ತಿರುವಂತೆ ಅಕ್ಕನು ಚಿಲಿವಿಲಿಗೊಳ್ಳುವ ಗಿಳಿವಿಂಡುಗಳನ್ನೂ ಸ್ವರವೆತ್ತಿ ಹಾಡುವ ಕೋಗಿಲೆಗಳನ್ನೂ, ನೀವು ಕಂಡಿದ್ದರೆ ಹೇಳಿರಿ, ಆ ಚನ್ನಮಲ್ಲಿಕಾರ್ಜುನನು ಎಲ್ಲಿರುವನೆಂಬುದನ್ನು, ಎಂದು ಆರ್ತಳಾಗಿ ಜೀವೇಶ್ವರನನ್ನು ತೋರಿರೆಂದು ಜೀವಸೃಷ್ಟಿಯನ್ನೆಲ್ಲ ಕೇಳಿಕೊಳ್ಳುವಳು. ಹೀಗೆ ದೇವವ್ರತೆಯಾದ ಅಕ್ಕನ ಪವಿತ್ರ ಅಲ್ಪ ಚರಿತ್ರವಿರುವದು. ಆಕೆಯ ಇಡೀ ಚರಿತ್ರ, ಅನುಭವಮಂಟಪದಲ್ಲಿ ಶರಣರೊಡನೆ ನಡೆದ ಆಕೆಯ ಮಾತುಕಥೆ, ಆಕೆಯ ವಚನ ಇವೆಲ್ಲವುಗಳಲ್ಲಿ ಆಕೆಯ ವ್ಯವಹಾರಚಾತುರ್ಯ, ಸಾಹಸ, ಧರ್ಮವೀರತೆ, ವೈರಾಗ್ಯ, ಅನುಭಾವ, ಭಕ್ತಿಸಂಪನ್ನತೆ ಇತ್ಯಾದಿ ಮೇಲಾದ ಗುಣಗಳು ವಿಜೃಂಭಿಸುವವು.

(೪) ಲಕ್ಕಮ್ಮನೆಂದರೆ, ಅಲ್ಲಲ್ಲಿ ಶರಣರ ಹೊಲಗಳಲ್ಲಿ ಇಲ್ಲವೆ ಅಂಗಳಗಳಲ್ಲಿ ಬಿದ್ದ ಧಾನ್ಯದ ಕಾಳುಗಳನ್ನು ಆರಿಸಿ ತಂದು ಉಂಛವೃತ್ತಿಯಿಂದ ಇರುವ ವಿರಕ್ತನಾದ ಆಯದಕ್ಕಿ ಮಾರಯ್ಯನ ಹೆಂಡತಿಯು. ಈ ವೃತ್ತಿಯು ಒಂದು ಕಾಯಕವೆಂದೆನಿಸುತ್ತಿತ್ತು, ಹೊರತು ಭಿಕ್ಷೆ ಎಂದೆನಿಸುತ್ತಿರಲಿಲ್ಲ. ಕಾಯಕವೆ ಕೈಲಾಸವು, ಅದೇ ಎಲ್ಲಕ್ಕೂ ಹೆಚ್ಚಿನದು, ಎಂದು ತಿಳಿದ ಮಾರಯ್ಯನು ಒಮ್ಮೆ ಪ್ರಭುದೇವರ ಕಡೆಗೆ ಹೋಗಲು ಪ್ರಭುದೇವರು ಅವನಿಗೆ, 'ಮಾಡುವ ಮಾಟದಿಂದಲೆ ಬೇರೊಂದನರಿಯಬೇಕು, ಆದರೆ ಮಾಡಿಹೆನೆಂಬ ಪಾಟಕೂಟದ ಚಿತ್ತ ನಿಂದ್ಲದೆ ನಿಜಪದವು ದೊರೆಯದು,' ಎಂದು ಉಪದೇಶಿಸಿದನು. ಅದರಿಂದ ಧನ್ಯನಾಗಿ ಅವನು ಪ್ರಭುದೇವರನ್ನು ಸ್ತುತಿಸುತ್ತಿರಲು ಲಕ್ಕಮ್ಮನು ಲಗಬಗೆಯಿಂದ ಅಲ್ಲಿಗೆ ಬಂದು, ಕಾಯಕ ನಿಂತಿತ್ತು ಹೋಗಯ್ಯಾ ಎನ್ನಾಳ್ವನೆ, ಎಂದು ಅವನನ್ನು ಅಕ್ಕಿಯನ್ನು ಆರಿಸಿ ತರಲಿಕ್ಕೆ ಅಟ್ಟಿದಳು. ಆಗ ಅವನು ಬಿರಿಬಿರಿ ಬಸವನ ಬಾಗಿಲಿಗೆ ಹೋಗಿ ಅಲ್ಲಿ ಜಲ್ಲಿದ ಬಹಳಷ್ಟು ಅಕ್ಕಿಯನ್ನು ಆರಿಸಿ ತಂದನು. ಅದನ್ನು ನೋಡಿ ಲಕ್ಕಮ್ಮನು ಅವನನ್ನು ಹೀಯಾಳಿಸಿ, 'ಆಸೆ ಎಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೆ? ನಮಗೆ ಎಂದಿನಂದಿಗೆ ಸಾಕು, ಹೆಚ್ಚಾದುದನ್ನು ಅಲ್ಲಿಯೆ ಒಯ್ದು ಸುರುವು,'

ಎಂದು ಹೆಚ್ಚಾದುದನ್ನು ಕೊಟ್ಟು ಕಳುಹಿಬಿಟ್ಟಳು! ನಾವು ಅಷ್ಟರಲ್ಲಿಯೆ ದಾಸೋಹಮಾಡಬೇಕು ಹೊರತು ಹೆಚ್ಚಿನ ಆಸೆಯು ಹೊಲ್ಲ, ಎಂದು ಆ ಸಾಧ್ವಿಯು ಹೇಳಿದ್ದನ್ನು ಕೇಳಿ ಗಂಡನು ಆಕೆಯ ಮಾತಿನಂತೆ ಮಾಡಿದನು, ಮತ್ತು 'ಎನಗೆ ಲಿಂಗದಲ್ಲಿ ಅರಿವು ಕರಿಗೊಂಬ ಅರಿವಿಲ್ಲ ಹೇಳು,' ಎಂದು ಹೆಂಡತಿಯನ್ನು ಕೇಳಿಕೊಂಡನು. ಆಗ ಆಕೆಯು, 'ಕೈಲಾಸದ ಆಸೆ ಏಕೆ, ಈ ದಾಸೋಹ ಸಾಲದೆ,' ಎಂದು ಕೇಳಿದಳು. ಪುನಃ ಗಂಡನು ಪೂರ್ಣ ನಿಜೈಕ್ಯದ ದಾರಿ ತೋರು, ಎಂದು ಕೇಳಿದನು. 'ಅಹಂಕಾರ ಗುಣವಳಿದು ತ್ರಿವಿಧ ದಾಸೋಹ ಮಾಡುವುದೆ ಐಕ್ಯದ ಮಾರ್ಗವು, ಅಹಂಕಾರವೆ ಭವದ ಮೂಲ ಬೇರು, ಅದು ನಷ್ಟವಾದಲ್ಲಿ ಮುಂದಿನ ಭವಾಂಕುರವೆ ನಿಲ್ಲುವದು, ಮುಂದೊಂದ ಕಲ್ಪಿಸದೆ ಹಿಂದೊಂದ ಭಾವಿಸದೆ ಸಲೆ ಸಂದಿದ್ದಾಗಲೆ ಮುಕ್ತಿಯ ಆಸೆಯು,' ಎಂದು ಲಕ್ಕಮ್ಮನು ನಿಷ್ಕಾಮ ಗುರುಲಿಂಗ ಜಂಗಮ ಸೇವೆಯನ್ನೂ ಅವರಿಗೆ ಸರ್ವಾರ್ಪಣಮಾಡಬೇಕೆಂಬ ತತ್ವವನ್ನೂ ಉಪದೇಶಿಸಿದಳು. ಮುಂದೆ ಎಲ್ಲ ಜಂಗಮರೊಡನೆ ಬಸವಾದಿ ಪ್ರಮಥರನ್ನು ನೈವೇದ್ಯಕ್ಕೆ ಕರೆಯಬೇಕೆಂದು ಲಕ್ಕಮ್ಮನು ಗಂಡನಿಗೆ ಬೇಡಿಕೊಂಡಳು. ಆಗ ಗಂಡನು, ಇದು ನಮ್ಮ ಬಡವರ ತುತ್ತಲ್ಲ, ಎನ್ನಲು, ಆತ್ಮವಿಶ್ವಾಸಪೂರ್ಣವಾದ ಆ ಸತಿಯು, 'ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು,' ಎಂದು ಅವನಿಗೆ ಧೈರ್ಯಗೊಟ್ಟಳು. ಆಗ ಎಲ್ಲ ಪ್ರಮಥರನ್ನು ಕರೆದು, ಅವರವರ ಇಷ್ಟಪದಾರ್ಥಗಳನ್ನು ಅವರಿಗೆ ಸಲ್ಲಿಸಿ, ಅವರನ್ನು ಆ ದಂಪತಿಗಳು ಪನ್ನಾಗಿ ಸಂತೈಸಿದರು. ಬಸವಣ್ಣ ಮತ್ತು ಪ್ರಭುದೇವರು ಇದನ್ನೆಲ್ಲ ನೋಡಿ ಬೆರಗಾಗಿ, 'ಮನೆ ನೋಡಾ ಬಡವರು ಮನ ನೋಡಾ ಸಂಪನ್ನರು, ಧನ ನೋಡಾ ಬಡವರು ಘನಮನಸಂಪನ್ನರು, ದಂಪತಿ ಏಕಭಾವದಲ್ಲಿ ನಿಂದಲ್ಲಿ ಪರಮಾತ್ಮನಿಗೆ ಅರ್ಪಿತವಾಯಿತ್ತು,' ಎಂದು ಮುಂತಾಗಿ ಆ ದಂಪತಿಗಳನ್ನು ಬಣ್ಣಿಸುವರು. ಮುಂದೆ ದಂಪತಿಗಳಿಬ್ಬರೂ ನಿಜೈಕ್ಯವನ್ನು ಹೊಂದಿದರೆಂದು ಹೇಳಲ್ಪಟ್ಟಿದೆ. ಪೋಳಿಗೆಯ ಮಾರಯ್ಯನ ಸತಿಯಾದ ಮಹಾದೇವಿಯಮ್ಮನಂತೆ ಲಕ್ಕಮ್ಮನು ಇಲ್ಲಿ ತನ್ನ ಗಂಡನಿಗೆ ಉಪದೇಶಮಾಡಿದ್ದಲ್ಲದೆ ಅವನಿಗೆ ಆತ್ಮವಿಶ್ವಾಸಪೂರ್ವಕವಾಗಿ ಧೈರ್ಯ ಗೊಟ್ಟಿರುವಳು. ಸ್ತ್ರೀಯರಿಗೆ ಧರ್ಮಪಥದಲ್ಲಿ ಆಸ್ಪದಕೊಟ್ಟರೆ ಅವರೂ ಯಾವ ರೀತಿ ಶ್ರೇಷ್ಠ ನಿಲವನ್ನು ದೊರಕಿಸಬಲ್ಲರು ಎಂಬುದು ಲಕ್ಕಮ್ಮ ಮುಂತಾದವರ ಉದಾಹರಣೆಯ ಮೇಲಿಂದ ಸ್ಪಷ್ಟವಾಗುವದು.

ಲಕ್ಕಮ್ಮನ ವಚನಗಳು ಚಿಕ್ಕವೂ ಅರ್ಥಪೂರ್ಣವಾದವೂ ಸುಲಭವಾದವೂ ಸಮರ್ಪಕವಾದವೂ ಇರುವವು.

ಮೇಲೆ ಹೇಳಿದಂತೆ ಇನ್ನು ಹಲವು ವಚನಕಾರರ ಅಲ್ಪ ಚರಿತ್ರ ಮತ್ತು ಅವರ ಹಲವು ವೈಶಿಷ್ಟ್ಯಗಳನ್ನು ನೋಡುವ. ಮೊದಲು 'ಸೌರಾಷ್ಟ್ರ ಸೋಮೇಶ್ವರ' ಎಂಬ ಅಂಕಿತವುಳ್ಳ ಆದಯ್ಯನ ಬಗ್ಗೆ ವಿಚಾರಿಸುವ.

(೫) ಇವನ ಚರಿತ್ರವು ೧೬ನೆಯ ಶತಮಾನದಲ್ಲಿ ಆಗಿಹೋದ ಪ್ರಸಿದ್ಧ ಕವಿ ರಾಘವಾಂಕನ 'ಸೋಮನಾಥ ಪುರಾಣ'ದಲ್ಲಿ ಉಕ್ತವಾಗಿದೆ. ಇವನು ಗುಜರಾಥ ಪ್ರಾಂತದಲ್ಲಿರುವ ಪವಿತ್ರ ಕ್ಷೇತ್ರವಾದ ದ್ವಾರಕಾಪಟ್ಟಣದವನು. ಸೌರಾಷ್ಟ್ರವೆಂಬುದು ಗುಜರಾಥದ ಒಂದು ಭಾಗವು. ಸೌರಾಷ್ಟ್ರ ಭಾಗದಲ್ಲಿರುವ ಸೋಮೇಶ್ವರ ದೇವರು ಆದಯ್ಯನ ಇಷ್ಟದೇವತೆ ಇದ್ದಂತೆ ಅವನ ಅಂಕಿತದ ಮೇಲಿಂದ ವ್ಯಕ್ತವಾಗುವದು. ಇವನು ಘೋರದತ್ತ ಮತ್ತು ಪುಣ್ಯವತಿ ಎಂಬವರ ಹೊಟ್ಟೆಯಲ್ಲಿ ಹುಟ್ಟಿದವನು; ಮುಂದೆ ದ್ವಾರಕೆಯಿಂದ ವ್ಯಾಪಾರಕ್ಕಾಗಿ ಕರ್ನಾಟಕದಲ್ಲಿರುವ ಪುಲಿಗೆರೆಗೆ ಅಂದರೆ ಧಾರವಾಡ ಜಿಲ್ಲೆಯಲ್ಲಿಯ ಈಗಿನ ಲಕ್ಷ್ಮೇಶ್ವರಕ್ಕೆ ಬಂದನು. ಅಲ್ಲಿ ಆಗ ಜೈನ ಅರಸರಿದ್ದು ಜೈನರ ಪ್ರಾಬಲ್ಯವೆ ಹೆಚ್ಚಾಗಿತ್ತು. ಅಲ್ಲಿ ಜೈನಮತದವನಾದ ಪಾರಿಸಸೆಟ್ಟಿಯ ಮಗಳು ಪದ್ಮಾವತಿಯು ಆದಯ್ಯನ ರೂಪಕ್ಕೆ ಮೋಹಿತಳಾದಳು. ಮುಂದೆ ಶಿವದೀಕ್ಷೆಯನ್ನು ಹೊಂದಿ ಆಕೆ ಇವನನ್ನು ಮದುವೆಯಾದಳು. ಆ ಸೆಟ್ಟಿಗೆ ಈಕೆಯೊಬ್ಬಳೆ ಮಗಳಾದುದರಿಂದ ಆದಯ್ಯನು ಅವನ ಮನೆಯಳಿಯನಾದನು. ಆದಯ್ಯನ ವರ್ಚಸ್ಸು ಬೆಳೆಯುತ್ತ ಹೋಗಿ ಅವನ ಭಕ್ತಿನಿಷ್ಠೆಗಳು ಪ್ರಸಿದ್ಧವಾದವು. ಮುಂದೆ ಆ ಊರಲ್ಲಿರುವ ಹೆಸರಾದ ಸುರಹೊನ್ನೆಯ ಬಸ್ತಿಯಲ್ಲಿ ಸೋಮೇಶ್ವರ ದೇವರನ್ನು ಸ್ಥಾಪಿಸುವಷ್ಟು ಅವನು ಪ್ರಬಲನಾದನು. ಈ ಬಗ್ಗೆ ಒಂದು ಪವಾಡವೂ ಇದೆ. ಅವನ ವಚನಗಳಲ್ಲಿ ಅವನ ಚರಿತ್ರವಿಷಯವಾಗಲಿ, ಅವನ ಸಾಧನಕಾಲದಲ್ಲಿ ಆದ ಸಂಗತಿಗಳಾಗಲಿ, ಅವನ ಗುರುಪರಂಪರೆಯಾಗಲಿ ಯಾವುದೂ ಉಕ್ತವಾಗಿಲ್ಲ. ಅವನು ಒಳ್ಳೆ, ಉಜ್ಜಕೋಟಿಯ ಶಿವಶರಣನಿದ್ದಿರಬೇಕೆಂದು ಅವನ ಅನೇಕ ವಚನಗಳಿಂದ ಗೊತ್ತಾಗುವದು.

ಅವನು ವರ್ಣಿಸಿದ, 'ಸಕಲ ಪ್ರಪಂಚಿನೊಳು ಸಿಲುಕದ ಅಕಳಂಕರಪ್ಪ ಸಮ್ಯಕ್‌ಜ್ಞಾನ, ಸಮತೆ, ಸಮಾಧಾನ, ಸಹಜಾನಂದದೊಕಿದ್ದ ಮಹಾ ಶರಣರೊಳು' ಅವನೂ ಒಬ್ಬನಿದ್ದನೆನ್ನಬಹುದು. 'ವೇದಶಾಸ್ತ್ರ ಆಗಮ ಪುರಾಣ ಎಂಬ ಮುಂತಾದ ಶಬ್ದಜಾಲಂಗಳ ಹಿಂದೆ ಹರಿಯದೆ ಸೌರಾಷ್ಟ್ರ

ಸೋಮೇಶ್ವರನ ಕೈಹಿಡಿದು ಬದುಕು,' ಎಂದು ಸಗುಣಭಕ್ತಿಯ ಶ್ರೇಷ್ಠತೆಯನ್ನು ಅವನು ಹೇಳಿರುವನು. ಅಷ್ಟಾಂಗಯೋಗಿಗಳಿಗಿಂತ ದ್ವಂದ್ವಾತೀತರಾಗಿ, ಮನದಿಚ್ಛೆಗೆ ಹರಿಯದೆ, ನಿಂದಲ್ಲಿ ನಿರಾಳರು, ನಡೆದಲ್ಲಿ ನಿರ್ಗಮನಿಗಳು, ನುಡಿದಲ್ಲಿ ನಿಃಶಬ್ದರು ಆಗಿ, ಕಾಯವಿದ್ದು ಅಕಾಯರಾಗಿಪ್ಪ ಶರಣರೆ ಶ್ರೇಷ್ಠರು, ಎಂದು ಅವನು ಶರಣರ ನಿಲವನ್ನು ನಿರ್ದೇಶಿಸಿ ಅದನ್ನು ಹೊಗಳಿರುವನು. ಭ್ರೂನಿಟಿಲ ಮಧ್ಯದಲ್ಲಿ ಪ್ರಜ್ವಲಿಸುವ ಸ್ವಯಂಪ್ರಕಾಶ ಆತ್ಮಜ್ಯೋತಿಯ ಮಾನಸಪೂಜೆಯನ್ನು ಹೇಳುವಾಗ, ನೆನಹು ನಿರ್ವಾಣವಾದ ಮನೋರ್ಲಯವೆಂಬ ಪುಷ್ಪ, ಮುಂತಾದವುಗಳ ಉಲ್ಲೇಖಮಾಡಿರುವುದರಿಂದ ಅವನು ಧ್ಯಾನಯೋಗದ ಅಭ್ಯಾಸವನ್ನು ಚನ್ನಾಗಿ ಮಾಡಿರಬೇಕೆಂದು ತೋರುತ್ತಿದೆ. ನಿಜದಲ್ಲಿ ಬೆರೆಯಲು ಅದು ಯೋಗಾಂಗ, ಅದಿಲ್ಲದೆ ಎಷ್ಟು ಯೋಗಗಳೆಲ್ಲ ವಿಯೋಗ, ಎಂದು ಸಾಕ್ಷಾತ್ಕಾರವೆಂಬ ಗುರಿಯನ್ನಿಟ್ಟುಕೊಳ್ಳದ ಸಾಧನಗಳನ್ನು ಅವನು ಜರೆದಿರುವನು. ಆಗಮಗಳ ವಾಕ್ಯಗಳನ್ನು ಅಲ್ಲಲ್ಲಿ ಉದಹರಿಸಿದ್ದರಿಂದ, ಇವನು ಚನ್ನಾಗಿ ಓದಿಕೊಂಡವನಿರಬೇಕೆಂದು ಅನ್ನಬಲ್ಲೆವು. ಇವನು ಮಾಡಿದ ಭವ್ಯ ಜೈತನ್ಯಜಂಗಮದ ಅಂದರೆ ವಿರಾಟಪುರುಷನ ವರ್ಣನೆಯು ಕಾವ್ಯಮಯವಿರುವದು. ತನ್ನ ಎರಡು ವಚನಗಳಲ್ಲಿ ಸುಮಾರು ಇಪ್ಪತ್ತೈದು ಶರಣಶರಣೆಯರ ಉಲ್ಲೇಖವನ್ನು ಮಾಡಿದ್ದಾನೆ. ಅವರಲ್ಲಿ ತಾನು ಕಂಡ ಮುಖ್ಯ ಗುಣಗಳನ್ನು ವಿವರಿಸಿದ್ದಾನೆ. ಇವನು ಬಸವಣ್ಣನಿಗಿಂತ ಈಡಿಗಿನವನಿರಬೇಕು. ಇವನು ಎಷ್ಟೋ ಮುಂಡಿಗೆಗಳನ್ನು ಬರೆದಿರುವನು. ಅವು ಟೀಕೆ ಇಲ್ಲದೆ ತಿಳಿಯುವಂತಿಲ್ಲ. ನಾಲ್ಕಾರು ಉದ್ದವಾದ ವಚನಗಳನ್ನು ಬಿಟ್ಟರೆ ಇವನ ಎಲ್ಲ ವಚನಗಳು ಹವಣಿ ಇದ್ದು ತೊಡಕಿಲ್ಲದವೂ ತಿಳಿಯಲು ಸುಲಭವಾದವೂ ಇರುವವು. ಗುರ್ಜರ ಪ್ರಾಂತದವನು ಕನ್ನಡದಲ್ಲಿ ಇಷ್ಟು ಪ್ರಾವಿಣ್ಯವನ್ನು ಸಂಪಾದಿಸಿದ್ದು - ಅವನಿಗೆ ಭೂಷಣಾಸ್ಪದವೇ ಸರಿ. ಇವನು ಶರಣಮಾರ್ಗದ ಉತ್ಕಟ ಅಭಿಮಾನಿಯೂ ನಿಷ್ಠಾವಂತಭಕ್ತನೂ ಆಗಿದ್ದನು.

(೬) 'ಸಕಳೇಶ್ವರ' ಎಂಬ ಅಂಕಿತದಿಂದ ಬರೆದ ಸಕಳೇಶ ಮಾದರಸನು ಮೊದಲು ಕಲ್ಲುಕುರಿಕೆಯ ಅರಸನಾಗಿದ್ದನು. ಆ ಊರು ಎಲ್ಲಿದೆ ಇದು ಗೊತ್ತಾಗಿಲ್ಲ. ಈತನ ಚರಿತ್ರವು ಪದ್ಮಣಾಂಕಕವಿಯ ಪದ್ಮರಾಜಪುರಾಣದ ೨೨ನೆಯ ಅಧ್ಯಾಯದಲ್ಲಿಯೂ ಬಸವಪುರಾಣದ ೧೯-೨೦ನೆಯ ಅಧ್ಯಾಯಗಳಲ್ಲಿಯೂ ಬಂದಿದೆ. ಆ ಎರಡು ಗ್ರಂಥ

ಗಳಲ್ಲಿ ಕೊಟ್ಟ ಸಂಗತಿಗಳಲ್ಲಿ ಸ್ವಲ್ಪ ವ್ಯತ್ಯಾಸವೂ ಇದೆ. ರಾಜ್ಯತ್ಯಾಗ ಮಾಡಿ ಶ್ರೀಶೈಲಕ್ಕೆ ಹೋಗಿ ಅಲ್ಲಿ ಮುಂದೆ ಬಿಲ್ವವನದಲ್ಲಿ ಶಿವಯೋಗಿ ಮಲ್ಲರಸ ಎಂದು ಪ್ರಸಿದ್ಧನಾದ ಕಲ್ಲುಕುರಿಕೆಯ ಅರಸನ ಮಗನೇ ಸಕಳೇಶನು. ಇವನೂ ಹಲವು ದಿನ ಉತ್ತಮರೀತಿಯಿಂದ ರಾಜ್ಯವಾಳಿ ಬಳಿಕ ತಂದೆಯಂತೆ ಶ್ರೀಶೈಲಕ್ಕೆ ಹೊರಡಲು ಇವನ ಹೆಂಡತಿ, ಮಗ ಮಾಯಿದೇವ, ಮತ್ತು ಸೊಸೆ ಇವರೂ ಹಿಂಬಾಲಿಸಿದರು. ನಡುವೆ ಅಂಬೆಗ್ರಾಮದಲ್ಲಿ ಹಲವು ದಿನ ಇದ್ದು, ಮಗನಿಗೆ ಅಲ್ಲಿಯೆ ಇರಹೇಳಿ, ತಾನು ಶ್ರೀಶೈಲಕ್ಕೆ ಸಾಗಿದನು. ಅಲ್ಲಿ ಒಂದು ಪವಾಡವಾಗಿ ಮಲ್ಲರಸನು ಇವನಿಗೆ ದರ್ಶನಕೊಟ್ಟನು. ಆದರೆ, 'ನೀನು ಇನ್ನೂ ಪೂರ್ಣನಾಗಿಲ್ಲ, ಮುಂದೆ ೫೦ ವರ್ಷಕ್ಕೆ ಬಸವಾದಿಗಳು ಜನ್ಮತಾಳಿ ಕಲ್ಯಾಣದಲ್ಲಿ ಸ್ಥಾನಾಪನ್ನರಾಗುವರು, ನೀನು ಅಲ್ಲಿ ಹೋಗಿ ಇರು,' ಎಂದು ಮಲ್ಲರಸನು ಆಜ್ಞಾಪಿಸಿದನು. ಇದರ ಮೇಲಿಂದ, ಈ ವಚನಕಾರನು ಬಸವನಿಗಿಂತ ೫೦ ವರ್ಷ ಪೂರ್ವದವನಿರಬೇಕೆಂದೂ ಆ ಕಾಲಕ್ಕೆ ಸಹ ಧರ್ಮಜಾಗೃತಿಯ ಕಾರ್ಯವು ಪ್ರಾರಂಭವಾಗಿತ್ತೆಂದೂ ಹೇಳಬಹುದು. ಮುಂದೆ ತಂದೆಯ ಅಪ್ಪಣೆಯ ಮೇರೆಗೆ ಮಾದರಸನು ಕಲ್ಯಾಣಕ್ಕೆ ಬಂದು ಅಲ್ಲಿಯೆ ಶಿವಾನುಭವಗೋಷ್ಠಿಯಲ್ಲಿ ಕಾಲಕಳೆಯುತ್ತಿರಲು ಬಸವನು ಐಕ್ಯಹೊಂದಿದನು. ಆಗ ಮಾದರಸನು ಕಲ್ಯಾಣ ಬಿಟ್ಟು ತನ್ನ ಶಿಷ್ಯರಾದ ಶಿವದೇವ ಮತ್ತು ಮಹಲಿಂಗರಾಮ ಇವರ ಬಳಿ ಕ್ರಮವಾಗಿ ಇದ್ದು ಅವರು ಶಿವೈಕ್ಯರಾದ ಮೇಲೆ ಈತನು ಶ್ರೀಶೈಲಕ್ಕೆ ಹೋಗಿ ಅಲ್ಲಿ ನಿಜವನ್ನೈದಿದನು.

ಇವನ ಎಲ ವಚನಗಳು ಪ್ರಕಟವಾಗಿರುವವು. ಅವುಗಳಲ್ಲಿ ೫ ಅರ್ಥವಾಗದಷ್ಟು ಅಶುದ್ಧ ಸ್ಥಿತಿಯಲ್ಲಿರುವವು. ಇವನ ವಚನಗಳು ಹೆಚ್ಚಾಗಿ ನೀತಿಪ್ರಧಾನವಿರುವವು. ಶರೀರವೆ ಧರ್ಮಸಾಧನವು ಎಂಬರ್ಥದಿಂದ, ಕಾಯದಿಂದ ಗುರು, ದೇವ, ಪ್ರಸಾದ ಮುಂತಾದವುಗಳನ್ನು ಕಂಡು, ಪೂಜಿಸಿ, ಉತ್ತರಸಾಧಕನಾದೆನು, ಎಂದು ದೇಹವನ್ನು ಹೀಯಾಳಿಸದೆ ಅದನ್ನು ಹೊಗಳಿ ಅವನು ತನ್ನ ನಿಲವನ್ನು ಕಾಣಿಸಿದ್ದಾನೆ. ಆರೂ ಬೇಡ ಎಂದು ಅರಣ್ಯಕ್ಕೆ ಹೋದಲ್ಲಿ ತರುಮರಗಳ ಹಂಗಿನಲ್ಲಿರಬೇಕಾಗುವದು. ಎಲ್ಲಿದ್ದರೂ ಅನ್ಯರ ಹಂಗು ಬಿಡದು. ಆದುದರಿಂದ ಎಲ್ಲ ಪದಾರ್ಥವ ಪರಮಾತ್ಮನಿಗೆ ಅರ್ಪಣಮಾಡಿ ಕೊಂಬಾತನೆ ಜಾಣನು, ಎಂದು ಅರ್ಪಣ ರಹಸ್ಯವನ್ನು ಒಡೆದುಹೇಳಿದ್ದಾನೆ. ಅದೇ ರೀತಿ, ಗಿರಿಗಗನಗಂಭ್ಪರದೊಳಗಿದ್ದು ಫಲವೇನು, ಮನವು ಬೇಸಾಗಿರಬೇಕು, ಎಂದು ಸಮತ್ವದ ಮತ್ತು

ಶಾಂತಿಯ ತತ್ವವನ್ನು ಹೇಳಿರುವನು. ಈ ಸಮತ್ವವು ಅಳವಡಬೇಕಾದರೆ ಸ್ವತಃ ಸಾಧನಮಾಡಲಿಕ್ಕೆಬೇಕು. ಈ ಮಾತನ್ನು ಕೆಳಗಿನ ದೃಷ್ಟಾಂತಗಳಿಂದ ಸ್ಪಷ್ಟಗೊಳಿಸಿರುವನು. ಎರಡನೆಯವರು ಕೈದುಕೊಡಬಹುದಲ್ಲದೆ ಕಲಿತನವ ಕೊಡಲಾರರು. ಓದುವದು ಕಾಲಾದರೂ ಬುದ್ಧಿ ಮುಕ್ಕಾಲು ಬೇಕು, ಅಂದರೆ ಓದು ದಕ್ಕುವದು. ದುಡಿದವನೆ ಧನಿಯಾಗುವನು. ತಾವರೆಯಿಂದ ತಾವರೆಗೆ ತೆರಳುವ ತುಂಬಿಗಲ್ಲದೆ ಅವರ ಸುಗಂಧ ಸುಧೆಗಳು ಅನ್ಯರಿಗೆ ದೊರಕವು. ಇವನ ವಚನಗಳು ಚಿಕ್ಕವಿದ್ದರೂ ಬಹಳ ಮಾರ್ಮಿಕ ಮತ್ತು ತೂಕದಿಂದ ಬರೆಯಲ್ಪಟ್ಟಿರುವವು. 'ಜನವೆಚ್ಚು ಶುದ್ಧನಲ್ಲದೆ, ಮನ ಮೆಚ್ಚು ಶುದ್ಧನಲ್ಲವಯ್ಯಾ,' 'ಆಸೆಯಿಂದ ಕಿರಿಯರಿಲ್ಲ, ನಿರಾಸೆಯಿಂದ ಹಿರಿಯರಿಲ್ಲ,' ಎಂಬ ಮುಂತಾದ ವಾಕ್ಯಗಳು ಸ್ಮರಣದಲ್ಲಿ ಚನ್ನಾಗಿ ನಟ್ಟು ಬಿಡುವವು. ಮುಂದಿಗೆ, ಅರ್ಥದ ತೊಡಕು ಮುಂತಾದವುಗಳು ಇವನ ಯಾವ ವಚನಗಳಲ್ಲಿಯೂ ಇಲ್ಲ. ಇವನ ವೈರಾಗ್ಯ, ನಿಷ್ಠೆ, ಇವುಗಳನ್ನು ಎಷ್ಟು ಹೊಗಳಿದರೂ ಸಾಲದು. ಆತ್ಮವೈಭವದ ಮುಂದೆ ರಾಜ್ಯವೈಭವವು ತುಚ್ಛವು ಎಂಬುದನ್ನು ಈ ತಂದೆಮಕ್ಕಳಿಬ್ಬರೂ ತೋರಿರುವರು, ಎಂದು ಅನ್ನಬಹುದು.

(೭) 'ಬಸವಪ್ರಿಯ ಕೂಡಲ ಚನ್ನಸಂಗಮದೇವ' ಎಂಬುದು ಹಡಪದಪ್ಪಣ್ಣನು ಸ್ವೀಕರಿಸಿದ ಮುದ್ರಿಕೆಯು. ಇವನ ಚರಿತ್ರಾಂಶವೇನೂ ವಿಶೇಷ ಗೊತ್ತಾಗಿಲ್ಲ. ಪ್ರಭುದೇವರು ಮೊಟ್ಟಮೊದಲು ಕಲ್ಯಾಣಕ್ಕೆ ಬಂದಾಗ ಪೂಜೆಯಲ್ಲಿ ನಿಮಗ್ನನಾದ ಬಸವನಿಗೆ ಆ ಸುದ್ದಿಯನ್ನು ಇವನೇ ಹೇಳಿದನು ಮತ್ತು ಬಸವನು ಅವರನ್ನು ಕರೆತರಲು ಇವನನ್ನೆ ಬೆಸಸಿದನು. ಮುಂದೆ ಹಲವು ಪ್ರಸಂಗಗಳಲ್ಲಿಯೂ ಇವನು ಬಸವನ ಬಳಿಯಲ್ಲಿಯೆ ಇದ್ದನೆಂಬುದು ಶೂನ್ಯಸಂಪಾದನೆಯಿಂದ ಗೊತ್ತಾಗುವದು.

ಇವನ ಉಪಲಬ್ಧವಿದ್ದ ವಚನಸಂಖ್ಯೆಯು **೨೨೨**. ತನ್ನ ಮತಕ್ಕೆ ಸಂಬಂಧಿಸಿದ ತತ್ವ, ವಿಚಾರ, ಆಚಾರ ಇವೆಲ್ಲವುಗಳನ್ನು ಕುರಿತು ಇವನ ವಚನಗಳಿರುವವು. ಒಂದೆರಡು ಕಡೆ, ಚನ್ನಮಲ್ಲೇಶ್ವರಾ ನೀವೆ ಬಲ್ಲಿರಿ, ಚನ್ನಮಲ್ಲೇಶ್ವರ ಸಾಕ್ಷಿ, ಎಂದು ಉಲ್ಲೇಖವಿರುವುದರಿಂದ ಅವನೇ ಇವನ ಇಷ್ಟದೇವತೆಯಾಗಿರಬೇಕು. ಇನ್ನೊಂದೆಡೆ, 'ಎನ್ನ ಪರಮಾರಾಧ್ಯರು ಚನ್ನಮಲ್ಲೇಶ್ವರ ಮಾಯೆ ಮುಂಡೆಯ ಮೆಟ್ಟಿ, ಎನ್ನ ತನುಮನಧನಕ್ಕೆ ಒಡೆಯನಾಗಿ,' ಎಂಬ ಉಲ್ಲೇಖವಿರುವುದರಿಂದ ಪರಮಾರಾಧ್ಯರೆಂಬವರು ಇವನ ಗುರುಗಳಾಗಿರಬೇಕೆಂದು ತೋರುತ್ತಿದೆ. ವೇದಶಾಸ್ತ್ರಾಗಮ

ಮುಂತಾದವೆಲ್ಲ ಶಬ್ದಸೃಷ್ಟಿಯೊಳಗಿನವು, ಅವುಗಳಿಗೆ ಸತ್ಯವಸ್ತುವು ನಿಲುಕದು, ಅದು ಹೇಳಲು ಕೇಳಲು ಬಾರದಂತಹದು, ಅದು ಅದ್ಯರಿಗಲ್ಲದೆ ಇನ್ನಾರಿಗೂ ತಿಳಿಯದು, ಎಂದು ಎಲ್ಲ ವಚನಕಾರರಂತೆ ಇವನೂ ಸಾಕ್ಷಾತ್ಕಾರವನ್ನು ಎತ್ತಿಹಿಡಿದಿರುವನು. ಶರಣರ ಅನುಭಾವ, ಶರಣರ ನಿಲವು, ಶರಣರ ಸಂಗ ಇವುಗಳನ್ನು ಇವನು ಬಹಳವಾಗಿ ಹೊಗಳಿರುವನು. ಇವನ ವಿಕ್ಕ ವಚನಗಳು ಸ್ವಲ್ಪ ಉದ್ದವಿದ್ದರೂ ನೀತಿಯ ವಚನಗಳು ಬಹಳ ಚಿಕ್ಕವೂ ಸೂತ್ರಮಯವೂ ಇರುವವು. ವಂದನೆಗೆ ನಿಲಬೇಡ, ನಿಂದನೆಗೆ ಓಡಬೇಡ, ಹಿಂದುಮುಂದು ಆಡಬೇಡ, ಸಂದೇಹಗೊಳಬೇಡ; ಅದೇ ರೀತಿ, ಕಾಡಬೇಡ ಕಂಡವರ, ಬೇಡಬೇಡ ನರರ, ಆಡಬೇಡ ಅನೃತವ, ನೋಡಬೇಡ ಪರಸ್ತ್ರೀಯರ, ಮುತ್ತು ಕಟ್ಟಬೇಕು ಮನವ, ಮೆಟ್ಟಬೇಕು ಪದವ, ನುಟ್ಟುರುಹಬೇಕು ಸಪ್ತವ್ಯಸನಗಳ, ಈ ಮುಂತಾದ ವಿಧಿನಿಷೇಧಗಳು ನೀತಿಸೂತ್ರಗಳಂತೆ ಇರುವವು. ಕೆಲವು ವಚನಗಳು ಇವನ ಯೋಗಾಭ್ಯಾಸದ ದ್ಯೋತಕಗಳಾಗಿವೆ. ಇವನು ಅಲ್ಲಲ್ಲಿ ಉಲ್ಲೇಖಿಸುವ ಸರ್ಪವು ಎಷ್ಟೋ ಸಂದರ್ಭಗಳಲ್ಲಿ ಕುಂಡಲಿನಿಶಕ್ತಿ ಇರಲಿಕ್ಕೆಸಾಕು. 'ಹಳೆಯ ಹುತ್ತದೊಳಗಿನ ಎಳೆಯ ಸರ್ಪವು' ಅದೇ ಹಾಕಿದ ಮುಂಡಿಗೆಯ ಎತ್ತುವರಿಲ್ಲ, ಎಂದು ಅಭಿಮಾನಪೂರ್ವಕವಾಗಿ ಹೇಳಿರುವುದರಿಂದ ಇವನಿಗೆ ಮುಂಡಿಗೆಗಳು ಪ್ರಿಯವಿದ್ದಂತೆ ತೋರುತ್ತಿದೆ! ೨೨೨ ವಚನಗಳ ಚಿಕ್ಕ ಸಂಗ್ರಹದಲ್ಲಿ ೩೦–೪೦ ಮುಂಡಿಗೆಗಳಾದರೂ ಇರಬಹುದು! ಏಕಮೇವಾದ್ವಿತೀಯ, ಅಣುವಿಂಗೆ ಅಣು ಮಹತ್ತಿಂಗೆ ಮಹತ್ತು, ತತ್ತ್ವಮಸಿ, ಎಂಬ ಮುಂತಾದ ಶ್ರುತಿಯನ್ನನುಸರಿಸುವ ವಾಕ್ಯಗಳು ಇವನ ವಚನಗಳಲ್ಲಿ ಅಲ್ಲಲ್ಲಿ ಬಂದರೂ ಆಗಮವಾಕ್ಯಗಳು ಇವನಿಂದ ಉದಹರಿಸಲ್ಪಟ್ಟಿಲ್ಲವೆಂದರೂ ಸಲ್ಲುವದು. ಅವು ತೀರ ಕಡಿಮೆ. ಲಿಂಗಮ್ಮ ಎಂಬ ಇವನ ಹೆಂಡತಿಯು ಪಂಡಿತೆಯಿದ್ದು ಆಕೆಯ ವಚನಗಳು ಈಗ ಪ್ರತ್ಯೇಕವಾಗಿ ಪ್ರಸಿದ್ಧವಾಗಿವೆ. ಇವನ ಹೆಸರು ನೋಡಿದರೆ ಇವನು ನಾವಲಿಗನು. ಹೀಗಿದ್ದರೂ ಇವನು ಮಾಡಿದ ಸಾಧನ, ಪಡೆದ ಪದ, ಮತ್ತು ರಚಿಸಿದ ವಚನ ಇವುಗಳನ್ನೆಲ್ಲ ಲಕ್ಷಿಸಿದರೆ, ಅಧ್ಯಾತ್ಮಸಾಧನಕ್ಕೆ ಜಾತಿ, ಕುಲ, ಉದ್ಯೋಗ ಇವುಗಳಲ್ಲಿ ಯಾವುದೂ ಅಡ್ಡ ಬರಲರಿಯದು, ಎಂಬುದು ಸಿದ್ಧವೆಂದು ಒಪ್ಪಬೇಕಾಗುತ್ತಿದೆ.

(೮) 'ಸಂಗನಬಸವೇಶ್ವರ' ಎಂಬ ಅಂಕಿತವುಳ್ಳ ವಚನಕಾರನು ದೀಕ್ಷೆ ಮೊದಲ್ಗೊಂಡು ಅಂತ್ಯವಿಧಿಯ ವರೆಗೆ ಶಿವಯೋಗ, ಸಮಾಧಿ

ಮುಂತಾದವುಗಳನ್ನೊಳಗೊಂಡ ಸಕಲ ವೀರಶೈವಾಚಾರಮರ್ಮವನ್ನು ಚನ್ನಾಗಿ ವಿವರಿಸಿದ್ದಾನೆ. ಇವನದು ಪೂರ್ಣ ಮತಗ್ರಂಥವೆಂದು ಹೇಳಬಹುದು. ಕಲ್ಯಾಣಪಟ್ಟಣದ ಅನುಭವಮಂಟಪದ ಶೂನ್ಯಸಿಂಹಾಸನದಲ್ಲಿ ವಿರಾಜಿಸುತ್ತಿರುವಾಗ ಬಸವಾದಿ ಪ್ರಮಥರು ನಿಜಾಚರಣೆಯ ನಿಲುಕಡಿಯನ್ನು ಕೇಳಲು ಪ್ರಭುದೇವರು ಹೀಗೆ ಹೇಳಿದನು, ಅದನ್ನು ನಾನು ಪರಂಪರೆಯಿಂದ ಹೇಳುತ್ತಿರುವೆನು, ಎಂದು ಸಂಗನಬಸವೇಶ್ವರನು ಅಂದಿರುವನು. ಇದರಲ್ಲಿ ಅನುಭವಮಂಟಪದ ಮತ್ತು ಶೂನ್ಯಸಿಂಹಾಸನದ ಸ್ಪಷ್ಟ ಉಲ್ಲೇಖವಿದೆ ಮತ್ತು ಬಸವ, ಚನ್ನಬಸವ, ಸಿದ್ದರಾಮ, ನೀಲಲೋಚನೆ, ಮುಕ್ತಾಂಗನೆಯಾದ ಅಕ್ಕಮಹಾದೇವಿ ಇವರು ಅಲ್ಲಿ ಇದ್ದರು, ಎಂದು ಹೇಳಿದ್ದಾನೆ. ವೇಧಾ, ಮಂತ್ರ, ಮತ್ತು ಕ್ರಿಯಾ ಎಂಬ ಮೂರು ದೀಕ್ಷೆಗಳು, ಇಪ್ಪತ್ತೊಂದು ವಿಚಾರ, ನೂರೊಂದು ಸ್ಥಲದ ಆಚರಣೆ, ಇನ್ನೂರಾಹದಿನಾರು ಸ್ಥಲದ ಸಂಬಂಧ, ಇವೆಲ್ಲ ಅವನ ವಚನಗಳಲ್ಲಿ ಉಕ್ತವಾಗಿವೆ. ಅಲ್ಲಲ್ಲಿ ಆಗಮವಾಕ್ಯಗಳ ಆಧಾರವು ಕೊಡಲ್ಪಟ್ಟಿದೆ. ಗುರುವು ಕರಸ್ಥಲದಲ್ಲಿ ಕೊಡುವ ಲಿಂಗವು ಪಾರ್ಥಿವವಿದ್ದರೂ ಅದು ಕೇವಲ ಪರಮಾತ್ಮಪ್ರತೀಕವು, ಯಾಕಂದರೆ ಅಂತರ್ಲಿಂಗವು ಅನಾದಿ ನಿಃಕಳಂಕ ಜ್ಯೋತಿರ್ಮಯವಿರುವದು, ಎಂದು ಲಿಂಗಪೂಜೆಯ ನಿಜತತ್ವವನ್ನು ಹೇಳಿರುವನು. ಯೋಗವನ್ನು ಹೇಳುವಾಗ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಂತೆ, ಹಠಾದಿ ಯೋಗಗಳಿಗಿಂತ ಶಿವಯೋಗವೆ ಶ್ರೇಷ್ಠವು, ಎಂದು ಇವನು ಪ್ರತಿಪಾದಿಸಿರುವನು. ಅಧೋಕುಂಡಲಿ ಅಂದರೆ ಪ್ರವೃತ್ತಿ, ಊರ್ಧ್ವಕುಂಡಲಿ ಅಂದರೆ ಕೇವಲ ನಿವೃತ್ತಿ. ಆದರೆ, ಪ್ರವೃತ್ತಿ ನಿವೃತ್ತಿಯೆಂಬ ಉಭಯಮಾರ್ಗವ ಶಿವಾಜ್ಞೆಯಿಂದ ತೀರ್ಚಿಸಿ ಶಿವಯೋಗ, ಶಿವಾಚಾರ, ಶಿವಭಕ್ತಿ, ಶಿವಾನಂದ ಪರಿಣಾಮದಲ್ಲಿ ಜರಿಸುವುದೆ ಮಧ್ಯಕುಂಡಲಿ, ಎಂದು ವೀರಶೈವಮಾರ್ಗದ ಸಮನ್ವಯ ಸ್ವರೂಪವನ್ನೂ ಅದರಲ್ಲಿಯ ಮುಖ್ಯ ಶಿವಾರ್ಪಣ ತತ್ವವನ್ನೂ ಹೇಳಿರುವನು. ಸಮಾಧಿಯ ವಿಧಿಗಳನ್ನು ಹೇಳುವಾಗ, ಪರಮಾರಾಧ್ಯ ಗುರುದೇವನು ಗುಮ್ಮಳಾಪುರದಲ್ಲಿ ಸಮಾಧಿಹೊಂದಿದನು ಅಥವಾ ಶೂನ್ಯನಾದನು, ಎಂಬ ಉಲ್ಲೇಖವಿರುವದು. ಹಡಪದಪ್ಪಣ್ಣನ ಗುರು ಇರಬಹುದು, ಎಂದು ನಾವು ಅಂದಿರುವ ಪರಮಾರಾಧ್ಯರು ಇವರೇ ಇರಬಹುದೇ? ಈ ಮಾತು ವಿಚಾರಣೀಯವಿರುವದು.

ಸಂಗನಬಸವೇಶ್ವರನ ವಚನಗಳೆಲ್ಲ ಉದ್ಧವಾಗಿರುವವು. ನಿಜವಾಗಿ ಎಲ್ಲ ವಚನಕಾರರ ವಚನಗಳ ಲಕ್ಷಣಗಳು ಇವನ ಬರಹದಲ್ಲಿಲ್ಲವೆಂದರೂ

ಸಲ್ಲುವದು. ಇವನದು ಸಾದಾ ಗದ್ಯವಿದೆ. ವಚನಕಾರರು ಸಾಮಾನ್ಯವಾಗಿ ಉಪಯೋಗಿಸಿದ ವಚನರೂಪವು, ವಿಷಯಗಳ ವಿಶೇಷ ವಿವೇಚನೆಮಾಡುವ ಅವಶ್ಯಕತೆ ಇದ್ದಲ್ಲಿ, ಅಷ್ಟೊಂದು ಸರಿ ಬೀಳುವುದಿಲ್ಲ. ಇವನು ಅನುಭವ ಮಂಟಪದಲ್ಲಿ ನಡೆದ ಚರ್ಚೆಯನ್ನು ಪರಂಪರೆಯಿಂದ ಹೇಳುತ್ತಿರುವುದರಿಂದ, ಮತ್ತು ಇವನ ಅಂಕಿತವು ಸಂಗನಬಸವೇಶ್ವರನೆಂದು ಇರುವುದರಿಂದ ಇವನು ಈಚೆಗಿನವನಿರಬೇಕೆಂಬುದು ಸ್ಪಷ್ಟವು. ಇವನ ಸ್ವಂತ ಹೆಸರು ಇನ್ನೂ ಗೊತ್ತಾಗಿಲ್ಲ. ಆಚಾರಗಳ ವಿವರವನ್ನು ನೋಡಬೇಕಾದರೆ ಇವನ ಗ್ರಂಥವು ಒಳ್ಳೆ ಮಾರ್ಗದರ್ಶಿಯಾಗಬಲ್ಲದು. ಇವನ ವಚನಗ್ರಂಥದಲ್ಲಿಯು ವಚನಸಂಖ್ಯೆಯು ಅಟ್ಟರೇ ಇದ್ದರೂ ಅವು ಉದ್ದುದ್ದ ಇರುವುದರಿಂದ ಸುಮಾರು ೫೦೦ ಸಾಮಾನ್ಯ ವಚನಗಳಷ್ಟು ಸ್ಥಲವು ಅವುಗಳಿಗೆ ಬೇಕಾಗಿದೆ.

(೯) 'ಘನಲಿಂಗ' ಎಂಬ ಅಂಕಿತವುಳ್ಳವನ ಮೂಲ ಹೆಸರು ಇನ್ನೂ ಗೊತ್ತಾಗಿಲ್ಲ. ಅವನು ತನ್ನ ಗುರುಪರಂಪರೆಯನ್ನು ಹೇಳುವಾಗ, 'ಸುತ್ತೂರು ಸಿಂಹಾಸನದ ಪರ್ವತದೇವ, ಅವನ ಶಿಷ್ಯ ಧಂಡಾರಿ ಬಸವಪ್ಪೆಯ, ಅವನ ಶಿಷ್ಯ ಕೂಗಲೂರ ಸಂಜಯ್ಯ, ಆ ಸಂಜಯ್ಯನ ಕರಕಮಲದಲ್ಲಿ ಉದಯವಾದ ಶರಣ ನಾನು, ಎನ್ನ ಗುರುವಿನ ಪರಮಗುರು ತೋಂಟದಾರ್ಯನಿಗೆ ಎನ್ನ ಶರಣುಮಾಡಿದರು, ಅವನು ವಚನಾಮೃತವನುಣಿಸಿ ಘನಲಿಂಗಿ ಎಂಬ ನಾಮಕರಣವಿಧಿಮಾಡಿದನು,' ಎಂದಿರುವನು. ಇವನು ತೋಂಟದಾರ್ಯನ ಶಿಷ್ಯನೆಂದು ಚನ್ನಬಸವಪುರಾಣದಲ್ಲಿಯೂ ಉಲ್ಲೇಖವಿದೆ. ಸಿದ್ಧೇಶ್ವರ ಪುರಾಣದಲ್ಲಿಯೂ ಇವನ ಹೆಸರು ಬಂದಿದೆ. ಸುತ್ತೂರು ಗ್ರಾಮವು ಎಲ್ಲಿದೆ ಇದು ಇನ್ನೂ ತಿಳಿದಿಲ್ಲ. ಅಂಕಿತವನ್ನು ಗುರುಗಳು ಕೊಡುತ್ತಿದ್ದರು, ಎಂಬುದು ಮೇಲಿನ ವಚನಭಾಗದಿಂದ ಗೊತ್ತಾಗುವದು. ಯಾವದೊಂದು ಪಾರಮಾರ್ಥಿಕ ದೀಕ್ಷೆ ಪಡೆದೊಡನೆ ಗುರುಗಳು ಶಿಷ್ಯನಿಗೆ ಹೊಸ ಹೆಸರುಕೊಡುವ ಪದ್ಧತಿಯೂ ಅನೇಕ ಸಾಂಪ್ರದಾಯಗಳಲ್ಲಿರುವದು. ಹಾಗೆ ವಚನಕಾರರಲ್ಲಿಯೂ ಕೆಲಮಟ್ಟಿಗೆ ಇರಬಹುದು.

ಇವನ ಸುಮಾರು ೬೦ ವಚನಗಳು ಉಪಲಬ್ಧವಿರುವವು. ಇವು ಸ್ವಲ್ಪ ದೊಡ್ಡವಿದ್ದರೂ ಮನೋವೇಧಕವಿರುವವು. ಇವುಗಳಲ್ಲಿ ಅಲ್ಲಲ್ಲಿದ್ದ ಉಪಮಾರೂಪಕಾದಿಗಳು ಮನಸಿನ ಮೇಲೆ ಚನ್ನಾಗಿ ಪರಿಣಾಮ ಮಾಡುವವು. ಮಹಾಶರಣರನ್ನು ವ್ಯರ್ಥ ಟೀಕಿಸಬಾರದು, ಸಾಮರ್ಥ್ಯವಿದ್ದರೆ ಅವರಂತೆ ಆಗಬೇಕು, ಕೇವಲ ದೊಡ್ಡವರೆಂದು ನಟಿಸಿದರೆ ಕೆಲಸವಾಗದು, ಎಂದು ಹೇಳುವ ಸಂದರ್ಭದಲ್ಲಿ, ಆನೆ ಮದನೆದ್ದು ಬೀದಿಕೆಡಿಸಿದಂತೆ ಆಹು

ಮದವೆದ್ದು ಕುಣಿದರೆ ಬೇಡಕೇರಿಗೆ ಒಯ್ದು ಕೊರಳುಕೊಯ್ಯುವರು, ಎಂದು ಮುಂತಾಗಿ ಕೊಟ್ಟ ರೂಪಕಗಳ ಸಾಲು ಒಳ್ಳೆ ಸಮರ್ಪಕವಿರುವದು. ಬಸವನು ಭಕ್ತಿಭಾಂಡಾರಿ, ಜನ್ನಬಸವನು ಜ್ಞಾನಿ, ಅಲ್ಲಮನು ವಿರಕ್ತ, ನಿಜಗುಣಚಂದಿಮರಸರು ನಿಜಶರಣನು, ಎಂದು ಹಲವು ಶರಣರ ಉಲ್ಲೇಖವು ಇವನ ವಚನಗಳಲ್ಲಿ ಬಂದಿರುವದು. ತಾನು ಶರಣುವೆಣ್ಣು, ಎಂದು ಸತೀಭಾವದಿಂದ ನಾಲ್ಕಾರುವಚನಗಳಲ್ಲಿ ಇವನು ದೇವರಿಗೆ ಮೊರೆ ಹೊಕ್ಕಿರುವನು. ಶರಣರ ಸಂಭಾಷಣೆಯಿಂದ ಪುರಾತರ ವಚನದ ಪರಮಾ ಮೃತವ ದಣಿಯುಂಡು ಕೃತಾರ್ಥನಾದೆನೆಂದು ಶರಣಸಂಗವನ್ನು ಇವನು ಹೊಗಳಿರುವನು. ಆರ್ತಭಕ್ತನಂತೆ ದೀನಭಾವದಿಂದ, ದೇವಾ ಕರುಣಿಸು, ಎಂದು ದೇವರನ್ನು ಪರಿಪರಿಯಿಂದ ಬೇಡಿಕೊಂಡದ್ದು ಇವನ ಉತ್ಕಟ ಭಕ್ತಿಯ ದ್ಯೋತಕವಾಗಿದೆ. ನಾನು ಕಡು ಪಾಪಿ, ನಿನ್ನ ಮನೆಯ ಹಳೆಯ ನಾನು, ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ನಿನ್ನ ಸಮ್ಮುಖ ಮಾಡು ಎನ್ನನು, ನಿನಗೊಲಿವವರ ನಿನ್ನಂತೆ ಮಾಡುವ ಸಾಮರ್ಥ್ಯವು ನಿನಗೆ ಇದೆ, ಇನ್ನೆಷ್ಟು ಪರೀಕ್ಷಿಸಬೇಕೆನ್ನುವಿ, ಸಾವನ್ನಬರ ಸರಸವೇ ದೇವಾ, ಎಂದು ಬಗೆಬಗೆಯಿಂದ ಈ ಶರಣನು ಪ್ರಾರ್ಥಿಸಿರುವನು. ಇದು ಅವನ ವಿಕಳಾವಸ್ಥೆಯನ್ನು ಜನ್ಯಾಗಿ ತೋರಿಸುವದು.

(೧೨) ಸೊನ್ನಲಿಗೆ ಅಥವಾ ಸೊನ್ನಲಾಪುರ ಅಂದರೆ ಈಗಿನ ಸೊಲ್ಲಾಪುರದ ಸಿದ್ಧರಾಮಯ್ಯನು ಬಸವನ ಸಮಕಾಲೀನನು. ಇವನು ಒಳ್ಳೆ ಪ್ರಸಿದ್ಧ ಶಿವಶರಣನು. ಇವನಿಗೆ ಸಿದ್ಧರಾಮೇಶ್ವರನೆಂದೂ ಅನ್ನುವರು. ಕಪಿಲಸಿದ್ಧ ಮಲ್ಲಿನಾಥ ಅಥವಾ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬುದು ಇವನ ಅಂಕಿತವು. 'ಎನ್ನ ಭಕ್ತಿಗೆ ಸೊನ್ನಲಿಗೆಯಲ್ಲಿ ಕಪಿಲಸಿದ್ಧ ಮಲ್ಲಿನಾಥನಾಗಿ ಬಂದಿರಿ,' ಎಂದು ಹೇಳುವುದರಿಂದ ಇವನು ಸೊಲ್ಲಾಪುರದಲ್ಲಿಯೆ ಸಾಧನೆಮಾಡಿರಬೇಕೆಂದು ಊಹಿಸಬಹುದು. ಇವನ ವಚನಗಳಲ್ಲಿ, ಜನ್ನ ಬಸವೇಶ್ವರ ಗುರುವಿನ ಬೋಧೆಯಿಂದ, ಗುರು ಜನ್ನಬಸವಣ್ಣ, ಜನ್ನಬಸವಣ್ಣನ ಕರುಣದಿಂದ ಶಿವಯೋಗಿಯಾದೆ,' ಶ್ರೀಗುರು ಜನ್ನಬಸವಣ್ಣ ಹೆಸರಿಟ್ಟ ಲಿಂಗದ ಹೆಸರು ಹೇಳುವೆನು, ಜನ್ನಬಸವಣ್ಣ ಗುರುವಾಗಿ ಬಂದು, ಜನ್ನಬಸವಣ್ಣನೆಂಬ ಪರಾತ್ಪರ ಗುರುಮೂರ್ತಿ, ಈ ಮುಂತಾದ ಉಲ್ಲೇಖಗಳಿರುವುದರಿಂದ ಜನ್ನಬಸವೇಶ್ವರನೆ ಈತನ ಗುರುವಾಗಿರಬೇಕೆಂಬುದು ಸ್ಪಷ್ಟವು. ಇಲ್ಲಿ, ಜನ್ನಬಸವಣ್ಣ ಹೆಸರಿಟ್ಟ ಲಿಂಗದ ಹೆಸರು ಹೇಳುವೆನು, ಅಂದರೆ ತೋಂಟದಾರ್ಯನು 'ಘನಲಿಂಗ'ವೆಂಬ ಅಂಕಿತವನ್ನು ಆ ವಚನ

ಕಾರನಿಗೆ ಕೊಟ್ಟಂತೆ 'ಕಪಿಲಸಿದ್ಧ ಮಲ್ಲಿನಾಥ' ಎಂಬ ಅಂಕಿತವನ್ನು ಜನ್ನಬಸವನು ಈತನಿಗೆ ಕೊಟ್ಟನೋ ಹೇಗೆ, ಎಂಬ ಮಾತು ವಿಚಾರಣೀಯವಿರುವದು. ಹಾಗಿದ್ದರೆ ಆ ಅಂಕಿತದ ವಚನಗಳನ್ನೆಲ್ಲ ಅವನು ಆ ಬಳಿಕ ಬರೆದಿರಬೇಕು, ಎಂಬ ಊಹೆಗೆ ಆಸ್ಪದವಾಗುವದು. ಕಲ್ಯಾಣಕ್ಕೆ ಹೋಗುವ ಮುಂಚೆ ಮತ್ತು ಜನ್ನಬಸವನಿಂದ ದೀಕ್ಷೆಪಡೆಯುವ ಮುಂಚೆ ಪ್ರಭುದೇವರು ಸೊಲ್ಲಾಪುರದಲ್ಲಿ ಸಿದ್ಧರಾಮಯ್ಯನನ್ನು ಕಂಡನು. ಆಗ ಮಾಡಿದ ವಚನಗಳೆಂದು ಶೂನ್ಯಸಂಪಾದನೆಯಲ್ಲಿ ಇರುವ (ಕಂ. ೧೫೦೫) ವಚನಗಳಲ್ಲಿ 'ಕಪಿಲಸಿದ್ಧ ಮಲ್ಲಿನಾಥ' ಎಂಬ ಮುದ್ರಿಕೆ ಇರುವದು. ಅದು ಅಲ್ಲಿ ಹೇಗೆ ಬಂದಿತು? ಆ ವಿಷಯವನ್ನು ಮುಂದಿಟ್ಟುಕೊಂಡು ಸಿದ್ಧರಾಮಯ್ಯನ ಹಿಂದುಗಡೆ ಅವುಗಳನ್ನು ಬರೆದನೊ ಅಥವಾ ಮತ್ತಾರಾದರೂ ಬರೆದರೊ ಇದು ಸಂಶೋಧನದ ವಿಷಯವಿರುವದು. ಕೆರೆ, ಅರವಟ್ಟಿಗೆ, ದೇವಾಲಯ, ಗೋಪುರ, ಮುಂತಾದವುಗಳನ್ನು ಕಟ್ಟಿಸಿ, ಪುಣ್ಯಪಡೆಯುವುದಕ್ಕಿಂತ ಸಿದ್ಧರಾಮಯ್ಯನನ್ನು ಹೀಯಾಳಿಸಿ ಪ್ರಭುದೇವರು 'ಒಡ್ಡ ರಾಮಯ್ಯ' ಎಂದು ಅವನನ್ನು ಸಂಬೋಧಿಸಿರುವನು ಹೊರತು ಅದು ಅವನ ಜಾತಿಯ ದ್ಯೋತಕವಲ್ಲವೆಂದು ನಮ್ಮ ಅಭಿಪ್ರಾಯವಿದೆ. ಸಿದ್ಧರಾಮಯ್ಯನು ಜಾತಿಯಿಂದ ಒಡ್ಡನಿದ್ದನು ಎಂಬ ಐತಿಹ್ಯದ ಸಾಕ್ಷಿ ವಿವಾದಾಸ್ಪದವಾದದ್ದು ಮತ್ತು ಬೇರೆ. ಮೊದಲು ಇವನು ದೀಕ್ಷೆಪಡೆದಿರಲಿಲ್ಲ. ಇಷ್ಟೇ ಅಲ್ಲ. 'ಕುರುಹುವಿಡಿದು ಕೂಡುವ ನಿರವಯಲುಂಟೆ,' ಎಂದು ಇಷ್ಟಲಿಂಗದ ಅವಶ್ಯಕತೆಯೇನು, ಎಂಬ ಪ್ರಶ್ನೆ ಮಾಡಿರುವನು. ಅದರೆ ಮುಂದೆ ಕಲ್ಯಾಣಕ್ಕೆ ಹೋದ ಬಳಿಕ ಅಲ್ಲಿ ಜನ್ನಬಸವನಿಂದ ಲಿಂಗದೀಕ್ಷೆಪಡೆದು, ಮುನ್ನ ಮಾಡಿದ್ದೇ ಮಾಡಿದೆ ಹೋಮವನ್ನಿನ್ನು ಮಾಡಿದಡೆ ತಲೆದಂಡ, ಎಂದೂ ಇನ್ನು ಇಷ್ಟಲಿಂಗ ಪೂಜೆಯ ನಿಷ್ಠೆಯಿಂದ ಮಾಡುವೆ ಎಂದೂ ಅಂದಿರುವನು. ಪ್ರಭುದೇವರಿಗೂ ಅವನಿಗೂ ಮೊದಲನೆಯ ಭೇಟ್ಟಿಯ ಕಾಲಕ್ಕೆ ಆದ ಸಂಭಾಷಣವು ಒಳ್ಳೆ ಮನೋವೇಧಕವಿರುವದು. ಅದು ಶೂನ್ಯ ಸಂಪಾದನೆಯ ತೃತೀಯೋಪದೇಶದಲ್ಲಿ ಪೂರಾ ಇರುವದು. ಸಿದ್ಧರಾಮಯ್ಯನು ದೊಡ್ಡ ಯೋಗಿ ಎಂದು ಹೆಸರಾಗಿದ್ದನು. 'ಯೋಗಿಯಾದರೆ ನಿನ್ನಂತಾಗಬೇಕು, ಯೋಗಸಿದ್ಧಿ ಸಿದ್ಧರಾಮಯ್ಯರಂಗಾಯಿತ್ತು, ಯೋಗವ ಸಾಧಿಸಿದೆ ನಾನೊಬ್ಬ,' ಎಂಬ ಉಲ್ಲೇಖಗಳು ಅವನ ವಚನಗಳಲ್ಲಿಯೆ ಇವೆ. ಅಲ್ಲಮಪ್ರಭುವೂ ಅವನಿಗೆ, 'ನಿಜವನರಿತು ಬೆರೆದ ಶಿವಯೋಗಿ,' ಎಂದು ಸಂಬೋಧಿಸಿ, ನಿನ್ನ ಸುಖಸಮಾಧಿಯ ತೋರು, ಎಂದು ಹೇಳಿರುವನು.

ಅಭ್ಯಾಸಯೋಗವಸತಿಗಳಿದು ಶಿವಯೋಗಿಯಾವೆ, ಎಂದು ಅಂದಿರುವುದರಿಂದ ಮೊದಲು ಇವನು ಪಾತಂಜಲಯೋಗವನ್ನು ಅಭ್ಯಸಿಸುತ್ತಿರಲಿಕ್ಕೆಬೇಕು.

ಈಗ ಪ್ರಕಟವಾಗಿರುವ ಇವನ ವಚನಸಂಖ್ಯೆಯು ಲಭ್ಯ ಇರುವದು. ಬೇರೆಬೇರೆ ಸಂದರ್ಭಗಳಲ್ಲಿ, ಅಲ್ಲಮಪ್ರಭು, ಅಪ್ಪಯ್ಯ, ಎಮ್ಮಯ್ಯ, ನೀಲಮ್ಮ, ಗಂಗಾಂಬಿಕೆ, ಅಕ್ಕನಾಗಾಯಿ, ಮಡಿವಾಳ ಮಾಚಯ್ಯ, ಹಡಪದಪ್ಪಣ್ಣ, ಮರುಳಸಿದ್ಧ, ಬಸವಣ್ಣ, ಚನ್ನಬಸವಣ್ಣ, ಸಕಳೇಶಯ್ಯ, ನಿಜಗುಣ, ವೃಷಭಯೋಗೀಶ್ವರ, ಶಿವನಾಗಮಯ್ಯ, ಹಾವಿನಹಾಳ ಕಲ್ಲಯ್ಯ, ಬೊಮ್ಮಣ್ಣ, ಕುಂಬಾರ ಗುಂಡಯ್ಯ, ಜೇಡರ ದಾಸಿಮಯ್ಯ, ತೆಲಗು ಜೊಮ್ಮಯ್ಯ, ಮುಂತಾದ ಶರಣರ ಉಲ್ಲೇಖವನ್ನು ಇವನು ಮಾಡಿರುವನು. ಇವರಲ್ಲಿ ಮೊದಲಿನ ಒಂಬತ್ತು ಜನರ ವಚನ ಸಂಖ್ಯೆ ಒಟ್ಟು ೧೬೩೧೩೩೩೦೦ ಎಂದೂ ಅದರಲ್ಲಿ ೧೬೦ ಕೋಟಿ ಒಬ್ಬ ಅಲ್ಲಯ್ಯನ ದೆಂದೂ ಒಂದು ವಚನದಲ್ಲಿ ಹೇಳಿರುವನು! ವ್ಯಾಸನ ಪುರಾಣ, ಶತರುದ್ರ, ಗಾಯತ್ರಿಜಪ ಮುಂತಾದವು ಯಾವವೂ ಶರಣರ ವಚನಕ್ಕೆ ಸರಿಯಾಗಲಾರವು, ವಚನದ ಅನುಭಾವವು ವಾಚಾತೀತವು, ಬರಿಯ ವಚಿಸಿ ಅನುಭಾವಿಯಾಗದಿದ್ದರೆ ಪಿಶಾಚಿ ಎನಬೇಕು, ತಿಳಿದನುಭಾವಿಯೆ ನಿಜವಾದ ಸಂಸ್ಕಾರಿ, ಎಂದು ವಚನ ಮತ್ತು ಅನುಭಾವದ ಬಗ್ಗೆ ನುಡಿದಿರುವನು. ಉಳಿದ ವಚನಕಾರರಂತೆ, ಯೋಗ್ಯತೆಯು ಜಪದಿಂದ, ತಪದಿಂದ, ಗುಣದಿಂದ ಬರುವದು ಹೊರತು ಬರಿಯ ಜನ್ಮದಿಂದ ಬರಲರಿಯದು, ಎಂದು ಗುಣಕರ್ಮಗಳ ಅಥವಾ ನಡೆನುಡಿನೀತಿಗಳ ಮಹತ್ವವನ್ನೆ ಇವನೂ ಹೊಗಳಿರುವನು. ಒಂದೆರಡು ಕಡೆಗೆ ಇವನು ಜಗದಂಬೆಯಾದ ಪಾರ್ವತಿಯ ಸ್ತೋತ್ರವನ್ನು ಬಹಳವಾಗಿ ಮಾಡಿರುವನು. ಅನ್ಯವಚನಕಾರರಾರೂ ಹೀಗೆ ಮಾಡಿದಂತೆ ಕಂಡುಬಂದಿಲ್ಲ. ಹಲವು ಕಡೆಗೆ ಆಗಮವಾಕ್ಯಗಳನ್ನೂ ವಿರಳವಾಗಿ, ಸರ್ವಂ ಖಲ್ವಿದಂ ಬ್ರಹ್ಮ ಎಂಬ ಮುಂತಾದ ಶ್ರುತಿವಾಕ್ಯಗಳನ್ನೂ ಉದಹರಿಸಿರುವನು. ಒಂದೆರಡು ಕಡೆಗೆ ಉಪನಿಷತ್ಕಾರರಂತೆ ಓಂ ಇದರ ಘಟಕಗಳಾದ ಅ, ಉ, ಮ್ ಇವುಗಳ ನಿರುಕ್ತಕೊಟ್ಟು ಅದರೊಳಗಿಂದ ಇಷ್ಟವಾದ ಅರ್ಥವನ್ನು ತೆಗೆದಿರುವನು. ಇವನ ವಚನಗಳಿಂದರೆ ವಚನ ವಾಙ್ಮಯದ ಉತ್ತಮ ಪಾದರಿಗಳೆಂದು ಹೇಳಬಹುದು. ಅವು ವಾಡಿಕೆಯಾಗಿ ಚಿಕ್ಕವು, ಹಗುರು, ಅರ್ಥಪೂರ್ಣವು, ಒಂದು ಬಗೆಯ ತಾಳವುಳ್ಳವುಗಳು, ಒಂದೊಂದು ಒಂದೇ ವಿಷಯವನ್ನು ಹೇಳುವಂಥವು, ಇರುವವು. ಕಠಿಣ ವಿಷಯಗಳನ್ನು ಅಥವಾ ಮಹತ್ವದ ವಿಷಯಗಳನ್ನು ಸುಲಭ

ರೀತಿಯಿಂದ ಹೇಳುವ ವಿಷಯದಲ್ಲಿ ಸಿದ್ಧರಾಮಯ್ಯನನ್ನು ಯಾರೂ ಸರಿಗಟ್ಟಲಾರರು, ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ. ಅವನ ವಚನಗಳಲ್ಲಿ ಸಾಂಪ್ರದಾಯಿಕ ಪರಿಭಾಷೆಯು ಕೂಡ ಬಹಳ ಕಡಿಮೆ. ದುಷ್ಕರ್ಮವೆಂದರೆ ವಿಷಯವಾಸನೆ ಸತ್ಕರ್ಮವೆಂದರೆ ದೇವರ ವಾಸನೆ, ವಿಷಯಬಿಟ್ಟು ನಿರ್ವಿಷಯವಾಗುವದೊಂದೇ ಮುಖ್ಯ ವಚನ, ಸಂಕಲ್ಪವಿಕಲ್ಪರಹಿತದಲ್ಲಿ ಮನವಿಸಿಸಿತ್ತು ಅದು ಅಳಿದಲ್ಲಿ ಮಹಾಜ್ಞಾನವೆನಿಸಿತ್ತು, ಕಾಯನಾನೆಂದರೆ ಕರ್ಮಕಾಂಡಿ, ಸಕಲಕ್ರಿಯೆ ಈಶಾರ್ಪಣವೆಂದರೆ ಭಕ್ತಿಕಾಂಡಿ, ಸಕಲಕರ್ಮಸಾಕ್ಷಿ ಎಂದರೆ ಜ್ಞಾನಕಾಂಡಿ, ಬೋಧವೆಂದರೆ ತನುತ್ರಯಸಾಕ್ಷಿ ನೀನೇ ಪರವಸ್ತು ಎಂಬುದು, ಸ್ವರ್ಗವೆಂದರೆ ಸುಖಕ್ಕೆ ನಾಮ ದುಃಖವೆಂದರೆ ಬಾಧೆಗೆ ನಾಮ, ಇತ್ಯಾದಿ ವ್ಯಾಖ್ಯೆಗಳು ನಾಲ್ಕು ನಾಲ್ಕು ಶಬ್ದಗಳಲ್ಲಿ ದೊಡ್ಡ ದೊಡ್ಡ ವಿಷಯಗಳನ್ನು ತಿಳಿಯಾಗಿ ತಿಳಿಸುವವು. ಸಿದ್ಧರಾಮನ ಭಕ್ತಿಭಾವ, ಅವನ ನಿಷ್ಠೆ, ಕನ್ನಡಿಯಂತೆ ನಿಚ್ಚಳವಾಗಿರುವ ಅವನ ತಿಳಿವು, ಅವನ ಹೃದಯಂಗಮ ವಚನಶೈಲಿ, ಅವನ ಯೋಗಸಾಧನ, ಈ ಮುಂತಾದ ಗುಣಗಳ ಮೂಲಕ ಅವನಿಗೆ ವಚನಕಾರರಲ್ಲಿ ಬಹಳೇ ಉಚ್ಚ ಸ್ಥಾನವನ್ನು ಕೊಡಲಿಕ್ಕೆಬೇಕೆಂಬಲ್ಲಿ ತಿಲಮಾತ್ರ ಸಂಶಯವಿಲ್ಲ.

(೧೧) ಸಿದ್ಧರಾಮಯ್ಯನಂತೆ ಚನ್ನಬಸವಣ್ಣನು ಬಸವನ ಸಮಕಾಲೀನನು. ಇಷ್ಟೇಅಲ್ಲ, ಆ ಕಾಲದ ಶಿವಶರಣರಲ್ಲಿ ಅತಿಶಯ ಹೆಸರುಪಡೆದ ತ್ರಿಮೂರ್ತಿಗಳಲ್ಲಿ ಇವನು ಒಬ್ಬನು. ಇವನು ಸಿದ್ಧರಾಮಯ್ಯನ ಗುರುವು ಎಂದು ಮೇಲೆಯೇ ಹೇಳಿದ್ದೇವೆ. ಬೇರೆಬೇರೆ ವಚನಕಾರರು ಆಗಾಗ್ಗೆ ಈ ತ್ರಿಪುರುಷರ ಹೆಸರನ್ನೆತ್ತುವರು. ಆಗ, ಬಸವನು ಭಕ್ತನು, ಅಲ್ಲಮನು ವಿರಾಗಿಯು, ಚನ್ನಬಸವನು ಜ್ಞಾನಿಯು, ಎಂದು ಉಲ್ಲೇಖಿಸಿರುವರು. ಬಸವನು ದಂಡನಾಯಕನು ಅಥವಾ ದಣ್ಣಾಯಕನು ಎಂದು ಪ್ರಸಿದ್ಧನಿದ್ದರೆ ಇವನು ಚಿಕ್ಕದಣ್ಣಾಯಕನೆಂದು ಕರೆಯಲ್ಪಟ್ಟಿರುವನು. ಇವನು ಎಲ್ಲ ಕಾರ್ಯಗಳಲ್ಲಿ ಬಸವಣ್ಣನ ಬಲಗೈಯಾಗಿದ್ದು ಅವನ ಎಲ್ಲ ಸಾಹಸಗಳಲ್ಲಿ ಸಹಾಯಕನಾಗಿದ್ದನೆಂದರೂ ಸಲ್ಲುವದು. ಕಲ್ಯಾಣದಲ್ಲಿ ಬಿಜ್ಜಳನ ಕೊಲೆಯಾದ ಬಳಿಕ ಮತ್ತು ಬಸವಣ್ಣನು ಕೂಡಲಸಂಗಮನಲ್ಲಿ ಐಕ್ಯಹೊಂದಿದ ಬಳಿಕ ಶರಣರ ಎರಡು ದೊಡ್ಡ ತುಂಡುಗಳಾಗಿ ಒಂದು ಚನ್ನಬಸವನ ನೇತೃತ್ವದಲ್ಲಿ ಕಾರವಾರ ಜಿಲ್ಲೆಯ ಎಲ್ಲಾಪೂರ ತಾಲೂಕಿನಲ್ಲಿರುವ ಉಳವಿಯ ಕಡೆಗೆ, ಇನ್ನೊಂದು ಅಲ್ಲಮನ ನೇತೃತ್ವದಲ್ಲಿ

ಶ್ರೀಶೈಲದ ಕಡೆಗೆ ಹೋಯಿತೆಂದು ಕಥೆ ಇದೆ. ಇದೇ ಸಂಗತಿಯನ್ನು ಶೂ. ಸಂ. ಯಲ್ಲಿ ಮೋಳಿಗೆಯ ಮಾರಯ್ಯನು 'ಊರ ಕೆಟ್ಟು ಸೂರೆಯಾಡುವಲ್ಲಿ ಆರಿಗಾರು ಇಲ್ಲ. ಬಸವಣ್ಣಾ ಸಂಗಮಕ್ಕೆ, ಚನ್ನಬಸವಣ್ಣಾ ಉಳವಿಗೆ, ಪ್ರಭು ಕದಳಿಗೆ···' ಎಂದು ಉಲ್ಲೇಖಿಸಿರುವನು (ಶೂ. ೧೯.) ಮುಂದೆ ಚನ್ನಬಸವನು ಉಳವಿಕ್ಷೇತ್ರದಲ್ಲಿಯೆ ಐಕ್ಯಹೊಂದಿದನೆಂದು ಹೇಳುವರು. 'ಕೂಡಲ ಚನ್ನಸಂಗಮದೇವ' ಎಂದು ಇವನ ಅಂಕಿತವಿರುವುದರಿಂದ ಇವನೂ ಕೂಡಲಸಂಗಮೇಶ್ವರನ ಉಪಾಸಕನಿದ್ದಿರಬೇಕು. ಶೂನ್ಯಸಂಪಾದನೆಯಲ್ಲಿರುವ ಮಹಾನುಭಾವ ಸಂಗೋಷ್ಠಿಯೊಳಗೆ ಇವನು ಅಲ್ಲಲ್ಲಿ ನುಡಿದದ್ದು ಕಂಡುಬರುವದು.

ಮತಸಂಬಂಧದ ಇವನ ವಚನಗಳು ಪ್ರತ್ಯೇಕವಾಗಿ ಪ್ರಸಿದ್ಧವಾಗಿವೆ. ಅದರಲ್ಲಿಯ ಆಚಾರ ವಿಷಯಕ ವಚನಗಳು ವೀರಶೈವಾಚಾರಮರ್ಮಗಳನ್ನು ಚನ್ನಾಗಿ ಅರುಹುವವು. ಅನೇಕ ವಚನಗಳಲ್ಲಿ ಆಗಮವಾಕ್ಯಗಳ ಆಧಾರವು ಕೊಡಲ್ಪಟ್ಟಿದೆ. ಕ್ರಮದಿಂದ, ಭಕ್ತಸ್ಥಲದಿಂದ ಐಕ್ಯಸ್ಥಲದ ವರೆಗೆ ಹೋಗಬೇಕು ಅಂದರೆ ಆಗದು, ಆವ ಸ್ಥಲದಲ್ಲಿ ನಿಂದಿದ್ದರೂ ಆ ಸ್ಥಲದಲ್ಲಿ ಷಟ್‌ಸ್ಥಲವಾಗಲಿಕ್ಕೆ ಬೇಕು; ಹೇಗಂದರೆ, ಭಕ್ತಸ್ಥಲದಲ್ಲಿದ್ದರೆ ಭಕ್ತನ ಆಚಾರಲಿಂಗ, ಭಕ್ತನ ಗುರುಲಿಂಗ, ಭಕ್ತನ ಶಿವಲಿಂಗ, ಭಕ್ತನ ಜಂಗಮಲಿಂಗ, ಭಕ್ತನ ಪ್ರಸಾದಲಿಂಗ, ಮತ್ತು ಭಕ್ತನ ಮಹಾಲಿಂಗ ಹೀಗೆ ಐಕ್ಯಸ್ಥಲದ ವರೆಗೆ ಪ್ರತಿಯೊಂದು ಸ್ಥಲದಲ್ಲಿ ಆಗಬೇಕು, ಎಂದು ಇವನು ಪ್ರತಿಪಾದಿಸಿರುವನು. ಹಡಪದಪ್ಪಣ್ಣನ ವಚನಗಳಲ್ಲಿ ಒಂದೆರಡು ಕಡೆಗೆ ಇದ್ದಂತೆ (ಹರನಲ್ಲದೆ ದೈವವಿಲ್ಲ ಇತ್ಯಾದಿ) ಇವನ ವಚನಗಳಲ್ಲಿಯೂ ಸಾಂಪ್ರದಾಯಿಕ ಹಟವು ಒಂದೆಡೆಗೆ ಕಂಡುಬರುವದು. ಭಕ್ತನ ಅಂಗದ ಮೇಲೆ ಶಿವಲಿಂಗವಿಲ್ಲದಿದ್ದರೆ ಅವನ ಮನೆಯಲ್ಲಿ ಮಾಡಿದ ಪಾಕ ಗೋಮಾಂಸವೆಂದು ಬರೆದಿರುವನು! ಆದರೆ ಇದು ಅಪವಾದಾತ್ಮಕವೇ ಸೈ. ಶೂನ್ಯಸಂಪಾದನೆಯ ಅಷ್ಟಮೋಪದೇಶವು 'ಚನ್ನಬಸಪರಾಜದೇವರ ಸಂಪಾದನೆ,' ಎಂಬ ಹೆಸರಿನಿಂದ ಪ್ರಸಿದ್ಧವಿದೆ. ಅದರಲ್ಲಿ, 'ಪ್ರಭುವು ಆಚಾರ, ಭಕ್ತಿ, ಅರಿವಿನ ಸೂಡಸೆ, ಮತ್ತು ಪ್ರಾಣಲಿಂಗಸಮರಸ ಇವುಗಳನ್ನು ಚನ್ನಬಸವನಿಗೆ ಹೇಳಿದನು, ಎಂದು ಉಲ್ಲೇಖವಿರುವದು. ಇವನು ಕರಣ ಹಸುಗೆ, ವಿಶಾರ್ಪಣ, ಮಂತ್ರಗೋಪ್ಯ ಎಂಬ ಗ್ರಂಥಗಳನ್ನು ಬರೆದಿರುವನು. ಪ್ರಭುದೇವರು, ಬಸವಣ್ಣನು, ಮೋಳಿಗೆಯ ಮಾರಯ್ಯ ಮುಂತಾದವರೆಲ್ಲರೂ ಚನ್ನಬಸವನ ಗುಣಗಳನ್ನು, ವಿಶೇಷವಾಗಿ ಅವನ ಜ್ಞಾನವನ್ನು

ಕೊಂಡಾಡಿರುವರು. ಚನ್ನಬಸವನು ನಿಜ ಉಂಡ ನಿರ್ಮಳದ ಘನನು, ಸಂದೇಹವಳಿದಿಪ್ಪ ಶಿವಯೋಗಿಯು, ಅವನೊಬ್ಬನೆ ಮಹಾಜ್ಞಾನಿಯು, ಅವನು ಅವಿರಳಜ್ಞಾನಿಯು, ಎಂದು ಪ್ರಭುವು ಅವನ ಜ್ಞಾನವನ್ನು ವರ್ಣಿಸಿರುವನು. ಬಸವಣ್ಣನು ಇದೇ ರೀತಿ, ಎನ್ನ ಭ್ರಾಂತಿಸೂತಕವ ಬಿಡಿಸಿದೆಯಾಗಿ ನಿನ್ನಿಂದಲಾನು ಸಂಗನಬಸವಣ್ಣನೆಂಬ ಹೆಸರುಪಡೆದೆನು, ಎಂದು ಚನ್ನಬಸವಣ್ಣನ ಜ್ಞಾನದಲ್ಲಿಯ ಹಿರಿತನವನ್ನು ಹೇಳಿರುವನು. ಬೇರೆಬೇರೆ ಶಿವಶರಣರ ವಿಶಿಷ್ಟಗುಣಗಳನ್ನು ಹೇಳುವಾಗ ಗೂಳೂರ ಸಿದ್ಧವೀರಣಾರ್ಯನು, ಚನ್ನಬಸವಣ್ಣನ ಸಾವಧಾನಜ್ಞಾನ, ಎಂದು ನಿರ್ದೇಶಿಸಿರುವನು. ಮೋಳಿಗೆಯ ಮಾರಯ್ಯನು ಬಸವಣ್ಣ ಮುಂತಾದವರನ್ನು ಸಹ ಜರೆದು, ಅವರು ಸಕಾಮಭಕ್ತರೆಂದು ಹೀಯಾಳಿಸಿ, 'ಇವರೆಲ್ಲರು ಬಲ್ಲಹರೆ ಬಲ್ಲಹನಮ್ಮ ಚನ್ನಬಸವಣ್ಣನಲ್ಲದೆ,' ಎಂದು ಕೇಳಿ, 'ಅವನು ಫಲಪದವಿರಹಿತನು,' ಎಂದು ಹೇಳಿರುವನು. ನುಲಿಯ ಚಂದಯ್ಯನಿಗೆ ನೀನೇ ದಾಸೋಹದ ನಿಜಜ್ಞಾನವನ್ನು ಹೇಳು, ಎಂದು ಪ್ರಭುದೇವರು ಚನ್ನಬಸವಣ್ಣನಿಗೆ ಬೆಸಸುವ ಕಾರಣವಾದರೂ ಅವನು ಮಹಾಜ್ಞಾನಿಯೆಂದೇ. ಪ್ರಭುದೇವರು ತನ್ನ ಸ್ತುತಿಮಾಡಿದ್ದನ್ನು ಕೇಳಿ, ನಾವಿಬ್ಬರೂ ಬಸವಣ್ಣನ ಗರಡಿಯಲ್ಲಿಯೇ ಅಭ್ಯಾಸಮಾಡಿದವರು, ಎಂದು ಚನ್ನಬಸವಣ್ಣನು ಅಂದಿರುವನು. ಇದರಿಂದ ಮತ್ತು ಇವರು ಮೂವರು ಆಗಾಗ್ಗೆ ಪರಸ್ಪರರನ್ನು ನೀ ಹೆಚ್ಚು ನೀ ಹೆಚ್ಚು, ಎಂದು ಸ್ತುತಿಸುವುದರಿಂದ ಇವರ ಅನ್ಯೋನ್ಯ ಸಂಬಂಧವು ವಿಲಕ್ಷಣವಿರುವದೆಂದು ಹೇಳಬಹುದು. ಅನುಭವಮಂಟಪಕ್ಕೆ ಇವರು ಮೂವರೂ ಆಧಾರಸ್ತಂಭರಾಗಿದ್ದರು ಎಂಬಲ್ಲಿ ಸಂಶಯವಿಲ್ಲ. ಆ ಮೂವರಲ್ಲಿ ಚನ್ನಬಸವಣ್ಣನು ಎಲ್ಲಕ್ಕೂ ಚಿಕ್ಕವನು ಇದ್ದನೆಂದು ತೋರುವದು. ಆದರೂ ಜ್ಞಾನದಲ್ಲಿ ಎಲ್ಲರೂ ಅವನಿಗೆಯೆ ಹಿರಿಯತನಕೊಟ್ಟಿದ್ದರೆಂಬುದು ಸ್ಪಷ್ಟವಿದೆ. ಚನ್ನಬಸವನಿಗೆ ಉಪದೇಶಕೊಟ್ಟವನು ಬಸವಣ್ಣನೆ. ಶೂನ್ಯಸಂಪಾದನೆಯ ಚತುರ್ಥೋಪದೇಶವು ಅದೇ ವಿಷಯವನ್ನು ಹೇಳುವದು. ಅಲ್ಲಿ, ಚನ್ನಬಸವನು ಪರಶಿವನ ಸೂಕ್ಷ್ಮತತ್ವವು, ಎಂದು ಉಲ್ಲೇಖವಿರುವದು. ಬಸವನು ಅವನನ್ನು ನಿರೀಕ್ಷಿಸುತ್ತ ಕಲ್ಯಾಣಪಟ್ಟಣದಲ್ಲಿರಲು ಚನ್ನಬಸವಣ್ಣನು ಅಲ್ಲಿಗೆ ಬಂದು ತನಗೆ ಉಪದೇಶವಾಗಬೇಕೆಂದು ಪ್ರಾರ್ಥಿಸಿದನು. ಆಗ ಮರ್ತ್ಯಲೋಕದಲ್ಲಿ ಶಿವಾಚಾರದ ಘನವು ಹೂಳಿಹೋಯಿತ್ತೆಂದು ಅವನು ಜನ್ಮತಾಳಿದನು ಎಂದು ಬಸವಣ್ಣನು ಚನ್ನಬಸವನನ್ನು ವರ್ಣಿಸಿ ತನ್ನ ಸ್ವಾಭಾವಿಕ ವಿನಯದಿಂದ, ನಾನು ಎಲ್ಲರ ಶಿಶುವು, ನಾನು ಗುರು

ವಾಗಲಮ್ಮೆನು, ನಿನ್ನಿಂದ ನಾನಾದೆನು, ಎಂದು ಮುಂತಾಗಿ ನುಡಿದನು. ಈ ಮಾತುಗಳೆ ಪ್ರಸಾದವೆಂದು ತಿಳಿದು, 'ಬಸವಣ್ಣನಿಂದ ಸರ್ವಾಂಗ ಲಿಂಗವಾದೆನು,' 'ಎನ್ನ ಶ್ರೀಗುರು ಬಸವಣ್ಣನು,' 'ಶರಣಬಸವಣ್ಣ ಭವ ಕಲ್ಪಿತವ ಕಳಿದನು,' ಎಂದು, ಅಂತರಂಗದ ಜ್ಞಾನ ಬಹಿರಂಗದ ಕ್ರಿಯಲ್ಲಿ ಸಮರಸವನೈದಿ ಸರ್ವಾಚಾರಸಂಪನ್ನನಾಗಿ ಕೃತಾರ್ಥನಾದನು. ಆಗ ಬಸವನನ್ನು ಪರಿಪರಿಯಿಂದ ಸ್ತುತಿಸಿ, ನಿನ್ನ ಧರ್ಮಪ್ರತಾಪವನ್ನು ಕೇಳಿ ಮಹಾಜಂಗಮನಾದ ಅಲ್ಲಮಪ್ರಭುವು ನಿನ್ನರಸಿ ಬರುತ್ತಿರುವನು, ಎಂದು ಸುಜ್ಞಾನದೃಷ್ಟಿಯಿಂದ ನೋಡಿ ಸೂಚಿಸಿದನು. ಅಪ್ರಕಾರ ಮುಂದೆ ಅಲ್ಲಮನು ಸಿದ್ಧರಾಮಯ್ಯನೊಡನೆ ಕಲ್ಯಾಣಪಟ್ಟಣಕ್ಕೆ ಬಂದು ಅಲ್ಲಿಯೆ ವಾಸವಾಗಿ ಶೂನ್ಯಸಿಂಹಾಸನಾಧೀಶನಾದನು. ಮುಂದೆ ಮೂವರೂ ಒಡೆದು ಹೋಗುವವರೆಗೆ ಅಲ್ಲಿಯೆ ಇದ್ದು ಧರ್ಮೋದ್ಧಾರದ ಮಹಾಕಾರ್ಯವನ್ನು ಮಾಡಿದರು. ನಡುವೆ ಒಮ್ಮೆ ಮಾತ್ರ ಪ್ರಭುದೇವರು ತೀರ್ಥಾಟನಕ್ಕೆ ಹೋಗಿ, ದೇಶಸಂಚಾರಮಾಡಿ, ನಿಜಸಮಾಧಿಯ ಪೂರ್ಣಾನುಭವವನ್ನು ಪಡೆದು ತಿರುಗಿ ಬಂದನು.

(೧೫) ಧರ್ಮಪ್ರವರ್ತನಶೀಲನಾದ ಭಕ್ತಿಭಂಡಾರಿ ಬಸವಣ್ಣನ ಸಂಘಟನಸಾಮರ್ಥ್ಯದ ಮೂಲಕ ಕಲ್ಯಾಣದಲ್ಲಿ ಕೂಡಿದ ಶರಣಸಂಘಕ್ಕೆಲ್ಲ ಅಲ್ಲಮಪ್ರಭುವು ಮುಖ್ಯನಾಗಿದ್ದನು. ಅವನು ಮಹಾಜಂಗಮನು, ವೈರಾಗ್ಯರಾಜನು ಎಂದೆನಿಸುತ್ತಿದ್ದನು. ಅವನು ಅಲ್ಲಿಯ ಅನುಭವಮಂಟಪದ ಅಧಿಪತಿಯಾಗಿದ್ದನು, ಮತ್ತು ಶೂನ್ಯಸಿಂಹಾಸನಾರೂಢನಾಗಿ ಅನುಭಾವಿಗಳ ಅರಸನಂತೆ ಶೋಭಿಸುತ್ತಿದ್ದನು. ಇವನು ಮೊದಲು ಕಾರವಾರ ಜಿಲ್ಲೆಯಲ್ಲಿಯ ಬನವಾಸಿ ಕ್ಷೇತ್ರದವನು. ನಾಗವಸಾಧಿಪತ್ರಿ ಎಂಬ ಶಿವಭಕ್ತ ಮತ್ತು ಅವನ ಸತಿ ಸಜ್ಜನದೇವಿ ಇವರ ಬಸಿರಲ್ಲಿ ಇವನು ಬಂದನು. ಮೊದಲು ಅಲ್ಲಮನೆಂಬ ಹೆಸರು ಇದ್ದರೂ ಮುಂದೆ ಇವನ ಗುಣಗಳ ಮೂಲಕ ಇವನಿಗೆ ಅಲ್ಲಮಪ್ರಭು, ಪ್ರಭು, ಪ್ರಭುದೇವರು ಎಂಬ ಗೌರವಯುಕ್ತ ಹೆಸರುಗಳು ರೂಢವಾದವು. ಇವನ ಹೆಂಡತಿಯ ಹೆಸರು ಕಾಮಲತೆ. 'ಗುಹೇಶ್ವರ' ಎಂಬುದೆ ಇವನ ಅಂಕಿತವು. ಇವನು ವೈರಾಗ್ಯಶೀಲನಾದ ಬಳಿಕ ಗುರುಕರುಣದಿಂದಲ್ಲದೆ ಮುಕ್ತಿಯಾಗದು ಎಂಬ ಭಾವನೆಯಿಂದ, ಅನುಭಾವದೇವರೆ ತನಗೆ ಯೋಗ್ಯ ಗುರುವಾಗುವನೆಂದು ತಿಳಿದು, ಅವನ ಬಳಿಗೆ ಹೋದನು. ಅವನು ಸಮಾಧಿಸ್ಥನಿದ್ದುದನ್ನು ಕಂಡು, ಅವನು ತಾನಿದಿರೆಂಬುದನರಿಯನು, ನೀಶಬ್ದವೇಧಿಸಿ ಮುಗ್ಧವಾಗಿರ್ದಹನಾಗಿ ಉಪದೇಶವ

ಮಾಡುವನಲ್ಲ, ಎನಗೆ ನಾನೇ ಇನ್ನು ಗುರೂಪದೇಶವ ಪಡೆಯಬೇಕು, ಎಂದು ನಿಶ್ಚೈಸಿ, ಅದರಂತೆ ತನ್ನಂತರಂಗದ ಬೋಧಾಮೂರ್ತಿಯನೆ ಗುರುವೆಂದರಿದು, ಅನುಮಿಷ ದೇವರ ಪಾದಕ್ಕೆ ಶರಣೆಂದು, ದೀಕ್ಷೆ ಪಡೆದನು. ಅಲ್ಲಿಂದ ಮುಂದೆ ಅವನು ಶಿವಾದ್ವೈತ ತತ್ವಗಳನ್ನು ನಿರೂಪಿಸುತ್ತ, ದಿವ್ಯ ವಚನಾಮೃತಗಳನ್ನು ಹಾಡುತ್ತ, ದೇಶಸಂಚಾರವನ್ನು ನಡೆಸಿದನು. ಆಗ ಮುಕ್ತಾಯಕ್ಕನಿಗೆ ಮುಕ್ತಿಕೊಟ್ಟು ಸೊಲ್ಲಾಪುರದ ಸಿದ್ಧರಾಮಯ್ಯನಿಗೆ ನಿಜೈಕ್ಯದ ತತ್ವವನ್ನರುಹಿ, ಅವನನ್ನು ಸಂಗಡ ಕರೆದುಕೊಂಡು, ಬಸವಣ್ಣನು ದಾಸೋಹದಲ್ಲಿ ತನ್ನ ಮರೆದು ನಿಶ್ಚಿಂತನಿವಾಸಿಯಾಗಿ ಕಲ್ಯಾಣದಲ್ಲಿರುವನು, ಅತ್ತಹೋಗುವ, ಎಂದು ಹೊರಟನು. ಅಲ್ಲಿ ಪ್ರಭುವು ಬರುವ ಮಾತನ್ನು ಬಸವಣ್ಣನಿಗೆ ಜನ್ನ ಬಸವಣ್ಣನು ಮೊದಲೇ ತಿಳಿಸಿದ್ದನು. ಕಲ್ಯಾಣಪಟ್ಟಣವನ್ನೂ ಬಸವಣ್ಣನ ಮನೆಯನ್ನೂ ನೋಡಿ ಪ್ರಭುಸಿದ್ಧರಾಮಯ್ಯರು ಅವರಡನ್ನೂ ಕೊಂಡಾಡಿದರು. ಪ್ರಭುದೇವನಂಥ ಶ್ರೇಷ್ಠ ಜಂಗಮನು ತನ್ನಲ್ಲಿಗೆ ಬಂದುದರಿಂದ ಬಸವನಿಗೆ ಹಿಡಿಸಲಾರದಷ್ಟು ಆನಂದವಾಯಿತು. ಅವನು ತನ್ನ ಪಂಕಾರಾದಿಗಳನ್ನು ಜರೆದು, ತನ್ನ ತಪ್ಪುಗಳನ್ನೆಲ್ಲ ಕ್ಷಮಿಸಬೇಕು, 'ಎನ್ನ ಗತಿಮತಿ ನೀನೇ ಕಂಡಯ್ಯ, ಎನ್ನ ಗುರು ಪರಮಗುರು ನೀನೇ ಕಂಡಯ್ಯ,' ಎಂದು ಪ್ರಭುವಿಗೆ ಶರಣಾಗತನಾದನು. ಮುಂದೆ ಕಲ್ಯಾಣದಲ್ಲಿದ್ದ ಅನೇಕ ಜನರಿಗೆ ಉಪದೇಶಕೊಡುತ್ತ ಕಾಲಕಳೆಯುತ್ತಿರಲು ಅವನ ಕೀರ್ತಿಯು ಎತ್ತೆತ್ತಲೂ ಹಬ್ಬಿತು. ಒಂದು ದಿನ ಬಸವನು ತನ್ನ ಏಕಾಂತಮನಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಪ್ರಭುವನ್ನು ಪೂಜಿಸಿದನು. ಆಗ ಜನ್ನ ಬಸವ, ಮಡಿವಾಳಯ್ಯ, ಸೊಡ್ಡಳ ಬಾಚರಸ, ಸಿದ್ಧರಾಮಯ್ಯ ಮುಂತಾದವರು ಪ್ರಭುದೇವರನ್ನು ಪೂಜಿಸಿ ಸ್ತುತಿಸಿದರು. ಮುಂದೆ ಹಲವು ದಿನಗಳಾದ ಬಳಿಕ ಪ್ರಭುದೇವರು ಮತ್ತೆ ದೇಶಾಟನಕ್ಕೆ ಹೊರಟು ಹೋದನು. ಪೊನ್ನಂ ಬಲನಾಥ, ರಾಮೇಶ್ವರ, ಮಹಾಬಲೇಶ್ವರ, ಸೌರಾಷ್ಟ್ರ ಸೋಮನಾಥ ಮುಂತಾದ ತೀರ್ಥಗಳನ್ನು ಸುತ್ತಿ, ಶ್ರೀ ಕೇದಾರಕ್ಕೆ ಹೋಗಿ ಅಲ್ಲಿಂದ ತಿರುಗಿದನು. ನಡುವೆ ಒಮ್ಮೆ ವಿಶ್ರಮಿಸುತ್ತಿರುವಾಗ ಒಂದು ಗುಹೆಯಲ್ಲಿ ಮನ ಪವನ ಜ್ಞಾನಧ್ಯಾನ ಸಮ್ಮತ ಸಮರಸಭಾವದಿಂದ ನಿರ್ಭಾವವಪದದಲ್ಲಿ ನಿಂದು, ನಿಃಶೂನ್ಯಮಂ ನಿರೀಕ್ಷಿಸಿ, ನಿಜಸಮಾಧಿಯೊಳು ಮೂರ್ತಿಗೊಂಡು ಇದ್ದನು. ಅಲ್ಲಿ ಅವನಿಗೆ ಶಿವಯೋಗದ ಪೂರ್ಣಾನುಭವವು ದೊರಕಿರಬೇಕು. ಯಾಕಂದರೆ, ಇದಕ್ಕೂ ಪೂರ್ವದಲ್ಲಿ ಈ ಬಗೆಯ ವರ್ಣನೆಯು

ಅವನ ಚರಿತ್ರದಲ್ಲಿ ಎಲ್ಲಿಯೂ ಬಂದಿಲ್ಲ. 'ಧ್ಯಾನವಿಶ್ರಾಂತಿಯಲ್ಲಿ ದಿಟದಿಟವೆಂಬುದೊಂದು ದರುಶನವ ನೋಡುತ್ತ ಗಗನಗಂಭೀರದಲ್ಲಿ' ಸಾಕ್ಷಾತ್ ಜ್ಯೋತಿರ್ಮಯ ಪರಮಾತ್ಮನ ಉದಯವನ್ನು ಪ್ರಭುದೇವರು ನೋಡಿದನು. ಆ ಸಾಕ್ಷಾತ್ಕಾರವನ್ನು ಪಡೆದು, ಪರಶಿವಯೋಗದಲ್ಲಿ ನಿಂತು, ನಿರವಯನಾಗಿ, ಅನಂತಕೋಟಿಬ್ರಹ್ಮಾಂಡಗಳಿಲ್ಲವನು ತನ್ನ ಮಹಾಜ್ಞಾನ ಪ್ರಕಾಶದಲ್ಲಿ ಅಲಿಂಗಿಸಿ, ತೊಳಗಿ ಬೆಳಗಿ ಒಪ್ಪುತ್ತಿರುವ ಪ್ರಭುದೇವರು ತನ್ನ ಅವಸಾನಕಾಲವು ಸಮೀಪಿಸಿತೆಂದು ತಿಳಿದು, ಮತ್ತೆ ಕಲ್ಯಾಣದತ್ತ ತಿರುಗಿದನು. ಇತ್ತ ಬಸವನೂ ಶೂನ್ಯಸಿಂಹಾಸನವನ್ನು ರಚಿಸಿ ಅವನ ಹಾದಿಕಾಯುತ್ತಿದ್ದನು. ಶೂನ್ಯಸಂಪಾದನೆಯ ಹದಿನೇಳನೆಯ ಪ್ರಕರಣದಲ್ಲಿ ಹಡಪದಪ್ಪಣ್ಣನು ಮಾಡಿದ ಶೂನ್ಯಸಿಂಹಾಸನದ ವರ್ಣನೆಯು ಬಹಳೇ ಅಲಂಕಾರಿಕವೂ ಸರಸವೂ ಇದ್ದು ಅದಾವುದೊಂದು ಪಾರ್ಥಿವ ಸಿಂಹಾಸನವಲ್ಲವೆಂಬುದನ್ನೂ ಅದು ನಿರ್ವಿಕಲ್ಪ ಸಮಾಧಿಯಲ್ಲಿ ಮನುಷ್ಯನು ಅನುಭವಿಸುವ ನಿಃಶೂನ್ಯ, ನಿರಾಳ, ಜ್ಞಾತೃಜ್ಞೇಯ ಜ್ಞಾನವೆಂಬ ತ್ರಿಪುಟಿಯು ಏಕವಾಗುವ ಸ್ಥಾನವೆಂಬುದನ್ನೂ ಸಿದ್ಧಮಾಡುವದು. ಆ ಸಿಂಹಾಸನದ ಪ್ರತೀಕವೆಂದು ಅನುಭವಮಂಟಪದಲ್ಲಿ ಒಂದು ಸಿಂಹಾಸನವು ಇದ್ದರೂ ಇರಬಹುದು. ಆದರೆ ಮೂಲತಃ ಶೂನ್ಯಸಿಂಹಾಸನವೆಂದರೆ ಕೇವಲ ಆ ಬಾಹ್ಯಸಿಂಹಾಸನವಲ್ಲ, ಎಂಬುದು ನಿಶ್ಚಿತವು.

ಪ್ರಭುವಿನ ಬರವಿಗಾಗಿ ಹಾರೈಸುತ್ತಿದ್ದ ಬಸವಾದಿ ಪ್ರಮಥರು ಅವನು ಬಂದೊಡನೆ ಹಿರಿಹಿರಿ ಹಿಗ್ಗಿದರು ಮತ್ತು ಗುಡಿಕಟ್ಟಿ ಧ್ವಜವೆತ್ತಿ ಬಸವಣ್ಣನು, 'ಸಮುದ್ರಕ್ಕೆ ಜಂದ್ರಮನ ಬರವೆ ಜೀವಾಳವಯ್ಯ, ಬತ್ತಿದ ಕೆರೆದು ತಾವರೆಗೆ ನೀರೆ ಜೀವಾಳವಯ್ಯ,' ಎಂದು ಹಾಡಿದನು. ಆಗ ಸತಿಪತಿ ಭಾವದಿಂದ ಬಸವನು, 'ಎನ್ನ ಗಂಡ ಬರಬೇಕೆಂದು ಕಂಗಳೇ ಪ್ರಾಣವಾಗಿ ಬರವ ಹಾರೈಸುತ್ತಿದ್ದೆನು. ತಾನೆ ಬಂದು, ಎನ್ನ ಹೃದಯಸಿಂಹಾಸನದ ಮೇಲೆ ಮೂರ್ತಿಗೊಂಡರೆ ಎನ್ನ ಮನದ ಬಯಕೆ ಸ್ಫುಯವಾಗಿತ್ತು,' ಎಂದಿರುವನು, ಮತ್ತು, 'ನಿನ್ನ ಪಾದಾರ್ಜನೆಯೆ ಎನ್ನ ಪರಮಾನಂದ ಜಲವ ತುಂಬುವುದಯ್ಯ,' ಎಂದು ಅತ್ಯಂತ ಧನ್ಯಭಾವವನ್ನು ವ್ಯಕ್ತಮಾಡಿರುವನು. ಬಸವಣ್ಣನು ಈಬಗೆಯು ಆನಂದದಲ್ಲಿ ಓಲಾಡುತ್ತಿರಲು ಮತ್ತು ಪ್ರಭುದೇವರು ಶೂನ್ಯಸಿಂಹಾಸನದಲ್ಲಿ ಶೋಭಿಸುತ್ತಿರಲು ಅತ್ತ ಆರೋಗಣೆಗೆ ಬಂದು ಕುಳಿತ ಒಂದುಲಕ್ಷ ತೊಂಬತ್ತಾರುಸಾವಿರ ಜಂಗಮರು ತಡವಾಯಿತೆಂದು ಸಿಟ್ಟಿನಿಂದ ಎದ್ದುಹೋದರು. ಅಲ್ಲಮನು ಒಬ್ಬ ಮಹೇಂದ್ರ ಜಾಲಿಕನಿರುವನು, ಅವನನ್ನು ಕಟ್ಟಿಕೊಂಡು ವ್ರತಗೇಡಿ ಬಸವನು ನಮ್ಮನ್ನು ತಿರಸ್ಕರಿಸಿರುವನು, ಎಂದು ಅವರು ಮತ್ಸರಗೊಂಡು, ಇವರು ಇಬ್ಬರೂ ದೇವಲೋಕ ಮೃತ್ಯುಲೋಕಕ್ಕೆ ಹೊರಗು, ಎಂದು ಶಪಿಸಿದರು. ಆಗ ಪ್ರಭುದೇವರು ಆ ನಾಮ ಜಂಗಮರನ್ನು ವಿಡಂಬಿಸಿ, ಆ ದೇವ ಮೃತ್ಯುಲೋಕಗಳಲ್ಲಿ ಅವರೇ ಇರಲಿ, ನಾವು ಅದರಾಚೆ ಹೋಗುವಾ, ಎಂದು ಬಸವನನ್ನು ಸಂತೈಸಿ ಧೈರ್ಯಗೊಟ್ಟನು! ಪಥವನರಿಯದೆ ಮಂಡೆಯ ಬೋಳಿಸಿಕೊಂಬುವವರು ನಿಜವಾದ ಜಂಗಮರಲ್ಲ, ಅವರು ಕೊಟ್ಟ ಶಾಪಕ್ಕೆ ಹೆದರುವ ಕಾರಣವಿಲ್ಲ, ಎಂದು ಆಗ ಪ್ರಭುವು ಬಸವಣ್ಣನಿಗೆ ಹೇಳಿದನು. ಮುಂದೆ ಬಸವಣ್ಣನಲ್ಲಿಯೆ ಪ್ರಭುದೇವರ ಆರೋಗಣೆಯಾಗಲು ಎಲ್ಲ ಮುಖ್ಯ ಮುಖ್ಯ ಶಿವಶರಣರು ಪ್ರಭುದೇವರನ್ನು ಸ್ತುತಿಸಿದರು. ಆ ಸ್ತುತಿಕೇಳಿ ಬರಿಯ ಸ್ತೋತ್ರವ ಮಾಡಿ ಫಲವೇನು, ನಿಃಶಬ್ದ ಬ್ರಹ್ಮವು ನುಡಿಯ ಗಡಣಕ್ಕೆ ಸಾಧ್ಯವಪ್ಪುದೆ? ಈ ಲೋಕಕ್ಕೆ ಬಂದ ಮಣಿಹ ಪೂರೈಸಿತ್ತು, ಇನ್ನು ನಿಮ್ಮ ನೀವೇ ತಿಳಿದು ನಿಮ್ಮ ನಿಜವನ್ನೆಳೆದು ಧನ್ಯರಾಗಿರಿ, ಎಂದು ಪ್ರಭುವು ಅವರೆಲ್ಲರಿಗೂ ಉಪದೇಶಿಸಿದನು. ಮರ್ತ್ಯಲೋಕವನ್ನು ಉದ್ಧರಿಸಬೇಕೆಂದು ಶಿವಾಚಾರ ಧ್ವಜವನ್ನೆತ್ತಿ ಶಿವಲೋಕಕ್ಕೆ ನಿಚ್ಚಣಿಕೆಯನ್ನಿತ್ತುದೆ ಶಿವಶರಣರ ಮಣಿಹವಾಗಿತ್ತು. ಹೀಗೆ ಉಪದೇಶಮಾಡಿ ತಾನು ಶ್ರೀಶೈಲಕ್ಕೆ ಹೋದನು ಮತ್ತು ಅಲ್ಲಿ ನಿಜಸಮಾಧಿಯಲ್ಲಿ ನಿಂದು ಪರವಶನಾಗಿ ನಿರಾಳನಾದನು.

ಅಲ್ಲಮನ ಇಡೀ ಚರಿತ್ರವನ್ನು ನಿರೀಕ್ಷಿಸಿದರೆ ಮತ್ತು ಅನೇಕ ವಚನಕಾರರು ಅವನನ್ನು ಕುರಿತು ತೆಗೆದ ಉದ್ಗಾರಗಳನ್ನು ನೋಡಿದರೆ ಶರಣ ಸಮುದಾಯದಲ್ಲಿ ಅವನ ಸ್ಥಾನವು ಅನುಪಮವಿತ್ತೆಂಬುದು ಕಂಡುಬರುವದು. ತ್ರಿಮೂರ್ತಿಗಳಲ್ಲಿ ವಿಷ್ಣುವು ಶೋಭಿಸುವಂತೆ ಬಸವಣ್ಣ ಚನ್ನಬಸವಣ್ಣರ ನಡುವೆ ಪ್ರಭುದೇವರು ಶೋಭಿಸುವನು. ಶೂನ್ಯಸಂಪಾದನೆಯ 'ನಾಯಕನು' ಪ್ರಭುದೇವರೆ ಇರುವನು. 'ಪ್ರಭುರಾಯನ ಪರಮಾನುಭಾವ ಬೋಧೆಯನೊರೆವೆನು, ಅಲ್ಲಮಪ್ರಭುದೇವರು ಚನ್ನಬಸವದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳೊಡನೆ ಮಹಾನುಭಾವ ಪ್ರಸಂಗವುಂ ಮಾಡಿದ ಶೂನ್ಯಸಂಪಾದನೆಯನ್ನು ಬರೆವೆನು,' ಎಂದು ಆ ಪುಸ್ತಕದ ಕರ್ತನು ಪ್ರಾರಂಭದಲ್ಲಿಯೆ ಅಂದಿರುವನು. ಬಸವಣ್ಣನು ಗುರುವು, ಚನ್ನಬಸವಣ್ಣನು ಲಿಂಗವು, ಎನಿಸಿಕೊಂಡರೆ ಅಲ್ಲಮನು ಜಂಗಮನು ಅಂದರೆ ಪರಿಪೂರ್ಣ ಸಾಕ್ಷಾತ್ಕಾರಿ ಎನಿಸಿಕೊಂಡಿರುವನು.

ಅವನು 'ಬಸವ ಚನ್ನಬಸವರಾಜ ಪ್ರಾಣನಾಯಕನು,' 'ಶ್ರೀವೀರಶೈವಾಚಾರ ದೀಕ್ಷಾಚಾರ್ಯನು,' ಎಂಬ ಬಿರುದುಳ್ಳವನು. ಭಕ್ತಿಯ ಬೆಳವಿಗೆಗೆ ಬಸವಣ್ಣನು ಕಾರಣನು, ಅರಿವಿನ ಬೆಳವಿಗೆಗೆ ಚನ್ನಬಸವಣ್ಣನು ಕಾರಣನು, ಆದರೆ ಈ ಇಬ್ಬರನು ಒಳಕೊಂಬ ಮಹಾಘನಕ್ಕೆ ನೀವು ಕಾರಣಿಕರಾದಿರಿ, ಎಂದು ಮಡಿವಾಳಯ್ಯನು ಪ್ರಭುಮಹಾತ್ಮ್ಯವನ್ನು ಹೊಗಳಿರುವನು. ಕಾಣುವ ಜ್ಞಾನವೆ ಜಂಗಮವು, ಜಂಗಮವ ಹಿಡಿದಲ್ಲದೆ ಗುರುಲಿಂಗ ಪ್ರಸಾದಗಳನ್ನು ಕಾಣುವದಸಾಧ್ಯ, ನನ್ನ ಆಚಾರಕ್ಕೆ ನೀನೆ ಜ್ಞಾನರೂಪ, ಎಂದು ಬಸವಣ್ಣನು ಹೇಳಿರುವನು. ಇದೇ ರೀತಿ ಚನ್ನಬಸವಣ್ಣ, ಮಡಿವಾಳಯ್ಯ, ಸೊಡ್ಡಳ ಬಾಚರಸ, ಮೋಳಿಗೆಯ ಮಾರಯ್ಯ, ಸಿದ್ಧರಾಮಯ್ಯ, ಮುಂತಾದವರೆಲ್ಲರೂ ಪ್ರಭುದೇವರ ಉಚ್ಚ ಆಧ್ಯಾತ್ಮಿಕ ಸಿಲವನ್ನು ವಿಧವಿಧವಾಗಿ ಬಣ್ಣಿಸಿರುವರು. ಅಲ್ಲಮನ ವಚನಸಂಖ್ಯೆಯೂ ದೊಡ್ಡದಿರುವದು. ತೂಸ್ಯಸಂಪಾದನೆಯಲ್ಲಿ ಅವನ ವಚನಗಳೆ ಹೆಚ್ಚು ಮತ್ತು ಮಹತ್ವ ವುಳ್ಳವುಗಳಿರುವವು.

ಪ್ರಭುದೇವರ ವಚನಗಳೆಂಬ ಸಟೀಕ ಬೇರೆ ಪುಸ್ತಕವೂ ಒಂದು ಪ್ರಕಟವಾಗಿರುವದು. ಪುಲಿಗೆರೆಯ ಪುರವರಾಧೀಶರೆನಿಸಿದ ಮತ್ತು ಅಲ್ಲಿಯ ಸೋಮನಾಥನ ಆರಾಧಕರಾದ ಮಹಲಿಂಗದೇವರ ಅನ್ವಯವನ್ನು ಮೊದಲು ಹೇಳಿ ಕುಮಾರ ಬಂಕನಾಥ ದೇವರು 'ಪ್ರಭುದೇವರ ವಚನಗಳಿಂದ ಸಂಕಲ್ಪಿಸಿ....ಟೀಕಿಸಿ' ತನ್ನ ಶಿಷ್ಯನಾದ ಜಕ್ಕಣ್ಣನಿಗೆ 'ಪರಮಾರ್ಥತತ್ವಪೋಧೆಯನು ನಿರೂಪಿಸಿದನು,' ಷಟ್‌ಸ್ಥಲದ ಉಪದೇಶ ಮಾಡಿದನು, ಎಂದು ಆ ಗ್ರಂಥದ ಪೀಠಿಕೆಯಲ್ಲಿ ಉಲ್ಲೇಖವಿರುವದು. ಕಡೆಯ ಎರಡು ಪ್ರಕರಣಗಳ ಕೊನೆಯಲ್ಲಿ, 'ಪರಂಜ್ಯೋತಿಸ್ವರೂಪರಪ್ಪ ಮಹಾಲಿಂಗದೇವರು....ಜಕ್ಕಣಾಚಾರ್ಯಂಗೆ ಸತ್ಪ್ರೇಮ ಮಹಾನುಭಾವಸಂಬೋಧೆ ಸಂಬಂಧ ನಿರೂಪಣಕಾರಣಾರ್ಥ ವಿರಚಿತವುಪ್ಪ ಪ್ರಭುದೇವರ ಷಡುಸ್ಥಲದೊಳು....' ಈ ಸಂಕಲ್ಪವಿರುವದು. ಅದರಲ್ಲಿ ಸುಮಾರು ೬೯೩ ವಚನಗಳಿರುವವು. ಪ್ರಭುವಿನ ವಚನಗಳು ಚಿಕ್ಕವೂ ಅರ್ಥಪೂರ್ಣವೂ ಸಮಯೋಚಿತವೂ ಗಂಭೀರವೂ ಇರುವವು. ಇವನ ವಚನಗಳಲ್ಲಿ ಮುಂಡಿಗೆಗಳ ಸಂಖ್ಯೆಯೂ ಒಹಳ. ಅವುಗಳಿಗೆ ಟೀಕೆ ಇರುವುದರಿಂದಲೆ ಅವು ತಿಳಿಯುವದು ಸಾಧ್ಯವಾಗಿದೆ. ತಿಳಿಯುವವರೆಗೆ ಅವು ಕೇವಲ ಒಗಟಿನಂತೆ ಇಲ್ಲವೆ ಕೂಟಪ್ರಶ್ನೆಯಂತೆ ಗೂಢವಾಗಿರುವವು. ತಿಳಿದ ಬಳಿಕ ಅವುಗಳೊಳಗಿನ ಸ್ವಾರಸ್ಯವು ಹೊಳೆಯುವದು. ಅಲ್ಲಮನ ವಿರಕ್ತಿ, ಅವನ ಜ್ಞಾನ, ಅವನ

ಅನುಭಾವ, ಅವನ ಆತ್ಮವಿಶ್ವಾಸ ಇವೆಲ್ಲ ಅವನ ವಚನಗಳಲ್ಲಿ ಚನ್ನಾಗಿ ಒಡೆದುಕಾಣುವವು.

(೧೩) ಅಲ್ಲಮನು ಕಲ್ಯಾಣದ ಅನುಭವಮಂಟಪದಲ್ಲಿರುವ ಶೂನ್ಯ ಸಿಂಹಾಸನದ ಅಧೀಶ್ವರನಿದ್ದುದೇನೋ ನಿಜವು. ಆದರೆ ಆ ಶೂನ್ಯಸಿಂಹಾಸನದ ಸಂಸ್ಥಾಪಕನೂ ಸಂಘಟಕನೂ ಬಸವಣ್ಣನೆ ಎಂಬಲ್ಲಿ ಏನೂ ಸಂಶಯವಿಲ್ಲ. ಯಾವನೊಬ್ಬ ವೀರಶಿರೋಮಣಿಯು ಧ್ವಜವನ್ನೆತ್ತಿ ಸಿಂತೊಡನೆ ದಿಕ್ಕುದಿಕ್ಕಿನ ವೀರರು ಬಂದು ಅವನಿಗೆ ಬೆಂಬಲವಾಗಿ ನಿಲ್ಲುವಂತೆ ಧರ್ಮವೀರನಾದ ಬಸವಣ್ಣನು ಕಲ್ಯಾಣಕ್ಕೆ ಬಂದು ಧರ್ಮಧ್ವಜವನ್ನೆತ್ತಿ ಧರ್ಮೋದ್ಧಾರವನ್ನು ನಡೆಯಿಸಿದೊಡನೆ ದೇಶದೇಶಾಂತರದ ಶಿವಶರಣರೆಲ್ಲ ಅಲ್ಲಿ ಗುಂಪುಗಟ್ಟಿದರು. ಅವರ ಸಂಘಟನವನ್ನೆಲ್ಲ ಬಸವನು, ಮುಖ್ಯವಾಗಿ ಚನ್ನಬಸವ ಮತ್ತು ಅಲ್ಲಮಪ್ರಭು ಇವರಿಬ್ಬರ ಸಹಾಯದಿಂದ ಮಾಡಿದನು. ನಾವಿಬ್ಬರು ಬಸವನ ಗರುಡಿಯಲ್ಲಿ ಸಿದ್ಧರಾದ ಅಭ್ಯಾಸಿಗಳು, ಎಂದು ಚನ್ನಬಸವನು ಪ್ರಭುದೇವರಿಗೆ ಅಂದದ್ದು ಇದೇ ಸಂದರ್ಭದಲ್ಲಿರಲಿಕ್ಕೆ ಸಾಕು. ಭಕ್ತಿಭಾಂಡಾರಿ ಬಸವಣ್ಣನು ಮರ್ತ್ಯಕ್ಕೆ ಬಂದುದರಿಂದ ಭೂಲೋಕವೆಲ್ಲ ಭಕ್ತಿಸಾಮ್ರಾಜ್ಯವಾಯಿತು, ಎಂದು ವಚನಕಾರರು ಬಸವನನ್ನು ಬಣ್ಣಿಸಿರುವರು. ಅವನು ಮಾಡಿದ ಧರ್ಮಕಾರ್ಯದ ಮೂಲಕ ಅವನು ನಂದಿಯ ಅವತಾರನೆಂದೂ ಏಳುನೂರೆಪ್ಪತ್ತು ಅಮರಗಣಂಗಳೊಡನೆ ಜಗದುದ್ಧಾರಕ್ಕಾಗಿ ಅವನು ಅವತರಿಸಿದನೆಂದೂ ಹೆಸರಾದನು. ಇಷ್ಟೇ ಅಲ್ಲ. ಅವನು ವೀರಶೈವಮತಸ್ಥಾಪಕನು, ಎಂದು ಎಷ್ಟೋ ಜನರು ಇನ್ನೂ ತಿಳಿದಿರುವರು. ಇಷ್ಟು ಅವನ ಕಾರ್ಯಪ್ರಭಾವವಿರುವದು. ಸಿಂಗಿರಾಜಪುರಾಣ, ಬಸವಪುರಾಣ ಮುಂತಾದವುಗಳಿಂದ ಅವನು ಕಲ್ಯಾಣದ ಬಿಜ್ಜಳರಾಜನ (ಕ್ರಿ. ಶ. ೧೧೫೬–೧೧೬೭) ಮಂತ್ರಿಯೂ ದಂಡನಾಯಕನೂ ಆಗಿದ್ದನೆಂದು ತಿಳಿಯುತ್ತಿದೆ. ಆದರೆ ಇನ್ನೂ ಇದಕ್ಕೆ ಶಿಲಾಲಿಪಿಯ ಆಧಾರವು ದೊರೆತಿಲ್ಲ. ಶ್ರೀ. ಹಳಕಟ್ಟಿಯವರು ಪ್ರಸಿದ್ಧಮಾಡಿದ ಬಸವೇಶ್ವರನ ವಚನಗಳ ೨ನೇ ಆವೃತ್ತಿಯ ಪರಿಶಿಷ್ಟದಲ್ಲಿ ಅರ್ಜುನವಾಡದ ಶಿಲಾಲೇಖವನ್ನು ಪ್ರಕಟಿಸಿದ್ದಾರೆ. ಅದರಲ್ಲಿ, '....ಬಸವರಾಜನ ಮಹಿಮೆ ಎಂತೆಂದೊಡೆ–ಮಂಗಳಕೀರ್ತಿಪುರಾತನ ಜಂಗಮಲಿಂಗೈಕಭಕ್ತಿನಿರ್ಭರ ಲೀಲಾಸಂಗಂ ಸಂಗನ ಬಸವಂ..' ಎಂದು ಮಾತ್ರ ಉಲ್ಲೇಖವಿದೆ ಹೊರತು ಅವನ ಮಂತ್ರಿತ್ವ ಮೊದಲಾದವುಗಳು ವರ್ಣಿತವಾಗಿಲ್ಲ. ಈ ಶಾಸನವು ೧೩೩೫ನೆಯ ಶತಮಾನದಲ್ಲಿ ಆಳುತ್ತಿರುವ ದೇವಗಿರಿ ಯಾದವನಾದ ಕನ್ನರನ ಕಾಲದ್ದಿರುವುದರಿಂದ

(ಕ್ರಿ. ಶ. ೧೩೪೭-೧೩೭೦) ಬಸವನ ಕಾಲದಿಂದ ಒಂದೇ ನೂರುವರ್ಷ ಈಚೆಗಿನದಿರುವದು. ಆ ದೃಷ್ಟಿಯಿಂದ ಈ ಉಲ್ಲೇಖವು ಬಹಳ ಮಹತ್ವ ದ್ದಿರುವದು.

ಬಸವನು ವಿಜಾಪುರ ಜಿಲ್ಲೆಯ ಬಾಗೇವಾಡಿ ಊರಿನ ಗ್ರಾಮಣೀ ಮಣಿಯಾದ ಮಾದರಸ ಮತ್ತು ಮಾದಲಾಂಬಿಕೆ ಇವರ ಹೊಟ್ಟೆಯಲ್ಲಿ ಹುಟ್ಟಿದವನು. ಇವನು ಹುಟ್ಟಿದ ಕಾಲವು ಕ್ರಿ. ಶ. ೧೧೩೨ ಇರಬೇಕು. ಶೈವಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದರಿಂದ ತಂದೆಯು ಅವನ ಉಪನಯನ ಮಾಡತೊಡಗಲು ಇವನು ಆ ಸಂಸ್ಕಾರದ ಅವಶ್ಯಕತೆ ಇಲ್ಲವೆಂದು ಆ ಚಿಕ್ಕ ವಯಸ್ಸಿನಿಂದಲೆ ತಪಸ್ಸನ್ನಾರಂಭಿಸಿದನು. ತಂದೆ ತಾಯಿ ಮನೆಮಾರು ಗಳನ್ನು ಬಿಟ್ಟು ಅವನು ಕಪ್ಪಡಿ ಸಂಗಮಕ್ಕೆ ಅಂದರೆ ಕೃಷ್ಣಾಮಲಾಪಹಾರಿ ನದಿಗಳು ಕೂಡಿದ ಕ್ಷೇತ್ರಕ್ಕೆ ಹೋದನು. ಅಲ್ಲಿ ವೀರಶೈವ ತಪಸ್ವಿಗಳೂ ಜ್ಞಾನಿಗಳೂ ಆದ ಜಾತವೇದ ಮುನಿಗಳು ಇರುತ್ತಿದ್ದರು. ಅವರಿಂದ ದೀಕ್ಷೆ ಪಡೆದು ತನ್ನ ವಯಸ್ಸಿನ ಇಪ್ಪತ್ತೈದು ವರ್ಷಗಳವರೆಗೆ ಅಲ್ಲಿಯೆ ಇದ್ದನು. ಆಗ ಅವನ ಅಕ್ಕನಾದ ನಾಗಲಾಂಬಿಕೆಯು ಅವನ ಸೇವೆ ಮಾಡುತ್ತ ಅಲ್ಲಿಯೆ ಇದ್ದಳೆಂದು ಹೇಳುವರು. ಒಮ್ಮೆ ಸಂಗಮೇಶ್ವರನ ಜಾತ್ರೆಗಾಗಿ ಬಂದ ಅನೇಕ ಪಂಡಿತರೊಡನೆ ಬಸವನ ವಾದವಾಗಿ ಅದರಲ್ಲಿ ಅವನೇ ಜಯಶಾಲಿಯಾದನು. ಅದರಿಂದ ಅವನ ಕೀರ್ತಿಯು ಸುತ್ತಲೂ ಪಸರಿಸಿತು. ಆಗ ಕಲ್ಯಾಣಪಟ್ಟಣದಲ್ಲಿ ಆಳುತ್ತಿದ್ದ ಬಿಜ್ಜಳನಲ್ಲಿ ಬಲದೇವನೆಂಬವನು ಮಂತ್ರಿಯಾಗಿದ್ದನು. ಅವನು ಬಸವನನ್ನು ಕಲ್ಯಾಣಕ್ಕೆ ಬರಮಾಡಿ ಕೊಂಡು ಅವನಿಗೆ ತನ್ನ ಮಗಳಾದ ಗಂಗಾಂಬಿಕೆಯನ್ನು ಕೊಟ್ಟು ಮದುವೆಮಾಡಿದನು. ಅಲ್ಲಿ ಋಣಗೂಳು ತಿನ್ನುತ್ತ ಕೂಡುವ ಅಳಿಯನಾಗಿರುವುದು ಅವನ ಮನಸಿಗೆ ಬಾರದೆ ಕಾಯಕವೆ ಕೈಲಾಸವು, ಕಾಯಕದಿಂದ ಬಂದುದನು ಅರ್ಪಿಸುವುದೆ ದಾಸೋಹಕ್ಕೆ ಸಲ್ಲುವುದು, ಎಂದು ಪ್ರತಿ ಪಾದಿಸುವ ಬಸವನು ಗುಮಾಸ್ತನ ಕೆಲಸವನ್ನು ಕೈಕೊಂಡು, ಭಯಭಕ್ತಿ ಪೂರಿತನಾಗಿ, ದಾಸೋಹದಲ್ಲಿ ಕಾಲವನ್ನು ಕಳೆಯಲಾರಂಭಿಸಿದನು. ಅಕಸ್ಮಾತ್ತಾಗಿ ಬಿಜ್ಜಳನಲ್ಲಿ ಒಂದು ಹಳೇ ಲಿಪಿಯ ಲೇಖವು ದೊರೆಯಲು ಅದನ್ನು ಯಾರೂ ಓದಲಾರದೆ ಹೋದರು. ಆಗ ಅದನ್ನು ಓದಿ, ಪೂರ್ವದಲ್ಲಿ ಹುಗಿದಿಟ್ಟ ಹೇರಳವಾದ ಹಣವನ್ನು ಬಿಜ್ಜಳನಿಗೆ ಹುಡುಕಿಕೊಡಲು ಬಸವನು ಕಾರಣನಾದನು. ಅದರಿಂದ ಬಿಜ್ಜಳನು ಸಂತುಷ್ಟನಾಗಿ ಅವನನ್ನು ತನ್ನ ಮಂತ್ರಿಯನ್ನಾಗಿಯೂ ದಂಡನಾಯಕನನ್ನಾಗಿಯೂ ಮಾಡಿ

ಕೊಂಡನು. ತಾನಿದ್ದಲ್ಲಿಯೆ ಮಂತ್ರಿಪದವು ಹೀಗೆ ಸಾಗಿಬರಲು ಲಿಂಗ ಜಂಗಮ ಸೇವೆಗೆ ಸರ್ವಸ್ವವನ್ನು ಅರ್ಪಿಸಿದ ಬಸವನು, ನಾನು ಪರಸೇವೆಯ ಮಾಡುವೆನಯ್ಯ ದಾಸೋಹಕ್ಕೆಂದು, ಇದು ಎನ್ನ ಮಡದಿಮಕ್ಕಳಿಗಾಗಿ ಯಲ್ಲ, ಹಾಗೆ ಮಾಡಿದಡೆ ತಲೆದಂಡವಯ್ಯಾ, ನೀವು ಕೊಟ್ಟ ದ್ರವ್ಯವನ್ನು ನಿಮಗೂ ನಿಮ್ಮ ಶರಣರಿಗೂ ಅಲ್ಲದೆ ಮತ್ತೊಂದು ಕಾರ್ಯಕ್ಕೆ ಉಪ ಯೋಗಿಸೆನಯ್ಯ, ಎಂದು ಆಣೆಯನ್ನಿಟ್ಟುಕೊಂಡನು. ತಾನು ಯಾವ ಪರಿಸ್ಥಿತಿಯಲ್ಲಿದ್ದರೂ ಬಸವನು ತನ್ನ ಧರ್ಮಪರಾಯಣತೆಯನ್ನು ಬಿಡದೆ ಅದನ್ನೆ ಹೆಚ್ಚಿಸುತ್ತ ನಡೆದನು. ಆದುದರಿಂದ ಅವನ ಸುತ್ತಲು ಸಾವಿರಾರು ಶಿವಶರಣರು ಕೂಡಿದರು. ಹೀಗೆ ಒಟ್ಟುಗೂಡಿದ ಶರಣರ ಸಂಖ್ಯೆಯು ಒಂದು ಲಕ್ಷ ತೊಂಬತ್ತಾರುಸಾವಿರವಿತ್ತೆಂದು ಅನೇಕ ಕಡೆಗೆ ಉಲ್ಲೇಖವಿದೆ (ಶೂ. ೩೨೦). ಅವರೆಲ್ಲರಿಗೂ ಬಸವನೆ ಸೂತ್ರಧಾರನಾಗಿದ್ದನೆಂಬಲ್ಲಿ ಸಂಶಯ ವಿಲ್ಲ. ಈ ಸಂಘಟನೆಯ ಮುಖಾಂತರ ಮತ್ತು ತನ್ನ ದಿವ್ಯಜ್ಞಾನ, ಅನನ್ಯಭಕ್ತಿ, ದೃಢವಾದ ನಿಷ್ಠೆ, ಇವುಗಳ ಆಧಾರದಿಂದ ಬಸವನು ಶಿವಾಗ ಮೋಕ್ತ ವೀರಶೈವ ಧರ್ಮವನ್ನು ಪ್ರಸಾರಗೊಳಿಸುತ್ತಿರಲು ಅವನ ವಿರುದ್ಧ ಕೊಂಡೆಮಂಚಣ್ಣ ಮುಂತಾದ ಮೂವತ್ತಾರು ಕೊಂಡೆಗಾರರು ಬಿಜ್ಜಳನ ಕಿವಿಯನ್ನು ಕಚ್ಚುವ ಕಾರ್ಯವನ್ನು ನಡೆಯಿಸಿದರು. ಬಿಜ್ಜಳನು ಅತ್ತ ಕಡೆಗೆ ವಿಶೇಷ ಲಕ್ಷಗೊಡಲಿಲ್ಲ. ಬಸವನೂ ತನ್ನ ಮೇಲೆ ಮಾಡಲ್ಪಟ್ಟ ವಿತ್ತಾಪಹಾರಾದಿ ಆರೋಪಗಳನ್ನು, 'ಎನಗೇಕೆ ಬಿಜ್ಜಳನ ಭಂಡಾರ,' ಎಂದು ಸಪ್ರಮಾಣವಾಗಿ ಖಂಡಿಸಿದನು. ಅದರಿಂದ ಬಿಜ್ಜಳನ ವಿಶ್ವಾಸವು ಅಚ್ಚಳಿಯದೆ ಉಳಿಯಿತು. ಬಸವನು ಹೀಗೆಯೆ ಧರ್ಮೋದ್ಧಾರ ಕಾರ್ಯ ವನ್ನು ನಡೆಯಿಸಿರಲು, ಉಚ್ಚನೀಚಕುಲವೆಂಬ ಭಾವಗಳನ್ನು ತೆಗೆದು ಹಾಕುತ್ತಿರಲು, ಮುಂದೆ ಒಂದು ಪ್ರಸಂಗದಲ್ಲಿ ಮಧುವಯ್ಯ ಮತ್ತು ಹರಳಯ್ಯ ಎಂಬ ಬ್ರಾಹ್ಮಣ ಹಾಗೂ ಸಮಗಾರ ಗೃಹಸ್ಥರು ವೀರಶೈವ ದೀಕ್ಷೆಯನ್ನು ಹೊಂದಿ ಬೀಗತನವನ್ನು ಮಾಡಿದರು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರು ಒಂದೇ ಎಂದು, ಅವರು ಕೊಟ್ಟು ಕೊಂಬುದು ಸದಾಚಾರವು ಎಂದು, ಜನ್ಯ ಬಸವನು ಈ ಬಗೆಯ ಸಂಬಂಧ ಗಳನ್ನು ಎತ್ತಿಹಿಡಿದಿರುವನು. ಇದು ಧರ್ಮವಿರುದ್ಧವು, ಇಂಥ ಸಂಗತಿ ಗಳನ್ನು ಬೆಳೆಯಗೊಟ್ಟರೆ ವರ್ಣಸಂಕರವಾಗುವದು, ಎಂದು ಮುಂತಾಗಿ ಕೊಂಡೆಗಾರರು ಬಿಜ್ಜಳನಿಗೆ ಹೇಳಲು ಅವನು ಮಧುವಯ್ಯ ಹರಳಯ್ಯರನ್ನು ಅಮಾನುಷರೀತಿಯಿಂದ ಕೊಲಿಸಿದನು. ಇದರಿಂದ ಶರಣಸಮೂಹದಲ್ಲಿ

ಅಲ್ಲೊಲ್ಲೀಲಕಲ್ಲೊಲ್ಲೀಲವಾಗಿ ಅನೇಕರು ಅತ್ಯಂತ ಸಂತಪ್ತರಾಗಿ ಬಿಜ್ಜಳನನ್ನು ಕೊಲ್ಲಲೇಬೇಕು ಎಂದು ಮಾತಾಡಲಾರಂಭಿಸಿದರು. ಆಗ ಅಹಿಂಸಾಮೂರ್ತಿಯಾದ ಬಸವನು ತನ್ನ ವೃತ್ತಿಶೀಲಚಾರಿತ್ರ್ಯಗಳಿಗನುಸರಿಸಿ ಅತ್ಯಂತ ತಾಳ್ಮೆಯಿಂದ ಅಹಿಂಸೆಯನ್ನೆ ಪ್ರತಿಪಾದಿಸಿದನು. ಅನುಯಾಯಿಗಳು ತನ್ನ ಮಾತನ್ನು ಕೇಳುವದಿಲ್ಲ, ಎಂದು ಕಂಡೊಡನೆ ಅಲ್ಲಿಯ ತನ್ನ ಅವತಾರ ಕಾರ್ಯವು ತೀರಿತೆಂದು ತಿಳಿದು ಅವನು ಕೂಡಲ ಸಂಗಮಕ್ಕೆ ಹೊರಟು ಹೋದನು. 'ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ,' 'ಒಬ್ಬ ಜಂಗಮನ ಅಭಿಮಾನದಿಂದ– ಬಿಜ್ಜಳನನ್ನು ಕೊಂದ ಜಗದೇವ ನಿರಬೇಕು– ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು....' ಎಂದು ಈ ವಿಷಯದಲ್ಲಿ ಬಸವನ ವಚನವಿರುವದು. ಈ ರೀತಿ ಉಪರತನಾಗಿ ಕಲ್ಯಾಣವನ್ನು ಬಿಟ್ಟು ಕೂಡಲ ಸಂಗಮನಲ್ಲಿ, 'ಸಾಕುಮಾಡೈ ತಂದೆ, ತೆರಪುಗೊಡು ತಂದೆ, ಬಂದಿಹೆನು ಬಸವನು,' ಎಂದು ಮೊರೆಯಿಟ್ಟನು. ಮುಂದೆ ಅಲ್ಲಿಯೇ ಐಕ್ಯನಾದನು.

ಶೈವಾಗಮೋಕ್ತ ವೀರಶೈವಮತವು ಬಹಳ ಪ್ರಾಚೀನವಿದ್ದರೂ ಬಸವನ ಕಾಲಕ್ಕೆ 'ಷಡ್‌ದರ್ಶನ, ಷಣ್ಮತ, ಷಟ್‌ಸಮಯಗಳಿಂದ ವೀರಶೈವ ಸದ್ಭಕ್ತಿಯು ಮಸುಳಿಸಿತ್ತು' (ಶೂ. ೭೧) ಶೂನ್ಯಸಂಪಾದನೆಕಾರನು ಶೈವ, ವೈಷ್ಣವ, ಚಾರ್ವಾಕ, ಬೌದ್ಧ, ಕ್ಷಪಣ, ನೈಯ್ಯಾಯಿಕ, ಭಾಟ್ಟಗೋಮತ, ಪ್ರಭಾಕರ, ಮೀಮಾಂಸಕ, ವೈಶೇಷಿಕ, ಕಾಪಾಲಿಕ, ಸಾಂಖ್ಯ, ಕರ್ಮವಾದ, ಕಾಲವಾದ, ಮಂತ್ರವಾದ, ಮಾಯಾವಾದ, ಕೌಳಮತ, ಕಾಳಾಮುಖ, ಶಾಕ್ತ, ಸೌರ, ಹೀಗೆ ಇಪ್ಪತ್ತು ಮತಗಳ ಹೆಸರು ಕೊಟ್ಟು, ಬಸವನು ಇವುಗಳನ್ನೆಲ್ಲ ಖಂಡಿಸಿ ವೀರಶೈವ ಸದ್ಭಕ್ತಿಯನ್ನು ವರ್ಧಿಸಿದನು, ಎಂದು ವರ್ಣಿಸಿರುವನು (ಶೂ. ೭೧). ಬಸವನು ಕಲ್ಯಾಣವನ್ನೆ ಕೈಲಾಸ ಮಾಡಿ ಜಗವರಿಯಲು ಶಿವಾಚಾರದ ಧ್ವಜವನ್ನೆತ್ತಿ ಮೃತ್ಯುಲೋಕ ಶಿವಲೋಕವೆರಡಕ್ಕೆ ನಿಚ್ಚಣಿಕೆಯಾದನು. ಹರಗಣಂಗಳಿಗೆ ಗತಿಮತಿ ಜೈತನ್ಯನಾಗಿ ಶಿವಸ ಭಾಂಡಾರಿಯೆಂಬನು, ಶಿವಸಮಯಕಾಧಾರನಾದನು, ಲೋಕಾದಿಲೋಕಂಗಳಿಗೆ ಪರಮ ಗುರುವಾದನು. ಜನರುಗಳ ಮನಸಕತ್ತಲೆಯ ಕಳೆಯುಜೇಕೆಂದು ಇವನಿಂದ ಕಲ್ಯಾಣದಲ್ಲಿ ಮಹಾಮಂಟಪವು ಕಟ್ಟಿತ್ತು (ಶೂ. ೧೪೭). ಮರ್ತ್ಯವ ಪಾವನಮಾಡಿದ ಬಳಿಕ ಇನ್ನು ಮರ್ತ್ಯದ ಹಂಗೇತಕ್ಕೆ? ಮಣಿಹ ಪೂರೈಸಿತ್ತು, ಇನ್ನು ನಿಜೈಕ್ಯಹೊಂದಬಹುದು, ಎಂದು ಪ್ರಭುವು ಬಸವಣ್ಣನಿಗೆ ಹೇಳಿದ್ದನ್ನು ನೋಡಿದರೆ ಅವನ ಅವತಾರ

ಕಾರಣವೇನಿತ್ತು, ಎಂಬುದನ್ನು ಊಹಿಸಲು ಸುಲಭವಾಗುವದು. ಈ ಅವತಾರೋದ್ದೇಶಕ್ಕನುಸರಿಸಿ ಬಸವನು ಬಹುಮುಖ ಜೀವರಿಗೆ ಬಹುಮುಖ ಪ್ರಸಾದವನ್ನು ತೋರಿದನು (ಶೂ. ೭೨). ಬಸವನ ಮಹಾಮನೆಯನ್ನು ತಲೆವಾಗಿ ಹೊಕ್ಕವರೆಲ್ಲರು ನಿಜಲಿಂಗಪದವನ್ನು ಪಡೆದರು.

ಬಸವನ ಕಾರ್ಯಕ್ಷೇತ್ರವು ಬಹಳೇ ವಿಸ್ತೃತವಿತ್ತು. ಬರಿಯ ಅಧ್ಯಾತ್ಮಿಕ ಮತ್ತು ನೀತಿಯ ತತ್ವಗಳನ್ನು ಬಾಯಿಂದ ಪ್ರತಿಪಾದಿಸಿ, ಉಪದೇಶಿಸಿ ಸುಮ್ಮನಿರದೆ ಅವನು ವೀರಶೈವ ಭಕ್ತಿಮಾರ್ಗವನ್ನು ಜನ್ಮಾಗಿ ಪ್ರಸ್ಥಾಪಿಸಿ ಸಮತೆಬಂಧುಭಾವನೀತಿಗಳೇ ಆಧಾರವಾದ ಒಂದು ಉಚ್ಚತರದ ಸಮಾಜವನ್ನು ನಿರ್ಮಿಸಿದನು. ಕುಲ ಮತ್ತು ಉದ್ಯೋಗ ಇವುಗಳ ಬಗ್ಗೆ ಸಮಾಜದಲ್ಲಿ ರೂಢವಿದ್ದ ಕೃತಕ ಉಚ್ಚನೀಚ ಭಾವನೆಗಳನ್ನು ತೊಡೆದುಬಿಟ್ಟನು. ಸ್ತ್ರೀ ಶೂದ್ರಾದಿಗಳ ಬಗ್ಗೆ ಇದ್ದ ತಿರಸ್ಕಾರಭಾವವನ್ನು ಅಳಿಸಿಬಿಟ್ಟು ಎಲ್ಲರಿಗೂ ಸಾಮಾನ್ಯವಾಗಿರುವ ಧರ್ಮದ್ವಾರವನ್ನು ಅವರಿಗೆ ತೆರೆದುಕೊಟ್ಟನು. ತತ್ವಜ್ಞಾನಕ್ಕಿಂತ ಧರ್ಮಾಚಾರದಲ್ಲಿ, ಧರ್ಮಾಚಾರಕ್ಕಿಂತ ನೀತಿಮಾರ್ಗದ ಪ್ರಸ್ಥಾಪನೆಯಲ್ಲಿ, ನೀತಿಮಾರ್ಗಕ್ಕಿಂತ ಸಮಾಜ ಸುಧಾರಣೆಯಲ್ಲಿ ಬಸವಣ್ಣನು ಹೆಚ್ಚಿನ ಕರ್ತೃತ್ವವನ್ನೂ ಆತ್ಮವಿಶ್ವಾಸವನ್ನೂ ದೂರದೃಷ್ಟಿಯನ್ನೂ ತೋರಿಸಿದನು. ಇದು ಅವನ ವ್ಯವಹಾರಿಕ ದೃಷ್ಟಿಯನ್ನೂ ಜ್ಞಾನಭಕ್ತಿಕರ್ಮಗಳ ಸಮ್ಮೇಳನಮಾಡುವ ಶೈಲಿಯನ್ನೂ ವ್ಯಕ್ತಗೊಳಿಸುವದು. ಈ ಅವನ ಮಹತ್ಕಾರ್ಯದಲ್ಲಿ ಮಿಕ್ಕ ಶರಣರೆಲ್ಲರೂ ಸಹಾಯಭೂತರಾದರು, ಆದರೆ ಅವನೇ ಇವೆಲ್ಲವುಗಳಿಗೆ ಮೂಲನು, ಮುಖ್ಯನು, ಚಾಲಕನು, ಮಧ್ಯಬಿಂದುವು. ಈ ಮಹಾಮಹಿಮನ ಗುಣಗಳನ್ನು ಅನೇಕ ವಚನಕಾರರು ಬಗೆಬಗೆಯಿಂದ ಬಣ್ಣಿಸಿರುವರು. ಅಥವಾ, ಅವನ ಸಮಕಾಲೀನರಲ್ಲಿ ಆಗಲಿ ಅವನ ಹಿಂದಿನಿಂದ ಬಂದವರಲ್ಲಿ ಆಗಲಿ, ಅವನನ್ನು ಒಳ್ಳೆ ಶ್ರೇಷ್ಠನೆಂದು ಬಣ್ಣಿಸದೆ ಇದ್ದವರು ಒಬ್ಬರೂ ಇಲ್ಲವೆಂದರೂ ಸಲ್ಲುವದು. ಅವನು ಪರಶಿವನ ಸ್ಥೂಲತತ್ವವೆಂದು, ಭಕ್ತಿಭಾಂಡಾರಿಯೆಂದು, ಭಕ್ತಿಗೆ ಶೃಂಗಾರವೆಂದು, ಶಿವಾಚಾರಜಕ್ರವರ್ತಿ ಎಂದು, ಸರ್ವಾಚಾರಸಂಪನ್ನನೆಂದು, ಆರೂಢದಾಸೋಹಿ ಎಂದು, ಐವತ್ತೆರಡು ಶರಣ ಲಕ್ಷಣಗಳುಳ್ಳ ಆದರ್ಶಶರಣನೆಂದು, ವಿಧವಿಧವಾಗಿ ವರ್ಣಿಸಲ್ಪಟ್ಟಿರುವನು. ಬಸವಣ್ಣನ ಕೀರ್ತಿಪ್ರಭಾವಗಳು ಅಂದಿನಿಂದ ಇಂದಿನ ವರೆಗೆ ಬೆಳೆಯುತ್ತ ಬಂದಂತೆ ಇನ್ನಾವ ಶರಣನ ಹೆಸರೂ ಹೆಚ್ಚುತ್ತ ಬಂದಿಲ್ಲ. ಬಸವಣ್ಣನ ಅನುಪಮ, ಗುಣಶೀಲಗಳೂ ಅವನ ಅದ್ವಿತೀಯ ಕರ್ತೃತ್ವಶಕ್ತಿಯೂ ಇವೇ

ಹಾಗೆ ಆಗುವ ಕಾರಣಗಳು. ಅವನಲ್ಲಿಯ ಅತ್ಯುತ್ಕಟ ಏಕಾಂತಿಕ ನಿಷ್ಠೆ ತುಕಭಕ್ತಿ, ತತ್ವನ ಹಿಡಿದವರಿಗೆ ತೊತ್ತಾಗಿ ನಡೆವೆನು, ಶ್ರೀಮಹಾದೇವನ ನಿನಿವನ ಪಾದರಕ್ಷೆಯ ಕಾಯ್ದು ಬದುಕುವೆ, ಎಂಬ ಅವನ ವಿನಯಾತಿಶಯ ಮತ್ತು ತತ್ವನಿಷ್ಠೆ, ಪ್ರತ್ಯಕ್ಷ ಧರ್ಮಾಚರಣೆಯಲ್ಲಿಯ ಮತ್ತು ದಾಸೋಹದಲ್ಲಿಯ ಅವನ ದಕ್ಷತೆ, ಅವನಲ್ಲಿರುವ ನಡೆನುಡಿಗಳ ಮೇಳ, ಕಳ್ಳನು ಹೆಂಡತಿಯ ಒಡವೆಗಳನ್ನು ಉಚ್ಚತೊಡಗಿರಲು, ಅವನ ಕೈ ನೊಂದೀತು ಎಲೆ ಚಂಡಾಲಗಿತ್ತೀ ಬೇಗ ತೆಗೆದುಕೊಡು, ಅವನೂ ಕೂಡಲ ಸಂಗಮದೇವನಲ್ಲವೆ, ಎಂದು ಹೇಳುವಲ್ಲಿ ಒಡೆದುಕಾಣುವ ಅವನ ಅಹಿಂಸಾ ಸ್ತೇಯವೃತ್ತಿ, ಸರ್ವಾತ್ಮತ್ವಪ್ರತೀತಿ, ಮತ್ತು ಸೈರಣೆ, ಕೂಡಲಸಂಗಯ್ಯ ದೇವನುಳ್ಳನ್ನಕ್ಕರ ಬಿಜ್ಜಳನ ಭಾಂಡಾರ ನಸಗೇಕಯ್ಯ ಎನ್ನುವ ಅವನ ನಿಃಸ್ಪೃಹತೆ, ನಿಮಗಂಜುವೆನಲ್ಲದೆ ಆನೀ ಬಿಜ್ಜಳನಿಗಂಜುವೆನೆ, ಎಂಬುವ ಅವನ ಅಭಯ ಮತ್ತು ಪಾಪಭೀರುತ್ವ, ಈ ಮುಂತಾದ ಗುಣರಾಶಿಯೆಲ್ಲ ಯಾವ ನಲ್ಲಿ ಒಟ್ಟುಗೂಡಿತ್ತೊ ಅವನ ಮಹಿಮೆಯು ಅಷ್ಟಿಷ್ಟೆಂದು ವರ್ಣಿಸಲಿಕ್ಕೆ ಬರುವಂತಿಲ್ಲ. ವಚನಲೇಖಕ ಎಂಬ ದೃಷ್ಟಿಯಿಂದ ಸಹ ಬಸವಣ್ಣನು ಬಹಳ ಉಚ್ಚತರಗತಿಯವನಿರುವನು. ಅವನ ವಚನಗಳೆಂದರೆ, ಅವನ ಅಂತರ್ಹೃದಯದಲ್ಲಿಯ ಭಕ್ತಿ, ಆರ್ತಭಾವ, ಉಚ್ಚವಾದ ಧ್ಯೇಯವಾದ, ಪರಮಾತ್ಮನನ್ನು ಸಾಕ್ಷಾತ್ಕರಿಸಬೇಕೆಂಬ ಅವನ ತವಕ, ಆಯಾ ಪ್ರಸಂಗಗಳಲ್ಲಿ ಅವನಲ್ಲಿ ಎದ್ದ ಶ್ರೇಷ್ಠಭಾವಗಳ ಊರ್ಮಿಗಳು, ಇವೆಲ್ಲವುಗಳಿಗೆ ಹಿಡಿದ ಕೈಗನ್ನಡಿಯೆ ಇರುವವು. ಅವನ ಸ್ವಂತ ಭಾವನೇತಿಹಾಸವೂ ಚಾರಿತ್ರ್ಯವೂ ಅವನ ವಚನಗಳಲ್ಲಿ ಎಷ್ಟು ಸ್ಪಷ್ಟವಾಗಿ ಮತ್ತು ನಿರ್ವಂಚಕ ರೀತಿಯಿಂದ ಪ್ರತಿಬಿಂಬಿತವಾಗಿದೆಯೊ ಅಷ್ಟು ಇನ್ನಾವ ವಚನಕಾರನ ಇತಿಹಾಸವೂ ಆಯಾ ವಚನಗಳಲ್ಲಿ ಎದ್ದುಕಾಣಿಸುವದಿಲ್ಲ.

'ಬಸವೇಶ್ವರನ ವಚನಗಳು' ಎಂದು ಪ್ರತ್ಯೇಕವಾಗಿ ಅವನ ವಚನಗಳು ಪ್ರಕಟವಾಗಿರುವವು. ಅವುಗಳ ಸಂಖ್ಯೆಯು ೯೭೦ ಇಷ್ಟು ಇರುವದು. ಅವು ಷಟ್‌ಸ್ಥಲ ರೀತಿಯಲ್ಲಿ ವಿಭಾಗಿಸಲ್ಪಟ್ಟಿರುವವು. ಆ ವಚನಗಳಲ್ಲಿ ಭಕ್ತಿವಿಷಯಕ, ನೈತಿಕ, ಮತ್ತು ಸಾಮಾಜಿಕ ವಚನಗಳೇ ಎಲ್ಲಕ್ಕೂ ಉತ್ಕೃಷ್ಟವಾದವುಗಳೂ ಬೋಧಕರವಾದವುಗಳೂ ಇರುವವು. ಶತಕಾನುಶತಕಗಳ ವರೆಗೆ ಮುಂದಿನ ಪೀಳಿಗೆಗಳಿಗೆ ಪ್ರಕಾಶಕೊಡುವಷ್ಟು ತೇಜಸ್ಸು ಅವುಗಳಲ್ಲಿರುವದು.

(೧೪) ಈಗಿರುವ ಕಲ್ಯಾಣಪಟ್ಟಣದಿಂದ ಸುಮಾರು ಒಂಬತ್ತು

ಮೈಲಿನ ಮೇಲೆ ಮೋಳಗಿಕೇರಿ ಎಂಬ ಚಿಕ್ಕದೊಂದು ಹಳ್ಳಿ ಇದೆ. ಅದು ಮೋಳಿಗೆಯ ಮಾರಯ್ಯನೆಂಬ ದೊಡ್ಡ ಶಿವಶರಣನ ಗವಿಯು ಇದ್ದ ಸ್ಥಳವು. ಆ ಗವಿಯು ಹದಿನೈದು ಅಂಕಣವಿದ್ದು ಈಗ್ಯೂ ಉಪಯೋಗದಲ್ಲಿದೆ ಎಂದು ಹರ್ಡೀಕರ ಮಂಜಪ್ಪನವರು ತಮ್ಮ ಬಸವಚರಿತ್ರೆಯಲ್ಲಿ ಬರೆದಿರುವರು. ಮಾರಯ್ಯನೆಂದರೆ ಈ ಮೊದಲೆ ವರ್ಣಿಸಲ್ಪಟ್ಟ ಮಹಾದೇವಿಯಮ್ಮನ ಧರ್ಮಪತಿಯು. ಅವನ ಮೂಲ ಹೆಸರು ಏನೋ ಇದು ಗೊತ್ತಾಗಿಲ್ಲ. ಮೋಳಿಗೆಯ ಮಾರಯ್ಯ ಎಂಬ ಹೆಸರು ಮಾತ್ರ ಅವನು ಮಾಡುತ್ತಿರುವ ಕಾಯಕದಿಂದ ಬಿದ್ದ ಅನ್ವರ್ಥಕನಾಮವು, ಎಂಬುದು ಸ್ಪಷ್ಟವಿರುವದು. ಅವನು ಕಟ್ಟಿಗೆಯನ್ನು ಕಡಿದು ಇಲ್ಲವೆ ಆರಿಸಿ ಮೋಳಿಗೆಮಾಡಿ ಅವುಗಳನ್ನು ಮಾರುವ ಕಾಯಕವನ್ನು ಮಾಡುತ್ತಿದ್ದನು. ಈ ಕಾಯಕದಿಂದ ಜರಿತಾರ್ಥವನ್ನು ಸಾಗಿಸಿ ದಾಸೋಹದಲ್ಲಿ ಯಾವಾಗಲೂ ಅವನು ದಕ್ಷನಾಗಿರುತ್ತಿದ್ದನು. ಶೂನ್ಯಸಂಪಾದನೆಯ ಹದಿಮೂರನೆಯ ಪ್ರಕರಣಕ್ಕೆ 'ಮೋಳಿಗೆಯ ಮಾರಯ್ಯನ ಸಂಪಾದನೆ' ಎಂದೇ ಹೆಸರು ಇರುವದು. ಅದರಲ್ಲಿ, ಅವನು ಕಾಶ್ಮೀರ ದೇಶಾಧಿಪತಿಯು, ಎಂದು ವರ್ಣಿಸಲ್ಪಟ್ಟಿರುವನು. ಈ ಮಾತು ನಿಜವಿದ್ದಲ್ಲಿ ಅವನು ಅತ್ಯಂತ ತ್ಯಾಗಿಯು ಎಂಬುದು ಸಿದ್ಧವಾಗುವುದಲ್ಲದೆ ಬಸವನು ಎಂಥ ಆಕರ್ಷಕಶಕ್ತಿಯುಳ್ಳವನಾಗಿದ್ದನೆಂಬುದು ಒಡೆದುಕಾಣುವದು. ಚಾಳುಕ್ಯವಿಕ್ರಮನ ಕಾಲಕ್ಕೆ ಅವನ ಯಶೋದುಂದುಭಿಯನ್ನು ಕೇಳಿ ಬಿಲ್ಹಣ ಕವಿಯು ಕಾಶ್ಮೀರದಿಂದ ಬಂದಂತೆ ಬಸವನ ಕಾಲಕ್ಕೆ ಮೋಳಿಗೆಯ ಮಾರಯ್ಯನು ಬಂದಿರಲಿಕ್ಕೆ ಸಾಕು. ಇವನು ಬಂದರುದೇಶದ ಮಾಂಡವ್ಯಪುರವನ್ನು ಆಳುತ್ತಿದ್ದನೆಂದು ಕವಿಚರಿತೆಕಾರರು ಬರೆದಿರುವರು. ಏನೇ ಇರಲಿ. ಇವನು ಅರಸೊತ್ತಿಗೆಯನ್ನು ಬಿಟ್ಟುಬಂದಿದ್ದನೆಂಬುದು ನಿಜವೆಂದು ತೋರುತ್ತದೆ. 'ಸಕಲ ದೇಶಕೋಶವಾಸಭಂಡಾರ' ಮುಂತಾದವುಗಳನ್ನೆಲ್ಲ ಬಿಟ್ಟುಬಂದೆನೆಂದು ಅಹಂಕಾರಪಡಬೇಡ, ಎಂದು ಅವನ ಹೆಂಡತಿಯು ಅವನಿಗೆ ಹೇಳುವುದನ್ನು ನೋಡಿದರೆ ಅವನು ಮಾಡಿದ ತ್ಯಾಗದ ಕಲ್ಪನೆಯು ಬರಬಹುದು. ಒಮ್ಮೆ ಜಂಗಮರು ಅವನಲ್ಲಿ ಅಂಬಲಿಯನುಂಡು ಹೋಗಿ ಬಸವನೆದುರಿಗೆ ಅವನನ್ನು ಕೊಂಡಾಡಿದರು. ಆಗ ಅವನ ಬಡತನಕ್ಕೆ ಕನಿಕರಬಟ್ಟು ಅವನು ಮನೆಯಲ್ಲಿಲ್ಲದಾಗ ಅವನಲ್ಲಿಗೆ ಹೋಗಿ ಅವನ ಹೆಂಡತಿಗೆ ತಿಳಿಯದಂತೆ ಬಸವನು ಒಂದಿಷ್ಟು ಹೊನ್ನು ಮುಡಗಿಬಂದನು. ಮಾರಯ್ಯನಿಗೆ ಅದು ಕಂಡುಬರಲು, ಯಾರು ಬಂದಿದ್ದರು, ಎಂದು ಅವನು ಹೆಂಡತಿಯನ್ನು ಕೇಳಿದನು. ಆಗ, ಶರಣಸೊಬ್ಬನು ಬಂದು ಶಿವಾರ್ಚನೆ

ವಾಡಿಹೋದನು, ಎಂದು ಆಕೆ ಹೇಳಿದಳು, ತಾನು ಜಂಗಮರಿಗೆ ಅಂಬಲಿ ಬಡಿಸಿದ್ದನ್ನು ಕೇಳಿ ತಾನು ಬಡವನೆಂದು ತಿಳಿದು ಬಸವನೆ ಈ ಹೊನ್ನು ತಂದು ಇಟ್ಟಿರಬೇಕು, ಎಂದು ಭಾವಿಸಿ ಮಾರಯ್ಯನು ಇಬ್ಬರು ಚರ ಮೂರ್ತಿಗಳನ್ನು ಕರೆದು ಅವರಿಗೆ ಆ ಹೊನ್ನನ್ನೆಲ್ಲ ಕೊಟ್ಟುಬಿಟ್ಟನು! ಈ ಪರಿಯ 'ನಿರಾಶಾಮಹಾತ್ಮ'ನಾದ ಮೋಳಿಗೆಯ ಮಾರಯ್ಯನನ್ನು 'ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ,' ಎಂದು ಬಸವನು ಹೊಗಳಿರುವನು. ಬಸವನು ಹೊನ್ನು ತಂದು ಇಟ್ಟದ್ದು ಮಾರಯ್ಯನ ಮನಸ್ಸಿಗೆ ಬಂದಿರಲಿಲ್ಲ. ಇದು ಬಸವನ ಅಹಂಕಾರವೆಂದು ಮಾರಯ್ಯನು ಜರಿದಿರುವನು ಮತ್ತು ಇಂಥ ಭಕ್ತಿಯು ಫಲಪದವನ್ನು ಕೊಡುವುದಲ್ಲದೆ ಮುಕ್ತಿಯನ್ನು ಕೈಸೇರಿಸದು, ಎಂದು ಹೇಳಿರುವನು. ಮುಂದೆ ತಾನು ಲಿಂಗೈಕ್ಯನಾಗಬೇಕೆಂದು ಹವಣಿಸಲು ಅವನ ಧರ್ಮಪತ್ನಿಯಾದ ಮಹಾದೇವಿಯಮ್ಮನು ಅವನಿಗೆ ಏನು ಉಪದೇಶಮಾಡಿದಳು ಎಂಬುದು ಇದೇ ಪ್ರಕರಣದಲ್ಲಿ ಇನ್ನೊಂದೆಡೆಗೆ ಬಂದಿದೆ. ಮಾರಯ್ಯನ ವಚನಗಳು ಪ್ರತ್ಯೇಕವಾಗಿಲ್ಲ. ವಿಷಯಾನುಸಂದರ್ಭದಿಂದ ವಚನಶಾಸ್ತ್ರಸಾರದಲ್ಲಿಯಷ್ಟೇ ಪ್ರಕಟವಾಗಿವೆ.

---

೯. ವಚನವಾಙ್ಮಯವು

(೧೫೪) ವಚನಗಳಿಗೆ ಕನ್ನಡ ವಾಙ್ಮಯದಲ್ಲಿ ಪ್ರತ್ಯೇಕ ಸ್ಥಾನವನ್ನು ಕೊಡುವದು ಅವಶ್ಯವು. (೧೫೫) ವಚನಗಳೆಂದರೇನು? ವಚನವೆಂಬ ಸಾಹಿತ್ಯರೂಪದ ಪ್ರಾರಂಭವು. (೧೫೬) ವಚನವಾಙ್ಮಯದ ವಿಸ್ತಾರವೂ ಮಹತ್ವವೂ (೧೫೭) ವಚನಗಳಲ್ಲಿರುವ ವಿಷಯನಿರ್ದೇಶವು. (೧೫೮) ವಚನಶೈಲಿಯ ವಿಚಾರವು. ಅದರ ಬಾಹ್ಯರೂಪವು. (೧೫೯) ವಚನಗಳಲ್ಲಿಯ ಅವತರಣಗಳು, ನಾಣ್ನುಡಿಗಳು, ಅಂಕಿತಗಳು. (೧೬೦) ವಚನಗಳಲ್ಲಿಯ ಶಬ್ದಭಾಂಡಾರವು. (೧೬೧) ವಚನಗಳಲ್ಲಿಯ ಬಗೆಗಳು. (೧೬೨) ವಚನಗಳ-ವಾಙ್ಮಯ ಗುಣಗಳು. (೧೬೩) ವಚನಗಳಲ್ಲಿ ವಿಚಾರ ಮತ್ತು ಭಾವ ಇವು ಹೇಗೆ ವ್ಯಕ್ತವಾಗಿರುವವು.(೧೬೪) ವಚನಗಳಲ್ಲಿ ಕಂಡುಬರುವ ಶಬ್ದಾಲಂಕಾರಗಳು. (೧೬೫) ಶಬ್ದ ಮತ್ತು

ವಾಕ್ಯಗಳಲ್ಲಿ ಸಾಧಿಸಲ್ಪಟ್ಟ ಸಮತೂಕವು ಮತ್ತು ದೃಷ್ಟಾಂತಗಳ ಉಪಯೋಗವು. (೧೬೬) ಶಬ್ದ ಚಿತ್ರಗಳು ಮತ್ತು ಉಪಮಾ ರೂಪಕಾದಿ ಅಲಂಕಾರಗಳು. (೧೬೭) ವಚನಪದ್ಧತಿಯಲ್ಲಿಯ ಗುಣದೋಷಗಳು, ಮರ್ಯಾದೆ ಮತ್ತು ಅದರ ಭವಿಷ್ಯ.

೧೫೪. ಕನ್ನಡ ಸಾಹಿತ್ಯಮಂದಿರದಲ್ಲಿ ವಚನವಾಙ್ಮಯಕ್ಕೆ ವಿಶಿಷ್ಟ ಸ್ಥಾನವನ್ನು ಕೊಟ್ಟು ಅದರ ಸ್ವತಂತ್ರ ವಿಚಾರಮಾಡುವದು ಅವಶ್ಯವಿರುವದು. ವಚನವಾಙ್ಮಯವು ಅಷ್ಟೊಂದು ವಿಸ್ತೃತವೂ ವೈಶಿಷ್ಟ್ಯಪೂರ್ಣವೂ ಮಹತ್ವದ್ದೂ ಇರುವದು. ಯಾವದೇ ವಾಙ್ಮಯದ ಅಥವಾ ವಾಙ್ಮಯ ಭಾಗದ ವಿಚಾರವು ಕರ್ತವ್ಯವಿದ್ದಾಗ ಅದರ ಇತಿಹಾಸ, ಅದನ್ನು ಬರೆದವರು, ಅದರ ವಿಷಯ, ಮತ್ತು ಅದರ ಶೈಲಿ ಅಥವಾ ರೀತಿ ಈ ಮುಖ್ಯ ಅಂಗಗಳ ಬಗ್ಗೆ ಚರ್ಚಿಸಬೇಕಾಗುವದು. ಆದುದರಿಂದ ಕನ್ನಡ ವಾಙ್ಮಯದಲ್ಲಿ ಈ ವಚನಶೈಲಿಯ ಆರಂಭ, ಇವತ್ತಿನ ವರೆಗೆ ಅದರ ಇತಿಹಾಸ, ಅದರ ಭವಿಷ್ಯಕಾಲ, ವಚನಗಳ ವಿಷಯ, ವಚನಗಳನ್ನು ಬರೆದವರು, ವಚನರೂಪದ ವಿಶಿಷ್ಟ ಗುಣದೋಷಗಳು, ಅದರ ಮರ್ಯಾದೆ, ಅದರ ವಿಸ್ತಾರ ಈ ಮುಂತಾದ ವಿಷಯಗಳು ಈ ಪ್ರಕರಣದಲ್ಲಿ ವಿವೇಚಿಸಲಿಕ್ಕೆ ಯೋಗ್ಯವಾದವುಗಳಿರುವವು. ಈ ಪುಸ್ತಕದಲ್ಲಿ ಮೊದಲು ಬಂದ ವಿಷಯಗಳನ್ನು ಕಿದು ವಚನವಾಙ್ಮಯದ ಮಿಕ್ಕ ಅಂಗಗಳನ್ನು ಇಲ್ಲಿ ವಿಚಾರಿಸುವದು ನಮ್ಮ ಕರ್ತವ್ಯವೆಂದು ನಾವು ತಿಳಿದಿರುತ್ತೇವೆ.

೧೫೫. 'ವಚನ' ಎಂಬ ಶಬ್ದವು ಮೂಲ ಸಂಸ್ಕೃತ 'ವಚ್' ಎಂಬ ಧಾತುವಿನಿಂದ ಆದ ನಾಮಪದವು. ವಚ್ ಅಂದರೆ ಮಾತಾಡು, ನುಡಿ, ಹೇಳು; ವಚನ ಅಂದರೆ ನುಡಿ, ಮಾತು, ಅಥವಾ ಹೇಳುವಿಕೆ. ಕನ್ನಡ ವಾಙ್ಮಯದಲ್ಲಿ ಚಂಪೂಕಾವ್ಯಗಳಲ್ಲಿಯ ಗದ್ಯಭಾಗಗಳಿಗೆ ವಚನ ಎಂದು ಅನ್ನುವ ರೂಢಿಯು ಮೊದಲಿನಿಂದಲೆ ಇತ್ತು. ಅಲ್ಲಿ 'ವಚನ' ಅಂದರೆ ಗದ್ಯ ಅಥವಾ ಗದ್ಯಭಾಗ ಇಷ್ಟೇ ಅರ್ಥವಿರುವದು. ಮುಂದೆ ವೀರಶೈವ ಧರ್ಮಜಾಗ್ರತಿಯ ಪ್ರಾರಂಭಕ್ಕೆ ಶಿವಶರಣರು ತಮ್ಮ ಧಾರ್ಮಿಕ ವಿಚಾರಗಳನ್ನು ಸಣ್ಣ ಮತ್ತು ಸುಲಭ ಸ್ಫೂರ್ತಿಯುಕ್ತ ಸುಲಭವಾಕ್ಯಗಳಿಂದ ಪ್ರಕಟ ಮಾಡಲಾರಂಭಿಸಿದರು. ಆಗ ಅವು ಇಂಥವರ ವಚನ, ಇಂಥವರ ವಚನ, ಎಂದು ಪ್ರಸಿದ್ಧವಾದವು. ವೀರಶೈವ ಧರ್ಮಜಾಗ್ರತಿಯೊಡನೆಯೆ ಶರಣರು ಉಪಯೋಗಿಸುವ ವಿಶಿಷ್ಟವಾದ ಈ ವಚನರೂಪವು ಉಗಮವೊಂದಿತು,

ಎಂದು ಹೇಳಿದರೆ ಅದು ವಿಶೇಷ ತಪ್ಪಾಗಲಿಕ್ಕಿಲ್ಲ. ಈಗ ಗೊತ್ತಿದ್ದ ಮಟ್ಟಿಗೆ ದೇವರ ದಾಸಿಮಯ್ಯನೆ ಎಲ್ಲಕ್ಕೂ ಹಳೆಯ ವಚನಕಾರನು. ಅವನ ಕಾಲ ದಷ್ಟೊತ್ತಿಗೆ ವಚನರೂಪವು ಒಳ್ಳೆ ಪೂರ್ಣತ್ವವನ್ನು ಹೊಂದಿದಂತೆಯೆ ಕಂಡು ಬರುವದು. ಮುಂದೆ ಬಸವಾದಿ ಶರಣರ ಕೈಯಲ್ಲಿ ಅದೊಂದು ಉತ್ತ ಮೋತ್ತಮ ಸುಲಭ ಹಾಗೂ ಪರಿಣಾಮಕಾರಕವಾವ ಉಪದೇಶ ಸಾಧನ ವಾಯಿತು. ಶಿವಶರಣರು ಉಪಯೋಗಿಸಿದ ವಚನವೆಂಬುದು ಗದ್ಯದ ಒಂದು ರೂಪವೆ ಇರುವದೆಂದು ಹೇಳಬೇಕಾಗುವದು. ಒಮ್ಮೊಮ್ಮೆ ಹಲವು ವಚನ ಗಳಲ್ಲಿ ವ್ಯಾಸ ಮುಂತಾದ ಪದ್ಯದ ಲಕ್ಷಣಗಳು ಕಂಡುಬಂದರೂ ವಚನ ಗಳು ಎಂದಿಗೂ ಪದ್ಯಗಳೆಂದು ಎನಿಸಲಾರವು. ಯಾವದೇ ವಾಙ್ಮಯದ ಇತಿಹಾಸವನ್ನು ನೋಡಿದರೂ ಅದರಲ್ಲಿ ಮೊದಲು ಪದ್ಯರಚನೆ ಆ ಬಳಿಕ ಹಲವು ಕಾಲದ ನಂತರ ಗದ್ಯರಚನೆ, ಹೀಗೆ ಕ್ರಮವು ಕಂಡುಬರುವದು. ಕನ್ನಡ ವಾಙ್ಮಯದ ಇತಿಹಾಸವಾದರೂ ಈ ನಿಯಮಕ್ಕೆ ಅಪವಾದಾತ್ಮಕ ವಿಲ್ಲ. ವೀರಶೈವ ಸಾಂಪ್ರದಾಯದ ವಾಙ್ಮಯವನ್ನಷ್ಟೇ ಪ್ರತ್ಯೇಕವಾಗಿ ವಿಚಾರಿಸಿದರೆ ಮಾತ್ರ ಈ ವಚನಗಳೆ ಮುಖ್ಯ ಮತ್ತು ಆದಿ ವಾಙ್ಮಯವಿದ್ದು ಆ ಬಳಿಕ ಪದ್ಯವಾಙ್ಮಯವು ಅಸ್ತಿತ್ವದಲ್ಲಿ ಬಂದಿರುವದು. ಪದ್ಯವು ಯಾವಾ ಗಲೂ ಮುಖ್ಯವಾಗಿ ಭಾವವ್ಯಕ್ತಿಯ ಸಾಧನವೆಂದೂ ಗದ್ಯವು ವಿಚಾರ ವ್ಯಕ್ತಿಯ ಸಾಧನವೆಂದೂ ತಿಳಿಯಲ್ಪಡುತ್ತಿದೆ. ಪದ್ಯರೂಪದಲ್ಲಿ ಸ್ವಾಭಾ ವಿಕವಾಗಿ ಒಂದು ಬಗೆಯ ಲಾಲಿತ್ಯವೂ ಆಕರ್ಷಣಶಕ್ತಿಯೂ ಮನೋ ಹರತೆಯೂ ಇರುವದು. ಪದ್ಯಗಳು ನೆನಪಿನಲ್ಲಿಡಲಿಕ್ಕೂ ಹೆಚ್ಚು ಸುಲಭ ವಿರುವವು. ಆದಿಮ ವಚನಕಾರರು ಬರೆದ ವಚನಗಳಲ್ಲಿ ಪದ್ಯದಲ್ಲಿರುವ ಯಾವ ಮನೋಹರತೆಯೂ ಸ್ಮರಣಸುಲಭತೆಯೂ ಇದ್ದಿಲ್ಲ. ಆ ಕಾಲಕ್ಕೆ ಅಚ್ಚಿನ ಮುಂತಾದ ಯಾವ ಸೌಕರ್ಯಗಳೂ ಇದ್ದಿಲ್ಲ. ಆದರೂ ಅವು ಪರಂಪರೆ ಯಿಂದ ರಕ್ಷಿಸಲ್ಪಟ್ಟು ಇಲ್ಲಿಯ ವರೆಗೆ ಬಂದಿರುವವು. ಈ ಸಂಗತಿಯು ಆ ವಚನಗಳ ವಿಶೇಷ ಮಹತ್ವವನ್ನೂ ವೀರಶೈವಮತದ ಅನುಯಾಯಿಗಳ ನಿಷ್ಠೆಯನ್ನೂ ಸಿದ್ಧಪಡಿಸುವದು.

೧೫೬. ಈ ವಚನವಾಙ್ಮಯದ ವಿಸ್ತಾರವು ಇಂತಿಷ್ಟೇ ಇರುವ ದೆಂದು ಸದ್ಯಕ್ಕೆ ಹೇಳಲಿಕ್ಕೆ ಬರುವಂತಿಲ್ಲ. ಯಾಕಂದರೆ, ಅದರ ಎಣಿಕೆಯೆ ಇನ್ನೂ ಆಗಿಲ್ಲ ಮತ್ತು ಸದ್ಯಕ್ಕೆ ಉಪಲಬ್ಧವಾಗಬಹುದಾದ ವಾಙ್ಮಯವು ಕೂಡ ಎಲ್ಲವೂ ಪ್ರಕಾಶಿತವಾಗಿಲ್ಲ. ಎಲ್ಲ ವಚನಕಾರರ ಹೆಸರುಗಳು ಸಹ ಇನ್ನೂ ಗೊತ್ತಾಗಿಲ್ಲ, ಗೊತ್ತಾದ ವಚನಕಾರರ ಎಲ್ಲ ವಚನಗಳೂ ಸಿಕ್ಕಿಲ್ಲ.

ಹಲವು ವಚನಕಾರರ ಹೆಸರುಗಳು ಗೊತ್ತಾಗಿದ್ದರೂ ಅವರ ಒಂದೂ ವಚನವು ಇನ್ನೂ ಉಪಲಬ್ಧವಾಗಿಲ್ಲ. ಈ ವಿಷಯದಲ್ಲಿ ಇನ್ನೂ ಹೆಚ್ಚು ಸಂಶೋಧನವಾಗುವವರೆಗೆ ವಿನೂ ನಿಶ್ಚಿತವಾಗಿ ಹೇಳಲಿಕ್ಕೆ ಬರುವಹಾಗಿಲ್ಲ. ವಚನಗಳು ಕೋಟ್ಯಾನುಕೋಟಿ ಇರುವವು ಎಂಬ, ಅಥವಾ ಸಿದ್ಧರಾಮ ಯ್ಯನ ಒಂದು ವಚನದಲ್ಲಿ ಹೇಳಿದಂತೆ, ಅಲ್ಲಯ್ಯ ಮತ್ತು ಇನ್ನೆಂಟು ಜನರ ವಚನಗಳು ಕೂಡಿ ೧೬೫೧ ಖಂಡಿಂ ಇರುವವು ಎಂಬ, ಅಥವಾ ಅಲ್ಲಯ್ಯನ ವಚನಗಳಷ್ಟೇ ಎರಡೆಂಬತ್ತು ಕೋಟಿ ಇರುವವು ಎಂಬ, ಐತಿಹ್ಯಗಳು ಸಂಬಲಸಾಧ್ಯವಾಗಿರುವವು. ವಚನಗಳಂತೂ ಇರಲಿ, ಅವುಗಳಲ್ಲಿಯ ಮಾತ್ರೆ ಗಳನ್ನು ಅಥವಾ ಅಕ್ಷರಗಳನ್ನೆಣಿಸಿದರೂ ಅವು ಅಷ್ಟಾಗಲರಿಯವು. ವಚನ ಶಾಸ್ತ್ರಸಾರದ (ಭಾಗ. ೧. ಆವೃತ್ತಿ ೧) ಪರಿಶಿಷ್ಟದಲ್ಲಿ ಉಲ್ಲೇಖಿಸಿದ ೨೧೩ ವಚನಕಾರರ ಎಲ್ಲ ವಚನಗಳು ಈ ಹೊತ್ತು ದೊರಕಿದರೂ ಮತ್ತು ಅವುಗಳ ಎಲ್ಲ ಮಾತ್ರೆಗಳನ್ನು ಎಣಿಸಿದರೂ ಇಷ್ಟು ದೊಡ್ಡ ಸಂಖ್ಯೆಯಾಗುವದು ಅಸಾಧ್ಯವು! ಈಗ ಅಚ್ಚಾದ ವಚನವಾಙ್ಮಯದಲ್ಲಿ, ಮುಖ್ಯವಾಗಿ ವಚನ ಶಾಸ್ತ್ರಸಾರ ಭಾಗ ೧, ಮತ್ತು ೨, ಹಾಗೂ ಶೂನ್ಯಸಂಪಾದನೆ ಇವುಗಳಲ್ಲಿ ಅನುಕ್ರಮದಿಂದ ವಿಷಯಾನುಸಾರವಾಗಿ ಮತ್ತು ಕಥಾಸಂದರ್ಭಾನು ಸಾರವಾಗಿ ವಚನಕಾರರ ವಚನಗಳು ಪ್ರಸಿದ್ಧಿಸಲ್ಪಟ್ಟಿರುವವು. ಇದಲ್ಲದೆ ಅಲ್ಲಮ, ಬಸವ, ಚನ್ನಬಸವ, ಸಿದ್ಧರಾಮ, ಮಹದೇವಿಯಕ್ಕ, ಲಿಂಗಮ್ಮ, ಆದಯ್ಯ, ಸಕಳೇಶ, ಸಂಗನಬಸವ, ಹಡಪದಪ್ಪಣ್ಣ, ಘನಲಿಂಗ, ಗಣದಾಸೀ ವೀರಣ್ಣ, ದೇವರ ದಾಸಿಮಯ್ಯ, ಈ ಮುಂತಾದ ವಚನಕಾರರ ವಚನಗಳು ಪ್ರತ್ಯೇಕವಾಗಿ ಪುಸ್ತಕರೂಪದಿಂದ ಅಚ್ಚುಹಾಕಲ್ಪಟ್ಟಿರುವವು. ಇವುಗಳ ಹೊರತು ಮತ್ತೆ ಬೇರೆ ಹಲವು ಆಯ್ಕೆಗಳೂ ಪ್ರಕಟವಾಗಿರುವವು. ಆದರೆ ಅವಾವೂ ಒಟ್ಟು ವಚನಸಂಖ್ಯೆಯನ್ನು ಹೆಚ್ಚಿಸುವದಿಲ್ಲ. ಯಾಕಂದರೆ, ಅವು ಮೇಲಿನ ವಚನಗಳೊಳಗಿಂದಲೆ ಆರಿಸಲ್ಪಟ್ಟಿರುವವು. ಈಗ ಅಚ್ಚಾದ ವಚನ ಸಂಖ್ಯೆಯು ಸುಮಾರು ೮೦೦೦ (ಎಂಟು ಸಾವಿರ) ಇರುವದು. ಆ ಸಂಖ್ಯೆಯಲ್ಲಿ ಅಲ್ಲಮ, ಬಸವ, ಚನ್ನಬಸವ, ಸಿದ್ಧರಾಮ ಇವರ ವಚನ ಗಳೆ ಹೆಚ್ಚು ಇರುವವು. ವಚನವಾಙ್ಮಯದೊಡನೆ ಪರಂಪರೆಯಿಂದ ಬಂದ ಹಲವು ಟೀಕೆಟಿಪ್ಪಣಿಗಳೂ ಬಹಳ ಸಹಾಯಕವಿರುವವು. ವಿಶೇಷತಃ ಮುಂಡಿಗೆಗಳನ್ನು ಕುರಿತು ಬರೆದ ಟೀಕೆಗಳು ಆ ಮುಂಡಿಗೆಗಳು ತಿಳಿಯ ಲಿಕ್ಕೆ ಅತ್ಯಂತ ಅವಶ್ಯಕವಿರುವವು. ಸದ್ಯಕ್ಕೆ ಗೊತ್ತಿದ್ದನುಟ್ಟಿಗೆ ವಚನ ವಾಙ್ಮಯದ ವಿಸ್ತಾರವು ಇಷ್ಟು ಇರುವದು. ಈ ವಾಙ್ಮಯವು ಸಾಹಿತ್ಯ

ದೃಷ್ಟಿಯಿಂದ ಕನ್ನಡವಾಙ್ಮಯದಲ್ಲಿ ಒಂದು ಪ್ರತ್ಯೇಕ, ಶ್ರೇಷ್ಠ ಸ್ಥಾನವನ್ನು ಪಡೆಯಲರ್ಹವಿದೆ.

೧೫೭. ಅಧ್ಯಾತ್ಮ, ಧರ್ಮ, ನೀತಿ ಮುಂತಾದವುಗಳೆ ವಚನ ಶಾಸ್ತ್ರದ ಮುಖ್ಯ ವಿಷಯಗಳಿರುವವು. ನಿಜಸುಖವೆ ಮನುಷ್ಯನ ಅತ್ಯಂತಿಕ ಧ್ಯೇಯವಾಗಿರುವದರಿಂದ ಅದು ಯಾವ ಸಾಧನದಿಂದ ಪ್ರಾಪ್ತವಾಗಬಲ್ಲದೊ ಆ ಸಾಧನವನ್ನು ಕುರಿತು ಬರೆದ ಅನುಭವಪೂರ್ಣ ವಾಙ್ಮಯವು ಯಾವಾಗಲೂ ಶತಕಾನುಶತಕಗಳವರೆಗೆ ಬಾಳುವದು. ವಚನಗಳು ಅಂಥ ವಾಙ್ಮಯವಿರುವುದರಿಂದಲೆ ಅದು ಜೀವಂತ ಝರಿಯಂತೆ ಈಗ ಸೂರಾರು ವರ್ಷ ನಾವಿರಾರು ಜನರಿಗೆ ಜ್ಞಾನಾಮೃತವನ್ನು ಕುಡಿಸಿ ಅವರನ್ನು ತೃಪ್ತಿಪಡಿಸುತ್ತ ಬಂದಿರುವವು. ದೇಹಪೋಷಣಕ್ಕಾಗಿ ವ್ಯಕ್ತಿಗೆ ಅನ್ನವಸ್ತ್ರಾದಿಗಳು ಅವಶ್ಯವಿದ್ದಂತೆ ಅವನ ಮನಸ್ಸು ಉಚ್ಚಸ್ಥಿತಿಗೆ ಏರಬೇಕಾದರೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಿಚಾರಗಳು ಅತ್ಯವಶ್ಯವಾಗಿರುವವು. ಇಂಥ ವಿಚಾರಗಳೆ ಮನುಷ್ಯನ ಮನುಷ್ಯತ್ವವನ್ನು ಸಿದ್ಧಮಾಡುವವು, ಮತ್ತು ಅವನನ್ನು ದೇವಪದವಿಗೆ ಒಯ್ದು ಮುಟ್ಟಿಸಬಲ್ಲವು. ಒಂದು ಮಂದಿರವನ್ನು ಕಟ್ಟಬೇಕಾದರೆ ಕಲ್ಲು, ಇಟ್ಟಂಗಿ ಮುಂತಾದವುಗಳೆ ಹೆಚ್ಚು ಬೇಕಾದರೂ ಗಚ್ಚು ಇಲ್ಲದಿದ್ದರೆ ಅಥವಾ ಆ ಗಚ್ಚು ಚನ್ನಾಗಿಲ್ಲದಿದ್ದರೆ ಆ ಮಂದಿರವು ಕಡಕೊಂಡು ಬೀಳುವಂತೆ ಸಮಾಜವೆಂಬ ಕಟ್ಟಡಕ್ಕೆ ಅನ್ನವಸ್ತ್ರ ಧನ ಸಂಪತ್ತು ಎಷ್ಟೇ ಇದ್ದರೂ ಧರ್ಮ, ನೀತಿ ಎಂಬ ತಿಳಿಗಚ್ಚು ಇಲ್ಲದಿದ್ದರೆ ಅದು ಕೂಡಲೆ ಕುಸಿಬಿದ್ದು ಹೋಗುವದೆಂಬಲ್ಲಿ ಸಂಶಯವಿಲ್ಲ. ಮಣಿಗಳೊಳಗಿನ ಸೂತ್ರದಂತೆ, ಕಟ್ಟಡದೊಳಗಿನ ಕಂಬಗಳಂತೆ, ಅಂಗಾಂಗಗಳಲ್ಲಿರುವ ಪ್ರಾಣದಂತೆ ಧರ್ಮವು ಮನುಷ್ಯನ ಪ್ರತಿಯೊಂದು ವ್ಯವಹಾರದ ಮತ್ತು ಜಲನವಲನದ ಅಥವಾ ಅವನ ಕರ್ಮಮಾತ್ರದ ಆಧಾರವಾಗಿದೆ. ಆ ಧರ್ಮವೆ ವಚನವಾಙ್ಮಯದ ಮುಖ್ಯ ವಿಷಯವಿರುವದು. ಸರ್ವ ಧರ್ಮಗಳಿಗೂ ಸಾಮಾನ್ಯವಾದ; ಅದೇಕೆ, ಇಡೀ ಮಾನವಕುಲಕ್ಕೆ ಸಾಮಾನ್ಯವಾದ, ತಾತ್ವಿಕ ವಿಷಯಗಳನ್ನಲ್ಲದೆ. ವೀರಶೈವಮತಕ್ಕೆ ವಿಶಿಷ್ಟವಾದ ಶಕ್ತಿವಿಶಿಷ್ಟಾದ್ವೈತ, ಷಟ್‌ಸ್ಥಲ, ಅಂಗಲಿಂಗಸಂಬಂಧ, ಲಿಂಗಧಾರಣಾದಿ ವೀರಶೈವಾಚಾರ, ಅಷ್ಟಾವರಣ, ಮತ್ತು ಪಂಚಾಚಾರ ಇವುಗಳನ್ನು ವಚನಗಳು ವಿಪುಲವಾಗಿ ವಿವೇಚಿಸುವವು. ವೀರಶೈವ ಸಾಂಪ್ರದಾಯದ ತತ್ವಗಳನ್ನು ತಿಳಿದುಕೊಳ್ಳಬೇಕಾದರೆ ವಚನಗಳನ್ನುಳಿದು ಬೇರೆ ಗ್ರಂಥಗಳನ್ನು ಓದುವ ಅಷ್ಟೊಂದು ಅವಶ್ಯಕತೆಯೆ ಇಲ್ಲವೆಂದು ಹೇಳಬಹುದು.

ಈ ಪ್ರಕಾರ ವಚನವಾಙ್ಮಯದ ವಿಷಯವು ವೀರಶೈವರಿಗಂತೂ ಕೇವಲ ಅವರ ಆತ್ಮದಷ್ಟು ಮಹತ್ವದ್ದಿರುವದು ಮತ್ತು ತಾತ್ವಿಕ ಹಾಗೂ ತುಲನಾತ್ಮಕದೃಷ್ಟಿಯಿಂದ ವಿಚಾರಮಾಡುವ ಅನ್ಯಮತದವರಿಗೆ ಬಹಳೇ ಬೋಧಕರವೂ ಅತ್ಯಂತ ಆಕರ್ಷಕವೂ ಇರುವದು.

೧೫೮. ವಚನವಾಙ್ಮಯದ ಇತಿಹಾಸ, ಅದರ ವಿಸ್ತಾರ, ಅದರ ವಿಷಯ ಇತ್ಯಾದಿ ಸಂಗತಿಗಳನ್ನು ಕುರಿತು ಇದುವರೆಗೆ ಸಂಕ್ಷೇಪದಿಂದ ಹೇಳಿದ್ದಾಯಿತು. ಇನ್ನು ವಚನಗಳ ಶೈಲಿ, ರೀತಿ, ಅಥವಾ ಪದ್ಧತಿ, ಅದರ ಗುಣದೋಷ ಅದರ ಮರ್ಯಾದೆ, ಮತ್ತು ಕೊನೆಗೆ ಅದರ ಭವಿಷ್ಯ ಇಷ್ಟು ಮಾತುಗಳನ್ನು ಹೇಳಬೇಕಾಗಿರುವದು. ಮೊದಲು ಶೈಲಿಯನ್ನು ಕುರಿತು ವಿಚಾರಮಾಡುವ. ಶೈಲಿಯನ್ನು ವಿಚಾರಿಸುವಾಗ ವಚನವಾಙ್ಮಯದ ಬಾಹ್ಯಸ್ವರೂಪ ಮತ್ತು ಅಂತಃಸ್ವರೂಪ ಹೀಗೆ ಅದರಲ್ಲಿ ಎರಡು ಭಾಗ ಮಾಡಿ ವಿಚಾರಮಾಡುವದು ಯುಕ್ತವಾಗುವದು. ಇನ್ನು ವಚನಗಳ ಮತ್ತು ವಚನವಾಙ್ಮಯದ ಬಾಹ್ಯಸ್ವರೂಪವು ಹೇಗೆ ಇರುವದು ಇದನ್ನು ನೋಡುವಾಗ ವಚನದ ಸಾಮಾನ್ಯ ಪರಿಮಾಣವೇನು, ಅವು ಚಿಕ್ಕವಿರುವವೊ ದೊಡ್ಡವಿರುವವೊ, ಅವುಗಳಲ್ಲಿ ಪದ್ಯಾದಿಗಳು ಎಲ್ಲಿಯಾದರೂ ಇರುವವೊ ಹೇಗೆ, ವಚನಗಳಲ್ಲಿ ಎಷ್ಟು ಬಗೆಗಳನ್ನು ಮಾಡಬಹುದು, ಎಂಬ ಮುಂತಾದ ಸಂಗತಿಗಳನ್ನು ಕ್ರಮವಾಗಿ ನೋಡುವದು ಅವಶ್ಯವಿರುವದು. ವಚನದ ಸಾಮಾನ್ಯ ಅಥವಾ ಸಾಧಾರಣ ಸ್ವರೂಪವು ಚಿಕ್ಕದೆ ಇರುವದು. ಅದು ಯಾವ ಉದ್ದೇಶದಿಂದ, ಯಾವ ವಿಷಯವನ್ನು ಹೇಳುವುದಕ್ಕಾಗಿ, ಮತ್ತು ಯಾವ ರೀತಿಯಿಂದ ಬರೆಯಲ್ಪಟ್ಟಿತೊ ಹಾಗೂ ಇನ್ನು ಮುಂದೆ ಬರೆಯಲ್ಪಡಬಹುದೊ ಆ ಸಂಗತಿಗಳನ್ನೆಲ್ಲ ಲಕ್ಷಿಸಿದರೆ ವಚನವು ಆ ಚಿಕ್ಕ ಮಾಟಾದ, ಬಿಡಿಬಿಡಿಯಾದ ಸ್ವರೂಪವನ್ನು ತಾಳಿದ್ದೆ ಯೋಗ್ಯವು. ಮನುಷ್ಯನ ಮನೋಮಂಡಲದಲ್ಲಿ ಮೂಡುವ ಪ್ರತಿಯೊಂದು ಭಾವವು ವಿಚಾರವು, ಕಲ್ಪನೆಯು ಹೊರಗೆ ಬರಲಿಕ್ಕೆ ಒಂದು ಯೋಗ್ಯ ವಾಹನವು ಬೇಕು, ಅದು ವ್ಯಕ್ತವಾಗಲಿಕ್ಕೆ ಒಂದು ಬಾಹ್ಯರೂಪವು ಬೇಕು. ಆ ವಾಹನದ ಅಥವಾ ಆ ರೂಪದ ಮುಖಾಂತರವೆ ಆಯಾ ವಿಚಾರವು ಅಥವಾ ಭಾವವು ಎರಡನೆಯವರಿಗೆ ತಿಳಿಯಬಲ್ಲದು. ಧರ್ಮಸೂರ್ತಿಯಿಂದ ಉತ್ಪಾಹಿತರಾದ ವಚನಕಾರರ ಅಂತರಾಕಾಶದಲ್ಲಿ ಮೂಡಿಬಂದ ವಿಚಾರಪೈಭವವು ಕನ್ನಡಿಗರ ಮುಂದೆ ಈಗ ವಚನರೂಪದಿಂದ ಕಂಗೊಳಿಸುತ್ತಿರುವದು. ಬಹುಶಃ ಎಲ್ಲ ವಚನಗಳು, ಅಥವಾ ವಚನಗಳಲ್ಲಿಯ ಬಹಳ ದೊಡ್ಡ ಸಂಖ್ಯೆಯು ೭–೮

ವಾಕ್ಯಗಳುಳ್ಳವುಗಳು ಮತ್ತು ೨೦–೩೦ ಶಬ್ದಗಳುಳ್ಳವುಗಳೆ ಇರುವವು ಎಂದು ಹೇಳಬಹುದು. ಹಲವು ಇದಕ್ಕೂ ಚಿಕ್ಕವಿರುವವು. ವಚನಾಮೃತದಲ್ಲಿಯ ೬, ೨೨, ೫೫೫ ಈ ವಚನಗಳಲ್ಲಿ ಸುಮಾರು ೧೫ ಶಬ್ದಗಳು ಮಾತ್ರ ಇರುವವು. ಅದಕೆ ಇಂಥ ಲಘುವಚನಗಳು ತೀರ ಕಡಿಮೆ· ಅಥವಾ ಅಪವಾದಾತ್ಮಕವೆಂದರೂ ಸಲ್ಲುವದು. ಇನ್ನು ಇಡೀ ಒಂದು ಅಥವಾ ಎರಡು ಪುಟಗಳನ್ನು ಸಹ ತುಂಬುವ ವಚನಗಳೂ ಹಲವು ಇರುವವು. ಅವುಗಳನ್ನು, ವಚನಕಾರರೆ ಬರೆದಿರುವರು ಮತ್ತು ಕೊನೆಗೆ ತಮ್ಮ ಅಂಕಿತಗಳನ್ನಿಕ್ಕಿರುವರು, ಎಂದು ಅವುಗಳಿಗೆ ವಚನಗಳೆನ್ನಬೇಕೇಹೊರತು ಅವುಗಳಲ್ಲಿ ವಚನದ ವಿಶಿಷ್ಟಲಕ್ಷಣಗಳಾಗಲಿ, ವಚನದ ತೇಜವಾಗಲಿ ಕಂಡುಬರುವದಿಲ್ಲ. ಅವು ಸಾಮಾನ್ಯ ಗದ್ಯಖಂಡಗಳೆಂದೆ ಹೇಳಬಹುದು. ವಿಶೇಷವಾಗಿ ಸಂಗನಬಸವಣ್ಣನು ಬರೆದ ವಿವೇಚನಾತ್ಮಕ ಅಥವಾ ವಿವರಣಾತ್ಮಕ ವಚನಗಳು ಆ ತರಹದವಿರುವವು. ಹಲವೆಡೆಗೆ ಪರಂಪರೆಯನ್ನು ಹೇಳುವಾಗ, ಅಥವಾ ಬಸವನು ಪ್ರಭುದೇವರ ಪೂರ್ವಜನ್ಮ ಕಥನವನ್ನು ಹೇಳುವಂತೆ (ಶೂ. ೨) ಹೇಳುವಾಗ, ಇಲ್ಲವೆ ಚನ್ನಬಸವನು ಕಲ್ಯಾಣವನ್ನು ವರ್ಣಿಸಿದಂತೆ ವರ್ಣಿಸುವಾಗ (ಶೂ. ೮೫), ಹೀಗೆ ವಿರಲಪ್ರಸಂಗಗಳಲ್ಲಿ ಉದ್ದವಾದ ವಚನಗಳನ್ನು ಕೆಲವರು ಬರೆದಿರುವರು. ಅತ್ತ ಮೊದಲು ಹೇಳಿದ ಕಿರಿಯ ಸ್ವರೂಪ, ಇತ್ತ ಮೇಲೆ ಹೇಳಿದ ಹಿರಿಯ ಸ್ವರೂಪ, ಇವೆರಡನ್ನೂ ಬಿಟ್ಟು ಸರ್ವಸಾಧಾರಣವಾಗಿರುವ ಮಾದರಿಯ ವಚನವೆಂದರೆ ಮೇಲೆ ಒಂದೆಡೆಗೆ ಹೇಳಿದಂತೆ ೭-೮ ವಾಕ್ಯಗಳುಳ್ಳದ್ದೂ ೨೦–೩೦ ಶಬ್ದಗಳುಳ್ಳದ್ದೂ ಇರುವದು. ಇನ್ನು ವಚನಗ್ರಂಥಗಳಲ್ಲಿ, ವಿಶೇಷತಃ ಶೂನ್ಯ ಸಂಪಾದನೆ ಮತ್ತು ಸಿದ್ಧಲಿಂಗೇಶ್ವರನ ಏಕೋತ್ತರಶತಸ್ಥಲ ಇವುಗಳಲ್ಲಿ, ಹಲವು ರಾಗದಲ್ಲಿ ಹಾಡಲಿಕ್ಕೆಬರುವಂಥ ಪದಗಳು ಇರುವವು. ಅವುಗಳನ್ನು ವಚನಕಾರರೇ ಬರೆದಿದ್ದರೂ ಅವು ವಚನಗಳಲ್ಲ. ಆದುದರಿಂದ ಅವುಗಳನ್ನು ಇಲ್ಲಿ ವಿಚಾರಿಸುವದು ಅವಶ್ಯವಿಲ್ಲ. ಅದೇ ರೀತಿ ಹಲವು ಮಹತ್ವದ ವಚನಗಳಿಗೆ ಬರೆಯಲ್ಪಟ್ಟ ಟೀಕೆಟಿಪ್ಪಣಿಗಳೂ ವಚನಗಳೊಡನೆ ಅಚ್ಚುಹಾಕಲ್ಪಟ್ಟಿದ್ದರೂ ವಚನವಾಙ್ಮಯದೊಡನೆ ಅವುಗಳ ಸಂಬಂಧವು ಬಹಳ ನಿಕಟವಿದ್ದರೂ ಅವು ವಚನಗಳೂ ಅಲ್ಲ ಮತ್ತು ವಚನಲಕ್ಷಣಗಳೂ ಅವುಗಳಲ್ಲಿಲ್ಲ. ವಚನಗಳ ರಹಸ್ಯವು ತಿಳಿಯಲಿಕ್ಕೆ ಅವು ಎಷ್ಟೇ ಸಹಾಯಕವಿದ್ದರೂ ಅವುಗಳ ವಾಙ್ಮಯಿಕ ಬೆಲೆಯನ್ನು ನಾವು ಇಲ್ಲಿ ಕಟ್ಟುವ ಕಾರಣವಿಲ್ಲ, ಯಾಕಂದರೆ, ಅವು ವಚನವಾಙ್ಮಯಕ್ಕೆ ಆನುಷಂಗಿಕವಿದ್ದರೂ ಅವು ವಚನಗಳಲ್ಲ.

೧೫೯. ಇನ್ನು ವಚನಗಳಲ್ಲಿ ಅಲ್ಲಲ್ಲಿ ಯಾವ ಬಗೆಯ ಅವತರಣಗಳು ಬಂದಿರುವವು, ವಚನವಾಙ್ಮಯದ ಶಬ್ದಭಾಂಡಾರವು ಹೇಗಿರುವದು, ವಚನಗಳು ಯಾವ ಅಂಕಿತದಿಂದ ಬರೆಯಲ್ಪಟ್ಟಿರುವವು, ಈ ವಿಷಯಗಳನ್ನು ಇಲ್ಲಿ ನೋಡುವ. ವಚನಗಳಲ್ಲಿ ಆಗಮಗಳ ಅವತರಣಗಳೆ ಹೇರಳವಾಗಿ ಕಂಡುಬರುವವು. ಎಲ್ಲಿಯಾದರೂ ಕ್ವಚಿತ್ ಪ್ರಸಂಗಗಳಲ್ಲಿ ಶ್ರುತಿಯಿಂದ ಅಥವಾ ಹಲವು ಪುರಾಣಗಳಿಂದ ಒಂದರ್ಧ ವಾಕ್ಯ ಅಥವಾ ವಾಕ್ಯಗಳು ಅವತರಿಸಲ್ಪಟ್ಟಿರುವವು. ಆಗಮಗಳ ಅವತರಣಗಳಾದರೂ ಅಷ್ಟೊಂದು ಅಡಿಗಡಿಗೆ ನಮಗೆ ದೃಗ್ಗೋಚರವಾಗುವುದಿಲ್ಲ. ಹಲವು ವಚನಕಾರರ ವಚನಗಳಲ್ಲಿ ಅವು ಹೆಚ್ಚು ಹಲವರಲ್ಲಿ ತೀರ ಕಡಿಮೆ ಹೀಗೆ ಇರುವವು. ಉದಾ– ಅಲ್ಲಮನ ಮತ್ತು ಬಸವನ ವಚನಗಳಲ್ಲಿ ಅವು ತೀರ ಕಡಿಮೆ ಇದ್ದು ಚನ್ನಬಸವನ ವಚನಗಳಲ್ಲಿ ಅವುಗಳ ಪ್ರಮಾಣವು ಹೆಚ್ಚು ಇರುವದು. ಆಚಾರವನ್ನು ಕುರಿತು ಬರೆಯಲ್ಪಟ್ಟ ವಚನಗಳಲ್ಲಿ ಇಂಥ ಅವತರಣಗಳು ಹೆಚ್ಚು, ಎಂದು ಸಾಮಾನ್ಯವಾಗಿ ಹೇಳಬಹುದು. ತಮ್ಮ ನುಡಿಯು ಅಧಿಕೃತವಿದೆ, ಅದಕ್ಕೆ ಶಾಸ್ತ್ರಾಧಾರವಿದೆ, ಎಂದು ತೋರಿಸುವುದಕ್ಕಾಗಿಯೆ ಈ ಬಗೆಯ ಅವತರಣಿಕೆಗಳು ಕೊಡಲ್ಪಟ್ಟಿರಲಿಕ್ಕೆ ಸಾಕು. ನೀತಿ ಅಥವಾ ಅನುಭವದ ವಚನಗಳು ಅವರ ಸ್ವಂತ ಅನುಭವದ ಆಧಾರದಿಂದಲೆ ಬರೆಯಲ್ಪಟ್ಟಿರುವುದರಿಂದ ಅವುಗಳಲ್ಲಿ ಬಹುಶಃ ವಚನಕಾರರು ಯಾವ ಅವತರಣಗಳನ್ನೂ ಕೊಟ್ಟಿಲ್ಲ. ಅವತರಣಗಳನ್ನು ಕೊಡುವಾಗ ವಚನಕಾರರು ಆಯಾ ಆಗಮಗಳ, ಪುರಾಣಗಳ, ಅಥವಾ ಶ್ರುತಿಗಳ ಹೆಸರುಗಳನ್ನು ಕೊಡುವದು ತೀರ ಕಡಿಮೆ. 'ಶಿವಧರ್ಮಪುರಾಣದಲ್ಲಿ' (ವ. ೨೮೬, ೩೨೫), 'ಲೈಂಗ್ಯೇ' (ವ. ೨೮೭), 'ಬ್ರಹ್ಮಾಂಡ ಪುರಾಣೇ' (ವ. ೨೪), 'ವಾತುಲೇ' (ವ, ೨೪), ಹೀಗೆ ಅಪವಾದಾತ್ಮಕವಾಗಿ ಕೆಲವೆಡೆಗೆ ಮಾತ್ರ ಹೆಸರುಗಳು ಕೊಡಲ್ಪಟ್ಟಿವೆ. ವಾಡಿಕೆಯಾಗಿ, 'ಶ್ಲೋಕ' (ವ. ೩೧೭, ೩೨೩), 'ಅದೆಂತೆಂದೊಡೆ' (ವ. ೧೪೩, ೧೪೪), 'ಎಂದುದಾಗಿ' 'ಇತೆಂದುದಾಗಿ' (ವ. ೧೪೦, ೯೭), 'ಸಾಕ್ಷಿ' (ವ. ೭೫, ೩೫೬, ೩೬೨), ಗ್ರಂಥ (ವ. ೪೩), 'ಇದಕ್ಕೆ ದೃಷ್ಟ' ಎಂದು ಆಗಮಾದಿ ಗ್ರಂಥಗಳ ಅವತರಣಗಳನ್ನು ಕೊಡುವ ಪದ್ಧತಿಯು ವಚನಕಾರರಲ್ಲಿ ಕಂಡುಬರುವದು. ಕ್ವಚಿತ್ ಸ್ಥಲಗಳಲ್ಲಿ ಆಗಮದ ಅವತರಣಕ್ಕೆಯೆ 'ಶ್ರುತಿ' ಎಂದ ಉದಾಹರಣೆಗಳೂ (ವ. ೫೨೦, ಚ. ೫೪) ಇರುವವು. ಆಗಮಗಳೂ ಶ್ರುತಿಯಷ್ಟೇ ಮಹತ್ವವುಳ್ಳವುಗಳು, ಅಧಿಕಾರವುಳ್ಳವುಗಳು, ಎಂಬ ಭಾವನೆಯಿಂದಲೆ ಹಲವು ವಚನಕಾರರು ಹೀಗೆ ಆಗಮ

ಗಳಿಗೆ ಶ್ರುತಿ ಎಂದು ಸಂಬೋಧಿಸಿರಬೇಕು. ಹೆಸರು ಕೊಟ್ಟು ಕೊಟ್ಟ ವೇದಗಳ ಅವತರಣಿಕೆಗಳಲ್ಲಿ ಅಥರ್ವವೇದದ ಅವತರಣಿಕೆಗಳೇ ಹೆಚ್ಚು (ಪ. ೩) ಇದ್ದಂತೆ ತೋರುವವು. 'ಶ್ರುತಿ' ಎಂದು, 'ವೇದ' ಎಂದು 'ವೇದ ಶ್ರುತಿ' ಎಂದು, ಅಥವಾ ಋಗ್ವೇದ ಯಜುರ್ವೇದ ಎಂದು ಆಯಾ ವೇದಗಳ ಹೆಸರುಗೊಂಡು ವೇದೋಪನಿಷತ್ತುಗಳಲ್ಲಿಯು ಅವತರಣಿಕೆಗಳು (ವ. ೧೩, ೫೫, ೧೮೫, ೩೧೨, ೫೫೬) ಕೊಡಲ್ಪಟ್ಟಿರುವವು. ವಚನಗಳಲ್ಲಿ ಹಲವೆಡೆಗೆ ಈಗ ರೂಢಿಯಲ್ಲಿರುವ ಎಷ್ಟೋ ನಾಣ್ನುಡಿಗಳು ಇದ್ದಕ್ಕಿದ್ದ ಹಾಗೆ ಅಥವಾ ಸ್ವಲ್ಪ ಪಲ್ಲಟಿಸಿದ ಸ್ವರೂಪದಲ್ಲಿ ದೃಗ್ಗೋಚರವಾಗುವವು. 'ಕಂಬಳಿಯಲ್ಲಿ ಕಣಕವ ನಾದಿದಂತೆ' (ಬ. ೫೯), 'ಹುತ್ತವ ಬಡಿದರೆ ಹಾವು ಸಾಯಬಲ್ಲುದೆ' (ವ. ೧೩೨), 'ಸುಣ್ಣದ ಕಲ್ಲು ಮಡಲಲ್ಲಿ ಕಟ್ಟಿಕೊಂಡು ಮಡುವಿನಲ್ಲಿ ಬಿದ್ದಂತೆ' (ವ. ೧೪೭) ಈ ಮುಂತಾದವುಗಳೆ ಈ ಮಾತಿಗೆ ಉದಾಹರಣೆಗಳು. ಇನ್ನು ಪ್ರತಿಯೊಂದು ವಚನದಲ್ಲಿರುವ ಅಂಕಿತವನ್ನು ನೋಡಿದರೆ, ಅಂಕಿತಗಳು ಮೂರು ವಿಧವಿರುವವೆಂದು ಕಂಡುಬರುವದು. ಬಹುಶಃ ಅವು ಆಯಾ ವಚನಕಾರರ ಇಷ್ಟದೇವತೆಯ ಹೆಸರುಗಳಿದ್ದುದೆ ಹೆಚ್ಚು. ಅವುಗಳನ್ನು ಆಯಾ ವಚನಕಾರರು ದೀಕ್ಷೆ ಪಡೆಯುವಾಗ ಧರಿಸಿರ ಬೇಕು ಎನ್ನಲಿಕ್ಕೆ ಅಸ್ಪದವಿರುವದು. ಯಾಕಂದರೆ, 'ಘನಲಿಂಗನು' (ಘ. ೧೫) ತನ್ನ ಒಂದು ವಚನದಲ್ಲಿ, ತನ್ನ ಗುರುವಾದ ತೋಂಟದಾರ್ಯನು ತನಗೆ ಘನಲಿಂಗಿ ಎಂಬ ನಾಮಕರಣವಿಧಿಪೂರ್ವಕವಾಗಿ ದೀಕ್ಷೆಯನ್ನು ಕೊಟ್ಟನು. ಅದೇ ರೀತಿ ಸಿದ್ಧರಾಮಯ್ಯನು ತನ್ನ ಒಂದು ವಚನದಲ್ಲಿ ಗುರು ಉಪ್ಪಸವಣ್ಣನು ಹೆಸರಿಟ್ಟ ಲಿಂಗದ ಹೆಸರು ಹೇಳುವೆನು, ಎಂದಿರುವನು. ಎರಡನೆಯ ವಿಧದ ಅಂಕಿತವೆಂದರೆ, ಆಯಾ ವಚನಕಾರರ ಗುರುಗಳ ಹೆಸರುಗಳು ಅಂಕಿತವೆಂದು ಉಪಯೋಗಿಸಲ್ಪಟ್ಟಿರುವವು. ಅನಂತದೇವನೆಂಬವನು 'ಅನಂತಗುರು ಅಲ್ಲಮ ಮಹಾಪ್ರಭು' ಎಂದು, ಮುಕ್ತಾಯಕ್ಕನು 'ಅಜಗಣ್ಣ,' ಎಂದು ಉಪಯೋಗಿಸುವಾಗ ತಮ್ಮ ಗುರುಗಳ ಹೆಸರುಗಳನ್ನೆ ಬಳಸಿರುವರು. ತಮ್ಮ ಸ್ವಂತ ಹೆಸರುಗಳನ್ನೆ ಮುದ್ರಿಕೆಯೆಂದು ಉಪಯೋಗಿಸುವದು ಮೂರನೆಯ ವಿಧವು. ಈ ಸಂದರ್ಭದಲ್ಲಿ ಅಂಬಿಗರಚೌಡಯ್ಯನ ಉದಾಹರಣೆಯು ಪ್ರಸಿದ್ಧವಿರುವದು. ವಚನಕಾರನು ತನ್ನ ಹೆಸರನ್ನೆ ಮುದ್ರಿಕೆಯಾಡಿಕೊಂಡಲ್ಲಿ ಅವನ ಹೆಸರಾದರೂ ನಮಗೆ ಗೊತ್ತಾಗುವದು. ಇತರ ಸಂದರ್ಭಗಳಲ್ಲಿ ಈ ಅಂಕಿತಗಳಿಂದ ನಮಗೆ ವಚನಕಾರರ ಬಗ್ಗೆ ಯಾವ ವಿಶೇಷ ಸಂಗತಿಗಳೂ ತಿಳಿಯುವುದಿಲ್ಲ. ಅನೇಕ ವಚನಕಾರರ ಮುದ್ರಿಕೆ

ಗಳು ಗೊತ್ತಿದ್ದರೂ ಅವರ ಹೆಸರು ಅಥವಾ ಅವರ ಊರು ಇವು ಇನ್ನೂ ಗೊತ್ತಾಗಿಲ್ಲ. ಅಂಕಿತವು ಯಾವಾಗಲೂ ವಚನದ ಕೊನೆಯ ವಾಕ್ಯದಲ್ಲಿಯೆ ಸೇರಿಸಲ್ಪಟ್ಟಿರುವದು ಮತ್ತು ಆ ಅಂಕಿತದೊಡನೆ ಆ ವಚನದ ವಿಷಯವು ಯಾವದೊಂದು ಉಚಿತವಾದ ರೀತಿಯಿಂದ ಸಂಬಂಧಿಸಲ್ಪಟ್ಟಿರುವದು.

೧೬೦. ವಚನಗಳಲ್ಲಿ ಉಪಯೋಗಿಸಿದ ಶಬ್ದಭಾಂಡಾರವನ್ನು ಇನ್ನು ತುಸು ವಿಮರ್ಶಿಸುವ. ವಚನಕಾರರು ಬಳಸಿದ ಶಬ್ದಗಳು ಸಾಮಾನ್ಯವಾಗಿ ಸುಲಭವಿರುವವು, ಬಳಕೆಯಲ್ಲಿದ್ದವುಗಳಿರುವವು, ಮತ್ತು ಶುದ್ಧ ಕನ್ನಡ, ಸಂಸ್ಕೃತ, ಇಲ್ಲವೆ ತದ್ಭವ ಶಬ್ದಗಳಿರುವವು. ಮತಸಂಬಂಧದಿಂದ ಉಪಯೋಗಿಸಲ್ಪಟ್ಟ ಶಬ್ದಗಳು ಸ್ವಾಭಾವಿಕವಾಗಿ ಸಂಸ್ಕೃತ ಮತ್ತು ಪಾರಿಭಾಷಿಕವಿರುವವು. ಅವುಗಳ ಅರ್ಥವನ್ನು ಒಮ್ಮೆ ಜನ್ನಾಗಿ ಅರಿತುಕೊಳ್ಳುವದು ಅವಶ್ಯವಿರುವದು. ಉದಾ: ಅಂಗ, ಲಿಂಗ, ಇಷ್ಟಲಿಂಗ, ಪ್ರಾಣಲಿಂಗ, ನಿಜೈಕ್ಯ, ಮುಂತಾದ ಶಬ್ದಗಳ ಅರ್ಥವು ಎಲ್ಲರಿಗೂ ಒಮ್ಮೆಲೆ ಹೊಳೆಯದು. ಅವುಗಳನ್ನು ಒಮ್ಮೆ ಪೂರ್ಣವಾಗಿ ಮತ್ತು ಜನ್ನಾಗಿ ತಿಳಿದುಕೊಂಡಕೆ ಮುಂದೆ ಯಾವ ಅಡಚಣೆಯೂ ಬಾರದು. ಅಲ್ಲಲ್ಲಿ ಹಲವು ಹಳೆಗನ್ನಡ ಮತ್ತು ಬಳಕೆಯಿಂದ ಜಾರಿಹೋದ ಶಬ್ದಗಳೂ ಸಮಗೆ ಭೆಟ್ಟಿಯಾಗುವವು. ಅವುಗಳಲ್ಲಿ ಎಷ್ಟೋ ಈಗ ಪುನಃ ಬಳಕೆಯಲ್ಲಿ ತರಲು ಯೋಗ್ಯವಾದವುಗಳಿರುವವು. ಬಗೆತನ, ಗಡಣ, ಕಮ್ಮಟ, ಸಯ್ಪು, ಮಾಣು, ಸಿತಗ, ಸಸಿನೆ, ಹರಿವರಿದು, ನನ್ನಿ, ನಲ್ಲ, ನಚ್ಚು ಮುಂತಾದ ನೂರಾರು ಶಬ್ದಗಳು ಈಗ ವಿಶೇಷ ರೂಢಿಯಲ್ಲಿಲ್ಲ. ಅವು ರೂಢಿಯಲ್ಲಿ ಬಂದರೆ ಈಗಿನ ಕನ್ನಡಕ್ಕೆ ಹೆಚ್ಚು ಶೋಭೆಯೆ ಉಂಟಾಗುವದು. ವಚನಗಳಲ್ಲಿಯ ವಾಕ್ಯರಚನೆಯು ಸಹ ಸರಳವೂ ತೊಡಕಿಲ್ಲದ್ದೂ ಇರುವದು. ಸಂಕ್ಷೇಪದಲ್ಲಿ ಬರೆಯುವ್ರದೆ ವಚನಕಾರರ ಉದ್ದೇಶವಿರುವುದರಿಂದ ಅವರು ಆದಷ್ಟು ಚಿಕ್ಕ ಮತ್ತು ಅರ್ಥಬೋಧವಾಗಲಿಕ್ಕೆ ಸುಲಭವಾಗುವಂಥ ವಾಕ್ಯಗಳನ್ನೆ ಬರೆದಿರುವರು. ಅತ್ತತ್ತ, ಅನ್ನಬರ, ಅನ್ನಕ್ಕರ, ಆದಡೆ, ಎಂಬ ಮುಂತಾದ ಪದಗಳೂ ಕ್ರಿಯಾಪದಗಳಿಲ್ಲದ ವಾಕ್ಯಗಳೂ ಇಹೆನು, ಇರ್ಪೆನು, ಮುಂತಾದ ಕ್ರಿಯಾಪದರೂಪಗಳೂ ಸ್ವಲ್ಪ ಮೊದಮೊದಲು ಗದ್ಯದಲ್ಲಿ ಅಪರಿಚಿತವೆನಿಸಿದರೂ ರೂಢಿಯಾದ ಬಳಿಕ ಅವೆಲ್ಲ ಒಂದು ಬಗೆಯ ಹೊಸರುಚಿಯನ್ನೆ ಕೊಡುವವು ಎಂದು ಹೇಳಬಹುದು.

೧೬೧ ವಚನಶೈಲಿಯನ್ನು ವಿಚಾರಿಸುವಾಗ ವಚನಗಳ ಬಾಹ್ಯ ಸ್ವರೂಪವನ್ನು ಇದುವರೆಗೆ ತಕ್ಕಮಟ್ಟಿಗೆ ವಿಚಾರಿಸಿದಂತಾಯಿತು.

ಇನ್ನು ಅವುಗಳ ಅಂತಃಸ್ವರೂಪವನ್ನು ಕುರಿತು ವಿಚಾರಿಸಬೇಕಾದರೆ, ಅವು ಎಷ್ಟು ಬಗೆಯವಿರುವವು, ಅವುಗಳಲ್ಲಿ ವಿಚಾರಗಳಾಗಲಿ, ಭಾವಗಳಾಗಲಿ ಯಾವ ರೀತಿ ಮತ್ತು ಎಷ್ಟರ ಮಟ್ಟಿಗೆ ಚನ್ನಾಗಿ ಪ್ರಕಟವಾಗಿರುವವು, ಅವುಗಳಲ್ಲಿ ಯಾವ ಯಾವ ಅಲಂಕಾರಗಳು ಉಪಯೋಗಿಸಲ್ಪಟ್ಟಿರುವವು ಈ ಮುಂತಾದ ವಿಷಯಗಳನ್ನು ಲಕ್ಷಿಸಲಿಕ್ಕೆಬೇಕು. ವಚನಗಳನ್ನು ಬೇರೆ ಬೇರೆ ದೃಷ್ಟಿಯಿಂದ ವಿಂಗಡಿಸಬಹುದು. ಉದಾ: ಷಟ್‌ಸ್ಥಲದೃಷ್ಟಿಯಿಂದ, ಸಾಮಾನ್ಯವೇದಾಂತ ಮತ್ತು ಅದರ ಸಾಧನಮಾರ್ಗ ಈ ದೃಷ್ಟಿಯಿಂದ, ಇತ್ಯಾದಿ. ಈ ಎರಡು ದೃಷ್ಟಿಯಿಂದ ಹೇಗೆ ವಿಗಂಡಿಸಬೇಕು ಇದನ್ನು ತಿಳಿದುಕೊಳ್ಳಬೇಕಾದರೆ, ಷಟ್‌ಸ್ಥಲದೃಷ್ಟಿಯಿಂದ ವಿಂಗಡಿಸಲ್ಪಟ್ಟ ವಚನ ಶಾಸ್ತ್ರಸಾರ ಹಾಗೂ ವಚನಶಾಸ್ತ್ರರಹಸ್ಯದ ಮೊದಲನೆಯ ಭಾಗವಾದ ವಚನಾಮೃತ, ಇವುಗಳನ್ನು ಕ್ರಮವಾಗಿ ನೋಡಬೇಕು. ಆದರೆ ಇಲ್ಲಿ ವಿಷಯಕ್ಕಿಂತ ವಚನಗಳ ರೂಪದ ಕಡೆಗೆ ನಮ್ಮ ಲಕ್ಷ್ಯವು ಹೆಚ್ಚು ಇರುವುದರಿಂದ ನಾವು ಕೆಳಗಿನಂತೆ ಮೂರನೆಯ ಒಂದು ಬಗೆಯಿಂದ ಅವುಗಳನ್ನು ವಿಂಗಡಿಸಿರುವೆವು. ವಚನಗಳಲ್ಲಿಯ ವಿಷಯ ಮತ್ತು ರೀತಿ ಇವೆರಡನ್ನು ಪ್ರತ್ಯೇಕವಾಗಿ ಇಲ್ಲವೆ ಎರಡನ್ನೂ ಕೂಡಿ ನೋಡಿ ಅವುಗಳನ್ನು ಸೂತ್ರಾತ್ಮಕ, ವರ್ಣನಾತ್ಮಕ, ಉಪದೇಶಾತ್ಮಕ, ಪ್ರಾರ್ಥನಾತ್ಮಕ, ಸತಿಪತಿಭಾವಾತ್ಮಕ, ನಿರುಕ್ತಾತ್ಮಕ, ಗೂಢಾತ್ಮಕ, ಮತ್ತು ಆತ್ಮಗತ, ಎಂದು ವಿಂಗಡಿಸಬಹುದು.

(೧) ನಿರ್ದುಷ್ಟವಾದ ಅಲ್ಪ ಶಬ್ದಗಳಲ್ಲಿ ವಿಷಯಸಾರವನ್ನೊಳಗೊಂಡ ಅರ್ಥವನ್ನು ಅಸಂದಿಗ್ಧವಾಗಿ ಹೇಳತಕ್ಕ ವಾಕ್ಯವೆ ಅಥವಾ ಪದ ಸಮೂಹವೆ ಸೂತ್ರವೆನಿಸುವದು. ವಚನಗಳಲ್ಲಿ ಅಂಥವು ಎಷ್ಟೋ ಇರುವವು. ಹಲವು ವಚನಭಾಗಗಳು ಅಥವಾ ಎಷ್ಟೋ ಸಾರೆ ವಚನಗಳಲ್ಲಿಯ ಒಂದೊಂದು ವಾಕ್ಯಗಳು ಹೀಗೆ ಸೂತ್ರದಂತೆ ಇರುವವು.... ಆಸೆಯೆ ದಾಸತ್ವ, ನಿರಾಸೆಯೆ ಈಶತ್ವ. ದಾಸತ್ವದ ಈಶತ್ವದ ಈ ಅನುವ ವಿಚಾರಿಸಿ ನಿರಾಸೆಯಾಗಿಪ್ಪುದೆ ಈಶಪದವಯ್ಯ (ವ. ೧೧೯); ಉದ್ದನೇರುವುದಕ್ಕೆ ಗದ್ದುಗೆ ಇಲ್ಲದೆ ಎಯ್ದಬಾರದು. ಚಿದ್ರೂಪವನರಿವುದಕ್ಕೆ ಅರ್ಚನೆ ಪೂಜನೆ ನಿತ್ಯನೇಮವಿಲ್ಲದೆ ಕಾಣಬಾರದು. ಅದನು ಸತ್ಯದಿಂದ ಮಾಡಿ ಅಸತ್ಯವ ಮರೆದಡೆ ಇದೇ ಸತ್ಯ ನಾಸ್ತಿನಾಥಾ (ವ. ೧೮೨); ಹಸಿವಿಂಗೆ ಲಯವಿಲ್ಲ, ವಿಷಯಕ್ಕೆ ಕಾಲವಿಲ್ಲ.... (ವ. ೧೫೮); ಹೀಗೆ ಬಹಳ ಹೇಳಬಹುದು, ಇವಲ್ಲದೆ, ಆತ್ಮನಿಶ್ಚಯವಾದಲ್ಲಿಯೆ ಕೈಲಾಸ (೨೪೦), ತನ್ನ

ತಾನರಿದಡೆ ತನ್ನರಿವೆ ಗುರು (೨೩೦), ಇಂಥ ವಾಕ್ಯಗಳೂ ವಚನಗಳಲ್ಲಿ ನಮಗೆ ಎಷ್ಟೋ ದೊರೆಯುವವು. ಈ ವಾಕ್ಯಗಳಲ್ಲಿಯ ಒಂದೊಂದನ್ನು ಕುರಿತು ಒಂದೊಂದು ಗ್ರಂಥವನ್ನು ಬರೆಯಬಹುದು. ಇಷ್ಟೊಂದು ಅವುಗಳ ಅರ್ಥವಿಸ್ತಾರವಿರುವದು.

(೨) ಯಾವದೊಂದು ಮಾತನ್ನು ವರ್ಣಿಸಿದ ವಚನಗಳೆ ವರ್ಣನಾತ್ಮಕವೆನಿಸುವವು. ಇಂಥವು ತೀರಕಡಿಮೆ. ಯಾಕಂದರೆ, ವರ್ಣನೆ ಮಾಡುತ್ತ ಕೂಡುವದು ವಚನಕಾರರಿಗೆ ಅಷ್ಟೊಂದು ಪ್ರಿಯವಿರಲಿಲ್ಲ. ಪ್ರಸಂಗತಃ ಅಲ್ಲಿಯೊಂದು ಇಲ್ಲಿಯೊಂದು ಹೀಗೆ ವರ್ಣನಾತ್ಮಕ ವಚನಗಳಿವೆ. ಶೂನ್ಯ ಸಂಪಾದನೆಯಲ್ಲಿ ಚನ್ನಬಸವನು ಮಾಡಿದ ಕಲ್ಯಾಣದ ವರ್ಣನೆ, ಅಲ್ಲಮನು ಮಾಡಿದ ಬಸವನ ಮಹಾಮನೆಯ ವರ್ಣನೆ, ಇವೇ ವರ್ಣನಾತ್ಮಕ ವಚನಗಳ ಉದಾಹರಣೆಗಳೆನ್ನಬಹುದು. ಇನ್ನು ಪರಮಾತ್ಮನ ವರ್ಣನಪರ ವಚನಗಳನ್ನು ಇಲ್ಲವೆ ಸಿದ್ಧ ಸ್ಥಿತಿಯ ವರ್ಣನೆಗಳನ್ನು ಇದೇ ಗುಂಪಿನಲ್ಲಿ ನಾವು ಸೇರಿಸಿದರೆ, 'ಪಾತಾಳದಿಂ ಕೆಳಗೆ ಪಾದ.... (ವ. ೪), 'ಸರ್ವಾತ್ಮ ಚೈತನ್ಯವಪ್ಪ.... (ವ. ೫೧೭) ಇವು ಅಂಥ ವಚನಗಳ ಉತ್ತಮ ಉದಾಹರಣಗಳಾಗಬಲ್ಲವು. ಆದರೆ ಒಟ್ಟು ನೋಡಿದರೆ, ವಚನಪದ್ಧತಿಗೆ ವರ್ಣನೆಗಳು ಅಷ್ಟೊಂದು ಸಲ್ಲುವುದಿಲ್ಲವೆಂದೆ ಹೇಳಬೇಕಾಗುವದು.

(೩) ಯಾವ ವಚನಗಳ ಮುಖಾಂತರ ಜನರಿಗೆ ಉಪದೇಶವು ಮಾಡಲ್ಪಟ್ಟಿರುವದೊ ಅವು ಉಪದೇಶಾತ್ಮಕವೆನಿಸುವವು. ವಚನಾಮೃತದಲ್ಲಿಯ ಳಳಖ, ಳಳಒ, ೯೯ ಈ ಮುಂತಾದ ವಚನಗಳು ಉಪದೇಶಾತ್ಮಕವಿರುವವು. ವಿವೇಚನೆಯನ್ನು ಮಾಡಹೋಗದೆ ವಿಧಿಯುಕ್ತ ವಾಕ್ಯಗಳಿಂದ ಉಪದೇಶಮಾಡುವದು ವಚನಪದ್ಧತಿಗೆ ಯೋಗ್ಯವೆ ಕಾಣುವದು.

(೪) ಯಾವುದರಲ್ಲಿ ದೇವರ ಪ್ರಾರ್ಥನೆ ಇರುವದೊ ಅದು ಪ್ರಾರ್ಥನಾತ್ಮಕವು. ಇಂಥ ವಚನಗಳು ಹೇರಳವಾಗವೆ ಮತ್ತು ಭಕ್ತಿರಸದಿಂದ ತುಂಬಿವೆ. ವಚನಾಮೃತದಲ್ಲಿ ೧೭೭, ೧೮೦, ೪೮೪, ೯೯೦ ಇವು ಪ್ರಾರ್ಥನಾತ್ಮಕ ವಚನಗಳ ಒಳ್ಳೆ ಉದಾಹರಣೆಗಳಿರುವವು.

(೫) ದೇವರೆ ಪತಿ ಭಕ್ತನೆ ಸತಿ ಎಂಬ ಭಾವದಿಂದ ಬರೆಯಲ್ಪಟ್ಟ ವಚನಗಳೆಲ್ಲ ಸತಿಪತಿಭಾವದ ವಚನಗಳು. ವಚನಶಾಸ್ತ್ರಸಾರದಲ್ಲಿ ಇಂಥ ವಚನಗಳೆಲ್ಲ ಆ ಶಿರೋನಾಮದ ಕೆಳಗೆ ಅಚ್ಚುಹಾಕಲ್ಪಟ್ಟಿವೆ. ವಚನಾಮೃತದಲ್ಲಿಯ ೫೪, ೫೯, ೬೦, ೧೪೭ ಈ ಮುಂತಾದ ವಚನಗಳು ಸತಿಪತಿಭಾವ

ವನ್ನು ಚನ್ನಾಗಿ ವ್ಯಕ್ತಗೊಳಿಸುವವು. ಸತಿಪತಿಗಳ ಅತ್ಯಂತ ನಿಕಟ ಮತ್ತು ಪ್ರೇಮಮಯ ಸಂಬಂಧವು ಅನಂತ ವಿವಿಧ ಭಾವತರಂಗಗಳ ಉಗಮ ಸ್ಥಾನವಿರುವದು. ಆ ಭಾವಗಳನ್ನು ವಚನಕಾರರು ಈ ಬಗೆಯ ವಚನಗಳಲ್ಲಿ ಪ್ರಕಟಮಾಡಿರುವರು. ಶರಣನೆ ಸತಿ ಲಿಂಗವೆ ಪತಿ, ಎಂದು ವಚನಗಳಲ್ಲಿ ಎಷ್ಟೋ ಕಡೆಗೆ (ಬ. ೧೧೨) ಉಲ್ಲೇಖವಿರುವದು. ಈ ರೂಪಕವನ್ನೆ ಹಿಗ್ಗಿಸಿ, ವಿಸ್ತರಿಸಿ ಬರೆದರೆ ಸತಿಪತಿಭಾವವು ತಲೆದೋರುವದು.

(೬) ನಿರುಕ್ತವೆಂದರೆ ಯಾವದೊಂದು ಶಬ್ದದ ವ್ಯುತ್ಪತ್ತಿಯು. ಶಬ್ದಗಳ ವ್ಯುತ್ಪತ್ತಿಯನ್ನು ಕೊಡುವ ಯತ್ನವು ಯೂಪ ವಚನಗಳಲ್ಲಿ ಮಾಡಲ್ಪಟ್ಟಿರುವದೊ ಅವೇ ನಿರುಕ್ತಾತ್ಮಕ ವಚನಗಳು. ವಚನಗಳಲ್ಲಿ ಮಾಡಲ್ಪಟ್ಟ ಈ ಬಗೆಯ ಪ್ರಯತ್ನವು ಭಾಷಾಶಾಸ್ತ್ರ, ವ್ಯುತ್ಪತ್ತಿಶಾಸ್ತ್ರ, ಇಲ್ಲವೆ ವ್ಯಾಕರಣಶಾಸ್ತ್ರ ಇವುಗಳನ್ನು ಯಾವಾಗಲೂ ಅನ್ವಯಿಸಿಯೆ ಇರುವುದೆಂದು ಹೇಳಲಾಗುವುದಿಲ್ಲ. ಈ ಪ್ರಯತ್ನವು ಎಷ್ಟೋ ಸಾರೆ ಕಾಲ್ಪನಿಕವಿರುವದು. ಶಬ್ದಗಳಲ್ಲಿಯ ಅಕ್ಷರಗಳಿಗೆ ತಮಗೆ ಇಷ್ಟವಿದ್ದ ಅರ್ಥವನ್ನು ಕಲ್ಪಿಸಿ, ವ್ಯುತ್ಪತ್ತಿ ಹಚ್ಚಿದಂತೆ ಮಾಡಿ, ಆ ಶಬ್ದಗಳ ಅರ್ಥವನ್ನು ಮಾಡಲೆತ್ನಿಸಿದ ವಚನಗಳು ನಿರುಕ್ತಾತ್ಮಕವೆನಿಸುವವು. ಈ ಮಾದರಿಯ ವಚನಗಳು ಬಹಳ ವಿಲ್ಲ. ಉದಾ– 'ಲಿಂಗ' ಇದರ ನಿರುಕ್ತವನ್ನು, ಲಿಕಾರವೆ ಶೂನ್ಯ, ಬಿಂದುವೆ ಲೀಲೆ, ಗಕಾರವೆ ಚಿತ್ತು, ಎಂದು ಒಂದು ವಚನದಲ್ಲಿ (ಶೂ. ೨೦೩) ಚನ್ನ ಬಸವನು ಹೇಳಿರುವನು. ಈ ಪದ್ಧತಿಯು ಉಪನಿಷತ್ತುಗಳಲ್ಲಿಯೂ ಆಗಮುಗಳಲ್ಲಿಯೂ ಕಂಡುಬರುವದು.

(೭) ಯಾವ ವಚನಗಳ ಅರ್ಥವು ಒಗಟಿನಂತೆ ಗೂಢವಿರುವದೊ ಅವು ಗೂಢಾತ್ಮಕವೆನಿಸುವವು. ವಚನಶಾಸ್ತ್ರದಲ್ಲಿ ಉಪಲಬ್ಧವಿದ್ದ ಮುಂಡಿಗೆಗಳೆಲ್ಲ ಗೂಢಾತ್ಮಕ ವಚನಗಳು ಎಂದು ಹೇಳಬಹುದು. ಇಂಥ ವಚನಗಳ ಸಂಖ್ಯೆಯು ಸಣ್ಣದಿಲ್ಲ. ವಿಶೇಷವಾಗಿ ಅಲ್ಲಮನ ವಚನಗಳಲ್ಲಿ ಇಂಥ ಮುಂಡಿಗೆಗಳು ಬಹಳ. ಅದೇ ರೀತಿ ಹಡಪದಪ್ಪಣ್ಣನ ವಚನಗಳಲ್ಲಿ ಮತ್ತು, ಕಡಿಮೆ ಪ್ರಮಾಣದಿಂದ ಇನ್ನಿತರರ ವಚನಗಳಲ್ಲಿ ಏನಿಲ್ಲೆಂದರೂ ಹಲವು ಮುಂಡಿಗೆಗಳಾದರೂ ಇದ್ದೇ ಇರುವವು. ಸಾಂಪ್ರದಾಯ ಪರಂಪರೆಯಲ್ಲಿ ಚನ್ನಾಗಿ ಸುರಿತವರಿ ಅವುಗಳನ್ನು ಸರಿಯಾಗಿ ತಿಳಿದುಕೊಳ್ಳಬಲ್ಲರು 'ರಕ್ಕಸಿಗಿಬ್ಬರು ಮಕ್ಕಳು....(ಪ್ರ. ೧೨), ಕೋಣನ ಕೋಡಿನ ತುದಿಯಲ್ಲಿ.... (ಪ್ರ. ೨೯), 'ಐದು ಬಣ್ಣದ ಗಿಡವಿಂಗೆ....(ಪ್ರ. ೧೫), 'ಮೂರುಪುರದ ಹೆಬ್ಬಾಗಿಲೊಳಗೊಂದು.... (ಪ್ರ. ೧೦೪), ಈ

ಮುಂತಾದವುಗಳು ಗೂಢಾತ್ಮಕ ವಚನಗಳು. ಪ್ರಭುದೇವರ ವಚನ ' ಎಂಬ ಗ್ರಂಥದ 'ಪ್ರಾಣಲಿಂಗಿಸ್ಥಲ ' ಪ್ರಕರಣದ ೧೧೦–೧೫೦ ವಚನಗಳು ಒಗಟುಗಳಂತೆಯೆ ಇರುವವು. ಅವುಗಳಲ್ಲಿ ಮಂದರಗಿರಿ ಕೋಡು ಅಂದರೆ ಬ್ರಹ್ಮರಂಧ್ರವು, ತಾಳಮರ ಅಂದರೆ ತನುವು, ಐದು ಕಂದುರೆ ಅಂದರೆ ಪಂಚ ಪ್ರಾಣಗಳು, ಉದಕದೊಳಗೆ ಕಿಚ್ಚು ಹುಟ್ಟುವದು ಅಂದರೆ ಮನಸಿನಲ್ಲಿ ಜ್ಞಾನ ಹುಟ್ಟುವದು, ಮೃಗ ಅಂದರೆ ಜೀವ ಇತ್ಯಾದಿ. ಅನೇಕ ವಚನಗಳಲ್ಲಿ ಎಲ್ಲಿಯಾದರೂ ಇಂಥ ಒಂದೆರಡು ವಚನಗಳಿದ್ದರೆ ಚಂದ. ಇಲ್ಲದಿದ್ದರೆ ಅವು ಬೇಸರಾಗಿ ಹೋಗುವವು. ಬಹಳ ಸಾರೆ ಒಂದು ಬಗೆಯ ಗೂಢತೆಯ ಹೊರತು ಅವುಗಳಲ್ಲಿ ಎರಡನೆಯ ಸ್ವಾರಸ್ಯವೇನೂ ಇರುವದಿಲ್ಲವೆಂದು ಹೇಳಬಹುದು.

(೮) ಆತ್ಮನಿರೀಕ್ಷಣೆಯನ್ನು ಇಲ್ಲವೆ ಆತ್ಮಬೋಧವನ್ನು ಒಳಗೊಂಡ ವಚನಗಳು ಆತ್ಮಗತವೆನಿಸುವವು. ಇಂಥ ವಚನಗಳು ಬಹಳ ವಿಲ್ಲದಿದ್ದರೂ ಅವು ವಿಶೇಷ ಮಹತ್ವವುಳ್ಳವುಗಳಿರುವವು. ಯಾಕಂದರೆ, ಅವುಗಳ ಮುಖಾಂತರ ನಾವು ವಚನಕಾರರ ಹೃದಯಮಂದಿರದ ಗರ್ಭಗುಡಿಯಲ್ಲಿ ಹಣಿಕಿ ನೋಡಬಲ್ಲೆವು. ಇದೇನು ಸಣ್ಣ ಮಾತಲ್ಲ. ತನ್ನ ವಿಚಾರಿಸಲೊಲ್ಲದು....(ಬ. ೭), ಎಳ್ಳಿಲ್ಲದ ಗಾಣವನಾಡಿದ..(೫೮), ಹರಿವ ಹಾವಿಂಗಂಜೆ..(೪೧೧), ಇವು ಆತ್ಮಗತ ವಚನಗಳ ಉದಾಹರಣಗಳಿರುವವು.

೧೬೨. ಮನುಷ್ಯನ ವಿಚಾರ ಹಾಗೂ ಭಾವಗಳನ್ನು ಸ್ಪಷ್ಟವಾಗಿ ಎರಡನೆಯವರಿಗೆ ತಿಳಿಯುವಂತೆ ವ್ಯಕ್ತಮಾಡುವುದೆ ಭಾಷೆಯ ಉದ್ದೇಶವಿರುವದು. ಅವುಗಳನ್ನು ಆದಷ್ಟು ಮನೋವೇಧಕರೀತಿಯಿಂದ ವ್ಯಕ್ತಮಾಡಿದ ಭಾಷಾರೂಪವೆ ಸಾಹಿತ್ಯ ಅಥವಾ ವಾಙ್ಮಯವೆನಿಸುವದು. ಅಂದಿನಿಂದ ಇಂದಿನವರೆಗೆ ವಚನಕಾರರು ಬರೆದ ವಚನಗಳ ಸಂಗ್ರಹಕ್ಕೆ ನಾವು 'ವಚನವಾಙ್ಮಯ' ಎಂದು ಅನ್ವರ್ಥ ಕಾರಣವೇನಂದರೆ, ಅವರು ತಮ್ಮ ಉಚ್ಚವಾದ ವಿಚಾರಗಳನ್ನೂ ಭಾವಗಳನ್ನೂ ಮನೋವೇಧಕ ರೀತಿಯಿಂದ ಈ ವಚನಗಳಲ್ಲಿ ವ್ಯಕ್ತಗೊಳಿಸಿರುವರು. ಮನುಷ್ಯನ ಹೃದಯಸಾಗರದಲ್ಲಿ ಕ್ಷಣಕ್ಷಣ ಏಳುವ ಅನಂತ ಕಲ್ಪನಾತರಂಗಗಳು, ವಿವಿಧ ವಿಚಾರಲಹರಿಗಳು, ಬಲವಾದ ಭಾವೋದ್ರೇಕಗಳು ಅವ್ಯಕ್ತವಾದವುಗಳೂ ಅಸ್ಪಷ್ಟವಾದವುಗಳೂ ಅಜ್ಞೇಯವಾದವುಗಳೂ ಇರುವವು. ಅವು ಇತರರಿಗೆ ಅಜ್ಞೇಯವಿರುವವು, ಇಷ್ಟೇ ಅಲ್ಲ. ಸ್ವಂತ ನಮ್ಮ ಭಾವಗಳು ಮತ್ತು ವಿಚಾರಗಳು

ಶಬ್ದಸ್ವರೂಪವನ್ನು ತಾಳುವವರೆಗೆ ನಮಗೆ ಕೂಡ ಅಸ್ಪಷ್ಟವೆ ಇರುವವು. ಆದುದರಿಂದ ನಮ್ಮ ಚಿತ್ತವೃತ್ತಿಗಳು ವ್ಯಕ್ತ, ಸ್ಪಷ್ಟ, ಮತ್ತು ಮನೋವೇಧಕವಾಗಿ ನಮ್ಮ ತಿಳಿವಳಿಕೆ ಎಂಬ ಕನ್ನಡಿಯಲ್ಲಿ ಪ್ರತಿಬಿಂಬಿತವಾಗಬೇಕಾಗಿದ್ದರೆ ಅವು ಶಬ್ದಾಂಬರವನ್ನುಟ್ಟು, ಉಪಮಾದಿ ಅಲಂಕಾರಗಳನ್ನಿಟ್ಟುಕೊಂಡು, ಗದ್ಯಗತಿಯಿಂದ ಇಲ್ಲವೆ ತಾಲಬದ್ಧ ಪದ್ಯಪದ್ಧತಿಯಿಂದ ಒನಪುಒಯ್ಯಾರಗಳೊಡನೆ ನಮ್ಮೆದುರಿಗೆ ನಟಿಸಲಿಕ್ಕೆ ಬೇಕು. ಯಾವದೊಂದು ವಾಙ್ಮಯರೂಪದ ಇಲ್ಲವೆ ಗ್ರಂಥದ ಉದ್ದೇಶವು ಸಫಲವಾಗಿದೆಯೊ ಇಲ್ಲವೊ ಇದನ್ನು ಪರೀಕ್ಷಿಸಬೇಕಾಗಿದ್ದರೆ ಅದು ಲೇಖಕನ ಭಾವಗಳನ್ನೂ ವಿಚಾರಗಳನ್ನೂ ಓದುಗರಿಗೆ ಚನ್ನಾಗಿ, ವ್ಯಕ್ತವಾಗಿ, ಸ್ಪಷ್ಟವಾಗಿ, ಮತ್ತು ಮನೋವೇಧಕ ರೀತಿಯಿಂದ ತಿಳಿಸುವದೊ ಇಲ್ಲವೊ ಇದನ್ನು ನೋಡತಕ್ಕದ್ದು. ಇಲ್ಲಿ ನಾವು ವಚನವಾಙ್ಮಯವನ್ನು ವಿಚಾರಿಸುತ್ತಿರುವುದರಿಂದ ವಚನಕಾರರ ಭಾವಗಳೂ ವಿಚಾರಗಳೂ ವಚನಗಳಲ್ಲಿ ಯಾವ ರೀತಿ ಮತ್ತು ಎಷ್ಟರ ಮಟ್ಟಿಗೆ ಸುಂದರವಾಗಿ ವ್ಯಕ್ತವಾಗಿರುವವು, ಇದನ್ನು ನೋಡುವದು ಅವಶ್ಯವಿರುವದು. ವಚನಕಾರರು ಸಾಹಿತಿಗಳಲ್ಲ, ಸಾಹಿತ್ಯದ ಸಶಾಸ್ತ್ರ ಅಭ್ಯಾಸಮಾಡಿದವರೂ ಅಲ್ಲ. ಉತ್ತಮ ಸಾಹಿತ್ಯವನ್ನು ನಿರ್ಮಾಣ ಮಾಡಬೇಕೆಂಬ ಹವಣುಳ್ಳವರೂ ಅಲ್ಲ. ಅವರು ಅಹರ್ನಿಶ ತಮ್ಮಂತರದಲ್ಲಿ ಸತ್ಯವನ್ನು ಶೋಧಿಸುತ್ತಿರುವ ಸಾಧಕರು, ಕಂಡ ಸತ್ಯದಂತೆ ನಡೆಯಲೆತ್ನಿಸುವ ವೀರರು, ನಡೆದ ಸತ್ಯವನ್ನು ಸರಲವಾಗಿ ನುಡಿದು ಅನ್ಯರಿಗೆ ಸರಿಯಾದ ದಾರಿತೋರುವ ಧೀರರವರು. ವಿರಹಿಣಿಯು ತನ್ನ ನಲ್ಲನನ್ನು ಆತುರದಿಂದ ಅರಸುವಂತೆ ಸತ್ಯದೇವತೆಯನ್ನು ಅರಸಿ ಅರಸಿ, ತಮ್ಮಂತರಂಗವನ್ನು ಆಗಿದು ಆಗಿದು, ಅನುಭಾವ ಪಡೆದು, ಸ್ಫೂರ್ತಿಗೊಂಡು ತಮ್ಮ ಪ್ರತೀತಿಯನ್ನು ಉಸುರಿದ ಶರಣಶಿರೋಮಣಿಗಳವರು. ಪಂಡಿತರಂತೆ, ತಾರ್ಕಿಕರಂತೆ, ನ್ಯಾಯನಿಪುಣರಂತೆ, ಅವರು ಯಾವುದನ್ನೂ ವಿವೇಚಿಸತೊಡಗಿಲ್ಲ ಅಥವಾ 'ಇತಿ ಸಿದ್ಧಂ' ಎಂದು ಸಿದ್ಧಮಾಡುತ್ತ ಕೂಡುವ ಗೋಜಿಗೆ ಹೋಗಿಲ್ಲ. ತಾವು ಕಂಡು ಆನಂದಪಟ್ಟ, ತಾವು ನಡೆದು ಶುಚಿಯಾದ, ಸತ್ಯಮಾರ್ಗವನ್ನು ಸರ್ವಸಾಮಾನ್ಯ ಜನಸಮಾಜಕ್ಕೆ ತಿಳಿಸಿ ತೋರಿಸಿಕೊಡುವುದೆ ಅವರ ಉದ್ದೇಶವಾಗಿತ್ತು. ಆ ಅವರ ಉದ್ದೇಶವು ವಚನಗಳ ಮುಖಾಂತರ ಉತ್ತಮರೀತಿಯಿಂದ ಸಫಲವಾಗಿರುವದು. ಅಲ್ಲಲ್ಲಿರುವ ಮುಂಡಿಗೆಗಳನ್ನು ಅಥವಾ ಬಿಗಿಯಾದ ಹಲವು ವಚನಗಳನ್ನು ಬಿಟ್ಟುಕೊಟ್ಟರೆ ಸಾಮಾನ್ಯವಾಗಿ ಎಲ್ಲ ವಚನಗಳು ಸರಲ, ಸುಲಭ, ಸ್ಪಷ್ಟ, ಮತ್ತು ಮನೋ

ವೇಧಕವಿರುವವು. ಬಿಡಿಬಿಡಿಯಾಗಿ ಒಂದೊಂದು ವಚನವು ಒಂದೊಂದೆ ವಿಷಯವನ್ನು ಹೇಳಿಬಿಡುವುದರಿಂದ ಬೇಸರಾಗದೆ ಮುದ್ರೆಯೊತ್ತಿದಂತೆ ಅವು ಮನಸಿನ ಮೇಲೆ ಒಮ್ಮೆಲೆ ಪರಿಣಾಮಮಾಡುವವು; ಮತ್ತು ನೆನಪಿನಲ್ಲಿಡಲು ಸುಲಭ ಹಾಗೂ ಯೋಗ್ಯವಿರುವವು. ಅಲ್ಲಿ ಇಲ್ಲಿ ಎಲ್ಲಿಯಾದರೂ ಆಗಮಾದಿಗಳ ವಾಕ್ಯಗಳಿದ್ದರೂ ಅವುಗಳ ಅರ್ಥವು ಬಹುಶಃ ಆಯಾ ವಚನಗಳಲ್ಲಿಯೆ ಕೊಡಲ್ಪಟ್ಟಿದ್ದರಿಂದ ಓದುಗರಿಗೆ ಸಂಸ್ಕೃತ ಜ್ಞಾನದ ಅವಶ್ಯಕತೆಯಿಲ್ಲವೆಂದೆ ಹೇಳಬಹುದು. ಪುರಾಣಪುಣ್ಯಕಥೆಗಳೊಳಗಿನ ಸಂದರ್ಭಗಳೂ ತೀರ ಕಡಿಮೆ ಇರುವುದರಿಂದ ವಚನಗಳ ತಿರುಳು ಚನ್ನಾಗಿ ತಿಳಿಯಲಿಕ್ಕೆ ಅವುಗಳ ಜ್ಞಾನವೂ ಅವಶ್ಯವಿಲ್ಲ. ವಚನಗಳಲ್ಲಿ ಸಿರಿಯಾಳ ಮುಂತಾದ ಪುರಾತನರ ಮತ್ತು ಅನ್ಯ ಶರಣರ ಉಲ್ಲೇಖವು ಮೇಲಿಂದಮೇಲೆ ಬರುವದು. ಅವರ ಕಥೆಗಳು ಗೊತ್ತಿಲ್ಲದಿದ್ದರೂ ಅರ್ಥಬೋಧವಾಗಲಿಕ್ಕೆ ಅಷ್ಟೊಂದು ಅಡ್ಡಿಯಾಗುವುದಿಲ್ಲ. ಈ ರೀತಿ, ವಚನಗಳನ್ನು ಓದಿ ತಿಳಿದುಕೊಳ್ಳಲಿಚ್ಛಿಸುವವನಿಗೆ ಕನ್ನಡ ಭಾಷೆಯ ಸಾಮಾನ್ಯಜ್ಞಾನ, ಸಾಮಾನ್ಯ ತಿಳಿವಳಿಕೆ, ಮತ್ತು ನಿಜಧರ್ಮವನ್ನರಿತುಕೊಳ್ಳುವ ಲವಲವಿಕೆ ಇಷ್ಟು ಇದ್ದರೆ ಸಾಕು. ಇನ್ನು ವೀರಶೈವಮತದ ಜ್ಞಾನ, ಷಟ್‌ಸ್ಥಲವಿವೇಕ ಮುಂತಾದವುಗಳು ಗೊತ್ತಿದ್ದರೆ 'ಅಧಿಕಸ್ಯಾಧಿಕಂ ಫಲಂ,' ಎಂಬ ನ್ಯಾಯದಿಂದ ವಚನಗ್ರಂಥಗಳು ಮತ್ತಷ್ಟು ಸ್ಪಷ್ಟವಾಗಿ ತಿಳಿಯುವವು. ವಚನಗಳು ಚಿಕ್ಕವಿದ್ದರೂ ಅವುಗಳ ತೇಜವು ಅಜ್ಞಾನತಿಮಿರವನ್ನು ನಾಶಪಡಿಸಿ, ಲೀಲೆಯಿಂದ ಸಂದೇಹದ ಮುಸುಕನ್ನು ಸೆಳೆದೊಗೆದು, ಓದುವವನ ಅಂತಃಕರಣದಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗಿಸುವದು, ಕೇವಲ ಲೌಕಿಕ ವಿಷಯಗಳನ್ನು ವರ್ಣಿಸುವ ಕಾವ್ಯಗಳಲ್ಲಿರುವ ಕಾಲಹಾರಕ ಮನೋಹರತೆಯು ಇವುಗಳಲ್ಲಿರಲಿಕ್ಕಿಲ್ಲ. ಲಲಿತ, ಮಧುರ, ಗಾನಮಯಪದಗಳಲ್ಲಿರುವ ಮೋಹಕ ಬೆಡಗು ಇವುಗಳಲ್ಲಿರಲಿಕ್ಕಿಲ್ಲ. ಆದರೆ ಉತ್ಕಟ ಈಶ್ವರಪ್ರೇಮದಿಂದ, ಸತ್ಯಪ್ರೀತಿಯಿಂದ, ಪ್ರೇರಿತರಾದ ಭಕ್ತಗಣಗಳ ಮನಗಳನ್ನು ಆಕರ್ಷಿಸುವ ಒಂದು ಬಗೆಯ ಉಚ್ಚವಾದ ಭಾವಭಾಷೆಗಳ ಸೌಂದರ್ಯವು ಅವುಗಳಲ್ಲಿದೆ ಮತ್ತು ಅದು ಜನಮನದಲ್ಲಿ ನವಜೀವನವನ್ನುಂಟುಮಾಡುತ್ತಿದೆ. ಈ ವಾಙ್ಮಯವು ಅಂಥ ಮನೋವೃತ್ತಿಯುಳ್ಳವರನ್ನು ತನ್ನ ಕಡೆಗೆ ಯಾವಾಗಲೂ ಸೆಳೆದುಕೊಳ್ಳುವುದೆಂಬಲ್ಲಿ ಏನೂ ಸಂಶಯವಿಲ್ಲ.

೧೬೩. ವಚನಕಾರರು ತಮ್ಮ ವಚನಗಳಲ್ಲಿ ಬಗೆಬಗೆಯ ಉಚ್ಚ ವಿಚಾರಗಳನ್ನು ವಿವಿಧ ಭಾವಗಳನ್ನು ಸ್ಪಷ್ಟವಾಗಿ ಮತ್ತು ಸುಂದರವಾಗಿ

ವ್ಯಕ್ತಗೊಳಿಸಿರುವರು. ಅವ್ಯಕ್ತ ಪರಮಾತ್ಮನ ಸ್ವರೂಪವರ್ಣನೆಯಂಥ ಅತಿಶಯ ಕಠಿಣ ವಿಷಯವನ್ನು ಮೊದಲುಗೊಂಡು (ವ. ೧–೩೨) ದೇವರ ನಾಮದ ಜಪವನ್ನು ಮಾಡಬೇಕು, ಎಂಬ ಸಾಮಾನ್ಯ ಉಪದೇಶದ ಮಾತಿನ ವರೆಗೆ (ಬ. ೧೨), ಪರಮಾಸುಭಾವ (೬೦–೬೬), ನೀತಿ (೪೩೩, ೫೬೧), ಸರ್ವಾರ್ಪಣ (೧೯೧, ೧೯೪, ೧೯೮, ೨೧), ಭಕ್ತಿ (೨೫೮, ೨೫೯, ೨೭೭, ೨೭೮,) ಜ್ಞಾನ (೨೨೦, ೨೨೭, ೨೩೦, ೨೩೭, ೨೫೦), ಕರ್ಮ (೩೦೭, ೩೧೦, ೩೧೧) ಇತ್ಯಾದಿ ಅನೇಕ ಮಹತ್ವದ ವಿಷಯಂಗಳನ್ನು ಕುರಿತು ತಮ್ಮ ವಿಚಾರಗಳನ್ನು ಅವರು ಚನ್ನಾಗಿ ವ್ಯಕ್ತಗೊಳಿಸಿರುವರು. ವಚನ ಶಾಸ್ತ್ರಸಾರದ ಮೊದಲನೆಯ ಭಾಗದ (ಆವೃತ್ತಿ ೧) ಪುಟ ೧–೩೨ ರಲ್ಲಿ ಇರುವ ಪರಮಾತ್ಮನ ಸಾಂಗೋಪಾಂಗ ವರ್ಣನೆಯು ವೇದಾಗಮ, ಗೀತೆ, ಉಪನಿಷತ್ತು ಮುಂತಾದ ಗ್ರಂಥಗಳಲ್ಲಿ ಬಂದ ಪರಮಾತ್ಮನ ವರ್ಣನೆಗಿಂತ ಯಾವ ರೀತಿಯಿಂದಲೂ ಕಡಿಮೆ ತರಹದ್ದಿಲ್ಲ. ಅದೇ ರೀತಿ ಧರ್ಮ, ನೀತಿ, ಮುಕ್ತಿ, ಮುಂತಾದವುಗಳನ್ನು ವಿವರಿಸುವ ವಚನಗಳೂ ಅತ್ಯಂತ ಸ್ಪಷ್ಟವಾದವುಗಳೂ ಮನೋವೇಧಕವಾದವುಗಳೂ ಇರುವವು. ಇನ್ನು ವಚನಗಳಲ್ಲಿಯ ಭಾವ ವ್ಯಕ್ತಿಯಾದರೂ ಇಷ್ಟೇ ಸ್ಪಷ್ಟವೂ ಮನೋಹರವೂ ಇರುವದು. ವೀರಭಾವ (೫೦೨, ೫೧೩ ಮತ್ತು ಬ, ೧೦೬, ೧೦೭), ಆರ್ತಭಾವ (೧೬೪, ೧೬೧, ೧೮೦, ೫೧೧, ಬ. ಪು. ೯, ವ. ೪೫–೫೦.) ತಿರಸ್ಕಾರ (ಬ. ಪು. ೬. ವ. ೫೮. ೭೯), ಕರುಣೆ (೧೮೮, ೨೮೪, ೨೮೫ ಬ. ಪು. ೯೩. ವ. ೯೩), ವಿನೋದ (ಬ. ಪು. ೪೮. ವ. ೭೪, ಪ್ರ. ೩೫. ವ. ೧೧೮), ಕೋಪ (ಬ. ಪು. ೧೦೧. ವ. ೧೩೭), ಮುಂತಾದ ಭಾವಗಳ ರಸವು ಈ ಮೇಲಿನ ವಚನಗಳಲ್ಲಿ ತುಂಬಿದೆ. ಸತಿಪತಿಭಾವದ ವಚನಗಳಂತೂ ಹೇರಳವಾಗಿವೆ (೫೮–೬೦, ೧೯೭ ಮತ್ತು ವ. ೨೫೫–೨೫೭). ಇದೇ ರೀತಿಯಾಗಿ ಭಾವವ್ಯಕ್ತಿಯ ಅನೇಕ ಉದಾಹರಣೆಗಳನ್ನು ಕೊಡಬಹುದು. ಈ ಎಲ್ಲ ಸಂಗತಿಗಳನ್ನು ವಿಚಾರಿಸಿ ನೋಡಿದರೆ, ತಮ್ಮ ವಿಚಾರಗಳನ್ನು ಮತ್ತು ಭಾವಗಳನ್ನು ಪ್ರತಿಬಿಂಬಿಸುವ ವಿಷಯದಲ್ಲಿ ವಚನಕಾರರು ವಚನವೆಂಬ ಸಾಧನವನ್ನು ಬಹಳೇ ಉತ್ತಮ ಮತ್ತು ಯಶಸ್ವೀರೀತಿಯಿಂದ ಉಪಯೋಗಿಸಿರುವರು, ಎಂದು ಹೇಳಬಹುದು.

೧೬೪. ಇನ್ನು ವಚನಗಳಲ್ಲಿ ಯಾವ ಅಲಂಕಾರಗಳು ಉಪಯೋಗಿಸಲ್ಪಟ್ಟಿವೆ ಇದನ್ನು ನೋಡಿ, ಈ ಸಾಹಿತ್ಯರೂಪದ ಗುಣ–ದೋಷ-ಮರ್ಯಾದೆಗಳನ್ನು ವಿಮರ್ಶಿಸಿ, ಇದರ ಭವಿಷ್ಯತ್ಕಾಲದ ಬಗ್ಗೆ ಭವಿಷ್ಯ

ಮಾಡಿ, ಈ ಪ್ರಕರಣವನ್ನು ಉಪಸಂಹರಿಸುವ. ಪದ್ಯಕ್ಕಿಂತ ಗದ್ಯದಲ್ಲಿ ಯಾವಾಗಲೂ ಅಲಂಕಾರಗಳು ಕಡಿಮೆ. ವಚನಗಳಲ್ಲಿಯ ಗದ್ಯವಂತೂ ಸಾಹಿತ್ಯದೃಷ್ಟಿಯಿಂದ ಬರೆಯಬೇಕೆಂಬ ಉದ್ದೇಶವಾಗಿ ಬರೆಯಲ್ಪಟ್ಟುದಲ್ಲ. ಆದುದರಿಂದ ಅವುಗಳಲ್ಲಿ ನಾವು ಅಲಂಕಾರಗಳನ್ನು ಅಷ್ಟೊಂದು ಅಪೇಕ್ಷಿಸುವ ಕಾರಣವಿಲ್ಲ. ಆದರೆ ಅರ್ಥಬೋಧವು ಚನ್ನಾಗಿ ಆಗಲಿಕ್ಕೆ ಮತ್ತು ಲೇಖಕರ ವಿಚಾರಗಳು ಓದುಗರ ಮನಸಿನ ಮೇಲೆ ಮುದ್ರೆಯಂತೆ ಅಚ್ಚಾಗಲಿಕ್ಕೆ ಹಲವು ಅಲಂಕಾರಗಳ ಸಹಾಯವಾದರೂ ಬೇಕೇಬೇಕಾಗುವದು. ಆ ಮಟ್ಟಿಗೆ ವಚನಕಾರರು ವಚನಗಳನ್ನು ಶೃಂಗರಿಸಲಿಕ್ಕೆ ಮರೆತಿಲ್ಲ, ಅಥವಾ ಆ ಮಟ್ಟಿಗೆ ವಚನಗಳಲ್ಲಿ ಅಲಂಕಾರಗಳು ಸಹಜವಾಗಿ ಬಂದಿವೆ, ಎಂದು ಹೇಳಬಹುದು. ಸ್ವಯಂವರಕ್ಕೆ ಸಿದ್ಧಳಾದ ಅರಸುಮಗಳಂತೆ ನಾನಾ ಚಿನ್ನರನ್ನದ ವಸ್ತ್ರಾಲಂಕಾರಗಳಿಂದ ವಿಭೂಷಿತಳಾಗಿರದಿದ್ದರೂ ವಚನವಧುವು ಋಷಿಕನ್ಯೆಯಂತೆ ತನ್ನ ನಿರ್ವ್ಯಾಜ, ನೈಸರ್ಗಿಕ ನಿಲವಿನಿಂದಲೂ ಪನಸುಲಭವಾದ ಹೂಚಿಗುರುಗಳಿಂದದಿಂದಲೂ ಶೋಭಿಸುತ್ತಿರುವಳು. ಅಲಂಕಾರಗಳಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರ, ಎಂದು ಎರಡು ಮುಖ್ಯ ಬಗೆಗಳು. ಶಬ್ದಚಮತ್ಕಾರವಿದ್ದಲ್ಲಿ ಶಬ್ದಾಲಂಕಾರವೆಂದೂ ಅರ್ಥಚಮತ್ಕೃತಿ ಇದ್ದಲ್ಲಿ ಅರ್ಥಾಲಂಕಾರವೆಂದೂ ಅನ್ನುವ ರೂಢಿಯಿರುವದು. ಯಮಕ, ಪ್ರಾಸ, ತಾಳಬದ್ಧತೆ ಮುಂತಾದವುಗಳು ಶಬ್ದಾಲಂಕಾರಗಳೆನಿಸುವವು. ಅವು ವಚನಗಳಲ್ಲಿ ನಮಗೆ ಕಂಡುಬರುವವು. ಅವು ಒಂದು ಬಗೆಯ ಚಮತ್ಕೃತಿಯನ್ನುಂಟುಮಾಡುವುದರಿಂದ ಯಾವದೇ ವಾಙ್ಮಯರೂಪಗಳನ್ನು ಅವು ಹೆಚ್ಚು ಆಕರ್ಷಕಮಾಡುವವು. ಇದಲ್ಲದೆ ಯಮಕ, ಪ್ರಾಸ, ಇವುಗಳಲ್ಲಿ ಇರುವ ಒಂದಕ್ಕೊಂದು ಸದೃಶವಾದ ಧ್ವನಿಗಳು ನೆನಪಿಡಲಿಕ್ಕೆ ಸುಲಭವಿರುವುದರಿಂದ ಇದರೊಳಗಿನ ಹಲವು ಶಬ್ದಾಲಂಕಾರಗಳು ಸ್ಮೃತಿಗೂ ಸಹಾಯಕವಿರುವವು. ಯಮಕಾದಿಗಳು ವಾಡಿಕೆಯಾಗಿ ಕಾವ್ಯದಲ್ಲಿಯೆ ಹೆಚ್ಚು ಇರುವವು ಮತ್ತು ಬೇರೆಬೇರೆ ವೃತ್ತಾದಿಗಳಲ್ಲಿ ಶಬ್ದಗಳ ಅಥವಾ ಮಾತ್ರೆಗಳ ನಿಶ್ಚಿತಮಾನವಿರುವುದರಿಂದ ಆ ಅಲಂಕಾರಗಳನ್ನು ಗೊತ್ತುಹಿಡಿಯುವದು ಸುಲಭವಿರುವದು. ವಚನಗಳು ಗದ್ಯವಾಗಿದ್ದರೂ ಅವುಗಳನ್ನು ವಿಶಿಷ್ಟರೀತಿಯಿಂದ ವಿಭಾಗಿಸಿದರೆ ಅವುಗಳಲ್ಲಿರುವ ಸಮಪದಗಳ ಅಥವಾ ಸಮಾಕ್ಷರಗಳ ನಿಯತವಾದ ಆವೃತ್ತಿಯನ್ನು ನಾವು ಕಂಡುಹಿಡಿಯಬಹುದು. ಉದಾ: ವಚನಾಮೃತದಲ್ಲಿಯ ೨೮೨, ೨೯೦ ಈ ವಚನಗಳನ್ನು ನೋಡುವ. 'ನೀನೊಲಿದರೆ

ಕೊರಡು ಕೊನರುವದಯ್ಯ,। ನೀನೊಲಿದರೆ ಬರಡು ಹಯಸಹುದಯ್ಯ,। ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯ,। ನೀನೊಲಿದರೆ ಸಕಲ ಪದಾರ್ಥ ಇದಿರಲ್ಲಪ್ಪುವು, ಕೂಡಲ ಸಂಗಮದೇವಾ.। ವಿಮರ್ಶೆಯ ಉದ್ದೇಶದಿಂದ ಈ ವಚನವು ನಾಲ್ಕುಪಾದಗಳಾಗಿ ವಿಭಾಗಿಸಲ್ಪಟ್ಟಿದೆ. ಇದರಲ್ಲಿ 'ನೀನೊಲಿದರೆ' ಎಂಬ ನಾಲ್ಕೂ ಪಾದಗಳ ಮೊದಲನೆಯ ಪದವು ಒಂದೇ ಇರುವದು. ಮೊದಲಿನ ಮೂರು ಪಾದಗಳ ಕೊನೆಯ ಪದವಾದ 'ಅಯ್ಯ' ಎಂಬದೂ ಒಂದೇ ಇರುವದು. ಅದೇರೀತಿ, ಮೊದಲನೆಯ ಹಾಗೂ ಎರಡನೆಯ ಪಾದಗಳಲ್ಲಿಯ 'ಕೊರಡು' 'ಬರಡು' ಎಂಬ ಪದಗಳಲ್ಲಿ ಪ್ರಾಸವಿರುವದು. ಎರಡನೆಯ ಮೂರನೆಯ ಪಾದಗಳಲ್ಲಿಯ ಅಹುದಯ್ಯಾ, ಎಂಬ ಪದವೂ ಒಂದೇ ಇರುವದು. ಈ ಬಗೆಯಾಗಿ ಸಮಪದಗಳ ಮತ್ತು ಸಮಾಕ್ಷರಗಳ ಆವೃತ್ತಿಯು ಈ ವಚನಕ್ಕೆ ಅಲಂಕಾರರೂಪವಾಗಿರುವದು. ಇನ್ನು ೯೦ನೆಯ ವಚನವನ್ನು ನೋಡುವ. 'ವಚನದಲ್ಲಿ ನಾಮಾಮೃತ ತುಂಬಿ। ನಯನದಲ್ಲಿ ಮೂರುತಿ ತುಂಬಿ। ಮನದಲ್ಲಿ ನಿಮ್ಮ ನೆನಹು ತುಂಬಿ। ಕಿವಿಯಲ್ಲಿ ನಿಮ್ಮ ಕೀರ್ತಿ ತುಂಬಿ। ಕೂಡಲ ಸಂಗಮದೇವಾ। ನಿಮ್ಮ ಚರಣಕಮಲದೊಳು ಸೊಗದ ಬಂಡಸುಂಬ ತುಂಬಿಯಾಗಿರ್ಪೆನು. ಇಲ್ಲಿ ಮೊದಲಿನ ನಾಲ್ಕು ಪಾದಗಳ ಕೊನೆಯಲ್ಲಿ 'ತುಂಬಿ' ಎಂಬ ಒಂದೇ ಪದವಿರುವದು. ಮೊದಲಿನ ಮೂರುಪಾದಗಳ ಆದಿಪದಗಳಾದ 'ವಚನ,' 'ನಯನ,' 'ಮನ,' ಇವು ಮೃದು ಮತ್ತು ಲಲಿತವಿದ್ದು ಅವುಗಳಲ್ಲಿ 'ನ' ಎಂಬಕ್ಷರದ ಆವೃತ್ತಿ ಇರುವದು. ನಾಲ್ಕನೆಯ ಪಾದದಲ್ಲಿ 'ಕಿವಿ' 'ಕೀರ್ತಿ' ಶಬ್ದಗಳಲ್ಲಿ ಮತ್ತು ಕೊನೆಯ ಪಾದದಲ್ಲಿ 'ಉಂಬ,' 'ತುಂಬಿ' ಎಂಬ ಶಬ್ದಗಳಲ್ಲಿ ಸಮಾಕ್ಷರಗಳ ಆವೃತ್ತಿ ಇರುವದು. ಇದಲ್ಲದೆ 'ತುಂಬಿ' ಎಂಬ ಒಂದೇ ಶಬ್ದಕ್ಕೆ ಮೊದಲಿನ ನಾಲ್ಕುಪದಗಳಲ್ಲಿ ಇದ್ದ ಅರ್ಥ (ಪೂರೈಸಿ) ಬೇರೆ ಮತ್ತು ಕೊನೆಯ ಪಾದದಲ್ಲಿದ್ದ ಅರ್ಥ (ಭೃಂಗ) ಬೇರೆ, ಹೀಗೆ ಚಮತ್ಕಾರವಿರುವದು. ಇದೇ ರೀತಿ ಆದಿಪ್ರಾಸ, ಮಧ್ಯಪ್ರಾಸ, ಅಂತ್ಯಪ್ರಾಸ, ಮುಂತಾದವುಗಳ ಅನೇಕ ಉದಾಹರಣೆಗಳನ್ನು ಕೊಡಬಹುದು. ಇಂಥ ಚಮತ್ಕಾರಗಳು ವಚನಗಳಲ್ಲಿ ಅಪವಾದಾತ್ಮಕವಾಗಿರುವವು, ಎಂದು ಯಾರೂ ತಿಳಿಯಕೂಡದು. ಅವು ಅಲ್ಲಲ್ಲಿ ಹೇರಳವಾಗಿವೆ. ೨೯ಳ, ೩೦೩, ೩೫೫, ೨೦೬, ೨೧೬ ಈ ಮುಂತಾದ ವಚನಗಳನ್ನು ಮೇಲಿನಂತೆ ವಿಭಾಗಿಸಿ ವಿಮರ್ಶಿಸಿದರೆ ಅವುಗಳಲ್ಲಿಯ ಚಮತ್ಕಾರವು ಎದುರಿಗೆ ಬಿಚ್ಚಿಟ್ಟ ನಕಾಶೆಯಂತೆ ಸ್ಪಷ್ಟವಾಗುವದು.

೧೬೫. ವಚನಕಾರರು ವಚನಗಳಲ್ಲಿ ಪದಗಳ ಅಥವಾ ಪದಸಮೂಹಗಳ ಮತ್ತು ಅವುಗಳ ಅರ್ಥಗಳ ಸಮತೂಕವನ್ನು ಅನೇಕ ಕಡೆಗೆ ಬಹಳೇ ಚನ್ನಾಗಿ ಸಾಧಿಸಿರುವರು. ಅದರಿಂದ ಅವುಗಳಿಗೆ ವಿಶೇಷ ಶೋಭೆಯುಂಟಾಗಿರುವದು. ಗದ್ಯದಲ್ಲಿ ನಾವು ತಾಳದ ಅಪೇಕ್ಷೆ ಮಾಡುವದು ಯೋಗ್ಯವಲ್ಲವೆಂಬುದೇನೋ ನಿಜವು. ಆದರೆ ಸಮತೂಕವು ಸಾಧಿಸಲ್ಪಟ್ಟಲ್ಲಿ ಒಂದು ಬಗೆಯ ತಾಲಬದ್ಧತೆಯೂ ಕಂಡುಬರುತ್ತಿರುವದು. ಈ ಉದಾಹರಣೆಗಳು ವಚನಗಳಲ್ಲಿ ಉಪಯೋಗಿಸಲ್ಪಟ್ಟ ದೃಷ್ಟಾಂತಗಳನ್ನು ಉತ್ತಮರೀತಿಯಿಂದ ಹೊರದೋರುವವು. ಉದಾ:– ೨೫ಳ, ೨೯೬, ೧೪೮, ೩೩೨ ಮುಂತಾದ ವಚನಗಳನ್ನು ನೋಡಬಹುದು. ಇಲ್ಲಿಯೂ ನಾವು ಮೇಲಿನ ವಿಮರ್ಶಾಪದ್ಧತಿಯನ್ನು ಅನುಸರಿಸುತ್ತಿರುವೆವು. 'ಕರಿ ಘನ ಅಂಕುಶ ಕಿರಿದೆನ್ನಬಹುದೇ ಅಯ್ಯ?। ಗಿರಿ ಘನ ವಜ್ರ ಕಿರಿದೆನ್ನಬಹುದೇ ಅಯ್ಯ?। ತಮಂಧ ಘನ ನಿಮ್ಮ ನೆನಹು ಕಿರಿದೆನ್ನಬಹುದೇ ಅಯ್ಯ?। ಕೂಡಲ ಸಂಗಮದೇವಾ, ನಿಮ್ಮ ಕೃಪೆಯ ಘನವ ನೀವೇ ಬಲ್ಲಿರಿ.। (೨೫ಳ) ಇದರಲ್ಲಿ ಪ್ರಾಸಾದಿ ಶಬ್ದಾಲಂಕಾರಗಳಿರುವುವಲ್ಲದೆ 'ಘನ' 'ಕಿರಿ,' ಈ ಅರ್ಥಗಳ ಮತ್ತು ಶಬ್ದಗಳ ತೂಕವು ಸಮವಾಗಿ ಮೊದಲಿನ ಮೂರೂ ಪಾದಗಳಲ್ಲಿ ಸಾಧಿಸಲ್ಪಟ್ಟಿರುವದು. ಅದೇ ರೀತಿ ಆ ಮೂರೂ ಪಾದಗಳಲ್ಲಿ ತಾಲಬದ್ಧತೆ ಇರುವದು. ಅದರಲ್ಲಿಯ ದೃಷ್ಟಾಂತಗಳೂ ಬಹಳ ಬೋಧಕರವಾದವೂ ಮನಗಾಣಿಸುವಂತಹವೂ ಇರುವವು. 'ಸಿಂಹದ ಮುಂದೆ ಜಿಗಿದಾಟವೇ?। ಪ್ರಳಯಾಗ್ನಿಯ ಮುಂದೆ ಪತಂಗದಾಟವೇ?। ಸೂರ್ಯನ ಮುಂದೆ ಕೀಟದಾಟವೇ?। ನಿಮ್ಮ ಮುಂದೆ ನನ್ನಾಟವೇ ಕಲಿದೇವರ ದೇವಾ?। (೨೯೬) ಈ ವಚನದಲ್ಲಿಯೂ ಮೇಲಿನಂತೆಯೆ ಶಬ್ದ-ಅರ್ಥಗಳ ತೂಕವೂ ತಾಲಬದ್ಧತೆಯೂ ಕಂಡುಬರುವದು. 'ತುಂಬಿದುದು ತುಳುಕದು ನೋಡಾ,। ನಂಬಿದುದು ನಂದೇಹಿಸದು ನೋಡಾ,। ಒಲಿದುದು ಓಸರಿಸದು ನೋಡಾ,। ನೆರೆಯರಿದುದು ಮರೆಯದು ನೋಡಾ,। ಚನ್ನಮಲ್ಲಿಕಾರ್ಜುನಯ್ಯ, ನೀನೊಲಿದ ಶರಣಂಗೆ ನಿಸ್ಸೀಮ ಸುಖವಯ್ಯ.। (೧೪೮). ಈ ವಚನವೂ ಮೇಲಿನ ಸಂಗತಿಗಳಿಗೆಯೆ ಸಾಕ್ಷಿಯಾಗಿರುವದು. 'ಅಮೃತಕ್ಕೆ ಹಸಿವುಂಟೇ?। ಜಲಕ್ಕೆ ತೃಷೆಯುಂಟೇ?। ಘನಪುರುಷಂಗೆ ವಿಷಯವುಂಟೇ?। ಸದ್ಗುರು ಕಾರುಣ್ಯವಿಡಿದು ಲಿಂಗಾರ್ಚನೆಯ ಮಾಡುವ ಮಹಾಶರಣಂಗೆ ಮುಕ್ತಿಯ ಬಯಕೆಯುಂಟೇ?। ಅವರುಗಳಿಗೆ ಅದು ಸ್ವಯಂಭು, ಸಹಜ ಸ್ವಭಾವ.। ಇನ್ನು ತೃಪ್ತಿ ಆಪ್ತಾಯನವನರಸಲುಂಟೇ, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ?। ಇದರಲ್ಲಿಯೂ

ಸಮತೂಕ, ತಾಲಬದ್ಧತೆ, ಮತ್ತು ಯೋಗ್ಯ, ಮನದಟ್ಟಾಗುವ, ಬಳಕೆಯಲ್ಲಿಯ ದೃಷ್ಟಾಂತಗಳು ಇರುವವು. ಕಠಿಣವಾದ ವಿಷಯಗಳನ್ನು ಸುಲಭವಾಗಿ ತಿಳಿಸಲಿಕ್ಕೆ ದೃಷ್ಟಾಂತದಂಥ ಅನ್ಯ ಉಪಾಯವಿಲ್ಲ. ಈ ಸಾಧನವನ್ನು ವಚನಕಾರರು ಬಹಳೇ ಪರಿಣಾಮಕಾರಕರೀತಿಯಿಂದ ಉಪಯೋಗಿಸಿರುವರು. ಅವ್ಯಕ್ತ ಸೃಷ್ಟಿಯಲ್ಲಿಯ ಸತ್ಯಗಳನ್ನು ವ್ಯಕ್ತಸೃಷ್ಟಿಯಲ್ಲಿ ತಂದು ವಾಣೀರೂಪದಲ್ಲಿ ವ್ಯಕ್ತಮಾಡಲು ವಚನಕಾರರು ಈ ವಿವಿಧದೃಷ್ಟಾಂತಗಳನ್ನು ಕೊಟ್ಟಿರುವರು. ಹೀಗೆ ಮಾಡುವುದರಲ್ಲಿ ಅವರ ಕಲ್ಪಕಶಕ್ತಿಯೂ ಸಾದೃಶ್ಯಗಳನ್ನು ಕಂಡುಹಿಡಿಯುವ ಅವರ ಚಾತುರ್ಯವೂ ಒಡೆದುಕಾಣುವವು.

೧೬೬. ಅವರು ರೇಖಿಸಿದ ಹಲವು ಶಬ್ದಚಿತ್ರಗಳೂ ಬಹಳ ಅಚ್ಚುಕಟ್ಟು ಮತ್ತು ಸತ್ಯಾರ್ಥವನ್ನು ಪ್ರಾಮಾಣಿಕವಾಗಿ ಪ್ರತಿಬಿಂಬಿಸುವಂತಹವು ಇರುವವು. ಮುಂದೆಬರುವ ಮುಪ್ಪನ್ನು ಬಣ್ಣಿಸುವ ಬಸವನ ವಚನವು ಅವನ ವರ್ಣನಾಶಕ್ತಿಯನ್ನೂ ಯೋಗ್ಯ ಹಾಗೂ ದಿನದ ಬಳಕೆಯ ಶಬ್ದಗಳನ್ನಾರಿಸುವ ಅವನ ಕೌಶಲವನ್ನೂ ಚನ್ನಾಗಿ ವ್ಯಕ್ತಮಾಡುವದು. 'ನಿಲಿ ಕಿನ್ನಿಗೆ, ತೆರೆ ಗಲ್ಲಕ್ಕೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲವೇಲೆ ಕೈಯ್ಯನೂರಿ ಕೋಲ ಹಿಡಿಯದ ಮುನ್ನ, ಮುಪ್ಪಿನಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ, ಪೂಜಿಸು ಕೂಡಲ ಸಂಗಮದೇವನ' ವಚನಗಳಲ್ಲಿ ಇಂಥ ವರ್ಣನಾವಿಷಯಗಳೆ ಕಡಿಮೆ ಇರುವುದರಿಂದ ವರ್ಣನಾತ್ಮಕ ವಚನಗಳು ಬಹು ವಿರಳ. ಆದರೆ ವರ್ಣನೆಮಾಡುವ ಪ್ರಸಂಗವಿದ್ದಲ್ಲಿ ಪಡಿಯಚ್ಚು ಒತ್ತಿದಂತೆ ಎದ್ದುಕಾಣಿಸುವ ಶಬ್ದಚಿತ್ರಗಳನ್ನು ಬರೆಯುವದರಲ್ಲಿ ವಚನಕಾರರು ನಿಷ್ಣಾತರಿರುವರೆಂಬಲ್ಲಿ ಏನೂ ಸಂಶಯವಿಲ್ಲ. ಇದಕ್ಕೆ ಮತ್ತೆ ಉದಾಹರಣೆಗಳು ಬೇಕಾಗಿದ್ದರೆ, ಸೊಡ್ಡಳ ಬಾಚರಸರು ಮಾಡಿದ ಪ್ರಭುದೇವರ ವರ್ಣನೆಯನ್ನೂ (ಶೂ. ಪು. ೩೧೪. ವ. ೫೮) ಘನಲಿಂಗಿಯು ಮಾಡಿದ ಸ್ತ್ರೀವರ್ಣನೆಯನ್ನೂ (ವ. ಪು. ೧೫೫. ವ. ೧೬) ನೋಡಬಹುದು. ಉಪಮೆ, ರೂಪಕ, ಮತ್ತು ವಿರಲವಾಗಿ ಉತ್ಪ್ರೇಕ್ಷೆ ಇವು ವಚನಗಳಲ್ಲಿ ಉಪಯೋಗಿಸಲ್ಪಟ್ಟ ಮುಖ್ಯ ಅರ್ಥಾಲಂಕಾರಗಳು ಎಂದು ಹೇಳಬಹುದು. ಅವು ನಮಗೆ ಅಲ್ಲಲ್ಲಿ ಕಂಡುಬರುವವು. ವಚನಕಾರರು ಕೊಟ್ಟ ದೃಷ್ಟಾಂತಗಳಲ್ಲಿಯೂ ಅನೇಕಾನೇಕ ಉಪಮಾರೂಪಕಾದಿಗಳು ತುಂಬಿರುವವು. ಇಲ್ಲಿ ಮಾದರಿಗಾಗಿ ಒಂದೆರಡು ಉದಾಹರಣೆಗಳನ್ನು ಕೊಟ್ಟರೆ ಸಾಕು. ಜ್ಞಾನಿಯು ತಾನೆನ್ನದೆ ಇದಿರೆನ್ನದೆ, 'ಕಾದ ಹಂಚಿನ ಮೇಲೆ ಬಿಟ್ಟ ನೀರಿನಂತೆ,' 'ಬಧಿರನ ಕಾವ್ಯದಂತೆ' ತಲೆದೋರದೆ ನಿಲ್ಲುವನು (ವ. ಪು. ೪೯೧. ವ ೨), ಎಂದು ಅಂಬಿಗರ ಚೌಡಯ್ಯನು ವರ್ಣಿಸಿರುವನು. 'ಹುಲಿಯ ಬಾಯಲ್ಲಿ ಸಿಕ್ಕ ಹುಲ್ಲೆಯಂತೆ,' 'ಸರ್ಪನ ಬಾಯಲ್ಲಿ ಸಿಕ್ಕ ಕಪ್ಪೆಯಂತೆ,' ಎಂದು ಮಾಯೆಯ ಬಲೆಯಲ್ಲಿ ಸಿಕ್ಕ ಜಗವನ್ನು ಅಖಂಡೇಶ್ವರನು ಉಪಮಿಸಿರುವನು (೨೮೩). ೧೫೦ನೆಯ ವಚನವು ರೂಪಕಗಳ ಉತ್ತಮ ಉದಾಹರಣೆಯಿರುವದು. ಅದೇ ರೀತಿ ೧೩೧ರಲ್ಲಿ ಉಪಮೆಗಳ ಬಂದು ಸರವೆ ಇರುವದು. ಬಸವನು, ಶರಣರೊಡನೆ ಸರಸವಾಡುವದು, ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸಿಕೊಂಬಂತೆ, ಉರಿಕೊಳ್ಳಿಯ ಕೊಂಡು ಮಂಡೆಯ ಸಿಕ್ಕಿ ಬಿಡಿಸುವಂತೆ, ಹುಲಿಯ ಮೀಸೆ ಹಿಡಿದುಕೊಂಡು ಬಲೆದುಯ್ಯಲಾಡುವಂತೆ (ಬ. ೧೧೧) ಎಂದು ವರ್ಣಿಸಿದ್ದಾಗಲಿ, ಮಾಡುವ ಭಕ್ತನ ಮನ ಹೀನವಾದರೆ ಅದೇ ಕಡೆ ಎಂದು ವಿಧಿಸುವಾಗ, ಜೇಳಿಗೆ ಬಸುರಾಯಿತ್ತೆ ಕಡೆ, ಬಾಳೆಗೆ ಫಲವಾಯಿತ್ತೆ ಕಡೆ, ಕಾದುವ ಒಲೆಯಕಾರಂಗೆ ಓಸರಿಸಿತ್ತೆ ಕಡೆ (ಬ. ೧೧೧), ಎಂದು ಹೇಳಿದ್ದಾಗಲಿ, ಬರಿಯ ವಿಭೂತಿಯನೆ ಹೂಸಿರುದ್ರಾಕ್ಷಿಯನೆ ಕಟ್ಟಿದರೂ ದೇವರ ಒಲುಮೆ ಇಲ್ಲದವನು, ಅರಿಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟ ಪುರುಷನ ಬಲವಿಲ್ಲದ ಲಲನೆಯಂತೆ (ಬ. ೪೦), ಎಂದು ಹೀಯಾಳಿಸಿದ್ದಾಗಲಿ, ಯಾವದೇ ಶ್ರೇಷ್ಠ ಕವಿಯ ಕಲ್ಪನಾಶಕ್ತಿಗೂ ವರ್ಣನಾಸಾಮರ್ಥ್ಯಕ್ಕೂ ಸಲ್ಲುವಂತಹದಿರುವದು. ಕ್ವಚಿತ್ ಪ್ರಸಂಗಗಳಲ್ಲಿ ಒಂದೇ ಶಬ್ದದ ಬೇಬೇರೆ ಅರ್ಥಗಳನ್ನು ವಾಡಿ ವಚನಕಾರರು ಚಮತ್ಕಾರವನ್ನುಂಟುಮಾಡಿರುವರು. ಇಂಥ ಶ್ಲೇಷದ ಉತ್ತಮ ಉದಾಹರಣೆಯೆಂದರೆ ೪೦೭ನೆಯ ವಚನವು. ಅಲ್ಲಿ 'ತೊರೆ' ಎಂದರೆ 'ನದಿ' ಮತ್ತು 'ಬಿಟ್ಟುಬಿಡು' ಎಂಬೆರಡೂ ಅರ್ಥಗಳನ್ನು ಅವಲಂಬಿಸಿ ಬಂದುದರಿಂದ ಚಮತ್ಕಾರವುಂಟಾಗಿದೆ.

೧೬೭. ಇನ್ನು ವಚನವೆಂಬ ಸಾಹಿತ್ಯರೂಪದ ಗುಣ, ದೋಷ, ಮತ್ತು ಇದರ ಉಪಯೋಗದ ಮರ್ಯಾದೆ ಇವುಗಳನ್ನು ನೋಡುವ. ಯಾವದೇ ಸಾಹಿತ್ಯರೂಪವಾದರೂ ವಿಶಿಷ್ಟ ಉದ್ದೇಶಗಳನ್ನು ಪೂರೈಸುವುದಕ್ಕೆ ಮಾತ್ರ ಅದು ಉಪಯುಕ್ತವಿರುವದು. ಲೇಖಕರ ಉದ್ದೇಶಗಳು ಭಿನ್ನವಿದ್ದಂತೆ ಅವರು ಉಪಯೋಗಿಸುವ ಸಾಧನಗಳೂ ಸಾಹಿತ್ಯರೂಪಗಳೂ ಬೇಬೇರೆ ಇರುವದು ಸ್ವಾಭಾವಿಕವು. ಯಾವದೇ ಒಂದು ಸಾಹಿತ್ಯರೂಪವು ಎಲ್ಲ ವಿವಿಧ ಉದ್ದೇಶಗಳನ್ನು ಸಫಲಗೊಳಿಸಲು ಸಮರ್ಥವಿರಲಾರದು. ಈ ಸಾಮಾನ್ಯನಿಯಮಕ್ಕೆ ವಚನವೆಂಬ ಸಾಹಿತ್ಯರೂಪವೂ

ಅಪವಾದವಿಲ್ಲ. ಇಲ್ಲಿ ವಚನವೆಂದರೆ ವಚನಕಾರರು ಉಪಯೋಗಿಸಿದ ಸಾಮಾನ್ಯವಾಗಿ ೨೦-೩೦ ಶಬ್ದಗಳುಳ್ಳ ಮತ್ತು ನಾವು ಇದುವರೆಗೆ ವರ್ಣಿಸುತ್ತ ಬಂದ ಸಾಹಿತ್ಯರೂಪವು, ಎಂಬುದನ್ನು ವಾಚಕರು ಲಕ್ಷದಲ್ಲಿಡುವದು ಅವಶ್ಯವು. ವಚನವು ಗದ್ಯರೂಪವಿದ್ದು ಚಿಕ್ಕದಿರುವುದರಿಂದ ವಿಚಾರವ್ಯಕ್ತಿಗೆ ಮತ್ತು ಭಾವ ಪ್ರಕಟನೆಗೆ ಒಳ್ಳೆ ಹಗುರಾದ ಸಾಧನವಿರುವದು. ಅದು ಬಿಡಿಬಿಡಿಯಾಗಿ ಬರೆಯಲ್ಪಡುತ್ತಿರುವುದರಿಂದ ಒಂದೊಂದು ವಚನವನ್ನು ಬೇರೆಬೇರೆಯಾಗಿ ಬರೆಯಲಿಕ್ಕೆ ಅನುಕೂಲವಿದ್ದು ಅದನ್ನು ಬರೆಯುವುದರಲ್ಲಿ ದೀರ್ಘಪ್ರಯತ್ನದ ಅವಶ್ಯಕತೆಯಿಲ್ಲ. ಸಾಮಾನ್ಯ ಲೇಖಕರು ಸಹ ವಚನಗಳನ್ನು ಬರೆಯುವ ಪ್ರಯತ್ನವನ್ನು ಮಾಡಬಹುದು. ಒಮ್ಮೆಲೆ ಮನಸಿನಲ್ಲಿ ಉಂಟಾದ ಯಾವದೊಂದು ಶ್ರೇಷ್ಠ ವಿಚಾರಕ್ಕೆ ಅಥವಾ ಭಾವನೆಗೆ ವಚನ ರೂಪಕೊಟ್ಟು ಅದನ್ನು ಒಂದು ಬಾಣದಂತೆ ಎಸೆದುಬಿಡಬಹುದು. ಅದು ತಿಳಿದುಕೊಳ್ಳಲಿಕ್ಕೂ ನೆನಪಿಡಲಿಕ್ಕೂ ಸುಲಭವಿರುವದು. ಇವೆಲ್ಲ ಈ ಸಾಹಿತ್ಯರೂಪದ ಗುಣಗಳೆಂದು ಹೇಳಬಹುದು. ಈ ಗುಣಗಳ ಮೂಲಕ ಮನಸಿನಲ್ಲಿ ತಾತ್ಕಾಲಿಕವಾಗಿ ಎದ್ದ ಪ್ರಬಲವಾದ ಯಾವದೊಂದು ವಿಚಾರವನ್ನು ಇಲ್ಲವೆ ಭಾವವನ್ನು ಸ್ವಲ್ಪದರಲ್ಲಿ ವ್ಯಕ್ತಮಾಡಲಿಕ್ಕೆ, ಸಂವಾದಕ್ಕೆ, ಮಹತ್ವದ ವಿಷಯವನ್ನು ಕುರಿತು ಸೂತ್ರಾತ್ಮಕವಾಗಿ ಬರೆಯಲಿಕ್ಕೆ, ಧ್ಯೇಯಗಳನ್ನು ಇಲ್ಲವೆ ಸ್ಮರಣೀಯ ವಾಕ್ಯಗಳನ್ನು ಬರೆದಿಡಲಿಕ್ಕೆ ಈ ರೂಪವು ಒಳ್ಳೆಯದೂ ಅನುಕೂಲವೂ ಇರುವದು. ಆದರೆ, ಇನ್ನೂ ಇದೇನು ಅಂತಹ ದೊಡ್ಡ ಸಾಹಿತ್ಯರೂಪವೆಂದೆನಿಸಿಲ್ಲ. ಸಾಮಾನ್ಯರು ವಚನಗಳನ್ನು ಬರೆಯಬಹುದಾದರೂ ಅವುಗಳನ್ನು ಯಶಸ್ವಿರೀತಿಯಿಂದಲೂ ಪರಿಣಾಮಕಾರಕವಾಗಿಯೂ ಬರೆಯುವದು ಎಲ್ಲರಿಗೂ ಸಾಧಿಸದು. ಯಾಕಂದರೆ, ಯಾವ ವಚನದಲ್ಲಿ ಸ್ಫೂರ್ತಿ, ಅನುಭಾವ, ಪ್ರಬಲಭಾವ ಇಲ್ಲವೆ ಗೂಢವಿಚಾರ, ಒಳ್ಳೆ ನಡುವಂತೆ ಹೇಳುವ ಶೈಲಿ, ಸುಲಭತೆ, ಸಂಕ್ಷೇಪದಿಂದ ಹೇಳುವ ಸಾಮರ್ಥ್ಯ ಮುಂತಾದ ಗುಣಗಳಿಲ್ಲವೊ ಅದು ಬರಿಯ ಒಂದು ವಾಕ್ಯಸಮೂಹವೆನಿಸುವುದೆ ಹೊರತು 'ವಚನ' ವೆನಿಸಲಾರದು. ವಚನಕಾರರು ಈ ಯಾವ ಸರಸ, ಸಬಲ, ಸುಲಭ, ಸರಲ, ಸಾಧನವನ್ನು ಕೆಡುಕನ್ನು ಕೊಲ್ಲಲಿಕ್ಕೆ, ದುರ್ಜನರನ್ನು ಜರಿಯಲಿಕ್ಕೆ ಶಲ್ಯದಂತೆ ಸಿಡಿಲಂತೆ, ಬಾಣದಂತೆ ಬರ್ಚಿಯಂತೆ ಎಸೆದಿರುವರು. ಒಳಿತನ್ನು ವರ್ಧಿಸಲಿಕ್ಕೆ, ಗುಣವನ್ನು ಬೆಳಿಸಲಿಕ್ಕೆ, ನಿರ್ಮಲಸಿರ್ಝರದಂತೆ, ಸೀರತೊರೆಯಂತೆ, ಮುಳೆಯ ಕರೆಯಂತೆ ಅವರು

ಅದನ್ನು ಉಪಯೋಗಿಸಿರುವರು. ಅಮೃತಾನುಭಾವದ ಧನ್ಯತೆಯನ್ನು ವರ್ಣಿಸುವಾಗ ಅವರ ವಚನಗಳು ಜಂಡುಂಡ ತುಂಬಿಯ ಝೇಂಕಾರದಂತೆ, ವಸಂತದ ಕೋಕಿಲೆಯ ಕುಕಿಲಿನಂತೆ ಕಂಗೊಳಿಸುವವು. ಭಕ್ತನ ಆಂತರದಲ್ಲಿ ಉಕ್ಕುವ ಭಾವಲಹರಿಗಳನ್ನು ಸುರುವಾಗ ವಚನಗಳಿಗೆ ಮುನ್ನೀರ ಅಲೆಗಳಂತೆ, ವಿರಹಿಣಿಯ ಗದ್ಗದಿತ ಉಲಿವಿನಂತೆ, ವೀಣೆಯ ಮಧುರ ಸ್ವರದಂತೆ ಅವರು ರೂಪಕೊಟ್ಟಿರುವರು. ಧರ್ಮಮಾರ್ಗವನ್ನು ತೋರಿಸಲಿಕ್ಕೆ ಹೊಡೆ ಏಂಚಿನಂತೆ, ನಿರ್ಮಲ ಜ್ಯೋತಿಯಂತೆ ಆ ವಚನಗಳ ಉಪಯೋಗವನ್ನು ಅವರು ಮಾಡಿರುವರು. ಅದೇ ಸಾಧನವು ಸಾಮಾನ್ಯರ ಕೈಯಲ್ಲಿ ನೀರಸ, ಶುಷ್ಕ, ಒಂದು ಗದ್ಯ ಪರ್ಯಾಯವಾಗಿ ಪರಿಣಮಿಸುವದು. ವಚನಗಳಲ್ಲಿ ಸ್ಫೂರ್ತಿ ಇಲ್ಲದಿದ್ದರೆ ಅವು ನಿಷ್ಪ್ರಭವಾಗುವವು, ಅನುಭಾವವಿಲ್ಲದಿದ್ದರೆ ಜೊಳ್ಳೆನಿಸುವವು, ಪ್ರಬಲಭಾವ ಇಲ್ಲವೆ ಗೂಢವಿಚಾರವಿಲ್ಲದಿದ್ದರೆ ನಿಷ್ಪ್ರಯೋಜಕವಾಗುವವು, ಒಳ್ಳೆ ಶೈಲಿ ಇಲ್ಲದಿದ್ದರೆ ಅವು ಪರಿಣಾಮಕಾರಕವಾಗವು, ಅವು ಸುಲಭವಿಲ್ಲದಿದ್ದರೆ, ಸಣ್ಣವಿಲ್ಲದಿದ್ದರೆ ಅವುಗಳ ಉದ್ದೇಶವೆ ನಿಷ್ಫಲವಾಗುವದು. ಈ ರೂಪವು ಕಥನ, ವರ್ಣನ, ವಿವೇಚನ, ವಿವರಣ ಮುಂತಾದ ಕೆಲಸಗಳಿಗೆ ಉಪಯುಕ್ತವಿಲ್ಲ. ಹಾಗೆ ಇದನ್ನು ಉಪಯೋಗಿಸುವ ಪ್ರಯತ್ನಮಾಡಿದರೆ ಅದು ಯಶಸ್ವಿಯಾಗದೆ ವಚನದ ಸೌಂದರ್ಯವೂ ರಸವೂ ಹೋಗಿ ಅದು ಬರಿಯ ಸಾದಾ ಗದ್ಯವೆಂಬ ಹೆಸರಿಗೆ ಪಾತ್ರವಾಗುವದು. ವಚನ ರೂಪದ ಮತ್ತು ವಚನಗಳ ಗುಣಗ್ರಹಣವು ಕನ್ನಡಿಗರಲ್ಲಿ ಇತ್ತೀಚೆಗೆ ಮಾತ್ರ ಆಗಲಾರಂಭಿಸಿದೆ. ಆದುದರಿಂದ ಅವು ಭವಿಷ್ಯಕಾಲದಲ್ಲಿ ಇನ್ನೂ ಘನತೆಯನ್ನು ಹೊಂದುವವೆಂದು ಹೇಳಬಹುದು. ಮತ್ತು ಯಾವ ಉದ್ದೇಶದಿಂದ ಹಾಗೂ ಎಷ್ಟು ಪರಿಣಾಮಕಾರಕ ರೀತಿಯಿಂದ ವಚನಕಾರರು ಅವುಗಳನ್ನು ಬಳಸಿದರೂ ಅದೇ ಕಾರ್ಯಕ್ಕಾಗಿ ಅವು ಮುಂದೆಯಾದರೂ ಉಪಯೋಗಿಸಲ್ಪಡುವವೆಂಬಲ್ಲಿ ಸಂಶಯವಿಲ್ಲ. ಇದಲ್ಲದೆ ವಚನವಾಙ್ಮಯದ ಆಳವಾದ ಅಭ್ಯಾಸದಿಂದ ಹಲವು ಕನ್ನಡ ಲೇಖಕರ ಶೈಲಿಯ ಮೇಲೆಯೂ ಈಗ ಒಳ್ಳೆ ಪರಿಣಾಮವಾಗುತ್ತಿರುವದು. ಈ ರೀತಿ ವಚನಗಳ ಭವಿಷ್ಯವು ಉಜ್ವಲವಾಗುವ ಲಕ್ಷಣಗಳು ಈಗೆಯೆ ತಲೆದೋರುತ್ತಿರುವವೆಂದು ಹೇಳಲು ಸಾಕಷ್ಟು ಆಧಾರಗಳಿರುವವು.

---

೧೦. ಷಟ್‌ಸ್ಥಲಶಾಸ್ತ್ರ ಮತ್ತು ವೀರಶೈವ ಸಾಂಪ್ರದಾಯ

(೧೬೮) ಈ ಬಗ್ಗೆ ಪ್ರತ್ಯೇಕ ಪ್ರಕರಣ ಬರೆಯುವ ಉದ್ದೇಶವು. (೧೬೯) ಧರ್ಮ ಮತ್ತು ಸಂಪ್ರದಾಯ. (೧೭೦) ಮನುಷ್ಯನ ಧ್ಯೇಯವೂ ವಚನಕಾರರ ಸಾಂಪ್ರದಾಯವೂ. (೧೭೧) ವಚನಕಾರರ ಮಾರ್ಗವು ಆಗಮೋಕ್ತವು ಅರ್ಥಾತ್ ವೈದಿಕವು. (೧೭೨) ಶೈವಾಗಮಗಳು ಮತ್ತು ವೇದೋಪನಿಷತ್ತುಗಳು. 'ಆಗಮ' ಎಂದರೇನು? ಆಗಮಗಳು ಮತ್ತು ತಂತ್ರ. (೧೭೩) ಶೈವ, ಶಾಕ್ತ, ವೈಷ್ಣವ ಆಗಮಗಳು. ಅವುಗಳ ಸಂಖ್ಯೆ. (೧೭೪) ವೈದಿಕ ಮತ್ತು ಅವೈದಿಕ ಆಗಮಗಳು. (೧೭೫) ಆಗಮಗಳ ಉದಯದ ಕಾರಣವು. (೧೭೬) ವಿವಿಧ ಆಗಮಗಳಲ್ಲಿಯ ಏಕಸೂತ್ರತೆ ಮತ್ತು ಹಲವು ಸಾಮಾನ್ಯ ಲಕ್ಷಣಗಳು. (೧೭೭) ವೇದಾಗಮಗಳ ತತ್ವಜ್ಞಾನವು ಒಂದೇ, ಆಚಾರಗಳು ಭಿನ್ನ. (೧೭೮) ೨೮ ಶೈವಾಗಮಗಳು. (೧೭೯) ಅವುಗಳಲ್ಲಿಯ ವಿಷಯ. (೧೮೦) ವಚನ ಶಾಸ್ತ್ರದಲ್ಲಿಯ ತತ್ವಜ್ಞಾನಾದಿ ವಿಷಯಗಳು. (೧೮೧) ಅನುಭಾವವೆ ತತ್ವಜ್ಞಾನಗಳ ತಳಹದಿಯು, ಹೀಗಿದ್ದರೂ ತತಜ್ಞಾನಗಳಲ್ಲಿಯ ಭಿನ್ನತೆಯ ಕಾರಣವು. (೧೮೨) ವಚನಶಾಸ್ತ್ರದಲ್ಲಿರುವ ತತ್ವಜ್ಞಾನದ ಹೆಸರು. ಪರವಸ್ತುವಿನ ಸ್ವರೂಪ. (೧೮೩) ೩೬ ತತ್ವಗಳ ಮತ್ತು ಸೃಷ್ಟಿಯ ಉತ್ಪತ್ತಿ. (೧೮೪) ಏಕದಿಂದ ಅನೇಕ ಜೀವ, ಬಂಧ, ಮುಕ್ತಿ, ಇವುಗಳ ಲಕ್ಷಣಗಳು. (೧೮೫) ಜೀವನಧ್ಯೇಯವು – ಅಂಗಲಿಂಗ ಸಾಮರಸ್ಯವು. (೧೮೬) ಷಟ್‌ಸ್ಥಲ ಮಾರ್ಗ. ೬ ಅಂಗಸ್ಥಲ ಮತ್ತು ೬ ಲಿಂಗಸ್ಥಲ. (೧೮೭) ತ್ಯಾಗಾಂಗಾದಿ ೩ ಅಂಗಗಳು. ಬಕ್ತಮಹೇಶಸ್ಥಳಗಳು. (೧೮೮) ಭೋಗಾಂಗ, ಯೋಗಾಂಗ ಮತ್ತು ಅದರಲ್ಲಿಯ ಸ್ಥಲಗಳು. (೧೮೯) ಅಂಗಸ್ಥಲ ಲಿಂಗಸ್ಥಲಗಳ ಅನ್ವಯವು. (೧೯೦) ೩೬, ೧೦೧, ೨೧೬ ಸ್ಥಲಗಳು. (೧೯೧) ವೀರಶೈವಮತವೂ ಅದರ ಗೌರವವೂ. (೧೯೨) ಅಷ್ಟಾವರಣಗಳು. (೧೯೩) ಪಂಚಾಚಾರಗಳು, ನಿತ್ಯಕರ್ಮ, ಯಮನಿಯಮ ಇತ್ಯಾದಿ. (೧೯೪) ವಚನಕಾರರು ಹೇಳಿದ ವಿಶೇಷ ಮಾತುಗಳು.

೧೬೮. ಪೀಠಿಕಾಪ್ರಕರಣದಲ್ಲಿ ಉಪಕ್ರಮಿಸಿದ ಪದ್ಧತಿಯಿಂದ ಹೋದ ಒಂಬತ್ತು ಪ್ರಕರಣಗಳಲ್ಲಿ ವಚನಶಾಸ್ತ್ರದ ಸರ್ವಸಾಮಾನ್ಯ ತಿರುಳನ್ನು ತಿಳಿಸಲಿಕ್ಕೆ ಆದಷ್ಟು ಪ್ರಯತ್ನವು ಮಾಡಲ್ಪಟ್ಟಿತು. ಆದರೆ ಇದು ವರೆಗೆ ವಚನಶಾಸ್ತ್ರದ ಸಾಂಪ್ರದಾಯಿಕಸ್ವರೂಪದ ಕಡೆಗೆ ಅಥವಾ ಅದರಲ್ಲಿರುವ ಪಾರಿಭಾಷಿಕಶಬ್ದ ಮತ್ತು ಶಬ್ದಸಮುಚ್ಚಯ ಇವುಗಳ ಕಡೆಗೆ ನಾವು ವಿಶೇಷ ನೋಡಿಲ್ಲ. ಕರ್ನಾಟಕದ ಜನಸಾಮಾನ್ಯಕ್ಕೆ ವಚನಶಾಸ್ತ್ರದ ಮುಖ್ಯ ರಹಸ್ಯವು ತಿಳಿದು ಅದರ ಗುಣಗ್ರಹಣವು ಆಗಬೇಕು ಎಂಬ ಉದ್ದೇಶದಿಂದಲೆ ಅದರ ಸಾಂಪ್ರದಾಯಿಕಸ್ವರೂಪದ ಕಡೆಗೆ ಈವರೆಗೆ ಅಷ್ಟೊಂದು ನಾವು ಲಕ್ಷ್ಯಗೊಟ್ಟಿಲ್ಲ. ಇಡೀ ವಿವೇಚನೆಯಲ್ಲಿ ಮತ್ತು ಎಲ್ಲ ಪ್ರಕರಣಗಳಲ್ಲಿ ಸಾಂಪ್ರದಾಯಿಕ ವಿಷಯವನ್ನಾಗಲಿ, ಪಾರಿಭಾಷಿಕ ಶಬ್ದಗಳನ್ನಾಗಲಿ ಉಪಯೋಗಿಸಿದ್ದರೆ ಓದುಗರ ಮನಸ್ಸಿನಲ್ಲಿ ಸುಮ್ಮನೆ ತೊಡಕುಗಳುಂಟಾಗಬಹುದಾಗಿತ್ತು. ಅಂಥ ವಿಷಯಗಳ ಮತ್ತು ಅಯಾ ಶಬ್ದಗಳ ವಿವೇಚನೆಯನ್ನು ಒಂದು ಪ್ರತ್ಯೇಕ ಪ್ರಕರಣದಲ್ಲಿ ಮಾಡುವುದೆ ಉತ್ತಮವೆಂದು ತೋರಿದ್ದರಿಂದ ಈ ಪ್ರಕರಣದಲ್ಲಿ ವಚನಶಾಸ್ತ್ರದಲ್ಲಿಯ ಷಟ್‌ಸ್ಥಲ ಶಾಸ್ತ್ರ ಮತ್ತು ವೀರಶೈವ ಸಾಂಪ್ರದಾಯ ಇವುಗಳನ್ನೆ ತಕ್ಕ ಮಟ್ಟಿಗೆ ವಿವೇಚಿಸುವ ವಿಚಾರವಿದೆ. ಇಲ್ಲಿಯಾದರೂ ಈ ವಿಷಯಗಳ ಸಂಪೂರ್ಣ ಮತ್ತು ಸವಿಸ್ತರ ವರ್ಣನೆಯನ್ನು ಮಾಡುವದು ನಮ್ಮ ಉದ್ದೇಶವಿಲ್ಲ. ಯಾಕಂದರೆ, ಅದು ಇಲ್ಲಿ ಅವಶ್ಯವಿಲ್ಲ. ಇಲ್ಲಿ ಪ್ರಸ್ತುತವಿದ್ದ ವಚನಶಾಸ್ತ್ರದ ಸಾಂಪ್ರದಾಯಿಕ ಭಾಗವು ಓದುಗರಿಗೆ ಜನ್ಮಾಗಿ ತಿಳಿಯಲಿಕ್ಕೆ ಎಷ್ಟು ವಿವೇಚನೆಯು ಅವಶ್ಯವೊ ಅಷ್ಟೇ ವಿವೇಚನೆಯನ್ನು ಇಲ್ಲಿ ಬರೆಯುವದು ನಮ್ಮ ವಿಚಾರವಿರುವದು. ವಚನಾಮೃತದಲ್ಲಿಯ ೧೯ನೆಯ ಪ್ರಕರಣವು ಅದೇ ಉದ್ದೇಶದಿಂದ ಬರೆಯಲ್ಪಟ್ಟಿರುವದು. ಆ ಪ್ರಕರಣ ಮತ್ತು ಈ ಪ್ರಕರಣ ಇವೆರಡನ್ನೂ ಓದುವುದರಿಂದ ವಚನಶಾಸ್ತ್ರದಲ್ಲಿ ಉಕ್ತವಾದ ಶೈವಾಗಮೋಕ್ತ ತತ್ವಜ್ಞಾನವೂ ಆ ತತ್ವಜ್ಞಾನಕ್ಕನುಸರಿಸಿ ನಿಶ್ಚಯಿಸಲ್ಪಟ್ಟ ಮಾನವಧ್ಯೇಯವೂ ಆ ಧ್ಯೇಯವನ್ನು ಪ್ರಾಪ್ತಮಾಡಿಕೊಳ್ಳುವ ಷಟ್‌ಸ್ಥಲವೆಂಬ ಸಾಧನಮಾರ್ಗವೂ ವೀರಶೈವಾಚಾರವೂ ನಿಚ್ಚಳವಾಗಿ ತಿಳಿಯುವವು.

೧೬೯. ವಚನಶಾಸ್ತ್ರದ ತಳಹದಿಯು ಪವಿತ್ರಾತ್ಮರ ಆಧ್ಯಾತ್ಮಿಕ ಅನುಭವದ ಆಧಾರದ ಮೇಲೆ ನಿಂತಿದ್ದರಿಂದ ಅಖಿಲಮಾನವಕುಲಕ್ಕೆ ಅದು ಸಾಮಾನ್ಯವಿರುವದು. ಆದರೆ ಯಾವದೇ ಅನುಭವವಾಗಲಿ, ತತ್ವವಾಗಲಿ,

ಪ್ರತಿಪಾದನಸಮಯದಲ್ಲಿ ಮತ್ತು ಆಚರಣದಲ್ಲಿ ಆಯಾ ದೇಶಕಾಲ ಪರಿಸ್ಥಿತಿಗನುಸರಿಸಿ ವಿಶಿಷ್ಟ ಸ್ವರೂಪವನ್ನು ಧರಿಸುವದು. ಆತ್ಮನು ಸೃಷ್ಟಿಯಲ್ಲಿ ವ್ಯಕ್ತನಾಗಬೇಕಾದರೆ ದೇಹವು ಎಷ್ಟು ಅವಶ್ಯವೊ ನೀರು ಹರಿಯಬೇಕಾದರೆ ಪಾತ್ರವು ಎಷ್ಟು ಅವಶ್ಯವೊ ಮನುಷ್ಯನು ಸುಡಿಯಬೇಕಾದರೆ ಅವನಿಗೆ ಭಾಷೆಯು ಎಷ್ಟು ಅವಶ್ಯವೊ ಅಷ್ಟೇ ಧರ್ಮಕ್ಕೆ ಯಾವದೊಂದು ಬಾಹ್ಯ ಸಾಂಪ್ರದಾಯವು ಅವಶ್ಯವು. ಧರ್ಮದ ವಿಶಿಷ್ಟ ಬಾಹ್ಯರೂಪವೆ ಸಾಂಪ್ರದಾಯವೆನಿಸುವದು. ಉದಾ: ವಾಙ್ಮನಕ್ಕಗೋಚರನಾದ ಪರಮಾತ್ಮನನ್ನು ಮನುಷ್ಯನು ಆರಾಧಿಸತಕ್ಕದ್ದು, ಎಂಬ ತತ್ವವು ಸನಾತನವೂ ಸರ್ವಧರ್ಮಗಳಿಗೆ ಸಾಧಾರಣವೂ ಇರುವದು. ಆದರೆ ವಿವಿಧ ದೇಶಕಾಲಪರಿಸ್ಥಿತಿಯಲ್ಲಿ ವಿವಿಧ ಜನರು ವಿವಿಧ ಪ್ರತೀಕಗಳನ್ನು ಕಲ್ಪಿಸಿ ವಿವಿಧರೀತಿಯಿಂದ ಪರಮಾತ್ಮನನ್ನು ಆರಾಧಿಸುವರು. ಈ ವಿವಿಧತೆಯೆ ಬೇರೆ ಬೇರೆ ಸಾಂಪ್ರದಾಯಗಳ ಮೂಲವು. ಈ ಕಾರಣದಿಂದಲೆ ಶೈವ, ವೀರಶೈವ, ವೈಷ್ಣವ; ಮುಂತಾದ ವಿಶಿಷ್ಟ ಸಾಂಪ್ರದಾಯಗಳು ಅಸ್ತಿತ್ವದಲ್ಲಿ ಬಂದವು. ಇವುಗಳ ಬಗ್ಗೆ ಅಹಂಕಾರವನ್ನಾಗಲಿ, ದುರಭಿಮಾನವನ್ನಾಗಲಿ ತಾಳುವದು ಅಥವಾ ಇವೇ ತ್ರಿಕಾಲದಲ್ಲಿಯೂ ಉತ್ತಮೋತ್ತಮವೆಂದು ಹಟಹಿಡಿದು ವಾದಿಸುವದು, ಮತ್ತು ಆ ಬುದ್ಧಿಯಿಂದ ವಿಕ್ಕವುಗಳನ್ನು ಹೀಯಾಳಿಸುವದು ಸತ್ಯಧರ್ಮದ ದೃಷ್ಟಿಯಿಂದ ತಪ್ಪೂ ತ್ಯಾಜ್ಯವೂ ಇರುವದು. ಸಕಲ ಸಾಂಪ್ರದಾಯಗಳು ಒಂದೇಒಂದು ಸತ್ಯಧರ್ಮದ ಸ್ವರೂಪಗಳು. ದೇಶಕಾಲ ಪರಿಸ್ಥಿತಿಯ ಮೂಲಕ ಅವು ಉಂಟಾಗಿರುವವು, ಎಂದು ತಿಳಿದು ಅವುಗಳ ಬಗ್ಗೆ ಸಹಾನುಭೂತಿ ಸಹಿಷ್ಣುತೆಗಳನ್ನು ತಾಳುವದೆ ನಿಜಧರ್ಮದ ಲಕ್ಷಣವಿರುವದು. ಹರನೇ ಶ್ರೇಷ್ಠ ಅಥವಾ ಹರಿಯೇ ಶ್ರೇಷ್ಠ, ಅಂಗವೇ ಹೆಚ್ಚಿನ ಪ್ರತೀಕವು ಅಥವಾ ಯಾವದೊಂದು ಮೂರ್ತಿಯೆ ಹೆಚ್ಚಿನ ಪ್ರತೀಕವು, ಎಂದು ಮುಂತಾಗಿ ಹೊಡೆದಾಡುವದು ಕೇವಲ ಹುಂಬತನದ ಲಕ್ಷಣವಿರುವದು. ಯಾವದೇ ಸಾಂಪ್ರದಾಯದಲ್ಲಿ ಆಯಾ ಪ್ರತೀಕ ಅಥವಾ ಬಾಹ್ಯ ಆಚಾರ ಇವು ಮಹತ್ವವುಳ್ಳವುಗಳಿರುವುದಿಲ್ಲ. ಆಯಾ ಪ್ರತೀಕಗಳು ಯಾವ ಭಾವನೆಯಿಂದ ಉಪಯೋಗಿಸಲ್ಪಡುವವು ಮತ್ತು ಆಯಾ ಆಚಾರಗಳು ಯಾವ ಪವಿತ್ರ ಮತ್ತು ಉಚ್ಚ ಭಾವನೆಗಳಿಂದ ಆಚರಿಸಲ್ಪಡುವವು ಇದೇ ಮುಖ್ಯವಾಗಿ ವಿಚಾರಣೀಯ ವಿಷಯವಿರುವದು. ಅದರಿಂದಲೆ ಆಯಾ ಸಾಂಪ್ರದಾಯದ ಮಹತ್ವವು ಬೆಳೆಯುವದು ಅಥವಾ ಅಳಿಯುವದು. ಪ್ರತೀಕವು ಯಾವದಿದ್ದರೂ ಸೈ,

ಅಂಗವಿದ್ದರೇನು, ಸುಂದರ ಮೂರ್ತಿ ಇದ್ದರೇನು, ಅಥವಾ ಒಂದು ಬಿಂದು ವಿದ್ದರೇನು? ಆ ಪ್ರತೀಕದ ಮಹಾತ್ಮ್ಯವು ಅದರಲ್ಲಿಲ್ಲ, ಆದರೆ ಅದು ಯಾವ ಸಚ್ಚಿದಾನಂದ, ಸರ್ವಶಕ್ತಿಮಾನ್, ಸರ್ವಜ್ಞ, ಸರ್ವವ್ಯಾಪಕ, ಪರಮಾತ್ಮನ ಪ್ರತೀಕವಿರುವದೊ ಆ ವಸ್ತುವಿನ ನಿಜಜ್ಞಾನದಲ್ಲಿದೆ. ಆ ಜ್ಞಾನವು ಸಾಧಕನಿಗೆ ಯಾವಮಟ್ಟಿಗೆ ಆಗಿದೆಯೊ ಆ ಮಟ್ಟಿಗೆ ಅವನು ನಿಜವಾಗಿ ಧಾರ್ಮಿಕನು ಹೊರತು ಅವನು ಒಂದು ವಿಶಿಷ್ಟ ಪ್ರತೀಕವನ್ನು ಉಪಯೋಗಿಸುತ್ತಿರುವನೆಂದು ಧಾರ್ಮಿಕನೆನಿಸಲಾರನು. ನಿಜಧರ್ಮದ, ಧಾರ್ಮಿಕತೆಯ, ಆಧ್ಯಾತ್ಮಿಕತೆಯ, ಅನುಭಾವದ ಒರೆಗಲ್ಲು ಯಾವದೊಂದು ಸಾಂಪ್ರದಾಯದಲ್ಲಿಲ್ಲ, ಸದ್ಗುಣಗಳಲ್ಲಿ ಸದಾಚಾರಗಳಲ್ಲಿ, ಆತ್ಮಸಂಯಮದಲ್ಲಿ, ಸಮಭಾವದಲ್ಲಿ ಆತ್ಮೌಪಮ್ಯಬುದ್ಧಿಯಲ್ಲಿ, ಸರ್ವಭೂತಹಿತರತಿಯಲ್ಲಿ, ಆ ಒರೆಗಲ್ಲು ಇರುವದು. ಇವು ಯಾವನಲ್ಲಿ ಎಷ್ಟರಮಟ್ಟಿಗೆ ಅಳವಟ್ಟಿರುವವೊ ಅಷ್ಟರಮಟ್ಟಿಗೆ ಅವನು ಧಾರ್ಮಿಕನು ಅವನು ಯಾವದೇ ಧರ್ಮದವನಿರಲಿ, ಯಾವದೇ ಸಂಪ್ರದಾಯವನ್ನನುಸರಿಸುತ್ತಿರಲಿ. ನಾವು ಸಾಂಪ್ರದಾಯಗಳ ಕಡೆಗೆ ಈ ದೃಷ್ಟಿಯಿಂದಲೆ ನೋಡತಕ್ಕದ್ದು, ಮತ್ತು ಅವುಗಳಿಗೆ ಇಷ್ಟೇ ಮಹತ್ವವನ್ನು ಕೊಡತಕ್ಕದ್ದು. ವೀರಶೈವ ಸಂಪ್ರದಾಯದಲ್ಲಿ ಕೂಡ ನಾವು ಈಗ ಹೋದ ಒಂಬತ್ತು ಪ್ರಕರಣಗಳಲ್ಲಿ ಚರ್ಚಿಸಿದ ವಿಷಯಗಳೇ ಮುಖ್ಯವಾದವುಗಳು ಹೊರತು ಅದರ ಸಾಂಪ್ರದಾಯಿಕಸ್ವರೂಪವು ಅಷ್ಟೊಂದು ಮಹತ್ವದ್ದಲ್ಲ. ಆದರೆ ಅದರ ಸಂಪೂರ್ಣಸ್ವರೂಪವು ತಿಳಿಯಬೇಕಾಗಿದ್ದರೆ ನಮಗೆ ಸಂಪ್ರದಾಯಜ್ಞಾನವೂ ಅವಶ್ಯವಿರುವದು. ಆದುದರಿಂದ ಅದನ್ನು ಇಲ್ಲಿ ವಿಚಾರಿಸಿದ್ದೇವೆ.

೧೭೦. ಮನುಷ್ಯನ ಆತ್ಯಂತಿಕ ಧ್ಯೇಯವೇನಿರುವದು, ಇದನ್ನು ತಿಳಿದುಕೊಳ್ಳಲಿಕ್ಕೆ ನಾವು ಯಾವದೇ ಶಾಸ್ತ್ರದ ಕಡೆಗೆ ಇಲ್ಲವೆ ಗ್ರಂಥದ ಕಡೆಗೆ ಹೋಗುವ ಅವಶ್ಯಕತೆ ಇಲ್ಲ. ಮನುಷ್ಯನ ಅಂತರಂಗದಲ್ಲಿ ನಡೆದ ನಾನಾವಿಧ ಚಟುವಟಿಕೆಗಳನ್ನು ಪರೀಕ್ಷಿಸಿ ನೋಡಿದರೆ ನಿತ್ಯಸುಖವೆ ಮನುಷ್ಯನ ಧ್ಯೇಯವೆಂಬುದು ನಮಗೆ ಕೂಡಲೆ ಹೊಳೆಯುವದು. ಧ್ಯೇಯವು ಯಾವದು, ಇದನ್ನು ತಿಳಿದುಕೊಳ್ಳುವದಕ್ಕಿಂತ ಅದನ್ನು ಹೇಗೆ ಪ್ರಾಪ್ತಮಾಡಿಕೊಳ್ಳಬೇಕು, ಇದನ್ನರಿತುಕೊಂಡು ಅದರಂತೆ ಅದನ್ನು ಪ್ರಾಪ್ತಮಾಡಿಕೊಳ್ಳುವದೆ ಕಠಿಣಕಾರ್ಯವಿರುವದು. ಇಹಪರದಲ್ಲಿ ಪರಮಸುಖವನ್ನು, ನಿತ್ಯನಿರಂತರಸುಖವನ್ನು, ಅಥವಾ ಮುಕ್ತಿಯನ್ನು ಇಲ್ಲವೆ ಮೋಕ್ಷವನ್ನು ದೊರಕಿಸುವುದೆ ಮನುಷ್ಯನ ಧ್ಯೇಯವಿರುವದು,

ಎಂಬುದನ್ನು ಸ್ವಾನುಭವದಿಂದಲೆ ನಿಶ್ಚಯಿಸಿ ಆ ಸ್ಥಿತಿಯನ್ನು ಪಡೆಯಲು ವಚನಕಾರರು ವಿಶಿಷ್ಟ ತತ್ವಜ್ಞಾನವನ್ನು ಪ್ರತಿಪಾದಿಸಿದರು, ವಿಶಿಷ್ಟ ಸಾಧನಮಾರ್ಗವನ್ನು ಅನುಸರಿಸಿದರು, ಮತ್ತು ವಿಶಿಷ್ಟಸಂಪ್ರದಾಯದಂತೆ ಆಚರಿಸಿದರು. ಇವುಗಳ ಸಾನಾನ್ಯರೂಪವನ್ನು ಸಾಮಾನ್ಯ ವೇದಾಂತಿಕ ಪರಿಭಾಷೆಯಲ್ಲಿ ನಾವು ಇದುವರೆಗೆ ಹೇಳಿದೆವು. ಇನ್ನು ಇವುಗಳಲ್ಲಿಯ ವೈಶಿಷ್ಟ್ಯವನ್ನು ವಿಶಿಷ್ಟ ಪರಿಭಾಷೆಯಲ್ಲಿ ಇಲ್ಲಿ ಹೇಳಬೇಕಾಗಿದೆ.

೧೭೧. ವಚನಶಾಸ್ತ್ರದಲ್ಲಿಯ ತತ್ವಜ್ಞಾನವಾಗಲಿ, ಸಾಧನಮಾರ್ಗವಾಗಲಿ, ಆಚಾರವಿಚಾರಗಳಾಗಲಿ, ವೇದಾಗಮಾದಿಗಳಿಗೆ ವಿಸಂಗತ ಇಲ್ಲವೆ ವಿರುದ್ಧವಿರುವವು ಎಂದು ಯಾರಾದರೂ ತಿಳಿದಿದ್ದರೆ ಅದೊಂದು ತೀರ ನಿರಾಧಾರವಾದ ತಪ್ಪುತಿಳಿವಳಿಕೆಯು, ಎಂದು ಇಲ್ಲಿ ಒತ್ತಿಹೇಳಬೇಕಾಗಿರುವದು. ವಚನಕಾರರು ಸಾಕ್ಷಾತ್ಕಾರವಾದಿಗಳು ಅಂದರೆ ಆತ್ಮಾನುಭವವೆ ಕೊನೆಯ ಮತ್ತು ಅತ್ಯಂತಿಕ ಸತ್ಯದ ಪರಮಪ್ರಮಾಣವು, ಎಂದು ನಂಬುವವರು, ಎಂಬುದು ನಿಜವು. ಆಧಾರವೆಂದು ವೇದಾಗಮಾದಿಗಳ ವಾಕ್ಯಗಳನ್ನು ಅವರು ಅಲ್ಲಲ್ಲಿ ಉದಹರಿಸಿರುವಂತೆ ಕೆಲವೊಂದು ಪ್ರಸಂಗಗಳಲ್ಲಿ ವೇದ, ಶಾಸ್ತ್ರ, ಪುರಾಣ, ಆಗಮ ಮುಂತಾದವುಗಳನ್ನು ಕುರಿತು ಅವರು ಜರೆದೂ ನುಡಿದಿರುವರು (೪೬೮, ೪೬೯, ೪೭೦, ವ. ಪು. ೩೧೨–೩೧೭), ಎಂಬ ಮಾತು ನಿಜವಿರುವದು. ಆದರೆ ಅವರ ತತ್ವಜ್ಞಾನ, ವಿಚಾರ, ಆಚಾರ, ನೀತಿನಿಯಮ ಇವುಗಳನ್ನೆಲ್ಲ ನೋಡಿದರೆ ಅವರು ಶೈವಾಗಮಗಳಿಂದ ಎಳ್ಳಷ್ಟಾದರೂ ಅತ್ತಿತ್ತ ಕದಲಿದಂತೆ ಕಂಡುಬರುವುದಿಲ್ಲ. ಅವರು ಹೇಳಿದ ಪ್ರತಿಯೊಂದು ಪ್ರಮುಖ ಸಂಗತಿಯನ್ನು ಆಗಮಗಳಲ್ಲಿ ತೆಗೆದು ತೋರಿಸಬಹುದು. ಶೈವಾಗಮಗಳಿಗೂ ವಚನಶಾಸ್ತ್ರಕ್ಕೂ ಇಷ್ಟು ನಿಕಟಸಂಬಂಧ ವಿರುವಕಾರಣವೇನಂದರೆ, ವಚನಕಾರರು ನಡೆದ ಮಾರ್ಗವು ಸಂಪೂರ್ಣವಾಗಿ ಆಗಮೋಕ್ತವಿರುವದು, ಅವರು ಪಡೆದ ಸ್ಫೂರ್ತಿಯು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಲಿ ಆಗಮಪ್ರೇರಿತವು, ಮತ್ತು ಅವರು ಸಂದರ್ಶಿಸಿದ ಸಾಕ್ಷಾತ್ಕಾರವು ಆಗಮಸಾಕ್ಷಿಯಾದುದು. ಆಗಮಗಳಲ್ಲಿ ವೇದಭಿನ್ನವಾದ ಇಲ್ಲವೆ ವೇದವಿಸಂಗತವಾದ ಹಲವು ಸಂಗತಿಗಳು ಕ್ವಚಿತ್ ಇದ್ದರೂ ಅವು ಕಲಿಯುಗಕ್ಕೆ ಸರಿಹೋಗುವಂತೆ ಮಾಡಿದ ಮಾರ್ಪಾಟುಗಳೆ ಹೊರತು ವೇದಬಾಹ್ಯಸಂಗತಿಗಳಲ್ಲ, ಎಂದು ಆಗಮಗಳ ಮತ್ತು ಅವುಗಳನ್ನು ಕುರಿತು ಬರೆದ ಭಾಷ್ಯಕಾರರ ಅಭಿಪ್ರಾಯವಿರುವದು. 'ಶೈವಸಿದ್ಧಾಂತ ಪರಿಭಾಷೆ'ಯಲ್ಲಿಯ, 'ಶ್ರೂಯತೇ ಹಿ ವೇದಸಾರಃ ಶಿವಾಗಮಃ,' ಎಂಬ

ವಾಕ್ಯವು ಇದೇ ಮಾತನ್ನು ಹೇಳುತ್ತಿದೆ. ಆ ಬಗೆಯ ಮಾರ್ಪಾಟುಗಳು ಪ್ರತಿಯೊಂದು ಧರ್ಮಾಚಾರದಲ್ಲಿ ಹಿಂದಕ್ಕೆ ಆಗಿವೆ ಮತ್ತು ಮುಂದಾದರೂ ಆಗತಕ್ಕವುಗಳೆ. ಹಾಗೆ ಮಾರ್ಪಾಟುಗಳಾಗುತ್ತಿರುವದು ಪ್ರತಿಯೊಂದು ಜೀವಂತಧರ್ಮದ ಲಕ್ಷಣಗಳಲ್ಲಿ ಒಂದು ಮುಖ್ಯ ಲಕ್ಷಣವಿರುವದೆಂದು ಹೇಳಬಹುದು. ಈ ಬಗೆಯ ಮಾರ್ಪಾಟುಗಳಾಗುತ್ತಿರುತ್ತವೆ, ಎಂಬ ಬಗ್ಗೆ ಧರ್ಮಗ್ರಂಥಗಳ ಸಾಕ್ಷಿಯನ್ನೆ ಕೊಡಬಹುದು. ಸ್ಮೃತಿಗ್ರಂಥಗಳಲ್ಲಿರುವ ಕಲಿವರ್ಜ್ಯಪ್ರಕರಣವು, ಅಥವಾ ಆಗಮಗ್ರಂಥದ ಅವತರಣವೇ ಬೇಕಾಗಿದ್ದರೆ ಕುಲಾರ್ಣವತಂತ್ರವೆಂಬ ಶಾಕ್ತಾಗಮದಲ್ಲಿರುವ,

ಕೃತೇ ಶ್ರುತ್ಯುಕ್ತಾ ಆಚಾರಾಸ್ತ್ರೇತಾಯಾಂ ಸ್ಮೃತಿಸಂಭವಾಃ ।
ದ್ವಾಪರೇತು ಪುರಾಣೋಕ್ತಾಃ ಕಲಾವಾಗಮಸಮ್ಮತಾಃ ॥

ಎಂಬ ಶ್ಲೋಕವು ಈ ಮಾತಿನ ಸಾಕ್ಷಿಯಾಗಿದೆ. ಈ ಶ್ಲೋಕವು ಪರ್ಯಾಯದಿಂದ, ಶಾಕ್ತಾಗಮಗಳು ವೇದಪರಂಪರೆಯಲ್ಲಿಯವೆ, ಎಂಬ ಮಾತನ್ನು ಹೇಳಿ ಅವುಗಳ ಕಾಲವು ಈಚೇಗಿನದೆಂಬುದನ್ನು ನಿರ್ದೇಶಿಸುತ್ತಿದೆ. ಗೀತಾಕಾರರು ಮಾಡಿದ 'ಯಜ್ಞ' ಕಲ್ಪನೆಯ ಅರ್ಥವೂ ವಿಸ್ತಾರವೂ ಈ ಬಗೆಯ ಮಾರ್ಪಾಟಿನ ಉತ್ತಮ ಉದಾಹರಣೆ ಇರುವದು. ಮೊದಲು ಅಗ್ನಿಮುಖಾಂತರ ಮಾಡತಕ್ಕ ದ್ರವ್ಯಯಜ್ಞವೆ ಯಜ್ಞವೆನಿಸುತ್ತಿತ್ತು ಆದರೆ ಮುಂದೆ ಆತ್ಮಸಂಯಮ, ಪ್ರಾಣಾಯಾಮ ಮುಂತಾದ ಕರ್ಮಗಳಿಗೂ ಯಜ್ಞದಷ್ಟೆ ಮಹತ್ವವೂ ಪಾವಿತ್ರ್ಯವೂ ಉಂಟಾಯಿತು.

೧೭೨. ಶೈವಾಗಮಗಳ ಮುಖಾಂತರ ವಚನಶಾಸ್ತ್ರದ ಪರಂಪರೆಯು ವೇದೋಪನಿಷತ್ತುಗಳವರೆಗೆ ಹೋಗುತ್ತಿದ್ದರೂ ಆ ಶಾಸ್ತ್ರದ ಪ್ರತ್ಯಕ್ಷ ಸಂಬಂಧವು ಶೈವಾಗಮಗಳೊಡನೆಯೆ ಮಾತ್ರ ಇರುವದು. ಇನ್ನು ವೇದೋಪನಿಷತ್ತು ಮತ್ತು ಶೈವಾಗಮ ಇವುಗಳ ಸಂಬಂಧವೇನಿರುವದು ಮತ್ತು ಅವುಗಳ ಕಾಲವೇನು ಇದು ಮಹತ್ವದ ಪ್ರಶ್ನೆಯಿದ್ದರೂ ಇಲ್ಲಿ ಅದು ವಿಶೇಷ ಪ್ರಸ್ತುತವಿಲ್ಲ. ಶೈವಾಗಮಗಳಾಗಲಿ ಯಾವದೇ ಆಗಮುಗಳಾಗಲಿ ವೇದಗಳನ್ನು ಅಲ್ಲಗಳೆಯುವದಿಲ್ಲ ಅಥವಾ ಅವುಗಳ ತತ್ವಗಳನ್ನು ಎಲ್ಲಿಯೂ ವಿರೋಧಿಸುವುದಿಲ್ಲ, ಮತ್ತು ಶೈವಾಗಮಗಳು ಎಷ್ಟೇ ಪ್ರಾಚೀನವಿದ್ದರೂ ಅವು ವೇದ ಹಾಗೂ ದಶೋಪನಿಷತ್ತು ಇವುಗಳಿಗಿಂತ ಈಚೆಗಿನವಿರುವವು, ಇಷ್ಟು ನಾವು ಇಲ್ಲಿ ಲಕ್ಷದಲ್ಲಿಟ್ಟರೆ ಸಾಕು. ಒಟ್ಟಿಗೆ ಆಗಮುಗಳಿಂದರೇನು, ಆಗಮಗಳು ಎಷ್ಟು ಬಗೆಯವಿರುವವು. ಅವುಗಳ ವಿಷಯವೇನು ಮುಂತಾದ ಮಾತುಗಳನ್ನು ನೋಡಿದರೆ ಶೈವಾಗಮಗಳ ಮತ್ತು

ಅವು ಪ್ರತಿಪಾದಿಸಿದ ವಿಷಯಗಳ ಯಥಾರ್ಥಕಲ್ಪನೆಯು ಚನ್ನಾಗಿ ಆಗುವದು. ಮುಂದೆ ವಚನಶಾಸ್ತ್ರಕ್ಕೂ ಶೈವಾಗಮಗಳಿಗೂ ಎಷ್ಟು ಮತ್ತು ಯಾವಬಗೆಯ ನಿಕಟಸಂಬಂಧವಿರುವದು ಇದನ್ನು ಹೆಚ್ಚು ಸ್ಪಷ್ಟಪಡಿಸಲಿಕ್ಕೆ ಅನುಕೂಲವಾಗುವದು. ಆ ಮೇಲೆ ವಚನಶಾಸ್ತ್ರದಲ್ಲಿಯ ಸಾಂಪ್ರದಾಯಿಕ ತತ್ವಜ್ಞಾನ, ಸಾಧನ, ಆಚಾರ ಮುಂತಾದವುಗಳನ್ನು ನೋಡಬಹುದು. 'ಆಗಮ' ಈ ಸಂಸ್ಕೃತ ಶಬ್ದದ ಮೂಲ ಅರ್ಥವು 'ಬರು' ಎಂದು ಇರುವದು, ಇಲ್ಲಿ 'ಆಗಮಗ್ರಂಥ'ಗಳೆಂದರೆ ಪರಂಪರೆಯಿಂದ ಬಂದ ಶಾಸ್ತ್ರ ಎಂದು ಈ ಶಬ್ದಗಳ ಅರ್ಥವು ಆಗುವದು. ಆದರೆ 'ಗಮ' ಈ ಧಾತುವು 'ಗತ್ಯರ್ಥ'ವಿರುವುದರಿಂದ ಅದು ಸಂಸ್ಕೃತ ವ್ಯಾಕರಣ ನಿಯಮಗಳ ಪ್ರಕಾರ 'ಜ್ಞಾನ' ಎಂಬ ಅರ್ಥವನ್ನು ಕೊಡುವದು. ಅದಕ್ಕೆ 'ಆ' ಎಂಬ ಉಪಪದವು ಹತ್ತಿತೆಂದರೆ 'ಪೂರ್ಣಜ್ಞಾನ' ಎಂಬರ್ಥವು ಆಗುವದು. 'ಆಪ್ತೋಕ್ತಿರಾಗಮಸ್ತೋಽಪಿ' ಅಪ್ತನ ಉಕ್ತಿಯೆ ಆಗಮವು ಎಂದು ಪಾಷ್ಕರಸಂಹಿತೆಯು ವಚನವಿರುವದು. ಇಲ್ಲಿ 'ಆಪ್ತ' ಅಂದರೆ 'ಪರಶಿವ' ಎಂಬರ್ಥವು. (ಮೃ. ದ ಪ್ರಸ್ತಾವನೆ) ವೇದಗಳು ಕೂಡ ಎಷ್ಟೋ ಸಾರೆ ಆಗಮಗಳೆಂದು ಸಂಬೋಧಿಸಲ್ಪಟ್ಟಿರುವವು. 'ನಿಗಮಾಗಮ' ಎಂಬ ಪದದಲ್ಲಿ 'ನಿಗಮ' ಅಂದರೆ ವೇದ ಮತ್ತು 'ಆಗಮ' ಅಂದರೆ ಸಾಧನಶಾಸ್ತ್ರ ಹೀಗೆ ಅರ್ಥವಾಗುವದು. ಇಲ್ಲಿ ನಾವು 'ಆಗಮ' ಇದನ್ನು ವೇದ ಅಥವಾ ಉಪನಿಷತ್ತು ಈ ಅರ್ಥದಿಂದ ಉಪಯೋಗಿಸುವುದಿಲ್ಲ. ಇಲ್ಲಿ ಆಗಮಗಳೆಂದರೆ ಪರಂಪರೆಯಿಂದ ಬಂದ ವಿಶಿಷ್ಟಮತಗ್ರಂಥಗಳು ಹಾಗೂ ಸಾಧನಶಾಸ್ತ್ರವು ಎಂದೇ ಇರುವದು. ಇವುಗಳಿಗೆ ತಂತ್ರಗ್ರಂಥಗಳೆಂಬ ಹೆಸರೂ ಇರುವದು. ವೇದಾಗಮ ಅಥವಾ ನಿಗಮಾಗಮ ಎಂದೆನ್ನುವ ಬದಲು 'ಶ್ರುತಿ ತಂತ್ರ' ಎಂದು ಸೂಕ್ಷ್ಮಾಗಮದಲ್ಲಿ (ಸ. ೧೮೭) ಉಲ್ಲೇಖವಿರುವದು. 'ತನ್ತೇ ವಿಸ್ತಾರ್ಯತೇ ಜ್ಞಾನಂ ಅನೇನ ತ್ರಾಯತೇಜ ಇತಿ ತಂತ್ರಮ್।' ಈ ಶಾಸ್ತ್ರದಿಂದ ಜ್ಞಾನದ ಪ್ರಸಾರವಾಗಿ ಮನುಷ್ಯನ ಉದ್ಧಾರವಾಗುವುದರಿಂದ ಇದಕ್ಕೆ ತಂತ್ರವೆಂಬ ಹೆಸರು, ಎಂದು ಇದರ ನಿರುಕ್ತವು ಹೇಳಲ್ಪಟ್ಟಿರುವದು. ಕಾಮಿಕಾಗಮದ ತಂತ್ರಾಂತರಪಟಲದಲ್ಲಿ,

ತನೋತಿ ವಿಪುಲಾನರ್ಥಾನ್ ತಂತ್ರಮಂತ್ರಸಮನ್ವಿತಾನ್।
ತ್ರಾಣಂ ಚ ಕುರುತೇ ಯಸ್ಮಾತ್ ತಂತ್ರಮಿತ್ಯಭಿಧೀಯತೇ॥

ತತ್ವ ಮತ್ತು ಮಂತ್ರ ಇವುಗಳಿಂದ ಕೂಡಿದ ಅನೇಕ ಅರ್ಥಗಳನ್ನು ಹೇಳುವುದರಿಂದಲೂ ಮನುಷನನ್ನು ರಕ್ಷಿಸುವುದರಿಂದಲೂ ಈ ಶಾಸ್ತ್ರವು ತಂತ್ರವೆಂದೆನಿಸುತ್ತಿದೆ, ಎಂಬ ವಾಖ್ಯೆಯು ಇರುವದು. ತಂತ್ರಗಳು ಒಮ್ಮೊಮ್ಮೆ ಶ್ರುತಿ ಎಂದೂ ಕರೆಯಲ್ಪಡುವವು. ವಚನಕಾರರು ಶ್ರುತಿ ಎಂದು ಆಗಮವಾಕ್ಯಗಳನ್ನು ಎಷ್ಟೋ ಕಡೆಗೆ(ಪ ೫೨೦ ಜ. ೫೪)ಉದಹರಿಸಿರುವರು. ಮನುಸ್ಮೃತಿಯ ಪ್ರಸಿದ್ಧ ಭಾಷ್ಯಕಾರನಾದ ಕುಲ್ಲೂಕಭಟ್ಟನು ತನ್ನ ಭಾಷ್ಯದಲ್ಲಿ ಆಗಮಗಳಲ್ಲಿಯ ಮಂತ್ರಭಾಗವನ್ನು ಕುರಿತು ಹೇಳುವಾಗ, 'ವೈದಿಕೀ ತಾಂತ್ರಿಕೀ ಚೈವ ದ್ವಿವಿಧಾ ಶ್ರುತಿ ಕೀರ್ತಿತಾ।' ವೈದಿಕ ಮತ್ತು ತಾಂತ್ರಿಕ ಎಂಬ ಎರಡು ಬಗೆಯ ಶ್ರುತಿಯು ಪ್ರಸಿದ್ಧವಿರುವದು, ಎಂದು ಅಂದಿರುವನು. ಶ್ರೀಮದ್ಭಾಗವತವೆಂಬ ಪ್ರಸಿದ್ಧ ವೈಷ್ಣವ ಗ್ರಂಥದಲ್ಲಿ ಭಗವಂತನು 'ವೈದಿಕ ತಾಂತ್ರಿಕ, ಮತ್ತು ಮಿಶ್ರ ಹೀಗೆ ಮೂರು ಬಗೆಯಿಂದ ನನ್ನನ್ನು ಪೂಜಿಸಬಹುದು. ಕಲಯುಗದಲ್ಲಿ ತಂತ್ರೋಕ್ತವಾಗಿ ಕೇಶವನನ್ನು ಪೂಜಿಸತಕ್ಕದ್ದು,' ಎಂದು ಅಂದಿರುವನು. ತಂತ್ರವು ವೇದದಷ್ಟೆ ಮಹತ್ವದ್ದು ಮತ್ತು ಕಲಿಯುಗದಲ್ಲಿ ಅದನ್ನ ನುಸರಿಸುವುದೆ ಯೋಗ್ಯವು, ಎಂದು ಈ ವಚನವು ಪ್ರತಿಪಾದಿಸುವದು. ತಂತ್ರಶಾಸ್ತ್ರವು 'ವೇದಾಂಗ' ವೆಂದು ದೇವೀಭಾಗವತವು ಹೇಳಿರುವದು. ಶಾಕ್ತ ಆಗಮಗಳಲ್ಲಿ ಒಂದಾದ ಕುಲಾರ್ಣವತಂತ್ರದ 'ತಸ್ಮಾತ್ ವೇದಾತ್ಮಕಂ ಶಾಸ್ತ್ರಂ ವಿದ್ಧಿ ಕೌಲಾತ್ಮಕಂ ಪ್ರಿಯೇ' ಎಂಬ ವಚನವು, ಶಾಕ್ತತಂತ್ರವು ವೇದಾತ್ಮಕವು, ಎಂದು ಪ್ರತಿಪಾದಿಸುವದು. ಒಟ್ಟಿಗೆ ನೋಡಿದರೆ, ಆಗಮಗಳು ಅಥವಾ ತಂತ್ರಗಳು, ವೇದಗಳನ್ನಲ್ಲಗಳೆಯದೆ ಇವುಗಳಿಗೆ ಅವಿರೋಧಿಯಾಗಿ ಕಾಲಮಾನಕ್ಕನುಸರಿಸಿ ಹಲವು ವಿಶಿಷ್ಟ ಲಕ್ಷಣಗಳಿಂದ ಯುಕ್ತವಾಗಿ ವೇದೋಪನಿಷತ್ತುಗಳಲ್ಲಿ ಹೇಳಿದ ಧ್ಯೇಯಗಳನ್ನೆ ಕೈವಶಮಾಡಿಕೊಳ್ಳಲು ಹೊರಟ ಸಾಧನಶಾಸ್ತ್ರವೆಂದು ಹೇಳಬಹುದು. ವೇದವು ಹೇಳಿದ ತತ್ವಗಳನ್ನು ಅನುಭವಕ್ಕೆ ತಂದುಕೊಡಲು ಬೇಕಾಗಿರುವ ಆಚಾರವಿಚಾರಗಳನ್ನೂ ಸಾಧನಗಳನ್ನೂ ಶಿವಾಗಮಂಗಳು ಬೋಧಿಸುತ್ತಿವೆ, ಎಂದು ಶ್ರೀ. ಪಾವಟೆಯವರ ಸ್ಪಷ್ಟ ಮತವಿರುವದು (ಚ. ತೈ. ೭). ೧೪ನೆಯ ಶತಮಾನದ ಪ್ರಸಿದ್ಧ ಶೈವಸಿದ್ಧಾಂತಿಯಾದ ನೀಲಕಂಠನೆಂಬ ಬ್ರಹ್ಮಸೂತ್ರದ ಭಾಷ್ಯಕಾರನು, 'ವಯಂ ತು ವೇದಶಿವಾಗಮಯೋಃ ಭೇದಂ ನ ಪಶ್ಯಾಮಃ' ಎಂದು ವೇದ ಹಾಗೂ ಶಿವಾಗಮ ಇವು ಏಕರೂಪವಿರುವವು, ಅವುಗಳಲ್ಲಿ ಏನೂ ಭೇದವಿಲ್ಲ, ಎಂದು ಸ್ಪಷ್ಟವಾಗಿ ಹೇಳಿರುವನು. ಆಗಮುಗಳು 'ಶಿವನ ವಚನ'ವಿರುವುದರಿಂದ ಅವುಗಳಿಗೆ ಪ್ರಾಮಾಣ್ಯವಿರುವದು. 'ಪ್ರಮಾಣಮೇಕಂ ತದ್ವಾಕ್ಯಂ ತಥ್ಯಮೀಶ್ವರಭಾಷಿತಮ್' ಎಂದು ಮತಂಗ ಪರಮೇಶ್ವರಾಗಮದಲ್ಲಿ ಉಕ್ತವಾಗಿರುವದು. ಎಲ್ಲ ಬಗೆಯ ಆಗಮಗಳೂ

ತಂತ್ರಗಳೂ ಇದೇ ಮಾದರಿಯ ವಿಚಾರಗಳನ್ನು ವ್ಯಕ್ತಮಾಡಿರುವವು. ಇನ್ನು ಎಷ್ಟು ಬಗೆಯ ಆಗಮುಗಳಿರುವವು, ಅವುಗಳ ಸಾಮಾನ್ಯ ಲಕ್ಷಣ ವೇನು, ಅವುಗಳು ಹೇಳುವ ಆಚಾರಗಳಿಗೂ ವೈದಿಕಾಚಾರಗಳಿಗೂ ಭೇದವು ಯಾತರಲ್ಲಿರುವದು, ಅದು ತಾತ್ವಿಕವಿರುವದೊ ಅಥವಾ ಕೇವಲ ದೇಶಕಾಲ ಅಧಿಕಾರದ ಮೂಲಕ ಉಂಟಾಗಿರುವದೊ, ಈ ಮುಂತಾದ ಮಾತುಗಳನ್ನು ನೋಡಿ ಮುಂದೆ ಶೈವಾಗಮಗಳನ್ನು ಪರಿಶೀಲಿಸುವಾ.

೧೭೩. ಆಗಮುಗಳ ಅಥವಾ ತಂತ್ರಗಳ ಸಾಮಾನ್ಯ ಸ್ವರೂಪವು ಒಂದೇ ಇದ್ದರೂ ಅವೆಲ್ಲವು ವೇದೋಪನಿಷತ್ತುಗಳನ್ನು ಆತ್ಯಂತಿಕ ಆಧಾರ ಗ್ರಂಥಗಳೆಂದು ಮಾನ್ಯಮಾಡುತ್ತಿದ್ದರೂ ಇಷ್ಟದೇವತಾಭೇದ ಮತ್ತು ಹಲವು ಗೌಣಭೇದ ಇವುಗಳ ಮೂಲಕ ಅವುಗಳನ್ನು ಮುಖ್ಯವಾಗಿ ಶೈವ, ಶಾಕ್ತ, ಮತ್ತು ವೈಷ್ಣವ ಎಂದು ವಿಂಗಡಿಸಬಹುದು. ಸೌರ ಮತ್ತು ಗಾಣಪತ್ಯ ತಂತ್ರಗಳೂ ಕೇಳಿಕೆಯಲ್ಲಿವೆ, ಆದರೆ ಅವುಗಳ ಅನುಯಾಯಿಗಳ ಸಂಖ್ಯೆಯು ತೀರ ಸಣ್ಣದಿರುವುದರಿಂದ ಮತ್ತು ಅವು ಈಗ ಪೂರ್ಣ ಉಪಲಬ್ಧವಿಲ್ಲದಿರುವುದರಿಂದ ಅವುಗಳನ್ನು ಇಲ್ಲಿ ಎಣಿಸುವದು ಅಥವಾ ಪರಿಶೀಲಿಸುವದು ಸಾಧ್ಯವಿಲ್ಲ. ಈ ವಿಭಾಗಗಳು ಪ್ರಾಧಾನ್ಯತಃ ಆಯಾ ಮಾರ್ಗದವರ ಶಿವ, ಶಕ್ತಿ, ಮತ್ತು ವಿಷ್ಣು ಎಂಬ ಭಿನ್ನ ಇಷ್ಟದೇವತೆಗಳ ಮೂಲಕವೆ ಆಗಿರುವವು. ಒಮ್ಮೆ ಪ್ರತ್ಯೇಕ ಮತಗಳು ಪ್ರಾರಂಭವಾದ ಬಳಿಕ ಆಯಾ ಸಾಂಪ್ರದಾಯಗಳಲ್ಲಿ ಅನೇಕ ಆಚಾರಭೇದಗಳು ಉಂಟಾಗಿರಲಿಕ್ಕೆ ಸಾಕು. ಯಾವ ಇಷ್ಟದೇವತೆ ಇದ್ದರೂ ಉಪನಿಷದೋಕ್ತ ಜನ್ಮಮರಣರಹಿತ ಮುಕ್ತಿಯೆ ಎಲ್ಲ ತಂತ್ರಗಳ ಮುಖ್ಯ ಧ್ಯೇಯವಿರುವದು. ಆ ಧ್ಯೇಯವನ್ನು ಕುರಿತು ಸಹ ವಿಶೇಷ ತಾತ್ವಿಕ ಚರ್ಚೆಯನ್ನು ಮಾಡುತ್ತ ಕೂಡದೆ ಆ ಧ್ಯೇಯವನ್ನು ಸಾಧಿಸುವ ಬಗೆಯಾವುದು ಇದನ್ನು ನೋಡಿ ಅದರಂತೆ ಆಚಾರಗಳನ್ನು ವಿಧಿಸುವುದೆ ತಮ್ಮ ಪ್ರಧಾನವಿಷಯವೆಂದು ತಂತ್ರಗಳು ತಿಳಿದಿರುವವು. ಆದುದರಿಂದ ಅವುಗಳಿಗೆ ಸಾಧನಶಾಸ್ತ್ರವೆಂದು ಅನ್ನುವ ರೂಢಿಯುಂಟು. ಇಷ್ಟದೇವತೆಗಳು ಬೇರೆಬೇರೆ ಇರುವದು ಅಷ್ಟೇನು ತಪ್ಪಲ್ಲ ಅಥವಾ ಮಹತ್ವದ ಸಂಗತಿಯಲ್ಲ, ಎಂಬುದನ್ನು ತೋರಿಸುವುದಕ್ಕಾಗಿ ಶಾಕ್ತಮಾರ್ಗದ ಸಂಮೋಹನತಂತ್ರವು, 'ರಾಮ· ಮತ್ತು ಶಿವ ಇವರಲ್ಲಿ ಭೇದವನ್ನೆಣಿಸುವವರು ಮೂರ್ಖರು' (ಪ್ರಕ. ೯) ಎಂದೂ 'ಆದಿನಾರಾಯಣನೂ ಪರಶಂಭುವೂ ಒಂದೇ' (ಪ್ರಕ. ೮) ಎಂದೂ ಮಹಾಕಾಲಿ ಮತ್ತು ಮಹಾಕಾಲ ಇವರು ಒಂದೇ ಎಂದೂ ಪ್ರತಿ

ಪಾದಿಸಿರುವದು. ತತ್ವತಃ ನೋಡಿದರೆ, ಈ ಮಾತು ನಿಜವೆನಿಸದಿರಲಾರದು. ಶೈವರಾಗಲಿ, ಶಾಕ್ತರಾಗಲಿ, ವೈಷ್ಣವರಾಗಲಿ, ತಮ್ಮ ತಮ್ಮ ಪ್ರತೀಕಗಳ ಮತ್ತು ವಿವಿಧ ಆಚಾರಗಳ ಮುಖಾಂತರ ಎಲ್ಲರೂ ಕೊನೆಗೆ ಯಾವ ಪರಮಾತ್ಮನನ್ನು ಆರಾಧಿಸುವರೊ ಆ ಪರಮಾತ್ಮನು ಮನುಷ್ಯನಿಗೆ ಗೋಚರನಾಗುತ್ತಿರುವ ಮಟ್ಟಿಗೆ ಸರ್ವಜ್ಞನು, ಸರ್ವಶಕ್ತಿವಾನನು, ಸರ್ವನಿಯಾಮಕನು, ಪ್ರಭುವು, ವಿಭುವು, ಸ್ವಯಂಭುವು ಇಲ್ಲವೆ? ಅಂದಬಳಿಕ ಅವನನ್ನು, ಸರ್ವಶುಭಂಕರ ಶಂಕರನೆಂದು ಪೂಜಿಸಿದರೂ ಅಷ್ಟೇ, ಜಗನ್ಮಾತೆಯಾದ ಜಗದಂಬೆಯೆಂದು ಅರ್ಚಿಸಿದರೂ ಅಷ್ಟೇ, ಸರ್ವಭರ್ತ ಸರ್ವಕರ್ತ ವಿಷ್ಣುವೆಂದು ಆರಾಧಿಸಿದರೂ ಅಷ್ಟೇ. ಶೈವಾಗಮುಗಳಿಗೆ 'ಶಿವಾಗಮುಗಳು' ಎಂದೆನ್ನುವ ರೂಢಿಯೂ ಉಂಟು. ಶಾಕ್ತ ಗ್ರಂಥಗಳಿಗೆ 'ಶಾಕ್ತತಂತ್ರ' ಅನ್ನುವ ರೂಢಿಯೆ ಹೆಚ್ಚು ಇರುವದು. ಇಷ್ಟೇ ಅಲ್ಲ. ತಂತ್ರಶಾಸ್ತ್ರ ಎಂದೊಡನೆ ಶಾಕ್ತತಂತ್ರಗಳು, ಎಂದೇ ಅನೇಕರು ತಿಳಿಯುವರು. ವೈಷ್ಣವ ಆಗಮುಗಳಿಗೆ 'ಪಾಂಚರಾತ್ರ ಆಗಮು' ಎಂಬ ಹೆಸರು ಹೆಚ್ಚು ರೂಢವಿರುವದು. ಶ್ರೀಮದ್ಭಾಗವತದಲ್ಲಿ ಅವುಗಳಿಗೆ ಸಾತ್ವತ ತಂತ್ರ, ಎಂಬ ಹೆಸರೂ ಉಪಯೋಗಿಸಲ್ಪಟ್ಟಿರುವದು. ತಂತ್ರಗಳ ಸಂಖ್ಯೆಯು ಬಹಳ ದೊಡ್ಡದಿರುವದು. ಪಂಡಿತ ಅನಂತಶಾಸ್ತ್ರಿ ಎಂಬವರು 'ಥಿಯಾಸಫಿಸ್ಟ' ಎಂಬ ಮದ್ರಾಸದಲ್ಲಿ ಹೊರಡುತ್ತಿದ್ದ ಇಂಗ್ಲೀಷ ಮಾಸಪತ್ರಿಕೆಯ ಹದಿಮೂರನೆಯ ವರ್ಷದ ಸಂಚಿಕೆಯಲ್ಲಿ (ಪು. ೩೫೭–೩೬೩) ಪಾಂಚರಾತ್ರಾಗಮುಗಳು ೧೦೮ ಇರುವವೆಂದೂ ತಾವೇ ಸಂಪಾದಿಸಿದ 'ಆನಂದಲಹರಿ'ಯ ಪ್ರಸ್ತಾವನೆಯಲ್ಲಿ ಶಾಕ್ತತಂತ್ರಗಳು ೬೪ ಇರುವವೆಂದೂ ಬರೆದಿರುವರು. ಸಮ್ಮೋಹನತಂತ್ರದ ೬ನೆಯ ಅಧ್ಯಾಯದಲ್ಲಿ, ಶಾಕ್ತರ ೬೪ ತಂತ್ರಗಳೂ ೩೨ ಉಪತಂತ್ರಗಳು, ಶೈವರ ೩೨ ತಂತ್ರಗಳೂ ೧೩೭ ಉಪತಂತ್ರಗಳು, ವೈಷ್ಣವರ ೭೫ ತಂತ್ರಗಳೂ ೨೦೫ ಉಪತಂತ್ರಗಳು ಇರುವೆಂದು ಉಲ್ಲೇಖವಿರುವದು. 'ಸಪ್ತಾಧಿಕಂ ಚ ದ್ವಿಶತಂ ಏತೇಷಾಮುಪಭೇದಕಮ್' ಅಂದರೆ ಇದರ ಉಪಭೇದಗಳು ೨೦೭ ಇರುವವು ಎಂದು ಮೃಗೇಂದ್ರಾಗಮದ 'ವಿಜ್ಞಪ್ತಿ'ಯಲ್ಲಿ ಶೈವಾಗಮುಗಳ ೨೦೭ ಉಪಾಗಮುಗಳ ಉಲ್ಲೇಖವಿರುವದು. ಇದಲ್ಲದೆ ಪ್ರತಿಯೊಂದು ಮತದ ಯಾಮಲ, ಡಾಮರ, ಸಂಹಿತೆ ಮುಂತಾದವುಗಳು ಬೇರೆ ಇರುವವು, ಎಂದು ಸಂಮೋಹನತಂತ್ರವು ಹೇಳುವದು. ಗಾಣಪತ್ಯ, ಸೌರ, ಬೌದ್ಧ, ಚೀನ, ಪಾಶುಪತ, ಜೈನ, ಕಾಪಾಲಿಕ ಮುಂತಾದ ಮತಗಳ ಆಗಮುಗಳು, ಪುರಾಣಗಳು

ಇತ್ಯಾದಿ ಇರುವವೆಂದು ಅದರಲ್ಲಿ ಉಲ್ಲೇಖವಿರುವದು. ಇವೆಲ್ಲ ಈಗ ಉಪಲಬ್ಧವಿಲ್ಲವೆಂಬ ಮಾತು ನಿಜವಿದ್ದರೂ ಈ ತಂತ್ರಗಳ ಮತ್ತು ತಂತ್ರವಾಙ್ಮಯದ ವಿಸ್ತಾರದ ಕಲ್ಪನೆಯು ಈ ಉಲ್ಲೇಖಗಳಿಂದ ಚನ್ನಾಗಿ ಬರುವದು ತಂತ್ರಭಾಂಡಾರವು ಒಟ್ಟಿಗೆ ಬಹಳ ದೊಡ್ಡದೆಂಬ ಮಾತನ್ನು ನಾವು ಅಲ್ಲಗಳೆಯಲಿಕ್ಕಾಗುವದಿಲ್ಲ.

೧೭೪. ಆಗಮಗಳನ್ನು ವೈದಿಕ ಮತ್ತು ಅವೈದಿಕ ಎಂದೂ ವಿಂಗಡಿಸುವದುಂಟು. ಬಹುಶಃ ವಾಮಾಚಾರಗಳನ್ನು ಹೇಳುವ ಆಗಮಗಳು ಅವೈದಿಕವೆನಿಸುವವು. ಒಮ್ಮೊಮ್ಮೆ ಪಾಂಚರಾತ್ರದಂಥ ಆಗಮವನ್ನು ಕೂಡ ಅವೈದಿಕ ಗುಂಪಿನಲ್ಲಿ ಸೇರಿಸುವರು ! ಕೂರ್ಮ ಪುರಾಣದ ೧೬ನೆಯ ಅಧ್ಯಾಯದಲ್ಲಿ ಕಾಪಾಲ, ಲಾಕುಲ, ವಾಮ, ಭೈರವ, ಪೂರ್ವ, ಪಶ್ಚಿಮ, ಪಾಂಚರಾತ್ರ, ಪಾಶುಪತ ಇತ್ಯಾದಿ ಆಗಮಗಳು ಅವೈದಿಕವೆಂದು ಹೇಳಲ್ಪಟ್ಟಿವೆ. ಅದೇ ಕೂರ್ಮ ಪುರಾಣದ ಉತ್ತರಭಾಗದಲ್ಲಿ (ಅಧ್ಯಾಯ ೩೮), ಮೋಕ್ಷಾರ್ಥವಾಗಿ ಮೊದಲು ಸನ್ನಿಂದ ಶ್ರೌತ ಪಾಶುಪತವು ಸ್ಥಾಪಿಸಲ್ಪಟ್ಟಿತು. ವೇದಪರಾಯಣರು ಇದನ್ನು ಆಚರಿಸಬೇಕು. ಆ ಬಳಿಕ ನಾನು ವೇದವಾದಕ್ಕೆ ವಿರುದ್ಧವಾದ ಪಾಶುಪತ, ಸೋಮ, ಲಾಕುಲ, ಭೈರವ ಎಂಬ ಮತಗಳನ್ನು ಸ್ಥಾಪಿಸಿದೆನು. ಇವು ವೇದಬಾಹ್ಯವಿದ್ದು ಇವುಗಳನ್ನು ಮೋಕ್ಷಾರ್ಥಿಗಳು ಆಚರಿಸಕೂಡದು, ಎಂಬ ಸ್ಪಷ್ಟ ಉಲ್ಲೇಖವಿರುವದು. ಸನತ್‌ಕುಮಾರ ಸಂಹಿತೆಯಲ್ಲಿ, ಶಿವಾಗಮಗಳು ಶ್ರೌತ, ಅಶ್ರೌತ ಎಂದು ಎರಡು ಬಗೆಯಾಗಿರುವವು – **ಶ್ರೌತಾಶ್ರೌತ ವಿಭೇದೇನ ದ್ವಿವಿಧಾಸ್ತು ಶಿವಾಗಮಾಃ**– ಎಂದು ವಚನವಿರುವದು. ವಾಯುಸಂಹಿತೆಯ ೨೬ನೆಯ ಅಧ್ಯಾಯದಲ್ಲಿಯೂ,

ಶೈವಾಗಮೋಪಿ ದ್ವಿವಿಧಃ ಶ್ರೌತೋ೬ ಶ್ರೌತಶ್ಚ ಸಂಸ್ಮೃತಃ ।
ಶ್ರುತಿಸಾರಮಯಃ ಶ್ರೌತಃ ಸ್ವತಂತ್ರಸ್ತ್ವಿತರೋ ಮತಃ ॥

ಶ್ರುತಿಸಾರಮಯವಾದ ಶ್ರೌತ, ಸ್ವತಂತ್ರವಾದ ಇತರ ಅಂದರೆ ಅಶ್ರೌತ, ಹೀಗೆ ಎರಡುಬಗೆಯ ಶಿವಾಗಮಗಳಿರುವವು, ಎಂಬ ಸ್ಪಷ್ಟವಾಕ್ಯವಿರುವದು. ತಾತ್ಪರ್ಯವೇನಂದರೆ, ಶೈವ ಶಾಕ್ತ ವೈಷ್ಣವ ಮುಂತಾದವುಗಳಲ್ಲಿ ಹಲವುಗಳಿಗೆ ವೈದಿಕ ಮತ್ತು ಹಲವುಗಳಿಗೆ ಅವೈದಿಕ, ಎಂದು ಹಲವರು ಅನ್ನಲಾರಂಭಿಸಿದರು. ಆಯಾ ಆಗಮಗಳಲ್ಲಿಯ ಆಚಾರವಿಚಾರಗಳು ವೇದಸಮ್ಮತ ಅಥವಾ ವೇದಬಾಹ್ಯ ಇರುವವು, ಎಂದು ಹೇಳುವುದೇ ಹೀಗೆ ಹೆಸರು ಇಡುವವರ ಅಭಿಪ್ರಾಯವಿತ್ತು. ಆದರೆ ಯಾವದೊಂದು ಆಗಮ

ದಲ್ಲಿಯ ಆಚಾರವಿಚಾರಗಳು ವೇದಸಮ್ಮತವಿರುವವೊ ವೇದಬಾಹ್ಯವಿರುವವೊ ಇದನ್ನು ನಿಶ್ಚಯಿಸುವದು ಹೇಗೆ ಮತ್ತು ಯಾರು ? ಅವೈದಿಕವೆನಿಸುವ ಆಗಮಗಳು ಸಹ ತತ್ತ್ವಭಾಗದಲ್ಲಿ ವೈದಿಕ ತತ್ತ್ವಗಳನ್ನು ಮಾನ್ಯಮಾಡಿ ವೈದಿಕವಾದ ಪರಮಾತ್ಮಸಾಯುಜ್ಯವನ್ನೆ ತಮ್ಮ ಧ್ಯೇಯವನ್ನಾಗಿಟ್ಟುಕೊಂಡಿರುವವು. ಭೇದವಿದ್ದುದು ಆಚಾರಗಳಲ್ಲಿ, ಸಾಧನಮಾರ್ಗಗಳಲ್ಲಿ, ಹೊರತು ಧ್ಯೇಯದಲ್ಲಿಲ್ಲ. ಆದುದರಿಂದ ಯಾವ ಆಗಮಗಳು ಸಾಮಾನ್ಯ ನೀತಿಗೆ ವಿರುದ್ಧವಾದ ಮತ್ತು ಹೇಯವಾದ ಆಚಾರಗಳನ್ನು ಇಲ್ಲವೆ ಸಾಧನಮಾರ್ಗಗಳನ್ನು ಪ್ರತಿಪಾದಿಸುವವೊ ಆ ವಾಮಾಚಾರ ಪ್ರತಿಪಾದಕ ಆಗಮಗಳು ಅವೈದಿಕ ಮತ್ತು ದಕ್ಷಿಣಾಚಾರ ಪ್ರತಿಪಾದಕ ಮಿಕ್ಕ ಆಗಮಗಳು ವೈದಿಕ, ಎಂದು ಹೇಳುವದು ಸಮಂಜಸವಾಗುವದು.

೧೭೫. ಇನ್ನು ಇಲ್ಲಿ ಪ್ರಸ್ತುತವಾಗಿರುವ ವೈದಿಕವೆನಿಸುವ ಶೈವಾಗಮಗಳ ವಿಚಾರವನ್ನು ಕೈಕೊಳ್ಳುವ ಪೂರ್ವದಲ್ಲಿ ಆಗಮಗಳು ಅಥವಾ ತಂತ್ರಶಾಸ್ತ್ರವು ಏಕೆ ಮತ್ತು ಹೇಗೆ ಅಸ್ತಿತ್ವದಲ್ಲಿ ಬಂದಿರಬೇಕು, ಅವುಗಳಲ್ಲಿ ೨೨ ವಿವಿಧ ಗುಂಪುಗಳು (ಸಮ್ಮೋಹಸತಂತ್ರ ಪ್ರಕ. ೪) ಯಾವ ಕಾರಣಗಳ ಮೂಲಕ ಆಗಿರಬೇಕು, ಆಗಮಗಳು ಇಷ್ಟು ವಿವಿಧವಿದ್ದರೂ ಅವುಗಳಲ್ಲಿಯ ಸಾಮಾನ್ಯ ಲಕ್ಷಣಗಳೇನು, ತತ್ತ್ವಜ್ಞಾನದ ವಿಷಯದಲ್ಲಿ ಮತ್ತು ಆಚಾರಗಳಲ್ಲಿ ಅವುಗಳಿಗೂ ವೇದಗಳಿಗೂ ಭೇದವಿದ್ದರೆ ಅದು ಯಾವ ಬಗೆಯದ್ದಿರುವದು, ಈ ವಿಷಯಗಳನ್ನು ಸ್ವಲ್ಪ ಚರ್ಚಿಸುವದು ಅವಶ್ಯವಿರುವದು. ಆಗಮಗಳು ಏಕೆ ಉತ್ಪನ್ನವಾದವು ಮತ್ತು ಅವುಗಳಲ್ಲಿ ವಿವಿಧತೆ ಏಕೆ ಉಂಟಾಯಿತು, ಇವು ಐತಿಹಾಸಿಕ ಪ್ರಶ್ನೆಗಳಿದ್ದರೂ ಅವುಗಳನ್ನು ನಿಶ್ಚಯಿಸಲಿಕ್ಕೆ ಐತಿಹಾಸಿಕ ಸಾಧನಗಳಾವವೂ ಸದ್ಯಕ್ಕೆ ಉಪಲಬ್ಧವಿಲ್ಲ. ಆದುದರಿಂದ ಆಯಾ ಕಾರಣಗಳನ್ನು ನಾವು ಊಹಿಸಿಯೆ ತಿಳಿದುಕೊಳ್ಳಬೇಕಾಗಿದೆ. ಯಾವ ಊಹೆಗಳು ಹೆಚ್ಚು ಯುಕ್ತಿಯುಕ್ತ ಕಾಣುವವೊ ಅವೇ ನಿಜವಾದವೆಂದು ಸದ್ಯಕ್ಕೆ ತಿಳಿಯುವ ಪ್ರಸಂಗವಿದೆ. ಎಲ್ಲ ಆಗಮಗಳು ಅಥವಾ ಆಗಮವಾಙ್ಮಯವು ಬಹಳೇ ಆಧುನಿಕವಿರುವದೆಂಬುದು ಅಥವಾ ಅದು ಒಂದು ಸಾವಿರವರ್ಷಕ್ಕಿಂತ ಈಚೆಗಿನದಿರುವದು ಎಂದು ಪ್ರತಿಪಾದಿಸುವದು ಯೋಗ್ಯವಲ್ಲ. ಹಲವು ಉಪನಿಷತ್ತುಗಳಂತೆ ಕೆಲವು ಆಗಮಗಳಾದರೂ ಈಚೆಗಿನವಿರಬಹುದು. ಆದರೆ ಅವುಗಳಲ್ಲಿಯ ಪ್ರಾಚೀನತಮವಾದವುಗಳು ಎರಡುಸಾವಿರ ವರ್ಷಗಳ ಹಿಂದಿನವಾದರೂ ಇದ್ದಿರಬೇಕು. ಜನಸಾಮಾನ್ಯಕ್ಕೆ ಮೋಕ್ಷಸಾಧನದ ಮಾರ್ಗವನ್ನು ತೆರೆದುಕೊಡುವು

ದಕ್ಕಾಗಿಯೆ ಅವು ಬರೆಯಲ್ಪಟ್ಟಿರುವವೆಂಬುದು ಬೇರೆ ಬೇರೆ ಆಗಮಗಳಲ್ಲಿ ಉಕ್ತವಾದ ಉದ್ದೇಶಗಳ ಮೇಲಿಂದ ವ್ಯಕ್ತವಾಗುವದು. ಉಪನಿಷತ್ತು ಗಳಲ್ಲಿರುವಂತೆ ಅವುಗಳಲ್ಲಿ ಆಧ್ಯಾತ್ಮಿಕ ವಿಷಯಗಳ ತತ್ವಜರ್ಚೆಯು ವಿಶೇಷ ವಿಲ್ಲ. ಉಪನಿಷದೋಕ್ತ ತತ್ವಗಳನ್ನು ಗ್ರಹೀತವೆಂದು ತಿಳಿದು ತದನುಸಾರ ವಾಗಿ ನಿಶ್ಚಯಿಸಲ್ಪಟ್ಟ ಧ್ಯೇಯವಾದ ಮೋಕ್ಷವನ್ನು ಸಾಧಿಸುವ ಸಾಧನ ಮಾರ್ಗಗಳ ಚರ್ಚೆಯೆ ಅವುಗಳಲ್ಲಿ ಹೆಚ್ಚು ಇರುವುದು. ಜನಸಾಮಾನ್ಯ ರೆಲ್ಲರಿಗೂ ಆಚರಿಸಲಿಕ್ಕೆ ಬರುವಂಥ ಆಚಾರಗಳೆ ಅವುಗಳಲ್ಲಿ ಹೇಳಲ್ಪಟ್ಟಿರು ವವು. ಆದುದರಿಂದ ಸಾಧನಮಾರ್ಗಗಳನ್ನು ಹೆಚ್ಚು ಪ್ರಚಾರಪಡಿಸುವು ದಕ್ಕಾಗಿಯೆ ಅವು ಅಸ್ತಿತ್ವದಲ್ಲಿ ಬಂದವೆಂಬುದು ಸ್ಪಷ್ಟವಿದೆ. ವೈದಿಕ ಆರ್ಯರು ತಮ್ಮ ಆಚಾರಗಳನ್ನು ಎಲ್ಲರಿಗೂ ಮುಕ್ತದ್ವಾರವಿಟ್ಟಂತೆ ಕಂಡು ಬರುವುದಿಲ್ಲ. ಯಾವ ಯಾವ ಆರ್ಯೇತರ ಜನಾಂಗಗಳೊಡನೆ ತಮ್ಮ ಸಂಬಂಧವು ಬಂದಿತೊ ಅವರೆಲ್ಲರೂ ವೈದಿಕ ಆಚಾರಗಳಿಗೆ ಅಧಿಕೃತರೆಂದು ಅವರು ತಿಳಿಯಲಿಲ್ಲ. ಅದೇರೀತಿ, ಔಪನಿಷದಿಕ ನಿರ್ಗುಣಬ್ರಹ್ಮನ ಉಪಾಸ ನೆಯೂ ಎಲ್ಲರ ಆಕಲನಕ್ಕೆ ಸುಲಭಸಾಧ್ಯವಿದ್ದಿಲ್ಲ. ಆದುದರಿಂದ ವೈದಿಕ ಆಚಾರ ಮತ್ತು ನಿರ್ಗುಣ ಉಪಾಸನೆ ಇವೆರಡೂ ಯಾರಿಗೆ ಶಕ್ಯವಿರಲಿಲ್ಲವೊ ಅಂಥ ಬಹುಜನಸಮಾಜಕ್ಕೆ ಮುಕ್ತಿಯ ಮಾರ್ಗವನ್ನು ಕಲ್ಪಿಸುವುದಾದರೆ ವೈದಿಕ ತತ್ವಗಳನ್ನು ಬಿಡದೆ, ವೈದಿಕ ಧ್ಯೇಯವನ್ನು ಮುಟ್ಟುವ ಸಾಧನ ಮಾರ್ಗವನ್ನು ಹಾಕಿಕೊಡುವದು ಅವಶ್ಯವಾಗಿತ್ತು. ಈ ಉದ್ದೇಶಸಾಫಲ್ಯ ಕ್ಕಾಗಿ ಜಾತಿಪಂಥ ವಯ ಲಿಂಗಗಳ ನಿರ್ಬಂಧವಿಲ್ಲದೆ ಎಲ್ಲರಿಗೂ ಅಧಿಕಾರ ವಿದೆಯೆಂದು ಸಾರುವ, ಸುಲಭಭಾಷೆಯಲ್ಲಿ ಬರೆದ, ಆಗಮಗಳು ಅಸ್ತಿತ್ವ ದಲ್ಲಿ ಬಂದವು. ಅವು ವೈದಿಕ ಧ್ಯೇಯವನ್ನೆ ಸಗುಣ ಈಶ್ವರನ ಭಕ್ತಿಯಿಂದ ಮತ್ತು ತದನುರೋಧದಿಂದ ನಿರ್ಣಯಿಸಲ್ಪಟ್ಟ ಆಚಾರಗಳಿಂದ ಕೈವಶಮಾಡಿ ಕೊಳ್ಳಲನುವಾಗಿರುವವು.

೧೭೬. ಇನ್ನು ಈ ಆಗಮಗಳಲ್ಲಿ ಇಷ್ಟು ವಿವಿಧತೆ ಏಕೆ? ವೇದ ಕಾಲದಿಂದಲೆ, **ಏಕಂ ಸದ್ವಿಪ್ರಾ ಬಹುದಾ ವದಂತಿ.** ಇರುವೆ ಸದ್ವಸ್ತುವು ಒಂದೇ, ಅದನ್ನು ವಿಪ್ರರು ಬಹುವಿಧವಾಗಿ ವರ್ಣಿಸುವರು— ಎಂಬ ವಚನ ದಲ್ಲಿ ಹೇಳಿದ ಪ್ರಕಾರ ವಿವಿಧತೆಯ ಬೀಜವು ನಮ್ಮ ಪರಂಪರೆಯಲ್ಲಿರುವದು. ಸಾಧ್ಯದ ಏಕತೆ ಮತ್ತು ಸಾಧನಗಳ ಅನೇಕತೆ, ಇದು ಹಿಂದೂಧರ್ಮದ ವೈಶಿಷ್ಟ್ಯವೆ ಇರುವದೆಂದರೂ ಸಲ್ಲುವದು. ಇಡೀ ಜನಾಂಗದ ಧರ್ಮಾ ಚಾರಗಳನ್ನೆಲ್ಲ ಒಂದೇ ಎರಕದಲ್ಲಿ ಹೊಯ್ದು ಅದಕ್ಕೆ ಏಕರೂಪತೆಯನ್ನು

ಕೊಡುವ ಮತ್ತು ಒಂದು ಬಗೆಯ ಸೈನಿಕ ಶಿಸ್ತನ್ನು ಧರ್ಮದಲ್ಲಿ ಸ್ಥಾಪಿ ಸುವ ಪ್ರಯತ್ನವು ನಮ್ಮಲ್ಲಿ ಮಾಡಲ್ಪಟ್ಟಿಲ್ಲ. ಬಹುಮುಖಜೀವರಿಗೆ ಬಹು ಮುಖ ಉಪದೇಶ, ಎಂಬ ತತ್ವದ ಪ್ರಕಾರ ಅನೇಕ ಮತ್ತು ವಿವಿಧ ಜನರ ವಿವಿಧ ಇಷ್ಟದೇವತೆಗಳ ಹಾಗೂ ವಿವಿಧ ಪರಂಪರೆಗಳ ಮೂಲಕ ಅನೇಕಾ ನೇಕ ಆಗಮಗಳು ಮತ್ತು ತಂತ್ರಗಳು ಉಂಟಾಗಿ ಅವು ರೂಢವಾದವು. ಕಾಲಾಂತರದಿಂದ ಅವುಗಳಲ್ಲಿ ಶೈವ, ಶಾಕ್ತ, ಮತ್ತು ವೈಷ್ಣವ ಎಂಬವಷ್ಟೆ ಉಳಿದಿರುವವೆನ್ನಬಹುದು. ಆಗಮಗಳಲ್ಲಿಯ ಈ ಬಗೆಯ ವಿವಿಧತೆಯು ಎಷ್ಟು ವಿಲಕ್ಷಣವೊ ಅಷ್ಟೇ ಅವುಗಳಲ್ಲಿಯ ಸಾಮಾನ್ಯ ಲಕ್ಷಣಗಳ ಸೂತ್ರವೂ ಆಶ್ಚರ್ಯಜನಕವಿರುವದು. ಎಲ್ಲ ಆಗಮಗಳು— ಅವೈದಿಕ ವೆಂದೆನಿಸುವ ಆಗಮಗಳು ಸಹ— ಉಪನಿಷದೋಕ್ತವಾದ ಮುಕ್ತಿಯನ್ನು ತಮ್ಮ ಮುಖ್ಯ ಧ್ಯೇಯವನ್ನಾಗಿಟ್ಟುಕೊಂಡಿರುವವು. ತಮ್ಮ ಮಾರ್ಗವು ಭುಕ್ತಿಮುಕ್ತಿಪ್ರದಾಯಕವು, ಎಂದು ಹಲವು ಆಗಮಗಳು ಹೇಳುವವು. ಇಹದಲ್ಲಿ ಭುಕ್ತಿ ಮತ್ತು ಪರದಲ್ಲಿ ಮುಕ್ತಿ, ಎಂಬುದು ಆ ಮಾತಿನ ಅರ್ಥ ವಿರುವುದರಿಂದ ಮುಕ್ತಿಯೆ ಎಲ್ಲ ಆಗಮಗಳ ಪರಮಸಾಧ್ಯವು, ಎಂಬ ವಿಧಾನಕ್ಕೆ ಅದರಿಂದ ಆತಂಕವುಂಟಾಗುವದಿಲ್ಲ. ಎಲ್ಲ ಆಗಮಗಳು ಪರಮಾತ್ಮನನ್ನು ಉಪನಿಷತ್ತಿನಂತೆಯೆ ವಾಙ್ಮನಕ್ಕಗೋಚರ, ನಿರಾಕಾರ, ನಿರ್ಗುಣ, ಅತೀತ, ಅಣುವಿಗಿಂತ ಅಣು ಮಹತ್ತಿಗಿಂತ ಮಹತ್ತು, ಎಂದು ಮುಂತಾಗಿ ವರ್ಣಿಸಿರುವವು. ಮೂಲ ಪರಮಾತ್ಮನು ಹೀಗೆ ನಿರ್ಗುಣನೂ ನಿರ್ವರ್ಣನೂ ಇದ್ದರೂ ಅವನು ತನ್ನ ಶಕ್ತಿಯ ಮುಖಾಂತರ ಅಥವಾ ತನ್ನ ವ್ಯೂಹಗಳ ಮೂಲಕ ಈ ಸೃಷ್ಟಿಯನ್ನು ನಿರ್ಮಿಸುವನು, ಎಂಬ ವರ್ಣನೆಯು ಎಲ್ಲ ಆಗಮಗಳಲ್ಲಿಯೂ ಇರುವದು. ಇಲ್ಲಿ ಆಗಮಗಳ ಸಗುಣೋಪಾಸನೆಗೆ ಪ್ರಾರಂಭವಾಗುವದು. ಯಾಕಂದರೆ, ಪರಮಾತ್ಮನು ಸೃಷ್ಟಿಕರ್ತನಾಗುವಾಗ ಕರ್ತೃ, ಭರ್ತೃ, ಭೋಕ್ತೃ, ಸರ್ವಜ್ಞ, ಕೃಪಾಲು, ಸರ್ವಸಾಕ್ಷಿ ಮುಂತಾದ್ದೆಲ್ಲ ಆಗಬೇಕಾಗುವದು. ಪ್ರಸಂಗವಶಾತ್ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಮತಗಳಿಗೆ ಅನುಕೂಲವಾಗುವಂತೆ ಆಗಮಗಳ ಅರ್ಥವನ್ನು ಹಚ್ಚಲಿಕ್ಕೆ ಬರಬಹುದು. ಆದರೆ ಆಗಮಕಾರರು ಎಲ್ಲಿಯೂ ಅವುಗಳ ತಾತ್ವಿಕ ಚರ್ಚೆಯಲ್ಲಿ ಆಕವಾಗಿ ಸೇರಿಲ್ಲ. ಎಲ್ಲ ಶೈವ ಮತ್ತು ಶಾಕ್ತ ಆಗಮಗಳು ಬಹುಶಃ ಅದ್ವೈತವನ್ನೆ ಪ್ರತಿಪಾದಿಸುವವು, ಎಂದು ಸಾಮಾನ್ಯವಾಗಿ ಹೇಳಬಹುದು. ಎಲ್ಲ ವೈಷ್ಣವ ಆಗಮಗಳು ದ್ವೈತವನ್ನು ಪ್ರತಿಪಾದಿಸುವಂತಹವಿರುವವು, ಈ ಸೃಷ್ಟಿಯನ್ನು ನಿರ್ಮಿಸುವ ಮತ್ತು

ಜೀವಗಳನ್ನು ಮೋಹಿಸುವ ಪರಮಾತ್ಮನ ಶಕ್ತಿಗೆಯೆ ಬಹುಶಃ ಎಲ್ಲ ಆಗಮ ಗಳು ಮಾಯೆ ಇಲ್ಲವೆ ಮಾಯಾಶಕ್ತಿ ಎಂದೆನ್ನುವರು. ಈ ಸೃಷ್ಟಿಯು ಕೇವಲ ಮಿಥ್ಯೆಯೆಂದು ಯಾವ ಆಗಮಕಾರರೂ ಅಂದಿಲ್ಲ. ಭಕ್ತಿಯೆ ಪ್ರಧಾನ ಸಾಧನವು ಸಗುಣ ಉಪಾಸನೆಯೆ ಮುಖ್ಯ ಉಪಾಸನೆಯು, ಎಂದು ಎಲ್ಲ ಆಗಮಗಳ ಆಗ್ರಹವಿರುವದು. ಎಲ್ಲ ಆಗಮಗಳೂ ಗುರು, ಗುರುಕೃಪೆ, ಗುರುಪೂಜೆ, ದೀಕ್ಷೆ, ಇವುಗಳಿಗೆ ಮಹತ್ವಕೊಡುವವು. ಎಲ್ಲ ಆಗಮಗಳೂ ತಾವು ಹೇಳಿದ ಮಂತ್ರಕ್ಕೆ ಮತ್ತು ಅದರ ಜಪಕ್ಕೆ ತಮ್ಮ ಉಪಾಸನಾ ಮಾರ್ಗದಲ್ಲಿ ಶ್ರೇಷ್ಠಸ್ಥಾನವನ್ನು ಕಲ್ಪಿಸಿರುವವು. ಅದೇ ರೀತಿ, ಅಷ್ಟವಿಧಾ ರ್ಚನೆ, ಷೋಡಶೋಪಚಾರ, ನ್ಯಾಸ, ಚಕ್ರ, ತೀರ್ಥ, ಪ್ರಸಾದ, ವಿಶಿಷ್ಟ ಲಾಂಛನ ಮುಂತಾದವುಗಳಿಗೆ ಎಲ್ಲ ಆಗಮಗಳಲ್ಲಿ ಮಾನ್ಯವಾದ ಆಸ್ಪದ ವಿರುವದು. ಆಗಮೋಕ್ತಮಾರ್ಗವು ಸಕಲ ಸ್ತ್ರೀಪುರುಷರಿಗೂ ಸಕಲ ವರ್ಣಗಳಿಗೂ ಮುಕ್ತದ್ವಾರವಿರುವದು. ಎಲ್ಲ ಆಗಮಗಳ ಭಾಷೆಯು ಬಹಳ ಸುಲಭವಿರುವದು. ಈ ರೀತಿ ಎಲ್ಲ ಆಗಮಗಳಲ್ಲಿಯೂ ಹಲವು ಸಾಮಾನ್ಯ ಲಕ್ಷಣಗಳು ಕಂಡುಬರುವವು. ಇಷ್ಟೇ ಅಲ್ಲ. ಶೈವ ಮತ್ತು ಶಾಕ್ತ ಆಗಮ ಗಳನ್ನೆಲ್ಲ ಬಹುಶಃ ಶಿವನೇ ಪಾರ್ವತಿಗೆ ಇಲ್ಲವೆ ಇನ್ನಾರಿಗಾದರೂ ಹೇಳಿರು ವನು. ಅವೆರಡರಲ್ಲಿ ಶಿವನೇ ಪರಮಾತ್ಮನು. ಆ ಎರಡೂ ಆಗಮಗಳಲ್ಲಿ ಮಿಕ್ಕವುಗಳಿಗಿಂತ ಹೆಚ್ಚು ನಿಕಟಸಂಬಂಧವು ಕಂಡುಬರುವದು.

೧೭೨. ಇನ್ನು ತತ್ವಜ್ಞಾನದಲ್ಲಿ ಮತ್ತು ಆಚಾರಗಳಲ್ಲಿ ವೇದೋಪ ನಿಷತ್ತುಗಳಿಗೂ ಆಗಮಗಳಿಗೂ ಭೇದವೇನಿರುವದು ಇದನ್ನು ನೋಡುವ. ಉಪನಿಷತ್ತುಗಳನ್ನು ಬಿಟ್ಟು ಅಥವಾ ಅವುಗಳಲ್ಲಿಲ್ಲದ ಅವುಗಳಾಚೆಗಿನ ತತ್ವಜ್ಞಾನವು ಯಾವುದೂ ಆಗಮಗಳಲ್ಲಿ ಕಂಡುಬರುವುದಿಲ್ಲ. ಆದರೆ, ಸಾಮಾನ್ಯ ಪರಿಭಾಷೆಯಲ್ಲಿದ್ದ ಆ ತತ್ವಜ್ಞಾನಕ್ಕೆ ಆಗಮಗಳು ತಮತಮಗೆ ಇಷ್ಟವಿದ್ದ ಸ್ವರೂಪವನ್ನು ಕೊಟ್ಟಿರುವವು. ಏಕವಿದ್ದುದು ಅನೇಕವಾಯಿತು ಅಥವಾ ಅನೇಕವಾಗಬೇಕೆಂದು ಇಚ್ಛಿಸಿತು, ಎಂದು ಉಪನಿಷತ್ತಿನಲ್ಲಿ ಸೃಷ್ಟಿಯ ಮೂಲವನ್ನು ಕೊಟ್ಟಿರುವರು. ಯೋಗಿಗಳ ಉಪಕಾರಾರ್ಥವಾಗಿ ಇಲ್ಲವೆ ಜನಹಿತಾರ್ಥವಾಗಿ ಪರಮಾತ್ಮನು ಈ ಸೃಷ್ಟಿಯನ್ನು ನಿರ್ಮಿಸಿದನು, ಎಂದು ಹಲವು ಆಗಮಗಳು ವರ್ಣಿಸುವವು. ಈ ರೀತಿ, ಆಗಮಗಳಲ್ಲಿ ಶುದ್ಧ ತತ್ವಜ್ಞಾನದ ಸ್ವರೂಪವು ಅಳಿದು ಅದು ರೂಪಕಗಳ ವೇಷವನ್ನು ಧರಿಸು ತ್ತಿದೆ. ಈ ರೂಪಕಗಳು ಬಹಳೇ ಸಾಂಪ್ರದಾಯಿಕವೂ ಹೆಚ್ಚು ತೊಡಕಿ ನವೂ ಆಗಿರುವವೆಂದು ಸಾಮಾನ್ಯವಾಗಿ ಹೇಳಬಹುದು ಪಾಂಚರಾತ್ರ

ಗಮದಲ್ಲಿಯ ಜತುರ್ವ್ಯೂಹದ ಕಲ್ಪನೆಯನ್ನು ವಿಮರ್ಶಿಸಿದರೆ ಈ ಮಾತು ಅನುಭವಕ್ಕೆ ಬರುವದು. ಇದೇ ಮಾತು ಮಿಕ್ಕ ಆಗಮಗಳಲ್ಲಿಯ ಸಾಂಪ್ರ ದಾಯಿಕ ತತ್ವಜ್ಞಾನ ಸ್ವರೂಪದ ಕಲ್ಪನೆಗಳಿಗೆ ಅನ್ವಯಿಸುವದು. ತತ್ವ ಜ್ಞಾನದಲ್ಲಿ ಕಲ್ಪನಾಶಕ್ತಿಗೆ ಎಷ್ಟು ಅಸ್ಪದವನ್ನು ಕೊಡತಕ್ಕದ್ದೊ ಅದಕ್ಕೂ ಹೆಚ್ಚಿನ ಅಸ್ಪದವನ್ನು ಕೊಟ್ಟದ್ದರಿಂದ ಹೀಗೆ ಆಗಿದೆ, ಎಂದು ಅಂದರೆ ತಪ್ಪಾಗ ಲಿಕ್ಕಿಲ್ಲ. ಕೆಲವು ಆಗಮಗಳು ಶಕ್ತಿ, ಭುಕ್ತಿ ಇವೂ ತಮ್ಮ ಧ್ಯೇಯಗಳೆಂದು ಹೇಳಿದ್ದರೂ ಉಪನಿಷದೋಕ್ತವಾದ ಮುಕ್ತಿಯೆಂಬ ತಮ್ಮ ಆತ್ಯಂತಿಕ ಧ್ಯೇಯದಿಂದ ಯಾವ ಆಗಮಗಳೂ ಕದಲಿಲ್ಲ. ಇನ್ನು ಆಚಾರಗಳನ್ನು ಪರಿಶೀಲಿಸಿದರೆ, ವೇದೋಕ್ತ ಆಚಾರ ಮತ್ತು ಆಗಮೋಕ್ತ ಆಚಾರ ಇವು ಗಳಲ್ಲಿ ಬಹಳ ಭಿನ್ನತೆ ಇರುವದು. ಉಪನಯನದ ಬದಲು ಬಗೆ ಬಗೆಯ ದೀಕ್ಷೆಗಳು, ಗಾಯತ್ರೀ ಮಂತ್ರವಿದ್ದಲ್ಲಿ ವಿವಿಧ ಮಂತ್ರಗಳು, ಹೋಮ ಹವನಗಳ ಬದಲು ಷೋಡಶೋಪಚಾರ ಅಷ್ಟ ವಿಧಾರ್ಚನೆ ನೈವೇದ್ಯ ಮುಂತಾದವು, ವರ್ಣಭೇದಗಳ ಬದಲು ಸರ್ವ ಸಮಾನತೆ, ಬ್ರಹ್ಮೋಪಾಸ ನೆಯ ಬದಲು ಭಕ್ತಿಯುಕ್ತ ಸಗುಣ ನವವಿಧಭಕ್ತಿ, ಹೀಗೆ ವೈದಿಕ ಮತ್ತು ಆಗಮೋಕ್ತ ಸಾಧನಗಳಲ್ಲಿ ಭಿನ್ನತೆಯು ಕಂಡುಬರುವದು.

೧೭೪. ಪಶುಪತಶಾಸ್ತ್ರಕ್ಕೆ ಮೂಲಾಧಾರವಾದ ಶೈವಾಗಮಗಳ ಸ್ವರೂಪವು ಚನ್ನಾಗಿ ತಿಳಿಯಲಿಕ್ಕೆ ಇದುವರೆಗೆ ಮಾಡಿದ ಆಗಮಶಾಸ್ತ್ರದ ವರ್ಣನೆಯು ಸಾಕಷ್ಟು ಇದೆ. ವಿವಿಧ ಆಗಮಕಾರರು ಮೂಲ ವೇದಾಂತ ತತ್ವಜ್ಞಾನಕ್ಕೆ ತಮ್ಮ ತಮ್ಮ ರೀತಿಯಿಂದ ಅರ್ಥವನ್ನು ಕಲ್ಪಿಸಿದರು, ಅದಕ್ಕೆ ತಮ್ಮ ಇಷ್ಟದೇವತೆ ಮತ್ತು ಪರಂಪರಾಗತ ಪರಿಭಾಷೆ ಇವುಗಳ ಪ್ರಕಾರ ಸ್ವರೂಪಕೊಟ್ಟರು, ಪರಮ ಸಾಯುಜ್ಯಮುಕ್ತಿಯೆ ಆತ್ಯಂತಿಕ ಮಾನವೀಯ ಧ್ಯೇಯವೆಂದು ಅದನ್ನು ತಮ್ಮ ಕಣ್ಣುಮುಂದಿಟ್ಟುಕೊಂಡರು, ತತ್ಸಾಧನಾರ್ಥವಾಗಿ ತಮ್ಮ ಇಷ್ಟದೇವತೆಯ ಭಕ್ತಿ ಮತ್ತು ಸಗುಣೋ ಪಾಸನೆ ಇವುಗಳಿಗೆ ಸಲ್ಲುವ ವಿವಿಧ ವಿಶಿಷ್ಟ ಆಚಾರಗಳನ್ನು ರೂಢಿಯಲ್ಲಿ ತಂದರು, ತಮ್ಮ ಪಂಥವನ್ನು ಎಲ್ಲರಿಗೆ ಸುಲಭ ರೀತಿಯಿಂದ ತಿಳಿಹೇಳಲೆತ್ನಿ ಸಿದರು, ಮತ್ತು ಮನುಷ್ಯಮಾತ್ರರಿಗೆ ಮುಕ್ತದ್ವಾರವೆಂದು ಮುಕ್ತಿಮಂದಿ ರದ ಬಾಗಿಲುಗಳನ್ನು ಪೂರ್ಣ ತೆರೆದಿಟ್ಟರು. ಶಿವಸರ್ವೋತ್ತಮನೆಂದು ಪ್ರತಿ ಪಾದಿಸಿ ಶೈವಾಗಮಗಳೂ ಇದೇ ಕಾರ್ಯವನ್ನು ಮಾಡಿದವು. ಇನ್ನು ಈ ಶೈವಾಗಮಗಳಲ್ಲಿ ಎಷ್ಟು ಭೇದಗಳಿರುವವು, ಅವುಗಳಲ್ಲಿಯ ಪರಸ್ಪರ ಸಂಬಂಧವೇನು, ಪಶುಪತಶಾಸ್ತ್ರವು ಅವುಗಳಲ್ಲಿ ಯಾವ ಆಗಮಗಳನ್ನು ಅವ

ಲಂಬಿಸಿರುವದು, ಅವುಗಳ ಕಾಲವಾವುದು, ಅವುಗಳ ಮುಖ್ಯ ಲಕ್ಷಣಗಳೇನು, ಇದನ್ನೆಲ್ಲ ನೋಡಿ ಮುಂದೆ ವಚನಶಾಸ್ತ್ರದಲ್ಲಿರುವ ತತ್ವಜ್ಞಾನಾದಿಗಳ ಕಡೆಗೆ ತೆರಳುವ. ಶೈವಾಗಮಗಳಲ್ಲಿ ವೈದಿಕ ಮತ್ತು ಅವೈದಿಕ, ಎಂದು ಎರಡು ಮುಖ್ಯ ಗುಂಪುಗಳಿರುವವೆಂದು ಮೇಲೆಯೆ ಹೇಳಲ್ಪಟ್ಟಿದೆ. ಲಾಕುಲ, ಭೈರವ, ಕಾಪಾಲಿಕ, ಪಾಶುಪತ (ಅವೈದಿಕ) ಮುಂತಾದ ಅವೈದಿಕ ಶೈವಪಂಥಗಳೊಡನೆ ಮತ್ತು ಅವುಗಳನ್ನು ಪ್ರತಿಪಾದಿಸುವ ಆಗಮಗಳೊಡನೆ ಇಲ್ಲಿ ನಮ್ಮದೇನೂ ಕರ್ತವ್ಯವಿಲ್ಲ. ವೈದಿಕ ಶೈವಪಂಥಗಳಲ್ಲಿಯೂ ಹಲವು ಭೇದಗಳಿರುವವು. ವೈದಿಕ ಪಾಶುಪತ, ಕಾಶ್ಮೀರದಲ್ಲಿ ಪ್ರಚಲಿತವಿದ್ದ ತ್ರಿಕವೆಂಬ ಅದ್ವೈತಶೈವ ಮುಂತಾದ ಭೇದಗಳು ಬೇರೆಬೇರೆ ಆಗಮಗಳನ್ನು ಅನುಸರಿಸುವವು. ೨೮ ಶೈವಾಗಮಗಳನ್ನು ಆಧಾರವಾಗಿಟ್ಟುಕೊಂಡ ದಾಕ್ಷಿಣಾತ್ಯ ಶೈವಪಂಥವು ಶೈವಸಿದ್ಧಾಂತವೆನಿಸುವದು. ಹೀಗೆ ಬೇರೆಬೇರೆ ಶೈವಪಂಥಗಳು ಮತ್ತು ಆಗಮಗಳು ಇದ್ದರೂ ಅವೆಲ್ಲವುಗಳಿಗೆ ಮೃಗೇಂದ್ರ (ಕಾಮಿಕ ಆಗಮದ ಒಂದು ಪ್ರಭೇದ) ಮತ್ತು ಮಾತಂಗ ಆಗಮಗಳು ಸಾಮಾನ್ಯವಿರುವವು. ವಿವಿಧ ಶೈವಪಂಥಗಳ ಮೂಲಸೂತ್ರವು ಒಂದೇ ಇದ್ದು ವಿವರದಲ್ಲಿ ಹಲವು ಭೇದಗಳಿರುವವೆಂಬದು ಇದರಿಂದ ವ್ಯಕ್ತವಾಗುತ್ತಿದೆ. ಶೈವಸಿದ್ಧಾಂತದ ಮುಖ್ಯ ಆಧಾರವೆಂದರೆ ವೇದಗಳು. ಸರ್ವ ವೇದಾನುಸಾರಿತ್ವಾತ್ ಶೈವತಂತ್ರಂ ವಿಶಿಷ್ಯತೇ, (ಸಿದ್ಧಾಂತಶಿಖಾಮಣಿ) ಎಂದೆನಿಸುವ ಕಾಮಿಕಾದಿ ವಾತುಲಾಂತ ೨೮ ಶಿವಾಗಮ ಗ್ರಂಥಗಳ ಹೆಸರುಗಳು ಕೆಳಗಿನಂತೆ ಇರುವವು— ೧. ಕಾಮಿಕ, ೨. ಯೋಗಜ, ೩. ಚಿಂತ್ಯ, ೪. ಕಾರಣ, ೫. ಅಜಿತ, ೬. ದೀಪ್ತ, ೭. ಸೂಕ್ಷ್ಮ, ೮. ಸಹಸ್ರ, ೯. ಅಂಶುಮಾನ್, ೧೦. ವಿಜಯ, ೧೧. ನಿಶ್ವಾಸ, ೧೨. ಸ್ವಾಯಂಭುವ, ೧೩. ಅನಲ. ೧೪. ವೀರ, ೧೫. ರೌರವ, ೧೬. ಮಕುಟ, ೧೭. ವಿಮಲ, ೧೮. ಚಂದ್ರಜ್ಞಾನ, ೧೯. ಬಿಂಬ, ೨೦. ಲಲಿತ, ೨೧. ಪ್ರೋದ್ಗೀತ ೨೨. ಸಿದ್ಧ, ೨೩. ಸಂತಾನ, ೨೪. ಸರ್ವೋಕ್ತ, ೨೫. ಪಾರಮೇಶ್ವರ, ೨೬. ಸುಪ್ರಭೇದ, ೨೭. ಕಿರಣ, ೨೮. ವಾತುಲ. ಇದಲ್ಲದೆ ತಾರಕ್ಷತಂತ್ರ, ವಾಮತಂತ್ರ ಇತ್ಯಾದಿ ೧೫೫ ಇಲ್ಲವೆ ೨೦೭ ಉಪಾಗಮಗಳು ಅಥವಾ ಉಪತಂತ್ರಗಳು ಇರುವವೆಂದು ಅಲ್ಲಲ್ಲಿ ಉಲ್ಲೇಖವಿರುವದು (ಸಮ್ಮೋಹನತಂತ್ರ, ಶೋಮೆರಸ್ (Schomerus) ಇವನು ಬರೆದ Der Shaiva Siddhanta, ಮತ್ತು ನಲ್ಲಸ್ವಾಮಿ ಪಿಲ್ಲೆ (Nallaswami Pillai) ಇವನ Studies in Shaiva Siddhanta ಪುಟ. ೫೪೪).

ಕಂಚಿಯ ಕೈಲಾಸನಾಥನ ಗುಡಿಯಲ್ಲಿ ೫ನೆಯ ಶತಮಾನದ ಒಂದು ಶಿಲಾಲೇಖವಿರ್ಪುವದು. ಅದರಲ್ಲಿ ೨೮ ಶಿವಾಗಮಗಳ ಪ್ರಥಮ ಐತಿಹಾಸಿಕ ಉಲ್ಲೇಖವು ಕಂಡುಬರುವದು. (ಪ್ರೊ. ರಾಧಾಕೃಷ್ಣನ್ ಇವರ Indian Philosophy vol. II) ಐದನೆಯ ಶತಮಾನದಷ್ಟೊತ್ತಿಗೆ ೨೮ ಶೈವಾಗಮಗಳು ಅಸ್ತಿತ್ವದಲ್ಲಿ ಬಂದಿರಬೇಕಾದರೆ ಶೈವಪಂಥವು ಅದಕ್ಕೂ ಮೊದಲೇ ಶತಕಾಸುಶತಕವಾದರೂ ಪ್ರಚಾರದಲ್ಲಿರಲಿಕ್ಕೆಬೇಕು, ಎಂದು ಊಹಿಸುವದು ತಪ್ಪಲ್ಲ. ಕ್ರಿಸ್ತೀಶಕದ ಮೊದಲನೆಯ ಶತಮಾನದಿಂದ ತಮಿಳುನಾಡಿನಲ್ಲಿ ಅರಿವರ್ ಎಂಬ ಶೈವಸತ್ಪುರುಷರು ಪ್ರಸಿದ್ಧರಿದ್ದರು. ಸೆಕ್ಕಿಯರ್ ಎಂಬ ತಮಿಳು ಕವಿಯ 'ಪೆರಿಯ ಪುರಾಣಮ್' ಎಂಬುದು ೬೩ ಶೈವ ಸಾಧುಗಳನ್ನು ಕುರಿತು ಬರೆಯಲ್ಪಟ್ಟಿರುವದು. ಇದನ್ನೆಲ್ಲ ನೋಡಿದರೆ ಮುಖ್ಯ ಶೈವಾಗಮಗಳ ಕಾಲವು ಇಂದಿನಿಂದ ೨೦೦೦ ವರ್ಷ ಹಿಂದೆ ಇರುವದೆನ್ನುವದು ಅತಿಶಯೋಕ್ತಿಯಾಗಲಾರದು.

೧೭೯. ಮಿಕ್ಕ ಆಗಮಗಳಲ್ಲಿ ಕಂಡುಬರುವ ಲಕ್ಷಣಗಳು ಈ ೨೮ ಶೈವಾಗಮಗಳಲ್ಲಿ ಕಂಡುಬಂದೇಬರುವವು. ಇನ್ನು ಇವುಗಳಲ್ಲಿ ಮುಖ್ಯ ವಿಷಯಗಳೇನಿರುವವು ಮತ್ತು ಅವುಗಳನ್ನು ಈ ಆಗಮಗಳು ಯಾವ ವಿಧದಿಂದ ಹೇಳಿರುವವು ಇದನ್ನು ನೋಡುವ. ಈ ಎಲ್ಲ ಆಗಮಗ್ರಂಥಗಳು ಉಪಲಬ್ಧವಿಲ್ಲ. ಹಸ್ತಲಿಖಿತ ಪ್ರತಿಗಳು ಹಲವೆಡೆಗೆ ಇರಬಹುದು. ಆದರೆ ಅಚ್ಚಾಗಿ ಅವು ಎಲ್ಲರ ಕೈಗೆ ಇನ್ನೂ ಸಿಕ್ಕಿಲ್ಲ. ವಾತುಲ, ಸೂಕ್ಷ್ಮ, ದೇವೀಕಾಲೋತ್ತರ (ಭಾಗಮಾತ್ರ), ಪಾರಮೇಶ್ವರ ಈ ನಾಲ್ಕು ಶೈವಾಗಮಗಳನ್ನು ಕನ್ನಡಲಿಪಿಯಲ್ಲಿ 'ತಂತ್ರಸಂಗ್ರಹ' ಎಂಬ ಹೆಸರಿನಿಂದ ೧೯೧೪ರಲ್ಲಿ ಪ್ರಸಿದ್ಧಮಾಡಿದ ಶಂಕರಪ್ಪ, ಅಚ್ಚಪ್ಪ, ಟೊಪಿಗಿ ಎಂಬವರು 'ಶಿವಾಗಮಗಳಲ್ಲಿ ಬಂದಾದರೂ ಮುದ್ರಿತವಾಗಿದ್ದುದು ನಮ್ಮ ಕಣ್ಣಿಗೆ ಬಿದ್ದಿಲ್ಲ,' ಎಂದು ಆ ಗ್ರಂಥದ ಪ್ರಸ್ತಾವನೆಯಲ್ಲಿ ಬರೆದಿರುವರು. ಸೊಲ್ಲಾಪುರದ ಶ್ರೀ. ವಾರದ ಮಲ್ಲಪ್ಪನವರ ಪ್ರಯತ್ನದಿಂದ ನಾಗರೀ ಲಿಪಿಯಲ್ಲಿ ೧೯೦೫ರಲ್ಲಿ ಮುದ್ರಿತವಾದ ಸೂಕ್ಷ್ಮಾಗಮಾದಿ ಹಲವು ಆಗಮಗಳನ್ನು ಟೊಪಿಗಿಯವರು ನೋಡಿದಂತೆ ತೋರುವದಿಲ್ಲ. ಕಾಮಿಕೋಪಾಗಮವೆನಿಸುವ ಮೃಗೇಂದ್ರಾಗಮವು ಪೂರಾ ಮತ್ತು ಮತಂಗಪರಮೇಶ್ವರಾಗಮದ ವಿದ್ಯಾಪಾದವೆಂಬ ಭಾಗ ಇವು ದೇವಕೊಟ್ಟೀ ಎಂಬಲ್ಲಿ ಸ್ಥಾಪಿತವಾದ ಶಿವಾಗಮಸಿದ್ಧಾಂತಪರಿಪಾಲನಸಂಘದಿಂದ ಪ್ರಕಟಿಸಲ್ಪಟ್ಟಿವೆ. ಹೀಗಿದ್ದರೂ ಒಟ್ಟಿಗೆ ಬಹಳೇ ಸ್ವಲ್ಪ ಶಿವಾಗಮಗಳು ಅಚ್ಚಾಗಿರುವವು

ಮತ್ತು ಅವು ಸಹ ಸಹಜವಾಗಿ ಉಪಲಬ್ಧವಿಲ್ಲ ಎಂಬ ಮಾತು ಸುಳ್ಳಲ್ಲ. ಆದುದರಿಂದ ನಮಗೆ ಉಪಲಬ್ಧವಾದ ಆಗಮಗಳನ್ನಷ್ಟೆ ನೋಡಿ ನಾವು ಇಲ್ಲಿ ಬರೆಯಬೇಕಾಗಿದೆ. ಈ ರೀತಿ ಇಲ್ಲಿ ಬರೆದ ಮಾತುಗಳು ಉಪಲಬ್ಧವಿದ್ದ ಆಗಮಗ್ರಂಥಗಳನ್ನಷ್ಟೆ ಅನ್ವಯಿಸುವವು. ಈ ಮಾತುಗಳು ವಿಕ್ಷಿಪ್ತ ಗಳನ್ನಾದರೂ ಅನ್ವಯಿಸುವವು ಎಂದು ಹೇಳಲು ನಮಗೆ ಧೈರ್ಯಸಾಲದು. ಇಷ್ಟು ಪ್ರಸ್ತಾಪಿಸಿ ಪ್ರಸ್ತುತವಿಷಯವನ್ನು ವಿಚಾರಿಸಲಾರಂಭಿಸುವೆವು.

(೧) ಈ ಆಗಮಗಳು ತಮ್ಮ ವಿಷಯದಲ್ಲಿ ಮಾತಾಡುವಾಗ 'ತಂತ್ರ' ಎಂಬ ಹೆಸರನ್ನು ಅನೇಕಸಾರೆ ಉಪಯೋಗಿಸುತ್ತಿವೆ. 'ಮಹಾ ತಂತ್ರಂ ಜಗತಾಪತಿಃ' (ಮೃ. ಪ್ರಕ. ೨.೨) ವಾತುಲಾಖ್ಯೇ ಮಹಾತಂತ್ರೇ' (ವಾತುಲ. ಪ. ೧. ಶ್ಲೋ. ೭), 'ಇತಿ ಸರ್ವೇಷು ತಂತ್ರೇಷು (ಸೂಕ್ಷ್ಮ. ಪ. ೨. ಶ್ಲೋ. ೨), 'ವೀರಶೈವಾಖ್ಯಂ ತಂತ್ರಾಣಾಮುತ್ತಮೋತ್ತಮಮ್ (ಪಾರ. ಪ. ೧. ಶ್ಲೋ. ೩೦), ಈ ಮುಂತಾದ ಉಲ್ಲೇಖಗಳು ಈ ಮಾತನ್ನು ಸ್ಪಷ್ಟಗೊಳಿಸುವವು ಮತ್ತು ಆಗಮಗಳು ಮುಖ್ಯವಾಗಿ ಸಾಧನ ವನ್ನೆ ಹೇಳುವವು ಎಂಬ ವಿಧಾನವನ್ನು ದೃಢೀಕರಿಸುವವು.

(೨) ಶಿವಾಗಮಗಳಲ್ಲಿ ಶಿವನೇ ಮುಖ್ಯ ಉಪದೇಶಕನಿರುವನು. ವಾತುಲದಲ್ಲಿ ಸ್ಕಂದನಿಗೆ ಅಂದರೆ ತನ್ನ ಮಗನಾದ ಕಾರ್ತಿಕೇಯನಿಗೆ, ಸೂಕ್ಷ್ಮ, ದೇವೀಕಾಲೋತ್ತರ, ಮತ್ತು ಪಾರಮೇಶ್ವರ ಆಗಮಗಳಲ್ಲಿ ದೇವಿಗೆ ಅಂದರೆ ಪಾರ್ವತಿಗೆ ಶಿವನು ಶಿವಜ್ಞಾನವನ್ನೂ ಶಿವಾಚಾರವನ್ನೂ ಹೇಳಿರುವನು, ಮೃಗೇಂದ್ರವು ಇಂದ್ರನಿಂದ ಭಾರದ್ವಾಜಾದಿ ಋಷಿಗಳಿಗೆ ಹೇಳಲ್ಪಟ್ಟಿದ್ದರೂ ಅದು ಇಂದ್ರನಿಗೆ ಶಿವನಿಂದಲೆ ಹೇಳಲ್ಪಟ್ಟಿರುವದು. ಶಿವೋದ್ಗೀರ್ಣಮಿದಂ ಜ್ಞಾನಮ್ (ಮೃ. ಪ್ರಕ. ೧. ೨೫)

(೩) ಸರ್ವಲೋಕಹಿತಾರ್ಥವಾಗಿ, ಯೋಗಿಗಳ ರಕ್ಷಣಾರ್ಥವಾಗಿ, ಸಾಧಕರ ಹಿತಾರ್ಥವಾಗಿ, ಎಂದು ವಾತುಲದಲ್ಲಿ, ಸರ್ವಲೋಕೋಪಕಾರ ಕ್ಕಾಗಿ, ಎಂದು ಪಾರಮೇಶ್ವರದಲ್ಲಿ, ಪುರುಷಾರ್ಥಪ್ರಸಿದ್ಧಿಗಾಗಿ ಎಂದು ಮೃಗೇಂದ್ರದಲ್ಲಿ ಉಲ್ಲೇಖವಿರುವುದರಿಂದ ಶಿವನು ಈ ಉದ್ದೇಶಗಳನ್ನಿಟ್ಟು ಕೊಂಡು ಉಪದೇಶಿಸಿದನು, ಎಂಬುದು ಸ್ಪಷ್ಟವಾಗುವದು. ಈ ಉಪ ದೇಶವು ಸರ್ವರಿಗೂ ಹಿತಕರವಾಗಬೇಕು, ಎಂಬುದೇ ಆಗಮಗಳ ಮುಖ್ಯ ಉದ್ದೇಶವಿರುವದು.

(೪) ಮುಕ್ತಿಯೆ ಮಾನವನ ಮುಖ್ಯ ಧ್ಯೇಯವಾದರೂ ತಂತ್ರಗಳಲ್ಲಿ ಭುಕ್ತಿ ಮುಕ್ತಿ ಇವೆರಡೂ ಧ್ಯೇಯಗಳೆಂದು ಅನೇಕ ಕಡೆಗೆ ಹೇಳಲ್ಪಟ್ಟಿವೆ.

ಹಲವು ಪ್ರಸಂಗಗಳಲ್ಲಿ ಮೋಕ್ಷವೊಂದೇ ಧ್ಯೇಯವೆಂದು ಹೇಳಲ್ಪಟ್ಟಿದೆ. 'ವಿನಿಯೋಗಫಲಂ ಮುಕ್ತಿರ್ಭುಕ್ತಿರಪ್ಯನುಷಂಗತಃ' (ಮೃ. ಪ್ರಕ. ೨-೯) ಎಂದು ಮೃಗೇಂದ್ರವು ಭುಕ್ತಿಮುಕ್ತಿಗಳ ಸಮಸ್ಯೆಯನ್ನು ಮಾಡಿರುವದು. ಭುಕ್ತಿಮುಕ್ತಿಪ್ರದಾಯಕಂ (ವಾತುಲ. ಪ. ೧. ಶ್ಲೋ. ೭), ಭುಕ್ತಿ ಮುಕ್ತಿಫಲೇಚ್ಛುನಾ (ಸೂಕ್ಷ್ಮ. ಪ. ೩. ಶ್ಲೋ. ೭೦), ಭುಕ್ತಿಂ ಮುಕ್ತಿಂ ಚ ವಿಂದತಿ (ಸೂಕ್ಷ್ಮ. ಪ. ೩. ಶ್ಲೋ. ೯೫), ಭೋಗಮೋಕ್ಷೈಕ ಸಾಧನಂ (ಪಾರ, ಪ, ೧. ಶ್ಲೋ. ೫೯), ಭುಕ್ತಿಮುಕ್ತಿಫಲಪ್ರದಂ (ಪಾರ. ಪ. ೧೦. ಶ್ಲೋ. ೯೪), ಭುಕ್ತಿದಂ ಚ ವಿಮುಕ್ತಿದಂ, ಭುಕ್ತಿಮುಕ್ತಿ ಪ್ರದೋ ದೇವಿ, ಇತ್ಯಾದಿ ಅವತರಣಗಳು ಭುಕ್ತಿ ಮುಕ್ತಿ ಎಂಬ ಎರಡೂ ಧ್ಯೇಯಗಳನ್ನು ಹೇಳುವವು. ಸ್ಮೃತ್ಯಾದಿ ಗ್ರಂಥಗಳಲ್ಲಿ ಹೇಳಿದ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳನ್ನು ಸಮಸ್ತ ಯದಿಂದ ಭುಕ್ತಿ ಮುಕ್ತಿ ಎಂಬುದು ಒಳಗೊಂಡಿದೆ.

(೫) ಈ ಆಗಮಗಳು ವೇದಗಳ ಮಹತ್ವವನ್ನು ಮತ್ತು ಶ್ರೇಷ್ಠತೆ ಯನ್ನು ಅಲ್ಲಲ್ಲಿ ವರ್ಣಿಸುವವು ಹಾಗೂ ಅವು ಎಲ್ಲಕ್ಕೂ ಆದಿಮ ಗ್ರಂಥಗಳು ಎಂಬ ಭಾವವನ್ನು ತೋರಿಸುವಂತೆ ಅವುಗಳ ಉಲ್ಲೇಖ ಮಾಡುವವು. ಷಡ ಕ್ಷರಿ ಮಂತ್ರವನ್ನು ಕುರಿತು ಬರೆಯುವಾಗ, ಪ್ರಮಾಣಭೂತಃ ಸರ್ವೇಷಾಂ ವೇದೋಕ್ತತ್ವಾದ್ವಿಶೇಷತಃ (ಸೂಕ್ಷ್ಮ, ಪ, ೩. ಶ್ಲೋ. ೧೯), ಯಥಾ ವೇದ ಸರೋ ಮಂತ್ರೋ ನಾಸ್ತ್ಯೇವಾಗಮಕೋಟಿಷು (ಸೂಕ್ಷ್ಮ ಪ. ೩. ಶ್ಲೋ. ೧೦೫), ಇದಂ ರಹಸ್ಯಂ ಪಾಪಘ್ನಂ ವೇದಾನಾಂ ಸಾರಮುತ್ತಮಂ (ಸೂಕ್ಷ್ಮ, ಪ. ೩ ಶ್ಲೋ. ೧೧೨), ವೇದೇ ಚ ವೇದಶೀರ್ಷೇ ಚ ಉಭ ಯತ್ರ ಷಡಕ್ಷರಃ (ಪಾರ. ಪ. ೧೧. ಶ್ಲೋ. ೪), ಅಲ್ಪಂ ವೇದಸಾರಾಖ್ಯಂ (ಪಾರ, ಪ. ೧೧. ಶ್ಲೋ, ೭) ಎಂದು, ಸದ್ಗುರುವು ಅಧೀತವೇದವೇದಾಂಗ ನಿರಬೇಕು (ಸೂಕ್ಷ್ಮ. ಪ. ೫. ಶ್ಲೋ. ೬) ಎಂದು, ಮತ್ತು ವೇದಧರ್ಮಾಶ್ಚ ಶಾಶ್ವತಾಃ, ವೇದಾಃ ಸಾಂಗಾಃ ಸನಾತನಾಃ, ವೇದಾಗಮಪುರಾಣಾನಾಂ ಸಾರಭೂತಂ, ಸರ್ವೇ ವೇದಾಶ್ಚ ಶಾಸ್ತ್ರಾಣಿ, ಅನಂತಾ ನಿಗಮಾಃ(ವೇದಾಃ) ಪ್ರೋಕ್ತಾಃ, ಎಂದು ಅನೇಕ ಉಲ್ಲೇಖಗಳಿರುವವು.

(೬) ಬೌದ್ಧ, ಸೌಗತ, ಚಾರ್ವಾಕ, ಜೈನ, ಮತ್ತು ಆರ್ಹತ ಎಂಬ ವೇದಬಾಹ್ಯವಾದ ಹಾಗೂ ಶೂನ್ಯಾರ್ಥಕ ಮಂತ್ರವನ್ನು ಉಪದೇಶಿಸುವ ಮತಗಳ ಉಲ್ಲೇಖವು ಪಾರಮೇಶ್ವರ ತಂತ್ರದ ೧೩ನೆಯ ಪಟಲದ ಆರಂಭ ದಲ್ಲಿದೆ. ಮುಂದೆ ಬ್ರಹ್ಮಗಾಯತ್ರೀ ಮಂತ್ರವುಳ್ಳ ವೈದಿಕಮತ, ಸೌರ

ಗಾಯತ್ರೀ ಮಂತ್ರವುಳ್ಳ ಸೌರಮತ, ವೈಷ್ಣವಮತ, ಶೈವಮತ, ಇವುಗಳ ಉಲ್ಲೇಖವಿರುವದು. ಮುಂದೆ ಮತ್ತೆ ಸೌರದಲ್ಲಿ ೫, ವೈಷ್ಣವದಲ್ಲಿ ೫, ಶೈವದಲ್ಲಿ ೭ ಭೇದಗಳು ಹೇಳಲ್ಪಟ್ಟಿವೆ. ಅಲ್ಲಿಯೆ ವೀರಶೈವ, ವೈಷ್ಣವ, ಶಾಕ್ತ, ಸೌರ, ವಿನಾಯಕ, ಕಾಪಾಲ, ಎಂಬ ೬ ದರ್ಶನಗಳ ಹೆಸರುಗಳು ಇರುವವು. ಪಾರಮೇಶ್ವರ ತಂತ್ರವು ಹೇಳಿದ ವಿಕ್ಕ ಮತಗಳ ಉಪಭೇದಗಳನ್ನು ಇಲ್ಲಿ ವಿವರಿಸುವ ಕಾರಣವಿಲ್ಲ. ಆದರೆ ಶೈವಮತದಲ್ಲಿಯ ಭೇದೋಪಭೇದಗಳು ಯಾವವು ಇದನ್ನು ನೋಡುವದು ಅವಶ್ಯವು. ವೀರಶೈವಾದಿ ಭೇದಗಳ ಮೂಲಕ ಶೈವವು ಸಪ್ತವಿಧವಿರುವದು ಎಂದು, ಅನಾದಿ ಶೈವ, ಆದಿಶೈವ, ಅನುಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ, ಮತ್ತು ವೀರಶೈವ ಈ ಏಳು ಭೇದಗಳು ಮೊದಲು ಹೇಳಲ್ಪಟ್ಟಿರುವವು. ಮುಂದೆ ಮತ್ತೆ ಉಪಭೇದಗಳೆಂದು ಗಾಣಪತ್ಯ, ವೈರಭದ್ರ್ಯ, ಭೈರವ, ಶರಭ, ನಾಂದಿಕೇಶ, ಕೌಮಾರ, ಪೈಶಾಚ ಎಂಬ ಮತಗಳ ಹೆಸರುಗಳಿರುವವು. ಇವುಗಳಲ್ಲಿ ಪುಸಃ, ಗಾಣಪತ್ಯದಲ್ಲಿ ಅಷ್ಟಕೋಟಿ ಮಹಾಭೇದಗಳು, ವೈರಭದ್ರ್ಯದಲ್ಲಿ ಏಳು, ಭೈರವದಲ್ಲಿ ಎಂಟು, ಶರಭದಲ್ಲಿ ಐದು, ನಾಂದಿಕೇಶ ಕೌಮಾರ ಮತ್ತು ಪೈಶಾಚಗಳಲ್ಲಿ ಮೂರು ಮೂರು ಹೀಗೆ ಭೇದಗಳಿರುವವೆಂದೂ ವಿವರವಿರುವದು. ಇವೆಲ್ಲವುಗಳಲ್ಲಿ ಶೈವಮತವೆ ಎಲ್ಲಕ್ಕೂ ಉತ್ತಮೋತ್ತಮವು ಮತ್ತು ವೀರಶೈವತಂತ್ರವೆ ಸರ್ವೋತ್ಕೃಷ್ಟವು, ಎಂದು ಸ್ವಾಭಾವಿಕವಾಗಿಯೆ ಗೌರವಪೂರ್ಣ ಉಲ್ಲೇಖವು ಮಾಡಲ್ಪಟ್ಟಿರುವದು. ಮೇಲೆ ಹೇಳಿದ ಅನಾದಿ ಶೈವಾದಿ ಏಳು ವಿಧಗಳನ್ನು ಹೇಳುವಾಗ ಹಲವೆಡೆ ಅವಾಂತರಶೈವ, ಪ್ರವರಶೈವ, ಅಂತ್ಯಶೈವ ಎಂಬ ಹೆಸರುಗಳು (ಸೂಕ್ಷ್ಮ. ಪ. ೭. ಶ್ಲೋ. ೬–೭) ಉಪಯೋಗಿಸಲ್ಪಟ್ಟಿರುವವು. ಶೈವಮತದಲ್ಲಿ ಮಾಡಲ್ಪಟ್ಟ ಸಪ್ತಭೇದಗಳು ಜಾತ್ಯನುಕ್ರಮದಿಂದ ಮಾಡಲ್ಪಟ್ಟಿರುವು, ಎಂದು ಸೂಕ್ಷ್ಮಾಗಮದಲ್ಲಿ (ಪ. ೭) ಉಲ್ಲೇಖವಿರುವದು. ಅದನೆ ಸ್ವಲ್ಪ ನಾಮಭೇದದಿಂದ ಅದೇ ಸಪ್ತವಿಧಗಳು ಆಚಾರಭೇದದಿಂದ ಮಾಡಲ್ಪಟ್ಟಿರುವವೆಂದು ಪಾರಮೇಶ್ವರದಲ್ಲಿ (ಪ. ೭) ಬರೆಯಲ್ಪಟ್ಟಿರುವದು. ಶೈವಮತದಲ್ಲಿ ಶುದ್ಧ, ವಿಶ್ರ, ಮಾರ್ಗ, ಅವಾಂತರ, ಮತ್ತು ವೀರ ಎಂಬ ಐದು ಮತಗಳು ಜಾತಿಯ ಮೇಲೆ ಅವಲಂಬಿಸಿರುವಂತೆ (ಜಾತಿಭೇದೇನ ಕೇನ ಚಿತ್) ಪಾರಮೇಶ್ವರದ ೧೭ನೆಯ ಪಟಲದಲ್ಲಿ ಪ್ರಾರಂಭಕ್ಕೆಯೆ ವರ್ಣನೆ ಇರುವದು. ಅನಾದಿ ಶೈವಾದಿ ಏಳು ಭೇದಗಳನ್ನು ಜಾತ್ಯನುಕ್ರಮಶಃ ಹೇಳಿದ್ದಾಯಿತು, ಇನ್ನು ಆಚಾರಭೇದದಿಂದ ಆಗುವ ಮತಗಳು ಹೇಳಲ್ಪಡು-

ವವು, ಎಂದು ಉಪಕ್ರಮಿಸಿ ಸೂಕ್ಷ್ಮಾಗಮದ ವಿವರಣೆಯು ಪಟಲವು (ಶ್ಲೋ. ೭೭) ಸಾಮಾನ್ಯ, ವಿಶ್ರ, ಶುದ್ಧ, ಮತ್ತು ವೀರ ಎಂಬ ನಾಲ್ಕು ಭೇದಗಳನ್ನೂ ಅವುಗಳ ಲಕ್ಷಣಗಳನ್ನೂ ಹೇಳುವದು. ಶೈವ ತಂತ್ರಗಳಲ್ಲಿ ಸಹ ಶೈವ, ಪಾಶುಪತ, ಸೋಮ, ಮತ್ತು ಲಾಕುಲ ಎಂಬ ನಾಲ್ಕು ಉಪ ಶಾಖೆಗಳನ್ನು ಹೇಳಿ ಇವುಗಳಲ್ಲಿ ಸಂಕರವನ್ನು ಮಾಡಕೂಡದು (ಸಂಕರಂ ನ ಸಮಾಚರೇತ್), ಎಂದು ಪಾರಮೇಶ್ವರವು (ಪ. ೧. ಶ್ಲೋ. ೩೦) ಎಚ್ಚರಗೊಡುವದು. ವೇದಾಂತ, ಸಾಂಖ್ಯ, ಸದಸತ್, ಸಪ್ತಪದಾರ್ಥಿ, ಕ್ಷಣಿಕ ಮುಂತಾದ ಮತಗಳು ಅಯೋಗ್ಯವಿರುವವು ಎಂದು ಖಂಡನ ಪೂರ್ವಕವಾಗಿ ಮೃಗೇಂದ್ರಾಗಮವು (ಪ್ರಕ. ೨. ೧೦–೨೯) ಹೇಳಿರುವದು. ಈ ಪ್ರಕಾರ ಒಟ್ಟಿಗೆ ಅನ್ಯಮತಗಳ, ಮತ್ತು ಶೈವಮತಭೇದಪ್ರಭೇದಗಳ ವಿವರವು ಈ ಆಗಮಗಳಲ್ಲಿ ಕಂಡುಬರುವದು.

(೭) ಅನ್ಯ ಎಲ್ಲ ಮತಗಳಿಗಿಂತ ಶೈವ ಮತವೆ ಶ್ರೇಷ್ಠವು, ಶೈವಮತದಲ್ಲಿ ಮತ್ತೆ ವೀರಶೈವಮತವು ಉತ್ತಮೋತ್ತಮವು, ಎಂದು ಹೇಳಿದ್ದಲ್ಲದೆ ಶೈವಶಾಸ್ತ್ರವನ್ನು ಕುರಿತು ಆಕ್ಷೇಪಿಸುವವರು ನರಕದಲ್ಲಿ ದುಃಖವನ್ನು ಭೋಗಿಸಿ ಕೃಮಿಕೀಟಾದಿಗಳ ಜನ್ಮವನ್ನು ತಾಳುವರು (ಸೂಕ್ಷ್ಮ. ಪ. ೬. ಶ್ಲೋ. ೭೭), ಎಂದು ಆಗಮಕಾರರು ಹೇಳಿರುವರು. 'ಶೈವೇ ಸಿದ್ಧೇ ಭಾತಿ ಮೂರ್ಧ್ನೀತರೇಷಾಂ' (ಮೃ. ಪ್ರಕ. ೨. ೨೯), ಎಂದು ಶೈವಾಗಮ ಸಿದ್ಧನ ನಿಲವು ವರ್ಣಿಸಲ್ಪಟ್ಟಿದೆ. ಶಿವನನ್ನು ಇಲ್ಲವೆ ಶಿವನ ಅವತಾರಗಳನ್ನು ನಿಂದಿಸುವವರ ನಾಲಿಗೆಯನ್ನು ಶೈವರು ಕತ್ತರಿಸಿದರೆ ಅವರಿಗೆ ಯಾವ ದೋಷವೂ ತಟ್ಟುವದಿಲ್ಲ, ಇಷ್ಟೇ ಅಲ್ಲ, ಅವರು ಈ ದಂಡನಕಾರ್ಯವನ್ನು ಮಾಡಿದ್ದಕ್ಕಾಗಿ ಶಿವಲೋಕವನ್ನೆ ಪಡುವರು. ಹೀಗೆ ಮಾಡುವದು ಸಾಧ್ಯವಿಲ್ಲದಿದ್ದರೆ ಶೈವರು ಸ್ನಾನತ್ಯಾಗಮಾಡಬೇಕು; ಯಾಕಂದರೆ, ಶಿವನಿಂದಕರ ಸಂಗವು ದೋಷಕರವಿರುವದು (ಸೂಕ್ಷ್ಮ. ಪ. ೬. ಶ್ಲೋ. ೮೧, ೮೨). ಅನ್ಯದೇವಪೂಜಕರೆಲ್ಲರೂ ಭವಿಗಳೆನಿಸುವರು, ಅವರ ಸಂಗವನ್ನು ಮಾಡಕೂಡದು, ಅವರಿದ್ದ ಮನೆಯಲ್ಲಿರಕೂಡದು, ಅವರು ಮಾಡಿದ ಅನ್ನಾದಿಗಳನ್ನು ಸೇವಿಸಕೂಡದು, ಎಂಬ ಮುಂತಾದ ನಿರ್ಬಂಧಗಳು ಹಾಕಲ್ಪಟ್ಟಿರುವವು. ತಾತ್ಪರ್ಯವೇನಂದರೆ, ಶೈವರು ತಮ್ಮ ಸಾಂಪ್ರದಾಯದವರೊಡನೆಯೆ ವ್ಯವಹಾರಾದಿಗಳನ್ನು ಮಾಡಬೇಕು ಅಂದರೆ ಅನ್ಯಮತಗಳ ಸಂಪರ್ಕವೂ ಬರುವದಿಲ್ಲ ಹಾಗೂ ತಮ್ಮ ನಿಷ್ಠೆಗೂ ಬಾಧೆ ಬರುವುದಿಲ್ಲ, ಎಂದು ಆಗಮಕಾರರ ಅಭಿಪ್ರಾಯವಿರುವದು.

(೮) ಈ ಆಗಮಗಳಲ್ಲಿ ಶಿವನು ನಿಷ್ಕಲನು, ಪರಾತ್ಪರನು, ಸೂಕ್ಷ್ಮನು, ನಿತ್ಯನು, ಅವ್ಯಯನು, ಸರ್ವಗತನು, ಅನಿಂದಿತನು, ಅನೌಪಮ್ಯನು, ಅಪ್ರಮಾಣನು, ಅನಾಮಯನು, ಕಾರಣಕಾರಣನು, (ವಾತುಲ, ಪ. ೧. ಶ್ಲೋ. ೧೯, ೩೦.) ಎಂದೂ ಸಚ್ಚಿದಾನಂದಲಕ್ಷಣನು, ಸ್ವತಃಸಿದ್ಧನು, ನಿರಂಜನನು, ಶುದ್ಧನು, ನಿರ್ಮಲನು, ನಿರ್ಗುಣನು, ನಿರುಪಾಧಿಕನು, ಪರಂಜ್ಯೋತಿಯು, ಸನಾತನನು, ಶಾಶ್ವತಪುರುಷನು, ವೇದವೇದಾಂತಗೋಚರನು (ಸೂಕ್ಷ್ಮ. ಪ. ೧. ಶ್ಲೋ. ೧೬–೧೯) ಎಂದೂ ವರ್ಣಿಸಲ್ಪಟ್ಟಿರುವನು. ಲೋಕಗಳ ಉತ್ಪನ್ನಕ್ಕೆ ಕಾರಣವಾದ ವಿಕ್ಕತತ್ವಗಳನ್ನು ಹುಟ್ಟಿಸುವುದಕ್ಕಾಗಿ ಮೇಲಿನ ಲಕ್ಷಣಗಳಿಂದ ಯುಕ್ತನಾದ ಶಿವನು ಸ್ವೇಚ್ಛೆಯಿಂದ ಸಂಕಲ್ಪಮಾಡುವನು. ಅವನ ಸಹಸ್ರಾಂಶದಿಂದ ಪರಾಶಕ್ತಿಯು, ಅದರ ಸಹಶ್ರಾಂಶದಿಂದ ಆದಿಶಕ್ತಿ, ಹೀಗೆಯೆ ಮುಂದೆ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳು ಉತ್ಪನ್ನವಾಗುವವು. ಈ ಪಂಚಶಕ್ತಿಗಳು ನಿಷ್ಕಲವಿದ್ದು ಶಿವಸೃಷ್ಟಿ ಎನಿಸುವವು. ಮುಂದೆ ಸದಾಶಿವತತ್ವ ಅಥವಾ ಸಾದಾಖ್ಯತತ್ವವು. ಅದರಿಂದಾದ ಐದು ತತ್ವಗಳು ಸಕಲನಿಕಲವಿರುವವು. ಕೊನೆಗೆ ಮಹೇಶತತ್ವವು ಸಕಲವಿರುವದು. ಮಹೇಶನು ವಿರಾಟಪುರುಷನೆನ್ನಬಹುದು. ಯಾಕಂದರೆ, ಮುಂದೆ ಅವನ ಕೋಟ್ಯಂಶದಿಂದ ಬ್ರಹ್ಮ, ವಿಷ್ಣು, ಸೋಮ, ಸೂರ್ಯ, ಅಗ್ನಿ, ವಾಯು ಮುಂತಾದವರ ಉತ್ಪತ್ತಿಯಾಗುವದು. (ವಾತುಲ. ಪ. ೧). ಒಟ್ಟು ತತ್ವಗಳು ೩೬, ಎಂದು ಹಲವೆಡೆಗೆ ಮತ್ತು ೫೫, ಎಂದು ಹಲವೆಡೆಗೆ ಉಲ್ಲೇಖವಿರುವದು. ಪರಶಿವನ ಒಂದು ಕ್ಷುದ್ರ ಅಂಶದಿಂದ ಈ ಸೃಷ್ಟಿಯು ಉತ್ಪನ್ನವಾಗಿರುವದು. ಜೀವನು ಈ ಸೃಷ್ಟಿಯ ಒಂದು ಅಂಶಾಂಶನು. ಹೀಗೆ ಒಂದು ದೃಷ್ಟಿಯಿಂದ ಜೀವನು ಅತ್ಯಂತ ಕ್ಷುದ್ರನೂ ಸಕಲನೂ ಇದ್ದರೂ ಅವನಲ್ಲಿಯ ಆತ್ಮತತ್ವವು ನಿಷ್ಕಲವಿರುವದು. ದೇಹವುಳ್ಳದ್ದು ಸಕಲವು, ದೇಹವರ್ಜಿತವಿದ್ದುದು ನಿಷ್ಕಲವು (ವಾತುಲ. ಪ. ೧. ಶ್ಲೋ. ೮೩). ದೇಹಾತ್ಮತ್ವ ಬುದ್ಧಿಯ ಮೂಲಕ ಮನುಷ್ಯಜೀವವು ದುಃಖದಲ್ಲಿ ತೊಳಲಾಡುತ್ತಿರುವದು. ಅಹಂಕಾರ ಮತ್ತು ಕರ್ಮಮಲಾದಿಗಳೆಂಬ ಪಾಶದಿಂದ ಮುಕ್ತನಾಗಿ, ದೇಹವರ್ಜಿತ ನಿಷ್ಕಲ ಆತ್ಮನೆ ನಾನು ಎಂಬ ಭಾವನಾಯುಕ್ತನಾಗಿ, ಆ ಸ್ಥಿತಿಯನ್ನು ಅನುಭವಿಸುವುದೆ ಜ್ಞಾನವೆನಿಸುವದು (ಸೂಕ್ಷ್ಮ. ಪ. ೫. ಶ್ಲೋ. ೨೦, ೨೧). ದೇವೀಕಾಲೋತ್ತರದಲ್ಲಿಯ ಜ್ಞಾನಾಚಾರ ಪಟಲದಲ್ಲಿ (ಶ್ಲೋ. ೫೨) ಜ್ಞಾನಪಕ್ಷುವಿನಿಂದ ಅಶರೀರಿಯಾದ ಆತ್ಮನನ್ನು ನೋಡುವುದೆ ಪರಮಾನುಭವವು, ಎಂದು ವರ್ಣನೆಯಿರುವದು. ಪಾಶಬದ್ಧನಿದ್ದವನೆ ಜೀವನು ಮತ್ತು ಪಾಶಮುಕ್ತನಾದವನೆ ಸದಾಶಿವನು, ಎಂದು ಆಗಮಗಳ ಸಿದ್ಧಾಂತವಿರುವದು.

(೯) ಇನ್ನು ಈ ಪಾಶದಿಂದ, ಈ ಕಾರ್ಮಿಕಮಲ, ಮಾಯಾಮಲ, ಆಣವಮಲ ಎಂಬ ಮಲಗಳಿಂದ ಮುಕ್ತನಾಗಲಿಕ್ಕೆ ಜೀವನಿಗೆ ಸಾಧನವೇನು, ಇದು ಎಲ್ಲಕ್ಕೂ ಮಹತ್ವದ ಪ್ರಶ್ನೆಯಿರುವದು. ಮುಕ್ತಿಗೆ ಅನುಭವಯುಕ್ತ ಸತ್ಯಜ್ಞಾನವೆ ಮುಖ್ಯ ಸಾಧನವೆಂಬ ಬಗ್ಗೆ ಸಂಶಯವಿಲ್ಲ. ಆದರೆ ಆ ಜ್ಞಾನವನ್ನು ಹೇಗೆ ಪ್ರಾಪ್ತಮಾಡಿಕೊಳ್ಳಬೇಕು, ಎಂದು ಆಗಮಕಾರರನ್ನು ಕೇಳಿದರೆ, ಸಗುಣಶಿವಭಕ್ತಿಯಿಂದ, ಎಂದು ಅವರು ಒಮ್ಮೆಲೆ ಉತ್ತರಕೊಡುವರು. ಒಮ್ಮೆ ಪಾರ್ವತಿಯು ಸ್ತುತಿಮಾಡಲು 'ನಿನ್ನ ಸ್ತೋತ್ರ ಹಾಗೂ ಭಕ್ತಿಗಳಿಂದ ನಾನು ಸಂತುಷ್ಟನಾಗಿರುವೆನು, ವರವನ್ನು ಬೇಡು,' ಎಂದು ಶಿವನು ಅಂದನು. ಆಗ, 'ನಿನ್ನ ಭಕ್ತಿಯಲ್ಲದೆ ನನಗೆ ಇನ್ನೇನೂ ಬೇಡ,' ಎಂದು ಪಾರ್ವತಿಯು ಹೇಳಿರುವಳು (ಸೂಕ್ಷ್ಮ. ಪ. ೧೦. ಶ್ಲೋ. ೫೨, ೫೩). ವೀರಶೈವವ್ರತವನ್ನು ಹೇಳುವಾಗ, 'ನಿರಪೇಕ್ಷ ಭಕ್ತಿ, ನನ್ನ ಅನನ್ಯಪೂಜೆ, ಸ್ಮರಣ, ಕೀರ್ತನ, ಧ್ಯಾನ, ಮತ್ತು ನನ್ನ ಭಾವದ ಪರಿಶೀಲನ, ಇವೇ ಮುಖ್ಯ' ಎಂದು ಪಾರಮೇಶ್ವರಾಗಮದಲ್ಲಿ (ಪ. ೫. ಶ್ಲೋ. ೩೫, ೩೬) ಶಿವನ ವಚನವಿರುವದು. ಇದೇ ರೀತಿ ವೀರಶೈವಾಚಾರವನ್ನು ವಿವರಿಸುವಾಗ, 'ನನ್ನ ಸ್ಮರಣೆ, ಧ್ಯಾನ, ಸ್ತುತಿ, ಪೂಜೆ,' ಇವು ಅತ್ಯಂತ ಅವಶ್ಯವೆಂದೂ 'ಅಶಕ್ತರಿಗೆ ಭಕ್ತಿಯೋಗದಂಥ ಇನ್ನೊಂದಾಲಂಬನವಿಲ್ಲ' ಎಂದೂ ಪಾರಮೇಶ್ವರದಲ್ಲಿ (ಪ. ೨೨. ಶ್ಲೋ. ೩೪, ೬೫) ಶಿವನ ಉಪದೇಶವಿರುವದು. ಇದಲ್ಲದೆ, ಶಿವಭಕ್ತಿಯನ್ನಾಚರಿಸಬೇಕು (ಶಿವಭಕ್ತಿಮಾಚರೇತ್) ಸದ್ಗುರುವು ಶಿವಭಕ್ತನೂ ಶಿವಜ್ಞಾನಿಯೂ ಇರಬೇಕು (ಶಿವಭಕ್ತಃ ಶಿವಜ್ಞಾನೀ), ಮುಮುಕ್ಷುವು ಈಶ್ವರಭಕ್ತನಿರಬೇಕು (ಮುಮುಕ್ಷುರೀಶ್ವರೇ ಭಕ್ತಃ), ನನ್ನ ಭಕ್ತಿಯೇ ಪರಮ ಗತಿಯು (ಮದ್ಭಕ್ತಿಃ ಪರಮಾ ಗತಿಃ), ನನ್ನ ವಿಭೂತಿಗಳಲ್ಲಿ ಭಕ್ತನೇ ಶ್ರೇಷ್ಠನು (ಸರ್ವಾಸಾಂ ಮದ್ವಿಭೂತೀನಾಂ ಭಕ್ತ ಏವ ತಥಾ ವರಃ), ಶಂಕರನು ಭಕ್ತಕಾಯದಲ್ಲಿರುವನು (ಭಕ್ತಕಾಯಸ್ಥಶಂಕರಃ), ಭಕ್ತಶರೀರವೆ ನನ್ನ ಶರೀರವು (ಮಮ ಕಾಯಾ ಭಕ್ತಕಾಯಾ), ಎಂಬ ಉಲ್ಲೇಖಗಳು ಅಲ್ಲಲ್ಲಿರುವವು. ನವವಿಧಭಕ್ತಿಯಲ್ಲಿ ಆತ್ಮನಿವೇದನವು ಅಥವಾ ಆತ್ಮಾರ್ಪಣವು ಎಲ್ಲಕ್ಕೂ ಹೆಚ್ಚಿನದು. ದೇಹಾದಿಗಳನ್ನು ಶಿವನಿಗಾಗಿ ಸಂಪೂರ್ಣವಾಗಿ ಅರ್ಪಿಸುವದು, ಭುಕ್ತಿಗೀತಾದಿಕ

ಗಳನೆಲ್ಲ ಶಿವಪ್ರಸಾದವೆಂದು ಸೇವಿಸುವದು, ಎಲ್ಲ ಇಂದ್ರಿಯ ಕ್ರಿಯೆಗಳನ್ನು ಶಿವಸೇವೆಗಾಗಿಯೆ ಮಾಡುವದು (ಪಾರ, ಪ, ೨೯ ಶ್ಲೋ. ೩೮, ೫೫), ಜಪಾದಿಗಳನ್ನು ಕೂಡ ಶಿವಾರ್ಪಣಭಾವದಿಂದ ಮಾಡುವದು (ಶಿವಾರ್ಪಣಧಿಯಾ ಕುರ್ಯಾಜ್ಜಪಾದಿ), ಇದೇ ಸರ್ವಾರ್ಪಣವೆನಿಸುವದು. ಭಕ್ತಿ, ಶಿವಾರ್ಪಣಪ್ರಧಾನವಾದ ಭಕ್ತಿ, ಸರ್ವಾರ್ಪಣವೆ ಮುಖ್ಯವಾದ ಭಕ್ತಿಯನ್ನು ಹೇಳಿ, ಅದರೊಡನೆ ಯೋಗ, ಕರ್ಮ, ಜ್ಞಾನ ಇವುಗಳನ್ನು ಆಗಮಕಾರರು ಅಲ್ಲಲ್ಲಿ ಹೇಳಿರುವರು. ಕಾಮಿಗಳಿಗೆ ಕರ್ಮ, ನಿಷ್ಕಾಮಿಗೆ ಜ್ಞಾನ, ಈ ಮಾರ್ಗಗಳೆ ಆಲಂಬನವೆಂದು ಶಿವನ ವಚನವಿರುವದು. (ಪಾರ. ಪ. ೨೨. ಶ್ಲೋ. ೬೫). ಕರ್ಮದಲ್ಲಿ ಸಕಾಮ ಮತ್ತು ನಿಷ್ಕಾಮ ಹೀಗೆ ಎರಡು ವರ್ಗಮಾಡಿ, ನಿಷ್ಕಾಮ ಕರ್ಮವು ಜ್ಞಾನವನ್ನು ಪ್ರಾಪ್ತಮಾಡಿ ಕೊಡುವುದೆಂದು ಸೂಕ್ಷ್ಮಾಗಮದ (ಪ. ೬. ಶ್ಲೋ. ೩೫) ಸಿದ್ಧಾಂತವಿರುವದು. ಅದೇ ಸೂಕ್ಷ್ಮಾಗಮದ ಪ್ರಕಾರ (ಪ, ೭ ಶ್ಲೋ. ೭೬) ಪುಣ್ಯ ಪಾಪ ಎಂಬ ಎರಡೂ ಕರ್ಮಗಳಾಜೆಗೆ ಹೋದವನು ನಿರಾಭಾರಿ ಎನಿಸುವನು. ಆದರೆ, ಕರ್ಮಕ್ಕಿಂತ ಧ್ಯಾನವು ಶ್ರೇಷ್ಠವು, ಸಾವಿರ ಅಶ್ವಮೇಧಕ್ಕಿಂತ ಧ್ಯಾನಯೋಗವು ಹೆಚ್ಚಿನದು, ಯಾವನ ಚಿತ್ತವು ಅಂತರ್ನಿವಿಷ್ಟವಿರುವುದೊ ಅವನಿಗೆ ಕರ್ಮಲೇಪವಾಗಲಾರದು (ಸೂಕ್ಷ್ಮ. ಪ. ೬. ಶ್ಲೋ. ೪೫,೪೪), ಎಂದು ಧ್ಯಾನದ ಗೌರವವು ಮಾಡಲ್ಪಟ್ಟಿರುವದು. ಅಷ್ಟಾಂಗ ಯೋಗದ ಸ್ಥಳದಲ್ಲಿ ಭಕ್ತಿ, ವೈರಾಗ್ಯ, ಅಭ್ಯಾಸ, ಧ್ಯಾನ, ಏಕಾಂತ, ಭಿಕ್ಷಾಟನೆ, ಲಿಂಗಪೂಜೆ, ಶಿವಸ್ಮರಣ ಎಂಬ ಎಂಟು ಅಂಗಗಳುಳ್ಳ ಶಿವಯೋಗವು ಪಾರಮೇಶ್ವರದಲ್ಲಿ (ಪ. ೧೦ ಶ್ಲೋ. ೫೫, ೫೬) ಉಕ್ತವಾಗಿದೆ. ಚಿತ್ತವು ನಿರಾಶ್ರಯವೂ ಸರ್ವಾಲಂಬನವರ್ಜಿತವೂ ಮನೋವಸ್ಥೆಗಳಿಂದ ರಹಿತವೂ ಇರುವದೆ ಮುಕ್ತಿಯ ಲಕ್ಷಣವೆಂದು ದೇವೀಕಾಲೋತ್ತರದ ಜ್ಞಾನಾಚಾರ ಪಟಲದಲ್ಲಿ (ಶ್ಲೋ ೪೧) ಹೇಳಲ್ಪಟ್ಟಿರುವದು. ಇದು ಚಿತ್ತವೃತ್ತಿನಿರೋಧವನ್ನು ಹೇಳುವ ಪಾತಂಜಲ ಯೋಗದ ಧ್ಯೇಯವನ್ನು ಬೇರೆ. ಶಬ್ದಗಳಲ್ಲಿ ಹೇಳುತ್ತಿದೆ ಎನ್ನಬಹುದು. ಜ್ಞಾನವಿಲ್ಲದ ಯೋಗವೂ ಯೋಗವಿಲ್ಲದ ಜ್ಞಾನವೂ ವ್ಯರ್ಥ, ಎಂದು ಒಂದು ಕಡೆಗೆ ಹೇಳಿದೆ. ಈ ರೀತಿ ಆಗಮಗಳು ಹೇಳುವ ಮೋಕ್ಷಸಾಧನಗಳ ಸ್ಥೂಲರೂಪವಿರುವದು.

(೧೦) ಆಗಮಗಳ ಪ್ರಕಾರ ಸಾಧಕರು ಪಾಲಿಸತಕ್ಕ ಸಾಮಾನ್ಯ ಧರ್ಮಗಳಾವು, ಯಮನಿಯಮಗಳಾವು, ಅವರು ಬಿಡತಕ್ಕ ದುರ್ಗುಣಗಳಾವು, ಇದನ್ನು ನೋಡಿದರೆ ಕಾಮಕ್ರೋಧಾದಿಗಳನ್ನು ಬಿಟ್ಟು ಸತ್ಯ-

ಸ್ತೇಯಾದಿಗಳನ್ನು ಪಾಲಿಸತಕ್ಕದ್ದು, ಎಂದು ಅವುಗಳ ಅಭಿಪ್ರಾಯವಿದ್ದದ್ದು ಕಂಡುಬರುವದು. ಈರ್ಷೆ, ಪಿಶುನತ್ವ, ದಂಭ, ರಾಗ, ಮಾತ್ಸರ್ಯ, ಕಾಮ, ಕ್ರೋಧ, ಭಯ, ಶೋಕ ಇವುಗಳನ್ನು ಬಿಟ್ಟು ನಿರ್ದ್ವಂದ್ವನಾದವನು ಸರ್ವಜ್ಞನಾಗಬಲ್ಲನು, ಎಂದು ದೇವೀಕಾಲೋತ್ತರದ ಜ್ಞಾನಾಚಾರ ಪಟಲವು (ಶ್ಲೋ. ೭೭,೭೮) ಹೇಳುವದು. ಕ್ಷಮೆ, ಶಾಂತಿ, ಸಂತೋಷ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ವೈರಾಗ್ಯ, ಸರ್ವಸಂಗನಿವೃತ್ತಿ, ಇವು ಪಾರಮೇಶ್ವರದಲ್ಲಿ (ಪ. ೧೨. ಶ್ಲೋ. ೧೦೩,೧೦೪) ಹೇಳಲ್ಪಟ್ಟಿರುವವು. ಸತ್ಯ, ಭೂತದಯೆ, ಅಹಿಂಸೆ, ಶಮ, ದಮ, ಉದಾರತೆ, ಭಕ್ತಿ, ಗುರುಶುಶ್ರೂಷೆ, ಇವು ಆದೇ ಆಗಮದ ೧೫ನೆಯ ಪಟಲದಲ್ಲಿ (ಶ್ಲೋ. ೩೫,೩೬) ಉಕ್ತವಾಗಿರುವವು. ವಿರಕ್ತರು ಆಚರಿಸತಕ್ಕ ವಿಧಿಗಳೆಂದು ಕ್ಷಮೆ, ಶಾಂತಿ, ಸಂತೋಷ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಶಿವಜ್ಞಾನ, ವೈರಾಗ್ಯ, ಸರ್ವಸಂಗನಿವೃತ್ತಿ, ಇವು ೧೭ನೆಯ ಪಟಲದಲ್ಲಿ (ಶ್ಲೋ. ೩೩,೩೪) ಉಲ್ಲೇಖಿಸಲ್ಪಟ್ಟಿವೆ.

(೧೧) ಮೇಲೆ ಭಕ್ತಿಜ್ಞಾನಾದಿ ಸಾಧನಮಾರ್ಗ ಮತ್ತು ಸಾಧಕರು ಪಾಲಿಸತಕ್ಕ ಸಾಮಾನ್ಯಧರ್ಮ ಇವುಗಳ ವಿವರವಾಯಿತು. ಇನ್ನು ಸಾಧಕರು ಸಗುಣಧ್ಯಾನ, ಪೂಜೆ, ಜಪ ಮುಂತಾದವುಗಳನ್ನು ಮಾಡಬೇಕಾದರೆ ಯಾವ ಸಾಧನಗಳನ್ನು ಉಪಯೋಗಿಸಬೇಕು ಇದನ್ನು ನೋಡುವ. ಆಗಮಕಾರರು ಪರಮಾತ್ಮನ ಏಕಮೇವ ಪ್ರತೀಕವೆಂದು ಲಿಂಗಪೂಜೆಯನ್ನು ಹೇಳುವರು ಹಾಗೂ 'ಓಂ ನಮಃ ಶಿವಾಯ' ಎಂಬ ಷಡಕ್ಷರಿ ಮಂತ್ರದ ಜಪವನ್ನು ಉಪದೇಶಿಸುವರು. ಶಿವನು ನಿರ್ಗುಣನು ಆದರೆ ಧ್ಯಾನಪೂಜಾದಿ ಕಾರಣನಾದುದರಿಂದ ಸದಾಶಿವನು ಸಗುಣನಿರ್ಗುಣನು. ಹೀಗಿದ್ದರೂ ಅವರಿಬ್ಬರಲ್ಲಿ ಏನೂ ತಾತ್ವಿಕ ಭೇದವಿಲ್ಲ (ಸೂಕ್ಷ್ಮ. ಪ. ೧. ಶ್ಲೋ. ೩೩, ೩೪). ಲಿಂಗವು ಆ ಶಿವನ ಪ್ರತೀಕವು. ಆ ಲಿಂಗದಲ್ಲಿ ಎಂತಹ ಮೂರ್ತಿಯನ್ನು ಕಾಣಬೇಕು ಇದು ಅದೇ ಆಗಮದ ಅದೇ ಪಟಲದಲ್ಲಿ ೪೩ನೆಯ ಶ್ಲೋಕದಿಂದ ಮುಂದೆ ಉಕ್ತವಿರುವದು. ಲಿಂಗವು ಸಾಕ್ಷಾತ್ ಪರಬ್ರಹ್ಮವು (ತಸ್ಮಾಲ್ಲಿಂಗಂ ಪರಬ್ರಹ್ಮ–ಸೂಕ್ಷ್ಮ. ಪ. ೬. ಶ್ಲೋ. ೩೪). ಆ ಲಿಂಗಪೂಜನವಿಧಿಯೂ ಮುಂದೆ ಹೇಳಲ್ಪಟ್ಟಿರುವದು. ಸಾಕ್ಷಾತ್ ಶಿವನೇ ಪೂಜೆಗಾಗಿ ಲಿಂಗರೂಪನಾಗಿರುವನು. ನಾದರೂಪ ಶಿವನು ಮತ್ತು ಬಿಂದುರೂಪ ಶಕ್ತಿಯು ಕೂಡಿ ಈ ಶಿವಲಿಂಗವು ಶಿವಶಕ್ತ್ಯುಭಯಾತ್ಮಕವಿರುವದು. ಇದನ್ನು ಪೂಜಿಸಬೇಕು, ಧ್ಯಾನಿಸಬೇಕು, ಮತ್ತು ಭುಕ್ತಿಮುಕ್ತಿ

ಯನ್ನು ಪಡೆಯಬೇಕು. ಲಿಂಗದ ನಿಜಸ್ವರೂಪವನ್ನು ನೋಡಿದರೆ ಅದು ನಿರಾಮಯವು, ನಿರಾಕಾರವು, ನಿರ್ಗುಣವು, ನಿರ್ಮಲವು, ಶಿವವು, ಜ್ಯೋತಿರ್ಮಯವು, ನಿರಾಲಂಬವು, ಸರ್ವಾಧಾರವು, ಸರ್ವಕಾರಣವು, ಅನುಪಮವು, ಕೇವಲ ಸಚ್ಚಿದಾನಂದಲಕ್ಷಣವು (ಸೂಕ್ಷ್ಮ. ಪ. ೬. ಶ್ಲೋ. ೪–೧೧). ಈ ರೀತಿ ಸಾಕ್ಷಾತ್ ಶಿವಪ್ರತೀಕವಾದ ಲಿಂಗವು ಇಷ್ಟ, ಪ್ರಾಣ, ಭಾವ, ಎಂದು ಮೂರುವಿಧವಿರುವದು. ಗುರುವು ಬಾಹ್ಯಪೂಜಾದಿ ಕರ್ಮಗಳಿಗಾಗಿ ಕೊಟ್ಟ ಪಾರ್ಥಿವ ಲಿಂಗವು ಇಷ್ಟಲಿಂಗವೆನಿಸುವದು, ಪ್ರಾಣ ಮತ್ತು ಲಿಂಗ ಇವೆರಡೂ ಒಂದೇ, ಎಂಬ ಭಾವದಿಂದ ಪ್ರಾಣದಲ್ಲಿ ಪ್ರತಿಷ್ಠಾಪಿಸಿದ ಲಿಂಗವು ಪ್ರಾಣಲಿಂಗವೆನಿಸುವದು, ಸಾಧಕನು ಯಾವ ಲಿಂಗದಲ್ಲಿ ಧ್ಯಾನಸ್ಥನಾಗುವುದರಿಂದ ಅವನ ಮನೋವೃತ್ತಿಗಳ ಲಯವಾಗುವುದೊ ಅದು ಭಾವಲಿಂಗವು. ಆ ಮೂರನ್ನು ಏಕಭಾವದಿಂದ ಪೂಜಿಸತಕ್ಕದ್ದು (ಸೂಕ್ಷ್ಮ. ಪ. ೬. ಶ್ಲೋ. ೫೪–೫೮). ಸುವರ್ಣಾದಿ ಲೋಹಗಳಿಂದ ಮಾಡಿದ ಇಷ್ಟಲಿಂಗದ ಫಲಾದಿಗಳು ಬೇರೆಬೇರೆ ಹೇಳಲ್ಪಟ್ಟಿವೆ. ಅದರೆ ಪಾಷಾಣನಿರ್ಮಿತ ಲಿಂಗವು ಸರ್ವಸಿದ್ಧಿಕರವಿರುವದು (ಪಾರ. ಪ. ೨. ಶ್ಲೋ. ೧೬). ಉತ್ತಮಾಂಗ, ಕೊರಳು, ಕಕ್ಷ, ವಕ್ಷಸ್ಥಲ, ಕರಸ್ಥಲ ಇವುಗಳಲ್ಲಿ ಯಾವದೊಂದು ಸ್ಥಾನದಲ್ಲಿ ಸಾವಧಾನದಿಂದ ಲಿಂಗವನ್ನು ಧರಿಸಬೇಕು, ಎಂದು ವಿಧಾನವಿರುವದು (ಸೂಕ್ಷ್ಮ. ಪ. ೫. ಶ್ಲೋ. ೫೧) ಲಿಂಗಧಾರಣ ಹಾಗೂ ಅದರ ಪೂಜನ ಇದು ವೀರಶೈವರ ಅಷ್ಟಾವರಣಗಳಲ್ಲಿ ಒಂದು ಇರುವದು. 'ನನ್ನ ಲಿಂಗವನ್ನು ಧರಿಸುವದರಿಂದ ಭಕ್ತನು ಸಾಕ್ಷಾತ್ ನಾನೇ ಆಗುವನೆಂಬಲ್ಲಿ ಸಂಶಯವಿಲ್ಲ' ಎಂದು ಶಿವನ ವಚನವಿರುವದು (ಪಾರ. ಪ. ೩. ಶ್ಲೋ. ೯೨). ಭೂತದಯೆ, ಶಿವಭಕ್ತಿ, ಎಲ್ಲೆಲ್ಲಿಯೂ ಶಿವದರ್ಶನ, ಮತ್ತು ಲಿಂಗಧಾರಣ ಇವು ನಾಲ್ಕು 'ಮುಕ್ತಿ ರೇಷಾ ಚತುರ್ವಿಧಾ' ಎಂದು ವರ್ಣಿಸಲ್ಪಟ್ಟಿರುವವು (ಪಾರ. ಪ. ೨. ಶ್ಲೋ. ೩೧, ೩೨). ಇಷ್ಟೇ ಅಲ್ಲ. ಜೀವಹೋದರೂ ಇಷ್ಟಲಿಂಗವನ್ನು ತ್ಯಜಿಸಕೂಡದು ಮತ್ತು ಅದರ ಪೂಜೆಯನ್ನು ಬಿಡಕೂಡದು (ಪಾರ. ಪ. ೨. ಶ್ಲೋ. ೨೦) ಲಿಂಗವು ಕಳೆದರೆ, ಅದು ಸಿಕ್ಕದೆಹೋದರೆ, ಭಿನ್ನವಾದರೆ ಪ್ರಾಣತ್ಯಾಗಮಾಡಬೇಕೆಂದು ಹಲವು ಕಡೆಗೆ ಉಲ್ಲೇಖವಿರುವದು (ಪಾರ. ಪ. ೨. ಶ್ಲೋ. ೧೨೩ ಸೂಕ್ಷ್ಮ. ಪ. ೭. ಶ್ಲೋ. ೬೨ ಪಾರ. ಪ. ೧೬. ಶ್ಲೋ. ೬೨, ೯೮.) ಈ ಮಾತು ನಿರಾಭಾರಿ ವೀರಶೈವರಿಗಷ್ಟೆ ಹೊಂದುವದು ಎಂದು ಹಲವರ ಮತವಿರುವದು. (ಜ. ತೈ. ೭೩.) ಯಾಕಂದರೆ, ಲಿಂಗವೆ

ಪತಿ ಮತ್ತು ಭಕ್ತನೆ ಸತಿ, ಎಂದು ವೀರಶೈವರ ಭಾವನೆ ಇರತಕ್ಕದ್ದು. (ಸೂಕ್ಷ್ಮ. ಪ. ೭. ಶ್ಲೋ. ೬೧) ಕರಕಮಲವನ್ನು ಪೀಠವನ್ನಾಗಿ ಮಾಡಿ ಲಿಂಗವನ್ನು ನಿತ್ಯ ಪೂಜಿಸತಕ್ಕದ್ದು. ಅಹಿಂಸೆ, ಇಂದ್ರಿಯಜಯ, ಸರ್ವಭೂತದಯೆ, ಕ್ಷಮೆ, ದಯೆ, ಧ್ಯಾನ, ತಪ, ಜ್ಞಾನ, ಸತ್ಯ, ಈ ಎಂಟು ಹೂಗಳಿಂದ ಲಿಂಗದ ಮಾನಸಪೂಜೆ ಮಾಡಬೇಕೆಂದು ಒಂದೆಡೆಗೆ (ಸೂಕ್ಷ್ಮ. ಪ. ೬. ಶ್ಲೋ. ೩೧, ೩೨) ಹೇಳಲ್ಪಟ್ಟಿರುವದು. ಇದರಿಂದ ಆಗಮಕಾರರ ಉಚ್ಚ ನೈತಿಕ ಮತ್ತು ಆಧ್ಯಾತ್ಮಿಕ ಧ್ಯೇಯವು ನಿಚ್ಚಳವಾಗಿ ತೋರುವದು.

(೧೨) ಲಿಂಗವು ಪರಾತ್ಪರ ಶಿವನ ಪಾರ್ಥಿವ ಪ್ರತೀಕವಿದ್ದಂತೆ 'ನಮಃ ಶಿವಾಯ' ಅಥವಾ 'ಓಂ ನಮಃ ಶಿವಾಯ' ಎಂಬ ಮಂತ್ರವು ಅವನ ವರ್ಣ ಪ್ರತೀಕವಿರುವದು. ಲಿಂಗದಲ್ಲಿ ಮತ್ತು ಈ ಮಂತ್ರದಲ್ಲಿ ಭೇದವಿಲ್ಲ, ಲಿಂಗವು ಪಂಚಾಕ್ಷರಮಯವು, ಪಂಚಾಕ್ಷರವು ಲಿಂಗಮಯವು, ಎಂದು ಎರಡೂ ಪ್ರತೀಕಗಳ ಐಕ್ಯಭಾವವು ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. (ಪಾರ. ಪ. ಶ್ಲೋ ೧೨೧). ಲಿಂಗ, ಮಂತ್ರ, ಮತ್ತು ಸದಾಶಿವ ಇವು ಮೂರೂ ಯಥಾರ್ಥವಾಗಿ ಒಂದೇ ಇರುವವು (ಸೂಕ್ಷ್ಮ. ಪ. ೬. ಶ್ಲೋ. ೫೦, ೫೧). ಪ್ರಣವಸಹಿತ ಮತ್ತು ಪ್ರಣವರಹಿತ ಹೀಗೆ ಈ ಮಂತ್ರದ ಎರಡು ರೂಪಗಳಿರುವವು; ಸಹಿತವಿದ್ದಾಗ ಷಡಕ್ಷರಿ ಮತ್ತು ರಹಿತವಿದ್ದಾಗ ಪಂಚಾಕ್ಷರಿ, ಎಂದು ಈ ಮಂತ್ರಕ್ಕೆ ಅನ್ನುವರು. ಈ ಮಂತ್ರವು ವೇದಾಗಮಗಳಲ್ಲಿ ಹೇಳಲ್ಪಟ್ಟಿರುವದು ಹಾಗೂ ಸಮಸ್ತಫಲದಾಯಕವಿರುವದು. ಸ್ತ್ರೀಶೂದ್ರರಿಗೆ ಮಾತ್ರ ಪ್ರಣವರಹಿತ ಮಂತ್ರವನ್ನೆ ಉಪದೇಶಿಸಬೇಕು ಎಂದು ಹಲವೆಡೆಗೆ ನಿರ್ಬಂಧವು ಹಾಕಲ್ಪಟ್ಟಿರುವದು (ಸೂಕ್ಷ್ಮ. ಪ. ೩. ಶ್ಲೋ. ೧೫–೨೫). ನದಿಗಳಲ್ಲಿ ಗಂಗೆ, ಸ್ತ್ರೀಯರಲ್ಲಿ ಪಾರ್ವತಿ, ಕ್ಷೇತ್ರಗಳಲ್ಲಿ ಕಾಶಿ, ಇದ್ದಂತೆ ಮಂತ್ರಗಳಲ್ಲಿ ಈ ಪಂಚಾಕ್ಷರಿಯು ಎಲ್ಲಕ್ಕೂ ಶ್ರೇಷ್ಠವಿರುವದು. (ಪಾರ. ಪ. ೧. ಶ್ಲೋ. ೬೦,೬೧). ಈ ಮಂತ್ರವು ದೇವತಾರೂಪವಿರುವದು. ಎಲ್ಲ ಕ್ರಿಯೆಗಳನ್ನು ಮಂತ್ರಪೂರ್ವಕ ಮಾಡತಕ್ಕದ್ದು. ಮನಸ ಮತ್ತು ತ್ರಾಣ ಈ ಎರಡು ಧರ್ಮಗಳು ಅದರಲ್ಲಿರುವ ಮೂಲಕ ಆಯಾ ಶಬ್ದಕ್ಕೆ ಅಥವಾ ಶಬ್ದಸಮುಚ್ಚಯಕ್ಕೆ ಮಂತ್ರವೆಂಬ ಹೆಸರು ಉಂಟಾಗುವದು. ಮಂತ್ರ ಪ್ರಯೋಗದಿಂದ ಶಿವನು ಸ್ವತಃ ಸನ್ನಿಹಿತನಾಗುವನು. ಪವಿತ್ರ ಸ್ಥಾನದಲ್ಲಿ ಕುಳಿತು ಮಂತ್ರವನ್ನು ನಿರ್ಮಲ ಮತ್ತು ನಿಶ್ಚಲ ಮನಸಿನಿಂದ ಜಪಿಸಬೇಕು (ವಾತುಲ. ಪ. ೫. ಶ್ಲೋ. ೩–೪). ಮಂತ್ರಜಪವು ವಾಚಿಕ, ಉಪಾಂಶು, ಮತ್ತು ಮಾನಸ ಎಂದು ಮೂರು ಬಗೆಯಿರುವದು. ಮಾನಸಜಪವೆ

ಎಲ್ಲಕ್ಕೂ ಶ್ರೇಷ್ಠ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. (ಸೂಕ್ಷ್ಮ. ಪ ೩. ಶ್ಲೋ. ೫೩-೫೯). ಇನ್ನು ಶೈವಲಾಂಛನಗಳಾವು ನೋಡುವ. ಲಿಂಗ ದೊಡನೆಯೆ ವಿಭೂತಿ ಹಾಗೂ ರುದ್ರಾಕ್ಷಿ ಇವು ಶೈವಲಾಂಛನಗಳೆನಿಸುವವು. ಲಾಂಛನ ಅಂದರೆ ಬಾಹ್ಯಚಿನ್ಹ ಅಥವಾ ಕುರುಹು. ಲಿಂಗದೀಕ್ಷೆಯನ್ನು ಕೊಡುವ ಕಾಲಕ್ಕೆಯೆ ಗುರುವು ವಿಭೂತಿರುದ್ರಾಕ್ಷಿಗಳನ್ನು ಶಿಷ್ಯನಿಗೆ ಕೊಡಬೇಕು. (ಸೂಕ್ಷ್ಮ. ಪ. ೫. ಶ್ಲೋ. ೩೯). ಯಾವನ ಲಲಾಟದಲ್ಲಿ ಭಸ್ಮವೂ ಕಂಠದಲ್ಲಿ ಲಿಂಗವೂ ಮೈಮೇಲೆ ರುದ್ರಾಕ್ಷವೂ ಇರುವವೊ ಅವನು ನಾನೇ ಎಂದು ತಿಳಿ, ಎಂದು ಶಿವನು ಪಾರ್ವತಿಗೆ ಪಾರಮೇಶ್ವರಾಗಮದಲ್ಲಿ ಹೇಳಿರುವನು (ಪ. ೧. ಶ್ಲೋ. ೪೬ ಮತ್ತು ಪ. ೩ ಶ್ಲೋ. ೯೮).

(೧೩) ಮೇಲೆ ಹೇಳಿದ ಸಾಧನಮಾರ್ಗದಲ್ಲಿ ಆಯಾ ಸಾಧಕರ ವಿಶಿಷ್ಟ ಪ್ರಗತಿ ಮತ್ತು ಲಕ್ಷಣಗಳನ್ನು ನೋಡಿ ಆಗಮಕಾರರು ಮುಖ್ಯವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಮತ್ತು ಐಕ್ಯ ಎಂಬ ಆರುಸ್ಥಲಗಳನ್ನು ಕಲ್ಪಿಸಿರುವರು. ಇವು ಅಂಗಸ್ಥಳಗಳೆನಿಸುವವು. ಇದರಂತೆ, ಗುರುಲಿಂಗ, ಆಚಾರಲಿಂಗ, ಪ್ರಸಾದಲಿಂಗ, ಜಂಗಮಲಿಂಗ, ಶಿವಲಿಂಗ ಮತ್ತು ಮಹಾಲಿಂಗ ಎಂಬ ಆರು ಲಿಂಗಸ್ಥಳಗಳಿರುವವು. ಈ ಆರಾರು ಲಿಂಗಸ್ಥಳಗಳ ಮತ್ತು ಅಂಗಸ್ಥಳಗಳ ಲಕ್ಷಣಗಳು, ಹಾಗೂ ಅಂಗಸ್ಥಲದೊಳಗಿನ ಒಂದೊಂದು ಲಿಂಗಸ್ಥಲದೊಳಗಿನ ಒಂದೊಂದನ್ನು ಕ್ರಮವಾಗಿ ಕೂಡಿ ಒಟ್ಟು ೩೬ ಸ್ಥಳಗಳು ಹೇಗೆ ಆಗುವವು, ಈ ಎರಡು ಸಂಗತಿಗಳು ಸೂಕ್ಷ್ಮಾಗಮದ ಎಂಟನೆಯ ಪಟಲದಲ್ಲಿ ಹೇಳಲ್ಪಟ್ಟಿರುವವು. ಸೂಕ್ಷ್ಮಾಗಮದಲ್ಲಿ ಹೇಳಿದ ಭಕ್ತಾದಿ ಷಟ್‌ಸ್ಥಲಗಳ ಲಕ್ಷಣಗಳಲ್ಲಿಯೂ ಪಾರಮೇಶ್ವರಾಗಮದ ೬ನೆಯ ಪಟಲದ ಪ್ರಾರಂಭದಲ್ಲಿ ಹೇಳಿದ ಲಕ್ಷಣಗಳಲ್ಲಿಯೂ ಸ್ವಲ್ಪ ಭೇದವಿದೆ. ಈ ಪ್ರಕಾರ ಅಲ್ಲಲ್ಲಿದ್ದ ವರ್ಣನೆಗಳಲ್ಲಿ ತುಸು ಭೇದವಿದ್ದರೂ ಹಲವು ಸಾಮಾನ್ಯಲಕ್ಷಣಗಳನ್ನು ಬೆರಳಿಟ್ಟು ತೋರಿಸಲಿಕ್ಕೆ ಬರುವಂತಿವೆ. ಭೇದವು ಯಾವ ಪ್ರಕಾರದ್ದಿರುವದು ಇದು ಮುಂದಿನ ವಿವರದಿಂದ ತಿಳಿಯುವದು. ದೇಹಾದಿಗಳ ಅಭಿಮಾನಬಿಟ್ಟವನು ಭಕ್ತನು, ಅಮಲಚಿತ್ತವುಳ್ಳವನು ಮಹೇಶನು, ಶುದ್ಧಚಿತ್ತನಾದವನು ಪ್ರಸಾದಿಯಾಗಬಲ್ಲನು, ಜೀವಭ್ರಮವನ್ನು ಬಿಟ್ಟು ಲಿಂಗವೆ ಆತ್ಮವೆಂದು ತಿಳಿದವನು ಪ್ರಾಣಲಿಂಗಿಯು, ಶಿವನಿತ್ಯತ್ವವನ್ನರಿತು ನಿಶ್ಚಿಂತನಾಗಿ ಆನಂದವನ್ನನುಭವಿಸುತ್ತಿರುವವನು ಶರಣನು, ಮತ್ತು ಜೀವಶಿವರ ಐಕ್ಯವನ್ನನುಭವಿಸುವವನು ಐಕ್ಯನು, ಎಂದು ಸೂಕ್ಷ್ಮಾಗಮದಲ್ಲಿ ವರ್ಣನೆ ಇರುವದು.

ಅದೇ, ಪಾರಮೇಶ್ವರದಲ್ಲಿ, ಗುರುಲಿಂಗಜಂಗಮವನ್ನು ತಾರತಮ್ಯದಿಂದ ಪೂಜಿಸುವವನು ಭಕ್ತನು, ಗುರುಶಾಸನದಂತೆ ಲಿಂಗಜಂಗಮಪೂಜೆ ಮಾಡಿ ಸ್ವಮತಾಚಾರದಂತೆ ಆಚರಿಸುವವನು ಮಹೇಶನು, ಜಂಗಮಪೂಜೆಯನ್ನು ಮಾಡದೆ ಶಿವಾರ್ಪಣವನ್ನು ಮಾಡದೆ ಅನ್ನವನ್ನು ಗ್ರಹಿಸದಿರುವವನು ಪ್ರಸಾದಿಯು, ಪ್ರಾಣ, ಲಿಂಗ, ಶಿವ, ಇವು ಮೂರೂ ಒಂದು ಎಂಬ ಏಕಬುದ್ಧಿಯುಳ್ಳವನು ಪ್ರಾಣಲಿಂಗಿಯು, ಈಷಣತ್ರಯದಿಂದ ಮುಕ್ತನಿದ್ದು ಏಕಾಂತಸೇವಿಯಾಗಿ ಶಿವಧ್ಯಾನನಿರತನಿರುವವನು ಶರಣನು, ಮತ್ತು ಪೂಜಾಧ್ಯಾನಾದಿಗಳ ಅವಶ್ಯಕತೆ ಇಲ್ಲದೆ ಸೋಹಂಭಾವಪೂರ್ಣನಿರುವವನು ಐಕ್ಯನು, ಎಂದು ವರ್ಣನೆಯಿರುವದು. ಸಾಧಕನು ಮುಂದಿನ ಸ್ಥಲಕ್ಕೆ ಹೋದರೆ ಅವನಲ್ಲಿರುವ ಹಿಂದಿನ ಸ್ಥಲದ ಲಕ್ಷಣಗಳು ಮಾಯವಾಗುವದಿಲ್ಲ, ಅವನು ಆ ಆಚಾರಗಳನ್ನು ಬಿಡಲಿಕ್ಕೇಬೇಕೆಂಬ ನಿರ್ಬಂಧವೂ ಇಲ್ಲ. ಉದಾ: ಐಕ್ಯಸ್ಥಲವನ್ನು ಮುಟ್ಟಿದರೂ ಅವನು ಭಕ್ತಸ್ಥಲದಲ್ಲಿಯಂತೆ ಗುರುಲಿಂಗಜಂಗಮಪೂಜೆಯನ್ನು ಹಾಗೆಯೆ ನಡೆಯಿಸಬಹುದು. ಅವನು ಐಕ್ಯನ ಭಕ್ತಸ್ಥಲದಲ್ಲಿರುವನು, ಎಂದು ಹೇಳಬಹುದು. ಹೀಗಾಗುವದು ಶಕ್ಯವಿರುವದರಿಂದಲೆ ಆರಕ್ಕಿಂತ ಹೆಚ್ಚು ಸ್ಥಳಗಳನ್ನು ಕಲ್ಪಿಸುವದು ಸಾಧ್ಯವಾಗಿರುವದು. ಈ ಆಗಮಗಳಲ್ಲಿ ೩೬ಕ್ಕಿಂತ ಹೆಚ್ಚು ಸ್ಥಳಗಳನ್ನು ತೋರಿಸಲು ಪ್ರಯತ್ನವಾಗಿಲ್ಲ. ಆದರೆ ವಚನಶಾಸ್ತ್ರದಲ್ಲಿ ೧೦೧ ಎಂದೂ ೫೧೬ ಎಂದೂ ಹಲವೆಡೆಗೆ ಸ್ಥಲ ಸಂಖ್ಯೆಯ ಉಲ್ಲೇಖವಿರುವದು. ಅವೆಲ್ಲವುಗಳ ತಳಹದಿಯು ಇಲ್ಲಿಯೆ ಇರುವದು.

(೧೪) ವೈದಿಕ ಕರ್ಮಗಳನ್ನು ಮಾಡಲು ಅಧಿಕಾರವುಂಟಾಗಬೇಕಾದರೆ ಉಪನಯನವು ಹೇಗೆ ಅವಶ್ಯವೊ ಹಾಗೆ ತಂತ್ರಗಳಲ್ಲಿಯ ಪೂಜಾದಿ ಕ್ರಿಯೆಗಳನ್ನು ಮಾಡಬೇಕಾದರೆ ದೀಕ್ಷೆಯು ಅವಶ್ಯವು. ದೀಕ್ಷೆಯು ಅವಶ್ಯವಿದ್ದಬಳಿಕ ದೀಕ್ಷೆಕೊಡುವ ಗುರುವೂ ಅವಶ್ಯನು. ದೀಕ್ಷಾಕ್ರಿಯೆಯಲ್ಲಿ ಲಿಂಗವು ಕೊಡಲ್ಪಡುವುದರಿಂದ ಮತ್ತು ಆ ಮೂಲಕ ಕರ್ಮಸಂಚಯವು ನಾಶಮಾಡಲ್ಪಡುವುದರಿಂದ 'ದೀಕ್ಷೆ' ಎಂಬ ಶಬ್ದವು ಸಿದ್ಧವಾಗಿರುವದು (ದೀಯತೇ ಲಿಂಗಸಂಬಂಧಃ ಕ್ಷೀಯತೇ ಕರ್ಮಸಂಚಯಃ। ಸೂಕ್ಷ್ಮ. ಪ. ೮. ಶ್ಲೋ. ೮). ದೀಕ್ಷೆಯಾದಂದಿನಿಂದ ಪರಮಾರ್ಥಸಾಧನಕ್ಕೆ ಪ್ರಾರಂಭವಾಗುವದು. ವೀರಶೈವದೀಕ್ಷೆಯಲ್ಲಿ ಪರಮಾತ್ಮಪ್ರತೀಕವಾದ ಲಿಂಗಧಾರಣೆ ಮತ್ತು ಓಂ ನಮಃ ಶಿವಾಯ ಅಥವಾ ನಮಃ ಶಿವಾಯ ಎಂಬ ಮಂತ್ರದ ಉಪದೇಶ, ಇವು ಮುಖ್ಯವಿರುವವು. ಶಿವದೀಕ್ಷೆಯಿಲ್ಲದ

ಲಿಂಗಧಾರಣ ಮಾಡಕೂಡದು ಎಂದು ನಿರ್ಬಂಧವಿರುವದು. (ಪಾರ ಪ. ೧. ಶ್ಲೋ. ೭೪). ಹೋಮಹವನಾದಿಗಳನ್ನು ಮಾಡಿ ದೀಕ್ಷೆಕೊಡಬೇಕು, ಎಂದು ಆಗಮಗಳಲ್ಲಿ ದೀಕ್ಷಾವಿಧಿಯು ಸವಿಸ್ತಾರವಾಗಿ ಹೇಳಲ್ಪಟ್ಟಿರುವದು (ಪಾರ ಪ. ೩, ೪, ೫). ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಇವುಗಳಿಗೆ ಅನ್ವಯಿಸುವಂತೆ ಕ್ರಿಯಾ, ಮಾಂತ್ರೀ, ಮತ್ತು ವೇಧಾ ಎಂಬ ಮೂರು ದೀಕ್ಷೆಗಳಿರುವವು. ಸಾಧಕನ ಧರ್ಮಜೀವನದಲ್ಲಿ ದೀಕ್ಷೆ, ಶಿಕ್ಷೆ ಮತ್ತು ಅನುಭಾವ ಹೀಗೆ ಮೂರು ಮೆಟ್ಟುಗಳು ಇರುವವು. ಮೇಲೆ ಹೇಳಿದ್ದು ದೀಕ್ಷೆಯು, ಧರ್ಮಜ್ಞಾನವನ್ನೂ ಜೀವ ಶಿವ ಸಂಬಂಧದ ಜ್ಞಾನವನ್ನೂ ಪಡೆಯುವದು ಶಿಕ್ಷೆಯು, ಮತ್ತು ಮುಂದೆ ಸಾಧನದಿಂದಲೂ ಸ್ವಪ್ರಯತ್ನದಿಂದಲೂ ಆ ಜ್ಞಾನವನ್ನನುಭವಿಸುವದು ಅನುಭಾವವು (ಸೂಕ್ಷ್ಮ. ಪ. ೮. ಶ್ಲೋ. ೭–೧೦). ಇನ್ನು ಈ ದೀಕ್ಷೆ ಕೊಡುವವನು ಗುರು ಅಥವಾ ದೇಶಿಕ ಅಥವಾ ಉಪದೇಶಿಕ ಅಂದರೆ ಮಾರ್ಗವನ್ನು ತೋರುವವ, ಎಂದೆನಿಸುವನು. ಗುರುವು ಎಂಥವನಿರಬೇಕು, ಎಂಬುದು ಸೂಕ್ಷ್ಮಾಗಮದಲ್ಲಿ (ಪ. ೫) ಮತ್ತು ಪಾರಮೇಶ್ವರದಲ್ಲಿ (ಪ. ೨ ಶ್ಲೋ. ೬೩-೬೬)ಹೇಳಲ್ಪಟ್ಟಿರುವದು. ಸದ್ಗುರುವು ನಿರಹಂಕಾರಿಯು, ಸತ್ಯವಾದಿಯು ಶಾಂತನು, ದಾಂತನು, ನಿರ್ಮತ್ಸರನು, ಸ್ವದಾರಮಾತ್ರನಿರತನು, ಅಧೀತ ವೇದವೇದಾಂಗನು ಸಂಪ್ರದಾಯವಿಶೇಷಜ್ಞನು, ಇಂಗಿತಜ್ಞನು, ಆತ್ಮ ಜ್ಞನು, ಸದಾಚಾರ ಸಂಪನ್ನನು, ವಾಗ್ಮಿಯು, ಶಿವತತ್ವಾರ್ಥ ಬೋಧಕನು, ಗಂಭೀರನು, ಮತ್ತು ಕರುಣಾಳವು ಇರಬೇಕು, ಎಂದು ಸಂಕ್ಷೇಪದಿಂದ ಹೇಳಬಹುದು. ಅಂಥ ಗುರುವನ್ನು ಆಶ್ರಯಿಸಿ ಸಾಧಕನು ಮೋಕ್ಷಮಾರ್ಗವನ್ನು ಹಿಡಿಯಬೇಕು (ಸೂಕ್ಷ್ಮ. ಪ. ೫ ಶ್ಲೋ. ೨೨) ಶಿಷ್ಯನಾದರೂ ಸುವಿನೀತನೂ ಸುಶಾಂತಾತ್ಮನೂ ಇದ್ದು ಪುನಃ ಪುನಃ ಶಂಕೆಗಳನ್ನು ಕೇಳಿ ಸಮಾಧಾನ ಮಾಡಿಕೊಳ್ಳಬೇಕು (ಮತಂಗ ಪಾರಮೇಶ್ವರಾಗಮ). ದೀಕ್ಷೆ ಪಡೆದಬಳಿಕ ಗುರುವಿನ ಆಜ್ಞೆಯ ಪ್ರಕಾರ ಸಾಗಬೇಕು. ವೇದಶಾಸ್ತ್ರ, ಪುರಾಣ, ಸಂಹಿತೆ, ಸ್ಮೃತಿ, ಧರ್ಮಶಾಸ್ತ್ರ, ಇವೆಲ್ಲ ಗುರುವಚನಗಳಿರುವವು. 'ಗು'ಕಾರವೆಂದರೆ ಅಂಧಂತಮಸ್ಸು, ಅದನ್ನು 'ರು' ಕಾರವೆಂಬ ಭಾಸ್ಕರೋದಯವು ಹೊಡೆದೋಡಿಸುತ್ತಿರುವುದರಿಂದ 'ಗುರು'ವು ಮೋಕ್ಷದಾಯಕನೆನಿಸಿಸುವನು, ಎಂದು ಮುಂತಾಗಿ ಗುರುಮಹಾತ್ಮ್ಯವು ಹೊಗಳಲ್ಪಟ್ಟಿರುವದು (ಪಾರ, ಪ. ೧೪. ಶ್ಲೋ. ೯೨,೯೩). ನಾನೇ ಗುರುವಾಗಿ ಅನನ್ಯ ಶರಣಾಗತ ಭಕ್ತರನ್ನು ಉದ್ಧರಿಸುವೆನು, ಎಂದು ಶಿವನು ಸೂಕ್ಷ್ಮಾಗಮದಲ್ಲಿ

(ಪ. ೫. ಶ್ಲೋ. ೧೦) ಹೇಳಿರುವನು. ಆದುದರಿಂದ ಗುರುಸೇವೆ, ಗುರುಗಳ ಆಜ್ಞೆಯ ಪರಿಪಾಲನ, ಗುರುಪೂಜೆ, ಗುರುಧ್ಯಾನ ಇವು ಅವಶ್ಯವಾದ ಸಾಧನಗಳೆನಿಸುವವು. ಗುರುಕೃಪೆಯು ಪರಮಾತ್ಮನ ಕೃಪೆಯಷ್ಟೆ ಮಹತ್ವದ್ದೂ ಅವಶ್ಯವೂ ಇರುವದು.

(೧೫) ಸಾಧಕನಲ್ಲಿ ವಿಶಿಷ್ಟ ಜಾತಿ, ವರ್ಣ, ಲಿಂಗ, ವಯ ಇವುಗಳನ್ನು ನೋಡುವ ಕಾರಣವಿಲ್ಲ, ಅವನ ಗುಣ–ಕರ್ಮ ಉದ್ದೇಶಗಳು ಯೋಗ್ಯವಿದ್ದರಾಯಿತು, ಅವನಿಗೆ ಆಗಮ ಮಾರ್ಗವು ಮುಕ್ತದ್ವಾರವಿರುವದು. ಈ ಮಾತು ಆಗಮಗಳಲ್ಲಿ ಎಷ್ಟೋ ಕಡೆಗೆ ಸ್ಪಷ್ಟವಾಗಿ ಉಕ್ತವಾಗಿರುವದು. ಶಿವಜ್ಞಾನರಸದಿಂದ ಶೂದ್ರಾದಿಗಳು ಸಹ ಶಿವತ್ವವನ್ನು ಹೊಂದುವರು, ಯಾವನು ಶಾಂಭವೀ ದೀಕ್ಷೆಯನ್ನು ಹೊಂದಿರುವನೊ ಅವನ ಪೂರ್ವ ಜಾತ್ಯಾದಿಗಳನ್ನು ಲೆಕ್ಕಿಸಕೂಡದು, ಎಂದು ಸೂಕ್ಷ್ಮಾಗಮದ ಆಜ್ಞೆ ಇರುವದು. (ಪ. ೫. ಶ್ಲೋ. ೬೩, ೬೪) ವೀರಶೈವರು ಲಿಂಗಧಾರಣದ ಮೊದಲು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಅಥವಾ ಶೂದ್ರ ಎಂಬ ಮುಂತಾದ ಬೇರೆಬೇರೆ ಜಾತಿಯವರಿದ್ದರೂ ಅವರು ಸ್ತ್ರೀ, ಬಾಲ, ವೃದ್ಧ, ಹೆಳವ, ಕುರುಡ, ವೇಶ್ಯ, ಚಂಡಾಲ ಮುಂತಾದವರಿದ್ದರೂ ಒಮ್ಮೆ ಲಿಂಗಧಾರಣ ಮಾಡಿದಮೇಲೆ ಅವರೆಲ್ಲರೂ ನನ್ನ ರೂಪವುಳ್ಳವರೇ, ಎಂದು ಪಾರಮೇಶ್ವರದಲ್ಲಿ (ಪ. ೧ ಶ್ಲೋ. ೫೬–೫೯) ಶಿವವಚನವಿರುವದು. ಈ ವೀರಶೈವಮತವು ಸರ್ವಾತೀತವಿರುವದು, ಇದರಲ್ಲಿ ಸ್ತ್ರೀ ಪುರುಷ ಭೇದವಾಗಲಿ ಜಾತಿ ವರ್ಣ ಆಶ್ರಮಗಳ ಭೇದವಾಗಲಿ ಎಣಿಸಲ್ಪಡುವುದಿಲ್ಲ. (ಪಾರ. ಪ. ೫. ಶ್ಲೋ. ೪೧). ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮತ್ತು ಮಂತ್ರ ಈ ಅಷ್ಟಾವರಣಗಳಿಂದ ಕೂಡಿದ ಶಿವಯೋಗಿಗಳೆಲ್ಲ ವೀರಮಾಹೇಶ್ವರರು, ಇವರಲ್ಲಿ ಜಾತಿಭೇದ, ಲಿಂಗಭೇದ ಇವುಗಳನ್ನು ಎಣಿಸಕೂಡದು (ಪಾರ. ಪ. ೭ ಶ್ಲೋ. ೫೩–೫೫). ಇಷ್ಟೇ ಅಲ್ಲ, ಲಿಂಗಧಾರಣ ಮಾಡುವುದರಿಂದ ಶಿವಭಕ್ತರಿಗೆ ಅಪ್ರಾಕೃತತ್ವವು ಉಂಟಾಗಿ ದೃಷ್ಟಿದೋಷ ಸ್ಪರ್ಶದೋಷಾದಿಗಳು ನಷ್ಟವಾಗಿ ಹೋಗುವವು. ಅಂಥವರು ಉಂಡು ಬಿಟ್ಟದ್ದು ಉಚ್ಛಿಷ್ಟವಲ್ಲ. ಅವರು ಉಂಡ ಪಾತ್ರೆಯನ್ನು ಕೂಡ ತೊಳೆಯ ಕೂಡದು, ಎಂಬ ಮಾತುಗಳು ಹೇಳಲ್ಪಟ್ಟಿವೆ. (ಪಾರ. ಪ. ೩ ಶ್ಲೋ. ೮೮ ಮತ್ತು ಪ. ೭. ಶ್ಲೋ. ೫೬–೫೭) ಜನ್ಮಮರಣಾದಿಗಳ ಅಶೌಚವು ಕೂಡ ಲಿಂಗಧಾರಿಗಳಿಗೆ ತಗಲುವದಿಲ್ಲ, ಎಂದು ಅದೇ ಆಗಮದ ಪ್ರಥಮ ಪಟಲದಲ್ಲಿ (ಶ್ಲೋ.

೫೪, ೫೫) ಉಲ್ಲೇಖವಿರುವದು. ಲಿಂಗಾಂಗಸಂಗದಲ್ಲಿ ವಾರ್ತೆ, ನಕ್ಷತ್ರ, ಯೋಗ, ಕರಣ, ಸಾಮುದ್ರಿಕ, ಇತ್ಯಾದಿಗಳನ್ನು ಮನ್ನಿಸಕೂಡದು, ಎಲ್ಲವೂ ಶಿವಮಯವೆಂದು ಭಾವಿಸುವುದೆ ಅವರಿಗೆ ಮೋಕ್ಷಸಾಧನವು (ಸೂಕ್ಷ್ಮತ. ಪ. ೭. ಶ್ಲೋ. ೯೯, ೧೦೦). ಆದರೆ ಇನ್ನೊಂದು ಕಡೆಗೆ (ಪಾರ ಪ ೨. ಶ್ಲೋ. ೮೬–೯೨) ಶುಭಮುಹೂರ್ತವನ್ನು ನೋಡಿ ದೀಕ್ಷಾದಿಗ ಳನ್ನು ಕೊಡಬೇಕು ಎಂದೂ ಇರುವದು. ಇವೆರಡರ ಸಮನ್ವಯ ಮಾಡ ಬೇಕಾದರೆ ವಾರ ನಕ್ಷತ್ರ, ಶುಭಾಶುಭ ಕಲ್ಪನೆ ಇವು ಮೊದಲು ಇದ್ದರೂ ಅವುಗಳನ್ನು ಮುಂದೆ ಬಿಟ್ಟುಬಿಡಬೇಕು ಹೀಗೆ ಆಗಮಕಾರರ ಅಭಿಪ್ರಾಯ ವಿರುವದೆಂದು ತಿಳಿಯಬಹುದು. ಶಿವಾಶ್ರಮವಾಸಿಗಳ ಅಂದರೆ ವೀರಶೈವ ನಿತ್ಯನೈಮಿತ್ತಿಕ ಕರ್ಮಗಳೇನು ಎಂಬುದನ್ನು ಪಾರಮೇಶ್ವರ ತಂತ್ರವು ಎಳನೆಯ ಪಟಲದಲ್ಲಿ (ಶ್ಲೋ. ೩೬–೮೫) ಹೇಳಿರುವದು.

ಈ ಪ್ರಕಾರ ಆಗಮಗಳಲ್ಲಿ ಹೇಳಿದ ಷಟ್‌ಸ್ಥಲಶಾಸ್ತ್ರದ ಮತ್ತು ವೀರಶೈವ ಸಾಂಪ್ರದಾಯದ ಸ್ಥೂಲಸ್ವರೂಪವಿರುವದು.

೧೬೦. ಇನ್ನು ವಚನಶಾಸ್ತ್ರದಲ್ಲಿಯ ಷಟ್‌ಸ್ಥಲವಿಚಾರ, ಮುಂತಾ ದವುಗಳ ವಿವೇಚನೆ ಮಾಡಲಿಕ್ಕೆ ಒಹಳ ಅನುಕೂಲವಾಗುವದು; ಯಾಕು ದರೆ, ಆಗಮಗಳನ್ನನುಸರಿಸಿ, ಅವುಗಳ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ವಚನ ಕಾರರು ನಡೆದಿರುವರು. ವಚನಗಳಲ್ಲಿಯ ಷಟ್‌ಸ್ಥಲಶಾಸ್ತ್ರವನ್ನೂ ವೀರ ಶೈವ ಸಂಪ್ರದಾಯವನ್ನೂ ವಿಚಾರಿಸುವಾಗ, ಅವುಗಳಲ್ಲಿಯ ತತ್ವಜ್ಞಾನ, ತದನುರೋಧದಿಂದ ನಿಶ್ಚಯಿಸಲ್ಪಟ್ಟ ಧ್ಯೇಯ, ಅದನ್ನು ಪ್ರಾಪ್ತಮಾಡಿ ಕೊಳ್ಳುವ ಮಾರ್ಗ ಮತ್ತು ವೀರಶೈವಾಚಾರ ಈ ಪ್ರಕಾರ ಕ್ರಮದಿಂದ ಹೋಗುವದು ವಿಹಿತವಾಗುವದು. ಇವುಗಳಲ್ಲಿ ಯಾವ ವಿಷಯಗಳು ಅಥವಾ ವಿಷಯಾಂಗಗಳು ಈ ಗ್ರಂಥದಲ್ಲಿ ಈ ಮೊದಲೆ ಬೇರೆ ಕಡೆಗೆ ಸಾಕಷ್ಟು ಸ್ಪಷ್ಟವಾಗಿ ಮತ್ತು ವಿವರವಾಗಿ ಬಂದಿರುವವೊ ಅವುಗಳ ಪುನರ್ವಿಚಾರವನ್ನು ಪುನಃ ಮಾಡುತ್ತ ಕೂಡದೆ ವಿಶೇಷವಾಗಿ ಸಾಂಪ್ರ ದಾಯಿಕವಾದ ವಿಷಯಗಳನ್ನೆ ಇಲ್ಲಿ ವಿಚಾರಿಸುವದು ಯೋಗ್ಯವಾಗುವದು. ವಚನಕಾರರು ಆಗಮಕಾರರಂತೆ ಸಾಧನಶಾಸ್ತ್ರದ ಕಡೆಗೆಯೆ ಹೆಚ್ಚು ಲಕ್ಷಗೊಟ್ಟದ್ದರಿಂದ ತತ್ವಜ್ಞಾನದ ವಿವರದಲ್ಲಿ ಅಥವಾ ವಿವೇಚನೆಯಲ್ಲಿ ಅವರು ವಿಶೇಷ ಮನಸುಹಾಕಿಲ್ಲ. ತತ್ವಜ್ಞಾನದ ಮುಖ್ಯ ಸಿದ್ಧಾಂತಗ ಳನ್ನಷ್ಟು ಹೇಳಿ ಅವರು ವಿರಮಿಸಿರುವರು. ತತ್ವಜ್ಞಾನವೆಂದರೆ, ಜೀವ, ಜಗತ್ತು, ಈಶ್ವರ, ಈ ಮೂವರ ಮೂಲ ಸ್ವರೂಪ ಮತ್ತು ಸಂಬಂಧ ಇವ

ಗಳ ಬೌದ್ಧಿಕ ವಿಚಾರವು. 'ನಾನು,' ನನಗೆ ಗೋಚರವಾಗುವ 'ಇದು' ಅಥವಾ 'ನಾನಲ್ಲದ್ದು' ಇವುಗಳ ಮೂಲವೇನು, ಸ್ವರೂಪವೇನು, ಪರಸ್ಪರ ಸಂಬಂಧವೇನು, ಇವುಗಳಾಚೆಗೆ ಮೂರನೆಯ ತತ್ವವೇನಾದರೂ ಇರುವದೊ ಹೇಗೆ, ಈ 'ನನ್ನ' ಅನುಭವವು ಸತ್ಯವೊ ಮಿಥ್ಯೆಯೊ, ಈ ಮುಂತಾದವು ಗಳೆಲ್ಲ ತತ್ವಜ್ಞಾನದ ಪ್ರಶ್ನೆಗಳೆನಿಸುವವು. ಇವುಗಳನ್ನು ಬಿಡಿಸಿ, ಶಾಶ್ವತ ಸತ್ಯವೇನು ಎಂಬುದನ್ನು ನಿಶ್ಚಯಿಸಿ, ಜೀವನ ಹೃದಯಾಂತರದಲ್ಲಿಯ ಆಕಾಂಕ್ಷೆಗಳ ಮೂಲಸ್ವರೂಪವನ್ನು ಗೊತ್ತುಹಚ್ಚಿ, ತತ್ವಜ್ಞಾನ ಮತ್ತು ಜೀವನ ಆಕಾಂಕ್ಷೆ ಇವುಗಳ ಅನುರೋಧದಿಂದ ಜೀವನ ಮುಖ್ಯ ಧ್ಯೇಯವನ್ನು ನಿರ್ಧರಿಸಬೇಕಾಗುತ್ತಿದೆ. ಬಳಿಕ ಆ ಧ್ಯೇಯವನ್ನು ಪ್ರಾಪ್ತಮಾಡಿ ಕೊಳ್ಳುವ ಮಾರ್ಗಗಳನ್ನು ಹುಡುಕಿ ಅವುಗಳಂತೆ ಆಚರಿಸುವ ಉಪಕ್ರಮವನ್ನು ಮಾಡಬೇಕಾಗುತ್ತಿದೆ. ಆದುದರಿಂದ ಮೊದಲು ವಚನಕಾರರು ಅವಲಂಬಿಸಿದ ತತ್ವಜ್ಞಾನದ ವಿವೇಚನೆಯನ್ನು ಸ್ವಲ್ಪ ಮಾಡುವ. ಹೀಗೆ ಮಾಡುವಾಗ, ಶೈವಾಗಮಗಳಲ್ಲಿ ಅಥವಾ ವಚನಶಾಸ್ತ್ರದಲ್ಲಿ ಉಪಯೋಗಿ ಸಲ್ಪಟ್ಟ ಪರಿಭಾಷೆಯನ್ನು ಇಲ್ಲಿ ಹೆಚ್ಚಾಗಿ ಉಪಯೋಗಿಸುವೆವು ಮತ್ತು ಅವಶ್ಯ ಕಂಡಲ್ಲಿ ವೇದಾಂತ ಮತ್ತು ಸಾಂಖ್ಯಶಾಸ್ತ್ರಗಳಲ್ಲಿ ಬರುವ ಸಮಾನ ತರ ಶಬ್ದಗಳನ್ನು ನಿರ್ದೇಶಿಸುವೆವು. ಅಂದರೆ ಎಲ್ಲರಿಗೂ ತಿಳಿದುಕೊಳ್ಳಲಿಕ್ಕೆ ನೆಟ್ಟಗಾಗುವದು.

೧೬೧. ತತ್ವಜ್ಞಾನವನ್ನು ಎರಡು ಬಗೆಯಿಂದ ವಿವರಿಸಬಹುದು. 'ನಾನು' ಎಂಬ ಅನುಭವದ ಮಧ್ಯಬಿಂದುವಿನಿಂದ ಹೊರಟು ಪರಾತ್ಪರ ತತ್ವದವರೆಗೆ ಹೋಗಬಹುದು. ಇಲ್ಲವೆ ಪರಾತ್ಪರ ತತ್ವದ ಸ್ವರೂಪವನ್ನು ಮೊದಲು ಹೇಳಿ ಅಲ್ಲಿಂದ 'ನಾನು' ಎಂಬ ಅನುಭವದ ವರೆಗೆ ಬಂದು ಅದರ ಸ್ವರೂಪವನ್ನು ನಿರ್ಣಯಿಸಬಹುದು. ನಾವು ಇಲ್ಲಿ ಎರಡನೆಯ ಬಗೆಯನ್ನೆ ಅನುಸರಿಸುವೆವು. ಹಾಗೆ ಮಾಡುವದಕ್ಕೂ ಮೊದಲು ಇನ್ನೊಂದು ಮಹತ್ವದ ಮಾತನ್ನು ಇಲ್ಲಿ ಹೇಳುವದು ಅವಶ್ಯವಿರುವದು. ಅದೇನಂದರೆ, ಭಾರತದೇಶದಲ್ಲಿ ತರ್ಕವು ತತ್ವಜ್ಞಾನದ ತಳಹದಿಯೆಂದು ಯಾವಾಗ್ಯೂ ತಿಳಿಯಲ್ಪಟ್ಟಿಲ್ಲ. ಅನುಭವವೆ ಅದರ ತಳಹದಿಯೆಂದು ಮೊದಲಿನಿಂದಲೂ ನಮ್ಮಲ್ಲಿ ಸಿದ್ಧಾಂತವಿರುವದು. ಅಂಥ ಅನುಭವವು ಶ್ರುತಿಗಳಲ್ಲಿ ಉಕ್ತವಾಗಿರುವುದರಿಂದಲೆ ಶ್ರುತಿಗಳಿಗೆ ಪ್ರಾಮಾಣ್ಯವು ಉಂಟಾಗಿರುವದು. ಮುಂದೆ ಆಗಮಾದಿಗಳಿಗಾದರೂ ಆ ಮೂಲಕವೆ ಮಹತ್ವವು ಬಂದಿರುವದು. ಅನುಭೂತಿಯನ್ನು ಇತರರಿಗೆ ತಿಳಿಸಿಕೊಡುವದಕ್ಕಾಗಿ, ಅವರನ್ನು ನಮ

ಗಾಣಿಸುವುದಕ್ಕಾಗಿ ತರ್ಕದ ಉಪಯೋಗವಾಗುವದು. ಆದರೆ ಮನ ಗಂಡಾಕ್ಷಣಕ್ಕೆ ಅವರು ಪೂರ್ಣ ಜ್ಞಾನಿಗಳಾಗಲಿಲ್ಲ. ಅದು ಕೇವಲ ಬೌದ್ಧಿಕ ಜ್ಞಾನವಾಯಿತು. ಅವರೂ ಅನುಭವಪಡೆದಾಗಲೆ ನಿಜವಾದ ಜ್ಞಾನಿಗಳೆನಿಸುವರು. ಸರ್ವಾಲಂಬವಿನಿರ್ಮುಕ್ತವಾದಾಗ ಚಿತ್ತಕ್ಕೆ ಯಾವ ನಿಷ್ಕಲಜ್ಞಾನದ ಅನುಭವವಾಗಬಹುದೊ ಅದೇ ಪರಮ ಸತ್ಯವು, ಜೀವನು ಅನುಭವಿಸಬಹುದಾದ ಅತ್ಯಂತಿಕ ತತ್ವವು. ಆ ಸ್ಥಿತಿಯಲ್ಲಿ ಒಳಹೊರಗೆಂಬುದು, ಮೇಲೆ ಕೆಳಗೆಂಬುದು, ಶೀತೋಷ್ಣ ಸುಖದುಃಖವೆಂಬುದು, ಒಟ್ಟಿಗೆ ಯಾವ ದ್ವಂದ್ವವೂ ಇರಲರಿಯದು. ಸರ್ವಾಕಾರ ನಿರಾಕಾರವೆನಿಸಿ, ಸ್ವಸಂವೇದ್ಯವಾಗಿ ಚಿತ್ತವು ಅಲ್ಲಿ ವಿರಾಜಿಸುವದು. (ದೇವೀ ಕಾಲೋತ್ತರದಲ್ಲಿಯ ಜ್ಞಾನಾಚಾರಪಟಲ. ಶ್ಲೋ. ೧೪–೫೫). ಇದೇ ಶೂನ್ಯಸಂಪಾದನೆಯು; ಯಾಕಂದರೆ, ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ನಮಗೆ ಗೋಚರವಾಗುವುದೆಲ್ಲ ಆ ಸ್ಥಿತಿಯಲ್ಲಿ ಶೂನ್ಯವಾಗಿರುವದು. ವೇದಾಂತಿಗಳು ಹೇಳುವ ತುರೀಯವೆಂಬ ಚತುರ್ಥ ಅವಸ್ಥೆಯು ಇದೇ. ಇದಕ್ಕೆಯೆ ಯೋಗಿಗಳು ನಿರ್ವಿಕಲ್ಪಸಮಾಧಿ ಇಲ್ಲವೆ ಅಸಂಪ್ರಜ್ಞಾತ ಸಮಾಧಿ ಎನ್ನುವರು. ಆ ಅನುಭವವು ಅವರ್ಣನೀಯವೂ ವಾಙ್ಮನಕ್ಕ ಗೋಚರವೂ ಇರುವದು. ಆ ಸ್ಥಿತಿಯಲ್ಲಿ ಪರಮೈಕ್ಯದ ಒಂದೇ ಒಂದು ಅನುಭವವಾಗುವುದರಿಂದ, ಜ್ಞಾತೃ, ಜ್ಞೇಯ, ಜ್ಞಾನ ಈ ತ್ರಿಪುಟಿಯ ಐಕ್ಯವಾಗಿರುವುದರಿಂದ ಅಲ್ಲಿ ವರ್ಣನಾದಿಗಳು ಅಸಂಭವನೀಯ. ಈ ಅನುಭವವು ಒಂದೇ ಒಂದು ಇದ್ದರೂ ಇದರ ವರ್ಣನೆ ಮಾಡುವಾಗ ಆಯಾ ಅನುಭವಿಕರ ಭಾಷೆಯಲ್ಲಿ, ಮತ್ತು ಅವರು ತಮ್ಮ ಅನುಭವಕ್ಕೆ ಹಚ್ಚುವ ಅರ್ಥದಲ್ಲಿ ಭೇದಗಳಾಗುವವು. ಸಕ್ಕರೆಯ ಸವಿಯು ಒಂದೇ ಇದ್ದರೂ ಅದರ ವರ್ಣನೆಯನ್ನು ಬೇರೆ ಬೇರೆಯವರು ತಮ್ಮ ತಮ್ಮ ಬುದ್ಧಿಯ ಪ್ರಕಾರ ಮತ್ತು ಶಬ್ದಭಾಂಡಾರದ ಮೇಲೆ ಇರುವ ತಮ್ಮ ಪ್ರಭುತ್ವದ ಪ್ರಕಾರ ಬೇರೆ ಬೇರೆ ರೀತಿಯಿಂದ ಮಾಡಬಹುದು. ಭಿನ್ನಭಿನ್ನ ತತ್ವಜ್ಞಾನಿಗಳು ಇದೇರೀತಿ ಅಸ್ತಿತ್ವದಲ್ಲಿ ಬರುವವು, ಆದರೆ ಬುದ್ಧಿಗೆ ಭಿನ್ನವಾಗಿ ಗೋಚರವಾಗುವ ಈ ಎಲ್ಲ ತತ್ವಜ್ಞಾನಿಗಳ ಆಧ್ಯಾತ್ಮಿಕ ಅನುಭವದ ಸಮಭೂಮಿಕೆಯ ಮೇಲೆ ಸಮವಾಗಿಯೆ ಇರುವವು. ಇಲ್ಲಿ ವಚನ ಶಾಸ್ತ್ರದ ತತ್ವಜ್ಞಾನವಷ್ಟೆ ಪ್ರಸ್ತುತವಾಗಿರುವುದರಿಂದ ಅದು ಯಾವ ಒಗೆಯದ್ದಿರುವದು ಇದನ್ನು ನೋಡುವದು ನಮ್ಮ ಕರ್ತವ್ಯವಾಗಿದೆ.

೧೪೨. ಈ ತತ್ವಜ್ಞಾನಕ್ಕೆ ಶಿವಾದ್ವೈತ, ವಿಶೇಷಾದ್ವೈತ, ಶೈವ

ಸಿದ್ಧಾಂತ, ಶಕ್ತಿವಿಶಿಷ್ಟಾದ್ವೈತ ಎಂಬ ಮುಂತಾದ ಹೆಸರುಗಳಿರುವವು. ಈ ಅದ್ವೈತದಲ್ಲಿ ಶಿವನೇ ಆತ್ಯಂತಿಕ ತತ್ವವಿರುವುದರಿಂದ ಶಿವಾದ್ವೈತವೆಂಬ, ಸಮರಸವೆಂಬ ವಿಶೇಷತರದ ಅದ್ವೈತವಿರುವುದರಿಂದ ವಿಶೇಷಾದ್ವೈತವೆಂಬ, ಶಿವದೈವತವೆ ಮುಖ್ಯವೆಂದು ಇದರಲ್ಲಿ ಸಿದ್ಧಾಂತವು ಮಾಡಲ್ಪಟ್ಟಿರುವುದರಿಂದ ಶೈವಸಿದ್ಧಾಂತವೆಂಬ, ಶಕ್ತಿಯಿಂದ ವಿಶಿಷ್ಟವಾದ ಅದ್ವೈತವಿರುವುದರಿಂದ ಶಕ್ತಿವಿಶಿಷ್ಟಾದ್ವೈತವೆಂಬ ಹೆಸರುಗಳು ರೂಢವಾಗಿರುವವು. ಹೆಸರು ಏನೇ ಇದ್ದರೂ ಈ ತತ್ವಜ್ಞಾನವು ಮೂಲತಃ ಅದ್ವೈತವೆ ಸೈ. ಯಾಕಂದರೆ, ಇದರಲ್ಲಿ ತ್ರಿಕಾಲಾಬಾಧಿತ ಸತ್ಯ ತತ್ವವೆಂಬುದು ಒಂದೇ ಒಂದು, ಅದ್ವೈತವು ಇರುವದು. ಆ ತತ್ವಕ್ಕೆ ಪರಶಿವ, ಪರಾಸಂವಿತ್, ಅಥವಾ ಪರಾಹಂತಾ, ಎಂಬ ಹೆಸರು. ಅದು ವೀರಾಗಮದಲ್ಲಿ ಕೆಳಗಿನಂತೆ ವರ್ಣಿಸಲ್ಪಟ್ಟಿದೆ. 'ಆದ್ಯಂತ ಶೂನ್ಯಮಮಲಂ ಪರಿಪೂರ್ಣಮೇಕಂ। ಸೂಕ್ಷ್ಮಂ, ಪರಾತ್ಪರಮನಾಮಯ ಮಪ್ರಮೇಯಂ । ಭಾವೈಕಗಮ್ಯಮಜಡಂ ಶಿವತತ್ವಮಾಹುಃ'। ಅದಕ್ಕೆಯೆ ವೇದಾಂತಿಗಳು ಪರಮಾತ್ಮ, ಪರಬ್ರಹ್ಮ, ಇಲ್ಲವೆ ಪುರುಷೋತ್ತಮ ಎಂದೆನ್ನುವರು. ಆ ಸರ್ವಾತೀತ, ಪರಾತ್ಪರ, ಅದ್ವಯತತ್ವದ ವರ್ಣನೆಯು ವಚನ ಶಾಸ್ತ್ರದ (ಭಾಗ ೧) ಪ್ರಾರಂಭದಲ್ಲಿ (ಪು. ೧–೨೬) ವಿಧವಿಧವಾಗಿ ಮಾಡಲ್ಪಟ್ಟಿದೆ. ಅದು ನಿಜವಾಗಿ ಸಗುಣವೂ ಇಲ್ಲ ನಿರ್ಗುಣವೂ ಇಲ್ಲ, ಸಕಲವೂ ಇಲ್ಲ ನಿಷ್ಕಲವೂ ಇಲ್ಲ, ಸಾಕಾರವೂ ಇಲ್ಲ ನಿರಾಕಾರವೂ ಇಲ್ಲ. ಯಾಕಂದರೆ, ಸಗುಣ ನಿರ್ಗುಣ ಮುಂತಾದ ದ್ವಂದ್ವ ಸೂಚಕ ಶಬ್ದಗಳು ಸಾಪೇಕ್ಷ ಸೃಷ್ಟಿಯೊಳಗಿನವಿರುವವು. ಆ ವಸ್ತುವು ನಿರಪೇಕ್ಷವೂ ಏಕರಸವೂ ಸರ್ವ ಸಮವೂ ಇರುವದು. 'ಗುಣ' ಎಂಬುದರ ಕಲ್ಪನೆಯೆ ಇಲ್ಲದಲ್ಲಿ ಸಗುಣ ನಿರ್ಗುಣ ಎಂಬ ಶಬ್ದಗಳಿಗೆ ಎಡೆ ಎಲ್ಲಿಯದು? ಪರಶಿವನು ಕೇವಲ ನಿರಪೇಕ್ಷನು, ಅತೀತನು, ಅವೇದ್ಯನು. ಆದರೂ ಆ ವಸ್ತುವನ್ನು ಕುರಿತು ಮಾತಾಡಲೇಬೇಕಾಗುತ್ತಿರುವುದರಿಂದ ಮೇಲೆ ಹೇಳಿದಂತೆ ವಚನಶಾಸ್ತ್ರದಲ್ಲಿ, ಅದು ನಿರಾಲಂಬವು, ನಿರವಯವು, ಹರಿಬ್ರಹ್ಮರಿಗೆ ಸಹ ಅಗೋಚರವು, ನಿರ್ಲೇಪವು, ನಿರಂಜನವು, ಆದಿಅನಾದಿಗಳಾಚೆಗಿನದು, ಶೂನ್ಯನಿಶ್ಶೂನ್ಯಗಳನ್ನು ದಾಟಿದ್ದು, ಅಜ್ಞೇಯವು, ಘನಕ್ಕೆ ಘನವು, ನಾದಬಿಂದುಕಳಾತೀತವು, ವಿಶ್ವಾತೀತವು, ವಿಶ್ವತೋಮುಖವು, ಅಣುವಿಗಿಂತ ಅಣುವು ಮಹತ್ತಿಗಿಂತ ಮಹತ್ತು, ಜೈತನ್ಯಮಯವು, ಏಕವು, ಅದ್ವಯವು, ಇತ್ಯಾದಿ, ಇತ್ಯಾದಿ, ಎಂದು ವರ್ಣಿಸಲ್ಪಟ್ಟಿರುವದು. ಎಷ್ಟು ಹೇಳಿದರೂ ಎಲ್ಲ ಶಬ್ದಭಾಂಡಾರವನ್ನು ಸೂರೆಮಾಡಿದರೂ ಪರಶಿವನನ್ನು ಯಥಾರ್ಥವಾಗಿ ಬಣ್ಣಿಸಲಳವಲ್ಲ!

೧೮೩. ಇನ್ನು ಈ ಅದ್ವಯ, ಅತೀತ, ನಿರ್ದ್ವಂದ್ವ, ಏಕ, ನಿಷ್ಕಲ ವಸ್ತುವೆ ಆತ್ಯಂತಿಕ ಸತ್ಯವಿದ್ದರೆ ಈ ವಿಶ್ವದಲ್ಲಿಯ ಅನೇಕತ್ವವು, ವಿವಿಧತೆಯು, ಸಕಲತ್ವವು ಎಲ್ಲಿಂದ ಬಂದಿತು ಅಥವಾ ಇದೇ ಮಾತನ್ನು ಇನ್ನೊಂದು ಬಗೆಯಿಂದ ಕೇಳುವುದಾದರೆ, ಏಕರಸ ಶಿವನಿಂದ ವಿವಿಧರಸವುಳ್ಳ ಈ ವಿಶ್ವವು ಹೇಗೆ ಮತ್ತು ಯಾಕೆ ನಿರ್ಮಾಣವಾಯಿತು, ಎಂಬುದು ಮುಂದಿನ ಪ್ರಶ್ನೆಯು. ಸ್ವಲೀಲೆಯಿಂದಲೆ ಪರಶಿವನು ೩೬ ತತ್ವಗಳನ್ನು ಉತ್ಪನ್ನಮಾಡಿ ಈ ವಿಶ್ವವನ್ನು ನಿರ್ಮಿಸಿದನು ಎಂದು ವಚನಗಳಲ್ಲಿಯ ಶೈವ ಸಿದ್ಧಾಂತವು ಉತ್ತರ ಕೊಡುವದು.(೧೩,೨೯,೩೧). ಅನಾದೌ ಸತಿ ಸಂಸಾರೇ ಕಾರಣಂ ಪರಮೇಶ್ವರಃ, ಸಂಸಾರವು ಅನಾದಿಯಿದ್ದರೂ ಪರಮೇಶ್ವರನು ಅದರ ಕಾರಣನಿರುವನು, ಎಂದು ಪುಷ್ಕರಾಗಮವು ಹೇಳುವದು. ಶಿವೇಚ್ಛಾಯೋಗಮಾಯೆ, ಇವೇ ವಿಶ್ವದ ಕಾರಣವೆಂದು ಆ ಆಗಮದ ಅಭಿಪ್ರಾಯವಿರುವದು. ಆದರೆ ಇದು ಸಮಾಧಾನಕಾರಕ ಉತ್ತರವೆನಿಸುವದಿಲ್ಲ. ಅದಕ್ಕೆ ಉಪಾಯವಿಲ್ಲ. ಯಾಕಂದರೆ, ಪ್ರತಿಯೊಂದು ತತ್ವಜ್ಞಾನದಲ್ಲಿ ಇಂಥ ಅಸಮಾಧಾನಕಾರಕ ಸಂಗತಿಗಳು ಇದ್ದೇ ಇರುವವು. ಈ ಮೂವತ್ತಾರು ತತ್ವಗಳ ಉತ್ಕ್ರಾಂತಿಯು ಹೇಗೆ ಆಯಿತು, ಇದನ್ನು ನೋಡುವದು ಅವಶ್ಯವಿರುವದು. ಮೊಟ್ಟಮೊದಲು ಪರಶಿವನಲ್ಲಿ ಶಿವ ಮತ್ತು ಶಕ್ತಿ ಎಂಬ ಎರಡು ತತ್ವಗಳು ದೃಗ್ಗೋಚರವಾಗುವವು. ಇವುಗಳಲ್ಲಿ ಎರಡೂ ಚೈತನ್ಯಮಯವಿದ್ದರೂ ಶಿವತತ್ವವು ಪ್ರಕಾಶಾತ್ಮಕವೂ ಶಕ್ತಿತತ್ವವು ವಿಮರ್ಶಾತ್ಮಕವೂ ಇರುವದು. ಶಕ್ತಿತತ್ವವೆ ಈ ಸೃಷ್ಟಿಯ ಆದಿಕಾರಣವು. ಮುಂದೆ ಸಾದಾಖ್ಯ ತತ್ವವು ತೋರುವದು. 'ಸತ್ ಆಖ್ಯಾ ಯತಃ' ಅಂದರೆ ಯಾವುದರಿಂದ ಅಸ್ತಿತ್ವದ ಕಲ್ಪನೆಗೆ ಪ್ರಾರಂಭವಾಗುವುದೊ ಅದು, ಎಂದು 'ಸಾದಾಖ್ಯ'ದ ನಿರುಕ್ತವಿರುವದು. ಸಾದಾಖ್ಯಕ್ಕೆ 'ಸದಾಶಿವ' ಎಂಬ ಹೆಸರೂ ಇರುವದು. ಮುಂದೆ ಈಶ್ವರ ಮತ್ತು ಶುದ್ಧವಿದ್ಯೆ ಅಥವಾ ಸದ್ವಿದ್ಯೆ ಎಂಬ ತತ್ವಗಳಾಗುವವು. ಈಶ್ವರತತ್ವವು ಸೃಷ್ಟಿನಿರ್ಮಾಣದ ನಿದರ್ಶಕವಿದ್ದು ಶುದ್ಧವಿದ್ಯೆಯು ನಿರ್ಮಲ, ಸ್ಪಷ್ಟ ಐಕ್ಯಜ್ಞಾನದ ನಿದರ್ಶಕವಿರುವದು. ಈ ರೀತಿ ಶಿವ, ಶಕ್ತಿ, ಸಾದಾಖ್ಯ ಅಥವಾ ಸದಾಶಿವ, ಈಶ್ವರ, ಸದ್ವಿದ್ಯೆ ಅಥವಾ ಶುದ್ಧವಿದ್ಯೆ ಈ ಐದು ತತ್ವಗಳು ಚಿನ್ಮಯವಿದ್ದು ಇವುಗಳಲ್ಲಿ ದ್ವೈತಭಾವವು ಉತ್ಪನ್ನವಾಗಿದ್ದರೂ ಅದು ಅದ್ವೈತ ಅನುಭವದಿಂದಲೆ ಯುಕ್ತವಿರುವದು. ಅರ್ಥಾತ್ ತಾನು ಬೇರೆ ತನ್ನ ಕಲ್ಪನೆ ಬೇರೆ ಎಂಬ ದ್ವೈತಭಾವವು, ಅಥವಾ ತಾನು ಮತ್ತು ತನ್ನ ಹೊರಗಿನದು, ಎಂಬ

ಭಾವವು ಅವರಲ್ಲಿ ಇನ್ನೂ ಉತ್ಪನ್ನವಾಗಿರುವದಿಲ್ಲ. ಆದುದರಿಂದ ಇವುಗಳಿಗೆ ಶುದ್ಧ ತತ್ವಗಳು ಇಲ್ಲವೆ ಶಿವತತ್ವಗಳು ಅನ್ನುವರು. ಪರಶಿವನು ಕಲಾತೀತನಿರುವನು. ಆದರೆ ಶಿವ ಮತ್ತು ಶಕ್ತಿಗಳು ಅವಿನಾಭಾವ ಸಂಬಂಧದಿಂದ ಯುಕ್ತವಿರುವುದರಿಂದ ಅವು ನಿಷ್ಕಲವೆನಿಸುವವು. ಸದಾಶಿವ, ಈಶ್ವರ, ಮತ್ತು ಸದ್ವಿದ್ಯಾ ತತ್ವಗಳು ಮಾತ್ರ ಸಕಲ ನಿಷ್ಕಲವೆನಿಸುವವು, ಯಾಕಂದರೆ ಅವುಗಳಲ್ಲಿ ಸಕಲದ ಬೀಜವು ಮೊಳೆಯಲಾರಂಭಿಸಿದ್ದು ಕಂಡುಬರುವದು. ಈ ಮುಂದೆ ಮಾಯೆಯು ಅವತಾರವಾಗಿ ನಾವು ದ್ವೈತಸೃಷ್ಟಿಯಲ್ಲಿ ಪ್ರವೇಶಮಾಡುವೆವು. ಮಾಯೆ ಎಂದರೆ ಮೂಲ ಚಿತ್ ಶಕ್ತಿಯ ವಿಮರ್ಶಾಶಕ್ತಿಯು ಅಥವಾ ಆವರಣಶಕ್ತಿಯು. ಮಾಯೆಯು ಹೊಸ ವಸ್ತುವನ್ನು ಹುಟ್ಟಿಸಲರಿಯದು. ಆದರೆ ಇದ್ದ ವಸ್ತುವಿನ ಹಲವು ಭಾಗಗಳನ್ನು ಮುಚ್ಚಿ ನಮ್ಮಲ್ಲಿ ಜ್ಞಾನದ ಸಂಕೋಚವನ್ನುಂಟುಮಾಡಬಲ್ಲದು. ಕತ್ತಲೆಯ ಕಾರ್ಯವೂ ಮಾಯೆಯ ಕಾರ್ಯವೂ ಒಂದೇ ಎನ್ನಬಹುದು. ಆದುದರಿಂದ ಮಾಯೆಯ ಶಕ್ತಿಗಳು ಯಾವಾಗಲೂ ಚಿತ್ ಶಕ್ತಿಯ ಸ್ವರೂಪವನ್ನು ಮುಚ್ಚುವ ಕಾರ್ಯದಲ್ಲಿ ತೊಡಗಿರುವವು (ಸ್ವರೂಪಾವರಣೇ ಯಸ್ಯಾಃ ಶಕ್ತಯಃ ಸತತೋತ್ಥಿತಾಃ), ಎಂದು ಹೇಳುವರು. ನಿಷೇಧವ್ಯಾಪಾರರೂಪಾ ಶಕ್ತಿಃ ಮಾಯಾ, ನಿಷೇಧರೂಪ ವ್ಯಾಪಾರಗಳಲ್ಲಿ ತೊಡಗಿರುವ ಶಕ್ತಿಯೆ ಮಾಯೆಯು, ಎಂದು (ಯೋಗಿರಾಜಟೀಕೆ. ಕಾರಿಕಾ. ೪. ಅನುಭವಗುಪ್ತನ ಪರಮಾರ್ಥಸಾರ) ಮಾಯೆಯ ವ್ಯಾಖ್ಯೆಯು ಮಾಡಲ್ಪಟ್ಟಿರುವದು. ಈ ಮಾಯಾಶಕ್ತಿಗೆ ಸಹಾಯಕವಾಗಿ ಮತ್ತೆ ಐದು ತತ್ವಗಳಿರುವವು. ಅವುಗಳಿಗೆ ಕಂಚುಕಗಳೆಂದೆನ್ನುವರು. ಅವುಗಳಲ್ಲಿ ಕಲೆ ಎಂಬುದು ವಿಭಾಗಶಕ್ತಿಯುಳ್ಳದ್ದು, ಕಾಲವೆಂಬುದು ಅನುಭವಗಳಲ್ಲಿ ಪರಿಚ್ಛೇದಗಳನ್ನುಂಟುಮಾಡುವಂತಹದು, ನಿಯತಿಯು ಸ್ವಾತಂತ್ರ್ಯವನ್ನು ಹರಣಮಾಡಿ ನಿಯಮಿಸುವಂತಹದು, ರಾಗವೆಂಬುದು ಆಸಕ್ತಿಯನ್ನುಂಟುಮಾಡುವಂತಹದು, ಮತ್ತು ವಿದ್ಯೆಯು ಅಲ್ಪಜ್ಞಾನವನ್ನುಂಟುಮಾಡುವಂತಹದು. ಆ ಬಳಿಕ ಪುರುಷತತ್ವವು ತೋರುವದು. ಅದು ವ್ಯಕ್ತಿತ್ವಕ್ಕೆ, ಭೋಕ್ತೃತ್ವಕ್ಕೆ, ಮತ್ತು ನಾನು ಎಂಬ ಸಂಕುಚಿತಭಾವಕ್ಕೆ ಆಧಾರಭೂತವಾದದ್ದು. ಮಾಯೆ, ಕಾಲ, ನಿಯತಿ, ಕಲೆ, ವಿದ್ಯೆ, ರಾಗ, ಮತ್ತು ಪುರುಷ ಈ ಏಳು ಶುದ್ಧಾಶುದ್ಧ ಅಥವಾ ವಿದ್ಯಾತತ್ವಗಳೆನಿಸುವವು. ಇವು ಸಕಲವಿರುವವು. ಇನ್ನು ಮುಂದೆ ಸಾಂಖ್ಯರು ಹೇಳುವ ಪ್ರಕೃತ್ಯಾದಿ ೨೪ ತತ್ವಗಳು ಹುಟ್ಟುವವು. ಮೂಲ ಪ್ರಕೃತಿ, ಮಹತ್ ಅಥವಾ ಬುದ್ಧಿ, ಅಹಂ

ಕಾರ, ಮನಸ್ಸು, ೫ ಜ್ಞಾನೇಂದ್ರಿಯಗಳು, ೫ ಕರ್ಮೇಂದ್ರಿಯಗಳು, ೫ ತನ್ಮಾತ್ರೆಗಳು, ೫ ಮಹಾಭೂತಗಳು ಹೀಗೆ ಇವು ೩೪ ಇರುವವು. ಇವೂ ಸಕಲವಿದ್ದು ಚರಾಚರ ಸೃಷ್ಟಿಯೆಲ್ಲ ಇವುಗಳಿಂದ ಉತ್ಪನ್ನವಾಗುವದು. ಈ ೩೪, ಅಶುದ್ಧ ತತ್ವಗಳು ಅಥವಾ ಆತ್ಮತತ್ವಗಳು ಎಂದೆನಿಸುವವು. ಹೀಗೆ ಒಟ್ಟು ಈ ೩೬ ತತ್ವಗಳ ವಿವರವಿರುವದು. ಇವುಗಳನ್ನು ಈ ಕೆಳಗಿನಂತೆ ತೋರಿಸಬಹುದು:—

ಪರಾಸಂವಿತ್ ಅಥವಾ ಪರಶಿವ ಅಥವಾ ಪರಾಹಂತಾ—ಕಲಾತೀತತ್ವ
(ಇದು ಕೇವಲ ಚಿನ್ಮಯವು)

೧. ಶಿವ. (ಚಿತ್ತದ ಪ್ರಕಾಶರೂಪ)	೨. ಶಕ್ತಿ....ನಿಷ್ಕಲ. (ಚಿತ್ತದ ವಿಮರ್ಶಾರೂಪ)
	೩. ಶಕ್ತಿ (ವಿಮರ್ಶಾರೂಪ)....(ನಿಷ್ಕಲ.) — ಶುದ್ಧತತ್ವ
೪. ಸಾದಾಖ್ಯ, ೫, ಈಶ್ವರ. ೬ ಸದ್ವಿದ್ಯೆ ಅಥವಾ ಶುದ್ಧ ವಿದ್ಯೆ. .(ಸಕಲ ನಿಷ್ಕಲ)	ಅಥವಾ ಚಿತ್ತತ್ವ.
೭. ಮಾಯೆ, ೮ ಕಾಲ, ೯ ನಿಯತಿ, ೧೦ ವಿದ್ಯೆ, ೧೧ ರಾಗ, ೧೨ ಪುರುಷ (ಇವೆಲ್ಲ ಸಕಲವಿರುವವು)	ಶುದ್ಧಾಶುದ್ಧ ಅಥವಾ ಚಿದಚಿತ್ ತತ್ವಗಳು ಅಥವಾ ವಿದ್ಯಾತತ್ವ.
೧೩ ತ್ರಿಗುಣಾತ್ಮಕ ಪ್ರಕೃತಿ, ೧೪ ಮಹತ್ ಅಥವಾ ಬುದ್ಧಿ, ೧೫ ಅಹಂಕಾರ, ೧೬ ಮನಸು, ೧೭–೨೧ ಐದು ಜ್ಞಾನೇಂದ್ರಿಯ, ೨೨–೨೬ ಐದು ಕರ್ಮೇಂದ್ರಿಯ, ೨೭–೩೧ ಐದು ತನ್ಮಾತ್ರೆಗಳು, ೩೨–೩೬ ಐದು ಮಹಾಭೂತಗಳು. (ಇವೂ ಸಕಲವಿರುವವು)	ಅಶುದ್ಧ ಅಥವಾ ಅಚಿತ್. ಅಥವಾ ಆತ್ಮತತ್ವ.

೧೪೪. ಮೇಲೆ ಹೇಳಿದ ೩೬ ತತ್ವಗಳ ಉತ್ಕ್ರಾಂತಿಯೊಳಗಿನ ಹಲವು ಕಲ್ಪನೆಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವದು ಅವಶ್ಯವಿರುವದು.

ಒಂದು ಇದ್ದದ್ದು ಎರಡು ಅಥವಾ ಏಕವಿದ್ದದ್ದು ಅನೇಕ ಹೇಗೆ ಆಯಿತು, ಅನೇಕವಾದ ಬಳಿಕ ಮತ್ತೆ ಏಕವೆ ಇರುವದೆಂಬ ವಿಧಾನವು ಹೇಗೆ ಸಂಭವಿಸುವದು? ಏಕವಿದ್ದುದು ಕೇವಲ ಸಂಕಲ್ಪಮಾತ್ರದಿಂದ (ಸ್ವೇಚ್ಛಯಾ–ಸೂಕ್ಷ್ಮಾಗಮ) – ಕ್ರಿಯೆಯಿಂದಲ್ಲ – ಅನೇಕವಾಯಿತು. ಆದುದರಿಂದ ಆ ಏಕದಲ್ಲಿ ಯಾವ ವಿಕೃತಿಯೂ ಉಂಟಾಗುವುದಿಲ್ಲ. ಕಾಲದಂತೆ ಅಮೂರ್ತ ಸಿದ್ದು ಶಿವನು 'ಕುರುತೇ ಕಾರ್ಯಮಿಚ್ಛಯಾ' ಕೇವಲ ಇಚ್ಛೆಯಿಂದ ಕಾರ್ಯವನ್ನು ಮಾಡುವನು ಎಂದು ಕಿರಣಾಗಮವು ಹೇಳುವದು. ಅದೇ ಸುಗತಿಯನ್ನು, ಸೂರ್ಯನು ಸನ್ನಿಧಿಯಿಂದ ರೂಪಗಳನ್ನು ಹುಟ್ಟಿಸುವಂತೆ 'ಸನ್ನಿಧಿಮಾತ್ರೇಣ ವಿದಧಾತ್ಯಖಿಲಂ ಶಿವಃ' ಎಂದು ಪುಷ್ಕರಾಗಮವು ಪ್ರತಿಪಾದಿಸುವದು. ಈ ಅನೇಕತ್ವವು ಶಿವನಲ್ಲಿರುವ ಮಹಾಮಾಯಾ ಶಕ್ತಿಯಿಂದ ಅಥವಾ ಆವರಣಶಕ್ತಿಯಿಂದ ಅಥವಾ ನಿಗೂಹನ ಶಕ್ತಿಯಿಂದ ಜೀವಗಳಿಗೆ ದೃಗ್ಗೋಚರವಾಗುವದು. ಈ ಅನೇಕತ್ವದ ತೋರಿಕೆಯು ಕೇವಲ ಆಭಾಸಮಾತ್ರವು ಅಥವಾ ವಿವರ್ತವು, ಎಂದು ಮತ್ತು ಮಾಯೆಯೆಂಬುದು ಸದಸದ್ವಿಲಕ್ಷಣವೂ ಅನಿರ್ವಚನೀಯವೂ ಎಂದು ಶಂಕರಾದ್ವೈತವು ಹೇಳುವದು. ಆದರೆ ಈ ವಿಧಾನಗಳು ಶೈವಾಗಮಗಳಿಗೆ ಸಮ್ಮತವಿಲ್ಲ. ಅನೇಕತ್ವವು ಕ್ಷಣಶಃ ಪರಿವರ್ತನಶೀಲವಿದ್ದರೂ ಮಾಯೆಯು ನಿಜಜ್ಞಾನವನ್ನು ಆವರಿಸುತ್ತಿದ್ದರೂ, ಆಗಮಗಳ ತತ್ವಜ್ಞಾನದ ಪ್ರಕಾರ, ಇವೆರಡೂ ಅನುಭವಕ್ಕೆ ಬರುವ ಸತ್ಯಗಳಿದ್ದು ಅವು ವಿವರ್ತಗಳಲ್ಲ ಅಥವಾ ಮಿಥ್ಯೆಯಲ್ಲ. ಸರ್ವಪ್ರಮಾಣಸಂಸಿದ್ಧಂ ಚಿದ್ವಿವರ್ತಂ ಕಥಂ ಜಗತ್, ಅಂದರೆ ಪ್ರತ್ಯಕ್ಷಪ್ರಮಾಣದಿಂದ ಅನುಭವಕ್ಕೆ ಬರುವ ಮಾತು ವಿವರ್ತವೆಂದು ಹೇಗೆ ಎನಿಸುವದು, ಎಂದು ಪೌಷ್ಕರಾಗಮವು (ಪ. ತ್ರಿ. ಶ್ಲೋ. ೪–೬) ಕೇಳುವದು. ಯಾವ ಮೂಲ ಮಾಯಾಶಕ್ತಿಯ ಮೂಲಕ ಏಕದಲ್ಲಿ ಅನೇಕತ್ವದ ಉತ್ಪತ್ತಿಯಾಗುವುದೊ ಅದು ಆಣವಮಲವೆನಿಸುವದು. ತನ್ಮೂಲಕವೆ ಎಲ್ಲ ಜೀವಗಳು ಶಿವಭಾವವನ್ನು ಕಳಕೊಂಡು ಜೀವಭಾವವನ್ನು ತಾಳುವವು. ಇದು ಮೂಲ ಮಹಾಮಾಯೆಯು. ಇನ್ನು ಮಾಯಾಮಲವೆಂದರೇನು? ಮಾಯಾ ಚ ವಸ್ತುರೂಪಾ ಮೂಲಂ ವಿಶ್ವಸ್ಯ ನಿತ್ಯಾ ಸಾ (ಭೋಜದೇವನ ತತ್ವಪ್ರಕಾಶಿಕೆ), ಅಂದರೆ ಮಾಯೆಯು ವಸ್ತುರೂಪವಿದ್ದು ವಿಶ್ವದ ಕಾರಣನಿರುವದು ಅರ್ಥಾತ್ ಅನೇಕತ್ವದ ಕಾರಣವಿರುವದು. ಇದು ಆಣವಮಲದ ಸೂಕ್ಷ್ಮರೂಪವೆಂದು ಹೇಳಬಹುದು. ಪೂರನೆಯದು ಕಾರ್ಮಿಕಮಲವು. ಕರ್ಮವು ಅನಾದಿಯಿದ್ದು ಧರ್ಮಾ

ಧರ್ಮರೂಪವಿರುವದು. ಈ ಮೂರು ಮಲಗಳೆ ಜೀವನ ಪಾಶಗಳು. ಇವುಗಳ ಮೂಲಕವೆ ಮನುಷ್ಯನಿಗೆ ಅನೇಕತ್ವದ ಅನುಭವವು ಬರುತ್ತಿರುವದು. ಈ ಮೂರು ಪಾಶಗಳಾಚೆಗೆ ಹೋದವರಿಗೆ ಅಥವಾ ಶಿವನಿಗೆ ದ್ವೈತದ ಇಲ್ಲವೆ ಅನೇಕತ್ವದ ಅನುಭವವು ಆಗಲರಿಯದು. ಈ ಪಾಶಗಳಿಂದ ಬದ್ಧನಾದವನೆ ಜೀವನು, ಇವುಗಳಿಂದ ಮುಕ್ತನಾದವನೆ ಸದಾಶಿವನು. ಹೀಗೆ ಪಾಶಮುಕ್ತನಾಗುವುದೆ ಮುಕ್ತಿಯು. ಇದು ಏಕತ್ವ, ಅನೇಕತ್ವ, ಮತ್ತು ಮಾಯೆ ಇವುಗಳ ವಿವೇಚನೆಯಾಯಿತು. ಇನ್ನು ಜೀವನ ಸ್ವರೂಪವೇನು? ಈ ೩೬ ತತ್ವಗಳಲ್ಲಿ ಪುರುಷ ಎಂಬ ೧೩ ನೆಯ ತತ್ವವೆ ಜೀವಸ್ಥಲವೆನ್ನಬಹುದು. ಜೀವನು ಮೂಲದಲ್ಲಿ ಚೈತನ್ಯಸ್ವರೂಪನು. ಆದರೆ ಮಾಯೆಯ ಮೂಲಕ ಅವನು ಅಲ್ಪಜ್ಞನೂ ಅಲ್ಪಶಕ್ತಿಕನೂ ಆಗಿ, ಅಹಂಭಾವದಿಂದ ಕೂಡಿ, ಸುಖದುಃಖಾದಿಗಳ ಭೋಕ್ತೃವಾಗುವನು. ಪ್ರಕೃತ್ಯಾದಿ ತತ್ವಗಳಿಂದೊಡಗೂಡಿದ ಸ್ಥೂಲ ಶರೀರವನ್ನು ಧರಿಸಿ ಅದರ ಮುಖಾಂತರ ಶೀತೋಷ್ಣ ಸುಖದುಃಖಾದಿ ದ್ವಂದ್ವಗಳಿಗೆ ಗುರಿಯಾಗುವನು. ಮೂರು ಮಲ ಮತ್ತು ಅಹಂಕಾರ ಇವುಗಳ ಮೂಲಕ ಕರ್ಮಗಳಿಂದ ಬದ್ಧನಾಗಿ ಜನ್ಮಜನ್ಮಾಂತರಗಳನ್ನು ತಾಳುವನು. ಆದರೆ ಅವನು ಮೂಲ ಚೈತನ್ಯದ ಅಂಶನಿರುವುದರಿಂದ ಸಚ್ಚಿದಾನಂದತ್ವದ ಬೀಜವು ಅವನಲ್ಲಿರುವದು ಮತ್ತು ಆ ಧ್ಯೇಯವನ್ನು ಪ್ರಾಪ್ತಮಾಡಿಕೊಳ್ಳುವುದಕ್ಕಾಗಿ ಅವನು ಯತ್ನಿಸುವನು. ಅವನು ಯಾವ ಸ್ಥಿತಿಯನ್ನು ಪಡೆಯಬೇಕೆನ್ನುವನೊ ಅದೇ ಅವನ ಧ್ಯೇಯವು ಮತ್ತು ಅದನ್ನು ಪಡೆಯಲು ಯಾವ ಪ್ರಯತ್ನಗಳನ್ನು ಮಾಡುವನೊ ಅವೇ ಅವನ ಸಾಧನವು.

೧೮೫. ಈ ತತ್ವಜ್ಞಾನದ ಸಿದ್ಧಾಂತ ಮತ್ತು ಜೀವದ ಆಕಾಂಕ್ಷೆಗಳ ಪೃಥಕರಣ ಹಾಗೂ ಪರಿಶೋಧನ ಮಾಡಿ ನಿರ್ಣಯಿಸಿದ ಅನುಮಾನ, ಇವುಗಳ ಮೇಳಹಾಕಿ, ಜೀವನ ಆತ್ಯಂತಿಕ ಧ್ಯೇಯವೇನು, ಇದನ್ನು ನಿರ್ಧರಿಸುವದು ಉಚಿತವಾಗುವದು. ಈ ತತ್ವಜ್ಞಾನದ ಪ್ರಕಾರ, ಜೀವನೆಂದರೆ ಮೂಲ ಚಿತ್ತದ ಆವರಣಶಕ್ತಿಯ ಮೂಲಕ ಏಕರಸವಿರುವ ಚೈತನ್ಯ ಸಾಗರದಲ್ಲಿ ಉಂಟಾದ ಒಂದು ಅಹಂಕಾರವಿದ್ಧ ಮತ್ತು ಅಲ್ಪಜ್ಞಾನಯುಕ್ತ ತರಂಗವು, ಅಥವಾ ಜಿಜ್ಞೋತಿಯಿಂದೊಗೆದ ಒಂದು ಸ್ಫುಲಿಂಗವು. ಅಹಂಕಾರ ಮತ್ತು ಅಲ್ಪಜ್ಞಾನ ಇವುಗಳ ಮೂಲಕ ಜೀವನು ದೇಹಾತ್ಮಬುದ್ಧಿಯುಳ್ಳವನಾಗಿ, ಸುಖದುಃಖ ಶೀತೋಷ್ಣಾದಿಗಳಿಗೆ ಗುರಿಯಾಗಿ, ಕರ್ಮಬಂಧನದಿಂದ ಕಟ್ಟಲ್ಪಟ್ಟು, ಭವಭವಾಂತರಗಳ ಭವಣೆಯಲ್ಲಿ ಸಿಕ್ಕು

ಒದ್ದಾಡುತ್ತಿರುವನು. ಆದರೆ ಮೂಲ ಚೈತನ್ಯಬೀಜವು ಅವನಲ್ಲಿರುವುದರಿಂದ ಅವನ ಸುತ್ತಲು ಮಾಯೆಯಿಂದ ಮುಸುಕಿದ ಅಜ್ಞಾನದ ಮತ್ತು ಒಡದ ಕವಚವನ್ನು ಒಡೆದು ಅವನು ಪುನಃ ಚೈತನ್ಯಸಾಗರದಲ್ಲಿ ಲೀನನಾಗಲು ಯತ್ನಿಸುತ್ತಿರುವನು (೪೨). ಇನ್ನು ಜೀವನ ಆಕಾಂಕ್ಷೆಗಳನ್ನು ಪರಿಕಿಸಿದರೆ ನಮಗೆ ಏನು ಕಂಡುಬರುವದು? ಜೀವನು ಜಾಗ್ರತ್ ಸ್ವಪ್ನ ಸುಷುಪ್ತ್ಯಾದಿ ಯಾವದೇ ಅವಸ್ಥೆಯಲ್ಲಿರಲಿ, ವಿಚಾರಮಗ್ನನಿರಲಿ, ಕಾರ್ಯವ್ಯಾಪೃತನಿರಲಿ, ಸುಖದಲ್ಲಿರಲಿ ದುಃಖದಲ್ಲಿರಲಿ, ಅವನು ಜ್ಞಾನಿಯಿರಲಿ, ಅಜ್ಞಾನಿಯಿರಲಿ, ಪಂಡಿತನಿರಲಿ ಪಾಮರನಿರಲಿ, ಅವನು ಯಾವಾಗಲೂ ನಿರಂತರ ಸುಖವನ್ನು, ಅಖಂಡ ಸುಖವನ್ನು ಅರಸುತ್ತಲಿರುವನು. ಈ ಸುಖವನ್ನು ಹೇಗೆ ದೊರಕಿಸಬೇಕು ಇದು ಸಾಮಾನ್ಯವಾಗಿ ಒಮ್ಮೆಲೆ ತಿಳಿಯದಿರುವುದರಿಂದ ಅವನು ಅತ್ತ ಇತ್ತ, ಅಲ್ಲಿ ಇಲ್ಲಿ ಅಲೆದಾಡಿ ಕ್ಷಣಿಕ ಸುಖಗಳ ಜೆನ್ನು ಬಿದ್ದು ಬಳಲುತ್ತಿರುವನು. ತನ್ನ ಈ ಸ್ಥಿತಿಗೆ ಮಾಯೆಯೆ ಕಾರಣವು, ಎಂದು ತಿಳಿದು ಆ ಮಾಯೆಯನ್ನು ನಿರಾಕರಿಸುವುದರ ಸಲುವಾಗಿ ಅವನು ಮಾಯಾತೀತನನ್ನು ಪೊರೆಹೊಕ್ಕನೆಂದರೆ ಅವನಿಗೆ ಮುಂದೆ ಮುಕ್ತಿಯ ಮಾರ್ಗವು ಕಾಣುವದು. ಹೀಗೆ, ತತ್ವಜ್ಞಾನದ ಸಿದ್ಧಾಂತ ಮತ್ತು ಜೀವನ ಆತ್ಯಂತಿಕ ಆಕಾಂಕ್ಷೆ ಇವೆರಡನ್ನೂ ನೋಡಿದರೆ, ಅಜ್ಞಾನದ ನಾಶ ಅಥವಾ ಮಾಯೆಯ ನಿರಾಕರಣ ಅಥವಾ ನಿತ್ಯಾನಂದ ಅಥವಾ ಕರ್ಮಬಂಧನದಿಂದ ಮುಕ್ತಿ ಇದೇ ಮನುಷ್ಯನ ಕಟ್ಟಕಡೆಯ ಧ್ಯೇಯವಿರುವದೆಂದು ಕಂಡುಬರುವದು. ಇದೇ ಸಂಗತಿಯನ್ನು ಆಗಮಗಳ ಮತ್ತು ವಚನಶಾಸ್ತ್ರದ ಪರಿಭಾಷೆಯಲ್ಲಿ ಕೆಳಗಿನಂತೆ ಹೇಳಬಹುದು. ಲಿಂಗವೆ ಪರತತ್ವವು ಮತ್ತು ಅಂಗವೆ ಜೀವನು. ಲಿಂಗವು ಪೂರ್ಣವು ಅಂಗವು ಅಪೂರ್ಣವು. ಅಂಗದ ಅಪೂರ್ಣತ್ವವು ಮಾಯೆಯ ಮೂಲಕವೆ ಉಂಟಾದದ್ದು. ಆ ಮಾಯೆಯನ್ನು ಹೋಗಲಾಡಿಸಿದ ಬಳಿಕ ಗಾಳಿಯಲ್ಲಿ ಸುಳಿಗಾಳಿಯು, ನೀರಿನಲ್ಲಿ ನೀರಹನಿಯು ಕೂಡುವಂತೆ ಅಂಗಗತ ಚೈತನ್ಯವು ಶುದ್ಧವಾಗಿ ಲಿಂಗಚೈತನ್ಯದಲ್ಲಿ ಬೆರೆಯುವದು. ಅದೇ ಲಿಂಗಾಂಗಸಾಮರಸ್ಯವು. ಆ ಸಾಮರಸ್ಯವಾಯಿತೆಂದರೆ ಅಂಗಸ್ಥಳದ ಸುಖದುಃಖಾದಿ ದ್ವಂದ್ವಗಳೆಲ್ಲ ಅಳಿದು ಹೋಗಿ ಲಿಂಗಸ್ಥಳದಲ್ಲಿರುವ ಸತ್, ಚಿತ್, ಆನಂದ, ನಿತ್ಯ ಪರಿಪೂರ್ಣ, ಮುಂತಾದ ಲಕ್ಷಣಗಳು ಅಳವಡುವವು. ಅಲ್ಲಿ ಅದ್ವೈತಾನಂದವಿರುವದು. ಅದೇ ಪರಮಗತಿಯು. ಷಟ್‌ಸ್ಥಲಗಳಲ್ಲಿ ಕೊನೆಯಾದ ಐಕ್ಯಸ್ಥಳವು ಅದೇ. ಈ ರೀತಿ ಅಂಗಸ್ಥಲದಲ್ಲಿರುವ ಮತ್ತು ಸುಖ

ದುಃಖಗಳಿಗೆ ಈಡಾದ ಜೈತನ್ಯವು ಲಿಂಗಸ್ಥಲದಲ್ಲಿರುವ ಪರಮ ದ್ವಂದ್ವಾತೀತ ಜೈತನ್ಯದೊಡನೆ ಸಮರಸವಾಗುವುದೆ ಪರಮಧ್ಯೇಯವೆಂದು ವಚನಕಾರರ ಮತವಿರುವದು. (೪೬,೫೩,೫೭,೬೮).

೧೪೬. ಈ ಪರಮಧ್ಯೇಯವನ್ನು ದೊರಕಿಸುವ ಮಾರ್ಗವೆ ಸಾಧನವೆನಿಸುವದು. ಆಗಮಕಾರರು ಮತ್ತು ವಚನಕಾರರು ಅದಕ್ಕೆಯೆ ಷಡಧ್ವ, ಷಟ್‌ಸ್ಥಲಮಾರ್ಗ, ಎಂದಿರುವರು. ಸ್ಥಲವೆಂದರೆ ಮೆಟ್ಟು, ಸ್ಥಾನ. ಸಾಧಕನು ಸಾಧನಸೋಪಾನವನ್ನೇರಿ ಸಿದ್ಧಪದವಿಯನ್ನು ಪಡೆಯುವವರೆಗೆ ಆಯಾ ಕಾಲದ ಅವನ ವಿಶಿಷ್ಟ ಗುಣ, ಕರ್ಮ, ಮತ್ತು ಚಿತ್ತಸ್ಥಿತಿ ಇವುಗಳನ್ನು ಲಕ್ಷಿಸಿ ಮೂಲತಃ ಆರು ಮೆಟ್ಟಲುಗಳು ಕಲ್ಪಿಸಲ್ಪಟ್ಟಿವೆ. ಅವೇ ಷಟ್‌ಸ್ಥಲಗಳೆನಿಸುವವು. ಸಾಧನಸೋಪಾನದ ದೃಷ್ಟಿಯಿಂದ ಅಂಗ ಮತ್ತು ಲಿಂಗ ಅಥವಾ ಜೀವ ಮತ್ತು ಶಿವ ಇವರ ನಡುವಿನ ಆಯಾ ಮೆಟ್ಟಿನಲ್ಲಿರುವ ಸಂಬಂಧವನ್ನು ಷಟ್‌ಸ್ಥಲಗಳ ಮೂಲಕ ಆಗಮಕಾರರು ಮತ್ತು ವಚನಕಾರರು ಹೇಗೆ ತೋರಿರುವರು ಇದನ್ನು ಇನ್ನು ನೋಡುವ. ಸೃಷ್ಟಿಯು ಪ್ರವೃತ್ತಿಯಿಂದಾದುದು, ಮುಕ್ತಿಯು ನಿವೃತ್ತಿಯಿಂದಾಗುವದು. ಸೃಷ್ಟಿಯು ಮಾಯಾಶಕ್ತಿಯ ಕಾರ್ಯವು ಮುಕ್ತಿಯು ಭಕ್ತಿಯ ಪರಿಣಾಮವು. ಅಂಗ ಲಿಂಗ ಸಂಬಂಧವು ಪೂಜಕ ಪೂಜ್ಯ, ಸೇವಕ ಸೇವ್ಯ ಇವರ ನಡುವಿನ ಸಂಬಂಧದಂತೆ ಇರುವದು. ಮಾಯೆಯಿಂದ ವಿಷಯಾಸಕ್ತಿಯುಂಟಾದರೆ ಭಕ್ತಿಯಿಂದ ಲಿಂಗಾಸಕ್ತಿಯುಂಟಾಗುವದು. ಮೆಲ್ಲಮೆಲ್ಲನೆ ಮಾಯೆಯಿಂದ ಮುಕ್ತವಾಗುತ್ತ ಹೋದಂತೆ ಅಂಗವು ಲಿಂಗವನ್ನು ಸಮೀಪಿಸಿ ಕೊನೆಗೆ ಅದರಲ್ಲಿ ಲಯಹೊಂದುವದು. 'ಅಮಿತಿ ಬ್ರಹ್ಮಸನ್ಮಾತ್ರಂ ಗಚ್ಛತೀತಿ ಗಮುಚ್ಯತೇ' (ಅನುಭವಸೂತ್ರ), ಅಂದರೆ ಬ್ರಹ್ಮನ ಕಡೆಗೆ ಸಾಗುವ ತತ್ವವೆ ಅಂಗವು, ಎಂದು ಅಂಗದ ನಿರುಕ್ತವಿರುವದು. ಶಿವನು ತನ್ನ ಶಕ್ತಿ ಮುಖದಿಂದ ಸೃಷ್ಟಿಯನ್ನು ನಿರ್ಮಿಸುವನು ಮತ್ತು ಭಕ್ತಿಮುಖದಿಂದ ಅಂಗವನ್ನು ಮುಕ್ತಮಾಡುವನು. ಪರಮಾರ್ಥದಲ್ಲಿ ಶಕ್ತಿಭಕ್ತಿಗಳೆರಡರಲ್ಲಿಯೂ ಭೇದವಿಲ್ಲ; ಯಾಕಂದರೆ, ಅವೆರಡೂ ಶಿವನ ಪ್ರವೃತ್ತಿ ನಿವೃತ್ತಿಗಳೆಂಬ ಊರ್ಧ್ವಶ್ವಾಸ ನಿಶ್ವಾಸಗಳು, ಎಂದು ಅನುಭವ ಸೂತ್ರದ ವಚನವಿರುವದು. ಶಿವನೇ ಲಿಂಗಸ್ಥಲದಲ್ಲಿ ಶಕ್ತಿರೂಪದಿಂದ ಮತ್ತು ಅಂಗಸ್ಥಲದಲ್ಲಿ ಭಕ್ತಿರೂಪದಿಂದ ಕಾರ್ಯಮಾಡುವನು. ಅಂಗಲಿಂಗಗಳಲ್ಲಿ ಪ್ರತ್ಯೇಕವಾಗಿ ಆರಾರು ಸ್ಥಲಗಳು ಕಲ್ಪಿಸಲ್ಪಟ್ಟಿರುವವು. ಹೇಗಂದರೆ, ಲಿಂಗದಲ್ಲಿ ಮೊದಲು ಇಷ್ಟ, ಪ್ರಾಣ, ಮತ್ತು ಭಾವ ಎಂಬ ಮೂರು ಸ್ಥಲಗಳು, ಬಳಿಕ ಮತ್ತೆ

ಇಷ್ಟ ಲಿಂಗದಲ್ಲಿ ಗುರುಲಿಂಗ ಆಚಾರಲಿಂಗ ಎಂದು, ಪ್ರಾಣಲಿಂಗದಲ್ಲಿ ಪ್ರಸಾದಲಿಂಗ ಜರಲಿಂಗ ಎಂದು, ಭಾವಲಿಂಗದಲ್ಲಿ ಶಿವಲಿಂಗ ಮಹಾಲಿಂಗ ಎಂದು, ಸ್ಥಲಗಳು ಇರುವವು. ಈ ಲಿಂಗಸ್ಥಲಗಳಿಗೆ ಅನ್ವಯಿಸಿ ಅಂಗಸ್ಥಲದಲ್ಲಿ ಪೊದಲು ತ್ಯಾಗಾಂಗ, ಭೋಗಾಂಗ, ಯೋಗಾಂಗ ಎಂಬ ಮೂರು ತೆರ, ಮತ್ತು ಆ ಮೇಲೆ ತ್ಯಾಗಾಂಗದಲ್ಲಿ ಭಕ್ತಸ್ಥಲ ಮಹೇಶಸ್ಥಲ ಎಂದು, ಭೋಗಾಂಗದಲ್ಲಿ ಪ್ರಸಾದಿಸ್ಥಲ ಪ್ರಾಣಲಿಂಗಿಸ್ಥಲ ಎಂದು, ಯೋಗಾಂಗದಲ್ಲಿ ಶರಣಸ್ಥಲ ಐಕ್ಯಸ್ಥಲ ಎಂದು ಸ್ಥಲಗಳಿರುವವು. ಈ ಸ್ಥಲಗಳ ಅರ್ಥವನ್ನು, ಸಂಬಂಧವನ್ನು, ಮತ್ತು ಲಕ್ಷಣಗಳನ್ನು ಚನ್ನಾಗಿ ತಿಳಿದುಕೊಂಡರೆ ಷಟ್‌ಸ್ಥಲಜ್ಞಾನವಾದಂತಾಗುವದು. ಸ್ಥೂಲಶರೀರದೊಡನೆ ಸತತ ಇಟ್ಟು ಕೊಳ್ಳಬೇಕೆಂದು ಮತ್ತು ಬಾಹ್ಯ ಪೂಜಾದಿ ಕರ್ಮಗಳಿಗೆ ಆಶ್ರಯವೆಂದು ಗುರುವು ದೀಕ್ಷಾ ಸಮಯದಲ್ಲಿ ಕೊಟ್ಟ ಲಿಂಗವೆ ಇಷ್ಟಲಿಂಗವು. ಇದನ್ನು ಅವನು ಕ್ರಿಯಾದೀಕ್ಷೆಯಿಂದ ಕೊಡುವನು. ಪ್ರಾಣಾದಿಗಳಿಂದೊಡಗೂಡಿದ ಸೂಕ್ಷ್ಮಶರೀರಕ್ಕೆ ಸಂಲಗ್ನವಾದ ಲಿಂಗವೆ ಪ್ರಾಣಲಿಂಗವು. ಇದನ್ನು ಗುರುವು ಮಂತ್ರದೀಕ್ಷೆಯಿಂದ ಶಿಷ್ಯನಿಗೆ ದಯಪಾಲಿಸುವನು. ಕೇವಲ ಚಿನ್ಮಯವಾದ ಆತ್ಮಲಿಂಗವು, ಆತ್ಮನೊಡನೆ ಸಂಲಗ್ನವಾದುದು ಭಾವಲಿಂಗವು. ಇದನ್ನು ಗುರುವು ಜ್ಞಾನದೀಕ್ಷೆಯಿಂದ ಶಿಷ್ಯನಿಗೆ ಕೊಡುವನು. ಇವುಗಳಲ್ಲಿ ಇಷ್ಟಲಿಂಗವು ಆನಂದರೂಪವೂ ಪ್ರಾಣಲಿಂಗವು ಚಿದ್ರೂಪವೂ ಭಾವಲಿಂಗವು ಸದ್ರೂಪವೂ ಇರುವದೆಂದು ಅನುಭವಸೂತ್ರದಲ್ಲಿ ಉಲ್ಲೇಖವಿರುವದು. ಗುರುಲಿಂಗಾದಿ ಆರು ಲಿಂಗಗಳ ಲಕ್ಷಣಗಳೂ ಅವುಗಳಲ್ಲಿರುವ ವಿಧಗಳೂ ಸೂಕ್ಷ್ಮಾಗಮದ ಎಂಟನೆಯ ಪಟಲದ ಪ್ರಾರಂಭದಲ್ಲಿ ವಿವರವಾಗಿ ಕೊಡಲ್ಪಟ್ಟಿರುವವು. ಈ ಲಿಂಗಸ್ಥಳಗಳಿಗೆ ಅನ್ವಯಿಸುವ ಮತ್ತು ಆಯಾ ಪದ್ಧತಿಗೆ ಅನುಸರಿಸಿ ಅವುಗಳನ್ನು ಉಪಾಸಿಸುವ ಆರು ಅಂಗಸ್ಥಳಗಳು ಇರುವವೆಂದು ಹೇಳಿ ಮೇಲೆಯೆ ಅವುಗಳ ಹೆಸರುಗಳನ್ನು ಕೊಟ್ಟಿದ್ದಾನಿದೆ. ಇನ್ನು ಅವುಗಳ ಅರ್ಥವೇನು ಇದನ್ನು ನೋಡುವ.

೧೪೭. ತ್ಯಾಗಾಂಗವೆಂದರೆ ಸ್ಥೂಲಶರೀರ ಮತ್ತು ಬಾಹ್ಯವಿಷಯ ಇವುಗಳಲ್ಲಿಯ ಆಸಕ್ತಿಯನ್ನು ಬಿಟ್ಟು ಇಷ್ಟಲಿಂಗದ ಉಪಾಸನೆಮಾಡುವ ಸ್ಥಳವು. ಅಲ್ಲಿ ಸಂಸಾರಭ್ರಾಂತಿಯ ತ್ಯಾಗವು ಮಾಡಲ್ಪಡುತ್ತಿರುವುದರಿಂದ ಅದು ತ್ಯಾಗಾಂಗವೆನಿಸುವದು. (ಅ. ಸೂ.) ವಿಷಯಾಸಕ್ತಿಯನ್ನು ಬಿಟ್ಟ ಬಳಿಕ ಶಿವಪ್ರಸಾದಭಾವದಿಂದಲೆ ಎಲ್ಲ ಭೋಗಗಳನ್ನು ಭೋಗಿಸುವದು ಭೋಗಾಂಗವೆನಿಸುವದು. ಈ ಸ್ಥಲದಲ್ಲಿ ಸಾಧಕನು ಶಿವನೊಡನೆ ಭೋಗ

ಮಾಡುತ್ತಿರುವುದರಿಂದ ಇದು ಭೋಗಾಂಗವೆನಿಸುವದು (ಅ. ಸೂ.). ಎಲ್ಲ ವಾಸನಾದಿಗಳ ಲಯವಾಗಿ ಜ್ಞಾನೋದಯವಾದುದರಿಂದ ಕಾರಣ ಶರೀರವು ಶುದ್ಧವಾಗಿ ಸಾಧಕನು ಯೋಗಾಂಗದಲ್ಲಿ ಶಿವಜ್ಞಾನದಿಂದ ಯುಕ್ತನಾಗಿ ಎಲ್ಲೆಲ್ಲಿಯೂ ಶಿವನನ್ನೆ ಸಾಕ್ಷಾತ್ಕರಿಸುವನು. ಶಿವಯೋಗ ಮತ್ತು ಅದರಿಂದಾಗುವ ಪರಮಸಂತೋಷ ಇವು ಅಳವಡುವುದರಿಂದ ಈ ಸ್ಥಲವು ಯೋಗಾಂಗವೆನಿಸುವದು (ಅ. ಸೂ.). ಈ ಮೂರು ಅಂಗಗಳಲ್ಲಿದ್ದ ಭಕ್ತಾದಿ ಆರು ಅಂಗಸ್ಥಲಗಳ ಲಕ್ಷಣಗಳು ಆಗಮ ಮತ್ತು ವಚನಗಳಲ್ಲಿ ಅನೇಕ ಕಡೆಗೆ ಹೇಳಲ್ಪಟ್ಟಿವೆ. ಆ ಹೇಳಿಕೆಗಳಲ್ಲಿ ಅಲ್ಲಲ್ಲಿ ಸ್ವಲ್ಪ ಭೇದಗಳೂ ಇವೆ. ಆದರೆ ಆ ಸ್ಥಲಗಳ ಮುಖ್ಯ ಲಕ್ಷಣಗಳು ಸಾಕಷ್ಟು ಸ್ಪಷ್ಟವಾಗಿವೆ. ಭಕ್ತಸ್ಥಲದಲ್ಲಿ ಶ್ರದ್ಧೆ ಮತ್ತು ಶ್ರದ್ಧಾಪೂರ್ವಕವಾದ ಗುರುಲಿಂಗಜಂಗಮ ಪೂಜೆ ಮುಂತಾದ ಆಚಾರ ಇವೇ ಮುಖ್ಯ ಲಕ್ಷಣಗಳು. ಮಹೇಶಸ್ಥಲದಲ್ಲಿ ನಿಷ್ಠೆಯು ಅಂದರೆ ಮನೋದಾರ್ಢ್ಯವು ಮತ್ತು ಗುರೂಕ್ತಮಾರ್ಗದಿಂದ ಆಚರಣ ಇವೇ ಮುಖ್ಯವಾದವುಗಳು. ಈ ಎರಡೂ ಸ್ಥಲಗಳಲ್ಲಿ ಗುರು ಪೂಜೆ, ಲಿಂಗಪೂಜೆ, ಜಂಗಮಪೂಜೆ, ವಿಭೂತಿಧಾರಣೆ, ರುದ್ರಾಕ್ಷಿಧಾರಣೆ, ಲಿಂಗಧಾರಣೆ, ಗುರುಲಿಂಗಜಂಗಮರ ಪಾದೋದಕ, ಮತ್ತು ಗುರುಲಿಂಗ ಜಂಗಮಪ್ರಸಾದ ಈ ಅಷ್ಟಾವರಣಗಳು ಅತ್ಯವಶ್ಯವಾಗಿರುವವು. ಇವು ಗಳಲ್ಲಿ ಗುರುವು ಜ್ಞಾನಮೂರ್ತಿಯು, ಲಿಂಗವು ಪರಮಾತ್ಮಪ್ರತೀಕವು, ಜಂಗಮನು ಸಾಕ್ಷಾತ್ಕಾರಿಯು ಅಥವಾ ಪರಿಪೂರ್ಣಭಕ್ತನು, ವಿಭೂತಿಯು ಅಂತರ್ಬಾಹ್ಯಶುದ್ಧಿಯನ್ನು ಒದಗಿಸುವ ಸಾಮರ್ಥ್ಯವುಳ್ಳದ್ದು, ರುದ್ರಾಕ್ಷಿಯು ರುದ್ರನ ಜ್ಞಾನದೃಷ್ಟಿಯ ಕುರುಹು, ಪಾದೋದಕವು ಪರಮಾತ್ಮನ ಅನುಗ್ರಹದ ದ್ಯೋತಕವು, ಮತ್ತು ಪ್ರಸಾದವು ಸರ್ವಾರ್ಪಣ ಕ್ರಿಯೆಯ ಗುರುತು. ಈ ಪ್ರಕಾರ ಈ ಅಷ್ಟಾವರಣಗಳ ಅರ್ಥವಿರುವದು. ಅರ್ಥತಿಳಿಯದೆ, ಅಂಧಪರಂಪರೆಯಿಂದ ಇವುಗಳನ್ನು ಆಚರಿಸಿದರೆ ಅದು ಬರೇ ಸೋಗು ಎನಿಸುವದು. ಜನರು ತನಗೆ ಧಾರ್ಮಿಕನೆನ್ನಬೇಕು, ಎಂಬ ಆಸೆಯಿಂದ ಆಚರಿಸಿದರೆ ಅದು ದಂಭಾಚಾರವೆನಿಸುವದು. ಅವುಗಳನ್ನು ಕೇವಲ ಯಾಂತ್ರಿಕ ರೀತಿಯಿಂದ ಆಚರಿಸಿ ಮನಸ್ಸನ್ನು ಮತ್ತೊಂದೆಡೆಗೆ ಹರಿಯಗೊಟ್ಟರೆ ಅದು ವಿಡ್ಢಾಚಾರವೆನಿಸುವದು. ಆದರೆ ಅವುಗಳ ಯಥಾರ್ಥ ಅರ್ಥವನ್ನು ತಿಳಿದುಕೊಂಡು ಅಂಗದಲ್ಲಿ ಲಿಂಗವನ್ನು ಅಳವಡಿಸುವ, ಲಿಂಗದಲ್ಲಿ ಅಂಗವನ್ನು ಸಮರಸವಾಡುವ ಧ್ಯೇಯವನ್ನು ನಿಚ್ಚಳವಾಗಿ ಸತತ ಕಣ್ಣುಮುಂದೆ ಇಟ್ಟುಕೊಂಡು ಈ ಅಷ್ಟಾವರಣಗಳನ್ನು

ಆಚರಿಸಿದರೆ, ಗುರುವು ಪ್ರತ್ಯಕ್ಷ ಜ್ಞಾನಸ್ವರೂಪನಾಗಿ ಅಂತಃಕರಣದಲ್ಲಿ ಬಂದುನಿಲ್ಲುವನು, ಲಿಂಗಪೂಜೆಯು ಪ್ರತ್ಯಕ್ಷ ಪರಮಾತ್ಮ ಸಾಕ್ಷಾತ್ಕಾರವನ್ನು ಮಾಡಿಕೊಡುವದು, ಜಂಗಮನು ಸೇವೆಯಿಂದ ಪ್ರಸನ್ನನಾಗಿ ತನ್ನ ಅನುಭವವನ್ನು ಅನುಗ್ರಹಿಸುವನು, ಗುರುಲಿಂಗಜಂಗಮರ ಪಾದೋದಕವು ಪರಮಾರ್ಥಜ್ಞಾನವನ್ನು ಮಾಡಿಕೊಡುವದು, ಪ್ರಸಾದನ್ನ ಅಂಗದ ಅಹಂಕಾರ ಮತ್ತು ಭೋಗಭಾವನೆ ಇವುಗಳನ್ನು ಅಳಿಸಿಬಿಟ್ಟು ಲಿಂಗಭೋಗೋಪಭೋಗಿಯಾಗಲಿಕ್ಕೆ ಸಹಾಯಕವಾಗುವದು, ವಿಭೂತಿಯು ಅಂತರ್ಬಾಹ್ಯನಿರ್ಮಲತೆಯನ್ನು ಸಾಧಿಸಿಕೊಡುವದು, ರುದ್ರಾಕ್ಷಿಯು ಒಳಗಣ್ಣನ್ನು ತೆರೆಯಲು ಸಹಾಯಕವಾಗುವದು, ಮತ್ತು ಲಿಂಗಧಾರಣೆಯು ಪರಮಾತ್ಮಸಾನ್ನಿಧ್ಯದ ನಿರಂತರ ನೆನಪುಕೊಟ್ಟು ಅಂಗ ಗುಣಗಳನ್ನು ಕಳೆದು ಲಿಂಗಗುಣಗಳನ್ನು ಅಳವಡಿಸಲು ಸಹಾಯ ಮಾಡುವದು.

೧೮೮. ತ್ಯಾಗಾಂಗದ ಈ ಎರಡು ಸ್ಥಳಗಳಾದ ಬಳಿಕ ಭೋಗಾಂಗದಲ್ಲಿ ಪ್ರಸಾದಿ ಮತ್ತು ಪ್ರಾಣಲಿಂಗಿ ಎಂಬ ಸ್ಥಳಗಳಿರುವವು. ಶಿವನಿಗೆ ಅನರ್ಪಿತವಾದುದನ್ನು ಎಂದಿಗೂ ಸೇವಿಸದೆ ಇರುವದು ಮತ್ತು ಶಿವನಿಗೆ ಅರ್ಪಿತವಾದುದನ್ನು ಪ್ರಾಣಾಂತಿಕದಲ್ಲಿಯೂ ಬಿಡದಿರುವದು, ಪ್ರಸಾದಿ ಸ್ಥಲದ ಮುಖ್ಯ ಲಕ್ಷಣವು. ತ್ಯಾಗದಿಂದ ವಿಷಯಾಸಕ್ತಿಯು ಅಳಿದ ಬಳಿಕ ಬಂದ ಭೋಗಗಳನ್ನೆಲ್ಲ ನಿರ್ಮಲಮನಸಿನಿಂದ ಲಿಂಗಕ್ಕೆ ಅರ್ಪಿಸಿ ನಂತರ ಪ್ರಸಾದವೆಂದು ಅದನ್ನು ಭೋಗಿಸುತ್ತ ಹೋದರೆ ಅಂಗಗುಣಗಳ ಮತ್ತು ವಾಸನೆಗಳ ಕ್ಷಯವಾಗುತ್ತ ಹೋಗುವದು. ಮುಂದೆ ಎಲ್ಲ ಬಾಹ್ಯ ಪದಾರ್ಥಗಳ ಬಗ್ಗೆ ಇದ್ದ ಅನುರಾಗವು ನಷ್ಟವಾಗಿ ಲಿಂಗವೇ ತನ್ನ ಪ್ರಾಣವು, ತನ್ನ ಸರ್ವಸ್ವವು, ತನ್ನ ಪ್ರಾಣ ಬೇರೆಯಲ್ಲ ಲಿಂಗ ಬೇರೆಯಲ್ಲ, ಎಂಬ ಭಾವವು ನೆಲೆಗೊಂಡರೆ ಅದು ಪ್ರಾಣಲಿಂಗಿ ಸ್ಥಲವು. ಪ್ರಾಣ, ಲಿಂಗ, ಶಿವ ಈ ಮೂರರಲ್ಲಿ ಏಕಬುದ್ಧಿ ಇರುವವನೆ ಪ್ರಾಣಲಿಂಗಿ ಎನಿಸುವನು. ಭೋಗಾಂಗದ ಈ ಎರಡು ಸ್ಥಳಗಳಾದ ಬಳಿಕ ಯೋಗಾಂಗದಲ್ಲಿ ಶರಣ ಮತ್ತು ಐಕ್ಯ ಎಂಬ ಎರಡು ಸ್ಥಳಗಳಿರುವವು. ಈಷಣತ್ರಯಗಳನ್ನು ಅಂದರೆ ವಿತ್ತೇಚ್ಛೆ, ಪುತ್ರೇಚ್ಛೆ, ಮತ್ತು ಲೋಕೇಚ್ಛೆ ಇವುಗಳನ್ನು ದಾಟಿ ನಿತ್ಯಶಿವಧ್ಯಾನದಲ್ಲಿ ರತವಿರುವದು ಶರಣಸ್ಥಲದ ಮುಖ್ಯ ಲಕ್ಷಣವು. ಆ ಮೇಲೆ ಶಿವಲಿಂಗದಲ್ಲಿ ಯಾವಾಗಲೂ ಐಕ್ಯವನ್ನನುಭವಿಸುತ್ತಲಿರುವದು ಐಕ್ಯಸ್ಥಲದ ಮುಖ್ಯ ಲಕ್ಷಣವು.

೧೪೯. ಇನ್ನು ಅಂಗಸ್ಥಲ ಲಿಂಗಸ್ಥಲಗಳ ಅನ್ವಯವನ್ನು ನೋಡುವ. ಅಂಗಸ್ಥಲದ ಭೋಗಾಂಗ, ತ್ಯಾಗಾಂಗ, ಯೋಗಾಂಗಗಳು ಲಿಂಗಸ್ಥಳದ ಇಷ್ಟ, ಪ್ರಾಣ, ಮಹಾಲಿಂಗಗಳನ್ನು ಅನ್ವಯಿಸುವವು. ತ್ಯಾಗಾಂಗದಲ್ಲಿರುವ ಭಕ್ತ ಮತ್ತು ಮಹೇಶ ಸ್ಥಳಗಳು ಇಷ್ಟಲಿಂಗದಲ್ಲಿರುವ ಆಚಾರಲಿಂಗ ಮತ್ತು ಗುರುಲಿಂಗಗಳನ್ನು ಅನ್ವಯಿಸುವವು. ಭೋಗಾಂಗದಲ್ಲಿರುವ ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲಗಳು ಪ್ರಾಣಲಿಂಗದಲ್ಲಿಯ ಶಿವಲಿಂಗ ಮತ್ತು ಚರಲಿಂಗ ಅಥವಾ ಜಂಗಮಲಿಂಗಗಳನ್ನು ಅನ್ವಯಿಸುವವು. ಅದೇ ರೀತಿ ಯೋಗಾಂಗದಲ್ಲಿರುವ ಶರಣಸ್ಥಲ ಮತ್ತು ಐಕ್ಯಸ್ಥಲ ಇವು ಭಾವಲಿಂಗದಲ್ಲಿರುವ ಪ್ರಸಾದಲಿಂಗ ಮತ್ತು ಮಹಾಲಿಂಗಗಳನ್ನು ಅನ್ವಯಿಸುವವು. ಈ ಆರು ಲಿಂಗಸ್ಥಲ ಅಂಗಸ್ಥಲಗಳು ಶಕ್ತಿ ಭಕ್ತಿಗಳ ಅಧಿಷ್ಠಾನವಿರುವವು. ಆಯಾ ಸ್ಥಳಗಳಲ್ಲಿ ಇದ್ದ ಶಕ್ತಿ ಭಕ್ತಿಗಳ ವಿವರವು ವಚನ ಶಾಸ್ತ್ರಸಾರದಲ್ಲಿ (ಪು. ೯೧–೯೨) ಹೇಳಲ್ಪಟ್ಟಿರುವದು. ಲಿಂಗಸ್ಥಲವೆಂದರೆ ಶಕ್ತಿಸ್ಥಲವು ಮತ್ತು ಅಂಗಸ್ಥಲವೆಂದರೆ ಭಕ್ತಿಸ್ಥಲವು ಎಂದು ಮೇಲೆಯೆ ಹೇಳಿದೆ. ಲಿಂಗಸ್ಥಲದಲ್ಲಿರುವ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ ಇಲ್ಲವೆ ಜಂಗಮಲಿಂಗ, ಪ್ರಸಾದಲಿಂಗ, ಮತ್ತು ಮಹಾಲಿಂಗ ಈ ಆರು ಸ್ಥಲಗಳಲ್ಲಿ ಕ್ರಮವಾಗಿ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಮತ್ತು ಚಿತ್‌ಶಕ್ತಿ ಇವುಗಳ ಅಧಿಷ್ಠಾನವಿರುವದು. ಅದೇರೀತಿ ಅಂಗಸ್ಥಲಗಳಲ್ಲಿರುವ ಭಕ್ತಸ್ಥಲ, ಮಹೇಶಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ, ಮತ್ತು ಐಕ್ಯಸ್ಥಲ ಇವುಗಳಲ್ಲಿ ಕ್ರಮವಾಗಿ ಸದ್ಭಕ್ತಿ, ಸೈಷ್ಮಿಕಾಭಕ್ತಿ, ಅವಧಾನಭಕ್ತಿ, ಅನುಭಾವಭಕ್ತಿ, ಆನಂದಭಕ್ತಿ, ಮತ್ತು ಸಮರಸಭಕ್ತಿ ಇವುಗಳ ಅಧಿಷ್ಠಾನವಿರುವದು. ಈ ರೀತಿ ಒಟ್ಟಿಗೆ ಷಟ್‌ಸ್ಥಲವಿವೇಕವಿರುವದು.

೧೫೦. ಈ ಮೂಲ ಷಟ್‌ಸ್ಥಲಗಳಿಂದ ಮುಂದೆ ಇವುಗಳ ಪರಸ್ಪರ ಸಂಮಿಶ್ರಣದಿಂದ ೩೬,೨೧೬, ಮತ್ತು ೧೦೧ ಸ್ಥಲಗಳು ಆಗುವವು ಎಂದು ವಿಧವಿಧವಾಗಿ ಕಲ್ಪಿಸಲ್ಪಟ್ಟಿದೆ. ಅದು ಹೇಗಂದರೆ, ಈ ಸ್ಥಲಗಳು ಪರಸ್ಪರ ಭಿನ್ನ, ಅಥವಾ ವ್ಯತಿರಿಕ್ತ ಅಥವಾ ವಿರುದ್ಧವಿಲ್ಲ. 'ಉದಾ: ಭಕ್ತಸ್ಥಲವನ್ನು ದಾಟಿ ಮಹೇಶಸ್ಥಲಕ್ಕೆ ಹೋದವನು ಭಕ್ತಸ್ಥಲದ ಆಚಾರಗಳನ್ನು ಬಿಟ್ಟು ಬಿಡಬೇಕೆಂದು ನಿರ್ಬಂಧವಿಲ್ಲ. ಅದೇ ರೀತಿ ಮಹೇಶಸ್ಥಲದ ವೃತ್ತಿಯಿಂದ ಭಕ್ತಸ್ಥಲದ ಆಚಾರಗಳನ್ನು ಅಥವಾ ಭಕ್ತಸ್ಥಲದ ವೃತ್ತಿಯಿಂದ ಮಹೇಶ ಸ್ಥಲದ ಆಚಾರಗಳನ್ನು ಪಾಲಿಸಲಿಕ್ಕೆ ಬರುವದಿಲ್ಲವೆಂದು ಹೇಳಲಿಕ್ಕೆ ಆಗದು.

ಬಸವಣ್ಣನ ಉದಾಹರಣೆಯನ್ನೆ ನೋಡಿದರೆ ಅವನು ಐಕ್ಯಸ್ಥಲವನ್ನು ಮುಟ್ಟಿದ್ದರೂ ಕೊನೆಯವರೆಗೂ ಭಕ್ತಾಚಾರವನ್ನು ಅವನು ಬಿಟ್ಟಿರಲಿಲ್ಲ. ಹೀಗಿದ್ದರೂ ವ್ಯವಹಾರದಲ್ಲಿ ಅವನಿಗೆ 'ಐಕ್ಯನ ಭಕ್ತ' ಎಂದು ಯಾರೂ ಅಂದಿಲ್ಲ. ಎಲ್ಲ ವಚನಕಾರರೂ ಅವನಿಗೆ ಪರಮಭಕ್ತನೆಂದೆ ಅನ್ನುತ್ತ ಒಂದಿರುವರು. ಈ ಮೂವತ್ತಾರು ಮುಂತಾದ ಸ್ಥಲವಿಭೇದಗಳ ಹೆಸರುಗಳು ಕೇವಲ ಬೌದ್ಧಿಕವಿದ್ದು ಅವು ವ್ಯವಹರಣೆಯಲ್ಲಿ ವಿಶೇಷ ಎಲ್ಲಿಯೂ ಬಂದಿಲ್ಲವೆಂದರೂ ಸಲ್ಲುವದು. ಒಂದೇ ಭಕ್ತಸ್ಥಲದಲ್ಲಿ, ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗಿ, ಭಕ್ತನ ಶರಣ, ಮತ್ತು ಭಕ್ತನ ಐಕ್ಯ, ಎಂದು ಆರು ಸ್ಥಲಗಳನ್ನು ಕಲ್ಪಿಸಬಹುದು. ಇನ್ನುಳಿದ ಮಹೇಶಾದಿ ಐದು ಸ್ಥಲಗಳಲ್ಲಿ ಹೀಗೆಯೆ ಮಹೇಶನ ಭಕ್ತ, ಮಹೇಶನ ಮಹೇಶ ಇತ್ಯಾದಿ, ಪ್ರಸಾದಿಯ ಭಕ್ತ, ಪ್ರಸಾದಿಯ ಮಹೇಶ ಇತ್ಯಾದಿ ಆರಾರು ಸ್ಥಲಗಳನ್ನು ಕಲ್ಪಿಸಿದರೆ ಒಟ್ಟಿಗೆ ೩೬ ಸ್ಥಲಗಳಾಗುವವು. ಇನ್ನೊಂದು ರೀತಿಯಿಂದಲೂ ೩೬ ಸ್ಥಲಗಳನ್ನು ಕಲ್ಪಿಸುವದುಂಟು. ಅಂಗದ ಭಕ್ತಸ್ಥಲಾದಿ ಒಂದೊಂದು ಸ್ಥಲವನ್ನು ಲಿಂಗದ ಆಚಾರಲಿಂಗಾದಿ ಆರು ಸ್ಥಲಗಳೊಡನೆ ಸಂಯೋಗಿಸುವುದರಿಂದ ೩೬ ಸ್ಥಲಗಳಾಗುವವು. ಉದಾ: ಭಕ್ತನ ಆಚಾರಲಿಂಗ, ಭಕ್ತನ ಗುರುಲಿಂಗ, ಭಕ್ತನ ಶಿವಲಿಂಗ, ಭಕ್ತನ ಚರಲಿಂಗ, ಭಕ್ತನ ಪ್ರಸಾದಲಿಂಗ, ಮತ್ತು ಭಕ್ತನ ಮಹಾಲಿಂಗ ಎಂದು ಆರು ಆಗುವವು. ಇದೇ ಕ್ರಮದಿಂದ ಉಳಿದ ಮಹೇಶಾದಿ ಐದು ಸ್ಥಳಗಳನ್ನು ಉಳಿದ ಐದು ಗುರುಲಿಂಗಾದಿ ಸ್ಥಳಗಳೊಡನೆ ಹೊಂದಿಸಿದರೆ ಎಲ್ಲ ಕೂಡಿ ೩೬ ಸ್ಥಲಗಳಾಗುವವು. ಇನ್ನು ೨೧೬ ಸ್ಥಲಗಳನ್ನು ಕಲ್ಪಿಸಿದ ಬಗೆ ಹೇಗೆ? ಮೇಲೆ ಭಕ್ತನ ಭಕ್ತ, ಭಕ್ತನ ಮಹೇಶ, ಎಂದು ಮುಂತಾಗಿ ಹೇಳಿದ ಅಂಗದ ೩೬ ಸ್ಥಲಗಳನ್ನು ಲಿಂಗದ ಆಚಾರಲಿಂಗಾದಿ ೬ ಸ್ಥಲಗಳೊಡನೆ ಕ್ರಮವಾಗಿ ಸಂಯೋಗಿಸುವುದರಿಂದ ೩೬×೬=೨೧೬ ಸ್ಥಲಗಳಾಗುವವು. ಇನ್ನು ಏಕೋತ್ತರ ಶತಸ್ಥಲಗಳನ್ನು ಹೇಗೆ ಕಲ್ಪಿಸಿರುವರೆಂದರೆ, ೬ ಲಿಂಗಸ್ಥಲಗಳಲ್ಲಿ ಕ್ರಮವಾಗಿ ೧೩,೯,೯,೯,೯,೯, ಹೀಗೆ ಒಟ್ಟು ೭೭ ಸ್ಥಲಗಳನ್ನು ಮತ್ತು ೬ ಅಂಗ ಸ್ಥಲಗಳಲ್ಲಿ ಕ್ರಮವಾಗಿ ೪,೪,೫,೭,೯,೧೫ ಹೀಗೆ ಒಟ್ಟು ೪೪ ಸ್ಥಲಗಳನ್ನು ಕಲ್ಪಿಸಿ ಒಟ್ಟು ೧೦೧ ಸ್ಥಲಗಳನ್ನು ಮಾಡುವರು. ಇವೆಲ್ಲವುಗಳ ವಿವರ ಮತ್ತು ಹೆಸರು ಬೇಕಾಗಿದ್ದರೆ ಸ್ಥಲವೃಕ್ಷವನ್ನು ನೋಡಬಹುದು. ಮೊದಲು ರೇಣುಕನು ೧೦೧ ಸ್ಥಳಗಳನ್ನು ಕಲ್ಪಿಸಿದನು (ಜ. ತೈ) ಎಂದು ಹೇಳುವರು. ಆದರೆ ಅವನ ಗ್ರಂಥವು ಉಪಲಬ್ಧವಿಲ್ಲ. ಸದ್ಯಕ್ಕೆ ಸಿದ್ಧಲಿಂಗೇಶ್ವರನ 'ಏಕೋ

ತ್ತರಶತಸ್ಥಲ'ದಲ್ಲಿ ಅದರ ವಿವರವು ಚನ್ನಾಗಿ ಕೊಡಲ್ಪಟ್ಟಿದೆ. ಗುಬ್ಬಿಯ ಮಲ್ಲಣ್ಣನ ಷಟ್‌ಸ್ಥಲಜ್ಞಾನಸಾರಾಮೃತವೂ ೧೦೧ ಸ್ಥಳಗಳ ವಿವರವನ್ನು ಹೇಳಿದೆ. ಜಕ್ಕಣಾರ್ಯನೂ ನೂರೊಂದು ಸ್ಥಲ ಎಂಬ ಗ್ರಂಥವನ್ನು ಬರೆದಿರುವನು. ಬಸವೇಶನೆಂಬ ಕವಿಯು ಪದ್ಯೈಕೋತ್ತರಶತಸ್ಥಲ ಎಂಬುದರಲ್ಲಿ ಇದೇ ವಿಷಯವನ್ನು ಪ್ರತಿಪಾದಿಸಿರುವನು. ಇದಲ್ಲದೆ ಐಕ್ಯಸ್ಥಲದಾಚೆಗೆ ಒಂದು ನಿರವಯ ಅಥವಾ ಅತೀತಸ್ಥಲವಿರುವದೆಂದು ಒಮ್ಮೊಮ್ಮೆ ಉಲ್ಲೇಖವಿರುವದು. ಆದರೆ ಅದು ಐಕ್ಯಸ್ಥಲದಲ್ಲಿಯ ಅತ್ಯಂತಿಕ ಮೆಟ್ಟು ಎಂದು ತಿಳಿಯುವೇಕೇ ಹೊರತು ಅದೊಂದು ಬೇರೆ ಪ್ರತ್ಯೇಕ ಸ್ಥಲವೆಂದು ಕಲ್ಪಿಸುವ ಕಾರಣವಿಲ್ಲ. ಇನ್ನು ಈ ಕೆಳಗೆ ೬ ಲಿಂಗಸ್ಥಲಗಳನ್ನು ಮತ್ತು ೬ ಅಂಗಸ್ಥಲಗಳನ್ನು, ಶಕ್ತಿ ಭಕ್ತಿಗಳ ಸ್ಥಾನಗಳನ್ನು ಸ್ಪಷ್ಟಗೊಳಿಸಲು ಪ್ರಯತ್ನಪಟ್ಟಿರುವೆವು:-



ಇವು ೬ ಲಿಂಗಸ್ಥಳಗಳಾದವು. ಇನ್ನು ಅಂಗಸ್ಥಳಗಳು:—



ಇವು ೬ ಅಂಗಸ್ಥಳಗಳು, ಆಯಾ ಸ್ಥಳಗಳಲ್ಲಿಯ ಭಕ್ತಿಯು ಅವುಗಳ ಅಡಿಯಲ್ಲಿಯೆ ತೋರಿಸಲ್ಪಟ್ಟಿದೆ.

೧೯೧. ಇದುವರೆಗೆ ಶೈವಾಗಮಗಳಲ್ಲಿಯ ಮತ್ತು ಪಚನಶಾಸ್ತ್ರದಲ್ಲಿಯ ತತ್ವಜ್ಞಾನ, ಪಾರಮಾರ್ಥಿಕ ಧ್ಯೇಯ, ಷಟ್‌ಸ್ಥಲವೆಂಬ ಸಾಧನ, ಇವುಗಳ ವಿವರಣವಾಯಿತು. ಇನ್ನು ವೀರಶೈವ ಸಾಂಪ್ರದಾಯದ ಆಚಾರಗಳ ಬಗ್ಗೆ ಹಲವು ಮುಖ್ಯ ಮಾತುಗಳನ್ನು ಹೇಳಿ ಈ ಪ್ರಕರಣವನ್ನು ಮುಗಿಸಬೇಕೆನ್ನುತ್ತೇವೆ. ಶೈವನೆಂದರೆ ಶಿವಭಕ್ತನು, ಶಿವನೇ ಪರನು, ದೈವತವೆಂದು ತಿಳಿಯುವವನು. ವೀರಶೈವನೆಂದರೆ ಶೈವಸರ್ವೋತ್ತಮನು. ಶೈವರಲ್ಲಿ ಆಗಮಕಾರರು ಒಮ್ಮೆ ಅನಾದಿ ಶೈವಾದಿ ಏಳು ಭೇದಗಳನ್ನೂ ಇನ್ನೊಮ್ಮೆ ಸಾಮಾನ್ಯ ಶೈವಾದಿ ನಾಲ್ಕು ಭೇದಗಳನ್ನೂ ಮತ್ತೊಮ್ಮೆ ಶುದ್ಧ ಶೈವಾದಿ ಐದು ಭೇದಗಳನ್ನೂ ಮಾಡಿ ಅವುಗಳ ಲಕ್ಷಣಗಳನ್ನು ಕೊಟ್ಟಿರುವರು (ಸೂಕ್ಷ್ಮಾ. ಪ. ೭ ವಾತುಲ. ಪ. ೧೦. ಮತ್ತು ಪಾರ.

ಪ. ೧೭). ಜಾತಿ ಅಥವಾ ಆಚಾರ ಈ ಎರಡು ತತ್ವಗಳನ್ನು ಅನುಲಕ್ಷಿಸಿ ಈ ವರ್ಗಗಳು ಮಾಡಲ್ಪಟ್ಟಿವೆ ಇಲ್ಲಿ ನಾವು ವೀರಶೈವ ಎಂಬ ಭೇದವನ್ನಿ ಮುಖ್ಯವಾಗಿ ವಿಚಾರಿಸತಕ್ಕದ್ದಿದೆ. ಯಾಕಂದರೆ, ವಜನಶಾಸ್ತ್ರವು ಸಾಂಪ್ರದಾಯಿಕ ದೃಷ್ಟಿಯಿಂದ ನೋಡಿದರೆ ವೀರಶೈವರ ಶಾಸ್ತ್ರವು. ಅದು ಅನ್ಯ ಶೈವವರ್ಗಗಳನ್ನು ಲಕ್ಷಿಸುವದಿಲ್ಲ. ಪ್ರಸಂಗವಶಾತ್ ಆ ವರ್ಗಗಳು ಕಡಿಮೆತರಗತಿಯವೆಂದು ಈ ಶಾಸ್ತ್ರವು ಹೇಳುವದು (ವ. ಪು. ೭೬–೭೭). 'ವೀರ' ಎಂಬ ಉಪಪದವು ಶೈವ, ಶಾಕ್ತ, ಮತ್ತು ವೈಷ್ಣವ ಈ ಮೂರೂ ಪಂಥಗಳಲ್ಲಿಯೂ ಉಪಯೋಗಿಸಲ್ಪಡುವದು. ಶೈವ ಮತ್ತು ವೈಷ್ಣವ ಸಾಂಪ್ರದಾಯಗಳಲ್ಲಿ 'ವೀರ' ಅಂದರೆ ಶ್ರೇಷ್ಠ, ಉತ್ತಮ, ಎಂಬ ಅರ್ಥವು ಆಗುತ್ತಿರುವದು. ಶಾಕ್ತರಲ್ಲಿ 'ವೀರಸಾಧಕ' ಎಂದರೆ ರಜೋಗುಣ ಪ್ರಧಾನವಾದ ಸಾಧಕ, ಎಂಬ ಅರ್ಥವಿರುವದು. ಏಕ ಏವಾಯಮೇ ತಸ್ಮಿನ್ಸರ್ವಸ್ಮಿನ್ ಜಗತೀತಿ ಯಃ। ವಿಶಿಷ್ಟ ಈರ್ಯತೇ ಯಸ್ಮಾದ್ವೀರ ಇತ್ಯಭಿಧೀಯತೇ ॥ ಈ ಜಗತ್ತಿನಲ್ಲಿ ಒಬ್ಬನೇ ಒಬ್ಬನು ಅಥವಾ ಎಲ್ಲಕ್ಕೂ ಹೆಚ್ಚಿನವನು, ಎಂದು ಸಾರುತ್ತಿರುವುದರಿಂದ ಅರ್ಥಾತ್ ಎಲ್ಲಕ್ಕೂ ಹೆಚ್ಚಿನ ಶೈವನು, ಎಂದು ಸಾರುತ್ತಿರುವುದರಿಂದ ಇವನು ವೀರಶೈವನೆನಿಸುವನು, ಎಂದು 'ವೀರಶೈವ'ದ ನಿರುಕ್ತವಿರುವದು (ವಾತುಲ. ಪ. ೧೨. ೫೬–೭೭). ರಣರಂಗದಲ್ಲಿ ಬಂಟನು ಶೌರ್ಯದೋರಿ ವೀರನೆನಿಸುವನು. ಆದರೆ ಭಕ್ತನು ವೈರದಲ್ಲಿ ಇಲ್ಲವೆ ಬಲದಲ್ಲಿ ತನ್ನ ಹೆಚ್ಚಳವನ್ನು ತೋರದೆ ಭಕ್ತಿವೈರಾಗ್ಯಗಳಲ್ಲಿ ತನ್ನ ಶೌರ್ಯವನ್ನು ತೋರಿ ವೀರಶೈವನೆನಿಸುವನು (ಪಾರ. ಪ. ೭. ಶ್ಲೋ. ೫೯). ಆಗಮಗಳಲ್ಲಿ ಅಲ್ಲಲ್ಲಿ 'ವೀರಶೈವ'ನ ಮುಖ್ಯ ಲಕ್ಷಣಗಳು ಕೊಡಲ್ಪಟ್ಟಿರುವವು. ಈ ಪಥದಲ್ಲಿ ಸಾಧಕನು ಶಿವನಿಗೆ ಜೀವವನ್ನು ಅರ್ಪಿಸುವುದರಿಂದಲೂ ಇದು ವೀರಾಗಮದಿಂದ ಉತ್ಪನ್ನವಾಗಿರುವುದರಿಂದಲೂ ಇದರಲ್ಲಿ ವೀರ ಮತ್ತು ಶೈವ ಇವುಗಳ ಸಮಾಯೋಗವಿರುವುದರಿಂದಲೂ ಈ ಮತಕ್ಕೆ ವೀರಶೈವ ಎಂಬ ಹೆಸರು ಇರುವದು. ವೀರಮಾಹೇಶ್ವರರಲ್ಲಿ ಸಾಮಾನ್ಯ, ವಿಶೇಷ, ನಿರಾಭಾರಿ, ಹೀಗೆ ತ್ರಿವಿಧವಿರುವದೆಂದು ವಾತುಲದಲ್ಲಿ (ಪ. ೧೨) ಮತ್ತು ಸೂಕ್ಷ್ಮಾಗಮದಲ್ಲಿ (ಪ. ೭) ಉಲ್ಲೇಖವಿರುವದು. ಈ ಮೂವರಲ್ಲಿ 'ನಿರಾಭಾರಿ'ಯು ಕೇವಲ ಸನ್ಯಾಸಿಯಂತೆ ಸರ್ವಸಂಗಪರಿತ್ಯಾಗಮಾಡಿದ ಶಿವಭಕ್ತನು, ಎಂದು ಹೇಳಬಹುದು. ಪ್ರಾಣಲಿಂಗವ್ರತವು ಅಥವಾ ವೀರಶೈವವ್ರತವು ಲುಪ್ತವಾದರೆ ವೀರಶೈವನಿಗೆ ಪ್ರಾಣತ್ಯಾಗವೆ ಪ್ರಾಯಶ್ಚಿತ್ತವೆಂದು ಹೇಳಲ್ಪಟ್ಟಿರುವದು (ವಾತುಲ. ಪ.

೧೦. ಶ್ಲೋ. ೫೧. ಮತ್ತು ಸೂಕ್ಷ್ಮಾ. ಪ. ೫. ಶ್ಲೋ. ೫೪). ಶಾಸ್ತ್ರವ್ರತಚ್ಯುತನಾದರೆ ಈ ಪ್ರಾಯಶ್ಚಿತ್ತವಾಯಿತು. ಇನ್ನು ಅನ್ಯರು ಈ ಮತವನ್ನು ಇಲ್ಲವೆ ಶಿವನನ್ನು ನಿಂದಿಸಿದರೆ ಅದನ್ನು ಶಮೆಯಿಲಿಕ್ಕೆ ಇದೇ ಬಗೆಯ ಪ್ರಖರ ಉಪಾಯವು ಹೇಳಲಾಗಿದೆ. ಸಾಕಷ್ಟು ಸಾಮರ್ಥ್ಯವಿದ್ದರೆ ಶಿವನಿಂದಕರ ನಾಲಿಗೆಯನ್ನು ಸೀಳಿ ಶಿವಲೋಕಕ್ಕೆ ಹೋಗಬೇಕು, ಅದು ಸಾಧ್ಯವಿರದಿದ್ದರೆ ಸ್ಥಾನತ್ಯಾಗವಾಡಬೇಕು, ಎಂದು ಹೇಳಲ್ಪಟ್ಟಿರುವದು (ವಾತುಲ. ಪ. ೧೦. ಶ್ಲೋ. ೫೨ ಮತ್ತು ಸೂಕ್ಷ್ಮಾ. ಪ. ೬. ಶ್ಲೋ. ೬೦–೬೫). ರಾಗಾದಿದೋಷಗಳನ್ನು ಬಿಡುವುದರಿಂದ, ಅತ್ಮತತ್ವವನ್ನು ವಿಚಾರಿಸುವುದರಿಂದ, ವಿಕಲ್ಪ ಆಕಲ್ಪಗಳನ್ನು ಬಿಡುವುದರಿಂದ ಶೈವನು ವೀರಶೈವನೆನಿಸುವನು (ಸೂಕ್ಷ್ಮಾ. ಪ. ೭. ಶ್ಲೋ. ೫೩–೫೪). ಲಿಂಗಾರ್ಥವಾಗಿ ಎಲ್ಲವನ್ನು ಕೊಡುವುದೆ ಲಿಂಗನಿಷ್ಠೆ ಎನಿಸುವದು, ಲಿಂಗವೆ ಪತಿ ತಾನೇ ಸತಿ, ಎಂಬ ಭಾವದಿಂದ ಪೂರ್ಣನಾದವನೆ ವೀರಶೈವನು (ಸೂಕ್ಷ್ಮಾ. ಪ. ೭. ಶ್ಲೋ. ೫೭–೬೧). ಜಗತ್ತಿನಲ್ಲಿ ನಾನಾ ಲಾಂಛನಧಾರಿಗಳಾದ ಭಕ್ತರಲ್ಲಿ ಶೈವಲಾಂಛನಧಾರಿಗಳೆ ಶ್ರೇಷ್ಠರು, ಅವರಲ್ಲಿ ವೀರಶೈವಾಚಾರಪರಾಯಣರಾದ ಲಿಂಗಾಂಗಿಗಳು ಹೆಚ್ಚಿನವರು, ಅವರಲ್ಲಿ ಮತ್ತೆ ಷಟ್‌ಸ್ಥಲ ಜ್ಞಾನಿಗಳು ಎಲ್ಲಕ್ಕೂ ಶ್ರೇಷ್ಠರು (ಸೂಕ್ಷ್ಮಾ. ಪ. ೯. ಶ್ಲೋ. ೫೬–೫೮). ಶಿವಯೋಗಿಗಳು ವೀರಶೈವರೆನಿಸಬೇಕಾದರೆ ಭಕ್ತಿವೈರಾಗ್ಯಗಳಲ್ಲಿ ವೀರರಿರಲಿಕ್ಕೆಬೇಕು, ಅವರು ಈಷಣತ್ರಯಗಳಿಂದ ಮುಕ್ತರೂ ಜ್ಞಾನವಿಜ್ಞಾನತತ್ಪರರೂ ಇರಲಿಕ್ಕೆಬೇಕು. ಈ ಮುಂತಾದ ಲಕ್ಷಣಗಳು ಪಾರಮೇಶ್ವರದಲ್ಲಿ ವಿವರವಾಗಿ (ಪ. ೮) ಬಂದಿವೆ. ವೀರಶೈವರೆ ಎಲ್ಲಕ್ಕೂ ಶ್ರೇಷ್ಠರು, ಅವರಿಗಿಂತ ಯಾರೂ ಹೆಚ್ಚಿನವರಿಲ್ಲ (ಪಾರ. ಪ. ೮. ಶ್ಲೋ. ೭೧–೭೩). ಮುಕ್ತಿಯು ವೀರಶೈವರೆಂಬವರ ಕರತಲದಲ್ಲಿದೆ, ಇಷ್ಟು ಅವರ ನಿಲವು ಉಚ್ಚವಿರುವದು. ಇದರಲ್ಲಿಯೆ ಅತೀತ ಸ್ಥಿತಿಯನ್ನು ಪಡೆದವರ ವರ್ಣನೆಯು ಪಾರಮೇಶ್ವರದಲ್ಲಿ (ಪ. ೯. ಶ್ಲೋ. ೯೫–೧೦೧) ಇದೆ. ಅತೀತವೀರಶೈವನು ಪಾಪಪುಣ್ಯಾದಿ ದ್ವಂದ್ವಗಳನ್ನು ಸಹ ದಾಟಿದವನಿರುವನು.

೧೯೨. ಈ ಪ್ರಕಾರ ವೀರಶೈವಸಾಂಪ್ರದಾಯದ ಶ್ರೇಷ್ಠತ್ವವು ವರ್ಣಿಸಲ್ಪಟ್ಟಿರುವದು. ಮಿಕ್ಕ ವೀರಶೈವ ಸಾಂಪ್ರದಾಯಗಳಿಗಿಂತ ಇದು ಹೆಚ್ಚು ಶುದ್ಧವೂ ಉತ್ಕಟವೂ ಇರುವದೆಂಬುದು ಮೇಲಿನ ವರ್ಣನೆಯಿಂದ ವ್ಯಕ್ತವಾಗುವದು. ಶಕ್ತಿಮುಖದಿಂದ ಸೃಷ್ಟಿಯನ್ನು ಅಭಿವ್ಯಕ್ತಮಾಡಿದ ಶಿವನೊಡನೆ

ಸಮರಸ ಐಕ್ಯವನ್ನು ಹೊಂದುವುದು ವೀರಶೈವನ ಧ್ಯೇಯವು. ಶಿವನೆಂದರೆ ಲಿಂಗ ಜೀವನೆಂದರೆ ಅಂಗ, ಎಂದು ಭಾವಿಸಿದರೆ, ಲಿಂಗಾಂಗಸಾಮರಸ್ಯವನ್ನು ಸಾಧಿಸುವದು ಅವನ ಗುರಿಯು. ದೀಕ್ಷೆ ಪಡೆದಂದಿನಿಂದ ಅವನ ಸಾಧನಕ್ಕೆ ಪ್ರಾರಂಭವಾಗುವದು. ದೀಕ್ಷೆಯು ಕ್ರಿಯಾದೀಕ್ಷೆ, ಮಾಂತ್ರೀದೀಕ್ಷೆ, ಮತ್ತು ವೇಧಾದೀಕ್ಷೆ ಎಂದು ಮೂರು ಬಗೆಯಿರುವದು. ಗುರುವು ಕ್ರಿಯಾದೀಕ್ಷೆಯಿಂದ ಇಷ್ಟಲಿಂಗವನ್ನು, ಮಾಂತ್ರೀದೀಕ್ಷೆಯಿಂದ ಪ್ರಾಣಲಿಂಗವನ್ನು, ವೇಧಾದೀಕ್ಷೆಯಿಂದ ಭಾವಲಿಂಗವನ್ನು ಸಾಧಕನ ಹಸ್ತ, ಪ್ರಾಣ, ಆತ್ಮಗಳಲ್ಲಿ ಸ್ಥಾಪಿಸುವನು. ಇಷ್ಟಲಿಂಗವನ್ನು ಬೇರೆಬೇರೆ ಲೋಹಗಳಿಂದ ಮಾಡುವದು ಸಾಧ್ಯವಿದ್ದರೂ ಅವುಗಳ ಫಲಗಳು ಬೇರೆಬೇರೆ, ಎಂದು ಹೇಳಲ್ಪಟ್ಟಿದ್ದರೂ ಶಿಲಾಮಯಲಿಂಗವೆ ಸರ್ವಫಲದಾಯಕವೆಂದು ನಿರ್ಣಯವು ಮಾಡಲ್ಪಟ್ಟಿದೆ. ಒಮ್ಮೆ ಲಿಂಗಧಾರಣೆಯಾದಬಳಿಕ ವೀರಶೈವನು ಶುಚಿರ್ಭೂತನಾಗಿ ಅದನ್ನು ನಿತ್ಯ ತ್ರಿಕಾಲದಲ್ಲಿ ಪೂಜಿಸತಕ್ಕದ್ದು, ಮಿಕ್ಕ ಯಾವ ಸ್ಥಾವರ ಅಥವಾ ಪಾರ್ಥಿವ ಲಿಂಗವನ್ನಾಗಲಿ, ಪ್ರತೀಕವನ್ನಾಗಲಿ ಪೂಜಿಸತಕ್ಕದ್ದಲ್ಲ, ಮತ್ತು ಲಿಂಗಧಾರಣೆಮಾಡಿದವರಲ್ಲಿ ಜಾತಿ, ವರ್ಣ, ಲಿಂಗ, ವಯ ಇವುಗಳ ಭೇದಾಭೇದಗಳನ್ನು ಲೆಕ್ಕಿಸತಕ್ಕದ್ದಲ್ಲ. ಲಿಂಗಧಾರಣೆಮಾಡಿದವನು ಸಾಕ್ಷಾತ್ ಶಿವನೇ ಇರುವನೆಂದು ವೀರಶೈವನ ಭಾವನೆಯು ಇರಲಿಕ್ಕೆಬೇಕು. ಆದುದರಿಂದ ಸ್ಪರ್ಶಾಸ್ಪರ್ಶ, ಶೌಚಾಶೌಚ ಮುಂತಾದ ಪಂಚಸೂತಕಗಳು ವೀರಶೈವರಿಗೆ ಬಂಧಕವಿಲ್ಲ (ವ. ಪು. ೩೩೪-೩೩೫). ಲಿಂಗಧಾರಿಯಾದ ವೀರಶೈವನು ಮುಂದೆ ಭವಿಗಳೊಡನೆ ಅಂದರೆ ಲಿಂಗಧಾರಣೆಯನ್ನು ಮಾಡದೆ ಇದ್ದವರೊಡನೆ ಹಾಗೂ ಶಿವನನ್ನು ಬಿಟ್ಟು ಅನ್ಯದೇವತೆಯ ಪೂಜೆ ಮಾಡುವವರೊಡನೆ ಯಾವ ಸಂಬಂಧವನ್ನೂ ಇಡಕೂಡದ್ದು. ಪ್ರತ್ಯಕ್ಷ ತಾಯಿತಂದೆಗಳು ಭವಿಗಳಿದ್ದರೂ ಅವರ ಸಂಗವನ್ನು ಬಿಟ್ಟುಬಿಡಲಿಕ್ಕೆಬೇಕು (ವ. ಪು. ೭೮). ಅತ್ಯಂತ ಪತಿವ್ರತೆಯು ತನ್ನ ಗಂಡನೊಡನೆ ಯಾವ ಅನನ್ಯಭಾವದಿಂದ ನಡೆದುಕೊಳ್ಳುವಳೊ ಅದೇ ಭಾವದಿಂದ ವೀರಶೈವನು ಲಿಂಗದೊಡನೆ ನಡೆದುಕೊಳ್ಳತಕ್ಕದ್ದು. ಪರಮಾತ್ಮಪ್ರತೀಕವಾದ ಲಿಂಗದ ಧಾರಣೆ ಮತ್ತು ಅದರ ನಿತ್ಯ ಅನನ್ಯಪೂಜೆಯು ವೀರಶೈವನಿಗೆ ಎಷ್ಟು ಅವಶ್ಯವೊ ಅಷ್ಟೇ ಗುರು ಮತ್ತು ಜಂಗಮ ಪೂಜೆಯು ಅವಶ್ಯವಿರುವದು. ಶಿವಬುದ್ಧಿಯಿಂದ ಜಂಗಮಾರ್ಚನೆಯನ್ನು ಮಾಡಬೇಕು; ಯಾಕಂದರೆ, ಪರಮಾತ್ಮನು ಅಕಾಯನು ಇಲ್ಲವೆ ಭಕ್ತಕಾಯನು, ಎಂದು ವರ್ಣಿಸಲ್ಪಟ್ಟಿರುವನು. ಗುರು

ಲಿಂಗಜಂಗಮರ ಪಾದೋದಕ ಮತ್ತು ಪ್ರಸಾದ ಇವುಗಳ ಗ್ರಹಣವೂ ವೀರಶೈವರಿಗೆ ವಿಧಿಸಲ್ಪಟ್ಟಿರುವದು. ಈ ಆಚಾರದಲ್ಲಿ ಉಚ್ಛಿಷ್ಟಾದಿ ದೋಷಗಳನ್ನು ಎಣಿಸಕೂಡದೆಂದು ನಿರ್ಬಂಧವಿರುವದು. ಈ ಎಲ್ಲ ಕರ್ಮಗಳನ್ನು ವಿಭೂತಿರುದ್ರಾಕ್ಷಿಗಳನ್ನು ಧಾರಣಮಾಡಿಯೆ ಆಚರಿಸತಕ್ಕದ್ದು. ಇದಲ್ಲದೆ ಷಡಕ್ಷರಿಮಂತ್ರದ ಜಪವೊಂದು ಅವನಿಗೆ ಅವಶ್ಯವಾದ ಸಾಧನವು. ಅದು ವಿಶೇಷತಃ ಧ್ಯಾನಕ್ಕೆ ಸಹಾಯಕರವು. ಇವು ಅಷ್ಟಾವರಣಗಳಾದವು.

೧೯೩. ಇನ್ನು ಇವುಗಳ ಜೊತೆಗೆ ಈ ಸಾಂಪ್ರದಾಯದಲ್ಲಿ ಸದಾಚಾರ, ಗಣಾಚಾರ, ನಿತ್ಯಾಚಾರ, ಶಿವಾಚಾರ, ಮತ್ತು ಲಿಂಗಾಚಾರ ಎಂಬ ಐದು ಆಚಾರಗಳಿರುವವು. ಅವುಗಳಲ್ಲಿ ಸದಾಚಾರವೆಂದರೆ ಶುದ್ಧ ಆಚಾರವು ಅರ್ಥಾತ್ ಯಮನಿಯಮಾದಿಗಳಿಂದ ಯುಕ್ತವಾಗಿ, ಮದ್ಯಮಾಂಸಾದಿಗಳನ್ನೆಲ್ಲ ಸಂಪೂರ್ಣ ಬಿಟ್ಟು, ಶುದ್ಧ ಸಾತ್ವಿಕ ಕರ್ಮಗಳನ್ನೆ ಮಾಡುತ್ತ ಇರುವದು; ಪ್ರಾಣಾಹುತಿಯನ್ನು ಕೊಟ್ಟು ಸಹ ಸತ್ಯ ಮತ್ತು ಧರ್ಮ ಇವುಗಳ ರಕ್ಷಣ ಮಾಡುವದು ಗಣಾಚಾರವೆನಿಸುವದು; ನಿತ್ಯನೈಮಿತ್ತಿಕ ಕರ್ಮಗಳಾದ ಗುರುಲಿಂಗಜಂಗಮಪೂಜೆ, ಕಾಯಕ, ದಾಸೋಹ ಮುಂತಾದವುಗಳನ್ನು ತಪ್ಪದೆ ಮಾಡುತ್ತಿರುವುದೆ ನಿತ್ಯಾಚಾರವು; ಲಿಂಗಧಾರಿಗಳನ್ನು ಶಿವಭಾವದಿಂದ ಆದರಿಸಿ, ಸತ್ಕರಿಸಿ, ಪೂಜಿಸಿ ಅವರನ್ನು ಸಂತೋಷಗೊಳಿಸುವುದೆ ಶಿವಾಚಾರವು; ಕೊನೆಗೆ ನಿಷ್ಠಾಪೂರ್ವಕವಾಗಿ ಲಿಂಗಧಾರಣೆ ಮತ್ತು ಲಿಂಗಪೂಜೆ ಮಾಡುವುದು ಇದು ಲಿಂಗಾಚಾರವು. ದೇಹಮನಾದಿಗಳಿಗೆ ವ್ಯರ್ಥ ಸಂತಾಪವಾಗುವಂತಹ ವ್ರತಾದಿಗಳನ್ನು ಇಲ್ಲವೆ ಹೋಮಹವನ ಯಜ್ಞಯಾಗಾದಿಗಳನ್ನು ವೀರಶೈವರು ಮಾಡಕೂಡದು ಎಂದು ಸ್ಪಷ್ಟವಾಗಿ ಶಿವನ ಆಜ್ಞೆ ಇರುವದು (ಪಾರ. ಪ. ೧೭. ಶ್ಲೋ. ೮೦). ಅಗ್ನಿಹೋತ್ರ, ಯಜ್ಞ, ದಕ್ಷಿಣೆ ಕೊಡುವದು ಇವುಗಳಿಗಿಂತ ಶಿವಲಿಂಗಾರ್ಚನವು ಒಂದು ಕೋಟಿ ಪಾಲು ಹೆಚ್ಚು–ಶಿವಲಿಂಗಾರ್ಚನಸ್ಯೈತೇ ಕೋಟ್ಯಂಶೇನಾಪಿ ನೋ ಸಮಃ, ಎಂದು ಕಾಮಿಕ ಆಗಮದ ವಚನವಿರುವದು (ಅರ್ಚನವಿಧಿ ಪಟಲ. ಶ್ಲೋ. ೧೧). ವೀರಶೈವನು ಅಷ್ಟಾವರಣ ಮತ್ತು ಪಂಚಾಚಾರ ಇವುಗಳ ಸಾಧನದಿಂದ ಷಟ್‌ಸ್ಥಲಗಳಲ್ಲಿಯ ಆರು ಮೆಟ್ಟಿಲುಗಳನ್ನು ಪತ್ತಿ ಸಿದ್ಧನಾಗುವನು. ಮೊದಲು ಭಕ್ತಸ್ಥಲದಲ್ಲಿ ನಿರಹಂಕಾರಿಯೂ ಬಳಿಕ ಮಹೇಶಸ್ಥಲದಲ್ಲಿ ಸುಚಿತ್ತನೂ ನಂತರ ಪ್ರಸಾದಿಸ್ಥಲದಲ್ಲಿ ಸುಬುದ್ಧಿಯೂ ಆಮೇಲೆ ಪ್ರಾಣಲಿಂಗಿಸ್ಥಲದಲ್ಲಿ ಸುಮನಸ್ಕನೂ ತದನಂತರ ಶರಣಸ್ಥಲದಲ್ಲಿ ಸುಜ್ಞಾನಿಯೂ ಆಗಿ ಕೊನೆಗೆ ಅವನು ಶಿವೈಕ್ಯವನ್ನು ಹೊಂದುವನು. ವೀರ

ಶೈವನ ನಿತ್ಯನೈಮಿತ್ತಿಕ ಕರ್ಮಗಳಾವು ಎಂದು ದೇವಿಯು ಕೇಳಿದ್ದಕ್ಕೆ ಶಿವನು ಪಾರಮೇಶ್ವರದಲ್ಲಿ (ಪ. ೧೭. ಶ್ಲೋ. ೩೬–೬೬) ಅವುಗಳನ್ನು ವಿವರವಾಗಿ ಹೇಳಿರುವನು. ವೀರಶೈವನಿಗೆ ಭಕ್ತಿಯೇ ಮುಖ್ಯ ಸಾಧನವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆ ಭಕ್ತಿಯ ಲಕ್ಷಣವೇನು ಮತ್ತು ಅದರಿಂದ ಮೋಕ್ಷವು ಹೇಗೆ ಪ್ರಾಪ್ತವಾಗುವದು, ಎಂದು ಪಾರ್ವತಿಯು ಕೇಳಲು ಶಿವನು ಆಕೆಗೆ ಪಾರಮೇಶ್ವರದಲ್ಲಿ (ಪ. ೨೨, ಶ್ಲೋ. ೩೪–೫೦). ಅದನ್ನು ಚನ್ನಾಗಿ ಬೋಧಿಸಿರುವನು. ವೀರಶೈವನು ಯಾವ ಶ್ರೇಷ್ಠ ಗುಣಗಳಿಂದ ಯುಕ್ತನಿರಬೇಕು, ಅವನು ಯಾವ ಯಮನಿಯಮಾದಿಗಳನ್ನು ಪಾಲಿಸಬೇಕು, ಎಂಬ ಮುಂತಾದ ವಿಷಯಗಳು ಈ ಮೊದಲೇ ಈ ಪ್ರಕರಣದಲ್ಲಿ ಮತ್ತೊಂದೆಡೆಗೆ ಬಂದಿವೆ. ಅವುಗಳ ವಿವರವನ್ನು ನೋಡಬೇಕಾಗಿದ್ದರೆ ಪಾರಮೇಶ್ವರ (ಪ. ೨೨. ಶ್ಲೋ. ೯೩–೧೦೨, ಪ. ೧೭ ಶ್ಲೋ. ೩೪–೩೫, ಪ. ೧೫. ಶ್ಲೋ. ೩೫–೩೪, ಪ. ೯. ಶ್ಲೋ. ೨೨–೨೪, ಪ. ೭. ಶ್ಲೋ. ೪೦–೬೦), ಸೂಕ್ಷ್ಮ (ಪ. ೬. ಶ್ಲೋ. ೩೧) ಈ ಆಗಮಗಳಲ್ಲಿ ನೋಡಬಹುದು.

೧೯೪. ಈ ರೀತಿ ವೀರಶೈವ ಸಾಂಪ್ರದಾಯದ ಮುಖ್ಯ ಮಾತುಗಳಿರುವವು. ಇನ್ನು ವಚನಕಾರರು ಸಾಮಾನ್ಯವಾಗಿ ಎಲ್ಲ ಮುಖ್ಯ ಮಾತುಗಳಲ್ಲಿ ಆಗಮಕಾರರನ್ನೆ ಹಿಂಬಾಲಿಸಿ ನಡೆದಿದ್ದರೂ ಹಲಕೆಲವು ಮಾತುಗಳಲ್ಲಿ ಅವರು ಸ್ವಲ್ಪ ಭಿನ್ನಾಭಿಪ್ರಾಯಗಳನ್ನು ವ್ಯಕ್ತಮಾಡಿರುವರು ಮತ್ತು ಆಗಮಗಳಲ್ಲಿಯ ಕೆಲವೊಂದು ಮಾತುಗಳನ್ನು ವಿಶೇಷ ಒತ್ತಿ ಹೇಳಿರುವರು. ಅವುಗಳಲ್ಲಿ ಕೆಲವು ಸಂಗತಿಗಳನ್ನು ಹೇಳಿ ಈ ಪ್ರಕರಣವನ್ನು ಮುಗಿಸುವೆವು. ಇಲ್ಲಿ ಮುಖ್ಯವಾಗಿ ಅಂಥ ನಾಲ್ಕು ಸಂಗತಿಗಳನ್ನು ನಾವು ಹೇಳುವೆವು.

(೧) ಹಲವು ಆಗಮಗಳಲ್ಲಿ ವರ್ಣೋತ್ಪತ್ತಿ, ವರ್ಣಗಳ ಸ್ಥಾನ, ಜಕ್ಕಗಳು, ಮುಂತಾದವುಗಳಿಗೆ ಬಹಳ ಮಹತ್ವವು ಕೊಡಲ್ಪಟ್ಟಿದೆ (ವಾತುಲ ಪ. ೨–೩). ವಚನಕಾರರು ಅವುಗಳಿಗೆ ಯಾವ ಸ್ಥಾನವನ್ನೂ ಕೊಟ್ಟಿಲ್ಲ.

(೨) ಇಷ್ಟಲಿಂಗವು ಕಳೆದರೆ ಇಲ್ಲವೆ ಭಿನ್ನವಾದರೆ ವೀರಶೈವರಿಗೆ ಪ್ರಾಣಾಂತ ಪ್ರಾಯಶ್ಚಿತ್ತವೆಂದು ಆಗಮಗಳು ಹೇಳಿರುವವು. ಆದರೆ ವಚನಕಾರರು ಇದನ್ನು ಅಲ್ಲಗಳೆದು ಇಷ್ಟಲಿಂಗವೆಂಬುದು ಎಂದಿಗೂ ಭಿನ್ನವಾಗದು ಮತ್ತು ಕಳೆಯದು, ಎಂದು ಪ್ರತಿಪಾದಿಸಿ ಪ್ರಾಣತ್ಯಾಗ ಮಾಡಕೂಡದು ಎಂದು ಹೇಳಿರುವರು (ವ, ಪು. ೨೯೬–೩೦೨).

(೩) ಹಲವು ಆಗಮಗಳಲ್ಲಿ ಇನ್ನೂ ಜಾತಿಭೇದಕ್ಕೆ ಅನುವು ಮತ್ತು ಮಹತ್ವವು ಕೊಡಲ್ಪಟ್ಟಂತೆ ತೋರುವದು. ಉದಾ:– ಸೂಕ್ಷ್ಮಾಗಮದ ಏಳನೆಯ ಪಟಲದಲ್ಲಿ ಶೈವರಲ್ಲಿಯ ಸಪ್ತ ಭೇದಗಳು ಜಾತ್ಯನುಕ್ರಮದಿಂದ, ಎಂದು ಹೇಳಲ್ಪಟ್ಟಿರುವವು. ಕಾರಣಾಗಮದಲ್ಲಿ ಶೂದ್ರಪ್ರತಿಷ್ಠಿತಲಿಂಗವು ಹನ್ನೆರಡು ವರ್ಷ ಅನ್ಯರಿಗೆ ಪೂಜೆಗೆ ಬಾರದು, ಎಂದು ಹೇಳಿದೆ. ಬ್ರಾಹ್ಮಣ, ಕ್ಷತ್ರಿಯ ಇವರಿಂದ ಪ್ರತಿಷ್ಠಿತವಾದ ಲಿಂಗವು ಎಲ್ಲರಿಗೂ ಹಿತಕರ ಮತ್ತು ಪುಣ್ಯಕರ ಮತ್ತು ದರ್ಶನ ಯೋಗ್ಯ ಎಂದು ಅದೇ ಆಗಮದ ಕರ್ಷಣವಿಧಿ ಪಟಲದಲ್ಲಿ (ಶ್ಲೋ, ೧೩–೧೫) ಹೇಳಿದೆ. ಸ್ತ್ರೀಶೂದ್ರರಿಗೆ ಪ್ರಣವರಹಿತ ಮಂತ್ರವನ್ನು ಕೊಡಬೇಕು, ಇಲ್ಲದಿದ್ದರೆ ಅದು ವ್ಯರ್ಥವಾಗುವದು, ಎಂದು ಸೂಕ್ಷ್ಮಾಗಮದಲ್ಲಿ (ಪ. ೩ ಶ್ಲೋ. ೨೫–೨೬) ಹೇಳಿದೆ. ವಚನಕಾರರು ಈ ಮಾತುಗಳನ್ನು ಮನ್ನಿಸಿಲ್ಲ. ಒಮ್ಮೆ ಲಿಂಗದೀಕ್ಷೆಯಾದಬಳಿಕ ಯಾವ ಭೇದವನ್ನೂ ಇಡಕೂಡದು, ಎಂದು ವಚನಕಾರರ ಪ್ರತಿಪಾದನವಿರುವದು.

(೪) ಆಗಮಗಳಲ್ಲಿ ಕ್ವಚಿತ್ ಪ್ರಸಂಗಗಳಲ್ಲಿ ನಿಷ್ಕಾಮಕರ್ಮದ ಮಹತ್ವವು ಹೇಳಲ್ಪಟ್ಟಿದ್ದರೂ (ಸೂಕ್ಷ್ಮ. ಪ. ೬. ಶ್ಲೋ. ೩೫) ಕಾಯಕದ ಮಹತ್ವವು ವಚನಗಳಲ್ಲಿ ಯಾವರೀತಿಯಿಂದ ಮತ್ತು ಎಷ್ಟರಮಟ್ಟಿಗೆ ಹೊಗಳಲ್ಪಟ್ಟಿದೆಯೊ ಆ ಮಟ್ಟಿಗೆ ಅದು ಅವುಗಳಲ್ಲಿಲ್ಲ.

---

೧೧. ತುಲನಾತ್ಮಕ ಪ್ರಕರಣವು

(೧೯೫) ತುಲನೆಯ ಉದ್ದೇಶ ಮತ್ತು ವಿಷಯಗಳು. (೧೯೬) ದೇಶ ಕಾಲ ಭಾಷೆಗಳು ಬೇರೆ ಇದ್ದರೂ ಸಂತರ ಉಪದೇಶವು ಒಂದೇ. (೧೯೭) ಪರಮಾತ್ಮವಸ್ತುವಿನ ವರ್ಣನೆ. (೧೯೮) ಸಾಕ್ಷಾತ್ಕಾರದಿಂದ ಪರಮಾತ್ಮದರ್ಶನವು. (೧೯೯) ಉಪನಿಷತ್ಕಾರರ ಸಾಕ್ಷಾತ್ಕಾರವು. (೨೦೦) ಯುರೋಪಿಯನ್ ಸಾಕ್ಷಾತ್ಕಾರವಾದಿಗಳು. (೨೦೧) ಇಸ್ಲಾಮೀ ಸಾಕ್ಷಾತ್ಕಾರಿಗಳು. (೨೦೨) ಮಹಾರಾಷ್ಟ್ರದ ಸಾಧುಸತ್ಪುರುಷರು. (೨೦೩) ದಾಸರ ಸಾಕ್ಷಾತ್ಕಾರವು. (೨೦೪) ಸಾಕ್ಷಾತ್ಕಾರದ ಮುಖ್ಯ ಲಕ್ಷಣಗಳು. (೨೦೫) ಸಾಕ್ಷಾತ್ಕಾರದ ಹಸಿವು. (೨೦೬) ಭಕ್ತಿ ಎಂಬ

ಸಾಧನವು ಮತ್ತು ಉತ್ತಮ ಭಕ್ತಿಯ ಲಕ್ಷಣಗಳು. (೨೦೭) ಉಪನಿಷತ್ಕಾಲದಲ್ಲಿ ಮತ್ತು ತದುತ್ತರ ಕಾಲದಲ್ಲಿ ಭಕ್ತಿ. (೨೦೮) ಭಕ್ತಿಮಾರ್ಗವನ್ನು ಕುರಿತು ಅನ್ಯ ಸಾಧುಸಜ್ಜನರ ವಿಚಾರಗಳು. (೨೦೯) ಭಕ್ತಿಮಾರ್ಗದಲ್ಲಿ ಸತಿಪತಿಭಾವವು–ಅದರ ಇಷ್ಟಾನಿಷ್ಟತೆ. (೨೧೦) ಕ್ರಿಶ್ಚನ್ ಹಾಗೂ ಅನ್ಯ ಸಾಧುಸತ್ಪುರುಷರ ಸತಿಪತಿಭಾವವು. (೨೧೧) ನಾಮ ಮಹಿಮೆ. (೨೧೨) ಉಪನಿಷತ್ ಮತ್ತು ಗೀತೆ ಇವುಗಳಲ್ಲಿ ಜ್ಞಾನ, ಕರ್ಮ, ಧ್ಯಾನಾದಿ ಸಾಧನಮಾರ್ಗಗಳು. (೨೧೩) ಈ ವಿಷಯದಲ್ಲಿ ಆರ್ಯಧರ್ಮಕ್ಕೂ ಅನ್ಯಧರ್ಮಗಳಿಗೂ ಇರುವ ಭೇದವು. (೨೧೪) ಮಹಾರಾಷ್ಟ್ರ ಹಾಗೂ ಅನ್ಯ ಸಾಧುಗಳೂ ಜ್ಞಾನಾದಿ ಸಾಧನಮಾರ್ಗಗಳೂ. (೨೧೫) ಸಾಧಕನ ನೀತಿಗುಣಶೀಲಗಳು ಹೇಗೆ ಇರಬೇಕು ಈ ಬಗ್ಗೆ ಉಪನಿಷತ್ ಮತ್ತು ಗೀತೆ ಇವುಗಳ ಮತವು. (೨೧೬) ಮೇಲಿನ ವಿಷಯವನ್ನು ಕುರಿತು ಅನ್ಯ ಸಾಧುಸಂತರ ವಿಚಾರಗಳು. (೨೧೭) ಗುರುಮಹಾತ್ಮ್ಯವು ಮತ್ತು ಸಜ್ಜನಸಂಗದ ಅವಶ್ಯಕತೆಯು. (೨೧೮) ಉಪನಿಷತ್ ಮತ್ತು ಗೀತೆ ಇವುಗಳಲ್ಲಿ ಉಚ್ಚನೀಚಭಾವರಹಿತವಾದ ಸಮದೃಷ್ಟಿಯ ಉಪದೇಶವು. (೨೧೯) ಅನ್ಯ ಸಂತಮಂಡಲಿಯ ಸಮಭಾವವು. (೨೨೦) ಎಲ್ಲ ಸಾಧುಗಳ ಮತ್ತು ಸತ್ಪುರುಷರ ಪ್ರಧಾನ ವಿಚಾರಗಳು ಒಂದೇ.

೧೯೫. ನಮ್ಮ ಬುದ್ಧಿಯ ಬೆಳಕಿನ ನೆರವಿನಿಂದ ಮತ್ತು ಅದರ ಬಲದ ಮಟ್ಟಿಗೆ ವಚನಶಾಸ್ತ್ರದ ರಹಸ್ಯವನ್ನು ಅರಸುತ್ತರಸುತ್ತ ನಾವು ಇಲ್ಲಿಯವರೆಗೆ ಬಂದದ್ದಾಯಿತು. ಶಿವಶರಣರು ತಮ್ಮ ಸಾಕ್ಷಾತ್ಕಾರವನ್ನು ಸಾಕ್ಷಿಯಿಟ್ಟುಸುರಿದ ಒಡನುಡಿಗಳ ಗುಟ್ಟನ್ನು ಜನರಿಗೆ ಬಿಡಿಸಿ ತೋರಿಸಲು ಈ ಪುಟಗಳು ಎಷ್ಟರಮಟ್ಟಿಗೆ ಸಮರ್ಥವಾಗಿವೆ ಎಂಬುದನ್ನು ವಾಚಕರೇ ಡನ್ನಾಗಿ ಬಲ್ಲರು. ಇನ್ನು ಈ ತುಲನಾತ್ಮಕ ಪ್ರಕರಣವನ್ನು ಬರೆದು ಈ ಗ್ರಂಥದ ಉಪಸಂಹಾರವನ್ನು ಮಾಡುವ ವಿಚಾರವಿದೆ. ಸಾಕ್ಷಾತ್ಕಾರ ಪೂರ್ವಕವಾಗಿ ಇಲ್ಲವೆ ಧರ್ಮಸ್ಫೂರ್ತಿಯಿಂದ ಬರೆಯಲ್ಪಟ್ಟ ಗ್ರಂಥಗಳಲ್ಲಿಯ ಮುಖ್ಯ ಮಾತುಗಳು ಯಾವದೇ ದೇಶದಲ್ಲಿ, ಕಾಲದಲ್ಲಿ, ಅಥವಾ ಭಾಷೆಯಲ್ಲಿ ಬರೆಯಲ್ಪಟ್ಟಿದ್ದರೂ ಅವು ಒಂದೇ ಇರುವವು ಮತ್ತು ವಚನಶಾಸ್ತ್ರದಲ್ಲಿಯ ಮಾತುಗಳು ಇಂಥವಿರುವವು, ಎಂಬುದನ್ನು ತೋರಿಸುವುದೆ ಈ ಪ್ರಕರಣದ ಮೂಲ ಉದ್ದೇಶವು. ಇದುವರೆಗೆ ಬರೆದ ಪ್ರಕರಣಗಳಲ್ಲಿ ಅಲ್ಲಲ್ಲಿ ಈ ಬಗೆಯ ತುಲನೆಯನ್ನು ನಾವು ಮಾಡಬಹುದಾಗಿತ್ತು. ಆದರೆ

ಹಾಗೆ ಮಾಡುವುದರಿಂದ, ಅಲ್ಲಲ್ಲಿ ಅನೇಕ ಬೇರೆ ಗ್ರಂಥಗಳ ಅವತರಣಗಳನ್ನು ಇಲ್ಲವೆ ಸಂದರ್ಭಗಳನ್ನು ಕೊಡುವುದರಿಂದ ಓದುಗರಿಗೆ ಒಣ ತೊಡಕನ್ನುಂಟುಮಾಡಿದಂತಾಗುತ್ತಿದೆ, ಎಂದು ನಮ್ಮ ತಿಳಿವಳಿಕೆ. ಅದಕ್ಕಿಂತ ಒಮ್ಮೆ ಸರಲವಾಗಿ ಶುದ್ಧ ವಚನಶಾಸ್ತ್ರದ ವಿಚಾರವನ್ನು ಮಾಡಿ, ಒಂದು ತುಲನಾತ್ಮಕ ಪ್ರಕರಣವನ್ನು ಪ್ರತ್ಯೇಕವಾಗಿ ಬರೆಯುವದು ನಮಗೆ ಹೆಚ್ಚು ಯೋಗ್ಯವೆನಿಸಿತು. ವಚನಕಾರರು ಸಂತರು, ಸತ್ಪುರುಷರು, ಸತ್ಯಾನ್ವೇಷಿಗಳು, ಸಾಕ್ಷಾತ್ಕಾರಿಗಳು, ಸತ್ಯವಚನಿಗಳು, ಸ್ವಾನುಭವದಿಂದ ಸತ್ಯವನ್ನು ನುಡಿದವರು. ಅಂದಬಳಿಕ ಇವರ ಮಾತುಗಳು ಅನ್ಯ ದೇಶಕಾಲಭಾಷೆಗಳಲ್ಲಿ ಇಂಥವರೆ ಬರೆದ ಮಾತುಗಳಿಗೆ ಸರಿಹೋಗದೆ ಇನ್ನೇನು ಮಾಡಬಲ್ಲವು? ಈ ವಿಷಯವು ಬಹಳ ದೊಡ್ಡದಿರುವದು ಮತ್ತು ಇದನ್ನು ಕುರಿತು ಒಂದು ಪ್ರತ್ಯೇಕ ಗ್ರಂಥವನ್ನೆ ಬರೆಯುವಷ್ಟು ಮಹತ್ವದ್ದೂ ವಿಶಾಲವೂ ಇರುವದು. ಇದೇ ಸಂದರ್ಭದಲ್ಲಿ ವಚನಕಾರರಲ್ಲಿಯು ಹಲವು ಮಹನೀಯರ ಜರಿತ್ರೆಗಳನ್ನು ಜಗತ್ತಿನಲ್ಲಿಯು ಅನ್ಯ ಪ್ರಾಂತದ ಮತ್ತು ದೇಶದ ಸಾಧುಸತ್ಪುರುಷರ ಜೀವನಕ್ರಮದೊಡನೆ ಹೋಲಿಸಿಯೂ ಬರೆಯಬಹುದು. ಆದರೆ ಇಲ್ಲಿ ಅಷ್ಟು ಉದ್ದ ನೀರಲ್ಲಿ ನಾವು ಸೇರಲಾರೆವು. ವಚನಗಳಲ್ಲಿ ಬಂದ ಹಲವು ಮುಖ್ಯ ವಿಷಯಗಳನ್ನು ಆರಿಸಿ, ಅವುಗಳನ್ನು ಕುರಿತು ಉಪನಿಷತ್ಕಾರರು, ಗೀತಾಕಾರರು, ಮಹಾರಾಷ್ಟ್ರ ಸಂತರು, ಕ್ರಿಶ್ಚನ್ ಸಾಧುಗಳು, ಮುಸಲ್ಮಾನ ಸತ್ಪುರುಷರು ಮತ್ತು ಕೊನೆಗೆ ಕನ್ನಡದಲ್ಲಿ ಬರೆದ ದಾಸರು ಏನು ಅಂದಿರುವರು, ಇದನ್ನು ನೋಡಿ ಈ ಪ್ರಕರಣವನ್ನು ಮುಗಿಸಬೇಕೆನ್ನುವೆವು. ಇದೇ ರೀತಿ ರಾಮಾನಂದ, ಚೈತನ್ಯ, ತುಲಸೀದಾಸ, ಕಬೀರ, ನಾನಕ, ಮೀರಾಬಾಯಿ, ದಕ್ಷಿಣದ ಅಪ್ಪರ್, ತಿರುವಲ್ಲರ್, ಮಾಣಿಕ್ಯ ವಚಗರ್, ಅಂದಲ್ ಮುಂತಾದವರ ವಚನಗಳನ್ನು ಈ ವಚನಗಳೊಡನೆ ಹೋಲಿಸುವದು ಬಹಳ ಬೋಧಕರವೂ ರಂಜಕವೂ ಆಗಬಲ್ಲದು. ಆದರೆ ಅದನ್ನೆಲ್ಲ ಮಾಡುವ ಮಹತ್ವಾಕಾಂಕ್ಷೆಯನ್ನು ಬಿಗಿಹಿಡಿದು, ಇಲ್ಲಿ ಪರಿಮಿತ ಸೀಮೆಯಲ್ಲಿದ್ದು ನಮ್ಮ ಕಾರ್ಯವನ್ನು ಮಾಡುವದು ಅವಶ್ಯವಿರುವದು. ವಚನಗಳನ್ನು ಶೈವಾಗಮಗಳೊಡನೆ ಇಲ್ಲಿ ಹೋಲಿಸಿನೋಡುವ ಕಾರಣವಿಲ್ಲ, ಯಾಕಂದರೆ ವಚನಶಾಸ್ತ್ರಕ್ಕೆ ಅವು ಮಾತೃಸ್ಥಾನದಲ್ಲಿದ್ದಂತೆಯೆ ಇರುವವು ಮತ್ತು ಈ ಮಾತನ್ನು ಸಿದ್ಧಪಡಿಸಲಿಕ್ಕೆ ಸಾಕಷ್ಟು ಆಗಮಗಳ ಅವತರಣಗಳು ಈ ಗ್ರಂಥದಲ್ಲಿ ಈ ಮೊದಲು ಎಷ್ಟೋ ಕಡೆಗೆ ಬಂದುಬಿಟ್ಟಿವೆ. ನಾವು ವಚನಗಳಲ್ಲಿಯ ಈ ಕೆಳಗಿನ

ವಿಷಯಗಳನ್ನು ಆರಿಸಬೇಕೆನ್ನುತ್ತೇವೆ— ಪರಮಾತ್ಮನ ಸ್ವರೂಪವರ್ಣನೆ, ಸಾಕ್ಷಾತ್ಕಾರ, ಆ ಅನುಭವದ ಅನಿರ್ವಚನೀಯತೆ ಅದರ ಆನಂದ ಮುಂತಾದವು, ಸತ್ಯಸಾಕ್ಷಾತ್ಕಾರದ ಬಗ್ಗೆ ಉತ್ಕಟ ಇಚ್ಛೆ, ಸಂಪೂರ್ಣ ಅನುಭವಯುಕ್ತ ಜ್ಞಾನವಾಗಬೇಕಾದರೆ ನಿರ್ವ್ಯಾಜಭಕ್ತಿಯೆ ಮುಖ್ಯ ಸಾಧನವು ಎಂಬ ವಿಧಾನವು, ಉತ್ತಮಭಕ್ತಿಯ ಲಕ್ಷಣಗಳು, ಸತಿಪತಿಭಾವವು, ನಾಮಮಹಾತ್ಮ್ಯವು, ಕರ್ಮ ಧ್ಯಾನ ಜ್ಞಾನ ಮುಂತಾದ ಸಾಧನಗಳು, ನಿಷ್ಕಾಮಕರ್ಮ ಮತ್ತು ಕಾಯಕದ ಮಹತ್ವವು, ನೀತಿ ಮತ್ತು ಯಮನಿಯಮಗಳು, ಸತ್ಸಂಗದ ಮಹತ್ವವು, ಗುರುಮಹಾತ್ಮ್ಯವು, ಉಚ್ಚನೀಚ ಭಾವರಹಿತ ಸಮದೃಷ್ಟಿಯ ಅವಶ್ಯಕತೆಯು, ಇತ್ಯಾದಿ. ಇವುಗಳಲ್ಲಿ ಒಂದೊಂದನ್ನೆ ತೆಗೆದುಕೊಂಡು ಅವುಗಳ ಬಗ್ಗೆ ವಚನಗಳ ಮತ್ತು ಅನ್ಯ ಗ್ರಂಥಗಳ ಇಲ್ಲವೆ ಅನ್ಯ ಸಾಧುಸಂತರ ಅಭಿಪ್ರಾಯಗಳೇನಿರುವವು ಇದನ್ನು ನೋಡುವ.

೧೯೬. ನಾವು ಮೇಲೆ ಆರಿಸಿದ ವಿಷಯಗಳಲ್ಲಿ ಸಾಂಪ್ರದಾಯಿಕವೆಂಬವು ಯಾವವೂ ಇಲ್ಲ, ಮತ್ತು ಆ ವಿಷಯಗಳನ್ನು ಕುರಿತು ಇರುವ ವಚನಕಾರರ ಸಾಂಪ್ರದಾಯಿಕ ವಿಚಾರಗಳನ್ನು ನಾವು ಅನ್ಯ ಸಾಧು ಸತ್ಪುರುಷರ ವಚನಗಳೊಡನೆ ಹೋಲಿಸಲಿಕ್ಕೆ ಹೋಗುವದಿಲ್ಲ. ಇಡೀ ಮಾನವಕುಲವೆಂಬುದೊಂದು ಕುಟುಂಬವು, ಮನುಷ್ಯನ ಸಾಮಾನ್ಯ ಸ್ವಭಾವವು ಎಲ್ಲಿಹೋದರೂ ಒಂದೇ, ಮನುಷ್ಯನು ಯಾವಾಗಲೂ ಸತ್ಯವನ್ನು ಸಾಕ್ಷಾತ್ಕರಿಸಬೇಕು ಎಂಬ ಹವಣುಳ್ಳವನು, ತನ್ನ ಆಧ್ಯಾತ್ಮಿಕ ಅನುಭವವನ್ನು ಬೇರೆಬೇರೆ ರೀತಿಯಿಂದ ವ್ಯಕ್ತಮಾಡಿದರೂ ಮನುಷ್ಯನ ಆ ಅನುಭವವು ಎಲ್ಲೆಲ್ಲಿಯೂ ಒಂದೇ ಬಗೆಯದ್ದಿರುವದು, ಆ ಅನುಭವವನ್ನು ಪಡೆಯುವುದರಿಂದ ಮನುಷ್ಯನಿಗೆ ಅತ್ಯಂತಿಕ ಆನಂದವು ಪ್ರಾಪ್ತವಾಗುವದು, ಅದನ್ನು ದೊರಕಿಸುವ ಸಾಧನಗಳಾದರೂ ಮನುಷ್ಯಮಾತ್ರನಿಗೆ ಸಾಮಾನ್ಯವಿರುವವು, ಈ ವಿಚಾರಗಳ ಭೂಮಿಕೆಯ ಮೇಲೆ ನಿಂತು ವಚನಕಾರರು ನುಡಿದ ಮಾತುಗಳನ್ನೆ ಎಲ್ಲ ಜನಾಂಗಗಳಲ್ಲಿ ಆಗಿಹೋದ ಸಾಧುಸಜ್ಜನರ ಅಂತಹ ಮಾತುಗಳೊಡನೆ ಹೋಲಿಸುವದುಚಿತವೆಂದು ನಮಗೆ ತೋರುತ್ತಿದೆ. ಈ ವಿವಿಧವಿಶ್ವದಲ್ಲಿ ಪರಮಾತ್ಮನು ಸಮನಾಗಿ ಎಲ್ಲೆಲ್ಲಿಯೂ ವ್ಯಾಪ್ತನಿರುವನು, ಎಂಬುದನ್ನು ಸಾಕ್ಷಾತ್ಕರಿಸುವದು ವಚನಕಾರರ ಧ್ಯೇಯವಿದ್ದಂತೆ ವಿವಿಧಭಾಷೆಗಳ ವಿವಿಧಹೂದಿಕೆಯಲ್ಲಿ ಮುಚ್ಚಿದ್ದರೂ ಸಾಧುಸತ್ಪುರುಷರ ಅನುಭವವಾಣಿಯ ಸಾರವು

ಎಲ್ಲಿಹೋದರೂ ಒಂದೇ ಇರುವದು, ಎಂಬುದನ್ನು ಸ್ಪಷ್ಟವಾಗಿ ತೋರಿಸುವುದೆ ಇಲ್ಲಿ ನಮ್ಮ ಉದ್ದೇಶವಾಗಿದೆ. ಸಾಂಪ್ರದಾಯಗಳ ಬಾಹ್ಯ ಆವರಣಗಳ ಮೂಲಕ, ಬೇರೆಬೇರೆ ದೇಶಕಾಲಭಾಷೆಗಳೆಂಬ ವಿಚಿತ್ರ ಹಾಗೂ ಅಪರಿಚಿತ ಉಡುಪುತೊಡವುಗಳ ಮೂಲಕ, ಸತ್ಪುರುಷರ ಅನುಭವ–ಅಂತಃಕರಣಗಳು ಭಿನ್ನಭಿನ್ನವಿದ್ದಂತೆ ನಮಗೆ ಭಾಸವಾಗುತ್ತಿದೆ. ಸಂಕುಚಿತ ಅಭಿಮಾನದ ಕರೆತೆರೆಯನ್ನು ದೂರ ಸಾರಿ, ಸಹಾನುಭವದ ದೃಷ್ಟಿಯನ್ನು ತಾಳಿ, ನಾವು ಆಳವಾಗಿ ನೋಡಿದರೆ, ವಿಶ್ವಕುಟುಂಬಿಗಳಾದ ಈ ಸಂತಮಂಡಲಿಯ ಕೋಮಲ, ನಿರ್ಮಲ, ನಿಷ್ಕಾಮವಂತ, ಆತುರ ಅಂತರಂಗದಲ್ಲಿ ಒಂದೇ ಬಗೆಯ ಆತ್ಮಸಂಗೀತದ ಮಧುರ ಸ್ವರವು ನಮಗೆ ಕೇಳಬರುವದು ಮತ್ತು ಒಂದೇ ಬಗೆಯ ಪ್ರೇಮಭಾವದ ನಾಟ್ಯವಿಲಾಸವು ಕಂಗೊಳಿಸುವದು. ತಾವು ಕಂಡ ಕಣಸನ್ನು, ತಾವು ಸಂದರ್ಶಿಸಿದ ದರ್ಶನವನ್ನು ಅವರು ಎಲ್ಲರೆದುರಿಗೂ ನಾನಾಭಾಷೆ ನಾನಾರೂಪಕಗಳಲ್ಲಿ ಚಿತ್ರಿಸಿಟ್ಟಿರುವರು. ಆ ದಿವ್ಯದರ್ಶನದ ದಾರಿಯ ಗುರುತುಗಳನ್ನೂ ಕೈಬೆರಳಿನಿಂದ ತೋರಿಸುವರು. ಆ ದರ್ಶನ ಮತ್ತು ಅದರ ದಾರಿ ಇವು ಹೇಗೆ ಇರುವವು, ಏನು, ಇದನ್ನು ಸ್ವಲ್ಪಮಟ್ಟಿಗಾದರೂ ನೋಡುವುದೆ ನಮ್ಮ ಉದ್ದೇಶವಾಗಿರುವದು.

೧೯೭. ಮೊದಲು ಪರಮಾತ್ಮನ ವರ್ಣನೆಯ ಬಗ್ಗೆ ನೋಡುವ. ವಚನಶಾಸ್ತ್ರಸಾರದ ಮೊದಲನೆಯ ಭಾಗದ (ಆವೃತ್ತಿ ೧) ೧–೫೬ ಪುಟಗಳವರೆಗೆ ಪರಮಾತ್ಮನ ಅಥವಾ ಪರಾತ್ಪರಸತ್ಯದ ವರ್ಣನೆಯು ಇರುವದು. ಅದೇ ತರದ ವರ್ಣನೆಯು ಸಾರರೂಪವಾಗಿ ವಚನಾಮೃತದಲ್ಲಿ (೧–೧೫) ಬಂದಿರುವದು. ಆ ವರ್ಣನಾತೀತ, ವಾಙ್ಮನಕ್ಕಗೋಚರ, ನಿತ್ಯ ಸತ್ಯ ವಸ್ತುವಿನ ವರ್ಣನೆಯು ಉಪನಿಷದಾದಿಗಳಲ್ಲಿ ಅದೇ ರೀತಿಯಿಂದ ಕೊಡಲ್ಪಟ್ಟಿರುವದು. ಆ ವಸ್ತುವು ದೂರವೂ ಇಲ್ಲ ಸಮೀಪವೂ ಇಲ್ಲ, ಅದು ಸರ್ವರ ಅಂತರ್ಬಾಹ್ಯದಲ್ಲಿರುವದು, ಅದು ಶುದ್ಧವು, ಅಕಾಯವು, ಎಲ್ಲೆಲ್ಲಿಯೂ ವ್ಯಾಪ್ತವು, ಸ್ವಯಂಭುವು ಇರುವದು, ಸರ್ವಸೃಷ್ಟಪದಾರ್ಥಗಳಿಗೆ ಶಾಶ್ವತವಾದ ನಿಯಮಗಳನ್ನು ಅದೇ ಹಾಕಿಕೊಟ್ಟಿತು, ಎಂದು ಈಶಾವಾಸ್ಯದಲ್ಲಿ ವರ್ಣನೆ ಇರುವದು (ಮಂ. ೫,೮). ಅದು ಅಶಬ್ದ, ಅಸ್ಪರ್ಶ, ಅರೂಪ, ಅರಸ, ಅಗಂಧ, ಅವ್ಯಯ, ನಿತ್ಯ, ಅನಾದಿ, ಅನಂತ ಇರುವದು, ಎಂದು ಕಠದ ಮೊದಲನೆಯ ಅಧ್ಯಾಯದ ೩ನೆಯ ವಲ್ಲಿಯಲ್ಲಿ (ಮಂ. ೧೫) ವರ್ಣಿಸಲ್ಪಟ್ಟಿರುವದು. ಅದು ಅಂತಃಪ್ರಜ್ಞವೂ ಇಲ್ಲ ಬಹಿಃ

ಪ್ರಜ್ಞವೂ ಇಲ್ಲ, ಉಭಯತಃ ಪ್ರಜ್ಞವೂ ಇಲ್ಲ, ಪ್ರಜ್ಞವೂ ಇಲ್ಲ ಅಪ್ರಜ್ಞವೂ ಇಲ್ಲ, ಪ್ರಜ್ಞಾನಘನವೂ ಇಲ್ಲ, ಅದು ಅದೃಷ್ಟವು, ಅವ್ಯವಹಾರ್ಯವು, ಅಗ್ರಾಹ್ಯವು, ಅಲಕ್ಷಣವು, ಅಚಿಂತ್ಯವು, ತೋರಲಿಕ್ಕೆ ಬಾರದ್ದು, ಆತ್ಮಾನುಭವದಿಂದ ಮಾತ್ರ ತಿಳಿಯುವಂತಹದು, ಪ್ರಪಂಚದ ಉಪಶಮವು, ಶಾಂತವು, ಶಿವವು, ಅದ್ವೈತವು ಎಂದು ಮಾಂಡೂಕ್ಯವು (ಮಂ. ೭) ಅದನ್ನು ವರ್ಣಿಸುವದು. ಅದು ಸತ್ಯವು, ಜ್ಞಾನರೂಪವು, ಅನಂತವು, ಎಂದು ತೈತ್ತಿರೀಯದ ಬ್ರಹ್ಮಾನಂದವಲ್ಲಿಯಲ್ಲಿ, ಅದು ಕೇವಲ ಆನಂದಮಯವೆಂದೂ ಅದರಲ್ಲಿಯೆ ಚರಾಚರ ದೃಶ್ಯಾದೃಶ್ಯ ವಿಶ್ವದ ಉತ್ಪತ್ತಿಸ್ಥಿತಿಲಯಗಳಾಗುವವೆಂದೂ ಅದೇ ಉಪನಿಷತ್ತಿನ ಭೃಗುವಲ್ಲಿಯಲ್ಲಿ ವರ್ಣನೆಗಳಿರುವವು. ಇದಿಲ್ಲವು ಬ್ರಹ್ಮವು, ಮೇಲೆ ಕೆಳಗೆ, ಹಿಂದೆ ಮುಂದೆ, ಉತ್ತರಕ್ಕೆ ದಕ್ಷಿಣಕ್ಕೆ ಎಲ್ಲೆಲ್ಲಿಯೂ ಅವನೇ ಇರುವನು (ಛಾಂದೋಗ್ಯ), ಎಂದು, ಬೆಂಕಿಯಿಂದ ಕಿಡಿಗಳು ಸಿಡಿಯುವಂತೆ ಆತ್ಮವಸ್ತುವಿನಿಂದಲೆ ಎಲ್ಲ ಪ್ರಾಣಗಳು, ಲೋಕಗಳು, ಭೂತಗಳು ಹೊರಹೊಮ್ಮುವವು, ಅದು ಅದ್ವೈತವಿರುವುದರಿಂದ ಅಲ್ಲಿ ನೋಡುವದು, ಕೇಳುವದು, ಹೇಳುವದು ತಿಳಿದುಕೊಳ್ಳುವದು, ಎಂಬ ಮುಂತಾದ ಕ್ರಿಯೆಗಳಾವೂ ಆಗಲರಿಯವು, ಅವನು ಅಮೃತನು, ಅದೃಷ್ಟನು, ಅಶ್ರುತನು ಇರುವನು, ನೇತಿ ನೇತಿ ಎಂದೇ ಅವನನ್ನು ವರ್ಣಿಸುವದು ಸಾಧ್ಯವು (ಬೃಹದಾರಣ್ಯಕ), ಎಂದು ಬೇರೆ ಬೇರೆ ಉಪನಿಷತ್ತುಗಳು ಬಗೆಬಗೆಯಿಂದ ಪರಮಾತ್ಮನನ್ನು ವರ್ಣಿಸಿರುವವು. ಗೀತೆಯ ಹದಿಮೂರನೆಯ ಅಧ್ಯಾಯದಲ್ಲಿರುವ 'ಅನಾದಿಮತ್ ಪರಂ ಬ್ರಹ್ಮ' ದಿಂದ ಪ್ರಾರಂಭಮಾಡಿ 'ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತವ್,' (ಗೀ. ೧೩ ೧೭–೧೭) ಎಂಬ ಶ್ಲೋಕದವರೆಗೆ ಇದ್ದ ಪರಮಾತ್ಮನ ವರ್ಣನೆಯು ಅವನ ಅತೀತತ್ವವನ್ನೂ ಅಲಿಪ್ತತ್ವವನ್ನೂ ಹೊಂದ್ದಿಯೂ ಹೊದ್ದದೆ ಇರುವ ಅವನ ಲಕ್ಷಣವನ್ನೂ ಚನ್ನಾಗಿ ವಿವರಿಸುವದು. ಆ ವಸ್ತುವನ್ನು ಹಾಗೆ ವಿರೋಧಾಭಾಸ ರೀತಿಯಿಂದ ವರ್ಣಿಸದೆ ಉಪಾಯವಿಲ್ಲ. ಭಕ್ತಿ ಮಾರ್ಗದಿಂದ ಸಾಗಿದ ಅನೇಕ ಸಾಧಿಸಜ್ಜನರು ದೇವರನ್ನು ಸಗುಣ ಮಾಡಿ, ಅವನು ಕರುಣಾಳುವು, ಕೃಪಾಳುವು, ಭಕ್ತವತ್ಸಲನು, ಎಂದೂ ವಿವಿಧರೂಪಗಳನ್ನು ಧರಿಸಿದವನೆಂದೂ ಬಣ್ಣಿಸಿರುವರು. ಆದರೆ ಅವರು ಎಲ್ಲರೂ ಅವನ ನಿಜರೂಪವನ್ನು ಹೇಳುವಾಗ ವಚನಕಾರರು ಬಣ್ಣಿಸಿದಂತೆಯೆ ಬಣ್ಣಿಸಿರುವರು. ಮಹಾರಾಷ್ಟ್ರ ಸಂತಮಂಡಲಕ್ಕೆ ಗುರುಸ್ಥಾನದಲ್ಲಿರುವ ಜ್ಞಾನದೇವನು ಸತ್ಯಸೂರ್ಯನನ್ನು ವರ್ಣಿಸುವಾಗ, ಅವನು

ಹಗಲಿರುಳಿನಾಚೆ, ಒಳಿತುಕೆಡಕುಗಳಾಚೆ, ಅಖಿಲ ದ್ವಂದ್ವಗಳಾಚೆ ಇರುವನು, ಅವನು ಶಾಶ್ವತ ಜ್ಯೋತಿರೂಪನಾಗಿ ಬೆಳಗುತ್ತಿರುವನು, ಎಂದು ಹೇಳಿ ಏಕಾಕಿಯೂ ಅದ್ವಯನೂ ಇರುವುದರಿಂದ ಅವನಾದರೂ ಏನನ್ನು ಬೆಳಗುವನು, ಎಂಬ ಅಜ್ಞೇಯತ್ವಸೂಚಕ ಪ್ರಶ್ನೆಯನ್ನು ಮಾಡಿರುವನು! ಸೆಂಟ ಆಗಸ್ಟಾಯಿನ (St Augustine) ಎಂಬ ಪ್ರಸಿದ್ಧ ಕ್ರಿಶ್ಚನ್ ಸಾಧುವು ಪರಮಾತ್ಮನೆಂದರೇ ಸತ್ಯ, ಸತ್ಯವೆಂದರೇ ಪರಮಾತ್ಮ, ಎಂದು ಹೇಳಿ ಅವನು ಎಲ್ಲೆಲ್ಲಿಯೂ ವ್ಯಾಪ್ತನು, ಎಂದು ಅಂದಿರುವನು. ಈ ಬಗೆಯಾಗಿ ಮನುಷ್ಯಬುದ್ಧಿಗೆ ತೋಡದ, ವೇದಾಗಮಗಳ ಕೈಗೂ ನಿಲುಕದ, ಎಷ್ಟು ಹೆಣಗಿದರೂ ಹೊಳೆಯದ, ಹೊಳೆದರೂ ತಿಳಿಯದ, ತಿಳಿದರೂ ತಿಳಿಸಲಿಕ್ಕೆ ಬಾರದ, ಏಕರೂಪ, ಏಕರಸ, ಅದ್ವಯ, ಅಖಂಡ ಸತ್ಯವನ್ನು ನಮಗೆ ಶಕ್ಯವಿದ್ದಮಟ್ಟಿಗಾದರೂ ಅರಿತುಕೊಳ್ಳಲಿಕ್ಕೆ ಸಾಕ್ಷಾತ್ಕಾರವೆಂಬುದೊಂದೇ ಉಪಾಯವು. 'ಏಕಾತ್ಮಪ್ರತ್ಯಯಸಾರ' ವಿರುವ ಆ ಪರಮಾತ್ಮನು ಸಾಕ್ಷಾತ್ಕಾರದಿಂದ ತಿಳಿದಮಟ್ಟಿಗೆ ಮಾತ್ರ ತಿಳಿಯಬಲ್ಲನು. ಅದಕ್ಕೂ ಹೆಚ್ಚು ಅವನು ತಿಳಿಯಲಾರನು, ಅದಕ್ಕೂ ಹೆಚ್ಚಿಗೆ ಅವನನ್ನು ನಾವು ಅರಿಯಲಾರೆವು. ಇನ್ನು ಆ ಸಾಕ್ಷಾತ್ಕಾರವನ್ನು ಕುರಿತು ವಿಚಾರಿಸುವ.

೧೯೮. ದೃಶ್ಯ ಮತ್ತು ಗೋಚರ ವಸ್ತುಗಳ ವಿಷಯದಲ್ಲಿ ಪ್ರತ್ಯಕ್ಷವಿ ಎಲ್ಲಕ್ಕೂ ಹೆಚ್ಚಿನ ಪ್ರಮಾಣವಿರುವಂತೆ ಅದೃಶ್ಯ ಮತ್ತು ಅಗೋಚರ ಸತ್ಯವನ್ನು ಕುರಿತು ಸಾಕ್ಷಾತ್ಕಾರವೆ ಎಲ್ಲಕ್ಕೂ ಹೆಚ್ಚಿನ ಪ್ರಮಾಣವಿರುವದು. ಪ್ರತ್ಯಕ್ಷಪ್ರಮಾಣವನ್ನು ಸಾವಿರ ಶ್ರುತಿಗಳು ಸಹ ಬಾಧಿಸಲಾರವು. ಉದಾ: ಬೆಂಕಿಯು ಸುಡುವದು ಅಥವಾ ಸೂರ್ಯನು ಬೆಳಗುವನು, ಎಂಬ ಪ್ರತ್ಯಕ್ಷಪ್ರಮಾಣಿತವಾದ ಮಾತನ್ನು ಯಾವ ವೇದಶಾಸ್ತ್ರಪುರಾಣಾಗಮ ಆಪ್ತವಾಕ್ಯತರ್ಕಾದಿಗಳೂ ನಿರಾಕರಿಸಲಾರವು. ಒಳಗಣ್ಣಿನಿಂದ ಅನುಭವಿಸಿದ ಸಾಕ್ಷಾತ್ಕಾರವು ಇದರಂತೆಯೆ ಬದ್ಧಮೂಲವೂ ಮನಗಾಣಿಸುವಂತಹದೂ ಕಾಯಮನಸಭಾವಗಳನ್ನು ಪೂರ್ಣವಾಗಿ ವ್ಯಾಪಿಸುವಂತಹದೂ ನಮ್ಮ ಇಡೀ ಚಿತ್ತದಲ್ಲಿ ಶ್ರದ್ಧೆಯನ್ನು ನೆಲೆಗೊಳಿಸುವಂತಹದೂ ಇರುವದು. ಇಂತಹ ಸಾಕ್ಷಾತ್ಕಾರವೆ ಆತ್ಯಂತಿಕಸತ್ಯದ ಒರೆಗಲ್ಲು, ಎಂದು ವಚನಕಾರರ ಸಿದ್ಧಾಂತವಿರುವದು. ಸಾಕ್ಷಾತ್ಕಾರವು ಸಾಧಕನನ್ನು ನಿಸ್ಸಂದೇಹ ಮಾಡುವದು, ಅವನ ಸಾಧನಪಥವನ್ನು ಶಾಶ್ವತವಾಗಿ ನಿಶ್ಚಯಗೊಳಿಸುವದು, ಅವನಲ್ಲಿ ಧನ್ಯಭಾವವನ್ನುಂಟುಮಾಡುವದು, ಇನ್ನು ಪಡೆಯತಕ್ಕದ್ದೇನೂ ಇಲ್ಲವೆಂಬ ಕೃತಕೃತ್ಯತೆಯನ್ನು ಅಳವಡಿಸುವದು, ಮತ್ತು

ನಿರಾಲಂಬ ಆನಂದಲಹರಿಗಳನ್ನು ಉಕ್ಕೇರಿಸುವದು. ಆ ಸಾಕ್ಷಾತ್ಕಾರವು ನಿತ್ಯವಾಯಿತೆಂದರೆ, ಅದು ಅವನನ್ನು ಸಿದ್ಧಕೋಟಿಗೇರಿಸಿ ಜೀವನ್ಮುಕ್ತನನ್ನಾಗಿ ಮಾಡುವದು. ವಚನಾಮೃತದ ೬ನೆಯ ಮತ್ತು ೭ನೆಯ ಪ್ರಕರಣಗಳಲ್ಲಿ ಸಾಕ್ಷಾತ್ಕಾರ ಮತ್ತು ಸಾಕ್ಷಾತ್ಕಾರಿಯ ನಿಲವು ಇವುಗಳ ಬಗ್ಗೆ ವಚನಗಳು ಇರುವವು. ಸಾಕ್ಷಾತ್ಕಾರದಲ್ಲಿ ದ್ವಂದ್ವಾತೀತ ನಿರ್ಗುಣ ಪರಬ್ರಹ್ಮನ ಸಾಕ್ಷಾತ್ಕಾರವೆ ಎಲ್ಲಕ್ಕೂ ಹೆಚ್ಚಿನದು ಮತ್ತು ಆಚೆಗಿನದು. ಯಾಕಂದರೆ, ಅದರಾಚೆಗೆ ಯಾರೂ ಹೋಗಲರಿಯರು. ಆ ಸಾಕ್ಷಾತ್ಕಾರವು ನಿರ್ವಿಕಲ್ಪಸಮಾಧಿಸ್ಥಿತಿಯಲ್ಲಿ ಆಗಬಲ್ಲದು. ಅದು ಅವರ್ಣನೀಯವು; ಅನಿರ್ವಚನೀಯವು. ಇದಲ್ಲದೆ ಬೇಕೆಬೇಕೆಯವರಿಗೆ ತೇಜೋರೂಪದ, ಇಲ್ಲವೆ ಅನಾಹತಧ್ವನಿರೂಪದ, ಇಲ್ಲವೆ ಸೂಕ್ಷ್ಮಸ್ಪರ್ಶರೂಪದ ಸಾಕ್ಷಾತ್ಕಾರವು ಪ್ರತೀತವಾಗುವದುಂಟು. ಅದು ಯಾವದೇ ಬಗೆಯದ್ದಿದ್ದರೂ ಮೇಲೆ ಹೇಳಿದ ಅದರ ಪರಿಣಾಮಗಳು ಎಲ್ಲರಲ್ಲಿಯೂ ಸಮಾನವಿರುವವು. ಮುಂದೆ ನಾವು ಕೊಡುವ ಅವತರಣಗಳೊಡನೆ ವಚನಗಳನ್ನು ಹೋಲಿಸಿದೇಕಾದರೆ ಮೇಲೆ ಹೇಳಿದ ವಚನಾಮೃತದ ಪ್ರಕರಣಗಳನ್ನು ಪೂರ್ಣ ನೋಡುವದು ಉಚಿತವಾಗುವದು. ನಾವು ಇಲ್ಲಿ ಆ ಪ್ರಕರಣದ ಸಾರಾಂಶ ಮಾತ್ರವನ್ನು ಸ್ವಲ್ಪ ಕೊಡುತ್ತೇವೆ. ಅನುಭಾವವು ಅಥವಾ ಸಾಕ್ಷಾತ್ಕಾರವು ಎಲ್ಲಕ್ಕೂ ಹೆಚ್ಚಿನದು, ಭಕ್ತಿ, ಅರಿವು, ಶಾಸ್ತ್ರಜಾಲ ಇವೆಲ್ಲವುಗಳಿಗಿಂತ ಅನುಭಾವವೆ ಶ್ರೇಷ್ಠವು, ಸ್ವಾನುಭಾವದ ಸುಖವು ವರ್ಣನಾತೀತವಿರುವದು, ಅದರಿಂದಾಗುವ ಆನಂದವು ಅನುಪಮೇಯವು, ಆ ಅನುಭಾವವು ಜ್ಯೋತಿರೂಪವಿರುವದು, ಅದೊಂದು ದಿವ್ಯದರ್ಶನವಿರುವದು, ಎಂಬ ಮುಂತಾದ ವಿಷಯಗಳು ೬ನೆಯ ಪ್ರಕರಣದಲ್ಲಿ ಬಂದಿವೆ. ಸಾಕ್ಷಾತ್ಕಾರಿಗೆ ಒಂದು ಬಗೆಯ ದಿವ್ಯ ಐಕ್ಯಾನುಭವವಾಗುವದು, ಅವನು ಕೃತಾರ್ಥನಾಗುವನು, ಸಮರಸಸುಖದಲ್ಲಿ ಅವನು ಪರಮಾತ್ಮನೊಡನೆ ಓಲಾಡುವನು, ಉರಿಯುಂಡ ಕರ್ಪೂರದಂತೆ ಅವನ ಸ್ಥಿತಿಯಾಗುವದು, ಅವನು ಪುಣ್ಯಪಾಪ, ಕರ್ಮಾಕರ್ಮ ಮುಂತಾದ ದ್ವಂದ್ವಗಳಾಚೆಗೆ ಹೋಗುವನು, ಅವನು ಸಾಕ್ಷಾತ್ ಜ್ಯೋತಿರೂಪನಾಗುವನು, ಸಕಲಬಂಧನಗಳಿಂದ ಅಲಿಪ್ತನೂ ಮುಕ್ತನೂ ಆಗುವನು, ಎಂದು ಮುಂತಾಗಿ ೭ನೆಯ ಪ್ರಕರಣದಲ್ಲಿ ವರ್ಣನೆಯಿರುವದು. ಇನ್ನು ಬೇರೆ ಗ್ರಂಥಗಳಲ್ಲಿ ಮತ್ತು ಅನ್ಯ ಸಾಧುಸಂತರ ವಚನಗಳಲ್ಲಿ ಇದೇ ವಿಷಯವು ಯಾವ ರೀತಿ ಬಂದಿರುವದು ಇದನ್ನು ಸಂಕ್ಷೇಪದಿಂದ ನೋಡುವ.

೧೯೯. ಮೊದಲು ಉಪನಿಷತ್ತಿನಲ್ಲಿ ಈ ಬಗ್ಗೆ ಇದ್ದ ಹಲವು ಮಾತುಗಳನ್ನು ನೋಡುವ. ನಿನ್ನ ಕಲ್ಯಾಣತಮವಾದ ತೇಜೋರೂಪವನ್ನು ನಾನು ನೋಡುತ್ತಿರುವೆನು, ಅಲ್ಲಿ ಕಾಣುವ ಪುರುಷನು ನಾನೇ ಇರುವೆನು, ಎಂದು ಈಶಾವಾಸ್ಯದ ಋಷಿಯು (ಮಂ. ೭) ಸಾಕ್ಷಾತ್ಕಾರದ ಭಾಷೆಯನ್ನು ನುಡಿದಿರುವನು. ಎಲ್ಲಕ್ಕು ಆಚೆಗಿನ ಆನಂದಮಯ ಕೋಶವನ್ನು ಕೂಡ ದಾಟಿ, 'ನಾನೇ ಅನ್ನ, ನಾನೇ ಅನ್ನದಿನಿಯು, ನಾನೇ ಕವಿಯು, ನಾನೇ ಅಮೃತಕೋಶನು, ಸುವರ್ಣಜ್ಯೋತಿಯು,' ಎಂದು ಸಾಕ್ಷಾತ್ಕಾರಿಯು ತೈತ್ತಿರೀಯದ ಭೃಗುವಲ್ಲಿಯ ೧೦ನೆಯ ಅನುವಾಕದಲ್ಲಿ ಹಾಡುವನು. ಸಾಕ್ಷಾತ್ಕಾರಿಯು ಆತ್ಮರತನೂ ಆತ್ಮಕ್ರೀಡನೂ ಆತ್ಮಾನಂದಿಯೂ ಸ್ವರಾಟನೂ ಆಗುವನು, ಎಂದು ಛಾಂದೋಗ್ಯದ ೭ನೆಯ ಅಧ್ಯಾಯದಲ್ಲಿ (ಖಂಡ. ೨೫) ವರ್ಣನೆ ಇರುವದು. ಕುದುರೆಯು ಮೈಗೂದಲುಗಳನ್ನು ಝಾಡಿಸುವಂತೆ ಪಾಪವನ್ನೆಲ್ಲ ಝಾಡಿಸಿಬಿಟ್ಟು, ರಾಹುಮುಖದಿಂದ ಮುಕ್ತನಾದ ಚಂದ್ರನಂತೆ ನಿರ್ಮಲ ಶರೀರನಾಗಿ, ಕೃತಾತ್ಮನಾಗಿ ಸಾಕ್ಷಾತ್ಕಾರಿಯು ಬ್ರಹ್ಮಲೋಕಕ್ಕೆ ಹೋಗುವನು (ಛಾ. ೮, ೧೩). ಬೃಹದಾರಣ್ಯಕದ ೪ನೆಯ ಅಧ್ಯಾಯದ ೩ನೆಯ ಬ್ರಾಹ್ಮಣದಲ್ಲಿ (ಮಂ. ೨೦–೩೨) ಸಾಕ್ಷಾತ್ಕಾರಿಯು ಮುಟ್ಟಬಹುದಾದ ಪರಮಸ್ಥಿತಿಯ ವರ್ಣನೆಯು ಇರುವದು. ಅದರ ಸಾರಾಂಶವೇನಂದರೆ, 'ಅರಸನಂತೆ ಇಲ್ಲವೆ ದೇವನಂತೆ, ನಾನೇ ಇದೆಲ್ಲವೂ ಇರುವೆನು,' ಎಂದು ಅವನು ಭಾವಿಸುವನು. ತನ್ನ ಪ್ರಿಯಸತಿಯೊಡನೆ ಪತಿಯು ಕೂಡಿದಾಗ ಅಂತರ್ಬಾಹ್ಯಸಂಜ್ಞೆ ಇಲ್ಲದವನಾಗಿ ಒಂದು ಬಗೆಯ ಐಕ್ಯಾನಂದವನ್ನು ಅನುಭವಿಸುವಂತೆ ಪುರುಷನು ಪ್ರಾಜ್ಞ ಆತ್ಮನೊಡನೆ ಐಕ್ಯಹೊಂದಿದಾಗ ಪೂರ್ಣ ಆಪ್ತಕಾಮನೂ ಅಕಾಮನೂ ಶೋಕರಹಿತನೂ ಆಗಿ ಅನಂದಾತಿಶಯವನ್ನು ಅನುಭವಿಸುವನು. ಆ ಸ್ಥಿತಿಯಲ್ಲಿ ತಾಯಿಯು ತಾಯಿಯಲ್ಲ, ತಂದೆಯು ತಂದೆಯಲ್ಲ, ದೇವನು ದೇವನಲ್ಲ, ವೇದವು ವೇದವಲ್ಲ, ಕಳ್ಳನು ಕಳ್ಳನಲ್ಲ, ಚಾಂಡಾಲನು ಚಾಂಡಾಲನಲ್ಲ, ಶ್ರಮಣನು ಶ್ರಮಣನಲ್ಲ; ಯಾಕಂದರೆ, ಆಗ ಅವನು ಎಲ್ಲ ಭೇದಾಭೇದಗಳ ಆಚೆಗೆ ಹೋಗಿರುವನು. ಹೃದಯಸ್ಥವಾದ ಎಲ್ಲ ಶೋಕಗಳು ಆ ಸ್ಥಿತಿಯಲ್ಲಿ ಲಯವಾಗಿ ಸಕಲ ಪಾಪಗಳ ಕ್ಷಯವಾಗಿ ಸಂಪೂರ್ಣ ಪುಣ್ಯಾನಂದದಲ್ಲಿ ಅವನು ನಲಿನಲಿದಾಡುತ್ತಿರುವನು. ಅಲ್ಲಿ ನೋಡುವ, ಕೇಳುವ ಮುಂತಾದ ಯಾವ ಕರ್ಮಗಳನ್ನೂ ಆತ್ಮನು ಮಾಡುವುದಿಲ್ಲ. ಆತ್ಮನ ಸಕಲ ಶಕ್ತಿಗಳು ಆಗ ಲುಪ್ತವಾಗಿರುವವೆಂದು ಇದರ ಅರ್ಥವಲ್ಲ.

ಆದರೆ ಆಗ ಕರ್ಮವಿಷಯಗಳ ಅಥವಾ ಕರ್ಮಸಾಧನಗಳ ಅತ್ಯಂತಾಭಾವ ವಿರುವುದರಿಂದ ಕರ್ಮವು ಯಾವುದೂ ಆಗುವುದಿಲ್ಲ. 'ಅನ್ಯ' ಎಂಬುದು ಇರುವಲ್ಲಿ ಮಾತ್ರ ಕರ್ಮವೆಂಬುದು ಸಂಭವಿಸಬಲ್ಲದು. ಆ ಅನ್ಯವಸ್ತುವೆ ಇಲ್ಲದೆ ಎಲ್ಲೆಲ್ಲಿಯೂ ಒಂದೇ ಒಂದು ವಸ್ತು ಪ್ರತೀತವಾಗುವಾಗ ಕರ್ಮ ವೆಲ್ಲಿಂದ ಬರಬೇಕು? ಆ ಸ್ಥಿತಿಯೆ ಪರಮಗತಿಯು, ಅದೇ ಆತ್ಯಂತಿಕ ಸಂಪತ್ತು, ಅದೇ ಎಲ್ಲಕ್ಕೂ ಶ್ರೇಷ್ಠವಾದ ಲೋಕವು, ಅದೇ ಅತ್ಯುಚ್ಚ ಆನಂದಸ್ಥಾನವು. ಆ ಆನಂದದ ಅಂಶಮಾತ್ರದಿಂದ ಈ ಜೀವರಾಶಿಗಳೆಲ್ಲ ಬದುಕುವವು.' ಸಂಪೂರ್ಣ ಸಾಕ್ಷಾತ್ಕಾರದ ಇದಕ್ಕೂ ಯಥಾರ್ಥವರ್ಣ ನೆಯು ಎರಡನೆಯ ಕಡೆಗೆ ಸಿಗುವದು ದುರ್ಲಭವೇ ಸರಿ. ಪ್ರಕಾಶ, ಸ್ಪರ್ಶ, ಮುಂತಾದವುಗಳು ಪ್ರತೀತವಾಗುವ ಸಾಕ್ಷಾತ್ಕಾರಗಳಲ್ಲಿ ಒಂದು ಬಗೆಯ ನಗುಣ ಅನುಭವವಿರುವದು. ಇದು ಅವೆಲ್ಲವುಗಳಿಗೂ ಆಚೆಗಿನ ಕೇವಲ ಸ್ಥಿತಿಯ ವರ್ಣನೆಯು.

೩೦೦. ಇನ್ನು ಯುರೋಪಿಯನ್ ಸತ್ಪುರುಷರ ಸಾಕ್ಷಿಯನ್ನು ನೋಡುವ. ಕ್ರಿಸ್ತೀಶಕದ ಪೂರ್ವದಲ್ಲಿ ಆಗಿಹೋದ ಪ್ರಸಿದ್ಧ ಗ್ರೀಕ ದಾರ್ಶನಿಕನಾದ ಪ್ಲೇಟೋನು (Plato – 7th Epistle), 'ಅನ್ಯ ಶಾಸ್ತ್ರಗಳ ಅನುಭವಕ್ಕೆ ಬಂದ ಸತ್ಯಗಳನ್ನು ಹೇಳಲಿಕ್ಕೆ ಬರುವಂತೆ ಅಧ್ಯಾತ್ಮಶಾಸ್ತ್ರದಲ್ಲಿ ಅನುಭವಕ್ಕೆ ಬರುವ ಸಾಕ್ಷಾತ್ಕಾರವನ್ನು ಶಬ್ದಗಳಿಂದ ಹೇಳಲಿಕ್ಕೆ ಬರುವದು ಸಾಧ್ಯವಿಲ್ಲ. ಹಾಗೆ ಸಾಧ್ಯವಿದ್ದ ಪಕ್ಷದಲ್ಲಿ ನಾನು ನನ್ನ ಇಡೀ ಆಯುಷ್ಯವನ್ನು ಆ ಅನುಭವವನ್ನು ವರ್ಣಿ ಸುವುದರಲ್ಲಿಯೆ ಕಳೆಯುತ್ತಿದ್ದೆನು. ಅದನ್ನು ವರ್ಣಿಸುವುದಕ್ಕಿಂತ ಉಚ್ಚ ತರವಾದ ಧ್ಯೇಯವು ಮನುಷ್ಯಜೀವನದಲ್ಲಿ ಇನ್ನಾವುದಿರಬಲ್ಲದು?' ಎಂದು ಸಾಕ್ಷಾತ್ಕಾರದ ಅನಿರ್ವಚನೀಯತೆಯನ್ನೂ ಮಹತಿಯನ್ನೂ ಬಣ್ಣಿಸಿರು ವನು. ಕ್ರಿಸ್ತೀಶಕದ ನಂತರ ಆದವನಿದ್ದರೂ ಪ್ಲೇಟೋನ ಕೇವಲ ಶಿಷ್ಯ ನೆನಿಸಿದ ಪ್ಲೋಟೋನ ತತ್ವಜ್ಞಾನವನ್ನು ಪುನರುಜ್ಜೀವನಗೊಳಿಸಿದ ಪ್ಲೋಟಿನಸ್ (Plotinus) ಎಂಬವನು, 'ಏಕಮೇವಾದ್ವಿತೀಯ'ನೊಡನೆ ಒಂದಾಗುವ ಅನುಭವವು ಜೀವನಿಗೆ ಬಂದಿತೆಂದರೆ.... ಅದೇ ಜೀವ ಶಿವೈಕ್ಯವೆನಿಸುವದು.... ಅಲ್ಲಿ ಸೌಂದರ್ಯವೆಂಬುದು ಕೂಡ ಪ್ರತೀತ ವಾಗದು; ಯಾಕಂದರೆ, ಆ ಸ್ಥಿತಿಯಲ್ಲಿ ಅವನು ಅದರಾಚೆ ಹೋಗಿರುವನು. ಸದ್ಗುಣಗಳ ಸುಸಂಗೀತವನ್ನು ಸಹ ಅವನು ದಾಟಿಹೋಗಿರುವನು. ಅವನು ಈಶ್ವರಭಾವಾವಿಷ್ಟನಾಗಿ ಪರಮಶಾಂತಿಯನ್ನನುಭವಿಸುವನು.

ಅಲ್ಲಿ ಚಾಂಚಲ್ಯದ ಕಿಂಚಿತ್ತರಂಗವು ಸಹ ಇರಲರಿಯದು. 'ತಾನು' ಎಂಬರಿವು ಅಲ್ಲಿ ಅಳಿದುಹೋಗಿರುವದು. ಅವನು ಮೂರ್ತಿಮಂತ ಸ್ಥೈರ್ಯವೆ ಆಗಿ ನಿಲ್ಲುವನು,' ಎಂದು ಸಾಕ್ಷಾತ್ಕಾರಿಯ ನಿಲವನ್ನು ಚಿತ್ರಿಸಿರುವನು. ಸ್ಪೇನ ದೇಶದ ಕ್ರಿಶ್ಚನ್ ಸಾಧುವರ್ಯನಾದ ಸೆಂಟ ಜಾನ್ ಆಫ್ ದಿ ಕ್ರಾಸ್ (St. John of the Cross) ಎಂಬವನು ದ್ವೈತವಾದಿ ಇದ್ದಂತೆ ತೋರುತ್ತಿದೆ. ಅವನು, 'ಜೀವಶಿವರು ಒಂದೇ ಒಂದಾಗಿ ಹೋಗುವಷ್ಟು ಗಾಢವಾಗಿ ಪ್ರೇಮರಜ್ಜುವು ಅವರನ್ನು ಬಿಗಿಯುವದು. ತತ್ವತಃ ಬೇರೆ ಇದ್ದರೂ ಆ ಸ್ಥಿತಿಯಲ್ಲಿ ಜೀವನು ಶಿವನಾಗಿ ಶಿವನು ಜೀವನಾಗಿ ಪರಸ್ಪರರು ಅಭಿನ್ನವಾಗಿ ಐಶ್ವರ್ಯದಿಂದ ಕಂಗೊಳಿಸುವರು,' ಎಂದಿರುವನು. 'ಸೋಪಾಧಿಕನಾದ ಜೀವಾತ್ಮನು ಪರಿವರ್ತನಹೊಂದಿ ಅಂತರ್ಯಾಮಿಯಾದನೆಂದರೆ, ಆ ನಿರ್ಮಲಾತ್ಮನಲ್ಲಿ ಪ್ರತ್ಯಕ್ಷ ಪರಮಾತ್ಮನು ಅವತರಿಸುವನು. ಆಗ ಜೀವನು ಆ ಪರಮನಲ್ಲಿ ಕೂಡಿ ಹೋಗುವನು,' ಎಂದು ಟೌಲರನ (Tauler) ವಚನವಿರುವದು. 'ತಾವು ಯಾವನ ಪ್ರತಿ ಬಿಂಬಮಾತ್ರರೊ ಆ ಶಾಶ್ವತ ಚೈತನ್ಯಮೂರ್ತಿಯನ್ನು ಯೋಗಿಗಳು ಧ್ಯಾನಿಸುವರು. ದಿವ್ಯತೇಜದಿಂದ ತೊಳಗಿಬೆಳಗುವ ಈ ವಿಶ್ವವಸ್ತುಗಳ ನೆಲ್ಲ ಅವರು ಅವನಲ್ಲಿ ಏಕರೂಪವಾಗಿ ನೋಡುವರು,' ಎಂದು ಸಾಕ್ಷಾತ್ಕಾರಿಗಳ ದಿವ್ಯದರ್ಶನವನ್ನು ರುಯಿಸ್‌ಬ್ರೋಕ್ (Ruys brock) ಎಂಬವನು ವರ್ಣಿಸಿರುವನು. ಸೆಂಟ ಆಗಸ್ಟಾಯಿನ್ (St. Augustine)ಎಂಬ ಮಹಾಸಾಧುವು ತನ್ನ ಕನ್‌ಫೆಶನ್ಸ (Confessions) ಎಂಬ ಮನನೀಯ ಗ್ರಂಥದಲ್ಲಿ ತನಗೆ ಆದ ದರ್ಶನದ ವಿವರವನ್ನು ಚನ್ನಾಗಿ ಕೊಟ್ಟಿರುವನು. ಮುಖ್ಯ ಕ್ರಿಶ್ಚನ್ ಧರ್ಮಗ್ರಂಥವಾದ ಬಾಯಿಬಲ್ಲಿನಲ್ಲಿಯ (The Bible) ಒಂದು ವಿಶಿಷ್ಟ ಭಾಗವನ್ನು ಓದಿದಾಕ್ಷಣವೆ ತನಗೆ ಜ್ಞಾನದರ್ಶನವಾಯಿ ತೆಂದು ಅವನು ಹೇಳಿರುವನು. 'ತತ್‌ಕ್ಷಣಕ್ಕೆ, ಆ ವಾಕ್ಯವನ್ನೋದಿದೊಡನೆ ಒಂದು ಶಾಂತ ತೇಜವು ನನ್ನ ಎದೆಯ ಗವಿಯನ್ನು ಹೊಕ್ಕಂತಾಗಿ ಅಲ್ಲಿ ಯುಗಯುಗಾಂತರಗಳಿಂದ ಕವಿದ ಸಂಶಯದ ಕಾರ್ಗತ್ತಲೆಯು ಕಳೆದು ಹೋಯಿತು.....ನಮಗೆ ಆಗುವ ಪರಮಾವಧಿಯ ವಿಷಯಾನಂದವನ್ನು ಕೂಡ ಆ ಅಮೃತಜೀವನದ ಆನಂದದ ಮೇಲಿಂದ ನಿವಾಳಿಸಿ ಚಲ್ಲಬಹುದು. ಅದೇಕೆ, ಅವೆರಡನ್ನೂ ಒಂದೇ ಉಸುರಿನಲ್ಲಿ ಸರಿಗಟ್ಟುವದು ಕೂಡ ತಪ್ಪು. ಅಷ್ಟು ಅವುಗಳ ನಡುವೆ ಅಜಗಜಾಂತರವಿದೆ. ಸಹಸ್ರ ಸ್ವರ್ಗಗಳ ಸುಖವು ಸಹ ಅದರ ಮುಂದೆ ತುಚ್ಛವಿರುವದು. ಆ ಸುಖವು ಪರಮಾತ್ಮನ ಅಂತ

ಧ್ಯಾನದಿಂದಲೆ ದೊರಕಬಲ್ಲದು. ಆ ಸ್ಥಿತಿಯಲ್ಲಿ ಜೀವರಿಗೆ ಪರಶಿವನು ತಾನೆ ಸತ್ಯ – ಜ್ಞಾನಗಳ ಸವಿಯೂಟವನ್ನು ಉಣಿಸಿ ಅವರನ್ನು ತಣಿಸುವನು. ಈ ಮರ್ತ್ಯಲೋಕದ ಹಾವಳಿಯಳಿದು, ನಮ್ಮ ಚಿತ್ತವೃತ್ತಿಗಳ ಅಲ್ಲೋಲಕಲ್ಲೋಲವಡಗಿ, ನಾವು ಮೌನವಿಡಿದು ಶಾಂತಿಸಾಗರದ ನಿವಾಸಿಗಳಾದಾಗಲೆ ಆ ಪರಮಾತ್ಮನ ಕೇವಲ ಚೈತನ್ಯಮಯ ಮೆಲ್ಲುಲಿವು ಕೇಳಿಸುವದು,' ಎಂದು ಅವನ ಅನುಭವವಿರುವದು. 'ತಾನು ಜೀವಾತ್ಮನೆಂಬುದನ್ನು ಮರೆತು ವಿಶ್ವಾತ್ಮನಲ್ಲಿ ಲಯಹೊಂದುವುದಕ್ಕಿಂತ ಹೆಚ್ಚಿನ ಪರಮ ಅನುಭವವೇ ಇಲ್ಲ,' ಎಂದು ಜರ್ಮನ ತತ್ವಜ್ಞನಾದ ಫೀಶ್ಟ (Fichte) ಎಂಬವನ ಮತವಿರುವದು. 'ಸಾಕ್ಷಾತ್ಕಾರವು ಸ್ಫುರಣಾತ್ಮಕವಿರುವದು. ಜೀವಾತ್ಮನಲ್ಲಿ ಈಶ್ವರಾಂಶವಿರುವ ಮೂಲಕವೆ ಮನುಷ್ಯನಿಗೆ ಈಶಸಾಕ್ಷಾತ್ಕಾರವು ಸಾಧ್ಯವಾಗುವದು,' ಎಂದು ಡೀನ ಇಂಗ (Dean Inge) ಎಂಬ ಪ್ರಸಿದ್ಧ ಇಂಗ್ಲೀಷ ಧರ್ಮವೇತ್ತನು ಸಾಕ್ಷಾತ್ಕಾರದ ಬಗ್ಗೆ ಬರೆಯುವಾಗ ಅಂದಿರುವನು. ಸಂಪೂರ್ಣ ಆತ್ಮಶಾಂತಿಯು ಹೇಗೆ ಮತ್ತು ಯಾವ ಅವಸ್ಥೆಯಲ್ಲಿ ದೊರಕಬಹುದು ಎಂಬುದನ್ನು ಚರ್ಚಿಸುವಾಗ ಮ್ಯಾಕ್‌ನಿಕಲ್ (Macnicol) ಇವನು, 'ಆ ಪರಮ ಶಾಂತಿಯು ಶಾಂಕರಾದ್ವೈತದಲ್ಲಿಯೂ ಸಿಗಲರಿಯದು, ಜೀವ ಬೇರೆ ಶಿವ ಬೇರೆ ಎಂದು ಸಮಾಧಾನಪಡುವ ದ್ವೈತದಲ್ಲಿಯೂ ದೊರೆಯಲರಿಯದು. ಈ ಎರಡರಾಚೆಗಿರುವ ಮತ್ತು ಇವೆರಡನ್ನೂ ಸಮನ್ವಯಿಸುವ ಆಧ್ಯಾತ್ಮಿಕ ಅನುಭವದಲ್ಲಿ ಆ ಪರಮ ಶಾಂತಿಯ ಪರಂಧಾಮವಿರುವದು,' ಎಂದು ಬಹಳ ಅಂದವಾಗಿ ಹೇಳಿದ್ದಾನೆ. ದ್ವೈತಾದ್ವೈತವಿವರ್ಜಿತವಾದ ಸಮರಸೈಕ್ಯವನ್ನು ಪ್ರತಿಪಾದಿಸುವ ಪ್ರಾಚೀನ ಪಡನಕಾರರ ಮಾತನ್ನೆ ಇವನು ಇಲ್ಲಿ ಆಧುನಿಕ ಭಾಷೆಯಲ್ಲಿ ವ್ಯಕ್ತಮಾಡಿದ್ದಾನೆ.

೨೦೧. ಬೇರೆ ಧರ್ಮಗಳಲ್ಲಿ ಆಗಿಹೋದಂತೆ ಇಸ್ಲಾಮೀ ಧರ್ಮದಲ್ಲಿಯೂ ಇದುವರೆಗೆ ಅನೇಕ ಸಾಧುಸತ್ಪುರುಷರು ಆಗಿಹೋಗಿರುವರು. ಅವರಲ್ಲಿ ಸುಫೀಪಂಥದವರು ಬಹಳ ಪ್ರಸಿದ್ಧರಿರುವರು. 'ಸುಫೀ' ಇದರ ಶಬ್ದಾರ್ಥವು ಕರೆಯ ನಿಲುವಂಗಿಯನ್ನು ಹಾಕಿಕೊಳ್ಳುವವರು, ಎಂದು ಆಗುವದು. ಇರಾಣೀ ಭಾಷೆಯಲ್ಲಿ 'ಸುಫ್' ಅಂದರೆ ಕರೆಯ ಉದ್ದಂಗಿ ಅಥವಾ ನಿಲುವಂಗಿ, ಎಂದು ಆಗುವದು. ಈ ಪಂಥದವರು ಅಂಥ ನಿಲುವಂಗಿಯನ್ನು ಯಾವಾಗಲೂ ತೊಡುತ್ತಿರುವುದರಿಂದ ಇವರಿಗೆ 'ಸುಫೀ' ಎಂಬ ಹೆಸರು ಆಗಿದೆ. ಇಲ್ಲಿ ನಾವು ಸುಫೀ ಮತ್ತು ಇತರ ಕೆಲವು ಸಾಧುಗಳ ವಚನ

ಗಳನ್ನು ಅವತರಿಸುವವರಿದ್ದೇವೆ. ಸುಫೀ ತತ್ವಜ್ಞರಲ್ಲಿ ಸಾದಿ, ಹಾಫೀಜ್, ಜಾಮಿ, ಉಮರ ಖಯಾಮ್ ಮುಂತಾದವರು ಪ್ರಸಿದ್ಧರಿರುವರು. ಅವರೆಲ್ಲರೂ ಕ್ರಿಸ್ತಶಕದ ೧೧ನೆಯ ಶತಮಾನದಿಂದ ೧೬ನೆಯ ಶತಮಾನದವರೆಗೆ ಇರಾಣದಲ್ಲಿ ಆಗಿಹೋದರು. ಇವರಲ್ಲಿ ಸಾದಿ ಮತ್ತು ಹಾಫಿಜ್ ಇವರು ಇರಾಣದಲ್ಲಿ ಹೆಸರಾದ ಶಿರಾಜ್ ಎಂಬ ಪಟ್ಟಣದಲ್ಲಿ ಇರುತ್ತಿದ್ದರು. ಜಾಮಿಯು ಜಾಮ್ ಎಂಬ ಊರಲ್ಲಿ ಮತ್ತು ಉಮರನು ನಿಶಾರ್ ಪಟ್ಟಣದಲ್ಲಿ ಇರುತ್ತಿದ್ದನು. ಸರಮದ್ ಎಂಬ ಇನ್ನೊಬ್ಬ ಇಸ್ಲಾಮೀ ಫಕೀರನು ಯಾವಾಗಲೂ ನಗ್ನಸ್ಥಿತಿಯಲ್ಲಿ ದಿಲ್ಲಿಯಲ್ಲಿ ವಾಸವಾಗಿದ್ದನು. ಅವನು ಔರಂಗಜೇಬನ ಕಾಲದವನು. ಔರಂಗಜೇಬ ಬಾದಶಹನು ಸಿಟ್ಟಿಗೆದ್ದು ಅವನನ್ನು ಕೊಲಿಸಿದನು. ಕೊಲೆಗಾರರು ಕಡಿಯಬರಲು, 'ನನ್ನ ಗೆಳೆಯರು ಜೇಷ್ಟೆಯಿಂದ ನನ್ನ ತಲೆ ಕಡಿದರು. ಒಳಿತಾಯ್ತು, ಆ ತಲೆ ಮತ್ತು ಅದರಲ್ಲಿಯ ಸಾವಿರ ಹುಳುಕುವಿಚಾರ ಇವೆರಡೂ ಒಮ್ಮೆಲೆ ಹಾಳಾಗಿ ಹೋದವು!' ಎಂದು ಅವರ ಮುಂದೆ ತಲೆಯೊಡ್ಡಿ ನಗುನಗುತ ಕಡಿಸಿಕೊಂಡನು! ತನ್ನ ಆಸ್ಥಾನಕವಿಯಾಗಿರಬೇಕೆಂದು ಸವಾಬ ಅಸಿಫ್-ಜಾ ಎಂಬವನು (ಇವನು ದಕ್ಷಿಣ ಹೈದ್ರಾಬಾದದವನಿರಬೇಕು) ಬೇದಿಲ್ ಎಂಬ ಇನ್ನೊಬ್ಬ ಕವಿಯನ್ನು ಅವನ ಊರಿನಿಂದ ತನ್ನ ರಾಜಧಾನಿಗೆ ಕರೆಕಳುಹಲು ಆ ಕವಿಯು ಕೊಟ್ಟ ಉತ್ತರವು ವಿಚಾರಣೀಯವಿರುವದು. 'ನನ್ನ ಪಾದಕ್ಕೆ ಆತ್ಮಸಂತೋಷದ (ಕನಾಅತ್) ಮದರಂಗಿ ತೊಡೆದಿರುವೆ, ನಿನ್ನತ್ತ ನಡೆದರೆ ಅದು ಮಾಸುವದರಸಾ, ಆದುದರಿಂದ ನಾ ಬಾರೆನತ್ತ,' ಎಂದು ರಾಜಸೇವಕರನ್ನು ಬಂದದಾರಿಯಿಂದ ಹಿಂತಿರುಗಿ ಅಟ್ಟಿದನು! ಹೀಗೆ ಇವರೆಲ್ಲರ ಜೀವನಚರಿತ್ರಗಳು ರಸದಿಂದ ತುಂಬಿರುವವು. ಆದರೆ ಇಲ್ಲಿ ಅವರ ಹಲವು ಮಾತುಗಳ ಆಸ್ವಾದವನ್ನು ಮಾತ್ರ ಸವಿದು ನಾವು ಸಂತುಷ್ಟರಾಗಬೇಕಾಗಿದೆ. ಮೊದಲು ಸಾಕ್ಷಾತ್ಕಾರದ ವಿಷಯದಲ್ಲಿ ಅವರು ಏನು ಅಂದಿರುವರು ಇತ್ತ ನಾವು ಲಕ್ಷ ಗೊಡಲಿಕ್ಕೆ ಬೇಕು. ಪರಮಾತ್ಮನನ್ನು ಸಾಕ್ಷಾತ್ಕರಿಸಿದರೂ ಆ ಅನುಭವವನ್ನು ವರ್ಣಿಸಲಸಾಧ್ಯ, ಎಂಬ ಬಗ್ಗೆ ಉಮರ ಖಯಾಮನು ಅನ್ನುವುದೇನಂದರೆ, 'ಆಹಾ, ಆ ಪರಮನ ತೇಜದಿಂದ ಎನ್ನ ಮನವೆಲ್ಲ ತುಂಬಿದುದನ್ನು ನಾನು ನೋಡಿದೆನು. ಆಹಾ, ಬೆಳಗುವ ಬೆಳಕಿನಲ್ಲಿ ಅವನ ರಹಸ್ಯಗಳನ್ನೆಲ್ಲ ನಾನು ಕಂಡೆನು. ಆದರೇನು, ವಿಚಾರಿಸಿ ನೋಡಲು ನಾನೇನೂ ಅರಿಯೆ, ನಾನೇನೂ ಅರಿಯೆ.' ಇದೇ ಮಾತನ್ನು ಬೇದಿಲ್ ಇವನು, '....ಬಹಳ ತಡೆದು ತಡೆದು ಬಂದು ಸುಡಿಯನ್ನು

ನುರಿದೆನು, ನಾನು ಅವನನ್ನು ನೋಡಿದೆನೆಂದು. ಆದರೇನು ? ನಾನು ಅವನನ್ನರಿತಿರುವೆನೊ ಇಲ್ಲವೊ ನಾನರಿಯೆ, ನಾನರಿಯೆ, ' ಎಂದು ಹೇಳಿರುವನು. ಆತ್ಯಂತಿಕ ತ್ಯಾಗದಿಂದಲೆ ಸಾಕ್ಷಾತ್ಕಾರವು ಸಾಧ್ಯವು ಎಂದು ನುಡಿಯುವಾಗ, 'ಎನ್ನ ಮನೆಮಾರು ಬಿಟ್ಟು ಹೊರಟೆನು. ಆಗ ಅಲ್ಲಿಗಲ್ಲಿಗೆ ನೆಲದಿಂದ ಮುಗಿಲನಕ ಚಾಚಿದ ಬೆಳಕನು ಕಂಡೆನು, ' ಎಂದು ತನ್ನನುಭವವನ್ನು ಹೇಳಿ ಸರಮದನು, 'ಆ ದಿವ್ಯನೋಟದ ಹವಣಿದ್ದರೆ ಬಾ ತೊರೆದು ಎಲ್ಲವನು, ನೀನೂ ಆ ಬೆಳಕಿನ ಹೊಳಪಿನಲ್ಲಿ ಹೊರಳಾಡುವಿ,' ಎಂದು ಅನ್ಯರನ್ನು ಆಸ್ಥೆಯಿಂದ ಆಹ್ವಾನಿಸಿರುವನು. ಇಸ್ಲಾಮೀ ಸಾಂಪ್ರದಾಯದಲ್ಲಿ ಮಧ್ಯರಾತ್ರಿ ಮೀರಿದ ಬಳಿಕ ಮಾಡಿದ ಮೂರನೆಯ ಪ್ರಹರದಲ್ಲಿಯ ಪ್ರಾರ್ಥನೆಯು ಅತ್ಯಂತ ಶ್ರೇಯಸ್ಕರವೆಂದು ಹೇಳಲ್ಪಟ್ಟಿದೆ. ಹಾಫಿಜ್‌ನು ತನಗೆ ಆ ಮೂರನೆಯ ಪ್ರಹರದಲ್ಲಿ ಆದ ಸಾಕ್ಷಾತ್ಕಾರವನ್ನು ಈ ಕೆಳಗಿನಂತೆ ವರ್ಣಿಸಿರುವನು:– 'ಮಧ್ಯರಾತ್ರಿ ದಾಟಿದ ಬಳಿಕ ಎನಗೆ ದುಃಖದಿಂದ ಮುಕ್ತಿ ದೊರಕಿತು. ಆ ಕಗ್ಗತ್ತಲೆಯಲ್ಲಿ ಯಾರೋ ನನ್ನ ಕೈಯಲ್ಲಿ ಅಮೃತ ಪಾತ್ರೆಯನ್ನಿಟ್ಟರು. ನನ್ನ ಸತ್ಯವಾದಿ ಅಂತಃಕರಣಕ್ಕೆ ಆ ಅಮೃತವು ಸಿಕ್ಕಿತು. ಅವನ ತೇಜದಿಂದ ಎನ್ನ ಎಚ್ಚರತಪ್ಪಿತು. ಆಹಾ, ಆದೆಂತಹ ಶುಭರಾತ್ರಿಯು ! ಆ ದಿನವೆ ಎನಗೆ ಮುಕ್ತಿಪತ್ರವು ಪ್ರಾಪ್ತವಾಯಿತು.. ನಾನು ಅಮೃತತ್ವವನ್ನು ಪಡೆದಿರುವೆನು. ಆ ಶುಭರಾತ್ರಿಯಂದಿನಿಂದ ನಾನು ಮರಣಭಯದಾಚೆಗೆ ಹೋಗಿರುವೆನು .... ಪ್ರೇಮಮಂಡಲದ ಮಧ್ಯಬಿಂದುವನ್ನು ನಾನು ನಿಚ್ಚಳವಾಗಿ ನೋಡುತಿರುವೆನು. ಏನಿದು ಕತ್ತುರಿಯ ದಿವ್ಯ ಪರಿಮಲವು ! ನಾನು ಈ ಭಾಗ್ಯವನು ನಿತ್ಯರಾತ್ರಿ ಅನುಭವಿಸುತಲಿರುವೆನು. ನಂದನವನದ ಸುಖಸೌಭಾಗ್ಯ, ಕಲ್ಪವೃಕ್ಷದ ಛಾಯೆ, ಅಪ್ಸರೆಯರ ವಿಲಾಸಮಂದಿರ ಇವೆಲ್ಲವುಗಳಿಗಿಂತ ಈ ಸುಖವು ಸಾವಿರಪಾಲು ಮಿಗಿಲಾದುದು....ನಾನು ಪರಮಾತ್ಮನ ಪ್ರತಿಬಿಂಬನಿರುವೆನು (ಅನಲ್ ಹಕ್) ಎಂಬುದನ್ನು ನಾನು ಪ್ರತ್ಯಕ್ಷ ಕಾಣುತಿರುವೆನು, ನನ್ನನ್ನು ಮನಸೂರನಂತೆ (ಇನ್ನೊಬ್ಬ ಕವಿ) ಗಲ್ಲಿಗೇರಿಸಿದರೂ ನಾನು 'ಅನಲ್ ಹಕ್' ಎಂಬುವದನ್ನು ಬಿಡೆನು. ಹಾಗನ್ನನ್ನುತ್ತೆ ಸಾಯುವೆನು'! ಜಲಾಲುದ್ದೀನ ರುಮಿ ಎಂಬ ಇನ್ನೊಬ್ಬ ಇರಾಣದ ಸಾಧುವು ಅನುಭಾವದ ಅವರ್ಣನೀಯತೆಯನ್ನು 'ಆತ್ಮಾನುಭವದ ಆ ಅನಂತಸಾಗರದಲ್ಲಿ ಶಬ್ದಮುಗ್ಧತೆಯೆ ನಮ್ಮ ಆಧಾರವು, ಮೌನವೆ ಮಾರ್ಗದರ್ಶಿಯು ' ಎಂದು ವರ್ಣಿಸಿರುವನು.

೫೨. ಮಹಾರಾಷ್ಟ್ರದ ಸಂತಸಮೂಹದ ಸಾಕ್ಷಾತ್ಕಾರವು

ಅವರವರು ಬರೆದ ಬೇರೆ ಬೇರೆ ಗ್ರಂಥಗಳಲ್ಲಿ ಅಲ್ಲಲ್ಲಿ ಅಡಕವಾಗಿದೆ. ಜ್ಞಾನದೇವನಿಗಿಂತ ಪೂರ್ವದಲ್ಲಿ ಮಹಾನುಭಾವಪಂಥದವರು ಮತ್ತು ಮುಕುಂದರಾಯನೆಂಬ ಕವಿಯು ಧಾರ್ಮಿಕ ವಾಙ್ಮಯವನ್ನು ಸ್ವಲ್ಪ ನಿರ್ಮಾಣ ಮಾಡಿದ್ದರೂ ಇವನೇ ಮಹಾರಾಷ್ಟ್ರ ಸಂತಮಂಡಲಿಯ ಆದಿಗುರುವೆನಿಸುವನು. ಇವನು ೧೨ನೆಯ ಶತಮಾನದವನು. ಅವನ ನಂತರ ಇಂದಿನವರೆಗೆ ನೂರಾರು ಸಾಧುಗಳು ಅಲ್ಲಿ ಆಗಿಹೋದರು. ಇಲ್ಲಿ ಜ್ಞಾನದೇವ, ನಾಮದೇವ, ಏಕನಾಥ, ತುಕಾರಾಮ, ರಾಮದಾಸ ಮುಂತಾದವರ ವಚನಗಳನ್ನು ಪಾತ್ರ ಅವತರಿಸುವ ವಿಚಾರವಿದೆ. ತುಕಾರಾಮ, ರಾಮದಾಸ ಇವರಿಬ್ಬರೂ ಶಿವಾಜಿ ಮಹಾರಾಜರ ಸಮಕಾಲೀನರು, ಅಂದರೆ ೧೭ನೆಯ ಶತಮಾನದವರು. ಇವರೆಲ್ಲರೂ ಮಾಡಿದ ಬ್ರಹ್ಮವಸ್ತುವಿನ ವರ್ಣನೆಯು ಉಪನಿಷತ್ಕಾರರು ಸಂಸ್ಕೃತದಲ್ಲಿ ಮಾಡಿದ ವರ್ಣನೆಯ ಮರಾಠೀ ರೂಪಾಂತರವಿರುವದು. ಆದುದರಿಂದ ಅದನ್ನು ಬೇರೆ ಕೊಡುವ ಕಾರಣವೇ ಇಲ್ಲ. ಪ್ರಸ್ತುತ ಅವರು ಸಾಕ್ಷಾತ್ಕಾರವನ್ನು ಕುರಿತು ಏನು ಅಂದಿರುವರು ಇದನ್ನು ನೋಡಬೇಕಾಗಿದೆ. ಜ್ಞಾನದೇವನ ಮುಖ್ಯ ಗ್ರಂಥವೆಂದರೆ ಜ್ಞಾನೇಶ್ವರಿಯು. ಅದು ಗೀತೆಯ ಮೇಲೆ ಮರಾಠಿಯಲ್ಲಿ ಬರೆಯಲ್ಪಟ್ಟ ಅತ್ಯುತ್ತಮ ಭಾಷ್ಯವಿರುವದು. ಇದಲ್ಲದೆ ಅವನು 'ಅಭಂಗ'ವೆಂಬ ಚಿಕ್ಕ ಪದ್ಯಗಳನ್ನೂ 'ಅಮೃತಾನುಭವ' ಎಂಬ ಒಂದು ಸ್ವತಂತ್ರ ವೇದಾಂತ ಗ್ರಂಥವನ್ನೂ ಬರೆದಿರುವನು. ಅವನ ಗ್ರಂಥಗಳೆಂದರೆ ಸಮರ್ಪಕ ಉಪಮಾ ರೂಪಕಗಳ ಒಂದು ಕಣಿಯೇ ಇರುವದು ಎಂದು ಹೇಳಬಹುದು. 'ನೀರೊಣಗಿದ ಬಳಿಕ ಅದರಲ್ಲಿಯ ಪ್ರತಿಬಿಂಬವು ಮರಳಿ ಮೂಲವಸ್ತುವಿನಲ್ಲಿ ಒಂದಾಗುವದು, ಘಟವು ಒಡೆಯಿತೆಂದರೆ ಘಟಾಕಾಶವು ವಿಶ್ವಾಕಾಶದಲ್ಲಿ ಬೆರೆತು ಹೋಗುವದು, ಸುಡಲಿಕ್ಕೆ ಏನೂ ಇಲ್ಲದಾಯಿತೆಂದರೆ ಅಗ್ನಿಯು ತನ್ನಲ್ಲಿಯೆ ವಿರಮಿಸುವದು ಆ ಪ್ರಕಾರ ಆತ್ಮದರ್ಶನವಾಯಿತೆಂದರೆ ಆತ್ಮನು ಆತ್ಮನಲ್ಲಿಯೆ ಲೀನನಾಗುವನು. ಅದೇ ಆತ್ಯಂತಿಕ ಸ್ವಯಂಭುವಸ್ತುವು. ಅದನ್ನು ಮುಟ್ಟಿದವನು ಮರಳುವದಿಲ್ಲ.... ಆ ಸಮಯದಲ್ಲಿ ಇಂದ್ರಿಯಗಳು ನಿಷ್ಪ್ರಭವಾಗುವವು, ಮನಸು ಅಂತಃಕರಣದಲ್ಲಿ ಲಯಹೊಂದುವದು, ಉಸುರು ಸ್ಥಿರವಾಗುವದು, ಧ್ಯೇಯವಸ್ತುವು ಚಿತ್ತದಲ್ಲಿ ನಿಂತು ಪರಮಾನಂದವು ಅಳವಡುವದು. ಪರಮಾತ್ಮನೊಡನೆ ಐಕ್ಯದ ಅನುಭವವಾಗಿ ಆ ಐಕ್ಯಭಾವದ ಮೂಲಕ ಆನಂದಸಾಮ್ರಾಜ್ಯದಲ್ಲಿ ಪ್ರವೇಶವಾಗುವದು.....ಅವನು ವಿದ್ಯೆ ಅವಿದ್ಯೆಗಳಾಚೆಗೆ ಹೋಗು

ವನು. ಆಗ ಸಾವಿರ ಸೂರ್ಯರ ಪ್ರಭೆಯುಳ್ಳ ಸದ್ವಸ್ತುವು ಚಿದಾಕಾಶದಲ್ಲಿ ತೇಜಸ್ವಿತೆಯಿಂದ ತೊಳಗುವದು. ಸಾಕ್ಷಾತ್ಕಾರಿಯು ಆನಂದ ಸರೋವರದ ರಾಜಹಂಸನಂತೆ ವಿರಾಜಿಸುವನು,' ಎಂದು ಜ್ಞಾನೇಶ್ವರನು ಕಾವ್ಯಸ್ಫೂರ್ತಿಯಿಂದ ಸಾಕ್ಷಾತ್ಕಾರವನ್ನು ಬಣ್ಣಿಸಿರುವನು. ನಾಮದೇವನು ಅಭಂಗಪದಗಳನ್ನು ಮಾತ್ರ ಬರೆದಿರುವನು. ಅವನು ಈ ಬಗ್ಗೆ ಅಂದದ್ದರ ಸಾರಾಂಶವೇನಂದರೆ, 'ಸಾಕ್ಷಾತ್ಕಾರಸಾಮರ್ಥ್ಯವು ದೇವದತ್ತವಿರುವದು. ಪರಮೇಶ್ವರನ ಅನುಗ್ರಹವಿಲ್ಲದೆ ಇದು ಅಸಾಧ್ಯವು. ಅಂತಃಕರಣದಲ್ಲಿ ಪರಮಾತ್ಮನ ವಾಸವಿರುವದರಿಂದ ನಾಮದೇವನು ಸತತ ಪರಮಾನಂದವನ್ನನುಭವಿಸುತ್ತಿರುವನು. ಸಹಸ್ರಕೋಟಿ ಸೂರ್ಯತೇಜವು ಒಮ್ಮೆಲೆ ಅಂತಃಕರಣದಲ್ಲಿ ಬೆಳಗಲಾರಂಭಿಸಿತು. ಆ ತೇಜದ ಮುಂದೆ ಪಾರ್ಥಿವ ಸೂರ್ಯಚಂದ್ರರು ನಿಸ್ತೇಜರಾದರು. ಆಕಳು ತನ್ನ ಎಳೆ ಕರುವಿನೆಡೆಗೆ ಬಂದಂತೆ ದೇವರು ನಾಮದೇವನೆಡೆಗೆ ಬಂದನು. ಅತ್ಯಂತ ನಿಕಟ ಪರಮಾನುಭವದ ಮೂಲಕ ದೇವರೇ ನಾಮದೇವನು, ನಾಮದೇವನೆ ದೇವರು, ಎಂಬ ಭಾವವು ಅಳವಟ್ಟಿತು.' ಇನ್ನು ಏಕನಾಥನ ಎಲ್ಲಕ್ಕೂ ಪ್ರಸಿದ್ಧ ಗ್ರಂಥವೆಂದರೆ ಅವನು ಮರಾಠಿಯಲ್ಲಿ ಬರೆದ ಭಾಗವತವು. ಅವನೂ ಅದ್ವೈತ ಅನುಭವದ ವರ್ಣನೆಯನ್ನು ಮಾಡಿರುವನು. ಯಾವ ಪುಲಕ ಸ್ವೇದಾದಿ ಲಕ್ಷಣಗಳು ತನ್ನಲ್ಲಿ ಇನ್ನೂ ಉಂಟಾಗಿಲ್ಲವಲ್ಲ, ಎಂದು ಬಸವಣ್ಣನು ಒಮ್ಮೆ ವಿಕಳಾವಸ್ಥೆಯಲ್ಲಿ ವಿಲಪಿಸಿರುವನೊ ಅವೆಲ್ಲ ಐಕ್ಯಾನಂದದ ಲಕ್ಷಣಗಳು, ಎಂದು ಏಕನಾಥನು ಹೇಳಿರುವನು. ಅವನು ಅಂದದ್ದೇನಂದರೆ, 'ಪುಲಕ, ಸ್ವೇದ, ಕಂಪ, ಅಶ್ರು, ಆನಂದ, ಗದ್ಗದ, ದೀರ್ಘಸ್ವರ ಇವೆಲ್ಲ ಐಕ್ಯಾನಂದದ ಲಕ್ಷಣಗಳಿರುವವು. ಆ ಸ್ಥಿತಿಯಲ್ಲಿ ಭಕ್ತನ ಶತಕೋಟಿ ರೋಮಂಗಳೆಲ್ಲ ಕಂಗಳಾಗಿ ದಿವ್ಯದರ್ಶನವನ್ನು ಪಡೆಯುವವು. ವಿಶ್ವವೆಲ್ಲ ಆಗ ಒಂದು ಸ್ವರ್ಗೀಯ ಪ್ರಭೆಯ ಉಡುಪನ್ನು ತೊಡುವದು. ಆತ್ಮಸೂರ್ಯನು ಕಣ್ಣೆದುರಿಗೆ ಸತತ ಬೆಳಗುವನು. ಎಲ್ಲ ಪೂಜಾಸಾಮಗ್ರಿಯು ಪರಮಾತ್ಮನೆ ಆಗಿ ಪರಿವರ್ತಿಸುವದು, ಪೂಜ್ಯ ಪೂಜಕರಿಬ್ಬರೂ ಒಂದೇ ಆಗಿ ಹೋಗುವರು. ಆ ಸ್ಥಿತಿಯಲ್ಲಿ ಜನನಮರಣಾದಿಗಳ ದ್ವಂದ್ವಗಳಳಿದುಹೋಗುವವು....ಸಮಾಧಿಯೆಂದರೆ ಎಚ್ಚರದ ಅಭಾವವಲ್ಲ. ಪರಬ್ರಹ್ಮನ ಪೂರ್ಣ ಮತ್ತು ನಿರಂತರ ಎಚ್ಚರವೆ ನಿಜಸಮಾಧಿಯು. ಅದೇ ನಿತ್ಯ ಸಾಕ್ಷಾತ್ಕಾರವೆನಿಸುವದು.' ರಾಮದಾಸಸ್ವಾಮಿಗಳು ವಿದ್ಯಾರಣ್ಯರಂತೆ ಪರಮ ಕರ್ಮಯೋಗಿಗಳು. ಅವರ 'ದಾಸಬೋಧ' ಎಂಬ ಮಹಾ

ಗ್ರಂಥವು ವ್ಯವಹಾರವೇದಾಂತಗಳನ್ನು ಸಮನ್ವಯಿಸುವದು. ಆ ಗ್ರಂಥದ ಪರಿಚಯವಿಲ್ಲದ ಮಹಾರಾಷ್ಟ್ರಯನೆ ಇರಲಿಕ್ಕಿಲ್ಲವೆಂದರೂ ಸಲ್ಲುವದು. ಅದು ಇಷ್ಟು ಸುಲಭವೂ ಬಾಲಕರಿಗೆ ಸಹ ಬೋಧವಾಗುವಂತೆ ಬರೆದುದೂ ಲೋಕಪ್ರಿಯವೂ ಇರುವದು. ಸಾಕ್ಷಾತ್ಕಾರವನ್ನು ಕುರಿತು ರಾಮದಾಸ ಸ್ವಾಮಿಯು ಅಂಬೋಣವೇನಂದರೆ, 'ಆ ಸ್ಥಿತಿಯಲ್ಲಿ ಎಲ್ಲ ಪಾಪಗಳ ಲಯವಾಗುವದು, ಜನನಮರಣಗಳು ಇಲ್ಲದಂತಾಗುವವು. ಸಂಪೂರ್ಣ ಆತ್ಮಸಮರ್ಪಣದ ಅನುಭವವು ಬಂದಿತೆಂದರೆ ಪರಮಾತ್ಮನ ನಿಃಸಂಶಯ ಜ್ಞಾನವಾಗುವದು. ಆ ಜ್ಞಾನವೆ ಎಲ್ಲರ ಗುಪ್ತ ನಿಧಿನಿಧಾನವು, ಸರ್ವರ ಸುಪ್ತ ಸುಖಶ್ರೀಯು. ಈ ಜ್ಞಾನವನ್ನು ಪಡೆದವನು ಆಂತರಿಕ ಆಧ್ಯಾತ್ಮಿಕ ಆನಂದದಿಂದ ಸಂತೃಪ್ತನಾಗುವನು. ಆಗ ಮೇಲೆ ಕೆಳಗೆ ಎಲ್ಲೆಲ್ಲಿಯೂ ಬ್ರಹ್ಮನೆ ಪ್ರತೀತನಾಗುವನು. ಆಗ ಹೊರಗಣ್ಣು ಮುಚ್ಚಿ—ಹೊರಗಣ್ಣಿಗೆ ಬ್ರಹ್ಮನು ಎಂದಿಗೂ ಗೋಚರನಾಗನು– ಒಳಗಣ್ಣಿನ ದಿವ್ಯದೃಷ್ಟಿಯು ತೆರೆದು ಸತ್ಯಪ್ರಕಾಶವು ಎಲ್ಲೆಲ್ಲಿಯೂ ಪಸರಿಸಿದ್ದು ಕಾಣುವದು.' ಈ ಎಲ್ಲ ಸಂತರಲ್ಲಿ ತುಕಾರಾಮನು ತನ್ನ ಅನುಭವವನ್ನು ಎಲ್ಲಕ್ಕು ಹೆಚ್ಚು ವಿಸ್ತೃತವಾಗಿ ವರ್ಣಿಸಿರುವನು. ಅವನು ಸಾವಿರಾರು ಅಭಂಗಗಳನ್ನು ಬರೆದಿರುವನು. ತತ್ವತಃ ಅದ್ವೈತವನ್ನು ಒಪ್ಪಿದರೂ ದ್ವೈತಭಕ್ತಿಯೆ ಅವನ ಅತ್ಯಂತ ಪ್ರೀತಿಯ ವಿಷಯವು. 'ನಾನು ಕೊನೆಯವರೆಗೂ ನಿನ್ನ ಕಿಂಕರನಾಗಿರಬೇಕು, ದೇವಾ' ಎಂದು ಅವನು ದೇವರನ್ನು ಅನೇಕಸಾರೆ ಬೇಡಿಕೊಂಡಿರುವನು. ಜನನ ಮರಣ ರಹಿತ ಮುಕ್ತಿಗಿಂತ ಮತ್ತೆ ಮತ್ತೆ ಭಕ್ತನಾಗಿ ಹುಟ್ಟುವುದೆ ಶ್ರೇಷ್ಠವೆಂದು ಅವನು ಹಲವುಸಾರೆ ಪ್ರತಿಪಾದಿಸಿರುವನು. ಸಾಕ್ಷಾತ್ಕಾರದ ಬಗ್ಗೆ ಅವನು ಬರೆದ ಎಷ್ಟೋ ಅಭಂಗಗಳು ಪ್ರಸಿದ್ಧವಿರುವವು. ಅವುಗಳ ಮುಖ್ಯ ಸಾರಾಂಶವನ್ನು ಮಾತ್ರ ಇಲ್ಲಿ ಹೇಳಬಹುದು. ಅವನು ಅಂದದ್ದೇನಂದರೆ, 'ನಮಗಿರುವ ನಮ್ಮ ಎಚ್ಚರವೆ, ನಾನು ಇರುವೆನು, ಎಂಬ ಅಹಂಕಾರ ಮೂಲಕ ಅರಿವೆ ನಮ್ಮ ಜ್ಞಾನಕ್ಕೆ ತಡೆಯಾಗಿ ನಿಂತಿರುವದು. ತನ್ನ ಎಚ್ಚರ ಹುಟ್ಟಿದ ಕೂಸಿನೆಡೆಗೆ ತಾಯಿಯು ಕಣ್ಣೆತ್ತಿ ಕೂಡ ನೋಡುವುದಿಲ್ಲ....ನೀರಿನಿಂದಾದ ಮುತ್ತು ಮತ್ತೆ ನೀರಾಗದಂತೆ, ಮಥನಿಸಿ ತೆಗೆದ ಬೆಣ್ಣೆ ಮತ್ತೆ ತಾ ಮಜ್ಜಿಗೆಯಾಗದಂತೆ ದೇವಸಾಕ್ಷಾತ್ಕಾರಿಯಾದವನು ಮತ್ತೆ ಸಾಮಾನ್ಯ ಮನುಜನಾಗನು....ದೇವರಿರುವನೆಂಬ ಮನಗಾಣಿಕೆ ಬೇರೆ ಅವನ ಸಾಕ್ಷಾತ್ಕಾರ ಬೇರೆ. ಆ ಸಾಕ್ಷಾತ್ಕಾರದ ಬೆಳಕಿನ ವಿನಾ ಎಲ್ಲವೂ ವ್ಯರ್ಥವು. ನನಗೆ ಆ ಅನುಭವವು ಬೇಕು.....ಮೂಕನು

ಸಕ್ಕರೆ ಸವಿದಂತೆ ಭಕ್ತನು ಆ ಪರಮಾನುಭವವನ್ನುಣ್ಣುವನು. ಅಲ್ಲಿ ಪೂರ್ಣ ಶಬ್ದಮುಗ್ಧತೆಯ, ವೌನದ, ಆತ್ಯಂತಿಕವೌನದ ಸಾಮ್ರಾಜ್ಯ ವಿರುವದು.... ಅಹಾ, ನನ್ನಿಂದ ನಾನೆ ಹುಟ್ಟಿದೆನಲ್ಲ! ನಾನು ನನ್ನನ್ನೆ ನೋಡುತಿರುವೆ. ನಾನು ನನ್ನದೆಂಬುದು ಈಗ ಅಳಿಯಿತು. ಅವನೇ ಎಲ್ಲವನು ಕೊಡುವವನು ಎಲ್ಲವನು ಕೊಳ್ಳುವವನು. ಎಲ್ಲೆಲ್ಲಿಯೂ ಅವನೇ ಅವನು. ಸೂರ್ಯನ ಉದಯಾಸ್ತಗಳು ಇಲ್ಲಿ ಲೋಪಹೊಂದಿವೆ. ಕರ್ಮಾ ಕರ್ಮ, ನಾಮರೂಪ ಇವೆಲ್ಲವುಗಳಾಚೆಗೆ ಹೋಗಿ ನಾನು ಅವನೇ ಆಗಿರುವೆನು....ಆ ಬೆಳಕು ನನ್ನನ್ನು ಮೇಲಕ್ಕೆ ಒಯ್ಯುತಿದೆ. ನಾನು ಈಗ ಆಪ್ತಕಾಮನು, ಆ ಅರೂಪನ ಪಾದಗಳನು ನಾನು ಕಂಡೆನು. ಅವನ ಅನುಗ್ರಹವೆ ಈ ದರ್ಶನಕ್ಕೆ ಕಾರಣವು. ನಾನು ಆನಂದಾಬ್ಧಿಯಲ್ಲಿ ಮುಳುಗಿರುವೆನು. ಬಡವನಿಗೆ ಭಾಗ್ಯವು ದೊರೆಕೊಂಡಂತಾಯಿತಯ್ಯಾ. ಈಗ ದಿವ್ಯಾನಂದವು ಎನ್ನ ರೋಮರೋಮದಲ್ಲಿ ತುಂಬಿದೆ. ನನ್ನ ಎಲ್ಲ ಭಾವಗಳು ದೇವನಲ್ಲಿ ಐಕ್ಯಹೊಂದಿವೆ. ನನಗೆ ದಿವ್ಯೋನ್ಮಾದವಾಗಿದೆ. ಆದುದರಿಂದ ನಾನು ಅನಿರ್ವಚನೀಯ ಆನಂದದಲ್ಲಿರುವೆನು. ಕೋಟಿ ಚಂದ್ರರ ಬೆಳಕಿನಂತಿರುವ ರಮ್ಯವಾದ ಅವನ ತೇಜವು ಈ ಜಗವನೆಲ್ಲ ತುಂಬಿ ಸೂಸುತಿದೆ. ಶಾಶ್ವತ ಬೆಳಗಿನ ಹಬ್ಬವಾಗಿದೆ. ಗೂಢ ಸುಂದರ ಗಂಟೆಗಳ ನಿನಾದವು ಲಾಲಿಯು ಹಾಡಿ ನನ್ನನ್ನು ಮಲಗಿಸುತ್ತಿರುವದು. ದಿವ್ಯ ಸ್ವರ್ಗೀಯ ಸಂಗೀತವು ಆಕಾಶವನ್ನೆಲ್ಲ ತುಂಬಿದೆ.' ಮೇಲಿನ ಅವತರಣಗಳಲ್ಲಿ ಬಂದ ಹಲವು ಉಪಮಾ ರೂಪಕಗಳು ಶಬ್ದಶಃ ವಚನಕಾರರ ಹಲವು ವಚನಗಳಲ್ಲಿ ಬಂದಿರುವವು. ಮೂಕನು ಸಕ್ಕರೆಸವಿದಂತೆ, ಆಕಳು ಎಳೆ ಕರುವಿನೆಡೆಗೆ ಹೋಗುವಂತೆ, ಬಡವನಿಗೆ ಭಾಗ್ಯವು ದೊರೆಕೊಂಡಂತೆ, ಸಾವಿರ ಸೂರ್ಯ ಪ್ರಭೆಯಂತೆ, ಮುತ್ತು ತಿರುಗಿ ನೀರಾಗದಂತೆ, ಬೆಣ್ಣೆ ತಿರುಗಿ ಮಜ್ಜಿಗೆಯಾಗದಂತೆ, ಎಂಬ ಮುಂತಾದ ರೂಪಕಗಳು ಅತ್ತ ಮಹಾರಾಷ್ಟ್ರ ಸಾಧುಗಳ ವಚನಗಳಲ್ಲಿಯೂ ಇತ್ತ ಶಿವಶರಣರ ಉಕ್ತಿಗಳಲ್ಲಿಯೂ ಶಬ್ದಶಃ ಒಂದೇ ಇರುವವು. ದೇಶಕಾಲಭಾಷೆಗಳು ಬೇರೆ ಇದ್ದರೂ ಅವುಗಳ ಅಪೇಕ್ಷೆ ಇಲ್ಲದೆ ಕಾರ್ಯಮಾಡುವ ಧರ್ಮಸಂಸ್ಥಿತಿಯು ಎಲ್ಲೆಲ್ಲಿಯೂ ಒಂದೇ ಬಗೆಯಿಂದ ಕಾರ್ಯಮಾಡುವದು. ಆದುದರಿಂದಲೆ ಬೇರೆ ಬೇರೆ ಪ್ರಾಂತದ ಸಾಧುಸಂತರ ವಿಚಾರಸರಣಿಯಲ್ಲಿ, ವಾಣಿಯಲ್ಲಿ, ಶೈಲಿಯಲ್ಲಿ ಇಂಥ ವಿಲಕ್ಷಣವಾದ ಸಾಮ್ಯವು ಕಂಡುಬರುವದು.

೨೦೩. ಇನ್ನು ಶಿವಶರಣರಲ್ಲದೆ ಕರ್ನಾಟಕದಲ್ಲಿ ಅನೇಕ ಬೇರೆ

ಸತ್ಪುರುಷರೂ ಆಗಿ ಹೋಗಿರುವರು. ಶಿವೋಪಾಸಕರಲ್ಲಿ ಕೂಡ ವಚನ ಪದ್ಧತಿಯಿಂದ ಬರೆಯದೆ ಅನ್ಯರೀತಿಯಿಂದ ತಮ್ಮ ಶ್ರೇಷ್ಠವಾದ ವಿಚಾರಗಳನ್ನು ವ್ಯಕ್ತಮಾಡಿದ ಸರ್ವಜ್ಞ, ನಿಜಗುಣಶಿವಯೋಗಿ, ಸರ್ಪಭೂಷಣ, ಮಹಾಲಿಂಗರಂಗ ಮುಂತಾದವರು ಪ್ರಸಿದ್ಧರಿರುವರು. ವೈಷ್ಣವ ಸಂಪ್ರದಾಯದಲ್ಲಿ ದಾಸರು ವಿಶೇಷ ಹೆಸರಾಗಿರುವರು. ಇವರೆಲ್ಲರ ವಚನಗಳನ್ನು ಇಲ್ಲಿ ಅವತರಿಸುತ್ತ ಕೂಡುವದು ಸಾಧ್ಯವಿಲ್ಲ. ವಚನಕಾರರ ವಿಚಾರಗಳೊಡನೆ ಇದ್ದ ದಾಸರ ಪದಗಳ ಸಾಮ್ಯವನ್ನೆ ಮುಖ್ಯವಾಗಿ ಇಲ್ಲಿ ನಾವು ತೋರಿಸಬೇಕೆನ್ನುತ್ತೇವೆ. ದಾಸರಲ್ಲಿ ಪುರಂದರದಾಸನು ಎಲ್ಲರಿಗೂ ಗುರುಸ್ಥಾನದಲ್ಲಿರುವನು. ಅವನು ಸಾವಿರಾರು ರಾಗಯುಕ್ತ, ತಾಲಬದ್ಧ, ಹಾಡಲಿಕ್ಕೆ ಬರುವಂಥ, ಕೀರ್ತನೆಗಳನ್ನು ಬರೆದಿರುವನು. ಕನಕದಾಸ, ವಿಜಯದಾಸ, ಗೋಪಾಲದಾಸ, ಜಗನ್ನಾಥದಾಸ ಮುಂತಾದವರು ಪುರಂದರದಾಸನ ಮೇಲುಪಂಕ್ತಿಯನ್ನೆ ಅನುಸರಿಸಿ ಕೀರ್ತನೆ, ಸುಳಾದಿ, ಉಗಾಭೋಗಾದಿಗಳನ್ನು ಬರೆದಿರುವರು. ಅನೇಕ ಕೀರ್ತನೆಗಳನ್ನು ಬರೆಯುವುದಲ್ಲದೆ ಜಗನ್ನಾಥದಾಸನು 'ಹರಿಕಥಾಮೃತಸಾರ' ಎಂಬ ಸುಂದರವಾದ ಭಕ್ತಿ ಮತ್ತು ತತ್ವಗ್ರಂಥವನ್ನು ಬರೆದಿರುವನು. ಇವರೆಲ್ಲರು ಮಧ್ವಮತದವರು ಅರ್ಥಾತ್ ದ್ವೈತವಾದಿಗಳು. ಆದರೆ ಭಕ್ತಿ, ಗುರುಮಹಿಮೆ, ನಾಮಮಹಾತ್ಮ್ಯ, ಜ್ಞಾನವೈರಾಗ್ಯಗಳ ಅವಶ್ಯಕತೆ ಮುಂತಾದ ವಿಷಯಗಳಲ್ಲಿ ಇವರಿಗೆ ಮತ್ತು ಅದ್ವೈತವಾದಿಗಳಿಗೆ ಯಾವ ಭೇದವೂ ಇಲ್ಲ. ವಿಜಯದಾಸನು ತನ್ನ ಸಾಕ್ಷಾತ್ಕಾರವನ್ನು ವರ್ಣಿಸುವಾಗ, 'ಹರಿಕರುಣವೆಂಬ ಕೀಲಿಯ ಕೈಯಿಂದ ಇಂದು ಎನ್ನ ಅಂತರಂಗದ ಕದವು ತೆರೆಯಿತು. ಜ್ಞಾನದೀಪವನ್ನೆತ್ತಿ ನೋಡಲು ಎತ್ತ ನೋಡಿದತ್ತ ದೇವರ ಶೃಂಗಾರಸದನವು ಶೋಭೆಯಿಂದ ಕಂಗೊಳಿಸಿತು. ವೇರಗುವ ಮಧ್ಯಮಂಟಪದಲ್ಲಿ ಕೋಟಿರವಿತೇಜವುಳ್ಳ ಸಚ್ಚಿದಾನಂದೈಕನು ವಿರಾಜಿಸಿದನು. ಹೃದಯ ಕಮಲದೊಳಿರುವ ಆ ಪರಮನನ್ನು ನಾನು ಕಂಡೆನು' (ಕೀ. ಭಾಗ. ೧. ೬೨), ಎಂದು ಹೇಳಿರುವನು. ಪರಮಾತ್ಮನು ಸಾಕಾರ ದೃಷ್ಟಿಗೆ ಸಿಲುಕನು ಎಂದು ತಾನೇ ಒಂದೆಡೆಗೆ ಹೇಳಿ ಮತ್ತೆ, 'ಆ ಅಚ್ಯುತನನ್ನು ನಾನು ಕಣ್ಣಾರೆ ಕಂಡೆನು, ಆ ಭಾನುಕೋಟಿ ತೇಜದವನನ್ನು ನಾನು ಕಂಡೆನು, ಕಂಡೆನು' (ಭಾಗ ೧. ೮೯,), ಎಂದೂ 'ಪರಮಾತ್ಮನ ಪಾದದೊಲುಮೆ ಎನಗಾಯಿತು, ಅವನು ಬಂದು ಎನ್ನ ಹೃದಯದಲ್ಲಿ ನೆಲೆಯಾಗಿ ನಿಂತನು' (ಭಾಗ. ೨. ೩೫), ಎಂದೂ 'ಅನುಭಾವದಡುಗೆಯ ಮಾಡಿ, ಗುರುಶರಣರು

ಸವಿದಾಡಿ, ದೇವರನು ಮನದಣಿ ಕೊಂಡಾಡುವ,' (ಭಾಗ. ೪. ೧೧೭), ಎಂದೂ ಪುರಂದರದಾಸನು ಆನಂದದಿಂದ ಹಾಡಿರುವನು. ತನ್ನನ್ನು ಕೊಂಡಾಡಿದವರಿಗೆ ಅತ್ಯಂತ ಪ್ರಿಯನಾದ ಅಂದರೆ ಭಕ್ತಪ್ರಿಯನಾದ ಪರಮಾತ್ಮನನ್ನು ನಾನು ಕಂಡೆನು, ಕಂಡೆನು ಆ ಪಂಢರಿರಾಯನನ್ನು ಎಂದು ಜಗನ್ನಾಥದಾಸನು ವರ್ಣಿಸಿರುವನು (ಕೀ. ಭಾಗ. ೧. ೩೪). ಪರಮಾತ್ಮನ ಪೂಜೆಯು ಅರಿತವರಿಗೆ ಅತಿ ಸುಲಭವು, ಭೂಮಂಡಲವೆ ಅವನ ಪೀಠವು, ಸೋಮಸೂರ್ಯರೆ ದೀಪ, ನಕ್ಷತ್ರಮಂಡಲವೆ ಲಕ್ಷದೀಪಾವಳಿ, ಎಂದು ಮುಂತಾಗಿ ಅವನು ಮಾಡಿದ ವಿರಾಟಪುರುಷನ ಪೂಜೆಯ ವರ್ಣನೆಯು ಪ್ರತಿಭಾಪೂರ್ಣವೂ ಬಹಳ ಉಚ್ಚಕೋಟಿಯದೂ ಇರುವದು (ಕೀ. ಭಾಗ. ೧. ೧೧೨). ಬದುಕಿದೆನು, ಬದುಕಿದೆನು, ಪರಮಾತ್ಮದರ್ಶನದಿಂದ ನಾನು ಬದುಕಿದೆನು, ಎಂದು ಆಧ್ಯಾತ್ಮಿಕ ನವಜೀವನವನ್ನನುಭವಿಸುವ ಕನಕದಾಸನು ಸಾಕ್ಷಾತ್ಕಾರದಿಂದಾದ ತನ್ನ ಧನ್ಯಭಾವವನ್ನು ವ್ಯಕ್ತಗೊಳಿಸಿರುವನು (ಕೀ. ಭಾಗ. ೧. ೬೬).

೨೦೪. ಈ ರೀತಿ ಬೇರೆ ಬೇರೆ ದೇಶಗಳಲ್ಲಿ, ಪ್ರಾಂತಗಳಲ್ಲಿ, ವಿವಿಧ ಕಾಲಗಳಲ್ಲಿ, ಆಗಿಹೋದ ಹಲವು ಸತ್ಪುರುಷರು ಸಾಕ್ಷಾತ್ಕಾರವನ್ನು ಕುರಿತು ಬರೆದ ಕೆಲವು ಮಾತುಗಳನ್ನು ಅತಿ ಸಂಕ್ಷೇಪದಿಂದ ಇಲ್ಲಿ ಕೊಟ್ಟಿದ್ದೇವೆ. ಹಲವರು ತಮ್ಮ ಇಷ್ಟದೇವತೆಗಳ ಸಗುಣ ಸಾಕಾರರೂಪಗಳನ್ನು, ಇನ್ನು ಕೆಲವರು ಬರಿಯ ಸಗುಣ ಪರಮಾತ್ಮನನ್ನು, ಮತ್ತೆ ಕೆಲವರು ತೇಜವನ್ನು ಇಲ್ಲವೆ ದಿವ್ಯವಾಣಿಯನ್ನು, ಅನ್ಯರು ಕೇವಲ ವರ್ಣನಾತೀತ ಚಿದ್ರೂಪವನ್ನು ಸಾಕ್ಷಾತ್ಕರಿಸಿದ ವರ್ಣನೆಗಳು ಅಲ್ಲಲ್ಲಿ ಬರುವವು. ಕೇವಲ, ಅಗಮ್ಯ, ಅತೀತ ಚಿದ್ರೂಪದರ್ಶನವೆ ಸಾಕ್ಷಾತ್ಕಾರದ ಕೊನೆಯ ಮೆಟ್ಟು ಎಂಬಲ್ಲಿ ಯಾವ ಸಂಶಯವೂ ಇಲ್ಲ. ಮಿಕ್ಕ ದರ್ಶನಗಳೆಲ್ಲ ಆ ಸಾಕ್ಷಾತ್ಕಾರದ ಪ್ರತಿಬಿಂಬಗಳು ಮಾತ್ರ, ಎಂದು ಹೇಳಬಹುದು. ಈ ಎಲ್ಲ ಸಾಕ್ಷಾತ್ಕಾರಗಳಲ್ಲಿರತಕ್ಕ ಸಾಮಾನ್ಯ ಲಕ್ಷಣಗಳನ್ನು ನಾವು ಇಲ್ಲಿ ಮತ್ತೊಮ್ಮೆ ವಿವರಿಸುವೆವು. ಯಾವದೇ ದರ್ಶನವು ಸಾಕ್ಷಾತ್ಕಾರವೆನಿಸಿಕೊಳ್ಳಬೇಕಾದರೆ, ಸಾಕ್ಷಾತ್ಕಾರಿಗೆ ಅದು ಸೂರ್ಯನಷ್ಟು ಪ್ರತ್ಯಕ್ಷ ಅನುಭವಕ್ಕೆ ಬರಬೇಕು, ಅದಕ್ಕೆ ಅನ್ಯ ಸಾಕ್ಷಿಯ ಅಥವಾ ಪ್ರಮಾಣದ ಅಪೇಕ್ಷೆ ಇರಬಾರದು, ಅದು ಯಾವ ಬಾಹ್ಯ ಪ್ರಮಾಣಗಳಿಂದಲೂ ಬಾಧಿತವಾಗಿರಬಾರದು, ಅದರ ಬಗ್ಗೆ ಮನಸಿನಲ್ಲಿ ತಿಲಮಾತ್ರ ಸಂಶಯವು ಸಹ ಉಂಟಾಗಬಾರದು, ಅದು ಅವನಿಗೆ ಅನಿರ್ವಚನೀಯವೆನಿಸಬೇಕು, ಅದು ಅವನ ಕಾಯ

ಮನಭಾವಗಳನ್ನೆಲ್ಲ ಪೂರ್ಣವಾಗಿ ವೇಧಿಸಬೇಕು, ಅದರಿಂದ ಅವನಲ್ಲಿ ಒಂದು ಬಗೆಯ ಕೃತಾರ್ಥ ಭಾವವು ಉಂಟಾಗಬೇಕು, ಅದು ಅವನಲ್ಲಿ ನಿರತಿಶಯ ಆನಂದವನ್ನು ಹುಟ್ಟಿಸಬೇಕು. ಈ ಪ್ರಕಾರದ ಲಕ್ಷಣಗಳುಳ್ಳ ಸ್ಫುರಣಾತ್ಮಕ ಆಂತರಿಕ ಅನುಭವವೆ ಸಾಕ್ಷಾತ್ಕಾರವೆನಿಸುವದು. ಮಿಕ್ಕ ವಿಷಯುಗಳಿಗಿಂತ ನಾವು ಈ ವಿಷಯಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿರುವೆವು. ಯಾಕಂದರೆ, ಇದು ವಚನಶಾಸ್ತ್ರದ ತಳಹದಿಯಿರುವದು, ಅದರ ಕೀಲವಿರುವದು. ಇದರ ಸಹಾಯದಿಂದ ಅದರಲ್ಲಿ ಪ್ರತಿಪಾದಿಸಲ್ಪಟ್ಟ ಅನ್ಯ ವಿಷಯುಗಳನ್ನು ಜನ್ಮಾಗಿ ತಿಳಿದುಕೊಳ್ಳಬಹುದು, ಇದರ ಬೆಳಕಿನಲ್ಲಿ ಅನ್ಯ ವಿಷಯುಗಳನ್ನು ನೋಡಲಿಕ್ಕೆ ಸುಲಭವಾಗುವದು. ಇಂಥ ಸಾಕ್ಷಾತ್ಕಾರದಿಂದಲೆ ಸ್ಫುರಣಹೊಂದಿ, ಈ ಬಗೆಯ ಆತ್ಮಪ್ರಕಾಶದಿಂದಲೆ ಪ್ರೇರಿತರಾಗಿ, ವಚನಕಾರರು ಮತ್ತು ಅವರಂತೆ ಆತ್ಮಾನುಭವವನ್ನು ಪಡೆದ ಅನ್ಯ ಸ್ಥಲಕಾಲುಗಳಲ್ಲಿಯ ಸತ್ಪುರುಷರು ಆ ಸನಾತನಮಾರ್ಗವನ್ನು ಎಲ್ಲರಿಗೂ ತೋರಿಸಿಕೊಟ್ಟಿರುವರು.

೨೦೫. ವ್ಯವಹಾರಿಕ ಜೀವನದಲ್ಲಿ ಬೆಳಕಿಗೆ ಮತ್ತು ಕಣ್ಣಿಗೆ ಇದ್ದ ಮಹತ್ವವು ಅಥವಾ ಅದಕ್ಕೂ ಹೆಚ್ಚು ಮಹತ್ವವು ಪಾರಮಾರ್ಥಿಕ ಜೀವನದಲ್ಲಿ ಸಾಕ್ಷಾತ್ಕಾರಕ್ಕೆ ಇರುವುದರಿಂದ ಅದನ್ನು ಪಡೆಯಬೇಕೆಂಬ ಉತ್ಕಟ ಇಚ್ಛೆಯು ಎಲ್ಲಸಾಧಕರಲ್ಲಿ ಇರುವದುಸಹಜವು. ಸಾಕ್ಷಾತ್ಕಾರವನ್ನು ಪಡೆಯುವ ಲವಲವಿಕೆ, ಪರಾತ್ಪರ ಸತ್ಯವನ್ನು ಇಲ್ಲವೆ ಪರಮಾತ್ಮನನ್ನು ಕಾಣುವ ಇಚ್ಛೆ, ಮುಕ್ತಿಯ ಆಕಾಂಕ್ಷೆ, ನಿತ್ಯಾನಂದವನ್ನು ಪಡೆಯುವ ಹವಣು ಇವೆಲ್ಲ ಮೂಲದಲ್ಲಿ ಒಂದೇ ಇರುವವು. ದೇಹಕ್ಕೆ ಹಸಿವೆನೀರಡಿಕೆಗಳು ಸ್ವಾಭಾವಿಕವಿರುವಂತೆ ಜೀವಕ್ಕೆ ಈ ಆಕಾಂಕ್ಷೆಯು ಸ್ವಾಭಾವಿಕವಿರುವದು. ದುಃಖಮುಕ್ತನಾಗಿ ನಿತ್ಯಾನಂದವನ್ನನುಭವಿಸಬೇಕು, ಎಂದು ಪ್ರತಿಯೊಬ್ಬ ಜೀವನ ಇಚ್ಛೆ ಇರುವದು. ಪರಮಾತ್ಮದರ್ಶನವಾಗುವುದರಿಂದ ಈ ಇಚ್ಛೆಯು ಕೈಗೂಡುವದು, ಎಂಬುದನ್ನು ಯಾರು ಮನಗಂಡಿರುವರೊ ಅವರು ಆ ಪ್ರಯತ್ನವನ್ನು ಪ್ರಾರಂಭಿಸುವರು. ದುಃಖ, ಮಾಯೆ, ಮೋಹ, ಪಾಪ, ಚಾಂಚಲ್ಯ, ನಾನು ಅಲ್ಪನು ಎಂಬ ಸಂಕುಚಿತ ದೇಹಭಾವ, ಇವುಗಳಿಂದ ಪಾರಾಗಿ ಸುಖ, ಜ್ಞಾನ, ಸ್ಥೈರ್ಯ, ಶಾಂತಿ, ಅನಂತತ್ವ ಮುಂತಾದವುಗಳನ್ನು ದೊರಕಿಸಬೇಕೆಂದು ವಚನಕಾರರು ಸಾಧನಾವಸ್ಥೆಯಲ್ಲಿ ತಲ್ಲಣಗೊಳ್ಳುತ್ತಿದ್ದರು. ಆ ಹಂಬಲವು ಎಷ್ಟೋ ವಚನಗಳಲ್ಲಿ ವಿವಿಧರೀತಿಯಿಂದ ಬಣ್ಣಿಸಲ್ಪಟ್ಟಿದೆ. ಒಮ್ಮೆ ಆರ್ತಭಾವ, ಇನ್ನೊಮ್ಮೆ ವಿರಹ, ಮತ್ತೊಮ್ಮೆ

ಪ್ರಾರ್ಥನೆ, ಒಪ್ಪೊಮ್ಮೆ ಪೊರೆ ಇಡೋಣ, ಹೀಗೆ ಬೇರೆ ಬೇರೆ ರೀತಿಯಿಂದ ಈ ಹಂಬಲವು ವ್ಯಕ್ತವಾಗಿದೆ. ಕಪ್ಪೆ ಸರ್ಪನ ನೆಳಲಲ್ಲಿ ಇರ್ಪಂತೆ ಎನಗಾಯಿತ್ತು ದೇವಾ (೧೭೮), ಈ ಸಂಸಾರದಂದುಗವು ಎಂದು ಹಿಂಗುವದು ಒಡೆಯಾ (೧೮೦), ನಿಮ್ಮನೊಡಗೂಡಿ ಬೇರಾಗದೆಂದಿಪ್ಪೆನೋ ಸ್ವಾಮೀ (೧೮೨), ಎಂದು ಬಸವಣ್ಣನು ಆರ್ತಭಾವದಿಂದ ದೇವರನ್ನು ಕೇಳಿರುವನು. ಅರಸಿನ ಮಿಂದು, ಹೊಂದುಡಿಗೆಯನೆ ಉಟ್ಟು ಚನ್ನಮಲ್ಲಿಕಾರ್ಜುನ ಬಂದಾನೆಂದು ಬಟ್ಟೆಗಳ ನೋಡುತಿರ್ದೆ (ವ. ೨೧೫), ಮನ ಮಂಚವ ಮಾಡಿ ಚಿತ್ತದಿ ಪಜ್ಜಡಿಸುವೆ ಬಾರಯ್ಯ (೧೮೭), ಗಿಳಿಗಳಿರಾ, ಹಂಸಗಳಿರಾ, ಕೋಗಿಲೆಗಳಿರಾ, ನವಿಲುಗಳಿರಾ, ಚನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂಬುದ ಬಲ್ಲಿರಾ (ವ. ೨೧೬), ಎಂಬ ಮುಂತಾದ ವಚನಭಾಗಗಳಲ್ಲಿ ವಿರಹಭಾವವು ಒಡಮೂಡಿರುವದು. ಎಳೆಗರು ತಾಯನರಸಿ ಬಳಲುವಂತೆ ಬಳಲುತ್ತಿರುವೆನು ಕಾರುಣ್ಯವ ಮಾಡಯ್ಯ (೨೪೪), ವಿಷಯ ರಹಿತನವಾಡಿ ಭಕ್ತಿರಸವ ದಣಿಯ ಮೇಯಿಸಿ ಸಲಹಯ್ಯ (೧೭೭), ಸಂಸಾರವ್ಯಾಧಿಯ ಮಾಣಿಸಯ್ಯ, ನಿಮ್ಮ ಧರ್ಮ (೧೭೧), ವಿಷಯಗಳು ಸೋಂಕಿ ಬಳಲುತ್ತಿರುವೆನು ಕಾರುಣ್ಯವ ಮಾಡಯ್ಯ, ಕೃಪಾಪ್ರಸಾದವೆಂಬ ನಿರ್ವಿಷವ ಕೊಟ್ಟು ರಕ್ಷಿಸಯ್ಯ (೧೭೫), ವಿಕಳನಾದೆನು, ಮತಿಗೆಟ್ಟೆನು, ಗತಿಗೆಟ್ಟೆನು, ಶರಣುಹೊಕ್ಕೆನು ದೇವಾ (೩೧೫), ಈ ಮುಂತಾದವುಗಳು ಸಾಧಕನ ಪ್ರಾರ್ಥನಾಭಾವವನ್ನೂ ಅವನು ದೇವರಿಗೆ ಪೊರೆಹೊಗುವ ವೃತ್ತಿಯನ್ನೂ ವರ್ಣಿಸುವವು. ಯುರೋಪದ ಸಾಧುಗಳು ಕೂಡ ಇದೇ ಬಗೆಯ ಭಾವನೆಗಳನ್ನು ವ್ಯಕ್ತಮಾಡಿರುವರು. ಇದರ ಬಗ್ಗೆ, ಸೆಂಟ ಆಗಸ್ಟಾಯಿನ್ ಇವನ ಕನ್‌ಫೆಶನ್ಸ (Confessions), ಬಾಯಬಲ್ಲಿನಲ್ಲಿರುವ ಸೆಂಟಪಾಲನ ವಚನ, ಬಾಯಬಲ್ಲಿನ ಓಲ್ಡ ಟೆಸ್ಟಾಮೆಂಟ ಎಂಬ ಭಾಗದಲ್ಲಿರುವ ಸಾಮ್ಸ (Psalms) ಎಂಬ ಪ್ರಾರ್ಥನೆಗಳು, ಜಾನ್ ಬನಿಯನ್ ಇವನ ಪಿಲ್‌ಗ್ರಿಮ್ಸ ಪ್ರೊಗ್ರೆಸ್ (Pilgrim's Progress), ಟಾಮಸ್ ಏ ಕೆಂಪಿಸ್ ಇವನ ಇಮಿಟೇಶನ್ ಆಫ್ ಕ್ರಾಯಿಸ್ಟ (Imitation of Christ) ಈ ಮುಂತಾದವುಗಳನ್ನು ನೋಡಬೇಕು. ಇಸ್ಲಾಮೀ ಸಾಧುಗಳಲ್ಲಿ ಒಬ್ಬನಾದ ಜಾಮೀ ಇವನು, 'ದೇವಾ, ದೇವಾ, ತೋರು, ತೋರು, ದಾರಿಯ ತೋರು. ವಿರಕ್ತಪೀಠದ ಮೇಲೆ ನಾನು ವಿರಾಜಿಸುವಂತೆ ಅನುಗ್ರಹಿಸು. ನಾನು ನಿನ್ನ ರಹಸ್ಯರಕ್ಷಕನಾಗುವಂತೆ ವಿಧಿಸು. ನಿನ್ನದಲ್ಲದ ಪಥದಲ್ಲಿ ನನ್ನ ಪದಾರ್ಪಣವಾಗದಂತೆ ಮಾಡು,' ಎಂದು ದೇವರನ್ನು ಬೇಡಿಕೊಂಡದ್ದು ಈ ಮೇಲೆ ಹೇಳಿದ ಉಕ್ತಿಯ ಉದಾಹರಣೆಯೆ ಇರುವದು. ಹಾಫೀಜ್‌ನು ತನ್ನ ಗ್ರಂಥದಲ್ಲಿ 'ಅಯ್ಯೋ, ನನಗೂ ನಿನಗೂ ವಿರಹವಾದ ಆ ದಿನ, ಆ ದಿನವನ್ನು ನಾನು ಮರೆಯಬಲ್ಲೆನೆ? ಅಂದಿನಿಂದ ನನ್ನ ನಸುನಗೆಯನ್ನು ಯಾರಾದರೂ ನೋಡಿರುವರೇ? ಅಯ್ಯೋ ನನ್ನ ಸಂತಾಪವನಾರುಬಲ್ಲರು,' ಎಂದು ಪೊರೆಯಿಟ್ಟಿರುವನು. ಅವನೇ ಮತ್ತೊಂದೆಡೆಯಲ್ಲಿ 'ಎಲೈ, ಎನ್ನ ಮನದ ಮಲಿನವ ತೊಳೆದು ಬೆಳಗುವ ದೀಪವೇ, ಎನ್ನ ಮನೋಮಂದಿರವನ್ನು ಉಜ್ವಲಗೊಳಿಸುವ ಜ್ಯೋತಿಯೇ ಬಾ, ನಿನ್ನ ಬಿಟ್ಟು ಇನ್ನೆಲ್ಲಿಯೂ ಬೆಳಕನ್ನು ಅರಸಲಾರೆ. ಅತ್ತ ಪಂಡಿತರೆಂಬವರ ಸಭೆಯಲ್ಲಿ ಬೆಳಕೂ ಇಲ್ಲ, ಸತ್ಯವೂ ಇಲ್ಲ' ಎಂದಿರುವನು, ಅಂಥ ವಿಕಳತೆಯಲ್ಲಿಯೂ ಒಂದು ಸೂಕ್ಷ್ಮ ಆನಂದವಿರುವದು. ಅದನ್ನು ಹಾಫೀಜ್‌ನು, 'ನಿನ್ನ ವಿರಹವಿವ್ವಲತೆಯಿಂದ ತುಂಬಿದ ಎನ್ನ ಅಂತಃಕರಣಕ್ಕೆ ಇನ್ನಾವ ಸುಖದ ಅಪೇಕ್ಷೆಯೂ ಇಲ್ಲ. ಈ ವಿಕಳತೆಯನ್ನೆ ಕೊನೆಯವರೆಗೆ ಕರುಣಿಸು. ನಾನು ಇನ್ನೇನೂ ಬೇಡುವವನಲ್ಲ!,' ಎಂದು ವ್ಯಕ್ತಮಾಡಿರುವನು. ಸಾಕ್ಷಾತ್ಕಾರಭಿಕ್ಷೆಯನ್ನು ಬೇಡುವ ಹಾಫೀಜ್‌ನು ಇನ್ನೊಂದೆಡೆಗೆ, 'ನಾನು ಆಸೆಯಿಂದ ನಿನಗೆ ಕೈಯೊಡ್ಡಿನಿಂತಿರುವೆ ದೇವಾ. ನಾನು ನಿನ್ನ ಮನೆ ಬಾಗಿಲದಲ್ಲಿ ನಿಂತ ಹೀನ ದೀನ ಯಾಚಕನಯ್ಯಾ. ನೀರಲದ್ದು, ಹಾಲಲದ್ದು, ಎಂದು ಪೊರೆ ಹೊಕ್ಕಿರುವನು. ಕೈತುಂಬಿ ನೀಡು ಇಲ್ಲವೆ ಕೈಕಡಿದು ಜಲ್ಲು,' ಎಂದಿರುವನು. ಸಂತಶ್ರೇಷ್ಠನಾದ ತುಕಾರಾಮನು ತನ್ನ ವಿಕಳಾವಸ್ಥೆಯನ್ನು ಹೀಗೆ ವರ್ಣಿಸಿದ್ದಾನೆ, 'ಎನ್ನ ಕನಸಿನಲ್ಲಾದರೂ ಒಮ್ಮೆ ನಿನ್ನ ರೂಪವ ತೋರಿಸು. ನಿನ್ನ ದರ್ಶನವಲ್ಲದೆ ಇನ್ನಾವುದೂ ಎನಗೆ ಸಂತೋಷವನ್ನುಂಟುಮಾಡದು. ನಿನ್ನ ಚರಣದರ್ಶನಕ್ಕಾಗಿ ನಾನು ನವೆಯುತಿರುವೆ. ನಿನ್ನೊಡನೆ ಮಾತಾಡಲಿಚ್ಛಿಸುವೆ, ನಿನ್ನ ಪಾದವ ಮುಟ್ಟಲಿಚ್ಛಿಸುವೆ, ಎನ್ನ ಹೃದಯಗಹ್ವರದಲ್ಲಿಯ ಆಸೆಯ ಅಗ್ನಿಯು ನಿನ್ನ ದರ್ಶನದಿಂದಲ್ಲದೆ ಆರದು. ನಿನ್ನನ್ನು ಕಾಣಬಹುದೇ, ದೇವಾ? ನಾನು ಘೋರ ಪಾಪಿ, ನೀನು ಪರಮಪಾವಕ.' ಇದೇ ಬಗೆಯ ಭಾವಗಳನ್ನು ಅನ್ಯ ಮಹಾರಾಷ್ಟ್ರ ಸಾಧುಗಳು ಅನೇಕ ಕಡೆಗೆ ವ್ಯಕ್ತಗೊಳಿಸಿರುವರು. ದಾಸರಾದರೂ ತಮ್ಮ ಕೀರ್ತನೆಗಳಲ್ಲಿ ಈ ವಿಕಳತೆಯನ್ನು ಅಲ್ಲಲ್ಲಿ ವ್ಯಕ್ತಮಾಡಿರುವರು. 'ಸೊಂದೆನೊ ಈ ಸಂಸಾರದಲ್ಲಿ, ವಂದಿಸಿದೆನೊ ದೇವಾ, ನಿನಗೆ ಕರುಣೆ ಬಾರದೆ, ಅಕಟಕಟ,' ಎಂದು ವಿಜಯದಾಸನು (ಕೀ. ಭಾಗ. ೧. ೧೨೭) ದೇವರಿಗೆ ಪೊರೆ ಇಟ್ಟದ್ದು, 'ಕಂಡೂ ಕಂಡೂ ಎನ್ನ ಕೈ ಬಿಡಬೇಕೇ ದೇವಾ ನೀನು,' ಎಂದು ಪುರಂದರದಾಸನು

(ಕೀ. ಭಾಗ. ೧. ೯೯) ಕೇಳಿದ್ದು, ಇದೇ ಭಾವದಿಂದ. ಯಾವ ಸಾಧುಗಳ ಲೇಖಸಂಗ್ರಹವನ್ನು ನೋಡಿದರೂ ಅದರಲ್ಲಿ ಸಾಧನಾಸ್ಥಿತಿಯನ್ನು ಬಣ್ಣಿಸುವ ಪದ್ಯಗಳೇ ಹೆಚ್ಚು ಇರುವುದರಿಂದ ಸ್ವಾಭಾವಿಕವಾಗಿ ಈ ಆಕಾಂಕ್ಷೆಯೆ ಅವುಗಳಲ್ಲಿ ವಿಶೇಷ ವ್ಯಕ್ತವಾಗಿದೆ. ಈ ವಿಕಳತೆಯ ಮೂಲಕ ತುಕಾರಾಮನು ಹದಿಮೂರು ದಿನ ಕೂಳು ನೀರು ಬಿಟ್ಟು ದೇವರ ಬಾಗಿಲಲ್ಲಿ ಧರಣೀ ಹಿಡಿದು ಕುಳಿತಿದ್ದನೆಂಬುದನ್ನು ರಾಮಕೃಷ್ಣ ಪರಮಹಂಸನು ಖಡ್ಗವನ್ನು ಕಿತ್ತಿ ತನ್ನ ಕತ್ತನ್ನು ಕಡಿಯುವ ಉದ್ಯೋಗವನ್ನು ಆರಂಭಿಸಿದ್ದನೆಂಬ ವಿಶ್ವಸನೀಯ ಉಲ್ಲೇಖಗಳು ಅವರ ಚರಿತ್ರೆಗಳಲ್ಲಿವೆ. ಪರಮಾತ್ಮದರ್ಶನದ ಆಕಾಂಕ್ಷೆಯು ಇಷ್ಟು ತೀವ್ರವಾಗಬಲ್ಲದು, ಮತ್ತು ಹಾಗೆ ಆದಾಗಲೆ ಅದು ಕೈಸಾರುವದು!

೨೮೬. ಇನ್ನು ಭಕ್ತಿ ಎಂಬ ಸಾಧನ ಹಾಗೂ ಅನನ್ಯತೆ, ಅಹೇತುಕತ್ವ, ಸರ್ವಸಮರ್ಪಣ ಭಾವ, ಎಂಬ ಉತ್ತಮ ಭಕ್ತಿಯ ಲಕ್ಷಣಗಳು ಇವುಗಳನ್ನು ವಿಚಾರಿಸುವ. ಆಗಮಕಾರರು ಹಾಗೂ ವಚನಕಾರರು ಭಕ್ತಿಯೆ ಮುಕ್ತಿಯ ಉತ್ತಮ ಸಾಧನವೆಂದು ಅನೇಕ ಸಾರೆ ಹೇಳಿರುವರು. ಭಕ್ತಿಯ ಬಗ್ಗೆ ಇರುವ ವಚನಕಾರರ ಮುಖ್ಯ ವಿಚಾರಗಳು ವಚನಾಮೃತದಲ್ಲಿಯ 'ಸಾಧನಮಾರ್ಗ–ಭಕ್ತಿ' ಎಂಬ ೧೨ ನೆಯ ಪ್ರಕರಣದಲ್ಲಿ ಬಂದಿರುವವು. ಯಾವ ಭಕ್ತಿಯು ನಿಷ್ಕಾಮವೂ ಅನನ್ಯವೂ ನಿರ್ವ್ಯಾಜವೂ ಇರುವುದೊ ಯಾವುದು ಅತ್ಯಂತಿಕ ಪ್ರೇಮದಿಂದ ತುಂಬಿರುವುದೊ ಅದೇ ಉತ್ತಮ ಭಕ್ತಿಯು. ಭಕ್ತಿಯು ಪೂಜನಾದಿ ಬಾಹ್ಯ ಕಾಯಿಕಕರ್ಮಗಳಿಂದ ಪ್ರಾರಂಭವಾಗಿ, ಭಜನ ಕೀರ್ತನಾದಿ ವಾಚಕ ಕರ್ಮರೂಪದಿಂದ ಬೆಳೆದು, ಸ್ಮರಣಾದಿ ಕರ್ಮಗಳಲ್ಲಿ ಸೂಕ್ಷ್ಮರೂಪವನ್ನು ತಾಳಿ ಮನೋಗತವಾಗಿ, ಸರ್ವಸಮರ್ಪಣ ಭಾವವನ್ನು ನೆಲೆಗೊಳಿಸುವುದರಲ್ಲಿ ಪರಿಣತಿಯನ್ನು ಹೊಂದುವದು. ಆತ್ಮನಿವೇದನವೆ ಅಥವಾ ಸರ್ವಸಮರ್ಪಣವೆ ಭಕ್ತಿಮಂದಿರದ ಸುವರ್ಣಕಳಸವು. ಭಕ್ತಿಮಾರ್ಗದಲ್ಲಿ ಸಗುಣ ಈಶ್ವರನ ಅವಶ್ಯಕತೆ ಇರುವದು. ಯಾಕಂದರೆ, ಆ ಮಾರ್ಗದಲ್ಲಿ ಪ್ರೇಮಭಾವವೆಂಬುದೆ ಮುಖ್ಯ ಸಾಧನವು. ಆ ಪ್ರೇಮಕ್ಕೆ ಒಂದು ಆಧಾರವಸ್ತು ಬೇಕು. ಸಗುಣ ಪರಮಾತ್ಮನೆ ಆ ವಸ್ತುವು. ಅನಂತಗುಣ, ಅನಂತಶಕ್ತಿ, ಸರ್ವವ್ಯಾಪಕ, ಸರ್ವಾಂತರ್ಯಾಮಿ ಸರ್ವಕರ್ತ, ಸರ್ವಭರ್ತ, ಕರುಣಾಮೂರ್ತಿ ಈಶ್ವರನೆ ಭಕ್ತನ ಪ್ರೇಮಾಸ್ಪದ ವಸ್ತುವು. ಭಕ್ತನು ತನ್ನ ಹೃದಯಗುಹೆಯಿಂದ ಹೊರಹೊಮ್ಮುವ ಅನಂತ ಭಾವ ಸ್ರೋತಗಳನ್ನೆಲ್ಲ ಒಂದೇ ಪ್ರೇಮಭಾವದಲ್ಲಿ ಹುರಿಗೊಳಿಸಿ, ಆ ಪ್ರೇಮ

ಪ್ರವಾಹವನ್ನು ಎಡೆಬಿಡದೆ ಪರಮಾತ್ಮನ ಪಾದದೆಡೆಗೆ ಹರಿಯಹಚ್ಚುವನು. ಮಾನವರಲ್ಲಿ ರೂಢವಿದ್ದ ತಂದೆ, ತಾಯಿ, ಮಗ, ಗೆಳೆಯ, ಪ್ರಿಯ ಪ್ರಿಯೆ, ದಾಸ, ಒಡೆಯ, ಅರಸು ಆಳು, ರಾಜಾ ಪ್ರಜಾ, ಗುರುಶಿಷ್ಯ ಎಂಬ ಮುಂತಾದ ಅನೇಕ ಸಂಬಂಧಗಳನ್ನು ದೇವರೊಡನೆ ಕಲ್ಪಿಸಿ ಭಕ್ತನು ಅವನನ್ನು ಆರಾಧಿಸುವನು. ಈ ಎಲ್ಲ ಸಂಬಂಧಗಳಿಗೆ ನಿರ್ಮಲ, ಉಜ್ವಲ ಮತ್ತು ದೈವಿಕ ಸ್ವರೂಪವನ್ನು ಕೊಟ್ಟು ತದ್ವಾರಾ ಪರಮಾತ್ಮನನ್ನು ಕಾಣುವದು ಭಕ್ತಿಮಾರ್ಗದ ವಿಶಿಷ್ಟ ಕಾರ್ಯವಿರುವದು. ಮನಸಿನಲ್ಲಿ ಬರಬಹುದಾದ ಅನೇಕಾನೇಕ ಸಂಬಂಧಗಳನ್ನೆಲ್ಲ ಈ ಭಕ್ತಿಪರುಷವು ಮುಟ್ಟಿತೆಂದರೆ ಅದು ಅವುಗಳನ್ನು ಪರಮಾತ್ಮಮಯಮಾಡಿ ಬಿಡುವದು. ಆಗ ಜ್ಞಾನವಾಗಿ ಮೋಕ್ಷದ್ವಾರವು ತೆರೆಯುವದು.

೨೦೭. ಭಕ್ತಿಯ ಸ್ವರೂಪವನ್ನು ನಾವು ಮೇಲೆ ಹೇಳಿದ್ದೇವೆ. ಆದರೆ ಈಗ ನಾವು ಯಾವುದಕ್ಕೆ ಭಕ್ತಿ ಎನ್ನುವೆವೊ ಅದಕ್ಕೆ ಉಪನಿಷತ್ಕಾಲದಲ್ಲಿ ಅಷ್ಟೊಂದು ಪ್ರಾಧಾನ್ಯವಿದ್ದಂತೆ ಕಾಣುವುದಿಲ್ಲ. ಮಿಕ್ಕ ಮಾರ್ಗಗಳ ಬೀಜಗಳು ಅದರಲ್ಲಿರುವಂತೆ ಭಕ್ತಿಮಾರ್ಗದ ಬೀಜಗಳೂ ಉಪನಿಷತ್ತಿನಲ್ಲಿವೆ. ಮುಂದೆ ಗೀತೆಯಲ್ಲಿ ಮಾತ್ರ ಭಕ್ತಿವೃಕ್ಷವು ಬೆಳೆದು ಪೂರ್ಣ ಪರಿಣತಾವಸ್ಥೆಯನ್ನು ಮುಟ್ಟಿದಂತೆ ಕಂಡುಬರುವದು. ಗೀತೆಯು ಯೋಗಸಮನ್ವಯದ ಗ್ರಂಥವಿದ್ದರೂ ಅದರಲ್ಲಿ ಭಕ್ತಿಗೆ ಬಹಳ ಮಹತ್ವವು ಕೊಡಲ್ಪಟ್ಟಿರುವದೆಂಬುದು ನಿರ್ವಿವಾದವು. ಅದರಲ್ಲಿ ಮುಖ್ಯವಾದ ಕರ್ಮಯೋಗವು ಕೂಡ ಕೇವಲ ಕರ್ಮಯೋಗವಿಲ್ಲ. ಜೇನು ಕೂಡಿದ ಹಾಲಿನಂತೆ, ಕಲ್ಲುಸಕ್ಕರೆ ಕೂಡಿದ ಬೆಣ್ಣೆಯಂತೆ ಅದು ಭಕ್ತಿರಸದಿಂದ ಸುಂದರತರವಾಗಿ ಶೋಭಿಸುತ್ತಿರುವದು. ಮತ್ತಾವ್ಯತರಿಂದಲೂ ಸಾಧ್ಯವಾಗದ ಮಾತುಗಳು ಭಕ್ತಿಯಿಂದ ಸಾಧಿಸಬಲ್ಲವು, ಎಂದು ಕೃಷ್ಣನು ಗೀತೆಯಲ್ಲಿ ಹೇಳಿರುವನು. ವೇದಾಭ್ಯಾಸ, ತಪಸ್ಸು, ಯಜ್ಞಯಾಗ, ಜ್ಞಾನ ಮುಂತಾದವುಗಳಿಂದ ಸಹ ಯಾವ ವಿಶ್ವರೂಪದ ದರ್ಶನವು ಅಸಾಧ್ಯವೊ ಆ ವಿಶ್ವರೂಪವನ್ನೆ ಮನುಷ್ಯನು ಅನನ್ಯಭಕ್ತಿಯಿಂದ ನೋಡಬಲ್ಲನು, ಅರಿತುಕೊಳ್ಳಬಲ್ಲನು, ಮತ್ತು ಕೊನೆಗೆ ಅದರಲ್ಲಿ ಪ್ರವೇಶಿಸಬಲ್ಲನು. (ಗೀ. ೧೧. ಶ್ಲೋ. ೫೩. ೫೪), ಎಂದು ಕೃಷ್ಣನು ಪ್ರತಿಪಾದಿಸಿರುವನು. ನಾರದ ಶಾಂಡಿಲ್ಯ ಸೂತ್ರಗಳು ಭಕ್ತಿಮಾರ್ಗದ ಮುಖ್ಯ ತತ್ವಗಳನ್ನು ಚನ್ನಾಗಿ ಮತ್ತು ಎಲ್ಲಕ್ಕೂ ಪೂರ್ವದಲ್ಲಿ ವಿವರಿಸಿರುವವು. 'ಸಾ ಪರಾನುರಕ್ತಿರೀಶ್ವರೇ ಭಕ್ತಿಃ'। ಈಶ್ವರನಲ್ಲಿಟ್ಟ ಎಲ್ಲಕ್ಕೂ ಹೆಚ್ಚಿನ ಪ್ರೇಮವೆ ಭಕ್ತಿಯೆನಿಸುವದು, ಎಂದು ಭಕ್ತಿಯ ವ್ಯಾಖ್ಯೆಯಿರು

ವದು. ಆ ಪ್ರೇಮವು ಅಹೇತುಕವೂ ಅನನ್ಯವೂ ಇರಬೇಕು, ಎಂದು ಸೂತ್ರಕಾರರು ಮುಂದೆ ಮತ್ತೆ ಹೇಳಿರುವರು. ಈ ಮುಂದೆ ಆದ ಭಕ್ತಿ ಗ್ರಂಥಗಳು ಮತ್ತು ಭಕ್ತರು ಈ ಮೇಲಿನ ವ್ಯಾಖ್ಯೆಗಳನ್ನು ಆಧಾರವಾ ಗಿಟ್ಟುಕೊಂಡಿರುವರು. ಮೊದಲು ಭಕ್ತಿಮಾರ್ಗದಲ್ಲಿ ಸಗುಣ ಉಪಾಸನೆ ಯಷ್ಟೆ ರೂಢವಿದ್ದರೂ ಮುಂದೆ ಅವತಾರಕಲ್ಪನೆಯ ಮೂಲಕ ಸಾಕಾರ ಪುರುಷವಿಧಮೂರ್ತಿಯ ಸಮಾವೇಶವಾಗಿ ಸಾಕಾರ ಸಗುಣ ದೇವರು ಭಕ್ತರಿಗೆ ಪ್ರಿಯನಾದನು. ಆಗ ಪ್ರಚಲಿತವಿದ್ದ ಅನೇಕ ದೇವತೆಗಳ ಕಲ್ಪ ನೆಯ ಮೂಲಕ ಮತ್ತು ಅಧಿಕಾರಭೇದ ಹಾಗೂ ಇಷ್ಟದೇವತೆಗಳ ತತ್ವದ ಮೂಲಕ ಭಕ್ತಿಮಾರ್ಗದಲ್ಲಿ ಆಯಾ ಇಷ್ಟ ದೇವತೆ, ಪರಂಪರೆ, ಮುಂತಾದ ವುಗಳ ಪ್ರಕಾರ ಅನೇಕ ಪಂಥಗಳಾದವು. ಅವುಗಳಲ್ಲಿ ಶೈವ, ಶಾಕ್ತ, ವೈಷ್ಣವ ಇವೇ ಮುಖ್ಯವಾದವುಗಳು. ಎಲ್ಲ ಆಗಮಗಳೂ ಪುರಾಣಗಳೂ ಭಕ್ತಿಮಾರ್ಗವನ್ನೆ ಪ್ರತಿಪಾದಿಸುವವು. ಆದುದರಿಂದ ಉಪನಿಷದ್ಗೀತ್ತರ ಹಿಂದೂಧರ್ಮವು ಭಕ್ತಿಪ್ರಧಾನವಿರುವದೆಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಇನ್ನು ವಚನಕಾರರಲ್ಲಿ ವ್ಯಕ್ತವಾದ ಭಕ್ತಿಭಾವಗಳು ಅನ್ಯ ಸಾಧುಸಂತ ರಲ್ಲಿ ಯಾವ ಪ್ರಕಾರವಾಗಿ ವ್ಯಕ್ತವಾಗಿರುವವು ಇದನ್ನು ನೋಡುವ.

೩೦೮. ಜೀಸಸ್ ಕ್ರಾಯಿಸ್ಟನು ಸ್ವತಃ ಪರಮಭಕ್ತನಿದ್ದನು. ದೇವರನ್ನು ಅವನು ಯಾವಾಗಲೂ ತಂದೆಯಂತೆ ಕಾಣುತ್ತಿದ್ದನು. ಜನರೆಲ್ಲ ದೇವರ ಮಕ್ಕಳೆಂದು ಅವನು ಹೇಳುತ್ತಿದ್ದನು. ಅವನು ಸ್ಥಾಪಿಸಿದ ಧರ್ಮವು ಭಕ್ತಿಪ್ರಧಾನವಿರುವುದರಿಂದ ಕ್ರಿಶ್ಚನ್ ಸಾಧುಗಳಲ್ಲಿ ಬಹುಶಃ ಎಲ್ಲರೂ ಭಕ್ತಿಮಾರ್ಗವನ್ನೆ ಪ್ರತಿಪಾದಿಸಿ ಅದರಿಂದಲೆ ಸಾಗಿದರು. ಸೆಂಟಪಾಲ್, ಸೆಂಟಫ್ರಾನ್ಸಿಸ್, ಸೆಂಟ ಝೇವಿಯರ್, ಇಗ್ನೇಶಿಯಸ್ ಲಾಯೋಲಾ, ಸೆಂಟ ಜಾನ್ ಆಫ್ ದೀ ಕ್ರಾಸ್, ಸೆಂಟ ಕ್ಯಾಥರಾಯಿನ್ ಮುಂತಾದವ ರೆಲ್ಲರೂ ಪರಮ ಭಕ್ತರೇ ಇದ್ದರು. 'ದೇವಾ, ನಾನು ನಿನ್ನನರಸುವದು ನನ್ನ ಜೀವನವು ಸುಖಮಯವಾಗಬೇಕೆಂದೇ, ನನ್ನ ಆತ್ಮವು ಉಳಿಯ ಬೇಕೆಂದೇ ನಾನು ನಿನ್ನನು ಅರಸುತ್ತಲಿರುವೆನು. ನಿರ್ಹೇತುಕಭಕ್ತಿಯಿಂದ ನಿನ್ನನರಸುವವರಿಗೆ ಮಾತ್ರ ನಿಜಸುಖವು ಪ್ರಾಪ್ತವಾಗಬಲ್ಲದು, ನೀನು ಅಂಥವರ ಸುಖಸ್ವರೂಪನೆ ಇರುವಿ. ಸುಖಜೀವನವೆಂದರೆ ಇದೇ-ನಿನ್ನೊ ಡನೆ, ನಿನಗಾಗಿ, ನಿನ್ನಿಂದ ಆನಂದಿಸುವದು,' ಎಂದು ಸ್ವಲ್ಪದರಲ್ಲಿ ಸೆಂಟ ಫ್ರಾನ್ಸಿಸ್ ಅಗಸ್ಟಾಯಿನನು (ಕನ್‌ಫೆಶನ್ಸ್- Confessions) ಭಕ್ತಿಯ ತಿರುಳನ್ನು ಹೇಳಿರುವನು. 'ಇಕೋ ಈ ಜೀವನವ, ದೇವಾ, ಅದು ನಿನಗೆ

ಸಮರ್ಪಿತವಾಗಲಿ. ಈ ಕೈಗಳು ನಿನ್ನ ಪ್ರೇರಣೆಯಿಂದ ಅಲ್ಲಾಡಲಿ. ನನ್ನ ಕ್ಷಣಪ್ರಹರ-ದಿನರಾತ್ರಿಗಳೆಲ್ಲ ನಿನ್ನ ಕೀರ್ತನನಿನಾದದಿಂದ ತುಂಬಲಿ. ನನ್ನ ಕಾಲು ನಿನಗಾಗಿಯೆ ನಡೆಯಲಿ. ನನ್ನ ಸ್ವರವು ನನ್ನ ರಸನ ಸಂಗೀತವನ್ನೆ ಹಾಡಲಿ. ನನ್ನ ಹೊನ್ನು ಮಣ್ಣು ಬುದ್ಧಿಭಾವಗಳೆಲ್ಲ ನಿನ್ನ ಸೇವೆಯಲ್ಲಿಯೆ ಸವೆಯಲಿ. ನನ್ನ ಈ ಹೃದಯವು ನಿನ್ನ ಸಾಮ್ರಾಜ್ಯಸಿಂಹಾಸನವಾಗಲಿ. ದೇವಾ, ನನ್ನ ಪ್ರೇಮಸುಧೆಯಿಂದ ನಿನ್ನ ಪಾದಪೂಜೆಯ ಮಾಡುವೆ. ನಾನು ನಿರಂತರ ನಿನ್ನವನಾಗಿರುವೆ, ದೇವಾ, ಎನ್ನ ಪ್ರಭುವೇ,' ಎಂದು ಒಬ್ಬ ಆಂಗ್ಲಕವಿಯು ಸರ್ವಸಮರ್ಪಣಭಾವವನ್ನು ಚನ್ನಾಗಿ ವಿವರದಿಂದ ವರ್ಣಿಸಿರುವನು. 'ದೇವಾ, ಎಷ್ಟು ದೂರವಿದು ನಿನ್ನ ಪ್ರೇಮದ ದಾರಿಯು? ಅದಕ್ಕೆ ಅಂತವಿಲ್ಲ ಪಾರವಿಲ್ಲ. ಅದರ ಕೊನೆಯ ಮುಟ್ಟಲು ಒಂದೇ ಉಪಾ ಯವು-ನನ್ನ ಜೀವವನು ಮೀಸಲಿಟ್ಟು ಧಾರೆಯೆರೆಯುವುದೊಂದೇ ಉಪಾ ಯವು,' ಎಂದು ಹಾಫೀಜನು ಸರ್ವಸಮರ್ಪಣದ ಮಹತಿಯನ್ನು ಹೇಳಿರು ವನು. ಅವನೇ, 'ನಿನ್ನ ಮನವೆಂಬ ಕನ್ನಡಿಯನ್ನು ಭಕ್ತಿಜಲದಿಂದ ನಿರ್ಮಲಗೊಳಿಸು, ಅಂದರೆ ಪರಮಾತ್ಮಪ್ರತಿಬಿಂಬವು ಅದರಲ್ಲಿ ತೋರು ವದು,' ಎಂದೂ, 'ದೇವಾ, ಈ ದೇಹದ ಮಣ್ಣಿಗೆ ಎನ್ನ ಕಣ್ಣೀರು ಎರೆದು, ಇದರಲ್ಲಿರುವ ಭಾವಪುಷ್ಪವನ್ನು ಬೆಳೆಸಿರುವೆ. ಅದನ್ನು ಮುಡಿಯಲ್ಲಿಟ್ಟು ಕೊಳ್ಳು, ಆ ಧನ್ಯತೆ ಸಾಕು ಎನಗೆ,' ಎಂದೂ ಹೇಳಿರುವನು. ಈ ಭಕ್ತಿಯೆ ಸತತ ತನ್ನಲ್ಲಿರಲಿ, ಎಂದು ಹಾಫೀಜನು ಈ ಕೆಳಗಿನಂತೆ ಬೇಡಿಕೊಂಡಿರು ವನು; 'ನಿನ್ನ ಸೋಟದಿಚ್ಛೆಯಳಿದ ದಿನ, ನಿನ್ನ ದಾರಿಕಾಯುವದೆನಗೆ ಬೇಸರಾದ ದಿನ, ನಿನ್ನ ಬಿಟ್ಟು ಅನ್ಯಕೆನ್ನ ಮನವೆಳಸಿದ ದಿನ, ಈ ಕಣ್ಣು ಕುರುಡಾಗಿ ಹೋಗಲಿ, ದೇವಾ, ಎನ್ನ ಈ ಕಣ್ಣು ನಿನ್ನ ತೇಜದಿಂದ, ನಿನ್ನ ದಿವ್ಯದರ್ಶನದಿಂದ ಅಲ್ಲಿಯೆ ಇಂಗಿಹೋಗಲಿ.' ಈ ಭಕ್ತಿಭಾವಗಳನ್ನೆ ಉಮರಖಯಾಮನು, 'ಈ ದೇಹ, ಪ್ರಾಣ, ಜೀವನ, ಇವೆಲ್ಲ ನೀನೇ ಇರುವಿ. ಮನಪ್ರಾಣಗಳೆರಡೂ ಒಂದೇ ಮತ್ತು ಅವು ನೀನೇ ಇರುವಿ. ನಾನು ಆದುದಕ್ಕಾದರೂ ನೀನೇ ಕಾರಣನು, ಅಲ್ಲವೆ ದೇವಾ? ಈ ದೇಹವೆಲ್ಲ ನಿನಗಾಗಿಯೆ ಸವೆಯಲಿ. ಯಾಕಂದರೆ, ಎಲ್ಲವೂ ನೀನೇ ಇರುವಿ,' ಎಂದು ವ್ಯಕ್ತಮಾಡಿರುವನು. ನಗ್ನ ಫಕೀರನಾವ ಸರಮದನು ಅಂದಿರುವುದೇನಂ ದರೆ, 'ಬಿಡು, ಬಿಡು ಆ ಮುಕ್ಕಾ ಮತ್ತು ಕಾಶಿಯ ಮಾತುಗಳನ್ನೆ ಬಿಟ್ಟು ಬಿಡು, ವ್ಯರ್ಥ ಸಂಶಯಸಾಗರದಲ್ಲಿ ಸುತ್ತಾಡಿ ಮಳುಮುಳುಗಿ ಏಳಬೇಡ, ಭಕ್ತಿಪಥವನ್ನು ಹಿಡಿ, ಅದೊಂದೇ ಸಾಧನವು.' ಜ್ಞಾನೇಶ್ವರಾದಿ ಮಹಾ

ರಾಷ್ಟ್ರದ ಸತ್ಪುರುಷರು ಭಕ್ತಿಮಾರ್ಗವನ್ನು ಎಡೆಬಿಡದೆ ವರ್ಣಿಸಿರುವರು. ಅವರೆಲ್ಲರೂ ಸ್ವತಃ ಭಕ್ತಾಗ್ರಣಿಗಳಿದ್ದರು. 'ಎಲ್ಲೆಲ್ಲಿಯೂ ಎತ್ತೆತ್ತಲೂ ಯಾವಾಗಲೂ ದೇವರನ್ನು ನೋಡುವುದೆ ದೇವರ ನಿಜವಾದ ಪೂಜೆಯು. ಸರ್ವಸ್ವವನ್ನು ಅವನ ಸೇವೆಗಾಗಿ ಅರ್ಪಿಸುವುದೆ ನಿಜವಾದ ಭಾಗವತ ಧರ್ಮವು ಅಂದರೆ ಭಕ್ತಧರ್ಮವು. ಭಕ್ತಿಯು ದೇವರೆಡೆಗೆ ಹೋಗುವ ರಾಯಜೀದಿಯು,' ಎಂದು ಏಕನಾಥನು ಹೇಳಿರುವನು. ಆದರ್ಶ ಭಕ್ತನನ್ನು ವರ್ಣಿಸುವಾಗ ಜ್ಞಾನದೇವನು ಅಂದದ್ದೇನಂದರೆ, 'ಪರಮ ಭಕ್ತನು ಆತ್ಮಜ್ಞಾನದ ಪವಿತ್ರ ತೀರ್ಥದಲ್ಲಿ ಮಿಂದಿರುವನು. ಪರಮಾತ್ಮನ ಮುತ್ತು ಅವನ ನಡುವಿನ ದ್ವೈತವು ಅಳಿದು ಹೋಗಿರುವದು. ನವಯೌವನೆಯು ತನ್ನ ತಾರುಣ್ಯಾನಂದವನ್ನು ತಾನೆ ಭೋಗಿಸುವಂತೆ ಭಕ್ತನು ಭಾವೋನ್ಮಾದದ ಆನಂದಾತಿಶಯವನ್ನು ತನ್ನಲ್ಲಿಯೆ ಭೋಗಿಸುವನು. ಭಕ್ತನು ಮಾಡಿದ್ದೆಲ್ಲ ಪರಮಾತ್ಮಪೂಜೆಯೆ ಇರುವದು. ಆ ಅದ್ವೈತಸ್ಥಿತಿಯಲ್ಲಿ ಐಕ್ಯಭಕ್ತಿ ಎಂಬುದು ಪರಮಾವಧಿಯನ್ನು ಮುಟ್ಟಿರುವದು. ಭಕ್ತನ ಅಂತರ್ಬಾಹ್ಯಗಳೆಲ್ಲ ಆಗ ಪರಮಾತ್ಮನಿಂದ ತುಂಬಿರುವವು. ಪರಮಾತ್ಮನೊಬ್ಬನೆ ಆ ಭಕ್ತನ ಮನಸಿಗೆ ಆಶ್ರಯಸ್ಥಾನನಾಗಿರುವನು.' ರಾಮದಾಸ ಸ್ವಾಮಿಯು ತನ್ನ ದಾಸಬೋಧ ಗ್ರಂಥದ ನಾಲ್ಕನೆಯ ದಶಕದಲ್ಲಿ ನವವಿಧ ಭಕ್ತಿಯ ಸವಿಸ್ತರ ವರ್ಣನೆಯನ್ನು ಕೊಟ್ಟು ಆತ್ಮನಿವೇದನವೆ ಎಲ್ಲಕ್ಕೂ ಶ್ರೇಷ್ಠವು, ಎಂದು ಸಾರಿ ಹೇಳಿರುವನು. ತುಕಾರಾಮನಂತೂ ಪ್ರತ್ಯಕ್ಷ ಭಕ್ತಿಭಾವದ ಪುತ್ಥಳಿಯು. ಬೆಳೆದುನಿಂತ ಕಬ್ಬು ತನಿರಸವನ್ನು ಒಸರುವಂತೆ ಅವನ ಭಾವೋದ್ರೇಕದಿಂದೊಗೆದ ಅಭಂಗಗಳೆಲ್ಲ ಭಕ್ತಿರಸಾಮೃತವನ್ನು ಒಸರುವವು. ಕನ್ನಡ ಕೀರ್ತನಕಾರರ ಕಥೆಯೂ ಹೀಗೆಯೆ ಇದೆ. 'ತಿರವು ನಿನ್ನ ಚರಣಕೆರಗಲಿ, ನಿನ್ನೊಳು ಭಕ್ತಿಯಲ್ಲದೆ ಅನ್ಯವ ಬೇಡುವುದಿಲ್ಲ, ನಾನು ಮಾಡುವುದೆಲ್ಲ ಹರಿಸೇವೆಯೆ ಆಗಲಿ,' ಎಂದು ಪುರಂದರದಾಸನು (ಕೀ. ಭಾಗ ೧. ೫೧,೭೬) ಅನ್ನುವಾಗ ಶರಣಭಾವವೂ ನಿರ್ಹೇತುಕತೆಯೂ ಸಮರ್ಪಣವೃತ್ತಿಯೂ ದೃಗ್ಗೋಚರವಾಗುವವು. 'ಭಕುತಿ ಸುಖವೊ ಮುಕುತಿ ಸುಖವೊ,' ಇವುಗಳಲ್ಲಿ ಹೆಚ್ಚು ಯಾವುದು ಕಡಿಮೆ ಯಾವುದು ಎಂಬುದನ್ನು ಹೋಲಿಸಿ ನೋಡಿದಂತೆ ಮಾಡಿ ಎರಡೂ ಅಷ್ಟೇ ಅರ್ಥಾತ್ ಭಕ್ತಿ ಪೆಂಡೆಯೆ ಮುಕ್ತಿ ಎಂದು ವಿಜಯದಾಸನು (ಕೀ. ಭಾಗ. ೨. ೫೯) ಪ್ರತಿಪಾದಿಸಿರುವನು. 'ಜೀವಾಂತರ್ಗತನೆ, ಜೀವಸಿಯಾಮಕನೆ, ಜೀವ ವಿಲಕ್ಷಣನೆ, ಜೀವನದನೆ, ನಾನು ನಿನ್ನ ದಾಸನು, ನಾನು ನಿನ್ನ ದಾಸನು, ನಾನು

ನಿನ್ನ ದಾಸನು,' ಎಂದು ತನ್ನ ಆತ್ಯಂತಿಕ ದಾಸೋಹಭಾವವನ್ನು ಜಗನ್ನಾಥದಾಸನು ವ್ಯಕ್ತಮಾಡಿರುವನು. (ಕೀ. ಭಾಗ. ೧. ೮). 'ದೇವಾ, ಈ ತನುವು ನಿನ್ನದು, ಈ ಜೀವನವು ನಿನ್ನದು, ಅನುದಿನ ಬರುವ ಸುಖದುಃಖಗಳು ನಿನ್ನವು, ಶ್ರವಣ, ನೋಟ, ಸ್ಪರ್ಶಸುಖ, ರುಚಿ, ಸುಗಂಧ, ಈ ಕಾಯ ಪಂಚೇಂದ್ರಿಯ ಗತಿ ಇವೆಲ್ಲ ನಿನ್ನವು, ಇವೆಲ್ಲ ನಿನ್ನವಲ್ಲದೆ ನರರ ಸ್ವತಂತ್ರ ವಿರಬಲ್ಲದೆ?' ಎನ್ನುವಾಗ ಕನಕದಾಸನು (ಕೀ. ಭಾಗ. ೧. ೧೨) ಆತ್ಮನಿವೇದನದ ಚರಮಸೀಮೆಯನ್ನು ಮುಟ್ಟಿರುವನು. ಅದೇ ಕನಕನು, 'ತಾಯಿತಂದೆಗಳನ್ನು ಬಿಟ್ಟು ತಪವ ಮಾಡಬಹುದು, ರಾಯ ಮುನಿದರೆ ರಾಜ್ಯವನು ಬಿಡಬಹುದು, ಒಡಲು ಹಸಿದರೂ ಅನ್ನವಿಲ್ಲದಿರಬಹುದು, ಬೇಡಿದರೆ ಪ್ರಾಣವನು ಕೂಡ ಪರರಿಗೆ ಕೊಡಬಹುದು, ಆದರೆ ದೇವಾ, ನಿನ್ನ ಚರಣವನು ತೊರೆದು ಜೀವಿಸಬಹುದೇ? ಸರ್ವಥಾ ಆಗದು,' ಎಂದು ತನ್ನ ಅನನ್ಯಭಾವವನ್ನೂ ಪರಮಾತ್ಮದರ್ಶನದ ಹಸಿವನ್ನೂ ಒಂದು ಪ್ರಸಿದ್ಧ ಪದದಲ್ಲಿ ಪ್ರಕಟವಾಗಿ ಹೇಳಿರುವನು. ಆಧುನಿಕ ಕವಿಸಮ್ರಾಟನೆಂಬ ಬಿರುದು ಪಡೆದ ವಂಗಶ್ರೇಷ್ಠ ರವೀಂದ್ರನಾಥನು ಕೂಡ, 'ಕೋಥಾಯ ಆಲೋ, ಕೋಥಾಯ ಆಲೋ'—ಎಲ್ಲಿರುವದು ಆ ಜ್ಯೋತಿ, ಎಲ್ಲಿರುವದು ಬೆಳಗು, ಎಂದು ಹಂಬಲಿಸಿ, 'ಜಲಭಾರಾಕ್ರಾಂತ ಮೇಘದಂತೆ ಈ ಎನ್ನ ಸಮಸ್ತಪ್ರಾಣಗಳೆಲ್ಲ ನಿನ್ನ ಚರಣಗಳಿಗೆ ಮಣಿದು ಅಲ್ಲಿ ಲೀನವಾಗಲಿ,' (ಗೀತಾಂಜಲಿ) ಎಂದು ಸಮರ್ಪಣಭಾವವನ್ನು ವ್ಯಕ್ತಮಾಡಿರುವನು.

೨೨೯. ಸತಿಪತಿಭಾವ ಮತ್ತು ನಾಮಮಹಾತ್ಮ್ಯ ಇವು ಭಕ್ತಿಮಾರ್ಗವನ್ನೆ ಸಂಬಂಧಿಸಿರುವುದರಿಂದ ಇವುಗಳನ್ನು ಮೊದಲು ವಿಚಾರಿಸಿ ಬಳಿಕ ಕರ್ಮ, ಜ್ಞಾನ, ಧ್ಯಾನ ಮುಂತಾದ ಅನ್ಯ ಸಾಧನಮಾರ್ಗಗಳ ಕಡೆಗೆ ನೋಡುವದು ಉಚಿತವಾಗುವದು. ವಚನಕಾರರಲ್ಲಿ ಅನೇಕರು ಪರಮಾತ್ಮನನ್ನು ಪತಿಭಾವದಿಂದ ಉಪಾಸಿಸಿರುವರು, ಭಜಿಸಿರುವರು. ಈ ಸತಿಪತಿಭಾವಕ್ಕೆ ಭಕ್ತಿರಾಜ್ಯದಲ್ಲಿ ಹಲವರು ದೊಡ್ಡ ಮತ್ತು ಬಹಳ ಮಹತ್ವದ ಸ್ಥಾನವನ್ನು ಕೊಟ್ಟಿರುವರು. ಪರಮಾತ್ಮನನ್ನು ಕುರಿತು ಇರುವ ಭಕ್ತನ ಆತ್ಯಂತಿಕ ಪ್ರೇಮವೆ ಭಕ್ತಿ ಎನಿಸುತ್ತಿರುವುದರಿಂದ, ಭಕ್ತರು ಪ್ರೇಮ ಮೂಲಕವಾದ ಮಾನವೀಸಂಬಂಧಗಳನ್ನೆಲ್ಲ ತಮ್ಮ ಮತ್ತು ಪರಮಾತ್ಮನ ನಡುವೆ ಕಲ್ಪಿಸಿ ತನ್ಮೂಲಕ ಭಕ್ತಿಯನ್ನು ಮಾಡುತ್ತಿರುವುದರಿಂದ ಈ ಸಂಬಂಧಗಳಲ್ಲಿ ಯಾವುದು ಎಲ್ಲಕ್ಕೂ ಹೆಚ್ಚಿನ ಐಕ್ಯಭಾವವನ್ನು ಒಳಕೊಂಡಿರುವುದೊ ಯಾವುದು ಭಾವತರಂಗಗಳ ನಾಟ್ಯವಿಲಾಸಕ್ಕೆ ಬೇಕಾದಷ್ಟು ಇಂಬು

ಗೊಡುವುದೊ ಆ ಸತಿಪತಿಭಾವವನ್ನು ಅವರು ಹೆಚ್ಚಾಗಿ ಉಪಯೋಗಿಸು
ವದು ಅಪರಿಹಾರ್ಯವೆ ಇತ್ತು. ಆದರೆ ನಿಜವಾದ ಭಕ್ತಿಮಾರ್ಗದಲ್ಲಿ
ಅಥವಾ ಪರಮಾರ್ಥದಲ್ಲಿ ಇದಕ್ಕೆ ಒಂದು ಉತ್ತಮ ರೂಪಕಕ್ಕಿಂತ ಹೆಚ್ಚು
ಮಹತ್ವವನ್ನು ಕೊಡತಕ್ಕದ್ದಲ್ಲ ಎಂಬುದನ್ನು ಎಲ್ಲರೂ ಲಕ್ಷದಲ್ಲಿಡಬೇಕು.
ಸತಿಪತಿಭಾವವು ಏನೆಂದರೂ ಕೆಳಗಿನ ಭೂಮಿಕೆಯ ಮೇಲಿನದು. ಅದು
ಅನ್ನಮಯ ಪ್ರಾಣಮಯ ಕೋಶಗಳಾಚೆಗೆ ಹೋಗಲರಿಯದು. ಬಹಳ
ವಾದರೆ ಮನೋಮಯ ಕೋಶಕ್ಕೆ ಹೋಗಿ ತಲ್ಪಬಹುದು. ಸತಿಪತಿಯರ
ಐಕ್ಯದ ಆನಂದವಾದರೂ ವಿಷಯಾನಂದಗಳಲ್ಲಿಯೆ ಒಂದಾಗಿರುವದು. ಅದು
ಮೂಲದಲ್ಲಿ ಸಕಾಮವೆ ಇರುವದು. ಆದುದರಿಂದ ಪರಮಾರ್ಥದ ಮತ್ತು
ಪರಮಾತ್ಮೈಕ್ಯದ ಕಲ್ಪನೆ ಇಲ್ಲದವರಿಗೆ ಒಂದು ಕಲ್ಪನೆ ಕೊಡುವ ಪೂರ್ತಿ
ಮಾತ್ರ ಈ ರೂಪಕದ ಉಪಯೋಗವಿರುವದು ಹೊರತು ಹೆಚ್ಚು ಏನೂ
ಇಲ್ಲ, ಎಂಬುದನ್ನು ನಾವು ಈತಿರಬೇಕು. ಬೃಹದಾರಣ್ಯಕವೆಂಬ ಮಹ
ತ್ವದ ಉಪನಿಷತ್ತು ಸಹ ಬ್ರಹ್ಮಾನಂದದ ಕಲ್ಪನೆಯನ್ನು ಕೊಡುವಾಗ
ಮತ್ತು ಆ ಐಕ್ಯ ಸ್ಥಿತಿಯನ್ನು ವರ್ಣಿಸುವಾಗ, "ತದ್ಯಥಾ ಪ್ರಿಯಯಾ ಸಂಪ
ರಿಷ್ವಕ್ತಃ" (೪. ೩. ೨೧), ಎಂದು ಸತಿಪತಿಯರ ಪ್ರೇಮಾಲಿಂಗನದ ಉದಾ
ಹರಣೆಯನ್ನು ಕೊಟ್ಟಿರುವದು. 'ಅಹಾ, ಆ ಸಮರಸ ಆತ್ಮೈಕ್ಯವು—
ಭೂಲೋಕದ ಪ್ರಣಯಪ್ರಣಯಿನಿಯರು ಪ್ರೇಮಾಲಿಂಗನದಲ್ಲಿ ಪರಸ್ಪರ
ಸಮರಸರಾಗುವದು ಕೇವಲ ಆ ಆತ್ಮೈಕ್ಯದ ಪಾರ್ಥಿವ ಪ್ರತಿ ಇರುವದು,
ಆದರೆ ಒಂದು ನೀರಸ ನಕಲು ಇರುವದು,' ಎಂದು ಪ್ಲೋಟಿನಸ್‌ನು ಏನಿ
ಯಡ್ಸದಲ್ಲಿ (Enneads VI. 7 34 ಅಂದಿರುವನು. ಯಥಾರ್ಥವಾಗಿ
ನೋಡಿದರೆ ಲಿಂಗಭಾವ ಮತ್ತು ಧರ್ಮಭಾವ ಇವೆರಡೂ ಭೂಮ್ಯಾಕಾಶ
ದಷ್ಟು ಬೇರೆ ಬೇರೆ ಇರುವವು. ಪರಮಾರ್ಥದಲ್ಲಿ ಜಾತಿ ಕುಲ ಮುಂತಾದ
ಕೃತಕ ಭೇದಭಾವಗಳಿಗೆ ಆಸ್ಪದವಿಲ್ಲದಿರುವಂತೆ ಸ್ತ್ರೀಪುರುಷ ಅಥವಾ ಸತಿ
ಪತಿ ಎಂಬ ಲಿಂಗಪ್ರಧಾನಭಾವನೆಗಳಿಗೂ ಅಲ್ಲಿ ಇಂಬು ಎಡೆಗಳಿರಲಾರವು.
ಪಾರ್ಥಿವ ಉದಾಹರಣೆಗಳನ್ನು ಕೊಟ್ಟೇ ಅಪಾರ್ಥಿವದ ಕಲ್ಪನೆಯನ್ನು,
ದೃಶ್ಯವನ್ನು ತೋರಿಯೆ ಅದೃಶ್ಯದ ಕಲ್ಪನೆಯನ್ನು, ಶಬ್ದದಿಂದಲೆ ಶಬ್ದಾತೀತದ
ಕಲ್ಪನೆಯನ್ನು ಮಾಡಿಕೊಡುವದು ಅವಶ್ಯವಿರುವುದರಿಂದ ಈ ರೂಪಕವು
ಆ ಮಟ್ಟಿಗೆ ಉಪಯುಕ್ತವಿರುವದು. ನಿಜವಾದ ಪರಮಾರ್ಥದಲ್ಲಿ ಅನ್ನಾದಿ
ಪಂಚಕೋಶಗಳನ್ನು ದಾಟಿಹೋಗುವದು, ಸಂಪೂರ್ಣ ಕಾಮಗಂಧಹೀನ
ವಾಗುವದು, ಅಂಗಭಾವವನ್ನು ಸಂಪೂರ್ಣ ಮರೆತುಬಿಡುವದು ಅಗತ್ಯ

ವಿರುವದು. ಈ ರೂಪಕದ ಮೂಲಕ ಪರಮಾತ್ಮನನ್ನು ಭಜಿಸುವ ಭಕ್ತಿ
ಪದ್ಧತಿಗೆ ಮಧುರಾಭಕ್ತಿ ಎಂಬ ಹೆಸರು ಇರುವದು. ವೈಷ್ಣವಪಂಥದಲ್ಲಿಯ
ರಾಧಾಕೃಷ್ಣಭಕ್ತಿಯು ಈ ಪದ್ಧತಿಯ ಉತ್ತಮ ಉದಾಹರಣೆಯಿರುವದು.
ಜಯದೇವಕವಿಯ 'ಗೀತಗೋವಿಂದ' ಎಂಬ ಕಾವ್ಯದಲ್ಲಿ ಈ ಭಾವದ
ಪರಮಾವಧಿಯಾಗಿದೆ, ಎಂದು ಹೇಳಬಹುದು. ವಚನಕಾರರ ಮುಖ್ಯ
ಆಧಾರಗ್ರಂಥಗಳು ಆಗಮಗಳೆ ಆದುದರಿಂದ ಅವರು ಅವುಗಳಿಂದಲೆ ಈ
ಕಲ್ಪನೆಯನ್ನು ತೆಗೆದುಕೊಂಡಿರುವರೆನ್ನಬಹುದು. ಲಿಂಗವೆ ಪತಿ ತಾನೇ
ಸತಿ, ಎಂಬ ಭಾವದಿಂದ ಪೂರ್ಣನಾದವನೆ ವೀರಶೈವನು, ಈ ಸೂಕ್ಷ್ಮಾತಿ
ಗಮದ ಮಾತೇ (ಪ. ೭. ಶ್ಲೋ. ೫೭) ಶರಣ ಸತಿ ಲಿಂಗ ಪತಿ, ಎಂಬ ರೂಪ
ವನ್ನು ತಾಳಿ ಅನೇಕ ವಚನಗಳಲ್ಲಿ ಅವತರಿಸಿದೆ. ವಚನಶಾಸ್ತ್ರಸಾರದಲ್ಲಿ
(ಭಾಗ. ೧. ಆವೃತ್ತಿ ೧) ಅನೇಕ ಕಡೆಗೆ (ಪು. ೭೯, ೨೧೧, ೨೫೫, ೪೨೮, ೫೬೬)
ಸತಿಪತಿಭಾವದ ವಚನಗಳು ಪ್ರತ್ಯೇಕವಾಗಿ ಕೊಡಲ್ಪಟ್ಟಿವೆ. ಅವುಗಳಲ್ಲಿ
ಮುಖ್ಯವಾಗಿ ಪತಿವ್ರತೆಯ ಅನನ್ಯಭಾವವೂ ನಿಷ್ಠೆಯೂ ವಿರಹದುಃಖವೂ
ವಿಕಳಾವಸ್ಥೆಯೂ ಶರಣಾಗತಿಯೂ ಸಮರ್ಪಣವೂ ಕೂಟದ ಆನಂದ
ಪರವಶತೆಯೂ ವರ್ಣಿಸಲ್ಪಟ್ಟಿರುವವು. ಈ ಭಾವದ ಹಲವು ವಚನಗಳನ್ನು
ನಾವು ವಚನಾಮೃತನಲ್ಲಿ ಅವತರಿಸಿದ್ದರೂ ಅವುಗಳಿಗೆ ಪ್ರತ್ಯೇಕ ಸ್ಥಾನ
ವನ್ನು ಕಲ್ಪಿಸುವದು ನಮಗೆ ಇಷ್ಟ ಅಥವಾ ಅವಶ್ಯತೋರಲಿಲ್ಲ. ಈಗ
ಇದೇ ರೂಪಕದ ಉಪಯೋಗವನ್ನು ಅನ್ಯ ಸಾಧುಸಜ್ಜನರು ಹೇಗೆ ಮಾಡಿ
ರುವರು ಇತ್ತ ಲಕ್ಷಗೊಡುವ.

೫೧. ಕ್ರಿಶ್ಚನ್ ಸಾಧುಗಳಲ್ಲಿ ಅನೇಕರು ವಿಶೇಷತಃ ಕ್ರಿಶ್ಚನ್
ಸಾಧ್ವಿಯರು ಈ ರೂಪಕವನ್ನು ತಮ್ಮ ಲೇಖಗಳಲ್ಲಿ ಉಪಯೋಗಿಸಿರು
ವರು. ಇಷ್ಟೇ ಅಲ್ಲ. ಅವರು ಪರಮಾತ್ಮನ ಉಪಾಸನೆಯನ್ನು ಅದೇ ಸತಿ
ಪತಿ ಭಾವದಿಂದ ಮಾಡಿರುವರು. ಕ್ಯಾಥರಾಯಿನ್ ಆಫ್ ಸಾಯೆನಾ
(ಕ್ರಿ. ಶ. ೧೩೪೭–೧೩೮೦) ಈಕೆಯು ಪರಮಾತ್ಮನೊಡನೆ ಆದ ತನ್ನ ಲಗ್ನದ
ಕುರುಹೆಂದು ಒಂದು ಉಂಗುರವನ್ನು ಆಮರಣ ತನ್ನ ಬೆರಳಲ್ಲಿಟ್ಟುಕೊಂಡಿ
ದ್ದಳು! 'ಪ್ರಿಯೆಯ (ಪರಮಾತ್ಮನ) ಮಧುರ ಸ್ಪರ್ಶವೆಂದರೊಂದು ಪ್ರೇಮಾ
ಗ್ನಿಯ ಸ್ಫುಲಿಂಗವು, ಅದರಿಂದ ನನ್ನ ಅಂತಃಕರಣಕ್ಕೆ ಬೆಂಕಿ ಇಟ್ಟಂತಾ
ಯಿತು,' ಎಂದು ಸೆಂಟ ಜಾನ್ ಆಫ್ ದಿ ಕ್ರಾಸ್ ಇವನು ಬ್ರಹ್ಮ ಸಂಸ
ರ್ಶವನ್ನು ವರ್ಣಿಸಿರುವನು. ಆದರೆ ಒಟ್ಟಿಗೆ ನೋಡಲಾಗಿ ಆಧ್ಯಾತ್ಮಿಕ
ಜೀವನದಲ್ಲಿ ಯಾವದೇ ರೀತಿಯಿಂದ ಲಿಂಗಭಾವಕ್ಕೆ ಉತ್ತೇಜನ ಕೊಡು

ವದು ಅಯೋಗ್ಯವೆಂದು ಅಮೇರಿಕದ ಪ್ರಸಿದ್ಧ ಆಧುನಿಕ, ದಾರ್ಶನಿಕನಾದ ಪ್ರೊಫೆಸರ ವುಯಿಲ್ಯಮ್ ಜೇಮ್ಸ್ (Prof. William James) ಇವನ ಮತವಿರುವದು. 'ನಮ್ಮ ಧಾರ್ಮಿಕ ಜೀವನವು ನಮ್ಮ ಯಕೃತ್, ಪಿತ್ತಕೋಶ, ಇಲ್ಲವೆ ಮೂತ್ರಪಿಂಡ ಇವುಗಳನ್ನು ಎಷ್ಟು ಅವಲಂಬಿಸಿದೆಯೊ ಅಷ್ಟೇ ಲಿಂಗವನ್ನು ಅಥವಾ ಲಿಂಗಭಾವವನ್ನು ಅವಲಂಬಿಸಿರುವದು,' ಎಂದು ಅವನು ಸತ್ಯವನ್ನು ಬಹಳ ನಿಷ್ಠುರವಾಗಿಯಾದರೂ ಖಂಡಿತವಾಗಿ ಹೇಳಿರುವನು. ಸುಫೀ ತತ್ವಜ್ಞರು ಭಕ್ತಿಯನ್ನು ಕುರಿತು ಬರೆಯುವಾಗ ಮದಿರೆಯ ಮತ್ತು ಸತಿಪತಿಭಾವದ ಉದಾಹರಣೆಗಳನ್ನು ಕೊಡುವದು ಬಹಳ. ಮದಿರೆಯಿಂದಲೆ ಭಕ್ತಿರಸವು ಮತ್ತು ಮದಿರೆಯಿಂದುಂಟಾಗುವ ಉನ್ಮತ್ತತೆಯೆಂದರೆ ಭಾವಪರವಶತೆಯು. ದೇವರನ್ನು ಅವರು ಎಷ್ಟೋ ಸಾರೆ ಪ್ರಾಣೇಶ್ವರಿ ಅಥವಾ ಪ್ರಣಯಿನಿ ಎಂದು ಸಂಬೋಧಿಸಿರುವರು. 'ಗುಲಿಸ್ತಾನ' ಎಂಬ ಸರ್ವಶ್ರುತ ಕಾವ್ಯದ ಲೇಖಕನಾದ ಸಾದಿ ಎಂಬವನು ಪರಮಾತ್ಮ ವಿರಹವನ್ನು, 'ಅದಾರಯ್ಯಾ, ಅದಾರು ತಿಳಿಯಬಲ್ಲರು ಎನ್ನ ವಿಕಳವ? ಲೈಲಿಯ ಮುಖದರ್ಶನವೆ ಇಲ್ಲದವರು ಅದೇನನುಭವಿಸಬಲ್ಲರು ಮಜನೂನಿನ ವಿರಹ ವ್ಯಥೆಯನ್ನು?' ಎಂದು ಬಣ್ಣಿಸಿರುವನು. ಮಜನೂನ ಮತ್ತು ಲೈಲಿ ಇವರು ಇರಾಣದಲ್ಲಿ 'ಆಶಕಮಾಶುಕ' ಅಥವಾ ಮಾದರಿಯ ನಲ್ಲನಲ್ಲೆಯರೆಂದು ತಿಳಿಯಲ್ಪಟ್ಟಿರುವರು, ಹಾಗೂ ಕಥೆ ಕಾವ್ಯಗಳಲ್ಲಿ ಮದನರತಿಯಂತೆ ಉದಹರಿಸಲ್ಪಟ್ಟಿರುವರು. ಪರಮಾತ್ಮನು ತನ್ನ ಹೃದಯೇಶ್ವರಿಯು, ಎಂದು ಭಾವಿಸಿ, 'ನಿನ್ನ ಮುಖವು ನಿತ್ಯ ನವಸೌಂದರ್ಯತರಂಗಗಳಿಂದ ಪ್ರಫುಲ್ಲಿತವು. ಅಹಾ, ಮಾನವರಿರಾ, ನಿಮಗೆ ಏನೆಂದು ಬಣ್ಣಿಸಲಿ? ಆ ತೆರೆಯ ಮರೆಯಲ್ಲಿರುವ ಸೌಂದರ್ಯ ಸಾಗರವ ನಾನೆಂತು ಬಣ್ಣಿಸಲಿ?' ಎಂದು ಮತ್ತು 'ಆ ಎನ್ನ ಪ್ರಿಯೆಯ ಮುಖಮಂಡಲದ ಮೇಲಿನ ಒಂದು ಗೆಣತಿಗಾಗಿ ಸಮರ್ಕಂದ ಬುಖಾರಾ ಪಟ್ಟಣಗಳನ್ನು ಕೂಡ ನಾನು ಕೊಟ್ಟುಬಿಡುವೆನು. ಆದರೆ ಎಲ್ಲಿರುವಳಾಕೆ, ಆಕೆಯ ದರ್ಶನವೆಲ್ಲಿ?' ಎಂದು ಹಾಫೀಜ್‌ನು ವ್ಯಥೆಪಟ್ಟಿರುವನು. ಮಧು ಮತ್ತ ಮಧುರಾಧರೆ ಈ ಎರಡೂ ರೂಪಕಗಳನ್ನು ಕೂಡಿಸಿ ಹಾಫೀಜ್‌ನು ಇನ್ನೊಂದೆಡೆಗೆ ಅಂದದ್ದೇನಂದರೆ, 'ಈ ಎನ್ನ ಮಧುಪಾನದ ಮಾಧುರ್ಯವನ್ನು ಜನವೇನು ಬಲ್ಲದು? ಎನ್ನ ಮಧುರಾಧರೆಯ ಮುಖಕಮಲದ ಪ್ರತಿಬಿಂಬವನು ಈ ಎನ್ನ ಮಧುಪಾತ್ರೆಯಲ್ಲಿ ನಾನು ಕಾಣುತಿರುವೆನು.' 'ಅಯ್ಯೋ, ಇನ್ನೇನು ಮಾಡಲಿ, ಎನ್ನನ್ನ ನೋಡಲೂ ಬಲ್ಲನು ಎನ್ನ

ಪ್ರಿಯನು. ಎನ್ನ ಕರುಣ ಕರೆ, ಎನ್ನ ಆರ್ತ ಆಲಾಪ, ಇವು ಅವನ ಹೃದಯವನ್ನು ಕರಗಿಸಲೊಲ್ಲವಲ್ಲಾ! ಅವನು ಎನ್ನ ಹೃದಯಾಂತರದಲ್ಲಿಯೆ ಇರುವನು. ಆದರೆ ಎನ್ನನು ಲಕ್ಷಿಸಲೊಲ್ಲನು. ಎನ್ನ ವಿರಹದತ್ತ ಇಣಿಕಿಯೂ ನೋಡಲೊಲ್ಲನು,' ಎಂದು ಸರಮದನು ಆಲಾಪಿಸಿರುವನು. ಮಾರವಾಡದ ಪ್ರಸಿದ್ಧ ಸಾಧ್ವೀಮಣಿಯಾದ ರಾಣಿ ಮೀರಾಬಾಯಿಯು ಲಗ್ನವಾಗಿದ್ದರೂ ಆಕೆ ಸಂಸಾರಮಾಡದೆ ದೇವರೊಡನೆ ಸತಿಪತಿಭಾವದಿಂದ ಕೊನೆಯವರೆಗೂ ಇರುತ್ತಿದ್ದಳು. ಸದ್ಗುರುಕೃಪೆಯಿಂದ ರಾಮನೆಂಬ ರತ್ನವು ತನಗೆ ಸಿಕ್ಕಿತೆಂದೂ ತನ್ನ ಪ್ರಭುವಾದ ಗಿರಿಧರನ ಕೀರ್ತಿಯನ್ನು ಹಾಡುವ ಕೆಲಸವೆಂದೂ ಧನ್ಯಭಾವದಿಂದ ಆಕೆ ಹೇಳಿರುವಳು. ಈ ವಿಷಯದಲ್ಲಿ ಮಂಗಳೂರಿನ ವೇಶ್ಯೆಯ ಒಬ್ಬ ವೇಶ್ಯೆಯ ಮಗಳಾದ ಕಾಸ್ಮೋಪಾತ್ರಾ ಎಂಬ ಸುಂದರಿಯ ಕಥೆಯು ಉಡುತಡಿಯ ಮಹಾದೇವಿಯಕ್ಕನ ಕಥೆಯಂತೆ ಬಹಳೇ ಮನೋವೇಧಕವಿರುವದು. ಆಕೆಯು ಮಹಾರಾಷ್ಟ್ರ ಸಂತರಲ್ಲಿ ಒಬ್ಬಳು. ವಿಷಯ ಸುಖಗಳನ್ನು ನಿತಾಂತವಾಗಿ ನಿರಾಕರಿಸಿ ಆಕೆಯು ಪರಮಾತ್ಮಪ್ರೇಮದಲ್ಲಿ ಸತಿಪತಿಭಾವದಿಂದ ಸಂಪೂರ್ಣವಾಗಿ ತನ್ಮಯಳಾಗಿದ್ದಳು. ಬೇದರದ ಅರಸನು ಆಕೆಯ ಸೌಂದರ್ಯದ ಸುದ್ದಿಯನ್ನು ಕೇಳಿ ಮೆಚ್ಚಿ ಆಕೆಯ ಸಂಗವನ್ನು ಇಚ್ಛಿಸಿದನು. ಆಗ ಬಲಾತ್ಕಾರದಿಂದ ತನ್ನನ್ನು ಅವನು ಒಯ್ಯುವ ಸಂದರ್ಭವು ಕಾಣಲು ಆಕೆಯು ಅಗ್ನಿಕಾಷ್ಟಗಳನ್ನು ಭಕ್ಷಿಸಿ ಪ್ರಾಣವನ್ನು ಬಿಟ್ಟಳು! ಅಂದಲ್ ಎಂಬ ತಮಿಳು ಸಾಧ್ವಿಯೂ ತನ್ನ ಆಯುಷ್ಯವನ್ನೆಲ್ಲ ಸತಿಪತಿಭಾವದಿಂದ ಈಶಸೇವೆ ಮಾಡುವುದರಲ್ಲಿಯೆ ಕಳೆದಳು. ಶ್ರೀ ರಂಗನಾಥದೇವರನ್ನು ಮದುವೆಮಾಡಿಕೊಂಡದ್ದರಿಂದ ಆಕೆಗೆ ರಂಗನಾಯಿಕಾ ಎಂಬ ಅಪರನಾಮಧೇಯವಾಗಿತ್ತು! ತುಕಾರಾಮ ಜ್ಞಾನೇಶ್ವರ ಮುಂತಾದವರು ತಮ್ಮ ಅಭಂಗಾದಿಗಳಲ್ಲಿ ಹಲವೆಡೆಗೆ ಸತಿಪತಿಭಾವವನ್ನು ವ್ಯಕ್ತಗೊಳಿಸಿದ್ದಾರೆ. ಆದರೆ ಕಡಿಮೆ ಎಂದು ಹೇಳಬಹುದು. ಕನ್ನಡ ದಾಸರಲ್ಲಿ ಹಲವರು ಗೋಪೀಭಾವದಿಂದ ಪರಮಾತ್ಮನನ್ನು ಭಜಿಸಿದ್ದುಂಟು. ಉದಾ: ಕನಕದಾಸನ 'ರಂಗಯ್ಯಾ ಮುಟ್ಟಿದಿರು ಎನ್ನನಳುಕಿಸಿ ಮುತ್ತೆಲ್ಲ ಸಡಿಲ್ಯಾವು (ಕೀ. ಭಾಗ. ೧. ೩೯) ಎಂಬ ಮುಂತಾದ ಕೀರ್ತನೆಗಳನ್ನು ನೋಡಬಹುದು. ಹಲವು ದಾಸರ ಸುಳಾದಿಗಳಲ್ಲಿ ಈ ಮಧುರಾಭಕ್ತಿಯು ಹೆಚ್ಚು ಸ್ಪಷ್ಟವಾಗಿ ಕಂಡುಬರುವದು.

೫೧೧. ಭಕ್ತಿಮಾರ್ಗದಲ್ಲಿ ನಾಮದ ಮಹಿಮೆಯು ಅತಿಶಯವಾಗಿರುವದು. ವೈದಿಕ ಉಪಾಸನಾ ಕಾಂಡದಲ್ಲಿ ಓಂಕಾರ ಇಲ್ಲವೆ ಗಾಯ

ತ್ಯಾದಿ ಮಂತ್ರಗಳಿಗೆ ಯಾವ ಮಹತ್ವವಿರುವದೊ ಅದೇ ಮಹತ್ವವು ಈ ಮಾರ್ಗದಲ್ಲಿ ದೇವರ ನಾಮಕ್ಕೆ ಇರುವದು. ಯಾವದೊಂದು ದೇವರ ನಾಮವೆ ಈ ಮಾರ್ಗದಲ್ಲಿಯ ಮಂತ್ರವೆಂದರೂ ಸಲ್ಲುವದು. ವೈದಿಕ ಮಂತ್ರಗಳ ದೀಕ್ಷೆಯನ್ನು ವಿಶಿಷ್ಟ ಜನರಿಗೆಯೆ ಕೊಡತಕ್ಕದ್ದು ಎಂಬ ಮುಂತಾದ ಜಾತಿನಿರ್ಬಂಧಗಳು ಉಂಟು. ಇದಲ್ಲದೆ ಆ ಮಂತ್ರದ ಜಪಕ್ಕೆ ಸ್ನಾನ, ಸ್ಥಾನ, ಆಸನ ಮುಂತಾದ ನಿರ್ಬಂಧಗಳೂ ಬಹಳ. ಆ ಮಂತ್ರಗಳನ್ನು ಗುಪ್ತವಾಗಿಡಬೇಕು ಎಂಬ ಪರಂಪರೆಯೂ ಇರುವದು. ಆದರೆ ಯಾವ ರೀತಿ ಭಕ್ತಿಮಾರ್ಗವು ಸಕಲರಿಗೆ ಮುಕ್ತದ್ವಾರವಿರುವದೊ ಅದೇ ರೀತಿ ಆ ಮಾರ್ಗದ ಒಂದು ಮುಖ್ಯ ಭಾಗವಾದ ನಾಮ, ನಾಮಸ್ಮರಣ, ನಾಮ ಜಪ ಇವು ಸರ್ವರಿಗೂ ಉಪಯೋಗಿಸಲಿಕ್ಕೆ ಬರುವಂಥ ಸಾಧನಗಳಿರುವವು. ಹರಿಕಥಾಮೃತಸಾರದಲ್ಲಿ ಜಗನ್ನಾಥದಾಸನು, 'ಮಕ್ಕಳಾಡಿಸುವಾಗ, ಮಡದಿಯೊಡನೆ ಅಕ್ಕರದಿ ನಲಿವಾಗ, ಗಜಹಯಪಲ್ಲಕ್ಕಿಗಳನೇರಿ ಮೆರೆವಾಗ, ಯಾವಾಗಲೂ ನಾಮಸ್ಮರಣವನ್ನು ಮಾಡುತ್ತಿರಬೇಕು,' ಎಂದು ಬಹಳ ಸುಂದರವಾಗಿ ಹೇಳಿರುವನು. ಇದೇ ಸಂಗತಿಯನ್ನು, 'ಬರುವಾಗ ಹೋಗುವಾಗ, ಕೂಡುವಾಗ ಏಳುವಾಗ, ಕೆಲಸಮಾಡುವಾಗ ಸುಮ್ಮನಿರುವಾಗ, ಮನೆಯಲ್ಲಿ, ದಾರಿಯಲ್ಲಿ, ಹಾಸಿಗೆಯಲ್ಲಿ, ರತಿಸುಖ ಸಮಯದಲ್ಲಿ ಯಾವಾಗಲೂ ಭಗವಚ್ಚಿಂತನವನ್ನು ಮಾಡುತ್ತಿರಬೇಕು,' ಎಂದು ಒಬ್ಬ ಮಹಾರಾಷ್ಟ್ರ ಸಾಧುವು ಹೇಳಿರುವನು. ನಾಮವೆಂಬುದು ಒಂದು ಸುಲಭವಾದ, ನಿರ್ಧಾರವಾದ, ಶಕ್ತವಿರುವ, ಮತ್ತು ಎಲ್ಲರಿಗೂ ಮುಕ್ತವಿರುವ ಹಾಗೂ ಅತ್ಯಂತ ಪರಿಣಾಮಕಾರಕವಾದ ಪಾರಮಾರ್ಥಿಕ ಸಾಧನವಿರುವದು. ಬೇರೆ ಬೇರೆ ಭಕ್ತಿ ಸಾಂಪ್ರದಾಯಗಳಲ್ಲಿ ದೇವರ ನಾಮವು ಬೇರೆಬೇರೆ ಇರಬಲ್ಲದು. ರಾಮ, ಕೃಷ್ಣ, ನಾರಾಯಣ, ವಿಠ್ಠಲ, ಮಹಾದೇವ, ಜಯರಾಮ, ಜಯಕೃಷ್ಣ, ರಾಮಕೃಷ್ಣ, ಜೀಸಸ್, ಅಲ್ಲಾ, ಸತ್‌ಶ್ರೀ ಅಕಾಲ ಈ ಮುಂತಾದ ಅನೇಕ ನಾಮಗಳನ್ನು ಆಯಾ ಭಕ್ತರು ಉಪಯೋಗಿಸುವರು. ವಚನಕಾರರು ನಾಮಮಹಿಮೆಯನ್ನು ಹಲವು ಕಡೆಗೆ ಹೇಳಿರುವರು. ಅವರ ಸಾಂಪ್ರದಾಯದಂತೆ, ನಮಃ ಶಿವಾಯ, ಅಥವಾ, ಓಂ ನಮಃ ಶಿವಾಯ,. ಇದೇ ದೇವರ ನಾಮವು, ಇದೇ ಮಂತ್ರವು, ಇದೇ ಧ್ವನ್ಯಾತ್ಮಕ ಪರವಸ್ತುವು, ಇದೇ ವರ್ಣಾತ್ಮಕ ಪರಮಾತ್ಮಪ್ರತೀಕವು. ಈ ನಾಮವು ವೇದಗಳ ಸಾರ ಸರ್ವಸ್ವವೆಂದು ಶಿವಾಗಮಗಳಲ್ಲಿ ಹೇಳಲ್ಪಟ್ಟಿರುವದು. ಇದಲ್ಲದೆ ಮಂತ್ರ ಜಪವು ವೀರಶೈವರ ಆಚಾರವರಣಗಳಲ್ಲಿ ಒಂದು ಮುಖ್ಯ ಆಚಾರವಾಗಿರುವದು. ವಚನಾಮೃತದಲ್ಲಿಯ ತಿಳಿ, ತಿಳಿ, ತಿಳಿ, ಈ ವಚನಗಳು ನಾಮಮಹಾತ್ಮ್ಯವನ್ನು ಚನ್ನಾಗಿ ಹೇಳುವವು. ಕ್ರಿಶ್ಚನ್ ಸಾಧುಗಳು ನಾಮಮಹಾತ್ಮ್ಯವನ್ನು, ನಾಮಸ್ಮರಣವನ್ನು, ನಾಮಶಕ್ತಿಯನ್ನು ಬಹಳವಾಗಿ ಹೇಳಿಕೊಂಡಿರುವರು. ರೋಲ (Rolle) ಎಂಬವನು ಜೀಸಸ್‌ನ ಪವಿತ್ರ ಹೆಸರನ್ನು ಕುರಿತು ಅಂದಿರುವುದೇನಂದರೆ, 'ಜೀಸಸ್‌ನ ನಾಮವಾ ಮೃತವು ಎನ್ನ ಮನಸದಲ್ಲಿ ಒಂದು ಆನಂದಗೀತದಂತೆ, ಎನ್ನ ಶ್ರವಣದಲ್ಲಿ ಒಂದು ಸ್ವರ್ಗೀಯ ಸುಸ್ವರ ಸಂಗೀತದಂತೆ, ಎನ್ನ ಜಿಹ್ವೆಯಲ್ಲಿ ಸವಿಜೇನಿನಂತೆ, ಪ್ರತೀತವಾಗುತ್ತಿದೆ. ಎನ್ನ ಸಂತಾಪವನ್ನು ಸಂತಯಿಸುವ ಆ ನಾಮವನ್ನು ನಾನು ಪ್ರೀತಿಸುವುದಚ್ಚರಿಯೇ?' ಇದೇ ಬಗೆಯ ವಿಚಾರಗಳನ್ನು ಜಾನ್ ಬಾನಿಯನ್, ಟಾಮಸ್ ಏ ಕೆಂಪಿಸ್ ಮುಂತಾದವರು ವ್ಯಕ್ತಮಾಡಿರುವರು. ಬಾಬಾಜಿ ಎಂಬ ಸತ್ಪುರುಷನು 'ರಾಮಕೃಷ್ಣ ಹರಿ' ಎಂಬ ನಾಮದ ದೀಕ್ಷೆಯನ್ನು ತನಗೆ ಕನಸಿನಲ್ಲಿ ಕೊಟ್ಟನು, ಎಂದು ತುಕಾರಾಮನು ಹೇಳಿರುವನು. 'ನಾಮದ ಸವಿಯು ವರ್ಣನಾತೀತವಿರುವದು. ಒಮ್ಮೆ ನಾಮದ ರುಚಿಯನ್ನು ನೋಡಿದ ನಾಲಿಗೆಯು ಮಿಕ್ಕ ರುಚಿಗಳನ್ನೆಲ್ಲ ನಿರಾಕರಿಸಿಬಿಡುವದು. ಕ್ಷಣಕ್ಷಣಕ್ಕೆ ನಾಮದ ಸವಿಯು ಹೆಚ್ಚುತ್ತಲೆ ಹೋಗುವದು. ನಾಮಬಲದಿಂದ ದೇವರು ಭಕ್ತನ ಉದ್ಧಾರಕ್ಕಾಗಿ ಅವತರಿಸುವನು,' ಎಂದು ತುಕಾರಾಮನು ನಾಮದ ಶ್ರೇಷ್ಠತೆಯನ್ನು ಕುರಿತು ನುಡಿದಿರುವನು. 'ನಾಮಮಹಾತ್ಮ್ಯದಿಂದ ಸಕಲ ದುರಿತಗಳ ನಿವಾರಣೆಯಾಗುವದು, ದೇವರ ನಾಮವನ್ನು ನಾವು ಎಂದೂ ಮರೆಯಕೂಡದು, ನಾವು ಅದನ್ನು ಯಾವಾಗಲೂ ಧ್ಯಾನಿಸಬೇಕು, ನಾಮೋಚ್ಚಾರವನ್ನು ಸತತ ನಡೆಸುವದು ನಮ್ಮ ಕರ್ತವ್ಯವಿರುವದು, ನಾಮವು ಪಾಪಿಗಳನ್ನು ಪರಿವರ್ತಿಸಿ ಪುಣ್ಯವಂತರನ್ನಾಗಿ ಮಾಡುವದು, ನಾವು ನಿಯಮಿತವಾಗಿ ಮತ್ತು ಸತತ ನಾಮಸ್ಮರಣೆಯನ್ನು ಮಾಡಬೇಕು, ಸ್ಮರಣೆಯ ಕಾಲಕ್ಕೆ ದೇವರ ಮೂರ್ತಿಯನ್ನು ನಾವು ಕಣ್ಣುಮುಂದೆ ತರಬೇಕು,' ಎಂದು ರಾಮದಾಸನು ನಾಮಸ್ಮರಣದ ವಿಧಿಯನ್ನೂ ನಾಮದ ಘನತೆಯನ್ನೂ ಹೊಗಳಿರುವನು. 'ಸಂಸಾರಯಾತನೆಗಳು ಪೀಡಿಸುತ್ತಿರುವಾಗ, ಭಕ್ತಿಮಾಡುವಾಗ, ವ್ಯವಹರಿಸುತ್ತಿರುವಾಗ, ಯಾವಾಗಲೂ ನಾಮವು ನಾಲಿಗೆಯ ಮೇಲೆ ನಲಿದಾಡಲಿ. ನಾಮಧ್ಯಾನದಿಂದಲೆ ಪರಮಾತ್ಮನು ಪ್ರತ್ಯಕ್ಷನಾಗಬಲ್ಲನು. ದೇವರ ನಾಮವೆ ಅವನ ಸ್ವರೂಪವು, ಅವನ ಸ್ವರೂಪವೆ ಅವನ ನಾಮವು. ದೇವರು ಅದೃಶ್ಯನಿರಬಲ್ಲನು, ಆದರೆ ತನ್ನ

ನಾಮವನ್ನು ಅವನು ಅಡಗಿಸಲಾರನು. ಆ ನಾಮವೆ ನಮ್ಮ ಸಾಧನವು' ಎಂದು ನಾಮದೇವನು ಒಳ್ಳೆಯುಕ್ತಿಯುಕ್ತವಾಗಿ ಹೇಳಿರುವನು. 'ಭಕ್ತರು ನಾಮಸಂಕೀರ್ತನದಿಂದ ಸಂಸಾರಸಂತಾಪಗಳನೆಲ್ಲ ಸವರಿಬಿಟ್ಟರು. ಈ ಭವಸಾಗರವೆಂಬುದು ಅವರಿಗೆ ಅಮೃತಾಬ್ಧಿಯಾಗಿ ಪರಿಣಮಿಸಿದೆ,' ಎಂದು ಜ್ಞಾನದೇವನ ವಚನವಿರುವದು ಇದೇ ಮಾತನ್ನು ಪುರಂದರಾದಿ ದಾಸರು ಅನೇಕ ಪದ್ಯಗಳಲ್ಲಿ ಹೇಳಿರುವರು. ಅವರು ಬರೆದ ಕೀರ್ತನೆಗಳಿಗೆ 'ದೇವರ ನಾಮ ' ಎಂಬ ಎರಡನೆಯ ಹೆಸರು ಇರುವದು. ಅವರ ಕಾವ್ಯಸೃಷ್ಟಿಯ ಬಹುಭಾಗವು ನಾಮಸಂಕೀರ್ತನಕ್ಕಾಗಿಯೆ ಉಪಯೋಗಿಸಲ್ಪಟಿದೆ, ಎಂದು ಹೇಳಬಹುದು. ಪುರಂದರದಾಸನು 'ನೀನ್ಯಾಕೋ, ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲವೊಂದಿದ್ದರೆ ಸಾಕೋ ' (ಕೀ. ಭಾಗ. ೧. ೧೪), ಎಂದು ನಾಮದ ಬಲವನ್ನು ಕುರಿತು ಆತ್ಮವಿಶ್ವಾಸದಿಂದ ಮತ್ತು ಪ್ರಹ್ಲಾದಾದಿ ಭಕ್ತರ ದೃಷ್ಟಾಂತಗಳನ್ನು ಕೊಟ್ಟು ಹೇಳಿರುವನು. ಮುಂದೆ ಮತ್ತೆ 'ನಿನ್ನ ನಾಮಕ್ಕೆ ಸರಿಗಾಣೆನು ಜಗದೊಳು, ಯಾವ ಒಂದೇ ನಾಮದಲ್ಲಿ ಅನಂದ ದಿಂದುಸುರುವ ಅಖಿಲ ವೇದಗಳೆಲ್ಲ ಅಡಗಿದವೊ ಆ ಒಂದೇ ನಾಮವು ಸಾಲದೇ ಮುಕ್ತಿಗೆ' (ಕೀ. ಭಾಗ. ೧. ೭೭, ೧೪೬, ೧೪೩), ಎಂದು ಮುಂತಾಗಿ ನಾಮ ಮಹಿಮೆಯನ್ನು ಹಾಡಿರುವನು. ಕನಕದಾಸನು, 'ಸಾಲದೇ ನಿನ್ನದೊಂದು ನಾಮ ' (ಕೀ. ಭಾಗ. ೧. ೧೦೪), ಎಂದು ದೇವರನ್ನು ಕೇಳಿ, 'ನಾರಾಯಣನ ನಾಮ ನೆರೆಬಾಹೋದಲ್ಲದೆ ಮತ್ತಾರೂ ಸಂಗಡ ಬಾಹೋರಿಲ್ಲ ' (ಕೀ. ಭಾಗ. ೧. ೫೪), ಎಂದು ಎಚ್ಚರಗೊಟ್ಟು, 'ರಾಮನಾಮವ ನೆನೆ ಮನವೆ, ರಾಮಯೆಂದವನೆ ಧನ್ಯನು ' (ಕೀ. ಭಾಗ. ೧. ೭೯) ಎಂದು ತನ್ನ ಮನಸಿಗೆ ಉಪದೇಶ ಮಾಡಿರುವನು. ಎಲ್ಲ ದಾಸರೂ ಇದೇ ರೀತಿ ನಾಮದ ದೊಡ್ಡಸ್ತಿಕೆಯನ್ನು ಹೇಳಿರುವರು.

೫೫. ಸರ್ವಾರ್ಪಣಪ್ರಧಾನವಾದ ಪರಮಾತ್ಮಭಕ್ತಿಯೆ ಮುಕ್ತಿಯ ಮುಖ್ಯ ಸಾಧನವೆಂದು ವಚನಕಾರರು ಸಾರಿರುವರು. ಆ ಭಕ್ತಿ ಎಂಬ ಸಾಧನ, ಅದರ ಲಕ್ಷಣ, ಮುಂತಾದವುಗಳನ್ನು ಕುರಿತು ಅನ್ಯಪ್ರಾಂತ ದೇಶಗಳ ಸಾಧುಸಜ್ಜನರು ಏನು ಅಂದಿರುವರು ಇದರ ವಿಚಾರವಾಯಿತು. ಇನ್ನು ಕರ್ಮ, ಧ್ಯಾನ, ಜ್ಞಾನ ಇತ್ಯಾದಿ ಸಾಧನಗಳ ಬಗ್ಗೆ ಅದೇ ರೀತಿಯಿಂದ ವಿಚಾರ ಮಾಡುವಾ. ಸರ್ವಾರ್ಪಣವೆಂದ ಬಳಿಕ ಕರ್ಮಾದಿ ಸಾಧನಮಾರ್ಗಗಳು ಕೂಡ ಅದರಲ್ಲಿ ಒಳಕೊಳ್ಳುತ್ತಿವೆ. ಹೀಗಿದ್ದರೂ ಸರ್ವಾರ್ಪಣಭಾವವುಳ್ಳ ಸಾಧಕರು ತಮ್ಮ ಸ್ವಭಾವಾನುಸಾರವಾಗಿ

ಕರ್ಮಪ್ರಧಾನರು, ಇಲ್ಲವೆ ಧ್ಯಾನಪ್ರಧಾನರು ಇಲ್ಲವೆ ಜ್ಞಾನಪ್ರಧಾನರು ಇರುವದು ಶಕ್ಯವಿರುವದು. ಈ ಮೂರು ಸಾಧನಮಾರ್ಗಗಳ ವಿಷಯದಲ್ಲಿ ವಚನಕಾರರ ಮತವೇನಿರುವದೆಂಬುದನ್ನು ವಚನಾಮೃತದ ಪ್ರಕರಣ ೧೧, ೧೩, ೧೪, ಇವುಗಳಲ್ಲಿ ನೋಡಬೇಕು. ಸರ್ವಾಂತರ್ಯಾಮಿಯಾದ ಪರಮಾತ್ಮನ ನಿರತಿಶಯ ಪ್ರೇಮದಿಂದ ಚಿತ್ ಸರ್ವಸ್ವವನ್ನೆಲ್ಲ ತುಂಬಿ, ಅಂತಃಕರಣದಲ್ಲಿ ಸರ್ವಾರ್ಪಣಭಾವವನ್ನು ನೆಲೆಗೊಳಿಸಿ, ತನ್ನಲ್ಲಿರುವ ಕರ್ಮಶಕ್ತಿ, ಧ್ಯಾನಶಕ್ತಿ, ಜ್ಞಾನಶಕ್ತಿ, ಇವುಗಳ ಮುಖಾಂತರ ಸಾಧಕನು ಪರಮಾತ್ಮನನ್ನು ಪ್ರತ್ಯಕ್ಷಿಸಲು ಪ್ರಯತ್ನಿಸಬೇಕು, ಎಂದು ವಚನಕಾರರ ಮತವಿರುವದು. ಸಾಧಕನಲ್ಲಿ ಯಾವ ಶಕ್ತಿಯು ಹೆಚ್ಚು ಬಲವತ್ತರವಿರುವದೊ ಆ ಪ್ರಕಾರ ಅವನ ಮಾರ್ಗವು ಕರ್ಮಯೋಗ, ಧ್ಯಾನಯೋಗ, ಇಲ್ಲವೆ ಜ್ಞಾನಯೋಗ ಎಂದೆನಿಸುವದು. ಸಾಧಕನು ಯಾವದೇ ಮಾರ್ಗದಿಂದ ಸಾಗಿದರೂ ಕೊನೆಗೆ ಅವನಿಗೆ ಜ್ಞಾನವಾಗಲಿಕ್ಕೆಬೇಕು. ಜ್ಞಾನದಲ್ಲಿಯೆ ಎಲ್ಲ ಮಾರ್ಗಗಳ ಪರ್ಯವಸಾನವಾಗುವದು. ಎಲ್ಲ ನದಿಗಳು ಸಮುದ್ರವನ್ನೆ ಕೂಡುವಂತೆ, ಎಲ್ಲ ಪಥಗಳು ರಾಜಧಾನಿಯನ್ನೆ ಸೇರುವಂತೆ, ಎಲ್ಲ ನಾಡಿಗಳು ಹೃದಯವನ್ನೆ ಮುಟ್ಟುವಂತೆ ಸಕಲ ಸಾಧನ ಮಾರ್ಗಗಳ ಮುಕ್ತಾಯವು ಜ್ಞಾನದಲ್ಲಿಯೆ ಇರುವದು. ಜ್ಞಾನದಿಂದಲೆ ಮೋಕ್ಷವು (ಜ್ಞಾನಾದೇವ ತು ಕೈವಲ್ಯಂ), ಎಂಬ ಮಾತು ನಿರ್ವಿವಾದವಿರುವದು. ಇದೇ ಮಾತನ್ನು, 'ಜ್ಞಾನವೊಂದೇ ಸಾಕು ಮುಕ್ತಿಗೆ, ಇನ್ನೇನು ಬೇಕು,' ಎಂದು ಪುರಂದರದಾಸನು (ಕೀ. ಭಾಗ. ೫. ೪೦), 'ಏನಾದರೇನು, ಜ್ಞಾನವಿಲ್ಲದೆ ಮೋಕ್ಷವಿಲ್ಲ' (ಕೀ. ಭಾಗ, ೧. ೪೪) ಎಂದು ವಿಜಯದಾಸನು ಹೇಳಿರುವನು. ಇಲ್ಲಿ ಜ್ಞಾನವೆಂದರೆ ಬರಿಯ ಬೌದ್ಧಿಕ ಜ್ಞಾನವಲ್ಲ, ಅನುಭವಯುಕ್ತ ಜ್ಞಾನವು, ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಕರ್ಮ, ಧ್ಯಾನ, ಭಕ್ತಿ, ಇವೆಲ್ಲ ಜ್ಞಾನದಲ್ಲಿ ಕೊನೆಗಾಣುವವು, ಎಂಬುದನ್ನು ಗೀತೆ ಮತ್ತು ಉಪನಿಷತ್ತುಗಳು ಎಷ್ಟೋ ಕಡೆಗೆ ಹೇಳಿರುವವು. ಅಖಿಲ ಕರ್ಮವು ಜ್ಞಾನದಲ್ಲಿ ಪರಿಸಮಾಪ್ತವಾಗುವದು. (ಗೀ ೪.೩೩) ಶುದ್ಧಚಿತ್ತನಾದವನು ಧ್ಯಾನಮಾಡುತ್ತಿರಲು ಜ್ಞಾನ ಪ್ರಸಾದವಾಗಿ ಪರಮಾತ್ಮನನ್ನು ಕಾಣುವನು. (ಮುಂ. ೩. ೧. ೪), ಸಾಧಕನು ಪರಮಾತ್ಮನು ಯಾರು, ಎಂಥವನು, ಎಂಬ ತಾತ್ವಿಕ ಜ್ಞಾನವನ್ನು ಭಕ್ತಿಯಿಂದ ಪಡೆದು, ಬಳಿಕ ಅವನಲ್ಲಿ ಪ್ರವೇಶಿಸುವನು. (ಗೀ. ೧೪. ೫೫), ಈ ಮುಂತಾದ ಅವತರಣಗಳು ಮೇಲಿನ ವಿಧಾನವನ್ನು ಚನ್ನಾಗಿ ಪುಷ್ಟೀಕರಿಸುವವು. ದಶೋಪ

ನಿಷತ್ತುಗಳಲ್ಲಿ ಸಾಧನದೃಷ್ಟಿಯಿಂದ ಜ್ಞಾನ ಹಾಗೂ ಧ್ಯಾನಯುಕ್ತ ಉಪಾಸನೆ ಇವುಗಳಿಗೆಯೆ ಮುಖ್ಯಸ್ಥಾನವು ಕೊಡಲ್ಪಟ್ಟಿರುವದು. ಶ್ರದ್ಧೆ, ತಪಸ್ಸು, ಬ್ರಹ್ಮಚರ್ಯ ಮುಂತಾದವುಗಳೂ ಸಾಧನಗಳೆಂದು ಉಪನಿಷತ್ಕಾರರು ಹೇಳಿರುವರು. ಆದರೆ ಅವುಗಳ ಪ್ರತ್ಯೇಕ ವಿಚಾರವು ಇಲ್ಲಿ ಅವಶ್ಯವಿಲ್ಲ. ಎಲ್ಲೆಲ್ಲಿಯೂ ಇರುವ ಏಕತ್ವವನ್ನರಿತವನಿಗೆ ಶೋಕವೆಲ್ಲಿಯದು ಮೋಹವೆಲ್ಲಿಯದು? (ಈಶ. ಮಂ. ೭), ವಿದ್ಯೆಯಿಂದ ಅಮೃತತ್ವವು ಪ್ರಾಪ್ತವಾಗುವದು. (ಈಶ. ಮಂ. ೧೧), ಅಧ್ಯಾತ್ಮಯೋಗದ ಅಭ್ಯಾಸದಿಂದ ಪರಮಾತ್ಮನನ್ನರಿತು ಧೀರನು ಹರ್ಷಶೋಕಾದಿ ದ್ವಂದ್ವಗಳನ್ನು ದಾಟುವನು. (ಕಠ. ೧. ೩. ೧೨), ಸೂಕ್ಷ್ಮದರ್ಶಿಗಳು ಸೂಕ್ಷ್ಮಬುದ್ಧಿಯಿಂದ ಸರ್ವಭೂತಗಳಲ್ಲಿರುವ ಗೂಢಾತ್ಮನನ್ನು ನೋಡುವರು, ವಾಣಿಯನ್ನು ಮನದಲ್ಲಿ, ಮನವನ್ನು ಜ್ಞಾನದಲ್ಲಿ, ಜ್ಞಾನವನ್ನು ಬುದ್ಧಿಯಲ್ಲಿ, ಬುದ್ಧಿಯನ್ನು ಶಾಂತಾತ್ಮನಲ್ಲಿ ಲಯಗೊಳಿಸಬೇಕು, ಅಂದರೆ ಅತ್ಯಂತಿಕ ದರ್ಶನವಾಗುವದು. (ಕಠ. ೧. ೩. ೧೩, ೧೪), ಮನಸಿನ ಸಹಿತ ಪಂಚೇಂದ್ರಿಯಗಳು ಸ್ಥಿರವಾಗಿ ಬುದ್ಧಿಯು ನಿಶ್ಚಲವಾಯಿತೆಂದರೆ ಪರಮಗತಿಯು ಪ್ರಾಪ್ತವಾಗುವದು. (ಕಠ. ೨. ೬. ೧೦), ಆನಂದರೂಪನೂ ಅಮೃತನೂ ಆದ ಅವನನ್ನು ಧೀರನು ವಿಜ್ಞಾನದಿಂದ ಅರಿತುಕೊಳ್ಳುವರು. (ಮುಂ. ೨. ೨. ೭), ಈ ಮುಂತಾದ ಮಂತ್ರಗಳಲ್ಲಿ ಜ್ಞಾನ ಮತ್ತು ಧ್ಯಾನಯೋಗ ಇವು ಬ್ರಹ್ಮಜ್ಞಾನದ ಸಾಧನಗಳೆಂದು ಹೇಳಲ್ಪಟ್ಟಿವೆ. 'ಮನಸನ್ನು ಶಾಂತಗೊಳಿಸಿ ಯಾವ ವಿದ್ವಾಂಸರು ಅರಣ್ಯದಲ್ಲಿ ಶ್ರದ್ಧಾಯುಕ್ತರಾಗಿ ತಪಸ್ಸನ್ನು ಮಾಡುವರೊ ಅವರು ದೋಷರಹಿತರಾಗಿ ಅವ್ಯಯ ಆತ್ಮನಿದ್ದೆಡೆಗೆ ಹೋಗುವರು,' ಎಂದು ಮುಂಡಕವು (೧. ೨. ೧೧) ಹೇಳುವದು. ತೈತ್ತಿರೀಯ ಉಪನಿಷತ್ತಿನ ಭೃಗುವಲ್ಲಿಯಲ್ಲಿ ಭೃಗುವು, 'ಆನಂದವೆ ಬ್ರಹ್ಮವು, ಎಂಬುದನ್ನು ತಪಸ್ಸಿನಿಂದ ತಿಳಿದುಕೊಳ್ಳುವನು;' ಛಾಂದೋಗ್ಯದ ಆರನೆಯ ಅಧ್ಯಾಯದಲ್ಲಿ (ಖಂಡ. ೧೨) ಉದ್ದಾಲಕ ಆರುಣಿಯು ಶ್ವೇತಕೇತುವಿಗೆ, 'ಶ್ರದ್ಧೆಯನ್ನಿಡು. ಆತ್ಮನು ಅತ್ಯಂತ ಸೂಕ್ಷ್ಮನು. ಇದೆಲ್ಲ ಆತ್ಮಮಯವಿರುವದು, ಅದೇ ಸತ್ಯವು,' ಎಂದು ಹೇಳಿರುವನು. ಇನ್ನು ಉಪನಿಷತ್ತಿನಲ್ಲಿ ಕ್ವಚಿತ್ ಪ್ರಸಂಗಗಳಲ್ಲಿ ಕರ್ಮವೂ ಸಾಧನವೆಂದು ಹೇಳಲ್ಪಟ್ಟಿದೆ. ತಪಸ್ಸು, ದಮ, ಕರ್ಮ ಇವು ಬ್ರಹ್ಮನ ಪ್ರತಿಷ್ಠೆಗಳು, ಎಂದು ಕೇನೋಪನಿಷತ್ತಿನಲ್ಲಿ (ಖಂಡ ೪. ೮) ಹೇಳಲ್ಪಟ್ಟಿರುವದು. ಕರ್ಮವನ್ನು ಮಾಡುತ್ತಲೆ ನೂರುವರ್ಷ ಬಾಳಬೇಕು, ನಿರ್ಲೇಪನಾಗಿರಲಿಕ್ಕೆ ಇದೊಂದೇ ಮಾರ್ಗವು. ಎಂದು ಈಶಾವಾಸ್ಯವು (ಮಂ. ೨) ಹೇಳಿರುವದು. ಕರ್ಮವು ಸಕಾಮ ಅಥವಾ ನಿಷ್ಕಾಮ ಹೀಗೆ ಎರಡು ಬಗೆಯದ್ದಿರಬಲ್ಲದು. ಮೋಕ್ಷಮಾರ್ಗದಲ್ಲಿ ಸಕಾಮಕರ್ಮಕ್ಕಂತೂ ಎಳ್ಳಷ್ಟು ಎಡೆಯಿಲ್ಲ. ನಿಷ್ಕಾಮಕರ್ಮವೆ ನಮ್ಮನ್ನು ಬಂಧಮುಕ್ತಮಾಡಬಲ್ಲದು. ಕರ್ಮಮಾಡಿಯೂ ನಾವು ಅಲಿಪ್ತರಿರಬೇಕಾದರೆ ಅದನ್ನು ನಾಲ್ಕು ಬಗೆಯಿಂದ ಮಾಡಬಹುದು. ಕೇವಲ ಕರ್ತವ್ಯವೆಂದು ಕರ್ಮವನ್ನು ಮಾಡಬಹುದು, ಅದನ್ನು ಅನಾಸಕ್ತಿಯಿಂದ ಮಾಡಬಹುದು, ಫಲತ್ಯಾಗಪೂರ್ವಕ ಕರ್ಮವನ್ನು ಮಾಡಬಹುದು, ಅಥವಾ ಅದನ್ನು ಈಶ್ವರಾರ್ಪಣಬುದ್ಧಿಯಿಂದ ಮಾಡಬಹುದು. ನಿಷ್ಕಾಮಕರ್ಮದ ತತ್ವವನ್ನು ಅಥವಾ ಕರ್ಮಯೋಗವನ್ನು ಗೀತಾಕಾರರು ಅತ್ಯುತ್ತಮರೀತಿಯಿಂದ ಪ್ರತಿಪಾದಿಸಿರುವರು. ಗೀತೆಯಲ್ಲಿ ಕೃಷ್ಣನು ಅರ್ಜುನನಿಗೆ ಈ ಯೋಗವನ್ನು ಉಪದೇಶಿಸುವಾಗ, 'ಕರ್ಮವನ್ನು ಮಾಡುವುದಷ್ಟೇ ನಿನ್ನ ಅಧಿಕಾರವು, ಅದರ ಫಲದ ಅಧಿಕಾರವು ನಿನಗಿಲ್ಲ. ಆದುದರಿಂದ ಕರ್ಮಫಲವನ್ನು ಇಚ್ಛಿಸದೆ ಕರ್ಮ ಮಾಡು. ಕರ್ಮಮಾಡುವುದನ್ನು ಮಾತ್ರ ಎಂದಿಗೂ ಬಿಡಬೇಡ(ಗೀ. ೨. ೪೭), ಅನಾಸಕ್ತನಾಗಿ ಕರ್ಮವನ್ನಾಚರಿಸುವ ಪುರುಷನು ಪರಮಗತಿಯನ್ನು ಪಡೆಯುವನು (ಗೀ. ೩. ೧೯), ನೀನು ಮಾಡುವದನ್ನು, ತಿನ್ನುವದನ್ನು, ಹೋಮಿಸುವದನ್ನು, ದಾನಕೊಡುವದನ್ನು, ತಪಿಸುವದನ್ನು, ಎಲ್ಲವನ್ನು ನನಗೆ ಅರ್ಪಣಮಾಡು. ಅಂದರೆ ಕರ್ಮದ ಫಲಾಫಲಗಳಿಂದ ಮುಕ್ತನಾಗಿ ನನಗೆ ಬಂದು ಕೂಡುವಿ (ಗೀ. ೯. ೨೭, ೨೮), ಎಂದು ಉಪದೇಶಿಸಿರುವನು. ವಚನಕಾರರು ಹೇಳಿದ ಅಲಿಪ್ತಕರ್ಮವೂ ಇದೇ ಬಗೆಯದ್ದಿರುವದು. (೧೪೨, ೧೪೩, ೨೮೨, ೩೫೭).

೨೧೩. ಭಕ್ತಿಯಂತೆ ಕರ್ಮ, ಧ್ಯಾನ, ಮತ್ತು ಜ್ಞಾನ ಇವು ಪುರಾತನಕಾಲದಿಂದ ಎಲ್ಲ ದೇಶಗಳಲ್ಲಿಯೂ ಪರಮಾರ್ಥದ ಸಾಧನಗಳೆಂದು ಉಪಯೋಗಿಸಲ್ಪಡುತ್ತಿವೆ. ಆದರೆ ಆರ್ಯಾವರ್ತದಲ್ಲಿ ಆ ಮಾರ್ಗಗಳಿಗೆ ಪ್ರತ್ಯೇಕ ಮತ್ತು ಮೂರ್ತಸ್ವರೂಪವು ಬಂದಂತೆ ಹಾಗೂ ಅವು ಒಂದೊಂದು ಪ್ರತ್ಯೇಕ ಯೋಗವೆಂದೆನಿಸಿ ಅವುಗಳನ್ನು ಕುರಿತು ಬೇರೆಗ್ರಂಥಗಳು ಮತ್ತು ಅವುಗಳನ್ನು ಹಿಂಬಾಲಿಸುವ ಪ್ರತ್ಯೇಕ ಸಂಪ್ರದಾಯಗಳು ಇಲ್ಲಿ ನಿರ್ಮಾಣವಾಗಿರುವಂತೆ ಅನ್ಯದೇಶಗಳಲ್ಲಿ ಆಗಲಿಲ್ಲ. ಹಿಂದುಸ್ಥಾನದ ಹೊರಗೆ ಹುಟ್ಟಿ ಹಬ್ಬಿದ ಧರ್ಮಗಳಲ್ಲಿ ಮುಖ್ಯವಾಗಿರುವ ಪಾರಸೀ, ಯಹುದೀ, ಕ್ರಿಶ್ಚನ್, ಇಸ್ಲಾಮೀ, ಧರ್ಮಗಳು ಭಕ್ತಿಪ್ರಧಾನವೆ ಇರುವವು. ಹಿಂದುಸ್ಥಾನದಲ್ಲಿ ಹುಟ್ಟಿದರೂ ಹಿಂದುಸ್ಥಾನದ ಹೊರಗೆಯೆ ಹೆಚ್ಚಾಗಿ ಪಸರಿಸಿದ

ಬುದ್ಧಧರ್ಮವು ಮೂಲ ಜ್ಞಾನಪ್ರಧಾನವಿದ್ದರೂ ಮುಂದೆ ಮಹಾಯಾನ ಪಂಥದಲ್ಲಿ ಅದಕ್ಕೆ ಭಕ್ತಿಪ್ರಧಾನಸ್ವರೂಪವೆ ಬಂದಿತು. ಮೇಲೆ ಹೇಳಿದ ಧರ್ಮಗಳ ಅನುಯಾಯಿಗಳಲ್ಲಿ ಕರ್ಮ, ಧ್ಯಾನ, ಜ್ಞಾನಾದಿ ಮಾರ್ಗಗಳನ್ನು ಅನುಸರಿಸಿದವರು ಇಲ್ಲೇ ಇಲ್ಲವೆಂದು ನಮ್ಮ ಹೇಳುವಿಕೆಯ ಅರ್ಥವಿಲ್ಲ. ಹಾಗೆ ನೋಡಿದರೆ ಉಪನಿಷದ್ಧರ್ಮವೂ ಜ್ಞಾನಪ್ರಧಾನವೆ ಇರುವದು ಆದರೆ ನಮ್ಮಲ್ಲಿ ಮುಂದೆ ಯಾವ ಪ್ರಕಾರವಾಗಿ ಕರ್ಮಯೋಗಕ್ಕೆ ಪ್ರಾಧಾನ್ಯ ಕೊಡುವ ಗೀತೆಯಂಥ ಸಮನ್ವಯಯೋಗ ಗ್ರಂಥವು, ಪಾತಂಜಲಸೂತ್ರದಂಥ ಅಷ್ಟಾಂಗಯೋಗವನ್ನು ಹೇಳುವ ಗ್ರಂಥವು, ಭಕ್ತಿಯ ತಿರುಳನ್ನು ತಿಳಿಸುವ ನಾರದ ಶಾಂಡಿಲ್ಯಸೂತ್ರಗಳಿದ್ದ ಗ್ರಂಥಗಳು ನಿರ್ಮಾಣವಾದವೊ ಮತ್ತು ಆಯಾ ಸಂಪ್ರದಾಯಗಳು ಪ್ರತ್ಯೇಕವಾಗಿ ಬೆಳೆದವೊ ಹಾಗೆ ಅನ್ಯದೇಶಗಳಲ್ಲಿ ಅಥವಾ ಧರ್ಮಗಳಲ್ಲಿ ವಿಶೇಷವಾಗಿ ಆಗಿಲ್ಲ. ಆದರೆ ಆ ಎಲ್ಲ ಧರ್ಮಗಳಲ್ಲಿ ಭಕ್ತಿಯ ಜೊತೆಗೆ ಕರ್ಮಾದಿ ಸಾಧನಗಳೂ ಆಗಾಗ್ಗೆ ಉಪಯೋಗಿಸಲ್ಪಟ್ಟಿರುವವು. ಈ ಬಗ್ಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಯೆಹೂದಿಯರ ಧರ್ಮಾತ್ಮನಾದ ಮೋಝೇಸ್‌ನು (Moses) ಹಾರೆಬ್ ಮತ್ತು ಸಿನಾಯಿ ಪರ್ವತಗಳ ಮೇಲೆ (Exodus ch. 3 20) ಹೋಗಿ ಮಾಡುವ ಸಾಧನವು ಧ್ಯಾನಯೋಗವೆ ಇರಲಿಕ್ಕೆ ಬೇಕು ಮತ್ತು ಅದರಿಂದಲೆ ಅವನಿಗೆ ಅಲ್ಲಿ ಸಾಕ್ಷಾತ್ಕಾರವಾಯಿತು, ಎಂಬುದು ಸ್ಪಷ್ಟವು. ಸ್ವತಃ ಜೀಸಸ್‌ಕ್ರಾಯಿಸ್ಟನು ಅಡವಿಯಲ್ಲಿ ನಾಲ್ವತ್ತು ದಿನ ನಿರಾಹಾರದಿಂದ ಇದ್ದುದು (St. Matthew ch. 4) ಧ್ಯಾನಮಗ್ನ ಸ್ಥಿತಿಯಲ್ಲಿಯೆ. 'ಆ ಅಪ್ರಾಕೃತ ಆನಂದವು ದೇವರ ಅಂತರ್ಧ್ಯಾನದಿಂದಲೆ ಪ್ರಾಪ್ತವಾಗುವದು,' ಎಂದು ಸೆಂಟ ಅಗಸ್ಟಾಯಿನ್‌ನು (ಕನ್‌ಫೆಶನ್ಸ್) ಹೇಳುವಾಗ ಧ್ಯಾನಯೋಗವನ್ನೆ ಪ್ರತಿಪಾದಿಸಿರುವನು. 'ನಿಜಭಕ್ತನ ಅಂತರವು ಶ್ರಮವಿಶ್ರಾಮಗಳಲ್ಲಿ ಸಮವಾಗಿ ರುಚಿಗೊಳ್ಳುವದು. ಅವನು ಪರಮಾತ್ಮನ ಜೀವಂತ ನಿಮಿತ್ತ ಮಾತ್ರನಾಗಿ ಸಡೆಯುವನು,' ಎಂದು ರೂಯಿಸ್‌ಬ್ರೋಕ್‌ನು ಕರ್ಮಯೋಗದ ತತ್ವವನ್ನು ಹೇಳಿರುವನು. ಇಗ್ನೇಶಿಯಸ್ ಲಾಯೋಲಾ (Ignatius Loyola) ಎಂಬ ಮಹಾಸಾಧುವು ಲೋಕಸೇವಾರ್ಥವಾಗಿ ಸ್ಥಾಪಿಸಿದ ಧರ್ಮಬಂಧುಗಳ ಸಂಘವು ಕರ್ಮಯೋಗದರ್ಶಕವಿರುವದು. ಬುದ್ಧನು ಸ್ವತಃ ಮೊದಲು ಅನೇಕ ಸಾಧನಗಳನ್ನು ಮಾಡಿ ಬೇಸತ್ತು ಕೊನೆಗೆ ಅಲಾರ ಕಾಲಾಮನೆಂಬ ರಾಜಯೋಗಿಯು ಹೇಳಿದ ಬ್ರಹ್ಮವಿಹಾರವೆಂಬ ಧ್ಯಾನವನ್ನು ಸಾಧಿಸಿ ಸಂಬೋಧಿಯನ್ನು ಪಡೆದನು. ಹೀಗೆ ಹಲವರು

ಧ್ಯಾನ, ಹಲವರು ಕರ್ಮ, ಹಲವರು ಜ್ಞಾನಮಾರ್ಗವನ್ನು ಅನುಸರಿಸಿರುವರು.

೨೧೪. ಇನ್ನು ಮಹಾರಾಷ್ಟ್ರ ಸಂತರಂತೂ ವೈದಿಕಧರ್ಮದವರೇ. ಅವರಲ್ಲಿ ಜ್ಞಾನದೇವನು ದೊಡ್ಡ ಜ್ಞಾನಿಯೂ ಧ್ಯಾನಯೋಗಿಯೂ ಇದ್ದನು. ತನ್ನ ಜ್ಞಾನೇಶ್ವರಿಯಲ್ಲಿ ಅವನು ಧ್ಯಾನಯೋಗಕ್ಕೆ ಕೊಟ್ಟ ಮಹತ್ವದ ಸ್ಥಾನ ಮತ್ತು ಸವಿಸ್ತಾರವಾಗಿಯೂ ಅನುಭವಿಕನಂತೆಯೂ ಮಾಡಿದ ಅದರ ವಿವೇಚನೆ (ಜ್ಞಾನೇಶ್ವರಿಯ ೬ನೆಯ ಅಧ್ಯಾಯ) ಇವುಗಳನ್ನು ನೋಡಿದರೆ ಮೇಲಿನ ಮಾತು ಸಿದ್ಧವಾಗುವದು. ಏಕನಾಥನು ವೇದಾಂತ ವ್ಯವಹಾರಗಳ ಸಮನ್ವಯವನ್ನು ಅಂದರೆ ಜ್ಞಾನಕರ್ಮಗಳ ಸಮನ್ವಯವನ್ನು ಮಾಡಲೆತ್ನಿಸಿರುವನು. ಸಮಾಧಿಯೆಂದರೆ ಕೇವಲ ನಿಶ್ಚಲ ಶಾಂತಿಸ್ಥಿತಿಯು, ಹೀಗೆ ಅನ್ನದೆ, ಗೀತೆಯಂತೆ, ಕರ್ಮಗಳಲ್ಲಿ ಪ್ರವೃತ್ತನಿದ್ದರೂ ಯಾವನು ಸತತ ಅಧ್ಯಾತ್ಮದೃಷ್ಟಿಯುಳ್ಳವನೊ ಅವನೆ ನಿಜವಾಗಿ ಸಮಾಧಿಸ್ಥನು, ಎಂದು ಏಕನಾಥನು ತನ್ನ ಭಾಗವತದಲ್ಲಿ (೨. ೨೨೩–೨೩೨) ಹೇಳಿರುವನು. ಅಡವಿಯಲ್ಲಿ ಹೋಗಿ ಹಂದಿ ಪಂದಿಗಳಂತೆ ಇರುವುದರಲ್ಲಿ ಅರ್ಥವಿಲ್ಲ, ಸಂಸಾರದಲ್ಲಿಯೆ ಇದ್ದು ಪರಮಾರ್ಥವನ್ನು ಸಾಧಿಸಬೇಕು, ಎಂದು ಅವನು ಕರ್ಮಯೋಗವನ್ನು ಪ್ರತಿಪಾದಿಸಿರುವನು. ತುಕಾರಾಮನು ಮಾತ್ರ ಕೇವಲ ಭಕ್ತಿಭಾವದ ಮೂರ್ತಿಯು. ಸಂಸಾರ ವ್ಯವಹಾರ, ಊಟಉಪಚಾರ ಇವುಗಳ ಪರವೆಯಿಲ್ಲದೆ ಯಾವಾಗಲೂ ಭಕ್ತಿಪರವಶಸ್ಥಿತಿಯಲ್ಲಿರುವುದೆ ಅವನ ಧ್ಯೇಯವಾಗಿತ್ತು. ಸನ್ಯಾಸಿಯಿದ್ದರೂ ರಾಮದಾಸನು ಮಾತ್ರ ಪರಮ ಕರ್ಮಯೋಗಿಯೆಂದು ಹೇಳಲಿಕ್ಕೆಬೇಕು. ನಿಜವಾದ ಜ್ಞಾನದ ಲಕ್ಷಣವನ್ನು ಹೇಳುವಾಗ, 'ಮೋಕ್ಷಪ್ರಾಪ್ತಿಯು ಯಾವ ಜ್ಞಾನದಿಂದ ಆಗುವುದೊ ಅದೇ ನಿಜವಾದ ಜ್ಞಾನವು. ಆತ್ಮಜ್ಞಾನವೆ, ಪರಮಾತ್ಮಜ್ಞಾನವೆ, ಸತ್ಯಾಸತ್ಯವಿವೇಕವೆ ಅಂಥ ನಿಜ ಜ್ಞಾನವು. ತೀರ್ಥಯಾತ್ರೆ, ತಪಸ್ಸು, ಯೋಗ ಮುಂತಾದವುಗಳಿಗಿಂತ ಆತ್ಮಜ್ಞಾನವು ಹೆಚ್ಚಿನದಿರುವದು. ಅದು ಕೊನೆಗೆ ಅನುಭವದಿಂದಲೆ ತಿಳಿಯಬಲ್ಲದು,' ಹೀಗೆ ಮೊದಲು ಅಂದಿರುವನು. ಬಹಿರ್ವ್ಯವಹಾರದಕ್ಷನಿರುವವನೆ ಆದರ್ಶಪುರುಷನು. ಅವನು ಯಾವಾಗಲೂ ಜಾಗರೂಕನಾಗಿರುವನು. ದೇವರ ಸೇವೆಸಾಡದೆ ಒಂದು ಕ್ಷಣವನ್ನು ಸಹ ಅವನು ಕೆಡಿಸುವುದಿಲ್ಲ. ಅತಂದ್ರಿತ ಕರ್ಮ ಮತ್ತು ಶಾಂತ ಭಕ್ತಿ ಇವು ಜೊತೆಯಾಗಿಯೆ ಅವನಲ್ಲಿರುವವು. ಅವ್ಯಾಹತವಾಗಿ ಲೋಕಹಿತ

ವನ್ನು ಬಯಸಿ ಅದನ್ನು ಅವನು ಸತತ ಸಾಧಿಸುತ್ತಲಿರುವನು,' ಎಂದು ರಾಮದಾಸನು ಆದರ್ಶಪುರುಷನ ವರ್ಣನೆಯನ್ನು ಮಾಡಿರುವನು. ಅವನು ಬರಿಯ ಉಪದೇಶಕನಲ್ಲ. ಅವನ ಜೀವನ ಚರಿತ್ರವು ಅವನ ಉಪದೇಶದ ಪ್ರತ್ಯಕ್ಷ ಪ್ರತಿಬಿಂಬವಿರುವದು. ಅಥವಾ ಹೀಗೆ ಅನ್ನುವುದಕ್ಕಿಂತ ಅವನ ಪ್ರತಿಪಾದನವು ಅವನ ಪ್ರತೀತಿಯ ಪ್ರತ್ಯಕ್ಷ ಪ್ರತಿಬಿಂಬವಿರುವದು, ಎಂದರೆ ಹೆಚ್ಚು ಯಥಾರ್ಥವಾಗುವದು. ಯಾಕಂದರೆ, 'ಇದು ಪ್ರತೀತಿಯ ಮಾತು,' (ಹೇ ಪ್ರತೀತೀಚೆ ಬೋಲಣೇ) 'ಮೊದಲು ನಡೆದು ಬಳಿಕ ನುಡಿದದ್ದಿದು,' (ಆಧೀ ಕೇಲೇ ಮಗ ಸಾಂಗಿತಲೇ) ಎಂದು ತನ್ನ ದಾಸಬೋಧದಲ್ಲಿ ಒಹಳ ಸಾರೆ ಹೇಳಿರುವನು. ದಾಸರಾದರೂ ಜ್ಞಾನಧ್ಯಾನಾದಿಗಳನ್ನು ಅನೇಕ ಸಾರೆ ಒಣ್ಣಿಸಿದ್ದಾರೆ. 'ಕಣ್ಣಿನೊಳಗೆ ನೋಡೋ, ಒಳಗಣ್ಣಿನೊಳಗೆ ನೋಡೋ, ಅರುಹಕ್ರಿಗಳಲ್ಲಿರುವ ಪರಮನನ್ನು ನೋಡೋ,' ಎಂದು ಪುರಂದರದಾಸನು ಧ್ಯಾನವನ್ನು ಹೇಳಿದ್ದಾನೆ (ಕೀ. ಭಾಗ. ೩. ೫೧). ಅನೇಕ ದುರ್ಘಟ ಕಾರ್ಯಗಳನ್ನು ಮಾಡಬಹುದು, ಆದರೆ 'ಮನಸು ನಿಲ್ಲಿಸುವದು ಕಷ್ಟ' (ಕೀ. ಭಾಗ. ೨. ೬೭), ಎಂದು ವಿಜಯದಾಸನು ಅಂದಿರುವನು.

೩೫. ಅತ್ಯುಚ್ಚ ಪರಮಾನಂದ ಸ್ಥಿತಿಯನ್ನು ಪಡೆಯುವುದಕ್ಕೆ ವಚನಕಾರರು ಉಪಯೋಗಿಸಿದಂತೆ ಸರ್ವಾರ್ಪಣ ಪ್ರಧಾನವಾದ ಭಕ್ತಿ ಮಾರ್ಗವನ್ನು ಮತ್ತು ಹಲವರು ಅನುಷಂಗಿಕವಾಗಿ ಕರ್ಮ, ಧ್ಯಾನ, ಜ್ಞಾನಾದಿ ಅನ್ಯಮಾರ್ಗಗಳನ್ನು ಹೇಗೆ ಉಪಯೋಗಿಸಿರುವರು ಎಂಬುದನ್ನು ನೋಡಿದೆವು. ಇನ್ನು ಸಾಧಕನ ನೀತಿ, ಯಮನಿಯಮ, ಗುಣಶೀಲಗಳು ಹೇಗೆ ಇರಬೇಕು ಇದನ್ನು ಕುರಿತು ವಚನಕಾರರು ಹೇಳಿದ ಮಾತುಗಳಲ್ಲಿಯೂ ಅನ್ಯ ಸಾಧುಸಂತರು ಹೇಳಿದ ಗುಣ ಮತ್ತು ವಿಧಿಸಿದ ಆಚಾರಗಳಲ್ಲಿಯೂ ಎಷ್ಟು ಸಾಮ್ಯವಿರುವದು ಇದನ್ನು ನೋಡುವ. ಈ ವಿಷಯದಲ್ಲಿ ವಿಲಕ್ಷಣವಾದ ಹೋಲಿಕೆಯು ಕಂಡುಬರುವದಿ. ವಿಿಕ್ಕ ಮಾತುಗಳಲ್ಲಿ ಹಲವಾದರೂ ಭೇದಗಳು ಅಲ್ಲಲ್ಲಿ ಕಂಡುಬರಬಹುದು, 'ಆದರೆ ಸಾಧಕನು ತನ್ನ ಬಾಂಧವರೊಡನೆ ಯಾವರೀತಿ ನಡಕೊಳ್ಳಬೇಕು, ತನ್ನ ಮನಸನ್ನು ಯಾವ ರೀತಿ ಇಟ್ಟುಕೊಳ್ಳಬೇಕು, ತನ್ನಲ್ಲಿ ಯಾವ ಗುಣ ಶೀಲಗಳನ್ನು ಪರಿಪೋಷಿಸಬೇಕು, ಈ ಮಾತುಗಳ ಬಗ್ಗೆ ಎಲ್ಲ ಸಾಧು ಮಂಡಲದಲ್ಲಿ ಪೂರ್ಣ ಏಕವಾಕ್ಯತೆ ಇರುವದು. ವಚನಕಾರರ ಈ ವಿಷಯಕ ವಿಚಾರಗಳು ವಚನಾಮೃತದ ೧೬,೧೭ ಪ್ರಕರಣಗಳಲ್ಲಿ ಬಂದಿವೆ.

ಸತ್ಯ, ಅಹಿಂಸೆ, ಅಸ್ತೇಯ, ದಯೆ, ಕ್ಷಮೆ, ಶಾಂತಿ, ಅದಂಭಿತ್ವ, ನಿಷ್ಠೆ, ಸ್ಥೈರ್ಯ, ಧೈರ್ಯ, ತಾಳ್ಮೆ, ಬ್ರಹ್ಮಚರ್ಯ ಮುಂತಾದ ಅನೇಕ ಗುಣಗಳ ಮಾಲಿಕೆಯನ್ನು ವಚನಕಾರರು ವರ್ಣಿಸಿರುವರು. ಸಾಧಕನು ಯಾವದೇ ಮಾರ್ಗವನ್ನು ಹಿಡಿದಿರಲಿ, ಅವನಿಗೆ ನೀತಿ, ಶೀಲ, ಸದ್ಗುಣ, ಇವು ಅತ್ಯವಶ್ಯವಾದವುಗಳು, ಎಂಬುದನ್ನು ಅಲ್ಲಿಂದ ಇಲ್ಲಿಯವರೆಗೆ ಸಮಸ್ತ ಸಾಧುಗಳು ಒಪ್ಪಿ ಅವುಗಳ ಬಗ್ಗೆ ಒಳ್ಳೆ ಕಟ್ಟುಗಳನ್ನು ಹೇಳಿಟ್ಟಿರುವರು. ಉಪನಿಷತ್ಕಾರರು ಜ್ಞಾನವನ್ನು ಮುಖ್ಯವಾಗಿ ಹೇಳಿದ್ದರೂ ಅವರು ಅಲ್ಲಲ್ಲಿ ಈ ಬಗ್ಗೆ ಉಪದೇಶವನ್ನು ಮಾಡಿರುವರು. ವೈರಾಗ್ಯವಿಲ್ಲದವನು, ದುಶ್ಚರಿತನು, ಅಶಾಂತನು ಬ್ರಹ್ಮನನ್ನು ಪಡೆಯಲಾರನು (ಕಠ. ೧. ೨, ೨೩), ಸಂಯಮರಹಿತನು, ಅಶುದ್ಧ ಚಿತ್ತವುಳ್ಳವನು ಪರಮ ಪದವನ್ನು ಪ್ರಾಪ್ತ ಮಾಡಿಕೊಳ್ಳಲಾರನು (ಕಠ, ೧. ೩. ೭), ತಪಸ್ಸು, ದಾನ, ಸರಲತೆ, ಅಹಿಂಸೆ, ಮತ್ತು ಸತ್ಯ ಇವು ೫ ಯಜ್ಞದಲ್ಲಿ ಕೊಡತಕ್ಕ ದಕ್ಷಿಣೆಗಳಿದ್ದಂತೆ (ಛಾಂ. ೩. ೧೭. ೪), ಈ ಉಲ್ಲೇಖಗಳು ಉಪನಿಷತ್ತುಗಳ ಅಭಿಪ್ರಾಯವನ್ನು ಜನ್ಮಾಗಿ ವ್ಯಕ್ತಗೊಳಿಸುತ್ತಿವೆ. ಇದಲ್ಲದೆ ತೈತ್ತಿರೀಯದಲ್ಲಿ ಗುರುವು ಸಮಾವರ್ತನದ ಕಾಲಕ್ಕೆ ಶಿಷ್ಯನಿಗೆ, 'ಸತ್ಯವನ್ನು ನುಡಿ, ಧರ್ಮವನ್ನಾಚರಿಸು, ಸ್ವಾಧ್ಯಾಯವನ್ನು ತಪ್ಪಿಸಬೇಡ, ತಾಯಿತಂದೆ ಗುರುಹಿರಿಯರನ್ನು, ಅತಿಥಿ ಅಭ್ಯಾಗತರನ್ನು ದೇವರಂತೆ ಮನ್ನಿಸು, ಪವಿತ್ರ ಕಾರ್ಯಗಳನ್ನೆ ಮಾಡು,' ಎಂದು ಮುಂತಾಗಿ ಮಾಡಿದ ಉಪದೇಶವು (ವಲ್ಲಿ. ೧. ಅನುವಾಕ ೧೧) ಬಹಳೇ ಸುಂದರವಿರುವದು. ಅದೇಪ್ರಕಾರ ಸುವರ್ಣಚೋರನು, ಶಿರಕುಡಿಯುವವನು, ಗುರುದ್ರೋಹಿಯು, ಮತ್ತು ಬ್ರಹ್ಮಹತ್ಯೆಮಾಡುವವನು, ಈ ಘೋರ ಪಾತಕಿಗಳೆಲ್ಲ ಪತನಹೊಂದಿ ಕೀಳು ಜನ್ಮಗಳನ್ನು ತಾಳುವರು (ಶ. ೧೧. ೯), ಎಂದೂ 'ಯಾವ ರಾಜ್ಯದಲ್ಲಿ ಕಳ್ಳರು, ಕದರ್ಯರು, ಕುಡುಕರು, ಡಡ್ಡರು, ಸ್ವೈರಿ ಸ್ವೈರಿಣಿಯರು ಇಲ್ಲವೊ ಅದು ಉತ್ತಮ ಜನರು ಇರಲು ಯೋಗ್ಯವಾದ ಸ್ಥಾನವು' (ಶ. ೧೧. ೫), ಎಂದೂ ಛಾಂದೋಗ್ಯದಲ್ಲಿ ಹೇಳಲ್ಪಟ್ಟಿರುವದು. ಉಪನಿಷತ್ಕಾರರು ಸತ್ಯಕ್ಕೆ ಎಲ್ಲಕ್ಕೂ ಹೆಚ್ಚು ಮಹತ್ವವನ್ನು ಕೊಟ್ಟಿರುವರು. ಯಾಕಂದರೆ, ಇಡೀ ನೀತಿಶಾಸ್ತ್ರವು ಮತ್ತು ಎಲ್ಲ ಸದ್ಗುಣಗಳು ಸತ್ಯವನ್ನೆ ಮುಖ್ಯವಾಗಿ ಅವಲಂಬಿಸಿರುವವು. ಈ ಮಾತು, 'ಸತ್ಯವೇ ಜಯಹೊಂದುವದು, ಸುಳ್ಳು ಗೆದೆಯಲಾರದು' (ಸತ್ಯಮೇವ ಜಯತೇ ನಾನೃತಂ), 'ಧರ್ಮವೆಂದರೆ ಸತ್ಯವೇ. ಆದುದರಿಂದ ಸತ್ಯವನ್ನು ನುಡಿಯುವವನು ಧರ್ಮವನ್ನು ಹೇಳುತ್ತಿರುವನು ಎನ್ನುವರು' (ಸ ಧರ್ಮಃ ಸತ್ಯಂ

ಪೈತಶ್, ತಸ್ಮಾತ್ ಸತ್ಯಂ ವದಂತಮಾಹುಃ ಧರ್ಮಂ ವದತೀತಿ) (ಬೃ. ೧. ೪. ೧೪) ಈ ಮಂತ್ರಗಳಿಂದ ಸ್ಪಷ್ಟವಾಗುವದು. ಗೀತೆಯು ಸದ್ಗುಣ ಸಮುಚ್ಚಯವನ್ನು ದೈವೀಸಂಪತ್ತೆಂದು ೧೬ನೆಯ ಅಧ್ಯಾಯದ ಆರಂಭದ ಮೂರು ಶ್ಲೋಕಗಳಲ್ಲಿಯೂ ಜ್ಞಾನದ ಲಕ್ಷಣಗಳೆಂದು ೧೩ನೆಯ ಅಧ್ಯಾಯದ ೭-೧೧ ಶ್ಲೋಕಗಳಲ್ಲಿಯೂ ಕೊಟ್ಟಿರುವದು.

೨೧೬. ಇನ್ನು ಕ್ರಿಶ್ಚನ್ ಸಾಧುಗಳು ಇವೇ ಮಾತುಗಳನ್ನು ಹೇಳಿರುವರೆಂಬುದು ಅವರ ಗ್ರಂಥಗಳಲ್ಲಿ ವ್ಯಕ್ತವಾಗಿರುವದು. ಕಳವು, ಅಸತ್ಯ, ಪರದಾರಾವಿಚಾರ, ಹಿಂಸೆ, ದ್ವೇಷ, ಇವು ಅತ್ಯಂತ ತ್ಯಾಜ್ಯವೆಂದು ಜೀಸಸ್ ಕ್ರಾಯಿಸ್ಟನ ಉಪದೇಶವಿರುವದು. 'ಸತ್ಯವೇ ಪರಮಾತ್ಮನು, ಸತ್ಯವೇ ಸರ್ವಸಾಕ್ಷಿಯು. ನಾವು ಮೊರೆ ಇಟ್ಟರೆ ಸತ್ಯವು ನಮ್ಮನ್ನು ತನ್ನೊಲಗಕ್ಕೆ ಕರೆಯಿಸಿ ಉಪದೇಶಕೊಡುವದು,' ಎಂದು ಆಗಸ್ಟಾಯಿನನು ಸತ್ಯದ ಮಹಿಮೆಯನ್ನು ಹೇಳಿರುವನು. 'ದುಂದುಗಾರಿಕೆ, ಕುಡುಕತನ, ಸ್ತ್ರೈರವೃತ್ತಿ, ಬಡಿದಾಟ, ಮತ್ಸರ ಇವುಗಳಿಗೆ ಮೈಗೊಡಕೂಡದು. ಜೀಸಸ್ ಕ್ರಾಯಿಸ್ಟನ ಮೇಲೆ ಎಲ್ಲ ಭಾರವನ್ನು ಹಾಕಿಬಿಡಬೇಕು. ಕಾಮುವಾಸನೆಯಿಂದ ಯಾವ ಸಂಗ್ರಹವನ್ನೂ ಮಾಡಬಾರದು' ಎಂಬ ಬಾಯಬಲ್ಲಿನಲ್ಲಿಯ ವಾಕ್ಯವೆ (ರೋಮನ್ಸ ೧೩) ತನಗೆ ಪ್ರಕಾಶಕೊಟ್ಟಿತು ಎಂದು ಅವನೇ ಹೇಳಿರುವನು. ಸೆಂಟ ಜಾನ್ ಆಫ್ ದಿ ಕ್ರಾಸ್, ಜಾನ್ ಬನಿಯನ್ ಮುಂತಾದವರ ವಚನಗಳಲ್ಲಿ ಇವೇ ಮಾತುಗಳು ಕಂಡುಬರುವವು. ಸುಫೀ ತತ್ವಜ್ಞರು ಈ ಸದ್ಗುಣಗಳ ವಿವರಣೆಯನ್ನು ವಿಧವಿಧದಿಂದ ಮಾಡಿರುವರು. 'ಮರುಳೇ, ಆ ಕಾಬಾದಲ್ಲಿ (ಮಕ್ಕಾದ ಗುಡಿಯಲ್ಲಿರುವ ಕಲ್ಲೇ ಶಿಲೆ) ಏನಿಟ್ಟಿರುವೆ? ಇಕೋ, ಈ ಪರಿಮಳಪೂರಿತ ಪುಷ್ಪವನ್ನು ಹರಿ, ಇಲ್ಲವೆ ಒಂದು ಪ್ರೇಮಮಯ ಅಂತಃಕರಣವನ್ನು ಕೈವಶ ಮಾಡಿಕೊಳ್ಳು. ಒಂದು ಸೂರು ಕಾಬಾ ಯಾತ್ರೆಗಳಿಗಿಂತ ಇದು ಹೆಚ್ಚಿನದು,' ಎಂದು ಯಾತ್ರೆಗಳಿಗಿಂತ ಪ್ರೇಮಮಯ ಜೀವನವು ಹೆಚ್ಚಿನದೆಂದು ಉಮರ ಖಯಾಮನು ಹೇಳಿದ್ದಾನೆ. ನಿರಾಸೆಯೆ ಈಶ್ವರತ್ವವು ಎಂದು ವಚನಕಾರರು ಹೇಳಿದುದನ್ನು ಸರಮದ್‌ನು, 'ಬೇಡ, ಆ ಆಸೆ ಎಂಬ ದೇಗಿ ಬೇಡ. ಅದನ್ನು ಯಾರೂ ಪೂರೈಸಲಾರರು. ನೀನು ವ್ಯರ್ಥ ದಾಯಿತೆರೆದು ಇನ್ನೊಬ್ಬರನ್ನು ಬೇಡಬೇಡ. ಎಲೆ ಇಲ್ಲದ ಮರವು ನಿನಗೆ ನೆಳಲೆಲ್ಲಿಂದ ನೀಡಬಲ್ಲದು? ನಿರಾಸೆಯಲ್ಲಿಯೆ ನಿನ್ನ ಗೌರವವಿರುವದು,' ಎಂದು ಉಪಮೆಗೊಟ್ಟು ನುಡಿದಿರುವನು. ಅದೇ ಸರ್‌ಮದ್‌ನು ದಂಭವನ್ನು ಹೀಯಾಳಿಸಿ, 'ಬೇಡ, ಎನಗೆ ಆ ತಸ್‌ಬೀ (ಜಪಮಾಲೆ) ಬೇಡ, ಆ ಜನಿವಾರವೂ ಎನಗೆ ಬೇಡ. ಎನಗೆ ಅದರಿಂದೇನು ಉಪಯೋಗ? ಆ ಕಫ್‌ನಿ ಕೌಪೀನಗಳೂ ನನಗೆ ಬೇಡ. ಅವುಗಳಲ್ಲಿರುವ ನೂರಾರು ವೋಸವಾಟಗಳ ಭಾರವನ್ನು ನಾನು ಹೊರಲಾರೆ,' ಎಂದಿರುವನು. ಜಂಗಮರ ವೇಷಲಾಂಛನಗಳನ್ನು ಜರೆದಿರುವ ವಚನಗಳಲ್ಲಿಯು (ವ. ೫೩೦-೫೩೭) ಸತ್ಯವೂ ಇದರಲ್ಲಿಯ ತತ್ವವೂ ಬಂದೇ. ತನ್ನ ನಗ್ನ ಸ್ಥಿತಿಯನ್ನು ಇವನು, 'ಕುಂದಿದ್ದವರನ್ನು ಕಪ್ಪಡದಿಂದ ಮುಚ್ಚಿ ಕುಂದಿಲ್ಲದ ಎನ್ನನು ಎನ್ನ ದೇವನು ಹಾಗೆ ಬತ್ತಲೆ ಇಟ್ಟಿರುವನು,' ಎಂದು ಒಳ್ಳೆ, ಚಮತ್ಕಾರದಿಂದ ವರ್ಣಿಸಿರುವನು! 'ಅಹಂಕಾರ ತೊರೆದೊಡೆ ನಿನಗವನು ದೊರೆಯುವನು, ಆ ಮೂಲೋಕದೊಡೆಯನು. ನೀನವನ ಗ್ರಂಥದ ಮುಖಪುಟವಾಗುವಿ. ಇಹಪರದಲ್ಲಿ ನಿನ್ನ ಮುದ್ರೆಯ ನಾಣ್ಯಗಳಾಗುವವು ಅವನ ಕಮ್ಮಟದಲ್ಲಿ. ನೀನೀ ಲೋಕದ ಒಡೆಯನಾಗುವಿ,' ಎಂದು ನಿರಹಂಕಾರಿತ್ವದ ಮಹತ್ವವನ್ನು ಅನನು ಸ್ಫೂರ್ತಿಯಿಂದ ಬಣ್ಣಿಸಿರುವನು. ಅದೇ ಮಾತನ್ನು ಇನ್ನೊಂದು ರೀತಿಯಿಂದ, 'ನೀನು ಶೂನ್ಯನಾಗುವನಕ ಸರ್ವನಾಗಲಾರಿ. ದೇವರು ದುರ್ಬಲರಿಗೆ ದುರ್ಲಭನು. ದೀಪದಂತೆ ಉರಿಯುವನಕ ನೀನು ಬೇರೆಯವರಿಗೆ ಬೆಳಕು ಬೀರುವ ಬಗೆಯಾವುದು,' ಎಂದು ಅದಕ್ಕೆ ತ್ಯಾಗದ ಒಪ್ಪನ್ನಿಟ್ಟು ಹೇಳಿರುವನು. ವಿಷಯಸುಖಗಳಲ್ಲಿ ಸಿಲುಕಿ ಬಿದ್ದವನ ಪಾಡು ಎಷ್ಟು ಕನಿಕರಪಡುವಂತಹದಿರುವದು ಇದನ್ನು ಅವನೇ 'ಅಯ್ಯೋ, ಜೇನತುಪ್ಪದಲ್ಲಿ ಸಿಕ್ಕಿಬಿದ್ದ ನೊಣದಂತೆ ಎನ್ನ ಪಾಡಾಯಿತಲ್ಲಾ,' ಎಂದು ಹಲುಬಿ ವ್ಯಕ್ತಗೊಳಿಸಿರುವನು. 'ಈ ಲೋಕದಲ್ಲಿ ದೊರಕಿಸಲು ಯೋಗ್ಯವಾದ ವಸ್ತುಗಳು ಎರಡೇ, ಶಾಂತಿ ಮತ್ತು ಸಂತೋಷ, ನನ್ನ ಕೊಲೆಯಾದರೂ ಆಗಲಿ, ನಾನು ಅವುಗಳನ್ನೆ ಅರಸುವೆನು,' ಎಂದು ಸಾದಿಯು ಶಾಂತಿಯ ಮಹತ್ವವನ್ನು ಹೊಗಳಿರುವನು. ದಯೆಯೇ ಧರ್ಮದ ಮೂಲವು, ಎಂಬ ಬಸವಣ್ಣನ ವಚನಕ್ಕೆ ಸರಿಹೋಗುವಂತೆ ಹಾಫೀಜ್‌ನು, 'ಪೀಡಿತರ ಪರಿಜರ್ಯೆಯು, ದೀನರ ದುಃಖನಿವಾರಣೆಯು ಶ್ರೇಷ್ಠ ಧರ್ಮವೆನಿಸುವದು,' ಎಂದು ಹೇಳಿ, ದೇವರಿಗೆ, 'ದೇವಾ, ಈ ನಿಯಮವನ್ನು ನೀನೇ ಮಾಡಿಲ್ಲವೇ? ಆದರೇನು, ನಿನ್ನ ಊರಲ್ಲಿ ಮಾತ್ರ ಈ ನಿಯಮವಿಲ್ಲವೇನು?' ಅರ್ಥಾತ್ ನನ್ನಂಥ ಪೀಡಿತನನ್ನು ಇನ್ನೂ ಏಕೆ ಉದ್ಧರಿಸಲೊಲ್ಲೆ, ಎಂದು ವಿನೋದದಿಂದ ದೇವರನ್ನು ಕೇಳಿರುವನು. ಇನ್ನೊಂದೆಡೆಗೆ, 'ತಾಳ್ಮೆ ಮತ್ತು ನಿಷ್ಠೆ ಇವೇ ಜಗದಲ್ಲಿ ಗೆಲಬಲ್ಲವು ಎಂಬ ಆಕಾಶವಾಣಿಯನ್ನು ನಾನು ಕೇಳಿದೆನು,'

ಎಂದು ಅವನು ಅಂದಿರುವನು. 'ಅಹಾ, ಸ್ವಾತಂತ್ರ್ಯ ಮತ್ತು ಸಂತೋಷ ಇವೆರಡು ಎಲ್ಲಕ್ಕೂ ಹೆಚ್ಚಿನ ಸಂಪತ್ತು. ಇವು ಸಾಗರದಂತೆ ಸೈನ್ಯ ಸನ್ನಾಹವಿದ್ದ ಸಮ್ರಾಟನಿಗೆ ಕೂಡ ಬಲಾತ್ಕಾರದಿಂದ ಸಿಗಲರಿಯವು,' ಎಂದು ಅವನೇ ಹೇಳಿರುವನು. 'ಬರಿಯ ದೊಡ್ಡ ಗ್ರಂಥಗಳನ್ನು ಓದಿ ಅವುಗಳ ಬೆನ್ನು ಬೀಳಬೇಡ. ನಿನ್ನ ಹೃದಯದೊಳಗಿನ ಕಾಮನೆಗಳನೆಲ್ಲ ಹೊರಜೆಲ್ಲಿ ಅದನ್ನು ಪೂರಾ ತಿರವು ಮಾಡು. ಇಂದ್ರಿಯಗಳನ್ನು ಜಯಿಸಿ ಮನವನ್ನು ಕಾಮನಾರಹಿತ ಮಾಡುವುದೆ ದೇವರ ಹಾದಿಯು. ಮರಣ ಬಂದರೂ ಪರಸ್ತ್ರೀಯರನ್ನು ಬಯಸಬೇಡ. ಪರಸ್ತ್ರೀ, ಪರಧನ, ಪರನಿಂದೆ, ಅಸತ್ಯ, ಅನವಧಾನ, ಹಿಂಸೆ, ಅಹಂಕಾರ ಇವುಗಳನ್ನೆಲ್ಲ ಬಿಟ್ಟು ಬಿಡು. ತಾಮಸತವವನ್ನು ಮಾಡಿ ಅಂತರಾತ್ಮನನ್ನು ವ್ಯರ್ಥ ಪೀಡಿಸಬೇಡ. ಸುಖದುಃಖಗಳು ತುಲ್ಯವೆಂದು ಭಾವಿಸು,' ಎಂದು ಸಾಧು ತುಕಾರಾಮನು ಉಪದೇಶಿಸಿರುವನು. 'ನಿಜವಾದ ಸಾಧಕನು ಕಾಮನಾರಹಿತನೂ ದ್ವೇಷ ಕ್ರೋಧರಹಿತನೂ ಇರುವನು. ಅವನು ಅಹಂಕಾರವನ್ನು ತೊರೆದಿರುವನು. ಅವನು ಅಂತರ್ಬಾಹ್ಯಶುದ್ಧನಿರುವನು. ಬಾಹ್ಯಸೃಷ್ಟಿಯಲ್ಲಿ ಅವನು ಅನಾಸಕ್ತವೃತ್ತಿಯಿಂದ ಆಚರಿಸುವನು,' ಎಂದು ರಾಮದಾಸನ ಅಂಬೋಣವಿರುವದು. ದಾಸಕೂಟದ ಮಹನೀಯರೂ ಇದೇ ಬಗೆಯ ನೀತಿಯ ಮಾತುಗಳನ್ನು ನೂರಾರು ಪದ್ಯಗಳಲ್ಲಿ ಉಪಮಾರೂಪಕಾದಿ ಗಳನ್ನು ಕೊಟ್ಟು ಮನೋಹರವಾಗಿ ಹೇಳಿರುವರು. 'ಕಾಮಕ್ರೋಧ, ಮದಮತ್ಸರ, ಅಷ್ಟಮದ, ಭ್ರಾಂತಿ ಮುಂತಾದವುಗಳನ್ನು ಬಿಡಬೇಕು; ಶಾಂತಿಕ್ಷಮೆಗಳನ್ನು ತಾಳಬೇಕು' (ಕೀ. ಭಾಗ. ೧. ೩೮), 'ವಿಷಯದ ವಿಚಾರ ಬಿಡಬೇಕು, ವಿಹಿತ ಕರ್ಮವನ್ನು ಮಾಡಬೇಕು' (ಕೀ. ಭಾಗ. ೨. ೫), 'ಮುಕ್ತಿಯು ಸುಮ್ಮನೆ ಸಿಗಲಾರದು, ಅದಕ್ಕೆ ಭಕ್ತಿ ಬೇಕು, ನಿಷ್ಠೆ ಬೇಕು, ವೈರಾಗ್ಯಬೇಕು, ಸಂಶಯರಹಿತ ಶ್ರದ್ಧೆ ಬೇಕು,' (ಕೀ. ಭಾಗ. ೪. ೧೬), ಎಂಬ ಮುಂತಾದ ಪದ್ಯಗಳಲ್ಲಿ ಪುರಂದರದಾಸನು ನೀತಿಯನ್ನು ಉಪದೇಶಿಸಿರುವನು. ಆದರ್ಶ ಭಕ್ತನು, ಭಾಗವತನು ಹೇಗೆ ಇರುವನು ಇದನ್ನು ಜಗನ್ನಾಥದಾಸನು, 'ದೇವಾ, ನಿನ್ನನ್ನು ಕೊಂಡಾಡುವ ಮಂಗಳಾತ್ಮರು ಅನರ್ಪಿತವನ್ನು ಸ್ವೀಕರಿಸರು, ಕಂಡಕಂಡಲ್ಲಿ ವಿಶ್ವರೂಪವನ್ನು ಪ್ರತ್ಯಕ್ಷಿಸುವರು, ಜಯಾಜಯ ಲಾಭಾಲಾಭಗಳು ನಿನ್ನಧೀನವೆನ್ನುವರು, ಪ್ರಾಣಹೋದರೂ ಸ್ವಧರ್ಮವನ್ನು ಬಿಡರು' (ಕೀ. ಭಾಗ. ೧. ೧೦), ಎಂದು ಬಹಳೇ ಸುಂದರವಾಗಿ ಮತ್ತು ಪೂರ್ಣವಾಗಿ ವರ್ಣಿಸಿರುವನು.

ವಚನಕಾರರು ಮಾಡಿದ ಆದರ್ಶ ಶಿವಶರಣನ ವರ್ಣನೆ ಮತ್ತು ಈ ಭಾಗವ ತನ ವರ್ಣನೆ ಇವುಗಳಲ್ಲಿ ಎಳ್ಳಷ್ಟೂ ಭೇದವಿಲ್ಲ. ಕನಕದಾಸನು ಬಹಳ ಸರಳವಾಗಿ ಅನೇಕ ಕೀರ್ತನೆಗಳಲ್ಲಿ ಇದೇ ಮಾತುಗಳನ್ನು ಹೇಳಿರುವನು. 'ಸಾರಿದೂರಿ ಹೇಳುತ್ತೇನೆ, ಕೇಳು ಎಲೈ ಮನವೇ, ಕಾಯವನ್ನು ನಂಬ ಬೇಡ, ಸಿರಿಯನ್ನು ಮೆಚ್ಚಬೇಡ, ಸ್ತ್ರೀಯರನ್ನು ಇಚ್ಛಿಸಬೇಡ,' (ಕೀ. ಭಾಗ. ೧. ೩) ಎಂದು ಮುಂತಾಗಿ ಅವನು ಮನಸ್ಸಿಗೆ ಎಚ್ಚರವನ್ನು ಕೊಟ್ಟಿರುವನು.

೫೧೭. ಬೇಸರಪಡದೆ ಮತ್ತು ಪುನಃ ಪುನಃ ನೀತಿಯ ಮಾತು ಗಳನ್ನು ಹೇಳಿರುವಂತೆ ವಚನಕಾರರು ಗುರುಮಹಾತ್ಮ್ಯವನ್ನೂ ಸಜ್ಜನ ಸಂಗವನ್ನೂ ಅಲ್ಲಲ್ಲಿ ಹೊಗಳಿರುವರು. ಇಲ್ಲಿ 'ಗುರು' ಅಂದರೆ ಬರಿಯ ಹೆಸರಿನ ಗುರುವಲ್ಲ ಅಥವಾ ಕೇವಲ ದೀಕ್ಷಾ ಗುರುವಲ್ಲ. ಯಾವನು ಮುಕ್ತಿಮಾರ್ಗವನ್ನು ತೋರಿಸಬಲ್ಲನೊ ಅವನೇ ಗುರುವು. 'ಅಯ್ಯಾ, ತನುವಿನಾಸೆ ಅಳಿದಾತನ ಸತ್ತು ಚಿತ್ತಾನಂದ ಗುರುವೆಂಬೆ,' ಎಂದು ಅಲ್ಲಮನು (ವ. ೯೮) ಹೇಳಿರುವನು. ಇದೇ ರೀತಿ, ಸಂಸಾರಪಾಶವಿಲ್ಲದವನೆ ಶ್ರೇಷ್ಠ ಗುರುವು, ಸದ್ಭಕ್ತಿ ಸದಾಚಾರವಿಡಿದು ಆಚರಿಸುವ ಗುರುವೆ ಪರಾ ತ್ಪರ ಬ್ರಹ್ಮನು, ಎಂಬ ಮುಂತಾದ ವಚನಗಳು ನಿಜಗುರುವಿನ ಲಕ್ಷಣ ಗಳನ್ನು ಹೇಳುವವು. ಅಂಥ ಗುರುವಿನ ಮಹಾತ್ಮ್ಯವನ್ನೆ ವಚನಕಾರರು ಹೇಳಿರುವರು. ಗ್ರಂಥಗಳಿಗಿಂತ ಮತ್ತು ಅವುಗಳನ್ನು ಓದಿ ತಿಳಿದುಕೊಳ್ಳುವ ನಮ್ಮ ಬುದ್ಧಿಗಿಂತ ಅನುಭಾವಿ ಗುರುವಿಗೆ ಹೆಚ್ಚು ಮಹತ್ವವಿರುವದು. ಯಾಕಂದರೆ, ಗ್ರಂಥಗಳು ಎಷ್ಟೆಂದರೂ ಭೂತಕಾಲದವು, ಅವುಗಳನ್ನು ಓದು ವಾಗ ಉಂಟಾದ ಸಂಶಯಗಳನ್ನು ಅವು ಪರಿಹರಿಸಲಾರವು, ಅವು ನಿರ್ಜೀವ ವಿರುವವು. ಅನುಭಾವದ ಜೋಡು ಸಿಕ್ಕುವವರೆಗೆ ನಮ್ಮ ಬುದ್ಧಿಯು ದುರ್ಬಲವೇ ಸರಿ. ಯಾಕಂದರೆ, ಆತ್ಮವು ಅನುಭಾವದಿಂದ, ಪ್ರತ್ಯಯದಿಂದ ತಿಳಿಯತಕ್ಕ ವಸ್ತುವಿರುವದು. ಗುರುವೆಂದರೆ ನಮ್ಮೊಳಗಿರುವ ಪ್ರತ್ಯಕ್ಷ ಜೀವಂತ ಅನುಭಾವವಾಣಿಯು. ಕ್ಷಣಕ್ಷಣಕ್ಕೆ ಉಂಟಾಗುವ ಸಂಶಯ ಗಳಿಗೆಲ್ಲ ಅವನು ಸಮಾಧಾನ ಹೇಳಬಲ್ಲನು. ನಮ್ಮ ಸಾಧನಕಾಲದಲ್ಲಿ ನಮ್ಮ ಬಳಿ ಇದ್ದು ಅವನು ನಮ್ಮ ಬೆರಳು ಹಿಡಿದು ಧ್ಯೇಯದೆಡೆಗೆ ನಮ್ಮನ್ನು ಮೆಲ್ಲಮೆಲ್ಲನೆ ಒಯ್ಯಬಲ್ಲನು. ಗುರುಕೃಪೆಯಿಂದ ಭವದ ಬೇರು ಕಡಿಯು ವದು, ಭುಕ್ತಿ ಮುಕ್ತಿ ಫಲಗಳು ದೊರೆಯುವವು (ವ. ೫೩), ಎಂದು ಮುಂತಾಗಿ ಸದ್ಗುರುಕೃಪೆಯಿಂದ ಆಗಬಹುದಾದ ಸುಪರಿಣಾಮಗಳನ್ನೆಲ್ಲ

ವಚನಕಾರರು ಹೇಳಿರುವರು. ಗುರುಕಾರುಣ್ಯವು ಅತ್ಯವಶ್ಯವು (೩೭೭, ಮತ್ತು ಬ. ೧೧) ಎಂದು ವಚನಕಾರರ ಮತವಿರುವದು. ಇನ್ನು ಕತ್ತಲೆಯಲ್ಲಿ ಹಾದಿ ಕಾಣಬೇಕಾದರೆ ನಿರ್ಮಳ ಮತ್ತು ನಿಶ್ಚಲ ಜ್ಯೋತಿಯು ಅವಶ್ಯವಿರುವಂತೆ ಪರಮಾರ್ಥದಲ್ಲಿ ಗುರುವು ಅವಶ್ಯನು, ಎಂದು ಹೇಳುವ ವಚನಕಾರರು ಸಜ್ಜನಸಂಗವನ್ನೂ ಬಹಳ ಒತ್ತೊತ್ತಿ ಹೇಳಿದ್ದಾರೆ. ಸಾಧಕನು ಅಡ್ಡಹಾದೀ ಬೀಳದೆ ತಾನು ಹಿಡಿದ ಸತ್ಪಥದಲ್ಲಿ ಮುಂದೆ ಸಾಗಬೇಕಾದರೆ ಸಂತಸಂಗವು ಬಹಳ ಸಹಾಯಕವಿರುವದು. 'ಜ್ಞಾನ ಬಲದಿಂದ ಅಜ್ಞಾನವು ಜ್ಯೋತಿಯ ಬೆಳಕಿನಿಂದ ಕತ್ತಲೆಯು, ಕೆಡುವಂತೆ ಅನುಭಾವಿಗಳ ಸಂಗದಿಂದ ಎನ್ನ ಭವ ಕೆಡುವದು (ವ. ೧೪೮), ಎಂದು ಬಸವಣ್ಣನು ಅಂದಿರುವನು. ಈ ವಿಷಯವನ್ನು ವಿವರವಾಗಿ ನೋಡಬೇಕಾಗಿದ್ದರೆ ವಚನ ಶಾಸ್ತ್ರಸಾರದ (ಭಾಗ. ೧.) ೧೪೭–೧೫೨ ಈ ಪುಟಗಳನ್ನು ಓದಬೇಕು. ಸುಫೀ ತತ್ವಜ್ಞಾನಿ ಹಾಫೀಜ್‌ನು ಗುರುಭಕ್ತಿಯ ಮಹತ್ವವನ್ನು ಬಹಳ ಚನ್ನಾಗಿ ವರ್ಣಿಸಿರುವನು. ಅವನು ಅನ್ನುವದೇನಂದರೆ, 'ಗುರುಭಕ್ತಿ ಪರುಷಸಮ ಕಂಡೆಯಾ. ನಾನು ಗುರುವಿನ ಜಾಗಿಲ ಧೂಲಿಯಾದುದಕೆ ಎನಗೆ ಈ ದಿವ್ಯದರ್ಶನದ ಲಾಭವಾಯಿತು. . . . . ಅವ್ಯಾಹತ ಸಾಧನೆ ಹಾಗೂ ಗುರುಗಳ ಪುಣ್ಯಾಶೀರ್ವಾದ ಇವುಗಳಿಂದ ಎನಗೆ ಮುಕ್ತಿಸುಖವು ಕೈನಾರಿತು. . . . . ಇತ್ತ ಗುರುವಿನ ಬಳಿ ಆ ದಿವ್ಯ ತೇಜವನು ನಾನು ಕಾಣುತಿರುವೆನು. . . . . ಮಧ್ಯ ರಾತ್ರಿ ದಾಟಿದ ಬಳಿಕ ಗುರುವು ವಿಶ್ವದರ್ಶಕ ಕೈಗನ್ನಡಿಯನ್ನು ನನಗೆ ಕೊಟ್ಟನು. ಅದರಲ್ಲಿ ದೃಷ್ಟಿಸಿ ನೋಡಲು ನಿನ್ನ ಸೌಂದರ್ಯಪ್ರಭೆಯು ಎನಗೆ ಕಂಡಿತು ಪ್ರಭುವೇ, ಧನ್ಯನಾದೆ ನಾನು, ಧನ್ಯನಾದೆ ನಾನು.' ಜ್ಞಾನೇಶ್ವರನು ತನ್ನ ಗುರುವಾದ ನಿವೃತ್ತಿನಾಥನನ್ನು ಪ್ರತ್ಯಕ್ಷ ಪರಮಾತ್ಮನ ಮೇರೆಗೆ ಹೊಗಳಿರುವನು. 'ಅವನು ಅವರ್ಣನೀಯನು, ಅವ್ಯಯನು, ಅಜನು, ಕೇವಲನು, ಶುದ್ಧ ಆನಂದಸ್ವರೂಪನು. ಅವನು ದೇವರಿಗಿಂತ ಹೆಚ್ಚಿನವನು. ಯಾಕಂದರೆ, ಅವನಿಲ್ಲದಿದ್ದರೆ ನನಗೆ ದೇವರು ಕಾಣುತ್ತಿರಲಿಲ್ಲ. ಗುರುವೆಂಬ ತಿಳಿಗನ್ನಡಿಯಲ್ಲಿ ಶಿಷ್ಯನು ತನ್ನ ಆತ್ಮಜ್ಯೋತಿಯನ್ನು ಕಾಣುವನು. ಗುರುವಿನ ಪ್ರಕಾಶವೇ ಇದನ್ನೆಲ್ಲ ಬೆಳಗುತ್ತಿರುವದು,' ಎಂದು ಜ್ಞಾನದೇವನು ಅಂದಿರುವನು. 'ಗುರುವು ದೇವರನ್ನು ನಮ್ಮ ಅಂತಃಕರಣದಲ್ಲಿ ತೋರುವನು, ಗುರುವು ಮತ್ತು ದೇವರು ಒಂದೇ, ಗುರುವು ಅವಿಚಾರಿಕನು,' ಎಂದು ಏಕನಾಥನು ಕೊಂಡಾಡಿರುವನು. 'ಸಂತಸಂಗದಿಂದ ನಾನು ಧನ್ಯನಾದೆನು, ಸಂತರು ಪಾಪಿಗಳನ್ನು ಶುದ್ಧರಿಸುವರು, ಸಂತರು ದೇವರಿಗಿಂತ ಹೆಚ್ಚಿನವರು; ಯಾಕಂದರೆ, ದೇವರು ಸದ್ಭಕ್ತರಿಗೆ ಒಲಿದು ಅವರನ್ನು ಪರಿಪರಿಯಿಂದ ಸೇವಿಸುವನು,' ಎಂದು ಸಂತಸಂಗವನ್ನೂ ಸಂತಮಹಾತ್ಮ್ಯವನ್ನೂ ಏಕನಾಥನು ಹೇಳಿರುವನು. ಮೋಕ್ಷದಾಯಕವಾದ ಆತ್ಮಜ್ಞಾನವನ್ನು ದಯಪಾಲಿಸುವವನೆ ನಿಜವಾದ ಗುರುವು, ಅವನು ಅಖಿಲ ವೇದಾಂತಕ್ಕಿಂತ ಹೆಚ್ಚಿನವನು, ಎಂದು ಹೊದಲು ಹೇಳಿ, 'ಗುರುವಿಲ್ಲದೆ, ಸಜ್ಜನಸಂಗವಿಲ್ಲದೆ ಸಾಧನೆಯು ವ್ಯರ್ಥವು, ಶಿವಪಥವು ಅಸಾಧ್ಯವು. ಗುರುವು ಉಸುರಿದ ಶಬ್ದದಿಂದಲೆ ಜ್ಞಾನಪ್ರಕಾಶವು ಹೊರಹೊಮ್ಮುವದು, ಅವನೇ ನಿಜ ದಾರಿಯನ್ನು ತೋರುವನು. ಗುರುವು ದೇವರಿಗಿಂತ ಶ್ರೇಷ್ಠನು. ಯಾಕಂದರೆ, ದೇವರು ಮಾಯಾಶಕ್ತಿಯಿಂದ ಈ ಜಗತ್ತನ್ನು ಆವರಿಸಿರುವನು. ಗುರುವು ಜ್ಞಾನಶಕ್ತಿಯ ಬಲದಿಂದ ಆವರಣವನ್ನು ನಿರಾಕರಿಸುವನು! ಗುರುವನ್ನು ಎಷ್ಟು ಹೊಗಳಿದರೂ ಸಾಲದು. ಪೂರ್ಣ ಆತ್ಮಸಂಯಮ ಮತ್ತು ಆತ್ಮಜ್ಞಾನ ಇವೇ ನಿಜ ಗುರುವಿನ ಲಕ್ಷಣಗಳು. . . . ಸಜ್ಜನಸಂಗವು ಜ್ಞಾನವನ್ನು ದೊರಕಿಸಿಕೊಡುವದು. ಭಕ್ತರಿದ್ದಲ್ಲಿ ದೇವರಿರುವನು,' ಎಂದು ರಾಮದಾಸನು ಗುರುಮಹಾತ್ಮ್ಯವನ್ನೂ ಸತ್ಸಂಗದ ಸುಪರಿಣಾಮವನ್ನೂ ವಿವರಿಸಿರುವನು. ಶಿವಪಥವ ಕಾಣಬೇಕಾದರೆ ಗುರುಪಥವ ನೋಡಲಿಕ್ಕೆ ಬೇಕು, ಎಂದು ಬಸವಣ್ಣನೂ ಹೇಳಿಲ್ಲವೇ (ಬ. ೧೧)? ತನಗೆ ಕನಸಿನಲ್ಲಿ ದೀಕ್ಷೆಯಾಯಿತೆಂದು ಹೇಳಿ ತುಕಾರಾಮನು ಸಂತಸಂಗದ ಬಗ್ಗೆ ಇದ್ದ ತನ್ನ ಆತುರತೆ ಆದರಗಳನ್ನು ಈ ಮುಂದಿನಂತೆ ವ್ಯಕ್ತಗೊಳಿಸಿರುವನು: 'ದೇವರನ್ನು ಪ್ರೀತಿಸುವವರ ಸಂಗಕ್ಕಾಗಿ ನನ್ನ ಮನವು ಕಾತರಗೊಳ್ಳುತ್ತಿರುವದು. ವೇದಗಳನ್ನೋದುವವರ ಕಡೆಗೆ ಹೋಗಬೇಕೆಂದರೆ, ಅವರು ತಮ್ಮತಮ್ಮೊಳಗೆ ಜಗಳಾಡುತ್ತಿರುವರು. ಪಂಢರಪುರಕ್ಕೆ ಹೋಗುವವರ ಪಾದಗಳನ್ನು ಮುಟ್ಟಿ ನಾನು ಧನ್ಯನಾಗುವೆನು. ಈ ಸಂತರು ಎನ್ನಮೇಲೆ ಮಾಡಿದ ಉಪಕಾರಗಳನ್ನು ಏಷ್ಟೆಂದು ಬಣ್ಣಿಸಲಿ?' 'ಗುರುವಿನ ಗುಲಾಮರಾಗುವತನಕ ದೊರೆಯದಣ್ಣಾ ಮುಕ್ತಿ' (ಕೀ. ಭಾಗ. ೩, ೧೪೮), ಎಂದು ಪುರಂದರದಾಸನು ಸ್ಪಷ್ಟವಾಗಿ ಗುರುಕಾರುಣ್ಯದ ಅವಶ್ಯಕತೆಯನ್ನು ಪ್ರತಿಪಾದಿಸಿರುವನು. 'ಸಾದರದಿ ಗುರು ಕರುಣ ಪಡೆದಬಳಿಕ ಸಾಧನದ ಬಗೆ ಕಾಣದೆನ್ನಬಹುದೇ? ಆ ಬಳಿಕ ಕಂಡ ಕಂಡದ್ದೆಲ್ಲ ಕಮಲನಾಭನ ಮೂರ್ತಿ, ಉಂಡು ಉಟ್ಟದ್ದೆಲ್ಲ ವಿಷ್ಣುಪೂಜೆ' (ಕೀ. ಭಾಗ. ೧. ೧೫೫), ಎಂದು ಗುರುಪರುಷಸೋಂಕಿದ ಮೇಲೆ ಆಗುವ

ಪರಿವರ್ತನವನ್ನು ವಿಜಯದಾಸನು ಬಣ್ಣಿಸಿರುವನು. ಭಕ್ತರಲ್ಲಿ, ಸಜ್ಜನರಲ್ಲಿ ದೇವನಿರುವನು, ದೇವನು ಭಕ್ತಕಾಯನು, ಹರಿಭಕುತಿಯುಳ್ಳವರ ಶರೀರವೆ ಕುರುಕ್ಷೇತ್ರವು, (ಕೀ. ಭಾಗ. ೧. ೧೧೪), ಎಂದು ಪುರಂದರದಾಸನು, 'ನಿನಗಿಂತ ಅಧಿಕ ನಿನ್ನ ಭಕ್ತರು, (ಕೀ. ಭಾಗ. ೧. ೩೧), ಎಂದು ವಿಜಯದಾಸನು, 'ಎಲ್ಲಿರುವನೋ ದೇವ ಎಂಬ ಸಂಶಯಬೇಡ, ಎಲ್ಲಿ ಭಕ್ತರು ಕರೆವರೊ ಅಲ್ಲಿ ಬಂದೊದಗುವನು. (ಕೀ. ಭಾಗ. ೧, ೧೫೮), ಎಂದು ಕನಕದಾಸನು, ಹೀಗೆ ತಮ್ಮ ತಮ್ಮ ಪರಿಯಿಂದ ದಾಸರು ಸಜ್ಜನ ಮಹತಿಯನ್ನು ಹೇಳಿರುವರು. ಶರಣರಿದ್ದುದೆ ಅವಿಮುಕ್ತಿ ಕ್ಷೇತ್ರ, ಎಂದು ವಚನಕಾರರು ಹೇಳಿದ್ದಕ್ಕೂ ಈ ಮೇಲಿನ ಮಾತುಗಳಿಗೂ ಭೇದವೆ ಇಲ್ಲ. ಇಂಥ ಸಜ್ಜನರ ಸೇವೆಯನ್ನೂ ತೊತ್ತುಕೆಲಸವನ್ನೂ ಕನಕದಾಸನು, 'ದಾಸದಾಸರ ಮನೆಯ ದಾಸಿಯ ಮಗ ನಾನು....ಬಡದಾಸ ನಾನಯ್ಯ,....ಛಲದಿ ನಿನ್ನ ಭಜಿಸುವವರ ಮನೆಯ ಮಾದಿಗ ದಾಸ ನಾನು....ಸಲೆ ಮುಕ್ತಿ ಪಾಲಿಸೆನ್ನೊಡೆಯ,' (ಕೀ. ಭಾಗ. ೧. ೧೭೫.), ಎಂದು ದೇವರಿಗೆ ಬೇಡಿಕೊಂಡಿರುವನು.

೫೫. ಇನ್ನು ಉಚ್ಚನೀಚಭಾವರಹಿತ ಸಮದೃಷ್ಟಿಯನ್ನು ಕುರಿತು ಇರುವ ವಚನಕಾರರ ವಿಚಾರ ಮತ್ತು ಅದರೊಡನೆ ಇದ್ದ ಅನ್ಯ ಸತ್ಪುರುಷರ ವಿಚಾರಗಳ ಸಾದೃಶ್ಯ ಇದನ್ನು ನೋಡಿದರೆ ಈ ಪ್ರಕರಣದ ಆದಿಯಲ್ಲಿ ನಾವು ಕೈಕೊಂಡ ಕಾರ್ಯವು ಪೂರ್ಣವಾದಂತಾಗುವದು. ಎಲ್ಲ ಸಮಾಜಗಳಲ್ಲಿಯೂ ಜಾತಿ, ಕುಲ, ಲಿಂಗ, ಸ್ಥಲ, ಧನ ಮುಂತಾದವುಗಳ ಅಭಿಮಾನದ ಮೂಲಕ ಹುಟ್ಟಿದ ಕೃತಕವಾದ ಉಚ್ಚನೀಚ ಭಾವಗಳೂ ಮದ ಮತ್ಸರದ್ವೇಷಾಸೂಯೆಗಳೂ ಇದ್ದೇ ಇರುವವು. ಅವುಗಳಿಂದ ಅಲ್ಲಲ್ಲಿಯ ಸಮಾಜಗಳಿಗೆ ಬಗೆಬಗೆಯ ಹಾನಿಗಳು ಹಿಂದಕ್ಕೆ ತಟ್ಟಿವೆ ಮತ್ತು ಮುಂದೆ ತಟ್ಟುವವು. ಸಾಧುಸತ್ಪುರುಷರು ಈ ಉಚ್ಚನೀಚ ಭಾವಗಳನ್ನು ಯಾವಾಗಲೂ ಅಲ್ಲಗಳೆಯುತ್ತ ಬಂದಿರುವರು. ದೇವರೇ ತಂದೆ, ಹುಟ್ಟಿದ ಮನುಷ್ಯ ಮಾತ್ರರೆಲ್ಲರೂ ಬಂಧುಗಳು, ಎಂಬ ಭಾವವನ್ನು ನೆಲೆಗೊಳಿಸಲಿಕ್ಕೆ ಅವರು ಯತ್ನಿಸಿರುವರು. ಅದುದರಿಂದ ಅವರಿಗೆ ವಿಶ್ವಕುಟುಂಬಿಗಳು ಎಂಬ ಹೆಸರು ಬಂದಿರುವದು. ನಿಜವಾದ ದೊಡ್ಡಸ್ತಿಕೆಯು ಅಥವಾ ಶ್ರೇಷ್ಠತ್ವವು ಜಾತಿಕುಲಾದಿಗಳಿಂದ ಅಥವಾ ಬಲಾತ್ಕಾರದಿಂದ ಬರಲರಿಯದು. ಒಳ್ಳೆಯ ಗುಣಕರ್ಮಗಳಿಂದ ಅದು ಉಂಟಾಗಬಲ್ಲದು ಹೊರತು, ನಾನು ದೊಡ್ಡವನು ಎಂದು ಹೇಳುವುದರಿಂದ ಅದು ಪ್ರಾಪ್ತವಾಗದು. ಈ ಮಾತನ್ನು

ವಚನಕಾರರು ಸ್ಪಷ್ಟವಾಗಿ ಅನೇಕ ಕಡೆಗೆ ಹೇಳಿರುವರು. ತಮ್ಮ ರಾಜ್ಯದಲ್ಲಿ ಅವರು ಕೃತಕವಾದ ಉಚ್ಚನೀಚಭಾವಗಳಿಗೆ ಎಳ್ಳಷ್ಟೂ ಇಂಬು ಗೊಟ್ಟಿಲ್ಲ. ಬ್ರಹ್ಮನಿನ್ನರಿತವನೆ ಬ್ರಾಹ್ಮಣನು, ಸಕಲ ಜೀವರ ಹಿತವನ್ನು ಮಾಡುವವನೆ ಕುಲಜನು, ನಡೆನುಡಿ ಸಿದ್ಧಾಂತವಿದ್ದ ನೀತಿವಂತನೆ ನಿಜವಾಗಿ ಉಚ್ಚನು, ಎಂದು ಹೇಳಿ, ಪ್ರಾಣಕ್ಕೆ ಮೊಲೆಮುಡಿಗಳಿರುವವೇ, ಹೊಲೆಯನ ಆತ್ಮವು ಹಿಡಿಗೊಲನ್ನು ಹಿಡಿದಿರುವುದೇ, ಎಂದು ಅವರು ಮಾರ್ಮಿಕರೀತಿಯಿಂದ ಕೇಳಿದ್ದಾರೆ. ಯಾವುದೇ ಜಾತಿ, ಕುಲ ಮುಂತಾದವುಗಳ ಬಗ್ಗೆ ಉಚ್ಚನೀಚಭಾವಗಳನ್ನು ತಾಳುವದು ಅತ್ಯಂತ ಅನ್ಯಾಯದ್ದೆಂಬುದು ಇದರಿಂದ ಸ್ಪಷ್ಟವಾಗುವದು. ವಚನಾಮೃತದಲ್ಲಿಯ ೪೬೩, ೪೬೪, ೦೪೧, ೦೪೨, ೦೪೩, ೦೪೪, ಮುಂತಾದ ವಚನಗಳು ಮತ್ತು ವಚನಶಾಸ್ತ್ರಸಾರದಲ್ಲಿಯ (ಭಾಗ. ೧.) ೩೧೭–೩೩೪ ಪುಟಗಳು ಈ ವಿಷಯವನ್ನು ಹೇಳುತ್ತಿವೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ (೧ ೪. ೧೧–೧೫) ಚಾತುರ್ವರ್ಣಾಗಳ ಉತ್ಪತ್ತಿಯು ಉಲ್ಲೇಖವಿದ್ದರೂ ಅದು ಗುಣಕರ್ಮಗಳನ್ನವಲಂಬಿಸಿ ಮತ್ತು ಉಚ್ಚನೀಚಭಾವರಹಿತವಾಗಿ ಇರುವದು. ಆ ಪ್ರಾಚೀನಕಾಲದಲ್ಲಿ ಬ್ರಾಹ್ಮಣ ಕ್ಷತ್ರಿಯರಿಬ್ಬರೂ ಅಧ್ಯಾತ್ಮಶಾಸ್ತ್ರದಲ್ಲಿ ಪಾರಂಗತರಿದ್ದು ಪರಸ್ಪರರಕಡೆಗೆ ಹೋಗಿ ಬೋಧವನ್ನು ಪಡೆಯುತ್ತಿದ್ದರೆಂಬುದು ಉಪನಿಷತ್ತುಗಳಲ್ಲಿಯ ಕಥೆಗಳಿಂದ ವ್ಯಕ್ತವಾಗುತ್ತಿದೆ. ಇದಲ್ಲದೆ ಒಬ್ಬ ಪರಿಚಾರಿಕೆಯ ಮಗನಾದ ಸತ್ಯಕಾಮನು ಸತ್ಯವನ್ನು ಸುದಿದುದಕ್ಕಾಗಿ (ಛಾಂ. ೪. ೪. ೫) ಬ್ರಾಹ್ಮಣನೆಂದು ತಿಳಿಯಲ್ಪಟ್ಟನು. ಇದು ಗುಣಕರ್ಮದಿಂದ ಬ್ರಾಹ್ಮಣತ್ವವು ಸಿದ್ಧವಾದ ಒಂದು ಉತ್ತಮ ಉದಾಹರಣೆಯಿರುವದು. ಗಾರ್ಗಿ ವೈತ್ರೇಯಿಯಂಥ ಸ್ತ್ರೀಯರು ಮನೆಯಲ್ಲಿ ಇಲ್ಲವೆ ಸಭೆಯಲ್ಲಿ ಬ್ರಹ್ಮಚರ್ಚೆಯನ್ನು ಮಾಡಲು ಅರ್ಹರೆಂದು ತಿಳಿಯಲ್ಪಡುತ್ತಿದ್ದರು. ಕಲ್ಯಾಣದ ಅನುಭವಮಂಟಪದಲ್ಲಿ ಅಲ್ಲಮಾದಿ ಶರಣರೊಡನೆ ಚರ್ಚೆಮಾಡಲು ಅಕ್ಕಮಹಾದೇವಿಗೆ ಯಾವ ಬಗೆಯ ಸಮತಿ ಸ್ವಾತಂತ್ರ್ಯಗಳಿದ್ದವೊ ಅದೇ ಬಗೆಯ ಸ್ವಾತಂತ್ರ್ಯಸಮತೆಗಳು ಜನಕನ ಯಜ್ಞಸಭೆಯಲ್ಲಿ ಗಾರ್ಗಿ ಮುಂತಾದವರಿಗೆ ಇದ್ದವು. ಆಗಮಕಾರರೆಲ್ಲರೂ – ಅವರು ಶೈವ, ಶಾಕ್ತ, ವೈಷ್ಣವ ಈ ಯಾವದೇ ಸಾಂಪ್ರದಾಯದವರಿರಲಿ–ಉಚ್ಚನೀಚಭಾವಗಳನ್ನು ನಿರಾಕರಿಸಿ ಭಕ್ತಮಾತ್ರರಲ್ಲಿ ಬಂಧುಭಾವವನ್ನು ಸ್ಥಾಪಿಸಲು ಯತ್ನಿಸಿದ್ದಾರೆ ಮತ್ತು ಜಾತಿ ಲಿಂಗಾದಿ ನಿರ್ಬಂಧವಿಲ್ಲದೆ ಸಕಲರಿಗೂ ದೀಕ್ಷೆ ಕೊಡಬೇಕೆಂದು ವಿಧಿಸಿದ್ದಾರೆ. ಗುಣ

ಕರ್ಮವಿಭಾಗಶಃ ಚಾತುರ್ವರ್ಣ್ಯಗಳು ನಿರ್ಮಾಣಮಾಡಲ್ಪಟ್ಟಿರುವವು ಎಂದು ಗೀತೆಯಲ್ಲಿ ಶ್ರೀಕೃಷ್ಣನು ಹೇಳಿರುವನು. (ಗೀ. ೪. ೧೩), ಪಂಡಿತರು ಎಲ್ಲರನ್ನು 'ಅತ್ಯಂತ ಸಮದೃಷ್ಟಿಯಿಂದ ನೋಡುವರು. (ಗೀ. ೫. ೧೮), ಹೀಗೆ ಸ್ಪಷ್ಟವಾಗಿ ಹೇಳಿ, ಸ್ತ್ರೀ ಶೂದ್ರಾದಿಗಳು ಸಹ ಭಕ್ತಿಮಾರ್ಗದಿಂದ ಪರಮಗತಿಯನ್ನು ಹೊಂದಬಲ್ಲರು (ಗೀತೆ. ೯. ೩೨) ಎಂದು ಭಗವಂತನು ಎಲ್ಲರಿಗೂ ಆಶ್ವಾಸನ ಕೊಟ್ಟಿರುವನು.

೨೯. ಕ್ರಿಶ್ಚನ್ ಧರ್ಮದ ಸ್ಥಾಪಕನಾದ ಜೀಸಸ್ ಕ್ರಾಯಿಸ್ಟನು ಎಲ್ಲ ಉಚ್ಚನೀಚಭಾವಗಳನ್ನು ಅಳಿಸಿ, ಹೀನ ದೀನ ದುರ್ಬಲರೆಂದೆನಿಸಿ ಕೊಳ್ಳುವವರಲ್ಲಿಯೆ ಬಂಧುಭಾವದಿಂದ ಸೇರಿ ಅವರನ್ನು ಉದ್ಧರಿಸಲೆತ್ನಿಸಿದನು. ಅವನು ಜಾತಿಕುಲಾದಿಗಳನ್ನು ಲೆಕ್ಕಿಸದೆ ಸಿಕ್ಕಸಿಕ್ಕವರೊಡನೆ ಸಮಭಾವದಿಂದ ಸಹವಾಸಮಾಡುವನು, ಎಂದು ಅವನ ಬಾಂಧವರಾದ ಯಹೂದೀ ಜನರು ಅವನ ಮೇಲೆ ದೊಡ್ಡ ಆರೋಪವನ್ನು ಹೊರಿಸಿದರು! ವೀಸುಗಾರರನ್ನು, ವೇಶ್ಯೆಯರನ್ನು ಸಹ ಅವನು ತನ್ನ ಶಿಷ್ಯವರ್ಗಕ್ಕೆ ಸೇರಿಸಿಕೊಂಡನು. ಅವನು ಪ್ರಸ್ಥಾಪಿಸಿದ ಧರ್ಮದಲ್ಲಿ ಆಗಿಹೋದ ಅನೇಕ ಸಾಧುಸಂತರು ಅವನ ಮೇಲುಪಂಕ್ತಿಯನ್ನೆ ಅನುಸರಿಸಿರುವರು. 'ದೇವಾ, ನಿನಗೆಲ್ಲರೂ ಸಮರು, ಅರಸೂ ಅಷ್ಟೇ ಆಳೂ ಅಷ್ಟೇ. ನೀನೇ ಸರ್ವರ ಒಡೆಯನು,' ಎಂದು ಜಾಮೀ ಎಂಬ ಸುಫೀ ತತ್ವಜ್ಞನು, ಇದೇ ಭಾವದಿಂದ ಜನರು ನಡೆಯತಕ್ಕದ್ದೆಂದು ಸೂಚಿಸಿ ನುಡಿದಿರುವನು. ಮಹಾರಾಷ್ಟ್ರದ ಸತ್ಪುರುಷರು ಈ ಮಾತನ್ನು ವಜನಕಾರರಷ್ಟೆ ಅಸ್ಥೆಯಿಂದ ಹೇಳಿರುವರು. 'ಯಾವ ಕುಲದವನಿದ್ದರೂ ಸರಿ. ಹೊಲೆಯನಿದ್ದರೂ ಅಡ್ಡಿ ಇಲ್ಲ, ಜೀವನು ಪಶುದೇಹವನ್ನು ಧರಿಸಿದ್ದರೂ ಆಯಿತು. ಅಗ್ನಿಯನ್ನು ಸೇರಿದ ಕಾಷ್ಠವು ಯಾವ ಗಿಡದ್ದಿದ್ದರೂ ಸರಿಯೇ ಇರುವಂತೆ ದೇವರಲ್ಲಿ ಎಲ್ಲರೂ ಒಂದೇ. ಭಕ್ತಿಯೇ ಮುಖ್ಯವು,' ಎಂದು ಜ್ಞಾನದೇವನು ಹೇಳಿರುವನು. 'ಪರಮಾರ್ಥದಲ್ಲಿ ಜಾತಿಗೀತಿಗಳಿಗೆ ಏನೂ ಮಹತ್ವವಿಲ್ಲ. ಈಶಸೇವೆ ಮಾಡುವವರೆಲ್ಲರೂ ಪವಿತ್ರರು. ಗೋರಾ ಇವನು ಕುಂಬಾರ, ರೋಹಿದಾಸನು ಸಮುಗಾರ, ಚೋಖಾಮೇಳಾ ಹೊಲೆಯ, ಜನಾಬಾಯಿ ಈಕೆ ಒಕ್ಕಲಗಿತ್ತಿ, ಆದರೆ ಇವರೆಲ್ಲರೂ ಭಕ್ತಪುರುಷ ಸೋಂಕಿ ಪವಿತ್ರ ಸುವರ್ಣದಂತೆ ಆದರು. ಜಾತಿಯ ಮಹತ್ವವಿಲ್ಲ, ನಾಮದ ಮಹತ್ವವಿದೆ. ನಾಲಿಗೆಯ ಮೇಲೆ ನಾಮವಿಲ್ಲದ ಬ್ರಾಹ್ಮಣ ಹೊಲೆಯ, ಕಾಮರಹಿತ ಹೊಲೆಯ ಬ್ರಾಹ್ಮಣ, ಆ ದಿವ್ಯ ಭಾವದಲ್ಲಿ ಎಲ್ಲರೂ ಒಂದೇ. ಹರಿಯ ದಾಸರು ಜನ್ಮಪೆತ್ತಿದ

ಕುಲವೆ ಪವಿತ್ರವು, ಅವರು ಹುಟ್ಟಿದ ದೇಶವೆ ಪಾವನವು, ವರ್ಣಾಭಿಮಾನದಿಂದ ಇವತ್ತಿನ ವರೆಗೆ ಯಾರು ತಾನೆ ಪಾವನರಾಗಿರುವರು? ಅತ್ಯಜಾದಿಗಳು ಸಹ ಹರಿಭಜನದಿಂದ ಉದ್ಧಾರಹೊಂದಿದರು,' ಎಂದು ತುಕಾರಾಮನ ಶ್ರೇಷ್ಠ ವಚನವಿರುವದು. 'ಮಹಾರಾಷ್ಟ್ರದ ಸಾಧುಸಂತರು ಈ ವಿಷಯದಲ್ಲಿ ವಚನಕಾರರಂತೆ ಸರ್ವರಿಗೂ ಭಕ್ತಿಮಾರ್ಗವನ್ನುಪದೇಶಿಸಿ ಮುಕ್ತಿಯ ದ್ವಾರವನ್ನು ತೆರೆದಿಟ್ಟಿರುವರು. ವಾರಕರಿ ಪಂಥದಲ್ಲಿ ಪ್ರಚಲಿತವಾಗಿರುವ ಸಮಭಾವವನ್ನೂ ಪ್ರೇಮಭಾವವನ್ನೂ ನೋಡಿದರೆ ಈ ಮಾತು ಒಮ್ಮೆಲೆ ಸ್ಪಷ್ಟವಾಗುವದು. ದಾಸಕೂಟದವರೂ ಕುಲ, ಮೇಲು, ಕೀಳು, ಹೊಲೆಯ ಎಂಬ ಮುಂತಾದವುಗಳ ಬಗ್ಗೆ ಬರೆದ ಕೀರ್ತನೆಗಳಲ್ಲಿ ಇದೇ ವಿಚಾರಗಳನ್ನು ವ್ಯಕ್ತಗೊಳಿಸಿರುವರು. ಪುರಂದರದಾಸನು, ಹೊಲೆಯ ಯಾರು (ಕೀ. ಭಾಗ. ೧. ೧೫೩), ಎಂದು ಕೇಳುವಾಗ ಆತ್ಮಭಾವವರಿತ ಮೇಲೆ ಆವ ಕುಲವಾದರೇನು (ಕೀ. ಭಾಗ. ೩. ೧೩೮), ಎಂದು ಪ್ರಶ್ನೆಮಾಡುವಾಗ, ಅದೇರೀತಿ ಕನಕದಾಸನು, 'ಆತ್ಮ ಯಾವ ಕುಲ, ಜೀವ ಯಾವ ಕುಲ, ತತ್ವೇಂದ್ರಿಯಗಳು ಯಾವ ಕುಲ, ಹೇಳಿರಯ್ಯ.. ಆತ್ಮನೊಲಿದ ಬಳಿಕ ಯಾವ ಕುಲ, (ಕೀ. ಭಾಗ. ೧. ೬೭), ಎಂದು ಆಹ್ವಾನಪೂರ್ವಕವಾಗಿ ಕೇಳುವಾಗ, ಇದೇ ಭಾವವು ವ್ಯಕ್ತವಾಗಿರುವದು. ಈ ರೀತಿ ಸಮದೃಷ್ಟಿಯಿಂದ ಎಲ್ಲರನ್ನು ನೋಡುವದು ಎಲ್ಲ ಸಾಧು ಸಜ್ಜನರ ಸಾಮಾನ್ಯಗುಣಗಳಲ್ಲಿ ಒಂದು ಮುಖ್ಯವಾಗಿರುವದು.

೨೩೦. ಇನ್ನೂ ಅನೇಕ ವಿಷಯಗಳ ಬಗ್ಗೆ ಮೇಲಿನಂತೆ ವಿಚಾರ ಮಾಡಿ ವಿವಿಧ ದೇಶಕಾಲಗಳಲ್ಲಿಯ ಸಾಧುಗಳ ಆಚಾರವಿಚಾರಗಳನ್ನು ಹೋಲಿಸಿ ಅವು ಅಲ್ಲಮಾದಿ ವಚನಕಾರರೊಡನೆ ಹೇಗೆ ಸರಿಯಾಗುವವು ಇದನ್ನು ನೋಡಬಹುದು. ಆದರೆ ಹೀಗೆ ಎಷ್ಟು ನೋಡಿದರೂ ತಾತ್ಪರ್ಯವು ಒಂದೇ ಹೊರಡುವದು. ಅನೇಕ ದೇಶಗಳಲ್ಲಿ ಬೇರೆಬೇರೆ ಕಾಲಕ್ಕೆ ಆಗಿಹೋದ ಎಲ್ಲ ಸತ್ಪುರುಷರ ಗ್ರಂಥಗಳನ್ನು ಓದಿ ಅವರ ಉಪದೇಶವನ್ನು ಪರಿಶೀಲಿಸಿದರೂ ನಾವು ಒಂದೇ ಸಿದ್ಧಾಂತಕ್ಕೆ ಬರಬೇಕಾಗುವದು. ಯಾಕಂದರೆ, ಮೇಲ್ಮೈಯ್ಯು ಎಷ್ಟೇ ಭಿನ್ನಕಂಡರೂ ಮನುಷ್ಯನ ಅಂತರಂಗವು ಎಲ್ಲಿಹೋದರೂ ಒಂದೇ ಇರುವದು ಮತ್ತು ಅವನಿಗೆದುರಾಗುವ ಸಮಸ್ಯೆಗಳೂ ಒಂದೇ ಬಗೆಯವಿರುವವು. ಆದುದರಿಂದ ಮನುಷ್ಯನು ಎಲ್ಲಿಯೇ ಇರಲಿ, ಅಂತಃಶಾಂತಿಯನ್ನು ಹುಡುಕಿದಾಗೆಲ್ಲ ಮತ್ತು ಹುಡುಕಿದಲ್ಲೆಲ್ಲ ಅವನು ತತ್ತ್ವತಃ ಒಂದೇ ಮಾರ್ಗದಿಂದ ಹೋಗಿರುವನು.

ಪರಮಾರ್ಥಿಗಳ ಬಳಗವು ಎಲ್ಲೆಲ್ಲಿಯೂ ಒಂದೇ ಎಂದು ಹೇಳಬಲ್ಲೆವು. ಅವರು ಉತ್ತರಧ್ರುವ ದಕ್ಷಿಣಧ್ರುವದಷ್ಟು ಪರಸ್ಪರ ದೂರವಿರಲಿ, ಅಥವಾ ಅವರು ಅತ್ಯಂತ ಸುಸಂಸ್ಕೃತಭಾಷೆಯನ್ನು ಇಲ್ಲವೆ ಗ್ರಂಥಸ್ಥವಾಗದ ಯಾವದೊಂದು ನುಡಿಯನ್ನು ಮಾತಾಡುತ್ತಿರಲಿ, ಅವರು ಜಗದಾದಿಯಲ್ಲಿ ಹುಟ್ಟಿರಲಿ ಇಲ್ಲವೆ ಜಗತ್ತಿನ ಪ್ರಳಯದ ಸಮಯಕ್ಕೆ ಹುಟ್ಟಲಿ, ಅವರು ಸ್ತ್ರೀಯರಿರಲಿ ಪುರುಷರಿರಲಿ, ಹಿರಿಯರಿರಲಿ ಕಿರಿಯರಿರಲಿ, ಯಾವದೇ ಧರ್ಮದವರಿರಲಿ, ಯಾವದೇ ಉದ್ಯೋಗದವರಿರಲಿ, ಅವರೆಲ್ಲರೂ ಒಂದೇ ಮಹಾಸಂಗೀತದಲ್ಲಿ ತಮ್ಮ ಸ್ವರಗೂಡಿಸುತ್ತಿರುವರು, ಒಂದೇ ಸಲ್ನುಡಿಯನ್ನಾಡುತ್ತಿರುವರು, ಒಂದೇ ತಾಳಕ್ಕೆ ಹೆಜ್ಜೆಯನ್ನಿಕ್ಕುತ್ತಿರುವರು. ಅವರೆಲ್ಲರೂ ವಿಶ್ವಾತ್ಮನೊಡನೆ ಏಕರಸವಾಗಲು ಹಗಲಿರುಳು ಹೆಣಗುವರು, ಸರ್ವರಲ್ಲಿ ಪ್ರೇಮಪೂರ್ಣರಾಗಿರುವರು, ಮತ್ತು ಪರೋಪಕಾರವೆ ತಮ್ಮ ಆದಿಧರ್ಮವೆಂದಿಟ್ಟುಕೊಂಡಿರುವರು.

---

೧೨. ಉಪಸಂಹಾರವು

(೨೨೦) ಉಪಸಂಹಾರದ ವಿಷಯವು. (೨೨೧) ಈ ಸಂದೇಶವು ಅಮೃತಮಯವು ಅಭಯಪೂರ್ಣವು. (೨೨೩) ಸರ್ವರಿಗೂ ಬೇಕಾದ ಸಂದೇಶವಿದು. (೨೨೪) ಅಕಾಮತ್ವವೆಂದರೇನು? (೨೨೫) ಸ್ವಾರಾಟನೇ ಸಮ್ರಾಟನು. (೨೨೬) ಶಕ್ತಿಗಳ ವಿಕಾಸ ಹಾಗೂ ಅರ್ಪಣ. (೨೨೭) ಪೂರ್ಣಾರ್ಪಣ. (೨೨೮) ಈಶಾವಾಸ್ಯಮಿದಂ ಸರ್ವಂ. (೨೨೯) ನಿಜವಾದ ಪೂಜೆ. (೨೩೦) ಮನೋದೌರ್ಬಲ್ಯವನ್ನು ಬಿಟ್ಟು ಬಿಡಬೇಕು. (೨೩೦) ವ್ಯಕ್ತಿಸೇವೆ ಸಮಾಜಘಟನೆ. (೨೩೨) ಉಪದೇಶ. (೨೩೩) ವೀರಸಂದೇಶವು.

೨೨೦. ನೂರಾರು ವಚನಕಾರರು ಕನ್ನಡದಲ್ಲಿ ಬರೆದ ವಚನಸಂಗ್ರಹದ ಸಾಗರವನ್ನು ಕಡೆದು, ಅದರೊಳಗಿನ ಅತ್ಯುತ್ತಮ ರತ್ನಗಳನ್ನು ಆರಿಸಿ, ವಚನಧರ್ಮವನ್ನು ಇಲ್ಲವೆ ವಚನಸಿದ್ಧಾಂತವನ್ನು ಒಳಗೊಂಡ 'ವಚನಾಮೃತ' ಎಂಬ ಆಯ್ಕೆಯನ್ನು ಸಿದ್ಧಗೊಳಿಸಬೇಕು, ಮತ್ತು ವಚನಶಾಸ್ತ್ರದ

ಗುಟ್ಟುಗುರಿಗಳನ್ನು ಗೊತ್ತುಹಚ್ಚಿ ಅದನ್ನು ತಿಳಿಯಾಗಿ ವಿವರಿಸಬೇಕು ಎಂಬ ಎರಡು ಉದ್ದೇಶಗಳಿಂದ ನಾವು 'ವಚನಶಾಸ್ತ್ರರಹಸ್ಯ' ಈ ಹೆಸರಿನ ಗ್ರಂಥದ ರಚನೆಯನ್ನು ಕೈಕೊಂಡೆವು. ತತ್ವಜ್ಞಾನದ ಓರ್ವ ವಿದ್ಯಾರ್ಥಿ, ಧರ್ಮಶಾಸ್ತ್ರದ ಓರ್ವ ಜಿಜ್ಞಾಸು, ಪರಮಾರ್ಥದ ಓರ್ವ ಸಾಧಕ ಈ ವಿನಮ್ರಭಾವದಿಂದ ಈ ಕಾರ್ಯವನ್ನು ಉಪಕ್ರಮಿಸಿ ನಾವು ಇಲ್ಲಿಯವರೆಗೆ ನಾಲ್ಕು ಮಾತುಗಳನ್ನು ಬರೆದೆವು. ಇನ್ನು ವಿಹಂಗಮದೃಷ್ಟಿಯಿಂದ ನಮ್ಮ ಪ್ರಯತ್ನವನ್ನು ಪರ್ಯಾಲೋಚಿಸಿ ವಚನಕಾರರ ಸಂದೇಶವನ್ನು ಸಂಕ್ಷೇಪದಿಂದ ಅರುಹಿ ಈ ಕಾರ್ಯವನ್ನು ಉಪಸಂಹರಿಸಬೇಕೆಂದಿರುವೆವು.

೨೨೨. ವಚನಕಾರರ ಸಂದೇಶವು ಅಥವಾ ಉಪದೇಶವು ತಿಳಿಯಲಾರದ ಶಬ್ದಜಾಲದಲ್ಲಿ ಗೂಢವಾಗಿ ಹುದುಗಿಕೊಂಡಿಲ್ಲ. ಅದರ ಬಳಿ ಸರ್ವರೂ ಹೋಗಬಾರದೆಂದು ಕೃತಕ ನಿರ್ಬಂಧಗಳೆಂಬ ಮುಳ್ಳುಕಂಟಿಗಳ ಬೇಲಿಗಳನ್ನೂ ವಚನಕಾರರು ನಿರ್ಮಿಸಿಲ್ಲ. ತಿಳಿದುಕೊಳ್ಳಬೇಕೆಂಬ ಜಿಜ್ಞಾಸುಗಳಿಗೆ ಆ ಉಪದೇಶವು ಸಹಜವಾಗಿ ತಿಳಿಯುವಂತಿದೆ. ಅಷ್ಟೊಂದು ಸುಲಭಶೈಲಿಯಲ್ಲಿ ಮತ್ತು ವ್ಯಕ್ತರೀತಿಯಿಂದ ನಿಃಸಂದಿಗ್ಧವಾಗಿ ಅವರು ಅದನ್ನು ನಮ್ಮೆಲ್ಲರಕೆದುರಿಗೆ ಇಟ್ಟಿರುವರು. ಅವರ ಸಂದೇಶವನ್ನು ಅರಿತುಕೊಳ್ಳಲಿಕ್ಕೆ ನಾವು ದೊಡ್ಡ ಪಂಡಿತರಾಗುವ ಕಾರಣವಿಲ್ಲ. ನಾವು ಸಂಸ್ಕೃತವನ್ನು ಕಲಿಯಬೇಕೆಂದಿಲ್ಲ, ನ್ಯಾಯವ್ಯಾಕರಣಾದಿಗಳನ್ನು ಅಭ್ಯಸಿಸುವ ಅವಶ್ಯಕತೆ ಇಲ್ಲ. ಧರ್ಮವಾರ್ಗದಿಂದ ನಡೆಯಬೇಕು, ಎಂಬ ಜಿಜ್ಞಾಸೆ ನಮ್ಮಲ್ಲಿದ್ದರೆ ಸಾಕು. ನಮ್ಮಲ್ಲಿ ಪೂರ್ವಗ್ರಹಗಳಿಂದ ದೂಷಿತವಾಗದೆ ಇದ್ದ ನಿರ್ಮಲ ಮನಸು ಇದ್ದರಾಯಿತು. ಪರಮಶಾಂತಿಯನ್ನು ಪಡೆಯಬೇಕು ಎಂಬ ಹವಣು ಇದ್ದರೆ ಹಾಲಲ್ಲಿ ಸಕ್ಕರೆ ಹಾಕಿದಂತೆ ಇವೆರಡು ಇದ್ದರೆ ನಮಗೆ ಅವರ ತಿಳಿಯಾದ ತತ್ವವು ನಿಚ್ಚಳವಾಗಿ ಹೊಳೆಯುವದು. ಅವರ ಸಂದೇಶವು ಅಮೃತಮಯವಿರುವದು, ಅಭಯಪೂರ್ಣವಿರುವದು, ಆನಂದಾತ್ಮಕವಿರುವದು. ಯಾವ ಸಂದೇಶವನ್ನು ಕೇಳಿ, ಯಾವ ಜ್ಞಾನವನ್ನು ಪಡೆದು ಮನುಷ್ಯನು ಅಮೃತತ್ವವನ್ನು ಪಡೆಯುವನು (ಅಮೃತತ್ವಂ ಹಿ ವಿಂದತೇ–ಉಪನಿಷತ್) ಎಂದು ಉಪನಿಷತ್ತು ಹೇಳಿರುವುದೊ ಆ ಸನಾತನ ಸಂದೇಶವನ್ನೆ ವಚನಕಾರರು ಹೇಳಿರುವರು. ಯಾವ ತತ್ವವನ್ನು ಹೇಳಿ, ನೀನು ಅಭಯವನ್ನು ಪಡೆದಿರುವಿ (ಅಭಯಂ ವೈ ಪ್ರಾಪ್ತೋಽಸಿ–ಉಪನಿಷತ್), ಎಂದು ಯಾಜ್ಞವಲ್ಕ್ಯನು ಜನಕರಾಜನನ್ನು ಆಶೀರ್ವದಿಸಿದನೊ ಆ ಶ್ರೇಷ್ಠತತ್ವವನ್ನೆ ವಚನಕಾರರು ಉಸುರಿರುವರು. ಯಾವ

ಸತ್ಯವು ಆನಂದರೂಪವೂ ಅಮೃತವೂ ಇರುವದು (ಆನಂದರೂಪಮಮೃತಂ ಯದ್ವಿಭಾತಿ–ಉಪನಿಷತ್), ಎಂದು ಉಪನಿಷತ್ಕಾರರು ನುಡಿದಿರುವರೊ ಆ ಸತ್ಯವನ್ನೆ ವಚನಕಾರರು ಸಾರಿರುವರು.

೨೫. ವಚನಕಾರರ ದಿವ್ಯಸಂದೇಶದ ಅವಶ್ಯಕತೆಯು ಎಲ್ಲ ಮನುಷ್ಯ ಮಾತ್ರರಿಗೆ ಇರುವದು. ವಿಶೇಷವಾಗಿ, ಯಾರು ಬರಿಯ ದೇಹಿಕ ಮಾನಸಿಕ ಹಸಿವೆಗಳಿಗೆ ದಾಸರಾಗಿ ಮೂಕ ಪಶುಗಳಂತೆ ಕ್ಷಣಿಕ ಸುಖದುಃಖಗಳಿಂದ ಅಲೆದಾಡಿ ಬೇಸತ್ತಿರುವನೊ, ಯಾರು ಭಂಗುರವಾದ ವಿಷಯ ಸುಖಗಳಿಂದ ಸಂತುಷ್ಟರಾಗದೆ ಅತ್ಯಂತಿಕ ಸಮಾಧಾನವನ್ನು ಪಡೆಯ ಬೇಕೆನ್ನುವರೊ, ಯಾರು ಮಾನಸಿಕ ಪರಮಶಾಂತಿಯನ್ನೂ ಆಂತರಿಕ ಆನಂದವನ್ನೂ ಅರಸುತ್ತಿರುವರೊ, ಯಾರು ಒಳಹೊರಗಿನ ಶಕ್ತಿಗಳ ಗುರುತ್ವಮಧ್ಯವನ್ನು ಗುರುತಿಸಿ ಸಮತ್ವವನ್ನು ಸಾಧಿಸಬೇಕೆನ್ನುವರೊ, ಯಾರು ಈ ಧ್ರುವದಲ್ಲಿ ಅಳಿನಂತೆ ಬಳಲದೆ ಅರಸನಂತೆ ಬಾಳಬೇಕೆನ್ನುವರೊ, ಯಾರು ಪರಮನ ಈ ಲೀಲಾಂಗಣದಲ್ಲಿ ಅಸಹಾಯವಾದ ಪಾತ್ರದಂತೆ ಕುಣಿಯದೆ ಪ್ರಭುವಿನಂತೆ ವಿಹರಿಸಬೇಕೆನ್ನುವರೊ, ಅವರಿಗೆ ಈ ಸಂದೇಶವು ಪರುಷಮಣಿಯಂತೆ ಉಪಕಾರಕವಿರುವದು. ಸಾಮಾನ್ಯವಾಗಿ ಮನುಷ್ಯನ ಆಶೆ, ಆಕಾಂಕ್ಷೆ, ಕಾಮನೆ ಮತ್ತು ಅವುಗಳನ್ನು ಪೂರೈಸುವ ಅವನ ಸಾಮರ್ಥ್ಯ ಇವುಗಳ ನಡುವೆ ಇರುವ ಅಸಮತೆಯೆ ಮನುಷ್ಯನ ಅಸಂತೋಷಕ್ಕೆ ಕಾರಣವಿರುವದು. ಪುರಾಣದಲ್ಲಿಯ ಅಹಿರಾವಣ ಮಹಿರಾವಣರ ಕಥೆಯು ಇಲ್ಲಿ ನೆನಪಿಗೆ ಬರುವದು. ಈ ರಾಕ್ಷಸನನ್ನು ಕೊಲ್ಲಬೇಕೆಂದು ಒಂದು ಕತ್ತಿಯ ಪೆಟ್ಟನ್ನು ಹಾಕಿದರೆ ಅವನ ನೆತ್ತರದ ಒಂದೊಂದು ಹನಿಯಿಂದ ಒಬ್ಬೊಬ್ಬ ರಾಕ್ಷಸನು ಹುಟ್ಟಿ ನಮಗೆ ಎದುರಾಗುವನು! ಹಾಗೆ ಇದೆ ಈ ಕಾಮನೆಂಬ ರಕ್ಕಸನ ಕಥೆಯು! ಈ ರಾಕ್ಷಸನನ್ನು ನಿರ್ಮೂಲ ಮಾಡಬೇಕಾದರೆ ಒಂದು ಹನಿ ಸಹ ನೆತ್ತರವು ನೆಲಕ್ಕೆ ಬೀಳದಂತೆ ಇವನ ಕುತ್ತಿಗೆಯನ್ನು ಹಿಡುಕಲಿಕ್ಕೆ ಬೇಕು! ಅರ್ಥಾತ್ ಇದಕ್ಕೆ ಸಂಪೂರ್ಣ ಅ–ಕಾಮರಾಗುವದೆ ಅರಸು ಉಪಾಯವು. ಹೀಗೆ ಅಕಾಮರಾಗುವ ಸಂದೇಶವನ್ನೆ ವಚನಕಾರರು ಕೊಟ್ಟಿರುವರು. 'ನಿರಾಸೆಯೆ ಈಶತ್ವ' ಎಂದು ಅವರು ಹಾಡಿರುವರು.

೨೬. ಇನ್ನು ಸಂಪೂರ್ಣ ಅಕಾಮರಾಗುವದು ಶಕ್ಯವೆ ಇಲ್ಲ, ಅದು ಶಕ್ಯವಿದೆ ಎಂದು ತಿಳಿದರೂ ಅಕಾಮತ್ವವೆಂದರೆ ಕೇವಲ ಜಡತ್ವವಲ್ಲವೆ, ಎಂದು ಹಲವರು ಕೇಳಬಹುದು. ವಚನಕಾರರು ಅಕಾಮತ್ವವೆಂದು

ಏತಕ್ಕೆ ಅನ್ನುವರು, ಇದನ್ನು ಚನ್ನಾಗಿ ತಿಳಿದುಕೊಂಡರೆ ಈ ಸಂಶಯದ ಪರಿಹಾರವಾಗುವದು. ಅಕಾಮರಾಗುವುದೆಂದರೇನು? ಸಾಮಾನ್ಯತಃ ನಮ್ಮ ಚಿತ್ತವು ಅನೇಕಾನೇಕ ಕಾಮನೆಗಳ ನಾಟ್ಯರಂಗವಿರುವದು. 'ನಾನು' ಎಂಬುದೆ ಆ ಕಾಮನೆಗಳ ಮಧ್ಯಬಿಂದುವಿರುವದು. ಈ ಕಾಮನೆಗಳೆಲ್ಲ 'ನಾನು' ಎಂಬರಸನನ್ನು ಪಟ್ಟಗಟ್ಟಿ ಅವನನ್ನು ಉಪಾಸಿಸುವವು ಮತ್ತು ಎಲ್ಲ ಶಕ್ತಿಗಳನ್ನು ಅವನ ಸೇವಾರ್ಥವಾಗಿ ಉಪಯೋಗಿಸುವವು. ಈ ಸ್ವಾರ್ಥಮೂಲಕ ಕಾಮನೆಗಳನ್ನೆಲ್ಲ ಬಿಟ್ಟುಬಿಡುವುದೆ ಅಕಾಮತೆಯ ಮುಖ್ಯ ಲಕ್ಷಣವು. ಚುಕ್ಕಾಣಿ ಇಲ್ಲದ ನಾವಿನಂತೆ ನಮ್ಮ ಚಿತ್ತವನ್ನು ನಾವು ಅನಂತ ಸ್ವಾರ್ಥಪೂರ್ಣ ಕಾಮನಾತರಂಗಗಳಿಗೆ ಒಡ್ಡಿ ಅದನ್ನು ಸಿಕ್ಕಸಿಕ್ಕತ್ತ ಹೋಗಗೊಡಬಾರದು, ಎಂಬುದೆ ಅಕಾಮತೆಯ ಅರ್ಥವು. ಇದು ವಚನಕಾರರು ಹೇಳುವ ಮಹಾಯೋಗದಲ್ಲಿಯ ನಿಷೇಧಕಕ್ರಿಯೆಯಾಯಿತು. ಆದರೆ ಇಷ್ಟರಿಂದ ಸಾಧನವು ಪೂರ್ಣವಾಯಿತೆಂದು ತಿಳಿಯಕೂಡದು. ಇದರೊಡನೆ ವಿಧಾಯಕಕ್ರಿಯೆಯೂ ಒಂದು ಇದೆ. ನಮ್ಮ ಚಿತ್ತವನ್ನು ಪರಮಾತ್ಮಾರ್ಪಣಮಾಡತಕ್ಕದ್ದೆಂಬುದೆ ಆ ಕ್ರಿಯೆಯು. ಈ ಮೂಲಕ, 'ನಾನು' ಎಂಬುದರಲ್ಲಿಯ ಸ್ವತಂತ್ರವ್ಯಕ್ತಿತ್ವ, ಸ್ವಾರ್ಥ, ಕ್ಷುದ್ರತನ, ಅಹಂಕಾರ ಮುಂತಾದ ದುರ್ಗುಣಗಳನ್ನು ಕಳೆದು ಆ ನನ್ನನ್ನು 'ವಿಶ್ವಾತ್ಮನೆಂಬ ಏಕಮೇವಾದ್ವಿತೀಯ ಶಕ್ತಿಪುರುಷನ ಅನಂತ ಬಾಹುಗಳಲ್ಲಿ ಒಂದನ್ನು ಮಾಡಿಬಿಟ್ಟರೆ ಸಾಧನೆಯು ಪೂರ್ಣವಾಗುವದು. ಹಾಗೆ ಮಾಡಿದರೆ, ನಾವು ಈಗ ನಮ್ಮ ಸ್ವಾರ್ಥಕ್ಕಾಗಿ, ನಮ್ಮ ವೈಯ್ಯಕ್ತಿಕ ಸುಖಕ್ಕಾಗಿ ನಿಸರ್ಗದೊಡನೆ ಮತ್ತು ನಮ್ಮ ಬಾಂಧವರೊಡನೆ ಹೋರಾಡುವ ತುಂಟರಿದ್ದವರು ಮುಂದೆ ಪರಮಾತ್ಮನ ಲೀಲಾವಿಹಾರದಲ್ಲಿ ಆನಂದಭಾಗಿಗಳಾದ ಬಂಟರಾಗುವೆವು. ಇದೇ ನಿಜವಾದ ಅಕಾಮತ್ವವು. ಇದಕ್ಕೆ ಜಡತ್ವವೆನ್ನುವ ಧೈರ್ಯವು ಯಾರಿಗೆ ಇರುವದು!

೨೭. ನಿಸರ್ಗದ ಮೇಲೆ, ಬಾಹ್ಯಸೃಷ್ಟಿಯ ಮೇಲೆ, ವಿಷಯುಗಳ ಮೇಲೆ, ಗೋಚರವಸ್ತುಗಳ ಮೇಲೆ ತನ್ನ ಅಮರ್ಯಾದ ಪ್ರಭುತ್ವವನ್ನು ಸ್ಥಾಪಿಸಬೇಕು ಮತ್ತು ತನ್ನ ಕಾಮನೆಗಳನ್ನು ಪೂರ್ತಿಗೊಳಿಸಿ ಸುಖಿಯಾಗಬೇಕು, ಎಂದು ಮನುಷ್ಯನು ಹವಣಿಸುವನು. ಇಲ್ಲವೆ ಮನುಷ್ಯನು ಸೃಷ್ಟಿಯ ನಿರಂಕುಶ ಸಮ್ರಾಟನಾಗಬೇಕೆನ್ನುವನು, ಎಂದು ಹೇಳಬಹುದು. ವಚನಕಾರರು ಮನುಷ್ಯನ ಈ ಮಹತ್ವಾಕಾಂಕ್ಷೆಯನ್ನು ಅಲ್ಲಗಳೆಯುವದಿಲ್ಲ. ಈ ಆಕಾಂಕ್ಷೆಯು ಸ್ವಾಭಾವಿಕವಿರುವದು ಎಂಬುದನ್ನು ಅವರು

ಬಲ್ಲರು. ಅವರ ಅಂಬೋಣವೇನೆಂದರೆ, ಇದು ನಿಜವಾದ ಸಾಮ್ರಾಜ್ಯ ಸ್ಥಾಪನೆಯಲ್ಲ. ಈ ರೀತಿ, ನೀವು ನಿಮ್ಮ ಕ್ರೀಡಾಭುವನಕ್ಕೆಂದು ಕಟ್ಟುವ ಗೋಡೆಗಳು ನಿಮ್ಮನ್ನೆ ಸೆರೆಹಿಡಿಯುವವು, ಇಂದ್ರಿಯ ಸುಖಗಳನ್ನು ಸೆರೆ ಹಿಡಿದು ಸೇವಿಸಬೇಕೆಂದು ನೀವು ಪಸರಿಸುವ ವಾಸನಾಜಾಲವು ನಿಮ್ಮನ್ನೆ ಅಲ್ಲಿ ತೊಡಗಿಸಿಬಿಡುವದು, ವಿಷಯಸುಖಸಿಂಹಾಸನವನ್ನು ಏರಲಿಕ್ಕೆ ಹೋದ ನೀವು ಅದರಡಿಗೆ ತೊತ್ತಾಗಿ ತೊಳಲುವ ಪ್ರಸಂಗವು ಬರುವದು. ಹೀಗೆ ಎಚ್ಚರಗೊಟ್ಟು, 'ಸ್ವರಾಟರಾಗಿರಿ ಅಂದರೆ ಸಮ್ರಾಟರೂ ಆಗುವಿರಿ,' ಎಂಬ ಮಂತ್ರವನ್ನು ಅವರು ಮೆಲ್ಲನೆ ನಮ್ಮ ಕಿವಿಯಲ್ಲಿ ಊದುವರು. ಸ್ವರಾಟನೆಂದರೆ ತನ್ನ ಅಂತಃಶಕ್ತಿಗಳಮೇಲೆ ಪ್ರಭುತ್ವವನ್ನು ಸ್ಥಾಪಿಸಿದವನು, ಕಾಮಪಾಶವನ್ನು ಹರಿದು ಸ್ವತಂತ್ರನಾದವನು, ತನ್ನ ವ್ಯಕ್ತಿತ್ವವನ್ನು ವಿಶ್ವಾತ್ಮನಲ್ಲಿ ವಿಸಾಟಿ ದಿವ್ಯಪ್ರೇರಣೆಯನ್ನು ಪಡೆದವನು, ತನ್ನಲ್ಲಿಯ ಪಶುವನು ಕೊಂದು ಪಶುಪತಿಯಾದವನು. ಅವನೇ ನಿಜವಾದ ಸಮ್ರಾಟನು. ಯಾಕಂದರೆ, ಅವನು ಎಲ್ಲ ಬಗೆಯ ದಾಸ್ಯವೃತ್ತಿಯನ್ನೂ ಪರವಶತೆಯನ್ನೂ ತಳ್ಳಿ, ಸ್ವತಂತ್ರನಾಗಿ ವಿಹರಿಸುವನು ಮತ್ತು ಸಮ್ರಾಟನಿಗೆ ಆಗುತ್ತಿರಬಹುದಾದ ಸುಖಕ್ಕಿಂತ ಸೂರ್ಮಡಿ ಸುಖವನ್ನು ಅನುಭವಿಸುವನು. ಸಾಮಾನ್ಯರು ಅಸಹಾಯರಾಗಿ, ನಿರ್ವಾಹವಿಲ್ಲದೆ, ಕಾಮನೆಗಳಿಗೆ ಗುಲಾಮರಾಗಿ ನಡೆಯುವಂತೆ ನಡೆಯದೆ ಅವನು ಭೋಗರಾಜನಂತೆ ನಡೆಯುವನು, ನುಡಿಯುವನು, ಭೋಗಿಸುವನು. ಅವನು ಉಣ್ಣುವನು, ತಿನ್ನುವನು, ಊಟದ ರುಚಿಯನ್ನು ಆಸ್ವಾದಿಸುವನು; ಆದರೆ ಹಸಿದು, ಬಳಲಿ, ಗಬಗಬ ತಿನ್ನುವ ಕಾಮಿಯಂತೆ ಅಲ್ಲ. ಆತ್ಮನಲ್ಲಿಯೆ ಆತ್ಮನಿಂದ ಸದಾ ತೃಪ್ತನಿದ್ದು ಅವನು ಇದೊಂದು ಲೀಲೆಯೆಂದು, ಆನಂದಪರ್ಯಾಯವೆಂದು ಭೋಗಿಸುವನು. ಇದೇ ಮಾತು ಅವನ ಎಲ್ಲ ಅನ್ಯ ಭೋಗಗಳನ್ನು ಅನ್ವಯಿಸುವದು.

೨೨೭. ನಿತ್ಯ ಪೂರ್ಣಾನಂದದಲ್ಲಿ ತಲ್ಲೀನವಿರುವದೆ ತನ್ನ ಆತ್ಯಂತಿಕ ಆತ್ಮಿಕ ಧ್ಯೇಯವೆಂದು ಪಹನಕಾರನು ಅಂದರೂ ತನ್ನ ಕಾಯಿಕ, ಮಾನಸಿಕ, ನೈತಿಕ ಆಕಾಂಕ್ಷೆಗಳ ಕಡೆಗೆ ಅವನು ಎಂದೂ ದುರ್ಲಕ್ಷ ಮಾಡುವದಿಲ್ಲ. ಯಾಕಂದರೆ, ಇವುಗಳಲ್ಲಿಯೂ ಪರಮಾತ್ಮನೆ ವ್ಯಕ್ತನಾಗಿರುವನು, ಮತ್ತು ಇವುಗಳ ವಿಕಾಸವನ್ನು ಸಾಧಿಸಿ ಇವುಗಳನ್ನೆಲ್ಲ ಪರಮಾತ್ಮನಲ್ಲಿ ಅರ್ಪಿಸತಕ್ಕದ್ದು, ಎಂಬ ಸ್ಫುರಭಾವವು ಅವನಲ್ಲಿರುವದು. ನಮ್ಮಲ್ಲಿದ್ದ ಶಾರೀರಿಕ, ಮಾನಸಿಕ, ನೈತಿಕ ಶಕ್ತಿಗಳನ್ನು, ನಾವು ಅವುಗಳನ್ನು ಕುಗ್ಗಿಸಬೇಕೆಂದು,

ಇಲ್ಲವೆ ಅವುಗಳ ದುರುಪಯೋಗವಾಡಬೇಕೆಂದು, ಇಲ್ಲವೆ ಅವುಗಳನ್ನು ನಾವು ಸ್ವಾರ್ಥಕ್ಕಾಗಿ ಉಪಯೋಗಿಸಬೇಕೆಂದು, ದೇವರು ಅಥವಾ ನಿಸರ್ಗವು ನಮಗೆ ಕೊಟ್ಟಿಲ್ಲ. ನಾವು ಅವುಗಳ ಯೋಗ್ಯ ವಿಕಾಸವಾಗಬೇಕೆಂದು, ಸರ್ವರ ವಿಕಾಸಕಾರ್ಯದಲ್ಲಿ ಅವುಗಳ ಉಪಯೋಗವನ್ನು ನಾವು ಮಾಡಬೇಕೆಂದು ಅವು ನಮಗೆ ಕೊಡಲ್ಪಟ್ಟಿವೆ. ಈ ಉದ್ದೇಶವು ಸಫಲವಾಗಲಿಕ್ಕೆ ಒಂದು ರಾಜಮಾರ್ಗವಿರುವದು. ಅದಾವುದೆಂದರೆ, ಸರ್ವ ಶಕ್ತಿವಿಕಾಸಪೂರ್ವಕವಾಗಿ ಸರ್ವಾತ್ಮನಲ್ಲಿ ನಾವು ಸರ್ವಾರ್ಪಣಮಾಡುವದು. ನಮ್ಮಲ್ಲಿರುವ ಅಹಂಕಾರ ಅಥವಾ ಸ್ವಾರ್ಥದೃಷ್ಟಿಯ ಮೂಲಕವೆ ನಮ್ಮ ಶಕ್ತಿಗಳ ದುರುಪಯೋಗವಾಗುವದು. ಆ ದೃಷ್ಟಿಯನ್ನೆ ನಾವು ಕುಗ್ಗಿಸುತ್ತ ಹೋಗಿ ಪರಾರ್ಥ ದೃಷ್ಟಿಯನ್ನು, ಪರಮಾರ್ಥ ದೃಷ್ಟಿಯನ್ನು ಬೆಳೆಸುತ್ತ ಹೋದರೆ ನಮ್ಮಿಂದ ಶಕ್ತಿಗಳ ದುರುಪಯೋಗವು ಸಹಸಾ ಆಗಲಿಕ್ಕಿಲ್ಲ. ನಮ್ಮ ಶಕ್ತಿಗಳನ್ನು ಪರಮಾತ್ಮಜರಣಕ್ಕೆ ಅರ್ಪಿಸುವವೆ ಆದಬಳಿಕ ಅವುಗಳನ್ನು ಇದ್ದಕ್ಕಿದ್ದ ಹಾಗೆ ಇಲ್ಲವೆ ಕುಗ್ಗಿಸಿ ಮುಗ್ಗಿಸಿ ಅರ್ಪಿಸುವುದರಲ್ಲಿ ಏನು ಅರ್ಥವು? ಅವುಗಳನ್ನು ಬೆಳೆಯಿಸಿ, ಹಿಗ್ಗಿಸಿ ಸಮರ್ಥಮಾಡಿ, ಸುಂದರಮಾಡಿ ನಿವೇದಿಸುವುದೆ ಉಚಿತವಾಗುವದು. ಹೂವನ್ನು ಏರಿಸುವುದೆ ಆದರೆ ಬಾಡಿದ ಬತ್ತಿದ ಹೂವಿಗಿಂತ ಅಚ್ಚ, ಹೊಸ, ಪರಿಮಲಯುಕ್ತ ಹೂವನ್ನೆ ಏರಿಸಬೇಕು. ಇಲ್ಲದಿದ್ದರೆ ಅದರಲ್ಲಿ ಯಾವ ಪುರುಷಾರ್ಥವು?

೨೨೭. ಈ ದೇಹವನ್ನು ನಾವು ಅದಷ್ಟು ಸುಷ್ಟುಪುಷ್ಟು ಮಾಡಿ ಎಲ್ಲೆಲ್ಲಿಯೂ ಇರುವ, ನಮ್ಮ ಬಂಧುಬಾಂಧವರಲ್ಲಿ, ಸಮಾಜದಲ್ಲಿ, ಎಲ್ಲರಲ್ಲಿ ಇರುವ ಪರಮಾತ್ಮನ ಸೇವೆಮಾಡಲು ಸಮರ್ಥರಾಗಲಿಕ್ಕೆ ಬೇಕು. ಈ ನಮ್ಮ ಮನಸನ್ನು ಹೆಚ್ಚು ಸೂಕ್ಷ್ಮಣ ಮತ್ತು ವಿಚಾರಕ್ಷಮ ಮಾಡಿ, ಅದರಲ್ಲಿ ಸ್ಮರಣಶಕ್ತಿ ಜ್ಞಾನಗ್ರಹಣಸಾಮರ್ಥ್ಯ ಇವುಗಳನ್ನು ಅಳವಡಿಸಿ ಇದರಿಂದ ಅವನ ಜ್ಞಾನಸೇವೆ ಮಾಡಲು ಉದ್ಯುಕ್ತರಾಗಲಿಕ್ಕೆ ಬೇಕು. ಅದೇ ರೀತಿ, ಸತ್ಯಾಸತ್ಯ, ನ್ಯಾಯಾನ್ಯಾಯ ಈ ಮುಂತಾದ ನೀತಿವಿವೇಕವನ್ನು ಅರಿತುಕೊಂಡು, ಕೆಡುಕನ್ನು ತಳ್ಳಿ ಒಳಿತನ್ನು ಮಾಡಿ ಸುವ್ಯವಸ್ಥಿತ ಸಮಾಜರಚನೆಯ ಕಾರ್ಯದಲ್ಲಿ ನಾವು ಪ್ರವೃತ್ತರಾಗಲಿಕ್ಕೆಬೇಕು. ಅಂದರೆ ನಾವು ಸರ್ವಾರ್ಪಣಮಾಡಲಿಕ್ಕೆ ದಿನದಿನಕ್ಕೆ ಯೋಗ್ಯರಾಗುವೆವು. ಕಾಯಾರ್ಪಣ, ಕರಣಾರ್ಪಣ, ಪ್ರಾಣಾರ್ಪಣ, ಭಾವಾರ್ಪಣ ಮಾಡಿ ಕೃತಾರ್ಥರಾಗಬೇಕಾದರೆ ನಾವು ಆಯಾ ಕಾಯಕರಣಾದಿಗಳನ್ನು ಸಂಪೂರ್ಣ ವಿಕಾಸ

ಗೊಳಿಸಲಿಕ್ಕೆಬೇಕು. ಹೀಗೆ ನಾವು ಮಾಡುತ್ತ ಹೋದೆವೆಂದರೆ ಸಾಧನ ಮಾರ್ಗದಲ್ಲಿ ಮುಂದೆ ಸಾಗಿ ಬೇಗನೆ ನಾವು ಸಾಕ್ಷಾತ್ಕಾರಿಗಳಾಗಬಲ್ಲೆವು. ಒಮ್ಮೆ ಸಾಕ್ಷಾತ್ಕಾರವಾಯಿತೆಂದರೆ ಮುಂದೆ ನಿಃಸಂಶಯವಾದ ಜ್ಞಾನ ವಾಗಿ ನಮ್ಮ ಧ್ಯೇಯವಾದ ಆನಂದಸ್ಥಿತಿಯು ನಿತ್ಯವಾಗುವದು.

೨೨೮. ವಚನಕಾರರು ಎಲ್ಲೆಡೆಯಲ್ಲಿಯೂ ಪರಮಾತ್ಮನನ್ನು ಪ್ರತ್ಯಕ್ಷಿಸುತ್ತಿದ್ದರು. ಪರಮಾತ್ಮನ ಬೆರಕಿಲ್ಲದ ಕಾರ್ಯವಿಲ್ಲ, ಅವನ ಅಸ್ತಿತ್ವವಿಲ್ಲದ ತಾವಿಲ್ಲ, ಎಂದು ಅವರು ಮನಗಂಡಿದ್ದರು. ಒಳಗಣ್ಣಿನಿಂದ ತಮ್ಮ ಹೃದಯಗುಹೆಯಲ್ಲಿ ಯಾವ ಜ್ಯೋತಿಯನ್ನು ಅವರು ಕಾಣುತ್ತಿದ್ದರೊ ಅದರ ಬೆಳಕನ್ನು ಅವರು ಹೊರಗಣ್ಣಿನಿಂದ ಸೃಷ್ಟಿಯಲ್ಲಿ ನೋಡುತ್ತಿದ್ದರು. ಆ ಜ್ಯೋತಿಯು ಮೂಲಶಕ್ತಿ ಎನಿಸಿದರೆ ಈ ಸೃಷ್ಟಿ ಎಂಬುದು ಅದರ ವ್ಯಾಪಾರವಿರುವದೆಂದು ಅವರು ಪ್ರತಿಪಾದಿಸುವರು. ಅವರು ಇದಕ್ಕೆ ವಿಮುಖ್ಯೆಯೆಂದು ಇದನ್ನು ದುರ್ಲಕ್ಷಿಸಲಿಲ್ಲ, ಅಥವಾ ತ್ಯಾಜ್ಯವೆಂದು ಕೇವಲ ಸನ್ಯಾಸವನ್ನು ಉಪದೇಶಿಸಲಿಲ್ಲ. ಈ ಸೃಷ್ಟಿಗೆ ನಾವು ಗುಲಾಮರಾಗಿ ನಡೆಯಬಾರದು, ಎಂದು ಮತ್ತು ಆ ಮಟ್ಟಿಗೆ ಮಾತ್ರ ಅದರ ಬಗ್ಗೆ ಹೇಯ ಭಾವವನ್ನೂ ತಿರಸ್ಕಾರವನ್ನೂ ಅವರು ವ್ಯಕ್ತಮಾಡಿದ್ದು ನಿಜವು. ಈ ಸೃಷ್ಟಿಯೆಲ್ಲ, ಇದರಲ್ಲಿಯ ಅಣುರೇಣುಗಳು ಸಹ, ನಾವು ಯಾವುದಕ್ಕೆ ಉಚ್ಚ ನೀಚ, ಒಳಿತು ಕೆಡಕೆನ್ನುವೆವೊ ಆ ವಸ್ತುವ್ಯಾಪಾರಗಳೆಲ್ಲ ಪರಮಾತ್ಮನ ವಿನೋದದಿಂದೊಗೆದ ಲೀಲಾಭಾವಗಳೆ ಎಂದು ವಚನಕಾರರ ಸಿದ್ಧಾಂತವಿರುವದು. ಆದುದರಿಂದ ಅವರು ಭುಕ್ತಿಮುಕ್ತಿಗೆ ಮತ್ತು ಸಮರಸೈಕ್ಯಕ್ಕೆ ಇಷ್ಟು ಮಹತ್ವವನ್ನು ಕೊಟ್ಟರು. ಕೇವಲ ನಿರ್ವಿಕಲ್ಪಸ್ಥಿತಿಯಲ್ಲಿ ಲಯಹೊಂದಬೇಕೆಂದು ಅವರು ನಮ್ಮನ್ನು ಶೂನ್ಯದತ್ತ ಎಳೆದೊಯ್ದಿಲ್ಲ, ಅಥವಾ ಈ ಸೃಷ್ಟಿಯಲ್ಲಿ ಸತತ ತೊಡಕಿಕೊಂಡು ಕೂಡಬೇಕೆಂದೂ ಹೇಳಿಲ್ಲ. ಆದರೆ ಈಶಸಂಕಲ್ಪದಂತೆ ನಡೆದ ಪ್ರತಿಯೊಂದು ಕಾರ್ಯದಲ್ಲಿ ಅವನೊಡನೆ ಸಮರಸ ಐಕ್ಯಭಾವದಿಂದ ನಡೆಯುವುದೆ ತಮ್ಮ ಆತ್ಯಂತಿಕ ಧ್ಯೇಯವೆಂದು ಅವರು ಸಾರಿದರು. ಆದುದರಿಂದಲೆ ಅದಕ್ಕೆ ಅವರು ಒಮ್ಮೊಮ್ಮೆ ದ್ವೈತಾದ್ವೈತ ವಿವರ್ಜಿತ ಮಾರ್ಗವು ಎಂದಿರುವರು. ಈ ವಿಶ್ವಮೂಲದಲ್ಲಿರುವಂತೆ ಈ ವಿಶ್ವವ್ಯಾಪಾರಗಳಲ್ಲಿಯೂ ಶಿವನು ಸತತ ಇರುವನು, ಅವನಿಗೆ ಸರ್ವಾರ್ಪಣ ಮಾಡಿ ಭಕ್ತಿ, ಜ್ಞಾನ, ಧ್ಯಾನ, ಕ್ರಿಯೆ ಈ ಎಲ್ಲ ಮಾರ್ಗಗಳಿಂದ ಅವನೊಡನೆ ತಾದಾತ್ಮ್ಯಹೊಂದಿ ಸಮರಸೈಕ್ಯದಿಂದ ವರ್ತಿಸುವುದೆ ವಚನಕಾರರ ಗುಟ್ಟುಗುರಿಗಳಿದ್ದವು.

೨೨೯. ಪರಮಾತ್ಮನ ಸೇವೆಯಲ್ಲಿ, ಪರಮಾತ್ಮನು ಸೃಜಿಸಿದ ಈ ಸೃಷ್ಟಿಯ ಸೇವೆಯಲ್ಲಿ, ಪರಮಾತ್ಮನ ಮಕ್ಕಳಾದ ನಮ್ಮ ಮಾನವೀ ಬಾಂಧವರ ಸೇವೆಯಲ್ಲಿ ನಮ್ಮದೆಲ್ಲವನ್ನೂ ಉಪಯೋಗಿಸಬೇಕು ಎಂಬ ಉದಾತ್ತ ಭಾವನೆಯಿಂದ, ನಾವು ಪರಮಾತ್ಮನ ದಾಸರು ನಮ್ಮದೆಂಬುದೆಲ್ಲ ಅವನದೇ ಇದೆ ಎಂಬ ದಾಸೋಹಭಾವದಿಂದ, ಅವನಿಗೆ ಶರಣಾಗತರಾಗಿ ವರ್ತಿಸುವುದಕ್ಕಿಂತ ಹೆಚ್ಚು ಉಚ್ಚತರವಾದ ಪರಮಾರ್ಥವೆ ಇರಲಾರದು. ಅನನ್ಯಭಾವದಿಂದ, ನಮ್ಮ ಶಕ್ತಿಗಳನ್ನೆಲ್ಲ ನಾವು ವಿಕಾಸಗೊಳಿಸುತ್ತ ಮತ್ತು ಅವುಗಳನ್ನು ಅವನ ಕಾರ್ಯದಲ್ಲಿ ಸಮರ್ಪಿಸುತ್ತ ಹೋದಂತೆ ನಮ್ಮ ಮೇಲೆ ಸವಾರಿ ಮಾಡಿದ 'ನಾನು' ಎಂಬ ಪಿಶಾಚಿಯು ಓಡಿಹೋಗುವದು, ಮತ್ತು ನಮ್ಮ ಹೃದಯಪೀಠದಮೇಲೆ ಪರಮಾತ್ಮನು ವಿರಾಜಮಾನನಾಗುವನು. ಅವನ ಸಂಕಲ್ಪವೇನಿರುವದು ಎಂಬುದು ನಮಗೆ ಹೆಚ್ಚೆಚ್ಚು ನಿಚ್ಚಳವಾಗಿ ಹೊಳೆಯುತ್ತ ಹೋಗುವದು. ಮುಂದೆ ನಿಸರ್ಗಶಕ್ತಿಗಳು ಯಾವ ನಿರಹಂಕಾರ ವೃತ್ತಿಯಿಂದಲೂ ಸಹಜತೆಯಿಂದಲೂ ಅವನ ಕಾರ್ಯವನ್ನು ಮಾಡುತ್ತಿರುವೆವೊ ಅಷ್ಟೇ ನಿರಹಂಕಾರ ಮತ್ತು ಸಹಜವೃತ್ತಿಯಿಂದ ನಾವೂ ಅವನ ಲೀಲೆಯಲ್ಲಿ ಭಾಗಿಗಳಾಗಿ ಅವನ ಕಾರ್ಯವನ್ನು ಮಾಡಲನುವಾಗುವೆವು. ಈ ಸಾಧನಪಥವು ಸರ್ವರಿಗೂ ಸುಲಭವಿರುವದು. ಮತ್ತು ವಚನಕಾರರು ಇದನ್ನು ಎಲ್ಲರಿಗೂ ತೆರೆದಿಟ್ಟಿರುವರು. ಎಲ್ಲರೂ ತಮ್ಮ ತಮ್ಮ ಶಕ್ತಿಯ ಮಟ್ಟಿಗೆ ಮತ್ತು ತಮ್ಮ ಕರ್ತವ್ಯಕರ್ಮಗಳ ಮುಖಾಂತರ, ತಮ್ಮ ಕಾರ್ಯಗಳದ್ವಾರಾ ಪರಮಾತ್ಮನನ್ನು ಪೂಜಿಸಿ ಧನ್ಯರಾಗಬೇಕೆಂದು ಅವರ ಉಪದೇಶವಿರುವದು. ಇದೇ ನಿಜವಾದ ಪೂಜೆಯು.

೨೩೦. ವಚನಕಾರರು ಎಲ್ಲ ಬಗೆಯ ದಂಭ ದೌರ್ಬಲ್ಯ ದುರಾಚಾರಗಳನ್ನು ಬಲವಾಗಿ ಖಂಡಿಸಿರುವರು. ಜನರು ನೋಡಬೇಕೆಂದು ಮಾಡುವವನು, ಕೀರ್ತಿಗಾಗಿ ಮಾಡುವವನು, ಅಹಂಕಾರಯುಕ್ತನಾಗಿ ಮಾಡುವವನು ವ್ಯರ್ಥ ಶ್ರಮಬಡುತ್ತಿರುವವನೆಂದು ಅವರ ಮತವು. ಅಂಥ ಕರ್ಮಗಳಿಂದ ಅವನು ಹೆಚ್ಚೆಚ್ಚು ಒದ್ದನಾಗುತ್ತಲೆ ಹೋಗುವನು. ದಾಂಭಿಕ ಪೂಜೆ, ಹೋಮಹವನ, ಜಪತಪ ಮುಂತಾದವುಗಳಿಗೆ ವಚನಕಾರರ ಸಾಧನಮಾರ್ಗದಲ್ಲಿ ಎಳ್ಳಷ್ಟು ಸ್ಥಾನವಿಲ್ಲ. ಶುದ್ಧ, ನಿರ್ಮಲ, ನೈತಿಕ ಜೀವನವು ಅವೆಲ್ಲವುಗಳಿಗಿಂತ ಶ್ರೇಷ್ಠವು ಎಂದು ಅವರ ಮತವು. ಶುಭಾಶುಭ ಶಕುನ, ಸ್ವಪ್ನ, ನಕ್ಷತ್ರ ಮುಂತಾದವುಗಳನ್ನು ನಂಬಿ ಕಾರ್ಯಮಾಡುವವರನ್ನು ಅವರು ಅತಿಶಯವಾಗಿ ಹೀಯಾಳಿಸಿರುವರು. ಇದೊಂದು

ಬಗೆಯ ಮೂಢಕಲ್ಪನೆಗಳ ದಾಸ್ಯವು. ನಾವು ಮಾಡತಕ್ಕ ಕಾರ್ಯವನ್ನು ಇಂಥ ಮೂರ್ಖ ಕಲ್ಪನೆಗಳಿಗೆ ಗುರಿಯಾಗಿ ಮುಂದೆ ಹಾಕುವದು ಅಥವಾ ಬಿಟ್ಟುಬಿಡುವದೆಂದರೆ ನಮ್ಮ ಮಾನಸಿಕ ದೌರ್ಬಲ್ಯದ ಪರಮಾವಧಿಯೆ ಸೈ. ಬೆಕ್ಕು ಅಡ್ಡ ಬರುವದಕ್ಕೂ ನಮ್ಮ ಕಾರ್ಯಕ್ಕೂ ಏನು ಸಂಬಂಧ, ಹಂಗ ಹಾರುವದಕ್ಕೂ ನಾವು ಹೊರಟ ಉದ್ದೇಶಕ್ಕೂ ಏನು ಸಂಬಂಧ, ಎಂದು ಕೇಳಿ ವಚನಕಾರರು ನಮ್ಮನ್ನು ನೋಡಿ ನಗುವರು. ಪರಧನದಿಚ್ಛೆ, ಪರಸ್ತ್ರೀಕಾಮನೆ, ಪರನಿಂದೆ, ಕಳವು, ಹುಸಿ, ಮದ್ಯಮಾಂಸ ಸೇವನೆ, ಭಿಕ್ಷಾವೃತ್ತಿ, ಆಲಸ್ಯ ಮುಂತಾದವುಗಳ ಮೇಲೆ ಅವರು ತಮ್ಮ ಕಠೋರವಾದ ಕತ್ತಿಯನ್ನು ಹಿರಿದಿರುವರು. ಇಂಥ ಎಲ್ಲ ದುರ್ಗುಣ ದುರಾಚಾರಗಳನ್ನು ಅವರು ನಿರಲಸತೆಯಿಂದ ಕಾಲ್ಕೆಳಗೆ ಮೆಟ್ಟಿಬಿಡಬೇಕೆಂದು ಪುನಃ ಪುನಃ ಬೇಸರಿಲ್ಲದೆ ಹೇಳಿರುವರು.

೩೫. ಅವರು ವ್ಯಕ್ತಿಗಳಿಗಷ್ಟೆ ಉಪದೇಶಮಾಡಿ ಸುಮ್ಮನೆ ಕೂಡಲಿಲ್ಲ. ವ್ಯಕ್ತಿಯು ಸಮಾಜದ ಒಂದು ಘಟಕನಿರುವನು, ಸಮಾಜವು ಸುಧಾರಿಸದಿದ್ದರೆ ವ್ಯಕ್ತಿಯು ಸುಧಾರಿಸುವದು ಕಠಿಣ, ಎಂಬ ಮಾತು ಅವರಿಗೆ ಗೊತ್ತಿತ್ತು. ಆದುದರಿಂದ ಸಮಾನತೆ, ಸ್ವಾತಂತ್ರ್ಯ, ಧರ್ಮಬಾಂಧವ್ಯ, ಉದ್ಯೋಗಶೀಲತೆ, ಗುಣಗ್ರಾಹಕತೆ ಮುಂತಾದವುಗಳು ಇರುವಂಥ ಸಮಾಜವನ್ನು ನಿರ್ಮಿಸಲಿಕ್ಕೆ ಅವರು ಯತ್ನಿಸಿದರು. ಜಡಕು, ಮತ್ಸರ, ಘಾತಕ ಸ್ಪರ್ಧೆ, ಇವು ಸಾಂಘಿಕ ಜೀವನಕ್ಕೆ ವಿಷತುಲ್ಯವಿರುವವು. ಇವುಗಳ ಮೂಲವು ಉಚ್ಚನೀಚ ಭಾವ, ಅಹಂಕಾರ, ದುರಭಿಮಾನ, ಸಹಕಾರದ ಅಭಾವ ಇವುಗಳಲ್ಲಿದೆ. ಆದುದರಿಂದ, ಜಾತಿಗತವಾದ ಅಥವಾ ಲಿಂಗಗತವಾದ ಕೃತಕ ಉಚ್ಚನೀಚ ಭಾವಗಳನ್ನು ವಚನಕಾರರು ನಿರಾಕರಿಸಿದರು. ಆ ಸ್ಥಾನದಲ್ಲಿ ಗುಣಕರ್ಮಗಳ ಶ್ರೇಷ್ಠತೆಯನ್ನು ಸಾರಿದರು. ಗುಣಕರ್ಮಗಳೆ ಪೂಜಾಸ್ಥಾನವೆಂದು ಸ್ಥಾಪಿಸಿದರು. ಸ್ತ್ರೀಗೆ ಪೂಜೆಯ ಅಧಿಕಾರವಿಲ್ಲ, ಮಂತ್ರದ ಅಧಿಕಾರವಿಲ್ಲ ಎಂಬ ಮುಂತಾದ ಕಲ್ಪನೆಗಳಿಗೆ ಮಣ್ಣುಕೊಟ್ಟು, ಆಕೆ ಪ್ರತ್ಯಕ್ಷ ಮಹಾದೇವಿಯು, ಆಕೆ ಸಮಾನ ಹಕ್ಕುಳ್ಳ, ಸ್ವಾತಂತ್ರ್ಯವುಳ್ಳ ಪುರುಷನ ಸಹಭಾಗಿನಿಯು, ಧರ್ಮಭಗಿನಿಯು ಎಂಬುದನ್ನು ಆಚರಣದಲ್ಲಿ ತಂದರು. ಪರಮಾತ್ಮನ ಓಲಗದಲ್ಲಿ ಜಾತಿಗಳಿಗೆ ಸ್ಥಾನವಿಲ್ಲ ಎಂದು ಸಿದ್ಧಮಾಡಿ ಎಲ್ಲ ಜಾತಿಯವರನ್ನೂ ಪಂಥದವರನ್ನೂ ಒಂದೇ ಸಮಾಜದಲ್ಲಿ ಸಮವಾಗಿ ಸೇರಿಸಿ ಕೊಡುಕೊಳ್ಳುವ ವ್ಯವಹಾರವನ್ನು ಪ್ರಚಲಿತಮಾಡಿದರು. ಪರಮಾತ್ಮಪ್ರೇರಿತ ಕಾರ್ಯವೊಂದನ್ನೆ

ಕಣ್ಣುಮುಂದಿಟ್ಟುಕೊಂಡು ಅದನ್ನು ಹೇಗೆ ಪೂರೈಸಬೇಕು, ಮತ್ತು ಅದಕ್ಕೆ ತಾನು ಹೇಗೆ ಸಹಾಯಭೂತನಾಗಬೇಕು, ಎಂಬುದೊಂದೆ ಭಾವವು ಎಲ್ಲರ ಹೃದಯದಲ್ಲಿ ತುಂಬಿರುವಂತೆ ಅವರು ಮಾಡಿದರು. ಆದುದರಿಂದ ಉಚ್ಚನೀಚಾದಿ ಭಾವಗಳಿಗೆ ಎಡೆಯಿಲ್ಲದಂತಾಯಿತು. ಕಾಯಕಗಳ ಉಚ್ಚನೀಚತೆಯ ಬಗ್ಗೆಯೂ ಬೇಬೆಯ ವಿಚಾರಕ್ರಾಂತಿಯನ್ನು ಅವರು ಒದಗಿಸಿದರು. ಪ್ರತಿಯೊಂದು ಕಾಯಕವು ಪರಮಾತ್ಮಚರಣಕ್ಕೆ ಅರ್ಪಿತವಾದ ಪುಷ್ಪವೆ ಇರುವುದರಿಂದ ಅದರಲ್ಲಿ ಉಚ್ಚನೀಚತೆಗೆ ಎಡೆ ಎಲ್ಲಿಂದ ಬರಬೇಕು? ಸಮಾಜದಲ್ಲಿ ಅವರು ಸ್ಥಾಪಿಸಿದ ಸಮತೆಯನ್ನು ಸರಿಗೊಳಿಸಿದರು. ಬೆಂಕಿಯಲ್ಲಿ ಬಿದ್ದ ಕಟ್ಟಿಗೆಯೆಲ್ಲ ಕೆಂಡವೆ ಆಗುವಂತೆ ಅರ್ಪಿತ ಕಾಯಕವೆಲ್ಲ ಪಾವನವೆ ಆಗಿ ಹೋಗುವದು. ಯಾವ ಕಾಯಕವು ಸಮಾಜರಕ್ಷಣೆಗೆ ಅಥವಾ ಪೋಷಣೆಗೆ ಅವಶ್ಯವೊ ಹಾಗೂ ಯಾವುದು ಅನೀತಿಕರವಿಲ್ಲವೊ ಅದು ಪವಿತ್ರವೆಂದೆ ವಚನಕಾರರು ನಿರ್ಧರಿಸಿದರು. ಇದರಿಂದ, ಆಯಾ ಕಾಯಕಗಳನ್ನು ಮಾಡುವವರಲ್ಲಿ ಹುಟ್ಟಿದ ಅವಾಸ್ತವ ಉಚ್ಚನೀಚಭಾವಗಳೆಲ್ಲ ಅಲ್ಲಿಯೆ ಇಂಗಿಹೋದವು ಮತ್ತು ಎಲ್ಲರಲ್ಲಿ ಒಂದು ಒಗೆಯ ಅನುಪಮವಾದ ಧರ್ಮಬಾಂಧವಭಾವವು ರೂಢವಾಯಿತು. ಈ ರೀತಿ, ವ್ಯಕ್ತಿಗೆ, ಸಮಾಜಕ್ಕೆ, ಸಮಾಜದಲ್ಲಿ ಉಚ್ಚನೀಚವೆನಿಸಿಕೊಳ್ಳುವವರಿಗೆ, ಸ್ತ್ರೀಯರಿಗೆ, ಪುರುಷರಿಗೆ, ಎಲ್ಲರಿಗೆ ಅವರ ಸಂದೇಶವಿತ್ತು.

೩೬. ಬನ್ನಿರಿ. ಎಲ್ಲರೂ ಬನ್ನಿರಿ. ದೊಡ್ಡವರು ಚಿಕ್ಕವರು, ಸ್ತ್ರೀಯರು ಪುರುಷರು, ಹೊಲೆಯರು ಬ್ರಾಹ್ಮಣರು, ಸಮಗಾರರು ಅರ್ಜಕರು, ಅಳುಗಳು ಅರಸರು, ಸೈನಿಕರು ಸೇನಾಪತಿಗಳು, ಜಾಲಗಾರರು ಸಂಗೀತಗಾರರು, ಬನ್ನಿರಿ, ಎಲ್ಲರೂ ಬನ್ನಿರಿ. ನಿಮ್ಮೆಲ್ಲರಿಗೂ ಪರಮಸುಖವು ಬೇಕಾಗಿದ್ದರೆ ಇತ್ತ ಬನ್ನಿರಿ. ನಿಮ್ಮ ನಿಮ್ಮ ಕ್ಷುದ್ರ ಅಹಂಭಾವಗಳನ್ನು ಮರೆಯಿರಿ. ನಾವು ಆ ಕುಲದವರು, ಈ ಕುಲದವರು, ಇಂಥ ಉಚ್ಚ ಉದ್ಯೋಗಮಾಡುವವರು ಅಂಥ ಹೆಚ್ಚಿನ ಕಾಯಕದವರು ಎಂಬ ವೃಥಾಭಿಮಾನವನ್ನು ತೊಕೆಯಿರಿ. ನಿಮ್ಮಲ್ಲಿರುವ ಶಕ್ತಿಗಳೆಲ್ಲ ವಿಶ್ವ ಸಂಗೀತದೊಡನೆ ಮೇಳಗೂಡಿಸಲು ಕೊಟ್ಟ ವಿವಿಧವಾದ್ಯಗಳಿರುವವು. ಅವುಗಳನ್ನು ತಿದ್ದಿ, ತೀಡಿ, ನೆಟ್ಟಗೆಮಾಡಿ, ಸಂಸ್ಕಾರಕೊಟ್ಟು ಸರಿಪಡಿಸಿರಿ. ಅವೆಲ್ಲ ಪರಸ್ಪರ ಪೋಷಕವೆ ಇಲ್ಲವೆ ಪೂರಕವೆ ಇರುವವೆಂಬುದನ್ನು ಮರೆಯಬೇಡಿರಿ. ನೀವು ಒಂದು ಬೇಸುರ, ಬೇತಾಳ, ಭಯಾನಕ ಬಡಿದಾಟದಲ್ಲಿ ತೊಡಗಿರುವಿರಿ, ಎಂಬ ಕಲ್ಪನೆಯನ್ನು ಕಿತ್ತಿಹಾಕಿರಿ. ನೀವು ಕಿವಿ

ಗೊಟ್ಟು ಕೇಳಿರಿ. ಅಕೋ, ಇದು ಶಿವಲೋಕದ ಸುಂದರ ಸಂಗೀತವು. ಭವ್ಯವಾದ ಅನಂತ ಸೂರ್ಯಮಂಡಲಗಳೆಲ್ಲ ಆ ಸಂಗೀತದೊಡನೆ ತಾಳ ಹಿಡಿದು ಕುಣಿಯುತ್ತಿರುವವು. ವಿಶ್ವದಲ್ಲಿಯ ಅಣುರೇಣುಗಳ ಆಕರ್ಷಣ ವಿಕರ್ಷಣಗಳೆಲ್ಲ ಈ ಸಂಗೀತಲಹರಿಗಳಿಗನುಸರಿಸಿಯೆ ಆಗುವವು. ಈ ಸಂಗೀತದ ತಾನಗಳಿಂದಲೆ ಪ್ರಾಣವು ಪ್ರೇರಿತವಾಗಿ ಪರಮಾಣುಗಳಲ್ಲಿ ಸೇರಿ ಜೀವಕೋಟಿಯನ್ನು ನಿರ್ಮಿಸುವದು. ಈ ಸಂಗೀತದ ಆಲಾಪಗಳಿಂದಲೆ ಜೈತನ್ಯವು ಮನುಷ್ಯನಲ್ಲಿ ಸ್ವಸಂವೇದವುಳ್ಳದ್ದಾಗಿ ಆತ್ಮಜ್ಞಾನವನ್ನು ಪಡೆಯಲಿಚ್ಛಿಸುವದು. ಈ ದಿವ್ಯಸಂಗೀತದಲ್ಲಿ, ಜಗತ್ಕಾರಣ, ಜಗದ್ಧಾರಣ, ಜಗನ್ಮಾರಣವಾದ ಈ ವಿಲಕ್ಷಣ ಸಂಗೀತದಲ್ಲಿ ನೀವೆಲ್ಲರೂ ವೀಳಗಾರರಿರುವಿರಿ. ನಿಮ್ಮ ನಿಮ್ಮ ಸ್ವರವನ್ನು ಇದರಲ್ಲಿ ಕೂಡಿಸಿ ಇದನ್ನು ಇನ್ನೂ ಹೆಚ್ಚು ಸುರಮ್ಯಮಾಡಿರಿ. ಈ ಸಂಗೀತದೊಡನೆ ಹೆಜ್ಜೆಯಿಕ್ಕಿ ಸುಖದಲ್ಲಿ ನಲಿದಾಡುತ್ತ, ಪರಮಸುಖದತ್ತ ಸಾಗಿರಿ. ನೀವು ಹೊರಟಿರುವದು ಶಿವಲೋಕದ ಯಾತ್ರೆಗೆ. ನಿಮ್ಮ ಶಕ್ತಿಗಳ ಪುಷ್ಪಾಂಜಲಿಯು ನಿಮ್ಮ ಕೈಯಲ್ಲಿ. ಅವು ಬಾಡದಂತೆ ಬತ್ತದಂತೆ ಅವು ಅತ್ತಿತ್ತ ಬೀಳದಂತೆ, ಆ ಸುಕೋಮಲ ಹೂಗಳನ್ನು ಎಚ್ಚರದಿಂದ ಒಯ್ದು ಅವುಗಳನ್ನು ಶಿವಚರಣದಲ್ಲಿ ಅರ್ಪಿಸುವ ಭಾರವು ನಿಮ್ಮದಿದೆ. ನಿಮ್ಮ ಅಂಜಲಿಯು ಅಲ್ಲಿ ಸಲ್ಲಬೇಕಾಗಿದ್ದರೆ ನಿಮ್ಮ ಕಾಯವಚನಮನಗಳು ಶುದ್ಧವಿರಬೇಕು, ನಿಮ್ಮ ಭಾವವು ಅನನ್ಯವಿರಬೇಕು. ನೀವು ನಡೆಯುವ ದಾರಿಯು ಕಠಿಣವಿರಬಹುದು. ಆದರೆ ಜೈತ್ರಯಾತ್ರೆಗೆ ಹೊರಟವರ ವೀರಭಾವವು ನಿಮ್ಮಲ್ಲಿ ನೆಲೆಸಲಿ. ನೀತಿ, ನಿಷ್ಠೆ, ಪರಸ್ಪರ ಸಹಾಯ ಇವುಗಳಿಂದ ನೀವು ಎಲ್ಲಿ ಹೋದರೂ ಗೆದ್ದೇತೀರುವಿರಿ, ನಿಮ್ಮ ಧ್ಯೇಯವನ್ನು ಮುಟ್ಟಿಯೇಬಿಡುವಿರಿ. ಅದುದರಿಂದ, ಏಳಿರಿ, ಧೈರ್ಯಗೊಳ್ಳಿರಿ. ಧರ್ಮಪಥವನ್ನು ಹಿಡಿಯಿರಿ ಮತ್ತು ಧರ್ಮಸಾಮ್ರಾಜ್ಯದ ನಿವಾಸಿಗಳಾಗಿ ಪರಮಸುಖದ ಅಧಿಕಾರಿಗಳಾಗಿರಿ.' — ಹೀಗಿರುವದು ವಚನಕಾರರ ಸಂದೇಶವು.

ಶಿಷ್ಯ ವಚನಕಾರರ ಈ ವೀರಸಂದೇಶವನ್ನು ಓದಿದೊಡನೆ ಕತ್ತಲೆ ಕವಿದ ನಮ್ಮ ದಾರಿಯಮೇಲೆ ಝಗ್ಗನೆ ಬೆಳಕುಬೀಳುವದು, ಪೊಳ್ಳು ಶೂನ್ಯಗಳ ಹಿಂದೆ ಅಂಕಿಯಿಟ್ಟಂತಾಗುವದು, ನಮ್ಮ ಕೈಯಲ್ಲಿರುವ ಬರಿಯ ಭಾಂಡದಲ್ಲಿ ಒಮ್ಮೆಲೆ ಮಧುವು ತುಂಬಿದಂತಾಗುವದು, ನಮ್ಮ ರುಕ್ಷಜೀವನವು ಹೊಸ ಅರ್ಥತುಂಬಿ ರಸಪೂರ್ಣವಾಗುವದು. ಈ ದೇಹ, ಈ ಮನಸ್ಸು, ಈ ಬುದ್ಧಿ, ಈ ಪ್ರಾಣ, ಇವೆಲ್ಲವುಗಳಿಗೂ ಆಧಾರವಾದ